ಶ್ರೀಮದ್ವಾಲ್ಮೀಕಿ

ರಾಮಾಯಣಮ್

ಸುಂದರಕಾಂಡಃ

(ಕನ್ನಡ ಅನುವಾದ ಸಹಿತ)

ವಿದ್ವಾನ್ ಎನ್. ರಂಗನಾಥ ಶರ್ಮ

ಶ್ರೀಮದ್ವಾಲ್ಮೀಕಿರಾಮಾಯಣಮ್

ಸುಂದರಕಾಂಡಃ

(ಕನ್ನಡ ಅನುವಾದ ಸಹಿತ)

ಮುನ್ನುಡಿ :

ಡಾ|| ಡಿ.ವಿ. ಗುಂಡಪ್ಪನವರಿಂದ

ಅನುವಾದಕರು:

ವಿದ್ವಾನ್ ಎನ್. ರಂಗನಾಥಶರ್ಮಾ

ಪ್ರಕಾಶಕರು

ರಾಮಾಯಣ ಪ್ರಕಾಶನ ಸಮಿತಿ

ನರಸಿಂಹರಾಜ ಕಾಲೋನಿ, ಬೆಂಗಳೂರು-೧೯

ಶ್ರೀ ಮದ್ವಾಲ್ಮೀಕಿ ರಾಮಾಯಣಮ್ – ಸುಂದರಕಾಂಡಃ

ಹನ್ನೊಂದನೆಯ ಮುದ್ರಣ – ನವೆಂಬರ್ 2015

© ಹಕ್ಕುಗಳನ್ನು ಕಾಯ್ದಿರಿಸಲಾಗಿದೆ
© All rights reserved

₹ 240/-

ಮುದ್ರಣಕಾರರು :
ಶ್ರೀ ವೇಂಕಟೇಶ್ವರ ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್
(ಉತ್ಕೃಷ್ಟ ಮುದ್ರಣಕ್ಕಾಗಿ ರಾಷ್ಟ್ರೀಯ ಮಟ್ಟದ ಆರು ಚಿನ್ನದ ಪದಕಗಳ ಪುರಸ್ಕೃತರು)
#692, 5ನೇ ಮುಖ್ಯರಸ್ತೆ, ಹನುಮಂತನಗರ, ಬೆಂಗಳೂರು-1
E-mail : svpp.house@gmail.com

ಶ್ರೀ ರಾಮ ಮಂದಿರಂ ಟ್ರಸ್ಟ್ (ರಿ)

ಶ್ರೀ ನರಸಿಂಹರಾಜ ಕಾಲೋನಿ ಅಸೋಸಿಯೇಷನ್, ಬೆಂಗಳೂರು – 560 019

ಪದಾಧಿಕಾರಿಗಳು

ಕೆ. ಎಸ್. ವೆಂಕಟನಾರಾಯಣ	ಎ. ನಾಗೇಂದ್ರ	ಹೆಚ್. ಎಸ್. ಶಿವಶಂಕರ್
ಅಧ್ಯಕ್ಷರು	ನಿರ್ವಾಹಕ ಟ್ರಸ್ಟಿ	ಖಜಾಂಚಿ

ಟ್ರಸ್ಟಿಗಳು :
ಹೆಚ್. ಕೆ. ನಂಜುಡಸ್ವಾಮಿ, ಕೆ. ಸಿ. ಪ್ರಕಾಶ್, ಆರ್. ಎನ್. ಸ್ವಾಮಿ,
ಬಿ. ಎ. ಚಂದ್ರಶೇಖರ್, ಎಸ್. ಎನ್. ಉಮಾಶಂಕರ್

ಸಿಬ್ಬಂದಿ :

ರಾಘವೇಂದ್ರ	ಚಂದ್ರು
ವ್ಯವಸ್ಥಾಪಕ	ಸಹಾಯಕ

ಬಿನ್ನಹ

ಶ್ರೀ ನರಸಿಂಹರಾಜ ಕಾಲೋನಿಯಲ್ಲಿ ಇಪ್ಪತ್ತೈದು ವರ್ಷಗಳಿಂದ ಸತತವಾ.. ..ತ್ರವಾಸದಲ್ಲಿ ಶ್ರೀರಾಮೋತ್ಸವವು ವಿಜೃಂಭಣೆಯಿಂದ ನಡೆದುಕೊಂಡು ಬಂದಿದೆ. ಈ ವರ್ಷ ಶ್ರೀರಾಮೋತ್ಸವದ ರಜತಮಹೋತ್ಸವವನ್ನು ಆಚರಿಸಲಾಯಿತು. ಈ ಸಂದರ್ಭದ ಸವಿನೆನಪಿಗಾಗಿ ಶ್ರೀ ಮದ್ವಾಲ್ಮೀಕಿ ರಾಮಾಯಣದ ಸುಂದರಕಾಂಡವನ್ನು ಅನುವಾದ ಸಮೇತ ನಮ್ಮ ಸಂಘದಿಂದ ಬರೆಯಿಸಿ ಪ್ರಕಟಿಸಬೇಕೆಂಬ ಅಭಿಲಾಷೆಯುಂಟಾಯಿತು. ಈ ಕಾರ್ಯಕ್ಕೆ ಡಾ॥ ಡಿ.ವಿ. ಗುಂಡಪ್ಪನವರ ಸಲಹೆಯನ್ನು ಕೇಳಿದಾಗ ಅವರು ತಮ್ಮ ಸಂಪೂರ್ಣ ಬೆಂಬಲವನ್ನು ನೀಡಿದುದಲ್ಲದೆ, ತಮ್ಮ ಮಾರ್ಗದರ್ಶನದಲ್ಲಿ ಈ ಗ್ರಂಥರಚನೆಗೆ ನೆರವಾಗಿರುತ್ತಾರೆ; ಮತ್ತು ..ೃದುಷ್ಯಪೂರ್ಣವಾದ ಮುನ್ನುಡಿಯನ್ನೂ ಸಹ ಬರೆದುಕೊಟ್ಟು ಉಪಕಾರ ಮಾಡಿರುತ್ತಾರೆ. ಅವರಿಗೆ ನಮ್ಮ ಸಂಘದವರು ಚಿರಋಣಿಯಾಗಿದ್ದಾರೆ.

ಪ್ರಸಿದ್ಧ ವಿದ್ವಾಂಸರಾದ ಶ್ರೀ ಎನ್. ರಂಗನಾಥಶರ್ಮರು ಭಾವಾನುವಾದವನ್ನು ಬರೆದು ಗ್ರಂಥರಚನೆಯ ಕಾರ್ಯವನ್ನು ಸಾಂಗವಾಗಿ ನೆರವೇ.. ಕೊಟ್ಟಿರುತ್ತಾರೆ. ಇವರಿಗೆ ನಮ್ಮ ಕೃತಜ್ಞತಾಪೂರ್ವಕವಾದ ವಂದನೆಗಳು.

..ನ್ನೂ ಅನೇಕ ರೀತಿಯಲ್ಲಿ ಈ ಕಾರ್ಯಕ್ಕೆ ಸಹಾಯ ಮಾಡಿರುವ ..ಭಿಮಾನಿಗಳಿಗೆ ಸಂಘವು ಋಣಿಯಾಗಿದೆ. ಮೆ॥ ಬೃಂದಾವನ ಪ್ರಿಂಟರ್ಸ್ ಪಬ್ಲಿಷರ್ಸ್ ಸಂಸ್ಥೆಯವರು ಅಂದವಾಗಿ ಗ್ರಂಥದ ಮುದ್ರಣವನ್ನು ಮಾಡಿಕೊಟ್ಟು ಉಪಕಾರ ಮಾಡಿರುತ್ತಾರೆ. ಇವರಿಗೆ ನಮ್ಮ ವಂದನೆಗಳು. ಮೆ॥ W.Q. ಜಡ್ಜ್ ಪ್ರೆಸ್ಸಿನವರು ಈ ಗ್ರಂಥಕ್ಕೆ ಬೇಕಾದ ಫೋಟೋಗಳನ್ನು ಸಕಾಲದಲ್ಲಿ ಅಂದವಾಗಿ ಮುದ್ರಿಸಿಕೊಟ್ಟಿರುತ್ತಾರೆ. ಇವರಿಗೆ ನಮ್ಮ ವಂದನೆಗಳನ್ನು ಅರ್ಪಿಸುತ್ತೇವೆ.

ಈ ಗ್ರಂಥಕ್ಕೆ ಕನ್ನಡ ನಾಡಿನ ಜನತೆಯ ಪ್ರೋತ್ಸಾಹವು ಸಾಕಾದಷ್ಟು ದೊರೆಯುವುದೆಂದು ನಂಬಿದ್ದೇವೆ. ಮುಂದೆ ಬಾಲಕಾಂಡದಿಂದ ಕೊನೆಯವರೆಗೆ ರಾಮಾಯಣ ಗ್ರಂಥವನ್ನು ಸಂಪೂರ್ಣವಾಗಿ ಪ್ರಕಟಿಸಬೇಕೆಂಬ ಅಪೇಕ್ಷೆಯಿದೆ. ಶ್ರೀರಾಮಾನುಗ್ರಹದಿಂದ ಈ ಕಾರ್ಯವು ನೆರವೇರುವಂತಾಗಲೆನ್ನುವುದೇ ನಮ್ಮ ಹಾರೈಕೆ.

ಎಸ್.ಎನ್.ಮೂರ್ತಿ — ಕಾರ್ಯದರ್ಶಿ

ಹೆಚ್.ಎಸ್. ಕೃಷ್ಣಸ್ವಾಮಿ — ಅಧ್ಯಕ್ಷ

ಶ್ರೀ ರಾಮಮಂದಿರ, ಶ್ರೀನರಸಿಂಹರಾಜ ಕಾಲೋನಿ ಅಸೋಸಿಯೇಷನ್ (ರಿ.)
ಬೆಂಗಳೂರು ೨೫-೧೨-೧೯೬೪

ಹನ್ನೊಂದನೆಯ ಮುದ್ರಣಕ್ಕೆ ಮುನ್ನ.....

ಆಂಜನೇಯ ಮತಿಪಾಟಲಾಲನಂ ಕಾಂಚನೀಯ ಕಮನಾದ್ರಿ ವಿಗ್ರಹಂ,
ಪಾರಿಜಾತ ತರುಮೂಲವಾಸಿನಂ ಮಾರುತಿಂ ನಮಿತ ರಾಕ್ಷಸಾಂತಕಂ

ಹೆಸರೇ ಸೂಚಿಸುವಂತೆ ರಾಮಾಯಣ ಮಹಾಕಾವ್ಯದ ಸುಂದರಕಾಂಡವು ಕಥಾ ಸಂಧರ್ಭದಿಂದ ಅತ್ಯಂತ ಸೌಂದರ್ಯಕರವಾಗಿರುತ್ತದೆ. ಈ ಗ್ರಂಥದ ಮುನ್ನುಡಿಯಲ್ಲಿ ಪೂಜ್ಯ ಡಾ. ಡಿ. ವಿ. ಗುಂಡಪ್ಪನವರು ಅಂತರ್ ಸೌಂದರ್ಯ ಮತ್ತು ಬಾಹ್ಯ ಸೌಂದರ್ಯದ ಬಗ್ಗೆ ಅರ್ಥಪೂರ್ಣವಾಗಿ ವಿವರಿಸುತ್ತಾರೆ.

ಆಂಜನೇಯನೇ ಸುಂದರಕಾಂಡದ ಪ್ರಧಾನವ್ಯಕ್ತಿ. ಈ ಕಾಂಡವನ್ನು ಹನುಮತ್ಕಾಂಡ ಎಂದು ಹೇಳಿದರೂ ಪ್ರಸ್ತುತವೇ ಇರುತ್ತದೆ.

ರಾಮಾಯಣದ ಜನಪ್ರಿಯತೆಯು ಭಾರತಕ್ಕಷ್ಟೇ ಸೀಮಿತವಲ್ಲ. ಅದು ವಿಶ್ವವ್ಯಾಪಿಯಾದುದು. ಜಗತ್ತಿನ ಎಲ್ಲ ಪ್ರಮುಖ ಭಾಷೆಗಳಲ್ಲಿ ರಾಮಾಯಣ ಮುದ್ರಣಗೊಂಡಿದೆ. ಆಗ್ನೇಯ ಏಷ್ಯಾದಲ್ಲಿಯಂತೂ ಕಥಾನಕ-ಚಿತ್ರ-ರೂಪಕ-ನಾಟಕ-ಪುರಾತನ ಶಿಲ್ಪಗಳಲ್ಲಿ ರಾಮಾಯಣವು ಪಡೆದಿರುವ ಸ್ಥಾನ ತುಂಬಾ ಪ್ರಮುಖವಾದುದು.

ನಮ್ಮ ಈ ಕಾರ್ಯಕ್ಕೆ ಮುಖ್ಯ ಪ್ರೇರಕರು ದಿ|| ಪೂಜ್ಯ ಡಿ.ವಿ.ಜಿ. ಯವರು ವಾಲ್ಮೀಕಿ ರಾಮಾಯಣದ ಕನ್ನಡ ಅನುವಾದವನ್ನು ಪ್ರಕಟಿಸುವುದು ಸ್ತುತ್ಯವೂ, ಅಗತ್ಯವೂ ಆದ ಕೆಲಸವೆಂದು ಪ್ರೇರಣೆ ನೀಡಿದ ಅವರು ಅನುವಾದ ಕಾರ್ಯಕ್ಕೆ ವಿದ್ವಾನ್ ರಂಗನಾಥಶರ್ಮರ ಹೆಸರನ್ನೂ ಸೂಚಿಸಿದರು. ಹಾಗೂ ಈ ಗ್ರಂಥಕ್ಕೆ ಅಮೂಲ್ಯವಾದ ಮುನ್ನುಡಿಯನ್ನು ಬರೆದುಕೊಟ್ಟು ಉಪಕರಿಸಿದ್ದಾರೆ. ಅವರಿಗೆ ನಮ್ಮ ಸಂಘದ ಅನಂತ ವಂದನೆಗಳು.

ಶ್ರೀ ಮದ್ವಾಲ್ಮೀಕಿ ರಾಮಾಯಣವನ್ನು ಅನುವಾದ ಸಹಿತ ಪ್ರಕಟಿಸಿದಾಗ ಪ್ರತಿಯೊಂದು ಕಾಂಡಕ್ಕೂ ದಿ|| ಪೂಜ್ಯ ಡಿ.ವಿ.ಜಿ.ಯವರ ಅನುಭವೀ-ಅಧ್ಯಯನ ಪೂರ್ಣ-ಸಾರಭೂತ ಮುನ್ನುಡಿಯನ್ನು ಪಡೆಯುವ ಭಾಗ್ಯ ನಮ್ಮದಾಗಿತ್ತು. ಆ ಮುನ್ನುಡಿಗಳು ಎಷ್ಟು ಮಟ್ಟಿಗೆ ಗ್ರಂಥದ ತೂಕವನ್ನು ಹೆಚ್ಚಿಸಿ ಜನಪ್ರಿಯತೆ ತಂದು ಕೊಟ್ಟಿವೆಯೆಂಬುದು ಓದುಗರಿಗೆ ತಿಳಿದೇ ಇದೆ. ಆ ಮಹಾದಿಗ್ಗಜ ಡಿ.ವಿ.ಜಿ.ಯವರ ಪೂರ್ಣ ವಿಶ್ವಾಸಪಾತ್ರರಾದ ಶ್ರೀ ರಂಗನಾಥಶರ್ಮರು ನಿಜಕ್ಕೂ ಸ್ತುತ್ಯಾರ್ಹರು.

ಕೇವಲ ಮುನ್ನುಡಿಗಳನ್ನೊಳಗೊಂಡ ಒಂದು ಪುಸ್ತಕವನ್ನು ಸಹ ಪ್ರಕಟಿಸಲಾಗಿದೆ.

ಸುಂದರಕಾಂಡವು ಈವರೆಗೆ 30,000 ಕ್ಕೂ ಹೆಚ್ಚು ಪ್ರತಿಗಳು ಖರ್ಚಾಗಿದ್ದು ಇದರ ಜನಪ್ರಿಯತೆಗೆ ಸಾಕ್ಷಿಯಾಗಿರುತ್ತದೆ.

ಈ ಪುಸ್ತಕವನ್ನು ಅಂದವಾಗಿ ಮುದ್ರಿಸಿಕೊಟ್ಟ ಶ್ರೀ ವೆಂಕಟೇಶ್ವರ ಪ್ರಿಂಟರ್ಸ್ ಪ್ರೈ. ಲಿ. ಇವರಿಗೆ ಟ್ರಸ್ಟ್ ಅಭಾರಿಯಾಗಿರುತ್ತದೆ. ಹಾಗೂ ಪ್ರಕಟಣೆಯಲ್ಲಿ ಸಹಕರಿಸಿದ ಟ್ರಸ್ಟ್‌ನ ಪದಾಧಿಕಾರಿಗಳಿಗೂ ಮತ್ತು ರಾಮಮಂದಿರದ ಸಿಬ್ಬಂದಿಗೂ ವಂದನೆಗಳು.

ಬೆಂಗಳೂರು
ದಿನಾಂಕ : ನವೆಂಬರ್ 2015

ಶ್ರೀರಾಮಮಂದಿರಂ ಟ್ರಸ್ಟ್
ನರಸಿಂಹರಾಜಕಾಲೋನಿ, ಬೆಂಗಳೂರು

ಮುನ್ನುಡಿ

ಶ್ರೀರಾಮಾಯಣಮೇರುರ್ಹಿ ಧರ್ಮರತ್ನೌಘಸುಂದರಃ ।
ೀ ಸುಂದರಸ್ಸೋಽಯಮಂಜನಾನಂದನೋತ್ಸವಃ ॥

ಸಂದರ್ಭ ಸೌಂದರ್ಯ

ಸುಂದರಕಾಂಡವು ಕಥಾಸಂದರ್ಭದಿಂದ ಸುಂದರ.

ಪರಮಸುಂದರರಾದ ರಾಮಸೀತೆಯರು ವಿಯೋಗದುಃಖದಲ್ಲಿದ್ದಾಗ ಪರಸ್ಪರ ಪ್ರಿಯವಾರ್ತಾ ಸಂಧಾನದಿಂದ ಅವರಿಗೆ ಮಾನಸಿಕಸಮಾಗಮವಾದದ್ದು ಇಲ್ಲಿಯ ಕಥೆ. ಆ ಸುಂದರಸಂಧಾನಕ್ಕೆ ಸಾಧನಭೂತನಾದವನು ಆಂಜನೇಯಸ್ವಾಮಿ. ಆತನ ಸೌಂದರ್ಯದೌತ್ಯವೂ ದೌತ್ಯಸೌಂದರ್ಯವೂ ಇಲ್ಲಿಯ ವಸ್ತು.

ಸೌಂದರ್ಯವು ಒಂದು ರುಚಿಶಕ್ತಿ. ಒಂದಾನೊಂದು ವಸ್ತುವನ್ನು ಅಥವಾ ಸಂಗತಿಯನ್ನು ನಾವು ಕಂಡಾಗ ಅಥವಾ ನೆನಸಿಕೊಂಡಾಗ ಅದರ ಯಾವ ನಮ್ಮ ಮನಸ್ಸನ್ನು ಮೃದುಮಾಡಿ ತನ್ನ ಕಡೆಗೆ ಸೆಳೆದುಕೊಂಡು ಮಾಡಿಕೊಳ್ಳುತ್ತದೆಯೋ—ಯಾವ ರಸಕಾಂತಿಯ ಕಾರಣದಿಂದ ನಮ್ಮ ್ಸ ಆ ಪದಾರ್ಥದಿಂದ ಹಿಂತಿರುಗದೆ ಅದರಲ್ಲಿ ತಾನು ಸೇರಿಕೊಳ್ಳಲಿಚ್ಛಿಸುತ್ತದೆಯೋ— ಆ ರುಚಿಗುಣವೇ ಅದರ ಸೌಂದರ್ಯ.

ನಾನಾ ಸೌಂದರ್ಯಗಳ ಸಮ್ಮೇಳನಸ್ಥಾನ ಸುಂದರಕಾಂಡ.

ರಾಮಾಯಣದಲ್ಲಿ ಗ್ರಂಥಿಸ್ಥಾನಗಳು ಮೂರು.

(೧) ಮೊದಲನೆಯದು ಅಯೋಧ್ಯಾಕಾಂಡದ್ದು. ರಾಮಾವತಾರ ಕಾಲದಿಂದ ಸಹಜವಾಗಿ ಸರಳವಾಗಿ ಸಾಗಿಬಂದ ಕಥಾತಂತುವಿಗೆ ಅಲ್ಲಿ ಕೈಕೇಯಿ ಕೈಹಾಕಿ ಗಂಟಿಕ್ಕಿ, ಅದು ನಿರೀಕ್ಷಿತವಾಗಿದ್ದಂತೆ ಸಾಗಗೊಡದೆ ಅದನ್ನು ಬೇರೆ ಕಡೆಗೆ ತಿರುಗಿಸುತ್ತಾಳೆ. ಈ ಘಟನೆ ಸುಂದರವಲ್ಲ; ಅಸುಂದರ, ವಿಷಾದಕರ.

(೨) ಎರಡನೆಯ ಗ್ರಂಥಿ ಅರಣ್ಯಕಾಂಡದ್ದು. ಇಲ್ಲಿ ಕಥಾತಂತುವು ಸ್ವೈಜಕ್ರಮದಲ್ಲಿ ಸಾಗದಂತೆ ಅಡ್ಡಿಹಾಕಿ ಅದನ್ನು ಬೇರೆಕಡೆಗೆ ತಿರುಗಿಸಿದವನು ರಾವಣಾಸುರ. ಅವನು ಹಾಗೆ ಮಾಡದೆ ಹೋಗಿದ್ದಿದ್ದರೆ ಸೀತಾರಾಮರು

ಹದಿನಾಲ್ಕು ವರ್ಷಗಳ ವನವಾಸವನ್ನು ನಿರೀಕ್ಷಿಸಿಕೊಂಡಿದ್ದಂತೆ ನಿರುಪಾಧಿಕವಾಗಿ ಮುಗಿಸಿ ಅಯೋಧ್ಯೆಗೆ ಹಿಂತಿರುಗಬಹುದಾಗಿತ್ತು. ಅದು ತಪ್ಪಿಹೋಗುವಂತೆ ಆದದ್ದು ಸುಂದರವಲ್ಲ; ಅಸುಂದರ, ಅಮಂಗಲ.

(೩) ಮೂರನೆಯ ಗ್ರಂಥಿ ಸುಂದರಕಾಂಡದ್ದು. ಅನ್ಯೋನ್ಯವಿರಹಿತರಾಗಿ, ಅನ್ಯೋನ್ಯಚಿಂತಾಕ್ರಾಂತರಾಗಿ, ಅನ್ಯೋನ್ಯ ಅಜ್ಞಾತವಾಸಿಗಳಾಗಿದ್ದ ಸೀತಾರಾಮರಿಗೆ ಅನ್ಯೋನ್ಯ ಪ್ರಿಯವಾರ್ತೆಯಿಂದ ಮಾನಸಿಕ ಸಮಾಗಮವನ್ನುಂಟುಮಾಡಿ ಸಾಕ್ಷಾತ್ಸಮಾಗಮಕ್ಕೆ ದಾರಿತೋರಿದ ಮಹಾನುಭಾವ ಹನುಮಂತ. ಈ ಸಂಘಟನೆ ಪರಮಸುಂದರವಾದದ್ದು.

ಆಂಜನೇಯನಿಗಿದ್ದ ಕೆಲಸ ಸುಲಭವಾದದ್ದೆ? ಅದು ಅಸಾಧ್ಯವೆನಿಸುವ ಮಟ್ಟಿಗೆ ಕಷ್ಟವಾಗಿತ್ತು. ತನ್ನ ಕಾರ್ಯಕ್ಕೆ ಬಂದ ವಿಘ್ನಗಳಿಂದ ಆಂಜನೇಯನು ಎದೆಗುಂದಿ ಹಿಂತಿರುಗಿದ್ದಿದ್ದರೆ ರಾಮಲಕ್ಷ್ಮಣರ ಶೌರ್ಯ ಪ್ರತಾಪಗಳು ಸಾರ್ಥಕಪಡಿಸಲು ಅವಕಾಶವೆಲ್ಲಿರುತ್ತಿತ್ತು? ಆಂಜನೇಯಮೂರ್ತಿಯ ಸ್ಥೈರ್ಯ ವಿಕ್ರಮಗಳಿಂದ ರಾಮಾವತಾರಕಾರ್ಯವು ಸಂಪೂರ್ಣವಾಗುವು ದಾಯಿತು. ಲಂಕಾಪಟ್ಟಣದ ಕೋಟೆಯನ್ನು ಮೊದಲು ಭೇದಿಸಿದವನು ಹನುಮಂತ. ಯುದ್ಧಕಾಂಡದ ವಿಜಯಕ್ಕೆ ದಾರಿತೋರಿದ್ದು ಸುಂದರಕಾಂಡ ದಲ್ಲಿಯ ಸೌಂದರ್ಯ.

ಇದನ್ನು ಹನುಮತ್ಕಾಂಡವೆಂದೇ ಕರೆಯಬಹುದಾಗಿತ್ತಲ್ಲ!—ಎಂದರೆ, ಅಲ್ಲ; ಆದಾಗಲಾರದು. ಏಕೆಂದರೆ ಅದು ಹನುಮಂತನ ಸ್ವಭಾವಕ್ಕೆ ಒಪ್ಪದು. ಆತ ತನ್ನ ಸ್ಥಾನ ಯಾವುದೆಂಬುದನ್ನು ತಾನೇ ಗೊತ್ತುಮಾಡಿಕೊಂಡಿದ್ದವನು. ತನ್ನ ಸ್ವಾಮಿಯೊಡನೆ ತಾನು ಸಮಾನಸ್ಕಂಧನಾಗಿ ಕುಳ್ಳಿರಲು ಸಮ್ಮತಿಸಿಯಾನೆ? ಸ್ವಾಮಿಯ ಉನ್ನತಿಯ ಅಂಗೀಕಾರವೂ ತನ್ನ ನೈಚ್ಯದ ಅಂಗೀಕಾರವೂ ಆಂಜನೇಯನ ಅಂತರಂಗಸೌಂದರ್ಯದ ನೈಜಾಂಶಗಳು. ಸ್ವಾಮಿಯ ಸ್ವಾಮಿತ್ವದ ಅಂಗೀಕಾರವೇ ದಾಸನಿಗೆ ದಾಸ್ಯದಿಂದ ಉದ್ಧಾರಸಾಧನ.

ಒಂದು ಕಥೆಯುಂಟು. ಒಬ್ಬಾನೊಬ್ಬ ಮನುಷ್ಯ ಬಹುಕಾಲ ಹೊಟ್ಟೆ ನೋವಿನಿಂದ ನರಳುತ್ತಿದ್ದ. ಅವನಿಗೆ ಒಂದು ದಿನ ಒಬ್ಬ ವೈದ್ಯ ಕೊಟ್ಟ ಔಷಧದ ಪ್ರಭಾವದಿಂದ ಜಠರಶುದ್ಧಿಯಾಗಿ ನೋವಿಳಿಯಿತು. ಆಗ ಅವನು

ಕೃತಜ್ಞತೆಯಿಂದ ''ಉಸ್ಸಪ್ಪ! ರಾಮ—ರಾಮ!'' ಎಂದು ದೇವರನ್ನು ನೆನೆದ. ಕೂಡಲೆ ''ಯತ್ರ ಯತ್ರ ರಘುನಾಥಕೀರ್ತನಂ ತತ್ರ ತತ್ರ ಕೃತಮಸ್ತಕಾಂಜಲಿಮ್''—ಆಂಜನೇಯ ಕಾಣಿಸಿಕೊಂಡು, ಆ ಮನುಷ್ಯನ ಕೆನ್ನೆಗೆ ಕೈ ಅಪ್ಪಳಿಸಿದ. ಆ ಮನುಷ್ಯನಿಗೆ ನೋವಾಗಲಿಲ್ಲ ಹನುಮಂತನು ಆಶ್ಚರ್ಯಗೊಂಡು ಸಂದರ್ಭವೇನಿರಬಹುದೆಂದು ತಿಳಿಯಲು ರಾಮ ಸನ್ನಿಧಾನಕ್ಕೆ ಹೋದ. ಅಲ್ಲಿ ಸ್ವಾಮಿ ತನ್ನ ಕೆನ್ನೆಯಮೇಲೆ ಕೈಯಿಟ್ಟುಕೊಂಡು ಕುಳಿತಿದ್ದ.

ಹನುಮಂತ : ನನ್ನ ಸ್ವಾಮಿಗೆ ಏನಾಯಿತು ? ಕೆನ್ನೆಯಮೇಲೆ ಗಾಯವೆ ? ಹುಣ್ಣೆ ?

ರಾಮ : ನೀನು ಕೊಟ್ಟ ಪೆಟ್ಟು.

ಹನುಮಂತ : ನಾನು ಸ್ವಾಮಿಯನ್ನು ಹೊಡೆದೆನೆ ? ಅಂಥ ಪಾಪಿಯೆ ?

ರಾಮ : ಈಗ ನೀನು ನನ್ನ ಹೆಸರು ನೆನೆದವನನ್ನು ಹೊಡೆಯಲಿಲ್ಲವೆ ?

ಹನುಮಂತ : ಅಯ್ಯೋ! ಅವನು ಅಶುದ್ಧಸ್ಥಳದಲ್ಲಿದ್ದಾಗ ನನ್ನ ಸ್ವಾಮಿಯ ಪವಿತ್ರನಾಮವನ್ನು ಉಚ್ಚರಿಸಬಹುದೆ ?

ರಾಮ : ಆ ಹೆಸರು ಪವಿತ್ರವಾಗಿದ್ದರೆ ಅದು ಎಲ್ಲ ಅಶುದ್ಧಿಗಳನ್ನೂ ಶುದ್ಧಪಡಿಸಲಾರದೆ?

ಹನುಮಂತ : ಅಯ್ಯೋ ನಾನು ಕಪಿಯಲ್ಲವೆ ? ಕಪಿಬುದ್ಧಿ ಆ ಕ್ಷಣ ಪ್ರಬಲಿಸಿತು.

ರಾಮನು ನಕ್ಕನಂತೆ. ಹನುಮಂತನು ಅದರಲ್ಲಿ ಸೇರಿಕೊಂಡನಂತೆ.

ಇದು ಹನುಮಂತನ ಭಕ್ತಿ ಎಷ್ಟು ಆಳವಾದದ್ದು, ಎಷ್ಟು ಗಾಢವಾದದ್ದು ಎಂದು ತೋರಿಸುತ್ತದೆ. ಇಂಥವನು, ಸುಂದರಕಾಂಡವನ್ನು ವಾಲ್ಮೀಕಿಗಳು ಹನುಮತ್ಕಾಂಡವೆಂದು ಕರೆದಿದ್ದರೆ ಅವರನ್ನು ಸುಮ್ಮನೆ ಬಿಡುತ್ತಿದ್ದನೆ ? ಅದನ್ನು ಬಲ್ಲ ಜಾಗರೂಕರು ವಾಲ್ಮೀಕಿಮಹರ್ಷಿಗಳು. ಕಾವ್ಯದ ಈ ಭಾಗವನ್ನು ನಾಯಕಾಂಕಿತ ಮಾಡುವುದಕ್ಕಿಂತ ಸಂದರ್ಭಾಂಕಿತ ಮಾಡುವುದು ಲೇಸೆಂದು ಅವರಿಗನ್ನಿಸಿರಬೇಕು.

ವ್ಯಕ್ತಿಸೌಂದರ್ಯ

ಆದರೆ ಆಂಜನೇಯನ ವ್ಯಕ್ತಿಸೌಂದರ್ಯವು ವಾಲ್ಮೀಕಿಗಳ ದೃಷ್ಟಿಯಲ್ಲಿರಲೇ ಇಲ್ಲವೆಂದು ನಾವು ವಾದಿಸಬೇಕಾದದ್ದಿಲ್ಲ. ವ್ಯಕ್ತಿಯು ಅವರ ಗಣನೆಯಲ್ಲಿ ಮುಖ್ಯವಾಗಲ್ಲದಿದ್ದರೂ ಗೌಣವಾಗಿ ಇದ್ದಿರಬಹುದು.

ಸೌಂದರ್ಯವು ದ್ವಿವಿಧವಷ್ಟೆ? ಬಹಿರಂಗದ್ದೊಂದು, ಅಂತರಂಗದ್ದೊಂದು. ಆಂಜನೇಯನ ಬಹಿರಾಕಾರದಲ್ಲಿ ಅದು ಇರಲಿಲ್ಲವೆನ್ನಲಾಗದು.

ಕಾಂಚನಾದ್ರಿ ಕಮನೀಯವಿಗ್ರಹಮ್ ॥

—ಎಂದು ಆತನನ್ನು ವರ್ಣಿಸಿದ್ದಾರೆ. ಆತನು ಕಾಮರೂಪಿ; ತನ್ನಿಚ್ಛೆಯಂತೆ ಅಣುವಾಗಬಲ್ಲವನು, ಬೃಹತ್ತಾಗಬಲ್ಲವನು; ಸೌಮ್ಯತಾಳಬಲ್ಲವನು; ಘೋರ ತಾಳಬಲ್ಲವನು. ಅವನಿಗೆ ಸುಂದರಕಾಂಡವು ದುರ್ಲಭವಾಗಿರಲಿಲ್ಲ.

ಆದರೆ "ಪುಂಸಾಂ ಮೋಹನರೂಪಾಯ" ಎನ್ನಿಸಿಕೊಂಡ ರಾಮನ ಪಕ್ಕದಲ್ಲಿ ಹನುಮಂತನ ರೂಪಾತಿಶಯದ ಪ್ರಶಂಸೆ ಯುಕ್ತವೆನಿಸ..

ಹನುಮಂತನ ಬಲಪರಾಕ್ರಮಗಳ ವಿಷಯದಲ್ಲಿ ಪ್ರಶಂಸೆ ನ್ಯಾಯವಾದದ್ದೇ.

ಮನೋಜವಂ ಮಾರುತತುಲ್ಯವೇಗಮ್ ॥

ಈ ವೀರಸಂಪತ್ತು ಮಹತ್ತರವೇ ಆದರೂ ಅದಕ್ಕಿಂತ ಪ್ರಶಂಸನೀಯವಾದದ್ದು ಆಂಜನೇಯನ ಅಂತರಂಗಸಂಪತ್ತು.

ಜಿತೇಂದ್ರಿಯಂ ಬುದ್ಧಿಮತಾಂ ವರಿಷ್ಠಮ್ ॥

ಜಿತೇಂದ್ರಿಯತ್ವವೇ ಆತ್ಮಸಂಯಮ. ಆತ್ಮಸಂಯಮವೆಂದರೆ ತನ್ನನ್ನು ತಾನು ಹತೋಟಿಯಲ್ಲಿರಿಸಿಕೊಂಡಿರುವುದು; ತನ್ನ ಮನಸ್ಸನ್ನು ಸ್ವೇಚ್ಛೆಗೆ ಹೋಗದಂತೆ ಹದ್ದಿನಲ್ಲಿಡುವುದು. ಈ ಗುಣವು ಮಾರುತಿಯಲ್ಲಿ ಎರಡು ರೂಪಗಳಲ್ಲಿ ಫಲಿಸಿತು ;

(೧) ಕರ್ತವ್ಯೈಕನಿಷ್ಠೆ;

(೨) ಯುಕ್ತಾಯುಕ್ತವಿವೇಕಕ್ಕೆ ಅವಶ್ಯವಾದ ಸಮಚಿತ್ತತೆ.

ಯಾರು ಇಂದ್ರಿಯಪರವಶನೋ ಅವನಿಗೆ ಚಿತ್ತೈಕಾಗ್ರತೆ ಸಾಧ್ಯವಾಗದು, ವಿಮರ್ಶನವಿಶದತೆಯೂ ಸಾಧ್ಯವಾಗದು. ಈ ಎರಡೂ ಆಂಜನೇಯನ ಅಂತರಂಗ ಸಂಪತ್ತಿನ ಮುಖ್ಯಾಂಶಗಳು. ಇವೆರಡರ ಜೊತೆಗೆ ಸೇರಿದ್ದ

ಮತ್ತೊಂದು ಮಹಾಗುಣವು ಔಚಿತ್ಯಪರಿಜ್ಞಾನ. ಇದು ಸಂದರ್ಭದ ಆಳವಾದ ವಿಮರ್ಶನೆಯಿಲ್ಲದೆ ಬರತಕ್ಕದ್ದಲ್ಲ. ಈ ಔಚಿತ್ಯವಿವೇಕವು ಆಂಜನೇಯ ಮೂರ್ತಿಯ ವಾಕ್ಪ್ರಕಾರದಲ್ಲಿಯೂ ಆಕಾರಭಂಗಿಯಲ್ಲಿಯೂ ಎಲ್ಲೆಡೆಯೂ ಎದ್ದು ಕಾಣುತ್ತದೆ. ಇದು ಭಾವಸೌಂದರ್ಯ.

ಅಂತಸ್ಸೌಂದರ್ಯ ಬಹಿಸ್ಸೌಂದರ್ಯಗಳು

ಸೌಂದರ್ಯಭೂಯಿಷ್ಠವಾದ ತನ್ನ ಕಾವ್ಯಪ್ರಪಂಚದಲ್ಲಿ ವಾಲ್ಮೀಕಿಯು ಸೌಂದರ್ಯದೌತ್ಯಕ್ಕಾಗಿ ಮನುಷ್ಯನನ್ನು ಬಿಟ್ಟು ಕಪಿಯನ್ನಾರಿಸಿಕೊಂಡದ್ದೇಕೆ ? ಆತನಿಗೆ ಮನುಷ್ಯಜಾತಿಯಲ್ಲಿ ಅಷ್ಟು ಅಸಹನೆಯೇ ? ಇದು ಸೋಜಿಗದ ಪ್ರಶ್ನೆ.

ಈಗ ಕಥಾಸಂದರ್ಭವನ್ನು ಜ್ಞಾಪಕಕ್ಕೆ ತಂದುಕೊಳ್ಳೋಣ.

ಇದು ಸೀತಾನ್ವೇಷಣದ ಪ್ರಕರಣ. ಆ ಅನ್ವೇಷಣೆ ನಾಲ್ಕು ದಿಕ್ಕುಗಳಲ್ಲಿಯೂ ನಾನಾ ವಿದಿಕ್ಕುಗಳಲ್ಲಿಯೂ ನಡೆಯಬೇಕಾಗಿತ್ತು. ದಕ್ಷಿಣಪ್ರಾಂತದಲ್ಲಿ ಅನ್ವೇಷಣ ಮಾಡುವವರು ಸಮುದ್ರವನ್ನು ದಾಟಬೇಕಾದದ್ದು ಅನಿವಾರ್ಯವಾಗಿತ್ತು. ಹೀಗೆ ಅವಶ್ಯಕರ್ತವ್ಯವಾದ ಸಮುದ್ರಲಂಘನ ಕಾರ್ಯಕ್ಕೆ ಅರ್ಹವಾದ ಪ್ರಾಣಿ ಯಾವುದು ? ಮನುಷ್ಯನಂತೂ ಅಲ್ಲ.

ಶ್ರೀರಾಮನು ಮಹಾವಿಷ್ಣುವಲ್ಲವೆ ? ಆತನು ಆಂಜನೇಯನಿಗಿಂತ ಹೆಚ್ಚು ಪರಾಕ್ರಮಿಯಲ್ಲವೆ ? ಆತನು ತಾನೇ ಸಾಗರೋಲ್ಲಂಘನ ಮಾಡಲು ಆಗುತ್ತಿರಲಿಲ್ಲವೆ ?

ಇಂಥ ಪ್ರಶ್ನೆಗಳು ಸಂಪೂರ್ಣವಾಗಿ ಅಸಂಗತಗಳು. ಮಹಾವಿಷ್ಣುವು ರಾವಣಾಸುರನು ಹುಟ್ಟದಂತೆಯೇ ಮಾಡಬಹುದಾಗಿತ್ತು. ಸೀತೆ ಎಲ್ಲಿದ್ದಾಳೆಂದು ಆ ಸರ್ವಜ್ಞನು ಯಾವ ಅನ್ವೇಷಣೆಯೂ ಇಲ್ಲದೆಯೇ ಕಂಡುಕೊಳ್ಳಬಹುದಾಗಿತ್ತು. ಇಂಥ ಬಹುದುಬಾರದುಗಳು ಇಲ್ಲಿ ಯುಕ್ತವಾಗಲಾರವು. ಇಲ್ಲಿಯದು ಒಂದು ಮಾನವಕಥಾಪ್ರಸಂಗ. ದೈವಿಕವನ್ನು ಕೂಡಿದಮಟ್ಟಿಗೂ ದೂರವಿಟ್ಟು ಮಾನವಸ್ವಭಾವವನ್ನು ಹೊರಕ್ಕೆ ತರಬೇಕೆಂಬುದು ಕವಿಯ ಆಶಯ. ಮಾನುಷ್ಯವೇ ಎಲ್ಲಿಯಾದರೂ ಕಾವ್ಯವಸ್ತು. ಕಾವ್ಯದಲ್ಲಿ ಮಾನುಷವು ಮುಖ್ಯ, ದೈವವು ಪ್ರಾಸಂಗಿಕ.

ಪ್ರಕೃತದಲ್ಲಿ ಮನುಷ್ಯನನ್ನು ಬಿಟ್ಟಮೇಲೆ ಸಮುದ್ರವನ್ನು ದಾಟಬಲ್ಲವು ಸಿಂಹ, ಗಜ, ವ್ಯಾಘ್ರ ಮೊದಲಾದ ಮೃಗಪ್ರಾಣಿಗಳಾಗಲಿ ಸರ್ಪ ಮೊದಲಾದ ಸರೀಸೃಪಗಳಾಗಲಿ ಅಲ್ಲ. ಶುಕಪಿಕಾದಿ ಪಕ್ಷಿಗಳೂ ಮಶಕ ಕೀಟಗಳೂ ಹಾರಬಲ್ಲವಾದರೂ ಅವುಗಳ ಸಂಚಾರಪ್ರದೇಶವು ಬಹು ಮಿತವಾದದ್ದು. ಮಹಾಸಮುದ್ರವನ್ನು ಹಾರುವ ಶಕ್ತಿ ಅವಕ್ಕೆ ಇಲ್ಲ. ಹೀಗೆ ಮನುಷ್ಯನಿಗೆ ತಿಳಿದಿರುವ ಪ್ರಾಣಿವರ್ಗದಲ್ಲಿ ಹಾರುವ ಸಾಮರ್ಥ್ಯಕ್ಕೇ ಪ್ರಸಿದ್ಧವಾದದ್ದು ವಾನರವೊಂದೇ. ಆದದ್ದರಿಂದಲೇ ಅದಕ್ಕೆ ಪ್ಲವಗ, ಪ್ಲವಂಗ, ಪ್ರವಂಗಮ ಇತ್ಯಾದಿ ಲಂಘನ ಸಾಮರ್ಥ್ಯಸೂಚಕಗಳಾದ ಹೆಸರುಗಳು. ಈ ಕಾರಣದಿಂದ ವಾಲ್ಮೀಕಿಗಳು ಸೃಷ್ಟಿಯಲ್ಲೆಲ್ಲ ವಾನರಜಾತಿಯನ್ನು ತಮ್ಮ ಸಂದರ್ಭಕ್ಕಾಗಿ ಆರಿಸಿಕೊಂಡಿರಬೇಕು.

ಹೀಗೆ ಕಥೆಗೆ ಕಪಿಪ್ರಸ್ತಾವವು ನಿರ್ಬಂಧವಾಗಿ ಒದಗಿಬಂದ ಬಳಿಕ ಅದನ್ನು ಒಂದು ಸುಂದರ ಪ್ರಕರಣಕ್ಕೆ ಜೋಡಿಸುವುದರಲ್ಲಿ ವಾಲ್ಮೀಕಿಗಳಿಗೆ ಅನೌಚಿತ್ಯದ ಶಂಕೆ ತೋರಿದ್ದಿರಬಹುದೆ? ಸಾಮಾನ್ಯಜನಕ್ಕೆ ಅಂಥ ಶಂಕೆ ತೋರುತ್ತದೆ. ಸೊಗಸಾದ ಔತಣದ ಊಟ ಬಡಿಸಲಿಕ್ಕೆ ಸೊಟ್ಟುಸೊಟ್ಟೂ ಕೊಳಕುಕೊಳಕೂ ಆದ ಪರಿಚಾರಕನೆ? ಪ್ರಣಯಪತ್ರವನ್ನು ಬರೆಯುವುದಕ್ಕೆ ಒರಟಾದ ಕರಡು ಕಾಗದವೆ? ನಳದಮಯಂತಿಯರಿಗೆ ಪರಸ್ಪರ ವಾರ್ತಾವಾಹಿಗಳು ಕೆಟ್ಟ ಕುರೂಪಿಗಳಲ್ಲ; ಸುಂದರವಾದ ಹಂಸೆಗಳು. ಕಪಿಯನ್ನು ನೋಡಿ ಸೀತಾದೇವಿ ಭಯಭ್ರಾಂತಳಾದಾಳೆಂದು ಶ್ರೀರಾಮನು ಶಂಕೆಪಡುವುದು ಅಸಹಜವಲ್ಲ. ಆಕೆ ಭಯಪಟ್ಟಳೆಂದು ರಾಮಾಯಣದಲ್ಲಿಯೇ ಇದೆ. ಹೀಗೆ ವಾನರಾಕಾರದ ಅನುಚಿತತೆಯು ವಾಲ್ಮೀಕಿಗಳ ಮನಸ್ಸಿಗೆ ತೋರಿರಬೇಕೆಂದು ನಾವು ಭಾವಿಸಿದರೂ ಆ ಶಂಕೆಯನ್ನು ವಾಲ್ಮೀಕಿಗಳು ಬದಿಗಿರಿಸುವಂತೆ ಮಾಡುವ ಇನ್ನೊಂದು ಆಲೋಚನೆಯೂ ಅವರ ಮನಸ್ಸಿನಲ್ಲಿ ಇದ್ದಿರಬೇಕೆಂದು ನಾವು ಭಾವಿಸಿಕೊಳ್ಳಬೇಕಾಗುತ್ತದೆ. ಆ ಆಲೋಚನೆಯ ಮುಖ್ಯಾಂಶಗಳು ಎರಡು :

(೧) ನರಜಾತಿಯು ಯಾವ ಗುಣಗಳನ್ನು ಉತ್ಕೃಷ್ಟವೆಂದು ಎಣಿಸಿಕೊಂಡಿದೆಯೋ ಆ ಗುಣಗಳು ವಾನರಜಾತಿಯಲ್ಲಿ ಅಸಂಭವವಲ್ಲ —ಎಂಬುದು ವಾಲ್ಮೀಕಿಗಳ ಮೊದಲನೆಯ ಆಲೋಚನೆ.

(೨) ರೂಪ ಉತ್ಕೃಷ್ಟವಲ್ಲದಿದ್ದರೂ ಗುಣ ಉತ್ಕೃಷ್ಟವಾಗಿರುವಲ್ಲಿ ನಾವು ಆ ಗುಣವನ್ನು ನೋಡಿದಷ್ಟೂ ಆ ಕುರೂಪವು ಅಳಿಸಿಹೋಗಿ ಇಲ್ಲವಾಗುತ್ತದೆ—ಎಂಬುದು ವಾಲ್ಮೀಕಿಗಳ ಎರಡನೆಯ ಆಲೋಚನೆ.

ಇದನ್ನೇ ಬೇರೆ ಮಾತುಗಳಲ್ಲಿ ಸ್ಪಷ್ಟಪಡಿಸಲು ಹೀಗೆ ಹೇಳಬಹುದು: ನೀತಿಯ ಗುಣವೂ ರೂಪದ ಗುಣವೂ ಒಂದಕ್ಕೊಂದು ಹೊಂದಿಕೊಳ್ಳದಿದ್ದರೂ ನೀತಿಗುಣವು ಪ್ರಬಲಿಸಿದಂತೆಲ್ಲ ರೂಪಗುಣದ ಗಣನೆ ಇಳಿದುಹೋಗುತ್ತದೆ. ರೂಪವನ್ನು ಮಾತ್ರ ನೋಡಿ ನೀತಿಯನ್ನು ನೋಡದೆ ಒಬ್ಬ ಹೆಣ್ಣನ್ನು ಮದುವೆ ಮಾಡಿಕೊಂಡವನಿಗೆ ಆ ರೂಪದ ಮೋಹ ಬಹುಕಾಲ ಉಳಿಯಲಾರದು. ಪೂರ್ವಕಾಲದಲ್ಲಿ ಗಂಡುಹೆಣ್ಣುಗಳು ಕಿರಿಯವರಾಗಿದ್ದಾಗಲೇ ಅವರ ತಾಯಿತಂದೆಯರು ಅವರಿಗೆ ಮದುವೆಮಾಡಿಸುತ್ತಿದ್ದರು. ಆ ವಧೂವರರು ರೂಪಕ್ಕಾಗಿ ಮೋಹಬಿದ್ದವರೂ ಅಲ್ಲ, ನೀತಿವಿಚಾರ ನಡೆಸಿದವರೂ ಅಲ್ಲ. ಆದರೆ ಅವರು ಬೆಳೆದಮೇಲೆ ಆ ದಂಪತಿಗಳಲ್ಲಿ ರೂಪಸಂಪತ್ತಿಲ್ಲದಿದ್ದರೂ ಅವರಲ್ಲಿದ್ದ ನೀತಿ ಸಂಪತ್ತು ಅವರ ಅನ್ಯೋನ್ಯಪ್ರೇಮವನ್ನು ವೃದ್ಧಿಪಡಿಸುತ್ತಿತ್ತು.

ಕರ್ಮದಲ್ಲಿ ಅಕರ್ಮವನ್ನೂ ಅಕರ್ಮದಲ್ಲಿ ಕರ್ಮವನ್ನೂ ಕಾಣಲು ಕಲಿತವನು ಜ್ಞಾನಿಯೆಂದು ಗೀತೆಯಲ್ಲಿ ಉಪದೇಶವಿದೆಯಷ್ಟೆ? ಅದರಂತೆಯೇ ಸೌಂದರ್ಯದಲ್ಲಿ ಅಸೌಂದರ್ಯವನ್ನೂ ಅಸೌಂದರ್ಯದಲ್ಲಿ ಸೌಂದರ್ಯವನ್ನೂ ಕಾಣುವ ಅಭ್ಯಾಸವು ಒಂದು ತತ್ತ್ವಜ್ಞಾನಸಾಧನ. ಹಾಗೆಯೇ ಅಂತಸ್ಸೌಂದರ್ಯಕ್ಕೂ ಬಹಿಸ್ಸೌಂದರ್ಯಕ್ಕೂ ಇರುವ ವ್ಯತ್ಯಾಸವನ್ನು ಲಕ್ಷಿಸದೆ ಎರಡನ್ನೂ ಒಂದಾಗಿ ಪರಿಗಣಿಸುವುದನ್ನು ಅಭ್ಯಾಸಮಾಡಬೇಕು. ಅದೇ ದ್ವಂದ್ವಾತೀತನ ಲಕ್ಷಣ. ಭಗವತ್ಸ್ವರೂಪವನ್ನು ವರ್ಣಿಸುವಲ್ಲಿ ಅನೇಕ ಅಸುಂದರಭಾವಗಳನ್ನು ಸೂಚಿಸುವುದರ ತಾತ್ಪರ್ಯ ಇದು. ಗಣಪತಿ ದೇವತೆಯು ಪ್ರಣವದ ಪ್ರತೀಕ. ಪ್ರಣವಾಕ್ಷರವು ಪರಬ್ರಹ್ಮಸಂಜ್ಞೆ. ಪರಬ್ರಹ್ಮವು ಆನಂದಸ್ವರೂಪಿ. ಆನಂದವು ಸೌಂದರ್ಯಬೀಜ. ಹೀಗೆ ಸಕಲ ಸೌಂದರ್ಯಮೂಲವಾದ ಬ್ರಹ್ಮವಸ್ತುವಿನ ಪ್ರತೀಕಕ್ಕೆ ಕೊಟ್ಟಿರುವ ಹೆಸರುಗಳೆಂಥವು ?

ಸುಮುಖಶ್ಚೈಕದಂತಶ್ಚ ಕಪಿಲೋ ಗಜಕರ್ಣಕಃ ।
ಲಂಬೋದರಶ್ಚ ವಿಕಟಃ..........॥

ಇದೇ ಬೋಧನೋಪಾಯವನ್ನು ರುದ್ರಾಧ್ಯಾಯ ಮೊದಲಾದ ಶ್ರುತಿ ಪ್ರಕರಣಗಳಲ್ಲಿಯೂ ಕಾಣಬಹುದು.

ಈ ತತ್ತ್ವದಿಂದ ನಾವು ಆಂಜನೇಯಾವತಾರದ ಮರ್ಮವನ್ನು ಗ್ರಹಿಸಬೇಕಾದದ್ದು. ಅಂತಸ್ಸೌಂದರ್ಯವನ್ನು ದೃಷ್ಟಿಯಲ್ಲಿರಿಸಿಕೊಂಡು ಬಹಿರಾಕೃತಿಯನ್ನು ಮರೆಯಬೇಕಾದದ್ದು.

ಒಂದು ಅನುಭವ

ಗುಣಸ್ವಾರಸ್ಯವೂ ರೂಪದೋಷವೂ ಎರಡೂ ಒಂದೆಡೆಯಿದ್ದಲ್ಲಿ ಆ ಗುಣವು ಆ ದೋಷವನ್ನು ಮರೆಯಿಸುತ್ತದೆಂಬುದಕ್ಕೆ ನಿದರ್ಶನವಾಗಿ ಶ್ರೀ ವಿ.ಎಸ್.ಶ್ರೀನಿವಾಸಶಾಸ್ತ್ರಿಗಳವರು ನನಗೆ ವರ್ಣಿಸಿದ ಒಂದು ಅನುಭವ ಜ್ಞಾಪಕಕ್ಕೆ ಬರುತ್ತದೆ. ಶಾಸ್ತ್ರಿಗಳವರು ಚಿಕ್ಕವಯಸ್ಸಿನಲ್ಲಿದ್ದಾಗ ತಂಜಾವೂರಿನಲ್ಲಿ ಒಬ್ಬ ದೊಡ್ಡ ಮನುಷ್ಯರ ಮನೆಯಲ್ಲಿ—ಬಹುಶಃ ಸರ್ ಟಿ. ಮುತ್ತುಸ್ವಾಮಿ ಅಯ್ಯರವರ ಮನೆಯಲ್ಲಿ ಮದುವೆ ನಡೆಯಿತಂತೆ. ಆ ಕಾಲದಲ್ಲಿ ಮದುವೆ ನಾಲ್ಕೈದು ದಿವಸಗಳ ಉತ್ಸವ. ಅದರಲ್ಲೊಂದು ದಿವಸ ಸಭಾಪೂಜೆ. ಅಂದು ನರ್ತಕಿಯರಿಂದ ನರ್ತನ (ತಾಫಾ) ಮಾಡಿಸುವುದು.ಆಗಿನ ವಾಡಿಕೆ. ಆ ದಿನದ ಸದಸ್ಸಿಗೆ ಶ್ರೀನಿವಾಸಶಾಸ್ತ್ರಿಗಳೂ ನಾಲ್ವರೈವರು ಸ್ನೇಹಿತರೂ ಹೋಗಿ ಕುಳಿತರು. ಗೊತ್ತಾಗಿದ್ದ ನರ್ತಕಿ ಅವರ ಕಣ್ಣಿಗೆ ಕಾಣಿಸಿದಳು. ಆಕೆ ಮುದುಕಿ, ರೂಪವತಿಯಲ್ಲ. ಆ ಯುವಕರು ತಮ್ಮ ತಮ್ಮೊಳಗೆ ''ಈ ಮುದಿಕುಣಿತವನ್ನೇನು ನೋಡುವುದು ? ನಡೀರಿ, ಹೋಗೋಣ'' ಎಂದು ಮಾತನಾಡಿಕೊಂಡರಂತೆ. ಅದನ್ನು ಕೇಳಿದ ಹಿರಿಯರೊಬ್ಬರು ''ಇನ್ನೂ ಸಭೆ ಪ್ರಾರಂಭವಾಗಿಲ್ಲ; ಈಗ ಎದ್ದು ಹೋಗುವುದು ಮರ್ಯಾದೆಯಲ್ಲ. ಹತ್ತು ನಿಮಿಷವಾದಮೇಲೆ ಹೋಗಬಹುದು''—ಎಂದರಂತೆ. ಅದರಂತೆ ಯುವಕರು ಕುಳಿತಿದ್ದರು. ನಾಟ್ಯ ಪ್ರಾರಂಭವಾಯಿತು. ಆಕೆ ಸಭಾವಂದನೆಮಾಡಿ ಬಳಿಕ ರಾಧಾಕೃಷ್ಣಲೀಲೆಯಲ್ಲಿ ರಾಧೆ ತನ್ನ ಬಳಿಗೆ ಕೃಷ್ಣ ಇನ್ನೂ ಬರಲಿಲ್ಲವಲ್ಲ!—ಎಂದು ಕಳವಳಪಟ್ಟ ಹಾಡನ್ನು ಹಾಡಿಕೊಂಡು ಅಭಿನಯ ಹಿಡಿಯಲಾರಂಭಿಸಿದಳು. ಹತ್ತು ನಿಮಿಷ ಕಳೆಯಿತು, ಇಪ್ಪತ್ತು

ನಿಮಿಷವಾಯಿತು. ನಮ್ಮ ಯುವಕರು ಕದಲಲಿಲ್ಲ. ಆ ಹಿರಿಯರು ''ಈಗ ಬೇಕಾದರೆ ಹೋಗಬಹುದು'' ಎಂದರು. ಯುವಕರು ''ನಮ್ಮನ್ನು ತಳ್ಳಿದರೂ ನಾವು ಹೋಗುವವರಲ್ಲ!'' ಎಂದರು. ಆಕೆಯ ನೇತ್ರಾಭಿನಯ, ಆಕೆಯ ನಾನಾ ಮುಖಭಾವಗಳು, ಆಕೆಯ ಅಂಗಾಂಗಭಂಗಿಗಳು ಹಾಗೆ ಚಿತ್ತಗ್ರಾಹಿಯಾಗಿದ್ದವು.

ಗುಣವು ಅತಿಶಯವಾದಾಗ ರೂಪದ ಲೋಪವು ಲೆಕ್ಕಕ್ಕಿಲ್ಲದೆ ಹೋಗುತ್ತದೆ. ಆಂಜನೇಯನ ವಾನರತ್ವವು ಮಾಯವಾಗಿ ಆತನು ''ಕಾಂಚನಾದ್ರಿ ಕಮನೀಯವಿಗ್ರಹ''ನಾಗುತ್ತಾನೆ. ರೂಪನ್ಯೂನತೆಯನ್ನು ಗುಣಬಾಹುಳ್ಯವು ಜಯಿಸುತ್ತದೆ. ಕೆಲವು ದೃಷ್ಟಾಂತಗಳನ್ನು ನೋಡೋಣ.

ಕಥಾಸಂಕ್ಷೇಪ

ಆಂಜನೇಯಮೂರ್ತಿಯ ದರ್ಶನ ನಮಗೆ ಮೊದಲು ಆಗುವುದು ಕಿಷ್ಕಿಂಧಾ ಪ್ರದೇಶದಲ್ಲಿ. ರಾಮಲಕ್ಷ್ಮಣರು ಸೀತಾದೇವಿಯನ್ನು ಹುಡುಕಿಕೊಂಡು ಕಾಡಿನಲ್ಲಿ ಅಲೆದಾಡುತ್ತ ಅಲ್ಲಿಗೆ ಬರುತ್ತಿದ್ದಾರೆ. ಸುಗ್ರೀವನು ಅವರನ್ನು ದೂರದಿಂದ ಕಂಡು, ಅವರು ತನ್ನ ಶತ್ರುವಾದ ವಾಲಿಯ ಗುಪ್ತ ಭಟರಿರಬೇಕೆಂದು ಊಹಿಸಿಕೊಂಡು, ಭೀತಿಪಟ್ಟು ತಲ್ಲಣಗೊಂಡಿದ್ದಾನೆ. ಆಗ ಆತನ ಪರಿವಾರದಲ್ಲಿದ್ದ ವಾಯುಪುತ್ರನು ಧೈರ್ಯಮಾಡಿ ಸುಗ್ರೀವನ ಶಂಕೆಯನ್ನು ಪರಿಹರಿಸಲು ಮುಂದೆ ಬರುತ್ತಾನೆ. ರಾಮಲಕ್ಷ್ಮಣರ ರೂಪಲಕ್ಷಣಗಳನ್ನೂ ಮುಖಕಾಂತಿಯನ್ನೂ ನೋಡಿದರೆ ಅವರು ವಾಲಿಯ ಕಡೆಯವರೆನಿಸುವುದಿಲ್ಲ; ಇವರು ಯಾರೋ ಸತ್ಪುರುಷರು, ಸ್ನೇಹಯೋಗ್ಯ ರಾಗಿ ಕಾಣುತ್ತಾರೆ; ಅವರ ಸ್ನೇಹದಿಂದ ನಿನಗೆ ಪ್ರಯೋಜನವೇ ಆಗಬಹುದು—ಎಂದು ಆಂಜನೇಯನು ನುಡಿದದ್ದನ್ನು ಸುಗ್ರೀವನು ಲಾಲಿಸಿ, ಆ ಆಗಂತುಕರನ್ನು ವಿಚಾರಿಸಿ ತಿಳಿದುಕೊಳ್ಳುವಂತೆ ಆಂಜನೇಯನಿಗೆ ಅನುಜ್ಞೆ ಕೊಡುತ್ತಾನೆ. ಈ ಸಂಗತಿ ಆಂಜನೇಯನ ನೈಜಸಾತ್ತ್ವಿಕತೆಗೂ ದೂರದರ್ಶಿತ್ವಕ್ಕೂ ನಿದರ್ಶನ.

ಹನುಮಂತನು ರಾಮನ ಬಳಿಗೆ ಹೋದದ್ದಾದರೂ ಹೇಗೆ? ವಾನರ ರೂಪದಿಂದ ಅಲ್ಲ; ಭಿಕ್ಷುರೂಪದಿಂದ. ರಾಮಲಕ್ಷ್ಮಣರು ತಾಪಸರೂಪ

ದಲ್ಲಿದ್ದರು. ಅಂಥವರಿಗೆ ಇಷ್ಟವಾದ ವೇಷದಲ್ಲಿ ತಾನು ಅವರಿಗೆ ಕಾಣಿಸಿಕೊಂಡರೆ ಅವರು ಒಡನೆಯೇ ಪ್ರಸನ್ನರಾದಾರು. ಇದು ಆತನ ತಾತ್ಪರ್ಯ. ಅದು ದಿಟವಾಯಿತು. ಆತನು ಮಾತನ್ನು ಪ್ರಾರಂಭಿಸಿದ ರೀತಿಯಿಂದ ಶ್ರೀರಾಮಚಂದ್ರನಿಗೆ ಸಂತೋಷವಾಯಿತು. ಆತ ತುಂಬುಮನಸ್ಸಿನಿಂದ ಆಂಜನೇಯನನ್ನು ಕೊಂಡಾಡಿದ:

ಉಚ್ಚಾರಯತಿ ಕಲ್ಯಾಣೀಂ ವಾಚಂ ಹೃದಯಹಾರಿಣೀಮ್ ॥

ಈಗ ಇನ್ನೊಂದು ದೃಶ್ಯಕ್ಕೆ ಹೋಗೋಣ.

ಆಂಜನೇಯನು ಸಮುದ್ರದ ಮೇಲೆ ಹಾರಿಹೋಗುತ್ತಿದ್ದಾನೆ. ಅವನ ತಂದೆಯಾದ ವಾಯುದೇವನ ಸ್ನೇಹಿತ ಪರ್ವತಮೂರ್ತಿ ಮೈನಾಕನು ಸಮುದ್ರದ ತಳದಲ್ಲಿ ಅಣಗಿಕೊಂಡಿದ್ದವನು ಆಂಜನೇಯನು ಕೊಂಚ ವಿಶ್ರಮಿಸಿಕೊಳ್ಳಲು ಸ್ಥಳ ಒದಗಿಸಬೇಕೆಂದು ಮೇಲಕ್ಕೆದ್ದು ಬರುತ್ತಾನೆ. ಅದನ್ನರಿಯದ ಆಂಜನೇಯನು ಅದೇನೋ ಭೂತವಿರಬೇಕೆಂದು ಭ್ರಮಿಸಿ ಮೈನಾಕಪರ್ವತದ ಮಸ್ತಕವನ್ನು ತನ್ನ ಬಾಲದಿಂದ ಅಪ್ಪಳಿಸುತ್ತಾನೆ. ಆಗ ಮೈನಾಕನು ತಾನಾರೆಂಬುದನ್ನು ತಿಳಿಸಿದ ಬಳಿಕ ವಾಯುಪುತ್ರನು ಅಲ್ಲಿ ವಿಶ್ರಾಂತಿ ತೆಗೆದುಕೊಳ್ಳಬಹುದಾಗಿತ್ತು. ಹಾಗೆ ಮಾಡಿದನೆ ? ಇಲ್ಲ. ಆತನ ಕರ್ತವ್ಯೋತ್ಸಾಹದಲ್ಲಿ ವಿರಾಮಕ್ಕೆಡೆಯಿರಲಿಲ್ಲ.

ಇಂಥ ನಾಲ್ಕಾರು ಅಡ್ಡಿ ಅಪಾಯಗಳನ್ನು ಆಂಜನೇಯನು ತನ್ನ ಪರಾಕ್ರಮದಿಂದ ಎದುರಿಸಿ ದಾಟಿ ಲಂಕಾಪಟ್ಟಣವನ್ನು ಸೇರಿದ. ಅಲ್ಲಿ ಸೀತಾಮಾತೆಗಾಗಿ ಎಲ್ಲೆಲ್ಲೂ ಹುಡುಕಿದ. ಆಕೆಯ ರೂಪಲಕ್ಷಣಗಳ ವಿಷಯದಲ್ಲಿ ತಾನು ಮನಸ್ಸಿನಲ್ಲಿ ಧರಿಸಿದ್ದ ಪ್ರಕೃತಿಯನ್ನು ಎಲ್ಲಿಯೂ ಕಾಣದೆ ಕಡೆಗೆ ರಾವಣನ ಅಂತಃಪುರಕ್ಕೆ ಬಂದ. ಅಲ್ಲಿ ಸಾವಿರಾರು ಮಂದಿ ಸುರಸುಂದರಿಯರನ್ನು ಕಂಡ. ಅವರಲ್ಲಿ ಯಾವ ಒಬ್ಬಾಕೆಯನ್ನಾದರೂ ಸೀತೆಯೆಂದು ಭ್ರಾಂತಿಪಡಬಹುದಾಗಿತ್ತಲ್ಲ! ಅಂಥಾ ಭ್ರಾಂತಿಗೆ ಆತ ಸಿಕ್ಕಲಿಲ್ಲ. ಸೀತೆ ಅಂಥಾ ಸನ್ನಿವೇಶವನ್ನು ಸಹಿಸತಕ್ಕವಳಲ್ಲವೆಂಬ ನಂಬಿಕೆ ಅವನ ಮನಸ್ಸಿನಲ್ಲಿ ಬೇರೂರಿತ್ತು. ಮಂಡೋದರಿಯನ್ನು ನೋಡಿದ. ಒಂದು ಕ್ಷಣ ಭ್ರಾಂತಿ ಪರವಶನಾದ.

ತರ್ಕಯಾಮಾಸ ಸೀತೇತಿ ರೂಪಯೌವನಸಂಪದಾ ॥

ಆದರೆ ಉತ್ತರಕ್ಷಣದಲ್ಲಿಯೇ ಆ ಭ್ರಾಂತಿ ಬಿಟ್ಟಿತು :

ನ ರಾಮೇಣ ವಿಮುಕ್ತಾ ಸಾ ಸ್ವಪ್ತುಮರ್ಹತಿ ಭಾಮಿನೀ ॥

ಪರಪುರುಷನೆಡೆಯಲ್ಲಿ ಮಲಗಿ ನಿದ್ದೆಹೋಗುವಂಥವಳೆ ರಾಮಪತ್ನಿ? ಎಂದಿಗೂ ಹಾಗಾಗಲಾರದು.

ಮತ್ತೆ ಹುಡುಕಲಾರಂಭಿಸಿ ಕಡೆಗೆ ಅಶೋಕವನದತ್ತ ಬಂದ. ಅಲ್ಲಿ ಕಂಡ ಕಾಣಬಯಸಿದ್ದದ್ದನ್ನು.

ಸೀತಮ್ಮನ ಸನ್ನಿಧಾನದಲ್ಲಿ ಅಂಜನೇಯನು ನಡೆದುಕೊಂಡ ನಡವಳಿಕೆಯ ಮರ್ಯಾದೆ, ಆ ಮಾತಿನ ಇಂಗಿತಜ್ಞತೆ, ವಿನಯ, ವಾತ್ಸಲ್ಯಗಳು ಹೃದಯಸ್ಪರ್ಶಿಗಳಾಗಿವೆ :

ಸೋಽವತೀರ್ಯ ದ್ರುಮಾತ್ತಸ್ಮಾತ್ ವಿದ್ರುಮಪ್ರತಿಮಾನನಃ ।
ವಿನೀತವೇಷಃ ಕೃಪಣಃ ಪ್ರಣಿಪತ್ಯೋಪಸೃತ್ಯ ಚ ।

....

ಕಾ ನು ಪದ್ಮಪಲಾಶಾಕ್ಷಿ ಕ್ಲಿಷ್ಟಕೌಶೇಯವಾಸಿನಿ ।
ದ್ರುಮಸ್ಯ ಶಾಖಾಮಾಲಂಬ್ಯ ತಿಷ್ಠಸಿ ತ್ವಮನಿಂದಿತೇ ॥
ಕಿಮರ್ಥಂ ತವ ನೇತ್ರಾಭ್ಯಾಂ ವಾರಿ ಸ್ರವತಿ ಶೋಕಜಮ್ ।

....

ಸೀತಾ ತ್ವಮಸಿ ಭದ್ರಂ ತೇ ತನ್ಮಮಾಚಕ್ಷ್ವ ಪೃಚ್ಛತಃ ॥

ಇದರಿಂದ ಸಂತುಷ್ಟಳಾದ ಸೀತೆ ತನ್ನ ವೃತ್ತಾಂತವನ್ನು ಹೇಳುತ್ತಾಳೆ. ಆಂಜನೇಯನು ತನ್ನ ಮಾತಿನಲ್ಲಿ ಆಕೆಗೆ ನಂಬಿಕೆ ದೃಢಪಡಬೇಕೆಂದೂ ಆಕೆ ಧೈರ್ಯಗೊಳ್ಳಬೇಕೆಂದೂ ಉದ್ದೇಶಿಸಿ,

ರಾಮನಾಮಾಂಕಿತಂ ಚೇದಂ ಪಶ್ಯ ದೇವ್ಯಂಗುಲೀಯಕಮ್ ।
ಪ್ರತ್ಯಯಾರ್ಥಂ ತವಾನೀತಂ ತೇನ ದತ್ತಂ ಮಹಾತ್ಮನಾ ॥

ಹೀಗೆ ಆಂಜನೇಯನು ಶ್ರೀರಾಮನ ಉಂಗುರವನ್ನು ಸೀತಾದೇವಿಗೆ ಒಪ್ಪಿಸಲು ಆಕೆ ಶ್ರೀರಾಮನಿಗೆ ಪ್ರತ್ಯುತ್ತರವಾಗಿ ಕಾಕಾಸುರವಧೆಯ ವೃತ್ತಾಂತವನ್ನು ಜ್ಞಾಪಕಕ್ಕೆ ತಂದು ಅದನ್ನು ಆಂಜನೇಯನು ರಾಮಚಂದ್ರನಿಗೆ ತಿಳಿಸತಕ್ಕದ್ದೆಂದೂ ತನ್ನ ಚೂಡಾಮಣಿಯನ್ನು ಆತನಿಗೆ ಜ್ಞಾಪಕಾರ್ಥವಾಗಿ ಕೊಡತಕ್ಕದ್ದೆಂದೂ ಹೇಳಿದಳು:

ಅಭಿಜ್ಞಾನಂ ಚ ರಾಮಸ್ಯ ದದ್ಯಾ ಹರಿಗಣೋತ್ತಮ ।

....

ಏಷ ಚೂಡಾಮಣಿರ್ದಿವ್ಯೋ ಮಯಾ ಸುಪರಿರಕ್ಷಿತಃ ।
ಏತಂ ದೃಷ್ಟ್ವಾ ಪ್ರಹೃಷ್ಯಾಮಿ ವ್ಯಸನೇ ತ್ವಾಮಿವಾನಘ ॥

ಆಂಜನೇಯಮೂರ್ತಿಯು ಈ ಸೀತಾಸಂದೇಶವನ್ನು ಶ್ರೀರಾಮಚಂದ್ರನಿಗೆ ಮುಟ್ಟಿಸಿ ಚೂಡಾರತ್ನವನ್ನು ಆತನಿಗೆ ಕೊಟ್ಟಾಗ ಶ್ರೀರಾಮನು ತನ್ನ ಕೃತಜ್ಞತೆಯನ್ನು ಹೀಗೆ ವ್ಯಕ್ತಪಡಿಸಿದ:

ಕೃತಂ ಹನುಮತಾ ಕಾರ್ಯಂ ಸುಮಹದ್ಭುವಿ ದುರ್ಲಭಮ್
ಮನಸಾಽಪಿ ಯದನ್ಯೇವ ನ ಶಕ್ಯಂ ಧರಣೀತಲೇ ॥

ಎಂಥ ಸೌಭಾಗ್ಯಯೋಗ ಆಂಜನೇಯಮೂರ್ತಿಯದು! ಈಕಡೆಯ ರಾಘವಹಸ್ತಸ್ಪರ್ಶಸೌಭಾಗ್ಯವನ್ನು ಆಕಡೆಯ ಜಾನಕಿಗೆ ಹಸ್ತಗತವಾಗಿಸಿದ್ದು; ಆಕಡೆಯ ಜಾನಕೀಹಸ್ತಸ್ಪರ್ಶಸೌಭಾಗ್ಯವನ್ನು ಈಕಡೆಯ ರಾಘವನಿಗೆ ಹಸ್ತಗತಮಾಡಿಸಿದ್ದು—ಹೀಗೆ ಉಭಯಸೌಭಾಗ್ಯಗಳ ಸಂಧಿಸ್ಥಾನ ಆಂಜನೇಯ. ಮನುಷ್ಯ ಕಾಣಬಹುದಾದ ಸೌಂದರ್ಯಗಳ ಮಾತಿರಲಿ, ಅವನು ಊಹಿಸಬಹುದಾದ ಸೌಂದರ್ಯಗಳಲ್ಲಿ ಸಹ ಆಂಜನೇಯನ ಯೋಗಕ್ಕಿಂತ ಸುಂದರವಾದ್ದು ಏನಿದ್ದೀತು?

ಅಲ್ಲಿಂದ ಮುಂದಿನ ರಾಮಕಥೆ ನಿರೀಕ್ಷಿಸಬಹುದಾದದ್ದು. ಶ್ರೀರಾಮನು

ಧರ್ಮಾತ್ಮಾ ಸತ್ಯಸಂಧಶ್ಚ..........................।
ಪೌರುಷೇ ಚಾಪ್ರತಿದ್ವಂದ್ವಃ......................॥

—ಎಂಬುದನ್ನರಿತವರಿಗೆ ಸೇತುನಿರ್ಮಾಣವೂ ರಾವಣಸಂಹಾರವೂ ಸ್ವಾಭಾವಿಕ ಘಟನೆಗಳೇ, ಅವಶ್ಯಸಂಭಾವ್ಯಗಳೇ ಎಂಬುದು ಸ್ವತಸ್ಸಿದ್ಧವಾಗಿರುತ್ತದೆ.

ಕಿಷ್ಕಿಂಧೆಯಲ್ಲಿ ಉದಿಸಿದ ಸೌಂದರ್ಯಯೋಗಕ್ಕೆ ಅಯೋಧ್ಯೆಯಲ್ಲಿ ಕಿರೀಟಪ್ರಾಪ್ತಿ. ರಾಮಚಂದ್ರನ ಪಟ್ಟಾಭಿಷೇಕಕ್ಕಾಗಿ ಒಡ್ಡೋಲಗ ನೆರೆದಿದೆ. ಪ್ರಭುವು ಸುಗ್ರೀವ ವಿಭೀಷಣಾದಿಗಳ ಕೃತಜ್ಞತೆಯ ಪಾರಿತೋಷಕಗಳನ್ನು ಅನುಗ್ರಹಿಸಿದ್ದಾನೆ. ಸೀತಾದೇವಿಗೂ ಯಥೋಚಿತವಾಗಿ ಉಡುಗೊರೆ ಕೊಟ್ಟಿದ್ದಾಯಿತು. ಆ ದೇವಿ ತನ್ನ ಕಂಠದಲ್ಲಿದ್ದ ಮಣಿಹಾರವನು

ವಾಯುಪುತ್ರ್ರ ‍ ತಲುದ್ದೇಶಿಸಿ ಭರ್ತನ ಮುಖವನ್ನು ನೋಡುತ್ತಾಳೆ. ಆಗ ಪ್ರಭು ನುಡಿದ :

ಪ್ರದೇಹಿ ಸುಭಗೇ ಹಾರಂ ಯಸ್ಯ ತುಷ್ಟಾಸಿ ಭಾಮಿನಿ ।
ತೇಜೋ ಧೃತಿರ್ಯಶೋ ದಾಕ್ಷ್ಯಂ ಸಾಮರ್ಥ್ಯಂ ವಿನಯೋ ನಯಃ ॥
ಪೌರುಷಂ ವಿಕ್ರಮೋ ಬುದ್ಧಿಃ ಯಸ್ಮಿನ್ನೇತಾನಿ ನಿತ್ಯದಾ ।
ದದೌ ಸಾ ವಾಯುಪುತ್ರಾಯ ತಂ ಹಾರಮಸಿತೇಕ್ಷಣಾ ॥

ಇಂಥ ಸಮಾನವನ್ನು ಪಡೆದದ್ದಲ್ಲವೆ ಸುಂದರ—ಸುಂದರದಲ್ಲಿ ಸುಂದರ!

ನಿಃಸ್ವಾರ್ಥತೆ

ಆಂಜನೇಯನ ತಂದೆಯ ಸ್ವಭಾವವನ್ನು ಛಾಂದೋಗ್ಯೋಪನಿಷತ್ತಿನ ಒಂದು ಕಥೆ ತಿಳಿಸುತ್ತದೆ. ದೇವತೆಗಳಿಗೂ ಅಸುರರಿಗೂ ಆಗಾಗ ಯುದ್ಧವಾಗುತ್ತಿತ್ತಷ್ಟೆ? ಸಲಸಲವೂ ದೇವತೆಗಳು ಪೆಟ್ಟುತಿಂದು ಸೋಲುತ್ತಿದ್ದರು. ಅವರು ಹಾಗೆ ಕುಗ್ಗಿದ್ದಾಗ ಒಂದು ಸಾರಿ ತಮ್ಮ ತಂದೆ ಪ್ರಜಾಪತಿಯಲ್ಲಿ ಮೊರೆಯಿಟ್ಟುಕೊಂಡು ಉಪಾಯವನ್ನು ಬೇಡಿದರು. ಪ್ರಜಾಪತಿಯು ಅವರಿಗೆ ಉದ್ಗೀಥದ ಉಪಾಸನೆಯು ಜಯಕಾರಕವೆಂದು ಉಪದೇಶಿಸಿದ. ಉದ್ಗೀಥವೆಂದರೆ ಪರಬ್ರಹ್ಮಧ್ಯಾನ. ಆ ಉಪದೇಶವನ್ನು ದೇವತೆಗಳು ಅಂಗೀಕರಿಸಿ, ತಮ್ಮಲ್ಲಿ ಮುಖ್ಯರಾದ ಇಂದ್ರಿಯದೇವತೆಗಳನ್ನು ಒಬ್ಬರಾದ ಬಳಿಕ ಒಬ್ಬರಂತೆ ಉಪಾಸನೆಗೆ ನಿಯಮಿಸಿದರು. ವಾಗಿಂದ್ರಿಯವನ್ನು ಬೇಡಿದರು. ಆ ದೇವತೆ ಉದ್ಗೀಥದಿಂದ ಮಹಿಮೆ ಪಡೆಯಿತು. ಅದರಿಂದ ಶುಭ ಶಬ್ದಗಳು ಹೊರಟವು. ಎಲ್ಲರೂ ಸಂತೋಷಿಸಿದರು. ವಾಕ್ಕು ಆಗ ''ಆಹಾ ! ನಾನು ಎಂಥಾ ಮಹಾಕಾರ್ಯವನ್ನು ಮಾಡಿದೆ !'' ಎಂದುಕೊಂಡಿತು. ಆ ಕ್ಷಣದಲ್ಲಿ ಪಾಪ ಅದನ್ನು ಹೊಕ್ಕಿತು. ಅದು ರಾಕ್ಷಸರ ಹೊಡೆತಕ್ಕೆ ಅವಕಾಶವಾಯಿತು. ದೇವತೆಗಳು ಚಕ್ಷುರಿಂದ್ರಿಯವನ್ನು ಉದ್ಗೀಥಕ್ಕೆ ನಿಯಮಿಸಿದರು. ಅದು ನಾನಾ ಶೋಭನರೂಪಗಳನ್ನು ತೋರಿಸಿತು. ಎಲ್ಲರೂ ಸಂತೋಷಪಟ್ಟರು. ಚಕ್ಷುಸ್ಸು ''ಆಹಾ ! ನಾನು ಎಂಥಾ ಮಹಾಕಾರ್ಯವನ್ನು ಮಾಡಿದೆ !'' ಎಂದುಕೊಂಡಿತು. ಆಗ ಪಾಪ ಪ್ರವೇಶಿಸಿತು. ಮತ್ತೆ ಅಸುರರು ಪ್ರಬಲಿಸಿ ಬಂದರು. ಹೀಗೆಯೇ ಮಿಕ್ಕ

ಎಲ್ಲ ಇಂದ್ರಿಯಾಭಿಮಾನಿ ದೇವತೆಗಳ ಪಾಡೂ ಆಯಿತು. ಕಡೆಗೆ ದೇವತೆಗಳು ವಾಯುವನ್ನು ಕುರಿತು "ನೀನು ಉದ್ಗೀಥೋಪಾಸನೆ ಮಾಡು" ಎಂದು ಬೇಡಿಕೊಂಡರು. ವಾಯುದೇವನಾದರೋ ಯಾವ ಇಂದ್ರಿಯಕ್ಕೂ ಅಂಟಿಕೊಳ್ಳದೆ ಕೇವಲ ಪ್ರಾಣರೂಪದಲ್ಲಿರುವವನು. ಅವನನ್ನು ಅಹಂತಾಪಾಪವು ಸೋಕದು. ಇಂದ್ರಿಯಗಳಿಗೆ ಸ್ವಸುಖ ಸ್ವಲಾಭಗಳ ಚಿಂತೆ ಇರುವಂತೆ ವಾಯುದೇವನಿಗಿಲ್ಲ. ಆತನು ನಿಃಸ್ವಾರ್ಥಿ; ಕೇವಲ ಕರ್ತವ್ಯತಾಭಾವದಿಂದ ಕೆಲಸ ಮಾಡತಕ್ಕವನು. ಆದದ್ದರಿಂದ ವಾಯುದೇವನು ಮಾಡಿದ ಉದ್ಗೀಥೋಪಾಸನೆ ಪಾಪಸ್ಪರ್ಶವಿಲ್ಲದೆ ನಡೆದು ಸ್ಸುರರನ್ನು ಜಯಿಸಲು ಸಮರ್ಥವಾಯಿತು. ಈ ವಾಯುದೇವಸ್ವಭಾವವು ವಾಯುಪುತ್ರನಿಗೂ ಬಂದಿತ್ತು.

ಈಗ ಪರಿಸಮಾಪನದೃಶ್ಯ. ಶ್ರೀರಾಮಚಂದ್ರನು ಪಟ್ಟಾಭಿಷೇಕಾನಂತರ ಅಯೋಧ್ಯೆಯಲ್ಲಿ ರಾಜ್ಯ ನಡೆಸುತ್ತಿದ್ದಾನೆ; ಹತಶತ್ರುವಾಗಿ, ಕೃತಕೃತ್ಯನಾಗಿ, ನಿಶ್ಚಿಂತನಾಗಿ ಉಪಶಾಂತನಾಗಿದ್ದಾನೆ. ರಾಜ್ಯವು ಸುಖ ಶಾಂತಿಸೌಭಾಗ್ಯಗಳಿಂದ ಸಮೃದ್ಧವಾಗಿದೆ. ಈಗ ಶ್ರೀರಾಮನು ಕಾಲ ಕಳೆಯುವುದು ಹೇಗೆ ? ಅದು ಹೀಗೆ : ಮಹರ್ಷಿಗಳು ಸಭೆ ನೆರೆದಿದ್ದಾರೆ. ಅವರ ನಡುವೆ ಶ್ರೀರಾಮಚಂದ್ರನು ಸೀತಾಸಹಿತನಾಗಿ ಭದ್ರಾಸನದಲ್ಲಿ ಸುಖಾಸೀನನಾಗಿದ್ದಾನೆ. ಎಡಬಲಗಳಲ್ಲಿ ತಮ್ಮಂದಿರೂ ಬಂಧುಮಿತ್ರರೂ ಕುಳಿತಿದ್ದಾರೆ. ಋಷಿಮುನಿಗಳು ರಾಮಮುಖದಿಂದ ಪರತತ್ತ್ವವನ್ನು ತಿಳಿದುಕೊಳ್ಳಬೇಕೆಂದು ಕುತೂಹಲಿಗಳಾಗಿದ್ದಾರೆ. ಮುಂದುಗಡೆ ಆಂಜನೇಯನು ಕುಳಿತು ಶ್ರುತಿ ವಾಕ್ಯಗಳನ್ನು ಹೇಳುತ್ತಿದ್ದಾನೆ. ಸ್ವಾಮಿ ವ್ಯಾಖ್ಯಾನಮಾಡುತ್ತಿದ್ದಾನೆ.

> ಅಗ್ರೇ ವಾಚಯತಿ ಪ್ರಭಂಜನಸುತೇ
> ತತ್ತ್ವಂ ಮುನಿಭ್ಯಃ ಪರಮ್ ।
> ವ್ಯಾಖ್ಯಾಂತಂ ಭರತಾದಿಭಿಃ ಪರಿವೃತಂ
> ರಾಮಂ ಭಜೇ ಶ್ಯಾಮಲಮ್ ॥

ಎಂಥ ಮನೋಹರವಾದ ಸನ್ನಿವೇಶ ! ಇದಲ್ಲವೇ ಜೀವನಸೌಂದರ್ಯದ ಶಿಖರಾಗ್ರ !

ಈ ಚಿತ್ರದ ಸೌಂದರ್ಯವನ್ನು ಕಾಣಬಲ್ಲ ಜನ ನಮ್ಮಲ್ಲಿ ಇನ್ನೂ ಇದ್ದಾರೆಂದು ನಾನು ನಂಬಿದ್ದೇನೆ. ಅಂಥವರು ಈ ಸುಂದರಕಾಂಡ ಗ್ರಂಥವನ್ನು ಆದರದಿಂದ ಬರಮಾಡಿಕೊಳ್ಳುವರು.

ಸುಂದರಕಾಂಡದ ನಿತ್ಯಪಾರಾಯಣಸಂಪ್ರದಾಯವು ನಮ್ಮ ದೇಶದಲ್ಲಿ ಬಹುಕಾಲದಿಂದ ಬಂದದ್ದು. ಮನಸ್ಸನ್ನು ದಿಕ್ಕುಗೆಡಿಸಿರುವ ಈ ನಮ್ಮ ಕಾಲದಲ್ಲಿಯೂ ಸುಂದರಕಾಂಡಪಾರಾಯಣನಿಷ್ಠರು ಇದ್ದಾರೆಂಬುದು ನಮ್ಮ ದೇಶದ ಭವಿಷ್ಯಚ್ಛುಭಕ್ಕೆ ಭರವಸೆಯಾಗಿದೆ.

ಹನುಮದ್ವಿಲಾಸ

ಕನ್ನಡದಲ್ಲಿ ತಿಪ್ಪಣಾರ್ಯನೆಂಬ ಕವಿ ಸುಂದರಕಾಂಡ ಕಥಾಸಾರವನ್ನು ಹನುಮದ್ವಿಲಾಸವೆಂಬ ಕಾವ್ಯದಲ್ಲಿ ಮನೋಹರವಾಗಿ ರೂಪಗೊಳಿಸಿದ್ದಾನೆ. ಅದರಲ್ಲಿಯ ಪದ್ಯಗಳೂ ಹಾಡುಗಳೂ ಹೃದಯಸ್ಪರ್ಶಿಯಾಗಿವೆ. ಆನಂದಭೈರವಿ, ಮಧ್ಯಮಾವತಿ, ಮೋಹನ ಮೊದಲಾದ ಸುಂದರ ರಾಗಗಳಲ್ಲಿ ಆ ಗೀತೆಗಳು ಹಾಡತಕ್ಕುವಾಗಿವೆ. ಕನ್ನಡ ಜನದ ಗಾನಾಭಿರುಚಿ ಅನ್ಯಾನುಕರಣ ವ್ಯಾಮೋಹಕ್ಕೆ ಸಿಕ್ಕುವ ಮುನ್ನ—ಈಗ್ಗೆ ಐವತ್ತರವತ್ತು ವರ್ಷಗಳ ಹಿಂದಿನವರೆಗೆ—ಹನುಮದ್ವಿಲಾಸವನ್ನು ಹಾಡುವವರು ವಿರಳರಾಗಿರಲಿಲ್ಲ. ನನ್ನ ಬಂಧುವರ್ಗದಲ್ಲಿ ಕೆಲವು ವರ್ಷಗಳ ಹಿಂದಿನವರೆಗೆ ಹನುಮದ್ವಿಲಾಸವು ಪಾರಾಯಣಗ್ರಂಥವಾಗಿತ್ತು. ಶನಿವಾರ ಸಂಜೆ ದೇವರಿಗೆ ಮಂಗಳಾರತಿಮಾಡಿ ಹನುಮದ್ವಿಲಾಸವನ್ನು ಹಾಡಿ, ಕೇಳಿ, ನೈವೇದ್ಯ ಫಲಾಹಾರದಿಂದ ತೃಪ್ತರಾಗಿ ನೇಮದಿಂದಿರುತ್ತಿದ್ದರು. ಅಂಥಾ ಜನ ಈಗ ಕಡಮೆಯಾಗುತ್ತಿದ್ದಾರೆ—ನಮ್ಮ ನವನಾಗರಿಕತೆಯ ಮಹಿಮೆಯಿಂದ. ಇದು ಸುಂದರವಲ್ಲ. ಆ ಭಕ್ತಿಶ್ರದ್ಧೆಗಳು ಜೀವನದಲ್ಲಿ ಸುಂದರ.

ಕೃತಜ್ಞತೆ

ಇನ್ನು ನಾನು ಹೇಳಲು ಉಳಿದಿರುವ ಮಾತು ಸಂತೃಪ್ತಿ ಕೃತಜ್ಞತೆಗಳದು.

ಸುಂದರಕಾಂಡವನ್ನು ಸುಂದರವಾಗಿ—ಬೆಲೆ ಕೊಟ್ಟು ಕೊಳ್ಳುವ ದೃಷ್ಟಿಯಿಂದಲೂ ಸುಂದರವಾಗಿ—ಪ್ರಕಟಪಡಿಸಬೇಕೆಂಬ ಉದ್ದೇಶವನ್ನು

ಬೆಂಗಳೂರು ನರಸಿಂಹರಾಜ ಕಾಲೋನಿಯ ಶ್ರೀರಾಮಮಂದಿರ ಸಂಘದ ಪರವಾಗಿ ಮಿತ್ರರು ಶ್ರೀ ಡಿ.ಸಿ.ಅನಂತರಾಮಯ್ಯನವರು ತಿಳಿಸಿದಾಗ ನನಗೆ ತುಂಬ ಆನಂದವಾಯಿತು. ಇಂಥಾ ಗ್ರಂಥದ ಅವಶ್ಯಕತೆ ಕನ್ನಡ ಜನಕ್ಕೆ ತೀವ್ರವಾಗಿದೆ. ಶ್ರೀರಾಮಮಂದಿರದವರು ಇದಕ್ಕೆ ಮನಸ್ಸುಕೊಟ್ಟಿದ್ದು ಅಭಿನಂದನೀಯವಾಗಿದೆ. ಶ್ರೀ ಅನಂತರಾಮಯ್ಯನವರು ಗ್ರಂಥದ ಬರಹದ ಪ್ರತಿಯನ್ನು ತಯಾರುಮಾಡುವುದು, ಕರಡುಪ್ರತಿಯನ್ನು ತಿದ್ದುವುದು— ಮೊದಲಾದ ಎಲ್ಲ ಕಾರ್ಯಾಂಶಗಳಲ್ಲಿಯೂ ಶ್ರದ್ಧಾಭಕ್ತಿಗಳಿಂದ ಶ್ರಮಪಟ್ಟಿದ್ದಾರೆ.

ಈ ದಿವ್ಯಗ್ರಂಥಕ್ಕೆ ಕನ್ನಡದಲ್ಲಿ ಭಾವಾನುವಾದ ಬರೆದು ಗ್ರಂಥವನ್ನು ಸಂಪಾದಿಸಿಕೊಡುವ ಕಾರ್ಯವನ್ನು ವಿದ್ವಾನ್ ಶ್ರೀ ಎನ್.ರಂಗನಾಥಶರ್ಮಾ ಅವರು ವಹಿಸಿಕೊಳ್ಳಬೇಕೆಂದು ಅವರನ್ನು ನಾನು ಬೇಡಿದಾಗ ಅವರು ಒಪ್ಪಿಕೊಂಡದ್ದು ನನಗೆ ಮತ್ತೊಂದು ಆನಂದ. ಶ್ರೀ ರಂಗನಾಥಶರ್ಮರವರು ಸಂಸ್ಕೃತ ವ್ಯಾಕರಣಶಾಸ್ತ್ರದಲ್ಲಿ ಆಳವೂ ವಿಶಾಲವೂ ಆಗಿ ಪ್ರಮಾಣವತ್ತಾಗಿರುವ ಪಾಂಡಿತ್ಯವನ್ನು ಸಂಪಾದಿಸಿರುವವರು. ಅವರ ಕನ್ನಡಭಾಷಾ ವಿದ್ವತ್ತೂ ಅಂಥಾದ್ದು. ಸಾಹಿತ್ಯದಲ್ಲಿ ಅವರು ಸಹೃದಯರಾಗಿ ಶೋಧನಶೀಲರಾಗಿ ಕಾವ್ಯಮರ್ಮವನ್ನು ಕಂಡು ತೋರಿಸಬಲ್ಲವರು. ಅವರು ಸದಾಚಾರನಿಷ್ಠರು, ಸರಳರು. ಒಂದು ಮಹಾಕಾವ್ಯದ ಅಂತರಂಗವನ್ನು ಅನುಭವದಿಂದ ತಿಳಿಸಬೇಕಾದರೆ ಯಾವ ಮನಃಪ್ರಸಾದವೂ ತತ್ತ್ವನಿಷ್ಠೆಯೂ ಪ್ರಥಮಸಿದ್ಧತೆಗಳೋ ಅವೆರಡನ್ನೂ ಅವರಲ್ಲಿ ನಾನು ಕಂಡಿದ್ದೇನೆ. ಅವರು ತಮಗೊಪ್ಪಿಸಿದ ಕಾರ್ಯವನ್ನು ಸೊಗಸಾಗುವಂತೆ ನಿರ್ವಹಿಸಿದ್ದಾರೆಂದು ನಾನು ಕೃತಜ್ಞನಾಗಿದ್ದೇನೆ. ಅವರ ಅನುವಾದವನ್ನು ಅನೇಕ ಭಾಗಗಳಲ್ಲಿ ನೋಡಿದ್ದೇನೆ. ಪದಶೈಲಿ ಲಲಿತವಾಗಿ ಕಾಂತಿವೀರ್ಯವಿಶಿಷ್ಟವಾಗಿ ಸುಂದರಕಾಂಡಕ್ಕೆ ಒಪ್ಪುವಂಥ ಶೈಲಿಯಿಂದ ಸುಂದರವಾಗಿದೆ. ಮೂಲದ ಸ್ವಾರಸ್ಯವು ಸಾಧ್ಯವಾದಷ್ಟು ಪೂರ್ಣವಾಗಿ ಕನ್ನಡಕ್ಕೆ ಬಂದಿದೆ. ಸಂಸ್ಕೃತ ಮೂಲದ ಕಡೆಗೆ ಕಣ್ಣು ತಿರುಗಿಸದೆ ಬರಿಯ ಕನ್ನಡ ವಚನಗ್ರಂಥವನ್ನೇ ಧಾರೆಯಾಗಿ ಓದಿದರೂ ಓದುಗರಿಗೆ ಸಂತೃಪ್ತಿಯಾಗುವಂತಿದೆ. ಕನ್ನಡವನ್ನೋದುತ್ತ ಓದುತ್ತ ನಡುನಡುವೆ

ಮೂಲವನ್ನೂ ಆಷ್ಟಿಷ್ಟು ನೋಡುವವರು ಸಂಸ್ಕೃತದ ಪರಿಚಯವನ್ನೂ ಸಂಪಾದಿಸಿಕೊಂಡಂತಾಗುತ್ತದೆ.

ರಾಮಾಯಣಪ್ರಚಾರ ಒಂದು ಪುಣ್ಯಕಾರ್ಯ. ಆ ಪುಣ್ಯವನ್ನು ಶ್ರೀರಾಮಮಂದಿರದ ಅಧಿಕಾರಿಗಳು ಸಂಪಾದಿಸಿಕೊಂಡಿದ್ದಾರೆ. ಅವರೊಡನೆ ಹೀಗೆ ಲವಲೇಶವಾಗಿ ಸೇರಿಕೊಳ್ಳುವ ಅವಕಾಶವನ್ನು ಅವರು ನನ್ನ ಮಿತ್ರರು ಶ್ರೀ ಡಿ. ಸಿ. ಅನಂತರಾಮಯ್ಯನವರ ಮುಖಾಂತರ ನನಗೆ ಒದಗಿಸಿಕೊಟ್ಟಿದ್ದಾರೆ. ಶ್ರೀರಾಮಕೀರ್ತಿವಿಸ್ತರಕಾರ್ಯದಲ್ಲಿ ಸೇರಿದವರಿಗೆಲ್ಲ ಶ್ರೀಮದಾಂಜನೇಯ ಸ್ವಾಮಿಯ ಅನುಗ್ರಹವುಂಟೆಂದು ನಾನು ನಂಬಿದ್ದೇನೆ.

ಸರ್ವಲೋಕಶರಣ್ಯಾಯ ಸತ್ಯಧರ್ಮೈಕಮೂರ್ತಯೇ ।
ಹನೂಮದ್ದೌತ್ಯತೃಪ್ತಾಯ ಸೀತಾರಾಮಾಯ ಮಂಗಲಮ್ ॥

ಡಿ. ವಿ. ಜಿ.

ನಿವೇದನೆ

ಒಂದು ಕಾವ್ಯದ ಭಾವವನ್ನು ಇನ್ನೊಂದು ಭಾಷೆಯಲ್ಲಿ ಅನುವಾದಿಸುವುದು ದುಷ್ಕರ. ವಾಲ್ಮೀಕಿಮಹರ್ಷಿಗಳಂತಹ ರಸಸಿದ್ಧ ಕವೀಶ್ವರರ ಮಹಾಕಾವ್ಯದಲ್ಲಿ ಭಾವ ಇದೇ—ಇಷ್ಟೇ ಎಂದು ಹೇಳುವುದು ಸಾಹಸವೇ ಸರಿ. ಅವರ ವಾಗ್ವಿಲಾಸದ ಮರ್ಮವನ್ನು ಸರಿಯಾಗಿ ತಿಳಿಯುವ ಶಕ್ತಿ ನನಗೆ ಇಲ್ಲ. ತಿಳಿದುಕೊಂಡಷ್ಟನ್ನು ವಿವರಿಸಲು, ಶಬ್ದಗಳನ್ನು ಹದವರಿತು ವಾಕ್ಯದಲ್ಲಿ ವಿನ್ಯಾಸ ಮಾಡುವ ಜಾಣ್ಮೆಯೂ ಇಲ್ಲ. ಆದರೂ ಪೂಜ್ಯರಾದ ಶ್ರೀ ಡಿ. ವಿ. ಗುಂಡಪ್ಪನವರ ಆದೇಶಕ್ಕೆ ಕಟ್ಟುಬಿದ್ದು ಈ ಸುಂದರಕಾಂಡದ ಕನ್ನಡ ಅನುವಾದದ ಕಾರ್ಯದಲ್ಲಿ ನಾನು ಕೈಹಾಕಿದೆನು.

ಈ ಅನುವಾದದ ಅನೇಕ ಭಾಗಗಳನ್ನು ಓದಿಹೇಳಿ ಶ್ರೀ ಡಿ.ವಿ.ಜಿ.ಯವರಿಂದ ಯುಕ್ತವಾದ ಮಾರ್ಗದರ್ಶನವನ್ನು ಪಡೆದಿದ್ದೇನೆ. ಕ್ಲಿಷ್ಟವಾದ ಸಂದರ್ಭಗಳಲ್ಲಿ ಅನುವಾದಿಸಬೇಕಾದ ರೀತಿ ನೀತಿಗಳನ್ನು ತಿಳಿಯಹೇಳಿ ಅವರು ನನಗೆ ದಾರಿತೋರಿಸಿದ್ದಾರೆ. ಅವರ ಆಶೀರ್ವಾದ ಪ್ರೋತ್ಸಾಹಗಳಿಲ್ಲದೆ ನನ್ನಿಂದ ಈ ಕಾರ್ಯ ಸಾಧ್ಯವಾಗುತ್ತಿರಲಿಲ್ಲ. ಈ ಕಾರ್ಯವನ್ನು ನನ್ನಿಂದ ಸಾಗಿಸಿಕೊಟ್ಟದ್ದಕ್ಕಾಗಿ ನಾನು ಶ್ರೀ ಡಿ. ವಿ. ಗುಂಡಪ್ಪನವರಿಗೆ ಅತ್ಯಂತ ಕೃತಜ್ಞನಾಗಿದ್ದೇನೆ.

ನರಸಿಂಹರಾಜ ಕಾಲೋನಿ ಶ್ರೀರಾಮಮಂದಿರದ ಅಸೋಸಿಯೇಷನ್ನಿನ ಅಧ್ಯಕ್ಷರಾದ ಶ್ರೀ ಹೆಚ್. ಎಸ್. ಕೃಷ್ಣಸ್ವಾಮಿಯವರೂ, ಅಸೋಸಿಯೇಷನ್ನಿನ ಎಲ್ಲ ಸದಸ್ಯರೂ ಈ ಕಾರ್ಯಕ್ಕೆ ಪ್ರೋತ್ಸಾಹವನ್ನೂ ಬೇಕಾದ ಸೌಕರ್ಯವನ್ನೂ ನನಗೆ ಕಲ್ಪಿಸಿಕೊಟ್ಟಿದ್ದಾರೆ. ಉಪಾಧ್ಯಕ್ಷರಾದ ಶ್ರೀ ಡಿ.ಸಿ.ಅನಂತರಾಮಯ್ಯನವರು ಸುಂದರಕಾಂಡದ ಶ್ಲೋಕಗಳನ್ನು ಕನ್ನಡ ಲಿಪಿಯಲ್ಲಿ ಬರೆದು ಮುದ್ರಣಕ್ಕೆ ಸಿದ್ಧಪಡಿಸಿಕೊಟ್ಟಿದ್ದಾರೆ. ಶ್ರೀ ಡಿ. ಸಿ. ಅನಂತರಾಮಯ್ಯನವರು ಮತ್ತು ಕಾರ್ಯದರ್ಶಿಗಳಾದ ಶ್ರೀ ಎಸ್. ಎನ್. ಮೂರ್ತಿಗಳು ಈ ಗ್ರಂಥದ ಮುದ್ರಣ ಮತ್ತು ಪ್ರಕಟನೆಗಳಿಗಾಗಿ ಶ್ರದ್ಧಾಸಕ್ತಿಗಳಿಂದ ವಿಶೇಷವಾಗಿ ದುಡಿದಿದ್ದಾರೆ. ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆಯ ಶ್ರೀ ಎಸ್. ವೆಂಕಟಾಚಲಪತಿಗಳೂ

ನನಗೆ ಅನೇಕ ವಿಧದಲ್ಲಿ ಸಹಾಯಮಾಡಿದ್ದಾರೆ. ಇವರೆಲ್ಲರ ಉಪಕಾರವನ್ನೂ ನಾನು ಕೃತಜ್ಞತೆಯಿಂದ ಸ್ಮರಿಸಿಕೊಳ್ಳುತ್ತೇನೆ.

ಈ ಸುಂದರಕಾಂಡವನ್ನು ಕನ್ನಡಕ್ಕೆ ಅನುವಾದಿಸುವಾಗ ಮಹಾ ಮಹೋಪಾಧ್ಯಾಯ ಶ್ರೀ ಎಸ್. ಕುಪ್ಪುಸ್ವಾಮಿಶಾಸ್ತ್ರಿಗಳಿಂದ ಕೂಡಿದ ಸಮಿತಿಯು ಪರಿಷ್ಕರಿಸಿ ಮದ್ರಾಸಿನಿಂದ ಪ್ರಕಟಿಸಿರುವ ಶ್ರೀಮದ್ರಾಮಾಯಣವನ್ನು ಆದರ್ಶವಾಗಿ ಇಟ್ಟುಕೊಳ್ಳಲಾಗಿದೆ. ಪ್ರಸಿದ್ಧ ವ್ಯಾಖ್ಯಾನಗಳಾದ ತಿಲಕ, ಗೋವಿಂದರಾಜೀಯ, ಶಿರೋಮಣಿಗಳಿಂದಲೂ ಶ್ರೀದೇವಶಿಖಾಮಣಿ ಅಳಶಿಂಗರಾಚಾರ್ಯರ ಕನ್ನಡ ರಾಮಾಯಣದಿಂದಲೂ ನಾನು ಪ್ರಯೋಜನವನ್ನು ಪಡೆದಿದ್ದೇನೆ. ನನಗೆ ಸಮಂಜಸವೆನಿಸಿದ ತಾತ್ಪರ್ಯವನ್ನು ಈ ಎಲ್ಲಾ ಗ್ರಂಥಗಳಿಂದಲೂ ಗ್ರಹಿಸಿದ್ದೇನೆ. ಕೆಲವು ಕಡೆ ಇವೆಲ್ಲವನ್ನೂ ಮೀರಿ ನನಗೆ ಸರಿಯೆನಿಸಿದ ತಾತ್ಪರ್ಯವನ್ನು ಬರೆದಿದ್ದೇನೆ.

ಸಂಸ್ಕೃತಮೂಲವು ಯಾರಿಗೆ ಅರ್ಥವಾಗದೋ, ಅವರಿಗೋಸ್ಕರ ಈ ಅನುವಾದ. ಇದರಲ್ಲಿ ಕಥೆಯ ಓಟಕ್ಕೆ ಅಡ್ಡಿಯಾಗದಂತೆ ಸಾಧ್ಯವಾದಷ್ಟು ಪ್ರಯತ್ನ ಮಾಡಿದೆ. ಕನ್ನಡಭಾಷೆಯ ಶೈಲಿಯೇ ಬೇರೆ. ಆದ್ದರಿಂದ ಅನುವಾದದ ಶೈಲಿಯು ಮೂಲದ ಕ್ರಮವನ್ನು ಅನುಸರಿಸಿಲ್ಲ. ಕರ್ತರಿ ಕರ್ಮಣಿ ಪ್ರಯೋಗಗಳಲ್ಲಿ ವ [illegible] ಕ್ಕೂ ಅನುವಾದಕ್ಕೂ ಭೇದ ಉಂಟು. ಹೆಚ್ಚಿನ ಅರ್ಥಪುಷ್ಟಿ ಇಲ್ಲವೆಂದು ನ [illegible] ಭಾವಿಸಿರುವ ಕೆಲವು ವಿಶೇಷಣಗಳನ್ನು ಅನುವಾದದಲ್ಲಿ ಸೇರಿಸಿಲ್ಲ. ಒಟ್ಟಿನಲ್ಲಿ ಇದು ತಾತ್ಪರ್ಯದ ಅನುವಾದ; ಪರಿವರ್ತನೆಯಲ್ಲ. ಯಾವ ಶ್ಲೋಕಗಳ ಅನುವಾದವೆಂಬುದನ್ನು ಅದರ ಮುಂದೆ ಕಂಸಗಳಲ್ಲಿ ತೋರಿಸಿದೆ. ವಾಕ್ಯವು ಅರ್ಥಪೂರ್ಣವಾಗುತ್ತದೆಯೆಂಬ ದೃಷ್ಟಿಯಿಂದ ಕೆಲವು ಕಡೆ ಸಂಖ್ಯಾನಿಯಮವನ್ನು ಪಾಲಿಸಿಲ್ಲ. ಅಲ್ಲಿ ಅನುವಾದವು ಮೂಲದ ಅರ್ಧ ಶ್ಲೋಕದಷ್ಟು ಹಿಂದಿನದೋ ಅಥವಾ ಮುಂದಿನದೋ ಆಗಿರಬಹುದು.

ಇದು ಸುಂದರಕಾಂಡವೆಂದು ಪ್ರಸಿದ್ಧವಾಗಲು ಕಾರಣವನ್ನು ಅನೇಕ ವಿಧವಾಗಿ ಊಹಿಸುತ್ತಾರೆ :

೧. ರಾಮಾಯಣ ಸುಂದರವಾದ ಕಾವ್ಯ. ಅದರಲ್ಲಿಯೂ ಈ ಕಾಂಡವು ಬಹು ಸುಂದರವಾಗಿದೆ. ಸಮುದ್ರಲಂಘನ, ರಾವಣನ ಅಂತಃಪುರ, ಸೀತಾ

ದೇವಿಯ ವಿರಹಾವಸ್ಥೆ, ಹನುಮಂತನಿಗೆ ಉದಯಿಸಿದ ವಿವಿಧ ಭಾವನೆಗಳು, ದೇವಿಯ ಸಂಭಾಷಣೆ, ಅಂಗುಲೀಯಕಪ್ರದಾನ, ಚೂಡಾಮಣಿಯ ಅರ್ಪಣೆ, ಈ ಎಲ್ಲಾ ಸನ್ನಿವೇಶಗಳಲ್ಲಿಯೂ ಹನುಮಂತನ ಧೀರೋದಾತ್ತವಾದ ವರ್ತನೆ— ಇವು ಅತ್ಯಂತ ರಮಣೀಯವಾಗಿವೆ. ಶ್ರೀ ಡಿ.ವಿ.ಜಿ.ಯವರು ಮುನ್ನುಡಿಯಲ್ಲಿ ನುಡಿದಂತೆ 'ಸುಂದರೇ ಸುಂದರಃ ಸೋಽಯಮಂಜನಾನಂದನೋತ್ಸವಃ'. ಆದ್ದರಿಂದ ಸುಂದರಕಾಂಡ ಎಂಬುದು ಅನ್ವರ್ಥವಾಗಿದೆ.

೨. ಸುಂದರಕಾಂಡದಲ್ಲಿ ಹನುಮಂತನೇ ಮುಖ್ಯಪಾತ್ರ. ಈ ಕಾಂಡವನ್ನು ಹನುಮದ್ವಿಜಯಕಾಂಡವೆಂದು ಪುರಾಣಗಳಲ್ಲಿ ಕರೆದಿದ್ದಾರೆ. ಹನುಮಂತನಿಗೆ ಸುಂದರ ಎಂಬ ಹೆಸರುಂಟು. ಶಬ್ದಕಲ್ಪದ್ರುಮ ಎಂಬ ನಿಘಂಟಿನಲ್ಲಿ 'ಸುಂದರಃ ಕಪಿಮುಖ್ಯೇ ಸ್ಯಾತ್ ಕಾಮೇ ಚ ಮಣಿಸೂರ್ಯಯೋಃ' ಎಂದು ಉದಾಹರಿಸಿದೆ. ಆಂಜನೇಯಾಷ್ಟೋತ್ತರಶತನಾಮಾವಳಿಯಲ್ಲಿ 'ದ್ವಿಭುಜಃ ಸುಂದರಃ ಶೂರಃ ಶಿಷ್ಟೇಷ್ಟಃ ಶಿಷ್ಟಪಾಲಕಃ' ಎಂದು ಪಾಠವಿದೆ. ಆದ್ದರಿಂದ ಹನುಮತ್ಕಾಂಡ ಎಂಬ ಅರ್ಥದಲ್ಲಿ ಸುಂದರಕಾಂಡ ಎಂದು ಪ್ರಸಿದ್ಧಿಯಾಗಿರಬಹುದು.

೩. ಸಂಖ್ಯೆಗಳನ್ನು ಸೂಚಿಸುವುದಕ್ಕೆ ಕಟಪಯಾದಿಸೂತ್ರಪದ್ಧತಿ ಎಂಬ ಒಂದು ಕ್ರಮವಿದೆ. ಅದರ ಪ್ರಕಾರ ಸುಂದರಶಬ್ದವು ೭೦೮೨ ಎಂಬ ಸಂಖ್ಯೆಯನ್ನು ಸೂಚಿಸುತ್ತದೆ. ಅನಂತರ 'ಅಂಕಾನಾಂ ವಾಮತೋ ಗತಿಃ' ಎಂಬ ವ್ಯವಸ್ಥೆಯಿಂದ ಸಂಖ್ಯೆಯು ೨೮೦೭ ಎಂದು ನಿರ್ಣೀತವಾಗುತ್ತದೆ. ಇದು ಸುಂದರಕಾಂಡದ ಶ್ಲೋಕಗಳ ಸಂಖ್ಯೆ. ಈಗ ಸುಮಾರು ೬೦ ಶ್ಲೋಕಗಳು ಹೆಚ್ಚಾಗಿ ದೊರೆಯುತ್ತವೆ. ಅವು ಪ್ರಕ್ಷಿಪ್ತವಾದವುಗಳೆಂದು ಹೇಳಬೇಕು.

ಆದರೆ ಬಾಲಕಾಂಡ ಮೊದಲಾದ ಇತರ ಕಾಂಡಗಳಲ್ಲಿ ಈ ಮೂರನೆಯ ಊಹೆಯಂತೆ ಸಂಖ್ಯಾಸೂಚನೆಯು ಹೊಂದುವುದಿಲ್ಲ. ವಾಲ್ಮೀಕಿಮುನಿಗಳು ಹನುಮಂತನನ್ನು ಸುಂದರನೆಂದು ಕರೆದಿಲ್ಲ. ಆದ್ದರಿಂದ ಮೊದಲನೆಯ ಊಹೆಯೇ ಸಮಂಜಸವೆಂದು ತೋರುತ್ತದೆ.

ರಾಮಾಯಣದಿಂದ ಆಗುವ ಬಹುವಿಧ ಪ್ರಯೋಜನಗಳಲ್ಲಿ ಇವು ಕೆಲವು:

೧. ರಾಮಾಯಣವು ಉತ್ತಮೋತ್ತಮವಾದ ಮಹಾಕಾವ್ಯ. ಇದರಲ್ಲಿರುವ ರಸಮಯಸಂದರ್ಭಗಳು ಮನುಷ್ಯನನ್ನು ಭಾವನಾಪ್ರಪಂಚಕ್ಕೆ ಕರೆದೊಯ್ದು

ತಲ್ಲೀನತೆಯನ್ನುಂಟುಮಾಡಿ ಆನಂದದಲ್ಲಿ ಮುಳುಗಿಸುತ್ತವೆ. ಇದೇ ಕಾವ್ಯಾನಂದ. ಇದು ಲೌಕಿಕಸುಖವನ್ನೆಲ್ಲಾ ಮೀರಿಸಿದ್ದು. ಈ ಆನಂದವು ನಮಗೆ ಅನಾಯಾಸವಾಗಿ ದೊರೆಯುತ್ತದೆ.

೨. ವಾಲ್ಮೀಕಿ ಮುನಿಗಳು ಚಿತ್ರಿಸಿದ ನೀತಿ ನಿಲುವು ನಡವಳಿಕೆಗಳು ನಮ್ಮ ಅಂತರಂಗದಮೇಲೆ ಮಹತ್ತರವಾದ ಪ್ರಭಾವವನ್ನು ಬೀರುತ್ತವೆ. ಧರ್ಮಬೋಧೆ, ಹಿತೋಪದೇಶಗಳು ಸಕ್ಕರೆಯಲ್ಲಿ ಹುದುಗಿಸಿದ ಔಷಧದಂತೆ ಅಂತರಂಗವನ್ನು ಪ್ರವೇಶಿಸಿ ಕಾಮಕ್ರೋಧಾದಿ ಮನೋರೋಗಗಳನ್ನು ಗುಣಪಡಿಸುತ್ತವೆ. ನೂರಾರು ಶಾಸ್ತ್ರಗ್ರಂಥಗಳಿಂದ, ಸಾವಿರಾರು ಉಪನ್ಯಾಸಗಳಿಂದ, ಗುರುಹಿರಿಯರ ಅನೇಕ ಕಟ್ಟಾಜ್ಞೆಗಳಿಂದ ಆಗದ ಪ್ರಯೋಜನವು ದೊರಕಿ ನಮಗೆ ಅರಿವಿಲ್ಲದಂತೆ ನಮ್ಮ ಅಂತಃಕರಣವು ಪರಿಶುದ್ಧವಾಗುತ್ತ ಹೋಗುವುದು.

೩. ರಾಮಾಯಣದ ಪಾರಾಯಣದಿಂದ ನಾನಾ ಬಗೆಯ ಸಾಂಸಾರಿಕ ಕಷ್ಟಗಳು ನೀಗುತ್ತವೆಯೆಂದೂ ಭಗವಂತನ ಅನುಗ್ರಹಕ್ಕೆ ಪಾತ್ರರಾಗುತ್ತೇವೆಂದೂ ಆಸ್ತಿಕರು ದೃಢವಾಗಿ ನಂಬಿದ್ದಾರೆ.

ಸುಂದರಕಾಂಡದ ಈ ಕನ್ನಡ ಅನುವಾದವು ಮೂಲಗ್ರಂಥದಲ್ಲಿ ಶ್ರದ್ಧಾಭಕ್ತಿಗಳಿಂದ ಹೆಚ್ಚಿಸಲು ಸಹಾಯಕವಾದರೆ ನಾನು ಕೃತಾರ್ಥನೆಂದೂ ಭಾವಿಸುತ್ತೇನೆ.

ನರಸಿಂಹರಾಜ ಕಾಲೋನಿ ಶ್ರೀರಾಮಮಂದಿರ ಅಸೋಸಿಯೇಷನ್ನಿನವರು ಆದರ್ಶವೂ ಸ್ತುತ್ಯವೂ ಆದ ಪ್ರಕಟನ ಕಾರ್ಯವನ್ನು ಕೈಗೊಂಡು ಸುಂದರಕಾಂಡವನ್ನು ಕನ್ನಡಿಗರಿಗೆ ಒದಗಿಸಿಕೊಟ್ಟಿದ್ದಾರೆ. ಮುಂದೆ ಶ್ರೀಮದ್ರಾಮಾಯಣದ ಇತರ ಕಾಂಡಗಳನ್ನು ಪ್ರಕಟಿಸಲು ಅವರಿಗೆ ಮಹಾಜನರಿಂದ ತಕ್ಕ ಪ್ರೋತ್ಸಾಹವೂ ಸೌಕರ್ಯವೂ ದೊರಕಲೆಂದೂ ಶ್ರೀಮದ್ರಾಮಾಯಣವನ್ನು ಸಂಪೂರ್ಣವಾಗಿ ಪ್ರಕಟಿಸಿ ಶ್ರೀರಾಮಚಂದ್ರನ ಅನುಗ್ರಹಕ್ಕೆ ಪಾತ್ರರಾಗಲೆಂದೂ ಹಾರೈಸುತ್ತೇನೆ.

ಬೆಂಗಳೂರು

೨೫-೧೨-೧೯೬೪ ಎನ್. ರಂಗನಾಥಶರ್ಮ

ಶ್ರೀ

ಶ್ರೀಮದ್ರಾಮಾಯಣ ಪಾರಾಯಣ ವಿಧಿ

ವಸಂತನವರಾತ್ರ ಮತ್ತು ಶರನ್ನವರಾತ್ರಗಳಲ್ಲಿ ಶ್ರೀಮದ್ರಾಮಾಯಣದ ಪಾರಾಯಣವು ಪ್ರಶಸ್ತ. ಆಷಾಢ, ಭಾದ್ರಪದ, ಪುಷ್ಯಮಾಸಗಳನ್ನೂ ಗುರು ಶುಕ್ರಾಸ್ತಕಾಲವನ್ನೂ ಪರಿತ್ಯಜಿಸಿ ಯಾವಾಗಲಾದರೂ ಆರಂಭಿಸಬಹುದು. ನಿತ್ಯಪಾರಾಯಣಕ್ಕೆ ಈ ಕಾಲವಿಧಿಯು ಅನ್ವಯಿಸುವುದಿಲ್ಲ. ಸುಂದರಕಾಂಡ ಪಾರಾಯಣದ ವಿಧಿಗಳು ಅನೇಕವಾಗಿವೆ.

೧. ನಿತ್ಯಪಾರಾಯಣ : ಪ್ರತಿದಿನವೂ ಸುಂದರಕಾಂಡವನ್ನು ಮೊದಲಿನಿಂದ ಯಥಾಶಕ್ತಿ ಪಾರಾಯಣಮಾಡುವುದು. ದಿನಕ್ಕೆ ಇಷ್ಟು ಸರ್ಗಗಳೆಂಬ ನಿಯಮವಿಲ್ಲ. ಸರ್ಗದ ಮಧ್ಯದಲ್ಲಿ ಮಾತ್ರ ಪಾರಾಯಣವನ್ನು ನಿಲ್ಲಿಸಬಾರದು.

೨. ಸಪ್ತಸರ್ಗೀಪಾರಾಯಣ : ಸುಂದರಕಾಂಡದಲ್ಲಿ ೬೮ ಸರ್ಗಗಳಿವೆ. ದಿನಕ್ಕೆ ಏಳು ಸರ್ಗಗಳನ್ನು ಪಾರಾಯಣಮಾಡುತ್ತಾ ಹೋಗುವುದು. ಒಂಬತ್ತು ದಿನಗಳಲ್ಲಿ ೬೩ ಸರ್ಗಗಳು ಮುಗಿಯುತ್ತವೆ. ಹತ್ತನೆಯ ದಿನದಲ್ಲಿ ಕಡೆಯ ಐದು ಸರ್ಗಗಳೊಡನೆ ಮೊದಲನೆಯ ಎರಡು ಸರ್ಗಗಳನ್ನೂ ಸೇರಿಸಿ ಏಳು ಸರ್ಗಗಳನ್ನು ಪಾರಾಯಣ ಮಾಡುವುದು. ಹನ್ನೊಂದನೆಯ ದಿನ ಮುಂದಿನ ಏಳು ಸರ್ಗಗಳು. ಈ ಕ್ರಮದಲ್ಲಿ ಪುನರಾವೃತ್ತಿಯಿಂದ ಮಾಡುತ್ತ ಹೋದರೆ ಸುಂದರಕಾಂಡದ ಕಡೆಯ ಏಳು ಸರ್ಗಗಳ ಸರದಿ ೬೮ನೆಯ ದಿನದಲ್ಲಿ ಬರುತ್ತದೆ. ಅಲ್ಲಿಗೆ ಒಂದು ಪರ್ಯಾಯ ಸಮಾಪ್ತವಾಗುತ್ತದೆ. ಹೀಗೆ ಎಷ್ಟು ಪರ್ಯಾಯಗಳನ್ನಾದರೂ ಆಚರಿಸಬಹುದು.

೩. ಷೋಡಶಾಹಪಾರಾಯಣ : ಒಂದೊಂದು ದಿನವೂ ಕ್ರಮವಾಗಿ ೨-೪-೪-೪-೮-೧-೮-೧-೫-೫-೭-೬-೧-೬-೨-೪ ಸರ್ಗಗಳನ್ನು ಪಾರಾಯಣ ಮಾಡುತ್ತ ಹೋದರೆ, ಹದಿನಾರು ದಿನಗಳಲ್ಲಿ ೬೮ ಸರ್ಗಗಳು ಸಮಾಪ್ತವಾಗುತ್ತವೆ. ''ರಾಘವೋ ವಿಜಯಂ ದದ್ಯಾತ್ ಮಮ ಸೀತಾಪತಿಃ ಪ್ರಭುಃ'' ಎಂಬುದು ಈ ವಿಧಾನಕ್ಕೆ ಮೂಲಸೂತ್ರ. ಕಟಪಯಾದಿಸೂತ್ರಪದ್ಧತಿಯಂತೆ

ಈ ಸೂತ್ರದ ಹದಿನಾರು ಅಕ್ಷರಗಳು ಮೇಲ್ಕಂಡ ಹದಿನಾರು ಸಂಖ್ಯೆಗಳನ್ನು ಸೂಚಿಸುತ್ತದೆ. ರ-೨, ಫ-೪, ವ-೪ ಹೀಗೆ. 'ತ್' ಎಂಬ ವ್ಯಂಜನಕ್ಕೆ ಗಣನೆಯಿಲ್ಲ.

ಸರ್ವವಿಧಪಾರಾಯಣಗಳಿಗೂ ಶ್ರದ್ಧಾಭಕ್ತಿಗಳೇ ಮೂಲಸೂತ್ರ. ಇದು ತಪ್ಪಿದಲ್ಲಿ ಯಾವ ವಿಧಾನವೂ ಫಲಕಾರಿಯಾಗದು. ಬೀಜಾಕ್ಷರಗಳ ನ್ಯಾಸವು ಸುಂದರಕಾಂಡದಲ್ಲಿ ವಿಶೇಷವಾಗಿದೆಯೆಂದೂ ಆದ್ದರಿಂದ ಇದು ನಿತ್ಯಪಾರಾಯಣಕ್ಕೆ ಶ್ರೇಷ್ಠವಾದದ್ದೆಂದೂ ಆಸ್ತಿಕರು ನಂಬಿದ್ದಾರೆ.

ಬೀಜಕಾಂಡಮಿದಂ ಪ್ರೋಕ್ತಂ ಸರ್ವಪಾರಾಯಣೇಷ್ವಪಿ ।
ತಸ್ಮಾತ್ ಪಾರಾಯಣಂ ಕೃತ್ವಾ ಧನ್ಯಾ ಭವತ ತತ್ತ್ವತಃ ॥

ಎಂದು ಅಗಸ್ತ್ಯಸಂಹಿತೆಯಲ್ಲಿ ಹೇಳಿದೆ. ಪಾರಾಶರ್ಯೋಪಪುರಾಣದಲ್ಲಿ ಸುಂದರಕಾಂಡದ ಪಾರಾಯಣದಿಂದಾಗುವ ಪ್ರಯೋಜನಗಳನ್ನು ಹೀಗೆ ವರ್ಣಿಸಿದ್ದಾರೆ :

ತ್ರಿವರ್ಗಫಲಕಾಮೇನ ವಿಪದುತ್ತರಣೇಪ್ಸುನಾ ।
ಶ್ರೀಮತ್ಸುಂದರಕಾಂಡಸ್ಯ ಪಾಠಃ ಕಾರ್ಯೋ ವಿಜಾನತಾ ॥

ಶಾಂತಿಕರ್ಮಣಿ ಸರ್ವತ್ರ ತಥಾ ದುಃಸ್ವಪ್ನದರ್ಶನೇ ।
ಗ್ರಹಪೀಡಾಸು ಚೋಗ್ರಾಸು ರೋಗೇಷು ವಿಷಮೇಷು ಚ ॥

ಅರಣ್ಯೇ ಪ್ರಾಂತರೇ ಚಾಪಿ ಶಸ್ತ್ರಚೋರಾಗ್ನಿ ಪೀಡನೇ ।
ಸರ್ವಾಸ್ವಾಪತ್ಸು ಘೋರಾಸು ನೈತಸ್ಮಾತ್ತಾರಕಂ ಪರಮ್ ॥

ಬ್ರಹ್ಮಾಂಡಪುರಾಣದಲ್ಲಿ ಹೀಗೆ ಹೇಳಿದೆ :

ಹನುಮದ್ವಿಜಯಂ ಕಾಂಡಂ ಯಃ ಪಾರಾಯಣಮಾಚರೇತ್ ।
ವಿಧಿನಾ ಸರ್ವಸಿದ್ಧಿಂ ಚ ಪ್ರಾಪ್ನೋತಿ ಚ ನ ಸಂಶಯಃ ॥

ಶ್ರುತ್ವಾ ತು ಪಂಚಮಂ ಕಾಂಡಂ ಹನುಮದ್ವಿಜಯಾಂಕಿತಮ್ ।
ಆಂಜನೇಯಪ್ರಸಾದೇನ ಬ್ರಹ್ಮಲೋಕಂ ಸ ಗಚ್ಛತಿ ॥

ಇತ್ಯಾದಿ.

ಸೂಚನೆ : —ಗುರೂಪದೇಶವನ್ನು ಪಡೆದು ಕ್ರಮಪೂರ್ವಕವಾಗಿ ಪಾರಾಯಣವನ್ನು ಆರಂಭಿಸುವುದು ಉತ್ತಮ.

ಆಚಮನ ಪ್ರಾಣಾಯಾಮ ಸಂಕಲ್ಪಗಳನ್ನು ಮಾಡಿ ಶ್ರೀಮದ್ ರಾಮಾಯಣ ಪುಸ್ತಕದಲ್ಲಿ ಶ್ರೀರಾಮನನ್ನು ಆವಾಹಿಸಿ ಷೋಡಶೋಪಚಾರ ಗಳಿಂದ ಪೂಜಿಸಬೇಕು. ಅನಂತರ ಮುಂದೆ ಹೇಳುವ ಶ್ಲೋಕಗಳನ್ನು ಪಠಿಸಿ ಪಾರಾಯಣವನ್ನು ಆರಂಭಿಸಬೇಕು. ಆ ದಿನದ ಪಾರಾಯಣವು ಸಮಾಪ್ತವಾದ ಮೇಲೆ ಪುನಃ ಪೂಜೆ ಮಾಡಬೇಕು. ಪಾರಾಯಣಕ್ರಮದಲ್ಲಿರುವ ಮೂರು ಸಂಪ್ರದಾಯಗಳನ್ನು ಕೆಳಗೆ ಬರೆದಿದೆ. ೧ನೆಯ ಸಂಪ್ರದಾಯವನ್ನು ಸಕಲರೂ ಯಾವ ಭೇದವೂ ಇಲ್ಲದೆ ಅನುಸರಿಸಬಹುದು. ಶ್ರೀ ವೈಷ್ಣವರೂ ಮಾಧ್ವರೂ ಅನುಸರಿಸುವ ವಿಧಾನವನ್ನು ೨ ಮತ್ತು ೩ ನೆಯ ಸಂಪ್ರದಾಯ ಕ್ರಮದಲ್ಲಿ ತಿಳಿಸಿದೆ.

೧. ಸ್ಮಾರ್ತಸಂಪ್ರದಾಯ

ಶುಕ್ಲಾಂಬರಧರಂ ವಿಷ್ಣುಂ ಶಶಿವರ್ಣಂ ಚತುರ್ಭುಜಮ್ ।
ಪ್ರಸನ್ನವದನಂ ಧ್ಯಾಯೇತ್ ಸರ್ವವಿಘ್ನೋಪಶಾಂತಯೇ ॥ ೧

ವಾಗೀಶಾದ್ಯಾಃ ಸುಮನಸಃ ಸರ್ವಾರ್ಥಾನಾಮುಪಕ್ರಮೇ ।
ಯಂ ನತ್ವಾ ಕೃತಕೃತ್ಯಾಃ ಸ್ಯುಸ್ತಂ ನಮಾಮಿ ಗಜಾನನಮ್ ॥ ೨

ದೋರ್ಭಿರ್ಯುಕ್ತಾ ಚತುರ್ಭಿಃ ಸ್ಫಟಿಕಮಣಿಮಯೀ-
ಮಕ್ಷಮಾಲಾಂ ದಧಾನಾ
ಹಸ್ತೇನೈಕೇನ ಪದ್ಮಂ ಸಿತಮಪಿ ಚ ಶುಕಂ ಪುಸ್ತಕಂ ಚಾಪರೇಣ ।
ಭಾಸಾ ಕುಂದೇಂದುಶಂಖಸ್ಫಟಿಕಮಣಿನಿಭಾ ಭಾಸಮಾನಾಽಸಮಾನಾ
ಸಾ ಮೇ ವಾಗ್ದೇವತೇಯಂ ನಿವಸತು ವದನೇ ಸರ್ವದಾ ಸುಪ್ರಸನ್ನಾ ॥ ೩

ಕೂಜಂತಂ ರಾಮ ರಾಮೇತಿ ಮಧುರಂ ಮಧುರಾಕ್ಷರಮ್ ।
ಆರುಹ್ಯ ಕವಿತಾಶಾಖಾಂ ವಂದೇ ವಾಲ್ಮೀಕಿಕೋಕಿಲಮ್ ॥ ೪

ವಾಲ್ಮೀಕೇರ್ಮುನಿಸಿಂಹಸ್ಯ ಕವಿತಾವನಚಾರಿಣಃ ।
ಶೃಣ್ವನ್ ರಾಮಕಥಾನಾದಂ ಕೋ ನ ಯಾತಿ ಪರಾಂ ಗತಿಮ್ ॥ ೫

ಯಃ ಪಿಬನ್ ಸತತಂ ರಾಮಚರಿತಾಮೃತಸಾಗರಮ್ ।
ಅತೃಪ್ತಸ್ತಂ ಮುನಿಂ ವಂದೇ ಪ್ರಾಚೇತಸಮಕಲ್ಮಷಮ್ ॥ ೬

ಗೋಷ್ಪದೀಕೃತವಾರಾಶಿಂ ಮಶಕೀಕೃತರಾಕ್ಷಸಮ್ ।
ರಾಮಾಯಣಮಹಾಮಾಲಾರತ್ನಂ ವಂದೇಽನಿಲಾತ್ಮಜಮ್ ॥ ೭

ಅಂಜನಾನಂದನಂ ವೀರಂ ಜಾನಕೀಶೋಕನಾಶನಮ್ ।
ಕಪೀಶಮಕ್ಷಹಂತಾರಂ ವಂದೇ ಲಂಕಾಭಯಂಕರಮ್ ॥ ೮

ಉಲ್ಲಂಘ್ಯ ಸಿಂಧೋಃ ಸಲಿಲಂ ಸಲೀಲಂ
ಯಃ ಶೋಕವಹ್ನಿಂ ಜನಕಾತ್ಮಜಾಯಾಃ ।
ಆದಾಯ ತೇನೈವ ದದಾಹ ಲಂಕಾಂ
ನಮಾಮಿ ತಂ ಪ್ರಾಂಜಲಿರಾಂಜನೇಯಮ್ ॥ ೯

ಆಂಜನೇಯಮತಿಪಾಟಲಾನನಂ
ಕಾಂಚನಾದ್ರಿಕಮನೀಯವಿಗ್ರಹಮ್ ।
ಪಾರಿಜಾತತರುಮೂಲವಾಸಿನಂ
ಭಾವಯಾಮಿ ಪವಮಾನನಂದನಮ್ ॥ ೧೦

ಯತ್ರ ಯತ್ರ ರಘುನಾಥಕೀರ್ತನಂ
ತತ್ರ ತತ್ರ ಕೃತಮಸ್ತಕಾಂಜಲಿಮ್ ।
ಬಾಷ್ಪವಾರಿಪರಿಪೂರ್ಣಲೋಚನಂ
ಮಾರುತಿಂ ನಮತ ರಾಕ್ಷಸಾಂತಕಮ್ ॥ ೧೧

ಮನೋಜವಂ ಮಾರುತತುಲ್ಯವೇಗಂ
ಜಿತೇಂದ್ರಿಯಂ ಬುದ್ಧಿಮತಾಂ ವರಿಷ್ಠಮ್ ।
ವಾತಾತ್ಮಜಂ ವಾನರಯೂಥಮುಖ್ಯಂ
ಶ್ರೀರಾಮದೂತಂ ಶಿರಸಾ ನಮಾಮಿ ॥ ೧೨

ಯಃ ಕರ್ಣಾಂಜಲಿಸಂಪುಟೈರಹರಹಃ ಸಮ್ಯಕ್ಪಿಬತ್ಯಾದರಾ-
ದ್ವಾಲ್ಮೀಕೇರ್ವದನಾರವಿಂದಗಲಿತಂ ರಾಮಾಯಣಾಖ್ಯಂ ಮಧು ।

ಜನ್ಮವ್ಯಾಧಿಜರಾವಿಪತ್ತಿಮರಣೈರತ್ಯಂತಸೋಪದ್ರವಂ
ಸಂಸಾರಂ ಸ ವಿಹಾಯ ಗಚ್ಛತಿ ಪುಮಾನ್ ವಿಷ್ಣೋಃ
ಪದಂ ಶಾಶ್ವತಮ್ ॥ ೧೩

ತದುಪಗತಸಮಾಸಸಂಧಿಯೋಗಂ
ಸಮಮಧುರೋಪನತಾರ್ಥವಾಕ್ಯಬದ್ಧಮ್ ।
ರಘುವರಚರಿತಂ ಮುನಿಪ್ರಣೀತಂ
ದಶಶಿರಸಶ್ಚ ವಧಂ ನಿಶಾಮಯಧ್ವಮ್ ॥ ೧೪

ವಾಲ್ಮೀಕಿಗಿರಿಸಂಭೂತಾ ರಾಮಸಾಗರಗಾಮಿನೀ ।
ಪುನಾತು ಭುವನಂ ಪುಣ್ಯಾ ರಾಮಾಯಣಮಹಾನದೀ ॥ ೧೫
ಶ್ಲೋಕಸಾರಸಮಾಕೀರ್ಣಂ ಸರ್ಗಕಲ್ಲೋಲಸಂಕುಲಮ್ ।
ಕಾಂಡಗ್ರಾಹಮಹಾಮೀನಂ ವಂದೇ ರಾಮಾಯಣಾರ್ಣವಮ್ ॥ ೧೬

ವೇದವೇದ್ಯೇ ಪರೇ ಪುಂಸಿ ಜಾತೇ ದಶರಥಾತ್ಮಜೇ ।
ವೇದಃ ಪ್ರಾಚೇತಸಾದಾಸೀತ್ಸಾಕ್ಷಾದ್ರಾಮಾಯಣಾತ್ಮನಾ ॥ ೧೭

ವೈದೇಹೀಸಹಿತಂ ಸುರದ್ರುಮತಲೇ ಹೈಮೇ ಮಹಾಮಂಟಪೇ
ಮಧ್ಯೇಪುಷ್ಪಕಮಾಸನೇ ಮಣಿಮಯೇ ವೀರಾಸನೇ ಸುಸ್ಥಿತಮ್ ।
ಅಗ್ರೇ ವಾಚಯತಿ ಪ್ರಭಂಜನಸುತೇ ತತ್ತ್ವಂ ಮುನಿಭ್ಯಃ ಪರಂ
ವ್ಯಾಖ್ಯಾಂತಂ ಭರತಾದಿಭಿಃ ಪರಿವೃತಂ ರಾಮಂ ಭಜೇ ಶ್ಯಾಮಲಮ್ ॥

ವಾಮೇ ಭೂಮಿಸುತಾ ಪುರಶ್ಚ ಹನುಮಾನ್ ಪಶ್ಚಾತ್ ಸುಮಿತ್ರಾಸುತಃ
ಶತ್ರುಘ್ನೋ ಭರತಶ್ಚ ವಾಮದಲಯೋರ್ವಾಯ್ವಾದಿಕೋಣೇಷು ಚ ।
ಸುಗ್ರೀವಶ್ಚ ವಿಭೀಷಣಶ್ಚ ಯುವರಾಟ್ ತಾರಾಸುತೋ ಜಾಂಬವಾನ್
ಮಧ್ಯೇ ನೀಲಸರೋಜಕೋಮಲರುಚಿಂ ರಾಮಂ ಭಜೇ ಶ್ಯಾಮಲಮ್ ॥

ನಮೋಽಸ್ತು ರಾಮಾಯ ಸಲಕ್ಷ್ಮಣಾಯ
ದೇವ್ಯೈ ಚ ತಸ್ಯೈ ಜನಕಾತ್ಮಜಾಯೈ ।
ನಮೋಽಸ್ತು ರುದ್ರೇಂದ್ರಯಮಾನಿಲೇಭ್ಯೋ
ನಮೋಽಸ್ತು ಚಂದ್ರಾರ್ಕಮರುದ್ಗಣೇಭ್ಯಃ ॥ ೨೦

ಹಿಂದೆ ತಿಳಿಸಿದ ಶ್ಲೋಕಗಳನ್ನು ಪಠಿಸಿದಮೇಲೆ ಸುಂದರಕಾಂಡ ಪಾರಾಯಣದ ಆರಂಭದಲ್ಲಿ, ಮುಂದೆ ತಿಳಿಸುವ ಪ್ರಕಾರ ಮಂತ್ರನ್ಯಾಸಾದಿಗಳನ್ನು ಮಾಡಿಕೊಳ್ಳಬೇಕು. ಹಾಗಲ್ಲದೆ ಮೇಲ್ಕಂಡ ಶ್ಲೋಕಗಳನ್ನು ಪಠಿಸಿ ಮಂತ್ರನ್ಯಾಸಾದಿಗಳಿಲ್ಲದೆ ನೇರವಾಗಿ ಪಾರಾಯಣವನ್ನಾರಂಭಿಸುವ ಪದ್ಧತಿಯೂ ಉಂಟು.

ಅಸ್ಯ ಶ್ರೀಸುಂದರಕಾಂಡಮಹಾಮಂತ್ರಸ್ಯ । ವಾಲ್ಮೀಕಿಃ ಋಷಿಃ । ಅನುಷ್ಟುಪ್‌ಛಂದಃ। ಆಂಜನೇಯೋ ದೇವತಾ। ರಾಮದೂತಾಯ ಕಪಯ ಇತಿ ಬೀಜಮ್ । ನಮೋ ವಾತಾತ್ಮಜಾಯ ಇತಿ ಶಕ್ತಿಃ । ಸಮುದ್ರತಾರಕಾಯ ಇತಿ ಕೀಲಕಮ್ । ಮಮಾಭೀಷ್ಟಸಿದ್ಧ್ಯರ್ಥಂ ಸುಂದರಕಾಂಡ ಪಾರಾಯಣೇ ವಿನಿಯೋಗಃ । ಉದಧಿಕ್ರಮಿಣೇ ತುಭ್ಯಂ ನಮೋ ರಾಕ್ಷಸಮರ್ದಿನೇ ಅಂಗುಷ್ಠಿಕಾಭ್ಯಾಂ ನಮಃ। ಛಾಯಾಗ್ರಹವಿನಾಶಾಯ ಸುರಸಾಮಾರಕಾಯ ಚ ತರ್ಜನೀಭ್ಯಾಂ ನಮಃ । ಮೈನಾಕದರ್ಶಿನೇ ತುಭ್ಯಂ ಮೈನಾಕಗಿರಿಮಾನಿನೇ ಮಧ್ಯಮಾಭ್ಯಾಂ ನಮಃ। ಆಕಾಶಗಾಮಿನೇ ದೇವಮಾನಿನೇ ಸರ್ವದಾಯಿನೇ ಅನಾಮಿಕಾಭ್ಯಾಂ ನಮಃ । ವಾಯುಪುತ್ರಾಯ ಧೀರಾಯ ಲಂಕಾದರ್ಪಾಪಹಾರಿಣೇ ಕನಿಷ್ಠಿಕಾಭ್ಯಾಂ ನಮಃ । ಅಕ್ಷಹಂತ್ರೇ ನಮಸ್ತುಭ್ಯಂ ಪುಚ್ಛವಹ್ನಿಪ್ರದೀಪಿನೇ ಕರತಲಕರಪೃಷ್ಠಾಭ್ಯಾಂ ನಮಃ॥ ಉದಧಿ..... ಮರ್ದಿನೇ ಹೃದಯಾಯ ನಮಃ। ಛಾಯಾಗ್ರಹ..... ಮಾರಕಾಯ ಚ ಶಿರಸೇ ಸ್ವಾಹಾ । ಮೈನಾಕ....... ಮಾನಿನೇ ಶಿಖಾಯೈ ವಷಟ್। ಆಕಾಶ.... ದಾಯಿನೇ ಕವಚಾಯ ಹುಮ್ । ವಾಯುಪುತ್ರಾಯ.......ಹಾರಿಣೇ ನೇತ್ರತ್ರಯಾಯ ವೌಷಟ್ । ಅಕ್ಷಹಂತ್ರೇ....... ಪ್ರದೀಪಿನೇ ಅಸ್ತ್ರಾಯ ಫಟ್ ॥ ಅಷ್ಟಮಂತ್ರಿ ಸುತಾನಾಂ ಚ ಗರ್ವಭಂಗಕೃತೇ ನಮಃ। ಭೂರ್ಭುವಸ್ಸುವರೋಮಿತಿ ದಿಗ್ಬಂಧಃ॥

ಅಥ ಧ್ಯಾನಮ್

ಸರ್ವಾನಿಷ್ಟನಿವಾರಕಂ ಶುಭಕರಂ ಪಿಂಗಾಕ್ಷಮಕ್ಷಾಪಹಂ
ಸೀತಾನ್ವೇಷಣತತ್ಪರಂ ಕಪಿವರಂ ಕೋಟೀಂದುಸೂರ್ಯಪ್ರಭಮ್ ।
ಲಂಕಾದ್ವೀಪಭಯಂಕರಂ ಸಕಲದಂ ಸುಗ್ರೀವಸಂಮಾನಿತಂ
ದೇವೇಂದ್ರಾದಿಸಮಸ್ತದೂತವಿನುತಂ ಕಾಕುತ್ಸ್ಥದೂತಂ ಭಜೇ॥ ೨೧

ಬುದ್ಧಿರ್ಬಲಂ ಯಶೋ ಧೈರ್ಯಂ ನಿರ್ಭಯತ್ವಮರೋಗತಾ ।
ಅಜಾಡ್ಯಂ ವಾಕ್ಪಟುತ್ವಂ ಚ ಹನೂಮತ್ಸ್ಮರಣಾದ್ಭವೇತ್ ॥ ೨೨

ಚಂದ್ರಬಿಂಬಸಮಾಕಾರಂ ವಾಂಛಿತಾರ್ಥಪ್ರದಾಯಕಮ್ ।
ಹನೂಮತ್ಸೇವಿತಂ ಧ್ಯಾಯೇತ್ ಸೌಂದರೇ ಕಾಂಡ ಉತ್ತಮೇ ॥ ೨೩

ಜಯತ್ಯತಿಬಲೋ ರಾಮೋ ಲಕ್ಷ್ಮಣಶ್ಚ ಮಹಾಬಲಃ ।
ರಾಜಾ ಜಯತಿ ಸುಗ್ರೀವೋ ರಾಘವೇಣಾಭಿಪಾಲಿತಃ ॥ ೨೪

ದಾಸೋಽಹಂ ಕೋಸಲೇಂದ್ರಸ್ಯ ರಾಮಸ್ಯಾಕ್ಲಿಷ್ಟಕರ್ಮಣಃ ।
ಹನೂಮಾನ್ ಶತ್ರುಸೈನ್ಯಾನಾಂ ನಿಹಂತಾ ಮಾರುತಾತ್ಮಜಃ ॥ ೨೫

ನ ರಾವಣಸಹಸ್ರಂ ಮೇ ಯುದ್ಧೇ ಪ್ರತಿಬಲಂ ಭವೇತ್ ।
ಶಿಲಾಭಿಸ್ತು ಪ್ರಹರತಃ ಪಾದಪೈಶ್ಚ ಸಹಸ್ರಶಃ ॥ ೨೬
ಅರ್ದಯಿತ್ವಾ ಪುರೀಂ ಲಂಕಾಮಭಿವಾದ್ಯ ಚ ಮೈಥಿಲೀಮ್ ।
ಸಮೃದ್ಧಾರ್ಥೋ ಗಮಿಷ್ಯಾಮಿ ಮಿಷತಾಂ ಸರ್ವರಕ್ಷಸಾಮ್ ॥ ೨೭

ಶ್ರೀರಾಮಚಂದ್ರಪರಬ್ರಹ್ಮಣೇ ನಮಃ

೨. ಶ್ರೀವೈಷ್ಣವಸಂಪ್ರದಾಯ

ಲಕ್ಷ್ಮೀನಾಥಸಮಾರಂಭಾಂ ನಾಥಯಾಮುನಮಧ್ಯಮಾಮ್ ।
ಅಸ್ಮದಾಚಾರ್ಯಪರ್ಯಂತಾಂ ವಂದೇ ಗುರುಪರಂಪರಾಮ್ ॥ ೧

ಯೋ ನಿತ್ಯಮಚ್ಯುತಪದಾಂಬುಜಯುಗ್ಮರುಕ್ಮ-
ವ್ಯಾಮೋಹತಸ್ತದಿತರಾಣಿ ತೃಣಾಯ ಮೇನೇ ।
ಅಸ್ಮದ್ಗುರೋರ್ಭಗವತೋಽಸ್ಯ ದಯೈಕಸಿಂಧೋಃ
ರಾಮಾನುಜಸ್ಯ ಚರಣೌ ಶರಣಂ ಪ್ರಪದ್ಯೇ ॥ ೨

ಮಾತಾ ಪಿತಾ ಯುವತಯಸ್ತನಯಾ ವಿಭೂತಿಃ
ಸರ್ವಂ ಯದೇವ ನಿಯಮೇನ ಮದನ್ವಯಾನಾಮ್ ।
ಆದ್ಯಸ್ಯ ನಃ ಕುಲಪತೇರ್ವಕುಲಾಭಿರಾಮಂ
ಶ್ರೀಮತ್ತದಂಘ್ರಿಯುಗಲಂ ಪ್ರಣಮಾಮಿ ಮೂರ್ಧ್ನಾ ॥ ೩

ಭೂತಂ ಸರಶ್ಚ ಮಹದಾಹ್ವಯಭಟ್ಟನಾಥ-
ಶ್ರೀಭಕ್ತಿಸಾರಕುಲಶೇಖರಯೋಗಿವಾಹಾನ್ ।
ಭಕ್ತಾಂಘ್ರಿರೇಣುಪರಕಾಲಯತೀಂದ್ರಮಿಶ್ರಾನ್
ಶ್ರೀಮತ್ಪರಾಂಕುಶಮುನಿಂ ಪ್ರಣತೋಽಸ್ಮಿ ನಿತ್ಯಮ್ ॥ ೪

ಪಿತಾಮಹಸ್ಯಾಪಿ ಪಿತಾಮಹೋ ಯಃ
ಪ್ರಾಚೇತಸಾದೇಶಫಲಪ್ರದಾಯ ।
ಶ್ರೀಭಾಷ್ಯಕಾರೋತ್ತಮದೇಶಿಕಾಯ
ಶ್ರೀಶೈಲಪೂರ್ಣಾಯ ನಮೋ ನಮಃ ಸ್ತಾತ್ ॥ ೫

ಆಮೇಲೆ ತಮ್ಮ ಆಚಾರ್ಯಪ್ರಭೃತಿ ಶ್ರೀಮನ್ನಾರಾಯಣ ಪರ್ಯಂತವಾಗಿ ಸಾಂಪ್ರದಾಯಿಕ ಶ್ಲೋಕಗಳನ್ನು ಹೇಳಿಕೊಳ್ಳಬೇಕು. ಅನಂತರ—

ಶುಕ್ಲಾಂಬರಧರಂ ವಿಷ್ಣುಂ ಶಶಿವರ್ಣಂ ಚತುರ್ಭುಜಮ್ ।
ಪ್ರಸನ್ನವದನಂ ಧ್ಯಾಯೇತ್ ಸರ್ವವಿಘ್ನೋಪಶಾಂತಯೇ ॥ ೬

ಯಸ್ಯ ದ್ವಿರದವಕ್ತ್ರಾದ್ಯಾಃ ಪರಿಷದ್ಯಾಃ ಪರಃಶತಮ್ ।
ವಿಘ್ನಂ ನಿಘ್ನಂತಿ ಸತತಂ ವಿಷ್ವಕ್ಸೇನಮುಪಾಸ್ಮಹೇ ॥ ೭

ಜ್ಞಾನಾನಂದಮಯಂ ದೇವಂ ನಿರ್ಮಲಸ್ಫಟಿಕಾಕೃತಿಮ್ ।
ಆಧಾರಂ ಸರ್ವವಿದ್ಯಾನಾಂ ಹಯಗ್ರೀವಮುಪಾಸ್ಮಹೇ ॥ ೮

ಎಂದು ಪಠಿಸಿ 'ಕೂಜಂತಂ ರಾಮ ರಾಮೇತಿ' ಎಂದು ಆರಂಭಿಸಿ ಮುಂದಕ್ಕೆ ೧ನೆಯ ಸಂಪ್ರದಾಯದಲ್ಲಿ ಹೇಳಿದ ಶ್ಲೋಕಗಳನ್ನು ಪಠಿಸಬೇಕು.

೩. ಮಾಧ್ವಸಂಪ್ರದಾಯ

ಶುಕ್ಲಾಂಬರಧರಂ ವಿಷ್ಣುಂ ಶಶಿವರ್ಣಂ ಚತುರ್ಭುಜಮ್ ।
ಪ್ರಸನ್ನವದನಂ ಧ್ಯಾಯೇತ್ ಸರ್ವವಿಘ್ನೋಪಶಾಂತಯೇ ॥ ೧

ಲಕ್ಷ್ಮೀನಾರಾಯಣಂ ವಂದೇ ತದ್ಭಕ್ತಪ್ರವರೋ ಹಿ ಯಃ ।
ಶ್ರೀಮದಾನಂದತೀರ್ಥಾಖ್ಯೋ ಗುರುಸ್ತಂ ಚ ನಮಾಮ್ಯಹಮ್ ॥ ೨

ವೇದೇ ರಾಮಾಯಣೇ ಚೈವ ಪುರಾಣೇ ಭಾರತೇ ತಥಾ ।
ಆದಾವಂತೇ ಚ ಮಧ್ಯೇ ಚ ವಿಷ್ಣುಃ ಸರ್ವತ್ರ ಗೀಯತೇ ॥ ೩

ಸರ್ವಸಿದ್ಧಿಪ್ರಶಮನಂ ಸರ್ವಸಿದ್ಧಿಕರಂ ಪರಮ್ ।
ಸರ್ವಜೀವಪ್ರಣೇತಾರಂ ವಂದೇ ವಿಜಯದಂ ಹರಿಮ್ ॥ ೪

ಸರ್ವಾಭೀಷ್ಟಪ್ರದಂ ರಾಮಂ ಸರ್ವಾರಿಷ್ಟನಿವಾರಕಮ್ ।
ಜಾನಕೀಜಾನಿಮನಿಶಂ ವಂದೇ ಮದ್ಗುರುವಂದಿತಮ್ ॥ ೫

ಅಭ್ರಮಂ ಭಂಗರಹಿತಮಜಡಂ ವಿಮಲಂ ಸದಾ ।
ಆನಂದತೀರ್ಥಮತುಲಂ ಭಜೇ ತಾಪತ್ರಯಾಪಹಮ್ ॥ ೬

ಭವತಿ ಯದನುಭಾವಾದೇಡಮೂಕೋಽಪಿ ವಾಗ್ಮೀ
ಜಡಮತಿರಪಿ ಜಂತುರ್ಜಾಯತೇ ಪ್ರಾಜ್ಞಮೌಲಿಃ ।
ಸಕಲವಚನಚೇತೋದೇವತಾ ಭಾರತೀ ಸಾ
ಮಮ ವಚಸಿ ವಿಧತ್ತಾಂ ಸಂನಿಧಿಂ ಮಾನಸೇ ಚ ॥ ೭

ಮಿಥ್ಯಾಸಿದ್ಧಾಂತದುರ್ಧ್ವಾಂತವಿಧ್ವಂಸನವಿಚಕ್ಷಣಃ ।
ಜಯತೀರ್ಥಾಖ್ಯತರಣಿರ್ಭಾಸತಾಂ ನೋ ಹೃದಂಬುಜೇ ॥ ೮

ಚಿತ್ರೈಃ ಪದೈಶ್ಚ ಗಂಭೀರೈರ್ವಾಕ್ಯೈರ್ಮಾನೈರಖಂಡಿತೈಃ ।
ಗುರುಭಾವಂ ವ್ಯಂಜಯಂತೀ ಭಾತಿ ಶ್ರೀ ಜಯತೀರ್ಥವಾಕ್ ॥ ೯

ಅನಂತರ 'ಕೂಜಂತಂ ರಾಮರಾಮೇತಿ' ಎಂದು ಆರಂಭಿಸಿ ಮುಂದಕ್ಕೆ ೧ನೆಯ ಸಂಪ್ರದಾಯದಲ್ಲಿ ಹೇಳಿದ ಶ್ಲೋಕಗಳನ್ನು ಪಠಿಸಬೇಕು.

ಪಾರಾಯಣದ ಸಮಾಪ್ತಿಯಲ್ಲಿ ಪಠಿಸುವ ಶ್ಲೋಕಗಳು

೧. ಸ್ಮಾರ್ತ ಸಂಪ್ರದಾಯ

ಸ್ವಸ್ತಿ ಪ್ರಜಾಭ್ಯಃ ಪರಿಪಾಲಯಂತಾಂ
    ನ್ಯಾಯೇನ ಮಾರ್ಗೇಣ ಮಹೀಂ ಮಹೀಶಾಃ ।
ಗೋಬ್ರಾಹ್ಮಣೇಭ್ಯಃ ಶುಭಮಸ್ತು ನಿತ್ಯಂ
    ಲೋಕಾಃ ಸಮಸ್ತಾಃ ಸುಖಿನೋ ಭವಂತು ॥ ೧

ಕಾಲೇ ವರ್ಷಂತು ಪರ್ಜನ್ಯಃ ಪೃಥಿವೀ ಸಸ್ಯಶಾಲಿನೀ ।
ದೇಶೋಽಯಂ ಕ್ಷೋಭರಹಿತೋ ಬ್ರಾಹ್ಮಣಾಃ ಸಂತು ನಿರ್ಭಯಾಃ ॥ ೨

ಅಪುತ್ರಾಃ ಪುತ್ರಿಣಃ ಸಂತು ಪುತ್ರಿಣಃ ಸಂತು ಪೌತ್ರಿಣಃ ।
ಅಧನಾಃ ಸಧನಾಃ ಸಂತು ಜೀವಂತು ಶರದಾಂ ಶತಮ್ ॥ ೩

ಚರಿತಂ ರಘುನಾಥಸ್ಯ ಶತಕೋಟಿಪ್ರವಿಸ್ತರಮ್ ।
ಏಕೈಕಮಕ್ಷರಂ ಪ್ರೋಕ್ತಂ ಮಹಾಪಾತಕನಾಶನಮ್ ॥ ೪

ಶೃಣ್ವನ್ ರಾಮಾಯಣಂ ಭಕ್ತ್ಯಾ ಯಃ ಪಾದಂ ಪದಮೇವ ವಾ ।
ಸ ಯಾತಿ ಬ್ರಹ್ಮಣಃ ಸ್ಥಾನಂ ಬ್ರಹ್ಮಣಾ ಪೂಜ್ಯತೇ ಸದಾ ॥ ೫

ರಾಮಾಯ ರಾಮಭದ್ರಾಯ ರಾಮಚಂದ್ರಾಯ ವೇಧಸೇ ।
ರಘುನಾಥಾಯ ನಾಥಾಯ ಸೀತಾಯಾಃ ಪತಯೇ ನಮಃ ॥ ೬

ಯನ್ಮಂಗಲಂ ಸಹಸ್ರಾಕ್ಷೇ ಸರ್ವದೇವನಮಸ್ಕೃತೇ ।
ವೃತ್ರನಾಶೇ ಸಮಭವತ್ತತ್ತೇ ಭವತು ಮಂಗಲಮ್ ॥ ೭

ಮಂಗಲಂ ಕೋಸಲೇಂದ್ರಾಯ ಮಹನೀಯಗುಣಾತ್ಮನೇ ।
ಚಕ್ರವರ್ತಿತನೂಜಾಯ ಸಾರ್ವಭೌಮಾಯ ಮಂಗಲಮ್ ॥ ೮

ಯನ್ಮಂಗಲಂ ಸುಪರ್ಣಸ್ಯ ವಿನತಾಽಕಲ್ಪಯತ್ ಪುರಾ ।
ಅಮೃತಂ ಪ್ರಾರ್ಥಯಾನಸ್ಯ ತತ್ತೇ ಭವತು ಮಂಗಲಮ್ ॥ ೯

ಅಮೃತೋತ್ಪಾದನೇ ದೈತ್ಯಾನ್ ಘ್ನತೋ ವಜ್ರಧರಸ್ಯ ಯತ್ ।
ಅದಿತಿರ್ಮಂಗಲಂ ಪ್ರಾದಾತ್ತತ್ತೇ ಭವತು ಮಂಗಲಮ್ ॥ ೧೦

ತ್ರೀನ್ ವಿಕ್ರಮಾನ್ ಪ್ರಕ್ರಮತೋ ವಿಷ್ಣೋರಮಿತತೇಜಸಃ ।
ಯದಾಸೀನ್ಮಂಗಲಂ ರಾಮ ತತ್ತೇ ಭವತು ಮಂಗಲಮ್ ॥ ೧೧

ಋತವಃ ಸಾಗರಾ ದ್ವೀಪಾ ವೇದಾ ಲೋಕಾ ದಿಶಶ್ಚ ತೇ ।
ಮಂಗಲಾನಿ ಮಹಾಬಾಹೋ ದಿಶಂತು ತವ ಸರ್ವದಾ ॥ ೧೨

ಕಾಯೇನ ವಾಚಾ ಮನಸೇಂದ್ರಿಯೈರ್ವಾ
ಬುದ್ಧ್ಯಾತ್ಮನಾ ವಾ ಪ್ರಕೃತೇಃ ಸ್ವಭಾವಾತ್ ।
ಕರೋಮಿ ಯದ್ಯತ್ ಸಕಲಂ ಪರಸ್ಮೈ
ನಾರಾಯಣಾಯೇತಿ ಸಮರ್ಪಯಾಮಿ ॥ ೧೩

ಯದಕ್ಷರಪದಭ್ರಷ್ಟಂ ಮಾತ್ರಾಹೀನಂ ಚ ಯದ್ಭವೇತ್ ।
ತತ್ಸರ್ವಂ ಕ್ಷಮ್ಯತಾಂ ದೇವ ಶ್ರೀರಾಘವ ನಮೋಽಸ್ತು ತೇ ॥ ೧೪

ಅನೇನ ಶ್ರೀಮದ್ರಾಮಾಯಣ ಪಾರಾಯಣೇನ ಭಗವಾನ್ ಸರ್ವದೇವಾತ್ಮಕಃ
ಸೀತಾಲಕ್ಷ್ಮಣಭರತಶತ್ರುಘ್ನ ಹನೂಮತ್ಸಮೇತಃ ಶ್ರೀರಾಮಚಂದ್ರಃ
ಸುಪ್ರೀತಃ ಸುಪ್ರಸನ್ನೋ ವರದೋ ಭವತು
ಶ್ರೀರಾಮಚಂದ್ರಾರ್ಪಣಮಸ್ತು

---

೨. ಶ್ರೀವೈಷ್ಣವ ಸಂಪ್ರದಾಯ

ಏವಮೇತತ್ ಪುರಾವೃತ್ತಮಾಖ್ಯಾನಂ ಭದ್ರಮಸ್ತು ವಃ ।
ಪ್ರವ್ಯಾಹರತ ವಿಸ್ರಬ್ಧಂ ಬಲಂ ವಿಷ್ಣೋಃ ಪ್ರವರ್ಧತಾಮ್ ॥ ೧

ಲಾಭಸ್ತೇಷಾಂ ಜಯಸ್ತೇಷಾಂ ಕುಲಸ್ತೇಷಾಂ ಪರಾಭವಃ ।
ಯೇಷಾಮಿಂದೀವರಶ್ಯಾಮೋ ಹೃದಯೇ ಸುಪ್ರತಿಷ್ಠಿತಃ ॥ ೨

ಕಾಲೇ ವರ್ಷತು ಪರ್ಜನ್ಯಃ ಪೃಥಿವೀ ಸಸ್ಯಶಾಲಿನೀ ।
ದೇಶೋಽಯಂ ಕ್ಷೋಭರಹಿತೋ ಬ್ರಾಹ್ಮಣಾಃ ಸಂತು ನಿರ್ಭಯಾಃ ॥ ೩
ಕಾವೇರೀ ವರ್ಧತಾಂ ಕಾಲೇ ಕಾಲೇ ವರ್ಷತು ವಾಸವಃ ।
ಶ್ರೀರಂಗನಾಥೋ ಜಯತು ಶ್ರೀರಂಗಶ್ರೀಶ್ಚ ವರ್ಧತಾಮ್ ॥ ೪

ಸ್ವಸ್ತಿ ಪ್ರಜಾಭ್ಯಃ ಪರಿಪಾಲಯಂತಾಂ
ನ್ಯಾಯೇನ ಮಾರ್ಗೇಣ ಮಹೀಂ ಮಹೀಶಾಃ ।
ಗೋಬ್ರಾಹ್ಮಣೇಭ್ಯಃ ಶುಭಮಸ್ತು ನಿತ್ಯಂ
ಲೋಕಾಃ ಸಮಸ್ತಾಃ ಸುಖಿನೋ ಭವಂತು ॥ ೫

ಮಂಗಲಂ ಕೋಸಲೇಂದ್ರಾಯ ಮಹನೀಯಗುಣಾಬ್ಧಯೇ ।
ಚಕ್ರವರ್ತಿತನೂಜಾಯ ಸಾರ್ವಭೌಮಾಯ ಮಂಗಲಮ್ ॥ ೬

ವೇದವೇದಾಂತವೇದ್ಯಾಯ ಮೇಘಶ್ಯಾಮಲಮೂರ್ತಯೇ ।
ಪುಂಸಾಂ ಮೋಹನರೂಪಾಯ ಪುಣ್ಯಶ್ಲೋಕಾಯ ಮಂಗಲಮ್ ॥ ೭

ವಿಶ್ವಾಮಿತ್ರಾಂತರಂಗಾಯ ಮಿಥಿಲಾನಗರೀಪತೇಃ ।
ಭಾಗ್ಯಾನಾಂ ಪರಿಪಾಕಾಯ ಭವ್ಯರೂಪಾಯ ಮಂಗಲಮ್ ॥ ೮

ಪಿತೃಭಕ್ತಾಯ ಸತತಂ ಭ್ರಾತೃಭಿಃ ಸಹ ಸೀತಯಾ ।
ನಂದಿತಾಖಿಲಲೋಕಾಯ ರಾಮಭದ್ರಾಯ ಮಂಗಲಮ್ ॥ ೯

ತ್ಯಕ್ತಸಾಕೇತವಾಸಾಯ ಚಿತ್ರಕೂಟವಿಹಾರಿಣೇ ।
ಸೇವ್ಯಾಯ ಸರ್ವಯಮಿನಾಂ ಧೀರೋದಾರಾಯ ಮಂಗಲಮ್ ॥ ೧೦

ಸೌಮಿತ್ರಿಣಾ ಚ ಜಾನಕ್ಯಾ ಚಾಪಬಾಣಾಸಿಧಾರಿಣೇ ।
ಸಂಸೇವ್ಯಾಯ ಸದಾ ಭಕ್ತ್ಯಾ ಸ್ವಾಮಿನೇ ಮಮ ಮಂಗಲಮ್ ॥ ೧೧

ದಂಡಕಾರಣ್ಯವಾಸಾಯ ಖಂಡಿತಾಮರಶತ್ರವೇ ।
ಗೃಧ್ರರಾಜಾಯ ಭಕ್ತಾಯ ಮುಕ್ತಿದಾಯಾಸ್ತು ಮಂಗಲಮ್ ॥ ೧೨

ಸಾದರಂ ಶಬರೀದತ್ತಫಲಮೂಲಾಭಿಲಾಷಿಣೇ ।
ಸೌಲಭ್ಯಪರಿಪೂರ್ಣಾಯ ಸತ್ತ್ವೋದ್ರಿಕ್ತಾಯ ಮಂಗಲಮ್ ॥ ೧೩

ಹನುಮತ್ಸಮವೇತಾಯ ಹರೀಶಾಭೀಷ್ಟದಾಯಿನೇ ।
ವಾಲಿಪ್ರಮಥನಾಯಾಸ್ತು ಮಹಾಧೀರಾಯ ಮಂಗಲಮ್ ॥ ೧೪

ಶ್ರೀಮತೇ ರಘುವೀರಾಯ ಸೇತೂಲ್ಲಂಘಿತಸಿಂಧವೇ ।
ಜಿತರಾಕ್ಷಸರಾಜಾಯ ರಣಧೀರಾಯ ಮಂಗಲಮ್ ॥ ೧೫

ಆಸಾದ್ಯ ನಗರೀಂ ದಿವ್ಯಾಮಭಿಷಿಕ್ತಾಯ ಸೀತಯಾ ।
ರಾಜಾಧಿರಾಜರಾಜಾಯ ರಾಮಭದ್ರಾಯ ಮಂಗಲಮ್ ॥ ೧೬

ಬ್ರಹ್ಮಾದಿದೇವಸೇವ್ಯಾಯ ಬ್ರಹ್ಮಣ್ಯಾಯ ಮಹಾತ್ಮನೇ ।
ಜಾನಕೀಪ್ರಾಣನಾಥಾಯ ರಘುನಾಥಾಯ ಮಂಗಲಮ್ ॥ ೧೭

ಮಂಗಲಾಶಾಸನಪರೈರ್ಮದಾಚಾರ್ಯಪುರೋಗಮೈಃ ।
ಸರ್ವೈಶ್ಚ ಪೂರ್ವೈರಾಚಾರ್ಯೈಃ ಸತ್ಕೃತಾಯಾಸ್ತು ಮಂಗಲಮ್ ॥ ೧೮

೩. ಮಾಧ್ವಸಂಪ್ರದಾಯ

ಸ್ವಸ್ತಿ ಪ್ರಜಾಭ್ಯಃ ಪರಿಪಾಲಯಂತಾಂ
ನ್ಯಾಯೇನ ಮಾರ್ಗೇಣ ಮಹೀಂ ಮಹೀಶಾಃ ।
ಗೋಬ್ರಾಹ್ಮಣೇಭ್ಯಃ ಶುಭಮಸ್ತು ನಿತ್ಯಂ
ಲೋಕಾಃ ಸಮಸ್ತಾಃ ಸುಖಿನೋ ಭವಂತು ॥ ೧

ಕಾಲೇ ವರ್ಷಂತು ಪರ್ಜನ್ಯಃ ಪೃಥಿವೀ ಸಸ್ಯಶಾಲಿನೀ ।
ದೇಶೋಽಯಂ ಕ್ಷೋಭರಹಿತೋ ಬ್ರಾಹ್ಮಣಾಃ ಸಂತು ನಿರ್ಭಯಾಃ ॥ ೨

ಲಾಭಸ್ತೇಷಾಂ ಜಯಸ್ತೇಷಾಂ ಕುತಸ್ತೇಷಾಂ ಪರಾಭವಃ ।
ಯೇಷಾಮಿಂದೀವರಶ್ಯಾಮೋ ಹೃದಯೇ ಸುಪ್ರತಿಷ್ಠಿತಃ ॥ ೩

ಮಂಗಲಂ ಕೋಸಲೇಂದ್ರಾಯ ಮಹನೀಯಗುಣಾಬ್ಧಯೇ ।
ಚಕ್ರವರ್ತಿತನೂಜಾಯ ಸಾರ್ವಭೌಮಾಯ ಮಂಗಲಮ್ ॥ ೪

ಕಾಯೇನ ವಾಚಾ ಮನಸೇಂದ್ರಿಯೈರ್ವಾ
ಬುದ್ಧ್ಯಾತ್ಮನಾ ವಾ ಪ್ರಕೃತೇಃ ಸ್ವಭಾವಾತ್ ।
ಕರೋಮಿ ಯದ್ಯತ್ ಸಕಲಂ ಪರಸ್ಮೈ
ನಾರಾಯಣಾಯೇತಿ ಸಮರ್ಪಯಾಮಿ ॥ ೫

ಅನುಕ್ರಮಣಿಕೆ

ಸರ್ಗ	ವಿಷಯ		ಪುಟ
೧	ಸಾಗರಲಂಘನಮ್		
	(ಹನುಮಂತನು ಸಮುದ್ರವನ್ನು ದಾಟುವುದು)	....	೧
೨	ನಿಶಾಗಮಪ್ರತೀಕ್ಷಾ		
	(ಲಂಕಾಪ್ರವೇಶಕ್ಕೆ ರಾತ್ರಿಯಾಗಲೆಂದು ನಿರೀಕ್ಷಿಸುವುದು)	....	೩೩
೩	ಲಂಕಾಧಿದೇವತಾವಿಜಯಃ		
	(ಹನುಮಂತನು ಲಂಕಾದೇವತೆಯನ್ನು ನಿಗ್ರಹಿಸುವುದು)	....	೪೩
೪	ಲಂಕಾಪುರೀ ಪ್ರವೇಶಃ		
	(ಲಂಕೆಯನ್ನು ಪ್ರವೇಶಿಸುವುದು)	....	೫೧
೫	ಭವನ ವಿಚಯಃ		
	(ರಾಕ್ಷಸರ ಗೃಹಗಳಲ್ಲಿ ಸೀತೆಯ ಅನ್ವೇಷಣೆ)	....	೫೬
೬	ರಾವಣಗೃಹಾವೇಕ್ಷಣಮ್		
	(ರಾವಣನ ಭವನಗಳಲ್ಲಿ ಸೀತೆಯ ಅನ್ವೇಷಣೆ)	....	೬೪
೭	ಪುಷ್ಪಕದರ್ಶನಮ್		
	(ಹನುಮಂತನು ಪುಷ್ಪಕವಿಮಾನವನ್ನು ನೋಡುವುದು)	....	೭೦
೮	ಪುಷ್ಪಕಾನುವರ್ಣನಮ್		
	(ಪುಷ್ಪಕವಿಮಾನದ ವರ್ಣನೆ)	....	೭೫
೯	ಸಂಕುಲಾಂತಃಪುರಮ್		
	(ವಿವಿಧರೀತಿಯಲ್ಲಿದ್ದ ರಾವಣನ ಅಂತಃಪುರ)	....	೭೭
೧೦	ಮಂದೋದರೀದರ್ಶನಮ್		
	(ಹನುಮಂತನು ಮಂಡೋದರಿಯನ್ನು ನೋಡುವುದು)	....	೯೦
೧೧	ಪಾನಭೂಮಿ ವಿಚಯಃ		
	(ಪಾನಶಾಲೆಯಲ್ಲಿ ಸೀತೆಯ ಅನ್ವೇಷಣೆ)	....	೯೯
೧೨	ಹನೂಮದ್ವಿಷಾದಃ		
	(ಹನುಮಂತನು ಸೀತೆಯನ್ನು ಕಾಣದೆ ಚಿಂತಾಕ್ರಾಂತನಾಗುವುದು)		೧೦೬
೧೩	ಹನೂಮನ್ನಿರ್ವೇದಃ		
	(ತಾನು ಜೀವಿಸಿರಬಾರದೆಂದು ಹನುಮಂತನ ಚಿಂತೆ)	....	೧೧೧

ಸರ್ಗ	ವಿಷಯ	ಪುಟ
೧೪	ಅಶೋಕವನಿಕಾವಿಚಯಃ	
	(ಅಶೋಕವನದಲ್ಲಿ ಸೀತೆಯ ಅನ್ವೇಷಣೆ)	೧೨೩
೧೫	ಸೀತೋಪಲಂಭಃ	
	(ಹನುಮಂತನು ಸೀತೆಯನ್ನು ಕಾಣುವುದು)	೧೩೧
೧೬	ಹನೂಮತ್ಪರೀತಾಪಃ	
	(ಸೀತೆಯ ದುರ್ದಶೆಯನ್ನು ಕಂಡು ಹನುಮಂತನ ವ್ಯಥೆ)	೧೪೦
೧೭	ರಾಕ್ಷಸೀಪರಿವಾರಃ	
	(ಸೀತೆಯನ್ನು ರಾಕ್ಷಸಿಯರು ಸುತ್ತುಗಟ್ಟಿರುವುದು)	೧೪೬
೧೮	ರಾವಣಾಗಮನಮ್	
	(ರಾವಣನು ಅಶೋಕವನಕ್ಕೆ ಬರುವುದು)	೧೫೨
೧೯	ಕೃಚ್ಛ್ರಗತಸೀತೋಪಮಾಃ	
	(ಕಷ್ಟದಲ್ಲಿದ್ದ ಸೀತಾದೇವಿಯ ವರ್ಣನೆ)	೧೫೭
೨೦	ಪ್ರಣಯಪ್ರಾರ್ಥನಾ	
	(ರಾವಣನು ತನ್ನನ್ನು ವರಿಸುವಂತೆ ಸೀತೆಯನ್ನು ಪ್ರಾರ್ಥಿಸುವುದು)	೧೬೨
೨೧	ರಾವಣತೃಣೀಕರಣಮ್	
	(ರಾವಣನನ್ನು ಹುಲ್ಲುಕಡ್ಡಿಯಂತೆ ಸೀತೆಯು ಅಸಡ್ಡೆ ಮಾಡುವುದು)	೧೬೯
೨೨	ಮಾಸದ್ವಯಾವಧಿಕರಣಮ್	
	(ರಾವಣನು ಸೀತೆಗೆ ಎರಡು ತಿಂಗಳ ಅವಧಿಯನ್ನು ಕೊಡುವುದು)	೧೭೬
೨೩	ರಾಕ್ಷಸೀಪ್ರರೋಚನಮ್	
	(ರಾಕ್ಷಸಿಯರು ಸೀತೆಗೆ ಆಸೆ ಹುಟ್ಟಿಸುವ ಮಾತನ್ನಾಡುವುದು)	೧೮೪
೨೪	ರಾಕ್ಷಸೀನಿರ್ಭರ್ತ್ಸನಮ್	
	(ರಾಕ್ಷಸಿಯರು ಸೀತೆಯನ್ನು ಬೆದರಿಸುವುದು)	೧೮೮
೨೫	ಸೀತಾನಿರ್ವೇದಃ	
	(ಸೀತಾದೇವಿಯು ನಿರಾಶೆಯಿಂದ ರೋದಿಸುವುದು)	೧೯೬
೨೬	ಪ್ರಾಣತ್ಯಾಗಸಂಪ್ರಧಾರಣಮ್	
	(ಆತ್ಮಹತ್ಯೆಮಾಡಿಕೊಳ್ಳಬೇಕೆಂಬ ಸೀತೆಯ ನಿರ್ಧಾರ)	೨೦೦

ಸರ್ಗ	ವಿಷಯ		ಪುಟ
೨೭	ತ್ರಿಜಟಾಸ್ವಪ್ನಃ (ತ್ರಿಜಟೆಯ ಸ್ವಪ್ನ ವೃತ್ತಾಂತ)	....	೨೦೮
೨೮	ಉದ್ಬಂಧನವ್ಯವಸಾಯಃ (ನೇಣು ಹಾಕಿಕೊಳ್ಳಲು ಸೀತೆಯ ಪ್ರಯತ್ನ)	....	೨೧೭
೨೯	ಶುಭನಿಮಿತ್ತಾನಿ (ಸೀತಾದೇವಿಗೆ ಶುಭಶಕುನಗಳುಂಟಾದುದು)	....	೨೨೨
೩೦	ಹನೂಮತ್ಕೃತ್ಯಾಕೃತ್ಯವಿಚಿಂತನಮ್ (ಸೀತೆಯನ್ನು ಸಮಾಧಾನಪಡಿಸುವುದಕ್ಕಾಗಿ ಏನುಮಾಡಬೇಕೆಂದು ಹನುಮಂತನ ಆಲೋಚನೆ)	....	೨೨೫
೩೧	ರಾಮವೃತ್ತಸಂಶ್ರವಃ (ಹನುಮಂತನು ಶಿಂಶಪಾವೃಕ್ಷದಲ್ಲಿ ಕುಳಿತು ಹೇಳಿದ ರಾಮಕಥೆಯನ್ನು ಸೀತೆಯು ಕೇಳುವುದು)	....	೨೩೩
೩೨	ಸೀತಾವಿತರ್ಕಃ (ಹನುಮಂತನನ್ನು ಕಂಡು ಸೀತೆಗೆ ಆದ ಸಂದೇಹ)	....	೨೩೭
೩೩	ಹನೂಮಜ್ಜಾನಕೀಸಂವಾದೋಪಕ್ರಮಃ (ಹನುಮಂತನು ಸೀತೆಯೊಂದಿಗೆ ಸಂಭಾಷಣೆಗೆ ಆರಂಭಿಸುವುದು)		೨೪೦
೩೪	ರಾವಣಶಂಕಾ ನಿವಾರಣಮ್ (ಹನುಮಂತನು ರಾವಣನೆಂಬ ಸೀತೆಯ ಸಂದೇಹದ ಪರಿಹಾರ)		೨೪೬
೩೫	ವಿಶ್ವಾಸೋತ್ಪಾದನಮ್ (ಸೀತೆಗೆ ಹನುಮಂತನಲ್ಲಿ ನಂಬಿಕೆ ಉಂಟಾದ ಬಗೆ)	....	೨೫೩
೩೬	ಅಂಗುಲೀಯಕಪ್ರದಾನಮ್ (ಹನುಮಂತನು ರಾಮನ ಅಂಗುಲೀಯಕವನ್ನು ಸೀತೆಗೆ ಕೊಡುವುದು)	....	೨೬೯
೩೭	ಸೀತಾಪ್ರತ್ಯಾನಯನಾನೌಚಿತ್ಯಮ್ (ಹನುಮಂತನೇ ತನ್ನನ್ನು ಕರೆದೊಯ್ಯುವುದು ಉಚಿತವಲ್ಲವೆಂದು ಸೀತೆಯು ಹೇಳುವುದು)	....	೨೭೮

ಸರ್ಗ	ವಿಷಯ	ಪುಟ
೩೮	ವಾಯಸವೃತ್ತಾಂತಕಥನಮ್	
	(ಸೀತೆಯು ಕಾಗೆಯ ವೃತ್ತಾಂತವನ್ನು ಹೇಳುವುದು)	೨೯೦
೩೯	ಹನೂಮತ್ಸಂದೇಶಃ	
	(ಹನುಮಂತನೊಡನೆ ರಾಮನಿಗೆ ಸಂದೇಶವನ್ನು ಹೇಳುವುದು)	೩೦೨
೪೦	ಹನೂಮತ್ಪ್ರೇಷಣಮ್	
	(ಸೀತೆಯು ಹನುಮಂತನನ್ನು ಬೀಳ್ಕೊಡುವುದು)	೩೧೧
೪೧	ಪ್ರಮದಾವನಭಂಜನಮ್	
	(ಹನುಮಂತನಿಂದ ಅಶೋಕವನದ ನಾಶ)	೩೧೬
೪೨	ಕಿಂಕರನಿಷೂದನಮ್	
	(ಕಿಂಕರರೆಂಬ ರಾಕ್ಷಸರ ವಧೆ)	೩೨೧
೪೩	ಚೈತ್ಯಪ್ರಾಸಾದದಾಹಃ	
	(ಹನುಮಂತನು ಚೈತ್ಯವನ್ನು ನಾಶಗೊಳಿಸುವುದು)	೩೨೮
೪೪	ಜಂಬುಮಾಲಿವಧಃ	
	(ಜಂಬುಮಾಲಿಯ ಸಂಹಾರ)	೩೩೩
೪೫	ಅಮಾತ್ಯಪುತ್ರವಧಃ	
	(ಏಳುಮಂದಿ ಮಂತ್ರಿಕುಮಾರರ ಸಂಹಾರ)	೩೩೬
೪೬	ಸೇನಾಪತಿಪಂಚಕವಧಃ	
	(ಐವರು ಸೇನಾಪತಿಗಳ ವಧೆ)	೩೪೦
೪೭	ಅಕ್ಷಕುಮಾರವಧಃ	
	(ಅಕ್ಷಕುಮಾರನ ವಧೆ)	೩೪೬
೪೮	ಇಂದ್ರಜಿದಭಿಯೋಗಃ	
	(ಇಂದ್ರಜಿತ್ತು ಹನುಮಂತನನ್ನು ಬ್ರಹ್ಮಾಸ್ತ್ರದಿಂದ ಬಂಧಿಸುವುದು)	೩೫೬
೪೯	ರಾವಣಪ್ರಭಾವದರ್ಶನಮ್	
	(ರಾವಣನ ವೈಭವವನ್ನು ಕಂಡು ಹನುಮಂತನ ಆಶ್ಚರ್ಯ)	೩೬೯
೫೦	ಪ್ರಹಸ್ತಪ್ರಶ್ನಃ	
	(ಪ್ರಹಸ್ತನ ಪ್ರಶ್ನೆಗಳಿಗೆ ಹನುಮಂತನ ಉತ್ತರ)	೩೭೩

ಸರ್ಗ	ವಿಷಯ		ಪುಟ
೫೧	ಹನೂಮದುಪದೇಶಃ		
	(ಹನುಮಂತನು ರಾವಣನಿಗೆ ಬುದ್ಧಿವಾದವನ್ನು ಹೇಳುವುದು)		೩೭೭
೫೨	ದೂತವಧನಿವಾರಣಮ್		
	(ದೂತನನ್ನು ಕೊಲ್ಲಬಾರದೆಂದು ವಿಭೀಷಣನ ಹಿತೋಪದೇಶ)		೩೮೫
೫೩	ಪಾವಕಶೈತ್ಯಮ್		
	(ಅಗ್ನಿಯು ಹನುಮಂತನ ಬಾಲವನ್ನು ಸುಡದೆ ಶೀತಲನಾಗಿರುವುದು)		೩೯೨
೫೪	ಲಂಕಾದಾಹಃ		
	(ಲಂಕಾದಹನ)	....	೪೦೦
೫೫	ಹನೂಮದ್ವಿಭ್ರಮಃ		
	(ಲಂಕಾದಹನದಿಂದ ಸೀತೆ ಏನಾದಳೋ ಎಂದು ಹನುಮಂತನು ಗಾಬರಿಪಡುವುದು)	....	೪೧೦
೫೬	ಪ್ರತಿಪ್ರಯಾಣೋತ್ಪತನಮ್		
	(ಲಂಕೆಯಿಂದ ಹಿಂದಿರುಗುವುದಕ್ಕಾಗಿ ಹನುಮಂತನು ಆಕಾಶಕ್ಕೆ ನೆಗೆಯುವುದು)	....	೪೧೭
೫೭	ಹನೂಮತ್ಪ್ರತ್ಯಾಗಮನಮ್		
	(ಹನುಮಂತನು ಲಂಕೆಯಿಂದ ಹಿಂದಿರುಗಿ ಬರುವುದು)	....	೪೨೩
೫೮	ಹನೂಮದ್ವೃತ್ತಾನುಕಥನಮ್		
	(ಹನುಮಂತನಿಂದ ಲಂಕಾವೃತ್ತಾಂತದ ವಿವರಣೆ)	....	೪೩೧
೫೯	ಅನಂತರಕಾರ್ಯಪ್ರರೋಚನಮ್		
	(ನಾವೇ ಸೀತೆಯನ್ನು ಸೆರೆಯಿಂದ ಬಿಡಿಸೋಣವೆಂದು ಹನುಮಂತನ ಹೇಳಿಕೆ)	....	೪೫೯
೬೦	ಅಂಗದಜಾಂಬವತ್ಸಂವಾದಃ		
	(ಮುಂದಿನ ಕರ್ತವ್ಯದ ವಿಷಯವಾಗಿ ಅಂಗದ ಜಾಂಬವಂತರ ಸಂಭಾಷಣೆ)	....	೪೬೫
೬೧	ಮಧುವನಪ್ರವೇಶಃ		
	(ವಾನರರು ಮಧುವನವನ್ನು ಪ್ರವೇಶಿಸುವುದು)	....	೪೬೮

ಸರ್ಗ	ವಿಷಯ		ಪುಟ

ಸರ್ಗ	ವಿಷಯ		ಪುಟ
೬೨	ದಧಿಮುಖಖಿಲೀಕಾರಃ (ವಾನರರಿಂದ ದಧಿಮುಖನು ಪರಾಜಿತನಾಗುವುದು)	....	೪೭೩
೬೩	ಸುಗ್ರೀವಹರ್ಷಃ (ಸೀತೆಯು ದೊರಕಿದಳೆಂಬ ನಿಶ್ಚಯದಿಂದ ಸುಗ್ರೀವನ ಆನಂದ)		೪೮೦
೬೪	ಹನೂಮದಾದ್ಯಾಗಮನಮ್ (ಹನುಮಂತ ಮೊದಲಾದವರು ಸುಗ್ರೀವನ ಬಳಿಗೆ ಬರುವುದು)		೪೮೫
೬೫	ಚೂಡಾಮಣಿಪ್ರದಾನಮ್ (ಹನುಮಂತನು ಶ್ರೀರಾಮನಿಗೆ ಚೂಡಾಮಣಿಯನ್ನು ಅರ್ಪಿಸುವುದು)	....	೪೯೨
೬೬	ಸೀತಾಭಾಷಿತಪ್ರಶ್ನಃ (ಸೀತೆಯ ವಿಷಯವಾಗಿ ಶ್ರೀರಾಮನ ಪ್ರಶ್ನೆ)	....	೪೯೭
೬೭	ಸೀತಾಭಾಷಿತಾನುವಚನಮ್ (ಹನುಮಂತನು ಸೀತೆಯು ಹೇಳಿದ ಮಾತನ್ನು ತಿಳಿಸುವುದು)		೫೦೦
೬೮	ಹನೂಮತ್ಸಮಾಶ್ವಾಸವಚನಾನುವಾದಃ (ತಾನು ಸೀತೆಗೆ ಹೇಳಿದ ಸಮಾಧಾನವನ್ನು ಹನುಮಂತನು ವಿವರಿಸುವುದು)	....	೫೦೮
	ಅನುಬಂಧ	....	೫೧೪

ಚಿತ್ರಗಳು

ಶ್ರೀ ಆಂಜನೇಯಸ್ವಾಮಿ	xLiv
ಲಂಕಾಧಿದೇವತಾವಿಜಯ	೪೮
ಅಂಗುಲೀಯಕಪ್ರದಾನಮ್	೨೬೮

॥ ಶ್ರೀಃ ॥

ಶ್ರೀಮದ್ವಾಲ್ಮೀಕಿ ರಾಮಾಯಣಮ್

ಸುಂದರಕಾಂಡಃ

ಪ್ರಥಮಃ ಸರ್ಗಃ

ಸಾಗರಲಂಘನಮ್

ತತೋ ರಾವಣನೀತಾಯಾಃ ಸೀತಾಯಾಃ ಶತ್ರುಕರ್ಶನಃ ।
ಇಯೇಷ ಪದಮನ್ವೇಷ್ಟುಂ ಚಾರಣಾಚರಿತೇ ಪಥಿ ॥ ೧
ದುಷ್ಕರಂ ನಿಷ್ಪ್ರತಿದ್ವಂದ್ವಂ ಚಿಕೀರ್ಷನ್ ಕರ್ಮ ವಾನರಃ ।
ಸಮುದಗ್ರಶಿರೋಗ್ರೀವೋ ಗವಾಂ ಪತಿರಿವಾಬಭೌ ॥ ೨

ಸುಂದರಕಾಂಡ

ಸರ್ಗ ೧

ಹನುಮಂತನು ಸಮುದ್ರವನ್ನು ಲಂಘಿಸುವುದು. ದಾರಿಯಲ್ಲಿ ಮೈನಾಕನೊಡನೆ
ಮಾತಾಡಿ ಸುರಸೆಯನ್ನು ಪರಾಜಯಗೊಳಿಸಿ
ಸಿಂಹಿಕೆಯನ್ನು ಸಂಹರಿಸುವುದು.

ಆನಂತರ ಶತ್ರುಸಂಹಾರಕನಾದ ಹನುಮಂತನು ರಾವಣನಿಂದ ಅಪಹರಿಸಲ್ಪಟ್ಟ ಸೀತಾದೇವಿಯು ಇದ್ದ ಸ್ಥಳವನ್ನು ಹುಡುಕುವುದಕ್ಕಾಗಿ ಆಕಾಶ ಮಾರ್ಗದಲ್ಲಿ ಪ್ರಯಾಣಮಾಡಬೇಕೆಂದು ಉದ್ದೇಶಿಸಿದನು (೧). ಇತರರಿಗೆ ಅಸಾಧ್ಯವಾದ ಆ ಸಾಹಸಕಾರ್ಯವನ್ನು ಮಾಡಲುದ್ದೇಶಿಸಿ, ಕತ್ತನ್ನು ಮೇಲಕ್ಕೆತ್ತಿ ನಿಂತಿದ್ದ ಅವನು ಒಂದು ಮಹಾವೃಷಭದಂತೆ ಕಂಡನು (೨).

ಅಥ ವೈದೂರ್ಯವರ್ಣೇಷು ಶಾದ್ವಲೇಷು ಮಹಾಬಲಃ ।
ಧೀರಃ ಸಲಿಲಕಲ್ಪೇಷು ವಿಚಚಾರ ಯಥಾಸುಖಮ್ ॥ ೩
ದ್ವಿಜಾನ್ ವಿತ್ರಾಸಯನ್ ಧೀಮಾನುರಸಾ ಪಾದಪಾನ್ ಹರನ್ ।
ಮೃಗಾಂಶ್ಚ ಸುಬಹೂನ್ನಿಘ್ನನ್ ಪ್ರವೃದ್ಧ ಇವ ಕೇಸರೀ ॥ ೪
ನೀಲಲೋಹಿತಮಾಂಜಿಷ್ಠಪತ್ರವರ್ಣೈಃ ಸಿತಾಸಿತೈಃ ।
ಸ್ವಭಾವವಿಹಿತೈಶ್ಚಿತ್ರೈರ್ಧಾತುಭಿಃ ಸಮಲಂಕೃತಮ್ ॥ ೫
ಕಾಮರೂಪಿಭಿರಾವಿಷ್ಟಮಭೀಕ್ಷ್ಣಂ ಸಪರಿಚ್ಛದೈಃ ।
ಯಕ್ಷಕಿನ್ನರಗಂಧರ್ವೈರ್ದೇವಕಲ್ಪೈಶ್ಚ ಪನ್ನಗೈಃ ॥ ೬
ಸ ತಸ್ಯ ಗಿರಿವರ್ಯಸ್ಯ ತಲೇ ನಾಗವರಾಯುತೇ ।
ತಿಷ್ಠನ್ ಕಪಿವರಸ್ತತ್ರ ಹ್ರದೇ ನಾಗ ಇವಾಬಭೌ ॥ ೭
ಸ ಸೂರ್ಯಾಯ ಮಹೇಂದ್ರಾಯ ಪವನಾಯ ಸ್ವಯಂಭುವೇ ।
ಭೂತೇಭ್ಯಶ್ಚಾಂಜಲಿಂ ಕೃತ್ವಾ ಚಕಾರ ಗಮನೇ ಮತಿಮ್ ॥ ೮
ಅಂಜಲಿಂ ಪ್ರಾಙ್ಮುಖಃ ಕುರ್ವನ್ ಪವನಾಯಾತ್ಮಯೋನಯೇ ।
ತತೋ ಹಿ ವವೃಧೇ ಗಂತುಂ ದಕ್ಷಿಣೋ ದಕ್ಷಿಣಾಂ ದಿಶಮ್ ॥ ೯

ಮಹಾಬಲಾಢ್ಯನಾದ ಆ ಧೀರನು ವೈಡೂರ್ಯಮಣಿಯಂತೆ ಸ್ವಲ್ಪ ಹಸುರಾಗಿ, ಸಮುದ್ರಜಲದಂತೆ ಹರಡಿದ್ದ ಹುಲ್ಲುಗಾವಲಿನಲ್ಲಿ ಯಥೇಷ್ಟವಾಗಿ ತಿರುಗಾಡುತ್ತ ಅಲ್ಲಿದ್ದ ಹಕ್ಕಿಗಳನ್ನು ಹೆದರಿಸಿ ಓಡಿಸಿದನು. ಎದೆಯಿಂದಲೇ ಮರಗಳನ್ನು ತಳ್ಳಿ ಬೀಳಿಸುತ್ತ, ಮೃಗಗಳನ್ನು ಕೊಲ್ಲುತ್ತ ಕೊಬ್ಬಿದ ಸಿಂಹದಂತೆ ಮೆರೆದನು (೩–೪). ಆ ಪರ್ವತಪ್ರದೇಶವು ಕಪ್ಪು, ಕೆಂಪು, ಬಿಳುಪು ಮುಂತಾದ ನಾನಾ ಬಣ್ಣದ ನೈಸರ್ಗಿಕ ಧಾತುಗಳಿಂದ ರಂಜಿತವಾಗಿತ್ತು. ಕಾಮರೂಪಿಗಳಾದ ಯಕ್ಷ, ಕಿನ್ನರ, ಗಂಧರ್ವ ಮೊದಲಾದ ದೇವತೆಗಳು ಅಲ್ಲಿ ವಿಹರಿಸುತ್ತಿದ್ದರು. ಕಪಿಶ್ರೇಷ್ಠನಾದ ಆಂಜನೇಯನು ಆ ಸ್ಥಳದಲ್ಲಿ, ಮಡುವಿನಲ್ಲಿ ನಿಂತಿರುವ ಮದ್ದಾನೆಯಂತೆ ಕಂಗೊಳಿಸಿದನು (೫–೭). ಅವನು ಸೂರ್ಯ, ಇಂದ್ರ, ವಾಯು, ಬ್ರಹ್ಮ ಮೊದಲಾದ ನಾನಾ ದೇವತೆಗಳಿಗೆ ನಮಸ್ಕಾರಮಾಡಿ, ಪೂರ್ವದಿಕ್ಕಿಗೆ ಅಭಿಮುಖನಾಗಿ ನಿಂತು, ತನ ಜನಕನಾದ ವಾಯುದೇವನಿಗೆ ವಂದಿಸಿ, ದಕ್ಷಿಣದಿಕ್ಕಿಗೆ ಪ್ರಯಾಣಮಾಡುವುದಕ್ಕಾಗಿ ತನ್ನ

ಪ್ಲವಂಗಪ್ರವರೈರ್ದೃಷ್ಟಃ ಪ್ಲವನೇ ಕೃತನಿಶ್ಚಯಃ ।
ವವೃಧೇ ರಾಮವೃದ್ಧ್ಯರ್ಥಂ ಸಮುದ್ರ ಇವ ಪರ್ವಸು ॥ ೧೦
ನಿಷ್ಪ್ರಮಾಣಶರೀರಃ ಸನ್ ಲಿಲಂಘಯಿಷುರರ್ಣವಮ್ ।
ಬಾಹುಭ್ಯಾಂ ಪೀಡಯಾಮಾಸ ಚರಣಾಭ್ಯಾಂ ಚ ಪರ್ವತಮ್ ॥ ೧೧
ಸ ಚಚಾಲಾಚಲಶ್ಚಾಪಿ ಮುಹೂರ್ತಂ ಕಪಿಪೀಡಿತಃ ।
ತರೂಣಾಂ ಪುಷ್ಪಿತಾಗ್ರಾಣಾಂ ಸರ್ವಂ ಪುಷ್ಪಮಶಾತಯತ್ ॥ ೧೨
ತೇನ ಪಾದಪಮುಕ್ತೇನ ಪುಷ್ಪೌಘೇಣ ಸುಗಂಧಿನಾ ।
ಸರ್ವತಃ ಸಂವೃತಃ ಶೈಲೋ ಬಭೌ ಪುಷ್ಪಮಯೋ ಯಥಾ ॥ ೧೩
ತೇನ ಚೋತ್ತಮವೀರ್ಯೇಣ ಪೀಡ್ಯಮಾನಃ ಸ ಪರ್ವತಃ ।
ಸಲಿಲಂ ಸಂಪ್ರಸುಸ್ರಾವ ಮದಂ ಮತ್ತ ಇವ ದ್ವಿಪಃ ॥ ೧೪
ಪೀಡ್ಯಮಾನಸ್ತು ಬಲಿನಾ ಮಹೇಂದ್ರಸ್ತೇನ ಪರ್ವತಃ ।
ರೀತೀರ್ನಿರ್ವರ್ತಯಾಮಾಸ ಕಾಂಚನಾಂಜನರಾಜತೀಃ ॥ ೧೫
ಮುಮೋಚ ಚ ಶಿಲಾಃ ಶೈಲೋ ವಿಶಾಲಾಃ ಸುಮನಃಶಿಲಾಃ ।
ಮಧ್ಯಮೇನಾರ್ಚಿಷಾ ಜುಷ್ಟೋ ಧೂಮರಾಜೀರಿವಾನಲಃ ॥ ೧೬

ದೇಹವನ್ನು ಬೆಳೆಸತೊಡಗಿದನು (೮-೯). ಕಪಿನಾಯಕರೆಲ್ಲರೂ ನೋಡುತ್ತಿರಲು ಶ್ರೀರಾಮನ ಕಾರ್ಯವನ್ನು ಸಾಧಿಸುವುದಕ್ಕಾಗಿ ದೃಢಸಂಕಲ್ಪಮಾಡಿದ ಹನುಮಂತನು, ಹುಣ್ಣಿಮೆ ಅಮಾವಾಸ್ಯೆಗಳೆಂಬ ಪರ್ವಕಾಲದಲ್ಲಿ ಸಮುದ್ರವು ಉಬ್ಬುವಂತೆ ಉಬ್ಬುತ್ತಿದ್ದನು (೧೦). ಅದ್ಭುತಾಕಾರವಾಗಿ ತನ್ನ ದೇಹವನ್ನು ಬೆಳೆಸಿದ ಮೇಲೆ ಪರೀಕ್ಷಾರ್ಥವಾಗಿ ಕೈಗಳಿಂದ ಒಮ್ಮೆ ಮಹೇಂದ್ರ ಪರ್ವತವನ್ನು ಗುದ್ದಿ ಕಾಲುಗಳಿಂದ ಒದ್ದನು (೧೧). ಆಗ ಅಚಲವೆನಿಸಿದ ಪರ್ವತವು ಕ್ಷಣಕಾಲ ನಡುಗಿ ಹೋಯಿತು. ಮರಗಳಲ್ಲಿದ್ದ ಹೂಗಳೆಲ್ಲ ಉದುರಿಹೋದುವು. ಸುಗಂಧವನ್ನು ಬೀರುವ ಪುಷ್ಪರಾಶಿಯಿಂದ ಆ ಬೆಟ್ಟವು ಮುಚ್ಚಿ ಹೂವಿನಬೆಟ್ಟದಂತೆ ಕಂಗೊಳಿಸಿತು. (೧೨-೧೩). ಮದ್ದಾನೆಯಿಂದ ಮದೋದಕವು ಸುರಿಯುವಂತೆ, ವೀರಾಗ್ರಣಿಯಾದ ಹನುಮಂತನಿಂದ ಪೀಡಿತವಾದ ಆ ಪರ್ವತದಿಂದ, ನೀರು ಉಕ್ಕಿ ಹರಿಯಲಾರಂಭಿಸಿತು. ಸುವರ್ಣಮಯವೂ ರಜತಮಯವೂ ಆದ ಅನೇಕ ಬಂಡೆಗಳು ಸೀಳಿಹೋಗಿ ವಿವಿಧ ವರ್ಣದ ನೀರು ಉಕ್ಕತೊಡಗಿತು (೧೪-೧೫).

★

ಗಿರಿಣಾ ಪೀಡ್ಯಮಾನೇನ ಪೀಡ್ಯಮಾನಾನಿ ಸರ್ವತಃ ।
ಗುಹಾವಿಷ್ಟಾನಿ ಭೂತಾನಿ ವಿನೇದುರ್ವಿಕೃತೈಃ ಸ್ವರೈಃ ॥ ೧೭
ಸ ಮಹಾಸತ್ತ್ವಸಂನಾದಃ ಶೈಲಪೀಡಾನಿಮಿತ್ತಜಃ ।
ಪೃಥಿವೀಂ ಪೂರಯಾಮಾಸ ದಿಶಶ್ಚೋಪವನಾನಿ ಚ ॥ ೧೮
ಶಿರೋಭಿಃ ಪೃಥುಭಿಃ ಸರ್ಪಾ ವ್ಯಕ್ತಸ್ವಸ್ತಿಕಲಕ್ಷಣೈಃ ।
ವಮಂತಃ ಪಾವಕಂ ಘೋರಂ ದದಂಶುರ್ದಶನೈಃ ಶಿಲಾಃ ॥ ೧೯
ತಾಸ್ತದಾ ಸವಿಷೈರ್ದಷ್ಟಾಃ ಕುಪಿತೈಸ್ತೈರ್ಮಹಾಶಿಲಾಃ ।
ಜಜ್ವಲುಃ ಪಾವಕೋದ್ದೀಪ್ತಾ ಬಿಭಿದುಶ್ಚ ಸಹಸ್ರಧಾ ॥ ೨೦
ಯಾನಿ ಚೌಷಧಜಾಲಾನಿ ತಸ್ಮಿನ್ ಜಾತಾನಿ ಪರ್ವತೇ ।
ವಿಷಘ್ನಾನ್ಯಪಿ ನಾಗಾನಾಂ ನ ಶೇಕುಃ ಶಮಿತುಂ ವಿಷಮ್ ॥ ೨೧
ಭಿದ್ಯತೇಽಯಂ ಗಿರಿರ್ಭೂತೈರಿತಿ ಮತ್ವಾ ತಪಸ್ವಿನಃ ।
ತ್ರಸ್ತಾ ವಿದ್ಯಾಧರಾಸ್ತಸ್ಮಾದುತ್ಪೇತುಃ ಸ್ತ್ರೀಗಣೈಃ ಸಹ ॥ ೨೨
ಪಾನಭೂಮಿಗತಂ ಹಿತ್ವಾ ಹೈಮಮಾಸವಭಾಜನಮ್ ।
ಪಾತ್ರಾಣಿ ಚ ಮಹಾರ್ಹಾಣಿ ಕರಕಾಂಶ್ಚ ಹಿರಣ್ಮಯಾನ್ ॥ ೨೩

ಮಣಿಶಿಲೆಯಿಂದ ಕೂಡಿದ ದೊಡ್ಡ ದೊಡ್ಡ ಬಂಡೆಗಳು, ಅಗ್ನಿಜ್ವಾಲೆಯಿಂದೊಡಗೂಡಿದ ಹೊಗೆಯ ರಾಶಿಯಂತೆ ಉರುಳಿಬೀಳುತ್ತಿದ್ದವು (೧೬). ಹನುಮಂತನ ಗುದ್ದಿನಿಂದ ಪರ್ವತವು ಜಜ್ಜಿ ಹೋಗಲು, ಗುಹೆಗಳಲ್ಲಿ ಸಿಕ್ಕಿಕೊಂಡ ಮೃಗಗಳು ದೈನ್ಯದಿಂದ ಅರಚಿಕೊಳ್ಳುತ್ತಿದ್ದವು. ಆ ಮೃಗಗಳ ಆರ್ತನಾದವು ದಿಕ್ಕುದಿಕ್ಕುಗಳಿಗೂ ಹಬ್ಬಿ ಸುತ್ತಲೂ ಇದ್ದ ಅರಣ್ಯಗಳನ್ನು ಮೊಳಗಿಸಿಬಿಟ್ಟಿತು (೧೭–೧೮). ಸರ್ಪಗಳು ಸ್ವಸ್ತಿಕ ಚಿಹ್ನಾಂಕಿತವಾದ ಹೆಡೆಗಳನ್ನು ಮೇಲೆತ್ತಿ ಕ್ರೋಧದಿಂದ ಬುಸುಗುಟ್ಟುತ್ತಾ ಕಲ್ಲುಬಂಡೆಗಳನ್ನು ಕಚ್ಚಿದವು. ಕಚ್ಚಿದ ರಭಸಕ್ಕೆ ಬಂಡೆಗಳು ಚೂರುಚೂರಾದವು (೧೯–೨೦). ವಿಷಹಾರಿಗಳಾದ ಎಷ್ಟೋ ದಿವ್ಯ ಮೂಲಿಕೆಗಳು ಅಲ್ಲಿದ್ದರೂ ಸರ್ಪಗಳ ವಿಷಜ್ವಾಲೆಯು ತಣಿಯಲಿಲ್ಲ (೨೧). ಈ ಪರ್ವತವು ಭೂತಬಾಧೆಯಿಂದ ಸೀಳಿಹೋಗುತ್ತಿರಬೇಕೆಂದು ಭಾವಿಸಿ ಅಲ್ಲಿದ್ದ ತಪಸ್ವಿಗಳು ಆಕಾಶಕ್ಕೆ ಹಾರಿಬಿಟ್ಟರು. ವಿಹಾರಾರ್ಥವಾಗಿ ಬಂದಿದ್ದ ವಿದ್ಯಾಧರರು ಅನೇಕ ಬಗೆಯ ಚಿನ್ನದ ಪಾತ್ರೆಗಳನ್ನೂ ನಾನಾ ಬಗೆಯ ಭಕ್ಷ್ಯಭೋಜ್ಯಗಳನ್ನೂ

ಲೇಹ್ಯಾನುಚ್ಚಾವಚಾನ್ ಭಕ್ಷ್ಯಾನ್ ಮಾಂಸಾನಿ ವಿವಿಧಾನಿ ಚ ।
ಆರ್ಷಭಾಣಿ ಚ ಚರ್ಮಾಣಿ ಖಡ್ಗಾಂಶ್ಚ ಕನಕತ್ಸರೂನ್ ॥ ೨೪
ಕೃತಕಂಠಗುಣಾಃ ಕ್ಷೀಬಾ ರಕ್ತಮಾಲ್ಯಾನುಲೇಪನಾಃ ।
ರಕ್ತಾಕ್ಷಾಃ ಪುಷ್ಕರಾಕ್ಷಾಶ್ಚ ಗಗನಂ ಪ್ರತಿಪೇದಿರೇ ॥ ೨೫
ಹಾರನೂಪುರಕೇಯೂರಪಾರಿಹಾರ್ಯಧರಾಃ ಸ್ತ್ರಿಯಃ ।
ವಿಸ್ಮಿತಾಃ ಸಸ್ಮಿತಾಸ್ತಸ್ಥುರಾಕಾಶೇ ರಮಣೈಃ ಸಹ ॥ ೨೬
ದರ್ಶಯಂತೋ ಮಹಾವಿದ್ಯಾಂ ವಿದ್ಯಾಧರಮಹರ್ಷಯಃ ।
ಸಪ್ರಿಯಾಸ್ತಸ್ಥುರಾಕಾಶೇ ವೀಕ್ಷಾಂಚಕ್ರುಶ್ಚ ಪರ್ವತಮ್ ॥ ೨೭
ಶುಶ್ರುವುಶ್ಚ ತದಾ ಶಬ್ದಮೃಷೀಣಾಂ ಭಾವಿತಾತ್ಮನಾಮ್ ।
ಚಾರಣಾನಾಂ ಚ ಸಿದ್ಧಾನಾಂ ಸ್ಥಿತಾನಾಂ ವಿಮಲೇಽಂಬರೇ ॥ ೨೮
ಏಷ ಪರ್ವತಸಂಕಾಶೋ ಹನೂಮಾನ್ ಮಾರುತಾತ್ಮಜಃ ।
ತಿತೀರ್ಷತಿ ಮಹಾವೇಗಃ ಸಾಗರಂ ಮಕರಾಲಯಮ್ ॥ ೨೯
ರಾಮಾರ್ಥಂ ವಾನರಾರ್ಥಂ ಚ ಚಿಕೀರ್ಷನ್ ಕರ್ಮ ದುಷ್ಕರಮ್ ।
ಸಮುದ್ರಸ್ಯ ಪರಂ ಪಾರಂ ದುಷ್ಪ್ರಾಪಂ ಪ್ರಾಪ್ತುಮಿಚ್ಛತಿ ॥ ೩೦

ಗುರಾಣಿಗಳನ್ನೂ ಚಿನ್ನದ ಹಿಡಿಯ ಖಡ್ಗಗಳನ್ನೂ ಅಲ್ಲಲ್ಲಿಯೇ ಬಿಟ್ಟು ತಮ್ಮ ಕಾಂತೆಯರೊಂದಿಗೆ ಭಯಗ್ರಸ್ತರಾಗಿ ಆಕಾಶದಲ್ಲಿ ಹಾರಿ ನಿಂತರು. ಹಾರ ನೂಪುರ ಮುಂತಾದ ಆಭರಣಗಳನ್ನು ಧರಿಸಿದ ಕಮಲನೇತ್ರೆಯರಾದ ಮಧುಮತ್ತ ವಿದ್ಯಾಧರಿಯರು ವಿಸ್ಮಿತರಾಗಿ ಮಂದಹಾಸವನ್ನು ಬೀರುತ್ತ ತಮ್ಮ ಕಾಂತರೊಂದಿಗೆ ಆಕಾಶದಲ್ಲಿ ನಿಂತರು. ವಿದ್ಯಾಧರರು ಅಣಿಮಾದಿ ಸಿದ್ಧಿಯ ಮಹಿಮೆಯಿಂದ ಪ್ರಿಯಾಸಹಿತರಾಗಿ ಗಗನತಳದಲ್ಲಿ ನಿಂತು, ಆ ಬೆಟ್ಟವನ್ನೇ ನೋಡತೊಡಗಿದರು (೨೨–೨೭). ಆ ಸಮಯದಲ್ಲಿ ಮಹಾತ್ಮರಾದ ಋಷಿಗಳೂ ಚಾರಣರೂ ಸಿದ್ಧರೂ ಆಕಾಶದಲ್ಲಿ ನಿಂತು ''ಈ ಪರ್ವತಾಕಾರನಾದ ಹನುಮಂತನು ಮಹಾವೇಗದಿಂದ ಸಮುದ್ರವನ್ನು ದಾಟಬೇಕೆಂದು ಸನ್ನಾಹಮಾಡುತ್ತಿದ್ದಾನೆ (೨೮–೨೯). ಶ್ರೀರಾಮ ನಿಗೋಸ್ಕರ ಒಂದು ಅಸಾಧ್ಯವಾದ ಸಾಹಸವನ್ನು ಮಾಡಲು ಉದ್ಯೋಗಿಸಿ, ಸಮುದ್ರದ ಆಚೆಯ ದಡಕ್ಕೆ ಹೋಗಿ ಸೇರಬೇಕೆಂದು ಬಯಸಿದ್ದಾನೆ'' ಎಂದು ತಮ್ಮಲ್ಲಿಯೇ ಮಾತನಾಡಿಕೊಳ್ಳುತ್ತಿದ್ದರು. ವಿದ್ಯಾಧರರು ಆ ತಪಸ್ವಿಗಳ ಮಾತು

ಇತಿ ವಿದ್ಯಾಧರಾಃ ಶ್ರುತ್ವಾ ವಚಸ್ತೇಷಾಂ ತಪಸ್ವಿನಾಮ್ ।
ತಮಪ್ರಮೇಯಂ ದದೃಶುಃ ಪರ್ವತೇ ವಾನರರ್ಷಭಮ್ ॥ ೩೧

ದುಧುವೇ ಚ ಸ ರೋಮಾಣಿ ಚಕಂಪೇ ಚಾಚಲೋಪಮಃ ।
ನನಾದ ಸುಮಹಾನಾದಂ ಸ ಮಹಾನಿವ ತೋಯದಃ ॥ ೩೨

ಆನುಪೂರ್ವ್ಯೇಣ ವೃತ್ತಂ ಚ ಲಾಂಗೂಲಂ ರೋಮಭಿಶ್ಚಿತಮ್ ।
ಉತ್ಪತಿಷ್ಯನ್ ವಿಚಿಕ್ಷೇಪ ಪಕ್ಷಿರಾಜ ಇವೋರಗಮ್ ॥ ೩೩

ತಸ್ಯ ಲಾಂಗೂಲಮಾವಿದ್ಧಮಾತ್ತವೇಗಸ್ಯ ಪೃಷ್ಠತಃ ।
ದದೃಶೇ ಗರುಡೇನೇವ ಹ್ರಿಯಮಾಣೋ ಮಹೋರಗಃ ॥ ೩೪

ಬಾಹೂ ಸಂಸ್ತಂಭಯಾಮಾಸ ಮಹಾಪರಿಘಸನ್ನಿಭೌ ।
ಸಸಾದ ಚ ಕಪಿಃ ಕಟ್ಯಾಂ ಚರಣೌ ಸಂಚುಕೋಚ ಚ ॥ ೩೫

ಸಂಹೃತ್ಯ ಚ ಭುಜೌ ಶ್ರೀಮಾಂಸ್ತಥೈವ ಚ ಶಿರೋಧರಾಮ್ ।
ತೇಜಃ ಸತ್ತ್ವಂ ತಥಾ ವೀರ್ಯಮಾವಿವೇಶ ಸ ವೀರ್ಯವಾನ್ ॥ ೩೬

ಮಾರ್ಗಮಾಲೋಕಯನ್ ದೂರಾದೂರ್ಧ್ವಂ ಪ್ರಣಿಹಿತೇಕ್ಷಣಃ ।
ರುರೋಧ ಹೃದಯೇ ಪ್ರಾಣಾನಾಕಾಶಮವಲೋಕಯನ್ ॥ ೩೭

ಗಳನ್ನು ಕೇಳಿ, ಅಸದೃಶನಾದ ಆ ಕಪಿವೀರನು ಪರ್ವತದ ಮೇಲೆ ನಿಂತಿರುವುದನ್ನು ನೋಡಿದರು (೩೦–೩೧). ಪರ್ವತಾಕಾರನಾದ ಆಂಜನೇಯನು ತನ್ನ ರೋಮಗಳನ್ನು ಒದರಿ, ಮಹಾಮೇಘದಂತೆ ಒಂದುಸಲ ಗರ್ಜಿಸಿದನು. ಗರುಡನು ಸರ್ಪವನ್ನು ಬೀಸುವ ಹಾಗೆ, ರೋಮಗಳಿಂದ ವ್ಯಾಪ್ತನಾಗಿದ್ದ ದುಂಡನೆಯ ತನ್ನ ಬಾಲವನ್ನು ಆಡಿಸಿದನು. ಗರುಡನು ಒಯ್ಯುತ್ತಿರುವ ಘಟಸರ್ಪದಂತೆ ಆ ಬಾಲವು ಕಾಣಿಸಿತು (೩೨–೩೪). ಆಮೇಲೆ ದೊಡ್ಡ ಪರಿಘಾಯುಧಗಳಂತಿದ್ದ ಕೈಗಳನ್ನು ಪರ್ವತದ ಮೇಲೆ ದೃಢವಾಗಿ ಊರಿ, ಸೊಂಟವನ್ನು ಕುಗ್ಗಿಸಿ, ಕಾಲುಗಳನ್ನು ಸ್ವಲ್ಪ ಬಾಗಿಸಿದನು. ಭುಜಗಳನ್ನೂ ಶಿರಸ್ಸನ್ನೂ ಕೊಂಚ ತಗ್ಗಿಸಿ ಆ ಕಪಿ ವೀರನು ತೇಜಸ್ಸನ್ನೂ ಬಲವನ್ನೂ ಅಂತಶ್ಶಕ್ತಿಯನ್ನೂ ತನ್ನಲ್ಲಿ ಆವೇಶಮಾಡಿಕೊಂಡನು (೩೫–೩೬). ತಾನು ಹೋಗಬೇಕಾದ ಮಾರ್ಗದಲ್ಲಿ ಬಹು ದೂರದವರೆಗೆ ದೃಷ್ಟಿಯನ್ನು ಬೀರಿ ಗಗನವನ್ನು ನೋಡುತ್ತ ಉಸಿರನ್ನು ಬಿಗಿಹಿಡಿದನು.

ಪದ್ಭ್ಯಾಂ ದೃಢಮವಸ್ಥಾನಂ ಕೃತ್ವಾ ಸ ಕಪಿಕುಂಜರಃ ।
ನಿಕುಂಚ್ಯ ಕರ್ಣೌ ಹನುಮಾನುತ್ಪತಿಷ್ಯನ್ ಮಹಾಬಲಃ ॥ ೩೮
ವಾನರಾನ್ ವಾನರಶ್ರೇಷ್ಠ ಇದಂ ವಚನಮಬ್ರವೀತ್ ।
ಯಥಾ ರಾಘವನಿರ್ಮುಕ್ತಃ ಶರಃ ಶ್ವಸನವಿಕ್ರಮಃ ॥ ೩೯
ಗಚ್ಛೇತ್ತದ್ವದ್ಗಮಿಷ್ಯಾಮಿ ಲಂಕಾಂ ರಾವಣಪಾಲಿತಾಮ್ ।
ನ ಹಿ ದ್ರಕ್ಷ್ಯಾಮಿ ಯದಿ ತಾಂ ಲಂಕಾಯಾಂ ಜನಕಾತ್ಮಜಾಮ್ ॥ ೪೦
ಅನೇನೈವ ಹಿ ವೇಗೇನ ಗಮಿಷ್ಯಾಮಿ ಸುರಾಲಯಮ್ ।
ಯದಿ ವಾ ತ್ರಿದಿವೇ ಸೀತಾಂ ನ ದ್ರಕ್ಷ್ಯಾಮಿ ಕೃತಶ್ರಮಃ ॥ ೪೧
ಬದ್ಧ್ವಾ ರಾಕ್ಷಸರಾಜಾನಮಾನಯಿಷ್ಯಾಮಿ ರಾವಣಮ್ ।
ಸರ್ವಥಾ ಕೃತಕಾರ್ಯೋಽಹಮೇಷ್ಯಾಮಿ ಸಹ ಸೀತಯಾ ॥ ೪೨
ಆನಯಿಷ್ಯಾಮಿ ವಾ ಲಂಕಾಂ ಸಮುತ್ಪಾಟ್ಯ ಸರಾವಣಾಮ್ ।
ಏವಮುಕ್ತ್ವಾ ತು ಹನುಮಾನ್ ವಾನರಾನ್ ವಾನರೋತ್ತಮಃ ॥ ೪೩
ಉತ್ಪಪಾತಾಥ ವೇಗೇನ ವೇಗವಾನವಿಚಾರಯನ್ ।
ಸುಪರ್ಣಮಿವ ಚಾತ್ಮಾನಂ ಮೇನೇ ಸ ಕಪಿಕುಂಜರಃ ॥ ೪೪

ಆ ಕಪಿಕುಂಜರನು ಪಾದಗಳನ್ನು ಗಟ್ಟಿಯಾಗಿ ಊರಿ ಕಿವಿಗಳನ್ನು ಕೊಂಚ ಮುದುರಿಸಿದನು (೩೭–೩೮). ಅನಂತರ ಕಪಿಗಳನ್ನು ನೋಡುತ್ತ ''ಎಲೈ ವಾನರರೇ, ಶ್ರೀರಾಮನು ಬಿಟ್ಟ ಬಾಣದಹಾಗೆ ವಾಯುವೇಗದಿಂದ ನೇರವಾಗಿ ಲಂಕಾಪಟ್ಟಣಕ್ಕೆ ಹೋಗಿಬಿಡುತ್ತೇನೆ! ಲಂಕೆಯಲ್ಲಿ ಜನಕಸುತೆಯನ್ನು ನಾನು ಕಾಣದಿದ್ದರೆ, ಇದೇ ವೇಗದಿಂದ ದೇವಲೋಕಕ್ಕೆ ಹೋಗುವೆನು (೩೯–೪೧). ಅಲ್ಲಿಯೂ ಸೀತಾದೇವಿಯು ದೊರಕದಿದ್ದರೆ ಪುನಃ ಲಂಕೆಗೆ ಬಂದು ರಾವಣನನ್ನು ಹೆಡಮುರಿಗೆ ಕಟ್ಟಿ ಎಳೆದುಕೊಂಡು ಬರುತ್ತೇನೆ. ಸರ್ವಥಾ ನಾನು ಸೀತಾದೇವಿಯನ್ನು ದರ್ಶನಮಾಡಿಯೇ ಬರುತ್ತೇನೆ. ಇಲ್ಲವೆ, ರಾವಣಸಹಿತವಾಗಿ ಲಂಕೆಯನ್ನು ಹೊತ್ತು ತರುತ್ತೇನೆ. ಕಾರ್ಯವನ್ನು ಸಾಧಿಸಿಕೊಂಡು ಬರುವುದು ನಿಶ್ಚಯ!'' ಎಂದು ಹೇಳಿದನು (೪೨–೪೩). ಇಷ್ಟು ಹೇಳಿ ಆ ವಾನರೋತ್ತಮನು ಏನನ್ನೂ ಲೆಕ್ಕಿಸದೆ ಗಗನಮಾರ್ಗದಲ್ಲಿ ನೆಗೆದುಬಿಟ್ಟನು. ತಾನು ಗರುಡನೆಂದೇ ಭಾವಿಸಿಕೊಂಡನು (೪೪). ಹೀಗೆ ಹನುಮಂತನು ಮೇಲಕ್ಕೆ ನೆಗೆದೊಡನೆ, ಆ

ಸಮುತ್ಪತತಿ ತಸ್ಮಿಂಸ್ತು ವೇಗಾತ್ತೇ ನಗರೋಹಿಣಃ ।
ಸಂಹೃತ್ಯ ವಿಟಪಾನ್ ಸರ್ವಾನ್ ಸಮುತ್ಪೇತುಃ ಸಮಂತತಃ ॥ ೪೫

ಸ ಮತ್ತಕೋಯಷ್ಟಿಭಕಾನ್ ಪಾದಪಾನ್ ಪುಷ್ಪಶಾಲಿನಃ ।
ಉದ್ವಹನ್ನೂರುವೇಗೇನ ಜಗಾಮ ವಿಮಲೇಽಂಬರೇ ॥ ೪೬

ಊರುವೇಗೋದ್ಧತಾ ವೃಕ್ಷಾ ಮುಹೂರ್ತಂ ಕಪಿಮನ್ವಯುಃ ।
ಪ್ರಸ್ಥಿತಂ ದೀರ್ಘಮಧ್ವಾನಂ ಸ್ವಬಂಧುಮಿವ ಬಾಂಧವಾಃ ॥ ೪೭

ತದೂರುವೇಗೋನ್ಮಥಿತಾಃ ಸಾಲಾಶ್ಚಾನ್ಯೇ ನಗೋತ್ತಮಾಃ ।
ಅನುಜಗ್ಮುರ್ಹನೂಮಂತಂ ಸೈನ್ಯಾ ಇವ ಮಹೀಪತಿಮ್ ॥ ೪೮

ಸುಪುಷ್ಪಿತಾಗ್ರೈರ್ಬಹುಭಿಃ ಪಾದಪೈರನ್ವಿತಃ ಕಪಿಃ ।
ಹನೂಮಾನ್ ಪರ್ವತಾಕಾರೋ ಬಭೂವಾದ್ಭುತದರ್ಶನಃ ॥ ೪೯

ಸಾರವಂತೋಽಥ ಯೇ ವೃಕ್ಷಾ ನ್ಯಮಜ್ಜನ್ ಲವಣಾಂಭಸಿ ।
ಭಯಾದಿವ ಮಹೇಂದ್ರಸ್ಯ ಪರ್ವತಾ ವರುಣಾಲಯೇ ॥ ೫೦

ವೇಗಕ್ಕೆ ಬೆಟ್ಟದಲ್ಲಿ ಬೆಳೆದಿದ್ದ ಮರಗಿಡಗಳು ಕೊಂಬೆಗಳ ಸಹಿತವಾಗಿ ಹಾರಿಹೋದವು. ಹನುಮಂತನನ್ನು ಅನುಸರಿಸಿ ಹಾರಿಹೋದ ಆ ಪುಷ್ಪಿತವೃಕ್ಷಗಳು, ಬಹುದೂರ ಪ್ರಯಾಣ ಹೊರಟವನನ್ನು ಕಳಿಸಲು ಹೋಗುವ ಬಂಧುಗಳಂತೆ ಕಾಣುತ್ತಿದ್ದವು! (೪೫–೪೭). ಹನುಮಂತನ ತೊಡೆಗಳ ವೇಗದಿಂದ ಕಿತ್ತುಹೋದ ಸಾಲವೃಕ್ಷಗಳು, ಮಹಾರಾಜನನ್ನು ಹಿಂಬಾಲಿಸುವ ಸೈನಿಕರಂತೆ ಅವನ ಹಿಂದೆ ಹೋದವು. ಹೀಗೆ ಅನೇಕ ವೃಕ್ಷಗಳಿಂದ ಪರಿವೃತನಾದ ಆಂಜನೇಯನು ನೋಡುವುದಕ್ಕೆ ಆಶ್ಚರ್ಯವನ್ನುಂಟುಮಾಡುತ್ತಿದ್ದನು (೪೮–೪೯). ಆಗ ದೇವೇಂದ್ರನ ಭಯದಿಂದ ಪರ್ವತಗಳು ಸಮುದ್ರದಲ್ಲಿ ಮುಳುಗಿಕೊಂಡಂತೆ, ಭಾರವಾಗಿದ್ದ ಮರಗಳು ಸಮುದ್ರದಲ್ಲಿ ಮುಳುಗಿಹೋದವು (೫೦). ಮರಗಳಿಂದ ಉದುರಿದ ನಾನಾ ಬಗೆಯ ಹೂಗಳಿಂದ ಮುಚ್ಚಿಹೋದ ಹನುಮಂತನು, ಮಿಂಚುಹುಳುಗಳಿಂದ ತುಂಬಿದ ಪರ್ವತದಂತೆ ಕಂಗೊಳಿಸಿದನು. ಸ್ವಲ್ಪಹೊತ್ತಿನಲ್ಲಿ ವೇಗದ ರಭಸದಿಂದ ತಪ್ಪಿಸಿಕೊಂಡ ವೃಕ್ಷಗಳು ಬಂಧುವನ್ನು ಕಳಿಸಿಕೊಟ್ಟ ಸ್ನೇಹಿತರಂತೆ, ತಮ್ಮ ಪ್ರಯಾಣವನ್ನು ನಿಲ್ಲಿಸಿ ಸಮುದ್ರದಲ್ಲಿ ಬಿದ್ದುಹೋದವು

ಸ ನಾನಾಕುಸುಮೈಃ ಕೀರ್ಣಃ ಕಪಿಃ ಸಾಂಕುರಕೋರಕೈಃ ।
ಶುಶುಭೇ ಮೇಘಸಂಕಾಶಃ ಖದ್ಯೋತೈರಿವ ಪರ್ವತಃ ॥ ೫೧

ವಿಮುಕ್ತಾಸ್ತಸ್ಯ ವೇಗೇನ ಮುಕ್ತ್ವಾ ಪುಷ್ಪಾಣಿ ತೇ ದ್ರುಮಾಃ ।
ಅವಶೀರ್ಯಂತ ಸಲಿಲೇ ನಿವೃತ್ತಾಃ ಸುಹೃದೋ ಯಥಾ ॥ ೫೨

ಲಘುತ್ವೇನೋಪಪನ್ನಂ ತದ್ವಿಚಿತ್ರಂ ಸಾಗರೇಽಪತತ್ ।
ದ್ರುಮಾಣಾಂ ವಿವಿಧಂ ಪುಷ್ಪಂ ಕಪಿವಾಯುಸಮೀರಿತಮ್ ॥ ೫೩

ಪುಷ್ಪೌಘೇನಾನುವಿದ್ಧೇನ ನಾನಾವರ್ಣೇನ ವಾನರಃ ।
ಬಭೌ ಮೇಘ ಇವೋದ್ಯನ್ ವೈ ವಿದ್ಯುದ್ಗಣವಿಭೂಷಿತಃ ॥ ೫೪

ತಸ್ಯ ವೇಗಸಮಾಧೂತೈಃ ಪುಷ್ಪೈಸ್ತೋಯಮದೃಶ್ಯತ ।
ತಾರಾಭಿರಭಿರಾಮಾಭಿರುದಿತಾಭಿರಿವಾಂಬರಮ್ ॥ ೫೫

ತಸ್ಯಾಂಬರಗತೌ ಬಾಹೂ ದದೃಶಾತೇ ಪ್ರಸಾರಿತೌ ।
ಪರ್ವತಾಗ್ರಾದ್ವಿನಿಷ್ಕ್ರಾಂತೌ ಪಂಚಾಸ್ಯಾವಿವ ಪನ್ನಗೌ ॥ ೫೬

ಪಿಬನ್ನಿವ ಬಭೌ ಶ್ರೀಮಾನ್ ಸೋರ್ಮಿಮಾಲಂ ಮಹಾರ್ಣವಮ್ ।
ಪಿಪಾಸುರಿವ ಚಾಕಾಶಂ ದದೃಶೇ ಸ ಮಹಾಕಪಿಃ ॥ ೫೭

(೫೧–೫೨). ಅನಂತರ ಮರದಿಂದ ಉದುರಿಹೋಗಿದ್ದ ನಾನಾ ಬಣ್ಣದ ಹೂಗಳು ಮೆಲ್ಲನೆ ನೀರಿಗೆ ಬೀಳುತ್ತಿದ್ದವು. ವಿವಿಧ ವರ್ಣದ ಹೂಗಳಿಂದ ಆವೃತನಾದ ಹನುಮಂತನು ವಿದ್ಯುಲ್ಲತೆಗಳಿಂದ ಸಮೇತನಾದ ಮೇಘದಂತೆ ಪ್ರಕಾಶಿಸುತ್ತಿದ್ದನು (೫೩–೫೪). ಹೂವಿನ ರಾಶಿಯು ಸಮುದ್ರದ ಮೇಲೆ ಬೀಳಲಾಗಿ, ಆ ಸಮುದ್ರವು ಸುಂದರ ನಕ್ಷತ್ರಗಳಿಂದ ರಂಜಿಸುವ ಅಂಬರದಂತೆ ಚೆಲುವಾಯಿತು (೫೫). ಹನುಮಂತನು ಆಕಾಶದಲ್ಲಿ ತನ್ನ ಕೈಗಳನ್ನು ನೀಳವಾಗಿ ಚಾಚಿದ್ದನು. ಅವು ಪರ್ವತಾಗ್ರದಿಂದ ಹೊರಕ್ಕೆ ಬಂದ ಐದು ಹೆಡೆಯ ಸರ್ಪಗಳಂತೆ ಇದ್ದವು (೫೬). ಆಕಾಶದಲ್ಲಿ ಹಾರಿಹೋಗುತ್ತಿದ್ದ ಆ ಮಹಾಕಪಿಯನ್ನು ನೋಡಿದರೆ ಉಕ್ಕೇರುತ್ತಿದ್ದ ಮಹಾಸಾಗರವನ್ನೇ ಇವನೇನು ಕುಡಿದುಬಿಡುತ್ತಾನೊ, ಆಕಾಶವನ್ನೇ ನುಂಗಿ ಬಿಡುತ್ತಾನೊ ಎನಿಸುತ್ತಿದ್ದಿತು (೫೭). ಮಿಂಚಿನಂತೆ ಹೊಳೆಯುತ್ತಿದ್ದ ಅವನ

ತಸ್ಯ ವಿದ್ಯುತ್ಪ್ರಭಾಕಾರೇ ವಾಯುಮಾರ್ಗಾನುಸಾರಿಣಃ ।
ನಯನೇ ಸಂಪ್ರಕಾಶೇತೇ ಪರ್ವತಸ್ಥಾವಿವಾನಲೌ ॥ ೫೮

ಪಿಂಗೇ ಪಿಂಗಾಕ್ಷಮುಖ್ಯಸ್ಯ ಬೃಹತೀ ಪರಿಮಂಡಲೇ ।
ಚಕ್ಷುಷೀ ಸಂಪ್ರಕಾಶೇತೇ ಚಂದ್ರಸೂರ್ಯಾವಿವೋದಿತೌ ॥ ೫೯

ಮುಖಂ ನಾಸಿಕಯಾ ತಸ್ಯ ತಾಮ್ರಯಾ ತಾಮ್ರಮಾಬಭೌ ।
ಸಂಧ್ಯಯಾ ಸಮಭಿಸ್ಪೃಷ್ಟಂ ಯಥಾ ಸೂರ್ಯಸ್ಯ ಮಂಡಲಮ್ ॥ ೬೦

ಲಾಂಗೂಲಂ ಚ ಸಮಾವಿದ್ಧಂ ಪ್ಲವಮಾನಸ್ಯ ಶೋಭತೇ ।
ಅಂಬರೇ ವಾಯುಪುತ್ರಸ್ಯ ಶಕ್ರಧ್ವಜ ಇವೋಚ್ಛ್ರಿತಃ ॥ ೬೧

ಲಾಂಗೂಲಚಕ್ರೇಣ ಮಹಾನ್ ಶುಕ್ಲದಂಷ್ಟ್ರೋऽನಿಲಾತ್ಮಜಃ ।
ವ್ಯರೋಚತ ಮಹಾಪ್ರಾಜ್ಞಃ ಪರಿವೇಷೀವ ಭಾಸ್ಕರಃ ॥ ೬೨

ಸ್ಫಿಗ್ದೇಶೇನಾಭಿತಾಮ್ರೇಣ ರರಾಜ ಸ ಮಹಾಕಪಿಃ ।
ಮಹತಾ ದಾರಿತೇನೇವ ಗಿರಿರ್ಗೈರಿಕಧಾತುನಾ ॥ ೬೩

ತಸ್ಯ ವಾನರಸಿಂಹಸ್ಯ ಪ್ಲವಮಾನಸ್ಯ ಸಾಗರಮ್ ।
ಕಕ್ಷಾಂತರಗತೋ ವಾಯುರ್ಜೀಮೂತ ಇವ ಗರ್ಜತಿ ॥ ೬೪

ಕಣ್ಣುಗಳು ಪರ್ವತದಲ್ಲಿ ಉರಿಯುವ ಕಾಳ್ಗಿಚ್ಚಿನಂತೆಯೂ ಸೂರ್ಯ ಚಂದ್ರರಂತೆಯೂ ಬೆಳಗುತ್ತಿದ್ದವು. ಕೆಂಪನೆಯ ಮೂಗಿನಿಂದ ಯುಕ್ತವಾದ ಅವನ ಮುಖವು ಸಂಧ್ಯಾಕಾಲದ ಸೂರ್ಯನಂತೆ ಜ್ವಲಿಸುತ್ತಿತ್ತು (೫೮–೬೦). ನೆಟ್ಟಗೆ ಮೇಲೆತ್ತಿದ್ದ ಆ ಮಹಾಕಪಿಯ ಬಾಲವು ಆಕಾಶದಲ್ಲಿ ಎತ್ತಿ ನಿಲ್ಲಿಸಿರುವ ಇಂದ್ರ ಧ್ವಜದಂತೆ ಶೋಭಿಸುತ್ತಿತ್ತು. ಒಂದೊಂದು ಸಲ ಅವನು ಬಾಲವನ್ನು ಚಕ್ರಾಕಾರ ವಾಗಿ ಮಡಿಸುತ್ತಿದ್ದನು. ಆ ಸಮಯದಲ್ಲಿ ಪರಿವೇಷ* ಯುಕ್ತನಾದ ಸೂರ್ಯನಂತೆ ವಿರಾಜಿಸುತ್ತಿದ್ದನು. ಅವನ ಕಟಿಪ್ರದೇಶವು ಬಹು ಕೆಂಪಗಿದ್ದುದರಿಂದ, ಮಣಿಶಿಲಾದಿ ರಕ್ತವರ್ಣದ ಧಾತುಗಳಿಂದ ಕೂಡಿದ ಪರ್ವತದಂತೆ ಅವನು ಕಾಣುತ್ತಿದ್ದನು (೬೧–೬೩). ಸಾಗರವನ್ನು ಲಂಘಿಸುತ್ತಿದ್ದ ಆ ವಾನರಸಿಂಹನ ಬಗಲುಗಳ

---

* ಸೂರ್ಯನ ಸುತ್ತಲೂ ಮಂಡಲಾಕಾರವಾಗಿ ಕಾಣುವ ಗುರುತು.

ಖೇ ಯಥಾ ನಿಪತಂತ್ಯುಲ್ಕಾ ಹ್ಯುತ್ತರಾಂತಾದ್ವಿನಿಃಸೃತಾಃ ।
ದೃಶ್ಯತೇ ಸಾನುಬಂಧಾ ಚ ತಥಾ ಸ ಕಪಿಕುಂಜರಃ ॥ ೬೫

ಪತತ್ಪತಂಗಸಂಕಾಶೋ ವ್ಯಾಯತಃ ಶುಶುಭೇ ಕಪಿಃ ।
ಪ್ರವೃದ್ಧ ಇವ ಮಾತಂಗಃ ಕಕ್ಷ್ಯಯಾ ಬದ್ಧ್ಯಮಾನಯಾ ॥ ೬೬

ಉಪರಿಷ್ಟಾಚ್ಛರೀರೇಣ ಛಾಯಯಾ ಚಾವಗಾಢಯಾ ।
ಸಾಗರೇ ಮಾರುತಾವಿಷ್ಟಾ ನೌರಿವಾಸೀತ್ತದಾ ಕಪಿಃ ॥ ೬೭

ಯಂ ಯಂ ದೇಶಂ ಸಮುದ್ರಸ್ಯ ಜಗಾಮ ಸ ಮಹಾಕಪಿಃ ।
ಸ ಸ ತಸ್ಯೋರುವೇಗೇನ ಸೋನ್ಮಾದ ಇವ ಲಕ್ಷ್ಯತೇ ॥ ೬೮

ಸಾಗರಸ್ಯೋರ್ಮಿಮಾಲಾನಾಮುರಸಾ ಶೈಲವರ್ಷ್ಮಣಾ ।
ಅಭಿಘ್ನಂಸ್ತು ಮಹಾವೇಗಃ ಪುಪ್ಲುವೇ ಸ ಮಹಾಕಪಿಃ ॥ ೬೯

ಮಧ್ಯದಲ್ಲಿ ಗಾಳಿಯು ರಭಸದಿಂದ ಬೀಸುತ್ತ ಮೇಘದಂತೆ ಘೋರೆಂದು ಶಬ್ದಮಾಡುತ್ತಿದ್ದಿತು. ಬಾಲಸಹಿತವಾದ ಒಂದು ಘೋರ ಉಲ್ಕೆಯು ಪ್ರಜ್ವಲಿಸುತ್ತ ಉತ್ತರದಿಕ್ಕಿನಿಂದ ಎರಗುತ್ತಿದೆಯೊ ಎಂಬಂತೆ ಆ ವಾನರಶ್ರೇಷ್ಠನು ಪ್ರಯಾಣ ಮಾಡುತ್ತಿದ್ದನು (೬೪–೬೫). ಮಹಾವೇಗದಿಂದ ಚಲಿಸುತ್ತಿರುವ ಸೂರ್ಯನೋ ಎಂಬಂತೆ ಶೋಭಿಸುತ್ತಿದ್ದ ಹನುಮಂತನು ಸೊಂಟಕ್ಕೆ ವಸ್ತ್ರವನ್ನು ಬಿಗಿದು ಕಟ್ಟಿದ್ದನು. ದೀರ್ಘಾಕಾರನಾದ ಆತನು ನಡುಕಟ್ಟಿನಿಂದ ಬಿಗಿದಿರುವ ಮದ್ದಾನೆಯಂತೆ ಕಾಣಿಸುತ್ತಿದ್ದನು. ಅಂತರಿಕ್ಷದಲ್ಲಿದ್ದ ಅವನ ದೇಹವೂ ಸಮುದ್ರದ ನೀರಿನಲ್ಲಿ ಮೂಡಿದ ನೆರಳೂ ಏಕಾಕಾರವಾಗಿ ಮುಂದೆ ಮುಂದೆ ಸಾಗುತ್ತಿರಲು, ಒಂದು ದೊಡ್ಡ ಹಡಗು ಸಮುದ್ರಯಾನ ಮಾಡುವಂತೆ ಕಾಣಿಸುತ್ತಿದ್ದಿತು (೬೬–೬೭). ಅವನು ಸಮುದ್ರದ ಯಾವ ಯಾವ ಪ್ರದೇಶದ ಮೇಲುಗಡೆ ರಭಸದಿಂದ ಹಾರಿಹೋಗುತ್ತಿದ್ದನೋ, ಆ ಪ್ರದೇಶದ ನೀರು ಅವನ ವೇಗದ ಹೊಡೆತಕ್ಕೆ ಸಿಕ್ಕಿ ಕ್ಷೋಭೆಗೊಂಡು ಉಕ್ಕಿ ನೊರೆಯುಗುಳುತ್ತ ಮೊರೆಯುತ್ತಲಿದ್ದುದರಿಂದ, ಸಮುದ್ರವು ಅಪಸ್ಮಾರ ರೋಗಿಯಂತೆ ಕಾಣಿಸಿತು (೬೮). ಅತ್ಯುನ್ನತವಾಗಿ ಏಳುತ್ತಿದ್ದ ಸಮುದ್ರದ ಅಲೆಗಳನ್ನು ಆಂಜನೇಯನು ಶಿಲಾಮಯವಾದ ಪರ್ವತದಂತಿದ್ದ ತನ್ನ ಎದೆಯಿಂದಲೇ ಸೀಳುತ್ತ ಮುಂದೆ ಸಾಗುತ್ತಿದ್ದನು (೬೯).

ಕಪಿವಾತಶ್ಚ ಬಲವಾನ್ ಮೇಘವಾತಶ್ಚ ನಿಃಸೃತಃ ।
ಸಾಗರಂ ಭೀಮನಿರ್ಘೋಷಂ ಕಂಪಯಾಮಾಸತುರ್ಭೃಶಮ್ ॥ ೭೦

ವಿಕರ್ಷನ್ನೂರ್ಮಿಜಾಲಾನಿ ಬೃಹಂತಿ ಲವಣಾಂಭಸಃ ।
ಪುಪ್ಲುವೇ ಕಪಿಶಾರ್ದೂಲೋ ವಿಕಿರನ್ನಿವ ರೋದಸೀ ॥ ೭೧

ಮೇರುಮಂದರಸಂಕಾಶಾನುದ್ಗತಾನ್ ಸ ಮಹಾರ್ಣವೇ ।
ಅತ್ಯಕ್ರಾಮನ್ಮಹಾವೇಗಸ್ತರಂಗಾನ್ ಗಣಯನ್ನಿವ ॥ ೭೨

ತಸ್ಯ ವೇಗಸಮುದ್ಧೂತಂ ಜಲಂ ಸಜಲದಂ ತದಾ ।
ಅಂಬರಸ್ಥಂ ವಿಬಭ್ರಾಜ ಶಾರದಾಭ್ರಮಿವಾತತಮ್ ॥ ೭೩

ತಿಮಿನಕ್ರಝಷಾಃ ಕೂರ್ಮಾ ದೃಶ್ಯಂತೇ ವಿವೃತಾಸ್ತದಾ ।
ವಸ್ತ್ರಾಪಕರ್ಷಣೇನೇವ ಶರೀರಾಣಿ ಶರೀರಿಣಾಮ್ ॥ ೭೪

ಪ್ಲವಮಾನಂ ಸಮೀಕ್ಷ್ಯಾಥ ಭುಜಂಗಾಃ ಸಾಗರಾಲಯಾಃ ।
ವ್ಯೋಮ್ನಿ ತಂ ಕಪಿಶಾರ್ದೂಲಂ ಸುಪರ್ಣ ಇತಿ ಮೇನಿರೇ ॥ ೭೫

ಹನುಮಂತನು ಹಾರುತ್ತಿದ್ದ ಬಿರುಸಿನಿಂದ ಉತ್ಪನ್ನವಾದ ವಾಯುವೂ ಮೇಘದ ವಾಯುವೂ ಸೇರಿ ಭಯಂಕರವಾಗಿ ಧ್ವನಿಮಾಡುತ್ತ ಸಾಗರವನ್ನು ಉಲ್ಲೋಲಕಲ್ಲೋಲವಾಗಿ ತುಳುಕಿಸಿದವು (೭೦). ಬೃಹತ್ತರವಾದ ತರಂಗ ಮಾಲೆಗಳನ್ನು ತನ್ನೊಡನೆ ಎಳೆದೊಯ್ಯುತ್ತಿದ್ದ ಆಂಜನೇಯನು ಭೂಮ್ಯಾಕಾಶ ಗಳನ್ನು ಕಿತ್ತೆಸೆಯುತ್ತಿರುವನೋ ಎಂಬಂತೆ ಕಾಣಿಸಿದನು (೭೧). ಮೇರುಮಂದರ ಪರ್ವತಗಳಂತೆ ತರಂಗಗಳು ಸಮುದ್ರದಿಂದ ಮೇಲಕ್ಕೆ ಏಳುತ್ತಿರಲಾಗಿ, ಹನುಮಂತನು ಅವುಗಳನ್ನು ಎಣಿಸುತ್ತ ದಾಟಿಹೋಗುತ್ತಿರುವನೋ ಎನ್ನಿಸಿತು (೭೨). ಅವನ ವೇಗದಿಂದ ಸಮುದ್ರದ ಜಲವು ಆಕಾಶದಲ್ಲಿದ್ದ ಮೋಡಗಳವರೆಗೆ ಚಿಮ್ಮಿಹೋಗುತ್ತಿತ್ತು. ಸ್ವಚ್ಛವಾಗಿ ಬೆಳ್ಳಗಿದ್ದ ಆ ಜಲರಾಶಿಯು ಶರತ್ಕಾಲದ ಮೇಘ ದಂತೆ ಸುಂದರವಾಗಿ ರಂಜಿಸುತ್ತಿತ್ತು (೭೩). ಹೀಗೆ ನಿರಂತರವಾಗಿ ಸಮುದ್ರ ಜಲವೆಲ್ಲವೂ ಮೇಲಕ್ಕೆ ಚಿಮ್ಮಿ ಹೋಗುತ್ತಿದ್ದುದರಿಂದ, ಸಮುದ್ರದೊಳಗಿದ್ದ ಮೀನು, ಮೊಸಳೆ, ಆಮೆ ಮುಂತಾದ ಪ್ರಾಣಿಗಳು ಬಟ್ಟೆಯನ್ನು ಬಿಚ್ಚಿಹಾಕಿದ ಮನುಷ್ಯರ ಅವಯವಗಳಂತೆ ಸ್ಪಷ್ಟವಾಗಿ ಗೋಚರಿಸುತ್ತಿದ್ದವು (೭೪). ಗಗನ ಮಾರ್ಗದಲ್ಲಿ

ದಶಯೋಜನವಿಸ್ತೀರ್ಣಾ ತ್ರಿಂಶದ್ಯೋಜನಮಾಯತಾ ।
ಛಾಯಾ ವಾನರಸಿಂಹಸ್ಯ ಜಲೇ ಚಾರುತರಾಭವತ್ ॥ ೭೬
ಶ್ವೇತಾಭ್ರಘನರಾಜೀವ ವಾಯುಪುತ್ರಾನುಗಾಮಿನೀ ।
ತಸ್ಯ ಸಾ ಶುಶುಭೇ ಛಾಯಾ ವಿತತಾ ಲವಣಾಂಭಸಿ ॥ ೭೭
ಶುಶುಭೇ ಸ ಮಹಾತೇಜಾ ಮಹಾಕಾಯೋ ಮಹಾಕಪಿಃ ।
ವಾಯುಮಾರ್ಗೇ ನಿರಾಲಂಬೇ ಪಕ್ಷವಾನಿವ ಪರ್ವತಃ ॥ ೭೮
ಯೇನಾಸೌ ಯಾತಿ ಬಲವಾನ್ ವೇಗೇನ ಕಪಿಕುಂಜರಃ ।
ತೇನ ಮಾರ್ಗೇಣ ಸಹಸಾ ದ್ರೋಣೀಕೃತ ಇವಾರ್ಣವಃ ॥ ೭೯
ಆಪಾತೇ ಪಕ್ಷಿಸಂಘಾನಾಂ ಪಕ್ಷಿರಾಜ ಇವಾಬಭೌ ।
ಹನೂಮಾನ್ ಮೇಘಜಾಲಾನಿ ಪ್ರಕರ್ಷನ್ ಮಾರುತೋ ಯಥಾ ॥

ಹಾರಿಬರುತ್ತಿದ್ದ ಆ ಕಪಿಶಾರ್ದೂಲನನ್ನು ನೋಡಿ ಸಮುದ್ರದಲ್ಲಿದ್ದ ಸರ್ಪಗಳು, ಅವನು ಗರುಡನೇ ಇರಬೇಕೆಂದು ಹೆದರಿ ತತ್ತರಿಸಿಹೋದವು (೭೫). ಆ ವಾನರಸಿಂಹನ ನೆರಳು ಹತ್ತು ಯೋಜನ ಅಗಲವಾಗಿಯೂ ಮೂವತ್ತು ಯೋಜನ ಉದ್ದವಾಗಿಯೂ ಕಂಗೊಳಿಸುತ್ತಿತ್ತು. (ಹನುಮಂತನು ಹಾರುತ್ತಿದ್ದ ಸಮಯವು ಪ್ರಾತಃಕಾಲವಾದ್ದರಿಂದ ನೆರಳು ದೊಡ್ಡದಾಗಿತ್ತು) (೭೬). ಸ್ವಚ್ಛವಾದ ಸಮುದ್ರದ ನೀರಿನಮೇಲೆ ಬಿದ್ದ ಹನುಮಂತನ ನೆರಳು ಆಕಾಶದಲ್ಲಿರುವ ಮೇಘ ಮಂಡಲದಂತೆ ಅವನನ್ನೇ ಹಿಂಬಾಲಿಸಿ ಹೋಗುತ್ತಿದ್ದಿತು (೭೭). ಅತ್ಯಂತ ತೇಜಸ್ವಿಯೂ ಮಹಾಶರೀರವುಳ್ಳವನೂ ಆದ ವಾನರೋತ್ತಮನು ಆಕಾಶದಲ್ಲಿ ಹಾರಿಹೋಗುತ್ತಿರುವ ಪರ್ವತವೋ ಎಂಬಂತೆ ಕಾಣುತ್ತಿದ್ದನು (೭೮). ಬಲಶಾಲಿಯಾದ ಆ ಕಪಿಕುಂಜರನು ಯಾವ ಯಾವ ಪ್ರದೇಶದಲ್ಲಿ ಹಾರಿಹೋಗುತ್ತಿದ್ದನೋ, ಅಲ್ಲಿ ಸಮುದ್ರದ ನೀರು (ಅವನ ಒತ್ತಡದಿಂದ) ಉದ್ದಕ್ಕೂ ತಗ್ಗಿಹೋಗಿ ಸಮುದ್ರವೇ ಒಂದು ದೋಣಿಯಂತೆ ಕಾಣಿಸುತ್ತಿತ್ತು (೭೯). ಆತನು ಪಕ್ಷಿಗಳಿಗೆ ದಾರಿಯಾದ ಅಂತರಿಕ್ಷದಲ್ಲಿ ಪಕ್ಷಿರಾಜನಂತೆ ಹಾರುತ್ತ, ವಾಯುವಿನಂತೆ ಮೋಡಗಳನ್ನು ತನ್ನೊಡನೆ ಸೆಳೆದೊಯ್ಯುತ್ತಿದ್ದನು. ಮೇಘಪಂಕ್ತಿಗಳ ಮಧ್ಯದಲ್ಲಿ ನುಗ್ಗಿ ಬರುತ್ತಿದ್ದುದರಿಂದ, ಚಂದ್ರನಂತೆ ಒಮ್ಮೊಮ್ಮೆ ಮೇಘಗಳಲ್ಲಿ ಮರೆಯಾಗುತ್ತಲೂ ಇನ್ನೊಮ್ಮೆ ಹೊರಗೆ ಪ್ರಕಾಶಿಸುತ್ತಲೂ ಇದ್ದನು. ಅವನ

ಪ್ರವಿಶನ್ನಭ್ರಜಾಲಾನಿ ನಿಷ್ಪತಂಶ್ಚ ಪುನಃ ಪುನಃ ।
ಪ್ರಚ್ಛನ್ನಶ್ಚ ಪ್ರಕಾಶಶ್ಚ ಚಂದ್ರಮಾ ಇವ ಲಕ್ಷ್ಯತೇ ॥ ೮೧

ಪಾಂಡರಾರುಣವರ್ಣಾನಿ ನೀಲಮಾಂಜಿಷ್ಠಕಾನಿ ಚ ।
ಕಪಿನಾ ಕೃಷ್ಯಮಾಣಾನಿ ಮಹಾಭ್ರಾಣಿ ಚಕಾಶಿರೇ ॥ ೮೨

ಪ್ಲವಮಾನಂ ತು ತಂ ದೃಷ್ಟ್ವಾ ಪ್ಲವಗಂ ತ್ವರಿತಂ ತದಾ ।
ವವೃಷುಃ ಪುಷ್ಪವರ್ಷಾಣಿ ದೇವಗಂಧರ್ವಚಾರಣಾಃ ॥ ೮೩

ತತಾಪ ನ ಹಿ ತಂ ಸೂರ್ಯಃ ಪ್ಲವಂತಂ ವಾನರೇಶ್ವರಮ್ ।
ಸಿಷೇವೇ ಚ ತದಾ ವಾಯೂ ರಾಮಕಾರ್ಯಾರ್ಥಸಿದ್ಧಯೇ ॥ ೮೪

ಋಷಯಸ್ತುಷ್ಟುವುಶ್ಚೈನಂ ಪ್ಲವಮಾನಂ ವಿಹಾಯಸಾ ।
ಜಗುಶ್ಚ ದೇವಗಂಧರ್ವಾಃ ಪ್ರಶಂಸಂತೋ ಮಹೌಜಸಮ್ ॥ ೮೫

ನಾಗಾಶ್ಚ ತುಷ್ಟುವುರ್ಯಕ್ಷಾ ರಕ್ಷಾಂಸಿ ವಿಬುಧಾಃ ಖಗಾಃ ।
ಪ್ರೇಕ್ಷ್ಯಾಕಾಶೇ ಕಪಿವರಂ ಸಹಸಾ ವಿಹತಕ್ಲಮಮ್ ॥ ೮೬

ತಸ್ಮಿನ್ ಪ್ಲವಗಶಾರ್ದೂಲೇ ಪ್ಲವಮಾನೇ ಹನೂಮತಿ ।
ಇಕ್ಷ್ವಾಕುಕುಲಮಾನಾರ್ಥೀ ಚಿಂತಯಾಮಾಸ ಸಾಗರಃ ॥ ೮೭

ಸಾಹಾಯ್ಯಂ ವಾನರೇಂದ್ರಸ್ಯ ಯದಿ ನಾಹಂ ಹನೂಮತಃ ।
ಕರಿಷ್ಯಾಮಿ ಭವಿಷ್ಯಾಮಿ ಸರ್ವವಾಚ್ಯೋ ವಿವಕ್ಷತಾಮ್ ॥ ೮೮

ಸೆಳೆತಕ್ಕೆ ಸಿಕ್ಕಿದ ನಾನಾ ಬಣ್ಣದ ಮೋಡಗಳು ಬಹು ಸುಂದರವಾಗಿ ಕಾಣುತ್ತಿದ್ದವು (೮೦–೮೨). ರಾಮಕಾರ್ಯಾರ್ಥವಾಗಿ ಹಾರುತ್ತಿದ್ದ ಆ ಕಪಿವೀರನ ಮೇಲೆ, ದೇವ ಗಂಧರ್ವ ಚಾರಣರು ಪುಷ್ಪವೃಷ್ಟಿಯನ್ನು ಸುರಿಸಿದರು. ಸೂರ್ಯನು ತಾಪವನ್ನುಂಟುಮಾಡಲಿಲ್ಲ. ವಾಯುವು ಸುಖಕರವಾಗಿ ಬೀಸಿದನು. ಋಷಿಗಳು ಹೊಗಳಿದರು. ದೇವಗಂಧರ್ವಾದಿಗಳು ಸ್ತೋತ್ರ ಮಾಡಿದರು (೮೩-೮೬). ಆ ಸಮಯದಲ್ಲಿ ಇಕ್ಷ್ವಾಕುವಂಶಕ್ಕೆ ಮೇಲ್ಮೆಯನ್ನು ಬಯಸುವ ಸಮುದ್ರರಾಜನಿಗೆ ಒಂದು ಆಲೋಚನೆಯುಂಟಾಯಿತು. ‘ಈ ವಾನರೇಂದ್ರನಿಗೆ ನಾನು ಸಹಾಯ ಮಾಡದಿದ್ದರೆ ಪ್ರಪಂಚದಲ್ಲಿ ಎಲ್ಲರೂ ನನ್ನನ್ನು ನಿಂದಿಸಬಹುದು (೮೭–೮೮).

ಅಹಮಿಕ್ಷ್ವಾಕುನಾಥೇನ ಸಗರೇಣ ವಿವರ್ಧಿತಃ ।
ಇಕ್ಷ್ವಾಕುಸಚಿವಶ್ಚಾಯಂ ನಾವಸೀದಿತುಮರ್ಹತಿ ॥ ೮೯

ತಥಾ ಮಯಾ ವಿಧಾತವ್ಯಂ ವಿಶ್ರಮೇತ ಯಥಾ ಕಪಿಃ ।
ಶೇಷಂ ಚ ಮಯಿ ವಿಶ್ರಾಂತಃ ಸುಖೇನಾತಿಪತಿಷ್ಯತಿ ॥ ೯೦

ಇತಿ ಕೃತ್ವಾ ಮತಿಂ ಸಾಧ್ವೀಂ ಸಮುದ್ರಶ್ಛನ್ನಮಂಭಸಿ ।
ಹಿರಣ್ಯನಾಭಂ ಮೈನಾಕಮುವಾಚ ಗಿರಿಸತ್ತಮಮ್ ॥ ೯೧

ತ್ವಮಿಹಾಸುರಸಂಘಾನಾಂ ಪಾತಾಲತಲವಾಸಿನಾಮ್ ।
ದೇವರಾಜ್ಞಾ ಗಿರಿಶ್ರೇಷ್ಠ ಪರಿಘಃ ಸಂನಿವೇಶಿತಃ ॥ ೯೨

ತ್ವಮೇಷಾಂ ಜಾತವೀರ್ಯಾಣಾಂ ಪುನರೇವೋತ್ಪತಿಷ್ಯತಾಮ್ ।
ಪಾತಾಲಸ್ಯಾಪ್ರಮೇಯಸ್ಯ ದ್ವಾರಮಾವೃತ್ಯ ತಿಷ್ಠಸಿ ॥ ೯೩

ತಿರ್ಯಗೂರ್ಧ್ವಮಧಶ್ಚೈವ ಶಕ್ತಿಸ್ತೇ ಶೈಲ ವರ್ಧಿತುಮ್ ।
ತಸ್ಮಾತ್ ಸಂಚೋದಯಾಮಿ ತ್ವಾಮುತ್ತಿಷ್ಠ ನಗಸತ್ತಮ ॥ ೯೪

ಸ ಏಷ ಕಪಿಶಾರ್ದೂಲಸ್ತ್ವಾಮುಪೈಷ್ಯತಿ ವೀರ್ಯವಾನ್ ।
ಹನೂಮಾನ್ ರಾಮಕಾರ್ಯಾರ್ಥಂ ಭೀಮಕರ್ಮಾ ಖಮಾಪ್ಲುತಃ ॥ ೯೫

ಇಕ್ಷ್ವಾಕುವಂಶಕ್ಕೆ ಹಿರಿಯನಾದ ಸಗರಚಕ್ರವರ್ತಿಯಿಂದ ನಾನು ಅಭಿವೃದ್ಧಿಗೆ ಬಂದಿರುವೆನು. ಆ ವಂಶದಲ್ಲಿ ಜನಿಸಿದ ಶ್ರೀರಾಮನ ಕಾರ್ಯವನ್ನು ಸಾಧಿಸುವುದಕ್ಕಾಗಿ ಈ ಹನುಮಂತನು ಹೋಗುತ್ತಿದ್ದಾನೆ. ಈತನು ಇಷ್ಟು ಶ್ರಮಪಡುತ್ತಿರುವಾಗ ನಾನು ಸುಮ್ಮನಿರಬಾರದು. ಇವನು ಸ್ವಲ್ಪಕಾಲ ನನ್ನಲ್ಲಿ ವಿಶ್ರಮಿಸಿ ಸುಖವಾಗಿ ಮುಂದೆ ಪ್ರಯಾಣ ಮಾಡಲಿ.' ಸಮುದ್ರರಾಜನು ಹೀಗೆ ವಿಚಾರಮಾಡಿ, ತನ್ನಲ್ಲಿ ಮುಳುಗಿದ್ದ ಮೈನಾಕಪರ್ವತವನ್ನು ಕುರಿತು ಹೇಳಿದನು (೮೯–೯೧): "ಎಲೈ ಪರ್ವತಶ್ರೇಷ್ಠ, ಪಾತಾಳದಲ್ಲಿರುವ ರಾಕ್ಷಸರು ಮೇಲಕ್ಕೆ ಎದ್ದು ಬಾರದಂತೆ ದೇವೇಂದ್ರನು ನಿನ್ನನ್ನು ಅಡ್ಡಲಾಗಿ ಇಲ್ಲಿ ಇಟ್ಟಿರುವನು. ಸರ್ವತೋಮುಖವಾಗಿ ಬೆಳೆಯಬಲ್ಲ ಶಕ್ತಿ ನಿನಗಿದೆ. ಈಗ ಒಂದು ಕೆಲಸಕ್ಕಾಗಿ ನಿನ್ನನ್ನು ಪ್ರೋತ್ಸಾಹಿಸಬೇಕಾಗಿದೆ (೯೨–೯೪). ಕಪಿ ಶ್ರೇಷ್ಠನಾದ ಹನುಮಂತನು

ಅಸ್ಯ ಸಾಹ್ಯಂ ಮಯಾ ಕಾರ್ಯಮಿಕ್ಷ್ವಾಕುಹಿತವರ್ತಿನಃ ।
ಮಮ ಹೀಕ್ಷ್ವಾಕವಃ ಪೂಜ್ಯಾಃ ಪರಂ ಪೂಜ್ಯತಮಾಸ್ತವ ॥ ೯೬
ಕುರು ಸಾಚಿವ್ಯಮಸ್ಮಾಕಂ ನ ನಃ ಕಾರ್ಯಮತಿಕ್ರಮೇತ್ ।
ಕರ್ತವ್ಯಮಕೃತಂ ಕಾರ್ಯಂ ಸತಾಂ ಮನ್ಯುಮುದೀರಯೇತ್ ॥ ೯೭
ಸಲಿಲಾದೂರ್ಧ್ವಮುತ್ತಿಷ್ಠ ತಿಷ್ಠತ್ವೇಷ ಕಪಿಸ್ತ್ವಯಿ ।
ಅಸ್ಮಾಕಮತಿಥಿಶ್ಚೈವ ಪೂಜ್ಯಶ್ಚ ಪ್ಲವತಾಂ ವರಃ ॥ ೯೮
ಚಾಮೀಕರಮಹಾನಾಭ ದೇವಗಂಧರ್ವಸೇವಿತ ।
ಹನೂಮಾಂಸ್ತ್ವಯಿ ವಿಶ್ರಾಂತಸ್ತತಃ ಶೇಷಂ ಗಮಿಷ್ಯತಿ ॥ ೯೯
ಕಾಕುತ್ಸ್ಥಸ್ಯಾನೃಶಂಸ್ಯಂ ಚ ಮೈಥಿಲ್ಯಾಶ್ಚ ವಿವಾಸನಮ್* ।
ಶ್ರಮಂ ಚ ಪ್ಲವಗೇಂದ್ರಸ್ಯ ಸಮೀಕ್ಷ್ಯೋತ್ಥಾತುಮರ್ಹಸಿ ॥ ೧೦೦
ಹಿರಣ್ಯನಾಭೋ ಮೈನಾಕೋ ನಿಶಮ್ಯ ಲವಣಾಂಭಸಃ ।
ಉತ್ಪಪಾತ ಜಲಾತ್ತೂರ್ಣಂ ಮಹಾದ್ರುಮಲತಾಯುತಃ ॥ ೧೦೧
ಸ ಸಾಗರಜಲಂ ಭಿತ್ತ್ವಾ ಬಭೂವಾಭ್ಯುತ್ಥಿತಸ್ತದಾ ।
ಯಥಾ ಜಲಧರಂ ಭಿತ್ತ್ವಾ ದೀಪ್ತರಶ್ಮಿರ್ದಿವಾಕರಃ ॥ ೧೦೨

ರಾಮಕಾರ್ಯಾರ್ಥವಾಗಿ ಅಂತರಿಕ್ಷದಲ್ಲಿ ಹಾರಿ ಹೋಗುತ್ತಿದ್ದಾನೆ. ಇಕ್ಷ್ವಾಕು ವಂಶದವರಿಂದ ಉಪಕೃತನಾದ ನಾನು ಅವನಿಗೆ ಸಹಾಯಮಾಡಬೇಕು. ನನಗೆ ಇಕ್ಷ್ವಾಕುವಂಶದವರು ಪೂಜ್ಯರು. ನಿನಗೂ ಅತ್ಯಂತ ಪೂಜ್ಯರು. ಕರ್ತವ್ಯವನ್ನು ನೆರವೇರಿಸದಿದ್ದರೆ ಸಜ್ಜನರಿಗೆ ಕೋಪ ಉಂಟಾಗುವುದು (೯೫-೯೭). ಈ ಹನುಮಂತನು ನಮಗೆ ಅತಿಥಿಯಾಗಿರುವನು. ಆದ್ದರಿಂದ ನೀನು ಕೂಡಲೇ ನೀರಿನಿಂದ ಮೇಲಕ್ಕೇಳು. ಸ್ವಲ್ಪಕಾಲ ಅವನು ನಿನ್ನಲ್ಲಿ ಕುಳಿತು ವಿಶ್ರಮಿಸಿಕೊಂಡು ಮುಂದೆ ಪ್ರಯಾಣ ಮಾಡಲಿ. ಶ್ರೀರಾಮನ ಕಾರುಣ್ಯವನ್ನೂ, ಸೀತೆಗೆ ಒದಗಿರುವ ಕಷ್ಟವನ್ನೂ, ಅದಕ್ಕಾಗಿ ಹನುಮಂತನು ವಹಿಸಿರುವ ಶ್ರಮವನ್ನೂ ಪರ್ಯಾಲೋಚಿಸು'' (೯೮-೧೦೦). ಸಮುದ್ರರಾಜನ ಈ ಮಾತನ್ನು ಕೇಳಿ ಮೈನಾಕನು ತನ್ನಲ್ಲಿ ಇರುವ ದೊಡ್ಡ ದೊಡ್ಡ ಮರಬಳ್ಳಿಗಳೊಡನೆ, ಸೂರ್ಯನು ಮೇಘ ಮಂಡಲವನ್ನು ಭೇದಿಸಿಕೊಂಡು ಹೊರಕ್ಕೆ ಬರುವಂತೆ ಸಮುದ್ರಜಲವನ್ನು

---

* ೯೬ನೆಯ ಶ್ಲೋಕದಿಂದ ಈ ಸಾಲಿನವರೆಗೆ ಪ್ರಕ್ಷಿಪ್ತವೆಂದು ಕತಕವ್ಯಾಖ್ಯಾನದಲ್ಲಿ ಬರೆದಿದೆ.

ಸ ಮಹಾತ್ಮಾ ಮುಹೂರ್ತೇನ ಪರ್ವತಃ ಸಲಿಲಾವೃತಃ ।
ದರ್ಶಯಾಮಾಸ ಶೃಂಗಾಣಿ ಸಾಗರೇಣ ನಿಯೋಜಿತಃ ॥ ೧೦೩

ಶಾತಕುಂಭಮಯೈಃ ಶೃಂಗೈಃ ಸಕಿಂನರಮಹೋರಗೈಃ ।
ಆದಿತ್ಯೋದಯಸಂಕಾಶೈರಾಲಿಖದ್ಭಿರಿವಾಂಬರಮ್ ॥ ೧೦೪

ತಪ್ತಜಾಂಬೂನದೈಃ ಶೃಂಗೈಃ ಪರ್ವತಸ್ಯ ಸಮುತ್ಥಿತೈಃ ।
ಆಕಾಶಂ ಶಸ್ತ್ರಸಂಕಾಶಮಭವತ್ ಕಾಂಚನಪ್ರಭಮ್ ॥ ೧೦೫

ಜಾತರೂಪಮಯೈಃ ಶೃಂಗೈರ್ಭ್ರಾಜಮಾನೈಃ ಸ್ವಯಂಪ್ರಭೈಃ ।
ಆದಿತ್ಯಶತಸಂಕಾಶಃ ಸೋಽಭವದ್ಗಿರಿಸತ್ತಮಃ ॥ ೧೦೬

ತಮುತ್ಥಿತಮಸಂಗೇನ ಹನುಮಾನಗ್ರತಃ ಸ್ಥಿತಮ್ ।
ಮಧ್ಯೇ ಲವಣತೋಯಸ್ಯ ವಿಘ್ನೋಽಯಮಿತಿ ನಿಶ್ಚಿತಃ ॥ ೧೦೭

ಸ ತಮುಚ್ಛ್ರಿತಮತ್ಯರ್ಥಂ ಮಹಾವೇಗೋ ಮಹಾಕಪಿಃ ।
ಉರಸಾ ಪಾತಯಾಮಾಸ ಜೀಮೂತಮಿವ ಮಾರುತಃ ॥ ೧೦೮

ಸ ತಥಾ ಪಾತಿತಸ್ತೇನ ಕಪಿನಾ ಪರ್ವತೋತ್ತಮಃ ।
ಬುದ್ಧ್ವಾ ತಸ್ಯ ಕಪೇರ್ವೇಗಂ ಜಹರ್ಷ ಚ ನನಾದ ಚ ॥ ೧೦೯

ಭೇದಿಸಿಕೊಂಡು ಮೇಲೆದ್ದನು (೧೦೧–೧೦೨). ಸೂರ್ಯನಂತೆ ಹೊಳೆಯುತ್ತಿದ್ದ ಸುವರ್ಣಮಯವಾದ ಮೈನಾಕನ ಶಿಖರಗಳು ಸಮುದ್ರದಿಂದ ಮೇಲಕ್ಕೇರಲು ನೀಲವರ್ಣದ ಆಕಾಶವು ಚಿನ್ನದಂತೆ ಜಗ್ಗೆಂದು ಹೊಳೆಯಿತು. ಆ ಶಿಖರಗಳಲ್ಲಿ ಮಹಾಸರ್ಪಗಳೂ ಕಿನ್ನರರೂ ಇದ್ದರು. ಮೈನಾಕನು ಪ್ರಕಾಶಮಾನವಾದ ತನ್ನ ಶಿಖರಗಳಿಂದ, ಏಕಕಾಲದಲ್ಲಿ ಉದಯಿಸಿದ ನೂರಾರು ಸೂರ್ಯಮಂಡಲಗಳಂತೆ ಪ್ರಜ್ವಲಿಸುತ್ತಿದ್ದನು (೧೦೩–೧೦೬). ಇದ್ದಕ್ಕಿದ್ದಂತೆ ಮೇಲಕ್ಕೆದ್ದು ನಿಂತ ಆ ಬೆಟ್ಟವನ್ನು ನೋಡಿ, ಇದೇನೋ ನನಗೆ ಅಡ್ಡಿಯಾಗಿ ಬಂದಿತೆಂದೆಣಿಸಿ ಮಹಾ ಪರಾಕ್ರಮಿಯಾದ ಆಂಜನೇಯನು, ಬಿರುಗಾಳಿಯು ಮೇಘವನ್ನು ಅಪ್ಪಳಿಸುವಂತೆ ತನ್ನ ಎದೆಯಿಂದಲೇ ಮೈನಾಕನನ್ನು ಅಪ್ಪಳಿಸಿ ಕೆಡಹಿದನು (೧೦೭–೧೦೮). ಮೈನಾಕನು ಪೆಟ್ಟನ್ನು ತಡೆಯಲಾರದೆ ಬಿದ್ದುಹೋದರೂ, ಹನುಮಂತನ ಬಲವೈಭವಕ್ಕೆ ಸಂತೋಷಪಟ್ಟು ತಾನು ಬಂದ ಉದ್ದೇಶವನ್ನು ತಿಳಿಸುವುದಕ್ಕಾಗಿ ಕೂಗಿಕೊಂಡನು

ತಮಾಕಾಶಗತಂ ವೀರಮಾಕಾಶೇ ಸಮುಪಸ್ಥಿತಃ ।
ಪ್ರೀತೋ ಹೃಷ್ಟಮನಾ ವಾಕ್ಯಮಬ್ರವೀತ್ ಪರ್ವತಃ ಕಪಿಮ್ ॥ ೧೧೦
ಮಾನುಷಂ ಧಾರಯನ್ ರೂಪಮಾತ್ಮನಃ ಶಿಖರೇ ಸ್ಥಿತಃ ।
ದುಷ್ಕರಂ ಕೃತವಾನ್ ಕರ್ಮ ತ್ವಮಿದಂ ವಾನರೋತ್ತಮ ॥ ೧೧೧
ನಿಪತ್ಯ ಮಮ ಶೃಂಗೇಷು ವಿಶ್ರಮಸ್ವ ಯಥಾಸುಖಮ್ ।
ರಾಘವಸ್ಯ ಕುಲೇ ಜಾತೈರುದಧಿಃ ಪರಿವರ್ಧಿತಃ ॥ ೧೧೨
ಸ ತ್ವಾಂ ರಾಮಹಿತೇ ಯುಕ್ತಂ ಪ್ರತ್ಯರ್ಚಯತಿ ಸಾಗರಃ ।
ಕೃತೇ ಚ ಪ್ರತಿಕರ್ತವ್ಯಮೇಷ ಧರ್ಮಃ ಸನಾತನಃ ॥ ೧೧೩
ಸೋಽಯಂ ತತ್ಪ್ರತಿಕಾರಾರ್ಥೀ ತ್ವತ್ತಃ ಸಂಮಾನಮರ್ಹತಿ ।
ತ್ವನ್ನಿಮಿತ್ತಮನೇನಾಹಂ ಬಹುಮಾನಾತ್ಪ್ರಚೋದಿತಃ ॥ ೧೧೪
ಯೋಜನಾನಾಂ ಶತಂ ಚಾಪಿ ಕಪಿರೇಷ ಖಮಾಪ್ಲುತಃ ।
ತವ ಸಾನುಷು ವಿಶ್ರಾಂತಃ ಶೇಷಂ ಪ್ರಕ್ರಮತಾಮಿತಿ ॥ ೧೧೫
ತಿಷ್ಠ ತ್ವಂ ಹರಿಶಾರ್ದೂಲ ಮಯಿ ವಿಶ್ರಮ್ಯ ಗಮ್ಯತಾಮ್ ।
ತದಿದಂ ಗಂಧವತ್ ಸ್ವಾದು ಕಂದಮೂಲಫಲಂ ಬಹು ॥ ೧೧೬

---

(೧೦೯). ಅನಂತರ ಮನುಷ್ಯರೂಪವನ್ನು ಧರಿಸಿ ಆಕಾಶಮಾರ್ಗದಲ್ಲಿ ತನ್ನ ಶಿಖರಗಳ ಮೇಲೆ ಕಾಣಿಸಿಕೊಂಡು ಹನುಮಂತನನ್ನು ಕುರಿತು ಹೀಗೆಂದನು: ''ವಾನರೋತ್ತಮ, ಬೇರೊಬ್ಬರಿಗೆ ಅಸಾಧ್ಯವಾದ ಕಾರ್ಯವನ್ನು ನಡೆಸಲು ನೀನು ಉದ್ಯುಕ್ತನಾಗಿರುವೆ (೧೧೦-೧೧೧). ನನ್ನ ಶಿಖರಗಳ ಮೇಲೆ ಸ್ವಲ್ಪ ಹೊತ್ತು ವಿಶ್ರಮಿಸಿಕೊಂಡು ಹೋಗಬಾರದೆ? ಈ ಸಮುದ್ರರಾಜನು ರಘುವಂಶದ ರಾಜರಿಂದ ವೃದ್ಧಿಗೆ ಬಂದಿದ್ದಾನೆ. ರಘುವಂಶತಿಲಕನಾದ ಶ್ರೀರಾಮನ ಕಾರ್ಯಕ್ಕಾಗಿ ನೀನು ಹೊರಟಿದ್ದೀಯೆ. ಉಪಕಾರ ಮಾಡಿದವರಿಗೆ ಪ್ರತ್ಯುಪಕಾರ ಮಾಡುವುದು ಸನಾತನ ಧರ್ಮ. ಆದ್ದರಿಂದ ಸಮುದ್ರನು ನಿನಗೆ ಅತಿಥಿಸತ್ಕಾರ ಮಾಡಿ ಗೌರವಿಸಬೇಕೆಂದಿರುವನು. ಅವನು ಇದಕ್ಕಾಗಿಯೇ ನನ್ನನ್ನು ಕರೆದು 'ಈ ಕಪಿಶ್ರೇಷ್ಠನು ನೂರು ಯೋಜನಗಳನ್ನೂ ಒಂದೇ ನೆಗೆತಕ್ಕೆ ಹಾರಿಹೋಗಬೇಕೆಂದಿರುವನು. ಸ್ವಲ್ಪಕಾಲ ನಿನ್ನ ತಪ್ಪಲುಗಳಲ್ಲಿ ವಿಶ್ರಾಂತಿ ತೆಗೆದುಕೊಂಡು ಹೋಗುವಂತೆ ಕೇಳಿಕೊ' ಎಂದು ಹೇಳಿದ್ದಾನೆ (೧೧೨-೧೧೫). ಹೇ ಆಂಜನೇಯ,

ತದಾಸ್ವಾದ್ಯ ಹರಿಶ್ರೇಷ್ಠ ವಿಶ್ರಮ್ಯ ಶ್ವೋ ಗಮಿಷ್ಯಸಿ ।
ಅಸ್ಮಾಕಮಪಿ ಸಂಬಂಧಃ ಕಪಿಮುಖ್ಯ ತ್ವಯಾಸ್ತಿ ವೈ ॥ ೧೧೭
ಪ್ರಖ್ಯಾತಸ್ತ್ರಿಷು ಲೋಕೇಷು ಮಹಾಗುಣಪರಿಗ್ರಹಃ ।
ವೇಗವಂತಃ ಪ್ಲವಂತೋ ಯೇ ಪ್ಲವಗಾ ಮಾರುತಾತ್ಮಜ ॥ ೧೧೮
ತೇಷಾಂ ಮುಖ್ಯತಮಂ ಮನ್ಯೇ ತ್ವಾಮಹಂ ಕಪಿಕುಂಜರ ।
ಅತಿಥಿಃ ಕಿಲ ಪೂಜಾರ್ಹಃ ಪ್ರಾಕೃತೋಽಪಿ ವಿಜಾನತಾ ॥ ೧೧೯
ಧರ್ಮಂ ಜಿಜ್ಞಾಸಮಾನೇನ ಕಿಂ ಪುನರ್ಯಾದೃಶೋ ಭವಾನ್ ।
ತ್ವಂ ಹಿ ದೇವವರಿಷ್ಠಸ್ಯ ಮಾರುತಸ್ಯ ಮಹಾತ್ಮನಃ ॥ ೧೨೦
ಪುತ್ರಸ್ತಸ್ಯೈವ ವೇಗೇನ ಸದೃಶಃ ಕಪಿಕುಂಜರ ।
ಪೂಜಿತೇ ತ್ವಯಿ ಧರ್ಮಜ್ಞ ಪೂಜಾಂ ಪ್ರಾಪ್ನೋತಿ ಮಾರುತಃ ॥ ೧೨೧
ತಸ್ಮಾತ್ತ್ವಂ ಪೂಜನೀಯೋ ಮೇ ಶೃಣು ಚಾಪ್ಯತ್ರ ಕಾರಣಮ್ ।
ಪೂರ್ವಂ ಕೃತಯುಗೇ ತಾತ ಪರ್ವತಾಃ ಪಕ್ಷಿಣೋಽಭವನ್ ॥ ೧೨೨
ತೇಽಭಿಜಗ್ಮುರ್ದಿಶಃ ಸರ್ವಾ ಗರುಡಾನಿಲವೇಗಿನಃ ।
ತತಸ್ತೇಷು ಪ್ರಯಾತೇಷು ದೇವಸಂಘಾಃ ಸಹರ್ಷಿಭಿಃ ॥ ೧೨೩

ನನ್ನ ಶಿಖರದಮೇಲೆ ಕುಳಿತು ಆಯಾಸವನ್ನು ಪರಿಹರಿಸಿಕೊಂಡು ಮುಂದೆ ಹೋಗು. ಸುವಾಸನೆಯನ್ನು ಬೀರುವ ರುಚಿಕರವಾದ ಗಡ್ಡೆಗೆಣಸುಗಳೂ ಹಣ್ಣು ಹಂಪಲುಗಳೂ ಇಲ್ಲಿ ಬೇಕಾದಷ್ಟಿವೆ. ಅವುಗಳನ್ನೆಲ್ಲಾ ಆಸ್ವಾದಿಸುತ್ತ ಈ ದಿನ ವಿಶ್ರಮಿಸಿ ನಾಳೆ ಮುಂದಕ್ಕೆ ಪ್ರಯಾಣ ಮಾಡಬಹುದು. ಮತ್ತು ನನಗೆ ನಿನ್ನೊಡನೆ ಇನ್ನೊಂದು ಬಗೆಯಲ್ಲಿ ಸಾಕ್ಷಾತ್ ಸಂಬಂಧ ಉಂಟು (೧೧೬–೧೧೭). ವಾನರೋತ್ತಮ, ನೀನು ಮಹಾಗುಣಶಾಲಿಯೆಂದು ಮೂರು ಲೋಕಗಳಲ್ಲಿಯೂ ಪ್ರಸಿದ್ಧನಾಗಿದ್ದೀಯೆ. ಕಪಿಗಳಲ್ಲೆಲ್ಲ ನೀನು ಶ್ರೇಷ್ಠನೆಂದು ನನ್ನ ಭಾವನೆ. ಅತಿಥಿಯು ಸಾಮಾನ್ಯನಾಗಿದ್ದರೂ ಪೂಜಾರ್ಹನು. ನಿನ್ನಂತಹ ಅತಿಥಿಯಾದರೆ ಹೇಳ ಬೇಕಾದ್ದೇನು? ನೀನು ಮಹಾತ್ಮನಾದ ವಾಯುದೇವನ ಪುತ್ರನು. ತಂದೆಗೆ ತಕ್ಕ ಮಗ. ನಿನ್ನನ್ನು ಪೂಜಿಸಿದರೆ ವಾಯುದೇವನನ್ನೇ ಪೂಜಿಸಿದಂತಾಗುವುದು (೧೧೮–೧೨೧). ಕೃತಯುಗದಲ್ಲಿ ಪರ್ವತಗಳಿಗೆ ರೆಕ್ಕೆಗಳಿದ್ದವು. ಅವು ಆಕಾಶದಲ್ಲಿ ಹಾರಾಡುತ್ತಿದ್ದುದರಿಂದ ದೇವಾದಿ ಸಮಸ್ತ ಜೀವಿಗಳೂ, ಇವು ತಮ್ಮ ಮೇಲೆ ಎಲ್ಲಿ

ಭೂತಾನಿ ಚ ಭಯಂ ಜಗ್ಮುಸ್ತೇಷಾಂ ಪತನಶಂಕಯಾ ।
ತತಃ ಕ್ರುದ್ಧಃ ಸಹಸ್ರಾಕ್ಷಃ ಪರ್ವತಾನಾಂ ಶತಕ್ರತುಃ ॥ ೧೨೪

ಪಕ್ಷಾಂಶ್ಚಿಚ್ಛೇದ ವಜ್ರೇಣ ತತ್ರ ತತ್ರ ಸಹಸ್ರಶಃ ।
ಸ ಮಾಮುಪಗತಃ ಕ್ರುದ್ಧೋ ವಜ್ರಮುದ್ಯಮ್ಯ ದೇವರಾಟ್ ॥ ೧೨೫

ತತೋಽಹಂ ಸಹಸಾ ಕ್ಷಿಪ್ತಃ ಶ್ವಸನೇನ ಮಹಾತ್ಮನಾ ।
ಅಸ್ಮಿನ್ ಲವಣತೋಯೇ ಚ ಪ್ರಕ್ಷಿಪ್ತಃ ಪ್ಲವಗೋತ್ತಮ ॥ ೧೨೬

ಗುಪ್ತಪಕ್ಷಸಮಗ್ರಶ್ಚ ತವ ಪಿತ್ರಾಭಿರಕ್ಷಿತಃ ।
ತತೋಽಹಂ ಮಾನಯಾಮಿ ತ್ವಾಂ ಮಾನ್ಯೋ ಹಿ ಮಮ ಮಾರುತಃ ॥

ತ್ವಯಾ ಮೇ ಹ್ಯೇಷ ಸಂಬಂಧಃ ಕಪಿಮುಖ್ಯ ಮಹಾಗುಣಃ ।
ಅಸ್ಮಿನ್ನೇವಂ ಗತೇ ಕಾರ್ಯೇ ಸಾಗರಸ್ಯ ಮಮೈವ ಚ ॥ ೧೨೮

ಪ್ರೀತಿಂ ಪ್ರೀತಮನಾಃ ಕರ್ತುಂ ತ್ವಮರ್ಹಸಿ ಮಹಾಕಪೇ ।
ಶ್ರಮಂ ಮೋಕ್ಷಯ ಪೂಜಾಂ ಚ ಗೃಹಾಣ ಕಪಿಸತ್ತಮ ॥ ೧೨೯

ಪ್ರೀತಿಂ ಚ ಬಹು ಮನ್ಯಸ್ವ ಪ್ರೀತೋಽಸ್ಮಿ ತವ ದರ್ಶನಾತ್ ।
ಏವಮುಕ್ತಃ ಕಪಿಶ್ರೇಷ್ಠಸ್ತಂ ನಗೋತ್ತಮಮಬ್ರವೀತ್ ॥ ೧೩೦

ಪ್ರೀತೋಽಸ್ಮಿ ಕೃತಮಾತಿಥ್ಯಂ ಮನ್ಯುರೇಷೋಽಪನೀಯತಾಮ್ ।
ತ್ವರತೇ ಕಾರ್ಯಕಾಲೋ ಮೇ ಹ್ಯಹಶ್ಚ ವ್ಯತಿವರ್ತತೇ ॥ ೧೩೧

ಬಿದ್ದುಬಿಡುತ್ತವೋ ಎಂದು ಗಾಬರಿಗೊಂಡರು. ಆಗ ಕ್ರುದ್ಧನಾದ ದೇವೇಂದ್ರನು ಪರ್ವತಗಳ ರೆಕ್ಕೆಗಳನ್ನು ವಜ್ರಾಯುಧದಿಂದ ಕತ್ತರಿಸುತ್ತ ಬಂದನು. ಒಂದುಸಲ ನನ್ನನ್ನು ಅಟ್ಟಿಸಿಕೊಂಡು ಬಂದನು (೧೨೨-೧೨೫). ಆಗ ವಾಯುದೇವನು ಅತಿ ವೇಗದಿಂದ ನನ್ನನ್ನು ತಳ್ಳಿಕೊಂಡು ಬಂದು ಈ ಸಮುದ್ರದಲ್ಲಿ ಮುಳುಗಿಸಿ ಬಿಟ್ಟನು. ಈ ರೀತಿ ನಿನ್ನ ತಂದೆ ನನ್ನನ್ನು ಕಾಪಾಡಿದ್ದಾನೆ. ಆದ್ದರಿಂದ ನಿನ್ನನ್ನು ಉಪಚರಿಸುವುದು ನನ್ನ ಕರ್ತವ್ಯ. ಹೀಗೆ ನಿನ್ನ ಸಂಬಂಧ ಉಂಟಾದದ್ದು ನನ್ನ ಭಾಗ್ಯ. ಈ ಸಂದರ್ಭದಲ್ಲಿ ವಿಶ್ರಮಿಸಿಕೊಂಡು ನಮ್ಮ ಸತ್ಕಾರವನ್ನು ಸ್ವೀಕರಿಸಿ, ನನಗೂ ಸಮುದ್ರರಾಜನಿಗೂ ನೀನು ಸಂತೋಷವನ್ನುಂಟುಮಾಡಬೇಕು'' (೧೨೬-೧೩೦). ಆಗ ಹನುಮಂತನು ''ಮೈನಾಕ, ನೀನು ಅತಿಥಿಸತ್ಕಾರ ಮಾಡಿದಂತೆಯೇ ಆಯಿತು. ನಾನು

ಪ್ರತಿಜ್ಞಾ ಚ ಮಯಾ ದತ್ತಾ ನ ಸ್ಥಾತವ್ಯಮಿಹಾಂತರಾ ।
ಇತ್ಯುಕ್ತ್ವಾ ಪಾಣಿನಾ ಶೈಲಮಾಲಭ್ಯ ಹರಿಪುಂಗವಃ ॥ ೧೩೨
ಜಗಾಮಾಕಾಶಮಾವಿಶ್ಯ ವೀರ್ಯವಾನ್ ಪ್ರಹಸನ್ನಿವ ।
ಸ ಪರ್ವತಸಮುದ್ರಾಭ್ಯಾಂ ಬಹುಮಾನಾದವೇಕ್ಷಿತಃ ॥ ೧೩೩
ಪೂಜಿತಶ್ಚೋಪಪನ್ನಾಭಿರಾಶೀರ್ಭಿರನಿಲಾತ್ಮಜಃ ।
ಅಥೋರ್ಧ್ವಂ ದೂರಮುತ್ಪತ್ಯ ಹಿತ್ವಾ ಶೈಲಮಹಾರ್ಣವೌ ॥ ೧೩೪
ಪಿತುಃ ಪಂಥಾನಮಾಸ್ಥಾಯ ಜಗಾಮ ವಿಮಲೇಽಂಬರೇ ।
ತತಶ್ಚೋರ್ಧ್ವಗತಿಂ ಪ್ರಾಪ್ಯ ಗಿರಿಂ ತಮವಲೋಕಯನ್ ॥ ೧೩೫
ವಾಯುಸೂನುರ್ನಿರಾಲಂಬೇ ಜಗಾಮ ವಿಮಲೇಽಂಬರೇ ।
ತದ್ದ್ವಿತೀಯಂ ಹನುಮತೋ ದೃಷ್ಟ್ವಾ ಕರ್ಮ ಸುದುಷ್ಕರಮ್ ॥ ೧೩೬
ಪ್ರಶಶಂಸುಃ ಸುರಾಃ ಸರ್ವೇ ಸಿದ್ಧಾಶ್ಚ ಪರಮರ್ಷಯಃ ।
ದೇವತಾಶ್ಚಾಭವನ್ ಹೃಷ್ಟಾಸ್ತತ್ರಸ್ಥಾಸ್ತಸ್ಯ ಕರ್ಮಣಾ ॥ ೧೩೭
ಕಾಂಚನಸ್ಯ ಸುನಾಭಸ್ಯ ಸಹಸ್ರಾಕ್ಷಶ್ಚ ವಾಸವಃ ।
ಉವಾಚ ವಚನಂ ಶ್ರೀಮಾನ್ ಪರಿತೋಷಾತ್ ಸಗದ್ಗದಮ್ ॥ ೧೩೮

ಸಂತುಷ್ಟನಾಗಿದ್ದೇನೆ. ವಿಷಾದಪಡಬೇಡ. ನಾನು ತ್ವರೆಯಿಂದ ಹೋಗಬೇಕಾಗಿದೆ. ಹಗಲು ಕಳೆದುಹೋಗುತ್ತಿದೆ. ಮಧ್ಯದಲ್ಲಿ ಎಲ್ಲಿಯೂ ನಿಲ್ಲದೆ (ರಾಮಬಾಣದಂತೆ) ಹೋಗುತ್ತೇನೆಂದು ಕಪಿಗಳಿಗೆ ಮಾತುಕೊಟ್ಟಿದ್ದೇನೆ'' ಎಂದು ಹೇಳಿ ಮೈನಾಕನನ್ನು ಮೈದಡವಿ ಮುಗುಳುನಗೆ ಬೀರುತ್ತ ಮುಂದೆ ಹೊರಟನು. ಮೈನಾಕ ಸಮುದ್ರರಾಜರಿಬ್ಬರೂ ಗೌರವ ದೃಷ್ಟಿಯಿಂದ ಅವನನ್ನೇ ನೋಡುತ್ತ ನಿಂತರು (೧೩೧–೧೩೩). ಅವನಿಗೆ ಒಳ್ಳೆಯದಾಗಲೆಂದು ಹಾರೈಸಿದರು. ಹನುಮಂತನು ಹಿಂದಿರುಗಿ ಅವರನ್ನು ನೋಡುತ್ತ ಇನ್ನೂ ಮೇಲಕ್ಕೆ ಗಗನತಲವನ್ನೇರಿ ವೇಗದಿಂದ ಮುಂದೆ ಹೊರಟನು (೧೩೪-೧೩೫). ಸಮುದ್ರಲಂಘನವನ್ನು ಆರಂಭಿಸಿದ್ದಲ್ಲದೆ, ವಿಶ್ರಾಂತಿಯನ್ನೇ ಅಪೇಕ್ಷಿಸದೆ ಮುಂದೆ ಪ್ರಯಾಣಮಾಡಿದುದು ಹನುಮಂತನು ನಡೆಸಿದ ಎರಡನೆಯ ಆಶ್ಚರ್ಯಕರವಾದ ಕೆಲಸ. ಅದನ್ನು ನೋಡಿ ಸಮಸ್ತ ದೇವತೆಗಳೂ ಅವನನ್ನು ಪ್ರಶಂಸೆಮಾಡಿದರು (೧೩೬–೧೩೭). ಮೈನಾಕನ ಈ ಉಪಕಾರ ಬುದ್ಧಿಯನ್ನು ಕಂಡು ದೇವತೆಗಳಿಗೂ ಇಂದ್ರನಿಗೂ ಸಂತೋಷವಾಯಿತು.

ಸುನಾಭಂ ಪರ್ವತಶ್ರೇಷ್ಠಂ ಸ್ವಯಮೇವ ಶಚೀಪತಿಃ ।
ಹಿರಣ್ಯನಾಭ ಶೈಲೇಂದ್ರ ಪರಿತುಷ್ಟೋಽಸ್ಮಿ ತೇ ಭೃಶಮ್ ॥ ೧೩೯
ಅಭಯಂ ತೇ ಪ್ರಯಚ್ಛಾಮಿ ತಿಷ್ಠ ಸೌಮ್ಯ ಯಥಾಸುಖಮ್ ।
ಸಾಹ್ಯಂ ಕೃತಂ ತ್ವಯಾ ಸೌಮ್ಯ ವಿಕ್ರಾಂತಸ್ಯ ಹನೂಮತಃ ॥ ೧೪೦
ಕ್ರಮತೋ ಯೋಜನಶತಂ ನಿರ್ಭಯಸ್ಯ ಭಯೇ ಸತಿ ।
ರಾಮಸ್ಯೈಷ ಹಿತಾಯೈವ ಯಾತಿ ದಾಶರಥೇರ್ಹರಿಃ ॥ ೧೪೧
ಸತ್ಕ್ರಿಯಾಂ ಕುರ್ವತಾ ತಸ್ಯ ತೋಷಿತೋಽಸ್ಮಿ ಭೃಶಂ ತ್ವಯಾ ।
ತತಃ ಪ್ರಹರ್ಷಮಗಮದ್ವಿಪುಲಂ ಪರ್ವತೋತ್ತಮಃ ॥ ೧೪೨
ದೇವತಾನಾಂ ಪತಿಂ ದೃಷ್ಟ್ವಾ ಪರಿತುಷ್ಟಂ ಶತಕ್ರತುಮ್ ।
ಸ ವೈ ದತ್ತವರಃ ಶೈಲೋ ಬಭೂವಾವಸ್ಥಿತಸ್ತದಾ ॥ ೧೪೩
ಹನೂಮಾಂಶ್ಚ ಮುಹೂರ್ತೇನ ವ್ಯತಿಚಕ್ರಾಮ ಸಾಗರಮ್ ।
ತತೋ ದೇವಾಃ ಸಗಂಧರ್ವಾಃ ಸಿದ್ಧಾಶ್ಚ ಪರಮರ್ಷಯಃ ॥ ೧೪೪
ಅಬ್ರುವನ್ ಸೂರ್ಯಸಂಕಾಶಾಂ ಸುರಸಾಂ ನಾಗಮಾತರಮ್ ।
ಅಯಂ ವಾತಾತ್ಮಜಃ ಶ್ರೀಮಾನ್ ಪ್ಲವತೇ ಸಾಗರೋಪರಿ ॥ ೧೪೫

ಇಂದ್ರನು ಗದ್ಗದಸ್ವರದಿಂದ ಅವನನ್ನು ಕುರಿತು ''ಎಲೈ ಮೈನಾಕ, ನಿನ್ನ ಮೇಲೆ ನಾನು ಸುಪ್ರೀತನಾಗಿದ್ದೇನೆ (೧೩೮–೧೩೯). ಇನ್ನು ನನ್ನಿಂದ ನಿನಗೆ ಭಯವಿಲ್ಲ. ಎಲ್ಲಿ ಬೇಕಾದರೂ ಸಂಚರಿಸಬಹುದು. ನಿರ್ಭಯವಾಗಿ ನೂರು ಯೋಜನ ದೂರ ಹಾರಲು ಹೊರಟಿರುವ ಈ ಹನುಮಂತನಿಗೆ ಏನಾಗುವುದೋ ಎಂದು ನಾವು ಭಯಗೊಂಡಿರುವಾಗ, ಯುಕ್ತವಾದ ಸಹಾಯವನ್ನು ಮಾಡಿದ್ದೀಯೆ. ಶ್ರೀರಾಮನ ಕಾರ್ಯಕ್ಕಾಗಿ ಹೋಗುತ್ತಿರುವ ಈತನಿಗೆ ಯಥಾಶಕ್ತಿ ಉಪಚಾರಮಾಡಲು ನೀನು ಮುಂದೆ ಬಂದದ್ದರಿಂದ ನನಗೆ ಬಹಳ ಸಂತೋಷವಾಯಿತು'' ಎಂದು ಹೇಳಿದನು. ಇಂದ್ರನು ಸುಪ್ರೀತನಾದ್ದರಿಂದ ಮೈನಾಕನಿಗೆ ಪರಮಾನಂದವಾಯಿತು. ಅಂದಿನಿಂದ ನಿರ್ಭಯನಾಗಿ ಸುಖದಿಂದಿದ್ದನು (೧೪೦–೧೪೩). ಇತ್ತ ಆಂಜನೇಯನು ಸಾಗರವನ್ನು ದಾಟಿಹೋಗುತ್ತಿದ್ದನು. ಆಗ ದೇವಗಂಧರ್ವಾದಿಗಳು ನಾಗಮಾತೆಯಾದ ಸುರಸೆಯನ್ನು ಕರೆದು ''ಸುರಸೆ, ವಾಯುಪುತ್ರನಾದ ಹನುಮಂತ

ಹನೂಮಾನ್ನಾಮ ತಸ್ಯ ತ್ವಂ ಮುಹೂರ್ತಂ ವಿಘ್ನಮಾಚರ ।
ರಾಕ್ಷಸಂ ರೂಪಮಾಸ್ಥಾಯ ಸುಘೋರಂ ಪರ್ವತೋಪಮಮ್ ೧೪೬
ದಂಷ್ಟ್ರಾಕರಾಲಂ ಪಿಂಗಾಕ್ಷಂ ವಕ್ತ್ರಂ ಕೃತ್ವಾ ನಭಃಸ್ಪೃಶಮ್ ।
ಬಲಮಿಚ್ಛಾಮಹೇ ಜ್ಞಾತುಂ ಭೂಯಶ್ಚಾಸ್ಯ ಪರಾಕ್ರಮಮ್ ॥ ೧೪೭
ತ್ವಾಂ ವಿಜೇಷ್ಯತ್ಯುಪಾಯೇನ ವಿಷಾದಂ ವಾ ಗಮಿಷ್ಯತಿ ।
ಏವಮುಕ್ತಾ ತು ಸಾ ದೇವೀ ದೈವತೈರಭಿಸತ್ಕೃತಾ ॥ ೧೪೮
ಸಮುದ್ರಮಧ್ಯೇ ಸುರಸಾ ಬಿಭ್ರತೀ ರಾಕ್ಷಸಂ ವಪುಃ ।
ವಿಕೃತಂ ಚ ವಿರೂಪಂ ಚ ಸರ್ವಸ್ಯ ಚ ಭಯಾವಹಮ್ ॥ ೧೪೯
ಪ್ಲವಮಾನಂ ಹನೂಮಂತಮಾವೃತ್ಯೇದಮುವಾಚ ಹ ।
ಮಮ ಭಕ್ಷ್ಯಃ ಪ್ರದಿಷ್ಟಸ್ತ್ವಮೀಶ್ವರೈರ್ವಾನರರ್ಷಭ ॥ ೧೫೦
ಅಹಂ ತ್ವಾಂ ಭಕ್ಷಯಿಷ್ಯಾಮಿ ಪ್ರವಿಶೇದಂ ಮಮಾನನಮ್ ।
ಏವಮುಕ್ತಃ ಸುರಸಯಾ ಪ್ರಾಂಜಲಿರ್ವಾನರರ್ಷಭಃ ॥ ೧೫೧
ಪ್ರಹೃಷ್ಟವದನಃ ಶ್ರೀಮಾನ್ ಸುರಸಾಂ ವಾಕ್ಯಮಬ್ರವೀತ್ ।
ರಾಮೋ ದಾಶರಥಿಃ ಶ್ರೀಮಾನ್ ಪ್ರವಿಷ್ಟೋ ದಂಡಕಾವನಮ್ ೧೫೨

ನೆಂಬವನು ಸಮುದ್ರದ ಮೇಲೆ ಹಾರಿಹೋಗುತ್ತಿರುವನು (೧೪೪–೧೪೫). ಈಗ ನೀನು ಪರ್ವತಾಕಾರವೂ ಘೋರವೂ ಆದ ಒಂದು ರಾಕ್ಷಸಾಕಾರವನ್ನು ತಾಳಿ ಇವನನ್ನು ಅಡ್ಡಗಟ್ಟು. ಇವನ ಪರಾಕ್ರಮವೆಷ್ಟು, ಉಪಾಯದಿಂದ ನಿನ್ನನ್ನು ಗೆಲ್ಲುವನೋ, ಇಲ್ಲವೆ, ಏನೂ ಮಾಡಲಾರದೆ ಖಿನ್ನನಾಗುವನೋ ಎಂಬುದನ್ನು ನಾವು ಪರೀಕ್ಷಿಸಬೇಕೆಂದಿದ್ದೇವೆ'' ಎಂದು ಹೇಳಿದರು (೧೪೬–೧೪೮). ಆಗ ಸುರಸಾದೇವಿಯು ಅತಿವಿಕಾರವೂ ಭಯಂಕರವೂ ಆದ ರಾಕ್ಷಸೀರೂಪವನ್ನು ಧರಿಸಿ ಸಮುದ್ರ ಮಧ್ಯದಲ್ಲಿ ಹನುಮಂತನನ್ನು ಅಡ್ಡಗಟ್ಟಿ ನಿಂತಳು. ಅವನನ್ನು ಕುರಿತು ''ಎಲೈ ಕಪಿಯೆ, ದೇವತೆಗಳು ನಿನ್ನನ್ನು ನನಗೆ ಆಹಾರವಾಗಿ ಒದಗಿಸಿದ್ದಾರೆ. ನಿನ್ನನ್ನು ನಾನು ತಿನ್ನುವೆನು. ಇಗೋ! ನನ್ನ ಬಾಯಿಯನ್ನು ಪ್ರವೇಶಿಸು!'' ಎಂದಳು (೧೪೯–೧೫೧). ಆಂಜನೇಯನು ಸ್ವಲ್ಪವೂ ಚಿಂತೆಮಾಡದೆ ಕೈಜೋಡಿಸಿ, ''ದೇವಿ, ದಶರಥಮಹಾರಾಜನ ಮಗನಾದ ಶ್ರೀರಾಮನು ತಮ್ಮನಾದ ಲಕ್ಷ್ಮಣನನ್ನೂ ಪತ್ನಿಯಾದ ಸೀತಾದೇವಿಯನ್ನೂ ಕರೆದುಕೊಂಡು ದಂಡಕಾರಣ್ಯಕ್ಕೆ

ಲಕ್ಷ್ಮಣೇನ ಸಹ ಭ್ರಾತ್ರಾ ವೈದೇಹ್ಯಾ ಚಾಪಿ ಭಾರ್ಯಯಾ ।
ಅನ್ಯಕಾರ್ಯವಿಷಕ್ತಸ್ಯ ಬದ್ಧವೈರಸ್ಯ ರಾಕ್ಷಸೈಃ ॥ ೧೫೩
ತಸ್ಯ ಸೀತಾ ಹೃತಾ ಭಾರ್ಯಾ ರಾವಣೇನ ಯಶಸ್ವಿನೀ ।
ತಸ್ಯಾಃ ಸಕಾಶಂ ದೂತೋಽಹಂ ಗಮಿಷ್ಯೇ ರಾಮಶಾಸನಾತ್ ॥ ೧೫೪
ಕರ್ತುಮರ್ಹಸಿ ರಾಮಸ್ಯ ಸಾಹ್ಯಂ ವಿಷಯವಾಸಿನೀ ।
ಅಥವಾ ಮೈಥಿಲೀಂ ದೃಷ್ಟ್ವಾ ರಾಮಂ ಚಾಕ್ಲಿಷ್ಟಕಾರಿಣಮ್ ॥ ೧೫೫
ಆಗಮಿಷ್ಯಾಮಿ ತೇ ವಕ್ತ್ರಂ ಸತ್ಯಂ ಪ್ರತಿಶೃಣೋಮಿ ತೇ ।
ಏವಮುಕ್ತಾ ಹನುಮತಾ ಸುರಸಾ ಕಾಮರೂಪಿಣೀ ॥ ೧೫೬
ಅಬ್ರವೀನ್ನಾತಿವರ್ತೇನ್ಮಾಂ ಕಶ್ಚಿದೇಷ ವರೋ ಮಮ ।
ತಂ ಪ್ರಯಾಂತಂ ಸಮುದ್ವೀಕ್ಷ್ಯ ಸುರಸಾ ವಾಕ್ಯಮಬ್ರವೀತ್* ॥ ೧೫೭
ಬಲಂ ಜಿಜ್ಞಾಸಮಾನಾ ವೈ ನಾಗಮಾತಾ ಹನೂಮತಃ ।
ಪ್ರವಿಶ್ಯ ವದನಂ ಮೇಽದ್ಯ ಗಂತವ್ಯಂ ವಾನರೋತ್ತಮ ॥ ೧೫೮
ವರ ಏಷ ಪುರಾ ದತ್ತೋ ಮಮ ಧಾತ್ರೇತಿ ಸತ್ವರಾ ।
ವ್ಯಾದಾಯ ವಕ್ತ್ರಂ ವಿಪುಲಂ ಸ್ಥಿತಾ ಸಾ ಮಾರುತೇಃ ಪುರಃ ॥ ೧೫೯

ಬಂದಿದ್ದನು. ಅಲ್ಲಿ ರಾಕ್ಷಸರೊಡನೆ ಕಾರಣಾಂತರದಿಂದ ವೈರವು ಬೆಳೆಯಿತು (೧೫೨–೧೫೩). ಶ್ರೀರಾಮನು ಕಾರ್ಯಾಂತರದಿಂದ ಹೊರಕ್ಕೆ ಹೋದಾಗ ರಾವಣನು ಸೀತಾದೇವಿಯನ್ನು ಕಳ್ಳತನದಿಂದ ಅಪಹರಿಸಿಬಿಟ್ಟಿದ್ದಾನೆ. ನಾನು ರಾಮನ ಆಜ್ಞೆಯಂತೆ ದೂತನಾಗಿ ಸೀತಾದೇವಿಯು ಇರುವಲ್ಲಿಗೆ ಹೋಗುತ್ತಿರುವೆನು. ಶ್ರೀರಾಮನ ರಾಜ್ಯದಲ್ಲಿ ನೀನು ಒಬ್ಬ ಪ್ರಜೆ. ಈ ಕಾರ್ಯಕ್ಕೆ ನೀನು ಸಹಾಯಮಾಡಬೇಕು. ನನ್ನನ್ನು ತಡೆಯಬೇಡ. ಅಥವಾ ಸೀತಾದೇವಿಯನ್ನು ಕಂಡು ಆಕೆಯ ವೃತ್ತಾಂತವನ್ನು ಶ್ರೀರಾಮನಿಗೆ ತಿಳಿಸಿಬಂದು, ನಿನಗೆ ಆಹಾರವಾಗುತ್ತೇನೆ. ಈ ವಿಷಯದಲ್ಲಿ ಆಣೆಯಿಟ್ಟು ಪ್ರಮಾಣಮಾಡುತ್ತೇನೆ'' ಎಂದನು (೧೫೪–೧೫೬). ಸುರಸೆಯು ''ಸಾಧ್ಯವಿಲ್ಲ; ನೀನು ನನ್ನ ಬಾಯಿಯನ್ನು

---

* 'ತಂ ಪ್ರಯಾಂತಂ...' ಎಂಬಲ್ಲಿಂದ ೧೬೨ನೆಯ ಶ್ಲೋಕ ಪೂರ್ತಿಯಾಗಿ ಪ್ರಕ್ಷಿಪ್ತವೆಂದು ಗೋವಿಂದರಾಜೀಯದಲ್ಲಿ ಬರೆದಿದೆ.

ಏವಮುಕ್ತಃ ಸುರಸಯಾ ಕ್ರುದ್ಧೋ ವಾನರಪುಂಗವಃ ।
ಅಬ್ರವೀತ್ ಕುರು ವೈ ವಕ್ತ್ರಂ ಯೇನ ಮಾಂ ವಿಷಹಿಷ್ಯಸೇ ॥ ೧೬೦

ಇತ್ಯುಕ್ತ್ವಾ ಸುರಸಾಂ ಕ್ರುದ್ಧೋ ದಶಯೋಜನಮಾಯತಾಮ್ ।
ದಶಯೋಜನವಿಸ್ತಾರೋ ಬಭೂವ ಹನುಮಾಂಸ್ತದಾ ॥ ೧೬೧

ತಂ ದೃಷ್ಟ್ವಾ ಮೇಘಸಂಕಾಶಂ ದಶಯೋಜನಮಾಯತಮ್ ।
ಚಕಾರ ಸುರಸಾಪ್ಯಾಸ್ಯಂ ವಿಂಶದ್ಯೋಜನಮಾಯತಮ್ ॥ ೧೬೨

ತದ್ದೃಷ್ಟ್ವಾ ವ್ಯಾದಿತಂ ಚಾಸ್ಯಂ ವಾಯುಪುತ್ರಃ ಸುಬುದ್ಧಿಮಾನ್ ।
ದೀರ್ಘಜಿಹ್ವಂ ಸುರಸಯಾ ಸುಘೋರಂ ನರಕೋಪಮಮ್ ॥ ೧೬೩

ಸ ಸಂಕ್ಷಿಪ್ಯಾತ್ಮನಃ ಕಾಯಂ ಜೀಮೂತ ಇವ ಮಾರುತಿಃ ।
ತಸ್ಮಿನ್ ಮುಹೂರ್ತೇ ಹನುಮಾನ್ ಬಭೂವಾಂಗುಷ್ಠಮಾತ್ರಕಃ ೧೬೪

ಸೋಽಭಿಪತ್ಯಾಶು ತದ್ವಕ್ತ್ರಂ ನಿಷ್ಪತ್ಯ ಚ ಮಹಾಜವಃ ।
ಅಂತರಿಕ್ಷೇ ಸ್ಥಿತಃ ಶ್ರೀಮಾನಿದಂ ವಚನಮಬ್ರವೀತ್ ॥ ೧೬೫

ಪ್ರವಿಷ್ಟೋಽಸ್ಮಿ ಹಿ ತೇ ವಕ್ತ್ರಂ ದಾಕ್ಷಾಯಣಿ ನಮೋಽಸ್ತು ತೇ ।
ಗಮಿಷ್ಯೇ ಯತ್ರ ವೈದೇಹೀ ಸತ್ಯಶ್ಚಾಸೀದ್ವರಸ್ತವ ॥ ೧೬೬

ಪ್ರವೇಶಿಸಲೇಬೇಕು. ಇದು ಬ್ರಹ್ಮನು ನನಗೆ ಕೊಟ್ಟ ವರ!'' ಎನ್ನುತ್ತ ಬಾಯಿಯನ್ನು ದೊಡ್ಡದಾಗಿ ತೆರೆದುಕೊಂಡು ಹನುಮಂತನ ಎದುರಿಗೆ ನಿಂತುಬಿಟ್ಟಳು (೧೫೭–೧೫೯). ಹನುಮಂತನಿಗೆ ತಡೆಯಲಾರದಷ್ಟು ಕೋಪ ಉಂಟಾಯಿತು. ''ನೋಡೋಣ! ನನ್ನನ್ನು ನುಂಗುವಷ್ಟು ಬಾಯಿ ತೆರೆ !'' ಎನ್ನುತ್ತ ತನ್ನ ದೇಹವನ್ನು ಹತ್ತು ಯೋಜನ ವಿಸ್ತಾರವಾಗಿ ಬೆಳೆಸಿದನು. ಸುರಸೆಯು ತನ್ನ ಬಾಯಿಯನ್ನು ಇಪ್ಪತ್ತು ಯೋಜನದಷ್ಟು ಹಿಗ್ಗಿಸಿದಳು (೧೬೦–೧೬೨). ಉದ್ದವಾದ ನಾಲಗೆಯಿಂದ ಕೂಡಿ ನರಕದಂತೆ ಘೋರವಾದ ಆಕೆಯ ಬಾಯಿಯನ್ನು ನೋಡಿ ಚಾಣಾಕ್ಷನಾದ ಹನುಮಂತನು ತನ್ನ ದೇಹವನ್ನು ಥಟ್ಟನೆ ಒಂದು ಹೆಬ್ಬೆರಳಿನಷ್ಟು ಚಿಕ್ಕದಾಗಿ ಮಾಡಿಬಿಟ್ಟನು (೧೬೩–೧೬೪). ಕೂಡಲೇ ಮಹಾವೇಗದಿಂದ ಒಂದು ಕ್ಷಣದಲ್ಲಿಯೇ ಅವಳ ಬಾಯೊಳಗೆ ಪ್ರವೇಶಿಸಿ, ಹೊರಕ್ಕೆ ಬಂದು ಅಂತರಿಕ್ಷದಲ್ಲಿ ನಿಂತುಕೊಂಡನು. ''ನೋಡು! ನಿನ್ನ ಬಾಯನ್ನು ನಾನು ಪ್ರವೇಶಿಸಿದ್ದೇನೆ!

ತಂ ದೃಷ್ಟ್ವಾ ವದನಾನ್ಮುಕ್ತಂ ಚಂದ್ರಂ ರಾಹುಮುಖಾದಿವ ।
ಅಬ್ರವೀತ್ ಸುರಸಾ ದೇವೀ ಸ್ವೇನ ರೂಪೇಣ ವಾನರಮ್ ॥ ೧೬೭
ಅರ್ಥಸಿದ್ಧ್ಯೈ ಹರಿಶ್ರೇಷ್ಠ ಗಚ್ಛ ಸೌಮ್ಯ ಯಥಾಸುಖಮ್ ।
ಸಮಾನಯಸ್ವ ವೈದೇಹೀಂ ರಾಘವೇಣ ಮಹಾತ್ಮನಾ ॥ ೧೬೮
ತತ್ತೃತೀಯಂ ಹನುಮತೋ ದೃಷ್ಟ್ವಾ ಕರ್ಮ ಸುದುಷ್ಕರಮ್ ।
ಸಾಧು ಸಾಧ್ವಿತಿ ಭೂತಾನಿ ಪ್ರಶಶಂಸುಸ್ತದಾ ಹರಿಮ್ ॥ ೧೬೯
ಜಗಾಮಾಕಾಶಮಾವಿಶ್ಯ ವೇಗೇನ ಗರುಡೋಪಮಃ ।
ಸೇವಿತೇ ವಾರಿಧಾರಾಭಿಃ ಪತಗೈಶ್ಚ ನಿಷೇವಿತೇ ॥ ೧೭೦
ಚರಿತೇ ಕೈಶಿಕಾಚಾರ್ಯೈರೈರಾವತನಿಷೇವಿತೇ ।
ಸಿಂಹ ಕುಂಜರ ಶಾರ್ದೂಲ ಪತಗೋರಗವಾಹನೈಃ ॥ ೧೭೧
ವಿಮಾನೈಃ ಸಂಪತದ್ಭಿಶ್ಚ ವಿಮಲೈಃ ಸಮಲಂಕೃತೇ ।
ವಜ್ರಾಶನಿಸಮಾಘಾತೈಃ ಪಾವಕೈರುಪಶೋಭಿತೇ ॥ ೧೭೨
ಕೃತಪುಣ್ಯೈರ್ಮಹಾಭಾಗೈಃ ಸ್ವರ್ಗಜಿದ್ಭಿರಲಂಕೃತೇ ।
ವಹತಾ ಹವ್ಯಮತ್ಯರ್ಥಂ ಸೇವಿತೇ ಚಿತ್ರಭಾನುನಾ ॥ ೧೭೩

ದಾಕ್ಷಾಯಣಿ, ನಮಸ್ಕಾರ. ಇನ್ನು ನಾನು ಸೀತಾದೇವಿ ಇದ್ದಲ್ಲಿಗೆ ಹೊರಡುವೆನು. ಬ್ರಹ್ಮನ ವರ ಸಾರ್ಥಕವಾಯಿತಷ್ಟೆ'' ಎಂದು ಹೇಳಿದನು (೧೬೫–೧೬೬). ಸುರಸೆಯು ರಾಹುಮುಖದಿಂದ ಮುಕ್ತನಾದ ಚಂದ್ರನಂತೆ ಕಂಗೊಳಿಸುತ್ತಿದ್ದ ಹನುಮಂತನನ್ನು ಅವಲೋಕಿಸಿ ತನ್ನ ನಿಜರೂಪವನ್ನು ತಳೆದು ''ಸೌಮ್ಯ–ವಾನರೋತ್ತಮ, ನಿನಗೆ ಕಾರ್ಯಸಿದ್ಧಿಯಾಗಲಿ ! ಸುಖದಿಂದ ಹೋಗಿಬಾ. ಮಹಾತ್ಮನಾದ ಶ್ರೀರಾಮನ ಬಳಿಗೆ ಸೀತೆಯನ್ನು ತಂದು ಸೇರಿಸು'' ಎಂದಳು (೧೬೭–೧೬೮). ಸುರಸೆಯ ಬಾಯಿಯಿಂದ ತಪ್ಪಿಸಿಕೊಂಡ ಹನುಮಂತನ ಈ ಮೂರನೆಯ ಸಾಹಸಕಾರ್ಯವನ್ನು ಕಂಡು ದೇವತೆಗಳೆಲ್ಲರೂ ಅವನನ್ನು ಕೊಂಡಾಡಿದರು (೧೬೯). ಮಹಾಸಾಗರವನ್ನು ಗರುಡನಂತೆ ಹನುಮಂತನು ದಾಟಿಹೋಗುತ್ತಿದ್ದನು. ಅಂತರಿಕ್ಷಮಾರ್ಗದಲ್ಲಿ ಕೆಲವು ಕಡೆ ಮೋಡಗಳಿಂದ ಜಲಧಾರೆಗಳು ಸುರಿಯುತ್ತಿದ್ದವು. ಅಲ್ಲಲ್ಲಿ ಗಾನವಿದ್ಯೆಯನ್ನು ಬಲ್ಲ ಗಂಧರ್ವರು ಸಂಚರಿಸುತ್ತಿದ್ದರು. ಕಾಮನಬಿಲ್ಲುಗಳು ಹಬ್ಬಿದ್ದವು. ಸಿಂಹ, ಆನೆ ಮುಂತಾದ

ಗ್ರಹನಕ್ಷತ್ರಚಂದ್ರಾರ್ಕತಾರಾಗಣವಿಭೂಷಿತೇ ।
ಮಹರ್ಷಿಗಣಗಂಧರ್ವನಾಗಯಕ್ಷಸಮಾಕುಲೇ ॥ ೧೭೪

ವಿವಿಕ್ತೇ ವಿಮಲೇ ವಿಶ್ವೇ ವಿಶ್ವಾವಸುನಿಷೇವಿತೇ ।
ದೇವರಾಜಗಜಾಕ್ರಾಂತೇ ಚಂದ್ರಸೂರ್ಯಪಥೇ ಶಿವೇ ॥ ೧೭೫

ವಿತಾನೇ ಜೀವಲೋಕಸ್ಯ ವಿತತೇ ಬ್ರಹ್ಮನಿರ್ಮಿತೇ ।
ಬಹುಶಃ ಸೇವಿತೇ ವೀರೈರ್ವಿದ್ಯಾಧರಗಣೈರ್ವರೈಃ ॥ ೧೭೬

ಜಗಾಮ ವಾಯುಮಾರ್ಗೇ ಚ ಗರುತ್ಮಾನಿವ ಮಾರುತಿಃ ।
ಹನೂಮಾನ್ ಮೇಘಜಾಲಾನಿ ಪ್ರಕರ್ಷನ್ ಮಾರುತೋ ಯಥಾ ॥

ಕಾಲಾಗರುಸವರ್ಣಾನಿ ರಕ್ತಪೀತಸಿತಾನಿ ಚ ।
ಕಪಿನಾ ಕೃಷ್ಯಮಾಣಾನಿ ಮಹಾಭ್ರಾಣಿ ಚಕಾಶಿರೇ ॥ ೧೭೮

ಪ್ರವಿಶನ್ನಭ್ರಜಾಲಾನಿ ನಿಷ್ಪತಂಶ್ಚ ಪುನಃ ಪುನಃ ।
ಪ್ರಾವೃಷೀಂದುರಿವಾಭಾತಿ ನಿಷ್ಪತನ್ ಪ್ರವಿಶಂಸ್ತದಾ ॥ ೧೭೯

ಪ್ರದೃಶ್ಯಮಾನಃ ಸರ್ವತ್ರ ಹನುಮಾನ್ ಮಾರುತಾತ್ಮಜಃ ।
ಭೇಜೇಽಂಬರಂ ನಿರಾಲಂಬಂ ಲಂಬಪಕ್ಷ ಇವಾದ್ರಿರಾಟ್ ॥ ೧೮೦

ದೇವವಾಹನಗಳೂ ವಿಮಾನಗಳೂ ತಿರುಗಾಡುತ್ತಿದ್ದವು. ಸಿಡಿಲಿನಿಂದ ಹೊರಟ ಅಗ್ನಿಜ್ವಾಲೆಗಳು ವ್ಯಾಪಿಸಿದ್ದವು. ಪುಣ್ಯಬಲದಿಂದ ಸ್ವರ್ಗವನ್ನು ಪಡೆದ ಮಹಾತ್ಮರು ಸಂಚರಿಸುತ್ತಿದ್ದರು. ಅದು ದೇವತೆಗಳಿಗೆ ಹವಿಸ್ಸನ್ನು ಕೊಂಡೊಯ್ಯುವ ಅಗ್ನಿದೇವನೂ ಸೂರ್ಯಚಂದ್ರಗ್ರಹನಕ್ಷತ್ರಗಳೂ ಮಹರ್ಷಿಗಳೂ ಸಂಚಾರ ಮಾಡುವ ಮಾರ್ಗ (೧೭೦–೧೭೪). ಗಂಧರ್ವರಾಜನಾದ ವಿಶ್ವಾವಸು ವಿಹರಿಸುವ ಸ್ಥಳ. ಐರಾವತ, ಪುಂಡರೀಕ ಮುಂತಾದ ದೇವಗಜಗಳು ತಿರುಗಾಡುವ ಪ್ರದೇಶ. ವಿದ್ಯಾಧರರು ಸೇವಿಸುತ್ತಿದ್ದ ಸ್ಥಳ (೧೭೫–೧೭೬). ಪ್ರಾಣಿಲೋಕಕ್ಕೆ ಬ್ರಹ್ಮನು ನಿರ್ಮಿಸಿದ ಒಂದು ಮೇಲುಹೊದಿಕೆಯೋ ಎಂಬಂತಿದ್ದ ಆಕಾಶದಲ್ಲಿ ಹನುಮಂತನು ನಾನಾ ವರ್ಣದ ಮೇಘಗಳನ್ನು ತನ್ನ ವೇಗದಿಂದ ಜೊತೆಯಲ್ಲಿ ಎಳೆದುಕೊಂಡು ವೈನತೇಯನಂತೆ ಹೋಗುತ್ತಿದ್ದನು. ಮೋಡಗಳ ಸಂದಿನಲ್ಲಿ ಆಗಾಗ ಮರೆಯಾಗುತ್ತಲೂ ಕಾಣಿಸಿಕೊಳ್ಳುತ್ತಲೂ ಇದ್ದ ಅವನು ಮಳೆಗಾಲದ

ಪ್ಲವಮಾನಂ ತು ತಂ ದೃಷ್ಟ್ವಾ ಸಿಂಹಿಕಾ ನಾಮ ರಾಕ್ಷಸೀ ।
ಮನಸಾ ಚಿಂತಯಾಮಾಸ ಪ್ರವೃದ್ಧಾ ಕಾಮರೂಪಿಣೀ ॥ ೧೮೧

ಅದ್ಯ ದೀರ್ಘಸ್ಯ ಕಾಲಸ್ಯ ಭವಿಷ್ಯಾಮ್ಯಹಮಾಶಿತಾ ।
ಇದಂ ಹಿ ಮೇ ಮಹತ್ಸತ್ತ್ವಂ ಚಿರಸ್ಯ ವಶಮಾಗತಮ್ ॥ ೧೮೨

ಇತಿ ಸಂಚಿಂತ್ಯ ಮನಸಾ ಛಾಯಾಮಸ್ಯ ಸಮಾಕ್ಷಿಪತ್ ।
ಛಾಯಾಯಾಂ ಗೃಹ್ಯಮಾಣಾಯಾಂ ಚಿಂತಯಾಮಾಸ ವಾನರಃ ೧೮೩

ಸಮಾಕ್ಷಿಪ್ತೋಽಸ್ಮಿ ಸಹಸಾ ಪಂಗೂಕೃತಪರಾಕ್ರಮಃ ।
ಪ್ರತಿಲೋಮೇನ ವಾತೇನ ಮಹಾನೌರಿವ ಸಾಗರೇ ॥ ೧೮೪

ತಿರ್ಯಗೂರ್ಧ್ವಮಧಶ್ಚೈವ ವೀಕ್ಷಮಾಣಸ್ತತಃ ಕಪಿಃ ।
ದದರ್ಶ ಸ ಮಹತ್ ಸತ್ತ್ವಮುತ್ಥಿತಂ ಲವಣಾಂಭಸಃ ॥ ೧೮೫

ತದ್ದೃಷ್ಟ್ವಾ ಚಿಂತಯಾಮಾಸ ಮಾರುತಿರ್ವಿಕೃತಾನನಮ್ ।
ಕಪಿರಾಜೇನ ಕಥಿತಂ ಸತ್ತ್ವಮದ್ಭುತದರ್ಶನಮ್ ॥ ೧೮೬

ಛಾಯಾಗ್ರಾಹಿ ಮಹಾವೀರ್ಯಂ ತದಿದಂ ನಾತ್ರ ಸಂಶಯಃ ।
ಸ ತಾಂ ಬುದ್ಧ್ವಾರ್ಥತತ್ತ್ವೇನ ಸಿಂಹಿಕಾಂ ಮತಿಮಾನ್ ಕಪಿಃ ॥ ೧೮೭

ಚಂದ್ರನಂತೆ ಶೋಭಿಸುತ್ತಿದ್ದನು (೧೭೭–೧೭೯). ರೆಕ್ಕೆಯುಳ್ಳ ಬೆಟ್ಟದಂತೆ ಹಾರಿಬರುತ್ತಿದ್ದ ಅವನನ್ನು ಸಿಂಹಿಕೆ ಎಂಬ ಒಬ್ಬ ರಾಕ್ಷಸಿಯು ನೋಡಿದಳು. ಅವಳು ಕಾಮರೂಪಿಣಿ. 'ಆಹಾ! ಬಹಳ ಕಾಲದಮೇಲೆ ನನಗೆ ಹೊಟ್ಟೆ ತುಂಬಾ ಆಹಾರ ಸಿಕ್ಕಿತು. ಈ ದೊಡ್ಡ ಪ್ರಾಣಿ ನನ್ನ ಕೈಗೆ ಸಿಕ್ಕಿಬಿತ್ತು' ಎಂದು ಆಲೋಚಿಸಿ ಸಮುದ್ರದಮೇಲೆ ಇದ್ದ ಹನುಮಂತನ ನೆರಳನ್ನು ಜಗ್ಗಿ ಹಿಡಿದಳು (ಇಂತಹ ಶಕ್ತಿ ಅವಳಿಗೆ ಬ್ರಹ್ಮನ ವರದಿಂದ ಲಭಿಸಿತ್ತು) (೧೮೦–೧೮೩). ಆಗ ಹನುಮಂತನು 'ಇದೇನು! ನನ್ನ ವೇಗಕ್ಕೆ ಅಡ್ಡಿ ಬಂದಿತು. ಎದುರಾಗಿ ಬೀಸುವ ಬಿರುಗಾಳಿಗೆ ಸಿಕ್ಕಿದ ಹಡಗಿನಂತೆ ನನ್ನ ಗತಿಯಾಯಿತು' ಎಂದು ಚಿಂತಿಸಿ ಸುತ್ತಲೂ ಕಣ್ಣಿಟ್ಟು ನೋಡಿದನು. ಆಗ ಸಮುದ್ರದಿಂದ ಮೇಲೆದ್ದ ಈ ದೊಡ್ಡ ಭೂತ ಅವನಿಗೆ ಗೋಚರಿಸಿತು (೧೮೪–೧೮೫). 'ಓಹೋ! ನಮ್ಮ ರಾಜನಾದ ಸುಗ್ರೀವನು ಸಮುದ್ರದಲ್ಲಿ ನೆರಳನ್ನು ಹಿಡಿದೆಳೆಯುವ ಭೂತವಿದೆ ಎಂದು ಹೇಳಿದ್ದನು. ಅದೇ ಈ

ವ್ಯವರ್ಧತ ಮಹಾಕಾಯಃ ಪ್ರಾವೃಷೀವ ಬಲಾಹಕಃ ।
ತಸ್ಯ ಸಾ ಕಾಯಮುದ್ವೀಕ್ಷ್ಯ ವರ್ಧಮಾನಂ ಮಹಾಕಪೇಃ ॥ ೧೮೮

ವಕ್ತ್ರಂ ಪ್ರಸಾರಯಾಮಾಸ ಪಾತಾಲಾಂತರಸಂನಿಭಮ್ ।
ಘನರಾಜೀವ ಗರ್ಜಂತೀ ವಾನರಂ ಸಮಭಿದ್ರವತ್ ॥ ೧೮೯

ಸ ದದರ್ಶ ತತಸ್ತಸ್ಯಾ ವಿವೃತಂ ಸುಮಹನ್ಮುಖಮ್ ।
ಕಾಯಮಾತ್ರಂ ಚ ಮೇಧಾವೀ ಮರ್ಮಾಣಿ ಚ ಮಹಾಕಪಿಃ ॥ ೧೯೦

ಸ ತಸ್ಯಾ ವಿವೃತೇ ವಕ್ತ್ರೇ ವಜ್ರಸಂಹನನಃ ಕಪಿಃ ।
ಸಂಕ್ಷಿಪ್ಯ ಮುಹುರಾತ್ಮಾನಂ ನಿಪಪಾತ ಮಹಾಬಲಃ ॥ ೧೯೧

ಆಸ್ಯೇ ತಸ್ಯಾ ನಿಮಜ್ಜಂತಂ ದದೃಶುಃ ಸಿದ್ಧಚಾರಣಾಃ ।
ಗ್ರಸ್ಯಮಾನಂ ಯಥಾ ಚಂದ್ರಂ ಪೂರ್ಣಂ ಪರ್ವಣಿ ರಾಹುಣಾ ೧೯೨

ತತಸ್ತಸ್ಯಾ ನಖೈಸ್ತೀಕ್ಷ್ಣೈರ್ಮರ್ಮಾಣ್ಯುತ್ಕೃತ್ಯ ವಾನರಃ ।
ಉತ್ಪಪಾತಾಥ ವೇಗೇನ ಮನಃಸಂಪಾತವಿಕ್ರಮಃ ॥ ೧೯೩

ತಾಂ ತು ದೃಷ್ಟ್ವಾ ಚ ಧೃತ್ಯಾ ಚ ದಾಕ್ಷಿಣ್ಯೇನ ನಿಪಾತ್ಯ ಹಿ ।
ಸ ಕಪಿಪ್ರವರೋ ವೇಗಾದ್ವವೃಧೇ ಪುನರಾತ್ಮವಾನ್ ॥ ೧೯೪

ಭೂತ' ಎಂದು ನಿಶ್ಚಯಿಸಿ, ಕೂಡಲೇ ತನ್ನ ದೇಹವನ್ನು ಮಳೆಗಾಲದ ಮೇಘದಂತೆ ದೊಡ್ಡದಾಗಿ ಬೆಳೆಸಿದನು (೧೮೬–೧೮೭). ಆಗ ರಾಕ್ಷಸಿಯು ಪಾತಾಳದಂತೆ ತನ್ನ ಬಾಯನ್ನು ಹಿಗ್ಗಿಸಿ, ಗುಡುಗಿನಂತೆ ಮೊರೆಯುತ್ತ ಹನುಮಂತನನ್ನು ಅಟ್ಟಿಸಿಕೊಂಡು ಬಂದಳು. ಆಂಜನೇಯನು ಅವಳ ದೊಡ್ಡ ಬಾಯನ್ನೂ, ದೇಹದ ಪ್ರಮಾಣವನ್ನೂ, ಅವಳನ್ನು ಸೀಳಿಹಾಕಲು ತಕ್ಕ ಆಯಕಟ್ಟಿನ ಜಾಗವನ್ನೂ ದಿಟ್ಟಿಸಿನೋಡಿದನು. ಆಮೇಲೆ ವಜ್ರದೇಹಿಯಾದ ಆ ಮಹಾಕಪಿಯು ತನ್ನ ದೇಹವನ್ನು ಚಿಕ್ಕದಾಗಿ ಮಾಡಿಕೊಂಡು ರಾಕ್ಷಸಿಯ ಬಾಯಲ್ಲಿ ನುಗ್ಗಿಬಿಟ್ಟನು (೧೮೮–೧೯೧). ಆಗ ಹನುಮಂತನು ಹುಣ್ಣಿಮೆಯ ದಿನ ರಾಹುವಿನ ಬಾಯಲ್ಲಿ ಹೋಗುವ ಚಂದ್ರನಂತೆ ಕಾಣಿಸುತ್ತಿದ್ದನು. ಸಿದ್ಧಚಾರಣರೆಲ್ಲರೂ ಅವನನ್ನೇ ನೋಡುತ್ತಿದ್ದರು. ಅನಂತರ ಆ ವೀರನು ತನ್ನ ಚೂಪಾದ ಉಗುರುಗಳಿಂದ ಸಿಂಹಿಕೆಯ ಮರ್ಮ ಸ್ಥಳಗಳನ್ನು ಸೀಳಿಹಾಕಿ ಮನೋವೇಗದಿಂದ ಹೊರಕ್ಕೆ ಹಾರಿಬಿಟ್ಟನು. ಹೀಗೆ ಧೈರ್ಯದಿಂದಲೂ

ಹೃತಹೃತ್ ಸಾ ಹನುಮತಾ ಪಪಾತ ವಿಧುರಾಂಭಸಿ ।
ಸ್ವಯಂಭುವೇವ ಹನುಮಾನ್ ಸೃಷ್ಟಸ್ತಸ್ಯಾ ವಿನಾಶನೇ ॥ ೧೯೩

ತಾಂ ಹತಾಂ ವಾನರೇಣಾಶು ಪತಿತಾಂ ವೀಕ್ಷ್ಯ ಸಿಂಹಿಕಾಮ್ ।
ಭೂತಾನ್ಯಾಕಾಶಚಾರೀಣಿ ತಮೂಚುಃ ಪ್ಲವಗೋತ್ತಮಮ್ ॥ ೧೯೪

ಭೀಮಮದ್ಯ ಕೃತಂ ಕರ್ಮ ಮಹತ್ ಸತ್ತ್ವಂ ತ್ವಯಾ ಹತಮ್ ।
ಸಾಧಯಾರ್ಥಮಭಿಪ್ರೇತಮರಿಷ್ಟಂ ಪ್ಲವತಾಂ ವರ ॥ ೧೯೭

ಯಸ್ಯ ತ್ವೇತಾನಿ ಚತ್ವಾರಿ ವಾನರೇಂದ್ರ ಯಥಾ ತವ ।
ಸ್ಮೃತಿರ್ಧೃತಿರ್ಮತಿರ್ದಾಕ್ಷ್ಯಂ ಸ ಕರ್ಮಸು ನ ಸೀದತಿ ॥ ೧೯೮

ಸ ತೈಃ ಸಂಭಾವಿತಃ ಪೂಜ್ಯೈಃ ಪ್ರತಿಪನ್ನಪ್ರಯೋಜನಃ ।
ಜಗಾಮಾಕಾಶಮಾವಿಶ್ಯ ಪನ್ನಗಾಶನವತ್ ಕಪಿಃ ॥ ೧೯೯

ಪ್ರಾಪ್ತಭೂಯಿಷ್ಠಪಾರಸ್ತು ಸರ್ವತಃ ಪ್ರತಿಲೋಕಯನ್ ।
ಯೋಜನಾನಾಂ ಶತಸ್ಯಾಂತೇ ವನರಾಜಿಂ ದದರ್ಶ ಸಃ ॥ ೨೦೦

ದದರ್ಶ ಚ ಪತನ್ನೇವ ವಿವಿಧದ್ರುಮಭೂಷಿತಮ್ ।
ದ್ವೀಪಂ ಶಾಖಾಮೃಗಶ್ರೇಷ್ಠೋ ಮಲಯೋಪವನಾನಿ ಚ ॥ ೨೦೧

ಕೌಶಲ್ಯದಿಂದಲೂ ಅವಳನ್ನು ಕೊಂದುಹಾಕಿ, ಪುನಃ ಮೊದಲಿನಂತೆ ತನ್ನ ದೇಹವನ್ನು ಬೆಳೆಸಿಕೊಂಡನು (೧೯೨–೧೯೪). ಸಿಂಹಿಕೆಯ ಎದೆಯು ಸೀಳಿ ಹೋಯಿತು. ಅವಳು ಸತ್ತು ನೀರಿನಲ್ಲಿ ಬಿದ್ದುಹೋದಳು. ಅವಳನ್ನು ಕೊಲ್ಲುವುದಕ್ಕಾಗಿಯೇ ಬ್ರಹ್ಮನು ಹನುಮಂತನನ್ನು ಸೃಷ್ಟಿಸಿದ್ದನೋ ಏನೋ! (೧೯೩). ಆಕಾಶದಲ್ಲಿ ಸಂಚರಿಸುತ್ತಿದ್ದ ದೇವತೆಗಳು ''ವಾನರೋತ್ತಮ, ನೀನು ಮಾಡಿದ ಕೆಲಸ ಅಸಾಧಾರಣವಾದದ್ದು. ಈ ಭಯಂಕರವಾದ ಭೂತವನ್ನು ನೀನು ಕೊಂದುಹಾಕಿರುವೆ. ನಿನ್ನ ಕಾರ್ಯವು ನಿರ್ವಿಘ್ನವಾಗಿ ನೆರವೇರಲಿ. ನಿನಗಿರುವಂತೆ ಸಮಯಸ್ಫೂರ್ತಿ, ಧೈರ್ಯ, ವಿವೇಕ, ದಕ್ಷತೆಗಳು ಇರುವವನಿಗೆ ಅಪಜಯವೆಂಬುದೇ ಇಲ್ಲ'' ಎಂದು ಕೊಂಡಾಡಿದರು (೧೯೬–೧೯೮). ಹನುಮಂತನು ಹೀಗೆ ಅವರಿಂದ ಸಮ್ಮಾನಿತನಾಗಿ, ಗರುಡವೇಗದಿಂದ ಹೋಗುತ್ತ ಸುಮಾರು ನೂರು ಯೋಜನಗಳಷ್ಟು ದೂರ ಬಂದುಬಿಟ್ಟನು. ಮುಂದೆ ನೋಡುತ್ತಿರುವಾಗ

ಸಾಗರಾಂ ಸಾಗರಾನೂಪಂ ಸಾಗರಾನೂಪಜಾನ್ ದ್ರುಮಾನ್ ।
ಸಾಗರಸ್ಯ ಚ ಪತ್ನೀನಾಂ ಮುಖಾನ್ಯಪಿ ವಿಲೋಕಯನ್ ॥ ೨೦೨

ಸ ಮಹಾಮೇಘಸಂಕಾಶಂ ಸಮೀಕ್ಷ್ಯಾತ್ಮಾನಮಾತ್ಮವಾನ್ ।
ನಿರುಂಧಂತಮಿವಾಕಾಶಂ ಚಕಾರ ಮತಿಮಾನ್ ಮತಿಮ್ ॥ ೨೦೩

ಕಾಯವೃದ್ಧಿಂ ಪ್ರವೇಗಂ ಚ ಮಮ ದೃಷ್ಟ್ವೈವ ರಾಕ್ಷಸಾಃ ।
ಮಯಿ ಕೌತೂಹಲಂ ಕುರ್ಯುರಿತಿ ಮೇನೇ ಮಹಾಕಪಿಃ ॥ ೨೦೪

ತತಃ ಶರೀರಂ ಸಂಕ್ಷಿಪ್ಯ ತನ್ಮಹೀಧರಸಂನಿಭಮ್ ।
ಪುನಃ ಪ್ರಕೃತಿಮಾಪೇದೇ ವೀತಮೋಹ ಇವಾತ್ಮವಾನ್ ॥ ೨೦೫

ತದ್ರೂಪಮತಿಸಂಕ್ಷಿಪ್ಯ ಹನೂಮಾನ್ ಪ್ರಕೃತೌ ಸ್ಥಿತಃ ।
ತ್ರೀನ್ ಕ್ರಮಾನಿವ ವಿಕ್ರಮ್ಯ ಬಲಿವೀರ್ಯಹರೋ ಹರಿಃ ॥ ೨೦೬

ಸ ಚಾರುನಾನಾವಿಧರೂಪಧಾರೀ
ಪರಂ ಸಮಾಸಾದ್ಯ ಸಮುದ್ರತೀರಮ್ ।
ಪರೈರಶಕ್ಯಂ ಪ್ರತಿಪನ್ನರೂಪಃ
ಸಮೀಕ್ಷಿತಾತ್ಮಾ ಸಮವೇಕ್ಷಿತಾರ್ಥಃ ॥ ೨೦೭

ಸಮುದ್ರತೀರದಲ್ಲಿ ಒಂದು ಅರಣ್ಯದ ಸಾಲು ಗೋಚರಿಸಿತು. ಹಾಗೆಯೇ ಹಾರಿ ಬರುತ್ತಿರಲು ನಾನಾ ವೃಕ್ಷಗಳಿಂದ ಭೂಷಿತವಾದ ದ್ವೀಪವೂ ಮಲಯಪರ್ವತದ ಉಪವನಗಳೂ ಗೋಚರಿಸಿದವು (೧೯೯–೨೦೧). ಆಮೇಲೆ ದಕ್ಷಿಣತೀರದ ಸಮುದ್ರಪ್ರದೇಶವೂ, ತೀರದ ಜೌಗು ನೆಲವೂ, ನದಿಗಳು ಸಮುದ್ರಕ್ಕೆ ಧುಮುಕುವ ಸಂಗಮ ಸ್ಥಳಗಳೂ ಅವನಿಗೆ ಕಾಣಿಸಿದವು (೨೦೨). ಆಂಜನೇಯನು ಮಹಾ ಬುದ್ಧಿಶಾಲಿ. 'ಆಕಾಶವನ್ನೇ ವ್ಯಾಪಿಸಿದಂತಿದ್ದ ತನ್ನ ದೊಡ್ಡ ದೇಹವನ್ನು ನೋಡಿ ರಾಕ್ಷಸರು ಕುತೂಹಲದಿಂದ ಬಂದು ನೆರೆದುಬಿಟ್ಟಾರು' ಎಂದು ಆಲೋಚಿಸಿ, ಕೂಡಲೇ ತನ್ನ ದೇಹವನ್ನು ಚಿಕ್ಕದಾಗಿ ಮಾಡಿಕೊಂಡನು. ಅವನು ರಾಗದ್ವೇಷ ಗಳಿಂದ ವಿಮುಕ್ತನಾದ ಯೋಗಿಯಂತೆಯೂ ಮೂರು ಹೆಜ್ಜೆಗಳಿಂದ ಜಗತ್ತನ್ನೇ ಅಳೆದು ಮತ್ತೆ ವಾಮನರೂಪವನ್ನು ಧರಿಸಿದ ಮಹಾವಿಷ್ಣುವಿನಂತೆಯೂ ತನ್ನ ನಿಜಸ್ವರೂಪವನ್ನು ಪಡೆದನು (೨೦೩–೨೦೬). ಈ ರೀತಿಯಲ್ಲಿ ಆಂಜನೇಯನು

ತತಃ ಸ ಲಂಬಸ್ಯ ಗಿರೇಃ ಸಮೃದ್ಧೇ
ವಿಚಿತ್ರಕೂಟೇ ನಿಪಪಾತ ಕೂಟೇ ।
ಸಕೇತಕೋದ್ದಾಲಕನಾರಿಕೇಲೇ
ಮಹಾದ್ರಿಕೂಟಪ್ರತಿಮೋ ಮಹಾತ್ಮಾ ॥ ೨೦೮

ತತಸ್ತು ಸಂಪ್ರಾಪ್ಯ ಸಮುದ್ರತೀರಂ
ಸಮೀಕ್ಷ್ಯ ಲಂಕಾಂ ಗಿರಿರಾಜಮೂರ್ಧ್ನಿ ।
ಕಪಿಸ್ತು ತಸ್ಮಿನ್ನಿಪಪಾತ ಪರ್ವತೇ
ವಿಧೂಯ ರೂಪಂ ವ್ಯಥಯನ್ ಮೃಗದ್ವಿಜಾನ್ ॥ ೨೦೯

ಸ ಸಾಗರಂ ದಾನವಪನ್ನಗಾಯುತಂ
ಬಲೇನ ವಿಕ್ರಮ್ಯ ಮಹೋರ್ಮಿಮಾಲಿನಮ್ ।
ನಿಪತ್ಯ ತೀರೇ ಚ ಮಹೋದಧೇಸ್ತದಾ
ದದರ್ಶ ಲಂಕಾಮಮರಾವತೀಮಿವ ॥ ೨೧೦

ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯೇ ಆದಿಕಾವ್ಯೇ ಚತುರ್ವಿಂಶತಿ ಸಹಸ್ರಿಕಾಯಾಂ ಸಂಹಿತಾಯಾಂ ಸುಂದರಕಾಂಡೇ ಪ್ರಥಮಃ ಸರ್ಗಃ

ಆಯಾ ಕಾರ್ಯಗಳಿಗೆ ತಕ್ಕ ರೂಪಗಳನ್ನು ಧರಿಸುತ್ತ ಇತರರಿಗೆ ದುರ್ಗಮವಾಗಿದ್ದ ಸಮುದ್ರದ ಆಚೆಯ ತೀರಕ್ಕೆ ಬಂದು ಸೇರಿದನು. ದೂರದಿಂದಲೇ ಲಂಕಾನಗರಿಯನ್ನು ನೋಡುತ್ತ ತೆಂಗು, ಶ್ಲೇಷ್ಮಾತಕ ಮುಂತಾದ ನಾನಾ ವೃಕ್ಷಗಳಿಂದ ಶೋಭಿತವಾದ, ತ್ರಿಕೂಟ ಪರ್ವತದ ಲಂಬ ಎಂಬ ಹೆಸರಿನ ಉನ್ನತ ಶಿಖರದ ಮೇಲೆ ಧುಮುಕಿದನು (೨೦೭–೨೦೮). ಧುಮುಕಿದ ರಭಸಕ್ಕೆ ಹೆದರಿ ಅಲ್ಲಿದ್ದ ಮೃಗಪಕ್ಷಿಗಳು ಓಡಿಹೋದವು. ಹೀಗೆ ದಾನವ ಪನ್ನಗರಿಗೆ ಆಶ್ರಯವಾಗಿಯೂ ಬೃಹತ್ತರಂಗಗಳಿಂದ ಭೀಷಣವಾಗಿಯೂ ಇರುವ ಮಹಾಸಾಗರವನ್ನು ತನ್ನ ಸಾಮರ್ಥ್ಯದಿಂದ ಲಂಘಿಸಿ, ಅಮರಾವತಿಯಂತೆ ಸುಂದರವಾಗಿದ್ದ ಲಂಕಾನಗರಿಯನ್ನು ಹನುಮಂತನು ವೀಕ್ಷಿಸಿದನು (೨೦೯–೨೧೦).

ಇಲ್ಲಿಗೆ ಶ್ರೀಮದ್ರಾಮಾಯಣದ ಸುಂದರಕಾಂಡದಲ್ಲಿ ಒಂದನೆಯ ಸರ್ಗ

ದ್ವಿತೀಯಃ ಸರ್ಗಃ

ನಿಶಾಗಮಪ್ರತೀಕ್ಷಾ

ಸ ಸಾಗರಮನಾಧೃಷ್ಯಮತಿಕ್ರಮ್ಯ ಮಹಾಬಲಃ ।
ತ್ರಿಕೂಟಶಿಖರೇ ಲಂಕಾಂ ಸ್ಥಿತಾಂ ಸ್ವಸ್ಥೋ ದದರ್ಶ ಹ ॥ ೧
ತತಃ ಪಾದಪಮುಕ್ತೇನ ಪುಷ್ಪವರ್ಷೇಣ ವೀರ್ಯವಾನ್ ।
ಅಭಿವೃಷ್ಟಃ ಸ್ಥಿತಸ್ತತ್ರ ಬಭೌ ಪುಷ್ಪಮಯೋ ಯಥಾ ॥ ೨
ಯೋಜನಾನಾಂ ಶತಂ ಶ್ರೀಮಾಂಸ್ತೀರ್ತ್ವಾಪ್ಯುತ್ತಮವಿಕ್ರಮಃ ।
ಅನಿಃಶ್ವಸನ್ ಕಪಿಸ್ತತ್ರ ನ ಗ್ಲಾನಿಮಧಿಗಚ್ಛತಿ ॥ ೩
ಶತಾನ್ಯಹಂ ಯೋಜನಾನಾಂ ಕ್ರಮೇಯಂ ಸುಬಹೂನ್ಯಪಿ ।
ಕಿಂ ಪುನಃ ಸಾಗರಸ್ಯಾಂತಂ ಸಂಖ್ಯಾತಂ ಶತಯೋಜನಮ್ ॥ ೪
ಸ ತು ವೀರ್ಯವತಾಂ ಶ್ರೇಷ್ಠಃ ಪ್ಲವತಾಮಪಿ ಚೋತ್ತಮಃ ।
ಜಗಾಮ ವೇಗವಾನ್ ಲಂಕಾಂ ಲಂಘಯಿತ್ವಾ ಮಹೋದಧಿಮ್ ॥ ೫

ಸರ್ಗ ೨

ಹನುಮಂತನು ಸಮೀಪಕ್ಕೆ ಹೋಗಿ ಲಂಕೆಯನ್ನು ನೋಡುವುದು.
ಅದರ ರಕ್ಷಣಾಬಲವನ್ನು ಕಂಡು ಚಿಂತಿಸುವುದು.

ಮಹಾಬಲಶಾಲಿಯಾದ ಹನುಮಂತನು ದುಷ್ಪಾರವಾದ ಸಮುದ್ರವನ್ನು ಲಂಘಿಸಿ, ಶಾಂತಚಿತ್ತನಾಗಿ ತ್ರಿಕೂಟಪರ್ವತದ ಮೇಲಿದ್ದ ಲಂಕಾನಗರವನ್ನು ನೋಡಿದನು (೧). ಆ ಪರ್ವತದ ಮೇಲಿದ್ದ ಮರಗಳಿಂದ ಹೂಗಳು ಬಳಬಳನೆ ಅವನ ಮೇಲೆ ಉದುರಿದವು. ಆತನು ಹೂವಿನ ಹನುಮಂತನಾದನು! ಆ ಪರಾಕ್ರಮಿಗೆ ನೂರು ಯೋಜನಗಳನ್ನು ಲಂಘಿಸಿದರೂ ದಣಿವಾಗಲಿಲ್ಲ. ಅವನು ಒಂದುಸಲವೂ ನಿಟ್ಟುಸಿರನ್ನು ಬಿಡಲಿಲ್ಲ. 'ಈ ನೂರು ಯೋಜನಗಳು ಯಾವ ಲೆಕ್ಕಕ್ಕೆ ? ಇಂತಹ ಎಷ್ಟು ನೂರು ಯೋಜನಗಳನ್ನಾದರೂ ದಾಟಬಲ್ಲೆನು' ಎಂದು ಮನಸ್ಸಿನಲ್ಲಿ ಅಂದುಕೊಂಡನು (೨-೪). ವಾನರಶ್ರೇಷ್ಠನಾದ ಆಂಜನೇಯನು ಹೀಗೆ ಸಮುದ್ರವನ್ನು ದಾಟಿ ಲಂಕೆಯನ್ನು ಸಮೀಪಿಸಿದನು. ಅಲ್ಲಿದ್ದ ಹಸುರಾದ

ಶಾದ್ವಲಾನಿ ಚ ನೀಲಾನಿ ಗಂಧವಂತಿ ವನಾನಿ ಚ ।
ಗಂಡವಂತಿ ಚ ಮಧ್ಯೇನ ಜಗಾಮ ನಗವಂತಿ ಚ ॥ ೬
ಶೈಲಾಂಶ್ಚ ತರುಭಿಶ್ಛನ್ನಾನ್ ವನರಾಜೀಶ್ಚ ಪುಷ್ಪಿತಾಃ ।
ಅಭಿಚಕ್ರಾಮ ತೇಜಸ್ವೀ ಹನುಮಾನ್ ಪ್ಲವಗರ್ಷಭಃ ॥ ೭
ಸ ತಸ್ಮಿನ್ನಚಲೇ ತಿಷ್ಠನ್ ವನಾನ್ಯುಪವನಾನಿ ಚ ।
ಸ ನಗಾಗ್ರೇ ಸ್ಥಿತಾಂ ಲಂಕಾಂ ದದರ್ಶ ಪವನಾತ್ಮಜಃ ॥ ೮
ಸರಲಾನ್ ಕರ್ಣಿಕಾರಾಂಶ್ಚ ಖರ್ಜೂರಾಂಶ್ಚ ಸುಪುಷ್ಪಿತಾನ್ ।
ಪ್ರಿಯಾಲಾನ್ ಮುಚುಲಿಂದಾಂಶ್ಚ ಕುಟಜಾನ್ ಕೇತಕಾನಪಿ ॥ ೯
ಪ್ರಿಯಂಗೂನ್ ಗಂಧಪೂರ್ಣಾಂಶ್ಚ ನೀಪಾನ್ ಸಪ್ತಚ್ಛದಾಂಸ್ತಥಾ ।
ಅಸನಾನ್ ಕೋವಿದಾರಾಂಶ್ಚ ಕರವೀರಾಂಶ್ಚ ಪುಷ್ಪಿತಾನ್ ॥ ೧೦
ಪುಷ್ಪಭಾರನಿಬದ್ಧಾಂಶ್ಚ ತಥಾ ಮುಕುಲಿತಾನಪಿ ।
ಪಾದಪಾನ್ ವಿಹಗಾಕೀರ್ಣಾನ್ ಪವನಾಧೂತಮಸ್ತಕಾನ್ ॥ ೧೧
ಹಂಸಕಾರಂಡವಾಕೀರ್ಣಾ ವಾಪೀಃ ಪದ್ಮೋತ್ಪಲಾಯುತಾಃ ।
ಆಕ್ರೀಡಾನ್ ವಿವಿಧಾನ್ ರಮ್ಯಾನ್ ವಿವಿಧಾಂಶ್ಚ ಜಲಾಶಯಾನ್ ॥ ೧೨

ಹುಲ್ಲುಗಾವಲನ್ನೂ ಸುಗಂಧಮಯವಾದ ಅರಣ್ಯವನ್ನೂ ದೊಡ್ಡ ದೊಡ್ಡ ಬಂಡೆಗಳೂ ಗುಡ್ಡಗಳೂ ಇರುವ ಪ್ರದೇಶಗಳನ್ನೂ ಪುಷ್ಪಿತ ವೃಕ್ಷಗಳಿಂದ ಶೋಭಿಸುವ ಗಿರಿಗಳನ್ನೂ ದಾಟುತ್ತ ಲಂಕೆಯ ಕಡೆಗೆ ಹೋದನು (೫-೭). ಆ ಕಪಿಕುಂಜರನು ಸುತ್ತಲೂ ಬೆಳೆದಿದ್ದ ದೇವದಾರು, ಕಣಗಲು, ಖರ್ಜೂರ, ಪ್ರಿಯಾಲ, ಜಂಬೀರ, ಕೊಡಸು ಮುಂತಾದ ವೃಕ್ಷಗಳು ಹೂಗಳಿಂದಲೂ ಹಣ್ಣುಗಳಿಂದಲೂ ಬಳಕುತ್ತಿದ್ದುದನ್ನು ಕಂಡನು. ಹಕ್ಕಿಗಳು ಮರದಿಂದ ಮರಕ್ಕೆ ಹಾರಾಡುತ್ತಿದ್ದವು. ಮರಗಳ ತುದಿಗಳು ಗಾಳಿಗೆ ಅಲ್ಲಾಡುತ್ತಿದ್ದವು. ಬಗೆಬಗೆಯ ನೀರುಹಕ್ಕಿಗಳಿಂದಲೂ ತಾವರೆ, ನೈದಿಲೆ ಮುಂತಾದ ಹೂಗಳಿಂದಲೂ ತುಂಬಿದ ಸರೋವರಗಳಿದ್ದವು. ಅಲ್ಲಲ್ಲಿ ಕ್ರೀಡಾ ಪರ್ವತಗಳಿದ್ದವು. ಸಮಸ್ತ ಋತುಗಳಲ್ಲಿಯೂ ಹೂ ಹಣ್ಣುಗಳನ್ನು ಬಿಡತಕ್ಕ ಮನೋಹರವಾದ ಉದ್ಯಾನವನಗಳಿದ್ದವು. ಅವುಗಳೆಲ್ಲವನ್ನೂ ನೋಡುತ್ತ ಹನುಮಂತನು ಲಂಕೆಯ ಬಳಿಗೆ

ಸಂತತಾನ್ ವಿವಿಧೈರ್ವೃಕ್ಷೈಃ ಸರ್ವರ್ತುಫಲಪುಷ್ಪಿತೈಃ ।
ಉದ್ಯಾನಾನಿ ಚ ರಮ್ಯಾಣಿ ದದರ್ಶ ಕಪಿಕುಂಜರಃ ॥ ೧೩

ಸಮಾಸಾದ್ಯ ಚ ಲಕ್ಷ್ಮೀವಾನ್ ಲಂಕಾಂ ರಾವಣಪಾಲಿತಾಮ್ ।
ಪರಿಖಾಭಿಃ ಸಪದ್ಮಾಭಿಃ ಸೋತ್ಪಲಾಭಿರಲಂಕೃತಾಮ್ ॥ ೧೪

ಸೀತಾಪಹರಣಾರ್ತ್ಥೇನ ರಾವಣೇನ ಸುರಕ್ಷಿತಾಮ್ ।
ಸಮಂತಾದ್ವಿಚರದ್ಭಿಶ್ಚ ರಾಕ್ಷಸೈಃ ಕಾಮರೂಪಿಭಿಃ ॥ ೧೫

ಕಾಂಚನೇನಾವೃತಾಂ ರಮ್ಯಾಂ ಪ್ರಾಕಾರೇಣ ಮಹಾಪುರೀಮ್ ।
ಗೃಹೈಶ್ಚ ಗ್ರಹಸಂಕಾಶೈಃ ಶಾರದಾಂಬುದಸಂನಿಭೈಃ ॥ ೧೬

ಪಾಂಡರಾಭಿಃ ಪ್ರತೋಲೀಭಿರುಚ್ಚಾಭಿರಭಿಸಂವೃತಾಮ್ ।
ಅಟ್ಟಾಲಕಶತಾಕೀರ್ಣಾಂ ಪತಾಕಾಧ್ವಜಮಾಲಿನೀಮ್ ॥ ೧೭

ತೋರಣೈಃ ಕಾಂಚನೈರ್ದೀಪ್ತಾಂ ಲತಾಪಂಕ್ತಿವಿಚಿತ್ರಿತೈಃ ।
ದದರ್ಶ ಹನುಮಾನ್ ಲಂಕಾಂ ದಿವಿ ದೇವಪುರೀಮಿವ ॥ ೧೮

ಗಿರಿಮೂರ್ಧ್ನಿ ಸ್ಥಿತಾಂ ಲಂಕಾಂ ಪಾಂಡರೈರ್ಭವನೈಃ ಶುಭೈಃ ।
ಸ ದದರ್ಶ ಕಪಿಃ ಶ್ರೀಮಾನ್ ಪುರಮಾಕಾಶಗಂ ಯಥಾ ॥ ೧೯

ಬಂದನು (೮-೧೩). ಆ ನಗರದ ಸುತ್ತಲೂ ಕಂದಕಗಳಿದ್ದವು. ಕಂದಕದ ಜಲದಲ್ಲಿ ತಾವರೆಗಳೂ ನೈದಿಲೆಗಳೂ ಅರಳಿದ್ದವು. ರಾವಣನು ಲಂಕೆಯ ಸುತ್ತಲೂ ಕಾವಲನ್ನು ಬಿಗಿಪಡಿಸಿದ್ದನು. ಕಾಮರೂಪಿಗಳಾದ ರಾಕ್ಷಸರು ಸುತ್ತಲೂ ಪಹರೆ ಕೊಡುತ್ತಿದ್ದರು (೧೪-೧೫). ಸುವರ್ಣಮಯವಾದ ಕೋಟೆಯು ನಗರವನ್ನು ಆವರಿಸಿತ್ತು. ನಗರದಲ್ಲಿ ಗ್ರಹಗಳಂತೆ ದೊಡ್ಡದಾಗಿಯೂ ಶರತ್ಕಾಲದ ಮೋಡದಂತೆ ಬಿಳುಪಾಗಿಯೂ ಇರುವ ಸೌಧಗಳು, ಎದ್ದುಕಾಣುವ ಸ್ವಚ್ಛವಾದ ರಾಜಬೀದಿಗಳ ಎರಡು ಪಾರ್ಶ್ವಗಳಲ್ಲಿಯೂ ಸಾಲಾಗಿ ಹಬ್ಬಿದ್ದವು. ನೂರಾರು ಗೋಪುರಗಳೂ, ಬಾವುಟಗಳು ಹಾರಾಡುತ್ತಿದ್ದ ಧ್ವಜಸ್ತಂಭಗಳೂ ಶೋಭಿಸುತ್ತಿದ್ದವು (೧೬-೧೭). ಅಮರಾವತಿಯಂತೆ ಇದ್ದ ಲಂಕಾ ನಗರಿಗೆ ಸುವರ್ಣಮಯವಾದ ದೊಡ್ಡ ಬಾಗಿಲುಗಳಿದ್ದವು. ಅವುಗಳನ್ನು ಬಳ್ಳಿಗಳಂತೆ ವಿಚಿತ್ರವಾದ ಕೆತ್ತನೆಗಳಿಂದ ಅಲಂಕರಿಸಿದ್ದರು (೧೮). ಶುಭ್ರವಾದ ಉನ್ನತ ಭವನಗಳಿಂದ ಶೋಭಿತವಾಗಿಯೂ ರಾಕ್ಷಸರಾಜನಿಂದ

ಪಾಲಿತಾಂ ರಾಕ್ಷಸೇಂದ್ರೇಣ ನಿರ್ಮಿತಾಂ ವಿಶ್ವಕರ್ಮಣಾ ।
ಪ್ಲವಮಾನಾಮಿವಾಕಾಶೇ ದದರ್ಶ ಹನುಮಾನ್ ಪುರೀಮ್ ॥ ೨೦

ವಪ್ರಪ್ರಾಕಾರಜಘನಾಂ ವಿಪುಲಾಂಬುವನಾಂಬರಾಮ್ ।
ಶತಘ್ನೀಶೂಲಕೇಶಾಂತಾಮಟ್ಟಾಲಕವತಂಸಕಾಮ್ ॥ ೨೧

ಮನಸೇವ ಕೃತಾಂ ಲಂಕಾಂ ನಿರ್ಮಿತಾಂ ವಿಶ್ವಕರ್ಮಣಾ ।
ದ್ವಾರಮುತ್ತರಮಾಸಾದ್ಯ ಚಿಂತಯಾಮಾಸ ವಾನರಃ ॥ ೨೨

ಕೈಲಾಸನಿಲಯಪ್ರಖ್ಯಮಾಲಿಖಂತಮಿವಾಂಬರಮ್ ।
ಧ್ರಿಯಮಾಣಮಿವಾಕಾಶಮುಚ್ಛ್ರಿತೈರ್ಭವನೋತ್ತಮೈಃ ॥ ೨೩

ಸಂಪೂರ್ಣಾಂ ರಾಕ್ಷಸೈರ್ಘೋರೈರ್ನಾಗೈರ್ಭೋಗವತೀಮಿವ ।
ಅಚಿಂತ್ಯಾಂ ಸುಕೃತಾಂ ಸ್ಪಷ್ಟಾಂ ಕುಬೇರಾಧ್ಯುಷಿತಾಂ ಪುರಾ ॥ ೨೪

ದಂಷ್ಟ್ರಿಭಿರ್ಬಹುಭಿಃ ಶೂರೈಃ ಶೂಲಪಟ್ಟಿಶಪಾಣಿಭಿಃ ।
ರಕ್ಷಿತಾಂ ರಾಕ್ಷಸೈರ್ಘೋರೈರ್ಗುಹಾಮಾಶೀವಿಷೈರಿವ ॥ ೨೫

ಪಾಲಿತವಾಗಿಯೂ ಇದ್ದ ಲಂಕಾಪುರಿಯನ್ನು ಹನುಮಂತನು ಕಂಡನು. ವಿಶ್ವಕರ್ಮನು ನಿರ್ಮಿಸಿದ ಆ ಪಟ್ಟಣವು ಆಕಾಶದಲ್ಲಿ ತೇಲುತ್ತಿರುವಂತೆ ಭಾಸವಾಯಿತು (೧೯–೨೦). ಪ್ರಾಕಾರವೆಂಬ ಜಘನದಿಂದಲೂ, ಸಮುದ್ರ ಮತ್ತು ಅರಣ್ಯಗಳೆಂಬ ಸೀರೆಯಿಂದಲೂ, ಶತಘ್ನಿ-ಶೂಲಗಳೆಂಬ ತಲೆಗೂದಲಿನಿಂದಲೂ, ಗೋಪುರಗಳೆಂಬ ಹೂಮುಡಿಯಿಂದಲೂ ಲಂಕಾಪುರಿಯು ಒಬ್ಬ ಸುಂದರ ಯುವತಿಯಂತೆ ಕಾಣುತ್ತಿದ್ದಿತು (೨೧). ವಿಶ್ವಕರ್ಮನು ಮನಸ್ಸಂಕಲ್ಪದಿಂದಲೇ ನಿರ್ಮಿಸಿರುವನೋ ಎಂಬಂತೆ ಅತ್ಯಂತ ಸುಂದರವಾದ ಲಂಕಾಪಟ್ಟಣವನ್ನು ಹನುಮಂತನು ದೂರದಿಂದಲೇ ನೋಡುತ್ತ, ಉತ್ತರದಿಕ್ಕಿನ ಕೋಟೆಯ ಬಾಗಿಲಿನ ಬಳಿಗೆ ಬಂದನು (೨೨). ಲಂಕಾಪಟ್ಟಣವು ಪರ್ವತದ ಮೇಲೆ ಇದ್ದುದರಿಂದ ಕೈಲಾಸನಗರದಂತೆಯೂ, ಅತ್ಯುನ್ನತ ಭವನಗಳಿಂದ ಆಕಾಶವನ್ನೇ ಹೊತ್ತು ನಿಂತಿದೆಯೋ ಎಂಬಂತೆಯೂ, ಘೋರ ರಾಕ್ಷಸರಿಂದ ತುಂಬಿಹೋದ್ದರಿಂದ ಮಹಾಸರ್ಪಗಳಿರುವ ಪಾತಾಳನಗರಿಯಾದ ಭೋಗವತಿಯಂತೆಯೂ

ತಸ್ಯಾಶ್ಚ ಮಹತೀಂ ಗುಪ್ತಿಂ ಸಾಗರಂ ಚ ಸಮೀಕ್ಷ್ಯ ಸಃ ।
ರಾವಣಂ ಚ ರಿಪುಂ ಘೋರಂ ಚಿಂತಯಾಮಾಸ ವಾನರಃ ॥ ೨೬

ಆಗತ್ಯಾಪೀಹ ಹರಯೋ ಭವಿಷ್ಯಂತಿ ನಿರರ್ಥಕಾಃ ।
ನ ಹಿ ಯುದ್ಧೇನ ವೈ ಲಂಕಾ ಶಕ್ಯಾ ಜೇತುಂ ಸುರೈರಪಿ ॥ ೨೭

ಇಮಾಂ ತು ವಿಷಮಾಂ ದುರ್ಗಾಂ ಲಂಕಾಂ ರಾವಣಪಾಲಿತಾಮ್ ।
ಪ್ರಾಪ್ಯಾಪಿ ಸ ಮಹಾಬಾಹುಃ ಕಿಂ ಕರಿಷ್ಯತಿ ರಾಘವಃ ॥ ೨೮

ಅವಕಾಶೋ ನ ಸಾಂತ್ವಸ್ಯ ರಾಕ್ಷಸೇಷ್ವಭಿಗಮ್ಯತೇ ।
ನ ದಾನಸ್ಯ ನ ಭೇದಸ್ಯ ನೈವ ಯುದ್ಧಸ್ಯ ದೃಶ್ಯತೇ ॥ ೨೯

ಚತುರ್ಣಾಮೇವ ಹಿ ಗತಿರ್ವಾನರಾಣಾಂ ಮಹಾತ್ಮನಾಮ್ ।
ವಾಲಿಪುತ್ರಸ್ಯ ನೀಲಸ್ಯ ಮಮ ರಾಜ್ಞಶ್ಚ ಧೀಮತಃ ॥ ೩೦

ಯಾವಜ್ಜಾನಾಮಿ ವೈದೇಹೀಂ ಯದಿ ಜೀವತಿ ವಾ ನ ವಾ ।
ತತ್ರೈವ ಚಿಂತಯಿಷ್ಯಾಮಿ ದೃಷ್ಟ್ವಾ ತಾಂ ಜನಕಾತ್ಮಜಾಮ್ ॥ ೩೧

ಕಾಣುತ್ತಿದ್ದಿತು. ಪೂರ್ವದಲ್ಲಿ ಅದು ಕುಬೇರನಿಗೆ ವಾಸಸ್ಥಾನವಾಗಿತ್ತು. ಶೂಲ, ಪಟ್ಟಿಶ ಮೊದಲಾದ ಆಯುಧಗಳನ್ನು ಧರಿಸಿ ಕೋರೆದಾಡೆಗಳಿದ್ದ ಭಯಂಕರ ರಾಕ್ಷಸರು, ಸರ್ಪಗಳು ಗುಹೆಯನ್ನು ಕಾಯುವಂತೆ ಲಂಕೆಯನ್ನು ಕಾಯುತ್ತಿದ್ದರು (೨೩–೨೫). ಆ ನಗರಕ್ಕಿದ್ದ ಪ್ರಬಲವಾದ ರಕ್ಷಣೆಯನ್ನೂ, ವಿಶಾಲವಾದ ಸಮುದ್ರ ವನ್ನೂ, ಘೋರಶತ್ರುವಾದ ರಾವಣನನ್ನೂ ಕುರಿತು ಪರ್ಯಾಲೋಚಿಸಿದಾಗ, ಆಂಜನೇಯನ ಮನಸ್ಸಿನಲ್ಲಿ ದೊಡ್ಡ ಚಿಂತೆ ಹುಟ್ಟಿತು (೨೬). 'ನಮ್ಮ ವಾನರರು ಇಲ್ಲಿಗೆ ಬಂದರೂ ಉಪಯೋಗವಿಲ್ಲ. ಈ ಲಂಕೆಯನ್ನು ಗೆಲ್ಲಲು ದೇವತೆಗಳಿಗೂ ಸಾಧ್ಯವಿಲ್ಲ. ಮಹಾಬಾಹುವಾದ ಶ್ರೀರಾಮಚಂದ್ರನೇ ಇಲ್ಲಿಗೆ ಬಂದರೂ ಏನುಮಾಡಬಲ್ಲನು? ಸಾಮ, ದಾನ, ಭೇದ, ದಂಡಗಳೆಂಬ ನಾಲ್ಕು ಉಪಾಯ ಗಳಿಗೂ ಈ ರಾಕ್ಷಸರು ಜಗ್ಗುವವರಲ್ಲ (೨೭–೨೯). ವಾನರರಲ್ಲಿಯೂ ಎಷ್ಟು ಮಂದಿ ಇಲ್ಲಿಗೆ ಬಂದಾರು? ಬಂದರೆ ಅಂಗದ, ನೀಲ, ನಾನು, ನಮ್ಮ ರಾಜ ಸುಗ್ರೀವ ಈ ನಾಲ್ವರೇ! ಇರಲಿ. ಜನಕಪುತ್ರಿಯು ಬದುಕಿರುವಳೋ ಇಲ್ಲವೋ ಎಂಬುದನ್ನು

ತತಃ ಸ ಚಿಂತಯಾಮಾಸ ಮುಹೂರ್ತಂ ಕಪಿಕುಂಜರಃ ।
ಗಿರಿಶೃಂಗೇ ಸ್ಥಿತಸ್ತಸ್ಮಿನ್ ರಾಮಸ್ಯಾಭ್ಯುದಯೇ ರತಃ ॥ ೩೨

ಅನೇನ ರೂಪೇಣ ಮಯಾ ನ ಶಕ್ಯಾ ರಕ್ಷಸಾಂ ಪುರೀ ।
ಪ್ರವೇಷ್ಟುಂ ರಾಕ್ಷಸೈರ್ಗುಪ್ತಾ ಕ್ರೂರೈರ್ಬಲಸಮನ್ವಿತೈಃ ॥ ೩೩

ಉಗ್ರೌಜಸೋ ಮಹಾವೀರ್ಯಾ ಬಲವಂತಶ್ಚ ರಾಕ್ಷಸಾಃ ।
ವಂಚನೀಯಾ ಮಯಾ ಸರ್ವೇ ಜಾನಕೀಂ ಪರಿಮಾರ್ಗತಾ ॥ ೩೪

ಲಕ್ಷ್ಯಾಲಕ್ಷ್ಯೇಣ ರೂಪೇಣ ರಾತ್ರೌ ಲಂಕಾಪುರೀ ಮಯಾ ।
ಪ್ರವೇಷ್ಟುಂ ಪ್ರಾಪ್ತಕಾಲೋ ಮೇ ಕೃತ್ಯಂ ಸಾಧಯಿತುಂ ಮಹತ್ ॥ ೩೫

ತಾಂ ಪುರೀಂ ತಾದೃಶೀಂ ದೃಷ್ಟ್ವಾ ದುರಾಧರ್ಷಾಂ ಸುರಾಸುರೈಃ ।
ಹನೂಮಾಂಶ್ಚಿಂತಯಾಮಾಸ ವಿನಿಃಶ್ವಸ್ಯ ಮುಹುರ್ಮುಹುಃ ॥ ೩೬

ಕೇನೋಪಾಯೇನ ಪಶ್ಯೇಯಂ ಮೈಥಿಲೀಂ ಜನಕಾತ್ಮಜಾಮ್ ।
ಅದೃಷ್ಟೋ ರಾಕ್ಷಸೇಂದ್ರೇಣ ರಾವಣೇನ ದುರಾತ್ಮನಾ ॥ ೩೭

ನ ವಿನಶ್ಯೇತ್ ಕಥಂ ಕಾರ್ಯಂ ರಾಮಸ್ಯ ವಿದಿತಾತ್ಮನಃ ।
ಏಕಾಮೇಕಶ್ಚ ಪಶ್ಯೇಯಂ ರಹಿತೇ ಜನಕಾತ್ಮಜಾಮ್ ॥ ೩೮

ಮೊದಲು ತಿಳಿಯುವೆನು. ಆಕೆಯನ್ನು ಕಂಡಮೇಲೆ ಮುಂದಿನ ಆಲೋಚನೆ ಮಾಡೋಣ' ಎಂದುಕೊಂಡನು (೩೦–೩೧). ಶ್ರೀರಾಮನ ಅಭ್ಯುದಯವನ್ನೇ ಚಿಂತಿಸುತ್ತಿದ್ದ ಆಂಜನೇಯನು ಆ ಬೆಟ್ಟದ ಶಿಖರದಲ್ಲಿ ನಿಂತು 'ಈ ರೂಪದಲ್ಲಿಯೇ ನಾನು ಲಂಕೆಯನ್ನು ಪ್ರವೇಶಿಸುವುದು ಸರಿಯಲ್ಲ. ಇದನ್ನು ಕಾಯುತ್ತಿರುವ ರಾಕ್ಷಸರು ಪರಾಕ್ರಮಿಗಳು ಮತ್ತು ಕ್ರೂರಸ್ವಭಾವದವರು. ಇವರನ್ನು ವಂಚಿಸಿಯೇ ನಾನು ಜಾನಕಿಯನ್ನು ಹುಡುಕಬೇಕು. ಕಂಡೂ ಕಾಣದಂತಿರುವ ರೂಪದಿಂದ ರಾತ್ರಿಯಲ್ಲಿಯೇ ಲಂಕೆಯನ್ನು ಹೊಕ್ಕು ಈ ದೊಡ್ಡ ಕಾರ್ಯವನ್ನು ಸಾಧಿಸಬೇಕು' ಎಂದು ನಿರ್ಧರಿಸಿದನು (೩೨–೩೫). ದುರ್ಗಮವಾದ ಆ ಲಂಕಾನಗರವನ್ನು ನೋಡಿದಷ್ಟೂ ಅವನಿಗೆ ಚಿಂತೆಯಾಗುತ್ತಿತ್ತು. ಮತ್ತೆ ಮತ್ತೆ ನಿಟ್ಟುಸಿರುಬಿಡುತ್ತ 'ಈ ದುರಾತ್ಮನಾದ ರಾವಣನ ಕಣ್ಣಿಗೆ ಬೀಳದಂತೆ ಸೀತಾದೇವಿಯನ್ನು ನಾನು ಹುಡುಕುವ ಬಗೆ ಯಾವುದು? ಏನು ಮಾಡಿದರೆ ಶ್ರೀರಾಮನ ಕಾರ್ಯವು ಅಡ್ಡಿಯಿಲ್ಲದೆ

ಭೂತಾಶ್ಚಾರ್ಥಾ ವಿಪದ್ಯಂತೇ ದೇಶಕಾಲವಿರೋಧಿತಾಃ ।
ವಿಕ್ಲವಂ ದೂತಮಾಸಾದ್ಯ ತಮಃ ಸೂರ್ಯೋದಯೇ ಯಥಾ ॥ ೩೯

ಅರ್ಥಾನರ್ಥಾಂತರೇ ಬುದ್ಧಿರ್ನಿಶ್ಚಿತಾಪಿ ನ ಶೋಭತೇ ।
ಘಾತಯಂತಿ ಹಿ ಕಾರ್ಯಾಣಿ ದೂತಾಃ ಪಂಡಿತಮಾನಿನಃ ॥ ೪೦

ನ ವಿನಶ್ಯೇತ್ ಕಥಂ ಕಾರ್ಯಂ ವೈಕ್ಲವ್ಯಂ ನ ಕಥಂ ಭವೇತ್ ।
ಲಂಘನಂ ಚ ಸಮುದ್ರಸ್ಯ ಕಥಂ ನು ನ ಭವೇದ್ವೃಥಾ ॥ ೪೧

ಮಯಿ ದೃಷ್ಟೇ ತು ರಕ್ಷೋಭೀ ರಾಮಸ್ಯ ವಿದಿತಾತ್ಮನಃ ।
ಭವೇದ್ವ್ಯರ್ಥಮಿದಂ ಕಾರ್ಯಂ ರಾವಣಾನರ್ಥಮಿಚ್ಛತಃ ॥ ೪೨

ನ ಹಿ ಶಕ್ಯಂ ಕ್ವಚಿತ್ ಸ್ಥಾತುಮವಿಜ್ಞಾತೇನ ರಾಕ್ಷಸೈಃ ।
ಅಪಿ ರಾಕ್ಷಸರೂಪೇಣ ಕಿಮುತಾನ್ಯೇನ ಕೇನಚಿತ್ ॥ ೪೩

ವಾಯುರಪ್ಯತ್ರ ನಾಜ್ಞಾತಶ್ಚರೇದಿತಿ ಮತಿರ್ಮಮ ।
ನ ಹ್ಯಸ್ಯವಿದಿತಂ ಕಿಂಚಿದ್ರಾಕ್ಷಸಾನಾಂ ಬಲೀಯಸಾಮ್ ॥ ೪೪

ನಡೆದೀತು? ಸೀತೆಯೊಬ್ಬಳೇ ಇರುವಾಗ ಅವಳನ್ನು ಕಾಣುವುದು ಹೇಗೆ ಸಾಧ್ಯ? (೩೬–೩೮). ದೂತನಾದವನು ದೇಶ ಕಾಲಗಳಿಗೆ ತಕ್ಕಂತೆ ನಡೆದುಕೊಳ್ಳದೆ ಅವಿವೇಕಿಯಾಗಿ ವರ್ತಿಸಿದರೆ, ಸೂರ್ಯೋದಯವಾದಾಗ ಕತ್ತಲೆಯು ನಾಶವಾಗುವಂತೆ ಕೈಗೆ ಬಂದ ಕೆಲಸವೂ ದಕ್ಕದೆ ಹಾಳಾಗಿಹೋಗುವುದು. ಚೆನ್ನಾಗಿ ವಿಮರ್ಶೆ ಮಾಡಿ ನಿಶ್ಚಯಿಸಿದ ಕೆಲಸವೂ ಕೂಡ ದೂತನು ಅವಿವೇಕಿಯಾದರೆ ಫಲಿಸುವುದಿಲ್ಲ. ತಾವು ಪಂಡಿತರೆಂದು ತಿಳಿದುಕೊಂಡಿರುವ ವಿವೇಕಹೀನರಾದ ದೂತರು ಕಾರ್ಯವನ್ನು ಕೆಡಿಸುವರು (೩೯–೪೦). ಈಗ ನಮ್ಮ ಕಾರ್ಯ ಕೆಡಬಾರದು; ನಾನು ಬುದ್ಧಿಹೀನ ಎನ್ನಿಸಿಕೊಳ್ಳಬಾರದು; ಸಮುದ್ರಲಂಘನ ವ್ಯರ್ಥವಾಗಬಾರದು. ಇದಕ್ಕೆ ದಾರಿಯೇನು? ರಾಕ್ಷಸರೇನಾದರೂ ನನ್ನನ್ನು ಕಂಡುಬಿಟ್ಟರೆ, ಶ್ರೀರಾಮನ ಕಾರ್ಯವೆಲ್ಲವೂ ಕೆಟ್ಟಂತೆಯೇ. ರಾಕ್ಷಸರಿಗೆ ತಿಳಿಯದಂತೆ ಇಲ್ಲಿ ಸಂಚರಿಸುವುದು ಹೇಗೆ? ರಾಕ್ಷಸವೇಷದಲ್ಲಿ ಹೋದರೂ ಇವರು ಗೊತ್ತುಮಾಡಿಬಿಡುತ್ತಾರೆ (೪೧–೪೩). ಇವರಿಗೆ ತಿಳಿಯದಂತೆ ಗಾಳಿಯೂ ಕೂಡ ಇಲ್ಲಿ ಸಂಚರಿಸಲಾರದೆಂದು ತೋರುತ್ತದೆ. ಇವರಿಗೆ ಗೊತ್ತಾಗದ

ಇಹಾಹಂ ಯದಿ ತಿಷ್ಠಾಮಿ ಸ್ವೇನ ರೂಪೇಣ ಸಂವೃತಃ ।
ವಿನಾಶಮುಪಯಾಸ್ಯಾಮಿ ಭರ್ತುರರ್ಥಶ್ಚ ಹೀಯತೇ ॥ ೪೫

ತದಹಂ ಸ್ವೇನ ರೂಪೇಣ ರಜನ್ಯಾಂ ಹ್ರಸ್ವತಾಂ ಗತಃ ।
ಲಂಕಾಮಭಿಗಮಿಷ್ಯಾಮಿ ರಾಘವಸ್ಯಾರ್ಥಸಿದ್ಧಯೇ ॥ ೪೬

ರಾವಣಸ್ಯ ಪುರೀಂ ರಾತ್ರೌ ಪ್ರವಿಶ್ಯ ಸುದುರಾಸದಾಮ್ ।
ವಿಚಿನ್ವನ್ ಭವನಂ ಸರ್ವಂ ದ್ರಕ್ಷ್ಯಾಮಿ ಜನಕಾತ್ಮಜಾಮ್ ॥ ೪೭

ಇತಿ ಸಂಚಿಂತ್ಯ ಹನುಮಾನ್ ಸೂರ್ಯಸ್ಯಾಸ್ತಮಯಂ ಕಪಿಃ ।
ಆಚಕಾಂಕ್ಷೇ ತದಾ ವೀರೋ ವೈದೇಹ್ಯಾ ದರ್ಶನೋತ್ಸುಕಃ ॥ ೪೮

ಸೂರ್ಯೇ ಚಾಸ್ತಂ ಗತೇ ರಾತ್ರೌ ದೇಹಂ ಸಂಕ್ಷಿಪ್ಯ ಮಾರುತಿಃ ।
ಪೃಷದಂಶಕಮಾತ್ರಃ ಸನ್ ಬಭೂವಾದ್ಭುತದರ್ಶನಃ ॥ ೪೯

ಪ್ರದೋಷಕಾಲೇ ಹನುಮಾಂಸ್ತೂರ್ಣಮುತ್ಪ್ಲುತ್ಯ ವೀರ್ಯವಾನ್ ।
ಪ್ರವಿವೇಶ ಪುರೀಂ ರಮ್ಯಾಂ ಸುವಿಭಕ್ತಮಹಾಪಥಾಮ್ ॥ ೫೦

ವಿಷಯವೇ ಇಲ್ಲಿಲ್ಲ. ಈ ಬೃಹದ್ರೂಪದಿಂದಲೇ ಇದ್ದರೆ ನಾನೂ ನಾಶಹೊಂದುವೆನಲ್ಲದೆ ಪ್ರಭುವಾದ ರಾಮನ ಕಾರ್ಯವೂ ಕೆಟ್ಟು ಹೋಗುವುದು. ಆದ್ದರಿಂದ ರೂಪವನ್ನು ಸಣ್ಣದಾಗಿ ಮಾಡಿಕೊಂಡು ಈ ರಾತ್ರಿ ಲಂಕೆಯನ್ನು ಪ್ರವೇಶಿಸಿಬಿಡುತ್ತೇನೆ. ರಾವಣನ ಈ ನಗರದಲ್ಲಿ ಸೀತಾದೇವಿಗೋಸ್ಕರ ಪ್ರತಿಯೊಂದು ಮನೆಯನ್ನೂ ಶೋಧಿಸಿಬಿಡುತ್ತೇನೆ' ಎಂದು ನಿಶ್ಚಯಮಾಡಿದನು (೪೪–೪೭). ಅನಂತರ ಆ ವೀರನು ಸೂರ್ಯನು ಮುಳುಗುವುದನ್ನು ಕಾಯುತ್ತ ಮರೆಯಲ್ಲಿ ನಿಂತನು. ಸೂರ್ಯನು ಮುಳುಗಿ ರಾತ್ರಿಯಾಯಿತು. ಆಗ ಹನುಮಂತನು ನೋಡುವುದಕ್ಕೆ ಆಶ್ಚರ್ಯಕರವಾಗುವಂತೆ ತನ್ನ ದೇಹವನ್ನು ಬೆಕ್ಕಿನ ಗಾತ್ರದಷ್ಟು ಚಿಕ್ಕದಾಗಿ ಮಾಡಿಕೊಂಡನು (೪೮–೪೯). ಆಮೇಲೆ ತಾನಿದ್ದ ಸ್ಥಳದಿಂದ ನೆಗೆದು ಲಂಕೆಯನ್ನು ಪ್ರವೇಶಿಸಲು ಸಿದ್ಧನಾದನು. ಉಪ್ಪರಿಗೆಯ ಸಾಲುಗಳಿಂದಲೂ, ಚಿನ್ನ ಬೆಳ್ಳಿಯ ಕಂಬಗಳಿಂದಲೂ ಸುವರ್ಣಮಯ

ಪ್ರಾಸಾದಮಾಲಾವಿತತಾಂ ಸ್ತಂಭೈಃ ಕಾಂಚನರಾಜತೈಃ ।
ಶಾತಕುಂಭಮಯೈರ್ಜಾಲೈರ್ಗಂಧರ್ವನಗರೋಪಮಾಮ್ ॥ ೫೧

ಸಪ್ತಭೌಮಾಷ್ಟಭೌಮೈಶ್ಚ ಸ ದದರ್ಶ ಮಹಾಪುರೀಮ್ ।
ತಲೈಃ ಸ್ಫಾಟಿಕಸಂಕೀರ್ಣೈಃ ಕಾರ್ತಸ್ವರವಿಭೂಷಿತೈಃ ॥ ೫೨

ವೈಡೂರ್ಯಮಣಿಚಿತ್ರೈಶ್ಚ ಮುಕ್ತಾಜಾಲವಿರಾಜಿತೈಃ ।
ತಲೈಃ ಶುಶುಭಿರೇ ತಾನಿ ಭವನಾನ್ಯತ್ರ ರಕ್ಷಸಾಮ್ ॥ ೫೩

ಕಾಂಚನಾನಿ ವಿಚಿತ್ರಾಣಿ ತೋರಣಾನಿ ಚ ರಕ್ಷಸಾಮ್ ।
ಲಂಕಾಮುದ್ಯೋತಯಾಮಾಸುಃ ಸರ್ವತಃ ಸಮಲಂಕೃತಾಮ್ ॥ ೫೪

ಅಚಿಂತ್ಯಾಮದ್ಭುತಾಕಾರಾಂ ದೃಷ್ಟ್ವಾ ಲಂಕಾಂ ಮಹಾಕಪಿಃ ।
ಆಸೀದ್ವಿಷಣ್ಣೋ ಹೃಷ್ಟಶ್ಚ ವೈದೇಹ್ಯಾ ದರ್ಶನೋತ್ಸುಕಃ ॥ ೫೫

ಸ ಪಾಂಡರೋದ್ವಿದ್ಧವಿಮಾನಮಾಲಿನೀಂ
ಮಹಾರ್ಹಜಾಂಬೂನದಜಾಲತೋರಣಾಮ್ ।
ಯಶಸ್ವಿನೀಂ ರಾವಣಬಾಹುಪಾಲಿತಾಂ
ಕ್ಷಪಾಚರೈರ್ಭೀಮಬಲೈಃ ಸಮಾವೃತಾಮ್ ॥ ೫೬

ಗವಾಕ್ಷಗಳಿಂದಲೂ ಲಂಕೆಯು ಗಂಧರ್ವನಗರದಂತೆ ಶೋಭಿಸುತ್ತಿತ್ತು. ಒಂದೊಂದು ಮನೆಗೆ ಏಳು ಎಂಟು ಮಹಡಿಗಳಿದ್ದವು. ಆ ಮಹಾನಗರದಲ್ಲಿ ಸ್ಫಟಿಕಮಣಿಗಳಿಂದಲೂ ಚಿನ್ನದಿಂದಲೂ ನೆಲಗಟ್ಟನ್ನು ಅಲಂಕರಿಸಿದ್ದರು. ಭವನ ಗಳನ್ನು ವೈಡೂರ್ಯಗಳಿಂದಲೂ ಮುತ್ತಿನ ಕುಚ್ಚುಗಳಿಂದಲೂ ಸಿಂಗರಿಸಿದ್ದರು. ರಾಕ್ಷಸರ ಗೃಹಗಳು ಚಿನ್ನದ ತೋರಣಗಳಿಂದ ರಂಜಿಸುತ್ತಿದ್ದವು (೫೦–೫೪). ರಾವಣನ ಭುಜಬಲದಿಂದ ರಕ್ಷಿತವಾಗಿ ಭೀಮಬಲರಾದ ರಾಕ್ಷಸರಿಂದ ತುಂಬಿದ ಅದ್ಭುತಾಕಾರವುಳ್ಳ ಲಂಕೆಯನ್ನು ಕಂಡು, ಹನುಮಂತನಿಗೆ ಅದನ್ನು ಪ್ರವೇಶಿಸು ವುದು ಹೇಗೆಂದು ಚಿಂತೆಯೂ, ಸೀತಾದೇವಿಯನ್ನು ದರ್ಶನಮಾಡುವ ಯೋಗ ಸಮೀಪಿಸಿತೆಂದು ಹರ್ಷವೂ ಉಂಟಾದವು (೫೫–೫೬). ಅಷ್ಟರಲ್ಲಿ ಚಂದ್ರನು,

ಚಂದ್ರೋಽಪಿ ಸಾಚಿವ್ಯಮಿವಾಸ್ಯ ಕುರ್ವನ್
ತಾರಾಗಣೈರ್ಮಧ್ಯಗತೋ ವಿರಾಜನ್ ।
ಜ್ಯೋತ್ಸ್ನಾವಿತಾನೇನ ವಿತತ್ಯ ಲೋಕ-
ಮುತ್ತಿಷ್ಠತೇ ನೈಕಸಹಸ್ರರಶ್ಮಿಃ ॥ ೫೭

ಶಂಖಪ್ರಭಂ ಕ್ಷೀರಮೃಣಾಲವರ್ಣ-
ಮುದ್ಗಚ್ಛಮಾನಂ ವ್ಯವಭಾಸಮಾನಮ್ ।
ದದರ್ಶ ಚಂದ್ರಂ ಸ ಕಪಿಪ್ರವೀರಃ
ಪೋಪ್ಲೂಯಮಾನಂ ಸರಸೀವ ಹಂಸಮ್ ॥ ೫೮

ಇತಿ ಶ್ರೀಮದ್ರಾಮಾಯಣೇ ಸುಂದರಕಾಂಡೇ ದ್ವಿತೀಯಃ ಸರ್ಗಃ

ಇವನಿಗೆ ಸಹಾಯಮಾಡುವವನಂತೆ ತಾರಾಗಣದಿಂದ ಪರಿವೃತನಾಗಿ ಬೆಳದಿಂಗಳಿಂದ ಲೋಕವನ್ನೇ ಬೆಳಗುತ್ತ ಅನೇಕ ಸಹಸ್ರ ಕಿರಣಗಳೊಡನೆ ಉದಯಿಸಿದನು. ಶಂಖದಂತೆಯೂ ಹಾಲಿನಂತೆಯೂ ತಾವರೆಯ ದಂಟಿನಂತೆಯೂ ಶುಭ್ರನಾದ ಚಂದ್ರನು ಉದಯಿಸಿ, ಸರೋವರದಲ್ಲಿ ಈಜಾಡುವ ಹಂಸದಂತೆ ಆಕಾಶದಲ್ಲಿ ತೇಲುತ್ತ ಬರುವುದನ್ನು ಆಂಜನೇಯನು ನೋಡಿದನು (೫೭–೫೮).

ಇಲ್ಲಿಗೆ ಶ್ರೀಮದ್ರಾಮಾಯಣದ ಸುಂದರಕಾಂಡದಲ್ಲಿ ಎರಡನೆಯ ಸರ್ಗ

ತೃತೀಯಃ ಸರ್ಗಃ

ಲಂಕಾಧಿದೇವತಾವಿಜಯಃ

ಸ ಲಂಬಶಿಖರೇ ಲಂಬೇ ಲಂಬತೋಯದಸಂನಿಭೇ ।
ಸತ್ತ್ವಮಾಸ್ಥಾಯ ಮೇಧಾವೀ ಹನುಮಾನ್ ಮಾರುತಾತ್ಮಜಃ ॥ ೧
ನಿಶಿ ಲಂಕಾಂ ಮಹಾಸತ್ತ್ವೋ ವಿವೇಶ ಕಪಿಕುಂಜರಃ ।
ರಮ್ಯಕಾನನತೋಯಾಢ್ಯಾಂ ಪುರೀಂ ರಾವಣಪಾಲಿತಾಮ್ ॥ ೨
ಶಾರದಾಂಬುಧರಪ್ರಖ್ಯೈರ್ಭವನೈರುಪಶೋಭಿತಾಮ್ ।
ಸಾಗರೋಪಮನಿರ್ಘೋಷಾಂ ಸಾಗರಾನಿಲಸೇವಿತಾಮ್ ॥ ೩
ಸುಪುಷ್ಟಬಲಸಂಗುಪ್ತಾಂ ಯಥೈವ ವಿಟಪಾವತೀಮ್ ।
ಚಾರುತೋರಣನಿರ್ಯೂಹಾಂ ಪಾಂಡರದ್ವಾರತೋರಣಾಮ್ ॥ ೪
ಭುಜಗಾಚರಿತಾಂ ಗುಪ್ತಾಂ ಶುಭಾಂ ಭೋಗವತೀಮಿವ ।
ತಾಂ ಸವಿದ್ಯುದ್ಘನಾಕೀರ್ಣಾಂ ಜ್ಯೋತಿರ್ಗಣನಿಷೇವಿತಾಮ್ ॥ ೫

ಸರ್ಗ ೩

ಲಂಕಾದೇವತೆಯನ್ನು ನಿಗ್ರಹಿಸಿ ಹನುಮಂತನು ಲಂಕೆಯನ್ನು ಪ್ರವೇಶಿಸುವುದು.

ಲಂಬಿಸಿದ ಅಂಬುದವೋ ಎಂಬಂತೆ ಲಂಬಿಸಿದ ಲಂಬಗಿರಿಶಿಖರದ ಮೇಲೆ ನಿಂತಿದ್ದ ಮೇಧಾವಿಯಾದ ಹನುಮಂತನು ಮನಸ್ಸಿನಲ್ಲಿ ಧೈರ್ಯವನ್ನು ತಂದುಕೊಂಡನು. ಲಂಕೆಯನ್ನು ಪುನಃ ನೋಡುತ್ತ ನಿಂತನು. ಸುಂದರವಾದ ಉದ್ಯಾನವನಗಳಿಂದಲೂ, ಶರತ್ಕಾಲದ ಮೋಡಗಳಂತೆ ಬೆಳ್ಳಗೆ ಉನ್ನತವಾದ ಸೌಧಗಳಿಂದಲೂ ಅದು ತುಂಬಿತ್ತು. ಸಮುದ್ರಘೋಷದಂತೆ ಜನರ ಶಬ್ದವು ಕೇಳಿಸುತ್ತಿದ್ದಿತು. ಸಮುದ್ರದ ತಂಗಾಳಿ ಅತ್ತ ಬೀಸುತ್ತಿದ್ದಿತು (೧–೩). ಲಂಕೆಯು ಅಲಕಾಪುರಿಯಂತೆ ಶ್ರೀಮಂತರ ನಗರ. ಮಹಾಸರ್ಪಗಳಿಂದ ರಕ್ಷಿತವಾದ ಪಾತಾಳರಾಜಧಾನಿ ಭೋಗವತಿಯಂತೆ ಇತ್ತು. ಉನ್ನತವಾದ ಉಪ್ಪರಿಗೆಗಳ ಸಮೀಪದಲ್ಲಿ ಮೇಘಗಳು ಮಿಂಚಿನೊಡನೆ ಸಂಚರಿಸುವುವು. ನಕ್ಷತ್ರಗಳು ಬಳಿಯಲ್ಲಿಯೇ ಹೊಳೆಯುವುವು. ಮಂದಮಾರುತವು ಬೀಸುತ್ತಿರುವುದು. ಸಾಕ್ಷಾತ್ ಅಮರಾವತಿಯೇ ಅದು. ಕಿರುಗೆಜ್ಜೆಗಳಿಂದ ಅಲಂಕರಿಸಿದ್ದ ಧ್ವಜಪಟಗಳು

ಮಂದಮಾರುತಸಂಚಾರಾಂ ಯಥಾ ಚಾಪ್ಯಮರಾವತೀಮ್ ।
ಶಾತಕುಂಭೇನ ಮಹತಾ ಪ್ರಾಕಾರೇಣಾಭಿಸಂವೃತಾಮ್ ॥ ೬
ಕಿಂಕಿಣೀಜಾಲಘೋಷಾಭಿಃ ಪತಾಕಾಭಿರಲಂಕೃತಾಮ್ ।
ಆಸಾದ್ಯ ಸಹಸಾ ಹೃಷ್ಟಃ ಪ್ರಾಕಾರಮಭಿಪೇದಿವಾನ್ ॥ ೭
ವಿಸ್ಮಯಾವಿಷ್ಟಹೃದಯಃ ಪುರೀಮಾಲೋಕ್ಯ ಸರ್ವತಃ ।
ಜಾಂಬೂನದಮಯೈರ್ದ್ವಾರೈರ್ವೈಡೂರ್ಯಕೃತವೇದಿಕೈಃ ॥ ೮
ವಜ್ರಸ್ಫಟಿಕಮುಕ್ತಾಭಿರ್ಮಣಿಕುಟ್ಟಿಮಭೂಷಿತೈಃ ।
ತಪ್ತಹಾಟಕನಿರ್ಯೂಹೈ ರಾಜತಾಮಲಪಾಂಡರೈಃ ॥ ೯
ವೈಡೂರ್ಯತಲಸೋಪಾನೈಃ ಸ್ಫಾಟಿಕಾಂತರಪಾಂಸುಭಿಃ ।
ಚಾರುಸಂಜವನೋಪೇತೈಃ ಖಮಿವೋತ್ಪತಿತೈಃ ಶುಭೈಃ ॥ ೧೦
ಕ್ರೌಂಚಬರ್ಹಿಣಸಂಘುಷ್ಟೈ ರಾಜಹಂಸನಿಷೇವಿತೈಃ ।
ತೂರ್ಯಾಭರಣನಿರ್ಘೋಷೈಃ ಸರ್ವತಃ ಪ್ರತಿನಾದಿತಾಮ್ ॥ ೧೧
ವಸ್ವೋಕಸಾರಾ*ಪ್ರತಿಮಾಂ ಸಮೀಕ್ಷ್ಯ ನಗರೀಂ ತತಃ ।
ಖಮಿವೋತ್ಪತಿತಾಂ ಲಂಕಾಂ ಜಹರ್ಷ ಹನುಮಾನ್ ಕಪಿಃ ॥ ೧೨

ಝೇಂಕಾರ ಮಾಡುತ್ತಿರುವುವು. ಹನುಮಂತನು ಆ ನಗರದ ಪ್ರಾಕಾರದ ಬಳಿಗೆ ಬಂದನು (೪–೭). ಆ ಬೆಳದಿಂಗಳಲ್ಲಿ ಹನುಮಂತನು ಲಂಕಾಪಟ್ಟಣವನ್ನು ಸುತ್ತಲೂ ನೋಡುತ್ತ ಮತ್ತೆ ವಿಸ್ಮಿತನಾದನು. ಚಿನ್ನದ ಬಾಗಿಲುಗಳು! ವೈಡೂರ್ಯದ ಜಗುಲಿಗಳು! ರತ್ನಗಳಿಂದ ಕೆತ್ತಿದ ನೆಲಗಟ್ಟುಗಳು! ಚಿನ್ನದ ಆನೆಯ ಸಾಲುಗಳಿಂದ ವಿರಾಜಿಸುವ ವೈಡೂರ್ಯದ ಮೆಟ್ಟಲುಗಳು! ಅಲ್ಲಲ್ಲಿ ಕ್ರೌಂಚ ಪಕ್ಷಿಗಳೂ, ನವಿಲುಗಳೂ, ರಾಜಹಂಸಗಳೂ ಗೃಹೋದ್ಯಾನಗಳಲ್ಲಿ ಕ್ರೀಡಿಸುತ್ತಾ ಇಂಪಾಗಿ ಕಲಕಲ ಧ್ವನಿಮಾಡುತ್ತಿದ್ದವು ! ಒಂದು ಕಡೆ ಮಂಗಳವಾದ್ಯ ಧ್ವನಿ! ಇನ್ನೊಂದು ಕಡೆ ಸ್ತ್ರೀಯರ ಆಭರಣ ಧ್ವನಿ ! ಅಲಕಾನಗರದಂತೆ ವೈಭವಪೂರ್ಣವಾಗಿಯೂ, ಆಕಾಶಮಾರ್ಗದಲ್ಲಿ ಹಾರಿಹೋಗಲು ಸಜ್ಜಾಗಿದೆಯೋ ಎಂಬಂತೆ ಪರ್ವತಶೃಂಗದಲ್ಲಿ ನಿರ್ಮಿತವಾಗಿಯೂ ಇದ್ದ ಲಂಕೆಯನ್ನು ನೋಡಿ ಹನುಮಂತನಿಗೆ ರೋಮಾಂಚ

---

* ವಸ್ವೋಕಸಾರಾ = ಅಮರಾವತಿ; ಅಲಕಾನಗರಿ.

ತಾಂ ಸಮೀಕ್ಷ್ಯ ಪುರೀಂ ಲಂಕಾಂ ರಾಕ್ಷಸಾಧಿಪತೇಃ ಶುಭಾಮ್ ।
ಅನುತ್ತಮಾಮೃದ್ಧಿಮತೀಂ ಚಿಂತಯಾಮಾಸ ವೀರ್ಯವಾನ್ ॥ ೧೩

ನೇಯಮನ್ಯೇನ ನಗರೀ ಶಕ್ಯಾ ಧರ್ಷಯಿತುಂ ಬಲಾತ್ ।
ರಕ್ಷಿತಾ ರಾವಣಬಲೈರುದ್ಯತಾಯುಧಧಾರಿಭಿಃ ॥ ೧೪

ಕುಮುದಾಂಗದಯೋರ್ವಾಪಿ ಸುಷೇಣಸ್ಯ ಮಹಾಕಪೇಃ ।
ಪ್ರಸಿದ್ಧೇಯಂ ಭವೇದ್ಭೂಮಿರ್ಮೈಂದದ್ವಿವಿದಯೋರಪಿ ॥ ೧೫

ವಿವಸ್ವತಸ್ತನೂಜಸ್ಯ ಹರೇಶ್ಚ ಕುಶಪರ್ವಣಃ ।
ಋಕ್ಷಸ್ಯ ಕೇತುಮಾಲಸ್ಯ ಮಮ ಚೈವ ಗತಿರ್ಭವೇತ್ ॥ ೧೬

ಸಮೀಕ್ಷ್ಯ ಚ ಮಹಾಬಾಹೂ ರಾಘವಸ್ಯ ಪರಾಕ್ರಮಮ್ ।
ಲಕ್ಷ್ಮಣಸ್ಯ ಚ ವಿಕ್ರಾಂತಮಭವತ್ ಪ್ರೀತಮಾನ್ ಕಪಿಃ ॥ ೧೭

ತಾಂ ರತ್ನವಸನೋಪೇತಾಂ ಗೋಷ್ಠಾಗಾರವತಂಸಕಾಮ್ ।
ಯಂತ್ರಾಗಾರಸ್ತನೀಮೃದ್ಧಾಂ ಪ್ರಮದಾಮಿವ ಭೂಷಿತಾಮ್ ॥ ೧೮

ತಾಂ ನಷ್ಟತಿಮಿರಾಂ ದೀಪ್ತೈರ್ಭಾಸ್ವರೈಶ್ಚ ಮಹಾಗೃಹೈಃ ।
ನಗರೀಂ ರಾಕ್ಷಸೇಂದ್ರಸ್ಯ ದದರ್ಶ ಸ ಮಹಾಕಪಿಃ ॥ ೧೯

ವಾಯಿತು (೮–೧೨). ಅವನು ತನ್ನ ಮನಸ್ಸಿನಲ್ಲಿ 'ರಾವಣನ ಸೈನಿಕರು ಶಸ್ತ್ರಧಾರಿಗಳಾಗಿ ಇದನ್ನು ರಕ್ಷಿಸುತ್ತಿದ್ದಾರೆ. ಇದನ್ನು ನುಗ್ಗಿಹೋಗಲು ಯಾರಿಗೆ ಸಾಧ್ಯ? ಒಂದುವೇಳೆ ಪ್ರಯತ್ನಮಾಡಿದರೆ—ಕುಮುದ, ಅಂಗದ, ಸುಷೇಣ, ಮೈಂದ, ದ್ವಿವಿದ—ಇವರಿಗೆ ಸಾಧ್ಯವಾಗಬಹುದು; ಇನ್ನು ಸೂರ್ಯಪುತ್ರನಾದ ಸುಗ್ರೀವ, ಕುಶಪರ್ವ, ಜಾಂಬವಂತ, ಕೇತುಮಾಲ ಇವರಿಗೂ ಸಾಧ್ಯ; ನನಗೂ ಅಸಾಧ್ಯವೇನಲ್ಲ!' ಎಂದುಕೊಂಡನು. ಆಮೇಲೆ ಶ್ರೀರಾಮನ ಪರಾಕ್ರಮವನ್ನೂ, ಲಕ್ಷ್ಮಣನ ಶೌರ್ಯವನ್ನೂ ಸ್ಮರಿಸಿಕೊಂಡು ಇದೇನೂ ಅಸಾಧ್ಯವಾದ ಕೆಲಸವಲ್ಲ ಎಂದು ಸಂತೋಷದಿಂದ ಉಬ್ಬಿದನು (೧೩–೧೭). ಪ್ರಕಾಶಮಾನವಾದ ದೀಪಗಳಿಂದಲೂ ಉನ್ನತ ಭವನಗಳಿಂದಲೂ ಗೋಶಾಲಾ, ಯಂತ್ರಾಗಾರಗಳಿಂದಲೂ ಉಜ್ಜ್ವಲವಾದ ಲಂಕಾನಗರಿಯು, ರತ್ನಪ್ರಾಕಾರವೆಂಬ ಸೀರೆಯನ್ನುಟ್ಟ ಸುಂದರ

ಅಥ ಸಾ ಹರಿಶಾರ್ದೂಲಂ ಪ್ರವಿಶಂತಂ ಮಹಾಬಲಮ್ ।
ನಗರೀ ಸ್ವೇನ ರೂಪೇಣ ದದರ್ಶ ಪವನಾತ್ಮಜಮ್ ॥ ೨೦

ಸಾ ತಂ ಹರಿವರಂ ದೃಷ್ಟ್ವಾ ಲಂಕಾ ರಾವಣಪಾಲಿತಾ ।
ಸ್ವಯಮೇವೋತ್ಥಿತಾ ತತ್ರ ವಿಕೃತಾನನದರ್ಶನಾ ॥ ೨೧

ಪುರಸ್ತಾತ್ ಕಪಿವರ್ಯಸ್ಯ ವಾಯುಸೂನೋರತಿಷ್ಠತ ।
ಮುಂಚಮಾನಾ ಮಹಾನಾದಮಬ್ರವೀತ್ ಪವನಾತ್ಮಜಮ್ ॥ ೨೨

ಕಸ್ತ್ವಂ ಕೇನ ಚ ಕಾರ್ಯೇಣ ಇಹ ಪ್ರಾಪ್ತೋ ವನಾಲಯ ।
ಕಥಯಸ್ವೇಹ ಯತ್ತತ್ತ್ವಂ ಯಾವತ್ ಪ್ರಾಣಾ ಧರಂತಿ ತೇ ॥ ೨೩

ನ ಶಕ್ಯಾ ಖಲ್ವಿಯಂ ಲಂಕಾ ಪ್ರವೇಷ್ಟುಂ ವಾನರ ತ್ವಯಾ ।
ರಕ್ಷಿತಾ ರಾವಣಬಲೈರಭಿಗುಪ್ತಾ ಸಮಂತತಃ ॥ ೨೪

ಅಥ ತಾಮಬ್ರವೀದ್ವೀರೋ ಹನುಮಾನಗ್ರತಃ ಸ್ಥಿತಾಮ್ ।
ಕಥಯಿಷ್ಯಾಮಿ ತೇ ತತ್ತ್ವಂ ಯನ್ಮಾಂ ತ್ವಂ ಪರಿಪೃಚ್ಛಸಿ ॥ ೨೫

ಕಾ ತ್ವಂ ವಿರೂಪನಯನಾ ಪುರದ್ವಾರೇಽವತಿಷ್ಠಸೇ ।
ಕಿಮರ್ಥಂ ಚಾಪಿ ಮಾಂ ರುದ್ಧ್ವಾ ನಿರ್ಭರ್ತ್ಸಯಸಿ ದಾರುಣಾ ॥ ೨೬

ತರುಣಿಯಂತೆ ಶೋಭಿಸುತ್ತಿತ್ತು (೧೮–೧೯). ಲಂಕೆಯನ್ನು ಪ್ರವೇಶಿಸುವುದಕ್ಕಾಗಿ ಆಂಜನೇಯನು ಮುಂದೆ ಹೋಗುತ್ತಿರಲು ಲಂಕಾಧಿದೇವತೆಯು ಅವನನ್ನು ಕಂಡಳು. ಒಡನೆಯೇ ಆರ್ಭಟಿಸುತ್ತ ತನ್ನ ವಿಕಾರವಾದ ಮುಖವನ್ನು ತೋರಿಸಿಕೊಂಡು ನಿಜರೂಪದಿಂದ ಹನುಮಂತನೆದುರಿಗೆ ಬಂದು ನಿಂತುಬಿಟ್ಟಳು (೨೦–೨೧). "ಎಲೈ ಕಪಿಯೆ! ಯಾರು ನೀನು? ಇಲ್ಲಿ ನಿನಗೇನು ಕೆಲಸ? ನಿನ್ನ ಪ್ರಾಣವನ್ನು ತೆಗೆಯುವುದರೊಳಗೆ ದಿಟವನ್ನು ಹೇಳಿಬಿಡು. ರಾವಣನ ಸೈನ್ಯ ಈ ನಗರವನ್ನು ರಕ್ಷಿಸುತ್ತಿದೆ. ಕಪಿಯಾದ ನಿನಗೆ ಒಳಗೆ ಹೋಗಲು ಶಕ್ಯವಿಲ್ಲ" ಎಂದು ಗರ್ಜಿಸಿದಳು (೨೨–೨೪). ಆಕೆಯನ್ನು ನೋಡಿ ಆ ವಾನರವೀರನು "ನಿನ್ನ ಪ್ರಶ್ನೆಗೆ ಉತ್ತರವನ್ನು ಹೇಳುತ್ತೇನೆ. ಮೊದಲು ನೀನು ಯಾರೆಂಬುದನ್ನು ಹೇಳು? ಏನಿದು ನಿನ್ನ ವಿಕಾರರೂಪ? ನಗರದ್ವಾರದಲ್ಲಿ ನೀನು ನಿಂತಿರುವುದೇಕೆ? ನನ್ನನ್ನು ತಡೆದು

ಹನೂಮದ್ವಚನಂ ಶ್ರುತ್ವಾ ಲಂಕಾ ಸಾ ಕಾಮರೂಪಿಣೀ ।
ಉವಾಚ ವಚನಂ ಕ್ರುದ್ಧಾ ಪರುಷಂ ಪವನಾತ್ಮಜಮ್ ॥ ೨೭

ಅಹಂ ರಾಕ್ಷಸರಾಜಸ್ಯ ರಾವಣಸ್ಯ ಮಹಾತ್ಮನಃ ।
ಆಜ್ಞಾಪ್ರತೀಕ್ಷಾ ದುರ್ಧರ್ಷಾ ರಕ್ಷಾಮಿ ನಗರೀಮಿಮಾಮ್ ॥ ೨೮

ನ ಶಕ್ಯಾ ಮಾಮವಜ್ಞಾಯ ಪ್ರವೇಷ್ಟುಂ ನಗರೀ ತ್ವಯಾ ।
ಅದ್ಯ ಪ್ರಾಣೈಃ ಪರಿತ್ಯಕ್ತಃ ಸ್ವಪ್ಸ್ಯಸೇ ನಿಹತೋ ಮಯಾ ॥ ೨೯

ಅಹಂ ಹಿ ನಗರೀ ಲಂಕಾ ಸ್ವಯಮೇವ ಪ್ಲವಂಗಮ ।
ಸರ್ವತಃ ಪರಿರಕ್ಷಾಮಿ ಹ್ಯೇತತ್ತೇ ಕಥಿತಂ ಮಯಾ ॥ ೩೦

ಲಂಕಾಯಾ ವಚನಂ ಶ್ರುತ್ವಾ ಹನೂಮಾನ್ ಮಾರುತಾತ್ಮಜಃ ।
ಯತ್ನವಾನ್ ಸ ಹರಿಶ್ರೇಷ್ಠಃ ಸ್ಥಿತಃ ಶೈಲ ಇವಾಪರಃ ॥ ೩೧

ಸ ತಾಂ ಸ್ತ್ರೀರೂಪವಿಕೃತಾಂ ದೃಷ್ಟ್ವಾ ವಾನರಪುಂಗವಃ ।
ಆಬಭಾಷೇಽಥ ಮೇಧಾವೀ ಸತ್ತ್ವವಾನ್ ಪ್ಲವಗರ್ಷಭಃ ॥ ೩೨

ದ್ರಕ್ಷ್ಯಾಮಿ ನಗರೀಂ ಲಂಕಾಂ ಸಾಟ್ಟಪ್ರಾಕಾರತೋರಣಾಮ್ ।
ಇತ್ಯರ್ಥಮಿಹ ಸಂಪ್ರಾಪ್ತಃ ಪರಂ ಕೌತೂಹಲಂ ಹಿ ಮೇ ॥ ೩೩

ವನಾನ್ಯುಪವನಾನೀಹ ಲಂಕಾಯಾಃ ಕಾನನಾನಿ ಚ ।
ಸರ್ವತೋ ಗೃಹಮುಖ್ಯಾನಿ ದ್ರಷ್ಟುಮಾಗಮನಂ ಹಿ ಮೇ ॥ ೩೪

ಗದರಿಸುತ್ತಿರುವುದೇಕೆ?'' ಎಂದು ಕೇಳಿದನು (೨೫–೨೬). ಅದನ್ನು ಕೇಳಿ ಲಂಕಾಧಿದೇವತೆಯು ಕ್ರುದ್ಧಳಾಗಿ ''ಎಲೈ ರಾಕ್ಷಸೇಂದ್ರನಾದ ರಾವಣನ ಆಜ್ಞೆಯಂತೆ ನಾನು ಈ ನಗರವನ್ನು ಕಾಯುತ್ತಿರುವೆನು. ನನ್ನನ್ನು ಅಲಕ್ಷ್ಯಮಾಡಿ ನೀನು ಒಳಕ್ಕೆ ಹೋಗಲಾರೆ. ಈ ಕ್ಷಣದಲ್ಲಿ ನಿನ್ನನ್ನು ಕೊಂದು ನೆಲದ ಮೇಲೆ ಉರುಳಿಸುತ್ತೇನೆ. ಈ ಲಂಕೆಯನ್ನು ನಾನು ರಕ್ಷಿಸುತ್ತಿದ್ದೇನೆ. ನಾನೇ ಲಂಕಾಧಿದೇವತೆ. ತಿಳಿಯಿತೆ?'' ಎಂದು ಗಜರಿದಳು (೨೭–೩೦). ಹನುಮಂತನು ಸ್ವಲ್ಪವೂ ಭಯಪಡದೆ ಬೆಟ್ಟದಂತೆ ಕದಲದೆ ನಿಂತಿದ್ದನು. ಬುದ್ಧಿಶಾಲಿಯೂ ಮಹಾವೀರನೂ ಆದ ಆ ವಾನರೋತ್ತಮನು ವಿಕಾರರೂಪದ ಆ ಸ್ತ್ರೀಯನ್ನು ನೋಡಿ ''ಈ

ತಸ್ಯ ತದ್ವಚನಂ ಶ್ರುತ್ವಾ ಲಂಕಾ ಸಾ ಕಾಮರೂಪಿಣೀ ।
ಭೂಯ ಏವ ಪುನರ್ವಾಕ್ಯಂ ಬಭಾಷೇ ಪರುಷಾಕ್ಷರಮ್ ॥ ೩೫
ಮಾಮನಿರ್ಜಿತ್ಯ ದುರ್ಬುದ್ಧೇ ರಾಕ್ಷಸೇಶ್ವರಪಾಲಿತಾ ।
ನ ಶಕ್ಯಮದ್ಯ ತೇ ದ್ರಷ್ಟುಂ ಪುರೀಯಂ ವಾನರಾಧಮ ॥ ೩೬
ತತಃ ಸ ಹರಿಶಾರ್ದೂಲಸ್ತಾಮುವಾಚ ನಿಶಾಚರೀಮ್ ।
ದೃಷ್ಟ್ವಾ ಪುರೀಮಿಮಾಂ ಭದ್ರೇ ಪುನರ್ಯಾಸ್ಯೇ ಯಥಾಗತಮ್ ॥ ೩೭
ತತಃ ಕೃತ್ವಾ ಮಹಾನಾದಂ ಸಾ ವೈ ಲಂಕಾ ಭಯಾವಹಮ್ ।
ತಲೇನ ವಾನರಶ್ರೇಷ್ಠಂ ತಾಡಯಾಮಾಸ ವೇಗಿತಾ ॥ ೩೮
ತತಃ ಸ ಕಪಿಶಾರ್ದೂಲೋ ಲಂಕಯಾ ತಾಡಿತೋ ಭೃಶಮ್ ।
ನನಾದ ಸುಮಹಾನಾದಂ ವೀರ್ಯವಾನ್ ಪವನಾತ್ಮಜಃ ॥ ೩೯
ತತಃ ಸಂವರ್ತಯಾಮಾಸ ವಾಮಹಸ್ತಸ್ಯ ಸೋಽಙ್ಗುಲೀಃ ।
ಮುಷ್ಟಿನಾಭಿಜಘಾನೈನಾಂ ಹನೂಮಾನ್ ಕ್ರೋಧಮೂರ್ಛಿತಃ ॥ ೪೦
ಸ್ತ್ರೀ ಚೇತಿ ಮನ್ಯಮಾನೇನ ನಾತಿಕ್ರೋಧಃ ಸ್ವಯಂ ಕೃತಃ ।
ಸಾ ತು ತೇನ ಪ್ರಹಾರೇಣ ವಿಹ್ವಲಾಂಗೀ ನಿಶಾಚರೀ ॥ ೪೧

ಲಂಕಾಪಟ್ಟಣವನ್ನು ನೋಡಬೇಕೆಂದು ನನಗೆ ಬಹಳ ಆಸೆಯಾಗಿದೆ. ಇಲ್ಲಿರುವ ತೋಟಗಳನ್ನೂ ಅರಣ್ಯಗಳನ್ನೂ ದೊಡ್ಡ ದೊಡ್ಡ ಭವನಗಳನ್ನೂ ನೋಡುವುದಕ್ಕಾಗಿ ಬಂದಿದ್ದೇನೆ'' ಎಂದು ಪ್ರತ್ಯುತ್ತರ ಕೊಟ್ಟನು (೩೧–೩೪). ಆಗ ಲಂಕೆಯು ಮತ್ತಷ್ಟು ಕಠೋರ ಸ್ವರದಿಂದ ''ಎಲೈ ಬುದ್ಧಿಗೇಡಿ ಮಂಗ! ನನ್ನನ್ನು ಗೆಲ್ಲದೆ ರಾಕ್ಷಸೇಶ್ವರಪಾಲಿತವಾದ ಲಂಕಾಪಟ್ಟಣವನ್ನು ನೋಡಲು ನಿನಗೆ ಸಾಧ್ಯವೆ?'' ಎಂದು ಕೂಗಿದಳು (೩೫–೩೬). ಹನುಮಂತನು ಮೃದುವಾಗಿಯೇ ''ಭದ್ರೆ, ಒಂದು ಸಲ ಈ ಪಟ್ಟಣವನ್ನು ನೋಡಿಕೊಂಡು ನನ್ನ ಪಾಡಿಗೆ ನಾನು ಹೊರಟು ಹೋಗುತ್ತೇನೆ'' ಎಂದನು (೩೭). ಲಂಕೆಗೆ ಕೋಪವನ್ನು ತಡೆಯಲಾಗಲಿಲ್ಲ. ಭಯಂಕರವಾಗಿ ಕೂಗುತ್ತಾ ಮುಂದೆ ನುಗ್ಗಿ ತನ್ನ ಕೈಯಿಂದ ಹನುಮಂತನಿಗೆ ಒಂದು ಬಲವಾದ ಪೆಟ್ಟನ್ನು ಹಾಕಿದಳು. ಹನುಮಂತನಿಗೆ ಕೋಪ ಉಕ್ಕಿತು. ಒಂದುಸಲ ಗರ್ಜಿಸಿ ತನ್ನ ಎಡಗೈಮುಷ್ಟಿಯಿಂದ ಅವಳನ್ನು ಗುದ್ದಿದನು (೩೮–೪೦).

ಪಪಾತ ಸಹಸಾ ಭೂಮೌ ವಿಕೃತಾನನದರ್ಶನಾ ।
ತತಸ್ತು ಹನುಮಾನ್ ಪ್ರಾಜ್ಞಸ್ತಾಂ ದೃಷ್ಟ್ವಾ ವಿನಿಪಾತಿತಾಮ್ ॥ ೪೨

ಕೃಪಾಂ ಚಕಾರ ತೇಜಸ್ವೀ ಮನ್ಯಮಾನಃ ಸ್ತ್ರಿಯಂ ತು ತಾಮ್ ।
ತತೋ ವೈ ಭೃಶಸಂವಿಗ್ನಾ ಲಂಕಾ ಸಾ ಗದ್ಗದಾಕ್ಷರಮ್ ॥ ೪೩

ಉವಾಚ ಗರ್ವಿತಂ ವಾಕ್ಯಂ ಹನೂಮಂತಂ ಪ್ಲವಂಗಮಮ್ ।
ಪ್ರಸೀದ ಸುಮಹಾಬಾಹೋ ತ್ರಾಯಸ್ವ ಹರಿಸತ್ತಮ ॥ ೪೪

ಸಮಯೇ ಸೌಮ್ಯ ತಿಷ್ಠಂತಿ ಸತ್ತ್ವವಂತೋ ಮಹಾಬಲಾಃ ।
ಅಹಂ ತು ನಗರೀ ಲಂಕಾ ಸ್ವಯಮೇವ ಪ್ಲವಂಗಮ ॥ ೪೫

ನಿರ್ಜಿತಾಹಂ ತ್ವಯಾ ವೀರ ವಿಕ್ರಮೇಣ ಮಹಾಬಲ ।
ಇದಂ ಚ ತಥ್ಯಂ ಶೃಣು ವೈ ಬ್ರುವತ್ಯಾ ಮೇ ಹರೀಶ್ವರ ॥ ೪೬

ಸ್ವಯಂಭುವಾ ಪುರಾ ದತ್ತಂ ವರದಾನಂ ಯಥಾ ಮಮ ।
ಯದಾ ತ್ವಾಂ ವಾನರಃ ಕಶ್ಚಿದ್ವಿಕ್ರಮಾದ್ವಶಮಾನಯೇತ್ ॥ ೪೭

ಆ ರಾಕ್ಷಸಿಯು ಅಷ್ಟಕ್ಕೇ ನೆಲದಮೇಲೆ ಕುಸಿದು ಬಿದ್ದುಹೋದಳು. ಹನುಮಂತನು ಅವಳು ಹೆಂಗಸೆಂದು ಮರುಕದೋರಿ ಸುಮ್ಮನಾದನು (೪೧–೪೩). ಲಂಕೆಯು ಗದ್ಗದ ಸ್ವರದಿಂದ ''ವಾನರೋತ್ತಮ ! ನನ್ನನ್ನು ಕಾಪಾಡು. ನಿನ್ನಂತಹ ಸಾತ್ವಿಕರು ಮಹಾ ಪರಾಕ್ರಮಿಗಳಾದರೂ ಧರ್ಮವನ್ನು ಮೀರಿ ಹೋಗುವುದಿಲ್ಲ. ನಾನೇ ಸಾಕ್ಷಾತ್ ಲಂಕಾದೇವತೆ. ನೀನು ಮಹಾ ಬಲಶಾಲಿ; ನನ್ನನ್ನು ಸೋಲಿಸಿದ್ದೀಯೆ. ನಿನಗೊಂದು ಸತ್ಯವಾದ ವಿಷಯವನ್ನು ಹೇಳುತ್ತೇನೆ (೪೪–೪೬): ಬ್ರಹ್ಮದೇವನು ನನ್ನನ್ನು ಕುರಿತು 'ಒಬ್ಬ ವಾನರನು ಬಂದು ಯಾವಾಗ ನಿನ್ನನ್ನು ಸೋಲಿಸುತ್ತಾನೋ, ಆಗ ಈ ರಾಕ್ಷಸರಿಗೆ ವಿಪತ್ಕಾಲವು ಬಂದಿತೆಂದು ತಿಳಿ' ಎಂಬುದಾಗಿ ಹೇಳಿದ್ದನು. ಹೇ ಸೌಮ್ಯ ! ಅಂತಹ ಸಮಯ ಈಗ ಬಂದಿತೆಂದು ನನಗೆ ತೋರುತ್ತದೆ. ಬ್ರಹ್ಮದೇವನ ಮಾತು ಎಂದಿಗಾದರೂ ಹುಸಿಯಾದೀತೆ? ಸೀತಾನಿಮಿತ್ತವಾಗಿ ಈ ದುರಾತ್ಮನಾದ ರಾವಣನಿಗೂ ಇವನನ್ನು ನಂಬಿದ ಈ ರಾಕ್ಷಸರಿಗೂ ವಿನಾಶ ಕಾಲ ಸಮೀಪಿಸಿತು. ವಾನರಶ್ರೇಷ್ಠ ! ಈ ಪಟ್ಟಣದೊಳಗೆ ಹೋಗಿ ನಿನಗೆ ಇಷ್ಟಬಂದ ಕಾರ್ಯವನ್ನು

ತದಾ ತ್ವಯಾ ಹಿ ವಿಜ್ಞೇಯಂ ರಕ್ಷಸಾಂ ಭಯಮಾಗತಮ್ ।
ಸ ಹಿ ಮೇ ಸಮಯಃ ಸೌಮ್ಯ ಪ್ರಾಪ್ತೋಽದ್ಯ ತವ ದರ್ಶನಾತ್ ॥ ೪೮

ಸ್ವಯಂಭುವಿಹಿತಃ ಸತ್ಯೋ ನ ತಸ್ಯಾಸ್ತಿ ವ್ಯತಿಕ್ರಮಃ ।
ಸೀತಾನಿಮಿತ್ತಂ ರಾಜ್ಞಸ್ತು ರಾವಣಸ್ಯ ದುರಾತ್ಮನಃ ॥ ೪೯

ರಕ್ಷಸಾಂ ಚೈವ ಸರ್ವೇಷಾಂ ವಿನಾಶಃ ಸಮುಪಸ್ಥಿತಃ ।
ತತ್ ಪ್ರವಿಶ್ಯ ಹರಿಶ್ರೇಷ್ಠ ಪುರೀಂ ರಾವಣಪಾಲಿತಾಮ್ ॥ ೫೦

ವಿಧತ್ಸ್ವ ಸರ್ವಕಾರ್ಯಾಣಿ ಯಾನಿ ಯಾನೀಹ ವಾಂಛಸಿ ॥

ಪ್ರವಿಶ್ಯ ಶಾಪೋಪಹತಾಂ ಹರೀಶ್ವರ
ಪುರೀಂ ಶುಭಾಂ ರಾಕ್ಷಸಮುಖ್ಯಪಾಲಿತಾಮ್ ।
ದಿದೃಕ್ಷಯಾ ತ್ವಂ ಜನಕಾತ್ಮಜಾಂ ಸತೀಂ
ವಿಮಾರ್ಗ ಸರ್ವತ್ರ ಗತೋ ಯಥಾಸುಖಮ್ ॥ ೫೧

ಇತಿ ಶ್ರೀಮದ್ರಾಮಾಯಣೇ ಸುಂದರಕಾಂಡೇ ತೃತೀಯಃ ಸರ್ಗಃ

ನಡೆಸು (೪೭–೫೦). ನಂದಿಕೇಶ್ವರನ ಶಾಪಕ್ಕೀಡಾದ* ಈ ನಗರದೊಳಕ್ಕೆ ಹೋಗಿ, ಇಷ್ಟಬಂದಕಡೆ ಸಂಚರಿಸಿ ಪತಿವ್ರತೆಯಾದ ಜನಕಸುತೆಯನ್ನು ಹುಡುಕು'' ಎಂದು ಹೇಳಿದಳು (೫೧).

ಇಲ್ಲಿಗೆ ಶ್ರೀಮದ್ರಾಮಾಯಣದ ಸುಂದರಕಾಂಡದಲ್ಲಿ ಮೂರನೆಯ ಸರ್ಗ

---

* ಒಂದು ಸಲ ರಾವಣನು ನಂದೀಕೇಶ್ವರನನ್ನು ಧಿಕ್ಕರಿಸಿ ಹಾಸ್ಯಮಾಡಿದನು. ನಂದಿಕೇಶ್ವರನು ಕೋಪಗೊಂಡು ಲಂಕೆಯು ಆಗಲೇ ನಾಶವಾಗಲೆಂದು ಶಪಿಸಿದನು. ಲಂಕೆಯು ಬ್ರಹ್ಮನಲ್ಲಿ ಹೋಗಿ ಮೊರೆಯಿಟ್ಟಳು. ಬ್ರಹ್ಮನು ''ಒಬ್ಬ ವಾನರನು ಬಂದು ನಿನ್ನನ್ನು ಜಯಿಸುವವರೆಗೂ ನಿನಗೆ ನಾಶವಿಲ್ಲ'' ಎಂದು ಅಭಯಕೊಟ್ಟನು ಎಂಬ ಕಥೆ ಇದೆ.

ಚತುರ್ಥಃ ಸರ್ಗಃ

ಲಂಕಾಪುರೀಪ್ರವೇಶಃ

ಸ ನಿರ್ಜಿತ್ಯ ಪುರೀಂ ಶ್ರೇಷ್ಠಾಂ ಲಂಕಾಂ ತಾಂ ಕಾಮರೂಪಿಣೀಮ್ ।
ವಿಕ್ರಮೇಣ ಮಹಾತೇಜಾ ಹನೂಮಾನ್ ಕಪಿಸತ್ತಮಃ ॥ ೧
ಅದ್ವಾರೇಣ ಮಹಾಬಾಹುಃ ಪ್ರಾಕಾರಮಭಿಪುಪ್ಲುವೇ ।
ನಿಶಿ ಲಂಕಾಂ ಮಹಾಸತ್ತ್ವೋ ವಿವೇಶ ಕಪಿಕುಂಜರಃ ॥ ೨
ಪ್ರವಿಶ್ಯ ನಗರೀಂ ಲಂಕಾಂ ಕಪಿರಾಜಹಿತಂಕರಃ ।
ಚಕ್ರೇಽಥ ಪಾದಂ ಸವ್ಯಂ ಚ ಶತ್ರೂಣಾಂ ಸ ತು ಮೂರ್ಧನಿ ॥ ೩
ಪ್ರವಿಷ್ಟಃ ಸತ್ತ್ವಸಂಪನ್ನೋ ನಿಶಾಯಾಂ ಮಾರುತಾತ್ಮಜಃ ।
ಸ ಮಹಾಪಥಮಾಸ್ಥಾಯ ಮುಕ್ತಪುಷ್ಪವಿರಾಜಿತಮ್ ॥ ೪
ತತಸ್ತು ತಾಂ ಪುರೀಂ ಲಂಕಾಂ ರಮ್ಯಾಮಭಿಯಯೌ ಕಪಿಃ ।
ಹಸಿತೋತ್ಕೃಷ್ಟನಿನದೈಸ್ತೂರ್ಯಘೋಷಪುರಃಸರೈಃ ॥ ೫

ಸರ್ಗ ೪

ಹನುಮಂತನು ಲಂಕೆಯನ್ನು ಪ್ರವೇಶಿಸಿ, ಅಲ್ಲಿದ್ದ ಅನೇಕ
ರಾಕ್ಷಸರನ್ನು ನೋಡುವುದು.

ಹೀಗೆ ಮಹಾತೇಜಸ್ವಿಯಾದ ಆಂಜನೇಯನು ಲಂಕಾದೇವತೆಯನ್ನು ಜಯಿಸಿ, ಕೋಟೆಯ ಗೋಡೆಯಿಂದ ಹಾರಿ ಲಂಕಾಪಟ್ಟಣದ ಒಳಕ್ಕಿಳಿದನು. ಇಳಿಯುವಾಗ ಶತ್ರುವಿನ ತಲೆಯನ್ನು ಮೆಟ್ಟುವ ರೀತಿಯಲ್ಲಿ ತನ್ನ ಎಡಗಾಲನ್ನು ಮೊದಲು ನೆಲದಮೇಲೆ ಊರಿದನು* (೧–೩). ಧೀರನಾದ ಹನುಮಂತನು ಆ ರಾತ್ರಿಯಲ್ಲಿಯೇ ಲಂಕೆಯನ್ನು ಪ್ರವೇಶಿಸಿ ಬಿಡಿಹೂಗಳನ್ನು ಚೆಲ್ಲಿದ್ದ ರಾಜಬೀದಿಯನ್ನು ಸೇರಿ ಮುಂದೆ ಹೊರಟನು (೪). ಆ ನಗರವು ರಾಕ್ಷಸರ ಅಟ್ಟಹಾಸಗಳಿಂದಲೂ ವಾದ್ಯಘೋಷಗಳಿಂದಲೂ ತುಂಬಿಹೋಗಿತ್ತು. ಆಕಾಶದಲ್ಲಿ ಮೇಘಗಳಿರುವಂತೆ

---

* ಶತ್ರುವಿನ ಪಟ್ಟಣವನ್ನು ದ್ವಾರಪ್ರದೇಶದಿಂದ ಪ್ರವೇಶಿಸಬಾರದೆಂದೂ ಪ್ರವೇಶಿಸುವಾಗ ಮೊದಲು ಎಡಗಾಲನ್ನಿಡಬೇಕೆಂದೂ ಬೃಹಸ್ಪತಿನೀತಿಶಾಸ್ತ್ರವು ಹೇಳುತ್ತದೆ.

ವಜ್ರಾಂಕುಶನಿಕಾಶೈಶ್ಚ ವಜ್ರಜಾಲವಿಭೂಷಿತೈಃ ।
ಗೃಹಮುಖ್ಯೈಃ ಪುರೀ ರಮ್ಯಾ ಬಭಾಸೇ ದ್ಯೌರಿವಾಂಬುದೈಃ ॥ ೬
ಪ್ರಜಜ್ವಾಲ ತದಾ ಲಂಕಾ ರಕ್ಷೋಗಣಗೃಹೈಃ ಶುಭೈಃ ।
ಸಿತಾಭ್ರಸದೃಶೈಶ್ಚಿತ್ರೈಃ ಪದ್ಮಸ್ವಸ್ತಿಕಸಂಸ್ಥಿತೈಃ ॥ ೭
ವರ್ಧಮಾನಗೃಹೈಶ್ಚಾಪಿ ಸರ್ವತಃ ಸುವಿಭೂಷಿತಾ ।
ತಾಂ ಚಿತ್ರಮಾಲ್ಯಾಭರಣಾಂ ಕಪಿರಾಜಹಿತಂಕರಃ ॥ ೮
ರಾಘವಾರ್ಥಂ ಚರನ್ ಶ್ರೀಮಾನ್ ದದರ್ಶ ಚ ನನಂದ ಚ ।
ಭವನಾದ್ಭವನಂ ಗಚ್ಛನ್ ದದರ್ಶ ಪವನಾತ್ಮಜಃ ॥ ೯
ವಿವಿಧಾಕೃತಿರೂಪಾಣಿ ಭವನಾನಿ ತತಸ್ತತಃ ।
ಶುಶ್ರಾವ ಮಧುರಂ ಗೀತಂ ತ್ರಿಸ್ಥಾನಸ್ವರಭೂಷಿತಮ್ ॥ ೧೦
ಸ್ತ್ರೀಣಾಂ ಮದಸಮೃದ್ಧಾನಾಂ ದಿವಿ ಚಾಪ್ಸರಸಾಮಿವ ।
ಶುಶ್ರಾವ ಕಾಂಚೀನಿನದಂ ನೂಪುರಾಣಾಂ ಚ ನಿಃಸ್ವನಮ್ ॥ ೧೧
ಸೋಪಾನನಿನದಾಂಶ್ಚೈವ ಭವನೇಷು ಮಹಾತ್ಮನಾಮ್ ।
ಆಸ್ಫೋಟಿತನಿನಾದಾಂಶ್ಚ ಕ್ಷ್ವೇಲಿತಾಂಶ್ಚ ತತಸ್ತತಃ ॥ ೧೨
ಶುಶ್ರಾವ ಜಪತಾಂ ತತ್ರ ಮಂತ್ರಾನ್ ರಕ್ಷೋಗೃಹೇಷು ವೈ ।
ಸ್ವಾಧ್ಯಾಯನಿರತಾಂಶ್ಚೈವ ಯಾತುಧಾನಾನ್ ದದರ್ಶ ಸಃ ॥ ೧೩

ಇಕ್ಕೆಡೆಗಳಲ್ಲಿಯೂ ಐರಾವತಗಳಂತೆ ವಿರಾಜಿಸುತ್ತಿದ್ದ ವಜ್ರಮಯ ಗವಾಕ್ಷಗಳಿಂದ ರಂಜಿಸುವ ಉನ್ನತ ಭವನಗಳಿಂದ ರಮ್ಯವಾಗಿತ್ತು. ಪದ್ಮಕ, ಸ್ವಸ್ತಿಕ, ವರ್ಧಮಾನಕ ಮುಂತಾದ ಹೆಸರಿನ ನಾನಾಬಗೆಯ ಕಟ್ಟಡಗಳಿಂದ ಶೋಭಿಸುತ್ತಿದ್ದಿತು (೫–೮). ಹನುಮಂತನು ರಾಮಕಾರ್ಯಾರ್ಥವಾಗಿ ಸುತ್ತುತ್ತ, ನಗರದ ಚೆಲುವನ್ನು ಕಂಡು ಸಂತೋಷಪಟ್ಟನು. ಅಪ್ಸರೆಯರಂತೆ ಹಾಡುತ್ತಿದ್ದ ಪ್ರಮದೆಯರ ಇಂಪಾದ ಸಂಗೀತವನ್ನಾಲಿಸಿದನು. ಅವರ ಒಡ್ಯಾಣಗಳ ಸದ್ದನ್ನೂ ಕಾಲಂದುಗೆಗಳ ಮಂಜುಳನಾದವನ್ನೂ ಆಕರ್ಣಿಸಿದನು. ಜನರು ಮಹಡಿಯ ಮೆಟ್ಟಲುಗಳನ್ನು ಹತ್ತಿಳಿಯುವ ಶಬ್ದವನ್ನೂ ಕೈಬಡಿಯುವುದನ್ನೂ ಕೇಕೆ ಹಾಕುವುದನ್ನೂ ಕೇಳಿದನು (೯–೧೨). ಕೆಲವು ರಾಕ್ಷಸರು ಜಪಮಾಡುತ್ತಿದ್ದರು; ಕೆಲವರು ವೇದಾಧ್ಯಯನ

ರಾವಣಸ್ತವಸಂಯುಕ್ತಾನ್ ಗರ್ಜತೋ ರಾಕ್ಷಸಾನಪಿ ।
ರಾಜಮಾರ್ಗಂ ಸಮಾವೃತ್ಯ ಸ್ಥಿತಂ ರಕ್ಷೋಬಲಂ ಮಹತ್ ॥ ೧೪

ದದರ್ಶ ಮಧ್ಯಮೇ ಗುಲ್ಮೇ ರಾಕ್ಷಸಸ್ಯ ಚರಾನ್ ಬಹೂನ್ ।
ದೀಕ್ಷಿತಾನ್ ಜಟಿಲಾನ್ ಮುಂಡಾನ್ ಗೋಽಜಿನಾಂಬರವಾಸಸಃ ॥ ೧೫

ದರ್ಭಮುಷ್ಟಿಪ್ರಹರಣಾನಗ್ನಿಕುಂಡಾಯುಧಾಂಸ್ತಥಾ ।
ಕೂಟಮುದ್ಗರಪಾಣೀಂಶ್ಚ ದಂಡಾಯುಧಧರಾನಪಿ ॥ ೧೬

ಏಕಾಕ್ಷಾನೇಕಕರ್ಣಾಂಶ್ಚ ಲಂಬೋದರಪಯೋಧರಾನ್ ।
ಕರಾಲಾನ್ ಭುಗ್ನವಕ್ತ್ರಾಂಶ್ಚ ವಿಕಟಾನ್ ವಾಮನಾಂಸ್ತಥಾ ॥ ೧೭

ಧನ್ವಿನಃ ಖಡ್ಗಿನಶ್ಚೈವ ಶತಘ್ನೀಮುಸಲಾಯುಧಾನ್ ।
ಪರಿಘೋತ್ತಮಹಸ್ತಾಂಶ್ಚ ವಿಚಿತ್ರಕವಚೋಜ್ಜ್ವಲಾನ್ ॥ ೧೮

ನಾತಿಸ್ಥೂಲಾನ್ನಾತಿಕೃಶಾನ್ನಾತಿದೀರ್ಘಾತಿಹ್ರಸ್ವಕಾನ್ ।
ನಾತಿಗೌರಾನ್ನಾತಿಕೃಷ್ಣಾನ್ನಾತಿಕುಬ್ಜಾನ್ನ ವಾಮನಾನ್ ॥ ೧೯

ಮಾಡುತ್ತಿದ್ದರು; ಮತ್ತೆ ಕೆಲವರು ರಾವಣನನ್ನು ಹೊಗಳಿ ಹಾಡುತ್ತಿದ್ದರು. ಕೆಲವರು ರಾಜಬೀದಿಯಲ್ಲಿ ಗುಂಪುಕೂಡಿ ನಿಂತಿದ್ದರು (೧೩–೧೪). ಅನೇಕ ರಾಜದೂತರು ಕಾರ್ಯಾರ್ಥವಾಗಿ ಸಂಚರಿಸುತ್ತಿದ್ದರು. ಆ ರಾಕ್ಷಸರಲ್ಲಿ ದೀಕ್ಷೆಬಿಟ್ಟವರೂ, ಜಟಾಧಾರಿಗಳೂ, ಬೋಳತಲೆಯವರೂ ಇದ್ದರು. ಕೆಲವರು ಗೋಚರ್ಮಧಾರಿಗಳು. ಕೆಲವರು ಅರಿಷ್ಟಪರಿಹಾರಕ್ಕಾಗಿ ದರ್ಭೆಯ ಕಂತೆಯನ್ನು ಕೈಯಲ್ಲಿ ಹಿಡಿದಿದ್ದರು. ಕೆಲವರು ಶತ್ರುಗಳನ್ನು ಕೊಲ್ಲುವುದಕ್ಕಾಗಿ ಹೋಮ ಮಾಡುತ್ತಿದ್ದರು. ಇನ್ನು ಕೆಲವರು ಕೂಟ, ಮುದ್ಗರ ಮುಂತಾದ ಆಯುಧಗಳನ್ನು ಹಿಡಿದಿದ್ದರು (೧೫–೧೬). ಅವರಲ್ಲಿ ಕೆಲವರಿಗೆ ಒಂದೇ ಕಣ್ಣು ! ಕೆಲವರಿಗೆ ಒಂದೇ ಕಿವಿ ! ಕೆಲವರಿಗೆ ಜೋಲುವ ಹೊಟ್ಟೆ! ಘೋರರೂಪಿಗಳೂ ಸೊಟ್ಟ ಮೋರೆಯವರೂ ಡೊಂಕುಮೈಯವರೂ ಕುಳ್ಳರೂ ಅಲ್ಲಿದ್ದರು (೧೭). ಧನುಸ್ಸು, ಖಡ್ಗ ಮುಂತಾದ ನಾನಾವಿಧವಾದ ಆಯುಧಗಳನ್ನೂ ಕವಚಗಳನ್ನೂ ಧರಿಸಿದವರಿದ್ದರು. ಯಾವ ವಿಕಾರವೂ ಇಲ್ಲದ ಸಹಜ ರೀತಿಯ ರಾಕ್ಷಸರೂ ಕಂಡುಬರುತ್ತಿದ್ದರು. ಕೆಲವರು

ವಿರೂಪಾನ್ ಬಹುರೂಪಾಂಶ್ಚ ಸುರೂಪಾಂಶ್ಚ ಸುವರ್ಚಸಃ ।
ಪತಾಕಾಧ್ವಜಿನಶ್ಚೈವ ದದರ್ಶ ವಿವಿಧಾಯುಧಾನ್ ॥ ೨೦

ಶಕ್ತಿವೃಕ್ಷಾಯುಧಾಂಶ್ಚೈವ ಪಟ್ಟಿಶಾಶನಿಧಾರಿಣಃ ।
ಕ್ಷೇಪಣೀಪಾಶಹಸ್ತಾಂಶ್ಚ ದದರ್ಶ ಸ ಮಹಾಕಪಿಃ ॥ ೨೧

ಸ್ರಗ್ವಿಣಸ್ತ್ವನುಲಿಪ್ತಾಂಶ್ಚ ವರಾಭರಣಭೂಷಿತಾನ್ ।
ನಾನಾವೇಷಸಮಾಯುಕ್ತಾನ್ ಯಥಾಸ್ವೈರಗತಾನ್ ಬಹೂನ್ ॥ ೨೨

ತೀಕ್ಷ್ಣಶೂಲಧರಾಂಶ್ಚೈವ ವಜ್ರಿಣಶ್ಚ ಮಹಾಬಲಾನ್ ।
ಶತಸಾಹಸ್ರಮವ್ಯಗ್ರಮಾರಕ್ಷಂ ಮಧ್ಯಮಂ ಕಪಿಃ ॥ ೨೩

ರಕ್ಷೋಽಧಿಪತಿನಿರ್ದಿಷ್ಟಂ ದದರ್ಶಾಂತಃಪುರಾಗ್ರತಃ ।
ಸ ತದಾ ತದ್ಗೃಹಂ ದೃಷ್ಟ್ವಾ ಮಹಾಹಾಟಕತೋರಣಮ್ ॥ ೨೪

ರಾಕ್ಷಸೇಂದ್ರಸ್ಯ ವಿಖ್ಯಾತಮದ್ರಿಮೂರ್ಧ್ನಿ ಪ್ರತಿಷ್ಠಿತಮ್ ।
ಪುಂಡರೀಕಾವತಂಸಾಭಿಃ ಪರಿಖಾಭಿಃ ಸಮಾವೃತಮ್ ॥ ೨೫

ಪ್ರಾಕಾರಾವೃತಮತ್ಯಂತಂ ದದರ್ಶ ಸ ಮಹಾಕಪಿಃ ।
ತ್ರಿವಿಷ್ಟಪನಿಭಂ ದಿವ್ಯಂ ದಿವ್ಯನಾದವಿನಾದಿತಮ್ ॥ ೨೬

ವಾಜಿಹೇಷಿತಸಂಘುಷ್ಟಂ ನಾದಿತಂ ಭೂಷಣೈಸ್ತಥಾ ।
ರಥೈರ್ಯಾನೈರ್ವಿಮಾನೈಶ್ಚ ತಥಾ ಗಜಹಯೈಃ ಶುಭೈಃ ॥ ೨೭

ಸುಂದರರೂ ತೇಜಸ್ವಿಗಳೂ ಆಗಿದ್ದರು. ಇನ್ನು ಕೆಲವು ನಗರವಾಸಿಗಳು ಹೂಮಾಲೆಯನ್ನು ಧರಿಸಿ, ಸುಗಂಧವನ್ನು ತೊಡೆದುಕೊಂಡು, ಆಭರಣಭೂಷಿತರಾಗಿ ವಿಹರಿಸುತ್ತಿದ್ದರು (೧೮–೨೨). ಆಂಜನೇಯನು ಅವರೆಲ್ಲರನ್ನೂ ನೋಡುತ್ತ ರಾವಣನ ಅಂತಃಪುರವಿರುವ ಮಹಾಸೌಧದ ಬಳಿಗೆ ಬಂದು ಸುತ್ತಲೂ ಕಾವಲಿದ್ದ ಘೋರಾಯುಧಧಾರಿಗಳಾದ ಲಕ್ಷಾಂತರ ಸೈನಿಕರನ್ನು ಕಂಡನು. ಆ ಸೌಧಕ್ಕೆ ಸುವರ್ಣಮಯವಾದ ದೊಡ್ಡ ಬಾಗಿಲಿದ್ದಿತು. ಸುತ್ತಲೂ ಬಿಳಿದಾವರೆಗಳು ಬೆಳೆದಿರುವ ಒಂದು ದೊಡ್ಡ ಪರಿಖೆ ಇತ್ತು (೨೩–೨೫). ಪರಿಖೆಯ ಆಚೆ ವಿಶಾಲವಾದ ಪಾಗಾರ. ಆ ಭವನವು ಸ್ವರ್ಗಲೋಕಕ್ಕೆ ಸದೃಶವಾಗಿ,

ವಾರಣೈಶ್ಚ ಚತುರ್ದಂತೈಃ ಶ್ವೇತಾಭ್ರನಿಚಯೋಪಮೈಃ ।
ಭೂಷಿತಂ ರುಚಿರದ್ವಾರಂ ಮತ್ತೈಶ್ಚ ಮೃಗಪಕ್ಷಿಭಿಃ ॥ ೨೮

ರಕ್ಷಿತಂ ಸುಮಹಾವೀರ್ಯೈರ್ಯಾತುಧಾನೈಃ ಸಹಸ್ರಶಃ ।
ರಾಕ್ಷಸಾಧಿಪತೇರ್ಗುಪ್ತಮಾವಿವೇಶ ಗೃಹಂ ಕಪಿಃ ॥ ೨೯

ಸಹೇಮಜಾಂಬೂನದಚಕ್ರವಾಲಂ
ಮಹಾರ್ಹಮುಕ್ತಾಮಣಿಭೂಷಿತಾಂತಮ್ ।
ಪರಾರ್ಧ್ಯಕಾಲಾಗರುಚಂದನಾಕ್ತಂ
ಸ ರಾವಣಾಂತಃಪುರಮಾವಿವೇಶ ॥ ೩೦

ಇತಿ ಶ್ರೀಮದ್ರಾಮಾಯಣೇ ಸುಂದರಕಾಂಡೇ ಚತುರ್ಥಃ ಸರ್ಗಃ

ದಿವ್ಯ ಮನೋಹರ ಧ್ವನಿಗಳಿಂದ ತುಂಬಿತ್ತು. ಒಂದು ಕಡೆ ಕುದುರೆಗಳ ಹೇಷಾರವವೂ ಇನ್ನೊಂದು ಕಡೆ ಸ್ತ್ರೀಯರ ಆಭರಣಧ್ವನಿಯೂ ಕೇಳಿಸುತ್ತಿತ್ತು. ಎಲ್ಲಿ ನೋಡಿದರೂ ರಥಗಳೂ ಪಲ್ಲಕ್ಕಿಗಳೂ ವಿಮಾನಗಳೂ ಆನೆ ಕುದುರೆಗಳೂ ತುಂಬಿದ್ದವು (೨೬–೨೭). ಮಹಾದ್ವಾರದ ಬಳಿ ನಾಲ್ಕು ಕೋರೆಯಹಲ್ಲುಗಳಿರುವ ಬಿಳಿಯಾನೆಗಳೂ ಸುಂದರವಾದ ಮೃಗಪಕ್ಷಿಗಳೂ ಇದ್ದವು. ರಾಕ್ಷಸರಾಜನ ಆ ಭವನವನ್ನು ಬಲಾಢ್ಯರಾದ ಬಹುಮಂದಿ ರಾಕ್ಷಸರು ಕಾಯುತ್ತಿದ್ದರು (೨೮–೨೯). ಸುವರ್ಣಪ್ರಾಕಾರದಿಂದ ಆವೃತವಾಗಿಯೂ, ಮುತ್ತಿನ ಮಣಿಗಳಿಂದ ಭೂಷಿತವಾಗಿಯೂ, ಅಗರುಚಂದನಗಳ ಸುಗಂಧದಿಂದ ತುಂಬಿಹೋಗಿಯೂ ಇದ್ದ ಆ ಭವನದ ಪ್ರಾಕಾರದೊಳಕ್ಕೆ ಹನುಮಂತನು ಪ್ರವೇಶಿಸಿದನು (೩೦).

ಇಲ್ಲಿಗೆ ಶ್ರೀಮದ್ರಾಮಾಯಣದ ಸುಂದರಕಾಂಡದಲ್ಲಿ ನಾಲ್ಕನೆಯ ಸರ್ಗ

ಪಂಚಮಃ ಸರ್ಗಃ

ಭವನವಿಚಯಃ

ತತಃ ಸ ಮಧ್ಯಂ ಗತಮಂಶುಮಂತಂ
ಜ್ಯೋತ್ಸ್ನಾವಿತಾನಂ ಮಹದುದ್ವಮಂತಮ್ ।
ದದರ್ಶ ಧೀಮಾನ್ ದಿವಿ ಭಾನುಮಂತಂ
ಗೋಷ್ಠೇ ವೃಷಂ ಮತ್ತಮಿವ ಭ್ರಮಂತಮ್ ॥ ೧

ಲೋಕಸ್ಯ ಪಾಪಾನಿ ವಿನಾಶಯಂತಂ
ಮಹೋದಧಿಂ ಚಾಪಿ ಸಮೇಧಯಂತಮ್ ।
ಭೂತಾನಿ ಸರ್ವಾಣಿ ವಿರಾಜಯಂತಂ
ದದರ್ಶ ಶೀತಾಂಶುಮಥಾಭಿಯಾಂತಮ್ ॥ ೨

ಯಾ ಭಾತಿ ಲಕ್ಷ್ಮೀರ್ಭುವಿ ಮಂದರಸ್ಥಾ
ತಥಾ ಪ್ರದೋಷೇಷು ಚ ಸಾಗರಸ್ಥಾ ।
ತಥೈವ ತೋಯೇಷು ಚ ಪುಷ್ಕರಸ್ಥಾ
ರರಾಜ ಸಾ ಚಾರುನಿಶಾಕರಸ್ಥಾ ॥ ೩

ಸರ್ಗ ೫

ಚಂದ್ರೋದಯ ವರ್ಣನೆ; ಸೀತೆಯನ್ನು ಕಾಣದುದಕ್ಕಾಗಿ ಹನುಮಂತನ ಶೋಕ

ಹನುಮಂತನು ರಾವಣನ ಅರಮನೆಗೆ ಬರುತ್ತಿರುವಾಗ ಸುಮಾರು ಮಧ್ಯರಾತ್ರಿಯಾಯಿತು. ಅಷ್ಟರಲ್ಲಿ ಚಂದ್ರನು ಬೆಳದಿಂಗಳನ್ನು ಚಲ್ಲುತ್ತ ಗಗನತಲವನ್ನೇರಿದನು. ನಕ್ಷತ್ರಗಳ ಮಧ್ಯದಲ್ಲಿ ವಿರಾಜಿಸುತ್ತಿದ್ದ ಅವನು ಹಸುಗಳ ಮಂದೆಯಲ್ಲಿ ಸಂಚರಿಸುವ ಗೂಳಿಯಂತೆ ಕಾಣುತ್ತಿದ್ದನು (೧). ಜನರ ತಾಪವನ್ನು ಪರಿಹರಿಸುತ್ತ, ಸಮುದ್ರವನ್ನು ಉಕ್ಕೇರಿಸುತ್ತ, ಸಮಸ್ತ ವಸ್ತುಗಳನ್ನೂ ಬೆಳಗಿಸುತ್ತ ಬರುತ್ತಿದ್ದ ಆ ಶೀತಕಿರಣನನ್ನು ಹನುಮಂತನು ಕಂಡನು (೨). ಭೂಲೋಕದಲ್ಲಿ ಮಂದರ ಪರ್ವತಕ್ಕೂ, ಪ್ರದೋಷಕಾಲದಲ್ಲಿ ಸಮುದ್ರಕ್ಕೂ, ಹಗಲು ನೀರಿನಲ್ಲಿರುವ ಕಮಲಕ್ಕೂ ಯಾವ ಸೌಂದರ್ಯವಿರುತ್ತದೆಯೋ ಅದೆಲ್ಲವೂ ಆಗ

ಹಂಸೋ ಯಥಾ ರಾಜತಪಂಜರಸ್ಥಃ
ಸಿಂಹೋ ಯಥಾ ಮಂದರಕಂದರಸ್ಥಃ ।
ವೀರೋ ಯಥಾ ಗರ್ವಿತಕುಂಜರಸ್ಥ-
ಶ್ಚಂದ್ರೋಽಪಿ ಬಭ್ರಾಜ ತಥಾಂಬರಸ್ಥಃ ॥ ೪

ಸ್ಥಿತಃ ಕಕುದ್ಮಾನಿವ ತೀಕ್ಷ್ಣಶೃಂಗೋ
ಮಹಾಚಲಃ ಶ್ವೇತ ಇವೋಚ್ಚಶೃಂಗಃ ।
ಹಸ್ತೀವ ಜಾಂಬೂನದಬದ್ಧಶೃಂಗೋ
ರರಾಜ ಚಂದ್ರಃ ಪರಿಪೂರ್ಣಶೃಂಗಃ ॥ ೫

ವಿನಷ್ಟಶೀತಾಂಬುತುಷಾರಪಂಕೋ
ಮಹಾಗ್ರಹಗ್ರಾಹವಿನಷ್ಟಪಂಕಃ ।
ಪ್ರಕಾಶಲಕ್ಷ್ಮ್ಯಾಶ್ರಯನಿರ್ಮಲಾಂಕೋ
ರರಾಜ ಚಂದ್ರೋ ಭಗವಾನ್ ಶಶಾಂಕಃ ॥ ೬

ಶಿಲಾತಲಂ ಪ್ರಾಪ್ಯ ಯಥಾ ಮೃಗೇಂದ್ರೋ
ಮಹಾರಣಂ ಪ್ರಾಪ್ಯ ಯಥಾ ಗಜೇಂದ್ರಃ ।

ಚಂದ್ರಮಂಡಲದಲ್ಲಿ ತುಂಬಿತ್ತು. (ಮಂದರ ಶಿಖರದಂತೆ ಚಂದ್ರನು ಎತ್ತರದಲ್ಲಿದ್ದನು. ಸಮುದ್ರದ ಅಲೆಯು ದಡದ ಕಡೆಗೆ ನುಗ್ಗುವಂತೆ ಆಕಾಶದಲ್ಲಿ ನುಗ್ಗಿ ಬರುತ್ತಿದ್ದನು. ಕಮಲದಂತೆ ಪ್ರಸನ್ನನಾಗಿದ್ದನು) (೩). ಆಕಾಶಮಧ್ಯದಲ್ಲಿದ್ದ ಚಂದ್ರನು ಬೆಳ್ಳಿಯ ಪಂಜರದಲ್ಲಿರುವ ಹಂಸದಂತೆ, ಮಂದರಗುಹೆಯಲ್ಲಿರುವ ಸಿಂಹದಂತೆ, ಮದ್ದಾನೆಯನ್ನೇರಿದ ಯೋಧನಂತೆ ರಂಜಿಸುತ್ತಿದ್ದನು (೪). ಚಂದ್ರಮಂಡಲದಲ್ಲಿ ಕೊಂಬಿನಂತಹ ಚಿಹ್ನೆಯೊಂದು ಕಾಣಿಸುತ್ತಿದ್ದಿತು. ಆದ್ದರಿಂದ ಚಂದ್ರನು ಕೊಂಬಿರುವ ಬಿಳಿಯ ಎತ್ತಿನಂತೆಯೂ, ಶಿಖರವನ್ನು ಚಾಚಿ ನಿಂತಿರುವ ಹಿಮಾಚಲದಂತೆಯೂ, ಸುವರ್ಣಾಲಂಕೃತವಾದ ಕೋರೆಯಹಲ್ಲಿರುವ ಆನೆಯಂತೆಯೂ ವಿರಾಜಿಸುತ್ತಿದ್ದನು (೫). ಮಂಜು ಇಲ್ಲದೆ ಆಕಾಶವು ಸ್ವಚ್ಛವಾಗಿತ್ತು. ತನ್ನಲ್ಲಿ ಸಂಕ್ರಾಂತವಾದ ಸೂರ್ಯಕಿರಣದಿಂದ ಕತ್ತಲನ್ನು ಅಡಗಿಸಿ, ಚಂದ್ರನು ನಿರ್ಮಲವಾಗಿ ಪ್ರಕಾಶಿಸುತ್ತಿದ್ದನು (೬). ಪರ್ವತದ ಬಂಡೆಯನ್ನು ಹತ್ತಿನಿಂತ

ರಾಜ್ಯಂ ಸಮಾಸಾದ್ಯ ಯಥಾ ನರೇಂದ್ರ-
ಸ್ತಥಾ ಪ್ರಕಾಶೋ ವಿರರಾಜ ಚಂದ್ರಃ ॥ ೭

ಪ್ರಕಾಶಚಂದ್ರೋದಯನಷ್ಟದೋಷಃ
ಪ್ರವೃದ್ಧರಕ್ಷಃಪಿಶಿತಾಶದೋಷಃ ।
ರಾಮಾಭಿರಾಮೇರಿತಚಿತ್ತದೋಷಃ
ಸ್ವರ್ಗಪ್ರಕಾಶೋ ಭಗವಾನ್ ಪ್ರದೋಷಃ ॥ ೮

ತಂತ್ರೀಸ್ವನಾಃ ಕರ್ಣಸುಖಾಃ ಪ್ರವೃತ್ತಾಃ
ಸ್ವಪಂತಿ ನಾರ್ಯಃ ಪತಿಭಿಃ ಸುವೃತ್ತಾಃ ।
ನಕ್ತಂಚರಾಶ್ಚಾಪಿ ತಥಾ ಪ್ರವೃತ್ತಾ
ವಿಹರ್ತುಮತ್ಯದ್ಭುತರೌದ್ರವೃತ್ತಾಃ ॥ ೯

ಮತ್ತಪ್ರಮತ್ತಾನಿ ಸಮಾಕುಲಾನಿ
ರಥಾಶ್ವಭದ್ರಾಸನಸಂಕುಲಾನಿ ।
ವೀರಶ್ರಿಯಾ ಚಾಪಿ ಸಮಾಕುಲಾನಿ
ದದರ್ಶ ಧೀಮಾನ್ ಸ ಕಪಿಃ ಕುಲಾನಿ ॥ ೧೦

ಸಿಂಹದಂತೆಯೂ, ರಣಭೂಮಿಗೆ ನುಗ್ಗಿದ ಗಜರಾಜನಂತೆಯೂ, ತನ್ನ ರಾಜ್ಯದಲ್ಲಿ ಸಂಚರಿಸುವ ಮಹಾರಾಜನಂತೆಯೂ ಚಂದ್ರನು ಶೋಭಿಸುತ್ತಿದ್ದನು (೭). ಎಲ್ಲೆಲ್ಲಿಯೂ ಬೆಳದಿಂಗಳು; ರಾಕ್ಷಸರು ವಿಹರಿಸುವ ಕಾಲ; ಪ್ರೇಮಿಗಳ ಪ್ರಣಯಕೋಪವು ಶಾಂತವಾಗುವ ಸಮಯ; ರಾತ್ರಿಯು ಎಲ್ಲರಿಗೂ ಸ್ವರ್ಗಸುಖವನ್ನು ತಂದುಕೊಟ್ಟಿತ್ತು (೮). ತಂತ್ರೀವಾದ್ಯಗಳ ಇಂಪಾದ ನಾದವು ಕೇಳಿಸುತ್ತಿದ್ದಿತು. ಸ್ತ್ರೀಯರು ತಮ್ಮ ಪತಿಗಳೊಡನೆ ಸುಖನಿದ್ರೆ ಮಾಡುತ್ತಿದ್ದರು. ಕೆಲವು ರಾಕ್ಷಸರು ಕ್ರೂರಕರ್ಮಗಳನ್ನು ಮಾಡುತ್ತಾ ವಿಹರಿಸುತ್ತಿದ್ದರು (೯). ಭೋಗವಿಲಾಸಗಳಿಂದ ಮದವೇರಿದ ಜನರಿಂದಲೂ, ರಥ, ಅಶ್ವ, ಸ್ವರ್ಣಪೀಠ ಮುಂತಾದ ಸಾಮಗ್ರಿಗಳಿಂದಲೂ ತುಂಬಿದ ಅನೇಕ ಭವನಗಳನ್ನು ಹನುಮಂತನು ನೋಡಿದನು (೧೦). ವಾಗ್ವಾದ ಮಾಡುತ್ತಿದ್ದ ರಾಕ್ಷಸರು ಕೆಲವರು; ಪುಷ್ಟವಾದ

ಪರಸ್ಪರಂ ಚಾಧಿಕಮಾಕ್ಷಿಪಂತಿ
ಭುಜಾಂಶ್ಚ ಪೀನಾನಧಿವಿಕ್ಷಿಪಂತಿ ।
ಮತ್ತಪ್ರಲಾಪಾನಧಿವಿಕ್ಷಿಪಂತಿ
ಮತ್ತಾನಿ ಚಾನ್ಯೋನ್ಯಮಧಿಕ್ಷಿಪಂತಿ ॥ ೧೧

ರಕ್ಷಾಂಸಿ ವಕ್ಷಾಂಸಿ ಚ ವಿಕ್ಷಿಪಂತಿ
ಗಾತ್ರಾಣಿ ಕಾಂತಾಸು ಚ ವಿಕ್ಷಿಪಂತಿ ।
ರೂಪಾಣಿ ಚಿತ್ರಾಣಿ ಚ ವಿಕ್ಷಿಪಂತಿ
ದೃಢಾನಿ ಚಾಪಾನಿ ಚ ವಿಕ್ಷಿಪಂತಿ ॥ ೧೨

ದದರ್ಶ ಕಾಂತಾಶ್ಚ ಸಮಾಲಪಂತ್ಯ-
ಸ್ತಥಾಪರಾಸ್ತತ್ರ ಪುನಃ ಸ್ವಪಂತ್ಯಃ ।
ಸುರೂಪವಕ್ತ್ರಾಶ್ಚ ತಥಾ ಹಸಂತ್ಯಃ
ಕ್ರುದ್ಧಾಃ ಪರಾಶ್ಚಾಪಿ ವಿನಿಃಶ್ವಸಂತ್ಯಃ ॥ ೧೩

ಮಹಾಗಜೈಶ್ಚಾಪಿ ತಥಾ ನದದ್ಭಿಃ
ಸುಪೂಜಿತೈಶ್ಚಾಪಿ ತಥಾ ಸುಸದ್ಭಿಃ ।
ರರಾಜ ವೀರೈಶ್ಚ ವಿನಿಃಶ್ವಸದ್ಭಿ-
ರ್ಹ್ರದೋ ಭುಜಂಗೈರಿವ ನಿಃಶ್ವಸದ್ಭಿಃ ॥ ೧೪

ತಮ್ಮ ಭುಜಗಳನ್ನು ಇನ್ನೊಬ್ಬರ ಭುಜದಮೇಲೆ ಇಡುತ್ತಿದ್ದವರು ಕೆಲವರು; ಹುಚ್ಚು ಹುಚ್ಚಾಗಿ ಕೂಗಾಡುತ್ತಿದ್ದವರು ಕೆಲವರು; ಬೈದಾಡುತ್ತಿದ್ದವರು ಕೆಲವರು (೧೧). ಕೆಲವರು ಎದೆಯನ್ನು ಚಾಚಿಕೊಂಡು ಕಾಂತೆಯರ ಮೈಮೇಲೆ ಕೈಯಿಡುತ್ತಿದ್ದರು. ಕೆಲವರು ವಿಚಿತ್ರ ವೇಷವನ್ನು ಧರಿಸಿ ಬಿಲ್ಲನ್ನು ಮಿಡಿಯುತ್ತಿದ್ದರು (೧೨). ಹಾಗೆಯೇ ಅನೇಕ ರಾಕ್ಷಸಸ್ತ್ರೀಯರು ಸರಸ ಸಲ್ಲಾಪದಲ್ಲಿ ತೊಡಗಿದ್ದರು. ಕೆಲವರು ನಿದ್ರೆ ಮಾಡುತ್ತಿದ್ದರು. ಕೆಲವರು ನಗುತ್ತಿದ್ದರು. ಇನ್ನೂ ಕೆಲವರು ಕೋಪಗೊಳ್ಳುತ್ತಲೂ ನಿಟ್ಟುಸಿರು ಬಿಡುತ್ತಲೂ ಇದ್ದರು (೧೩). ಅಲ್ಲಲ್ಲಿ ದೊಡ್ಡ ಸಲಗಗಳು ಘೀಂಕಾರ ಮಾಡುತ್ತಿದ್ದವು. ಆ ನಗರದಲ್ಲಿ ಅನೇಕಮಂದಿ ಗೌರವಾನ್ವಿತ ಸಜ್ಜನರೂ ಇದ್ದರು.

ಬುದ್ಧಿಪ್ರಧಾನಾನ್ ರುಚಿರಾಭಿಧಾನಾನ್
ಸಂಶ್ರದ್ದಧಾನಾನ್ ಜಗತಃ ಪ್ರಧಾನಾನ್ ।
ನಾನಾವಿಧಾನಾನ್ ರುಚಿರಾಭಿಧಾನಾನ್
ದದರ್ಶ ತಸ್ಯಾಂ ಪುರಿ ಯಾತುಧಾನಾನ್ ॥ ೧೫

ನನಂದ ದೃಷ್ಟ್ವಾ ಚ ಸ ತಾನ್ ಸುರೂಪಾನ್
ನಾನಾಗುಣಾನಾತ್ಮಗುಣಾನುರೂಪಾನ್ ।
ವಿದ್ಯೋತಮಾನಾನ್ ಸ ತದಾನುರೂಪಾನ್
ದದರ್ಶ ಕಾಂಶ್ಚಿಚ್ಚ ಪುನರ್ವಿರೂಪಾನ್ ॥ ೧೬

ತತೋ ವರಾರ್ಹಾಃ ಸುವಿಶುದ್ಧಭಾವಾ-
ಸ್ತೇಷಾಂ ಸ್ತ್ರಿಯಸ್ತತ್ರ ಮಹಾನುಭಾವಾಃ ।
ಪ್ರಿಯೇಷು ಪಾನೇಷು ಚ ಸಕ್ತಭಾವಾ
ದದರ್ಶ ತಾರಾ ಇವ ಸುಪ್ರಭಾವಾಃ ॥ ೧೭

ಶ್ರಿಯಾ ಜ್ವಲಂತೀಸ್ತ್ರಪಯೋಪಗೂಢಾ
ನಿಶೀಥಕಾಲೇ ರಮಣೋಪಗೂಢಾಃ ।
ದದರ್ಶ ಕಾಶ್ಚಿತ್ ಪ್ರಮದೋಪಗೂಢಾ
ಯಥಾ ವಿಹಂಗಾಃ ಕುಸುಮೋಪಗೂಢಾಃ ॥ ೧೮

ಯುದ್ಧಮಾಡಲು ತಕ್ಕ ಪ್ರತೀವೀರರು ದೊರೆಯಲಿಲ್ಲವೆಂಬ ಚಿಂತೆಯಿಂದ ಅನೇಕ ರಾಕ್ಷಸ ವೀರರು ಸರ್ಪಗಳಂತೆ ಬುಸುಗುಟ್ಟುತ್ತಿದ್ದರು (೧೪). ಕೆಲವು ರಾಕ್ಷಸರು ಬುದ್ಧಿಶಾಲಿಗಳೂ ಒಳ್ಳೆಯ ಮಾತುಗಾರರೂ ಆಸ್ತಿಕರೂ ಸುಂದರವಾದ ಹೆಸರುಳ್ಳವರೂ ರೂಪಶಾಲಿಗಳೂ ರೂಪಕ್ಕೆ ಅನುಗುಣವಾದ ಶೀಲಸಂಪನ್ನರೂ ಆಗಿದ್ದರು. ಅವರನ್ನು ಕಂಡು ಹನುಮಂತನಿಗೆ ಸಂತೋಷವಾಯಿತು (೧೫–೧೬). ಮತ್ತು ತಮ್ಮ ಪ್ರಿಯರಲ್ಲಿ ಶುದ್ಧವಾದ ಪ್ರೇಮವನ್ನಿಟ್ಟು ಪ್ರಿಯರಲ್ಲಿಯೂ ಮದ್ಯಪಾನದಲ್ಲಿಯೂ ಆಸಕ್ತಿಯನ್ನು ತೋರಿಸುತ್ತ, ತಾರೆಗಳಂತೆ ಶೋಭಿಸುತ್ತಿರುವ ಶೀಲವತಿಯರಾದ ಅನೇಕ ಸುಂದರ ತರುಣಿಯರನ್ನು ಆಂಜನೇಯನು ನೋಡಿದನು (೧೭). ಕೆಲವು ಸುಂದರಿಯರು ತಮ್ಮ ಪ್ರಿಯರಿಂದ ಗಾಢಾಲಿಂಗಿತ ರಾಗಿ ನಾಚುತ್ತ ಹೂಗಳ ಮಧ್ಯದಲ್ಲಿ ಓಲಾಡುವ ಹೆಣ್ಣು ದುಂಬಿಗಳಂತೆ

ಅನ್ಯಾಃ ಪುನರ್ಹರ್ಮ್ಯತಲೋಪವಿಷ್ಟಾ-
ಸ್ತತ್ರ ಪ್ರಿಯಾಂಕೇಷು ಸುಖೋಪವಿಷ್ಟಾಃ ।
ಭರ್ತುಃ ಪ್ರಿಯಾ ಧರ್ಮಪರಾ ನಿವಿಷ್ಟಾ
ದದರ್ಶ ಧೀಮಾನ್ ಮದನಾಭಿವಿಷ್ಟಾಃ ॥ ೧೯

ಅಪ್ರಾವೃತಾಃ ಕಾಂಚನರಾಜಿವರ್ಣಾಃ
ಕಾಶ್ಚಿತ್ ಪರಾರ್ಧ್ಯಾಸ್ತಪನೀಯವರ್ಣಾಃ ।
ಪುನಶ್ಚ ಕಾಶ್ಚಿಚ್ಛಶಲಕ್ಷ್ಮವರ್ಣಾಃ
ಕಾಂತಪ್ರಹೀಣಾ ರುಚಿರಾಂಗವರ್ಣಾಃ ॥ ೨೦

ತತಃ ಪ್ರಿಯಾನ್ ಪ್ರಾಪ್ಯ ಮನೋಽಭಿರಾಮಾನ್
ಸುಪ್ರೀತಿಯುಕ್ತಾಃ ಪ್ರಸಮೀಕ್ಷ್ಯ ರಾಮಾಃ ।
ಗೃಹೇಷು ಹೃಷ್ಟಾಃ ಪರಮಾಭಿರಾಮಾ
ಹರಿಪ್ರವೀರಃ ಸ ದದರ್ಶ ರಾಮಾಃ ॥ ೨೧

ಚಂದ್ರಪ್ರಕಾಶಾಶ್ಚ ಹಿ ವಕ್ತ್ರಮಾಲಾ
ವಕ್ರಾಕ್ಷಿಪಕ್ಷ್ಮಾಶ್ಚ ಸುನೇತ್ರಮಾಲಾಃ ।
ವಿಭೂಷಣಾನಾಂ ಚ ದದರ್ಶ ಮಾಲಾಃ
ಶತಹ್ರದಾನಾಮಿವ ಚಾರುಮಾಲಾಃ ॥ ೨೨

ಆನಂದಪರವಶರಾಗಿದ್ದರು (೧೮). ಇನ್ನೂ ಕೆಲವು ಪತಿವ್ರತೆಯರು ಉಪ್ಪರಿಗೆಗಳಲ್ಲಿ ತಮ್ಮ ಗಂಡಂದಿರ ಬಳಿ ಕುಳಿತು ಆನಂದದಿಂದ ಮನ್ಮಥಾವಿಷ್ಟರಾಗಿದ್ದರು (೧೯). ಕೆಲವು ಸ್ತ್ರೀಯರು ತಮ್ಮ ಉತ್ತರೀಯವನ್ನು ತೆಗೆದುಹಾಕಿದ್ದರು. ಸುವರ್ಣರೇಖೆ ಯಂತೆ ಅವರ ಮೈಬಣ್ಣ ಮಿಂಚುತ್ತಿತ್ತು. ಇನ್ನು ಕೆಲವರು ಪತಿವಿರಹದುಃಖದಿಂದ ಚಂದ್ರನಂತೆ ಬಿಳಚಿಕೊಂಡಿದ್ದರು (೨೦). ಮನೆಗಳಲ್ಲಿ ತಮ್ಮ ಪ್ರಿಯರಾದ ಗಂಡಂದಿರೊಡನೆ ಹರ್ಷದಿಂದಿದ್ದ ಅನೇಕ ಸುಂದರ ಯುವತಿಯರನ್ನು ಆಂಜನೇಯನು ಕಂಡನು (೨೧). ಹನುಮಂತನು ಚಂದ್ರನಂತೆ ವಿರಾಜಿಸುವ ಸ್ತ್ರೀಯರ ಮುಖಗಳನ್ನೂ, ಬಾಗಿದ ಕಣ್ಣೆವೆಯುಳ್ಳ ನೇತ್ರಪಂಕ್ತಿಗಳನ್ನೂ, ಮಿಂಚಿನಂತೆ ಹೊಳೆಯುವ ಅವರ ಭೂಷಣಗಳನ್ನೂ ಸೀತೆಯನ್ನು ಗುರುತಿಸುವುದಕ್ಕಾಗಿ

ನ ತ್ವೇವ ಸೀತಾಂ ಪರಮಾಭಿಜಾತಾಂ
ಪಥಿ ಸ್ಥಿತೇ ರಾಜಕುಲೇ ಪ್ರಜಾತಾಮ್ ।
ಲತಾಂ ಪ್ರಫುಲ್ಲಾಮಿವ ಸಾಧು ಜಾತಾಂ
ದದರ್ಶ ತನ್ವೀಂ ಮನಸಾಭಿಜಾತಾಮ್ ॥ ೨೩

ಸನಾತನೇ ವರ್ತ್ಮನಿ ಸಂನಿವಿಷ್ಟಾಂ
ರಾಮೇಕ್ಷಣಾಂ ತಾಂ ಮದನಾಭಿವಿಷ್ಟಾಮ್ ।
ಭರ್ತುರ್ಮನಃ ಶ್ರೀಮದನುಪ್ರವಿಷ್ಟಾಮ್
ಸ್ತ್ರೀಭ್ಯೋ ವರಾಭ್ಯಶ್ಚ ಸದಾ ವಿಶಿಷ್ಟಾಮ್ ॥ ೨೪

ಉಷ್ಣಾರ್ದಿತಾಂ ಸಾನುಸೃತಾಸ್ರಕಂಠೀಂ
ಪುರಾ ವರಾರ್ಹೋತ್ತಮನಿಷ್ಕಕಂಠೀಮ್ ।
ಸುಜಾತಪಕ್ಷ್ಮಾಮಭಿರಕ್ತಕಂಠೀಂ
ವನೇ ಪ್ರನೃತ್ತಾಮಿವ ನೀಲಕಂಠೀಮ್ ॥ ೨೫

ಅವ್ಯಕ್ತರೇಖಾಮಿವ ಚಂದ್ರರೇಖಾಂ
ಪಾಂಸು ಪ್ರದಿಗ್ಧಾಮಿವ ಹೇಮರೇಖಾಮ್ ।

ಗಮನಿಸಿ ನೋಡುತ್ತಿದ್ದನು (೨೨). ಆದರೇನು? ಸತ್ಕುಲಪ್ರಸೂತೆಯೂ, ಅರಳಿದ ಬಳ್ಳಿಯಂತೆ ಕೃಶಾಂಗಿಯೂ, ಅಯೋನಿಜೆಯೂ ಆದ ಸೀತಾದೇವಿಯು ಮಾತ್ರ ಅವನ ಕಣ್ಣಿಗೆ ಗೋಚರಿಸಲಿಲ್ಲ. ಸೀತಾದೇವಿಯಾದರೋ ಪರಂಪರೆಯಿಂದ ಬಂದ ಪಾತಿವ್ರತ್ಯಧರ್ಮದಲ್ಲಿ ನಿರತಳು; ವಿರಹದುಃಖಿತೆಯಾಗಿ ರಾಮನನ್ನೇ ನೋಡಲು ಕಾದಿರುವವಳು; ಶ್ರೀರಾಮಚಂದ್ರನ ಮನಸ್ಸಿನಲ್ಲಿ ಸದಾ ನೆಲಸಿರತಕ್ಕವಳು; ಉತ್ತಮ ಸ್ತ್ರೀಯರಲ್ಲಿ ಉತ್ತಮಳು (೨೩–೨೪). ಹಿಂದೆ ಶ್ರೀರಾಮನ ಸನ್ನಿಧಿಯಲ್ಲಿದ್ದಾಗ, ಶ್ರೇಷ್ಠವಾದ ಸುವರ್ಣ ಪದಕದಿಂದ ಅಲಂಕರಿಸಿಕೊಂಡ ತನ್ನ ಕಂಠದಮೇಲೆ, ಈಗ ಬಿಸಿಯಾದ ಕಣ್ಣೀರನ್ನು ಧಾರಾಕಾರವಾಗಿ ಸುರಿಸುತ್ತ ಇರುವವಳು. ಅಂದವಾದ ಕಣ್ಣೆವೆಯಿಂದಲೂ ಇಂಪಾದ ಕಂಠದಿಂದಲೂ ಕೂಡಿದವಳು. ಹಿಂದೆ ಶ್ರೀರಾಮನ ಬಳಿ ಅರಣ್ಯದಲ್ಲಿ ಮಯೂರಿಯಂತೆ ವಿಹರಿಸಿದವಳು (೨೫). ಆಕೆಯು ಕ್ಷೀಣಿಸಿದ ಚಂದ್ರಕಲೆಯಂತೆಯೂ ಕೊಳೆಯಿಂದ ಮಲಿನವಾದ ಚಿನ್ನದ ಸಲಾಕೆಯಂತೆಯೂ

ಕ್ಷತಪ್ರರೂಢಾಮಿವ ಬಾಣರೇಖಾಂ
ವಾಯುಪ್ರಭಿನ್ನಾಮಿವ ಮೇಘರೇಖಾಮ್ ॥ ೨೬

ಸೀತಾಮಪಶ್ಯನ್ ಮನುಜೇಶ್ವರಸ್ಯ
ರಾಮಸ್ಯ ಪತ್ನೀಂ ವದತಾಂ ವರಸ್ಯ ।
ಬಭೂವ ದುಃಖಾಭಿಹತಶ್ಚಿರಸ್ಯ
ಪ್ಲವಂಗಮೋ ಮಂದ ಇವಾಚಿರಸ್ಯ ॥ ೨೭

ಇತಿ ಶ್ರೀಮದ್ರಾಮಾಯಣೇ ಸುಂದರಕಾಂಡೇ ಪಂಚಮಃ ಸರ್ಗಃ

ಇರತಕ್ಕವಳು; ಗಾಯದೊಳಗೆ ಸಿಕ್ಕಿರುವ ಬಾಣದ ತುದಿಯಂತೆ, ರಾವಣನ ಮನೋಯಾತನೆಗೆ ಕಾರಣಳು. ಬಿರುಗಾಳಿಯು ತಳ್ಳಿಕೊಂಡು ಬಂದ ಮೇಘದಂತೆ ಅಸಹಾಯಳು (೨೬). ಇಂತಹ ಸೀತಾದೇವಿಯು ಮಾತ್ರ ಆಂಜನೇಯನಿಗೆ ಗೋಚರಿಸಲಿಲ್ಲ. ಹೀಗೆ ಎಲ್ಲಿ ಹುಡುಕಿದರೂ ಶ್ರೀರಾಮನ ಧರ್ಮಪತ್ನಿಯು ಕಾಣದುದರಿಂದ ಅವನು ಚಿಂತಾಮಗ್ನನಾಗಿ ಸ್ವಲ್ಪ ಕಾಲ ಏನೂ ತೋರದೆ ಮೂಢನಂತಾದನು (೨೭).

ಇಲ್ಲಿಗೆ ಶ್ರೀಮದ್ರಾಮಾಯಣದ ಸುಂದರಕಾಂಡದಲ್ಲಿ ಐದನೆಯ ಸರ್ಗ

ಷಷ್ಠಃ ಸರ್ಗಃ

ರಾವಣಗೃಹಾವೇಕ್ಷಣಮ್

ಸ ನಿಕಾಮಂ ವಿಮಾನೇಷು ವಿಷಣ್ಣಃ ಕಾಮರೂಪಧೃತ್ ।
ವಿಚಚಾರ ಪುನರ್ಲಂಕಾಂ ಲಾಘವೇನ ಸಮನ್ವಿತಃ ॥ ೧

ಆಸಸಾದಾಥ ಲಕ್ಷ್ಮೀವಾನ್ ರಾಕ್ಷಸೇಂದ್ರನಿವೇಶನಮ್ ।
ಪ್ರಾಕಾರೇಣಾರ್ಕವರ್ಣೇನ ಭಾಸ್ವರೇಣಾಭಿಸಂವೃತಮ್ ॥ ೨

ರಕ್ಷಿತಂ ರಾಕ್ಷಸೈರ್ಭೀಮೈಃ ಸಿಂಹೈರಿವ ಮಹದ್ವನಮ್ ।
ಸಮೀಕ್ಷಮಾಣೋ ಭವನಂ ಚಕಾಶೇ ಕಪಿಕುಂಜರಃ ॥ ೩

ರೂಪ್ಯಕೋಪಹಿತೈಶ್ಚಿತ್ರೈಸ್ತೋರಣೈರ್ಹೇಮಭೂಷಿತೈಃ ।
ವಿಚಿತ್ರಾಭಿಶ್ಚ ಕಕ್ಷ್ಯಾಭಿರ್ದ್ವಾರೈಶ್ಚ ರುಚಿರೈರ್ವೃತಮ್ ॥ ೪

ಗಜಾಸ್ಥಿತೈರ್ಮಹಾಮಾತ್ರೈಃ ಶೂರೈಶ್ಚ ವಿಗತಶ್ರಮೈಃ ।
ಉಪಸ್ಥಿತಮಸಂಹಾರ್ಯೈರ್ಹಯೈಃ ಸ್ಯಂದನಯಾಯಿಭಿಃ ॥ ೫

ಸರ್ಗ ೬

ಅರಮನೆಯ ಸಮೀಪದಲ್ಲಿದ್ದ ಭವನಗಳಲ್ಲಿ ಸೀತೆಯನ್ನು ಹುಡುಕುವುದು.

ಹನುಮಂತನು ಆಕೆಯನ್ನು ಕಾಣದುದರಿಂದ ವಿಷಣ್ಣನಾದನು. ಮತ್ತೆ ಉತ್ಸಾಹ ತಂದುಕೊಂಡು ಅತಿವೇಗದಿಂದ ಲಂಕೆಯ ಉಳಿದ ಭಾಗವನ್ನೆಲ್ಲಾ ಹುಡುಕುತ್ತಾ ಹೊರಟನು (೧). ಕಡೆಗೆ ಸೂರ್ಯನಂತೆ ಝುಗಝುಗಿಸುವ ಪ್ರಾಕಾರದಿಂದ ಪರಿವೃತವಾದ ರಾಕ್ಷಸರಾಜನ ಅರಮನೆಯ ಬಳಿಗೆ ಬಂದನು (೨). ಆ ವಾನರಶ್ರೇಷ್ಠನು, ಸಿಂಹಗಳಿಂದ ರಕ್ಷಿತವಾದ ಅರಣ್ಯದಂತೆ, ಘೋರರಾಕ್ಷಸರಿಂದ ರಕ್ಷಿಸಲ್ಪಡುತ್ತಿದ್ದ ಅರಮನೆಯನ್ನು ಕಂಡನು. ಚಿನ್ನ ಬೆಳ್ಳಿಗಳಿಂದಲೇ ನಿರ್ಮಿತವಾಗಿ ಚಿತ್ರರಂಜಿತವಾದ ಬಾಗಿಲುಗಳಿಂದಲೂ ಚಿತ್ರಾಕೃತಿಯ ಕೋಣೆಗಳಿಂದಲೂ ಅದು ಶೋಭಿಸುತ್ತಿತ್ತು (೩–೪). ಆನೆ, ಕುದುರೆ, ರಥಗಳಲ್ಲಿ ಕುಳಿತ ಪ್ರಮುಖರಾದ ಅಧಿಕಾರಿಗಳು ಸುತ್ತಲೂ ಕಾವಲಾಗಿ ಸಂಚರಿಸುತ್ತಿದ್ದರು. ದಂತ, ಚಿನ್ನ, ಬೆಳ್ಳಿ

ಸಿಂಹವ್ಯಾಘ್ರತನುತ್ರಾಣೈರ್ದಾಂತಕಾಂಚನರಾಜತೈಃ ।
ಘೋಷವದ್ಭಿರ್ವಿಚಿತ್ರೈಶ್ಚ ಸದಾ ವಿಚರಿತಂ ರಥೈಃ ॥ ೬

ಬಹುರತ್ನಸಮಾಕೀರ್ಣಂ ಪರಾರ್ಧ್ಯಾಸನಭಾಜನಮ್ ।
ಮಹಾರಥಸಮಾವಾಸಂ ಮಹಾರಥಮಹಾಸನಮ್ ॥ ೭

ದೃಶ್ಯೈಶ್ಚ ಪರಮೋದಾರೈಸ್ತೈಸ್ತೈಶ್ಚ ಮೃಗಪಕ್ಷಿಭಿಃ ।
ವಿವಿಧೈರ್ಬಹುಸಾಹಸ್ರೈಃ ಪರಿಪೂರ್ಣಂ ಸಮಂತತಃ ॥ ೮

ವಿನೀತೈರಂತಪಾಲೈಶ್ಚ ರಕ್ಷೋಭಿಶ್ಚ ಸುರಕ್ಷಿತಮ್ ।
ಮುಖ್ಯಾಭಿಶ್ಚ ವರಸ್ತ್ರೀಭಿಃ ಪರಿಪೂರ್ಣಂ ಸಮಂತತಃ ॥ ೯

ಮುದಿತಪ್ರಮದಾರತ್ನಂ ರಾಕ್ಷಸೇಂದ್ರನಿವೇಶನಮ್ ।
ವರಾಭರಣಸಂಹ್ರಾದೈಃ ಸಮುದ್ರಸ್ವನನಿಃಸ್ವನಮ್ ॥ ೧೦

ತದ್ರಾಜಗುಣಸಂಪನ್ನಂ ಮುಖ್ಯೈಶ್ಚ ವರಚಂದನೈಃ ।
ಮಹಾಜನೈಃ ಸಮಾಕೀರ್ಣಂ ಸಿಂಹೈರಿವ ಮಹದ್ವನಮ್ ॥ ೧೧

ಭೇರೀಮೃದಂಗಾಭಿರುತಂ ಶಂಖಘೋಷವಿನಾದಿತಮ್ ।
ನಿತ್ಯಾರ್ಚಿತಂ ಪರ್ವಹುತಂ ಪೂಜಿತಂ ರಾಕ್ಷಸೈಃ ಸದಾ ॥ ೧೨

ಸಮುದ್ರಮಿವ ಗಂಭೀರಂ ಸಮುದ್ರಮಿವ ನಿಃಸ್ವನಮ್ ।
ಮಹಾತ್ಮನೋ ಮಹದ್ವೇಶ್ಮ ಮಹಾರತ್ನಪರಿಚ್ಛದಮ್ ॥ ೧೩

ಗಳಿಂದ ನಿರ್ಮಿಸಿ, ಸಿಂಹ ವ್ಯಾಘ್ರಗಳ ಚರ್ಮವನ್ನು ಹೊದಿಸಿದ ರಥಗಳು ಸದಾ ತಿರುಗುತ್ತಿದ್ದವು. ಎಲ್ಲಿ ನೋಡಿದರೂ ರತ್ನಖಚಿತವಾದ ರಾಜಪೀಠಗಳಿದ್ದು ಮಹಾ ರಥರಿಗೆ ವಾಸಸ್ಥಾನವಾಗಿತ್ತು (೫–೭). ಮನೋಹರವಾದ ಸಾವಿರಾರು ಮೃಗಪಕ್ಷಿ ಗಳು ಎಲ್ಲೆಲ್ಲಿಯೂ ತುಂಬಿದ್ದವು. ಸುಶಿಕ್ಷಿತರಾದ ಕಾವಲುಗಾರರು ಹೊರಗಡೆ ಕಾವಲಾಗಿರಲು, ಒಳಗೆ ಉತ್ತಮ ಸ್ತ್ರೀಯರು ನೆರೆದಿದ್ದರು. ಆ ಸ್ತ್ರೀಯರ ಆಭರಣ ಧ್ವನಿಯು ಸಮುದ್ರಘೋಷದಂತೆ ಕೇಳಿಬರುತ್ತಿತ್ತು (೮–೧೦). ಅಲ್ಲಿ ರಾಜಚಿಹ್ನೆ ಗಳಾದ ಛತ್ರಚಾಮರಾದಿಗಳು ತುಂಬಿದ್ದು ಶ್ರೇಷ್ಠವಾದ ಸುಗಂಧದ್ರವ್ಯಗಳು ಘಮಘಮಿಸುತ್ತಿದ್ದವು. ಭೇರಿ, ಶಂಖ ಮೊದಲಾದವು ಮೊಳಗುತ್ತಿದ್ದವು. ನಿತ್ಯಪೂಜೆಯಿಂದಲೂ ಹೋಮಾಗ್ನಿಯಿಂದಲೂ ಅರಮನೆಯ ಉಜ್ವಲವಾಗಿತ್ತು

ಮಹಾರತ್ನಸಮಾಕೀರ್ಣಂ ದದರ್ಶ ಸ ಮಹಾಕಪಿಃ ।
ವಿರಾಜಮಾನಂ ವಪುಷಾ ಗಜಾಶ್ವರಥಸಂಕುಲಮ್ ॥ ೧೪
ಲಂಕಾಭರಣಮಿತ್ಯೇವ ಸೋಽಮನ್ಯತ ಮಹಾಕಪಿಃ ।
ಚಚಾರ ಹನುಮಾಂಸ್ತತ್ರ ರಾವಣಸ್ಯ ಸಮೀಪತಃ ॥ ೧೫
ಗೃಹಾದ್ಗೃಹಂ ರಾಕ್ಷಸಾನಾಮುದ್ಯಾನಾನಿ ಚ ವಾನರಃ ।
ವೀಕ್ಷಮಾಣೋ ಹ್ಯಸಂತ್ರಸ್ತಃ ಪ್ರಾಸಾದಾಂಶ್ಚ ಚಚಾರ ಸಃ ॥ ೧೬
ಅವಪ್ಲುತ್ಯ ಮಹಾವೇಗಃ ಪ್ರಹಸ್ತಸ್ಯ ನಿವೇಶನಮ್ ।
ತತೋಽನ್ಯತ್ ಪುಪ್ಲುವೇ ವೇಶ್ಮ ಮಹಾಪಾರ್ಶ್ವಸ್ಯ ವೀರ್ಯವಾನ್ ॥ ೧೭
ಅಥ ಮೇಘಪ್ರತೀಕಾಶಂ ಕುಂಭಕರ್ಣನಿವೇಶನಮ್ ।
ವಿಭೀಷಣಸ್ಯ ಚ ತಥಾ ಪುಪ್ಲುವೇ ಸ ಮಹಾಕಪಿಃ ॥ ೧೮
ಮಹೋದರಸ್ಯ ಚ ಗೃಹಂ ವಿರೂಪಾಕ್ಷಸ್ಯ ಚೈವ ಹಿ ।
ವಿದ್ಯುಜ್ಜಿಹ್ವಸ್ಯ ಭವನಂ ವಿದ್ಯುನ್ಮಾಲೇಸ್ತಥೈವ ಚ ॥ ೧೯
ವಜ್ರದಂಷ್ಟ್ರಸ್ಯ ಚ ತಥಾ ಪುಪ್ಲುವೇ ಸ ಮಹಾಕಪಿಃ ।
ಶುಕಸ್ಯ ಚ ಮಹಾವೇಗಃ ಸಾರಣಸ್ಯ ಚ ಧೀಮತಃ ॥ ೨೦
ತಥಾ ಚೇಂದ್ರಜಿತೋ ವೇಶ್ಮ ಜಗಾಮ ಹರಿಯೂಥಪಃ ।
ಜಂಬುಮಾಲೇಃ ಸುಮಾಲೇಶ್ಚ ಜಗಾಮ ಭವನಂ ತತಃ ॥ ೨೧

(೧೧–೧೨). ಮಹಾತ್ಮನಾದ ರಾವಣನ ಆ ವಿಶಾಲಭವನವು ಸಮುದ್ರದಂತೆ ಗಂಭೀರವೂ ನಿತ್ಯಘೋಷಯುಕ್ತವೂ ಮಹಾರತ್ನಾಲಂಕಾರ ಭೂಷಿತವೂ ಆಗಿದ್ದಿತು. ಆಂಜನೇಯನು ಅದನ್ನು ನೋಡಿ 'ಇದು ಲಂಕಾನಗರಕ್ಕೇ ಭೂಷಣಪ್ರಾಯವಾದುದು' ಎಂದು ಭಾವಿಸಿ, ಆದರ ಸಮೀಪದಲ್ಲಿರುವ ಇತರ ಭವನಗಳಲ್ಲಿ ಮೊದಲು ಸೀತೆಯನ್ನು ಹುಡುಕಲಾರಂಭಿಸಿದನು (೧೩–೧೫). ರಾಕ್ಷಸರ ಗೃಹಗಳನ್ನು ಒಂದೊಂದಾಗಿ ನುಗ್ಗಿ ಉದ್ಯಾನವನಗಳಲ್ಲಿಯೂ ಮಹಡಿಗಳಲ್ಲಿಯೂ ನಿರ್ಭಯನಾಗಿ ತಿರುಗುತ್ತಿದ್ದನು. ಮಹಾವೇಗದಿಂದ ಪ್ರಹಸ್ತನ ಮನೆಗೆ ನುಗ್ಗಿ ಮಹಾಪಾರ್ಶ್ವನ ಮನೆಯನ್ನು ಪ್ರವೇಶಿಸಿ, ಕುಂಭಕರ್ಣನ ಮನೆಗೆ ಬಂದನು. ಆಮೇಲೆ ವಿಭೀಷಣನ ಗೃಹಕ್ಕೆ ಪ್ರವೇಶಿಸಿ, ಮಹೋದರನ ಗೃಹವನ್ನು ನುಗ್ಗಿ

ರಶ್ಮಿಕೇತೋಶ್ಚ ಭವನಂ ಸೂರ್ಯಶತ್ರೋಸ್ತಥೈವ ಚ ।
ವಜ್ರಕಾಯಸ್ಯ ಚ ತಥಾ ಪುಪ್ಲುವೇ ಸ ಮಹಾಕಪಿಃ ॥ ೨೨
ಧೂಮ್ರಾಕ್ಷಸ್ಯ ಚ ಸಂಪಾತೇರ್ಭವನಂ ಮಾರುತಾತ್ಮಜಃ ।
ವಿದ್ಯುದ್ರೂಪಸ್ಯ ಭೀಮಸ್ಯ ಘನಸ್ಯ ವಿಘನಸ್ಯ ಚ ॥ ೨೩
ಶುಕನಾಸಸ್ಯ ವಕ್ರಸ್ಯ ಶಠಸ್ಯ ವಿಕಟಸ್ಯ ಚ ।
ಹ್ರಸ್ವಕರ್ಣಸ್ಯ ದಂಷ್ಟ್ರಸ್ಯ ರೋಮಶಸ್ಯ ಚ ರಕ್ಷಸಃ ॥ ೨೪
ಯುದ್ಧೋನ್ಮತ್ತಸ್ಯ ಮತ್ತಸ್ಯ ಧ್ವಜಗ್ರೀವಸ್ಯ ರಕ್ಷಸಃ ।
ವಿದ್ಯುಜ್ಜಿಹ್ವೇಂದ್ರಜಿಹ್ವಾನಾಂ ತಥಾ ಹಸ್ತಿಮುಖಸ್ಯ ಚ ॥ ೨೫
ಕರಾಲಸ್ಯ ಪಿಶಾಚಸ್ಯ ಶೋಣಿತಾಕ್ಷಸ್ಯ ಚೈವ ಹಿ ।
ಕ್ರಮಮಾಣಃ ಕ್ರಮೇಣೈವ ಹನುಮಾನ್ ಮಾರುತಾತ್ಮಜಃ ॥ ೨೬
ತೇಷು ತೇಷು ಮಹಾರ್ಹೇಷು ಭವನೇಷು ಮಹಾಯಶಾಃ ।
ತೇಷಾಮೃದ್ಧಿಮತಾಮೃದ್ಧಿಂ ದದರ್ಶ ಸ ಮಹಾಕಪಿಃ ॥ ೨೭
ಸರ್ವೇಷಾಂ ಸಮತಿಕ್ರಮ್ಯ ಭವನಾನಿ ಸಮಂತತಃ ।
ಆಸಸಾದಾಥ ಲಕ್ಷ್ಮೀವಾನ್ ರಾಕ್ಷಸೇಂದ್ರನಿವೇಶನಮ್ ॥ ೨೮
ರಾವಣಸ್ಯೋಪಶಾಯಿನ್ಯೋ ದದರ್ಶ ಹರಿಸತ್ತಮಃ ।
ವಿಚರನ್ ಹರಿಶಾರ್ದೂಲೋ ರಾಕ್ಷಸೀರ್ವಿಕೃತೇಕ್ಷಣಾಃ ॥ ೨೯

ವಿರೂಪಾಕ್ಷ, ವಿದ್ಯುಜ್ಜಿಹ್ವ, ವಿದ್ಯುನ್ಮಾಲಿಗಳ ಗೃಹಗಳನ್ನು ಶೋಧಿಸಿದನು. ಹಾಗೆಯೇ ವಜ್ರದಂಷ್ಟ್ರ, ಶುಕ, ಸಾರಣ, ಇಂದ್ರಜಿತು, ಜಂಬುಮಾಲಿ, ಸುಮಾಲಿ ಮುಂತಾದ ಬಹುಮಂದಿ ರಾಕ್ಷಸನಾಯಕರ ನಿವಾಸಗಳಿಗೂ ಹೋಗಿ ಹುಡುಕಿದನು (೧೬–೨೬). ಒಂದೊಂದು ಮನೆಯನ್ನು ದಾಟಿ ಹೋಗುತ್ತ ಅಲ್ಲಿಯ ರಾಕ್ಷಸರ ಐಶ್ವರ್ಯ, ವೈಭವಗಳನ್ನು ಕಣ್ಣಾರೆ ಕಂಡನು. ಆಮೇಲೆ ದಾನವೇಂದ್ರನಾದ ರಾವಣನ ಅರಮನೆಯ ಹೊರಪ್ರಾಕಾರವನ್ನು ಪ್ರವೇಶಿಸಿದನು (೨೭–೨೮). ಅಲ್ಲಿ ಶೂಲ ಮುದ್ಗರಾದಿ ವಿವಿಧಾಯುಧಗಳನ್ನು ಹಿಡಿದು ರಾಕ್ಷಸ ಸ್ತ್ರೀಯರೂ ಪುರುಷರೂ ಕಾವಲಿದ್ದರು. ಕೆಂಪು, ಬಿಳುಪು ಮುಂತಾದ ಬಣ್ಣಬಣ್ಣದ ಕುದುರೆಗಳನ್ನು ಕಟ್ಟಿದ್ದರು. ಉತ್ತಮ ಜಾತಿಯ ಆನೆಗಳು ಮಳೆ ಸುರಿಯುವ

ಶೂಲಮುದ್ಗರಹಸ್ತಾಶ್ಚ ಶಕ್ತಿತೋಮರಧಾರಿಣೇಃ ।
ದದರ್ಶ ವಿವಿಧಾನ್ ಗುಲ್ಮಾಂಸ್ತಸ್ಯ ರಕ್ಷಃಪತೇರ್ಗೃಹೇ ॥ ೩೦
ರಾಕ್ಷಸಾಂಶ್ಚ ಮಹಾಕಾಯಾನ್ನಾನಾಪ್ರಹರಣೋದ್ಯತಾನ್ ।
ರಕ್ತಾನ್ ಶ್ವೇತಾನ್ ಸಿತಾಂಶ್ಚಾಪಿ ಹರಿತಾಂಶ್ಚ ಮಹಾಜವಾನ್ ॥ ೩೧
ಕುಲೀನಾನ್ ರೂಪಸಂಪನ್ನಾನ್ ಗಜಾನ್ ಪರಗಜಾರುಜಾನ್ ।
ನಿಷ್ಠಿತಾನ್ ಗಜಶಿಕ್ಷಾಯಾಮೈರಾವತಸಮಾನ್ ಯುಧಿ ॥ ೩೨
ನಿಹಂತ್ರೂನ್ ಪರಸೈನ್ಯಾನಾಂ ಗೃಹೇ ತಸ್ಮಿನ್ ದದರ್ಶ ಸಃ ।
ಕ್ಷರತಶ್ಚ ಯಥಾ ಮೇಘಾನ್ ಸ್ರವತಶ್ಚ ಯಥಾ ಗಿರೀನ್ ॥ ೩೩
ಮೇಘಸ್ತನಿತನಿರ್ಘೋಷಾನ್ ದುರ್ಧರ್ಷಾನ್ ಸಮರೇ ಪರೈಃ ।
ಸಹಸ್ರಂ ವಾಹಿನೀಸ್ತತ್ರ ಜಾಂಬೂನದಪರಿಷ್ಕೃತಾಃ ॥ ೩೪
ದದರ್ಶ ರಾಕ್ಷಸೇಂದ್ರಸ್ಯ ರಾವಣಸ್ಯ ನಿವೇಶನೇ ।
ಶಿಬಿಕಾ ವಿವಿಧಾಕಾರಾಃ ಸ ಕಪಿರ್ಮಾರುತಾತ್ಮಜಃ ॥ ೩೫
ಹೇಮಜಾಲಪರಿಚ್ಛನ್ನಾಸ್ತರುಣಾದಿತ್ಯವರ್ಚಸಃ ।
ಲತಾಗೃಹಾಣಿ ಚಿತ್ರಾಣಿ ಚಿತ್ರಶಾಲಾಗೃಹಾಣಿ ಚ ॥ ೩೬
ಕ್ರೀಡಾಗೃಹಾಣಿ ಚಾನ್ಯಾನಿ ದಾರುಪರ್ವತಕಾನಪಿ ।
ಕಾಮಸ್ಯ ಗೃಹಕಂ ರಮ್ಯಂ ದಿವಾಗೃಹಕಮೇವ ಚ ॥ ೩೭

ಮೋಡದಂತೆಯೂ, ಗಿರಿನದಿಗಳನ್ನು ಸ್ರವಿಸುವ ಬೆಟ್ಟಗಳಂತೆಯೂ ಮದೋದಕವನ್ನು ಸುರಿಸುತ್ತ ಘೀಂಕಾರಮಾಡುತ್ತಿದ್ದವು (೨೯–೩೩). ಇವುಗಳನ್ನಲ್ಲದೆ ಹನುಮಂತನು ಚಿನ್ನದಿಂದ ಅಲಂಕರಿಸಿದ ವಿವಿಧಾಕೃತಿಯ ಪಲ್ಲಕ್ಕಿಗಳನ್ನು ಕಂಡನು. ನಾನಾರೂಪದ ಲತಾಗೃಹಗಳನ್ನೂ ಚಿತ್ರಶಾಲೆಗಳನ್ನೂ ಕ್ರೀಡಾಗೃಹಗಳನ್ನೂ ಮರದಿಂದ ಮಾಡಿದ ಕ್ರೀಡಾಪರ್ವತಗಳನ್ನೂ ಹಗಲಿನ ವಿಹಾರಕ್ಕಾಗಿ ಕಟ್ಟಿದ ವಿವಿಧಗೃಹಗಳನ್ನೂ ನೋಡಿದನು (೩೪–೩೭). ಅವುಗಳನ್ನು ನೋಡುತ್ತ ಹೋಗುತ್ತಿದ್ದ ಹನುಮಂತನಿಗೆ ಮಂದರಗಿರಿಯಂತಿದ್ದ ಒಂದು ದೊಡ್ಡ ಭವನವು ಕಾಣಿಸಿತು. ಅದು ನವಿಲುಗಳ ಕ್ರೀಡಾಸ್ಥಾನಗಳಿಂದಲೂ, ಧ್ವಜಗಳಿಂದಲೂ, ರತ್ನಗಳಿಂದಲೂ, ನವನಿಧಿಗಳಿಂದಲೂ ಶೋಭಿಸುತ್ತಿತ್ತು. ಅದು ಶಿಲ್ಪಕಲೆಗಳ ಬೀಡು.

ದದರ್ಶ ರಾಕ್ಷಸೇಂದ್ರಸ್ಯ ರಾವಣಸ್ಯ ನಿವೇಶನೇ ।
ಸ ಮಂದರಗಿರಿಪ್ರಖ್ಯಂ ಮಯೂರಸ್ಥಾನಸಂಕುಲಮ್ ॥ ೩೮
ಧ್ವಜಯಷ್ಟಿಭಿರಾಕೀರ್ಣಂ ದದರ್ಶ ಭವನೋತ್ತಮಮ್ ।
ಅನೇಕರತ್ನಸಂಕೀರ್ಣಂ ನಿಧಿಜಾಲಸಮಾವೃತಮ್ ॥ ೩೯
ಧೀರನಿಷ್ಠಿತಕರ್ಮಾಂತಂ ಗೃಹಂ ಭೂತಪತೇರಿವ ।
ಅರ್ಚಿರ್ಭಿಶ್ಚಾಪಿ ರತ್ನಾನಾಂ ತೇಜಸಾ ರಾವಣಸ್ಯ ಚ ॥ ೪೦
ವಿರರಾಜಾಥ ತದ್ವೇಶ್ಮ ರಶ್ಮಿಮಾನಿವ ರಶ್ಮಿಭಿಃ ।
ಜಾಂಬೂನದಮಯಾನ್ಯೇವ ಶಯನಾನ್ಯಾಸನಾನಿ ಚ ॥ ೪೧
ಭಾಜನಾನಿ ಚ ಶುಭ್ರಾಣಿ ದದರ್ಶ ಹರಿಯೂಥಪಃ ।
ಮಧ್ವಾಸವಕೃತಕ್ಲೇದಂ ಮಣಿಭಾಜನಸಂಕುಲಮ್ ॥ ೪೨
ಮನೋರಮಮಸಂಬಾಧಂ ಕುಬೇರಭವನಂ ಯಥಾ ।
ನೂಪುರಾಣಾಂ ಚ ಘೋಷೇಣ ಕಾಂಚೀನಾಂ ನಿನದೇನ ಚ ॥ ೪೩
ಮೃದಂಗತಲಘೋಷೈಶ್ಚ ಘೋಷವದ್ಭಿರ್ವಿನಾದಿತಮ್ ।
ಪ್ರಾಸಾದಸಂಘಾತಯುತಂ ಸ್ತ್ರೀರತ್ನಶತಸಂಕುಲಮ್ ॥ ೪೪
ಸುವ್ಯೂಢಕಕ್ಷ್ಯಂ ಹನುಮಾನ್ ಪ್ರವಿವೇಶ ಮಹಾಗೃಹಮ್ ॥

ಇತಿ ಶ್ರೀಮದ್ರಾಮಾಯಣೇ ಸುಂದರಕಾಂಡೇ ಷಷ್ಠಃ ಸರ್ಗಃ

ವಿವಿಧ ರತ್ನಗಳ ಕಾಂತಿಯಿಂದಲೂ ರಾವಣನ ತೇಜಸ್ಸಿನಿಂದಲೂ ಪರಮೇಶ್ವರನ ಕೈಲಾಸದಂತೆ—ಸೂರ್ಯಮಂಡಲದಂತೆ—ಪ್ರಜ್ವಲಿಸುತ್ತಿದ್ದಿತು (೩೮–೪೦). ಅಲ್ಲಿದ್ದ ಮಂಚ, ಪೀಠ, ಪಾತ್ರೆಗಳೆಲ್ಲವೂ ಚಿನ್ನದವು. ಮದ್ಯಪಾತ್ರೆಗಳಿಂದಲೂ ಮದ್ಯರಸಗಳಿಂದಲೂ ಅದು ನಿಬಿಡವಾಗಿತ್ತು. ರಮಣೀಯವೂ ಅತಿವಿಶಾಲವೂ ಆಗಿದ್ದ ಆ ಭವನವು ಕುಬೇರಭವನದಂತೆ ವಿರಾಜಿಸುತ್ತಿದ್ದಿತು. ಕಾಂಚೀ ನೂಪುರಗಳ ಮನೋಹರನಾದವೂ ವಾದ್ಯ ಧ್ವನಿಯೂ ಕೇಳಿಸುತ್ತಿದ್ದಿತು. ಅನೇಕ ಉಪ್ಪರಿಗೆಗಳಿಂದಲೂ ಅಸಂಖ್ಯಾತ ಸುಂದರಿಯರಿಂದಲೂ ಮನೋಹರವಾದ ಆ ದಿವ್ಯಭವನದ ಒಳಪ್ರಾಕಾರವನ್ನು ಹನುಮಂತನು ಪ್ರವೇಶಿಸಿದನು (೪೧–೪೪).

ಇಲ್ಲಿಗೆ ಶ್ರೀಮದ್ರಾಮಾಯಣದ ಸುಂದರಕಾಂಡದಲ್ಲಿ ಆರನೆಯ ಸರ್ಗ

ಸಪ್ತಮಃ ಸರ್ಗಃ

ಪುಷ್ಪಕದರ್ಶನಮ್

ಸ ವೇಶ್ಮಜಾಲಂ ಬಲವಾನ್ ದದರ್ಶ
ವ್ಯಾಸಕ್ತವೈದೂರ್ಯಸುವರ್ಣಜಾಲಮ್ ।
ಯಥಾ ಮಹತ್ ಪ್ರಾವೃಷಿ ಮೇಘಜಾಲಂ
ವಿದ್ಯುತ್ಪಿನದ್ಧಂ ಸವಿಹಂಗಜಾಲಮ್ ॥ ೧

ನಿವೇಶನಾನಾಂ ವಿವಿಧಾಶ್ಚ ಶಾಲಾಃ
ಪ್ರಧಾನಶಂಖಾಯುಧಚಾಪಶಾಲಾಃ ।
ಮನೋಹರಾಶ್ಚಾಪಿ ಪುನರ್ವಿಶಾಲಾ
ದದರ್ಶ ವೇಶ್ಮಾದ್ರಿಷು ಚಂದ್ರಶಾಲಾಃ ॥ ೨

ಗೃಹಾಣಿ ನಾನಾವಸುರಾಜಿತಾನಿ
ದೇವಾಸುರೈಶ್ಚಾಪಿ ಸುಪೂಜಿತಾನಿ ।
ಸರ್ವೈಶ್ಚ ದೋಷೈಃ ಪರಿವರ್ಜಿತಾನಿ
ಕಪಿರ್ದದರ್ಶ ಸ್ವಬಲಾರ್ಜಿತಾನಿ ॥ ೩

ಸರ್ಗ ೭

ಆಂಜನೇಯನು ಅರಮನೆಯ ಪ್ರಾಕಾರದಲ್ಲಿ ಹುಡುಕುತ್ತ
ಪುಷ್ಪಕವಿಮಾನವನ್ನು ಕಂಡುದು.

ಅನಂತರ ಆಂಜನೇಯನು ಆ ನಿವೇಶನದಲ್ಲಿ ನಿರ್ಮಿಸಿದ್ದ ಅನೇಕ ಗೃಹಗಳನ್ನು ನೋಡಿದನು. ವೈಡೂರ್ಯಾದಿ ಮಣಿಗಳ ಕುಚ್ಚಿನಿಂದಲೂ ಸುವರ್ಣದ ಗವಾಕ್ಷದಿಂದಲೂ ರಂಜಿಸುತ್ತಿದ್ದ ಆ ಭವನಗಳು, ವಿವಿಧ ಪಕ್ಷಿಗಳಿಂದಲೂ ವಿದ್ಯುತ್ತಿನಿಂದಲೂ ಬೆಳಗುವ ಮೇಘಪಂಕ್ತಿಗಳಂತೆ ಕಾಣುತ್ತಿದ್ದವು. ಅಲ್ಲಿ ಶಂಖ, ಧನುಸ್ಸು ಮತ್ತು ಆಯುಧಗಳನ್ನು ತುಂಬಿದ ದೊಡ್ಡ ಕೋಣೆಗಳೂ ವಿಶಾಲ

ತಾನಿ ಪ್ರಯತ್ನಾಭಿಸಮಾಹಿತಾನಿ
ಮಯೇನ ಸಾಕ್ಷಾದಿವ ನಿರ್ಮಿತಾನಿ ।
ಮಹೀತಲೇ ಸರ್ವಗುಣೋತ್ತರಾಣಿ
ದದರ್ಶ ಲಂಕಾಧಿಪತೇರ್ಗೃಹಾಣಿ ॥ ೪
ತತೋ ದದರ್ಶೋಚ್ಛ್ರಿತಮೇಘರೂಪಂ
ಮನೋಹರಂ ಕಾಂಚನಚಾರುರೂಪಮ್ ।
ರಕ್ಷೋಽಧಿಪಸ್ಯಾತ್ಮಬಲಾನುರೂಪಂ
ಗೃಹೋತ್ತಮಂ ಹ್ಯಪ್ರತಿರೂಪರೂಪಮ್ ॥ ೫
ಮಹೀತಲೇ ಸ್ವರ್ಗಮಿವ ಪ್ರಕೀರ್ಣಂ
ಶ್ರಿಯಾ ಜ್ವಲಂತಂ ಬಹುರತ್ನಕೀರ್ಣಮ್ ।
ನಾನಾತರೂಣಾಂ ಕುಸುಮಾವಕೀರ್ಣಂ
ಗಿರೇರಿವಾಗ್ರಂ ರಜಸಾವಕೀರ್ಣಮ್ ॥ ೬
ನಾರೀಪ್ರವೇಕೈರಿವ ದೀಪ್ಯಮಾನಂ
ತಟದ್ಭಿರಂಭೋದವದರ್ಚ್ಯಮಾನಮ್ ।
ಹಂಸಪ್ರವೇಕೈರಿವ ವಾಹ್ಯಮಾನಂ
ಶ್ರಿಯಾ ಯುತಂ ಖೇ ಸುಕೃತಾಂ ವಿಮಾನಮ್ ॥ ೭

ವಾದ ಚಂದ್ರಶಾಲೆಗಳೂ ಇದ್ದವು (೧–೨). ಅಮೂಲ್ಯ ವಸ್ತುಗಳಿಂದ ತುಂಬಿದ್ದ ಆ ಭವನಗಳು ಶಿಲ್ಪಶಾಸ್ತ್ರದ ಪ್ರಕಾರ ನಿರ್ದೋಷವಾಗಿದ್ದವು. ಅವೆಲ್ಲವೂ ರಾವಣನ ಭುಜಬಲದಿಂದ ಸಂಪಾದಿಸಲ್ಪಟ್ಟವು. ಮಾಯಾದಕ್ಷನಾದ ಮಯನೇ ಅವುಗಳನ್ನು ಮಾಯೆಯಿಂದ ನಿರ್ಮಿಸಿರುವನೋ ಎಂಬಂತೆ ರಮಣೀಯವಾಗಿದ್ದವು (೩–೪). ಅವುಗಳನ್ನು ನೋಡುತ್ತ ಮುಂದೆ ಬಂದು ರಾಕ್ಷಸರಾಜನ ಪರಾಕ್ರಮಕ್ಕೆ ಅನುರೂಪವೂ, ಅತ್ಯುನ್ನತವೂ, ಅಸದೃಶವೂ ಆದ ಪುಷ್ಪಕ ವಿಮಾನವನ್ನು ಕಂಡನು (೫). ಅದು ಭೂಮಿಗೆ ಇಳಿದುಬಂದ ಸ್ವರ್ಗವೋ ಎಂಬಂತೆ ರತ್ನಗಳಿಂದಲೂ ನಾನಾ ಕುಸುಮಗಳಿಂದಲೂ ಶೋಭಿಸುತ್ತಿದ್ದಿತು. ಪರ್ವತ ಶೃಂಗದಲ್ಲಿ ಹೂಗಳು ಚೆಲ್ಲಿರುವಂತೆ, ಎಲ್ಲೆಲ್ಲಿಯೂ ಪುಷ್ಪ ಪರಾಗಗಳು ಹರಡಿದ್ದವು. ವಿದ್ಯುಲ್ಲತೆಗಳಿಂದ ಶೋಭಿಸುವ ಮೇಘದಂತೆ, ಸುಂದರ ಸ್ತ್ರೀಯರಿಂದ ರಮಣೀಯವಾಗಿತ್ತು.

ಯಥಾ ನಗಾಗ್ರಂ ಬಹುಧಾತುಚಿತ್ರಂ
ಯಥಾ ನಭಶ್ಚ ಗ್ರಹಚಂದ್ರಚಿತ್ರಮ್ ।
ದದರ್ಶ ಯುಕ್ತೀಕೃತಮೇಘಚಿತ್ರಂ
ವಿಮಾನರತ್ನಂ ಬಹುರತ್ನಚಿತ್ರಮ್ ॥ ೮

ಮಹೀ ಕೃತಾ ಪರ್ವತರಾಜಿಪೂರ್ಣಾ
ಶೈಲಾಃ ಕೃತಾ ವೃಕ್ಷವಿತಾನಪೂರ್ಣಾಃ ।
ವೃಕ್ಷಾಃ ಕೃತಾಃ ಪುಷ್ಪವಿತಾನಪೂರ್ಣಾಃ
ಪುಷ್ಪಂ ಕೃತಂ ಕೇಸರಪತ್ರಪೂರ್ಣಮ್ ॥ ೯

ಕೃತಾನಿ ವೇಶ್ಮಾನಿ ಚ ಪಾಂಡರಾಣಿ
ತಥಾ ಸುಪುಷ್ಪಾಣ್ಯಪಿ ಪುಷ್ಕರಾಣಿ ।
ಪುನಶ್ಚ ಪದ್ಮಾನಿ ಸಕೇಸರಾಣಿ
ಧನ್ಯಾನಿ ಚಿತ್ರಾಣಿ ತಥಾ ವನಾನಿ ॥ ೧೦

ಪುಷ್ಪಾಹ್ವಯಂ ನಾಮ ವಿರಾಜಮಾನಂ
ರತ್ನಪ್ರಭಾಭಿಶ್ಚ ವಿಘೂರ್ಣಮಾನಮ್ ।
ವೇಶ್ಮೋತ್ತಮಾನಾಮಪಿ ಚೋಚ್ಚಮಾನಂ
ಮಹಾಕಪಿಸ್ತತ್ರ ಮಹಾವಿಮಾನಮ್ ॥ ೧೧

ರಾಜಹಂಸಗಳು ಹೊತ್ತುಕೊಂಡು ಹಾರುತ್ತಿರುವ ಪುಣ್ಯಾತ್ಮರ ವಿಮಾನವೋ ಎಂಬಂತೆ ಕಾಂತಿಯುಕ್ತವಾಗಿತ್ತು (೬–೭). ರತ್ನಾಲಂಕೃತವಾದ ಆ ಪುಷ್ಪಕವಿಮಾನವು ಬಣ್ಣ ಬಣ್ಣದ ಧಾತುಗಳಿಂದ ಚಿತ್ರವರ್ಣವಾದ ಪರ್ವತ ಶಿಖರದಂತೆಯೂ, ಚಂದ್ರಾದಿಗ್ರಹಗಳಿಂದ ಪೂರ್ಣವಾದ ಗಗನದಂತೆಯೂ, ಹಲವು ಬಣ್ಣಗಳ ಮೇಘಪಂಕ್ತಿಯಂತೆಯೂ ರಮ್ಯವಾಗಿತ್ತು (೮). ಅದರ ನೆಲದ ಮೇಲೆ ಕೃತಕಶೈಲಗಳೂ ಶೈಲಗಳಲ್ಲಿ ವೃಕ್ಷಗಳೂ ವೃಕ್ಷಗಳಲ್ಲಿ ಹೂಗಳೂ ಹೂಗಳಲ್ಲಿ ಎಸಳುಗಳೂ ಬಹು ಸುಂದರವಾಗಿ ನಿರ್ಮಿಸಲ್ಪಟ್ಟಿದ್ದವು (೯). ಅದರಲ್ಲಿ ಬೆಳ್ಳನೆಯ ಉಪ್ಪರಿಗೆಯ ಮನೆಗಳೂ ಅಂದವಾದ ಹೂಗಳುಳ್ಳ ಕೊಳಗಳೂ ತಾವರೆಗಳೂ ವಿಚಿತ್ರವಾದ ವನಗಳೂ ನಿರ್ಮಿಸಲ್ಪಟ್ಟಿದ್ದವು (೧೦). ರತ್ನಪ್ರಭೆಯಿಂದ ಮಿರುಗುತ್ತಿದ್ದ ಆ ದೊಡ್ಡ ವಿಮಾನವನ್ನು ಆಂಜನೇಯನು ಗಮನವಿಟ್ಟು

ಕೃತಾಶ್ಚ ವೈದೂರ್ಯಮಯಾ ವಿಹಂಗಾ
ರೂಪ್ಯಪ್ರವಾಲೈಶ್ಚ ಯಥಾ ವಿಹಂಗಾಃ ।
ಚಿತ್ರಾಶ್ಚ ನಾನಾವಸುಭಿರ್ಭುಜಂಗಾ
ಜಾತ್ಯಾನುರೂಪಾಸ್ತುರಗಾಃ ಶುಭಾಂಗಾಃ ॥ ೧೨

ಪ್ರವಾಲಜಾಂಬೂನದಪುಷ್ಪಪಕ್ಷಾಃ
ಸಲೀಲಮಾವರ್ಜಿತಜಿಹ್ಮಪಕ್ಷಾಃ ।
ಕಾಮಸ್ಯ ಸಾಕ್ಷಾದಿವ ಭಾಂತಿ ಪಕ್ಷಾಃ
ಕೃತಾ ವಿಹಂಗಾಃ ಸುಮುಖಾಃ ಸುಪಕ್ಷಾಃ ॥ ೧೩

ನಿಯುಜ್ಯಮಾನಾಸ್ತು ಗಜಾಃ ಸುಹಸ್ತಾಃ
ಸಕೇಸರಾಶ್ಚೋತ್ಪಲಪತ್ರಹಸ್ತಾಃ ।
ಬಭೂವ ದೇವೀ ಚ ಕೃತಾ ಸುಹಸ್ತಾ
ಲಕ್ಷ್ಮೀಸ್ತಥಾ ಪದ್ಮಿನಿ ಪದ್ಮಹಸ್ತಾ ॥ ೧೪

ಇತೀವ ತದ್ಗೃಹಮಭಿಗಮ್ಯ ಶೋಭನಂ
ಸವಿಸ್ಮಯೋ ನಗಮಿವ ಚಾರುಶೋಭನಮ್ ।
ಪುನಶ್ಚ ತತ್ ಪರಮಸುಗಂಧಿ ಸುಂದರಂ
ಹಿಮಾತ್ಯಯೇ ನಗಮಿವ ಚಾರುಕಂದರಮ್ ॥ ೧೫

ನೋಡಿದನು. ಅದರಲ್ಲಿ ವೈಡೂರ್ಯ, ಬೆಳ್ಳಿ, ಹವಳಗಳನ್ನು ಉಪಯೋಗಿಸಿ ಬಗೆಬಗೆಯ ಮನೋಹರ ಪಕ್ಷಿಗಳನ್ನೂ ವಿವಿಧ ರತ್ನಗಳಿಂದ ಸರ್ಪಗಳನ್ನೂ ಕುದುರೆಗಳನ್ನೂ ರಚಿಸಿದ್ದರು. ಹವಳ, ಚಿನ್ನ ಮತ್ತು ಹೂಗಳಿಂದ ಹಕ್ಕಿಗಳಿಗೆ ಸೊಗಸಾದ ರೆಕ್ಕೆಗಳನ್ನೂ ಕೊಕ್ಕುಗಳನ್ನೂ ಮಾಡಿದ್ದರು (೧೧–೧೩). ಒಂದು ಕೊಳದಲ್ಲಿ ಕಮಲದ ಮೇಲೆ ಪದ್ಮಹಸ್ತಳಾಗಿ ನಿಂತಿದ್ದ ಲಕ್ಷ್ಮೀದೇವಿಯ ಚಿತ್ರ ಮನೋಜ್ಞವಾಗಿತ್ತು. ಅದರಲ್ಲಿ ಆನೆಗಳು ಇಕ್ಕೆಡೆಯಲ್ಲಿಯೂ ನಿಂತು, ಸೊಂಡಿಲುಗಳಲ್ಲಿ ನೈದಿಲೆಗಳನ್ನು ಹಿಡಿದು, ದೇವಿಗೆ ಅಭಿಷೇಕ ಮಾಡಿಸುತ್ತಿದ್ದವು (೧೪). ವಸಂತಕಾಲದ ಪರ್ವತದಂತೆ ಪರಮ ರಮಣೀಯವೂ, ಸುಗಂಧ

ತತಃ ಸ ತಾಂ ಕಪಿರಭಿಪತ್ಯ ಪೂಜಿತಾಂ
ಚರನ್ ಪುರೀಂ ದಶಮುಖಬಾಹುಪಾಲಿತಾಮ್ ।
ಅದೃಶ್ಯ ತಾಂ ಜನಕಸುತಾಂ ಸುಪೂಜಿತಾಂ
ಸುದುಃಖಿತಃ ಪತಿಗುಣವೇಗನಿರ್ಜಿತಾಮ್ ॥ ೧೬

ತತಸ್ತದಾ ಬಹುವಿಧಭಾವಿತಾತ್ಮನಃ
ಕೃತಾತ್ಮನೋ ಜನಕಸುತಾಂ ಸುವರ್ತ್ಮನಃ ।
ಅಪಶ್ಯತೋಽಭವದತಿದುಃಖಿತಂ ಮನಃ
ಸುಚಕ್ಷುಷಃ ಪ್ರವಿಚರತೋ ಮಹಾತ್ಮನಃ ॥ ೧೭

ಇತಿ ಶ್ರೀಮದ್ರಾಮಾಯಣೇ ಸುಂದರಕಾಂಡೇ ಸಪ್ತಮಃ ಸರ್ಗಃ

ಪೂರ್ಣವೂ ಆದ ವಿಮಾನವನ್ನು ಕಂಡು ಹನುಮಂತನಿಗೆ ಆಶ್ಚರ್ಯವಾಯಿತು (೧೫). ಆದರೆ ಎಲ್ಲೆಲ್ಲಿ ತಿರುಗಿದರೂ ಪರಮಪೂಜ್ಯಳೂ, ತನ್ನ ಪತಿಯ ಸದ್ಗುಣಗಳನ್ನೇ ಧ್ಯಾನಿಸುವವಳೂ ಆದ ಜನಕಸುತೆಯನ್ನು ಕಾಣದೆ ಹನುಮಂತನು ದುಃಖಿತನಾದನು (೧೬). ಶುದ್ಧಮನಸ್ಕನೂ, ನಿಶಿತಬುದ್ಧಿಯೂ, ನೀತಿಜ್ಞನೂ ಆದ ಆ ಮಹಾತ್ಮನು ಕಣ್ಣಿಟ್ಟು ಹುಡುಕಿದರೂ ಸೀತೆಯು ದೊರಕಲಿಲ್ಲವಾದ್ದರಿಂದ ಚಿಂತಾಕ್ರಾಂತನಾದನು (೧೭).

ಇಲ್ಲಿಗೆ ಶ್ರೀಮದ್ರಾಮಾಯಣದ ಸುಂದರಕಾಂಡದಲ್ಲಿ ಏಳನೆಯ ಸರ್ಗ

ಅಷ್ಟಮಃ ಸರ್ಗಃ

ಪುಷ್ಪಕಾನುವರ್ಣನಮ್

ಸ ತಸ್ಯ ಮಧ್ಯೇ ಭವನಸ್ಯ ಸಂಸ್ಥಿತಂ
ಮಹದ್ವಿಮಾನಂ ಬಹುರತ್ನಚಿತ್ರಿತಾಮ್ ।
ಪ್ರತಪ್ತಜಾಂಬೂನದಜಾಲಕೃತ್ರಿಮಂ
ದದರ್ಶ ವೀರಃ ಪವನಾತ್ಮಜಃ ಕಪಿಃ ॥ ೧

ತದಪ್ರಮೇಯಾಪ್ರತಿಕಾರಕೃತ್ರಿಮಂ
ಕೃತಂ ಸ್ವಯಂ ಸಾಧ್ವಿತಿ ವಿಶ್ವಕರ್ಮಣಾ ।
ದಿವಂ ಗತಂ ವಾಯುಪಥೇ ಪ್ರತಿಷ್ಠಿತಂ
ವ್ಯರಾಜತಾದಿತ್ಯಪಥಸ್ಯ ಲಕ್ಷ್ಮವತ್ ॥ ೨

ನ ತತ್ರ ಕಿಂಚಿನ್ನ ಕೃತಂ ಪ್ರಯತ್ನತೋ
ನ ತತ್ರ ಕಿಂಚಿನ್ನ ಮಹಾರ್ಹರತ್ನವತ್ ।
ನ ತೇ ವಿಶೇಷಾ ನಿಯತಾಃ ಸುರೇಷ್ವಪಿ
ನ ತತ್ರ ಕಿಂಚಿನ್ನ ಮಹಾವಿಶೇಷವತ್ ॥ ೩

ಸರ್ಗ ೮

ಆಂಜನೇಯನು ಪುಷ್ಪಕ ವಿಮಾನದ ಸೌಂದರ್ಯವನ್ನು ನೋಡುವುದು.

ಆ ವಾಯುಪುತ್ರನು ಮನೋಹರವಾದ ಪುಷ್ಪಕವಿಮಾನವನ್ನು ಮತ್ತೆ ನೋಡುತ್ತ ನಿಂತನು. ಊಹಾತೀತವಾದ ಅದರ ಸೊಬಗನ್ನು ವರ್ಣಿಸಲು ಅಳವಲ್ಲ. ಅದನ್ನು ನಿರ್ಮಿಸಿದ್ದ ವಿಶ್ವಕರ್ಮನು 'ಭಲಾ! ಎಷ್ಟು ಚೆನ್ನಾಗಿದೆ!' ಎಂದು ತಾನೇ ಹೊಗಳಿಕೊಂಡಿದ್ದನು. ಅದು ಭೂಸ್ಪರ್ಶವಿಲ್ಲದೆ ಆಕಾಶದಲ್ಲಿ ನಿಂತು, ಸೂರ್ಯಸಂಚಾರಮಾರ್ಗದ ಸೂಚಕವೋ ಎಂಬಂತಿದ್ದಿತು (೧–೨). ಅದರಲ್ಲಿದ್ದ ಒಂದೊಂದು ಭಾಗವೂ ಬಹು ಕಷ್ಟಪಟ್ಟು ನಿರ್ಮಿಸಿದ್ದು. ಮಹಾರತ್ನವಿಲ್ಲದ ಒಂದು

ತಪಃಸಮಾಧಾನಪರಾಕ್ರಮಾರ್ಜಿತಂ
ಮನಃಸಮಾಧಾನವಿಚಾರಚಾರಿಣಮ್ ।
ಅನೇಕಸಂಸ್ಥಾನವಿಶೇಷನಿರ್ಮಿತಂ
ತತಸ್ತತಸ್ತುಲ್ಯವಿಶೇಷದರ್ಶನಮ್ ॥ ೪

ಮನಃ ಸಮಾಧಾಯ ತು ಶೀಘ್ರಗಾಮಿನಂ
ದುರಾವರಂ ಮಾರುತತುಲ್ಯಗಾಮಿನಮ್ ।
ಮಹಾತ್ಮನಾಂ ಪುಣ್ಯಕೃತಾಂ ಮಹರ್ದ್ಧಿನಾಂ
ಯಶಸ್ವಿನಾಮಗ್ರ್ಯಮುದಾಮಿವಾಲಯಮ್ ॥ ೫

ವಿಶೇಷಮಾಲಂಬ್ಯ ವಿಶೇಷಸಂಸ್ಥಿತಂ
ವಿಚಿತ್ರಕೂಟಂ ಬಹುಕೂಟಮಂಡಿತಮ್ ।
ಮನೋಽಭಿರಾಮಂ ಶರದಿಂದುನಿರ್ಮಲಂ
ವಿಚಿತ್ರಕೂಟಂ ಶಿಖರಂ ಗಿರೇರ್ಯಥಾ ॥ ೬

ವಹಂತಿ ಯಂ ಕುಂಡಲಶೋಭಿತಾನನಾ
ಮಹಾಶನಾ ವ್ಯೋಮಚರಾ ನಿಶಾಚರಾಃ ।
ವಿವೃತ್ತವಿಧ್ವಸ್ತವಿಶಾಲಲೋಚನಾ
ಮಹಾಜವಾ ಭೂತಗಣಾಃ ಸಹಸ್ರಶಃ ॥ ೭

ಕೆತ್ತನೆಯಾಗಲಿ ವೈಶಿಷ್ಟ್ಯವಿಲ್ಲದ ಒಂದು ವಸ್ತುವಾಗಲಿ ಅದರಲ್ಲಿರಲಿಲ್ಲ. ದೇವತೆಗಳಿಗೂ ಆ ವಸ್ತುಗಳು ದುರ್ಲಭ (೩). ರಾವಣನು ತಪೋಬಲದಿಂದ ಸಾಮರ್ಥ್ಯವನ್ನು ಗಳಿಸಿ ಅದನ್ನು ಗೆದ್ದು ತಂದಿದ್ದನು. ಬಯಸಿದ ಸ್ಥಳಕ್ಕೆ ಹೊತ್ತು ತಂದುಬಿಡುವ ಮಹಿಮೆಯುಳ್ಳದ್ದಾಗಿ, ವಿಮಾನಯೋಗ್ಯವಾದ ಅನೇಕ ರಚನೆಗಳಿಂದ ಅದು ರಂಜಿಸುತ್ತಿತ್ತು (೪). ಅದು ಸ್ವಾಮಿಯ ಮನೋಧರ್ಮವನ್ನರಿತು ವಾಯುವೇಗದಿಂದ ಸಂಚರಿಸಬಲ್ಲುದು. ಭಾಗ್ಯಶಾಲಿಗಳಿಗೆ ಮಾತ್ರ ಅಂತಹ ವಿಮಾನ ಲಭ್ಯ (೫). ಆ ವಿಮಾನವು ಗಿರಿಯಂತೆ ಅನೇಕ ಶೃಂಗಯುಕ್ತವಾಗಿ, ಶರಚ್ಚಂದ್ರನಂತೆ ಬೆಳ್ಳಗೆ ಮನೋಹರವಾಗಿತ್ತು (೬). ಅದನ್ನು ಮಹಾವೇಗದಿಂದ

ವಸಂತಪುಷ್ಪೋತ್ಕರಚಾರುದರ್ಶನಂ
ವಸಂತಮಾಸಾದಪಿ ಕಾಂತದರ್ಶನಮ್ ।
ಸ ಪುಷ್ಪಕಂ ತತ್ರ ವಿಮಾನಮುತ್ತಮಂ
ದದರ್ಶ ತದ್ವಾನರವೀರಸತ್ತಮಃ ॥ ೮

ಇತಿ ಶ್ರೀಮದ್ರಾಮಾಯಣೇ ಸುಂದರಕಾಂಡೇ ಅಷ್ಟಮಃ ಸರ್ಗಃ

ooo

ನವಮಃ ಸರ್ಗಃ

ಸಂಕುಲಾಂತಃಪುರಮ್

ತಸ್ಯಾಲಯವರಿಷ್ಠಸ್ಯ ಮಧ್ಯೇ ವಿಪುಲಮಾಯತಮ್ ।
ದದರ್ಶ ಭವನಶ್ರೇಷ್ಠಂ ಹನುಮಾನ್ ಮಾರುತಾತ್ಮಜಃ ॥ ೧

ಅರ್ಧಯೋಜನವಿಸ್ತೀರ್ಣಮಾಯತಂ ಯೋಜನಂ ಹಿ ತತ್ ।
ಭವನಂ ರಾಕ್ಷಸೇಂದ್ರಸ್ಯ ಬಹುಪ್ರಾಸಾದಸಂಕುಲಮ್ ॥ ೨

ಹೊತ್ತುಕೊಂಡು ಹೋಗುವಂತೆ ಕಾಣುವ ಅನೇಕ ಭೂತಪ್ರತಿಮೆಗಳು ಸುತ್ತಲೂ ಚಿತ್ರಿಸಲ್ಪಟ್ಟಿದ್ದವು. ಕುಂಡಲಾಲಂಕೃತಗಳಾದ ಆ ಪ್ರತಿಮೆಗಳ ವಿಶಾಲನೇತ್ರಗಳು ದುಂಡಾಗಿಯೂ ನಿಮೇಷರಹಿತವಾಗಿಯೂ ಇದ್ದವು. ಆ ವಾನರವೀರನು ವಸಂತ ಕಾಲದ ಪುಷ್ಪಗಳ ರಾಶಿಯಂತೆಯೂ, ವಸಂತಕಾಲಕ್ಕಿಂತ ಮನೋಹರವಾಗಿಯೂ ಇದ್ದ ಆ ಪುಷ್ಪಕ ವಿಮಾನವನ್ನು ನೋಡುತ್ತಿದ್ದನು (೭–೮).

ಇಲ್ಲಿಗೆ ಶ್ರೀಮದ್ರಾಮಾಯಣದ ಸುಂದರಕಾಂಡದಲ್ಲಿ ಎಂಟನೆಯ ಸರ್ಗ

oooo

ಸರ್ಗ ೯

ಪುಷ್ಪಕವಿಮಾನದ ವರ್ಣನೆ. ರಾವಣಾಂತಃಪುರದಲ್ಲಿ ನಿದ್ರಿಸುತ್ತಿದ್ದ ಸ್ತ್ರೀಯರ ಮಧ್ಯದಲ್ಲಿ ಸೀತೆಯನ್ನು ಹುಡುಕಿದುದು.

ಹೀಗೆ ಹನುಮಂತನು ಸೀತಾದೇವಿಯನ್ನು ಹುಡುಕುತ್ತ ಅರ್ಧಯೋಜನ ದಷ್ಟು ವಿಸ್ತೀರ್ಣವಾಗಿ, ಒಂದು ಯೋಜನದಷ್ಟು ಉದ್ದವಾಗಿ, ಅನೇಕ

ಮಾರ್ಗಮಾಣಸ್ತು ವೈದೇಹೀಂ ಸೀತಾಮಾಯತಲೋಚನಾಮ್ ।
ಸರ್ವತಃ ಪರಿಚಕ್ರಾಮ ಹನುಮಾನರಿಸೂದನಃ ॥ ೩

ಉತ್ತಮಂ ರಾಕ್ಷಸಾವಾಸಂ ಹನುಮಾನವಲೋಕಯನ್ ।
ಆಸಸಾದಾಥ ಲಕ್ಷ್ಮೀವಾನ್ ರಾಕ್ಷಸೇಂದ್ರನಿವೇಶನಮ್ ॥ ೪

ಚತುರ್ವಿಷಾಣೈರ್ದ್ವಿರದೈಸ್ತ್ರಿವಿಷಾಣೈಸ್ತಥೈವ ಚ ।
ಪರಿಕ್ಷಿಪ್ತಮಸಂಬಾಧಂ ರಕ್ಷ್ಯಮಾಣಮುದಾಯುಧೈಃ ॥ ೫

ರಾಕ್ಷಸೀಭಿಶ್ಚ ಪತ್ನೀಭೀ ರಾವಣಸ್ಯ ನಿವೇಶನಮ್ ।
ಆಹೃತಾಭಿಶ್ಚ ವಿಕ್ರಮ್ಯ ರಾಜಕನ್ಯಾಭಿರಾವೃತಮ್ ॥ ೬

ತನ್ನಕ್ರಮಕರಾಕೀರ್ಣಂ ತಿಮಿಂಗಿಲಝುಷಾಕುಲಮ್ ।
ವಾಯುವೇಗಸಮಾಧೂತಂ ಪನ್ನಗೈರಿವ ಸಾಗರಮ್ ॥ ೭

ಯಾ ಹಿ ವೈಶ್ರವಣೇ ಲಕ್ಷ್ಮೀರ್ಯಾ ಚೇಂದ್ರೇ ಹರಿವಾಹನೇ ।
ಸಾ ರಾವಣಗೃಹೇ ಸರ್ವಾ ನಿತ್ಯಮೇವಾನಪಾಯಿನೀ ॥ ೮

ಯಾ ಚ ರಾಜ್ಞಃ ಕುಬೇರಸ್ಯ ಯಮಸ್ಯ ವರುಣಸ್ಯ ಚ ।
ತಾದೃಶೀ ತದ್ವಿಶಿಷ್ಟಾ ವಾ ಋದ್ಧೀ ರಕ್ಷೋಗೃಹೇಷ್ವಿಹ ॥ ೯

ಅಂತಸ್ತುಗಳಿರುವ ಒಂದು ದೊಡ್ಡ ಭವನದ ಬಳಿಗೆ ಬಂದನು. ಅದೇ ರಾಕ್ಷಸೇಂದ್ರನು ವಾಸಮಾಡುವ ಅರಮನೆ (೧–೪). ಅದರ ಸುತ್ತಲೂ ಎರಡು, ಮೂರು, ನಾಲ್ಕು ಕೋರೆಗಳುಳ್ಳ ಆನೆಗಳೂ ಆಯುಧಧಾರಿಗಳಾದ ರಾಕ್ಷಸರೂ ಕಾವಲಿದ್ದರು (೫). ರಾವಣನ ಹೆಂಡಿರಾದ ರಾಕ್ಷಸಿಯರಿಂದಲೂ ಬಲಾತ್ಕಾರವಾಗಿ ತಂದ ರಾಜಕುಮಾರಿಯರಿಂದಲೂ ತುಂಬಿದ ಆ ಭವನವು ಮೊಸಳೆ, ತಿಮಿಂಗಿಲ, ಸರ್ಪಗಳಿಂದ ಪೂರ್ಣವಾದ ಮಹಾಸಾಗರದಂತೆ ಇದ್ದಿತು (೬–೭). ಕುಬೇರ, ದೇವೇಂದ್ರ ಮುಂತಾದವರ ಭವನಗಳಲ್ಲಿ ಇರುವುದಕ್ಕಿಂತಲೂ ಅಧಿಕವಾದ ಐಶ್ವರ್ಯಸಮೃದ್ಧಿಯು ರಾವಣಭವನದಲ್ಲಿ ನೆಲೆಸಿತ್ತು. ಯಮ ವರುಣರ ಸಂಪತ್ತಿಗಿಂತ ರಾಕ್ಷಸೇಶ್ವರನಾದ ರಾವಣನ ಗೃಹದಲ್ಲಿದ್ದ ಸಂಪತ್ತು ಮಿಗಿಲಾದುದು (೮–೯). ಆ ಭವನದ ಮಧ್ಯಭಾಗದಲ್ಲಿ ಅನೇಕ ಮತ್ತ ವಾರಣಗಳಿಂದ

ತಸ್ಯ ಹರ್ಮ್ಯಸ್ಯ ಮಧ್ಯಸ್ಥಂ ವೇಶ್ಮ ಚಾನ್ಯತ್ ಸುನಿರ್ಮಿತಮ್ ।
ಬಹುನಿರ್ಯೂಹಸಂಕೀರ್ಣಂ ದದರ್ಶ ಪವನಾತ್ಮಜಃ ॥ ೧೦

ಬ್ರಹ್ಮಣೋಽರ್ಥೇ ಕೃತಂ ದಿವ್ಯಂ ದಿವಿ ಯದ್ವಿಶ್ವಕರ್ಮಣಾ ।
ವಿಮಾನಂ ಪುಷ್ಪಕಂ ನಾಮ ಸರ್ವರತ್ನವಿಭೂಷಿತಮ್ ॥ ೧೧

ಪರೇಣ ತಪಸಾ ಲೇಭೇ ಯತ್ ಕುಬೇರಃ ಪಿತಾಮಹಾತ್ ।
ಕುಬೇರಮೋಜಸಾ ಜಿತ್ವಾ ಲೇಭೇ ತದ್ರಾಕ್ಷಸೇಶ್ವರಃ ॥ ೧೨

ಈಹಾಮೃಗಸಮಾಯುಕ್ತೈಃ ಕಾರ್ತಸ್ವರಹಿರಣ್ಮಯೈಃ ।
ಸುಕೃತೈರಾಚಿತಂ ಸ್ತಂಭೈಃ ಪ್ರದೀಪ್ತಮಿವ ಚ ಶ್ರಿಯಾ ॥ ೧೩

ಮೇರುಮಂದರಸಂಕಾಶೈರಾಲಿಖದ್ಭಿರಿವಾಂಬರಮ್ ।
ಕೂಟಾಗಾರೈಃ ಶುಭಾಕಾರೈಃ ಸರ್ವತಃ ಸಮಲಂಕೃತಮ್ ॥ ೧೪

ಜ್ವಲನಾರ್ಕಪ್ರತೀಕಾಶಂ ಸುಕೃತಂ ವಿಶ್ವಕರ್ಮಣಾ ।
ಹೇಮಸೋಪಾನಸಂಯುಕ್ತಂ ಚಾರುಪ್ರವರವೇದಿಕಮ್ ॥ ೧೫

(ಶೃಂಖಲಾಕಾರವಾಗಿ ಸುತ್ತಲೂ ಚಿತ್ರಿಸಿದ ಆನೆಯ ಪ್ರತಿಮೆಗಳಿಂದ) ಅಲಂಕೃತವಾದ ರಾವಣನ ಶಯನ ಮಂದಿರವನ್ನು ಕಂಡನು (೧೦). ಅದು ಬ್ರಹ್ಮನಿಗಾಗಿ ವಿಶ್ವಕರ್ಮನು ನಿರ್ಮಿಸಿದ ಸರ್ವರತ್ನಭೂಷಿತವಾದ ಪುಷ್ಪಕವಿಮಾನ*. ಕುಬೇರನು ತಪಸ್ಸಿನಿಂದ ಬ್ರಹ್ಮನನ್ನು ಮೆಚ್ಚಿಸಿ ಅದನ್ನು ಪಡೆದನು. ರಾವಣನು ಕುಬೇರನನ್ನು ಜಯಿಸಿ ಅದನ್ನು ತನ್ನ ವಶಪಡಿಸಿಕೊಂಡಿದ್ದನು (೧೧–೧೨). ಆ ವಿಮಾನದ ಕಂಭಗಳಲ್ಲಿ ಸುವರ್ಣಮಯವಾದ ತೋಳದ ಪ್ರತಿಮೆಗಳನ್ನು ಕೆತ್ತಿದ್ದರು. ಅದರ ಅಂತಸ್ತುಗಳು ಮೇರುಮಂದರ ಪರ್ವತಗಳಂತೆ ಬಹು ಎತ್ತರವಾಗಿದ್ದು ಆಕಾಶವನ್ನು ಭೇದಿಸುವಂತೆ ಇದ್ದವು (೧೩–೧೪). ಸೂರ್ಯಾಗ್ನಿಗಳಂತೆ ಪ್ರಕಾಶಿಸುತ್ತಿದ್ದ ಪುಷ್ಪಕವಿಮಾನಕ್ಕೆ ಚಿನ್ನದ ಮೆಟ್ಟಿಲುಗಳೂ ಸುಂದರ ವೇದಿಕೆಗಳೂ ಇದ್ದವು. ಚಿನ್ನ ಮತ್ತು ಸ್ಫಟಿಕಗಳಿಂದ ರಚಿಸಿದ ಕಿಟಕಿಗಳು, ಇಂದ್ರನೀಲ, ಹವಳ, ಮುತ್ತು ಮುಂತಾದ

---

* ೭-೮ನೆಯ ಸರ್ಗಗಳಲ್ಲಿ ಈ ವಿಮಾನವನ್ನೇ ವಿಶೇಷವಾಗಿ ವರ್ಣಿಸಲಾಗಿದೆ. ಪ್ರಾಯಶಃ ಆವೆರಡು ಸರ್ಗಗಳು ಪ್ರಕ್ಷಿಪ್ತವಾಗಿರಬಹುದು.

ಜಾಲವಾತಾಯನೈರ್ಯುಕ್ತಂ ಕಾಂಚನೈಃ ಸ್ಫಾಟಿಕೈರಪಿ ।
ಇಂದ್ರನೀಲಮಹಾನೀಲಮಣಿಪ್ರವರವೇದಿಕಮ್ ॥ ೧೬

ವಿದ್ರುಮೇಣ ವಿಚಿತ್ರೇಣ ಮಣಿಭಿಶ್ಚ ಮಹಾಧನೈಃ ।
ನಿಸ್ತುಲಾಭಿಶ್ಚ ಮುಕ್ತಾಭಿಸ್ತಲೇನಾಭಿವಿರಾಜಿತಮ್ ॥ ೧೭

ಚಂದನೇನ ಚ ರಕ್ತೇನ ತಪನೀಯನಿಭೇನ ಚ ।
ಸುಪುಣ್ಯಗಂಧಿನಾ ಯುಕ್ತಮಾದಿತ್ಯತರುಣೋಪಮಮ್ ॥ ೧೮

ವಿಮಾನಂ ಪುಷ್ಪಕಂ ದಿವ್ಯಮಾರುರೋಹ ಮಹಾಕಪಿಃ ।
ತತ್ರಸ್ಥಃ ಸ ತದಾ ಗಂಧಂ ಪಾನಭಕ್ಷ್ಯಾನ್ನಸಂಭವಮ್ ॥ ೧೯

ದಿವ್ಯಂ ಸಂಮೂರ್ಛಿತಂ ಜಿಘ್ರದ್ರೂಪವಂತಮಿವಾನಿಲಮ್ ।
ಸ ಗಂಧಸ್ತಂ ಮಹಾಸತ್ತ್ವಂ ಬಂಧುರ್ಬಂಧುಮಿವೋತ್ತಮಮ್ ॥ ೨೦

ಇತ ಏಹೀತ್ಯುವಾಚೇವ ತತ್ರ ಯತ್ರ ಸ ರಾವಣಃ ।
ತತಸ್ತಾಂ ಪ್ರಸ್ಥಿತಃ ಶಾಲಾಂ ದದರ್ಶ ಮಹತೀಂ ಶುಭಾಮ್ ॥ ೨೧

ರಾವಣಸ್ಯ ಮನಃಕಾಂತಾಂ ಕಾಂತಾಮಿವ ವರಸ್ತ್ರಿಯಮ್ ।
ಮಣಿಸೋಪಾನವಿಕೃತಾಂ ಹೇಮಜಾಲವಿರಾಜಿತಾಮ್ ॥ ೨೨

ಮಣಿಗಳಿಂದ ಚಿತ್ರಿಸಿದ ನೆಲಗಟ್ಟುಗಳೂ ಇದ್ದವು. ಅದು ಬಂಗಾರದ ಬಣ್ಣವುಳ್ಳ ರಕ್ತಚಂದನದಿಂದ ಸುಗಂಧಮಯವಾಗಿತ್ತು (೧೫–೧೮). ಹನುಮಂತನು ಆ ವಿಮಾನವನ್ನೇರಿದನು. ಅಲ್ಲಿದ್ದ ವಿವಿಧ ಪಾನೀಯಗಳಿಂದಲೂ ಭಕ್ಷ್ಯಗಳಿಂದಲೂ ಮೃಷ್ಟಾನ್ನಗಳಿಂದಲೂ ರೂಪವೆತ್ತು ಬಂದಂತೆ ಇದ್ದ ಸುಗಂಧಿಯಾದ ವಾಯುವು ಹನುಮಂತನನ್ನು ಬಂಧುವಿನಂತೆ ಎದುರುಗೊಂಡು 'ಇತ್ತ ಬರಬೇಕು!' ಎಂದು ರಾವಣನಿದ್ದಲ್ಲಿಗೆ ಕರೆದುಕೊಂಡು ಹೋಗುವಂತೆ ತೋರಿತು! (೧೯–೨೦). ಅನಂತರ ಆಂಜನೇಯನು ಮಣಿಮಯಸೋಪಾನಗಳಿಂದಲೂ ಚಿನ್ನದ ಕಿಟಕಿಗಳಿಂದಲೂ ರಮ್ಯವಾದ ರಾವಣನ ಅಂತಃಪುರವನ್ನು ಪ್ರವೇಶಿಸಿದನು. ಅದು ರಾವಣನಿಗೆ ಸುಂದರ ತರುಣಿಯಂತೆ ಬಹು ಪ್ರಿಯವಾದ ಸ್ಥಳ (೨೧–೨೨).

ಸ್ಫಾಟಿಕೈರಾವೃತತಲಾಂ ದಂತಾಂತರಿತರೂಪಿಕಾಮ್ ।
ಮುಕ್ತಾಭಿಶ್ಚ ಪ್ರವಾಲೈಶ್ಚ ರೂಪ್ಯಚಾಮೀಕರೈರಪಿ ॥ ೨೩

ವಿಭೂಷಿತಾಂ ಮಣಿಸ್ತಂಭೈಃ ಸುಬಹುಸ್ತಂಭಭೂಷಿತಾಮ್ ।
ಸಮೈರೃಜುಭಿರತ್ಯುಚ್ಚೈಃ ಸಮಂತಾತ್ ಸುವಿಭೂಷಿತೈಃ ॥ ೨೪

ಸ್ತಂಭೈಃ ಪಕ್ಷೈರಿವಾತ್ಯುಚ್ಚೈರ್ದಿವಂ ಸಂಪ್ರಸ್ಥಿತಾಮಿವ ।
ಮಹತ್ಯಾ ಕುಥಯಾಸ್ತೀರ್ಣಾಂ ಪೃಥಿವೀಲಕ್ಷಣಾಂಕಯಾ ॥ ೨೫

ಪೃಥಿವೀಮಿವ ವಿಸ್ತೀರ್ಣಾಂ ಸರಾಷ್ಟ್ರಗೃಹಮಾಲಿನೀಮ್ ।
ನಾದಿತಾಂ ಮತ್ತವಿಹಗೈರ್ದಿವ್ಯಗಂಧಾಧಿವಾಸಿತಾಮ್ ॥ ೨೬

ಪರಾರ್ಧ್ಯಾಸ್ತರಣೋಪೇತಾಂ ರಕ್ಷೋಽಧಿಪನಿಷೇವಿತಾಮ್ ।
ಧೂಮ್ರಾಮಗರುಧೂಪೇನ ವಿಮಲಾಂ ಹಂಸಪಾಂಡರಾಮ್ ॥ ೨೭

ಚಿತ್ರಾಂ ಪುಷ್ಪೋಪಹಾರೇಣ ಕಲ್ಮಾಷೀಮಿವ ಸುಪ್ರಭಾಮ್ ।
ಮನಃಸಂಹ್ಲಾದಜನನೀಂ ವರ್ಣಸ್ಯಾಪಿ ಪ್ರಸಾದಿನೀಮ್ ॥ ೨೮

ಅಲ್ಲಿ ಸ್ಫಟಿಕಮಯವಾದ ನೆಲಗಟ್ಟು; ನಾಗದಂತಗಳಿಂದ ಅಲಂಕರಿಸಿದ ಗೋಡೆಗಳು; ಮುತ್ತು, ಹವಳ, ಚಿನ್ನ ಬೆಳ್ಳಿಗಳಿಂದ ಅಲಂಕರಿಸಿದ ಮಣಿ ಸ್ತಂಭಗಳು; ಆ ಸ್ತಂಭಗಳು ಅತ್ಯುನ್ನತವಾಗಿ ಬಾಗಿಕೊಂಡು ರೆಕ್ಕೆಗಳಂತೆ ಕಾಣುತ್ತಿದ್ದುದರಿಂದ, ಅಂತಃಪುರವು ಆಕಾಶಕ್ಕೆ ಹಾರಿಹೋಗುವುದೋ ಎಂಬಂತೆ ತೋರುತ್ತಿತ್ತು. ವಿಶಾಲವಾದ ಅಂಗಣದ ಮಧ್ಯದಲ್ಲಿ ನದಿ, ಅರಣ್ಯ ಮುಂತಾದವುಗಳನ್ನು ಚಿತ್ರಿಸಿದ ದೊಡ್ಡ ದೊಡ್ಡ ರತ್ನಗಂಬಳಿಯನ್ನು ಹಾಸಿದ್ದರು (೨೩–೨೫). ವಿವಿಧ ರಾಷ್ಟ್ರಗಳಿಂದಲೂ ಗೃಹಗಳಿಂದಲೂ ಶೋಭಿಸುವ ಇನ್ನೊಂದು ಪೃಥ್ವಿಯೋ ಎಂಬಂತೆ ವಿಶಾಲವಾಗಿದ್ದ ಆ ಭವನದಲ್ಲಿ ಅಲ್ಲಲ್ಲಿ ಮದಿಸಿದ ಹಕ್ಕಿಗಳು ಚಿಲಿಪಿಲಿಗುಟ್ಟುತ್ತಿದ್ದವು. ಇಡೀ ಮಂದಿರವೇ ಸುಗಂಧದಿಂದ ತುಂಬಿಹೋಗಿತ್ತು (೨೬). ಆ ಭವನದಲ್ಲಿ ಕುಳಿತುಕೊಳ್ಳಲು ಅಮೂಲ್ಯವಾದ ಪೀಠಗಳನ್ನು ಹಾಕಿದ್ದರು. ಹಂಸದಂತೆ ಶುಭ್ರವಾದ ಆ ಸ್ಥಳದಲ್ಲಿ ಧೂಪದ ಹೊಗೆಯು ಹರಡಿತ್ತು. ಬಣ್ಣ ಬಣ್ಣದ ಹೂಗಳನ್ನು ಹರಡಿದ್ದರಿಂದ ನೆಲವು ಚಿತ್ರವರ್ಣವಾಗಿ ವಸಿಷ್ಠಧೇನುವಾದ

ತಾಂ ಶೋಕನಾಶಿನೀಂ ದಿವ್ಯಾಂ ಶ್ರಿಯಃ ಸಂಜನನೀಮಿವ ।
ಇಂದ್ರಿಯಾಣೀಂದ್ರಿಯಾರ್ಥೈಶ್ಚ ಪಂಚ ಪಂಚಭಿರುತ್ತಮೈಃ ॥ ೨೯
ತರ್ಪಯಾಮಾಸ ಮಾತೇವ ತದಾ ರಾವಣಪಾಲಿತಾ ।
ಸ್ವರ್ಗೋಽಯಂ ದೇವಲೋಕೋಽಯಮಿಂದ್ರಸ್ಯೇಯಂ
ಪುರೀ ಭವೇತ್ ॥ ೩೦
ಸಿದ್ಧಿರ್ವೇಯಂ ಪರಾ ಹಿ ಸ್ಯಾದಿತ್ಯಮನ್ಯತ ಮಾರುತಿಃ ।
ಪ್ರಧ್ಯಾಯತ ಇವಾಪಶ್ಯತ್ ಪ್ರದೀಪಾಂಸ್ತತ್ರ ಕಾಂಚನಾನ್ ॥ ೩೧
ಧೂರ್ತಾನಿವ ಮಹಾಧೂರ್ತೈರ್ದೇವನೇನ ಪರಾಜಿತಾನ್ ।
ದೀಪಾನಾಂ ಚ ಪ್ರಕಾಶೇನ ತೇಜಸಾ ರಾವಣಸ್ಯ ಚ ॥ ೩೨
ಅರ್ಚಿರ್ಭಿರ್ಭೂಷಣಾನಾಂ ಚ ಪ್ರದೀಪ್ತೇವಾಭ್ಯಮನ್ಯತ ।
ತತೋಽಪಶ್ಯತ್ ಕುಥಾಸೀನಂ ನಾನಾವರ್ಣಾಂಬರಸ್ರಜಮ್ ॥ ೩೩
ಸಹಸ್ರಂ ವರನಾರೀಣಾಂ ನಾನಾವೇಷವಿಭೂಷಿತಮ್ ।
ಪರಿವೃತ್ತೇಽರ್ಧರಾತ್ರೇ ತು ಪಾನನಿದ್ರಾವಶಂ ಗತಮ್ ॥ ೩೪

ಶಬಲೆಯಂತೆ ಇತ್ತು. ತನ್ನ ಕಾಂತಿಯಿಂದ ಬಣ್ಣದ ಚಿತ್ರಗಳಿಗೇ ಒಂದು ಪ್ರಸನ್ನತೆಯನ್ನು ಕೊಡತಕ್ಕ ರಮಣೀಯತೆ ಅದಕ್ಕಿತ್ತು (೨೭–೨೮). ರಾವಣನ ಅಂತಃಪುರವು ನೋಡಿದ ಕೂಡಲೆ ಮನಸ್ಸಿನ ತಾಪವನ್ನು ಪರಿಹರಿಸತಕ್ಕುದಾಗಿ ಸೌಭಾಗ್ಯದ ತವರುಮನೆಯಾಗಿತ್ತು. ಅದು ಹನುಮಂತನ ಪಂಚೇಂದ್ರಿಯಗಳನ್ನೂ ತಾಯಿಯಂತೆ ತೃಪ್ತಿಪಡಿಸಿತು. 'ಇದೇನು ಸ್ವರ್ಗಲೋಕವೊ, ಅಮರಾವತಿಯೊ ಅಥವಾ ಇಂದ್ರಜಾಲದಿಂದ ಲಭಿಸಿದ ಸಿದ್ಧಿಯೊ!' ಎಂದು ಆಂಜನೇಯನಿಗೆ ಆಶ್ಚರ್ಯವಾಯಿತು (೨೯–೩೧). ಜೂಜಿನಲ್ಲಿ ಸೋತವನು ಚಿಂತಾಕುಲನಾಗಿ ಅಲ್ಲಾಡದೆ ನಿಂತಿರುವಂತೆ, ಸುವರ್ಣದೀಪಗಳು ನಿಶ್ಚಲವಾಗಿ ಪ್ರಕಾಶಿಸುತ್ತಿದ್ದವು. ದೀಪಗಳ ಪ್ರಕಾಶದಿಂದಲೂ, ರಾವಣನ ತೇಜಸ್ಸಿನಿಂದಲೂ, ಆಭರಣಗಳ ಕಾಂತಿಯಿಂದಲೂ ಅಂತಃಪುರವು ಪ್ರಜ್ವಲಿಸುತ್ತಿತ್ತು (೩೨–೩೩). ಅನಂತರ ಹನುಮಂತನು, ನಾನಾ ವಸ್ತ್ರಾಲಂಕಾರಗಳನ್ನು ಧರಿಸಿ ರತ್ನಗಂಬಳಿಯ ಮೇಲೆ ಮಲಗಿದ್ದ ಸಾವಿರಾರು ಸ್ತ್ರೀಯರನ್ನು ನೋಡಿದನು. ಅವರೆಲ್ಲರೂ ಬಹು ಹೊತ್ತು ಕ್ರೀಡಿಸುತ್ತಿದ್ದು ಮಧ್ಯರಾತ್ರಿಯಾದ ಮೇಲೆ ಮದ್ಯಪಾನದ ಅಮಲಿನಿಂದ

ಕ್ರೀಡಿತ್ವೋಪರತಂ ರಾತ್ರೌ ಪ್ರಸುಪ್ತಂ ಬಲವತ್ತದಾ ।
ತತ್ ಪ್ರಸುಪ್ತಂ ವಿರುರುಚೇ ನಿಃಶಬ್ದಾಂತರಭೂಷಣಮ್ ॥ ೩೫

ನಿಃಶಬ್ದಹಂಸಭ್ರಮರಂ ಯಥಾ ಪದ್ಮವನಂ ಮಹತ್ ।
ತಾಸಾಂ ಸಂವೃತದಂತಾನಿ ಮೀಲಿತಾಕ್ಷಾಣಿ ಮಾರುತಿಃ ॥ ೩೬

ಅಪಶ್ಯತ್ ಪದ್ಮಗಂಧೀನಿ ವದನಾನಿ ಸುಯೋಷಿತಾಮ್ ।
ಪ್ರಬುದ್ಧಾನೀವ ಪದ್ಮಾನಿ ತಾಸಾಂ ಭೂತ್ವಾ ಕ್ಷಪಾಕ್ಷಯೇ ॥ ೩೭

ಪುನಃ ಸಂವೃತಪತ್ರಾಣಿ ರಾತ್ರಾವಿವ ಬಭುಸ್ತದಾ ।
ಇಮಾನಿ ಮುಖಪದ್ಮಾನಿ ನಿಯತಂ ಮತ್ತಷಟ್ಪದಾಃ ॥ ೩೮

ಅಂಬುಜಾನೀವ ಫುಲ್ಲಾನಿ ಪ್ರಾರ್ಥಯಂತಿ ಪುನಃ ಪುನಃ ।
ಇತಿ ಚಾಮನ್ಯತ ಶ್ರೀಮಾನುಪಪತ್ತ್ಯಾ ಮಹಾಕಪಿಃ ॥ ೩೯

ಮೇನೇ ಹಿ ಗುಣತಸ್ತಾನಿ ಸಮಾನಿ ಸಲಿಲೋದ್ಭವೈಃ ।
ಸಾ ತಸ್ಯ ಶುಶುಭೇ ಶಾಲಾ ತಾಭಿಃ ಸ್ತ್ರೀಭಿರ್ವಿರಾಜಿತಾ ॥ ೪೦

ಮೈಮರೆತು ನಿದ್ರಿಸುತ್ತಿದ್ದರು. ಒಡವೆಗಳ ಸದ್ದು ಅಡಗಿತ್ತು. ರಾತ್ರಿಯ ಹೊತ್ತು ಹಂಸ, ದುಂಬಿಗಳ ಶಬ್ದವಿಲ್ಲದೆ ಶಾಂತವಾದ ತಾವರೆಯ ಕೊಳದಂತೆ ಅಂತಃಪುರವು ಕಾಣಿಸಿತು (೩೪–೩೫). ಬಾಯನ್ನು ತೆರೆಯದೆ, ಕಣ್ಣುಮುಚ್ಚಿಕೊಂಡು ನಿದ್ರಿಸುತ್ತಿದ್ದ ಆ ಸ್ತ್ರೀಯರ ಮುಖಕಮಲಗಳನ್ನು ಹನುಮಂತನು ನೋಡುತ್ತ ಹೋದನು. 'ಈ ಮುಖಪದ್ಮಗಳು ಹಗಲುಹೊತ್ತು ಅರಳಿ ಈಗ ಮುಚ್ಚಿಕೊಂಡಿವೆ. ಇವು ಅರಳಿದಾಗ ನಿಜವಾಗಿಯೂ ದುಂಬಿಗಳು ಬಂದು ಮತ್ತೆ ಮುತ್ತಿಕೊಳ್ಳುತ್ತವೆ!' ಎಂದು ಅವನು ಭಾವಿಸಿದನು. ಏಕೆಂದರೆ, ಆ ಚೆಲುವೆಯರ ಮುಖಗಳು ಎಲ್ಲ ಬಗೆಯಲ್ಲಿಯೂ ತಾವರೆಗಳಿಗೆ ಸಮವಾಗಿದ್ದವು (೩೬–೩೯). ಆ ಭವನಾಂಗಣವು ಶರತ್ಕಾಲದಲ್ಲಿ ನಕ್ಷತ್ರಪುಂಜಗಳಿಂದ ರಂಜಿಸುವ ಗಗನತಲದಂತೆ ಆ ಸ್ತ್ರೀಯರಿಂದ ಶೋಭಿಸುತ್ತಿದ್ದಿತು. ಸುಂದರಾಂಗನಾ ಪರಿವೃತನಾದ ರಾಕ್ಷಸರಾಜನು, ತಾರಾಪರಿವಾರದಿಂದೊಡಗೂಡಿದ ಚಂದ್ರನೆಂದೂ, ಆ ಸ್ತ್ರೀಯರು ಪುಣ್ಯಶೇಷವಿರುವಾಗಲೇ ಭೂಮಿಗೆ ಉರುಳಿದ ತಾರೆಗಳೆಂದೂ ಹನುಮಂತನು ತಿಳಿದುಕೊಂಡನು

ಶಾರದೀವ ಪ್ರಸನ್ನಾ ದ್ಯೌಸ್ತಾರಾಭಿರಭಿಶೋಭಿತಾ ।
ಸ ಚ ತಾಭಿಃ ಪರಿವೃತಃ ಶುಶುಭೇ ರಾಕ್ಷಸಾಧಿಪಃ ॥ ೪೧

ಯಥಾ ಹ್ಯುಡುಪತಿಃ ಶ್ರೀಮಾಂಸ್ತಾರಾಭಿರಭಿಸಂವೃತಃ ।
ಯಾಶ್ಚ್ಯವಂತೇಽಂಬರಾತ್ತಾರಾಃ ಪುಣ್ಯಶೇಷಸಮಾವೃತಾಃ ॥ ೪೨

ಇಮಾಸ್ತಾಃ ಸಂಗತಾಃ ಕೃತ್ಸ್ನಾ ಇತಿ ಮೇನೇ ಹರಿಸ್ತದಾ ।
ತಾರಾಣಾಮಿವ ಸುವ್ಯಕ್ತಂ ಮಹತೀನಾಂ ಶುಭಾರ್ಚಿಷಾಮ್ ॥ ೪೩

ಪ್ರಭಾ ವರ್ಣಪ್ರಸಾದಾಶ್ಚ ವಿರೇಜುಸ್ತತ್ರ ಯೋಷಿತಾಮ್ ।
ವ್ಯಾವೃತ್ತಕಚಪೀನಸ್ರಕ್ಪ್ರಕೀರ್ಣವರಭೂಷಣಾಃ ॥ ೪೪

ಪಾನವ್ಯಾಯಾಮಕಾಲೇಷು ನಿದ್ರಾಪಹೃತಚೇತಸಃ ।
ವ್ಯಾವೃತ್ತತಿಲಕಾಃ ಕಾಶ್ಚಿತ್ಕಾಶ್ಚಿದುದ್ಭ್ರಾಂತನೂಪುರಾಃ ॥ ೪೫

ಪಾರ್ಶ್ವೇ ಗಲಿತಹಾರಾಶ್ಚ ಕಾಶ್ಚಿತ್ ಪರಮಯೋಷಿತಃ ।
ಮುಕ್ತಾಹಾರಾವೃತಾಶ್ಚಾನ್ಯಾಃ ಕಾಶ್ಚಿದ್ವಿಸ್ರಸ್ತವಾಸಸಃ ॥ ೪೬

ವ್ಯಾವಿದ್ಧರಶನಾದಾಮಾಃ ಕಿಶೋರ್ಯ ಇವ ವಾಹಿತಾಃ ।
ಅಕುಂಡಲಧರಾಶ್ಚಾನ್ಯಾ ವಿಚ್ಛಿನ್ನಮೃದಿತಸ್ರಜಃ ॥ ೪೭

(೪೦-೪೨). ಏಕೆಂದರೆ, ಅವರ ದೇಹಕಾಂತಿಯು ನಕ್ಷತ್ರಗಳ ಕಾಂತಿಯಂತೆಯೇ ಇತ್ತು. ಆ ಪ್ರಮದೆಯರು ಮದ್ಯಪಾನ ಮಾಡಿ ನೃತ್ಯಾದಿ ಕ್ರೀಡೆಗಳನ್ನು ಮಾಡುತ್ತಿರುವಾಗ ಹೂಮಾಲೆ, ಜಡೆ, ಒಡವೆಗಳು ಜಾರಿ ಸಡಿಲವಾಗಲು, ಹಾಗೆಯೇ ಮೈಮರೆತು ನಿದ್ರಿಸುತ್ತಿದ್ದರು. ಕೆಲವರ ತಿಲಕಗಳು ಓರೆಯಾಗಿದ್ದವು. ಕೆಲವರ ಕಾಲಂದಿಗೆಗಳು ದೂರಹೋಗಿ ಬಿದ್ದಿದ್ದವು (೪೩-೪೫). ಕೆಲವರ ಮುತ್ತಿನ ಹಾರಗಳು ಜಾರಿ ಬಿದ್ದಿದ್ದವು. ಕೆಲವರು ಅವುಗಳನ್ನು ಮೈಗೆ ಸುತ್ತಿಕೊಂಡಿದ್ದರು. ಕೆಲವರ ಸೀರೆ ಸಡಿಲಿತ್ತು. ಕೆಲವರ ಬಳಿ ಕಾಂಚಿಗಳು (ಡಾಬು) ಉರುಳಿಬಿದ್ದಿದ್ದವು. ಅವರನ್ನು ನೋಡಿದರೆ, ಹೆಣ್ಣು ಕುದುರೆಗಳು ಆಯಾಸವನ್ನು ಪರಿಹರಿಸಿಕೊಳ್ಳುವುದಕ್ಕಾಗಿ ಜೀನನ್ನು ಬೀಳಿಸಿ ಉರುಳಾಡುತ್ತಿರುವುವೋ ಎಂಬಂತೆ ಕಾಣುತ್ತಲಿತ್ತು. ಕೆಲವರ ಕುಂಡಲಗಳು ಜಾರಿಬಿದ್ದು ಅವರ ಹೂಮಾಲೆಗಳು ತೀಡಿಹೋದ್ದರಿಂದ,

ಗಜೇಂದ್ರಮೃದಿತಾಃ ಫುಲ್ಲಾ ಲತಾ ಇವ ಮಹಾವನೇ ।
ಚಂದ್ರಾಂಶುಕಿರಣಾಭಾಶ್ಚ ಹಾರಾಃ ಕಾಸಾಂಚಿದುತ್ಕಟಾಃ ॥ ४೮
ಹಂಸಾ ಇವ ಬಭುಃ ಸುಪ್ತಾಃ ಸ್ತನಮಧ್ಯೇಷು ಯೋಷಿತಾಮ್ ।
ಅಪರಾಸಾಂ ಚ ವೈದೂರ್ಯಾಃ ಕಾದಂಬಾ ಇವ ಪಕ್ಷಿಣಃ ॥ ४೯
ಹೇಮಸೂತ್ರಾಣಿ ಚಾನ್ಯಾಸಾಂ ಚಕ್ರವಾಕಾ ಇವಾಭವನ್ ।
ಹಂಸಕಾರಂಡವಾಕೀರ್ಣಾಶ್ಚಕ್ರವಾಕೋಪಶೋಭಿತಾಃ ॥ ೫೦
ಆಪಗಾ ಇವ ತಾ ರೇಜುರ್ಜಘನೈಃ ಪುಲಿನೈರಿವ ।
ಕಿಂಕಿಣೀಜಾಲಸಂಕೋಶಾಸ್ತಾ ಹೇಮವಿಪುಲಾಂಬುಜಾಃ ॥ ೫೧
ಭಾವಗ್ರಾಹಾ ಯಶಸ್ತೀರಾಃ ಸುಪ್ತಾ ನದ್ಯ ಇವಾಬಭುಃ ।
ಮೃದುಷ್ವಂಗೇಷು ಕಾಸಾಂಚಿತ್ ಕುಚಾಗ್ರೇಷು ಚ ಸಂಸ್ಥಿತಾಃ ॥ ೫೨
ಬಭೂವುರ್ಭ್ರಮರಾಣೀವ ಶುಭಾ ಭೂಷಣರಾಜಯಃ ।
ಅಂಶುಕಾಂತಾಶ್ಚ ಕಾಸಾಂಚಿನ್ಮುಖಮಾರುತಕಂಪಿತಾಃ ॥ ೫೩

ಆ ಸ್ತ್ರೀಯರು ಆನೆಯು ಎಳೆದುಹಾಕಿದ ಬಳ್ಳಿಗಳಂತೆ ಕಾಣುತ್ತಿದ್ದರು. ಕೆಲವು ತರುಣಿಯರ ಸ್ತನಮಧ್ಯದಲ್ಲಿದ್ದ ದೊಡ್ಡ ಹಾರಗಳೂ, ವೈಡೂರ್ಯಮಣಿಗಳೂ ನಿದ್ರಿಸುತ್ತಿರುವ ಹಂಸಗಳಂತೆ ಶೋಭಿಸುತ್ತಿದ್ದವು (४೬–४೯). ಇನ್ನು ಕೆಲವು ಸ್ತ್ರೀಯರು ಸುವರ್ಣಹಾರವನ್ನು ಧರಿಸಿದ್ದರಿಂದ ಅವರ ಸ್ತನಗಳು ಚಕ್ರವಾಕ ಪಕ್ಷಿಗಳಂತೆಯೂ, ಜಘನಗಳು ಪುಲಿನ (ಮರಳುದಿಣ್ಣೆ)ಗಳಂತೆಯೂ ಕಾಣುತ್ತಿದ್ದವು. ಆದ್ದರಿಂದ ಆ ನಾರಿಯರೆಲ್ಲರೂ ಹಂಸ ಮುಂತಾದ ನೀರುಹಕ್ಕಿಗಳಿಂದ ಚೆಲುವುಗೊಂಡ ನದಿಗಳಂತೆ ಕಂಗೊಳಿಸುತ್ತಿದ್ದರು. ಅವರ ಚಿನ್ನದ ಗೆಜ್ಜೆಗಳು ಕಮಲದ ಮೊಗ್ಗುಗಳಂತೆಯೂ, ಮುಖಗಳು ಪದ್ಮಗಳಂತೆಯೂ, ನಿದ್ರೆಯಲ್ಲಿಯೂ ಮಾಡುತ್ತಿದ್ದ ಶೃಂಗಾರ ಚೇಷ್ಟೆಗಳು ತಮ್ಮೆಡೆಗೆ ಜನರನ್ನು ಎಳೆಯುವ ಮೊಸಳೆಗಳಂತೆಯೂ, ಪಾರ್ಶ್ವಗಳಲ್ಲಿ ಹರಡಿದ್ದ ಲಾವಣ್ಯಪ್ರಭೆಯು ತೀರಗಳಂತೆಯೂ ಇದ್ದುದರಿಂದ ಅವರು ನದಿಗಳಂತೆಯೇ ಕಂಡರು (೫೦–೫೨). ಹಲವು ಚೆಲುವೆಯರ ಕರಚರಣಾದಿ ಕೋಮಲಾಂಗಗಳಲ್ಲಿಯೂ ಸ್ತನಗಳಲ್ಲಿಯೂ ವಿರಾಜಿಸುತ್ತಿದ್ದ ಒಡವೆಗಳು, (ಬಳ್ಳಿಗಳಿಗೆ ಮುತ್ತಿದ) ದುಂಬಿಗಳಂತೆ ಕಂಡವು ! ಆ ತರುಣಿಯರು ಉಟ್ಟಿದ್ದ ಚಿತ್ರವರ್ಣದ ಸೊಗಸಾದ ಸೀರೆಯ ಸೆರಗುಗಳು

ಉಪರ್ಯುಪರಿ ವಕ್ತ್ರಾಣಾಂ ವ್ಯಾಧೂಯಂತೇ ಪುನಃ ಪುನಃ ।
ತಾಃ ಪತಾಕಾ ಇವೋದ್ಧೂತಾಃ ಪತ್ನೀನಾಂ ರುಚಿರಪ್ರಭಾಃ ॥ ೫೪
ನಾನಾವರ್ಣಾಃ ಸುವರ್ಣಾನಾಂ ವಕ್ತ್ರಮೂಲೇಷು ರೇಜಿರೇ ।
ವವಲ್ಗುಶ್ಚಾತ್ರ ಕಾಸಾಂಚಿತ್ ಕುಂಡಲಾನಿ ಶುಭಾರ್ಚಿಷಾಮ್ ॥ ೫೫
ಮುಖಮಾರುತಸಂಪರ್ಕಾತ್ ಮಂದಂ ಮಂದಂ ಸುಯೋಷಿತಾಮ್ ।
ಶರ್ಕರಾಸವಗಂಧೈಶ್ಚ ಪ್ರಕೃತ್ಯಾ ಸುರಭಿಃ ಸುಖಃ ॥ ೫೬
ತಾಸಾಂ ವದನನಿಃಶ್ವಾಸಃ ಸಿಷೇವೇ ರಾವಣಂ ತದಾ ।
ರಾವಣಾನನಶಂಕಾಶ್ಚ ಕಾಶ್ಚಿದ್ರಾವಣಯೋಷಿತಃ ॥ ೫೭
ಮುಖಾನಿ ಸ್ಮ ಸಪತ್ನೀನಾಮುಪಾಜಿಘ್ರನ್ ಪುನಃ ಪುನಃ ।
ಅತ್ಯರ್ಥಂ ಸಕ್ತಮನಸೋ ರಾವಣೇ ತಾ ವರಸ್ತ್ರಿಯಃ ॥ ೫೮
ಅಸ್ವತಂತ್ರಾಃ ಸಪತ್ನೀನಾಂ ಪ್ರಿಯಮೇವಾಚರಂಸ್ತದಾ ।
ಬಾಹೂನುಪನಿಧಾಯಾನ್ಯಾಃ ಪಾರಿಹಾರ್ಯವಿಭೂಷಿತಾನ್ ॥ ೫೯
ಅಂಶುಕಾನಿ ಚ ರಮ್ಯಾಣಿ ಪ್ರಮದಾಸ್ತತ್ರ ಶಿಶ್ಯಿರೇ ।
ಅನ್ಯಾ ವಕ್ಷಸಿ ಚಾನ್ಯಸ್ಯಾಸ್ತಸ್ಯಾಃ ಕಾಶ್ಚಿತ್ ಪುನರ್ಭುಜಮ್ ॥ ೬೦

ಮುಖಗಳ ಬಳಿಯಲ್ಲಿ ಉಸಿರಿನ ಗಾಳಿಯಿಂದ ಪತಾಕೆಗಳಂತೆ ಅಲ್ಲಾಡುತ್ತಿದ್ದವು. ಕೆಲವರ ಕಿವಿಯೋಲೆಗಳೂ ಮೆಲ್ಲಗೆ ಚಲಿಸುತ್ತಿದ್ದವು. ಸಹಜವಾಗಿಯೇ ಸುವಾಸನೆಯನ್ನು ಬೀರುವ ನಿಃಶ್ವಾಸ ಮಾರುತವು ಮದ್ಯದಿಂದ ಇನ್ನೂ ಹೆಚ್ಚು ಸುಗಂಧವನ್ನು ಚೆಲ್ಲುತ್ತ ರಾವಣನಿಗೆ ಸುಖಕರವಾಗಿ ಸುಳಿಯುತ್ತಿತ್ತು (೫೩–೫೬). ರಾವಣನಲ್ಲಿ ಬಹಳ ಪ್ರೇಮವನ್ನಿಟ್ಟಿದ್ದ ಕೆಲವು ಸ್ತ್ರೀಯರು ಬಳಿಯಲ್ಲಿ ಮಲಗಿದ್ದ ಸವತಿಯರ ಮುಖಗಳನ್ನು ನಿದ್ದೆಗಣ್ಣಿನಲ್ಲಿ ರಾವಣನ ಮುಖವೆಂದೇ ತಿಳಿದು ಚುಂಬಿಸುತ್ತಿದ್ದರು! (೫೭–೫೮). ಆಗ ಸವತಿಯರು ತಮ್ಮನ್ನು ರಾವಣನೇ ಚುಂಬಿಸುತ್ತಿರುವನೆಂದು ತಿಳಿದು ಹಿಗ್ಗುತ್ತಿದ್ದರು! ಕೆಲವರು ತಮ್ಮ ತೋಳಿನ ಮೇಲೆ ತಲೆಯಿಟ್ಟು ಮಲಗಿದ್ದರು. ಕೆಲವರು ಬಟ್ಟೆಯನ್ನು ಸುತ್ತಿ ತಲೆದಿಂಬಿನಂತೆ ಮಾಡಿಕೊಂಡಿದ್ದರು. ಒಬ್ಬಳ ಎದೆಯ ಮೇಲೆ ಇನ್ನೊಬ್ಬಳು, ಅವಳ ಭುಜದ ಮೇಲೆ ಮತ್ತೊಬ್ಬಳು, ಅವಳ ತೊಡೆಯ ಮೇಲೆ ಮಗದೊಬ್ಬಳು, ಅವಳ ತೋಳಿನ ಮೇಲೆ

ಅಪರಾ ತ್ವಂಕಮನ್ಯಸ್ಯಾಸ್ತಸ್ಯಾಶ್ಚಾಪ್ಯಪರಾ ಭುಜೌ ।
ಊರುಪಾರ್ಶ್ವಕಟೀಪೃಷ್ಠಮನ್ಯೋಽನ್ಯಸ್ಯ ಸಮಾಶ್ರಿತಾಃ ॥ ೬೧

ಪರಸ್ಪರನಿವಿಷ್ಟಾಂಗ್ಯೋ ಮದಸ್ನೇಹವಶಾನುಗಾಃ ।
ಅನ್ಯೋಽನ್ಯಸ್ಯಾಂಗಸಂಸ್ಪರ್ಶಾತ್ ಪ್ರೀಯಮಾಣಾಃ ಸುಮಧ್ಯಮಾಃ ॥ ೬೨

ಏಕೀಕೃತಭುಜಾಃ ಸರ್ವಾಃ ಸುಷುಪುಸ್ತತ್ರ ಯೋಷಿತಃ ।
ಅನ್ಯೋಽನ್ಯಭುಜಸೂತ್ರೇಣ ಸ್ತ್ರೀಮಾಲಾ ಗ್ರಥಿತಾ ಹಿ ಸಾ ॥ ೬೩

ಮಾಲೇವ ಗ್ರಥಿತಾ ಸೂತ್ರೇ ಶುಶುಭೇ ಮತ್ತಷಟ್ಪದಾ ।
ಲತಾನಾಂ ಮಾಧವೇ ಮಾಸಿ ಫುಲ್ಲಾನಾಂ ವಾಯುಸೇವನಾತ್ ॥ ೬೪

ಅನ್ಯೋಽನ್ಯಮಾಲಾಗ್ರಥಿತಂ ಸಂಸಕ್ತಕುಸುಮೋಚ್ಚಯಮ್ ।
ವ್ಯತಿವೇಷ್ಟಿತಸುಸ್ಕಂಧಮನ್ಯೋಽನ್ಯಭ್ರಮರಾಕುಲಮ್ ॥ ೬೫

ಆಸೀದ್ವನಮಿವೋದ್ಧೂತಂ ಸ್ತ್ರೀವನಂ ರಾವಣಸ್ಯ ತತ್ ।
ಉಚಿತೇಷ್ವಪಿ ಸುವ್ಯಕ್ತಂ ನ ತಾಸಾಂ ಯೋಷಿತಾಂ ತದಾ ॥ ೬೬

ವಿವೇಕಃ ಶಕ್ಯ ಆಧಾತುಂ ಭೂಷಣಾಂಗಾಂಬರಸ್ರಜಾಮ್ ।
ರಾವಣೇ ಸುಖಸಂವಿಷ್ಟೇ ತಾಃ ಸ್ತ್ರಿಯೋ ವಿವಿಧಪ್ರಭಾಃ ॥ ೬೭

ಬೇರೊಬ್ಬಳು—ಹೀಗೆ ತಲೆಯಿಟ್ಟು ಸಾಲುಸಾಲಾಗಿ ಮಲಗಿದ್ದರು! (೫೯–೬೧). ಮದ್ಯಪಾನದಿಂದಲೂ ಕಾಮದಿಂದಲೂ ಮತ್ತರಾದ ಆ ಸ್ತ್ರೀಯರು ಒಬ್ಬೊಬ್ಬರ ಮೃದುವಾದ ಅಂಗಸ್ಪರ್ಶದಿಂದ ಹಿಗ್ಗುತ್ತ, ತೋಳಿನ ಮೇಲೆ ತೋಳು ಚಾಚಿ ಹೂಮಾಲೆಯಂತೆ ಸಾಲಾಗಿ ಮಲಗಿದ್ದರು (೬೨–೬೩). ಆ ಯುವತಿಯರ ಗುಂಪು ರಾವಣನ ವಸಂತಕಾಲದ ಹೂದೋಟದಂತೆ ರಮ್ಯವಾಗಿತ್ತು. ಸುಂದರಿಯರೇ ಪುಷ್ಪಲತೆಗಳು; ಕಣ್ಣು ಮೂಗು ಮುಂತಾದ ಅಂಗಗಳೂ ಆಭರಣಗಳೂ ನಾನಾ ಬಗೆಯ ಹೂಗಳು; ಕೇಶಪಾಶ, ಹುಬ್ಬುಗಳೇ ದುಂಬಿಗಳು; ಭುಜಗಳೇ ಕೊಂಬೆಗಳು (೬೪–೬೬). ಅವರು ಮಲಗಿದ್ದ ಸನ್ನಿವೇಶದಲ್ಲಿ ಅವರ ಆಭರಣಗಳು, ಸೀರೆಗಳು, ಹಾರಗಳು, ಕೈಕಾಲುಗಳು ಯಾರಯಾರದ್ದೆಂದು ವಿಂಗಡಿಸಿ ತಿಳಿಯುವುದು ಕೂಡ ದುಷ್ಕರವಾಗಿತ್ತು. ಸುವರ್ಣ ದೀಪಸ್ತಂಭಗಳಲ್ಲಿ ನಿಶ್ಚಲವಾಗಿ ಉರಿಯುತ್ತಿದ್ದ

ಜ್ವಲಂತಃ ಕಾಂಚನಾ ದೀಪಾಃ ಪ್ರೈಕ್ಷಂತಾನಿಮಿಷಾ ಇವ ।
ರಾಜರ್ಷಿಪಿತೃದೈತ್ಯಾನಾಂ ಗಂಧರ್ವಾಣಾಂ ಚ ಯೋಷಿತಃ ॥ ೬೮

ರಾಕ್ಷಸಾನಾಂ ಚ ಯಾಃ ಕನ್ಯಾಸ್ತಸ್ಯ ಕಾಮವಶಂ ಗತಾಃ ।
ಯುದ್ಧಕಾಮೇನ ತಾಃ ಸರ್ವಾ ರಾವಣೇನ ಹೃತಾಃ ಸ್ತ್ರಿಯಃ ॥ ೬೯

ಸಮದಾ ಮದನೇನೈವ ಮೋಹಿತಾಃ ಕಾಶ್ಚಿದಾಗತಾಃ ॥

ನ ತತ್ರ ಕಾಶ್ಚಿತ್ ಪ್ರಮದಾಃ ಪ್ರಸಹ್ಯ
ವೀರ್ಯೋಪಪನ್ನೇನ ಗುಣೇನ ಲಬ್ಧಾಃ ।
ನ ಚಾನ್ಯಕಾಮಾಪಿ ನ ಚಾನ್ಯಪೂರ್ವಾ
ವಿನಾ ವರಾರ್ಹಾಂ ಜನಕಾತ್ಮಜಾಂ ತಾಮ್ ॥ ೭೦

ನ ಚಾಕುಲೀನಾ ನ ಚ ಹೀನರೂಪಾ
ನಾದಕ್ಷಿಣಾ ನಾನುಪಚಾರಯುಕ್ತಾ ।
ಭಾರ್ಯಾಭವತ್ತಸ್ಯ ನ ಹೀನಸತ್ತ್ವಾ
ನ ಚಾಪಿ ಕಾಂತಸ್ಯ ನ ಕಾಮನೀಯಾ ॥ ೭೧

ದೀಪಗಳು 'ರಾವಣನು ನಿದ್ರಿಸುತ್ತಿದ್ದಾನೆ. ಭಯವಿಲ್ಲ' ಎಂದುಕೊಂಡು ಆ ಸುಂದರಿಯರನ್ನೇ ದಿಟ್ಟಿಸಿ ನೋಡುತ್ತಿರುವಂತೆ ಭಾಸವಾಯಿತು! (೬೭–೬೮). ಆ ಸ್ತ್ರೀಯರಲ್ಲಿ ಬಹುಮಂದಿ ರಾಜಕನ್ನಿಕೆಯರನ್ನೂ ದೇವಗಂಧರ್ವಾದಿ ಸ್ತ್ರೀಯರನ್ನೂ ರಾವಣನು ಯುದ್ಧದಲ್ಲಿ ಗೆದ್ದು ತಂದಿದ್ದನು. ಆದರೆ ಅವರೆಲ್ಲರೂ ರಾವಣನಲ್ಲಿ ಅನುರಕ್ತರಾದವರು. ಕೆಲವು ತರುಣಿಯರು ತಾವಾಗಿಯೇ ರಾವಣನನ್ನು ಮೋಹಿಸಿ ಬಂದವರು (೬೯). ಸೀತಾದೇವಿಯೊಬ್ಬಳನ್ನು ಬಿಟ್ಟು ತನ್ನಲ್ಲಿ ಅನುರಾಗವಿಲ್ಲದ ಯಾವ ಸ್ತ್ರೀಯನ್ನೂ ರಾವಣನು ಬಲಾತ್ಕಾರವಾಗಿ ತಂದಿರಲಿಲ್ಲ. ಅಲ್ಲಿದ್ದವರಲ್ಲಿ ಯಾವಳೂ ರಾವಣನನ್ನು ಬಿಟ್ಟು ಇನ್ನೊಬ್ಬನನ್ನು ಕಾಮಿಸಿದವಳೂ ಅಲ್ಲ; ವರಿಸಿದವಳೂ ಅಲ್ಲ (೭೦). ಆ ಸ್ತ್ರೀಯರಲ್ಲಿ ಕುಲಹೀನೆಯಾಗಲಿ, ಕುರೂಪಿಯಾಗಲಿ, ಕೌಶಲ್ಯವಿಲ್ಲದವಳಾಗಲಿ ಅಥವಾ ರಾವಣನ ಪ್ರೇಮಕ್ಕೆ

---

* ಅಲ್ಲಿದ್ದವರಲ್ಲಿ ಯಾವ ಸ್ತ್ರೀಯೂ ಬಲಾತ್ಕಾರದಿಂದ ಬಂದವಳಲ್ಲ ಎಂದು ಅಭಿಪ್ರಾಯ.

ಬಭೂವ ಬುದ್ಧಿಸ್ತು ಹರೀಶ್ವರಸ್ಯ
ಯದೀದೃಶೀ ರಾಘವಧರ್ಮಪತ್ನೀ ।
ಇಮಾ ಯಥಾ ರಾಕ್ಷಸರಾಜಭಾರ್ಯಾಃ
ಸುಜಾತಮಸ್ಯೇತಿ ಹಿ ಸಾಧುಬುದ್ಧೇಃ ॥ ೭೨

ಪುನಶ್ಚ ಸೋಽಚಿಂತಯದಾರ್ತರೂಪೋ
ಧ್ರುವಂ ವಿಶಿಷ್ಟಾ ಗುಣತೋ ಹಿ ಸೀತಾ ।
ಅಥಾಯಮಸ್ಯಾಂ ಕೃತವಾನ್ ಮಹಾತ್ಮಾ
ಲಂಕೇಶ್ವರಃ ಕಷ್ಟಮನಾರ್ಯಕರ್ಮ ॥

ಇತಿ ಶ್ರೀಮದ್ರಾಮಯಣೇ ಸುಂದರಕಾಂಡೇ ನವಮಃ ಸರ್ಗಃ

ಪಾತ್ರಳಲ್ಲದವಳಾಗಲಿ ಯಾವಳೂ ಇರಲಿಲ್ಲ (೭೧). ಹನುಮಂತನು ಅವರನ್ನು ನೋಡಿ ತನ್ನ ಮನಸ್ಸಿನಲ್ಲಿ 'ಈ ರಾಕ್ಷಸ ಸ್ತ್ರೀಯರಂತೆ, ಸೀತಾದೇವಿಯೂ ಪತಿಯಾದ ಶ್ರೀರಾಮನ ಬಳಿಯೇ ಇದ್ದಿದ್ದರೆ, ರಾವಣನ ಸೌಭಾಗ್ಯಕ್ಕೆ ಎಣೆ ಇರುತ್ತಿರಲಿಲ್ಲ. ಆಗ ರಾಮನಿಂದ ಇವನಿಗೆ ಯಾವ ತೊಂದರೆಯೂ ಉದ್ಭವಿಸುತ್ತಿರಲಿಲ್ಲ' ಎಂದುಕೊಂಡನು (೭೨). ಮರುಕ್ಷಣದಲ್ಲಿ 'ಈ ರಾಕ್ಷಸಿಯರಿಗೂ ಸೀತೆಗೂ ಏನು ಹೋಲಿಕೆ? ಇವರೆಲ್ಲರಿಗಿಂತ ಸೀತೆಯು ಗುಣವಂತೆ. ರಾವಣನು ಇಷ್ಟು ವೈಭವಶಾಲಿಯಾದರೂ ಸೀತೆಯನ್ನು ತಂದು ಎಂತಹ ದುಷ್ಕೃತ್ಯವನ್ನು ಮಾಡಿದನು !' ಎಂದು ವಿಷಾದಪಟ್ಟನು (೭೩).

ಇಲ್ಲಿಗೆ ಶ್ರೀಮದ್ರಾಮಾಯಣದ ಸುಂದರಕಾಂಡದಲ್ಲಿ ಒಂಬತ್ತನೆಯ ಸರ್ಗ

ದಶಮಃ ಸರ್ಗಃ

ಮಂದೋದರೀದರ್ಶನಮ್

ತತ್ರ ದಿವ್ಯೋಪಮಂ ಮುಖ್ಯಂ ಸ್ಫಾಟಿಕಂ ರತ್ನಭೂಷಿತಮ್ ।
ಅವೇಕ್ಷಮಾಣೋ ಹನುಮಾನ್ ದದರ್ಶ ಶಯನಾಸನಮ್ ॥ ೧

ದಾಂತಕಾಂಚನಚಿತ್ರಾಂಗೈರ್ವೈದೂರ್ಯೈಶ್ಚ ವರಾಸನೈಃ ।
ಮಹಾರ್ಹಾಸ್ತರಣೋಪೇತೈರುಪಪನ್ನಂ ಮಹಾಧನೈಃ ॥ ೨

ತಸ್ಯ ಚೈಕತಮೇ ದೇಶೇ ಸೋಽಗ್ರ್ಯಮಾಲಾವಿಭೂಷಿತಮ್ ।
ದದರ್ಶ ಪಾಂಡರಂ ಛತ್ರಂ ತಾರಾಧಿಪತಿಸಂನಿಭಮ್ ॥ ೩

ಜಾತರೂಪಪರಿಕ್ಷಿಪ್ತಂ ಚಿತ್ರಭಾನುಸಮಪ್ರಭಮ್ ।
ಅಶೋಕಮಾಲಾವಿತತಂ ದದರ್ಶ ಪರಮಾಸನಮ್ ॥ ೪

ವಾಲವ್ಯಜನಹಸ್ತಾಭಿರ್ವೀಜ್ಯಮಾನಂ ಸಮಂತತಃ ।
ಗಂಧೈಶ್ಚ ವಿವಿಧೈರ್ಜುಷ್ಟಂ ವರಧೂಪೇನ ಧೂಪಿತಮ್ ॥ ೫

ಸರ್ಗ ೧೦

ಹನುಮಂತನು ರಾವಣನ ಅಂತಃಪುರದಲ್ಲಿ ನಿದ್ರಿಸುತ್ತಿದ್ದ ಸ್ತ್ರೀಯರನ್ನೂ ರಾವಣನನ್ನೂ ಕಂಡುದು. ಮಂಡೋದರಿಯನ್ನು ನೋಡಿ ಸೀತೆಯೆಂದು ಭ್ರಮಿಸುವುದು.

ಹನುಮಂತನು ಅಲ್ಲಲ್ಲಿ ನೋಡುತ್ತ ಮುಂದೆ ಹೋಗಲು, ರತ್ನಭೂಷಿತವಾದ ಒಂದು ದಿವ್ಯ ಶಯನಮಂಟಪವನ್ನು ಕಂಡನು. ಅದರಲ್ಲಿ ಸುತ್ತಲೂ ದಂತ, ಚಿನ್ನ ವೈಡೂರ್ಯಾದಿ ರತ್ನಗಳಿಂದ ಅಲಂಕೃತವಾಗಿ, ಅಮೂಲ್ಯವಾದ ಹಾಸಿಗೆಗಳನ್ನು ಹಾಸಿದ್ದ ಮಂಚಗಳಿದ್ದವು. ಮಧ್ಯದಲ್ಲಿ ತಲೆಯಕಡೆ ಪೂರ್ಣ ಚಂದ್ರನಂತಿರುವ ಶ್ವೇತಚ್ಛತ್ರವು ವಿರಾಜಿಸುತ್ತಿದ್ದಿತು. ಅದರ ಕೆಳಗೆ ಸುವರ್ಣ ನಿರ್ಮಿತವಾಗಿ ಸೂರ್ಯನಂತೆ ಪ್ರಜ್ವಲಿಸುತ್ತಲೂ, ರಕ್ತಾಶೋಕ ಪುಷ್ಪಗಳಿಂದ ಅಲಂಕೃತವಾಗಿಯೂ ಇರುವ ಒಂದು ದಿವ್ಯವಾದ ಮಂಚವಿತ್ತು (೧–೪). ಸುತ್ತಲೂ ಯಂತ್ರನಿರ್ಮಿತ

ಪರಮಾಸ್ತರಣಾಸ್ತೀರ್ಣಮಾವಿಕಾಜಿನಸಂವೃತಮ್ ।
ದಾಮಭಿರ್ವರಮಾಲ್ಯಾನಾಂ ಸಮಂತಾದುಪಶೋಭಿತಮ್ ॥ ೬

ತಸ್ಮಿನ್ ಜೀಮೂತಸಂಕಾಶಂ ಪ್ರದೀಪ್ತೋತ್ತಮಕುಂಡಲಮ್ ।
ಲೋಹಿತಾಕ್ಷಂ ಮಹಾಬಾಹುಂ ಮಹಾರಜತವಾಸಸಮ್ ॥ ೭

ಲೋಹಿತೇನಾನುಲಿಪ್ತಾಂಗಂ ಚಂದನೇನ ಸುಗಂಧಿನಾ ।
ಸಂಧ್ಯಾರಕ್ತಮಿವಾಕಾಶೇ ತೋಯದಂ ಸತಟಿದ್ಗಣಮ್ ॥ ೮

ವೃತಮಾಭರಣೈರ್ದಿವ್ಯೈಃ ಸುರೂಪಂ ಕಾಮರೂಪಿಣಮ್ ।
ಸವೃಕ್ಷವನಗುಲ್ಮಾಢ್ಯಂ ಪ್ರಸುಪ್ತಮಿವ ಮಂದರಮ್ ॥ ೯

ಕ್ರೀಡಿತ್ವೋಪರತಂ ರಾತ್ರೌ ವರಾಭರಣಭೂಷಿತಮ್ ।
ಪ್ರಿಯಂ ರಾಕ್ಷಸಕನ್ಯಾನಾಂ ರಾಕ್ಷಸಾನಾಂ ಸುಖಾವಹಮ್ ॥ ೧೦

ಪ್ರತಿಮೆಗಳು ಬೀಸಣಿಗೆಯಿಂದ ಗಾಳಿ ಹಾಕುತ್ತಿದ್ದವು. ಆ ಸ್ಥಳವು ಸುಗಂಧದ್ರವ್ಯಗಳಿಂದ ಘಮಘಮಿಸುತ್ತಿತ್ತು. ಮಂಚದ ಮೇಲೆ ಶ್ರೇಷ್ಠವಾದ ಜಮಖಾನಗಳನ್ನೂ ಮೃದುವಾದ ಉಣ್ಣೆಯ ಬಟ್ಟೆಗಳನ್ನೂ ಹಾಸಿದ್ದರು. ಸುತ್ತಲೂ ಸುಗಂಧಿಯಾದ ಹೂಮಾಲೆಗಳು ತೂಗಾಡುತ್ತಿದ್ದವು (೫–೬). ಹನುಮಂತನು ಅವೆಲ್ಲವನ್ನೂ ಗಮನಿಸುತ್ತ ಮುಂದೆ ಬರಲು, ಮಂಚದ ಮೇಲೆ ಸಾಕ್ಷಾತ್ ರಾವಣನೇ ಮಲಗಿ ನಿದ್ರಿಸುತ್ತಿದ್ದನು! ಮೇಘದಂತೆ ಕಪ್ಪು ದೇಹದ ಆ ರಾವಣನು ಕಿವಿಯಲ್ಲಿ ಪ್ರಜ್ವಲಿಸುವ ಕುಂಡಲಗಳನ್ನು ಧರಿಸಿ, ಚಿನ್ನದ ಜರತಾರಿಯುಳ್ಳ ರೇಷ್ಮೆಯ ದುಕೂಲವನ್ನುಟ್ಟಿದ್ದನು. ಮೈಗೆಲ್ಲ ರಕ್ತಚಂದನವನ್ನು ಬಳಿದುಕೊಂಡಿದ್ದ ಅವನು, ಸಂಜೆಯಹೊತ್ತು ಮಿಂಚಿನಿಂದ ಕೂಡಿದ ನಸುಗೆಂಪಾದ ಮೋಡದಂತೆ ಕಂಗೊಳಿಸುತ್ತಿದ್ದನು (೭–೮). ರೂಪವಂತನೂ ದಿವ್ಯಾಭರಣಧಾರಿಯೂ ಆದ ರಾವಣನು ಅರಳಿದ ಮರಗಳಿಂದ ಸಹಿತವಾದ ಮಂದರಪರ್ವತದಂತೆ ಮಲಗಿದ್ದನು (೯). ರಾಕ್ಷಸಸ್ತ್ರೀಯರಿಗೆ ಪ್ರಿಯನಾದ ಆ ರಾಕ್ಷಸೇಂದ್ರನು ರಾತ್ರಿಯಲ್ಲಿ ಬಹಳ ಹೊತ್ತಿನವರೆಗೆ ಕುಡಿದು, ಕ್ರೀಡಿಸಿ ಈಗ ಮೈಮರೆತು ನಿದ್ರಿಸುತ್ತಿದ್ದನು

ಪೀತ್ವಾಪ್ಯುಪರತಂ ಚಾಪಿ ದದರ್ಶ ಸ ಮಹಾಕಪಿಃ ।
ಭಾಸ್ವರೇ ಶಯನೇ ವೀರಂ ಪ್ರಸುಪ್ತಂ ರಾಕ್ಷಸಾಧಿಪಮ್ ॥ ೧೧

ನಿಃಶ್ವಸಂತಂ ಯಥಾ ನಾಗಂ ರಾವಣಂ ವಾನರರ್ಷಭಃ ।
ಆಸಾದ್ಯ ಪರಮೋದ್ವಿಗ್ನಃ ಸೋಽಪಾಸರ್ಪತ್ ಸುಭೀತವತ್ ॥ ೧೨

ಅಥಾರೋಹಣಮಾಸಾದ್ಯ ವೇದಿಕಾಂತರಮಾಶ್ರಿತಃ ।
ಕ್ಷೀಬಂ ರಾಕ್ಷಸಶಾರ್ದೂಲಂ ಪ್ರೇಕ್ಷತೇ ಸ್ಮ ಮಹಾಕಪಿಃ ॥ ೧೩

ಶುಶುಭೇ ರಾಕ್ಷಸೇಂದ್ರಸ್ಯ ಸ್ವಪತಃ ಶಯನೋತ್ತಮಮ್ ।
ಗಂಧಹಸ್ತಿನಿ ಸಂವಿಷ್ಟೇ ಯಥಾ ಪ್ರಸ್ರವಣಂ ಮಹತ್ ॥ ೧೪

ಕಾಂಚನಾಂಗದಸನ್ನದ್ಧೌ ಚ ದದರ್ಶ ಸ ಮಹಾತ್ಮನಃ ।
ವಿಕ್ಷಿಪ್ತೌ ರಾಕ್ಷಸೇಂದ್ರಸ್ಯ ಭುಜಾವಿಂದ್ರಧ್ವಜೋಪಮೌ ॥ ೧೫

ಐರಾವತವಿಷಾಣಾಗ್ರೈರಾಪೀಡನಕೃತವ್ರಣೌ ।
ವಜ್ರೋಲ್ಲಿಖಿತಪೀನಾಂಸೌ ವಿಷ್ಣುಚಕ್ರಪರಿಕ್ಷತೌ ॥ ೧೬

ಪೀನೌ ಸಮಸುಜಾತಾಂಸೌ ಸಂಗತೌ ಬಲಸಂಯುತೌ ।
ಸುಲಕ್ಷಣನಖಾಂಗುಷ್ಠೌ ಸ್ವಂಗುಲೀಯಕಲಕ್ಷಿತೌ ॥ ೧೭

(೧೦–೧೧). ಬುಸುಗುಟ್ಟುವ ಮಹಾಸರ್ಪದಂತೆ ಉಸಿರು ಬಿಡುತ್ತಿದ್ದ ರಾವಣನನ್ನು ಕಂಡೊಡನೆ, ಹನುಮಂತನು ಗಾಬರಿಗೊಂಡವನಂತೆ ಅವನನ್ನು ನೋಡಲಾರದೆ ಹಿಂದಕ್ಕೆ ಸರಿದನು. ಸೋಪಾನಮಾರ್ಗವಾಗಿ ಇನ್ನೊಂದು ವೇದಿಕೆಯ ಮೇಲೆ ಹತ್ತಿ ರಾವಣನನ್ನು ನೋಡುತ್ತ ಕುಳಿತನು (೧೨–೧೩). ಅವನ ಹಾಸಿಗೆಯು ಮದ್ದಾನೆಯು ನುಗ್ಗಿದ ಗಿರಿನದಿಯಂತೆ ಕಲಕಿಹೋಗಿದ್ದಿತು. ಚಿನ್ನದ ಭುಜಕೀರ್ತಿಗಳಿಂದ ಅಲಂಕೃತವಾಗಿ ಹಾಸಿಗೆಯ ಮೇಲೆ ಚಾಚಿದ್ದ ಅವನ ಬಾಹುಗಳು ಇಂದ್ರಧ್ವಜಗಳಂತೆ ಶೋಭಿಸುತ್ತಿದ್ದವು (೧೪–೧೫). ಆ ಬಾಹುಗಳ ಒಂದು ಪಾರ್ಶ್ವದಲ್ಲಿ ಐರಾವತದ ಕೋರೆಯ ಹಲ್ಲಿನಿಂದಾದ ಗಾಯ; ಇನ್ನೊಂದು ಕಡೆ ವಜ್ರಾಯುಧದ ಪ್ರಹಾರದಿಂದಾದ ಗುರುತು; ಇನ್ನೊಂದು ಜಾಗದಲ್ಲಿ ವಿಷ್ಣುವಿನ ಚಕ್ರದ ಪೆಟ್ಟಿನಿಂದಾದ ಕಲೆ! (೧೬). ಪುಷ್ಟವಾಗಿಯೂ, ಬಲಸಂಪನ್ನವಾಗಿಯೂ

ಸಂಹತೌ ಪರಿಘಾಕಾರೌ ವೃತ್ತೌ ಕರಿಕರೋಪಮೌ ।
ವಿಕ್ಷಿಪ್ತೌ ಶಯನೇ ಶುಭ್ರೇ ಪಂಚಶೀರ್ಷಾವಿವೋರಗೌ ॥ ೧೮

ಶಶಕ್ಷತಜಕಲ್ಪೇನ ಸುಶೀತೇನ ಸುಗಂಧಿನಾ ।
ಚಂದನೇನ ಪರಾರ್ಧ್ಯೇನ ಸ್ವನುಲಿಪ್ತೌ ಸ್ವಲಂಕೃತೌ ॥ ೧೯

ಉತ್ತಮಸ್ತ್ರೀವಿಮೃದಿತೌ ಗಂಧೋತ್ತಮನಿಷೇವಿತೌ ।
ಯಕ್ಷಪನ್ನಗಗಂಧರ್ವದೇವದಾನವರಾವಿಣೌ ॥ ೨೦

ದದರ್ಶ ಸ ಕಪಿಸ್ತಸ್ಯ ಬಾಹೂ ಶಯನಸಂಸ್ಥಿತೌ ।
ಮಂದರಸ್ಯಾಂತರೇ ಸುಪ್ತೌ ಮಹಾಹೀ ರುಷಿತಾವಿವ ॥ ೨೧

ತಾಭ್ಯಾಂ ಸ ಪರಿಪೂರ್ಣಾಭ್ಯಾಂ ಭುಜಾಭ್ಯಾಂ ರಾಕ್ಷಸೇಶ್ವರಃ ।
ಶುಶುಭೇಽಚಲಸಂಕಾಶಃ ಶೃಂಗಾಭ್ಯಾಮಿವ ಮಂದರಃ ॥ ೨೨

ಚೂತಪುಂನಾಗಸುರಭಿರ್ಬಕುಲೋತ್ತಮಸಂಯುತಃ ।
ಮೃಷ್ಟಾನ್ನರಸಸಂಯುಕ್ತಃ ಪಾನಗಂಧಪುರಃಸರಃ ॥ ೨೩

ತಸ್ಯ ರಾಕ್ಷಸಸಿಂಹಸ್ಯ ನಿಶ್ಚಕ್ರಾಮ ಮಹಾಮುಖಾತ್ ।
ಶಯಾನಸ್ಯ ವಿನಿಃಶ್ವಾಸಃ ಪೂರಯನ್ನಿವ ತದ್ಗೃಹಮ್ ॥ ೨೪

ಮೈಯಳತೆಗೆ ತಕ್ಕುದಾಗಿಯೂ ಇದ್ದ ಆ ತೋಳುಗಳು, ಶುಭಲಕ್ಷಣಯುಕ್ತವಾದ ಉಗುರುಗಳಿಂದಲೂ ಹೆಬ್ಬೆರಳುಗಳಿಂದಲೂ ಶೋಭಿಸುತ್ತಿದ್ದವು. ಆನೆಯ ಸೊಂಡಿಲುಗಳಂತಿದ್ದ ಆ ತೋಳುಗಳು ಐದು ಹೆಡೆಯ ಸರ್ಪಗಳಂತೆ ಹಾಸಿಗೆಯಲ್ಲಿ ಚಾಚಿಕೊಂಡಿದ್ದವು (೧೭–೧೮). ಆ ತೋಳುಗಳು ಮೊಲದ ರಕ್ತದಂತೆ ಕೆಂಪಾದ ದಿವ್ಯಚಂದನದಿಂದ ಲೇಪಿಸಲ್ಪಟ್ಟಿದ್ದವು. ಉತ್ತಮ ಸ್ತ್ರೀಯರಿಂದ ಒತ್ತಲ್ಪಟ್ಟ ಆ ತೋಳುಗಳು ಎಷ್ಟೋ ಮಂದಿ ಯಕ್ಷ, ಪನ್ನಗ, ಗಂಧರ್ವರನ್ನು, ದೇವದಾನವರನ್ನು ಗೋಳಾಡಿಸಿದ್ದವು; (೧೯–೨೦). ಹಾಸಿಗೆಯ ಮೇಲಿದ್ದ ಆ ಭುಜಗಳು ಮಂದರಪರ್ವತದ ಮೇಲೆ ಮಲಗಿದ್ದ ಕ್ರುದ್ಧಸರ್ಪಗಳಂತೆ ಕಾಣಿಸಿದವು. ಆ ಭುಜಗಳಿಂದ ರಾವಣನು ಶಿಖರಸಹಿತವಾದ ಪರ್ವತದಂತೆ ಕಾಣುತ್ತಿದ್ದನು (೨೧–೨೨). ಆ ರಾಕ್ಷಸೇಂದ್ರನು ಉಸಿರು ಬಿಡುವಾಗ ಅನೇಕ ಬಗೆಯ ಹೂಗಳ

ಮುಕ್ತಾಮಣಿವಿಚಿತ್ರೇಣ ಕಾಂಚನೇನ ವಿರಾಜಿತಮ್ ।
ಮುಕುಟೇನಾಪವೃತ್ತೇನ ಕುಂಡಲೋಜ್ಜ್ವಲಿತಾನನಮ್ ॥ ೨೫

ರಕ್ತಚಂದನದಿಗ್ಧೇನ ತಥಾ ಹಾರೇಣ ಶೋಭಿನಾ ।
ಪೀನಾಯತವಿಶಾಲೇನ ವಕ್ಷಸಾಭಿವಿರಾಜಿತಮ್ ॥ ೨೬

ಪಾಂಡರೇಣಾಪವಿದ್ಧೇನ ಕ್ಷೌಮೇಣ ಕ್ಷತಜೇಕ್ಷಣಮ್ ।
ಮಹಾರ್ಹೇಣ ಸುಸಂವೀತಂ ಪೀತೇನೋತ್ತಮವಾಸಸಾ ॥ ೨೭

ಮಾಷರಾಶಿಪ್ರತೀಕಾಶಂ ನಿಃಶ್ವಸಂತಂ ಭುಜಂಗವತ್ ।
ಗಾಂಗೇ ಮಹತಿ ತೋಯಾಂತೇ ಪ್ರಸುಪ್ತಮಿವ ಕುಂಜರಮ್ ॥ ೨೮

ಚತುರ್ಭಿಃ ಕಾಂಚನೈರ್ದೀಪೈರ್ದೀಪ್ಯಮಾನಚತುರ್ದಿಶಮ್ ।
ಪ್ರಕಾಶೀಕೃತಸರ್ವಾಂಗಂ ಮೇಘಂ ವಿದ್ಯುದ್ಗಣೈರಿವ ॥ ೨೯

ಪಾದಮೂಲಗತಾಶ್ಚಾಸ್ಯಾ ದದರ್ಶ ಸುಮಹಾತ್ಮನಃ ।
ಪತ್ನೀಃ ಸ ಪ್ರಿಯಭಾರ್ಯಸ್ಯ ತಸ್ಯ ರಕ್ಷಃಪತೇರ್ಗೃಹೇ ॥ ೩೦

ಶಶಿಪ್ರಕಾಶವದನಾಶ್ಚಾರುಕುಂಡಲಭೂಷಿತಾಃ ।
ಅಮ್ಲಾನಮಾಲ್ಯಾಭರಣಾ ದದರ್ಶ ಹರಿಯೂಥಪಃ ॥ ೩೧

ಪರಿಮಳವೂ ಮೃಷ್ಟಾನ್ನದ ವಾಸನೆಯೂ ಮದ್ಯದ ಗಂಧವೂ ಹೊರಗೆ ಬಂದು ಶಯನಗೃಹವನ್ನೇ ವ್ಯಾಪಿಸುತ್ತಿತ್ತು (೨೩–೨೪). ಅವನ ತಲೆಯಮೇಲೆ ಸ್ವಲ್ಪ ಕದಲಿದ ಮುಕ್ತಾಭೂಷಿತಕಾಂಚನ ಕಿರೀಟವೂ ಕಿವಿಯ ಕುಂಡಲಗಳೂ ವಕ್ಷಸ್ಥಳದಲ್ಲಿ ಶೋಭಿಸುತ್ತಿದ್ದ ಚಂದನಲಿಪ್ತ ಮುಕ್ತಾಹಾರವೂ ಉಟ್ಟಿದ್ದ ಜರತಾರಿ ದುಕೂಲವೂ ಹೊದೆದ ಪೀತಾಂಬರವೂ ರಾವಣನ ರಾಜತೇಜಸ್ಸನ್ನು ಬೆಳಗಿಸುತ್ತಿದ್ದವು (೨೫–೨೭). ಸರ್ಪದಂತೆ ಉಸಿರಾಡುತ್ತ ಶುಭ್ರವಾದ ಹಾಸಿಗೆಯಮೇಲೆ ಉದ್ದಿನ ರಾಶಿಯನ್ನು ಪೇರಿಸಿದಂತೆ ಇದ್ದ ರಾವಣನು, ಗಂಗಾಪ್ರವಾಹದಲ್ಲಿಳಿದ ಆನೆಯಂತೆ ಕಾಣುತ್ತಿದ್ದನು! (೨೮). ಶಯನ ಮಂಟಪದ ನಾಲ್ಕೂ ಕಡೆಯಲ್ಲಿಯೂ ಸುವರ್ಣದ ದೀಪಸ್ತಂಭಗಳು ಉರಿಯುತ್ತಿರಲು, ಮಿಂಚುಗಳ ಬೆಳಕಿನಲ್ಲಿ ಕಾಣುವ ಮೇಘ

ನೃತ್ತವಾದಿತ್ರಕುಶಲಾ ರಾಕ್ಷಸೇಂದ್ರಭುಜಾಂಕಗಾಃ ।
ವರಾಭರಣಧಾರಿಣ್ಯೋ ನಿಷಣ್ಣಾ ದದೃಶೇ ಹರಿಃ ॥ ೩೨

ವಜ್ರವೈದೂರ್ಯಗರ್ಭಾಣಿ ಶ್ರವಣಾಂತೇಷು ಯೋಷಿತಾಮ್ ।
ದದರ್ಶ ತಾಪನೀಯಾನಿ ಕುಂಡಲಾನ್ಯಂಗದಾನಿ ಚ ॥ ೩೩

ತಾಸಾಂ ಚಂದ್ರೋಪಮೈರ್ವಕ್ತ್ರೈಃ ಶುಭ್ರೈರ್ಲಲಿತಕುಂಡಲೈಃ ।
ವಿರರಾಜ ವಿಮಾನಂ ತನ್ನಭಸ್ತಾರಾಗಣೈರಿವ ॥ ೩೪

ಮದವ್ಯಾಯಾಮಖಿನ್ನಾಸ್ತಾ ರಾಕ್ಷಸೇಂದ್ರಸ್ಯ ಯೋಷಿತಃ ।
ತೇಷು ತೇಷ್ವವಕಾಶೇಷು ಪ್ರಸುಪ್ತಾಸ್ತನುಮಧ್ಯಮಾಃ ॥ ೩೫

ಅಂಗಹಾರೈಸ್ತಥೈವಾನ್ಯಾ ಕೋಮಲೈರ್ನೃತ್ತಶಾಲಿನೀ ।
ವಿನ್ಯಸ್ತಶುಭಸರ್ವಾಂಗೀ ಪ್ರಸುಪ್ತಾ ವರವರ್ಣಿನೀ ॥ ೩೬

ಕಾಚಿದ್ವೀಣಾಂ ಪರಿಷ್ವಜ್ಯ ಪ್ರಸುಪ್ತಾ ಸಂಪ್ರಕಾಶತೇ ।
ಮಹಾನದೀಪ್ರಕೀರ್ಣೇವ ನಲಿನೀ ಪೋತಮಾಶ್ರಿತಾ ॥ ೩೭

ದಂತೆ ತೋರುತ್ತಿದ್ದನು (೨೯). ಆಮೇಲೆ ಕಾಲಿನ ಕಡೆಯಲ್ಲಿ ಮಲಗಿದ್ದ ರಾವಣನ ಪತ್ನಿಯರನ್ನು ಆಂಜನೇಯನು ನೋಡಿದನು (೩೦). ಅವರೆಲ್ಲರೂ ಚಂದ್ರಮುಖಿಯರು. ವಜ್ರವೈಡೂರ್ಯಗಳನ್ನು ಕೆತ್ತಿದ ಕುಂಡಲಗಳನ್ನೂ, ಹೂಮಾಲೆಗಳನ್ನೂ ಧರಿಸಿದವರು. ನೃತ್ಯವಾದ್ಯಗಳಲ್ಲಿ ನಿಪುಣೆಯರು. ರತ್ನಾಭರಣ ಭೂಷಿತೆಯರು. ರಾವಣನ ತೋಳುತೆಕ್ಕೆಗೆ ಭಾಗಿಗಳು (೩೧–೩೨). ಅವರೆಲ್ಲರೂ ವಜ್ರವೈಡೂರ್ಯಖಚಿತವಾದ ಕರ್ಣಕುಂಡಲಗಳನ್ನೂ ತೋಳ್ಬಂದಿಗಳನ್ನೂ ಧರಿಸಿದ್ದರು. ನಕ್ಷತ್ರ ಸದೃಶವಾದ ಅವರ ಕುಂಡಲಗಳಿಂದಲೂ, ಚಂದ್ರನಿಗೆಣೆಯಾದ ಮುಖಗಳಿಂದಲೂ ಆ ಶಯನಮಂಟಪವು ಆಕಾಶದಂತೆ ಶೋಭಿಸುತ್ತಿತ್ತು (೩೩–೩೪). ಆ ರಾಕ್ಷಸತರುಣಿಯರು ನೃತ್ಯಾದಿ ಕ್ರೀಡೆಗಳಿಂದ ಬಳಲಿ ತಮಗೆ ತೋರಿದ ಸ್ಥಳದಲ್ಲಿ ಮಲಗಿದ್ದರು (೩೫). ಒಬ್ಬ ನೃತ್ಯ ಕೋವಿದೆಯು ಕೈಕಾಲುಗಳನ್ನು ನೃತ್ಯಭಂಗಿಯಲ್ಲಿಯೇ ಇಟ್ಟುಕೊಂಡು ನಿದ್ರಿಸುತ್ತಿದ್ದಳು! ಇನ್ನೊಬ್ಬಳು ನದಿಯಲ್ಲಿ ತೇಲಿಹೋಗುತ್ತಿರುವ ತಾವರೆ ಬಳ್ಳಿಯು ಆಕಸ್ಮಾತ್ ದೋಣಿಯೊಂದನ್ನು ಸುತ್ತಿ

ಅನ್ಯಾ ಕಕ್ಷಗತೇನೈವ ಮಡ್ಡುಕೇನಾಸಿತೇಕ್ಷಣಾ ।
ಪ್ರಸುಪ್ತಾ ಭಾಮಿನೀ ಭಾತಿ ಬಾಲಪುತ್ರೇವ ವತ್ಸಲಾ ॥ ೩೮

ಪಟಹಂ ಚಾರುಸರ್ವಾಂಗೀ ಪೀಡ್ಯ ಶೇತೇ ಶುಭಸ್ತನೀ ।
ಚಿರಸ್ಯ ರಮಣಂ ಲಬ್ಧ್ವಾ ಪರಿಷ್ವಜ್ಯೇವ ಭಾಮಿನೀ ॥ ೩೯

ಕಾಚಿದ್ವಂಶಂ ಪರಿಷ್ವಜ್ಯ ಸುಪ್ತಾ ಕಮಲಲೋಚನಾ ।
ರಹಃ ಪ್ರಿಯತಮಂ ಗೃಹ್ಯ ಸಕಾಮೇವ ಚ ಕಾಮಿನೀ ॥ ೪೦

ವಿಪಂಚೀಂ ಪರಿಗೃಹ್ಯಾನ್ಯಾ ನಿಯತಾ ನೃತ್ತಶಾಲಿನೀ ।
ನಿದ್ರಾವಶಮನುಪ್ರಾಪ್ತಾ ಸಹಕಾಂತೇವ ಭಾಮಿನೀ ॥ ೪೧

ಅನ್ಯಾ ಕನಕಸಂಕಾಶೈರ್ಮೃದುಪೀನೈರ್ಮನೋರಮೈಃ ।
ಮೃದಂಗಂ ಪರಿಪೀಡ್ಯಾಂಗೈಃ ಪ್ರಸುಪ್ತಾ ಮತ್ತಲೋಚನಾ ॥ ೪೨

ಭುಜಪಾರ್ಶ್ವಾಂತರಸ್ಥೇನ ಕಕ್ಷಗೇನ ಕೃಶೋದರೀ ।
ಪಣವೇನ ಸಹಾನಿಂದ್ಯಾ ಸುಪ್ತಾ ಮದಕೃತಶ್ರಮಾ ॥ ೪೩

ಕೊಂಡಂತೆ ವೀಣೆಯನ್ನು ಅಪ್ಪಿಕೊಂಡು ಮಲಗಿದ್ದಳು. ಮತ್ತೊಬ್ಬಳು ಕಂಕುಳಲ್ಲಿ ಮಗುವನ್ನು ಮಲಗಿಸಿಕೊಳ್ಳುವಂತೆ ಮೃದಂಗವನ್ನು ಇಟ್ಟುಕೊಂಡಿದ್ದಳು (೩೬–೩೮). ಮಗದೊಬ್ಬಳು ಬಹುಕಾಲದಮೇಲೆ ಅಗಲಿಬಂದ ಕಾಂತನನ್ನು ಅಪ್ಪಿಕೊಳ್ಳುವಂತೆ ತಮಟೆಯನ್ನು ಅಪ್ಪಿ ಮಲಗಿದ್ದಳು! ಒಬ್ಬ ಸುಂದರಿಯು ರಹಸ್ಯದಲ್ಲಿ ಪ್ರಿಯನನ್ನು ಆಲಂಗಿಸಿಕೊಳ್ಳುವಂತೆ ಕೊಳಲನ್ನು ಆಲಂಗಿಸಿ ಕೊಂಡಿದ್ದಳು! ಇನ್ನೊಬ್ಬ ನೃತ್ಯಕುಶಲೆಯಾದ ತರುಣಿಯು ತನ್ನ ಪತಿಯೊಡನೆ ನಿದ್ರಿಸುವಂತೆ ಪಕ್ಕದಲ್ಲಿ ವೀಣೆಯನ್ನು ಇಟ್ಟುಕೊಂಡಿದ್ದಳು! (೩೯–೪೧). ಒಬ್ಬ ಯುವತಿಯು ಬಂಗಾರದಂತೆ ಮಿರುಗುವ ತನ್ನ ಅವಯವಗಳಿಂದ ಒಂದು ಮದ್ದಲೆಯನ್ನು ತಬ್ಬಿಕೊಂಡಿದ್ದಳು. ಇನ್ನೊಬ್ಬಳು ಪಣವವೆಂಬ ವಾದ್ಯವನ್ನು ಮಗ್ಗುಲಲ್ಲಿಟ್ಟುಕೊಂಡು ಮೈಮರೆತು ನಿದ್ರಿಸುತ್ತಿದ್ದಳು. ಒಂದು ಪಕ್ಕದಲ್ಲಿ ಪತಿಯನ್ನೂ

ಡಿಂಡಿಮಂ ಪರಿಗೃಹ್ಯಾನ್ಯಾ ತಥೈವಾಸಕ್ತಡಿಂಡಿಮಾ ।
ಪ್ರಸುಪ್ತಾ ತರುಣಂ ವತ್ಸಮುಪಗೂಹ್ಯೇವ ಭಾಮಿನೀ ॥ ೪೪

ಕಾಚಿದಾಡಂಬರಂ ನಾರೀ ಭುಜಸಂಯೋಗಪೀಡಿತಮ್ ।
ಕೃತ್ವಾ ಕಮಲಪತ್ರಾಕ್ಷೀ ಪ್ರಸುಪ್ತಾ ಮದಮೋಹಿತಾ ॥ ೪೫

ಕಲಶೀಮಪವಿಧ್ಯಾನ್ಯಾ ಪ್ರಸುಪ್ತಾ ಭಾತಿ ಭಾಮಿನೀ ।
ವಸಂತೇ ಪುಷ್ಪಶಬಲಾ ಮಾಲೇವ ಪರಿಮಾರ್ಜಿತಾ ॥ ೪೬

ಪಾಣಿಭ್ಯಾಂ ಚ ಕುಚೌ ಕಾಚಿತ್ ಸುವರ್ಣಕಲಶೋಪಮೌ ।
ಉಪಗೂಹ್ಯಾಬಲಾ ಸುಪ್ತಾ ನಿದ್ರಾಬಲಪರಾಜಿತಾ ॥ ೪೭

ಅನ್ಯಾ ಕಮಲಪತ್ರಾಕ್ಷೀ ಪೂರ್ಣೇಂದುಸದೃಶಾನನಾ ।
ಅನ್ಯಾಮಾಲಿಂಗ್ಯ ಸುಶ್ರೋಣೀಂ ಪ್ರಸುಪ್ತಾ ಮದವಿಹ್ವಲಾ ॥ ೪೮

ಆತೋದ್ಯಾನಿ ವಿಚಿತ್ರಾಣಿ ಪರಿಷ್ವಜ್ಯಾಪರಾಃ ಸ್ತ್ರಿಯಃ ।
ನಿಪೀಡ್ಯ ಚ ಕುಚೈಃ ಸುಪ್ತಾಃ ಕಾಮಿನ್ಯಃ ಕಾಮುಕಾನಿವ ॥ ೪೯

ತಾಸಾಮೇಕಾಂತವಿನ್ಯಸ್ತೇ ಶಯಾನಾಂ ಶಯನೇ ಶುಭೇ ।
ದದರ್ಶ ರೂಪಸಂಪನ್ನಾಮಪರಾಂ ಸ ಕಪಿಃ ಸ್ತ್ರಿಯಮ್ ॥ ೫೦

ಇನ್ನೊಂದು ಪಕ್ಕದಲ್ಲಿ ಮಗುವನ್ನೂ ಮಲಗಿಸಿಕೊಳ್ಳುವಂತೆ, ಎರಡು ಪಕ್ಕಗಳಲ್ಲಿಯೂ ಡಿಂಡಿಮವಾದ್ಯಗಳನ್ನು ಇರಿಸಿಕೊಂಡವಳು ಇನ್ನೊಬ್ಬಳು! (೪೨–೪೪). ಆಡಂಬರ ಎಂಬ ವಾದ್ಯವನ್ನು ಎದೆಯಮೇಲೆ ಆಲಿಂಗಿಸಿ ಮಲಗಿದವಳು ಒಬ್ಬಳು! ಒಬ್ಬ ಸುಂದರಿಯು ಮೈಮರೆತು ನೀರಿನ ಪಾತ್ರೆಯನ್ನು ಕವುಚಿಕೊಂಡುದರಿಂದ, ನೀರು ಚಿಮುಕಿಸಿದ ಹೂಮಾಲೆಯಂತೆ ಶೋಭಿಸುತ್ತಿದ್ದಳು (೪೫–೪೬). ಒಬ್ಬಳು ಸುವರ್ಣಕಲಶದಂತಿದ್ದ ತನ್ನ ಸ್ತನಗಳನ್ನೇ ಅಪ್ಪಿಕೊಂಡಿದ್ದಳು. ಒಬ್ಬ ಕಮಲನೇತ್ರಿಯು ತನ್ನ ಸಖಿಯನ್ನೇ ಆಲಿಂಗಿಸಿ ಮೈಮರೆತು ಮಲಗಿದ್ದಳು (೪೭–೪೮). ಅನೇಕ ಕಾಮಿನಿಯರು ಕಾಮುಕರನ್ನು ಗಾಢವಾಗಿ ಆಲಿಂಗಿಸಿಕೊಳ್ಳುವಂತೆ ನಾನಾಬಗೆಯ ವಾದ್ಯಗಳನ್ನು ಆಲಿಂಗಿಸಿಕೊಂಡು ಮಲಗಿದ್ದರು (೪೯). ಆಂಜನೇಯನು ಆ ಹೆಂಗಸರನ್ನು ನೋಡುತ್ತ ಸ್ವಲ್ಪ ದೂರದಲ್ಲಿ ಪ್ರತ್ಯೇಕವಾದ ಮಂಚದಮೇಲೆ ಮಲಗಿದ್ದ ಪರಮಸುಂದರಿಯಾದ

ಮುಕ್ತಾಮಣಿಸಮಾಯುಕ್ತೈರ್ಭೂಷಣೈಃ ಸುವಿಭೂಷಿತಾಮ್ ।
ವಿಭೂಷಯಂತೀಮಿವ ತತ್ ಸ್ವಶ್ರಿಯಾ ಭವನೋತ್ತಮಮ್ ॥ ೫೧

ಗೌರೀಂ ಕನಕವರ್ಣಾಂಗೀಮಿಷ್ಟಾಮಂತಃಪುರೇಶ್ವರೀಮ್ ।
ಕಪಿರ್ಮಂದೋದರೀಂ ತತ್ರ ಶಯಾನಾಂ ಚಾರುರೂಪಿಣೀಮ್ ॥ ೫೨

ಸ ತಾಂ ದೃಷ್ಟ್ವಾ ಮಹಾಬಾಹುರ್ಭೂಷಿತಾಂ ಮಾರುತಾತ್ಮಜಃ ।
ತರ್ಕಯಾಮಾಸ ಸೀತೇತಿ ರೂಪಯೌವನಸಂಪದಾ ॥ ೫೩

ಹರ್ಷೇಣ ಮಹತಾ ಯುಕ್ತೋ ನನಂದ ಹರಿಯೂಥಪಃ ॥
ಆಸ್ಫೋಟಯಾಮಾಸ ಚುಚುಂಬ ಪುಚ್ಛಂ
ನನಂದ ಚಿಕ್ರೀಡ ಜಗೌ ಜಗಾಮ ।
ಸ್ತಂಭಾನರೋಹನ್ನಿಪಪಾತ ಭೂಮೌ
ನಿದರ್ಶಯನ್ ಸ್ವಾಂ ಪ್ರಕೃತಿಂ ಕಪೀನಾಮ್ ॥ ೫೪

ಇತಿ ಶ್ರೀಮದ್ರಾಮಾಯಣೇ ಸುಂದರಕಾಂಡೇ ದಶಮಃ ಸರ್ಗಃ

ಸ್ತ್ರೀಯೊಬ್ಬಳನ್ನು ಕಂಡನು. ಆಕೆಯು ಮುತ್ತಿನ ಆಭರಣಗಳನ್ನು ಧರಿಸಿ, ತನ್ನ ಸೌಂದರ್ಯದಿಂದ ಅಂತಃಪುರಕ್ಕೇ ಭೂಷಣಪ್ರಾಯಳಾಗಿದ್ದಳು (೫೦–೫೧). ಚಿನ್ನದ ಮೈಬಣ್ಣದಿಂದ ಕಂಗೊಳಿಸುತ್ತಿದ್ದ ಆ ಸುಂದರಾಂಗಿಯು, ರಾವಣನ ಅಂತಃಪುರಕ್ಕೆ ಒಡತಿಯಾದ ಮಂಡೋದರಿ. ಹನುಮಂತನು ಅವಳ ರೂಪವನ್ನೂ ಯೌವನಸಂಪತ್ತನ್ನೂ ನೋಡಿ ಇವಳೇ ಸೀತೆಯೆಂದು ಭ್ರಮಿಸಿ ಆನಂದದಿಂದ ಹಿಗ್ಗಿಹೋದನು (೫೨–೫೩). ಅವನು ಆನಂದಪರವಶನಾಗಿ ಬಾಲವನ್ನು ಬಡಿದನು ! ಬಾಲವನ್ನೆತ್ತಿ ಮುತ್ತು ಕೊಟ್ಟನು ! ಹರ್ಷದಿಂದ ಹಿಗ್ಗಿ ಹಾಡುತ್ತ ಕುಣಿದಾಡಿದನು ! ಇಲ್ಲಿಂದಲ್ಲಿಗೆ ತಿರುಗಾಡಿದನು ! ಸ್ತಂಭಗಳನ್ನು ಹತ್ತಿ ಧುಮುಕಿದನು ! ಹೀಗೆ ತನ್ನ ಕಪಿಚೇಷ್ಟೆಗಳನ್ನೆಲ್ಲಾ ಒಂದು ಕ್ಷಣದಲ್ಲಿ ತೋರಿಸಿಬಿಟ್ಟನು ! (೫೪).

ಇಲ್ಲಿಗೆ ಶ್ರೀಮದ್ರಾಮಾಯಣದ ಸುಂದರಕಾಂಡದಲ್ಲಿ ಹತ್ತನೆಯ ಸರ್ಗ

ಏಕಾದಶಃ ಸರ್ಗಃ

ಪಾನಭೂಮಿ ವಿಚಯಃ

ಅವಧೂಯ ಚ ತಾಂ ಬುದ್ಧಿಂ ಬಭೂವಾವಸ್ಥಿತಸ್ತದಾ ।
ಜಗಾಮ ಚಾಪರಾಂ ಚಿಂತಾಂ ಸೀತಾಂ ಪ್ರತಿ ಮಹಾಕಪಿಃ ॥ ೧

ನ ರಾಮೇಣ ವಿಯುಕ್ತಾ ಸಾ ಸ್ವಪ್ತುಮರ್ಹತಿ ಭಾಮಿನೀ ।
ನ ಭೋಕ್ತುಂ ನಾಪ್ಯಲಂಕರ್ತುಂ ನ ಪಾನಮುಪಸೇವಿತುಮ್ ॥ ೨

ನಾನ್ಯಂ ನರಮುಪಸ್ಥಾತುಂ ಸುರಾಣಾಮಪಿ ಚೇಶ್ವರಮ್ ।
ನ ಹಿ ರಾಮಸಮಃ ಕಶ್ಚಿದ್ವಿದ್ಯತೇ ತ್ರಿದಶೇಷ್ವಪಿ ॥ ೩

ಅನ್ಯೇಯಮಿತಿ ನಿಶ್ಚಿತ್ಯ ಪಾನಭೂಮೌ ಚಚಾರ ಸಃ ।
ಕ್ರೀಡಿತೇನಾಪರಾಃ ಕ್ಲಾಂತಾ ಗೀತೇನ ಚ ತಥಾಪರಾಃ ॥ ೪

ಸರ್ಗ ೧೧

ಹನುಮಂತನು ಮಂಡೋದರಿಯನ್ನು ಸೀತೆಯಲ್ಲವೆಂದು ನಿಶ್ಚಯಿಸಿ
ಪಾನಭೂಮಿಯಲ್ಲಿ ಹುಡುಕಿದುದು. ಪಾನಭೂಮಿ ವರ್ಣನೆ.
ಪರಸ್ತ್ರೀಯರನ್ನು ನೋಡಿದ್ದರಿಂದ ಅವನಿಗಾದ ಚಿಂತೆ.

ಆಮೇಲೆ ಹನುಮಂತನು ಮತ್ತೆ 'ಎಂದಿಗಾದರೂ ಉಂಟೆ? ಸರ್ವಥಾ ಇವಳು ಸೀತೆಯಲ್ಲ' ಎಂದು ನಿರ್ಧರಿಸಿ 'ಸೀತೆ ಎಲ್ಲಿರಬಹುದು?' ಎಂದು ದೊಡ್ಡ ಚಿಂತೆಗೊಳಗಾದನು (೧). 'ಶ್ರೀರಾಮನನ್ನಗಲಿ ಸೀತಾದೇವಿಯು ಹೀಗೆ ನಿದ್ರೆ ಮಾಡುವಳೆ? ಮೊದಲು ಆಹಾರವನ್ನೇ ಬಿಡುವಳು. ಹೀಗೆ ಅಲಂಕಾರವನ್ನು ಮಾಡಿಕೊಂಡಾಳೆ? ಅವಳು ಮದ್ಯಪಾನ ಮಾಡುವುದೆಂದರೇನು? ರಾಮಚಂದ್ರನನ್ನು ಬಿಟ್ಟು ದೇವೇಂದ್ರನನ್ನೂ ಮನ್ನಿಸತಕ್ಕವಳಲ್ಲ. ಶ್ರೀರಾಮನಿಗೆ ಎಣೆಯಾದ ಇನ್ನೊಬ್ಬ ಪುರುಷನೇ ಇಲ್ಲ. ಇವಳು ಯಾರೋ ಬೇರೆಯವಳು' ಎಂದು ನಿಶ್ಚಯಿಸಿ ಪಾನಶಾಲೆಯಲ್ಲಿ ಮತ್ತೆ ಹುಡುಕುತ್ತ ತಿರುಗಿದನು (೨–೩). ಅಲ್ಲಿ ಅನೇಕ ಸ್ತ್ರೀಯರು ಪಗಡೆಯಾಟ, ಸಂಗೀತ, ನೃತ್ಯಗಳಿಂದ ಬಳಲಿ ಮದ್ಯಪಾನದಿಂದ ಪ್ರಜ್ಞೆತಪ್ಪಿ ನಿದ್ರೆ ಮಾಡುತ್ತಿದ್ದರು. ಅನೇಕರು ತಮ್ಮ ವಾದ್ಯಗಳನ್ನೂ ಚಿಕ್ಕ ಪೀಠಗಳನ್ನೂ

ನೃತ್ತೇನ ಚಾಪರಾಃ ಕ್ಲಾಂತಾಃ ಪಾನವಿಪ್ರಹತಾಸ್ತಥಾ ।
ಮುರಜೇಷು ಮೃದಂಗೇಷು ಪೀಠಿಕಾಸು ಚ ಸಂಸ್ಥಿತಾಃ ॥ ೫

ತಥಾಸ್ತರಣಮುಖ್ಯೇಷು ಸಂವಿಷ್ಟಾಶ್ಚಾಪರಾಃ ಸ್ತ್ರಿಯಃ ।
ಅಂಗನಾನಾಂ ಸಹಸ್ರೇಣ ಭೂಷಿತೇನ ವಿಭೂಷಣೈಃ ॥ ೬

ರೂಪಸಂಲಾಪಶೀಲೇನ ಯುಕ್ತಗೀತಾರ್ಥಭಾಷಿಣಾ ।
ದೇಶಕಾಲಾಭಿಯುಕ್ತೇನ ಯುಕ್ತವಾಕ್ಯಾಭಿಧಾಯಿನಾ ॥ ೭

ರತಾಭಿರತಸಂಸುಪ್ತಂ ದದರ್ಶ ಹರಿಯೂಥಪಃ ।
ಅನ್ಯತ್ರಾಪಿ ವರಸ್ತ್ರೀಣಾಂ ರೂಪಸಂಲಾಪಶಾಲಿನಾಮ್ ॥ ೮

ಸಹಸ್ರಂ ಯುವತೀನಾಂ ತು ಪ್ರಸುಪ್ತಂ ಸ ದದರ್ಶ ಹ ।
ದೇಶಕಾಲಾಭಿಯುಕ್ತಂ ತು ಯುಕ್ತವಾಕ್ಯಾಭಿಧಾಯಿ ಚ ॥ ೯

ತಾಸಾಂ ಮಧ್ಯೇ ಮಹಾಬಾಹುಃ ಶುಶುಭೇ ರಾಕ್ಷಸೇಶ್ವರಃ
ಗೋಷ್ಠೇ ಮಹತಿ ಮುಖ್ಯಾನಾಂ ಗವಾಂ ಮಧ್ಯೇ ಯಥಾ ವೃಷಃ ॥೧೦

ಸ ರಾಕ್ಷಸೇಂದ್ರಃ ಶುಶುಭೇ ತಾಭಿಃ ಪರಿವೃತಃ ಸ್ವಯಮ್ ।
ಕರೇಣುಭಿರ್ಯಥಾರಣ್ಯೇ ಪರಿಕೀರ್ಣೋ ಮಹಾದ್ವಿಪಃ ॥ ೧೧

ಸರ್ವಕಾಮೈರುಪೇತಾಂ ಚ ಪಾನಭೂಮಿಂ ಮಹಾತ್ಮನಃ ।
ದದರ್ಶ ಕಪಿಶಾರ್ದೂಲಸ್ತಸ್ಯ ರಕ್ಷಃಪತೇರ್ಗೃಹೇ ॥ ೧೨

ತಲೆದಿಂಬಾಗಿ ಇಟ್ಟುಕೊಂಡು ಮಲಗಿದ್ದರು (೪–೫). ಕೆಲವರು ಹಾಸಿದ ರತ್ನಗಂಬಳಿಗಳಲ್ಲಿ ನಿದ್ರಿಸುತ್ತಿದ್ದರು. ಅವರಲ್ಲಿ ಅನೇಕ ಹೆಂಗಸರು 'ಅವಳ ರೂಪ ಹೀಗೆ', 'ಇವಳ ಹಾಡು ಹೀಗೆ' ಎಂದು ನಿದ್ರೆಯಲ್ಲಿಯೇ ಕನವರಿಸುತ್ತಿದ್ದರು. ಬಳಿಯಲ್ಲಿದ್ದ ಇನ್ನೊಂದು ಪಾನಭೂಮಿಯಲ್ಲಿ ಹೀಗೆಯೇ ಕ್ರೀಡಿಸಿ ನಿದ್ರಿಸುತ್ತಿದ್ದ ಸಾವಿರಾರು ಯುವತಿಯರನ್ನು ಹನುಮಂತನು ನೋಡಿದನು (೬–೯). ಆ ಸ್ತ್ರೀಯರಿಂದ ಪರಿವೃತನಾದ ರಾಕ್ಷಸೇಶ್ವರನು ಹಸುಗಳ ಮಂದೆಯಲ್ಲಿರುವ ಮಹಾವೃಷಭದಂತೆಯೂ ಹೆಣ್ಣಾನೆಗಳ ಮಧ್ಯದಲ್ಲಿರುವ ಸಲಗದಂತೆಯೂ ಶೋಭಿಸುತ್ತಿದ್ದನು (೧೦–೧೧). ಪಾನಭೂಮಿಯ ಒಂದು ಕಡೆಯಲ್ಲಿ ಜಿಂಕೆ,

ಮೃಗಾಣಾಂ ಮಹಿಷಾಣಾಂ ಚ ವರಾಹಾಣಾಂ ಚ ಭಾಗಶಃ ।
ತತ್ರ ನ್ಯಸ್ತಾನಿ ಮಾಂಸಾನಿ ಪಾನಭೂಮೌ ದದರ್ಶ ಸಃ ॥ ೧೩
ರೌಕ್ಮೇಷು ಚ ವಿಶಾಲೇಷು ಭಾಜನೇಷ್ವರ್ಧಭಕ್ಷಿತಾನ್ ।
ದದರ್ಶ ಕಪಿಶಾರ್ದೂಲೋ ಮಯೂರಾನ್ ಕುಕ್ಕುಟಾಂಸ್ತಥಾ ॥ ೧೪
ವರಾಹವಾಧ್ರೀಣಸಕಾನ್ ದಧಿಸೌವರ್ಚಲಾಯುತಾನ್ ।
ಶಲ್ಯಾನ್ ಮೃಗಮಯೂರಾಂಶ್ಚ ಹನುಮಾನನ್ವವೈಕ್ಷತ ॥ ೧೫
ಕ್ರಕರಾನ್ ವಿವಿಧಾನ್ ಸಿದ್ಧಾಂಶ್ಚಕೋರಾನರ್ಧಭಕ್ಷಿತಾನ್ ।
ಮಹಿಷಾನೇಕಶಲ್ಯಾಂಶ್ಚ ಛಾಗಾಂಶ್ಚ ಕೃತನಿಷ್ಠಿತಾನ್ ॥ ೧೬
ಲೇಹ್ಯಾನುಚ್ಚಾವಚಾನ್ ಪೇಯಾನ್ ಭೋಜ್ಯಾನಿ ವಿವಿಧಾನಿ ಚ ।
ತಥಾಮ್ಲಲವಣೋತ್ತಂಸೈರ್ವಿವಿಧೈ ರಾಗಷಾಡವೈಃ* ॥ ೧೭
ಹಾರನೂಪುರಕೇಯೂರೈರಪವಿದ್ಧೈರ್ಮಹಾಧನೈಃ ।
ಪಾನಭಾಜನವಿಕ್ಷಿಪ್ತೈಃ ಫಲೈಶ್ಚ ವಿವಿಧೈರಪಿ ॥ ೧೮
ಕೃತಪುಷ್ಪೋಪಹಾರಾ ಭೂರಧಿಕಂ ಪುಷ್ಯತಿ ಶ್ರಿಯಮ್ ।
ತತ್ರ ತತ್ರ ಚ ವಿನ್ಯಸ್ತೈಃ ಸುಶ್ಲಿಷ್ಟೈಃ ಶಯನಾಸನೈಃ ॥ ೧೯

ಕೋಣ, ಹಂದಿ, ನವಿಲು, ಕೋಳಿ ಮುಂತಾದ ನಾನಾವಿಧ ಮೃಗಪಕ್ಷಿಗಳ ಮಾಂಸವನ್ನು ದೊಡ್ಡ ದೊಡ್ಡ ಚಿನ್ನದ ಕಡಾಯಗಳಲ್ಲಿ ತುಂಬಿದ್ದರು. ಕೆಲವನ್ನು ತಿಂದಿದ್ದರು. ಕೆಲವನ್ನು ಸ್ವಲ್ಪ ತಿಂದು ಮಿಗಿಸಿದ್ದರು. ಇದಲ್ಲದೆ ಉತ್ತಮವಾದ ಲೇಹ್ಯಗಳೂ, ಪಾನಕಗಳೂ, ನಾನಾ ಪ್ರಕಾರದ ಭಕ್ಷ್ಯ ಭೋಜ್ಯಗಳೂ, ಉಪ್ಪು ಹುಳಿಯು ಹೆಚ್ಚಾಗಿರುವ ರಾಗಷಾಡವವೆಂಬ ವಿವಿಧ ರೀತಿಯ ಗೊಜ್ಜುಗಳೂ ಯಥೇಷ್ಟವಾಗಿದ್ದವು (೧೩–೧೭). ಆ ಪಾನಭೂಮಿಯು ಅಲ್ಲಲ್ಲಿ ಕಿತ್ತುಬಿದ್ದ ರಾಕ್ಷಸಸ್ತ್ರೀಯರ ಹಾರ ನೂಪುರಾದಿಭೂಷಣಗಳಿಂದಲೂ, ಬಗೆಬಗೆಯ ಹಣ್ಣುಗಳಿಂದಲೂ, ಹರಡಿದ ಹೂಗಳಿಂದಲೂ ವಿಶೇಷವಾದ ಕಾಂತಿಯನ್ನು ಪಡೆದಿತ್ತು(೧೮–೧೯).

---

* ವಾಧ್ರೀಣಸಕ=ಕಪ್ಪು ಕುತ್ತಿಗೆ ಕೆಂಪು ತಲೆ ಬಿಳಿಯ ರೆಕ್ಕೆಗಳುಳ್ಳ ಪಕ್ಷಿ; ಖಡ್ಗ ಮೃಗ, ಸೌವರ್ಚಲ=ಒಂದು ಬಗೆಯ ಉಪ್ಪು. ಕ್ರಕರ=ಪಕ್ಷಿವಿಶೇಷ. ರಾಗಷಾಡವ=ದ್ರಾಕ್ಷಿ, ದಾಳಿಂಬೆ ಮುಂತಾದ ಹಣ್ಣಿನ ರಸದಿಂದ ಮಾಡಿದ ಗೊಜ್ಜು.

ಪಾನಭೂಮಿರ್ವಿನಾ ವಹ್ನಿಂ ಪ್ರದೀಪ್ತೇವೋಪಲಕ್ಷ್ಯತೇ ।
ಬಹುಪ್ರಕಾರೈರ್ವಿವಿಧೈರ್ವರಸಂಸ್ಕಾರಸಂಸ್ಕೃತೈಃ ॥ ೨೦

ಮಾಂಸೈಃ ಕುಶಲಸಂಯುಕ್ತೈಃ ಪಾನಭೂಮಿಗತೈಃ ಪೃಥಕ್ ।
ದಿವ್ಯಾಃ ಪ್ರಸನ್ನಾ ವಿವಿಧಾಃ ಸುರಾಃ ಕೃತಸುರಾ ಅಪಿ ॥ ೨೧

ಶರ್ಕರಾಸವಮಾಧ್ವೀಕಪುಷ್ಪಾಸವಫಲಾಸವಾಃ ।
ವಾಸಚೂರ್ಣೈಶ್ಚ ವಿವಿಧೈರ್ದೃಷ್ಟಾಸ್ತೈಸ್ತೈಃ ಪೃಥಕ್ ಪೃಥಕ್ ॥ ೨೨

ಸಂತತಾ ಶುಶುಭೇ ಭೂಮಿರ್ಮಾಲ್ಯೈಶ್ಚ ಬಹುಸಂಸ್ಥಿತೈಃ ।
ಹಿರಣ್ಮಯೈಶ್ಚ ವಿವಿಧೈರ್ಭಾಜನೈಃ ಸ್ಫಾಟಿಕೈರಪಿ ॥ ೨೩

ಜಾಂಬೂನದಮಯೈಶ್ಚಾನ್ಯೈಃ ಕರಕೈರಭಿಸಂವೃತಾ ।
ರಾಜತೇಷು ಚ ಕುಂಭೇಷು ಜಾಂಬೂನದಮಯೇಷು ಚ ॥ ೨೪

ಪಾನಶ್ರೇಷ್ಠಂ ತಥಾ ಭೂರಿ ಕಪಿಸ್ತತ್ರ ದದರ್ಶ ಸಃ ।
ಸೋಽಪಶ್ಯಚ್ಛಾತಕುಂಭಾನಿ ಶೀಧೋರ್ಮಣಿಮಯಾನಿ ಚ ॥ ೨೫

ರಾಜತಾನಿ ಚ ಪೂರ್ಣಾನಿ ಭಾಜನಾನಿ ಮಹಾಕಪಿಃ ।
ಕ್ವಚಿದರ್ಧಾವಶೇಷಾಣಿ ಕ್ವಚಿತ್ ಪೀತಾನಿ ಸರ್ವಶಃ ॥ ೨೬

ಕ್ವಚಿನ್ನೈವ ಪ್ರಪೀತಾನಿ ಪಾನಾನಿ ಸ ದದರ್ಶ ಹ ।
ಕ್ವಚಿದ್ಭಕ್ಷ್ಯಾಂಶ್ಚ ವಿವಿಧಾನ್ ಕ್ವಚಿತ್ ಪಾನಾನಿ ಭಾಗಶಃ ॥ ೨೭

ಅಲ್ಲಲ್ಲಿ ಚದರಿದ ರತ್ನಾಸನಗಳು ಬೆಂಕಿಯಿಲ್ಲದೆಯೇ ಉರಿಯುತ್ತಿರುವಂತೆ ವಿರಾಜಿಸುತ್ತಿದ್ದವು. ಕುಶಲರಾದ ಅಡಿಗೆಯವರು ರುಚಿಕರವಾದ ಮಾಂಸಾನ್ನಗಳನ್ನು ಸಿದ್ಧಪಡಿಸಿ ರಾಶಿ ಹಾಕಿದ್ದರು. ಅಲ್ಲಿ ಮರಗಳಿಂದ ಭಟ್ಟಿ ಇಳಿಸಿದ ಶ್ರೇಷ್ಠಜಾತಿಯ ಮದ್ಯಗಳೂ, ಸಕ್ಕರೆ, ಜೇನು, ಪುಷ್ಪರಸ, ಹಣ್ಣಿನ ರಸಗಳಿಂದ ತೆಗೆದ ವಿವಿಧ ಜಾತಿಯ ಮದ್ಯಗಳೂ ಕಂಗೊಳಿಸುತ್ತಿದ್ದವು (೨೦–೨೨). ಆ ಮದ್ಯಗಳನ್ನು ಚಿನ್ನ ಬೆಳ್ಳಿಗಳಲ್ಲಿ ಮಾಡಿದ ವಿವಿಧಾಕಾರದ ಪಾತ್ರೆಗಳಲ್ಲಿ ತುಂಬಿದ್ದರು. ಅವುಗಳಲ್ಲಿ ಅರ್ಧ ಕುಡಿದು ಮುಗಿಸಿದ ಪಾತ್ರೆಗಳು ಕೆಲವು; ನಿಶ್ಶೇಷವಾಗಿ ಕುಡಿದಿಟ್ಟ ಪಾತ್ರೆಗಳು ಕೆಲವು; ಕುಡಿಯದೆ ಮದ್ಯವನ್ನು ತುಂಬಿದ ಪಾತ್ರೆಗಳು ಕೆಲವು; ಹಾಗೆಯೇ ಭಕ್ಷ್ಯಗಳಲ್ಲಿ

ಕ್ವಚಿದನ್ನಾವಶೇಷಾಣಿ ಪಶ್ಯನ್ ವೈ ವಿಚಚಾರ ಹ ।
ಕ್ವಚಿತ್ ಪ್ರಭಿನ್ನೈಃ ಕರಕೈಃ ಕ್ವಚಿದಾಲೋಲಿತೈರ್ಘಟೈಃ ॥ ೨೮
ಕ್ವಚಿತ್ ಸಂಪೃಕ್ತಮಾಲ್ಯಾನಿ ಮೂಲಾನಿ ಚ ಫಲಾನಿ ಚ ।
ಶಯನಾನ್ಯತ್ರ ನಾರೀಣಾಂ ಶುಭ್ರಾಣಿ ಬಹುಧಾ ಪುನಃ ॥ ೨೯
ಪರಸ್ಪರಂ ಸಮಾಶ್ಲಿಷ್ಯ ಕಾಶ್ಚಿತ್ ಸುಪ್ತಾ ವರಾಂಗನಾಃ ।
ಕಾಚಿಚ್ಚ ವಸ್ತ್ರಮನ್ಯಸ್ಯಾಃ ಸ್ವಪಂತ್ಯಾಃ ಪರಿಧಾಯ ಚ ॥ ೩೦
ಆಹೃತ್ಯ ಚಾಬಲಾಃ ಸುಪ್ತಾ ನಿದ್ರಾಬಲಪರಾಜಿತಾಃ ।
ತಾಸಾಮುಚ್ಛ್ವಾಸವಾತೇನ ವಸ್ತ್ರಂ ಮಾಲ್ಯಂ ಚ ಗಾತ್ರಜಮ್ ॥ ೩೧
ನಾತ್ಯರ್ಥಂ ಸ್ಪಂದತೇ ಚಿತ್ರಂ ಪ್ರಾಪ್ಯ ಮಂದಮಿವಾನಿಲಮ್ ।
ಚಂದನಸ್ಯ ಚ ಶೀತಸ್ಯ ಶೀಧೋರ್ಮಧುರಸಸ್ಯ ಚ ॥ ೩೨
ವಿವಿಧಸ್ಯ ಚ ಮಾಲ್ಯಸ್ಯ ಧೂಪಸ್ಯ ವಿವಿಧಸ್ಯ ಚ ।
ಬಹುಧಾ ಮಾರುತಸ್ತತ್ರ ಗಂಧಂ ವಿವಿಧಮುದ್ವಹನ್ ॥ ೩೩
ರಸಾನಾಂ ಚಂದನಾನಾಂ ಚ ಧೂಪಾನಾಂ ಚೈವ ಮೂರ್ಛಿತಃ ।
ಪ್ರವವೌ ಸುರಭಿರ್ಗಂಧೋ ವಿಮಾನೇ ಪುಷ್ಪಕೇ ತದಾ ॥ ೩೪
ಶ್ಯಾಮಾವದಾತಾಸ್ತತ್ರಾನ್ಯಾಃ ಕಾಶ್ಚಿತ್ ಕೃಷ್ಣಾ ವರಾಂಗನಾಃ ।
ಕಾಶ್ಚಿತ್ ಕಾಂಚನವರ್ಣಾಂಗ್ಯಃ ಪ್ರಮದಾ ರಾಕ್ಷಸಾಲಯೇ ॥ ೩೫

ಕೆಲವನ್ನು ತಿಂದು, ಕೆಲವನ್ನು ತಿನ್ನದೆ ಉಳಿಸಿದ್ದರು. ಪಾನೀಯಗಳೂ ಖಾದ್ಯಗಳೂ ಮಿಕ್ಕಿದ್ದವು (೨೩–೨೭). ಅವುಗಳನ್ನೆಲ್ಲಾ ನೋಡುತ್ತ ಹೋದ ಹನುಮಂತನು ಒಡೆದುಬಿದ್ದ ಹೂಜಿಗಳನ್ನೂ, ಉರುಳಾಡುವ ಗಡಿಗೆಗಳನ್ನೂ, ಚಲ್ಲಾಪಿಲ್ಲಿಯಾಗಿ ಹರಡಿದ್ದ ಹೂ ಹಣ್ಣುಗಳನ್ನೂ, ಕೆದರಿದ ಹಾಸಿಗೆಗಳನ್ನೂ ಕಂಡನು (೨೮–೨೯). ಅಲ್ಲಿ ಕೆಲವು ಹೆಂಗಸರು ಒಬ್ಬರನ್ನೊಬ್ಬರು ಅಪ್ಪಿಕೊಂಡು ಮಲಗಿದ್ದರು. ಕೆಲವರು ನಿದ್ರೆಯಲ್ಲಿ ಇನ್ನೊಬ್ಬರ ಸೀರೆಯನ್ನೂ ಸೆಳೆದು ತಮ್ಮ ಮೈಗೆ ಸುತ್ತಿಕೊಂಡಿದ್ದರು! ಅವರ ಉಸಿರಿನ ಗಾಳಿಯಿಂದ ವಸ್ತ್ರಗಳೂ ಪುಷ್ಪಮಾಲೆಗಳೂ ಮೆಲ್ಲಗೆ ಅಲುಗುತ್ತಿದ್ದವು. ಆ ಸ್ಥಳದಲ್ಲಿ ಚಂದನ, ಮದ್ಯ, ಹೂ, ಧೂಪಗಳ ಮೇಲೆ ಬೀಸುತ್ತಿದ್ದ ಗಾಳಿ, ಅವುಗಳ ಸುಗಂಧವನ್ನು ಹೊತ್ತು ಹರಡುತ್ತಲಿತ್ತು (೩೦–೩೪). ಅಲ್ಲಿದ್ದ ಸ್ತ್ರೀಯರಲ್ಲಿ ಕೆಲವರು ನಸುಗಪ್ಪು ಮೈಬಣ್ಣದವರು; ಕೆಲವರು ಬಿಳುಪು; ಕೆಲವರು

ತಾಸಾಂ ನಿದ್ರಾವಶತ್ವಾಚ್ಚ ಮದನೇನ ಚ ಮೂರ್ಛಿತಮ್ ।
ಪದ್ಮಿನೀನಾಂ ಪ್ರಸುಪ್ತಾನಾಂ ರೂಪಮಾಸೀದ್ಯಥೈವ ಹಿ ॥ ೩೬

ಏವಂ ಸರ್ವಮಶೇಷೇಣ ರಾವಣಾಂತಃಪುರಂ ಕಪಿಃ ।
ದದರ್ಶ ಸುಮಹಾತೇಜಾ ನ ದದರ್ಶ ಚ ಜಾನಕೀಮ್ ॥ ೩೭

ನಿರೀಕ್ಷಮಾಣಶ್ಚ ತದಾ ತಾಃ ಸ್ತ್ರಿಯಃ ಸ ಮಹಾಕಪಿಃ ।
ಜಗಾಮ ಮಹತೀಂ ಚಿಂತಾಂ ಧರ್ಮಸಾಧ್ವಸಶಂಕಿತಃ ॥ ೩೮

ಪರದಾರಾವರೋಧಸ್ಯ ಪ್ರಸುಪ್ತಸ್ಯ ನಿರೀಕ್ಷಣಮ್ ।
ಇದಂ ಖಲು ಮಮಾತ್ಯರ್ಥಂ ಧರ್ಮಲೋಪಂ ಕರಿಷ್ಯತಿ ॥ ೩೯

ನ ಹಿ ಮೇ ಪರದಾರಾಣಾಂ ದೃಷ್ಟಿರ್ವಿಷಯವರ್ತಿನೀ ।
ಅಯಂ ಚಾತ್ರ ಮಯಾ ದೃಷ್ಟಃ ಪರದಾರಪರಿಗ್ರಹಃ ॥ ೪೦

ತಸ್ಯ ಪ್ರಾದುರಭೂಚ್ಚಿಂತಾ ಪುನರನ್ಯಾ ಮನಸ್ವಿನಃ ।
ನಿಶ್ಚಿತೈಕಾಂತಚಿತ್ತಸ್ಯ ಕಾರ್ಯನಿಶ್ಚಯದರ್ಶಿನೀ ॥ ೪೧

ಕಾಮಂ ದೃಷ್ಟಾ ಮಯಾ ಸರ್ವಾ ವಿಶ್ವಸ್ತಾ ರಾವಣಸ್ತ್ರಿಯಃ ।
ನ ಹಿ ಮೇ ಮನಸಃ ಕಿಂಚಿದ್ವೈಕೃತ್ಯಮುಪಪದ್ಯತೇ ॥ ೪೨

ಕಪ್ಪು; ಕೆಲವರು ಹೊಂಬಣ್ಣದವರು. ನಿದ್ರಿಸುತ್ತಿದ್ದ ಆ ಸುಂದರಿಯರು ರಾತ್ರಿಯಲ್ಲಿ ಮುಚ್ಚಿದ ಹೂಗಳುಳ್ಳ ಕಮಲದ ಬಳ್ಳಿಗಳಂತೆ ವಿರಾಜಿಸುತ್ತಿದ್ದರು (೩೫–೩೬). ಹೀಗೆ ಆ ಕಪಿವೀರನು ರಾವಣನ ಅಂತಃಪುರವನ್ನೆಲ್ಲಾ ಹುಡುಕಿದರೂ ಜಾನಕಿಯು ಗೋಚರಿಸಲಿಲ್ಲ. ಆಮೇಲೆ ಹನುಮಂತನಿಗೆ ಈ ಹೆಂಗಸರನ್ನು ತಾನು ನೋಡಿದುದು ಅಧರ್ಮವೆಂದು ದೊಡ್ಡ ಚಿಂತೆ ಉತ್ಪನ್ನವಾಯಿತು (೩೭–೩೮). ''ಹೀಗೆ ಅಂತಃಪುರದಲ್ಲಿ ನಿದ್ರಿಸುತ್ತಿರುವ ಪರಸ್ತ್ರೀಯರನ್ನು ನೋಡುವುದು ದೊಡ್ಡ ಅಧರ್ಮ. ನಾನು ಇದುವರೆಗೂ ಪರಸ್ತ್ರೀಯರನ್ನು ಕಣ್ಣೆಟ್ಟು ನೋಡಿದವನಲ್ಲ. ಈಗ ಈ ರಾವಣನ ಹೆಂಡತಿಯರನ್ನು ನೋಡಿ ಮಹಾದೋಷಕ್ಕೆ ಗುರಿಯಾದೆನು'' (೩೯–೪೦). ಹೀಗೆ ಚಿಂತಿಸುತ್ತಿರುವಾಗ ಸ್ಥಿರಚಿತ್ತನೂ ವಿವೇಕಿಯೂ ಆದ ಆಂಜನೇಯನಿಗೆ ಸಮಾಧಾನಕರವಾದ ಇನ್ನೊಂದು ವಿವೇಚನೆ ಹುಟ್ಟಿತು (೪೧).

ಮನೋ ಹಿ ಹೇತುಃ ಸರ್ವೇಷಾಮಿಂದ್ರಿಯಾಣಾಂ ಪ್ರವರ್ತನೇ ।
ಶುಭಾಶುಭಾಸ್ವವಸ್ಥಾಸು ತಚ್ಚ ಮೇ ಸುವ್ಯವಸ್ಥಿತಮ್ ॥ ೪೩

ನಾನ್ಯತ್ರ ಚ ಮಯಾ ಶಕ್ಯಾ ವೈದೇಹೀ ಪರಿಮಾರ್ಗಿತುಮ್ ।
ಸ್ತ್ರಿಯೋ ಹಿ ಸ್ತ್ರೀಷು ದೃಶ್ಯಂತೇ ಸರ್ವಥಾ ಪರಿಮಾರ್ಗಣೇ ॥ ೪೪

ಯಸ್ಯ ಸತ್ತ್ವಸ್ಯ ಯಾ ಯೋನಿಸ್ತಸ್ಯಾಂ ತತ್ ಪರಿಮೃಗ್ಯತೇ ।
ನ ಶಕ್ಯಾ ಪ್ರಮದಾ ನಷ್ಟಾ ಮೃಗೀಷು ಪರಿಮಾರ್ಗಿತುಮ್ ॥ ೪೫

ತದಿದಂ ಮಾರ್ಗಿತಂ ತಾವಚ್ಛುದ್ಧೇನ ಮನಸಾ ಮಯಾ ।
ರಾವಣಾಂತಃಪುರಂ ಸರ್ವಂ ದೃಶ್ಯತೇ ನ ಚ ಜಾನಕೀ ॥ ೪೬

ದೇವಗಂಧರ್ವಕನ್ಯಾಶ್ಚ ನಾಗಕನ್ಯಾಶ್ಚ ವೀರ್ಯವಾನ್ ।
ಅವೇಕ್ಷಮಾಣೋ ಹನುಮಾನ್ನೈವಾಪಶ್ಯತ ಜಾನಕೀಮ್ ॥ ೪೭

ತಾಮಪಶ್ಯನ್ ಕಪಿಸ್ತತ್ರ ಪಶ್ಯಂಶ್ಚಾನ್ಯಾ ವರಸ್ತ್ರಿಯಃ ।
ಅಪಕ್ರಮ್ಯ ತದಾ ವೀರಃ ಪ್ರಧ್ಯಾತುಮುಪಚಕ್ರಮೇ ॥ ೪೮

''ಇಲ್ಲಿಗೆ ಪರಪುರುಷನು ಬರಲಾರನೆಂಬ ನಿಶ್ಚಯದಿಂದ ಈ ಹೆಂಗಸರು ನಿರ್ಲಜ್ಜರಾಗಿ ಮಲಗಿದ್ದಾರೆ. ಇವರನ್ನೇನೋ ನಾನು ನೋಡಿದೆ. ಆದರೆ ನನ್ನ ಮನಸ್ಸಿನಲ್ಲಿ ಸ್ವಲ್ಪವೂ ವಿಕಾರವಾಗಲಿಲ್ಲ. ಇಂದ್ರಿಯಗಳ ಪ್ರವೃತ್ತಿಗೆ ಮನಸ್ಸೇ ಮೂಲಕಾರಣ. ಪಾಪಪುಣ್ಯಗಳಿಗೆ ಅದೇ ನಿಮಿತ್ತ. ಈ ಮನಸ್ಸು ಪೂರ್ಣವಾಗಿ ನನ್ನ ಸ್ವಾಧೀನದಲ್ಲಿರುವಾಗ ಪಾಪವೇಕೆ ಬರುತ್ತದೆ? (೪೨–೪೩). ಸೀತೆಯನ್ನು ಹುಡುಕಬೇಕಾದರೆ ಸ್ತ್ರೀಯರ ಮಧ್ಯದಲ್ಲಿಯೇ ಹುಡುಕಬೇಕು. ಸ್ತ್ರೀಯನ್ನು ಮೃಗಗಳ ಮಧ್ಯದಲ್ಲಿ ಹುಡುಕುವುದಕ್ಕಾಗುತ್ತದೆಯೆ! ಆದ್ದರಿಂದ ಪರಿಶುದ್ಧ ಮನಸ್ಸಿನಿಂದ ನಾನು ರಾವಣಾಂತಃಪುರದಲ್ಲಿ ಹುಡುಕಿದ್ದೇನೆ, ನನಗೆ ದೋಷವಿಲ್ಲ, ಆದರೆ ಸೀತೆಯು ಮಾತ್ರ ಕಾಣಲಿಲ್ಲ'' (೪೪–೪೬). ಹೀಗೆಂದುಕೊಂಡು ಅಂತಃಪುರದಲ್ಲಿ ಎಷ್ಟೋ ದೇವ ಗಂಧರ್ವ ಕನ್ಯೆಯರನ್ನೂ ನಾಗಕನ್ಯೆಯರನ್ನೂ ನೋಡುತ್ತ ಹೋದನು. ಎಷ್ಟು ಸುತ್ತಿದರೂ ಸೀತೆಯನ್ನು ಕಾಣದೆ, ಪಾನಭೂಮಿಯ ಹೊರಭಾಗಕ್ಕೆ ಬಂದು ಚಿಂತಾಕ್ರಾಂತನಾದನು (೪೭–೪೮). ಆ ವಾಯುಪುತ್ರನು

ಸ ಭೂಯಸ್ತು ಪರಂ ಶ್ರೀಮಾನ್ ಮಾರುತಿರ್ಯತ್ನಮಾಸ್ಥಿತಃ ।
ಆಪಾನಭೂಮಿಮುತ್ಸೃಜ್ಯ ತಾಂ ವಿಚೇತುಂ ಪ್ರಚಕ್ರಮೇ ॥ ೪೯

ಇತಿ ಶ್ರೀಮದ್ರಾಮಾಯಣೇ ಸುಂದರಕಾಂಡೇ ಏಕಾದಶಃ ಸರ್ಗಃ

ದ್ವಾದಶಃ ಸರ್ಗಃ

ಹನೂಮದ್ವಿಷಾದಃ

ಸ ತಸ್ಯ ಮಧ್ಯೇ ಭವನಸ್ಯ ಮಾರುತಿ-
ರ್ಲತಾಗೃಹಾಂಶ್ಚಿತ್ರಗೃಹಾನ್ನಿಶಾಗೃಹಾನ್ ।
ಜಗಾಮ ಸೀತಾಂ ಪ್ರತಿ ದರ್ಶನೋತ್ಸುಕೋ
ನ ಚೈವ ತಾಂ ಪಶ್ಯತಿ ಚಾರುದರ್ಶನಾಮ್ ॥ ೧

ಪಾನಭೂಮಿಯಿಂದ ಹೊರಗೆ ಬಂದು, ಇತರ ಪ್ರದೇಶಗಳಲ್ಲಿ ಮತ್ತೆ ಹುಡುಕಲಾರಂಭಿಸಿದನು (೪೯).

ಇಲ್ಲಿಗೆ ಶ್ರೀಮದ್ರಾಮಾಯಣದ ಸುಂದರಕಾಂಡದಲ್ಲಿ ಹನ್ನೊಂದನೆಯ ಸರ್ಗ

ಸರ್ಗ ೧೨

ಹನುಮಂತನು ಸೀತೆಯನ್ನು ಕಾಣದೆ ಚಿಂತಾಕ್ರಾಂತನಾದುದು. ನಿರಾಶನಾಗುವುದು ಸರಿಯಲ್ಲವೆಂದು ಪುನಃ ರಾವಣನ ಅರಮನೆಯೆಲ್ಲವನ್ನೂ ಹುಡುಕಿ ಸೀತೆಯನ್ನು ಕಾಣದೆ ವ್ಯಥೆಪಡುವುದು.

ಆಮೇಲೆ ಆಂಜನೇಯನು ಅರಮನೆಗೆ ಸೇರಿದ್ದ ಲತಾಗೃಹಗಳನ್ನೂ, ಚಿತ್ರಶಾಲೆಗಳನ್ನೂ, ರಾತ್ರಿವಾಸಕ್ಕೆ ಯೋಗ್ಯವಾದ ಇತರ ಶಾಲೆಗಳನ್ನೂ ಹುಡುಕಿ ಎಲ್ಲಿಯೂ ಸೀತಾದೇವಿಯನ್ನು ಕಾಣದೆ ವ್ಯಥೆಪಡುತ್ತಿದ್ದನು. ಅವನು ತನ್ನ

ಸ ಚಿಂತಯಾಮಾಸ ತತೋ ಮಹಾಕಪಿಃ
ಪ್ರಿಯಾಮಪಶ್ಯನ್ ರಘುನಂದನಸ್ಯ ತಾಮ್ ।
ಧ್ರುವಂ ನ ಸೀತಾ ಧ್ರಿಯತೇ ಯಥಾ ನ ಮೇ
ವಿಚಿನ್ವತೋ ದರ್ಶನಮೇತಿ ಮೈಥಿಲೀ ॥ ೨

ಸಾ ರಾಕ್ಷಸಾನಾಂ ಪ್ರವರೇಣ ಜಾನಕೀ
ಸ್ವಶೀಲಸಂರಕ್ಷಣತತ್ಪರಾ ಸತೀ ।
ಅನೇನ ನೂನಂ ಪ್ರತಿದುಷ್ಟಕರ್ಮಣಾ
ಹತಾ ಭವೇದಾರ್ಯಪಥೇ ವರೇ ಸ್ಥಿತಾ ॥ ೩

ವಿರೂಪರೂಪಾ ವಿಕೃತಾ ವಿವರ್ಚಸೋ
ಮಹಾನನಾ ದೀರ್ಘವಿರೂಪದರ್ಶನಾಃ ।
ಸಮೀಕ್ಷ್ಯ ಸಾ ರಾಕ್ಷಸರಾಜಯೋಷಿತೋ
ಭಯಾದ್ವಿನಷ್ಟಾ ಜನಕೇಶ್ವರಾತ್ಮಜಾ ॥ ೪

ಸೀತಾಮದೃಷ್ಟ್ವಾ ಹ್ಯನವಾಪ್ಯ ಪೌರುಷಂ
ವಿಹೃತ್ಯ ಕಾಲಂ ಸಹ ವಾನರೈಶ್ಚಿರಮ್ ।
ನ ಮೇಽಸ್ತಿ ಸುಗ್ರೀವಸಮೀಪಗಾ ಗತಿಃ
ಸುತೀಕ್ಷ್ಣದಂಡೋ ಬಲವಾಂಶ್ಚ ವಾನರಃ ॥ ೫

ಮನಸ್ಸಿನಲ್ಲಿ "ಇಷ್ಟು ಶೋಧಿಸಿದರೂ ಮೈಥಿಲಿಯು ದೊರಕಲಿಲ್ಲ. ಅವಳು ನಿಶ್ಚಯವಾಗಿ ಮರಣವನ್ನು ಹೊಂದಿರಬೇಕು (೧–೨). ಅವಳು ಪತಿವ್ರತೆ, ಸಚ್ಚರಿತ್ರೆ. ಅವಳನ್ನು ಒಲಿಸಿಕೊಳ್ಳಲು ಸಾಧ್ಯವಾಗದೆ ಈ ರಾಕ್ಷಸನು ಕ್ರೋಧದಿಂದ ಆಕೆಯನ್ನು ಸಂಹರಿಸಿಬಿಟ್ಟಿದ್ದಾನೆ. ಅಥವಾ ಕುರೂಪಿಗಳಾದ ಘೋರಾಕಾರದ ಈ ರಾಕ್ಷಸ ಸ್ತ್ರೀಯರನ್ನು ನೋಡಿ ಸೀತೆಯು ಹೆದರಿ ಪ್ರಾಣವನ್ನು ಬಿಟ್ಟಿರಬೇಕು (೩–೪). ನಾನು ಇಲ್ಲಿಗೆ ಬಂದು ಸೀತೆಯನ್ನು ನೋಡದೆ, ಪರಾಕ್ರಮವನ್ನು ತೋರಿಸದೆ, ವಾನರರೊಡನೆ ಇಷ್ಟು ಕಾಲವನ್ನು ಕಳೆದು ಸುಗ್ರೀವನ ಬಳಿಗೆ ಹೇಗೆ ಹೋಗಲಿ ? ಸುಗ್ರೀವನಾದರೋ ಮಹಾಬಲಶಾಲಿ; ಕಠೋರವಾಗಿ ದಂಡಿಸತಕ್ಕವನು (೫).

ದೃಷ್ಟಮಂತಃಪುರಂ ಸರ್ವಂ ದೃಷ್ಟ್ವಾ ರಾವಣಯೋಷಿತಃ ।
ನ ಸೀತಾ ದೃಶ್ಯತೇ ಸಾಧ್ವೀ ವೃಥಾ ಜಾತೋ ಮಮ ಶ್ರಮಃ ॥ ೬

ಕಿಂ ನು ಮಾಂ ವಾನರಾಃ ಸರ್ವೇ ಗತಂ ವಕ್ಷ್ಯಂತಿ ಸಂಗತಾಃ ।
ಗತ್ವಾ ತತ್ರ ತ್ವಯಾ ವೀರ ಕಿಂ ಕೃತಂ ತದ್ವದಸ್ವ ನಃ ॥ ೭

ಅದೃಷ್ಟ್ವಾ ಕಿಂ ಪ್ರವಕ್ಷ್ಯಾಮಿ ತಾಮಹಂ ಜನಕಾತ್ಮಜಾಮ್ ।
ಧ್ರುವಂ ಪ್ರಾಯಮುಪೈಷ್ಯಂತಿ ಕಾಲಸ್ಯ ವ್ಯತಿವರ್ತನೇ ॥ ೮

ಕಿಂ ವಾ ವಕ್ಷ್ಯತಿ ವೃದ್ಧಶ್ಚ ಜಾಂಬವಾನಂಗದಶ್ಚ ಸಃ ।
ಗತಂ ಪಾರಂ ಸಮುದ್ರಸ್ಯ ವಾನರಾಶ್ಚ ಸಮಾಗತಾಃ ॥ ೯

ಅನಿರ್ವೇದಃ ಶ್ರಿಯೋ ಮೂಲಮನಿರ್ವೇದಃ ಪರಂ ಸುಖಮ್ ।
ಅನಿರ್ವೇದೋ ಹಿ ಸತತಂ ಸರ್ವಾರ್ಥೇಷು ಪ್ರವರ್ತಕಃ ॥ ೧೦

ಕರೋತಿ ಸಫಲಂ ಜಂತೋಃ ಕರ್ಮ ಯತ್ತತ್ ಕರೋತಿ ಸಃ
ತಸ್ಮಾದನಿರ್ವೇದಕರಂ ಯತ್ನಂ ಚೇಷ್ಟೇಽಹಮುತ್ತಮಮ್ ॥ ೧೧

ಭೂಯಸ್ತಾವದ್ವಿಚೇಷ್ಯಾಮಿ ನ ಯತ್ರ ವಿಚಯಃ ಕೃತಃ ।
ಅದೃಷ್ಟಾಂಶ್ಚ ವಿಚೇಷ್ಯಾಮಿ ದೇಶಾನ್ ರಾವಣಪಾಲಿತಾನ್ ॥ ೧೨

ಅಂತಃಪುರವನ್ನೆಲ್ಲಾ ಹುಡುಕಿ ರಾವಣನ ಹೆಂಗಸರನ್ನು ನೋಡಿದ್ದಾಯಿತು. ಸಾಧ್ವಿಯಾದ ಸೀತೆ ಮಾತ್ರ ಇಲ್ಲ. ನನ್ನ ಶ್ರಮವೆಲ್ಲಾ ವ್ಯರ್ಥವಾಯಿತು. ನಾನು ಹಿಂದಿರುಗಿ ಹೋದರೆ ವಾನರರೆಲ್ಲಾ ಒಟ್ಟಾಗಿ ಬಂದು 'ವೀರನೆ, ಲಂಕೆಗೆ ಹೋಗಿ ಏನು ಮಾಡಿದೆ ? ನಮಗೆ ಹೇಳು !' ಎಂದು ಕೇಳುವುದಿಲ್ಲವೆ? (೬–೭). ಸೀತೆಯನ್ನೇ ಕಾಣದೆ ನಾನು ಅವರಿಗೆ ಏನನ್ನು ಹೇಳಲಿ? ಸುಗ್ರೀವನು ಕೊಟ್ಟ ಅವಧಿ ಮುಗಿದ ಕೂಡಲೇ ಎಲ್ಲರೂ ಮೊದಲಿನಂತೆ ಉಪವಾಸವನ್ನಾರಂಭಿಸುವರು. ವೃದ್ಧನಾದ ಜಾಂಬವಂತನೂ ಅಂಗದನೂ ಇತರ ಕಪಿಗಳೂ ಏನು ಹೇಳಿಯಾರು ? (೮–೯). ಛೆ ! ಉತ್ಸಾಹಗೆಡಬಾರದು. ಉತ್ಸಾಹವೇ ಸಕಲಸಂಪತ್ತಿಗೂ ಕಾರಣ. ಉತ್ಸಾಹದಿಂದಲೇ ಸುಖ. ಯಾವಾಗಲೂ ಉತ್ಸಾಹವೇ ಸರ್ವಕಾರ್ಯಗಳಿಗೂ ಆದಿ. ಯಾವ ಕಾರ್ಯವಾದರೂ ಉತ್ಸಾಹವಿದ್ದರೇ ಸಫಲವಾಗುವುದು. ಆದ್ದರಿಂದ ನಾನು ನಿರಾಶನಾಗದೆ ಪುನಃ ಪ್ರಯತ್ನ ಮಾಡುತ್ತೇನೆ (೧೦–೧೧). ರಾವಣನಿಗೆ

ಆಪಾನಶಾಲಾ ವಿಚಿತಾಸ್ತಥಾ ಪುಷ್ಪಗೃಹಾಣಿ ಚ ।
ಚಿತ್ರಶಾಲಾಶ್ಚ ವಿಚಿತಾ ಭೂಯಃ ಕ್ರೀಡಾಗೃಹಾಣಿ ಚ ॥ ೧೩

ನಿಷ್ಕುಟಾಂತರರಥ್ಯಾಶ್ಚ ವಿಮಾನಾನಿ ಚ ಸರ್ವಶಃ ।
ಇತಿ ಸಂಚಿಂತ್ಯ ಭೂಯೋಽಪಿ ವಿಚೇತುಮುಪಚಕ್ರಮೇ ॥ ೧೪

ಭೂಮೀಗೃಹಾಂಶ್ಚೈತ್ಯಗೃಹಾನ್ ಗೃಹಾತಿಗೃಹಕಾನಪಿ ।
ಉತ್ಪತನ್ನಿಷ್ಪತಂಶ್ಚಾಪಿ ತಿಷ್ಠನ್ ಗಚ್ಛನ್ ಪುನಃಪುನಃ ॥ ೧೫

ಅಪಾವೃಣ್ವಂಶ್ಚ ದ್ವಾರಾಣಿ ಕಪಾಟಾನ್ಯವಘಾಟಯನ್ ।
ಪ್ರವಿಶನ್ನಿಷ್ಪತಂಶ್ಚಾಪಿ ಪ್ರಪತನ್ನುತ್ಪತನ್ನಪಿ ॥ ೧೬

ಸರ್ವಮಪ್ಯವಕಾಶಂ ಸ ವಿಚಚಾರ ಮಹಾಕಪಿಃ ।
ಚತುರಂಗುಲಮಾತ್ರೋಽಪಿ ನಾವಕಾಶಃ ಸ ವಿದ್ಯತೇ ॥ ೧೭

ರಾವಣಾಂತಃಪುರೇ ತಸ್ಮಿನ್ ಯಂ ಕಪಿರ್ನ ಜಗಾಮ ಸಃ ।
ಪ್ರಾಕಾರಾಂತರರಥ್ಯಾಶ್ಚ ವೇದಿಕಾಶ್ಚೈತ್ಯಸಂಶ್ರಯಾಃ ॥ ೧೮

ಸೇರಿದ ಎಲ್ಲಾ ಸ್ಥಳಗಳನ್ನು ಹುಡುಕಿಬಿಡುತ್ತೇನೆ. ಈಗ ಪಾನಭೂಮಿ, ಪುಷ್ಪಗೃಹ, ಚಿತ್ರಶಾಲೆ, ಕ್ರೀಡಾಗೃಹಗಳನ್ನೆಲ್ಲಾ ನೋಡಿದ್ದಾಯಿತು. ಉದ್ಯಾನದ ಬೀದಿಗಳನ್ನೂ ವಿಮಾನಗಳನ್ನೂ ನೋಡಿ ಬಂದಿದ್ದೇನೆ. ಉಳಿದ ಎಲ್ಲ ಸ್ಥಳಗಳನ್ನೂ ನೋಡಿಬಿಡುತ್ತೇನೆ'' ಎಂದು ಆಲೋಚಿಸಿ ಹುಡುಕಲಾರಂಭಿಸಿದನು (೧೨-೧೪). ಅಲ್ಲಲ್ಲಿ ನೆಲಮಾಳಿಗೆಗಳನ್ನೂ, ಚೌಕದಲ್ಲಿರುವ ಮಂಟಪಗಳನ್ನೂ, ದೂರದಲ್ಲಿದ್ದ ಚಿಕ್ಕ ಮನೆಗಳನ್ನೂ ಶೋಧಿಸತೊಡಗಿದನು. ಆಂಜನೇಯನು ಮನೆಯಿಂದ ಮನೆಗೆ ನೆಗೆಯುತ್ತ, ಧುಮುಕುತ್ತ, ಅಲ್ಲಲ್ಲಿ ನಿಲ್ಲುತ್ತ, ಹೋಗುತ್ತ, ಬಾಗಿಲನ್ನು ತೆರೆಯುತ್ತ, ಕದಗಳನ್ನು ಬಡಿಯುತ್ತ, ಒಳಗೆ ಹೋಗುತ್ತ, ಹೊರಡುತ್ತ, ಇಳಿಯುತ್ತ, ಹತ್ತುತ್ತ ಎಲ್ಲಾ ಕಡೆಯಲ್ಲಿಯೂ ಸಂಚಾರಮಾಡಿದನು. ಅವನು ಶೋಧಿಸದೇ ಇದ್ದ ನಾಲ್ಕಂಗುಲ ಜಾಗವೂ ಉಳಿಯಲಿಲ್ಲ (೧೫-೧೭). ಪ್ರಾಕಾರದೊಳಗಿನ ಬೀದಿಗಳನ್ನೂ ಚೌಕದಲ್ಲಿನ ವೇದಿಕೆಗಳನ್ನೂ ಕೊಳಗಳನ್ನೂ ಬಿಡದೆ

ದೀರ್ಘಿಕಾಃ ಪುಷ್ಕರಿಣ್ಯಶ್ಚ ಸರ್ವಂ ತೇನಾವಲೋಕಿತಮ್ ।
ರಾಕ್ಷಸ್ಯೋ ವಿವಿಧಾಕಾರಾ ವಿರೂಪಾ ವಿಕೃತಾಸ್ತದಾ ॥ ೧೯

ದೃಷ್ಟ್ವಾ ಹನುಮತಾ ತತ್ರ ನ ತು ಸಾ ಜನಕಾತ್ಮಜಾ ।
ರೂಪೇಣಾಪ್ರತಿಮಾ ಲೋಕೇ ವರಾ ವಿದ್ಯಾಧರಸ್ತ್ರಿಯಃ ॥ ೨೦

ದೃಷ್ಟ್ವಾ ಹನುಮತಾ ತತ್ರ ನ ತು ರಾಘವನಂದಿನೀ ।
ನಾಗಕನ್ಯಾ ವರಾರೋಹಾಃ ಪೂರ್ಣಚಂದ್ರನಿಭಾನನಾಃ ॥ ೨೧

ದೃಷ್ಟ್ವಾ ಹನುಮತಾ ತತ್ರ ನ ತು ಸೀತಾ ಸುಮಧ್ಯಮಾ ।
ಪ್ರಮಥ್ಯ ರಾಕ್ಷಸೇಂದ್ರೇಣ ನಾಗಕನ್ಯಾ ಬಲಾದ್ಧೃತಾಃ ॥ ೨೨

ದೃಷ್ಟ್ವಾ ಹನುಮತಾ ತತ್ರ ನ ಸಾ ಜನಕನಂದಿನೀ ।
ಸೋಽಪಶ್ಯಂಸ್ತಾಂ ಮಹಾಬಾಹುಃ ಪಶ್ಯಂಶ್ಚಾನ್ಯಾ ವರಸ್ತ್ರಿಯಃ ॥ ೨೩

ವಿಷಸಾದ ಮುಹುರ್ಧೀಮಾನ್ ಹನುಮಾನ್ ಮಾರುತಾತ್ಮಜಃ ।
ಉದ್ಯೋಗಂ ವಾನರೇಂದ್ರಾಣಾಂ ಪ್ಲವನಂ ಸಾಗರಸ್ಯ ಚ ॥ ೨೪

ಶೋಧಿಸಿದನು. ಆದರೆ ನಾನಾ ರೂಪದ ವಿಕಾರಿಗಳಾದ ರಾಕ್ಷಸಸ್ತ್ರೀಯರನ್ನು ಮಾತ್ರ ಕಂಡನು (೧೮–೧೯). ಹನುಮಂತನು ಚೆಲುವೆಯರಾದ ಎಷ್ಟೋ ಮಂದಿ ವಿದ್ಯಾಧರ ಸ್ತ್ರೀಯರನ್ನು ನೋಡಿದನು. ಜಾನಕಿಯು ಮಾತ್ರ ಕಾಣಲಿಲ್ಲ. ಪೂರ್ಣಚಂದ್ರನಂತೆ ಮುಖವುಳ್ಳ ನಾಗಕನ್ನಿಕೆಯರನ್ನು ನೋಡಿದನು. ಶ್ರೀರಾಮನ ಪತ್ನಿಯು ಮಾತ್ರ ಕಾಣಲಿಲ್ಲ. ಬಲಾತ್ಕಾರದಿಂದ ರಾವಣನು ತಂದಿದ್ದ ಎಷ್ಟೋ ಸ್ತ್ರೀಯರನ್ನು ನೋಡಿದನು. ಸುಂದರಿಯಾದ ಸೀತೆಯು ಮಾತ್ರ ಕಾಣಲಿಲ್ಲ (೨೦–೨೨). ಹೀಗೆ ಎಲ್ಲಿ ಹುಡುಕಿದರೂ ಇತರ ಸ್ತ್ರೀಯರು ಕಾಣುತ್ತಿದ್ದರೇ ಹೊರತು, ಜಾನಕಿಯು ಕಾಣುತ್ತಿರಲಿಲ್ಲವಾದ್ದರಿಂದ ಹನುಮಂತನಿಗೆ ಬಹಳ ವಿಷಾದವಾಯಿತು. ಇದುವರೆಗೆ ವಾನರರು ಮಾಡಿದ ಪ್ರಯತ್ನವೂ, ತಾನು ಸಮುದ್ರವನ್ನು ಲಂಘಿಸಿದುದೂ ವ್ಯರ್ಥವಾಯಿತೆಂದು ಅವನಿಗೆ ಬಹಳ

ವ್ಯರ್ಥಂ ವೀಕ್ಷ್ಯಾನಿಲಸುತಶ್ಚಿಂತಾಂ ಪುನರುಪಾಗಮತ್ ।
ಅವತೀರ್ಯ ವಿಮಾನಾಚ್ಚ ಹನುಮಾನ್ ಮಾರುತಾತ್ಮಜಃ ॥ ೨೫
ಚಿಂತಾಮುಪಜಗಾಮಾಥ ಶೋಕೋಪಹತಚೇತನಃ ॥

ಇತಿ ಶ್ರೀಮದ್ರಾಮಾಯಣೇ ಸುಂದರಕಾಂಡೇ ದ್ವಾದಶಃ ಸರ್ಗಃ

ತ್ರಯೋದಶಃ ಸರ್ಗಃ

ಹನೂಮನ್ನಿರ್ವೇದಃ

ವಿಮಾನಾತ್ತು ಸುಸಂಕ್ರಮ್ಯ ಪ್ರಾಕಾರಂ ಹರಿಪುಂಗವಃ ।
ಹನುಮಾನ್ ವೇಗವಾನಾಸೀದ್ಯಥಾ ವಿದ್ಯುದ್ಘನಾಂತರೇ ॥ ೧
ಸಂಪರಿಕ್ರಮ್ಯ ಹನುಮಾನ್ ರಾವಣಸ್ಯ ನಿವೇಶನಮ್ ।
ಅದೃಷ್ಟ್ವಾ ಜಾನಕೀಂ ಸೀತಾಮಬ್ರವೀದ್ವಚನಂ ಕಪಿಃ ॥ ೨

ಚಿಂತೆಯಾಯಿತು (೨೩–೨೪). ಕಡೆಯಲ್ಲಿ ತನ್ನ ಪ್ರಯತ್ನವೆಲ್ಲವೂ ವ್ಯರ್ಥವಾಯಿತೆಂದು ಬಗೆದು ಆ ವಾಯುತನಯನು, ತಾನು ನಿಂತಿದ್ದ ವಿಮಾನದಿಂದ ಕೆಳಗಿಳಿದು ಏನೂ ತೋರದೆ ದುಃಖಿತನಾಗಿ ನಿಂತುಕೊಂಡನು (೨೫).

ಇಲ್ಲಿಗೆ ಶ್ರೀಮದ್ರಾಮಾಯಣದ ಸುಂದರಕಾಂಡದಲ್ಲಿ ಹನ್ನೆರಡನೆಯ ಸರ್ಗ

ಸರ್ಗ ೧೩

ಹನುಮಂತನು ಸೀತೆಯನ್ನೂ ಶ್ರೀರಾಮಾದಿಗಳನ್ನೂ ಕುರಿತು ನಾನಾವಿಧವಾಗಿ ಚಿಂತಿಸಿ ಕಡೆಗೆ ಅಶೋಕವನವನ್ನು ಶೋಧಿಸಬೇಕೆಂದು ಉದ್ದೇಶಿಸುವುದು. ತನ್ನ ಪ್ರಯತ್ನ ಸಫಲವಾಗಲೆಂದು ದೇವತೆಗಳನ್ನು ಪ್ರಾರ್ಥಿಸುವುದು.

ಹನುಮಂತನು ವಿಮಾನದಿಂದಿಳಿದಮೇಲೆ ಸ್ವಲ್ಪ ಹೊತ್ತು ಚಿಂತಿಸಿ ವೇಗದಿಂದ ಪ್ರಾಕಾರದ ಮೇಲೆ ಹತ್ತಿಕುಳಿತು, ಮೇಘಮಧ್ಯದಲ್ಲಿರುವ ಮಿಂಚಿನಂತೆ ಶೋಭಿಸಿದನು. ರಾವಣನ ಅರಮನೆಯನ್ನು ಶೋಧಿಸಿದರೂ ಸೀತೆಯು ಗೋಚರಿಸದೆ ಇದ್ದುದರಿಂದ ತನ್ನಲ್ಲಿಯೇ ಹೀಗೆಂದುಕೊಂಡನು (೧–೨):

ಭೂಯಿಷ್ಠಂ ಲೋಲಿತಾ ಲಂಕಾ ರಾಮಸ್ಯ ಚರತಾ ಪ್ರಿಯಮ್ ।
ನ ಹಿ ಪಶ್ಯಾಮಿ ವೈದೇಹೀಂ ಸೀತಾಂ ಸರ್ವಾಂಗಶೋಭನಾಮ್ ॥ ೩

ಪಲ್ವಲಾನಿ ತಟಾಕಾನಿ ಸರಾಂಸಿ ಸರಿತಸ್ತಥಾ ।
ನದ್ಯೋಽನೂಪವನಾಂತಾಶ್ಚ ದುರ್ಗಾಶ್ಚ ಧರಣೀಧರಾಃ ॥ ೪

ಲೋಲಿತಾ ವಸುಧಾ ಸರ್ವಾ ನ ತು ಪಶ್ಯಾಮಿ ಜಾನಕೀಮ್ ।
ಇಹ ಸಂಪಾತಿನಾ ಸೀತಾ ರಾವಣಸ್ಯ ನಿವೇಶನೇ ॥ ೫

ಆಖ್ಯಾತಾ ಗೃಧ್ರರಾಜೇನ ನ ಚ ಪಶ್ಯಾಮಿ ತಾಮಹಮ್ ।
ಕಿಂ ನು ಸೀತಾಥ ವೈದೇಹೀ ಮೈಥಿಲೀ ಜನಕಾತ್ಮಜಾ ॥ ೬

ಉಪತಿಷ್ಠೇತ ವಿವಶಾ ರಾವಣೇನ ಹೃತಾ ಬಲಾತ್ ।
ಕ್ಷಿಪ್ರಮುತ್ಪತತೋ ಮನ್ಯೇ ಸೀತಾಮಾದಾಯ ರಕ್ಷಸಃ ॥ ೭

ಬಿಭ್ಯತೋ ರಾಮಬಾಣಾನಾಮಂತರಾ ಪತಿತಾ ಭವೇತ್ ।
ಅಥವಾ ಹ್ರಿಯಮಾಣಾಯಾಃ ಪಥಿ ಸಿದ್ಧನಿಷೇವಿತೇ ॥ ೮

ಮನ್ಯೇ ಪತಿತಮಾರ್ಯಾಯಾ ಹೃದಯಂ ಪ್ರೇಕ್ಷ್ಯ ಸಾಗರಮ್ ।
ರಾವಣಸ್ಯೋರುವೇಗೇನ ಭುಜಾಭ್ಯಾಂ ಪೀಡಿತೇನ ಚ ॥ ೯

''ಶ್ರೀರಾಮನ ಹಿತವನ್ನು ಬಯಸಿ ಇಡೀ ಲಂಕಾಪಟ್ಟಣವನ್ನೇ ಹುಡುಕಿದರೂ ಸೀತಾದೇವಿಯನ್ನು ನಾನು ಕಾಣಲಾರದೆ ಹೋದೆನು. ಕೆರೆ, ಕೊಳ, ನದೀ, ಪರ್ವತಗಳನ್ನೆಲ್ಲಾ ಸುತ್ತಿದರೂ ಸೀತೆ ಕಾಣಲಿಲ್ಲ. ಗೃಧ್ರರಾಜನಾದ ಸಂಪಾತಿ ಯಾದರೋ ರಾವಣನ ಪಟ್ಟಣದಲ್ಲಿಯೇ ಇದ್ದಾಳೆಂದು ಹೇಳಿದ್ದಾನೆ. ಆದರೆ ಅವಳನ್ನು ಕಾಣೆನಲ್ಲ (೩–೫). ಆ ಸೀತೆ-ವೈದೇಹಿ-ಮೈಥಿಲಿ, ಜನಕರಾಜ ತನಯೆ, ಎಂದಿಗಾದರೂ ರಾವಣನನ್ನು ವರಿಸುತ್ತಾಳೆಯೆ ? ಸರ್ವಥಾ ಇಲ್ಲ. ಒಂದು ವೇಳೆ ಈ ರಾಕ್ಷಸನು ರಾಮಬಾಣಕ್ಕೆ ಹೆದರಿ ಓಡಿಬರುತ್ತಿರುವಾಗ, ಇವನ ಕೈಸಡಲಿ, ಸೀತೆಯು ಕೆಳಗೆ ಬಿದ್ದುಹೋಗಿರಬಹುದೆ ? (೬–೮). ರಾವಣನು ಸೀತೆಯನ್ನು ಅಪಹರಿಸಿಕೊಂಡು ಆಕಾಶಮಾರ್ಗದಲ್ಲಿ ಬರುತ್ತಿರುವಾಗ ಕೆಳಗೆ ಭೀಕರವಾದ ಸಮುದ್ರವನ್ನು ಕಂಡು, ದೇವಿಯು ಹೆದರಿ ಎದೆಯೊಡೆದು ಮೃತಳಾಗಿರಬಹುದೆ ?

ತಯಾ ಮನ್ಯೇ ವಿಶಾಲಾಕ್ಷ್ಯಾ ತ್ಯಕ್ತಂ ಜೀವಿತಮಾರ್ಯಯಾ ।
ಉಪರ್ಯುಪರಿ ವಾ ನೂನಂ ಸಾಗರಂ ಕ್ರಮತಸ್ತದಾ ॥ ೧೦

ವಿವೇಷ್ಟಮಾನಾ ಪತಿತಾ ಸಮುದ್ರೇ ಜನಕಾತ್ಮಜಾ ।
ಅಹೋ ಕ್ಷುದ್ರೇಣ ಚಾನೇನ ರಕ್ಷಂತೀ ಶೀಲಮಾತ್ಮನಃ ॥ ೧೧

ಅಬಂಧುರ್ಭಕ್ಷಿತಾ ಸೀತಾ ರಾವಣೇನ ತಪಸ್ವಿನೀ ।
ಅಥವಾ ರಾಕ್ಷಸೇಂದ್ರಸ್ಯ ಪತ್ನೀಭಿರಸಿತೇಕ್ಷಣಾ ॥ ೧೨

ಅದುಷ್ಟಾ ದುಷ್ಟಭಾವಾಭಿರ್ಭಕ್ಷಿತಾ ಸಾ ಭವಿಷ್ಯತಿ ।
ಸಂಪೂರ್ಣಚಂದ್ರಪ್ರತಿಮಂ ಪದ್ಮಪತ್ರನಿಭೇಕ್ಷಣಮ್ ॥ ೧೩

ರಾಮಸ್ಯ ಧ್ಯಾಯತೀ ವಕ್ತ್ರಂ ಪಂಚತ್ವಂ ಕೃಪಣಾ ಗತಾ ।
ಹಾ ರಾಮ ಲಕ್ಷ್ಮಣೇತ್ಯೇವಂ ಹಾಽಯೋಧ್ಯೇ ಚೇತಿ ಮೈಥಿಲೀ ॥ ೧೪

ವಿಲಪ್ಯ ಬಹು ವೈದೇಹೀ ನ್ಯಸ್ತದೇಹಾ ಭವಿಷ್ಯತಿ ।
ಅಥವಾ ನಿಹಿತಾ ಮನ್ಯೇ ರಾವಣಸ್ಯ ನಿವೇಶನೇ ॥ ೧೫

ಅಥವಾ ರಾವಣನ ಮುಷ್ಟಿಯ ಹಿಡಿತವನ್ನೂ ವೇಗವನ್ನೂ ಸಹಿಸಲಾರದೆ ದಾರಿಯಲ್ಲಿಯೇ ಸತ್ತುಹೋಗಿರಬಹುದು (೯–೧೦). ಇಲ್ಲವೆ, ರಾವಣನು ಸಮುದ್ರದಮೇಲೆ ಹಾರಿಬರುವಾಗ ಸೀತೆಯು ತಪ್ಪಿಸಿಕೊಳ್ಳುವುದಕ್ಕಾಗಿ ಪ್ರಯತ್ನಿಸಿ ಸಮುದ್ರದಲ್ಲಿ ಜಾರಿ ಬಿದ್ದಿರಬೇಕು. ಅಥವಾ ಈ ನೀಚರಾಕ್ಷಸನು ಸೀತೆಯು ತನ್ನ ವಶವಾಗದ್ದರಿಂದ ಕೋಪಗೊಂಡು ದಿಕ್ಕಿಲ್ಲದ ಅವಳನ್ನು ತಿಂದುಹಾಕಿರಬೇಕು (೧೧–೧೨). ಒಂದುವೇಳೆ ಈ ರಾವಣನ ಹೆಂಡತಿಯರೇ ತಮಗೆ ಸೀತೆ ಸವತಿಯಾದಾಳೆಂಬ ಅಸೂಯೆಯಿಂದ ಅವಳನ್ನು ಭಕ್ಷಿಸಿಬಿಟ್ಟಿರಬಹುದು. ಇಲ್ಲವೇ, ಆ ಸಾಧ್ವಿಯು ಪೂರ್ಣಚಂದ್ರನಿಗೆ ಸದೃಶವಾಗಿ, ಪದ್ಮದಳದಂತೆ ಮನೋಹರವಾದ ಕಣ್ಣುಗಳುಳ್ಳ ಶ್ರೀರಾಮನ ಮುಖವನ್ನೇ ಸ್ಮರಿಸಿಕೊಳ್ಳುತ್ತ ಅದೇ ಚಿಂತೆಯಿಂದ ಕೊರಗಿ ಪ್ರಾಣವನ್ನು ಬಿಟ್ಟಿರಬೇಕು (೧೩–೧೪). ಆ ಸಂದರ್ಭದಲ್ಲಿಯೂ 'ಹಾ ರಾಮ! ಹಾ ಲಕ್ಷ್ಮಣ! ಹಾ ಅಯೋಧ್ಯೆ!' ಎಂದು ಬಾರಿ ಬಾರಿಗೂ ಕೂಗಿಕೊಳ್ಳುತ್ತಲೇ ದೇಹವನ್ನು ಬಿಟ್ಟಿರಬೇಕು. ಒಂದು ವೇಳೆ ರಾವಣನು ಅವಳನ್ನು ಎಲ್ಲಿಯೋ ಗುಟ್ಟಾಗಿ ಪಂಜರದ ಗಿಳಿಯಂತೆ ಬಂಧನದಲ್ಲಿಟ್ಟಿರಬಹುದು. ಸೀತಾದೇವಿಯು ಜನಕ ಮಹಾರಾಜನ

ನೂನಂ ಲಾಲಪ್ಯತೇ ಸೀತಾ ಪಂಜರಸ್ಥೇವ ಶಾರಿಕಾ ।
ಜನಕಸ್ಯ ಸುತಾ ಸೀತಾ ರಾಮಪತ್ನೀ ಸುಮಧ್ಯಮಾ ॥ ೧೬
ಕಥಮುತ್ಪಲಪತ್ರಾಕ್ಷೀ ರಾವಣಸ್ಯ ವಶಂ ವ್ರಜೇತ್ ।
ವಿನಷ್ಟಾ ವಾ ಪ್ರನಷ್ಟಾ ವಾ ಮೃತಾ ವಾ ಜನಕಾತ್ಮಜಾ ॥ ೧೭
ರಾಮಸ್ಯ ಪ್ರಿಯಭಾರ್ಯಸ್ಯ ನ ನಿವೇದಯಿತುಂ ಕ್ಷಮಮ್ ।
ನಿವೇದ್ಯಮಾನೇ ದೋಷಃ ಸ್ಯಾದ್ದೋಷಃ ಸ್ಯಾದನಿವೇದನೇ ॥ ೧೮
ಕಥಂ ನು ಖಲು ಕರ್ತವ್ಯಂ ವಿಷಮಂ ಪ್ರತಿಭಾತಿ ಮೇ ।
ಅಸ್ಮಿನ್ನೇವಂ ಗತೇ ಕಾರ್ಯೇ ಪ್ರಾಪ್ತಕಾಲಂ ಕ್ಷಮಂ ಚ ಕಿಮ್ ॥ ೧೯
ಭವೇದಿತಿ ಮತಂ ಭೂಯೋ ಹನೂಮಾನ್ ಪ್ರವಿಚಾರಯನ್ ।
ಯದಿ ಸೀತಾಮದೃಷ್ಟ್ವಾಹಂ ವಾನರೇಂದ್ರಪುರೀಮಿತಃ ॥ ೨೦
ಗಮಿಷ್ಯಾಮಿ ತತಃ ಕೋ ಮೇ ಪುರುಷಾರ್ಥೋ ಭವಿಷ್ಯತಿ ।
ಮಮೇದಂ ಲಂಘನಂ ವ್ಯರ್ಥಂ ಸಾಗರಸ್ಯ ಭವಿಷ್ಯತಿ ॥ ೨೧
ಪ್ರವೇಶಶ್ಚೈವ ಲಂಕಾಯಾ ರಾಕ್ಷಸಾನಾಂ ಚ ದರ್ಶನಮ್ ।
ಕಿಂ ಮಾಂ ವಕ್ಷ್ಯತಿ ಸುಗ್ರೀವೋ ಹರಯೋ ವಾ ಸಮಾಗತಾಃ ॥ ೨೨

ಮಗಳು; ಶ್ರೀರಾಮಚಂದ್ರನ ಧರ್ಮಪತ್ನಿ. ಎಂದಿಗಾದರೂ ಅವಳು ರಾವಣನ ವಶವಾದಾಳೆ ? (೧೫-೧೬). ಪತ್ನಿಯಲ್ಲಿ ಅಷ್ಟೊಂದು ಪ್ರೇಮವಿಟ್ಟಿರುವ ಶ್ರೀರಾಮನಿಗೆ ನಾನು ಏನೆಂದು ಹೇಳಲಿ ? ಸೀತೆಯು ಕಾಣಲಿಲ್ಲವೆಂದೆ ? ರಾಕ್ಷಸರು ಕೊಂದರೆಂದೆ ? ಅಥವಾ ದುಃಖದಿಂದ ತಾನೇ ಮೃತಳಾದಳು ಎಂದೆ ? ಏನು ಹೇಳಲೂ ಸಾಧ್ಯವಿಲ್ಲ, ಹೇಳಿದರೂ ಕಷ್ಟ, ಹೇಳದಿದ್ದರೂ ಕಷ್ಟ (೧೭–೧೮). ಈಗ ಏನು ಮಾಡಬೇಕು ? ಪರಿಸ್ಥಿತಿಯು ಬಹಳ ಬಿಕ್ಕಟ್ಟಿಗೆ ಬಂದಿತು. ಈಗ ಏನು ಮಾಡುವುದು ಸರಿ ? (೧೯). ಹೀಗೆಯೇ ನಾನು ಕಿಷ್ಕಿಂಧೆಗೆ ಹೋಗಿಬಿಟ್ಟರೆ ಯಾವ ಪುರುಷಾರ್ಥವನ್ನು ಸಾಧಿಸಿದಂತೆ ಆಯಿತು ? ಸಮುದ್ರಲಂಘನವೇ ವ್ಯರ್ಥವಾಗುವುದಲ್ಲ (೨೦–೨೧). ಈ ದುರ್ಗಮವಾದ ಲಂಕೆಯನ್ನು ಪ್ರವೇಶಿಸಿ ರಾಕ್ಷಸರ ಮನೆಗಳನ್ನೆಲ್ಲಾ ಹುಡುಕಿನೋಡಿದ್ದೂ ವ್ಯರ್ಥವೇ ಆಗುವುದು. ನಾನು ಕಿಷ್ಕಿಂಧೆಗೆ ಹೊರಟುಹೋದರೆ ಸುಗ್ರೀವನಾಗಲಿ, ವಾನರರಾಗಲಿ ಅಥವಾ ರಾಮ

ಕಿಷ್ಕಿಂಧಾಂ ಸಮನುಪ್ರಾಪ್ತಂ ತೌ ವಾ ದಶರಥಾತ್ಮಜೌ ।
ಗತ್ವಾ ತು ಯದಿ ಕಾಕುತ್ಸ್ಥಂ ವಕ್ಷ್ಯಾಮಿ ಪರಮಪ್ರಿಯಮ್ ॥ ೨೩
ನ ದೃಷ್ಟೇತಿ ಮಯಾ ಸೀತಾ ತತಸ್ತ್ಯಕ್ಷ್ಯತಿ ಜೀವಿತಮ್ ।
ಪರುಷಂ ದಾರುಣಂ ಕ್ರೂರಂ ತೀಕ್ಷ್ಣಮಿಂದ್ರಿಯತಾಪನಮ್ ॥ ೨೪
ಸೀತಾನಿಮಿತ್ತಂ ದುರ್ವಾಕ್ಯಂ ಶ್ರುತ್ವಾ ಸ ನ ಭವಿಷ್ಯತಿ ।
ತಂ ತು ಕೃಚ್ಛ್ರಗತಂ ದೃಷ್ಟ್ವಾ ಪಂಚತ್ವಗತಮಾನಸಮ್ ॥ ೨೫
ಭೃಶಾನುರಕ್ತೋ ಮೇಧಾವೀ ನ ಭವಿಷ್ಯತಿ ಲಕ್ಷ್ಮಣಃ ।
ವಿನಷ್ಟೌ ಭ್ರಾತರೌ ಶ್ರುತ್ವಾ ಭರತೋಽಪಿ ಮರಿಷ್ಯತಿ ॥ ೨೬
ಭರತಂ ಚ ಮೃತಂ ದೃಷ್ಟ್ವಾ ಶತ್ರುಘ್ನೋ ನ ಭವಿಷ್ಯತಿ ।
ಪುತ್ರಾನ್ ಮೃತಾನ್ ಸಮೀಕ್ಷ್ಯಾಥ ನ ಭವಿಷ್ಯಂತಿ ಮಾತರಃ ॥ ೨೭
ಕೌಸಲ್ಯಾ ಚ ಸುಮಿತ್ರಾ ಚ ಕೈಕೇಯೀ ಚ ನ ಸಂಶಯಃ ।
ಕೃತಜ್ಞಃ ಸತ್ಯಸಂಧಶ್ಚ ಸುಗ್ರೀವಃ ಪ್ಲವಗಾಧಿಪಃ ॥ ೨೮
ರಾಮಂ ತಥಾಗತಂ ದೃಷ್ಟ್ವಾ ತತಸ್ತ್ಯಕ್ಷ್ಯತಿ ಜೀವಿತಮ್ ।
ದುರ್ಮನಾ ವ್ಯಥಿತಾ ದೀನಾ ನಿರಾನಂದಾ ತಪಸ್ವಿನೀ ॥ ೨೯

ಲಕ್ಷ್ಮಣರೇ ಆಗಲಿ ನನ್ನನ್ನು ನೋಡಿ ಏನು ಹೇಳಬಹುದು! (೨೨–೨೩). ನಾನು ಹೋಗಿ ಸೀತೆಯು ಸಿಕ್ಕಲಿಲ್ಲವೆಂಬ ಅಪ್ರಿಯವಾದ ಮಾತನ್ನು ಹೇಳಿದರೆ, ರಾಮನು ಪ್ರಾಣವನ್ನೇ ಬಿಟ್ಟುಬಿಡುವನು. ಕರ್ಣಕಠೋರವೂ ಹೃದಯಭೇದಕವೂ ಆದ ಈ ಕೆಟ್ಟ ಸುದ್ದಿಯನ್ನು ಕೇಳಿ ಶ್ರೀರಾಮನು ಬದುಕುವುದೆಂದರೇನು ? ರಾಮನು ಅಂತಹ ಕಷ್ಟಕ್ಕೆ ಸಿಕ್ಕಿ ಸಾಯಲು ನಿಶ್ಚಯಿಸಿರುವುದನ್ನು ತಿಳಿದು, ಅವನಲ್ಲಿ ಅತ್ಯಂತ ಸ್ನೇಹದಿಂದಿರುವ ಲಕ್ಷ್ಮಣನೂ ಜೀವಸಹಿತ ಉಳಿಯುವುದಿಲ್ಲ. ಹೀಗೆ ಅಣ್ಣತಮ್ಮಂದಿರಿಬ್ಬರೂ ಮೃತರಾದದ್ದನ್ನು ಕೇಳಿ ಭರತನು ಸಾಯುವುದು ನಿಶ್ಚಯ (೨೪–೨೬). ಭರತನು ಮೃತನಾದರೆ ಶತ್ರುಘ್ನನೂ ಉಳಿಯುವುದಿಲ್ಲ. ಮಕ್ಕಳೆಲ್ಲರೂ ಸತ್ತುಹೋದಮೇಲೆ ಜನನಿಯರಾದ ಕೌಸಲ್ಯೆ, ಕೈಕೇಯಿ, ಸುಮಿತ್ರೆಯರೂ ಎಂದೆಂದಿಗೂ ಬದುಕಿರಲಾರರು. ರಾಮನ ಸ್ಥಿತಿಯನ್ನು ಕಂಡು ಸತ್ಯಸಂಧನೂ ಕೃತಜ್ಞನೂ ಆದ ನಮ್ಮ ಸುಗ್ರೀವ ಮಹಾರಾಜನು ಪ್ರಾಣವನ್ನು

ಪೀಡಿತಾ ಭರ್ತೃಶೋಕೇನ ರುಮಾ ತ್ಯಕ್ಷತಿ ಜೀವಿತಮ್ ।
ವಾಲಿಜೇನ ತು ದುಃಖೇನ ಪೀಡಿತಾ ಶೋಕಕರ್ಶಿತಾ ॥ ೩೦
ಪಂಚತ್ವಂ ಚ ಗತೇ ರಾಜ್ಞಿ ತಾರಾಪಿ ನ ಭವಿಷ್ಯತಿ ।
ಮಾತಾಪಿತ್ರೋರ್ವಿನಾಶೇನ ಸುಗ್ರೀವವ್ಯಸನೇನ ಚ ॥ ೩೧
ಕುಮಾರೋಽಪ್ಯಂಗದಃ ಕಸ್ಮಾದ್ಧಾರಯಿಷ್ಯತಿ ಜೀವಿತಮ್ ।
ಭರ್ತೃಜೇನ ತು ದುಃಖೇನ ಹ್ಯಭಿಭೂತಾ ವನೌಕಸಃ ॥ ೩೨
ಶಿರಾಂಸ್ಯಭಿಹನಿಷ್ಯಂತಿ ತಲೈರ್ಮುಷ್ಟಿಭಿರೇವ ಚ ।
ಸಾಂತ್ವೇನಾನುಪ್ರದಾನೇನ ಮಾನೇನ ಚ ಯಶಸ್ವಿನಾ ॥ ೩೩
ಲಾಲಿತಾಃ ಕಪಿರಾಜೇನ ಪ್ರಾಣಾಂಸ್ತ್ಯಕ್ಷ್ಯಂತಿ ವಾನರಾಃ ।
ನ ವನೇಷು ನ ಶೈಲೇಷು ನ ನಿರೋಧೇಷು ವಾ ಪುನಃ ॥ ೩೪
ಕ್ರೀಡಾಮನುಭವಿಷ್ಯಂತಿ ಸಮೇತ್ಯ ಕಪಿಕುಂಜರಾಃ ।
ಸಪುತ್ರದಾರಾಃ ಸಾಮಾತ್ಯಾ ಭರ್ತೃವ್ಯಸನಪೀಡಿತಾಃ ॥ ೩೫
ಶೈಲಾಗ್ರೇಭ್ಯಃ ಪತಿಷ್ಯಂತಿ ಸಮೇತ್ಯ ವಿಷಮೇಷು ಚ ।
ವಿಷಮುದ್ಬಂಧನಂ ವಾಪಿ ಪ್ರವೇಶಂ ಜ್ವಲನಸ್ಯ ವಾ ॥ ೩೬

ತ್ಯಜಿಸಿಬಿಡುವನು (೨೬–೨೯). ಸುಗ್ರೀವನ ಹೆಂಡತಿಯಾದ ರುಮೆಯು ಪತಿ ಶೋಕದಿಂದ ಖಿನ್ನಳಾಗಿ ಸಾಯುವಳು. ಮೊದಲೇ ವಾಲಿಯ ಮರಣದಿಂದ ಕೊರ ಗುತ್ತಿರುವ ತಾರೆಯು, ಸುಗ್ರೀವನೂ ಮೃತನಾದರೆ ಎಂದಿಗೂ ಬದುಕಿರಲಾರಳು. ತಂದೆತಾಯಿಗಳೂ ಸುಗ್ರೀವನೂ ಸತ್ತುಹೋದಮೇಲೆ ಅಂಗದಕುಮಾರನು ಎಂದಿಗಾದರೂ ಜೀವಿಸಿರುವನೆ ? (೩೦–೩೨). ಕೀರ್ತಿಶಾಲಿಯಾದ ಸುಗ್ರೀವನು ಸಾಮದಾನಗಳಿಂದಲೂ ಅಭಿಮಾನದಿಂದಲೂ ಸಮಸ್ತ ವಾನರರನ್ನೂ ಕಾಪಾಡು ತ್ತಿರುವನು. ಅಂತಹ ರಾಜನು ಮೃತನಾದನೆಂದು ತಿಳಿದು ಈ ವಾನರರೆಲ್ಲರೂ ತಲೆಯನ್ನು ಒಡೆದುಕೊಂಡು ಸಾಯುವುದು ನಿಶ್ಚಯ. ಈ ವಾನರರು ಇನ್ನು ಮೇಲೆ ಕಾಡಿನಲ್ಲಾಗಲಿ, ಬೆಟ್ಟಗಳಲ್ಲಾಗಲಿ, ಗುಹೆಗಳಲ್ಲಾಗಲಿ ಸೇರಿ ವಿನೋದದಿಂದ ಕ್ರೀಡಿಸುವ ಆಸೆಯೇ ಇಲ್ಲ (೩೩–೩೫). ಇವರು ಅತ್ಯಂತ ದುಃಖಿತರಾಗಿ ಹೆಂಡತಿ ಮಕ್ಕಳೊಡನೆ ಪರ್ವತಶಿಖರಗಳಿಂದ ಹಾರಿಕೊಂಡು ಪ್ರಾಣಬಿಡುವರು. ಇಲ್ಲವೆ

ಉಪವಾಸಮಥೋ ಶಸ್ತ್ರಂ ಪ್ರಚರಿಷ್ಯಂತಿ ವಾನರಾಃ ।
ಘೋರಮಾರೋದನಂ ಮನ್ಯೇ ಗತೇ ಮಯಿ ಭವಿಷ್ಯತಿ ॥ ೩೭
ಇಕ್ಷ್ವಾಕುಕುಲನಾಶಶ್ಚ ನಾಶಶ್ಚೈವ ವನೌಕಸಾಮ್ ।
ಸೋಽಹಂ ನೈವ ಗಮಿಷ್ಯಾಮಿ ಕಿಷ್ಕಿಂಧಾಂ ನಗರೀಮಿತಃ ॥ ೩೮
ನ ಚ ಶಕ್ಷ್ಯಾಮ್ಯಹಂ ದ್ರಷ್ಟುಂ ಸುಗ್ರೀವಂ ಮೈಥಿಲೀಂ ವಿನಾ ।
ಮಯ್ಯಗಚ್ಛತಿ ಚೇಹಸ್ಥೇ ಧರ್ಮಾತ್ಮಾನೌ ಮಹಾರಥೌ ॥ ೩೯
ಆಶಯಾ ತೌ ಧರಿಷ್ಯೇತೇ ವಾನರಾಶ್ಚ ಮನಸ್ವಿನಃ ।
ಹಸ್ತಾದಾನೋ ಮುಖಾದಾನೋ ನಿಯತೋ ವೃಕ್ಷಮೂಲಿಕಃ ॥ ೪೦
ವಾನಪ್ರಸ್ಥೋ ಭವಿಷ್ಯಾಮಿ ಹ್ಯದೃಷ್ಟ್ವಾ ಜನಕಾತ್ಮಜಾಮ್ ।
ಸಾಗರಾನೂಪಜೇ ದೇಶೇ ಬಹುಮೂಲಫಲೋದಕೇ ॥ ೪೧
ಚಿತಾಂ ಕೃತ್ವಾ ಪ್ರವೇಕ್ಷ್ಯಾಮಿ ಸಮಿದ್ಧಮರಣೀಸುತಮ್ ।
ಉಪವಿಷ್ಟಸ್ಯ ವಾ ಸಮ್ಯಗ್ಲಿಂಗಿನಂ ಸಾಧಯಿಷ್ಯತಃ ॥ ೪೨

ವಿಷವನ್ನು ಕುಡಿದೋ, ನೇಣುಹಾಕಿಕೊಂಡೋ, ಬೆಂಕಿಯಲ್ಲಿ ಬಿದ್ದೋ, ಉಪವಾಸ ಮಾಡಿಯೋ ಅಥವಾ ಆಯುಧಗಳಿಂದ ಕತ್ತರಿಸಿಕೊಂಡೋ ಪ್ರಾಣ ಬಿಡುವರು. ನಾನು ಹೋದಮೇಲೆ ಎಲ್ಲೆಲ್ಲಿಯೂ ರೋದನ ಧ್ವನಿಯೇ ಪ್ರಾರಂಭವಾಗುವುದು (೩೬–೩೭). ಇಕ್ಷ್ವಾಕುವಂಶವೂ ಕಪಿವಂಶವೂ ನಾಶವಾಗಿಬಿಡುವುವು. ಆದ್ದರಿಂದ ನಾನು ಕಿಷ್ಕಿಂಧೆಗೆ ಹೋಗುವುದೇ ಇಲ್ಲ(೩೮). ಸೀತೆಯನ್ನು ನೋಡದೆ ಸುಗ್ರೀವನ ಬಳಿಗೆ ಹೋಗಲು ನನ್ನಿಂದ ಆಗದು. ನಾನು ಹೋಗದೆ ಇಲ್ಲಿಯೇ ಇದ್ದುಬಿಟ್ಟರೆ ಧರ್ಮಾತ್ಮರಾದ ರಾಮಲಕ್ಷ್ಮಣರು ಸೀತೆಯ ಸುದ್ದಿಯನ್ನು ತಿಳಿಯುವ ಆಸೆಯಿಂದಲಾದರೂ ಜೀವಿಸಿರುವರು. ಕಪಿಗಳೂ ಉಳಿದುಕೊಳ್ಳುವರು. ಆದುದರಿಂದ ನಾನು ತಾನಾಗಿ ಕೈಗೆ ಸಿಕ್ಕಿದ, ಬಾಯಿಗೆ ಬಿದ್ದ ಆಹಾರದಿಂದ ತೃಪ್ತನಾಗಿ, ಯಾವುದಾದರೊಂದು ಮರದ ಬುಡದಲ್ಲಿ ವಾನಪ್ರಸ್ಥನಾಗಿ ನಿಯಮಪಾಲನೆ ಮಾಡುತ್ತ ಫಲಸಮೃದ್ಧವಾದ ಈ ಸಮುದ್ರತೀರದಲ್ಲಿ ಇದ್ದುಬಿಡುವೆನು (೩೯–೪೧). ಅಥವಾ ಚಿತೆಯನ್ನು ಏರ್ಪಡಿಸಿ ಅಗ್ನಿಯಲ್ಲಿ ಬಿದ್ದುಬಿಡುವೆನು. ಇಲ್ಲವೆ ಪ್ರಾಣವನ್ನು ಬಿಡಲು ನಿಶ್ಚಯಿಸಿ, ಪ್ರಾಯೋಪವೇಶವನ್ನು ಮಾಡುತ್ತಾ ಕುಳಿತು

ಶರೀರಂ ಭಕ್ಷಯಿಷ್ಯಂತಿ ವಾಯಸಾಃ ಶ್ವಾಪದಾನಿ ಚ ।
ಇದಂ ಮಹರ್ಷಿಭಿರ್ದೃಷ್ಟಂ ನಿರ್ಯಾಣಮಿತಿ ಮೇ ಮತಿಃ ॥ ೪೩
ಸಮ್ಯಗಾಪಃ ಪ್ರವೇಕ್ಷ್ಯಾಮಿ ನ ಚೇತ್ ಪಶ್ಯಾಮಿ ಜಾನಕೀಮ್ ।
ಸುಜಾತಮೂಲಾ ಸುಭಗಾ ಕೀರ್ತಿಮಾಲಾ ಯಶಸ್ವಿನೀ ॥ ೪೪
ಪ್ರಭಗ್ನಾ ಚಿರರಾತ್ರಾಯ ಮಮ ಸೀತಾಮಪಶ್ಯತಃ ।
ತಾಪಸೋ ವಾ ಭವಿಷ್ಯಾಮಿ ನಿಯತೋ ವೃಕ್ಷಮೂಲಿಕಃ ॥ ೪೫
ನೇತಃ ಪ್ರತಿಗಮಿಷ್ಯಾಮಿ ತಾಮದೃಷ್ಟ್ವಾಸಿತೇಕ್ಷಣಾಮ್ ।
ಯದೀತಃ ಪ್ರತಿಗಚ್ಛಾಮಿ ಸೀತಾಮನಧಿಗಮ್ಯ ತಾಮ್ ॥ ೪೬
ಅಂಗದಃ ಸಹ ತೈಃ ಸರ್ವೈರ್ವಾನರೈರ್ನ ಭವಿಷ್ಯತಿ ।
ವಿನಾಶೇ ಬಹವೋ ದೋಷಾ ಜೀವನ್ ಭದ್ರಾಣಿ ಪಶ್ಯತಿ ॥ ೪೭
ತಸ್ಮಾತ್ ಪ್ರಾಣಾನ್ ಧರಿಷ್ಯಾಮಿ ಧ್ರುವೋ ಜೀವತಿ ಸಂಗಮಃ ।
ಏವಂ ಬಹುವಿಧಂ ದುಃಖಂ ಮನಸಾ ಧಾರಯನ್ ಮುಹುಃ ॥ ೪೮

ಬಿಡುವೆನು. ನನ್ನ ದೇಹವನ್ನು ಕಾಗೆಗಳೂ ಕಾಡುಮೃಗಗಳೂ ತಿಂದುಬಿಡಲಿ! ಸೀತಾದೇವಿಯನ್ನು ನೋಡದಿದ್ದರೆ ನೀರಿಗಾದರೂ ಬಿದ್ದು ನಾನು ಪ್ರಾಣಬಿಡುವುದು ನಿಶ್ಚಯ. ಹೀಗೆ ಒಳ್ಳೆಯ ಉದ್ದೇಶಕ್ಕಾಗಿ ಆತ್ಮತ್ಯಾಗ ಮಾಡುವುದನ್ನು ಮಹರ್ಷಿಗಳು ಅನುಮೋದಿಸಿದ್ದಾರೆಂದು ನನ್ನ ಭಾವನೆ (೪೨–೪೪). ನನಗೆ ಲಭಿಸಲೇಬೇಕಾಗಿದ್ದ ಯಶೋಮಾಲಿಕೆಯು, ಸೀತಾದೇವಿಯನ್ನು ಕಾಣದೆಹೋದ್ದರಿಂದ ಎಂದೆಂದಿಗೂ ನನಗೆ ಇಲ್ಲದಂತಾಯಿತು. ಮರದ ಕೆಳಗೆ ತಪಸ್ಸು ಮಾಡುತ್ತಲಾದರೂ ಇರುವೆನೇ ಹೊರತು, ಸೀತೆಯನ್ನು ಕಾಣದೆ ಎಂದಿಗೂ ನಾನು ಹಿಂದಿರುಗುವುದಿಲ್ಲ. ಬರಿಗೈಯಲ್ಲಿ ನಾನು ಮಹೇಂದ್ರಪರ್ವತಕ್ಕೆ ಹೋದರೂ, ಅಂಗದನೂ ಕಪಿಗಳೂ ಬದುಕಿ ಉಳಿಯುವುದಿಲ್ಲ'' (೪೫–೪೬). ಹೀಗೆ ಚಿಂತಿಸಿದಮೇಲೆ ಹನುಮಂತನಿಗೆ ಇನ್ನೊಂದು ಆಲೋಚನೆ ಹುಟ್ಟಿತು: ''ಆತ್ಮಹತ್ಯೆ ಸರಿಯಲ್ಲ. ಅದರಲ್ಲಿ ಬಹಳ ದೋಷಗಳುಂಟು. ಬದುಕಿದ್ದರೆ ಒಂದಲ್ಲ ಒಂದು ದಿನ ಒಳ್ಳೆಯದನ್ನು ಕಾಣಬಹುದು. ಆದ್ದರಿಂದ ನಾನು ಸಾಯಬಾರದು. ಜೀವಿಸಿದ್ದರೆ ಶ್ರೇಯಸ್ಸು ಲಭಿಸಿಯೇ ತೀರುವುದು''. ಹೀಗೆ ಬಹುವಿಧದಲ್ಲಿ ಹನುಮಂತನು ಕೊರಗುತ್ತಿದ್ದನು

ನಾಧ್ಯಗಚ್ಛತ್ತದಾ ಪಾರಂ ಶೋಕಸ್ಯ ಕಪಿಕುಂಜರಃ ।
ತತೋ ವಿಕ್ರಮಮಾಸಾದ್ಯ ಧೈರ್ಯವಾನ್ ಕಪಿಕುಂಜರಃ ॥ ೪೯
ರಾವಣಂ ವಾ ವಧಿಷ್ಯಾಮಿ ದಶಗ್ರೀವಂ ಮಹಾಬಲಮ್ ।
ಕಾಮಮಸ್ತು ಹೃತಾ ಸೀತಾ ಪ್ರತ್ಯಾಚೀರ್ಣಂ ಭವಿಷ್ಯತಿ ॥ ೫೦
ಅಥವೈನಂ ಸಮುತ್ಕ್ಷಿಪ್ಯ ಉಪರ್ಯುಪರಿ ಸಾಗರಮ್ ।
ರಾಮಾಯೋಪಹರಿಷ್ಯಾಮಿ ಪಶುಂ ಪಶುಪತೇರಿವ ॥ ೫೧
ಇತಿ ಚಿಂತಾಂ ಸಮಾಪನ್ನಃ ಸೀತಾಮನಧಿಗಮ್ಯ ತಾಮ್ ।
ಧ್ಯಾನಶೋಕಪರೀತಾತ್ಮಾ ಚಿಂತಯಾಮಾಸ ವಾನರಃ ॥ ೫೨
ಯಾವತ್ ಸೀತಾಂ ಹಿ ಪಶ್ಯಾಮಿ ರಾಮಪತ್ನೀಂ ಯಶಸ್ವಿನೀಮ್ ।
ತಾವದೇತಾಂ ಪುರೀಂ ಲಂಕಾಂ ವಿಚಿನೋಮಿ ಪುನಃ ಪುನಃ ॥ ೫೩
ಸಂಪಾತಿವಚನಾಚ್ಚಾಪಿ ರಾಮಂ ಯದ್ಯಾನಯಾಮ್ಯಹಮ್ ।
ಅಪಶ್ಯನ್ ರಾಘವೋ ಭಾರ್ಯಾಂ ನಿರ್ದಹೇತ್ ಸರ್ವವಾನರಾನ್॥ ೫೪
ಇಹೈವ ನಿಯತಾಹಾರೋ ವತ್ಸ್ಯಾಮಿ ನಿಯತೇಂದ್ರಿಯಃ ।
ನ ಮತ್ಕೃತೇ ವಿನಶ್ಯೇಯುಃ ಸರ್ವೇ ತೇ ನರವಾನರಾಃ ॥ ೫೫

(೪೭–೪೮). ಅವನ ಶೋಕಕ್ಕೆ ಪಾರವೇ ಉಳಿಯಲಿಲ್ಲ. ಆಮೇಲೆ ಆ ಕಪಿಶ್ರೇಷ್ಠನು ಮನಸ್ಸಿನಲ್ಲಿ ಧೈರ್ಯವನ್ನು ತಂದುಕೊಂಡು "ಸೀತೆಯು ಸಿಕ್ಕದಿದ್ದರೆ ಹೋಗಲಿ, ಬಲಾಢ್ಯನಾದ ಈ ರಾವಣನನ್ನಾದರೂ ಕೊಂದುಹಾಕಿ ಸೇಡನ್ನು ತೀರಿಸಿಕೊಳ್ಳುತ್ತೇನೆ! ಅಥವಾ ರಾವಣನನ್ನು ಹಿಂಗಟ್ಟುಕಟ್ಟಿ ಸಮುದ್ರದ ಮೇಲೆ ಹಾರುತ್ತ ಸೆಳೆದೊಯ್ದು ರುದ್ರನಿಗೆ ಪಶುವನ್ನೊಪ್ಪಿಸುವಂತೆ ರಾಮನಿಗೆ ಬಲಿಯಾಗಿ ಒಪ್ಪಿಸಿಬಿಡುತ್ತೇನೆ!" ಎಂದು ಆಲೋಚಿಸಿದನು. ಮತ್ತೆ ಯಾವ ನಿಶ್ಚಯವೂ ಇಲ್ಲದೆ ಚಿಂತಾಗ್ರಸ್ತನಾದನು (೪೯–೫೨). "ರಾಮಪತ್ನಿಯು ಕಣ್ಣಿಗೆ ಬೀಳುವವರೆಗೂ ಮತ್ತೆ ಮತ್ತೆ ಈ ಲಂಕೆಯಲ್ಲಿ ಹುಡುಕಿನೋಡುತ್ತೇನೆ. ಸಂಪಾತಿಯೇನೋ ಸೀತೆ ಇಲ್ಲಿಯೇ ಇದ್ದಾಳೆಂದು ಹೇಳಿದ್ದಾನೆ. ಅವನ ಮಾತನ್ನು ನಂಬಿ ರಾಮನನ್ನೇ ನಾನು ಇಲ್ಲಿಗೆ ಕರೆತಂದರೆ ಹೇಗೆ ? ಇಲ್ಲಿ ಸೀತೆಯನ್ನು ಕಾಣದಿದ್ದರೆ ರಾಮನು ಕ್ರುದ್ಧನಾಗಿ ನಮ್ಮ ವಂಶವನ್ನೇ ಸುಟ್ಟುಹಾಕಿಬಿಡುವನು! (೫೩–೫೪). ಆದ್ದರಿಂದ ನಾನು

ಅಶೋಕವನಿಕಾ ಚೇಯಂ ದೃಶ್ಯತೇ ಯಾ ಮಹಾದ್ರುಮಾ ।
ಇಮಾಮಭಿಗಮಿಷ್ಯಾಮಿ ನ ಹೀಯಂ ವಿಚಿತಾ ಮಯಾ ॥ ೫೬
ವಸೂನ್ ರುದ್ರಾಂಸ್ತಥಾದಿತ್ಯಾನಶ್ವಿನೌ ಮರುತೋಽಪಿ ಚ ।
ನಮಸ್ಕೃತ್ವಾ ಗಮಿಷ್ಯಾಮಿ ರಕ್ಷಸಾಂ ಶೋಕವರ್ಧನಃ ॥ ೫೭
ಜಿತ್ವಾ ತು ರಾಕ್ಷಸಾನ್ ಸರ್ವಾನಿಕ್ಷ್ವಾಕುಕುಲನಂದಿನೀಮ್ ।
ಸಂಪ್ರದಾಸ್ಯಾಮಿ ರಾಮಾಯ ಯಥಾ ಸಿದ್ಧಿಂ ತಪಸ್ವಿನೇ ॥ ೫೮
ಸ ಮುಹೂರ್ತಮಿವ ಧ್ಯಾತ್ವಾ ಚಿಂತಾವಗ್ರಥಿತೇಂದ್ರಿಯಃ ।
ಉದತಿಷ್ಠನ್ಮಹಾತೇಜಾ ಹನೂಮಾನ್ ಮಾರುತಾತ್ಮಜಃ ॥ ೫೯

ನಮೋಽಸ್ತು ರಾಮಾಯ ಸಲಕ್ಷ್ಮಣಾಯ
ದೇವ್ಯೈ ಚ ತಸ್ಯೈ ಜನಕಾತ್ಮಜಾಯೈ ।
ನಮೋಽಸ್ತು ರುದ್ರೇಂದ್ರಯಮಾನಿಲೇಭ್ಯೋ
ನಮೋಽಸ್ತು ಚಂದ್ರಾರ್ಕಮರುದ್ಗಣೇಭ್ಯಃ ॥ ೬೦

ಸ ತೇಭ್ಯಸ್ತು ನಮಸ್ಕೃತ್ವಾ ಸುಗ್ರೀವಾಯ ಚ ಮಾರುತಿಃ ।
ದಿಶಃ ಸರ್ವಾಃ ಸಮಾಲೋಕ್ಯ ಹ್ಯಶೋಕವನಿಕಾಂ ಪ್ರತಿ ॥ ೬೧

ಆಹಾರನಿಯಮದಿಂದ ಜಿತೇಂದ್ರಿಯನಾಗಿ ಇಲ್ಲಿಯೇ ಇದ್ದುಬಿಡುವೆನು. ನನಗೋಸ್ಕರ ಆ ಜನರೆಲ್ಲರೂ ಸಾಯುವುದು ಬೇಡ'' ಎಂದು ಚಿಂತಿಸಿದನು (೫೫). ''ಓಹೋ ! ಅಲ್ಲಿ ಅಶೋಕ ವೃಕ್ಷಗಳ ಒಂದು ವನ ಗೋಚರಿಸುತ್ತಿದೆ. ಅಲ್ಲಿಗೆ ಹೋಗುವೆನು. ಅದನ್ನು ನಾನು ಹುಡುಕಲಿಲ್ಲ. ಈ ರಾಕ್ಷಸರಿಗೆ ಕಷ್ಟ ಒದಗಲೆಂದು ವಸುರುದ್ರಾದಿ ದೇವತೆಗಳಿಗೆ ವಂದಿಸುತ್ತೇನೆ. ಈ ರಾಕ್ಷಸರನ್ನು ಜಯಿಸಿ, ತಪಸ್ವಿಗೆ ತಪಸ್ಸಿದ್ಧಿಯು ಲಭಿಸುವಂತೆ ಶ್ರೀರಾಮನಿಗೆ ಇಕ್ಷ್ವಾಕುಕುಲನಂದಿನಿಯಾದ ಸೀತೆಯು ಲಭಿಸುವಂತೆ ಮಾಡುತ್ತೇನೆ'' ಎಂದು ವಾನರಶ್ರೇಷ್ಠನು ಒಂದು ಕ್ಷಣಕಾಲ ಆಲೋಚಿಸಿ ಎದ್ದುನಿಂತನು (೫೬–೫೯). ''ಶ್ರೀರಾಮನಿಗೆ ನಮಸ್ಕಾರ ! ಲಕ್ಷ್ಮಣನಿಗೆ ನಮಸ್ಕಾರ ! ಜನಕಪುತ್ರಿಯಾದ ದೇವಿಗೆ ನಮಸ್ಕಾರ ! ರುದ್ರರಿಗೂ ಇಂದ್ರ ಯಮ ವಾಯುದೇವತೆಗಳಿಗೂ, ಚಂದ್ರ ಸೂರ್ಯ ಮರುತ್ತುಗಳಿಗೂ ನಮಸ್ಕಾರ !'' ಎಂದು ಅವರೆಲ್ಲರಿಗೂ ನಮಸ್ಕರಿಸಿ, ಸುಗ್ರೀವನಿಗೂ ವಂದಿಸಿ ಅಶೋಕವನದ ಎಲ್ಲಾ

ಸ ಗತ್ವಾ ಮನಸಾ ಪೂರ್ವಮಶೋಕವನಿಕಾಂ ಶುಭಾಮ್ ।
ಉತ್ತರಂ ಚಿಂತಯಾಮಾಸ ವಾನರೋ ಮಾರುತಾತ್ಮಜಃ ॥ ೬೨

ಧ್ರುವಂ ತು ರಕ್ಷೋಬಹುಲಾ ಭವಿಷ್ಯತಿ ವನಾಕುಲಾ ।
ಅಶೋಕವನಿಕಾಽಚಿಂತ್ಯಾ ಸರ್ವಸಂಸ್ಕಾರಸಂಸ್ಕೃತಾ ॥ ೬೩

ರಕ್ಷಿಣಶ್ಚಾತ್ರ ವಿಹಿತಾ ನೂನಂ ರಕ್ಷಂತಿ ಪಾದಪಾನ್ ।
ಭಗವಾನಪಿ ಸರ್ವಾತ್ಮಾ ನಾತಿಕ್ಷೋಭಂ ಪ್ರವಾತಿ ವೈ ॥ ೬೪

ಸಂಕ್ಷಿಪ್ತೋಽಯಂ ಮಯಾತ್ಮಾ ಚ ರಾಮಾರ್ಥೇ ರಾವಣಸ್ಯ ಚ ।
ಸಿದ್ಧಿಂ ಮೇ ಸಂವಿಧಾಸ್ಯಂತಿ ದೇವಾಃ ಸರ್ಷಿಗಣಾಸ್ತ್ವಿಹ ॥ ೬೫

ಬ್ರಹ್ಮಾ ಸ್ವಯಂಭೂರ್ಭಗವಾನ್ ದೇವಾಶ್ಚೈವ ದಿಶಂತು ಮೇ ।
ಸಿದ್ಧಿಮಗ್ನಿಶ್ಚ ವಾಯುಶ್ಚ ಪುರುಹೂತಶ್ಚ ವಜ್ರಭೃತ್ ॥ ೬೬

ವರುಣಃ ಪಾಶಹಸ್ತಶ್ಚ ಸೋಮಾದಿತ್ಯೌ ತಥೈವ ಚ ।
ಅಶ್ವಿನೌ ಚ ಮಹಾತ್ಮಾನೌ ಮರುತಃ ಸರ್ವ ಏವ ಚ ॥ ೬೭

ಸಿದ್ಧಿಂ ಸರ್ವಾಣಿ ಭೂತಾನಿ ಭೂತಾನಾಂ ಚೈವ ಯಃ ಪ್ರಭುಃ ।
ದಾಸ್ಯಂತಿ ಮಮ ಯೇ ಚಾನ್ಯೇ ಹ್ಯದೃಷ್ಟಾಃ ಪಥಿ ಗೋಚರಾಃ ॥ ೬೮

ದಿಕ್ಕುಗಳನ್ನೂ ಗಮನಿಸಿ ನೋಡಿದನು (೬೦–೬೧). ಮನಸ್ಸಿನಲ್ಲಿ ಅಶೋಕವನಕ್ಕೇ ಹೋದಂತೆ ಭಾವಿಸಿಕೊಂಡು, ಅಲ್ಲಿ ಏನೇನಿರಬಹುದೆಂದು ಆಲೋಚಿಸಿದನು: ''ಅಲ್ಲಿ ಬಹಳ ರಾಕ್ಷಸರು ಇರುತ್ತಾರೆಂಬುದರಲ್ಲಿ ಸಂಶಯವಿಲ್ಲ. ಅದು ಪರಿಷ್ಕಾರಮಾಡಿದ ಉದ್ಯಾನವನ. ಕಾವಲುಗಾರರು ಎಚ್ಚರಿಕೆಯಿಂದ ಕಾಯುತ್ತಿರಬಹುದು. ಭಗವಾನ್ ವಾಯುದೇವನೂ ಅಲ್ಲಿ ಬಿರುಸಾಗಿ ಬೀಸಲಾರನು (೬೨–೬೪). ಒಳ್ಳೆಯದು. ನಾನು ರಾಮನ ಕಾರ್ಯಸಿದ್ಧಿಗಾಗಿಯೂ, ರಾವಣನನ್ನು ವಂಚಿಸುವುಕ್ಕಾಗಿಯೂ ದೇಹವನ್ನು ಚಿಕ್ಕದಾಗಿ ಮಾಡಿಕೊಂಡಿರುವೆನು. ದೇವತೆಗಳೂ ಋಷಿಗಳೂ ನನ್ನ ಕಾರ್ಯವನ್ನು ಕೈಗೂಡಿಸಲೆಂದು ಪ್ರಾರ್ಥಿಸುತ್ತೇನೆ. ಭಗವಾನ್ ಬ್ರಹ್ಮದೇವನೂ ಇಂದ್ರಾದಿದೇವತೆಗಳೂ ಮಾರ್ಗರಕ್ಷಕರಾದ ಎಲ್ಲ

ತದುನ್ನಸಂ ಪಾಂಡರದಂತಮವ್ರಣಂ
ಶುಚಿಸ್ಮಿತಂ ಪದ್ಮಪಲಾಶಲೋಚನಮ್ ।
ದ್ರಕ್ಷ್ಯೇ ತದಾರ್ಯಾವದನಂ ಕದಾ ನ್ವಹಂ
ಪ್ರಸನ್ನತಾರಾಧಿಪತುಲ್ಯದರ್ಶನಮ್ ॥ ೬೯

ಕ್ಷುದ್ರೇಣ ಪಾಪೇನ ನೃಶಂಸಕರ್ಮಣಾ
ಸುದಾರುಣಾಲಂಕೃತವೇಷಧಾರಿಣಾ ।
ಬಲಾಭಿಭೂತಾ ಹ್ಯಬಲಾ ತಪಸ್ವಿನೀ
ಕಥಂ ನು ಮೇ ದೃಷ್ಟಿಪಥೇಽದ್ಯ ಸಾ ಭವೇತ್ ॥ ೭೦

ಇತಿ ಶ್ರೀಮದ್ರಾಮಾಯಣೇ ಸುಂದರಕಾಂಡೇ ತ್ರಯೋದಶಃ ಸರ್ಗಃ

ದೇವತೆಗಳೂ ನನಗೆ ಕಾರ್ಯಸಿದ್ಧಿಯನ್ನು ಅನುಗ್ರಹಿಸಲಿ !'' (೬೫–೬೮) ಎಂದು ಹೇಳಿ, ''ನನಗೆ ಪೂಜ್ಯಳಾದ ಆ ದೇವಿಯ ಪೂರ್ಣಚಂದ್ರನಂತಹ ನಿಷ್ಕಳಂಕವಾದ ಮುಖವನ್ನು ಯಾವಾಗ ನೋಡುವೆನೋ ? ಉಬ್ಬಿ ಎಳಸಾದ ಮೂಗು, ಶುಭ್ರವಾದ ಹಲ್ಲುಗಳು, ಸುಂದರವಾದ ಮುಗುಳುನಗೆ, ಪದ್ಮದಳದಂತಹ ನಯನಗಳು ಆಕೆಗೆ ಇದ್ದಿರಬೇಕು (೬೯). ನೀಚನೂ, ಪಾಪಿಯೂ, ಘೋರಕರ್ಮಿಯೂ, ಭಯಂಕರನೂ, ವೇಷಧಾರಿಯೂ ಆದ ರಾವಣನು ಬಲಾತ್ಕಾರದಿಂದ ಅಪಹರಿಸಿ ತಂದ ದಿಕ್ಕಿಲ್ಲದ ಆ ಅಬಲೆಯನ್ನು ನಾನು ನೋಡುವ ಬಗೆ ಹೇಗೆ ?'' ಎಂದು ಚಿಂತಿಸಿದನು (೭೦).

ಇಲ್ಲಿಗೆ ಶ್ರೀಮದ್ರಾಮಾಯಣದ ಸುಂದರಕಾಂಡದಲ್ಲಿ ಹದಿಮೂರನೆಯ ಸರ್ಗ

ಚತುರ್ದಶಃ ಸರ್ಗಃ

ಅಶೋಕವನಿಕಾವಿಚಯಃ

ಸ ಮುಹೂರ್ತಮಿವ ಧ್ಯಾತ್ವಾ ಮನಸಾ ಚಾಧಿಗಮ್ಯ ತಾಮ್ ।
ಅವಪ್ಲುತೋ ಮಹಾತೇಜಾಃ ಪ್ರಾಕಾರಂ ತಸ್ಯ ವೇಶ್ಮನಃ ॥ ೧

ಸ ತು ಸಂಹೃಷ್ಟಸರ್ವಾಂಗಃ ಪ್ರಾಕಾರಸ್ಥೋ ಮಹಾಕಪಿಃ ।
ಪುಷ್ಪಿತಾಗ್ರಾನ್ ವಸಂತಾದೌ ದದರ್ಶ ವಿವಿಧಾನ್ ದ್ರುಮಾನ್ ॥ ೨

ಸಾಲಾನಶೋಕಾನ್ ಭವ್ಯಾಂಶ್ಚ ಚಂಪಕಾಶ್ಚ ಸುಪುಷ್ಪಿತಾನ್ ।
ಉದ್ದಾಲಕಾನ್ನಾಗವೃಕ್ಷಾಂಶ್ಚೂತಾನ್ ಕಪಿಮುಖಾನಪಿ ॥ ೩

ಅಥಾಮ್ರವನಸಂಛನ್ನಾಂ ಲತಾಶತಸಮಾವೃತಾಮ್ ।
ಜ್ಯಾಮುಕ್ತ ಇವ ನಾರಾಚಃ ಪುಪ್ಲುವೇ ವೃಕ್ಷವಾಟಿಕಾಮ್ ॥ ೪

ಸರ್ಗ ೧೪

ಹನುಮಂತನು ಅಶೋಕವನಕ್ಕೆ ಹೋಗಿ ಅದರ ಸೌಂದರ್ಯವನ್ನು ನೋಡುತ್ತ
ಸೀತಾದೇವಿಯು ಅಲ್ಲಿಗೆ ಬರಬಹುದೆಂಬ ನಿರೀಕ್ಷಣೆಯಿಂದ
ಒಂದು ಶಿಂಶಪಾವೃಕ್ಷವನ್ನೇರಿ ಕುಳಿತನು.

ಅನಂತರ ಮಹಾತೇಜಸ್ವಿಯಾದ ಆಂಜನೇಯನು ರಾವಣನ ಅರಮನೆಯಿಂದ ನೆಟ್ಟಗೆ ಅಶೋಕವನದ ಪ್ರಾಕಾರಕ್ಕೆ ನೆಗೆದು, ಅರಳಿದ ನಾನಾ ಬಗೆಯ ವೃಕ್ಷಗಳನ್ನು ನೋಡಿದನು (೧–೨). ವಸಂತಋತುವಿನ* ಆರಂಭವಾದ್ದರಿಂದ ಅಲ್ಲಿ ಸಾಲ, ಅಶೋಕ, ಸಂಪಿಗೆ, ಉದ್ದಾಲಕ, ನಾಗಕೇಸರ, ಮಾವು ಮೊದಲಾದ ಮರಗಳು ಹೂಬಿಟ್ಟಿದ್ದವು. ಧನುಸ್ಸಿನ ಹೆದೆಯಿಂದ ಚಿಮ್ಮಿದ ಬಾಣದಂತೆ ಆ ಪ್ರಾಕಾರದಿಂದ ನೆಗೆದು, ಅನೇಕ ಲತೆಗಳಿಂದ ಪರಿವೃತವಾದ ಒಂದು

---

* ಆ ದಿನ ಫಾಲ್ಗುಣ ಶುದ್ಧ ತ್ರಯೋದಶಿಯಾಗಿತ್ತು. ಹುಣ್ಣಿಮೆಯಿಂದ ಹುಣ್ಣಿಮೆಗೆ ತಿಂಗಳು ಎಂಬ ಕ್ರಮದಲ್ಲಿ ಫಾಲ್ಗುಣ ಶುದ್ಧ ಹುಣ್ಣಿಮೆ ಕಳೆದ ಮೇಲೆ ವಸಂತಕಾಲ ಪ್ರಾರಂಭವಾಗುವುದು.

ಸ ಪ್ರವಿಶ್ಯ ವಿಚಿತ್ರಾಂ ತಾಂ ವಿಹಗೈರಭಿನಾದಿತಾಮ್ ।
ರಾಜತೈಃ ಕಾಂಚನೈಶ್ಚೈವ ಪಾದಪೈಃ ಸರ್ವತೋ ವೃತಾಮ್ ॥ ೫
ವಿಹಗೈರ್ಮೃಗಸಂಘೈಶ್ಚ ವಿಚಿತ್ರಾಂ ಚಿತ್ರಕಾನನಾಮ್ ।
ಉದಿತಾದಿತ್ಯಸಂಕಾಶಾಂ ದದರ್ಶ ಹನುಮಾನ್ ಕಪಿಃ ॥ ೬
ವೃತಾಂ ನಾನಾವಿಧೈರ್ವೃಕ್ಷೈಃ ಪುಷ್ಪೋಪಗಫಲೋಪಗೈಃ ।
ಕೋಕಿಲೈರ್ಭೃಂಗರಾಜೈಶ್ಚ ಮತ್ತೈರ್ನಿತ್ಯನಿಷೇವಿತಾಮ್ ॥ ೭
ಪ್ರಹೃಷ್ಟಮನುಜೇ ಕಾಲೇ ಮೃಗಪಕ್ಷಿಸಮಾಕುಲೇ ।
ಮತ್ತಬರ್ಹಿಣಸಂಘುಷ್ಟಾಂ ನಾನಾದ್ವಿಜಗಣಾಯುತಾಮ್ ॥ ೮
ಮಾರ್ಗಮಾಣೋ ವರಾರೋಹಾಂ ರಾಜಪುತ್ರೀಮನಿಂದಿತಾಮ್ ।
ಸುಖಪ್ರಸುಪ್ತಾನ್ ವಿಹಗಾನ್ ಬೋಧಯಾಮಾಸ ವಾನರಃ ॥ ೯
ಉತ್ಪತದ್ಭಿರ್ದ್ವಿಜಗಣೈಃ ಪಕ್ಷೈಃ ಸಾಲಾಃ ಸಮಾಹತಾಃ ।
ಅನೇಕವರ್ಣಾ ವಿವಿಧಾ ಮುಮುಚುಃ ಪುಷ್ಪವೃಷ್ಟಯಃ ॥ ೧೦
ಪುಷ್ಪಾವಕೀರ್ಣಃ ಶುಶುಭೇ ಹನುಮಾನ್ ಮಾರುತಾತ್ಮಜಃ ।
ಅಶೋಕವನಿಕಾಮಧ್ಯೇ ಯಥಾ ಪುಷ್ಪಮಯೋ ಗಿರಿಃ ॥ ೧೧

ಮಾವಿನತೋಪಿನಲ್ಲಿ ಇಳಿದನು (೩–೪). ಆ ತೋಪು ಬೆಳ್ಳಿಯಂತೆಯೂ ಬಂಗಾರದಂತೆಯೂ ಬಣ್ಣವುಳ್ಳ ವಿವಿಧ ವೃಕ್ಷಗಳಿಂದ ತುಂಬಿ ಪಕ್ಷಿಗಳ ಕಿಲಕಿಲ ಧ್ವನಿಯಿಂದ ರಮಣೀಯವಾಗಿದ್ದಿತು. ಅರಳಿದ ಹೂಗಳಿಂದ ಸೂರ್ಯೋದಯವಾದಂತೆ ಬೆಳಗುತ್ತಿದ್ದ ಆ ತೋಟದಲ್ಲಿ ನಾನಾ ಬಗೆಯ ಮೃಗಗಳೂ ಪಕ್ಷಿಗಳೂ ಇದ್ದವು (೫–೬). ಹೂ ಹಣ್ಣುಗಳಿಂದ ವಿರಾಜಿಸುವ ಮರಗಳೂ ಕೋಗಿಲೆಗಳೂ ಭ್ರಮರಗಳೂ ತುಂಬಿದ್ದವು. ಜನಮನೋಹರವಾದ ವಸಂತಕಾಲವು ಸಮೀಪಿಸಿದ್ದರಿಂದ ಮದಿಸಿದ ನವಿಲುಗಳೂ ಮೃಗಪಕ್ಷಿಗಳೂ ಯಥೇಚ್ಛವಾಗಿ ಅಲೆಯುತ್ತಿದ್ದವು (೭–೮). ಹನುಮಂತನು ರಾಜಪುತ್ರಿಯಾದ ಸೀತೆಯನ್ನು ಹುಡುಕಲು ಧುಮುಕಿದ್ದರಿಂದ ಗಿಡಮರಗಳು ಕದಲಿ, ನಿದ್ರಿಸುತ್ತಿದ್ದ ಹಕ್ಕಿಗಳು ಎಚ್ಚರಗೊಂಡು ಹಾರಾಡತೊಡಗಿದವು. ಅವುಗಳ ರೆಕ್ಕೆಗಳು ಬೀಸಿ ಮರಗಳಿಂದ ನಾನಾವರ್ಣದ ಹೂಗಳು ಚಲ್ಲಿಹೋದವು (೯–೧೦). ಆ ಹೂಗಳಿಂದ ಮುಚ್ಚಿಹೋದ ಹನುಮಂತನು ಪುಷ್ಪಮಯವಾದ ಬೆಟ್ಟದಂತೆ ಕಂಗೊಳಿಸುತ್ತಿದ್ದನು.

ದಿಶಃ ಸರ್ವಾಃ ಪ್ರಧಾವಂತಂ ವೃಕ್ಷಷಂಡಗತಂ ಕಪಿಮ್ ।
ದೃಷ್ಟ್ವಾ ಸರ್ವಾಣಿ ಭೂತಾನಿ ವಸಂತ ಇತಿ ಮೇನಿರೇ ॥ ೧೨
ವೃಕ್ಷೇಭ್ಯಃ ಪತಿತೈಃ ಪುಷ್ಪೈರವಕೀರ್ಣಾ ಪೃಥಗ್ವಿಧೈಃ ।
ರರಾಜ ವಸುಧಾ ತತ್ರ ಪ್ರಮದೇವ ವಿಭೂಷಿತಾ ॥ ೧೩
ತರಸ್ವಿನಾ ತೇ ತರವಸ್ತರಸಾಭಿಪ್ರಕಂಪಿತಾಃ ।
ಕುಸುಮಾನಿ ವಿಚಿತ್ರಾಣಿ ಮುಮುಚುಃ ಕಪಿನಾ ತದಾ ॥ ೧೪
ನಿರ್ಧೂತಪತ್ರಶಿಖರಾಃ ಶೀರ್ಣಪುಷ್ಪಫಲಾ ದ್ರುಮಾಃ ।
ನಿಕ್ಷಿಪ್ತವಸ್ತ್ರಾಭರಣಾ ಧೂರ್ತಾ ಇವ ಪರಾಜಿತಾಃ ॥ ೧೫
ಹನೂಮತಾ ವೇಗವತಾ ಕಂಪಿತಾಸ್ತೇ ನಗೋತ್ತಮಾಃ ।
ಪುಷ್ಪಪರ್ಣಫಲಾನ್ಯಾಶು ಮುಮುಚುಃ ಪುಷ್ಪಶಾಲಿನಃ ॥ ೧೬
ವಿಹಂಗಸಂಘೈರ್ಹೀನಾಸ್ತೇ ಸ್ಕಂಧಮಾತ್ರಾಶ್ರಯಾ ದ್ರುಮಾಃ ।
ಬಭೂವುರಗಮಾಃ ಸರ್ವೇ ಮಾರುತೇನೇವ ನಿರ್ಧುತಾಃ ॥ ೧೭
ನಿರ್ಧೂತಕೇಶೀ ಯುವತಿರ್ಯಥಾ ಮೃದಿತವರ್ಣಕಾ ।
ನಿಷ್ಪೀತಶುಭದಂತೋಷ್ಠೀ ನಖೈರ್ದಂತೈಶ್ಚ ವಿಕ್ಷತಾ ॥ ೧೮

ಆ ಪುಷ್ಪವಾಟಿಕೆಯಲ್ಲಿ ಮರಗಳ ನಡುವೆ ಬರುತ್ತಿದ್ದ ಪುಷ್ಪಮಯನಾದ ಹನುಮಂತನನ್ನು ನೋಡಿ, ಅಲ್ಲಿದ್ದ ಸಕಲ ಪ್ರಾಣಿಗಳೂ ವಸಂತನೇ ಈ ರೂಪದಲ್ಲಿ ಬರುತ್ತಿದ್ದಾನೆಂದು ಭಾವಿಸಿಕೊಂಡವು! (೧೧–೧೨). ಉದುರಿದ ಹೂಗಳಿಂದ ಭೂಷಿತವಾದ ವನಭೂಮಿಯು, ಅಲಂಕರಿಸಿಕೊಂಡ ತರುಣಿಯಂತೆ ಸುಂದರ ವಾಗಿ ತೋರಿತು. ಒಂದೊಂದು ಸಲ ಹನುಮಂತನು ಬಲವಾಗಿ ಮರಗಳನ್ನು ಅಲ್ಲಾಡಿಸಿ ಹೂಗಳನ್ನೆಲ್ಲಾ ಉದುರಿಸಿಬಿಡುತ್ತಿದ್ದನು. ಒಂದೊಂದು ಸಲ ಹೂ ಹಣ್ಣು ಎಲೆಗಳೆಲ್ಲಾ ಉದುರಿಹೋಗಲು, ಅವು ಮೋಟುಮರಗಳಂತಾಗಿಬಿಡುತ್ತಿದ್ದವು. ಆಗ ಆ ಮರಗಳು ಜೂಜಿನಲ್ಲಿ ವಸ್ತ್ರ ಒಡವೆಗಳನ್ನೆಲ್ಲಾ ಕಳೆದುಕೊಂಡ ಜೂಜುಖೋರರಂತೆ ಕಾಣುತ್ತಿದ್ದವು! (೧೩–೧೫). ಹೂ ಹಣ್ಣು ಎಲೆಗಳು ಉದುರಿ, ಪಕ್ಷಿಗಳೆಲ್ಲವೂ ಹಾರಿಹೋಗಲಾಗಿ, ಆ ಮರಗಳಲ್ಲಿ ಬಿರುಗಾಳಿಯ ಹೊಡೆತಕ್ಕೆ ಸಿಕ್ಕಿದಂತೆ ದೊಡ್ಡ ಕೊಂಬೆಗಳು ಮಾತ್ರ ಉಳಿದವು (೧೬–೧೭). ಹನುಮಂತನು ತನ್ನ ಬಾಲದಿಂದಲೂ ಕೈಕಾಲುಗಳಿಂದಲೂ ಮರಗಳನ್ನು ತಳ್ಳಿ

ತಥಾ ಲಾಂಗೂಲಹಸ್ತೈಶ್ಚ ಚರಣಾಭ್ಯಾಂ ಚ ಮರ್ದಿತಾ ।
ಬಭೂವಾಶೋಕವನಿಕಾ ಪ್ರಭಗ್ನವರಪಾದಪಾ ॥ ೧೯
ಮಹಾಲತಾನಾಂ ದಾಮಾನಿ ವ್ಯಧಮತ್ತರಸಾ ಕಪಿಃ ।
ಯಥಾ ಪ್ರಾವೃಷಿ ವಿಂಧ್ಯಸ್ಯ ಮೇಘಜಾಲಾನಿ ಮಾರುತಃ ॥ ೨೦
ಸ ತತ್ರ ಮಣಿಭೂಮೀಶ್ಚ ರಾಜತೀಶ್ಚ ಮನೋರಮಾಃ ।
ತಥಾ ಕಾಂಚನಭೂಮೀಶ್ಚ ದದರ್ಶ ವಿಚರನ್ ಕಪಿಃ ॥ ೨೧
ವಾಪೀಶ್ಚ ವಿವಿಧಾಕಾರಾಃ ಪೂರ್ಣಾಃ ಪರಮವಾರಿಣಾ ।
ಮಹಾರ್ಹೈರ್ಮಣಿಸೋಪಾನೈರುಪಪನ್ನಾಸ್ತತಸ್ತತಃ ॥ ೨೨
ಮುಕ್ತಾಪ್ರವಾಲಸಿಕತಾಃ ಸ್ಫಾಟಿಕಾಂತರಕುಟ್ಟಿಮಾಃ ।
ಕಾಂಚನೈಸ್ತರುಭಿಶ್ಚಿತ್ರೈಸ್ತೀರಜೈರುಪಶೋಭಿತಾಃ ॥ ೨೩
ಫುಲ್ಲಪದ್ಮೋತ್ಪಲವನಾಶ್ಚಕ್ರವಾಕೋಪಕೂಜಿತಾಃ ।
ನತ್ಯೂಹರುತಸಂಘುಷ್ಟಾ ಹಂಸಸಾರಸನಾದಿತಾಃ ॥ ೨೪
ದೀರ್ಘಾಭಿರ್ದ್ರುಮಯುಕ್ತಾಭಿಃ ಸರಿದ್ಭಿಶ್ಚ ಸಮಂತತಃ ।
ಅಮೃತೋಪಮತೋಯಾಭಿಃ ಶಿವಾಭಿರುಪಸಂಸ್ಕೃತಾಃ ॥ ೨೫

ಅಲ್ಲಾಡಿಸುತ್ತಿದ್ದನು. ಆಗ ಆ ಅಶೋಕವನವು ತಲೆಗೂದಲು ಕೆದರಿ, ಅಂಗರಾಗವು ಒರಸಿ, ತುಟಿಯು ಮಾಸಿ, ನಖದಂತಗಳಿಂದ ಕ್ಷತಳಾಗಿ ಅಸ್ತವ್ಯಸ್ತಳಾದ ತರುಣಿಯಂತೆ ಕಾಣಿಸುತ್ತಿದ್ದಿತು (೧೮–೧೯). ಮಳೆಗಾಲದಲ್ಲಿ ವಿಂಧ್ಯದ ಮೇಲಿರುವ ಮೇಘಪಂಕ್ತಿಯನ್ನು ಬಿರುಗಾಳಿಯು ಚದುರಿಸುವಂತೆ, ಹನುಮಂತನು ಬಳ್ಳಿಗಳ ಪೊದೆಗಳನ್ನು ಕಿತ್ತೆಸೆಯುತ್ತ ಮುಂದೆ ಹೋದನು. ಅವನು ಅಲ್ಲಲ್ಲಿ ರತ್ನ ಚಿನ್ನ, ಬೆಳ್ಳಿಗಳಿಂದ ನಿರ್ಮಿಸಿದ ಸ್ಥಳಗಳನ್ನೂ ಸ್ವಚ್ಛವಾದ ನೀರಿನಿಂದ ತುಂಬಿ ಮಣಿಮಯ ಸೋಪಾನಗಳಿರುವ ಜಲಾಶಯಗಳನ್ನೂ ಕಂಡನು (೨೦–೨೨). ಆ ಜಲಾಶಯಗಳು ಮುತ್ತು ಹವಳಗಳ ಮರಳುದಿಣ್ಣೆಗಳಿಂದಲೂ ಸ್ಫಟಿಕದ ನೆಲಗಟ್ಟುಗಳಿಂದಲೂ ಚಿನ್ನದ ತೀರ ವೃಕ್ಷಗಳಿಂದಲೂ ಪ್ರಕಾಶಿಸುತ್ತಿದ್ದವು. ಅವುಗಳಲ್ಲಿ ತಾವರೆ ಮುಂತಾದ ಹೂಗಳೂ ಹಂಸ ಮುಂತಾದ ಜಲಪಕ್ಷಿಗಳೂ ತುಂಬಿದ್ದವು (೨೩–೨೪). ತೀರವೃಕ್ಷಗಳಿಂದ ಶೋಭಿಸುವ ನದಿಗಳಲ್ಲಿ ಅಮೃತಮಯವಾದ

ಲತಾಶತೈರವತತಾಃ ಸಂತಾನಕುಸುಮಾವೃತಾಃ ।
ನಾನಾಗುಲ್ಮಾವೃತಘನಾಃ ಕರವೀರಕೃತಾಂತರಾಃ ॥ ೨೬
ತತೋಽಂಬುಧರಸಂಕಾಶಂ ಪ್ರವೃದ್ಧಶಿಖರಂ ಗಿರಿಮ್ ।
ವಿಚಿತ್ರಕೂಟಂ ಕೂಟೈಶ್ಚ ಸರ್ವತಃ ಪರಿವಾರಿತಮ್ ॥ ೨೭
ಶಿಲಾಗೃಹೈರವತತಂ ನಾನಾವೃಕ್ಷೈಃ ಸಮಾವೃತಮ್ ।
ದದರ್ಶ ಹರಿಶಾರ್ದೂಲೋ ರಮ್ಯಂ ಜಗತಿ ಪರ್ವತಮ್ ॥ ೨೮
ದದರ್ಶ ಚ ನಗಾತ್ತಸ್ಮಾನ್ನದೀಂ ನಿಪತಿತಾಂ ಕಪಿಃ ।
ಅಂಕಾದಿವ ಸಮುತ್ಪತ್ಯ ಪ್ರಿಯಸ್ಯ ಪತಿತಾಂ ಪ್ರಿಯಾಮ್ ॥ ೨೯
ಜಲೇ ನಿಪತಿತಾಗ್ರೈಶ್ಚ ಪಾದಪೈರುಪಶೋಭಿತಾಮ್ ।
ವಾರ್ಯಮಾಣಾಮಿವ ಕ್ರುದ್ಧಾಂ ಪ್ರಮದಾಂ ಪ್ರಿಯಬಂಧುಭಿಃ ॥ ೩೦
ಪುನರಾವೃತ್ತತೋಯಾಂ ಚ ದದರ್ಶ ಸ ಮಹಾಕಪಿಃ ।
ಪ್ರಸನ್ನಾಮಿವ ಕಾಂತಸ್ಯ ಕಾಂತಾಂ ಪುನರುಪಸ್ಥಿತಾಮ್ ॥ ೩೧
ತಸ್ಯಾದೂರಾಚ್ಚ ಪದ್ಮಿನ್ಯೋ ನಾನಾದ್ವಿಜಗಣಾಯುತಾಃ ।
ದದರ್ಶ ಹರಿಶಾರ್ದೂಲೋ ಹನುಮಾನ್ ಮಾರುತಾತ್ಮಜಃ ॥ ೩೨

ನೀರು ಹರಿಯುತ್ತಿತ್ತು. ಜಲಾಶಯದ ಸುತ್ತಲೂ ನಾನಾ ಲತೆಗಳೂ, ಪೊದೆಗಳೂ, ಕಲ್ಪವೃಕ್ಷ, ಕರವೀರಪುಷ್ಪಗಳೂ ಪಸರಿಸಿದ್ದವು (೨೫–೨೬). ಹನುಮಂತನು ಮುಂದೆ ಬರಲಾಗಿ ಜಲಧರಸಂಕಾಶವೂ ಉತ್ತುಂಗಶೃಂಗವೂ ಆಗಿ, ಕಲ್ಲುಮಂಟಪಗಳಿಂದಲೂ ಶೋಭಿಸುತ್ತಿದ್ದ ರಮಣೀಯವಾದ ಒಂದು ಬೆಟ್ಟವು ಗೋಚರಿಸಿತು (೨೭–೨೮). ಪ್ರಣಯಕುಪಿತೆಯಾದ ತರುಣಿಯು ತನ್ನ ಕಾಂತನ ತೊಡೆಯಿಂದ ಇಳಿದು ರಭಸದಿಂದ ಹೊರಟುಹೋಗುವಂತೆ, ಒಂದು ನದಿಯು ಆ ಬೆಟ್ಟದಿಂದ ಧುಮುಕಿ ಹರಿಯುತ್ತಿತ್ತು! ಅದರ ತೀರದಲ್ಲಿ ಬಾಗಿದ್ದ ಮರಗಳು, ಕುಪಿತೆಯಾದ ಆ ತರುಣಿಯನ್ನು ಸಮಾಧಾನಪಡಿಸುವ ಬಂಧುಗಳಂತೆ ಕಾಣುತ್ತಿದ್ದವು! (೨೯–೩೦). ಸ್ವಲ್ಪ ದೂರ ಹರಿದಮೇಲೆ ನದಿಯು ಕೊಂಚ ಬಾಗಿ, ಬೆಟ್ಟದ ಕಡೆಗೆ ತಿರುಗಿತ್ತು. ಆದ್ದರಿಂದ ಮತ್ತೆ ಸಮಾಧಾನಗೊಂಡು ಆ ಚೆಲುವೆಯು ತನ್ನ ಕಾಂತನ ಬಳಿಗೆ ಹಿಂದಿರುಗಿದಂತೆ ಕಾಣಿಸುತ್ತಿತ್ತು (೩೧). ಬೆಟ್ಟದ ಸಮೀಪದಲ್ಲಿ ತಿಳಿನೀರಿನಿಂದ ತುಂಬಿದ ಅನೇಕ ಸರಸ್ಸುಗಳು ಇದ್ದವು. ಯತ್ನನಿರ್ಮಿತವಾದ ಒಂದು ಕೊಳವೂ

ಕೃತ್ರಿಮಾಂ ದೀರ್ಘಿಕಾಂ ಚಾಪಿ ಪೂರ್ಣಾಂ ಶೀತೇನ ವಾರಿಣಾ ।
ಮಣಿಪ್ರವರಸೋಪಾನಾಂ ಮುಕ್ತಾಸಿಕತಶೋಭಿತಾಮ್ ॥ ೩೩
ವಿವಿಧೈರ್ಮೃಗಸಂಘೈಶ್ಚ ವಿಚಿತ್ರಾಂ ಚಿತ್ರಕಾನನಾಮ್ ।
ಪ್ರಾಸಾದೈಃ ಸುಮಹದ್ಭಿಶ್ಚ ನಿರ್ಮಿತೈರ್ವಿಶ್ವಕರ್ಮಣಾ ॥ ೩೪
ಕೃತ್ರಿಮೈ ಕಾನನೈಶ್ಚಾಪಿ ಸರ್ವತಃ ಸಮಲಂಕೃತಾಮ್ ।
ಯೇ ಕೇಚಿತ್ ಪಾದಪಾಸ್ತತ್ರ ಪುಷ್ಪೋಪಗಫಲೋಪಗಾಃ ॥ ೩೫
ವಿಚಿತ್ರಾಃ ಸಂವೃತಾ ವೃಕ್ಷಾಃ ಪ್ರದೀಪ್ತಾ ಇವ ಸರ್ವತಃ ।
ಪುಂನಾಗಾಃ ಸಪ್ತಪರ್ಣಾಶ್ಚ ಚಂಪಕೋದ್ದಾಲಕಾಸ್ತಥಾ ॥ ೩೬
ಸಚ್ಛತ್ರಾಃ ಸವಿತರ್ದೀಕಾಃ ಸರ್ವೇ ಸೌವರ್ಣವೇದಿಕಾಃ ।
ಲತಾಪ್ರತಾನೈರ್ಬಹುಭಿಃ ಪರ್ಣೈಶ್ಚ ಬಹುಭಿರ್ವೃತಾಮ್ ॥ ೩೭
ಕಾಂಚನೀಂ ಶಿಂಶಪಾಮೇಕಾಂ ದದರ್ಶ ಹನುಮಾನ್ ಕಪಿಃ ।
ವೃತಾಂ ಹೇಮಮಯೀಭಿಸ್ತು ವೇದಿಕಾಭಿಃ ಸಮಂತತಃ ॥ ೩೮
ಸೋಽಪಶ್ಯದ್ಭೂಮಿಭಾಗಾಂಶ್ಚ ಗರ್ತಪ್ರಸ್ರವಣಾನಿ ಚ ।
ಸುವರ್ಣವೃಕ್ಷಾನಪರಾನ್ ದದರ್ಶ ಶಿಖಿಸಂನಿಭಾನ್ ॥ ೩೯

ಆಗಿತ್ತು. ಅದರಲ್ಲಿ ರತ್ನಖಚಿತವಾದ ಸೋಪಾನಗಳೂ ಮುತ್ತಿನ ಮರಳೂ ಇದ್ದವು. ಆ ಅಶೋಕ ವನವು ವಿವಿಧ ಮೃಗಗಳಿಂದಲೂ ವಿಶ್ವಕರ್ಮನು ನಿರ್ಮಿಸಿದ ಸೌಧಗಳಿಂದಲೂ ಕೃತ್ರಿಮವನಗಳಿಂದಲೂ ರಂಜಿಸುತ್ತಿತ್ತು (೩೨–೩೪). ಪುನ್ನಾಗ, ಚಂಪಕ ಮುಂತಾದ ವೃಕ್ಷಗಳು ಪುಷ್ಪಫಲಗಳಿಂದ ಪ್ರಜ್ವಲಿಸುತ್ತಿದ್ದವು. ಎಲ್ಲಾ ಮರಗಳೂ ಕೊಡೆಯಂತೆ ಹರಡಿಕೊಂಡಿದ್ದವು. ಪ್ರತಿಯೊಂದು ಮರಕ್ಕೂ ಉನ್ನತವಾದ ವೇದಿಕೆಯೂ ಅದನ್ನು ಹತ್ತಲು ಸುತ್ತಲೂ ಸುವರ್ಣಮಯವಾದ ಕಟ್ಟೆಗಳೂ ಇದ್ದವು (೩೫–೩೬). ಇದೆಲ್ಲವನ್ನೂ ನೋಡುತ್ತ ಹನುಮಂತನು ಮುಂದೆ ಹೋಗಿ ಲತೆಗಳಿಂದ ಪರಿವೃತವಾಗಿಯೂ ಪರ್ಣಗಳಿಂದ ನಿಬಿಡವಾಗಿಯೂ ಸುತ್ತಲೂ ಚಿನ್ನದ ಕಟ್ಟೆಗಳಿಂದ ಶೋಭಿಸುತ್ತಲೂ ಇದ್ದ ಒಂದು ಶಿಂಶಪಾವೃಕ್ಷವನ್ನು ನೋಡಿದನು (೩೭–೩೮). ಆ ವೃಕ್ಷದ ಸುತ್ತಲೂ ಸುಂದರವಾದ ಭೂ ಪ್ರದೇಶವನ್ನೂ ನೀರಿನ ಕಾಲುವೆಗಳನ್ನೂ ಬೆಂಕಿಯಂತೆ ಜ್ವಲಿಸುವ ಸುವರ್ಣ

ತೇಷಾಂ ದ್ರುಮಾಣಾಂ ಪ್ರಭಯಾ ಮೇರೋರಿವ ದಿವಾಕರಃ ।
ಅಮನ್ಯತ ತದಾ ವೀರಃ ಕಾಂಚನೋಽಸ್ಮೀತಿ ವಾನರಃ ॥ ೪೦

ತಾಂ ಕಾಂಚನೈಸ್ತರುಗಣೈರ್ಮಾರುತೇನ ಚ ವೀಜಿತಾಮ್ ।
ಕಿಂಕಿಣೀಶತನಿರ್ಘೋಷಾಂ ದೃಷ್ಟ್ವಾ ವಿಸ್ಮಯಮಾಗತಮ್ ॥ ೪೧

ಸ ಪುಷ್ಪಿತಾಗ್ರಾಂ ರುಚಿರಾಂ ತರುಣಾಂಕುರಪಲ್ಲವಾಮ್ ।
ತಾಮಾರುಹ್ಯ ಮಹಾಬಾಹುಃ ಶಿಂಶಪಾಂ ಪರ್ಣಸಂವೃತಾಮ್ ॥ ೪೨

ಇತೋ ದ್ರಕ್ಷ್ಯಾಮಿ ವೈದೇಹೀಂ ರಾಮದರ್ಶನಲಾಲಸಾಮ್ ।
ಇತಶ್ಚೇತಶ್ಚ ದುಃಖಾರ್ತಾಂ ಸಂಪತಂತೀಂ ಯದೃಚ್ಛಯಾ ॥ ೪೩

ಅಶೋಕವನಿಕಾ ಚೇಯಂ ದೃಢಂ ರಮ್ಯಾ ದುರಾತ್ಮನಃ ।
ಚಂಪಕೈಶ್ಚಂದನೈಶ್ಚಾಪಿ ವಕುಲೈಶ್ಚ ವಿಭೂಷಿತಾ ॥ ೪೪

ಇಯಂ ಚ ನಲಿನೀ ರಮ್ಯಾ ದ್ವಿಜಸಂಘನಿಷೇವಿತಾ ।
ಇಮಾಂ ಸಾ ರಾಮಮಹಿಷೀ ಧ್ರುವಮೇಷ್ಯತಿ ಜಾನಕೀ ॥ ೪೫

ವೃಕ್ಷಗಳನ್ನೂ ಕಂಡನು. ಮೇರುವಿನ ಪ್ರಭೆಯು ಸೂರ್ಯನನ್ನು ಆವರಿಸುವಂತೆ, ಆ ವೃಕ್ಷಗಳ ಪ್ರಭೆಯು ತನ್ನನ್ನು ಆವರಿಸಲಾಗಿ ಹನುಮಂತನು 'ಆಹಾ! ನಾನೊಂದು ಚಿನ್ನದ ಕಪಿಯಾದೆನು !' ಎಂದುಕೊಂಡನು (೩೯–೪೦). ಸುತ್ತಲೂ ಸುವರ್ಣ ವೃಕ್ಷಗಳಿಂದ ಪರಿವೃತವಾದ ಶಿಂಶಪಾವೃಕ್ಷವು ಗಾಳಿ ಬೀಸಿದಾಗ ನೂರಾರು ಚಿನ್ನದ ಗೆಜ್ಜೆಗಳಂತೆ ಇಂಪಾಗಿ ಧ್ವನಿಗೈಯುವುದನ್ನು ಕಂಡು ಹನುಮಂತನಿಗೆ ವಿಸ್ಮಯ ವಾಯಿತು. ಅವನು ಚಿಗುರೆಲೆಗಳಿಂದಲೂ ಹೂಗಳಿಂದಲೂ ಮನೋಹರವಾದ ಆ ಮರವನ್ನು ಹತ್ತಿ ಕುಳಿತನು (೪೧–೪೨). ಅವನು ತನ್ನಲ್ಲಿ "ನಾನು ಇಲ್ಲಿ ಕುಳಿತು ಸೀತಾದೇವಿಗಾಗಿ ಸುತ್ತಲೂ ನೋಡುತ್ತಿರುವೆನು. ಶ್ರೀರಾಮನ ದರ್ಶನಕ್ಕಾಗಿ ಹಾತೊರೆಯುತ್ತ ದುಃಖಿತಳಾಗಿ ಅವಳು ಇಲ್ಲಿ ಸುಳಿದಾಡಬಹುದು. ಸಂಪಿಗೆ, ಚಂದನ—ಮುಂತಾದ ಮರಗಳಿಂದ ರಮ್ಯವಾದ ಈ ಅಶೋಕವನವು ಆ ದುರಾತ್ಮನಿಗೆ (ರಾವಣನಿಗೆ) ಸೇರಿದ್ದೇ ಸರಿ (೪೩–೪೪). ನೀರುಹಕ್ಕಿಗಳಿಂದ ಮನೋಹರವಾದ ತಾವರೆಯ ಬಳ್ಳಿಗಳು ಇಲ್ಲಿರುವುದರಿಂದ ಜಾನಕಿಯು ಇತ್ತ

ಸಾ ರಾಮಾ ರಾಮಮಹಿಷೀ ರಾಘವಸ್ಯ ಪ್ರಿಯಾ ಸತೀ ।
ವನಸಂಚಾರಕುಶಲಾ ಧ್ರುವಮೇಷ್ಯತಿ ಜಾನಕೀ ॥ ೪೬

ಅಥವಾ ಮೃಗಶಾವಾಕ್ಷೀ ವನಸ್ಯಾಸ್ಯ ವಿಚಕ್ಷಣಾ ।
ವನಮೇಷ್ಯತಿ ಸಾರ್ಯೇಹ ರಾಮಚಿಂತಾನುಕರ್ಶಿತಾ ॥ ೪೭

ರಾಮಶೋಕಾಭಿಸಂತಪ್ತಾ ಸಾ ದೇವೀ ವಾಮಲೋಚನಾ ।
ವನವಾಸೇ ರತಾ ನಿತ್ಯಮೇಷ್ಯತೇ ವನಚಾರಿಣೀ ॥ ೪೮

ವನೇಚರಾಣಾಂ ಸತತಂ ನೂನಂ ಸ್ಪೃಹಯತೇ ಪುರಾ ।
ರಾಮಸ್ಯ ದಯಿತಾ ಭಾರ್ಯಾ ಜನಕಸ್ಯ ಸುತಾ ಸತೀ ॥ ೪೯

ಸಂಧ್ಯಾಕಾಲಮನಾಃ ಶ್ಯಾಮಾ ಧ್ರುವಮೇಷ್ಯತಿ ಜಾನಕೀ ।
ನದೀಂ ಚೇಮಾಂ ಶಿವಜಲಾಂ ಸಂಧ್ಯಾರ್ಥೇ ವರವರ್ಣಿನೀ ।' ೫೦

ತಸ್ಯಾಶ್ಚಾಪ್ಯನುರೂಪೇಯಮಶೋಕವನಿಕಾ ಶುಭಾ ।
ಶುಭಾ ಯಾ ಪಾರ್ಥಿವೇಂದ್ರಸ್ಯ ಪತ್ನೀ ರಾಮಸ್ಯ ಸಂಮತಾ ॥ ೫೧

ಯದಿ ಜೀವತಿ ಸಾ ದೇವೀ ತಾರಾಧಿಪನಿಭಾನನಾ ।
ಆಗಮಿಷ್ಯತಿ ಸಾವಶ್ಯಮಿಮಾಂ ಶಿವಜಲಾಂ ನದೀಮ್ ॥ ೫೨

ಬಂದೇ ಬರುವಳು. ಶ್ರೀರಾಮನ ಪತ್ನಿ ವನಸಂಚಾರ ಕುಶಲೆ. ಶ್ರೀರಾಮನ ಚಿಂತೆಯಿಂದ ಕೊರಗುತ್ತಿರುವಳು. ಸ್ವಲ್ಪವಾದರೂ ಮನಃಶಾಂತಿ ದೊರಕೀತೆಂದು ಈ ವನಕ್ಕೆ ಬರದೆ ಇರಲಾರಳು. ಅವಳು ಹಿಂದೆ ಅರಣ್ಯದಲ್ಲಿ ಸಂಚರಿಸುತ್ತ ಮೃಗಪಕ್ಷಿಗಳನ್ನು ಪ್ರೀತಿಸುತ್ತಿದ್ದವಳು. ಪತಿವ್ರತೆಯಾದ ಆ ಜನಕಪುತ್ರಿ ಇಲ್ಲಿದ್ದರೆ ತಿರುಗಾಡುತ್ತ ಬಂದೇ ಬರುವಳು (೪೫–೪೯). ಈ ನದಿಯು ತಿಳಿನೀರಿನಿಂದ ತುಂಬಿ ಹರಿಯುತ್ತಿದೆ. ಸೀತಾದೇವಿಯು ಸ್ನಾನಾದಿ ಪ್ರಾತಃಕೃತ್ಯಗಳನ್ನು ನೆರವೇರಿಸುವುದಕ್ಕಾದರೂ ಇಲ್ಲಿಗೆ ಬಂದೇ ಬರಬೇಕು. ಜಾನಕಿಯು ರಾಜಾಧಿರಾಜನಾದ ಶ್ರೀರಾಮಚಂದ್ರನಿಗೆ ಅನುರೂಪಳಾದ ಪತ್ನಿ. ಅವಳಿಗೆ ಅನುರೂಪವಾದದ್ದು ಈ ಅಶೋಕವನ. ಆ ದೇವಿಯು ಬದುಕಿರುವುದೇ ದಿಟವಾದರೆ, ಪವಿತ್ರವಾದ ಈ ನದಿಯ ಬಳಿಗೆ ಬರುವುದು ನಿಶ್ಚಯ'' ಎಂದುಕೊಂಡನು (೫೦–೫೨).

ಏವಂ ತು ಮತ್ವಾ ಹನುಮಾನ್ ಮಹಾತ್ಮಾ
ಪ್ರತೀಕ್ಷಮಾಣೋ ಮನುಜೇಂದ್ರಪತ್ನೀಮ್ ।
ಅವೇಕಮಾಣಶ್ಚ ದದರ್ಶ ಸರ್ವಂ
ಸುಪುಷ್ಪಿತೇ ಪತ್ರಘನೇ ನಿಲೀನಃ ॥ ೫೩

ಇತಿ ಶ್ರೀಮದ್ರಾಮಾಯಣೇ ಸುಂದರಕಾಂಡೇ ಚತುರ್ದಶಃ ಸರ್ಗಃ

ಪಂಚದಶಃ ಸರ್ಗಃ

ಸೀತೋಪಲಂಭಃ

ಸ ವೀಕ್ಷಮಾಣಸ್ತತ್ರಸ್ಥೋ ಮಾರ್ಗಮಾಣಶ್ಚ ಮೈಥಿಲೀಮ್ ।
ಅವೇಕ್ಷಮಾಣಶ್ಚ ಮಹೀಂ ಸರ್ವಾಂ ತಾಮನ್ವವೈಕ್ಷತ ॥ ೧

ಸಂತಾನಕಲತಾಭಿಶ್ಚ ಪಾದಪೈರುಪಶೋಭಿತಾಮ್ ।
ದಿವ್ಯಗಂಧರಸೋಪೇತಾಂ ಸರ್ವತಃ ಸಮಲಂಕೃತಾಮ್ ॥ ೨

ಮಹಾತ್ಮನಾದ ಆಂಜನೇಯನು ಈ ರೀತಿ ನಿಶ್ಚಯಿಸಿ, ಹೂಗಳಿಂದಲೂ ಎಲೆಗಳಿಂದಲೂ ದಟ್ಟವಾದ ಒಂದು ಸ್ಥಳದಲ್ಲಿ ಮರೆಯಾಗಿ ಕುಳಿತು, ಸೀತೆಗಾಗಿ ಅಶೋಕವನವನ್ನು ಸುತ್ತಲೂ ಗಮನಿಸಿ ನೋಡುತ್ತಿದ್ದನು (೫೩).

ಇಲ್ಲಿಗೆ ಶ್ರೀಮದ್ರಾಮಾಯಣದ ಸುಂದರಕಾಂಡದಲ್ಲಿ ಹದಿನಾಲ್ಕನೆಯ ಸರ್ಗ

ಸರ್ಗ ೧೫

ಹನುಮಂತನು ಸೀತೆಯನ್ನು ಕಂಡು, ವಿವಿಧ ಕಾರಣಗಳಿಂದ
ಅವಳೇ ಸೀತೆಯೆಂದು ಮನಸ್ಸಿನಲ್ಲಿ ನಿರ್ಧರಿಸುವುದು.

ಹೀಗೆ ಹನುಮಂತನು ಸೀತಾನಿರೀಕ್ಷಣೆ ಮಾಡುತ್ತ ಶಿಂಶಪಾವೃಕ್ಷದ ಮೇಲೆ ಕುಳಿತು ಸುತ್ತಲೂ ಕಣ್ಣಿಟ್ಟು ನೋಡುತ್ತಿದ್ದನು. ಅಶೋಕವನವಾದರೋ ಕಲ್ಪಲತೆಗಳಿಂದಲೂ ಮರಗಳಿಂದಲೂ ತುಂಬಿ, ದಿವ್ಯಗಂಧವನ್ನು ಬೀರುತ್ತಲಿತ್ತು (೧-೨).

ತಾಂ ಸ ನಂದನಸಂಕಾಶಾಂ ಮೃಗಪಕ್ಷಿಭಿರಾವೃತಾಮ್ ।
ಹರ್ಮ್ಯಪ್ರಾಸಾದಸಂಬಾಧಾಂ ಕೋಕಿಲಾಕುಲನಿಃಸ್ವನಾಮ್ ॥ ೩

ಕಾಂಚನೋತ್ಪಲಪದ್ಮಾಭಿರ್ವಾಪೀಭಿರುಪಶೋಭಿತಾಮ್ ।
ಬಹ್ವಾಸನಕುಥೋಪೇತಾಂ ಬಹುಭೂಮಿಗೃಹಾಯುತಾಮ್ ॥ ೪

ಸರ್ವರ್ತುಕುಸುಮೈ ರಮ್ಯಾಂ ಫಲವದ್ಭಿಶ್ಚ ಪಾದಪೈಃ ।
ಪುಷ್ಪಿತಾನಾಮಶೋಕಾನಾಂ ಶ್ರಿಯಾ ಸೂರ್ಯೋದಯಪ್ರಭಾಮ್ ॥ ೫

ಪ್ರದೀಪ್ತಾಮಿವ ತತ್ರಸ್ಥೋ ಮಾರುತಿಃ ಸಮುದೈಕ್ಷತ ।
ನಿಷ್ಪತ್ರಶಾಖಾಂ ವಿಹಗೈಃ ಕ್ರಿಯಮಾಣಾಮಿವಾಸಕೃತ್ ॥ ೬

ವಿನಿಷ್ಪತದ್ಭಿಃ ಶತಶಶ್ಚಿತ್ರೈಃ ಪುಷ್ಪಾವತಂಸಕೈಃ ।
ಅಮೂಲ್ಯಪುಷ್ಪವಿಚಿತ್ರೈರಶೋಕೈಃ ಶೋಕನಾಶನೈಃ ॥ ೭

ಪುಷ್ಪಭಾರಾತಿಭಾರೈಶ್ಚ ಸ್ಪೃಶದ್ಭಿರಿವ ಮೇದಿನೀಮ್ ।
ಕರ್ಣಿಕಾರೈಃ ಕುಸುಮಿತೈಃ ಕಿಂಶುಕೈಶ್ಚ ಸುಪುಷ್ಪಿತೈಃ ॥ ೮

ಸ ದೇಶಃ ಪ್ರಭಯಾ ತೇಷಾಂ ಪ್ರದೀಪ್ತ ಇವ ಸರ್ವತಃ ।
ಪುನ್ನಾಗಾಃ ಸಪ್ತಪರ್ಣಾಶ್ಚ ಚಂಪಕೋದ್ದಾಲಕಾಸ್ತಥಾ ॥ ೯

ಅಲ್ಲಲ್ಲಿ ಉಪ್ಪರಿಗೆಯ ಮನೆಗಳಿಂದಲೂ ಕೋಗಿಲೆಗಳ ಕೂಗಿನಿಂದಲೂ ನಂದನ ವನಕ್ಕೆ ಎಣೆಯಾಗಿದ್ದಿತು. ಸುವರ್ಣಮಯವಾದ ಪದ್ಮೋತ್ಪಲಗಳಿರುವ ಕೊಳ ಗಳಿಂದಲೂ ಬೆಲೆಬಾಳುವ ಪೀಠ, ರತ್ನಕಂಬಳಿಗಳಿಂದಲೂ ಅಲಂಕೃತವಾಗಿದ್ದಿತು (೩–೪). ಮರಗಳು ಸರ್ವಋತುಗಳಲ್ಲಿಯೂ ಹೂಹಣ್ಣುಗಳಿಂದ ರಂಜಿಸು ತ್ತಿದ್ದವು. ಅಶೋಕಪುಷ್ಪಗಳು ಉದಯಿಸುವ ಸೂರ್ಯನಂತೆ ಪ್ರಕಾಶಿಸುತ್ತಿದ್ದವು. ಒಮ್ಮೊಮ್ಮೆ ಎಲೆ, ಕೊಂಬೆಗಳೊಂದೂ ಕಾಣದಂತೆ ಹಕ್ಕಿಗಳು ಮರಗಳಮೇಲೆ ತುಂಬಿಕೊಳ್ಳು ತ್ತಿದ್ದವು (೫–೬). ಅಶೋಕ, ಕರ್ಣಿಕಾರ, ಮುತ್ತುಗ, ಪುನ್ನಾಗ, ಸಪ್ತ ಪರ್ಣ ಮೊದಲಾದ ಮರಗಳು ಪುಷ್ಪಭಾರದಿಂದ ನೆಲವನ್ನು ಮುಟ್ಟುವಂತೆ ಬಾಗಿದ್ದವು. ಪುಷ್ಪಗಳ ಪ್ರಭೆಯಿಂದ ಅಶೋಕವನವೇ ಬೆಂಕಿಯಿಂದ

ವಿವೃದ್ಧಮೂಲಾ ಬಹವಃ ಶೋಭಂತೇ ಸ್ಮ ಸುಪುಷ್ಪಿತಾಃ ।
ಶಾತಕುಂಭನಿಭಾಃ ಕೇಚಿತ್ ಕೇಚಿದಗ್ನಿಶಿಖೋಪಮಾಃ ॥ ೧೦

ನೀಲಾಂಜನನಿಭಾಃ ಕೇಚಿತ್ತತ್ರಾಶೋಕಾಃ ಸಹಸ್ರಶಃ ।
ನಂದನಂ ವಿವಿಧೋದ್ಯಾನಂ ಚಿತ್ರಂ ಚೈತ್ರರಥಂ ಯಥಾ ॥ ೧೧

ಅತಿವೃತ್ತಮಿವಾಚಿಂತ್ಯಂ ದಿವ್ಯಂ ರಮ್ಯಂ ಶ್ರಿಯಾ ವೃತಮ್ ।
ದ್ವಿತೀಯಮಿವ ಚಾಕಾಶಂ ಪುಷ್ಪಜ್ಯೋತಿರ್ಗಣಾಯುತಮ್ ॥ ೧೨

ಪುಷ್ಪರತ್ನಶತೈಶ್ಚಿತ್ರಂ ಪಂಚಮಂ ಸಾಗರಂ ಯಥಾ ।
ಸರ್ವರ್ತುಪುಷ್ಪೈರ್ನಿಚಿತಂ ಪಾದಪೈರ್ಮಧುಗಂಧಿಭಿಃ ॥ ೧೩

ನಾನಾನಿನಾದೈರುದ್ಯಾನಂ ರಮ್ಯಂ ಮೃಗಗಣೈರ್ದ್ವಿಜೈಃ ।
ಅನೇಕಗಂಧಪ್ರವಹಂ ಪುಣ್ಯಗಂಧಂ ಮನೋರಮಮ್ ॥ ೧೪

ಶೈಲೇಂದ್ರಮಿವ ಗಂಧಾಢ್ಯಂ ದ್ವಿತೀಯಂ ಗಂಧಮಾದನಮ್ ।
ಅಶೋಕವನಿಕಾಯಾಂ ತು ತಸ್ಯಾಂ ವಾನರಪುಂಗವಃ ॥ ೧೫

ಸ ದದರ್ಶಾವಿದೂರಸ್ಥಂ ಚೈತ್ರಪ್ರಾಸಾದಮುಚ್ಛ್ರಿತಮ್ ।
ಮಧ್ಯೇ ಸ್ತಂಭಸಹಸ್ರೇಣ ಸ್ಥಿತಂ ಕೈಲಾಸಪಾಂಡರಮ್ ॥ ೧೬

ಉರಿಯುತ್ತಿದೆಯೋ ಎಂಬಂತೆ ತೋರುತ್ತಿತ್ತು (೭–೯). ನಾನಾವರ್ಣದ ಅಶೋಕ ಪುಷ್ಪಗಳು ಅರಳಿದ್ದವು. ಆದ್ದರಿಂದ ಕೆಲವು ಮರಗಳು ಚಿನ್ನದಂತೆಯೂ ಕೆಲವು ಅಗ್ನಿಜ್ವಾಲೆಯಂತೆಯೂ ಕೆಲವು ನೀಲಾಂಜನದಂತೆಯೂ ಶೋಭಿಸುತ್ತಿದ್ದವು. ಅಶೋಕವನವು ನಂದನವನ ಚೈತ್ರರಥವನಗಳಂತೆ ಮನೋಹರವಾಗಿ, ಹೂಗಳೆಂಬ ನಕ್ಷತ್ರಗಳಿಂದ ತುಂಬಿದ ಗಗನಸ್ಥಳದಂತೆ ವಿರಾಜಿಸುತ್ತಿದ್ದಿತು (೧೦–೧೨). ಪುಷ್ಪಗಳೆಂಬ ಅಸಂಖ್ಯಾತ ರತ್ನಗಳಿಂದ ತುಂಬಿದ ಐದನೆಯ ಸಾಗರವೋ ಎಂಬಂತೆ ವಿಶಾಲವಾಗಿ, ಮೃಗಪಕ್ಷಿಗಳ ವಿವಿಧ ಧ್ವನಿಗಳಿಂದ ಮನೋಜ್ಞವಾಗಿ, ನಾನಾ ಪುಷ್ಪಗಳ ಸುಗಂಧದಿಂದ ಮನೋಹರವಾದ ಗಂಧಮಾದನ ಪರ್ವತದಂತೆ ಎಸೆಯುತ್ತಿದ್ದಿತು (೧೩–೧೪). ಹನುಮಂತನು ಅದೆಲ್ಲವನ್ನೂ ನೋಡುತ್ತ ಸ್ವಲ್ಪ ದೂರದಲ್ಲಿ ಚೈತ್ಯಪ್ರಾಸಾದದಂತೆ ವರ್ತುಲಾಕಾರವಾದ ಒಂದು ಉನ್ನತ ಭವನವನ್ನು ಕಂಡನು. ಅದು ಕೈಲಾಸದಂತೆ ಬಿಳುಪಾಗಿ,

ಪ್ರವಾಲಕೃತಸೋಪಾನಂ ತಪ್ತಕಾಂಚನವೇದಿಕಮ್ ।
ಮುಷ್ಣಂತಮಿವ ಚಕ್ಷೂಂಷಿ ದ್ಯೋತಮಾನಮಿವ ಶ್ರಿಯಾ ॥ ೧೭

ವಿಮಲಂ ಪ್ರಾಂಶುಭಾವತ್ವಾದುಲ್ಲಿಖಂತಮಿವಾಂಬರಮ್ ।
ತತೋ ಮಲಿನಸಂವೀತಾಂ ರಾಕ್ಷಸೀಭಿಃ ಸಮಾವೃತಾಮ್ ॥ ೧೮

ಉಪವಾಸಕೃಶಾಂ ದೀನಾಂ ನಿಃಶ್ವಸಂತೀಂ ಪುನಃ ಪುನಃ ।
ದದರ್ಶ ಶುಕ್ಲಪಕ್ಷಾದೌ ಚಂದ್ರರೇಖಾಮಿವಾಮಲಾಮ್ ॥ ೧೯

ಮಂದಂ ಪ್ರಖ್ಯಾಯಮಾನೇನ ರೂಪೇಣ ರುಚಿರಪ್ರಭಾಮ್ ।
ಪಿನದ್ಧಾಂ ಧೂಮಜಾಲೇನ ಶಿಖಾಮಿವ ವಿಭಾವಸೋಃ ॥ ೨೦

ಪೀತೇನೈಕೇನ ಸಂವೀತಾಂ ಕ್ಲಿಷ್ಟೇನೋತ್ತಮವಾಸಸಾ ।
ಸಪಂಕಾಮನಲಂಕಾರಾಂ ವಿಪದ್ಮಾಮಿವ ಪದ್ಮಿನೀಮ್ ॥ ೨೧

ವ್ರೀಡಿತಾಂ ದುಃಖಸಂತಪ್ತಾಂ ಪರಿಮ್ಲಾನಾಂ ತಪಸ್ವಿನೀಮ್ ।
ಗ್ರಹೇಣಾಂಗಾರಕೇಣೇವ ಪೀಡಿತಾಮಿವ ರೋಹಿಣೀಮ್ ॥ ೨೨

ಸಾವಿರಾರು ಕಂಭಗಳಿಂದ ಯುಕ್ತವಾಗಿತ್ತು. ಹವಳದ ಮೆಟ್ಟಿಲುಗಳೂ ಬಂಗಾರದ ವೇದಿಕೆಗಳೂ ಕಣ್ಣನ್ನು ಕೋರೈಸುತ್ತಿದ್ದವು. ಆ ಭವನವು ಆಕಾಶವನ್ನು ಭೇದಿಸಿ ಕೊಂಡು ಹೋಗುವಂತೆ ಎತ್ತರವಾಗಿಯೂ ಸ್ವಚ್ಛವಾಗಿಯೂ ಇತ್ತು (೧೫–೧೮). ಹನುಮಂತನು ಅದನ್ನು ವೀಕ್ಷಿಸುತ್ತಿರುವಾಗ ಅದರ ಬುಡದಲ್ಲಿ ರಾಕ್ಷಸಸ್ತ್ರೀಯರಿಂದ ಪರಿವೃತಳಾಗಿ ಮಲಿನವಸ್ತ್ರವನ್ನುಟ್ಟಿದ್ದ ಒಬ್ಬ ಸ್ತ್ರೀಯನ್ನು ನೋಡಿದನು. ಆವಳು ಬಾರಿಬಾರಿಗೂ ನಿಟ್ಟುಸಿರುಬಿಡುತ್ತ ಉಪವಾಸದಿಂದ ಕೃಶಳಾಗಿ, ಶುಕ್ಲಪಕ್ಷದ ಆರಂಭದಲ್ಲಿರುವ ಚಂದ್ರರೇಖೆಯಂತೆ ಕಾಣಿಸುತ್ತಿದ್ದಳು. ದೇಹಕಾಂತಿಯು ಸ್ವಲ್ಪ ಮಾಸಿಹೋದುದರಿಂದ ಹೊಗೆಯು ಆವರಿಸಿದ ಅಗ್ನಿಜ್ವಾಲೆಯಂತೆ ತೋರುತ್ತಿದ್ದಳು (೧೯–೨೦). ಮಲಿನವಾದ ಒಂದು ಪಟ್ಟೆಸೀರೆಯನ್ನು ಮೈಗೆ ಸುತ್ತಿಕೊಂಡು ನಿರಾಭರಣಗಳಾಗಿದ್ದ ಆಕೆ, ಹೂವಿಲ್ಲದೆ ಕೆಸರಿನಿಂದ ಲಿಪ್ತವಾದ ಪದ್ಮಲತೆಯಂತೆ ಇದ್ದಳು. ಅಂಗಾರಕ ಗ್ರಹದಿಂದ ಪೀಡಿತವಾದ ರೋಹಿಣೀ ನಕ್ಷತ್ರದಂತೆ, ಅತಿದುಃಖ

ಅಶ್ರುಪೂರ್ಣಮುಖೀಂ ದೀನಾಂ ಕೃಶಾಮನಶನೇನ ಚ ।
ಶೋಕಧ್ಯಾನಪರಾಂ ದೀನಾಂ ನಿತ್ಯಂ ದುಃಖಪರಾಯಣಾಮ್ ॥ ೨೩

ಪ್ರಿಯಂ ಜನಮಪಶ್ಯಂತೀಂ ಪಶ್ಯಂತೀಂ ರಾಕ್ಷಸೀಗಣಮ್ ।
ಸ್ವಗಣೇನ ಮೃಗೀಂ ಹೀನಾಂ ಶ್ವಗಣಾಭಿವೃತಾಮಿವ ॥ ೨೪

ನೀಲನಾಗಾಭಯಾ ವೇಣ್ಯಾ ಜಘನಂ ಗತಯೈಕಯಾ ।
ನೀಲಯಾ ನೀರದಾಪಾಯೇ ವನರಾಜ್ಯಾ ಮಹೀಮಿವ ॥ ೨೫

ಸುಖಾರ್ಹಾಂ ದುಃಖಸಂತಪ್ತಾಂ ವ್ಯಸನಾನಾಮಕೋವಿದಾಮ್ ।
ತಾಂ ಸಮೀಕ್ಷ್ಯ ವಿಶಾಲಾಕ್ಷೀಮಧಿಕಂ ಮಲಿನಾಂ ಕೃಶಾಮ್ ॥ ೨೬

ತರ್ಕಯಾಮಾಸ ಸೀತೇತಿ ಕಾರಣೈರುಪಪಾದಿಭಿಃ ।
ಹ್ರಿಯಮಾಣಾ ತದಾ ತೇನ ರಕ್ಷಸಾ ಕಾಮರೂಪಿಣಾ ॥ ೨೭

ಯಥಾರೂಪಾ ಹಿ ದೃಷ್ಟಾ ವೈ ತಥಾರೂಪೇಯಮಂಗನಾ ।
ಪೂರ್ಣಚಂದ್ರಾನನಾಂ ಸುಭ್ರೂಂ ಚಾರುವೃತ್ತಪಯೋಧರಾಮ್ ॥ ೨೮

ದಿಂದ ಸಂತಪ್ತಳಾಗಿದ್ದಳು (೨೧–೨೨). ದೈನ್ಯದಿಂದಲೂ ದುಃಖದಿಂದಲೂ ಸದಾ ಏನನ್ನೋ ಚಿಂತಿಸುತ್ತಾ ಧಾರಾಕಾರವಾಗಿ ಕಣ್ಣೀರನ್ನು ಸುರಿಸುತ್ತಿದ್ದಳು. ಉಪವಾಸ ದಿಂದ ಕೃಶಳಾಗಿದ್ದಳು. ಅವಳಿಗೆ ಎತ್ತ ತಿರುಗಿದರೂ ಪ್ರಿಯಜನರಿಲ್ಲದೆ ಘೋರ ರಾಕ್ಷಸಿಯರೇ ಕಾಣಸುತ್ತಿದ್ದರು. ಆದ್ದರಿಂದ ತನ್ನ ಗುಂಪಿನಿಂದ ತಪ್ಪಿ ಬಂದು, ನಾಯಿಗಳ ಮಧ್ಯದಲ್ಲಿ ಸಿಕ್ಕಿದ ಹೆಣ್ಣು ಜಿಂಕೆಯಂತೆ ಇದ್ದಳು (೨೩–೨೪). ಕೃಷ್ಣಸರ್ಪದಂತೆ ಕಪ್ಪಾಗಿಯೂ ನೀಳವಾಗಿಯೂ ಇದ್ದ ವೇಣಿಯು ಬೆನ್ನಮೇಲೆ ಲಂಬಿಸಿದ್ದುದರಿಂದ, ಶರತ್ಕಾಲದಲ್ಲಿ ದಟ್ಟವಾದ ವನರಾಜಿಯಿಂದ ವಿರಾಜಿಸುವ ಭೂದೇವಿಯಂತೆ ತೋರುತ್ತಿದ್ದಳು (೨೫). ಆಂಜನೇಯನು ಸುಖಾರ್ಹಳೂ ಕಷ್ಟವನ್ನು ಅರಿಯದವಳೂ ವಿಶಾಲಾಕ್ಷಿಯೂ ಆದ ಆ ಸ್ತ್ರೀಯನ್ನು ಗಮನಿಸಿ ನೋಡಿ, ಇವಳು ಸೀತೆಯೇ ಸರಿಯೆಂದು ಅನೇಕ ಕಾರಣಗಳಿಂದ ಊಹಿಸಿದನು; 'ಹಿಂದೆ ಕಾಮರೂಪಿಯಾದ ರಾವಣನು ಅಪಹರಿಸಿಕೊಂಡು ಹೋಗುತ್ತಿದ್ದ ಸ್ತ್ರೀಯನ್ನು ನಾನು ದೂರದಿಂದ ನೋಡಿದ್ದೆನು. ಅವಳಂತೆಯೇ ಇವಳು ಇದ್ದಾಳೆ' ಎಂದು ಕೊಂಡು ಅವಳನ್ನೇ ನೋಡಲಾರಂಭಿಸಿದನು (೨೬–೨೭). ಪೂರ್ಣಚಂದ್ರಾನನೆ

ಕುರ್ವಂತೀಂ ಪ್ರಭಯಾ ದೇವೀಂ ಸರ್ವಾ ವಿತಿಮಿರಾ ದಿಶಃ ।
ತಾಂ ನೀಲಕೇಶೀಂ ಬಿಂಬೋಷ್ಠೀಂ ಸುಮಧ್ಯಾಂ ಸುಪ್ರತಿಷ್ಠಿತಾಮ್ ॥ ೨೯

ಸೀತಾಂ ಪದ್ಮಪಲಾಶಾಕ್ಷೀಂ ಮನ್ಮಥಸ್ಯ ರತಿಂ ಯಥಾ ।
ಇಷ್ಟಾಂ ಸರ್ವಸ್ಯ ಜಗತಃ ಪೂರ್ಣಚಂದ್ರಪ್ರಭಾಮಿವ ॥ ೩೦

ಭೂಮೌ ಸುತನುಮಾಸೀನಾಂ ನಿಯತಾಮಿವ ತಾಪಸೀಮ್ ।
ನಿಃಶ್ವಾಸಬಹುಲಾಂ ಭೀರುಂ ಭುಜಗೇಂದ್ರವಧೂಮಿವ ॥ ೩೧

ಶೋಕಜಾಲೇನ ಮಹತಾ ವಿತತೇನ ನ ರಾಜತೀಮ್ ।
ಸಂಸಕ್ತಾಂ ಧೂಮಜಾಲೇನ ಶಿಖಾಮಿವ ವಿಭಾವಸೋಃ ॥ ೩೨

ತಾಂ ಸ್ಮೃತೀಮಿವ ಸಂದಿಗ್ಧಾಮೃದ್ಧಿಂ ನಿಪತಿತಾಮಿವ ।
ವಿಹತಾಮಿವ ಚ ಶ್ರದ್ಧಾಮಾಶಾಂ ಪ್ರತಿಹತಾಮಿವ ॥ ೩೩

ಸೋಪಸರ್ಗಾಂ ಯಥಾ ಸಿದ್ಧಿಂ ಬುದ್ಧಿಂ ಸಕಲುಷಾಮಿವ ।
ಅಭೂತೇನಾಪವಾದೇನ ಕೀರ್ತಿಂ ನಿಪತಿತಾಮಿವ ॥ ೩೪

ರಾಮೋಪರೋಧವ್ಯಥಿತಾಂ ರಕ್ಷೋಹರಣಕರ್ಶಿತಾಮ್ ।
ಅಬಲಾಂ ಮೃಗಶಾವಾಕ್ಷೀಂ ವೀಕ್ಷಮಾಣಾಂ ಸಮಂತತಃ ॥ ೩೫

ಯಾದ ಆ ದೇವಿಯು ತನ್ನ ಪ್ರಭೆಯಿಂದ ಸಮಸ್ತ ದಿಕ್ಕುಗಳನ್ನು ಬೆಳಗುತ್ತಿದ್ದಳು. ಕಪ್ಪಾದ ಕೇಶರಾಶಿ, ತೊಂಡೆಯ ಹಣ್ಣಿನಂತಹ ತುಟಿ, ಕೃಶವಾದ ನಡು, ಕಮಲದ ಎಸಳಿನಂತಹ ಕಣ್ಣುಗಳು, ಮನೋಜ್ಞವಾದ ಮೈಕಟ್ಟು—ಅವಳು ಸಾಕ್ಷಾತ್ ರತಿಯಂತೆ ಇದ್ದಳು. ಪೂರ್ಣಚಂದ್ರನ ಬೆಳದಿಂಗಳಂತೆ, ಅವಳನ್ನು ನೋಡಿದರೆ ಜಗತ್ತಿಗೇ ಒಂದು ಹರ್ಷವಾಗುತ್ತಿತ್ತು (೨೯–೩೦). ಆಕೆಯು ತಪಸ್ವಿನಿಯಂತೆ ನೆಲದ ಮೇಲೆ ಕುಳಿತು, ಹೆದರಿದ ಸರ್ಪಿಣಿಯಂತೆ ನಿಟ್ಟುಸಿರು ಬಿಡುತ್ತಿದ್ದಳು. ವ್ಯಥೆಯಿಂದ ಬಾಡಿಹೋದ್ದರಿಂದ ಹೊಗೆ ಸುತ್ತಿದ ಅಗ್ನಿಜ್ವಾಲೆಯಂತಿದ್ದಳು (೩೧–೩೨). ಅರ್ಥನಿಶ್ಚಯವಿಲ್ಲದ ಸ್ಮೃತಿಯಂತೆ, ಕ್ಷೀಣವಾದ ಸಂಪತ್ತಿನಂತೆ, ವಿಧಿಗೆಟ್ಟ ಶ್ರದ್ಧೆಯಂತೆ, ಭಗ್ನವಾದ ಆಸೆಯಂತೆ, ವಿಘ್ನಸಹಿತವಾದ ತಪಃಸಿದ್ಧಿಯಂತೆ, ಕಲುಷಗೊಂಡ ಬುದ್ಧಿಯಂತೆ, ಮಿಥ್ಯಾಪವಾದಕ್ಕೆ ಒಳಗಾದ ಕೀರ್ತಿಯಂತೆ (೩೩–೩೪). ಶ್ರೀರಾಮನ ವಿರಹದಿಂದ, ದುಃಖಿತಳಾಗಿ, ರಾಕ್ಷಸನಿಗೆ ಸೆರೆಸಿಕ್ಕಿ

ಬಾಷ್ಪಾಂಬುಪರಿಪೂರ್ಣೇನ ಕೃಷ್ಣವಕ್ರಾಕ್ಷಿಪಕ್ಷ್ಮಣಾ ।
ವದನೇನಾಪ್ರಸನ್ನೇನ ನಿಃಶ್ವಸಂತೀಂ ಪುನಃ ಪುನಃ ॥ ೩೬

ಮಲಪಂಕಧರಾಂ ದೀನಾಂ ಮಂಡನಾರ್ಹಾಮಮಂಡಿತಾಮ್ ।
ಪ್ರಭಾಂ ನಕ್ಷತ್ರರಾಜಸ್ಯ ಕಾಲಮೇಘೈರಿವಾವೃತಾಮ್ ॥ ೩೭

ತಸ್ಯ ಸಂದಿದಿಹೇ ಬುದ್ಧಿರ್ಮುಹುಃ ಸೀತಾಂ ನಿರೀಕ್ಷ್ಯ ತು ।
ಆಮ್ನಾಯಾನಾಮಯೋಗೇನ ವಿದ್ಯಾಂ ಪ್ರಶಿಥಿಲಾಮಿವ ॥ ೩೮

ದುಃಖೇನ ಬುಬುಧೇ ಸೀತಾಂ ಹನುಮಾನನಲಂಕೃತಾಮ್ ।
ಸಂಸ್ಕಾರೇಣ ಯಥಾ ಹೀನಾಂ ವಾಚಮರ್ಥಾಂತರಂ ಗತಾಮ್ ॥ ೩೯

ತಾಂ ಸಮೀಕ್ಷ್ಯ ವಿಶಾಲಾಕ್ಷೀಂ ರಾಜಪುತ್ರೀಮನಿಂದಿತಾಮ್ ।
ತರ್ಕಯಾಮಾಸ ಸೀತೇತಿ ಕಾರಣೈರುಪಪಾದಿಭಿಃ ॥ ೪೦

ವೈದೇಹ್ಯಾ ಯಾನಿ ಚಾಂಗೇಷು ತದಾ ರಾಮೋಽನ್ವಕೀರ್ತಯತ್ ।
ತಾನ್ಯಾಭರಣಜಾಲಾನಿ ಗಾತ್ರಶೋಭೀನ್ಯಲಕ್ಷಯತ್ ॥ ೪೧

ಸುಕೃತೌ ಕರ್ಣವೇಷ್ಟೌ ಚ ಶ್ವದಂಷ್ಟ್ರೌ ಚ ಸುಸಂಸ್ಥಿತೌ ।
ಮಣಿವಿದ್ರುಮಚಿತ್ರಾಣಿ ಹಸ್ತೇಷ್ವಾಭರಣಾನಿ ಚ ॥ ೪೨

ಕೃಶಳಾಗಿ, ಜಿಂಕೆಯಂತೆ ಸುತ್ತಲೂ ವೀಕ್ಷಿಸುವ ಅಬಲೆಯಾಗಿ, ಅಶ್ರುನೇತ್ರೆಯಾಗಿ, ಮ್ಲಾನಮುಖಿಯಾಗಿ (೩೫–೩೬), ಮಲಿನಗಾತ್ರೆಯಾಗಿ, ದೀನಳಾಗಿ, ಅಲ್ಪಾಭರಣಳಾಗಿ, ಕಾರ್ಮೋಡಗಳಿಂದ ಸುತ್ತಲ್ಪಟ್ಟ ಚಂದ್ರನ ಕಾಂತಿಯಂತೆಯೂ ಅಭ್ಯಾಸ ಮಾಡದೆ ಕ್ಷೀಣವಾದ ವಿದ್ಯೆಯಂತೆಯೂ ವ್ಯಾಕರಣ ಸಂಸ್ಕಾರವಿಲ್ಲದೆ ಸರಿಯಾದ ಅರ್ಥವನ್ನು ಬೋಧಿಸದಿರುವ ವಾಣಿಯಂತೆಯೂ ರೂಪಾಂತರವನ್ನು ಹೊಂದಿದ್ದ ಆ ಸೀತಾದೇವಿಯನ್ನು ನೋಡಿ, 'ಇವಳು ಸೀತೆ ಹೌದೋ ಅಲ್ಲವೊ' ಎಂದು ಹನುಮಂತನಿಗೆ ಮತ್ತೆ ಸಂದೇಹ ಉಂಟಾಯಿತು (೩೭–೩೯). ಆಮೇಲೆ ಹನುಮಂತನು ಆ ರಾಜಕುಮಾರಿಯನ್ನು ನೋಡಿ 'ಇವಳು ಸೀತೆಯೇ ಹೌದು' ಎಂದು ಊಹಿಸಿದನು. ಏಕೆಂದರೆ, ಸೀತೆಯ ಮೈಮೇಲೆ ಯಾವ ಆಭರಣಗಳಿದ್ದುವೆಂದು ಶ್ರೀರಾಮನು ಹೇಳಿದ್ದನೋ ಅವುಗಳನ್ನು ಹನುಮಂತನು ಲಕ್ಷಿಸಿ ನೋಡಿದನು (೪೦–೪೧). ''ಇವಳ ಕರ್ಣಕುಂಡಲಗಳೂ ಶ್ವದಂಷ್ಟ್ರ ಎಂಬ

ಶ್ಯಾಮಾನಿ ಚಿರಯುಕ್ತತ್ವಾತ್ತಥಾ ಸಂಸ್ಥಾನವಂತಿ ಚ ।
ತಾನ್ಯೇವೈತಾನಿ ಮನ್ಯೇಽಹಂ ಯಾನಿ ರಾಮೋಽನ್ವಕೀರ್ತಯತ್ ॥ ೪೩

ತತ್ರ ಯಾನ್ಯವಹೀನಾನಿ ತಾನ್ಯಹಂ ನೋಪಲಕ್ಷಯೇ ।
ಯಾನ್ಯಸ್ಯಾ ನಾವಹೀನಾನಿ ತಾನೀಮಾನಿ ನ ಸಂಶಯಃ ॥ ೪೪

ಪೀತಂ ಕನಕಪಟ್ಟಾಭಂ ಸ್ರಸ್ತಂ ತದ್ವಸನಂ ಶುಭಮ್ ।
ಉತ್ತರೀಯಂ ನಗಾಸಕ್ತಂ ತದಾ ದೃಷ್ಟಂ ಪ್ಲವಂಗಮೈಃ ॥ ೪೫

ಭೂಷಣಾನಿ ವಿಚಿತ್ರಾಣಿ ದೃಷ್ಟಾನಿ ಧರಣೀತಲೇ ।
ಅನಯೈವಾಪವಿದ್ಧಾನಿ ಸ್ವನವಂತಿ ಮಹಾಂತಿ ಚ ॥ ೪೬

ಇದಂ ಚಿರಗೃಹೀತತ್ವಾದ್ವಸನಂ ಕ್ಲಿಷ್ಟವತ್ತರಮ್ ।
ತಥಾಪಿ ನೂನಂ ತದ್ವರ್ಣಂ ತಥಾ ಶ್ರೀಮದ್ಯಥೇತರತ್ ॥ ೪೭

ಇಯಂ ಕನಕವರ್ಣಾಂಗೀ ರಾಮಸ್ಯ ಮಹಿಷೀ ಪ್ರಿಯಾ ।
ಪ್ರನಷ್ಟಾಪಿ ಸತೀ ಯಾಸ್ಯ ಮನಸೋ ನ ಪ್ರಣಶ್ಯತಿ ॥ ೪೮

ಇಯಂ ಸಾ ಯತ್ಕೃತೇ ರಾಮಶ್ಚತುರ್ಭಿಃ ಪರಿತಪ್ಯತೇ ।
ಕಾರುಣ್ಯೇನಾನೃಶಂಸ್ಯೇನ ಶೋಕೇನ ಮದನೇನ ಚ ॥ ೪೯

ಹೂವಿನ ಆಕಾರದ ಕರ್ಣಾಭರಣಗಳೂ ರತ್ನ ಮತ್ತು ಹವಳಗಳಿಂದ ಸುಂದರವಾದ ಹಸ್ತಾಭರಣಗಳೂ ಮಾಸಿಹೋಗಿದ್ದರೂ, ಶ್ರೀರಾಮನು ಹೇಳಿದಂತಹ ಒಡವೆಗಳೇ ಸರಿ. ಅವನು ಹೇಳಿದುದರಲ್ಲಿ ಕೆಲವು ಒಡವೆಗಳು ಇಲ್ಲದಿದ್ದರೂ, ಇರತಕ್ಕವುಗಳು ಮಾತ್ರ ಅವನು ಹೇಳಿದವುಗಳೇ (೪೨–೪೪). ಹೊಂಬಣ್ಣದ ರೇಶ್ಮೆಯ ಉತ್ತರೀಯವು ಬೀಳುವಾಗ ಮರದಲ್ಲಿ ಸಿಕ್ಕಿಕೊಂಡುದನ್ನು ಋಷ್ಯಮೂಕ ಪರ್ವತದಲ್ಲಿ ವಾನರರು ನೋಡಿದರಲ್ಲವೆ? ಆಗ 'ಝಣಝಣ' ಎಂದು ಶಬ್ದಮಾಡುತ್ತ ಅಮೂಲ್ಯವಾದ ಆಭರಣಗಳು ನೆಲದ ಮೇಲೆ ಬಿದ್ದುಹೋದವು. ಅವೆಲ್ಲವನ್ನೂ ಈಕೆಯೇ ಬಿಸುಟಿರಬೇಕು (೪೫–೪೬). ಇವಳು ಧರಿಸಿದ ಈ ಸೀರೆಯು ಬಹಳ ಮಾಸಿಹೋಗಿದ್ದರೂ, ಬಣ್ಣದಲ್ಲಿಯೂ ಆಕಾರದಲ್ಲಿಯೂ ಆ ಉತ್ತರೀಯದಂತೆಯೇ ಇದೆ. ಶ್ರೀರಾಮನ ಕಣ್ಣಿಗೆ ಕಾಣಿಸದಿದ್ದರೂ ಅವನ ಮನಸ್ಸಿನಲ್ಲಿ ಸ್ಥಿರವಾಗಿ ನೆಲೆಸಿದ ಅವನ ಪ್ರಿಯಪತ್ನಿಯಾದ ಸಾಧ್ವಿ ಈ ಕನಕಾಂಗಿಯೇ

ಸ್ತ್ರೀ ಪ್ರನಷ್ಟೇತಿ ಕಾರುಣ್ಯಾದಾಶ್ರಿತೇತ್ಯಾನೃಶಂಸ್ಯತಃ ।
ಪತ್ನೀ ನಷ್ಟೇತಿ ಶೋಕೇನ ಪ್ರಿಯೇತಿ ಮದನೇನ ಚ ॥　　೫೦

ಅಸ್ಯಾ ದೇವ್ಯಾ ಯಥಾ ರೂಪಮಂಗಪ್ರತ್ಯಂಗಸೌಷ್ಠವಮ್ ।
ರಾಮಸ್ಯ ಚ ಯಥಾ ರೂಪಂ ತಸ್ಯೇಯಮಸಿತೇಕ್ಷಣಾ ॥　　೫೧

ಅಸ್ಯಾ ದೇವ್ಯಾ ಮನಸ್ತಸ್ಮಿಂಸ್ತಸ್ಯ ಚಾಸ್ಯಾಂ ಪ್ರತಿಷ್ಠಿತಮ್ ।
ತೇನೇಯಂ ಸ ಚ ಧರ್ಮಾತ್ಮಾ ಮುಹೂರ್ತಮಪಿ ಜೀವತಿ ॥　　೫೨

ದುಷ್ಕರಂ ಕೃತವಾನ್ ರಾಮೋ ಹೀನೋ ಯದನಯಾ ಪ್ರಭುಃ ।
ಧಾರಯತ್ಯಾತ್ಮನೋ ದೇಹಂ ನ ಶೋಕೇನಾವಸೀದತಿ ॥　　೫೩

ಹೌದು (೪೭–೪೮). ಶ್ರೀರಾಮನು ಯಾರಿಗೋಸ್ಕರ ಕೊರಗಿ ಸಂಕಟ ಪಡುತ್ತಿರುವನೋ ಆ ಸೀತಾದೇವಿ ಇವಳೇ ಸರಿ. ಅಬಲೆಯಾದ ಸ್ತ್ರೀಯೊಬ್ಬಳು ರಾಕ್ಷಸನ ಕೈಗೆ ಸಿಕ್ಕಿದಳಲ್ಲಾ ಎಂಬ ಕಾರುಣ್ಯ ಒಂದು, ತನ್ನನ್ನೇ ನಂಬಿಬಂದವಳನ್ನು ರಕ್ಷಿಸಲು ಆಗಲಿಲ್ಲವಲ್ಲಾ ಎಂಬ ವ್ಯಥೆ ಒಂದು, ಕೈಹಿಡಿದ ಹೆಂಡತಿ ಎಂಬ ಚಿಂತೆ ಒಂದು, ತನಗೆ ಅತ್ಯಂತ ಪ್ರಿಯಳೆಂಬ ಮೋಹ ಒಂದು. ಹೀಗೆ ನಾಲ್ಕೂ ವಿಧದಲ್ಲಿ ಇವಳಿಗಾಗಿಯೇ ಕೊರಗುತ್ತಿರುವನು (೪೯–೫೦). ಈ ದೇವಿಯ ರೂಪಲಕ್ಷಣ ಗಳಿಗೆ ಅನುರೂಪನಾದವನು ಶ್ರೀರಾಮನೇ. ಆತನ ರೂಪಲಕ್ಷಣಗಳಿಗೆ ಅನುರೂಪಳಾದವಳು ಈಕೆಯೇ. ಇವಳ ಮನಸ್ಸು ರಾಮನಲ್ಲಿಯೂ ಅವನ ಮನಸ್ಸು ಇವಳಲ್ಲಿಯೂ ನೆಲೆಸಿಹೋಗಿವೆ. ಆದ್ದರಿಂದಲೇ ಇವರಿಬ್ಬರೂ ಪರಸ್ಪರ ದರ್ಶನವಾದೀತೆಂಬ ಆಸೆಯಿಂದ ಈಗಲೂ ಜೀವಿಸಿದ್ದಾರೆ (೫೧–೫೨). ಆಹಾ ! ಇಂತಹ ಪ್ರಿಯಪತ್ನಿಯನ್ನಗಲಿಯೂ ಪ್ರಭುವಾದ ರಾಮನು ದೇಹವನ್ನಿಟ್ಟು ಕೊಂಡಿರುವನಲ್ಲ! ದುಃಖದಿಂದ ಕುಸಿದುಹೋಗಲಿಲ್ಲವಲ್ಲ! ಇದು ಇನ್ನೊಬ್ಬರಿಂದ ಸಾಧ್ಯವಿಲ್ಲ!'' ಎಂದು ಮನಸ್ಸಿನಲ್ಲಿಯೇ ಗುಣಿಸಿದನು. ಆಮೇಲೆ ಹನುಮಂತನು ಸೀತೆಯನ್ನು ಕಂಡುದಕ್ಕಾಗಿ ಸಂತೋಷದಿಂದ ಉಬ್ಬಿ ರಾಮನನ್ನು ಧ್ಯಾನಿಸುತ್ತ ''ಈ ಸತೀಮಣಿಯನ್ನು ಕೈಹಿಡಿದ ಶ್ರೀರಾಮನೇ ಭಾಗ್ಯಶಾಲಿ; ಈಕೆಗಾಗಿ ಅವನು

ಏವಂ ಸೀತಾಂ ತದಾ ದೃಷ್ಟ್ವಾ ಹೃಷ್ಟಃ ಪವನಸಂಭವಃ ।
ಜಗಾಮ ಮನಸಾ ರಾಮಂ ಪ್ರಶಶಂಸ ಚ ತಂ ಪ್ರಭುಮ್ ॥ ೫೪

ಇತಿ ಶ್ರೀಮದ್ರಾಮಾಯಣೇ ಸುಂದರಕಾಂಡೇ ಪಂಚದಶಃ ಸರ್ಗಃ

—o—

ಷೋಡಶಃ ಸರ್ಗಃ

ಹನೂಮತ್ಪರೀತಾಪಃ

ಪ್ರಶಸ್ಯ ತು ಪ್ರಶಸ್ತವ್ಯಾಂ ಸೀತಾಂ ತಾಂ ಹರಿಪುಂಗವಃ ।
ಗುಣಾಭಿರಾಮಂ ರಾಮಂ ಚ ಪುನಶ್ಚಿಂತಾಪರೋಽಭವತ್ ॥ ೧
ಸ ಮುಹೂರ್ತಮಿವ ಧ್ಯಾತ್ವಾ ಬಾಷ್ಪಪರ್ಯಾಕುಲೇಕ್ಷಣಃ ।
ಸೀತಾಮಾಶ್ರಿತ್ಯ ತೇಜಸ್ವೀ ಹನುಮಾನ್ ವಿಲಲಾಪ ಹ ॥ ೨
ಮಾನ್ಯಾ ಗುರುವಿನೀತಸ್ಯ ಲಕ್ಷ್ಮಣಸ್ಯ ಗುರುಪ್ರಿಯಾ ।
ಯದಿ ಸೀತಾಪಿ ದುಃಖಾರ್ತಾ ಕಾಲೋ ಹಿ ದುರತಿಕ್ರಮಃ ॥ ೩

ಪಡುತ್ತಿರುವ ಮಹಾಪ್ರಯತ್ನ ಯೋಗ್ಯವೇ ಸರಿ'' ಎಂದು ಶ್ರೀರಾಮನನ್ನು ಕೊಂಡಾಡಿದನು (೫೩–೫೪).

ಇಲ್ಲಿಗೆ ಶ್ರೀಮದ್ರಾಮಾಯಣದ ಸುಂದರಕಾಂಡದಲ್ಲಿ ಹದಿನೈದನೆಯ ಸರ್ಗ

—o—

ಸರ್ಗ ೧೬

ಹನುಮಂತನು ಸೀತೆಯ ಶುಭಲಕ್ಷಣಗಳನ್ನು ಪ್ರಶಂಸಿಸಿ,
ಆಕೆಯ ದುರ್ದಶೆಯನ್ನು ಕಂಡು ವ್ಯಥೆಪಟ್ಟುದು.

ಆಂಜನೇಯನು ಸ್ತೋತ್ರಾರ್ಹಳಾದ ಸೀತಾದೇವಿಯನ್ನೂ ಗುಣಾಭಿರಾಮನಾದ ಶ್ರೀರಾಮಚಂದ್ರನನ್ನೂ ಕೊಂಡಾಡಿ, ಸೀತೆಯ ದುರವಸ್ಥೆಯನ್ನು ಕಂಡು ಮತ್ತೆ ಚಿಂತಾಕುಲನಾದನು. ಅವನ ಕಣ್ಣಲ್ಲಿ ನೀರು ತುಂಬಿತು. ತನ್ನಲ್ಲಿಯೇ ಗೋಳಾಡಲಾರಂಭಿಸಿದನು (೧–೨) : ''ವಿನೀತನಾದ ಲಕ್ಷ್ಮಣನಿಗೆ ಪರಮಪೂಜ್ಯಳೂ

ರಾಮಸ್ಯ ವ್ಯವಸಾಯಜ್ಞಾ ಲಕ್ಷ್ಮಣಸ್ಯ ಚ ಧೀಮತಃ ।
ನಾತ್ಯರ್ಥಂ ಕ್ಷುಭ್ಯತೇ ದೇವೀ ಗಂಗೇವ ಜಲದಾಗಮೇ ॥ ೪
ತುಲ್ಯಶೀಲವಯೋವೃತ್ತಾಂ ತುಲ್ಯಾಭಿಜನಲಕ್ಷಣಾಮ್ ।
ರಾಘವೋಽರ್ಹತಿ ವೈದೇಹೀಂ ತಂ ಚೇಯಮಸಿತೇಕ್ಷಣಾ ॥ ೫
ತಾಂ ದೃಷ್ಟ್ವಾ ನವಹೇಮಾಭಾಂ ಲೋಕಕಾಂತಾಮಿವ ಶ್ರಿಯಮ್ ।
ಜಗಾಮ ಮನಸಾ ರಾಮಂ ವಚನಂ ಚೇದಮಬ್ರವೀತ್ ॥ ೬
ಅಸ್ಯಾ ಹೇತೋರ್ವಿಶಾಲಾಕ್ಷ್ಯಾ ಹತೋ ವಾಲೀ ಮಹಾಬಲಃ ।
ರಾವಣಪ್ರತಿಮೋ ವೀರ್ಯೇ ಕಬಂಧಶ್ಚ ನಿಪಾತಿತಃ ॥ ೭
ವಿರಾಧಶ್ಚ ಹತಃ ಸಂಖ್ಯೇ ರಾಕ್ಷಸೋ ಭೀಮವಿಕ್ರಮಃ ।
ವನೇ ರಾಮೇಣ ವಿಕ್ರಮ್ಯ ಮಹೇಂದ್ರೇಣೇವ ಶಂಬರಃ ॥ ೮
ಚತುರ್ದಶ ಸಹಸ್ರಾಣಿ ರಕ್ಷಸಾಂ ಭೀಮಕರ್ಮಣಾಮ್ ।
ನಿಹತಾನಿ ಜನಸ್ಥಾನೇ ಶರೈರಗ್ನಿಶಿಖೋಪಮೈಃ ॥ ೯

ಶ್ರೀರಾಮನಿಗೆ ಪ್ರಾಣಕಾಂತೆಯೂ ಆದ ಸೀತೆಯೂ ಹೀಗೆ ದುಃಖಪೀಡಿತಳಾದ ಮೇಲೆ, ಕಾಲಗತಿಯನ್ನು ಮೀರುವವರಾರು? ಇವಳು ರಾಮಲಕ್ಷ್ಮಣರ ಪರಾಕ್ರಮ ವನ್ನೂ ಉದ್ಯಮವನ್ನೂ ಚೆನ್ನಾಗಿ ಬಲ್ಲಳು. ಆದ್ದರಿಂದಲೇ ಮಳೆಗಾಲದಲ್ಲಿಯೂ ಹೆಚ್ಚು ಕ್ಷೋಭೆಗೊಳ್ಳದ ಗಂಗಾನದಿಯಂತೆ, ಪೂರ್ತಿಯಾಗಿ ತಾಳ್ಮೆಯನ್ನು ಕಳೆದು ಕೊಂಡಿಲ್ಲ(೩–೪). ಸ್ವಭಾವ, ವಯಸ್ಸು, ನಡತೆ, ಕುಲ ಮತ್ತು ಶುಭ ಲಕ್ಷಣಗಳಲ್ಲಿ ಈ ಸೀತೆಗೆ ರಾಮನೇ ತಕ್ಕ ಪತಿ. ರಾಮನಿಗೆ ಇವಳೇ ತಕ್ಕ ಪತ್ನಿ'' ಎಂದು ಹೇಳಿ ಕೊಳ್ಳುತ್ತ, ಲಕ್ಷ್ಮೀದೇವಿಯಂತಿದ್ದ ಆ ಸೀತೆಯನ್ನು ನೋಡುತ್ತಿರುವಾಗ ಹನುಮಂತ ನಿಗೆ ಶ್ರೀರಾಮನ ಸ್ಮರಣೆಯಾಗಿ, ಅವನೇ ಕಣ್ಣಿಗೆ ಕಟ್ಟಿದಂತಾಯಿತು (೫–೬). ''ಶ್ರೀರಾಮನು ಮಹಾಬಲಶಾಲಿಯಾದ ವಾಲಿಯನ್ನೂ ರಾವಣನಂತೆ ಪರಾಕ್ರಮಿ ಯಾದ ಕಬಂಧನನ್ನೂ ಸಂಹಾರಮಾಡಿದುದು ಇವಳಿಗೋಸ್ಕರವೇ ಅಲ್ಲವೇ? ಮಹೇಂದ್ರನು ಶಂಬರಾಸುರನನ್ನು* ವಧಿಸಿದಂತೆ, ವೀರನಾದ ವಿರಾಧನನ್ನು ವಧಿ ಸಿದುದೂ ಈಕೆಗಾಗಿಯೇ (೭–೮). ಜನಸ್ಥಾನದಲ್ಲಿ ಭಯಂಕರವಾದ ಹದಿನಾಲ್ಕು

---

* ಈ ಶಂಬರನು ಬೇರೊಬ್ಬ ರಾಕ್ಷಸನು. ಪ್ರದ್ಯುಮ್ನನು ಕೊಂದ ಶಂಬರನಲ್ಲ.

ಖರಶ್ಚ ನಿಹತಃ ಸಂಖ್ಯೇ ತ್ರಿಶಿರಾಶ್ಚ ನಿಪಾತಿತಃ ।
ದೂಷಣಶ್ಚ ಮಹಾತೇಜಾ ರಾಮೇಣ ವಿದಿತಾತ್ಮನಾ ॥ ೧೦

ಐಶ್ವರ್ಯಂ ವಾನರಾಣಾಂ ಚ ದುರ್ಲಭಂ ವಾಲಿಪಾಲಿತಮ್ ।
ಅಸ್ಯಾ ನಿಮಿತ್ತೇ ಸುಗ್ರೀವಃ ಪ್ರಾಪ್ತವಾನ್ ಲೋಕಸತ್ಕೃತಮ್ ॥ ೧೧

ಸಾಗರಶ್ಚ ಮಯಾ ಕ್ರಾಂತಃ ಶ್ರೀಮಾನ್ನದನದೀಪತಿಃ ।
ಅಸ್ಯಾ ಹೇತೋರ್ವಿಶಾಲಾಕ್ಷ್ಯಾಃ ಪುರೀ ಚೇಯಂ ನಿರೀಕ್ಷಿತಾ ॥ ೧೨

ಯದಿ ರಾಮಃ ಸಮುದ್ರಾಂತಾಂ ಮೇದಿನೀಂ ಪರಿವರ್ತಯೇತ್ ।
ಅಸ್ಯಾಃ ಕೃತೇ ಜಗಚ್ಚಾಪಿ ಯುಕ್ತಮಿತ್ಯೇವ ಮೇ ಮತಿಃ ॥ ೧೩

ರಾಜ್ಯಂ ವಾ ತ್ರಿಷು ಲೋಕೇಷು ಸೀತಾ ವಾ ಜನಕಾತ್ಮಜಾ ।
ತ್ರೈಲೋಕ್ಯರಾಜ್ಯಂ ಸಕಲಂ ಸೀತಾಯಾ ನಾಪ್ನುಯಾತ್ ಕಲಾಮ್॥ ೧೪

ಇಯಂ ಸಾ ಧರ್ಮಶೀಲಸ್ಯ ಮೈಥಿಲಸ್ಯ ಮಹಾತ್ಮನಃ ।
ಸುತಾ ಜನಕರಾಜಸ್ಯ ಸೀತಾ ಭರ್ತೃದೃಢವ್ರತಾ ॥ ೧೫

ಉತ್ಥಿತಾ ಮೇದಿನೀಂ ಭಿತ್ತ್ವಾ ಕ್ಷೇತ್ರೇ ಹಲಮುಖಕ್ಷತೇ ।
ಪದ್ಮರೇಣುನಿಭೈಃ ಕೀರ್ಣಾ ಶುಭೈಃ ಕೇದಾರಪಾಂಸುಭಿಃ ॥ ೧೬

ಸಾವಿರ ರಾಕ್ಷಸರನ್ನು ದಿವ್ಯಾಸ್ತ್ರಗಳಿಂದ ಕೊಂದು, ಖರ ದೂಷಣ ತ್ರಿಶಿರರನ್ನೂ ಶ್ರೀರಾಮನು ಕೊಂದಿದ್ದಾನೆ. ವಾಲಿಗೆ ಸೇರಿ ಅತಿ ದುರ್ಲಭವಾಗಿದ್ದ ವಾನರಾಧಿಪತ್ಯವೂ ಇವಳ ನಿಮಿತ್ತದಿಂದಲೇ ಸುಗ್ರೀವನಿಗೆ ಸೇರಿಹೋಯಿತು ! (೯–೧೧). ಮಹಾಸಾಗರವನ್ನು ದಾಟಿ ಲಂಕಾನಗರವನ್ನೆಲ್ಲಾ ನಾನು ಹುಡುಕಿದುದೂ ಈ ವಿಶಾಲಾಕ್ಷಿಗೋಸ್ಕರ. ಹೆಚ್ಚೇನು? ಇವಳಿಗಾಗಿ ಶ್ರೀರಾಮನು ಸಮುದ್ರಾಂತವಾದ ಭೂಲೋಕವನ್ನೇ—ವಿಶ್ವವನ್ನೇ—ತಲೆಕೆಳಗು ಮಾಡಿದರೂ ಅದು ಯುಕ್ತವೆಂದೇ ನನಗೆ ತೋರುತ್ತದೆ (೧೨–೧೩). ಈ ಸೀತಾದೇವಿಯೊಡನೆ ಹೋಲಿಸಿದರೆ ಮೂರು ಲೋಕದ ಆಧಿಪತ್ಯವೂ ಕೂಡ ಇವಳ ಒಂದು ಅಂಶಕ್ಕೆ ಸಾಟಿಯಾಗುವುದಿಲ್ಲ. ಪುಣ್ಯಾತ್ಮನೂ ಮಹಾತ್ಮನೂ ಆದ ಜನಕಮಹಾರಾಜನ ಮಗಳು ಇವಳು ;

ವಿಕ್ರಾಂತಸ್ಯಾರ್ಯಶೀಲಸ್ಯ ಸಂಯುಗೇಷ್ವನಿವರ್ತಿನಃ ।
ಸ್ನುಷಾ ದಶರಥಸ್ಯೈಷಾ ಜ್ಯೇಷ್ಠಾ ರಾಜ್ಞೋ ಯಶಸ್ವಿನೀ ॥ ೧೭

ಧರ್ಮಜ್ಞಸ್ಯ ಕೃತಜ್ಞಸ್ಯ ರಾಮಸ್ಯ ವಿದಿತಾತ್ಮನಃ ।
ಇಯಂ ಸಾ ದಯಿತಾ ಭಾರ್ಯಾ ರಾಕ್ಷಸೀವಶಮಾಗತಾ ॥ ೧೮

ಸರ್ವಾನ್ ಭೋಗಾನ್ ಪರಿತ್ಯಜ್ಯ ಭರ್ತೃಸ್ನೇಹಬಲಾತ್ಕೃತಾ ।
ಅಚಿಂತಯಿತ್ವಾ ದುಃಖಾನಿ ಪ್ರವಿಷ್ಟಾ ನಿರ್ಜನಂ ವನಮ್ ॥ ೧೯

ಸಂತುಷ್ಟಾ ಫಲಮೂಲೇನ ಭರ್ತೃಶುಶ್ರೂಷಣೇ ರತಾ ।
ಯಾ ಪರಾಂ ಭಜತೇ ಪ್ರೀತಿಂ ವನೇಽಪಿ ಭವನೇ ಯಥಾ ॥ ೨೦

ಸೇಯಂ ಕನಕವರ್ಣಾಂಗೀ ನಿತ್ಯಂ ಸುಸ್ಮಿತಭಾಷಿಣೀ ।
ಸಹತೇ ಯಾತನಾಮೇತಾಮನರ್ಥಾನಾಮಭಾಗಿನೀ ॥ ೨೧

ಇಮಾಂ ತು ಶೀಲಸಂಪನ್ನಾಂ ದ್ರಷ್ಟುಮಿಚ್ಛತಿ ರಾಘವಃ ।
ರಾವಣೇನ ಪ್ರಮಥಿತಾಂ ಪ್ರಪಾಮಿವ ಪಿಪಾಸಿತಃ ॥ ೨೨

ಮಹಾ ಪತಿವ್ರತೆ (೧೪-೧೫). ಯಜ್ಞಕ್ಕಾಗಿ ಭೂಮಿಯನ್ನು ನೇಗಿಲಿನಿಂದ ಉಳುವಾಗ ಕಮಲರೇಣುವಿನಂತಿರುವ ಧೂಳಿಯಿಂದ ವ್ಯಾಪ್ತಳಾಗಿ ಭೂಮಿಯಿಂದ ಎದ್ದು ಬಂದ ಆಯೋನಿಜೆ ಇವಳೇ. ಪರಿಶುದ್ಧ ಚರಿತನೂ ವೀರಾಧಿವೀರನೂ ಆದ ದಶರಥಮಹಾರಾಜನ ಹಿರಿಯ ಸೊಸೆಯೆಂದು ಕೀರ್ತಿಗಳಿಸಿದವಳು ಇವಳೇ (೧೬-೧೭). ಇವಳೇ ಧರ್ಮಜ್ಞನೂ ಕೃತಜ್ಞನೂ ವಿದ್ವಾಂಸನೂ ಆದ ಶ್ರೀರಾಮಚಂದ್ರನ ಪ್ರಿಯಪತ್ನಿ; ರಾಕ್ಷಸರ ಕೈಗೆ ಸಿಕ್ಕಿಬಿಟ್ಟಿರುವಳು. ಅರಮನೆಯ ಸಕಲ ಭೋಗಗಳನ್ನು ಪರಿತ್ಯಜಿಸಿ, ಕಷ್ಟಗಳನ್ನು ಲೆಕ್ಕಿಸದೆ, ಪತಿಯ ಮೇಲಿನ ಪ್ರೇಮಕ್ಕೆ ವಶಳಾಗಿ ನಿರ್ಜನವಾದ ವನಕ್ಕೆ ಹೊರಟುಬಂದವಳು (೧೮-೧೯). ಪತಿಸೇವೆಯಲ್ಲಿ ನಿರತಳಾಗಿ, ಕಾಡಿನಲ್ಲಿ ಸಿಕ್ಕಿದ ಗೆಡ್ಡೆಗೆಣಸುಗಳಿಂದಲೇ ತೃಪ್ತಿಪಡುತ್ತಿದ್ದವಳು. ವನವನ್ನೇ ಮನೆಯೆಂದು ತಿಳಿದುಕೊಂಡಿದ್ದವಳು. ಈ ಶುಭಾಂಗಿಯು ಸದಾ ಕಿರುನಗೆಯಿಂದ ಮಾತನಾಡುತ್ತ ಇರಬೇಕಾದವಳು. ಇಂತಹವಳಿಗೆ ಈ ವಿಪತ್ತು ಬರಬಾರದು! ಈ ಘೋರ ಯಾತನೆಯನ್ನು ಸಹಿಸಿಕೊಂಡಿರುವಳಲ್ಲ! (೨೦-೨೧). ಬಾಯಾರಿದವನು ಅರವಟ್ಟಿಗೆಗಾಗಿ ಹಾತೊರೆಯುವಂತೆ, ರಾಮನು

ಅಸ್ಯಾ ನೂನಂ ಪುನರ್ಲಾಭಾದ್ರಾಘವಃ ಪ್ರೀತಿಮೇಷ್ಯತಿ ।
ರಾಜಾ ರಾಜ್ಯಾತ್ ಪರಿಭ್ರಷ್ಟಃ ಪುನಃ ಪ್ರಾಪ್ಯೇವ ಮೇದಿನೀಮ್ ॥ ೨೩

ಕಾಮಭೋಗೈಃ ಪರಿತ್ಯಕ್ತಾ ಹೀನಾ ಬಂಧುಜನೇನ ಚ ।
ಧಾರಯತ್ಯಾತ್ಮನೋ ದೇಹಂ ತತ್ಸಮಾಗಮಕಾಂಕ್ಷಿಣೀ ॥ ೨೪

ನೈಷಾ ಪಶ್ಯತಿ ರಾಕ್ಷಸ್ಯೋ ನೇಮಾನ್ ಪುಷ್ಪಫಲದ್ರುಮಾನ್ ।
ಏಕಸ್ಥಹೃದಯಾ ನೂನಂ ರಾಮಮೇವಾನುಪಶ್ಯತಿ ॥ ೨೫

ಭರ್ತಾ ನಾಮ ಪರಂ ನಾರ್ಯಾ ಭೂಷಣಂ ಭೂಷಣಾದಪಿ ।
ಏಷಾ ವಿರಹಿತಾ ತೇನ ಭೂಷಣಾರ್ಹಾ ನ ಶೋಭತೇ ॥ ೨೬

ದುಷ್ಕರಂ ಕುರುತೇ ರಾಮೋ ಹೀನೋ ಯದನಯಾ ಪ್ರಭುಃ ।
ಧಾರಯತ್ಯಾತ್ಮನೋ ದೇಹಂ ನ ದುಃಖೇನಾವಸೀದತಿ ॥ ೨೭

ಇಮಾಮಸಿತಕೇಶಾಂತಾಂ ಶತಪತ್ರನಿಭೇಕ್ಷಣಾಮ್ ।
ಸುಖಾರ್ಹಾಂ ದುಃಖಿತಾಂ ದೃಷ್ಟ್ವಾ ಮಮಾಪಿ ವ್ಯಥಿತಂ ಮನಃ ॥ ೨೮

ಈ ಶೀಲಸಂಪನ್ನೆಯನ್ನು ನೋಡಲು ತವಕಪಡುತ್ತಿರುವನು (೨೨). ರಾಜ್ಯಭ್ರಷ್ಟನಾದ ರಾಜನಿಗೆ ರಾಜ್ಯವು ದೊರಕಿದಂತೆ, ರಾಮನಿಗೆ ಇವಳು ಲಭಿಸಿದಾಗ ಅವನ ಆನಂದಕ್ಕೆ ಪಾರವಿದ್ದೀತೆ ? ಈಕೆಯಾದರೋ ಸಮಸ್ತ ಭೋಗಗಳನ್ನೂ ವರ್ಜಿಸಿ, ಬಂಧುಗಳಿಲ್ಲದ ಈ ದೇಶದಲ್ಲಿ ರಾಮನನ್ನು ನೋಡುವ ಆಶೋತ್ತರದಿಂದಲೇ ಬದುಕಿದ್ದಾಳೆ (೨೩–೨೪). ಇವಳು ಎದುರಿಗಿರುವ ರಾಕ್ಷಸಿಯರನ್ನೂ ಕಾಣಳು ! ಹೂಹಣ್ಣುಗಳಿರುವ ಮರಗಳನ್ನೂ ಕಾಣಳು ! ಮನಸ್ಸಿನಲ್ಲಿ ನೆಟ್ಟಿರುವ ರಾಮನೊಬ್ಬನನ್ನೇ ಕಾಣುತ್ತಿದ್ದಾಳೆ ! ಎಷ್ಟಾದರೂ ಸ್ತ್ರೀಯರಿಗೆ ಪತಿಯೇ ಪರಮಭೂಷಣ. ಆ ಭೂಷಣವೂ ಇಲ್ಲದುದರಿಂದ ಇವಳ ಸೌಂದರ್ಯವೇ ಕಂದಿದಂತಿರುವುದು (೨೫–೨೬). ಇಂತಹ ಪ್ರಿಯಪತ್ನಿಯನ್ನಗಲಿಯೂ ಪ್ರಭುವಾದ ರಾಮನು ಇದು ವರೆಗೆ ದೇಹವನ್ನಿಟ್ಟುಕೊಂಡಿರುವನಲ್ಲ ! ದುಃಖದಿಂದ ಕುಸಿದುಹೋಗಲಿಲ್ಲವಲ್ಲ! ಇದು ಇನ್ನೊಬ್ಬರಿಂದ ಸಾಧ್ಯವಿಲ್ಲ ! ಸುಖಾರ್ಹಳಾಗಿರುವ ಇವಳ ಕಷ್ಟವನ್ನು ಕಂಡು, ಅರಣ್ಯವಾಸಿಯಾದ ನನ್ನ ಮನಸ್ಸು ಕೂಡ ದುಃಖದಿಂದ ಕಂಗೆಟ್ಟುಹೋಗಿದೆ ! (೨೭–೨೮).

ಕ್ಷಿತಿಕ್ಷಮಾ ಪುಷ್ಕರಸಂನಿಭಾಕ್ಷೀ
ಯಾ ರಕ್ಷಿತಾ ರಾಘವಲಕ್ಷ್ಮಣಾಭ್ಯಾಮ್ ।
ಸಾ ರಾಕ್ಷಸೀಭಿರ್ವಿಕೃತೇಕ್ಷಣಾಭಿಃ
ಸಂರಕ್ಷ್ಯತೇ ಸಂಪ್ರತಿ ವೃಕ್ಷಮೂಲೇ ॥ ೨೯

ಹಿಮಹತನಲಿನೀವ ನಷ್ಟಶೋಭಾ
ವ್ಯಸನಪರಂಪರಯಾತಿಪೀಡ್ಯಮಾನಾ ।
ಸಹಚರರಹಿತೇವ ಚಕ್ರವಾಕೀ
ಜನಕಸುತಾ ಕೃಪಣಾಂ ದಶಾಂ ಪ್ರಪನ್ನಾ ॥ ೩೦

ಅಸ್ಯಾ ಹಿ ಪುಷ್ಪಾವನತಾಗ್ರಶಾಖಾಃ
ಶೋಕಂ ದೃಢಂ ವೈ ಜನಯಂತ್ಯಶೋಖಾಃ ।
ಹಿಮವ್ಯಪಾಯೇನ ಚ ಶೀತರಶ್ಮಿ-
ರಭ್ಯುತ್ಥಿತೋ ನೈಕಸಹಸ್ರರಶ್ಮಿಃ ॥ ೩೧

ಇತ್ಯೇವಮರ್ಥಂ ಕಪಿರನ್ವವೇಕ್ಷ್ಯ
ಸೀತೇಯಮಿತ್ಯೇವ ನಿವಿಷ್ಟಬುದ್ಧಿಃ ।

ಭೂದೇವಿಯಂತೆ ತಾಳ್ಮೆಯುಳ್ಳ ತಾವರೆಗಣ್ಣಿನ ಈ ಚೆಲುವೆಯನ್ನು ಕಾಡಿನಲ್ಲಿ ರಾಮ ಲಕ್ಷ್ಮಣರು ರಕ್ಷಿಸುತ್ತಿದ್ದರು. ಅವಳನ್ನು ಈಗ ಕೆಟ್ಟಕಣ್ಣಿನ ಈ ರಾಕ್ಷಸಿಯರು ಮರದ ಕೆಳಗೆ ಕಾಯಬೇಕಾಗಿ ಬಂದಿತೆ! ಹಿಮದ ಬಾಧೆಯಿಂದ ಕಂದಿದ ಕಮಲಿನಿಯಂತೆ, ವ್ಯಸನಪರಂಪರೆಯಿಂದ ಇವಳು ಪೀಡಿತಳಾಗಿರುವಳು. ಗಂಡು ಹಕ್ಕಿಯನ್ನು ಅಗಲಿದ ಚಕ್ರವಾಕಿಯಂತೆ ಶೋಚನೀಯವಾದ ಅವಸ್ಥೆಯನ್ನು ಪಡೆದಿದ್ದಾಳೆ (೨೯–೩೦). ವಿರಹಪೀಡಿತೆಯಾದ ಈ ಸೀತೆಗೆ ಪುಷ್ಪಭಾರದಿಂದ ಬಗ್ಗಿದ ಅಶೋಕವೃಕ್ಷಗಳು ಇನ್ನೂ ದುಃಖವನ್ನೇ ಹೆಚ್ಚಿಸುತ್ತವೆ. ಅದೂ ಸಾಲದೆಂದು ವಸಂತಕಾಲದ ಚಂದ್ರನು ಶೀತಲಕಿರಣಗಳನ್ನು ಬೀರುತ್ತ ಏರಿದ್ದಾನೆ!'' (೩೧).

ಸಂಶ್ರಿತ್ಯ ತಸ್ಮಿನ್ನಿಷಸಾದ ವೃಕ್ಷೇ
ಬಲೀ ಹರೀಣಾಮೃಷಭಸ್ತರಸ್ವೀ ॥ ೩೨

ಇತಿ ಶ್ರೀಮದ್ರಾಮಾಯಣೇ ಸುಂದರಕಾಂಡೇ ಷೋಡಶಃ ಸರ್ಗಃ

ಸಪ್ತದಶಃ ಸರ್ಗಃ

ರಾಕ್ಷಸೀಪರಿವಾರಃ

ತತಃ ಕುಮುದಷಂಡಾಭೋ ನಿರ್ಮಲೋ ನಿರ್ಮಲಂ ಸ್ವಯಮ್ ।
ಪ್ರಜಗಾಮ ನಭಶ್ಚಂದ್ರೋ ಹಂಸೋ ನೀಲಮಿವೋದಕಮ್ ॥ ೧
ಸಾಚಿವ್ಯಮಿವ ಕುರ್ವನ್ ಸ ಪ್ರಭಯಾ ನಿರ್ಮಲಪ್ರಭಃ ।
ಚಂದ್ರಮಾ ರಶ್ಮಿಭಿಃ ಶೀತೈಃ ಸಿಷೇವೇ ಪವನಾತ್ಮಜಮ್ ॥ ೨
ಸ ದದರ್ಶ ತತಃ ಸೀತಾಂ ಪೂರ್ಣಚಂದ್ರನಿಭಾನನಾಮ್ ।
ಶೋಕಭಾರೈರಿವ ನ್ಯಸ್ತಾಂ ಭಾರೈರ್ನಾವಮಿವಾಂಭಸಿ ॥ ೩

ಹೀಗೆ ಚಿಂತಿಸುತ್ತ ಇವಳು ಸೀತೆಯೇ ಸರಿಯೆಂದು ನಿಶ್ಚಯಿಸಿ, ವೀರಾಗ್ರೇಸರನಾದ ಆ ವಾನರೋತ್ತಮನು ಶಿಂಶಪಾವೃಕ್ಷದಲ್ಲಿ ಕುಳಿತಿದ್ದನು (೩೨).

ಇಲ್ಲಿಗೆ ಶ್ರೀಮದ್ರಾಮಾಯಣದ ಸುಂದರಕಾಂಡದಲ್ಲಿ ಹದಿನಾರನೆಯ ಸರ್ಗ

ಸರ್ಗ ೧೭

ಹನುಮಂತನು ಸೀತೆಗೆ ಕಾವಲಾಗಿದ್ದ ರಾಕ್ಷಸಿಯರನ್ನು ನೋಡುತ್ತ, ಸೀತೆಯನ್ನು ನೋಡಿದೆನೆಂಬ ಹರ್ಷದಿಂದ ಶಿಂಶಪಾವೃಕ್ಷದಲ್ಲಿ ಕುಳಿತಿರುವುದು.

ಆಗ ಬಿಳಿನೈದಿಲೆಯಂತೆ ಶುಭ್ರನಾದ ಚಂದ್ರನು, ನಿರ್ಮಲವಾದ ನೀರಿನಲ್ಲಿ ಹಂಸವು ಈಜಿಬರುವಂತೆ, ಆಕಾಶದಲ್ಲಿ ಸಾಗುತ್ತ ಬಂದನು. ಅವನು ಎಲ್ಲೆಡೆಯೂ ತನ್ನ ಕಾಂತಿಯನ್ನು ಪ್ರಸರಿಸಿ ಹನುಮಂತನಿಗೆ ಸಹಾಯಮಾಡುತ್ತಿರುವನೋ

ದಿದೃಕ್ಷಮಾಣೋ ವೈದೇಹೀಂ ಹನುಮಾನ್ ಪವನಾತ್ಮಜಃ ।
ಸ ದದರ್ಶಾವಿದೂರಸ್ಥಾ ರಾಕ್ಷಸೀರ್ಘೋರದರ್ಶನಾಃ ॥ ೪

ಏಕಾಕ್ಷೀಮೇಕಕರ್ಣಾಂ ಚ ಕರ್ಣಪ್ರಾವರಣಾಂ ತಥಾ ।
ಅಕರ್ಣಾಂ ಶಂಕುಕರ್ಣಾಂ ಚ ಮಸ್ತಕೋಚ್ಛ್ವಾಸನಾಸಿಕಾಮ್ ॥ ೫

ಅತಿಕಾಯೋತ್ತಮಾಂಗೀಂ ಚ ತನುದೀರ್ಘಶಿರೋಧರಾಮ್ ।
ಧ್ವಸ್ತಕೇಶೀಂ ತಥಾಽಕೇಶೀಂ ಕೇಶಕಂಬಲಧಾರಿಣೀಮ್ ॥ ೬

ಲಂಬಕರ್ಣಲಲಾಟಾಂ ಚ ಲಂಬೋದರಪಯೋಧರಾಮ್ ।
ಲಂಬೋಷ್ಠೀಂ ಚುಬುಕೋಷ್ಠೀಂ ಚ ಲಂಬಾಸ್ಯಾಂ ಲಂಬಜಾನುಕಾಮ್

ಹ್ರಸ್ವಾಂ ದೀರ್ಘಾಂ ತಥಾ ಕುಬ್ಜಾಂ ವಿಕಟಾಂ ವಾಮನಾಂ ತಥಾ ।
ಕರಾಲಾಂ ಭುಗ್ನವಕ್ತ್ರಾಂ ಚ ಪಿಂಗಾಕ್ಷೀಂ ವಿಕೃತಾನನಾಮ್ ॥ ೮

ಎಂಬಂತೆ ಶೀತಲಕಿರಣಗಳನ್ನು ಚಲ್ಲುತ್ತಿದ್ದನು (೧–೨). ಭಾರದಿಂದ ನೀರಿನಲ್ಲಿ ಮುಳುಗಿ ಹೋಗುತ್ತಿರುವ ನೌಕೆಯಂತೆ, ಶೋಕ ಭಾರದಿಂದ ಕುಸಿದು ಹೋಗುತ್ತಿರುವ ಸೀತಾದೇವಿಯನ್ನು ಆಂಜನೇಯನು ನೋಡುತ್ತಲೇ ಇದ್ದನು. ಹಾಗೆಯೇ ಸ್ವಲ್ಪ ದೂರದಲ್ಲಿ ಕಾವಲಿದ್ದ ಘೋರಾಕೃತಿಯ ರಾಕ್ಷಸಿಯರನ್ನು ನೋಡಿದನು (೩–೪). ಅವರಲ್ಲಿ ಕೆಲವರಿಗೆ ಒಂದೇ ಕಣ್ಣು! ಕೆಲವರಿಗೆ ಒಂದೇ ಕಿವಿ ! ಕೆಲವರಿಗೆ ಮುಸುಕು ಹಾಕಿದಂತೆ ಅಗಲವಾಗಿದ್ದ ಕಿವಿ ! ಕೆಲವರಿಗೆ ಕಿವಿಯೇ ಇಲ್ಲ! ಕೆಲವರಿಗೆ ಚೂಪಾದ ಕಿವಿ ! ಕೆಲವರಿಗೆ ಮೇಲ್ಮುಖವಾದ ಮೂಗು ! ಒಬ್ಬಳಿಗೆ ದಪ್ಪ ತಲೆ ! ಒಬ್ಬಳಿಗೆ ತೆಳ್ಳಗೆ ಉದ್ದವಾದ ಕತ್ತು! ಒಬ್ಬಳಿಗೆ ತಲೆಯಲ್ಲಿ ಹರಕು ಕೂದಲು ! ಒಬ್ಬಳಿಗೆ ಕೂದಲೇ ಇಲ್ಲ! ಮತ್ತೊಬ್ಬಳಿಗೆ ಕಂಬಳಿಯನ್ನು ಹೊದೆದು ಕೊಂಡಂತೆ ಮೈಯೆಲ್ಲಾ ಕೂದಲು (೫–೬). ಉದ್ದವಾದ ಹಣೆ ಕಿವಿಗಳುಳ್ಳವಳೊಬ್ಬಳು ! ಭಾರಿ ಹೊಟ್ಟೆಯ ಮೇಲೆ ಜೋತಾಡುವ ಮೊಲೆಯವಳೊಬ್ಬಳು ! ಜೋಲುದುಟಿ, ಜೋಲು ಮುಖ, ಜೋಲು ಮೊಳಕಾಲುಳ್ಳವರು ಕೆಲವರು ! ಒಬ್ಬಳು ಕುಳ್ಳಿ, ಒಬ್ಬಳು ಲಂಬಿ, ಒಬ್ಬಳು ಗೂನು ಬೆನ್ನಿ! ಮತ್ತೊಬ್ಬಳು ವಿಕಾರಿ, ಗಿಡ್ಡಿ! ಮತ್ತೊಬ್ಬಳು ಘೋರರೂಪಿ, ಮಗದೊಬ್ಬಳು ಸೊಟ್ಟಮೋರೆಯವಳು !

ವಿಕೃತಾಃ ಪಿಂಗಲಾಃ ಕಾಲೀಃ ಕ್ರೋಧನಾಃ ಕಲಹಪ್ರಿಯಾಃ ।
ಕಾಲಾಯಸಮಹಾಶೂಲಕೂಟಮುದ್ಗರಧಾರಿಣೀಃ ॥ ೯
ವರಾಹಮೃಗಶಾರ್ದೂಲಮಹಿಷಾಜಶಿವಾಮುಖೀಃ ।
ಗಜೋಷ್ಟ್ರಹಯಪಾದೀಶ್ಚ ನಿಖಾತಶಿರಸೋಽಪರಾಃ ॥ ೧೦
ಏಕಹಸ್ತೈಕಪಾದಾಶ್ಚ ಖರಕರ್ಣ್ಯಶ್ವಕರ್ಣಿಕಾಃ ।
ಗೋಕರ್ಣೀರ್ಹಸ್ತಿಕರ್ಣೀಶ್ಚ ಹರಿಕರ್ಣೀಸ್ತಥಾಪರಾಃ ॥ ೧೧
ಅನಾಸಾ ಅತಿನಾಸಾಶ್ಚ ತಿರ್ಯಙ್ನಾಸಾ ವಿನಾಸಿಕಾಃ ।
ಗಜಸಂನಿಭನಾಸಾಶ್ಚ ಲಲಾಟೋಚ್ಛ್ವಾಸನಾಸಿಕಾಃ ॥ ೧೨
ಹಸ್ತಿಪಾದಾ ಮಹಾಪಾದಾ ಗೋಪಾದಾಃ ಪಾದಚೂಲಿಕಾಃ ।
ಅತಿಮಾತ್ರಶಿರೋಗ್ರೀವಾ ಅತಿಮಾತ್ರಕುಚೋದರೀಃ । ೧೩
ಅತಿಮಾತ್ರಾಸ್ಯನೇತ್ರಾಶ್ಚ ದೀರ್ಘಜಿಹ್ವಾನಖಾಸ್ತಥಾ ।
ಅಜಾಮುಖೀರ್ಹಸ್ತಿಮುಖೀರ್ಗೋಮುಖೀಃ ಸೂಕರೀಮುಖೀಃ ॥ ೧೪

ಒಬ್ಬಳು ಕೆಂಗಣ್ಣನವಳು, ಇನ್ನೊಬ್ಬಳು ಕೆಟ್ಟ ಮೋರೆಯವಳು ! (೭–೮). ಎಲ್ಲರೂ ವಿಕಾರ ರೂಪಿಗಳು. ಕೆಲವರು ಕಂದುಬಣ್ಣದವರು, ಕೆಲವರು ಕಪ್ಪುಬಣ್ಣದವರು. ಎಲ್ಲರೂ ಕೋಪಿಷ್ಠರು, ಜಗಳಗಂಟರು. ಅವರು ಶೂಲ, ಮುದ್ಗರ ಮೊದಲಾದ ಆಯುಧಗಳನ್ನು ಹಿಡಿದಿದ್ದರು. ಕೆಲವರ ಮುಖಗಳು ಹಂದಿ, ಜಿಂಕೆ, ಹುಲಿ, ಕೋಣ, ಮೇಕೆ ಮತ್ತು ನರಿಗಳ ಮುಖಗಳಂತೆ ಇದ್ದವು ! ಕೆಲವು ರಾಕ್ಷಸಿಯರ ಪಾದಗಳು ಆನೆ, ಒಂಟೆ, ಕುದುರೆಗಳ ಪಾದಗಳನ್ನು ಹೋಲುತ್ತಿದ್ದವು ! ಕೆಲವರ ತಲೆ ದೇಹದಲ್ಲಿ ಹುದುಗಿಹೋಗಿದ್ದಿತು ! (೯–೧೦). ಕೆಲವರಿಗೆ ಒಂದೇ ಕೈ ! ಕೆಲವರಿಗೆ ಒಂದೇ ಕಾಲು ! ಎಷ್ಟೋ ರಾಕ್ಷಸಿಯರ ಕಿವಿಗಳು ಕತ್ತೆ, ಕುದುರೆ, ಎತ್ತು, ಆನೆ ಮತ್ತು ಸಿಂಹದ ಕಿವಿಗಳಂತೆ ಇದ್ದವು ! ಮೂಗಿಲ್ಲದವರೂ, ಉದ್ದಮೂಗಿನವರೂ, ಅಡ್ಡ ಮೂಗಿನವರೂ, ವಿಕಾರದ ಮೂಗಿನವರೂ, ಆನೆಯ ಸೊಂಡಿಲಿನಂತಹ ಮೂಗಿನವರೂ, ಹಣೆಯ ಬಳಿ ಉಸಿರಾಡುವ ಮೂಗಿನವರೂ ಇದ್ದರು (೧೧–೧೨). ಕೆಲವು ರಾಕ್ಷಸಿಯರ ಕಾಲು ಆನೆಯ ಕಾಲಿನಂತಿತ್ತು. ಕೆಲವರದು ಬಹು ದೊಡ್ಡ ಹೆಜ್ಜೆ. ಎತ್ತಿಗಿರುವಂತೆ ಕೆಲವರ ಪಾದಕ್ಕೆ ಗೊರಸುಗಳಿದ್ದವು ! ಕೆಲವರ

ಹಯೋಷ್ಟ್ರಖರವಕ್ತ್ರಾಶ್ಚ ರಾಕ್ಷಸೀರ್ಘೋರದರ್ಶನಾಃ ।
ಶೂಲಮುದ್ಗರಹಸ್ತಾಶ್ಚ ಕ್ರೋಧನಾಃ ಕಲಹಪ್ರಿಯಾಃ ॥ ೧೫
ಕರಾಲಾ ಧೂಮ್ರಕೇಶೀಶ್ಚ ರಾಕ್ಷಸೀರ್ವಿಕೃತಾನನಾಃ ।
ಪಿಬಂತೀಃ ಸತತಂ ಪಾನಂ ಸದಾ ಮಾಂಸಸುರಾಪ್ರಿಯಾಃ ॥ ೧೬
ಮಾಂಸಶೋಣಿತದಿಗ್ಧಾಂಗೀರ್ಮಾಂಸಶೋಣಿತಭೋಜನಾಃ ।
ತಾ ದದರ್ಶ ಕಪಿಶ್ರೇಷ್ಠೋ ರೋಮಹರ್ಷಣದರ್ಶನಾಃ ॥ ೧೭
ಸ್ಕಂಧವಂತಮುಪಾಸೀನಾಃ ಪರಿವಾರ್ಯ ವನಸ್ಪತಿಮ್ ।
ತಸ್ಯಾಧಸ್ತಾಚ್ಚ ತಾಂ ದೇವೀಂ ರಾಜಪುತ್ರೀಮನಿಂದಿತಾಮ್ ॥ ೧೮
ಲಕ್ಷಯಾಮಾಸ ಲಕ್ಷ್ಮೀವಾನ್ ಹನುಮಾನ್ ಜನಕಾತ್ಮಜಾಮ್ ।
ನಿಷ್ಪ್ರಭಾಂ ಶೋಕಸಂತಪ್ತಾಂ ಮಲಸಂಕುಲಮೂರ್ಧಜಾಮ್ ॥ ೧೯
ಕ್ಷೀಣಪುಣ್ಯಾಂ ಚ್ಯುತಾಂ ಭೂಮೌ ತಾರಾಂ ನಿಪತಿತಾಮಿವ ।
ಚಾರಿತ್ರ್ಯವ್ಯಪದೇಶಾಢ್ಯಾಂ ಭರ್ತೃದರ್ಶನದುರ್ಗತಾಮ್ ॥ ೨೦

ತಲೆಗೂದಲು ಹೆಜ್ಜೆಯವರೆಗೂ ಜೋಲುತ್ತಿತ್ತು. ದಪ್ಪ ಕುತ್ತಿಗೆಯವರೂ ದೊಡ್ಡ ಮೊಲೆಯವರೂ ಅನೇಕರಿದ್ದರು. ಕೆಲವರಿಗೆ ಕಣ್ಣು ಬಹಳ ದೊಡ್ಡದು. ಕೆಲವರ ನಾಲಿಗೆ ಬಹಳ ಉದ್ದ. ಕೆಲವರಿಗೆ ಹಸುವಿನಂತಹ ಮೋರೆ! ಕೆಲವರಿಗೆ ಹಂದಿಯ ಮೋರೆ! ಕೆಲವರಿಗೆ ಕೆಂಪು ಕೂದಲು! ಆ ರಾಕ್ಷಸಿಯರು ಮದ್ಯವನ್ನು ಕುಡಿಯುತ್ತ, ಮಾಂಸವನ್ನು ತಿನ್ನುತ್ತ ಮೈಮೇಲೆ ರಕ್ತವನ್ನು ಹೊಯ್ದುಕೊಂಡಿದ್ದರು. ನೋಡಿದರೆ ಮೈ ರೋಮಾಂಚಗೊಳ್ಳುವಷ್ಟು ಅವರು ಭಯಂಕರರಾಗಿದ್ದರು. ಹನುಮಂತನು ಅವರೆಲ್ಲರನ್ನೂ ನೋಡಿದನು (೧೩–೧೭). ಒಂದು ವಿಶಾಲವಾದ ಶಿಂಶಪಾವೃಕ್ಷದ ಸುತ್ತಲೂ ಆ ರಾಕ್ಷಸಿಯರು ಕಾವಲಾಗಿದ್ದರು. ಆ ಮರದ ಅಡಿಯಲ್ಲಿ ಒಂದು ಕಡೆ ರಾಜಪುತ್ರಿಯಾದ ಸೀತಾದೇವಿಯು, ಮುಖದಲ್ಲಿ ಸ್ವಲ್ಪವೂ ಕಳೆಯಿಲ್ಲದೆ ಜಡೆಗಟ್ಟಿದ ಕೇಶರಾಶಿಯುಳ್ಳವಳಾಗಿ, ದೈನ್ಯದಿಂದ ಶೋಕಿಸುತ್ತ ಕುಳಿತಿದ್ದಳು (೧೮–೧೯). ಪುಣ್ಯವು ಕ್ಷಯಿಸಿದ ಮೇಲೆ ಆಕಾಶದಿಂದ ಬಿದ್ದ ತಾರೆಯೋ ಎಂಬಂತೆ ಶೋಚನೀಯಳೂ ಪತಿವ್ರತಾ ಧರ್ಮದಿಂದ ವಿಖ್ಯಾತಳಾದರೂ ಪತಿದರ್ಶನ ಭಾಗ್ಯದಿಂದ ವಂಚಿತಳೂ ಆಗಿದ್ದಳು. ಆ ದೇವಿಯು ಶ್ರೇಷ್ಠವಾದ ಆಭರಣಗಳಿಲ್ಲದಿದ್ದರೂ

ಭೂಷಣೈರುತ್ತಮೈರ್ಹೀನಾಂ ಭರ್ತೃವಾತ್ಸಲ್ಯಭೂಷಣಾಮ್ ।
ರಾಕ್ಷಸಾಧಿಪಸಂರುದ್ಧಾಂ ಬಂಧುಭಿಶ್ಚ ವಿನಾಕೃತಾಮ್ ॥ ೨೧
ವಿಯೂಥಾಂ ಸಿಂಹಸಂರುದ್ಧಾಂ ಬದ್ಧಾಂ ಗಜವಧೂಮಿವ ।
ಚಂದ್ರರೇಖಾಂ ಪಯೋದಾಂತೇ ಶಾರದಾಭ್ರೈರಿವಾವೃತಾಮ್ ॥ ೨೨
ಕ್ಲಿಷ್ಟರೂಪಾಮಸಂಸ್ಪರ್ಶಾದಯುಕ್ತಾಮಿವ ವಲ್ಲಕೀಮ್ ।
ಸೀತಾಂ ಭರ್ತೃವಶೇ ಯುಕ್ತಾಮಯುಕ್ತಾಂ ರಾಕ್ಷಸೀವಶೇ ॥ ೨೩
ಅಶೋಕವನಿಕಾಮಧ್ಯೇ ಶೋಕಸಾಗರಮಾಪ್ಲುತಾಮ್ ।
ತಾಭಿಃ ಪರಿವೃತಾಂ ತತ್ರ ಸಗ್ರಹಾಮಿವ ರೋಹಿಣೀಮ್ ॥ ೨೪
ದದರ್ಶ ಹನುಮಾನ್ ದೇವೀಂ ಲತಾಮಕುಸುಮಾಮಿವ ।
ಸಾ ಮಲೇನ ಚ ದಿಗ್ಧಾಂಗೀ ವಪುಷಾ ಚಾಪ್ಯಲಂಕೃತಾ ॥ ೨೫
ಮೃಣಾಲೀ ಪಂಕದಿಗ್ಧೇವ ವಿಭಾತಿ ನ ವಿಭಾತಿ ಚ ।
ಮಲನೇನ ಚ ವಸ್ತ್ರೇಣ ಪರಿಕ್ಲಿಷ್ಟೇನ ಭಾಮಿನೀಮ್ ॥ ೨೬

ಪತಿಪ್ರೇಮವೆಂಬ ಆಭರಣದಿಂದಲೇ ಶೋಭಿಸುತ್ತಿರುವಳು. ಅವಳು ರಾಕ್ಷಸರಾಜನ ಸೆರೆಗೆ ಸಿಕ್ಕಿ ಎಲ್ಲಾ ಬಂಧುಗಳಿಂದಲೂ ರಹಿತಳು (೨೦–೨೧). ಹಿಂಡಿನಿಂದ ತಪ್ಪಿ ಸಿಂಹಗಳ ಮಧ್ಯದಲ್ಲಿ ಸಿಕ್ಕಿಕೊಂಡ ಹೆಣ್ಣಾನೆಯಂತೆ ಶೋಚನೀಯಳು. ಶರತ್ಕಾಲದ ಮೋಡಗಳಿಂದ ಆವೃತವಾದ ಚಂದ್ರಲೇಖೆಯಂತೆ ಮ್ಲಾನಕಾಂತಿಯಾಗಿರುವಳು. ಪತಿಯ ಸಾಮೀಪ್ಯವಿಲ್ಲದುದರಿಂದ, ವಾದ್ಯಗಾರನು ನುಡಿಸದೆ ಬಿಟ್ಟಿರುವ ವೀಣೆಯಂತೆ ಮಲಿನರೂಪಳು. ಶ್ರೀರಾಮನ ಜೊತೆಯಲ್ಲಿಯೇ ಇರಲು ಅರ್ಹಳು ; ರಾಕ್ಷಸಿಯರ ಬಳಿ ಇರಬಾರದವಳು (೨೨–೨೩). ಕ್ರೂರಗ್ರಹಗಳು ಮುತ್ತಿ ಕೊಂಡಿರುವ ರೋಹಿಣಿಯಂತೆ ರಾಕ್ಷಸಿಯರ ಮಧ್ಯದಲ್ಲಿ ಶೋಕಸಂತಪ್ತಳಾಗಿರುವಳು. ಹೀಗೆ ಮಲಿನಳಾಗಿ, ಸಹಜ ಸುಂದರವಾದ ದೇಹದಿಂದಲೇ ಭೂಷಿತಳಾಗಿ, ಹೂವಿಲ್ಲದ ಬಳ್ಳಿಯಂತೆ ಶೋಚನೀಯಳಾದ ಸೀತಾದೇವಿಯನ್ನು ಆಂಜನೇಯನು ಲಕ್ಷವಿಟ್ಟು ನೋಡುತ್ತಿದ್ದನು (೨೪–೨೫). ಕೊಳೆಯಾದ ಸೀರೆಯನ್ನುಟ್ಟುಕೊಂಡಿದ್ದ ಜಾನಕಿಯು, ಕೆಸರು ಹತ್ತಿದ ತಾವರೆಯ ಗಿಡದಂತೆ ಒಂದು ರೀತಿಯಲ್ಲಿ ಶೋಭಿಸದಿದ್ದರೂ ಚೆಲುವೆಯಾಗಿಯೇ ಇದ್ದಳು. ದುಃಖದಿಂದ ಮುಖವು ಬಾಡಿಹೋಗಿದ್ದರೂ ಗಂಡನ ಪರಾಕ್ರಮವನ್ನು ನೆನೆದು ಧೈರ್ಯವನ್ನು

ಸಂವೃತಾಂ ಮೃಗಶಾವಾಕ್ಷೀಂ ದದರ್ಶ ಹನುಮಾನ್ ಕಪಿಃ ।
ತಾಂ ದೇವೀಂ ದೀನವದನಾಮದೀನಾಂ ಭರ್ತೃತೇಜಸಾ ॥ ೨೭
ರಕ್ಷಿತಾಂ ಸ್ವೇನ ಶೀಲೇನ ಸೀತಾಮಸಿತಲೋಚನಾಮ್ ।
ತಾಂ ದೃಷ್ಟ್ವಾ ಹನುಮಾನ್ ಸೀತಾಂ ಮೃಗಶಾವನಿಭೇಕ್ಷಣಾಮ್ ॥ ೨೮
ಮೃಗಕನ್ಯಾಮಿವ ತ್ರಸ್ತಾಂ ವೀಕ್ಷಮಾಣಾಂ ಸಮಂತತಃ ।
ದಹಂತೀಮಿವ ನಿಃಶ್ವಾಸೈರ್ವೃಕ್ಷಾನ್ ಪಲ್ಲವಧಾರಿಣಃ ॥ ೨೯
ಸಂಘಾತಮಿವ ಶೋಕಾನಾಂ ದುಃಖಸ್ಯೋರ್ಮಿಮಿವೋತ್ಥಿತಾಮ್ ।
ತಾಂ ಕ್ಷಾಮಾಂ ಸುವಿಭಕ್ತಾಂಗೀಂ ವಿನಾಭರಣಶೋಭಿನೀಮ್ ॥ ೩೦
ಪ್ರಹರ್ಷಮತುಲಂ ಲೇಭೇ ಮಾರುತಿಃ ಪ್ರೇಕ್ಷ್ಯ ಮೈಥಿಲೀಮ್ ।
ಹರ್ಷಜಾನಿ ಚ ಸೋಽಶ್ರೂಣಿ ತಾಂ ದೃಷ್ಟ್ವಾ ಮದಿರೇಕ್ಷಣಾಮ್॥೩೧
ಮುಮೋಚ ಹನುಮಾಂಸ್ತತ್ರ ನಮಶ್ಚಕ್ರೇ ಚ ರಾಘವಮ್ ।
ನಮಸ್ಕೃತ್ವಾ ಸ ರಾಮಾಯ ಲಕ್ಷ್ಮಣಾಯ ಚ ವೀರ್ಯವಾನ್ ॥ ೩೨
ಸೀತಾದರ್ಶನಸಂಹೃಷ್ಟೋ ಹನುಮಾನ್ ಸಂವೃತೋಽಭವತ್ ॥

ಇತಿ ಶ್ರೀಮದ್ರಾಮಾಯಣೇ ಸುಂದರಕಾಂಡೇ ಸಪ್ತದಶಃ ಸರ್ಗಃ

———O———

ತಂದುಕೊಳ್ಳುತ್ತಿದ್ದಳು (೨೬–೨೭). ಈಗ ಶೀಲ ಒಂದೇ ಆ ನೀಲನಯನೆಯನ್ನು ರಕ್ಷಿಸುತ್ತಿತ್ತು. ಆಗಾಗ ಹೆದರಿ ಜಿಂಕೆಯಂತೆ ಸುತ್ತಲೂ ನೋಡುತ್ತ, ಚಿಗುರಿದ ಮರಗಳನ್ನು ಸುಟ್ಟುಬಿಡುವಳೋ ಎಂಬಂತೆ ಬಿಸಿಯಾಗಿ ನಿಟ್ಟುಸಿರುಬಿಡುತ್ತ ಶೋಕದ ರಾಶಿಯಂತೆ, ದುಃಖದ ಅಲೆಯಂತೆ ಕಾಣಿಸುತ್ತಿದ್ದಳು (೨೮–೩೦). ಮಾಟವಾದ ಆಕೃತಿಯುಳ್ಳ ಆ ಕೃಶಾಂಗಿಯನ್ನು ನೋಡಿ ಹನುಮಂತನು, ಅವಳ ಸ್ಥಿತಿಗಾಗಿ ಶೋಕಪಟ್ಟರೂ ಮೈಥಿಲಿಯನ್ನು ಕಂಡೆನೆಂಬ ಹರ್ಷದಿಂದ ಕಣ್ಣುಗಳಲ್ಲಿ ಆನಂದಬಾಷ್ಪಗಳನ್ನು ಹರಿಸಿದನು. ಶ್ರೀರಾಮನ ಅನುಗ್ರಹದಿಂದಲೇ ಇವಳನ್ನು ಕಂಡೆನೆಂಬ ಭಾವನೆಯಿಂದ ರಾಮನಿಗೂ ಲಕ್ಷ್ಮಣನಿಗೂ ನಮಸ್ಕರಿಸಿ, ಶಿಂಶಪಾವೃಕ್ಷದಲ್ಲಿ ಮರೆಯಾಗಿ ಕುಳಿತಿದ್ದನು (೩೧–೩೨).

ಇಲ್ಲಿಗೆ ಶ್ರೀಮದ್ರಾಮಾಯಣದ ಸುಂದರಕಾಂಡದಲ್ಲಿ ಹದಿನೇಳನೆಯ ಸರ್ಗ

ಅಷ್ಟಾದಶಃ ಸರ್ಗಃ

ರಾವಣಾಗಮನಮ್

ತಥಾ ವಿಪ್ರೇಕ್ಷಮಾಣಸ್ಯ ವನಂ ಪುಷ್ಪಿತಪಾದಪಮ್ ।
ವಿಚಿನ್ವತಶ್ಚ ವೈದೇಹೀಂ ಕಿಂಚಿಚ್ಛೇಷಾ ನಿಶಾಭವತ್ ॥ ೧

ಷಡಂಗವೇದವಿದುಷಾಂ ಕ್ರತುಪ್ರವರಯಾಜಿನಾಮ್ ।
ಶುಶ್ರಾವ ಬ್ರಹ್ಮಘೋಷಾಂಶ್ಚ ವಿರಾತ್ರೇ ಬ್ರಹ್ಮರಕ್ಷಸಾಮ್ ॥ ೨

ಅಥ ಮಂಗಲವಾದಿತ್ರೈಃ ಶಬ್ದೈಃ ಶ್ರೋತ್ರಮನೋಹರೈಃ ।
ಪ್ರಾಬುಧ್ಯತ ಮಹಾಬಾಹುರ್ದಶಗ್ರೀವೋ ಮಹಾಬಲಃ ॥ ೩

ವಿಬುಧ್ಯ ತು ಯಥಾಕಾಲಂ ರಾಕ್ಷಸೇಂದ್ರಃ ಪ್ರತಾಪವಾನ್ ।
ಸ್ರಸ್ತಮಾಲ್ಯಾಂಬರಧರೋ ವೈದೇಹೀಮನ್ವಚಿಂತಯತ್ ॥ ೪

ಭೃಶಂ ನಿಯುಕ್ತಸ್ತಸ್ಯಾಂ ಚ ಮದನೇನ ಮದೋತ್ಕಟಃ ।
ನ ಸ ತಂ ರಾಕ್ಷಸಃ ಕಾಮಂ ಶಶಾಕಾತ್ಮನಿ ಗೂಹಿತುಮ್ ॥ ೫

ಸರ್ಗ ೧೮

ರಾವಣನು ರಾಕ್ಷಸಸ್ತ್ರೀಯರೊಡನೆ ಸೀತೆಯನ್ನು ನೋಡುವುದಕ್ಕಾಗಿ ಬರುವುದು.

ಹೀಗೆ ಆಂಜನೇಯನು ಪುಷ್ಪಿತವಾದ ಅಶೋಕವನದಲ್ಲಿ ಹುಡುಕಿ ಇವಳೇ ಸೀತೆಯೆಂದು ನಿಶ್ಚಯಿಸುವುದರೊಳಗೆ ಬೆಳಗಿನ ಜಾವವಾಗುತ್ತ ಬಂದಿತು. ಕಡೆಯ ಜಾವದಲ್ಲಿ ವೇದವೇದಾಂಗಗಳನ್ನು ಬಲ್ಲ ಯಾಜ್ಞಿಕರಾದ ಬ್ರಹ್ಮರಾಕ್ಷಸರು ವೇದ ಘೋಷ ಮಾಡಲಾರಂಭಿಸಿದರು (೧–೨). ಇಂಪಾಗಿ ಮಂಗಳವಾದ್ಯ ಧ್ವನಿಗಳು ಮೊಳಗಲು ರಾವಣನಿಗೆ ನಿದ್ರೆಯಿಂದ ಎಚ್ಚರವಾಯಿತು. ಆ ಪ್ರತಾಪಶಾಲಿಯು ಸಡಿಲಿದ ವಸ್ತ್ರಾಭರಣವುಳ್ಳವನಾಗಿ ಎದ್ದು ಕುಳಿತಾಗ ಸೀತೆಯ ಸ್ಮರಣೆಯಾಯಿತು (೩–೪). ಕಾಮೋನ್ಮತ್ತನಾದ ಅವನ ಮನಸ್ಸು ಸೀತೆಯಲ್ಲಿ ನೆಟ್ಟುಹೋಗಿತ್ತು. ಕಾಮವಿಕಾರವನ್ನು ಅವನು ತಡೆದುಕೊಳ್ಳಲಾರದೆ ಹೋದನು. ಒಡನೆಯೇ ಸರ್ವಾಭರಣಗಳಿಂದ ಭೂಷಿತನಾಗಿ ಅಪೂರ್ವವಾದ ಸೊಬಗನ್ನು ಬೀರುತ್ತ ಪುಷ್ಪಫಲಗಳಿಂದ ಮನೋಹರವಾದ ಅಶೋಕವನದ ಕಡೆಗೆ ಹೊರಟನು

ಸ ಸರ್ವಾಭರಣೈರ್ಯುಕ್ತೋ ಬಿಭ್ರಚ್ಛ್ರಿಯಮನುತ್ತಮಾಮ್ ।
ತಾಂ ನಗೈರ್ಬಹುಭಿರ್ಜುಷ್ಟಾಂ ಸರ್ವಪುಷ್ಪಫಲೋಪಗೈಃ ॥ ೬
ವೃತಾಂ ಪುಷ್ಕರಣೀಭಿಶ್ಚ ನಾನಾಪುಷ್ಪೋಪಶೋಭಿತಾಮ್ ।
ಸದಾಮದೈಶ್ಚ ವಿಹಗೈರ್ವಿಚಿತ್ರಾಂ ಪರಮಾದ್ಭುತೈಃ ॥ ೭
ಈಹಾಮೃಗೈಶ್ಚ ವಿವಿಧೈರ್ಜುಷ್ಟಾಂ ದೃಷ್ಟಿಮನೋಹರೈಃ ।
ವೀಥೀಃ ಸಂಪ್ರೇಕ್ಷಮಾಣಶ್ಚ ಮಣಿಕಾಂಚನತೋರಣಾಃ ॥ ೮
ನಾನಾಮೃಗಗಣಾಕೀರ್ಣಾಂ ಫಲೈಃ ಪ್ರಪತಿತೈರ್ವೃತಾಮ್ ।
ಅಶೋಕವನಿಕಾಮೇವ ಪ್ರಾವಿಶತ್ ಸಂತತದ್ರುಮಾಮ್ ॥ ೯
ಅಂಗನಾಃ ಶತಮಾತ್ರಂ ತು ತಂ ವ್ರಜಂತಮನುವ್ರಜನ್ ।
ಮಹೇಂದ್ರಮಿವ ಪೌಲಸ್ತ್ಯಂ ದೇವಗಂಧರ್ವಯೋಷಿತಃ ॥ ೧೦
ದೀಪಿಕಾಃ ಕಾಂಚನೀಃ ಕಾಶ್ಚಿಜ್ಜಗೃಹುಸ್ತತ್ರ ಯೋಷಿತಃ ।
ವಾಲವ್ಯಜನಹಸ್ತಾಶ್ಚ ತಾಲವೃಂತಾನಿ ಚಾಪರಾಃ ॥ ೧೧
ಕಾಂಚನೈರಪಿ ಭೃಂಗಾರೈರ್ಜಹ್ರುಃ ಸಲಿಲಮಗ್ರತಃ ।
ಮಂಡಲಾಗ್ರಾ ಬೃಸೀಶ್ಚೈವ ಗೃಹ್ಯಾನ್ಯಾಃ ಪೃಷ್ಠತೋ ಯಯುಃ ॥ ೧೨

(೫-೬). ಅಶೋಕವನವಾದರೊ ಪುಷ್ಕರಿಣಿಗಳಿಂದಲೂ ಬಗೆ ಬಗೆಯ ಹೂಗಳಿಂದಲೂ ಮದಿಸಿದ ಪಕ್ಷಿಗಳಿಂದಲೂ ತುಂಬಿರುವುದು. ಸುಂದರವಾದ ಮೃಗಗಳು ಸಂಚರಿಸುತ್ತಿರುವುವು. ಮಾಗಿದ ಹಣ್ಣುಗಳು ಅಲ್ಲಲ್ಲಿ ಉದುರಿ ಬಿದ್ದಿರುವುವು. ರತ್ನಖಚಿತವಾದ ಸುವರ್ಣತೋರಣಗಳಿರುವ ಉದ್ಯಾನವೀಥಿಗಳನ್ನು ನೋಡುತ್ತ ರಾವಣನು ಅಶೋಕವನದೊಳಕ್ಕೆ ಬಂದನು (೭-೯). ದೇವಗಂಧರ್ವ ಸ್ತ್ರೀಯರು ದೇವೇಂದ್ರನನ್ನು ಹಿಂಬಾಲಿಸಿಬರುವಂತೆ ನೂರಾರು ಸ್ತ್ರೀಯರು ರಾವಣನನ್ನು ಅನುಸರಿಸಿ ಬರುತ್ತಿದ್ದರು. ಕೆಲವು ಸ್ತ್ರೀಯರು ಚಿನ್ನದ ದೀಪಸ್ತಂಭಗಳನ್ನು ಹಿಡಿದು ಅವನ ಮುಂದೆ ಬರುತ್ತಿದ್ದರು. ಕೆಲವರು ಚಾಮರವನ್ನೂ ಬೀಸಣಿಗೆಯನ್ನೂ ಬೀಸುತ್ತ ಪಕ್ಕದಲ್ಲಿ ಬರುತ್ತಿದ್ದರು (೧೦-೧೧). ಇನ್ನು ಕೆಲವರು ಚಿನ್ನದ ಕಲಶಗಳಲ್ಲಿ ನೀರನ್ನು ಹೊತ್ತು ತರುತ್ತಿದ್ದರು. ಹಿಂದುಗಡೆ ಕೆಲವು ಹೆಂಗಸರು ದುಂಡಾದ ಆಕೃತಿಯ ಉತ್ತಮಾಸನಗಳನ್ನು ತರುತ್ತಿದ್ದರು. ಅವನ ಪಕ್ಕದಲ್ಲಿ ಒಬ್ಬಳು

ಕಾಚಿದ್ರತ್ನಮಯೀಂ ಸ್ಥಾಲೀಂ ಪೂರ್ಣಾಂ ಪಾನಸ್ಯ ಭಾಮಿನೀ ।
ದಕ್ಷಿಣಾ ದಕ್ಷಿಣೇನೈವ ತದಾ ಜಗ್ರಾಹ ಪಾಣಿನಾ ॥ ೧೩

ರಾಜಹಂಸಪ್ರತೀಕಾಶಂ ಛತ್ರಂ ಪೂರ್ಣಶಶಿಪ್ರಭಮ್ ।
ಸೌವರ್ಣದಂಡಮಪರಾ ಗೃಹೀತ್ವಾ ಪೃಷ್ಠತೋ ಯಯೌ ॥ ೧೪

ನಿದ್ರಾಮದಪರೀತಾಕ್ಷ್ಯೋ ರಾವಣಸ್ಯೋತ್ತಮಾಃ ಸ್ತ್ರಿಯಃ ।
ಅನುಜಗ್ಮುಃ ಪತಿಂ ವೀರಂ ಘನಂ ವಿದ್ಯುಲ್ಲತಾ ಇವ ॥ ೧೫

ವ್ಯಾವಿದ್ಧಹಾರಕೇಯೂರಾಃ ಸಮಾಮೃದಿತವರ್ಣಕಾಃ ।
ಸಮಾಗಲಿತಕೇಶಾಂತಾಃ ಸಸ್ವೇದವದನಾಸ್ತಥಾ ॥ ೧೬

ಘೂರ್ಣಂತ್ಯೋ ಮದಶೇಷೇಣ ನಿದ್ರಯಾ ಚ ಶುಭಾನನಾಃ ।
ಸ್ವೇದಕ್ಲಿಷ್ಟಾಂಗಕುಸುಮಾಃ ಸುಮಾಲ್ಯಾಕುಲಮೂರ್ಧಜಾಃ ॥ ೧೭

ಪ್ರಯಾಂತಂ ನೈರ್ಋತಪತಿಂ ನಾರ್ಯೋ ಮದಿರಲೋಚನಾಃ ।
ಬಹುಮಾನಾಚ್ಚ ಕಾಮಾಚ್ಚ ಪ್ರಿಯಾ ಭಾರ್ಯಾಸ್ತಮನ್ವಯುಃ ॥ ೧೮

ರತ್ನಮಯವಾದ ಥಾಲಿಯಲ್ಲಿ ಮದ್ಯವನ್ನು ತುಂಬಿಕೊಂಡು ಬಲಗೈಯಲ್ಲಿ ಹಿಡಿದಿದ್ದಳು (೧೨-೧೩). ಇನ್ನೊಬ್ಬಳು ರಾಜಹಂಸದಂತೆಯೂ ಪೂರ್ಣಚಂದ್ರನಂತೆಯೂ ಶುಭ್ರವಾಗಿರುವ ಚಿನ್ನದ ಕೋಲಿನ ಶ್ವೇತಚ್ಛತ್ರವನ್ನು ಹಿಡಿದು ರಾವಣನ ಹಿಂದೆ ಹೋಗುತ್ತಿದ್ದಳು. ಆ ಸ್ತ್ರೀಯರಿಗೆ ಇನ್ನೂ ನಿದ್ರೆಯು ಕಳೆದಿರಲಿಲ್ಲವಾದ್ದರಿಂದ ಕಣ್ಣುಗಳು ತೊಳಲುತ್ತಿದ್ದವು. ಅವರೆಲ್ಲರೂ ಮೇಘದೊಡನೆ ಮಿಂಚುಗಳು ಬರುವಂತೆ ರಾವಣನನ್ನು ಹಿಂಬಾಲಿಸಿ ಬಂದಿದ್ದರು (೧೪-೧೫). ನಿದ್ರೆಯ ತೊಳಲಾಟದಿಂದ ಅವರ ಹಾರಕೇಯೂರಗಳು ಜಾರಿದ್ದವು. ಗಂಧಲೇಪನವು ಒರಸಿಹೋಗಿತ್ತು. ಜಡೆಗಳು ಕೆದರಿದ್ದವು. ಮುಖವು ಬೆವರಿತ್ತು. ನಿದ್ರೆಯಿಂದಲೂ ಮದ್ಯದ ಮದದಿಂದಲೂ ತೂಕಡಿಸುತ್ತಿದ್ದರು. ಧರಿಸಿದ ಹೂಗಳು ಬಾಡಿ, ಮುಡಿದ ಮಾಲೆ ಜೋಲುತ್ತಿತ್ತು (೧೬-೧೭). ಆದರೂ ಆ ಸ್ತ್ರೀಯರು ರಾವಣನ ಮೇಲಿದ್ದ ಗೌರವದಿಂದಲೂ ಮೋಹದಿಂದಲೂ ಹಿಂಬಾಲಿಸಿ ಬರುತ್ತಿದ್ದರು. ಕಾಮಾಸಕ್ತನೂ ದುರ್ಮತಿಯೂ ಆದ ರಾವಣನು ಸೀತೆಯನ್ನೇ ನೆನೆಸಿಕೊಳ್ಳುತ್ತ ಮೆಲ್ಲಗೆ ಹೆಜ್ಜೆ

ಸ ಚ ಕಾಮಪರಾಧೀನಃ ಪತಿಸ್ತಾಸಾಂ ಮಹಾಬಲಃ ।
ಸೀತಾಸಕ್ತಮನಾ ಮಂದೋ ಮದಾಂಚಿತಗತಿರ್ಬಭೌ ॥ ೧೯

ತತಃ ಕಾಂಚೀನಿನಾದಂ ಚ ನೂಪುರಾಣಾಂ ಚ ನಿಃಸ್ವನಮ್ ।
ಶುಶ್ರಾವ ಪರಮಸ್ತ್ರೀಣಾಂ ಸ ಕಪಿರ್ಮಾರುತಾತ್ಮಜಃ ॥ ೨೦

ತಂ ಚಾಪ್ರತಿಮಕರ್ಮಾಣಮಚಿಂತ್ಯಬಲಪೌರುಷಮ್ ।
ದ್ವಾರದೇಶಮನುಪ್ರಾಪ್ತಂ ದದರ್ಶ ಹನುಮಾನ್ ಕಪಿಃ ॥ ೨೧

ದೀಪಿಕಾಭಿರನೇಕಾಭಿಃ ಸಮಂತಾದವಭಾಸಿತಮ್ ।
ಗಂಧತೈಲಾವಸಿಕ್ತಾಭಿರ್ಧ್ರಿಯಮಾಣಾಭಿರಗ್ರತಃ ॥ ೨೨

ಕಾಮದರ್ಪಮದೈರ್ಯುಕ್ತಂ ಜಿಹ್ಮತಾಮ್ರಾಯತೇಕ್ಷಣಮ್ ।
ಸಮಕ್ಷಮಿವ ಕಂದರ್ಪಮಪವಿದ್ಧಶರಾಸನಮ್ ॥ ೨೩

ಮಥಿತಾಮೃತಫೇನಾಭಮರಜೋವಸ್ತ್ರಮುತ್ತಮಮ್ ।
ಸಲೀಲಮನುಕರ್ಷಂತಂ ವಿಮುಕ್ತಂ ಸಕ್ತಮಂಗದೇ ॥ ೨೪

ತಂ ಪತ್ರವಿಟಪೇ ಲೀನಃ ಪತ್ರಪುಷ್ಪಘನಾವೃತಃ ।
ಸಮೀಪಮುಪಸಂಕ್ರಾಂತಂ ನಿಧ್ಯಾತುಮುಪಚಕ್ರಮೇ ॥ ೨೫

ಹಾಕುತ್ತ ಬರುತ್ತಿದ್ದನು (೧೮–೧೯). ಆ ಸಮಯದಲ್ಲಿ ಸ್ತ್ರೀಯರ ಕಾಂಚೀ ಧ್ವನಿಯೂ ಕಾಲಂದುಗೆಗಳ ಶಬ್ದವೂ ಹನುಮಂತನಿಗೆ ಕೇಳಿಸಿತು. ಇದೇನೆಂಬ ಕುತೂಹಲದಿಂದ ಹನುಮಂತನು ಕತ್ತೆತ್ತಿ ನೋಡುತ್ತಿರಲು, ಮಹಾಪರಾಕ್ರಮಿಯಾದ ರಾವಣನು ಅಶೋಕವನದ ಬಾಗಿಲನ್ನು ದಾಟಿಬರುತ್ತಿದ್ದನು (೨೦–೨೧). ಅವನು ಸುತ್ತಲೂ ಹಿಡಿದಿದ್ದ ಗಂಧದೆಣ್ಣೆಯ ದೀವಟಿಗೆಗಳ ಬೆಳಕಿನಲ್ಲಿ ಉಜ್ಜ್ವಲನಾಗಿ ಕಾಣುತ್ತಿದ್ದನು. ಕಾಮ ದರ್ಪ ಮದಗಳಿಂದ ಉಬ್ಬಿದ ಅವನ ಕಣ್ಣುಗಳು ಕೆಂಪೇರಿದ್ದವು. ಹಾಲಿನ ನೊರೆಯಂತೆ ಶುಭ್ರವಾದ ದುಕೂಲವು ಭುಜಕೀರ್ತಿಯಲ್ಲಿ ಸಿಕ್ಕಿಕೊಂಡಾಗ, ಅದನ್ನು ಸರಿಪಡಿಸಿಕೊಳ್ಳುತ್ತ ವಿಲಾಸದಿಂದ ಬರುತ್ತಿದ್ದ ರಾವಣನು ಪುಷ್ಪಧನುಸ್ಸೊಂದಿಲ್ಲದ ಸಾಕ್ಷಾತ್ ಮನ್ಮಥನಂತೆಯೇ ತೋರುತ್ತಿದ್ದನು (೨೨–೨೪). ಆಂಜನೇಯನು ಆ ವೃಕ್ಷದಲ್ಲಿ ಮರೆಯಾಗಿ ಇದ್ದುಕೊಂಡು, ಸಮೀಪಕ್ಕೆ ಬರುತ್ತಿದ್ದ

ಅವೇಕ್ಷಮಾಣಸ್ತು ತತೋ ದದರ್ಶ ಕಪಿಕುಂಜರಃ ।
ರೂಪಯೌವನಸಂಪನ್ನಾ ರಾವಣಸ್ಯ ವರಸ್ತ್ರಿಯಃ ॥ ೨೬

ತಾಭಿಃ ಪರಿವೃತೋ ರಾಜಾ ಸುರೂಪಾಭಿರ್ಮಹಾಯಶಾಃ ।
ತನ್ಮೃಗದ್ವಿಜಸಂಘುಷ್ಟಂ ಪ್ರವಿಷ್ಟಃ ಪ್ರಮದಾವನಮ್ ॥ ೨೭

ಕ್ಷೀಬೋ ವಿಚಿತ್ರಾಭರಣಃ ಶಂಕುಕರ್ಣೋ ಮಹಾಬಲಃ ।
ತೇನ ವಿಶ್ರವಸಃ ಪುತ್ರಃ ಸ ದೃಷ್ಟೋ ರಾಕ್ಷಸಾಧಿಪಃ ॥ ೨೮

ವೃತಃ ಪರಮನಾರೀಭಿಸ್ತಾರಾಭಿರಿವ ಚಂದ್ರಮಾಃ ।
ತಂ ದದರ್ಶ ಮಹಾತೇಜಾಸ್ತೇಜೋವಂತಂ ಮಹಾಕಪಿಃ ॥ ೨೯

ರಾವಣೋಽಯಂ ಮಹಾಬಾಹುರಿತಿ ಸಂಚಿಂತ್ಯ ವಾನರಃ ।
ಸೋಽಯಮೇವ ಪುರಾ ಶೇತೇ ಪುರಮಧ್ಯೇ ಗೃಹೋತ್ತಮೇ ॥ ೩೦

ಅವಪ್ಲುತೋ ಮಹಾತೇಜಾ ಹನುಮಾನ್ ಮಾರುತಾತ್ಮಜಃ ।
ಸ ತಥಾಪ್ಯುಗ್ರತೇಜಾಃ ಸನ್ನಿರ್ಧೂತಸ್ತಸ್ಯ ತೇಜಸಾ ॥ ೩೧

ರಾವಣನನ್ನು ಗಮನಿಸಿ ನೋಡಲಾರಂಭಿಸಿದನು. ಸುತ್ತಲೂ ಸುಂದರಿಯರಾದ ಸ್ತ್ರೀಯರಿಂದ ಪರಿವೃತನಾಗಿ, ಆ ರಾಕ್ಷಸರಾಜನು ಅಶೋಕವನದೊಳಗೆ ಬರುವುದು ಚೆನ್ನಾಗಿ ಕಾಣಿಸಿತು (೨೫–೨೭). ಮದೋನ್ಮತ್ತನೂ ಮಹಾಬಲನೂ ವಿಶ್ರವಸ್ಸಿನ ಮಗನೂ ಆದ ರಾಕ್ಷಸೇಶ್ವರನು ನಕ್ಷತ್ರಗಳಿಂದ ಪರಿವೃತನಾದ ಚಂದ್ರನಂತೆ, ಬಹುಮಂದಿ ಚೆಲುವೆಯರಿಂದ ಪರಿವೃತನಾಗಿ ಬರುತ್ತಿರುವುದು ಹನುಮಂತನಿಗೆ ಗೋಚರಿಸಿತು (೨೮–೨೯). "ಆಗ ಅರಮನೆಯಲ್ಲಿ ನಿದ್ರೆಮಾಡುತ್ತಿದ್ದ ಮಹಾಬಾಹುವಾದ ರಾವಣನೇ ಇವನು" ಎಂದು ಹನುಮಂತನು ನಿರ್ಧರಿಸಿ, ಅವನನ್ನು ಸರಿಯಾಗಿ ಸಮೀಕ್ಷಿಸುವುದಕ್ಕಾಗಿ ತಾನಿದ್ದ ಕೊಂಬೆಯಿಂದ ಕೆಳಗಿಳಿದು ಇನ್ನೊಂದು ಕೊಂಬೆಯಲ್ಲಿ ಅಡಗಿಕುಳಿತನು. ವಾಯುಪುತ್ರನಾದ ಆಂಜನೇಯನು ಉಗ್ರ ತೇಜೋವಂತನಾದರೂ ರಾವಣನ ತೇಜಸ್ಸಿನೆದುರಿಗೆ ಪ್ರಕಟವಾಗಿ ಕಾಣಿಸಿಕೊಳ್ಳುವ ಧೈರ್ಯ, ಆಗ ಅವನಿಗೆ ಬರಲಿಲ್ಲ. ರಾವಣನು ಚೆಲುವೆಯಾದ ಸೀತೆಯನ್ನು

ಪತ್ರಗುಲ್ಮಾಂತರೇ ಸಕ್ತೋ ಹನುಮಾನ್ ಸಂವೃತೋಽಭವತ್ ।
ಸ ತಾಮಸಿತಕೇಶಾಂತಾಂ ಸುಶ್ರೋಣೀಂ ಸಂಹತಸ್ತನೀಮ್ ॥ ೩೨
ದಿದೃಕ್ಷುರಸಿತಾಪಾಂಗಾಮುಪಾವರ್ತತ ರಾವಣಃ ॥

ಇತಿ ಶ್ರೀಮದ್ರಾಮಾಯಣೇ ಸುಂದರಕಾಂಡೇ ಅಷ್ಟಾದಶಃ ಸರ್ಗಃ

———○———

ಏಕೋನವಿಂಶಃ ಸರ್ಗಃ

ಕೃಚ್ಛ್ರಗತಸೀತೋಪಮಾಃ

ತಸ್ಮಿನ್ನೇವ ತತಃ ಕಾಲೇ ರಾಜಪುತ್ರೀ ತ್ವನಿಂದಿತಾ ।
ರೂಪಯೌವನಸಂಪನ್ನಂ ಭೂಷಣೋತ್ತಮಭೂಷಿತಮ್ ॥ ೧
ತತೋ ದೃಷ್ಟ್ವೈವ ವೈದೇಹೀ ರಾವಣಂ ರಾಕ್ಷಸಾಧಿಪಮ್ ।
ಪ್ರಾವೇಪತ ವರಾರೋಹಾ ಪ್ರವಾತೇ ಕದಲೀ ಯಥಾ ॥ ೨
ಆಚ್ಛಾದ್ಯೋದರಮೂರುಭ್ಯಾಂ ಬಾಹುಭ್ಯಾಂ ಚ ಪಯೋಧರೌ ।
ಉಪವಿಷ್ಟಾ ವಿಶಾಲಾಕ್ಷೀ ರುದಂತೀ ವರವರ್ಣಿನೀ ॥ ೩

ನೋಡುವುದಕ್ಕಾಗಿ ಅವಳ ಬಳಿಗೆ ಬಂದನು (೩೦–೩೨).

ಇಲ್ಲಿಗೆ ಶ್ರೀಮದ್ರಾಮಾಯಣದ ಸುಂದರಕಾಂಡದಲ್ಲಿ ಹದಿನೆಂಟನೆಯ ಸರ್ಗ

———○———

ಸರ್ಗ ೧೯

ರಾವಣನ ಭಯದಿಂದ ಕಂಪಿಸುತ್ತಿದ್ದ ಜಾನಕಿಯ ವರ್ಣನೆ.

ಇತ್ತಲಾಗಿ ಜಾನಕಿಯು, ಯೌವನಸಂಪನ್ನನಾದ ರಾವಣನು ಉತ್ತಮಾಭರಣಗಳನ್ನು ಧರಿಸಿಕೊಂಡು ತನ್ನ ಕಡೆಗೆ ಬರುತ್ತಿರುವುದನ್ನು ಕಂಡು ಬಿರುಗಾಳಿಗೆ ಸಿಕ್ಕಿದ ಬಾಳೆಯಗಿಡದಂತೆ ನಡುಗಲಾರಂಭಿಸಿದಳು. ಆ ವಿಶಾಲಾಕ್ಷಿಯು ತನ್ನ ಉದರಪ್ರವೇಶ ಮತ್ತು ಸ್ತನಗಳು ಕಾಣದಂತೆ ತೊಡೆಗಳನ್ನೂ ತೋಳುಗಳನ್ನೂ ಬಾಗಿಸಿಕೊಂಡು ಕುಳಿತು ಕಣ್ಣೀರು ಸುರಿಸತೊಡಗಿದಳು (೧–೨). ಸಮುದ್ರದಲ್ಲಿ

ದಶಗ್ರೀವಸ್ತು ವೈದೇಹೀಂ ರಕ್ಷಿತಾಂ ರಾಕ್ಷಸೀಗಣೈಃ ।
ದದರ್ಶ ಸೀತಾಂ ದುಃಖಾರ್ತಾಂ ನಾವಂ ಸನ್ನಾಮಿವಾರ್ಣವೇ ॥ ೪

ಅಸಂವೃತಾಯಾಮಾಸೀನಾಂ ಧರಣ್ಯಾಂ ಸಂಶಿತವ್ರತಾಮ್ ।
ಛಿನ್ನಾಂ ಪ್ರಪತಿತಾಂ ಭೂಮೌ ಶಾಖಾಮಿವ ವನಸ್ಪತೇಃ ॥ ೫

ಮಲಮಂಡನದಿಗ್ಧಾಂಗೀಂ ಮಂಡನಾರ್ಹಾಮಮಂಡಿತಾಮ್ ।
ಮೃಣಾಲೀ ಪಂಕದಿಗ್ಧೇವ ವಿಭಾತಿ ನ ವಿಭಾತಿ ಚ ॥ ೬

ಸಮೀಪಂ ರಾಜಸಿಂಹಸ್ಯ ರಾಮಸ್ಯ ವಿದಿತಾತ್ಮನಃ ।
ಸಂಕಲ್ಪಹಯಸಂಯುಕ್ತೈರ್ಯಾಂತೀಮಿವ ಮನೋರಥೈಃ ॥ ೭

ಶುಷ್ಯಂತೀಂ ರುದತೀಮೇಕಾಂ ಧ್ಯಾನಶೋಕಪರಾಯಣಾಮ್ ।
ದುಃಖಸ್ಯಾಂತಮಪಶ್ಯಂತೀಂ ರಾಮಾಂ ರಾಮಮನುವ್ರತಾಮ್ ॥ ೮

ವೇಷ್ಟಮಾನಾಂ ತಥಾವಿಷ್ಟಾಂ ಪನ್ನಗೇಂದ್ರವಧೂಮಿವ ।
ಧೂಪ್ಯಮಾನಾಂ ಗ್ರಹೇಣೇವ ರೋಹಿಣೀಂ ಧೂಮಕೇತುನಾ ॥ ೯

ಭಾರದಿಂದ ಮುಳುಗಿಹೋಗುತ್ತಿರುವ ನೌಕೆಯಂತೆ ದುಃಖಾರ್ತಳಾಗಿ, ರಾಕ್ಷಸೀ ಪರಿವೃತಳಾಗಿದ್ದ ಸೀತೆಯನ್ನು ರಾವಣನು ಕಂಡನು (೩–೪). ಅವಳಾದರೋ ಮರದಿಂದ ಮುರಿದು ಕೆಡವಿದ ಶಾಖೆಯಂತೆ ಬರಿಯ ನೆಲದ ಮೇಲೆ ಕುಳಿತು ಪಾತಿವ್ರತ್ಯವೆಂಬ ವ್ರತದಲ್ಲಿ ನಿಷ್ಠಳಾಗಿರುವಳು. ಮಲಿನಳಾಗಿದ್ದ ಆ ಸೀತಾದೇವಿಯು ಕೆಸರು ಹತ್ತಿದ ತಾವರೆಯ ಬಳ್ಳಿಯಂತೆ ಒಂದು ಬಗೆಯಲ್ಲಿ ಶೋಭೆಯಿಲ್ಲದಿದ್ದರೂ, ಚೆಲುವೆಯಾಗಿಯೇ ಕಾಣಿಸುತ್ತಿರುವಳು (೫–೬). ಆಕೆಯು ತನ್ನ ಮನಸ್ಸೆಂಬ ರಥಕ್ಕೆ ಸಂಕಲ್ಪಗಳೆಂಬ ಕುದುರೆಗಳನ್ನು ಕಟ್ಟಿ ಶ್ರೀರಾಮನ ಬಳಿಗೆ ವೇಗವಾಗಿ ಹೋಗುತ್ತಿರುವಳೋ ಎಂಬಂತೆ ಅವನನ್ನೇ ಧ್ಯಾನಿಸುತ್ತಿರುವಳು. ಏಕಾಕಿನಿಯಾಗಿ ಶೋಕದ ಕೊನೆಯನ್ನೇ ಕಾಣದೆ ರಾಮನನ್ನೇ ಧ್ಯಾನಿಸುತ್ತ ಅತ್ತು ಅತ್ತು ಕೃಶಳಾಗಿಹೋಗಿರುವಳು (೭–೮). ಮಣಿಮಂತ್ರಗಳಿಂದ ನಿರುದ್ಧವಾದ ಸರ್ಪಿಣಿಯಂತೆ ಹೊರಳುತ್ತ, ಕೇತುವಿಗೆ ಸಿಕ್ಕಿದ ರೋಹಿಣೀನಕ್ಷತ್ರದಂತೆ ಸಂಕಟಪಡುತ್ತಿರುವಳು. ಪರಿಶುದ್ಧವಾದ ಆಚಾರವುಳ್ಳ ಧಾರ್ಮಿಕವಂಶದಲ್ಲಿ ಹುಟ್ಟಿ ಅದೇ ವಿಧವಾದ ಉತ್ತಮ ವಂಶದಲ್ಲಿ

ವೃತ್ತಶೀಲಕುಲೇ ಜಾತಾಮಾಚಾರವತಿ ಧಾರ್ಮಿಕೇ ।
ಪುನಃ ಸಂಸ್ಕಾರಮಾಪನ್ನಾಂ ಜಾತಾಮಿವ ಚ ದುಷ್ಕುಲೇ ॥ ೧೦

ಅಭೂತೇನಾಪವಾದೇನ ಕೀರ್ತಿಂ ನಿಪತಿತಾಮಿವ ।
ಆಮ್ನಾಯಾನಾಮಯೋಗೇನ ವಿದ್ಯಾಂ ಪ್ರಶಿಥಿಲಾಮಿವ ॥ ೧೧

ಸನ್ನಾಮಿವ ಮಹಾಕೀರ್ತಿಂ ಶ್ರದ್ಧಾಮಿವ ವಿಮಾನಿತಾಮ್ ।
ಪ್ರಜ್ಞಾಮಿವ ಪರಿಕ್ಷೀಣಾಮಾಶಾಂ ಪ್ರತಿಹತಾಮಿವ ॥ ೧೨

ಆಯತೀಮಿವ ವಿಧ್ವಸ್ತಾಮಾಜ್ಞಾಂ ಪ್ರತಿಹತಾಮಿವ ।
ದೀಪ್ತಾಮಿವ ದಿಶಂ ಕಾಲೇ ಪೂಜಾಮಪಹೃತಾಮಿವ ॥ ೧೩

ಪದ್ಮಿನೀಮಿವ ವಿಧ್ವಸ್ತಾಂ ಹತಶೂರಾಂ ಚಮೂಮಿವ ।
ಪ್ರಭಾಮಿವ ತಮೋಧ್ವಸ್ತಾಮುಪಕ್ಷೀಣಾಮಿವಾಪಗಾಮ್ ॥ ೧೪

ವೇದೀಮಿವ ಪರಾಮೃಷ್ಟಾಂ ಶಾಂತಾಮಗ್ನಿಶಿಖಾಮಿವ ।
ಪೌರ್ಣಮಾಸೀಮಿವ ನಿಶಾಂ ರಾಹುಗ್ರಸ್ತೇಂದುಮಂಡಲಾಮ್ ॥ ೧೫

ವಿವಾಹಸಂಸ್ಕಾರವನ್ನು ಪಡೆದಿದ್ದರೂ, ಕೇವಲ ದುಷ್ಕುಲದಲ್ಲಿ ಹುಟ್ಟಿದವಳಂತೆ ಶೋಚನೀಯಳಾಗಿರುವಳು (೯–೧೦). ಮಿಥ್ಯಾಪವಾದಕ್ಕೆ ಒಳಗಾದ ಕೀರ್ತಿಯಂತೆ, ಆವೃತ್ತಿಯಿಲ್ಲದೆ ಕ್ಷೀಣವಾದ ವಿದ್ಯೆಯಂತೆ, ಗತಿಸಿಹೋದ ಪ್ರಖ್ಯಾತಿಯಂತೆ, ಅವಮಾನಗೊಳಿಸಿದ ಶ್ರದ್ಧೆಯಂತೆ, ವಿತಂಡಾವಾದಕ್ಕೆ ಸಿಕ್ಕಿದ ಪ್ರಜ್ಞಾಶಕ್ತಿಯಂತೆ, ಭಗ್ನವಾದ ಆಸೆಯಂತೆ, ತಡೆಹಿಡಿಯಲ್ಪಟ್ಟ ಅಭಿವೃದ್ಧಿಯಂತೆ, ತಿರಸ್ಕೃತವಾದ ರಾಜಾಜ್ಞೆಯಂತೆ, ಉತ್ಪಾತಕಾಲದಲ್ಲಿ ಬೆಂಕಿಬಿದ್ದು ಉರಿಯುತ್ತಿರುವ ದಿಕ್ಕಿನಂತೆ, ಕದ್ದುತಂದ ಪೂಜಾದ್ರವ್ಯದಂತೆ, ಕಿತ್ತೆಸೆದ ತಾವರೆಯ ಬಳ್ಳಿಯಂತೆ, ವೀರರು ಹತರಾಗಿರುವ ಸೇನೆಯಂತೆ, ಗಾಢವಾದ ಕತ್ತಲೆಯಲ್ಲಿ ಮಿಣುಗುವ ದೀಪದಂತೆ, ಒಣಗುತ್ತಿರುವ ನದಿಯಂತೆ ಅತ್ಯಂತ ಶೋಚನೀಯಳಾಗಿರುವಳು (೧೧–೧೪). ಆ ಜಾನಕಿಯು ಪತಿತರು ಮುಟ್ಟಿದ ಯಜ್ಞವೇದಿಕೆಯ ಹಾಗೆ, ನಂದಿಹೋಗುತ್ತಿರುವ ಅಗ್ನಿಜ್ವಾಲೆಯ ಹಾಗೆ, ಗ್ರಹಣಹಿಡಿದ ಹುಣ್ಣಿಮೆಯ ರಾತ್ರಿಯ ಹಾಗೆ ಕಾಣುತ್ತಿರುವಳು. ಎಲೆಹೂಗಳನ್ನು ಉದುರಿಸಿ, ಹಂಸಪಕ್ಷಿಯನ್ನು ಹೆದರಿಸಿ, ಆನೆಯು ಸೊಂಡಿಲಿಂದ ಕಿತ್ತುತಂದ

ಉತ್ಕೃಷ್ಟಪರ್ಣಕಮಲಾಂ ವಿತ್ರಾಸಿತವಿಹಂಗಮಾಮ್ ।
ಹಸ್ತಿಹಸ್ತಪರಾಮೃಷ್ಟಾಮಾಕುಲಾಂ ಪದ್ಮಿನೀಮಿವ ॥ ೧೬

ಪತಿಶೋಕಾತುರಾಂ ಶುಷ್ಕಾಂ ನದೀಂ ವಿಸ್ರಾವಿತಾಮಿವ ।
ಪರಯಾ ಮೃಜಯಾ ಹೀನಾಂ ಕೃಷ್ಣಪಕ್ಷನಿಶಾಮಿವ ॥ ೧೭

ಸುಕುಮಾರೀಂ ಸುಜಾತಾಂಗೀಂ ರತ್ನಗರ್ಭಗೃಹೋಚಿತಾಮ್ ।
ತಪ್ಯಮಾನಾಮಿವೋಷ್ಣೇನ ಮೃಣಾಲೀಮಚಿರೋದ್ಧೃತಾಮ್ ॥ ೧೮

ಗೃಹೀತಾಮಾಲಿತಾಂ ಸ್ತಂಭೇ ಯೂಥಪೇನ ವಿನಾಕೃತಾಮ್ ।
ನಿಃಶ್ವಸಂತೀಂ ಸುದುಃಖಾರ್ತಾಂ ಗಜರಾಜವಧೂಮಿವ ॥ ೧೯

ಏಕಯಾ ದೀರ್ಘಯಾ ವೇಣ್ಯಾ ಶೋಭಮಾನಾಮಯತ್ನತಃ ।
ನೀಲಯಾ ನೀರದಾಪಾಯೇ ವನರಾಜ್ಯಾ ಮಹೀಮಿವ ॥ ೨೦

ಉಪವಾಸೇನ ಶೋಕೇನ ಧ್ಯಾನೇನ ಚ ಭಯೇನ ಚ ।
ಪರಿಕ್ಷೀಣಾಂ ಕೃಶಾಂ ದೀನಾಮಲ್ಪಾಹಾರಾಂ ತಪೋಧನಾಮ್ ॥ ೨೧

ಎಲೆ ಹೂಗಳುದುರಿದ ತಾವರೆಯ ಬಳ್ಳಿಯಂತೆ ಗೋಚರಿಸುವಳು (೧೫–೧೬). ಅಡ್ಡಗಟ್ಟೆಯನ್ನು ಕಟ್ಟಿ ನೀರನ್ನು ಬೇರೆಯ ಕಡೆಗೆ ತಿರುಗಿಸಿದಾಗ ಕ್ಷೀಣವಾಗುವ ನದಿಯಂತೆ ಪತಿಶೋಕದಿಂದ ಕೃಶಳಾಗಿರುವಳು. ಅಂಗಸಂಸ್ಕಾರವಿಲ್ಲದುದರಿಂದ ಕೃಷ್ಣಪಕ್ಷದ ರಾತ್ರಿಯಂತೆ ದಿನದಿನವೂ ಕಾಂತಿಹೀನಳಾಗುತ್ತಿರುವಳು. ಕೋಮಲಾಂಗಿಯೂ ಸುಂದರಿಯೂ ದಿವ್ಯವಾದ ಪ್ರಾಸಾದದಲ್ಲಿ ವಾಸಮಾಡಲರ್ಹಳೂ ಆಗಿದ್ದರೂ, ಬಿಸಲಲ್ಲಿ ಕಿತ್ತೆಸೆದ ತಾವರೆಯ ಬಳ್ಳಿಯಂತೆ ಸಂಕಟಪಡುತ್ತಿರುವಳು (೧೭–೧೮). ಗಂಡಾನೆಯಿಂದ ತಪ್ಪಿಸಿ ಹಿಡಿದುತಂದು ಕಂಬಕ್ಕೆ ಕಟ್ಟಿಹಾಕಿದ ಹೆಣ್ಣಾನೆಯಂತೆ ದುಃಖದಿಂದ ನಿಟ್ಟುಸಿರು ಬಿಡುತ್ತಿರುವಳು. ಹೆಣೆಯದಿರುವ ನೀಳವಾದ ತಲೆಗೂದಲಿನಿಂದ, ಶರತ್ಕಾಲದಲ್ಲಿ ದಟ್ಟವಾದ ವನಪಂಕ್ತಿಯಿಂದ ವಿರಾಜಿಸುವ ಭೂದೇವಿಯಂತೆ ಇರುವಳು (೧೯–೨೦). ಉಪವಾಸ, ಶೋಕ, ಚಿಂತೆ,

ಅಯಾಚಮಾನಾಂ ದುಃಖಾರ್ತಾಂ ಪ್ರಾಂಜಲಿಂ ದೇವತಾಮಿವ ।
ಭಾವೇನ ರಘುಮುಖ್ಯಸ್ಯ ದಶಗ್ರೀವಪರಾಭವಮ್ ॥ ೨೨

ಸಮೀಕ್ಷಮಾಣಾಂ ರುದತೀಮನಿಂದಿತಾಂ
ಸುಪಕ್ಷ್ಮತಾಮ್ರಾಯತಶುಕ್ಲಲೋಚನಾಮ್ ।
ಅನುವ್ರತಾಂ ರಾಮಮತೀವ ಮೈಥಿಲೀಂ
ಪ್ರಲೋಭಯಾಮಾಸ ವಧಾಯ ರಾವಣಃ ॥ ೨೩

ಇತಿ ಶ್ರೀಮದ್ರಾಮಾಯಣೇ ಸುಂದರಕಾಂಡೇ ಏಕೋನವಿಂಶಃ ಸರ್ಗಃ

ಭಯಗಳಿಂದ ಕೃಶಳಾಗಿ ತಪಸ್ಸು ಮಾಡುತ್ತ 'ಶ್ರೀರಾಮನು ರಾವಣನನ್ನು ಸೋಲಿಸಿ ಜಯಶೀಲನಾಗಲಿ' ಎಂದು ಅಂತರಂಗದಲ್ಲಿಯೇ ದೇವತೆಗಳನ್ನು ಪ್ರಾರ್ಥಿಸುವಂತೆ ಕೈಜೋಡಿಸಿಕೊಂಡಿರುವಳು (೨೧-೨೨). ದಿಕ್ಕು ದಿಕ್ಕಿಗೆ ನೋಡುತ್ತ, ಸುಂದರವಾದ ಕಣ್ಣುಗಳಿಂದ ಬಳಬಳನೆ ನೀರು ಸುರಿಸುತ್ತ ಶ್ರೀರಾಮನನ್ನೇ ಧ್ಯಾನಿಸುತ್ತಿದ್ದ ಸೀತಾದೇವಿಯನ್ನುದ್ದೇಶಿಸಿ, ರಾವಣನು ಆಸೆದೋರಿಸುವ ಮಾತುಗಳನ್ನು ಹೇಳಲುಪಕ್ರಮಿಸಿದನು. ಆ ಮಾತುಗಳಿಗೆ ಅವನ ವಧೆಯೇ ಫಲವಾಯಿತು (೨೩).

ಇಲ್ಲಿಗೆ ಶ್ರೀಮದ್ರಾಮಾಯಣದ ಸುಂದರಕಾಂಡದಲ್ಲಿ ಹತ್ತೊಂಬತ್ತನೆಯ ಸರ್ಗ

ವಿಂಶಃ ಸರ್ಗಃ

ಪ್ರಣಯಪ್ರಾರ್ಥನಾ

ಸ ತಾಂ ಪತಿವ್ರತಾಂ ದೀನಾಂ ನಿರಾನಂದಾಂ ತಪಸ್ವಿನೀಮ್ ।
ಸಾಕಾರೈರ್ಮಧುರೈರ್ವಾಕ್ಯೈರ್ನ್ಯದರ್ಶಯತ ರಾವಣಃ ॥ ೧

ಮಾಂ ದೃಷ್ಟ್ವಾ ನಾಗನಾಸೋರು ಗೂಹಮಾನಾ ಸ್ತನೋದರಮ್ ।
ಅದರ್ಶನಮಿವಾತ್ಮಾನಂ ಭಯಾನ್ನೇತುಂ ತ್ವಮಿಚ್ಛಸಿ ॥ ೨

ಕಾಮಯೇ ತ್ವಾಂ ವಿಶಾಲಾಕ್ಷಿ ಬಹು ಮನ್ಯಸ್ವ ಮಾಂ ಪ್ರಿಯೇ ।
ಸರ್ವಾಂಗಗುಣಸಂಪನ್ನೇ ಸರ್ವಲೋಕಮನೋಹರೇ ॥ ೩

ನೇಹ ಕೇಚಿನ್ಮನುಷ್ಯಾ ವಾ ರಾಕ್ಷಸಾಃ ಕಾಮರೂಪಿಣಃ ।
ವ್ಯಪಸರ್ಪತು ತೇ ಸೀತೇ ಭಯಂ ಮತ್ತಃ ಸಮುತ್ಥಿತಮ್ ॥ ೪

ಸರ್ಗ ೨೦

ರಾವಣನು ಆಸೆಹುಟ್ಟಿಸುವ ಮಾತುಗಳನ್ನು ಹೇಳಿ, ತನ್ನನ್ನು
ವರಿಸುವಂತೆ ಸೀತೆಯನ್ನು ಪ್ರಾರ್ಥಿಸುವುದು.

ಹೀಗೆ ಸ್ವಲ್ಪವೂ ಉಲ್ಲಾಸವಿಲ್ಲದೆ ದೈನ್ಯದಿಂದ ಕುಳಿತಿದ್ದ ಪತಿವ್ರತೆಯಾದ ಸೀತೆಯನ್ನು ಕುರಿತು ರಾವಣನು ಅಭಿಪ್ರಾಯಗರ್ಭಿತವಾಗಿ ಮಧುರವಾದ ಮಾತುಗಳನ್ನು ಹೇಳಿದನು : "ಎಲೌ ಸುಂದರಿ, ನನ್ನನ್ನು ಕಂಡು ನಿನ್ನ ಅವಯವಗಳನ್ನು ಮುಚ್ಚಿಕೊಳ್ಳುವುದೇಕೆ ? ಮುದುರಿಕೊಳ್ಳುವುದೇಕೆ ? ಭಯದಿಂದ ನೀನೇ ಮರೆಯಾಗಿಬಿಡಲು ಬಯಸುವೆಯಾ? (೧–೨). ಹೇ ವಿಶಾಲಾಕ್ಷಿ ನಿನ್ನಲ್ಲಿಯೇ ನಾನು ಮೋಹಗೊಂಡಿದ್ದೇನೆ. ಅನುಗ್ರಹಿಸು. ನೀನು ಸರ್ವಾಂಗ ಸುಂದರಿ. ಸರ್ವರ ಮನಸ್ಸನ್ನೂ ಸೂರೆಗೊಳ್ಳುತ್ತಿರುವೆ. ಯಾರಿಗಾಗಿ ನೀನು ಹೆದರಬೇಕು ? ನನ್ನನ್ನು ಬಿಟ್ಟು ಇಲ್ಲಿ ಯಾವ ಪುರುಷರೂ ಇಲ್ಲ. ನನಗಾಗಿ ನೀನು

ಸ್ವಧರ್ಮೋ ರಕ್ಷಸಾಂ ಭೀರು ಸರ್ವಥೈವ ನ ಸಂಶಯಃ ।
ಗಮನಂ ವಾ ಪರಸ್ತ್ರೀಣಾಂ ಹರಣಂ ಸಂಪ್ರಮಥ್ಯ ವಾ ॥ ೫

ಏವಂ ಚೈತದಕಾಮಾಂ ತು ನ ತ್ವಾಂ ಸ್ಪ್ರಕ್ಷ್ಯಾಮಿ ಮೈಥಿಲಿ ।
ಕಾಮಂ ಕಾಮಃ ಶರೀರೇ ಮೇ ಯಥಾಕಾಮಂ ಪ್ರವರ್ತತಾಮ್ ॥ ೬

ದೇವಿ ನೇಹ ಭಯಂ ಕಾರ್ಯಂ ಮಯಿ ವಿಶ್ವಸಿಹಿ ಪ್ರಿಯೇ ।
ಪ್ರಣಯಸ್ವ ಚ ತತ್ತ್ವೇನ ಮೈವಂ ಭೂಃ ಶೋಕಲಾಲಸಾ ॥ ೭

ಏಕವೇಣೀ ಧರಾಶಯ್ಯಾ ಧ್ಯಾನಂ ಮಲಿನಮಂಬರಮ್ ।
ಅಸ್ಥಾನೇಽಪ್ಯುಪವಾಸಶ್ಚ ನೈತಾನ್ಯೌಪಯಿಕಾನಿ ತೇ ॥ ೮

ವಿಚಿತ್ರಾಣಿ ಚ ಮಾಲ್ಯಾನಿ ಚಂದನಾನ್ಯಗರೂಣಿ ಚ ।
ವಿವಿಧಾನಿ ಚ ವಾಸಾಂಸಿ ದಿವ್ಯಾನ್ಯಾಭರಣಾನಿ ಚ ॥ ೯

ಮಹಾರ್ಹಾಣಿ ಚ ಪಾನಾನಿ ಶಯನಾನ್ಯಾಸನಾನಿ ಚ ।
ಗೀತಂ ನೃತ್ತಂ ಚ ವಾದ್ಯಂ ಚ ಲಭ ಮಾಂ ಪ್ರಾಪ್ಯ ಮೈಥಿಲಿ ॥ ೧೦

ಭಯಪಡಬೇಕಾಗಿಲ್ಲ (೩–೪). ನಾನು ಅಧರ್ಮಿಯಲ್ಲ. ಪರಸ್ತ್ರೀಗಮನವೂ ಪರಸ್ತ್ರೀಯರನ್ನು ಅಪಹರಿಸಿ ತರುವುದೂ ರಾಕ್ಷಸರಾದ ನಮಗೆ ಕುಲಧರ್ಮ! ಆದರೂ ಕೂಡ ನೀನು ಬಯಸದೆ ಬಲಾತ್ಕಾರವಾಗಿ ನಿನ್ನನ್ನು ನಾನು ಮುಟ್ಟುವುದಿಲ್ಲ. ಮನ್ಮಥನು ನನ್ನನ್ನು ಎಷ್ಟಾದರೂ ಪೀಡಿಸಲಿ! (೫–೬). ಪ್ರಿಯತಮೆ! ನೀನು ಹೆದರಬೇಕಾಗಿಲ್ಲ. ನನ್ನಲ್ಲಿ ವಿಶ್ವಾಸವಿಡು. ನನ್ನಲ್ಲಿ ಗೌರವದಿಂದ ವರ್ತಿಸು. ಹೀಗೆ ಶೋಕದಿಂದ ಕೊರಗಬೇಡ. ಕೇಶವನ್ನು ಬಾಚಿ ಹೆರಳು ಹಾಕಿಕೊಳ್ಳದೆ, ನೆಲದ ಮೇಲೆ ಮಲಗಿ ಚಿಂತೆಮಾಡುತ್ತ, ಕೊಳೆಬಟ್ಟೆಯನ್ನುಟ್ಟು ಉಪವಾಸ ಮಾಡುತ್ತಿದ್ದರೆ, ನಿನಗೆ ಬರುವ ಪುರುಷಾರ್ಥವೇನು? (೭–೮). ಜಾನಕಿ, ನನ್ನನ್ನು ಮದುವೆಯಾಗು, ನನ್ನ ಅರಮನೆಯಲ್ಲಿ ನಾನಾಬಗೆಯ ಹೂಗಳೂ ಸುಗಂಧದ್ರವ್ಯಗಳೂ ವಿಚಿತ್ರವಾದ ಬಟ್ಟೆಗಳೂ ದಿವ್ಯಾಭರಣಗಳೂ ಇವೆ. ಶ್ರೇಷ್ಠವಾದ ಮದ್ಯವೂ ಹಾಸಿಗೆಗಳೂ ಪೀಠಗಳೂ ಇವೆ. ಇವೆಲ್ಲವನ್ನೂ ನೀನು ಅನುಭವಿಸಬಹುದು. ಕಿವಿಗೆ ಬೇಕಾದ ಹಾಡನ್ನು ಕೇಳಬಹುದು. ಕಣ್ಣಿಗೆ ಬೇಕಾದ ನೃತ್ಯವನ್ನು ನೋಡಬಹುದು.

ಸ್ತ್ರೀರತ್ನಮಸಿ ಮೈವಂ ಭೂಃ ಕುರು ಗಾತ್ರೇಷು ಭೂಷಣಮ್ ।
ಮಾಂ ಪ್ರಾಪ್ಯ ಹಿ ಕಥಂ ನು ಸ್ಯಾಸ್ತ್ವಮನರ್ಹಾ ಸುವಿಗ್ರಹೇ ॥ ೧೧

ಇದಂ ತೇ ಚಾರು ಸಂಜಾತಂ ಯೌವನಂ ಹ್ಯತಿವರ್ತತೇ ।
ಯದತೀತಂ ಪುನರ್ನೈತಿ ಸ್ರೋತಃ ಶೀಘ್ರಮಪಾಮಿವ ॥ ೧೨

ತ್ವಾಂ ಕೃತ್ವೋಪರತೋ ಮನ್ಯೇ ರೂಪಕರ್ತಾ ಸ ವಿಶ್ವಸೃಟ್ ।
ನ ಹಿ ರೂಪೋಪಮಾ ತ್ವನ್ಯಾ ತವಾಸ್ತಿ ಶುಭದರ್ಶನೇ ॥ ೧೩

ತ್ವಾಂ ಸಮಾಸಾದ್ಯ ವೈದೇಹಿ ರೂಪಯೌವನಶಾಲಿನೀಮ್ ।
ಕಃ ಪುಮಾನತಿವರ್ತೇತ ಸಾಕ್ಷಾದಪಿ ಪಿತಾಮಹಃ ॥ ೧೪

ಯದ್ಯತ್ ಪಶ್ಯಾಮಿ ತೇ ಗಾತ್ರಂ ಶೀತಾಂಶುಸದೃಶಾನನೇ ।
ತಸ್ಮಿಂಸ್ತಸ್ಮಿನ್ ಪೃಥುಶ್ರೋಣಿ ಚಕ್ಷುರ್ಮಮ ನಿಬಧ್ಯತೇ ॥ ೧೫

ಭವ ಮೈಥಿಲಿ ಭಾರ್ಯಾ ಮೇ ಮೋಹಮೇನಂ ವಿಸರ್ಜಯ ।
ಬಹ್ವೀನಾಮುತ್ತಮಸ್ತ್ರೀಣಾಂ ಮಮಾಗ್ರಮಹಿಷೀ ಭವ ॥ ೧೬

ಇಷ್ಟಬಂದ ವಾದ್ಯವನ್ನು ಆಲಿಸಬಹುದು (೯–೧೦). ನೀನು ಸ್ತ್ರೀಯರಲ್ಲಿ ರತ್ನವಾಗಿದ್ದೀಯೆ. ನೀನು ಹೀಗೆ ಅನಲಂಕೃತಳಾಗಿರಬಾರದು. ಸುಂದರಾಂಗಿ, ಒಡವೆಗಳನ್ನು ಧರಿಸು. ನನ್ನ ಬಳಿಗೆ ಬಂದು ನೀನು ಈ ರೀತಿಯಲ್ಲಿರಬಹುದೆ ? ನಿನ್ನ ದಿವ್ಯವಾದ ಯೌವನ ಕಳೆದುಹೋಗುತ್ತಿದೆ. ಹರಿದುಹೋದ ನೀರಿನ ಹಾಗೆಯೇ ಅದು ಮರಳಿ ಹಿಂದಕ್ಕೆ ಬರುವುದಿಲ್ಲ! (೧೧–೧೨). ನಿನಗೆ ಎಣೆಯಾದ ಇನ್ನೊಬ್ಬ ರೂಪವತಿ ಈ ಜಗತ್ತಿನಲ್ಲಿಲ್ಲ. ಬ್ರಹ್ಮನು ನಿನ್ನ ರೂಪವನ್ನು ಸೃಷ್ಟಿಸಿ ಬಳಲಿಹೋಗಿ, ಇನ್ನೊಬ್ಬ ರೂಪವತಿಯನ್ನು ಸೃಷ್ಟಿಸಲಾರದೆ ಸುಮ್ಮನಾಗಿರಬೇಕು. ರೂಪಯೌವನಗಳಿಂದ ಬೀಗುತ್ತಿರುವ ನಿನ್ನನ್ನು ಕಂಡು ಪಿತಾಮಹನೂ ಕಾಮವಶನಾಗದೆ ಹೋಗಲಿಕ್ಕಿಲ್ಲ! (೧೩–೧೪). ಚಂದ್ರಮುಖಿ, ನಿನ್ನ ಯಾವ ಯಾವ ಅಂಗವನ್ನು ನೋಡಿದರೂ ನನ್ನ ಕಣ್ಣು ಅಲ್ಲಿಯೇ ನೆಟ್ಟುಹೋಗುತ್ತದೆ. ಜಾನಕಿ, ನನ್ನ ಹೆಂಡತಿಯಾಗು. ಈ ತಪ್ಪು ತಿಳಿವಳಿಕೆಯನ್ನು ಬಿಟ್ಟುಬಿಡು. ನನ್ನ ಕೈಹಿಡಿದ ಎಲ್ಲಾ ಉತ್ತಮ ಸ್ತ್ರೀಯರ ಮೇಲೂ

ಲೋಕೇಭ್ಯೋ ಯಾನಿ ರತ್ನಾನಿ ಸಂಪ್ರಮಥ್ಯಾಹೃತಾನಿ ವೈ ।
ತಾನಿ ಮೇ ಭೀರು ಸರ್ವಾಣಿ ರಾಜ್ಯಂ ಚೈತದಹಂ ಚ ತೇ ॥ ೧೭

ವಿಜಿತ್ಯ ಪೃಥಿವೀಂ ಸರ್ವಾಂ ನಾನಾನಗರಮಾಲಿನೀಮ್ ।
ಜನಕಾಯ ಪ್ರದಾಸ್ಯಾಮಿ ತವ ಹೇತೋರ್ವಿಲಾಸಿನಿ ॥ ೧೮

ನೇಹ ಪಶ್ಯಾಮಿ ಲೋಕೇಽನ್ಯಂ ಯೋ ಮೇ ಪ್ರತಿಬಲೋ ಭವೇತ್ ।
ಪಶ್ಯ ಮೇ ಸುಮಹದ್ವೀರ್ಯಮಪ್ರತಿದ್ವಂದ್ವಮಾಹವೇ ॥ ೧೯

ಅಸಕೃತ್ ಸಂಯುಗೇ ಭಗ್ನಾ ಮಯಾ ವಿಮೃದಿತಧ್ವಜಾಃ ।
ಅಶಕ್ತಾಃ ಪ್ರತ್ಯನೀಕೇಷು ಸ್ಥಾತುಂ ಮಮ ಸುರಾಸುರಾಃ ॥ ೨೦

ಇಚ್ಛಯಾ ಕ್ರಿಯತಾಮದ್ಯ ಪ್ರತಿಕರ್ಮ ತವೋತ್ತಮಮ್ ।
ಸಪ್ರಭಾಣ್ಯವಸಜ್ಯಂತಾಂ ತವಾಂಗೇ ಭೂಷಣಾನಿ ಚ ॥ ೨೧

ಸಾಧು ಪಶ್ಯಾಮಿ ತೇ ರೂಪಂ ಸಂಯುಕ್ತಂ ಪ್ರತಿಕರ್ಮಣಾ ।
ಪ್ರತಿಕರ್ಮಾಭಿಸಂಯುಕ್ತಾ ದಾಕ್ಷಿಣ್ಯೇನ ವರಾನನೇ ॥ ೨೨

ನೀನು ಪಟ್ಟದರಾಣಿಯಾಗಿ ಅಧಿಕಾರವನ್ನು ನಡೆಸು (೧೫–೧೬). ಸಮಸ್ತ ಲೋಕಗಳನ್ನು ಗೆದ್ದು ನಾನು ತಂದುಹಾಕಿರುವ ರತ್ನಗಳೆಲ್ಲವೂ ಇನ್ನು ಮೇಲೆ ನಿನ್ನದು. ಈ ರಾಜ್ಯವೇ ನಿನ್ನದು. ನಾನು ಕೂಡ ನಿನಗೆ ಅಧೀನ ! ಹೇ ವಿಲಾಸಿನಿ ! ಬೇಕಾದರೆ ಈ ನನ್ನ ರಾಜ್ಯವನ್ನೇ ನಿನ್ನ ತಂದೆಯಾದ ಜನಕನಿಗೆ ಒಪ್ಪಿಸಿಬಿಡುತ್ತೇನೆ (೧೭–೧೮). ಈ ವಿಶ್ವದಲ್ಲಿ ನನ್ನನ್ನು ಯುದ್ಧದಲ್ಲಿ ಎದುರಿಸಬಲ್ಲ ಪರಾಕ್ರಮಿಯೊಬ್ಬನೂ ಇಲ್ಲ. ನನ್ನ ಶೌರ್ಯ ಎಷ್ಟೆಂಬುದನ್ನು ನೋಡು ! ದೇವಾಸುರರನ್ನು ಸಂಗ್ರಾಮದಲ್ಲಿ ಎಷ್ಟೋ ಸಲ ಸೋಲಿಸಿ ಓಡಿಸಿರುವೆನು. ಅವರಲ್ಲಿ ಯಾರೂ ನನ್ನೆದುರಿಗೆ ನಿಲ್ಲಲಾರರು (೧೯–೨೦). ಸೀತೆ, ನಿನಗೆ ಬೇಕಾದ ಹಾಗೆ ಶೃಂಗಾರಮಾಡಿಕೊ. ದಿವ್ಯವಾದ ಆಭರಣಗಳನ್ನು ಧರಿಸು. ಶೃಂಗಾರಮಾಡಿಕೊಂಡರೆ ನೀನು ಇನ್ನೂ ಚೆನ್ನಾಗಿ ಕಾಣುವೆ. ನನ್ನನ್ನು ವರಿಸಿ ನನ್ನೊಡನೆ ನಿನಗೆ ಇಷ್ಟಬಂದಂತೆ ಭೋಗವನ್ನು ಅನುಭವಿಸು. ಬೇಕಾದ್ದನ್ನು ಕುಡಿ. ಯಥೇಚ್ಛವಾಗಿ ವಿಹರಿಸು. ಭೂಮಿಯನ್ನೂ

ಭುಂಕ್ಷ್ವ ಭೋಗಾನ್ ಯಥಾಕಾಮಂ ಪಿಬ ಭೀರು ರಮಸ್ವ ಚ ।
ಯಥೇಷ್ಟಂ ಚ ಪ್ರಯಚ್ಛ ತ್ವಂ ಪೃಥಿವೀಂ ವಾ ಧನಾನಿ ಚ ॥ ೨೩

ರಮಸ್ವ ಮಯಿ ವಿಸ್ರಬ್ಧಾ ಧೃಷ್ಟಮಾಜ್ಞಾಪಯಸ್ವ ಚ ।
ಮತ್ಪ್ರಸಾದಾಲ್ಲಲಂತ್ಯಾಶ್ಚ ಲಲಂತಾಂ ಬಾಂಧವಾಸ್ತವ ॥ ೨೪

ಋದ್ಧಿಂ ಮಮಾನುಪಶ್ಯ ತ್ವಂ ಶ್ರಿಯಂ ಭದ್ರೇ ಯಶಶ್ಚ ಮೇ ।
ಕಿಂ ಕರಿಷ್ಯಸಿ ರಾಮೇಣ ಸುಭಗೇ ಚೀರವಾಸಸಾ ॥ ೨೫

ನಿಕ್ಷಿಪ್ತವಿಜಯೋ ರಾಮೋ ಗತಶ್ರೀರ್ವನಗೋಚರಃ ।
ವ್ರತೀ ಸ್ಥಂಡಿಲಶಾಯೀ ಚ ಶಂಕೇ ಜೀವತಿ ವಾ ನ ವಾ ॥ ೨೬

ನ ಹಿ ವೈದೇಹಿ ರಾಮಸ್ತ್ವಾಂ ದ್ರಷ್ಟುಂ ವಾಪ್ಯುಪಲಪ್ಸ್ಯತೇ ।
ಪುರೋಬಲಾಕೈರಸಿತೈರ್ಮೇಘೈರ್ಜ್ಯೋತ್ಸ್ನಾಮಿವಾವೃತಮ್ ॥ ೨೭

ಐಶ್ವರ್ಯವನ್ನೂ ನಿನ್ನ ಮನಸ್ಸಿಗೆ ಬಂದಷ್ಟು ಯಾರಿಗೆ ಬೇಕಾದರೂ ದಾನಮಾಡು (೨೧–೨೩). ಸಂಕೋಚವಿಲ್ಲದೆ ಏನುಬೇಕಾದರೂ ನನಗೆ ಆಜ್ಞೆಮಾಡು. ನಿನ್ನ ಜೊತೆಗೆ ನಿನ್ನ ತವರುಮನೆಯ ಬಂಧುಗಳೆಲ್ಲರೂ ಬಂದು ಬೇಕಾದ ಸುಖವನ್ನು ಅನುಭವಿಸಲಿ! ನನ್ನ ಮಹಾಭಾಗ್ಯವನ್ನೂ ಕೀರ್ತಿಯನ್ನೂ ನೋಡು. ನಾರುಬಟ್ಟೆಯನ್ನುಟ್ಟಿರುವ ರಾಮನಿಂದ ನಿನಗೆ ಆಗಬೇಕಾದ್ದೇನು ? (೨೪–೨೫). ರಾಮನು ಐಶ್ವರ್ಯವನ್ನು ಕಳೆದುಕೊಂಡು, ಜಯದ ಆಸೆಯನ್ನು ಬಿಟ್ಟು ಕಾಡು ಸೇರಿದ್ದಾನೆ. ವ್ರತ ಮಾಡುವವನ ಹಾಗೆ ನೆಲದಮೇಲೆ ಮಲಗುತ್ತಿರುವ ಆತನು ಇಷ್ಟುದಿನ ಬದುಕಿದ್ದಾನೋ ಇಲ್ಲವೋ; ನನ್ನ ಕೈಗೆ ಸಿಕ್ಕಿದ ನಿನ್ನನ್ನು ರಾಮನಿಗೆ ನೋಡಲು ಕೂಡ ಸಾಧ್ಯವಿಲ್ಲ. ಸಾಲುಗಟ್ಟಿದ ಬಲಾಕಾಪಕ್ಷಿಗಳುಳ್ಳ ನೀಲಮೇಘದಿಂದ ಆವರಿಸಲ್ಪಟ್ಟ ಚಂದ್ರಿಕೆಯನ್ನು ನೋಡಲು ಯಾರಿಗೆ ಸಾಧ್ಯ ? (೨೬–೨೭).

ನ ಚಾಪಿ ಮಮ ಹಸ್ತಾತ್ತ್ವಾಂ ಪ್ರಾಪ್ತುಮರ್ಹತಿ ರಾಘವಃ ।
ಹಿರಣ್ಯಕಶಿಪುಃ ಕೀರ್ತಿಮಿಂದ್ರಹಸ್ತಗತಾಮಿವ ॥ ೨೮

ಚಾರುಸ್ಮಿತೇ ಚಾರುದತಿ ಚಾರುನೇತ್ರೇ ವಿಲಾಸಿನಿ ।
ಮನೋ ಹರಸಿ ಮೇ ಭೀರು ಸುಪರ್ಣಃ ಪನ್ನಗಂ ಯಥಾ ॥ ೨೯

ಕ್ಲಿಷ್ಟಕೌಶೇಯವಸನಾಂ ತನ್ವೀಮಪ್ಯನಲಂಕೃತಾಮ್ ।
ತ್ವಾಂ ದೃಷ್ಟ್ವಾ ಸ್ವೇಷು ದಾರೇಷು ರತಿಂ ನೋಪಲಭಾಮ್ಯಹಮ್ ॥೩೦

ಅಂತಃಪುರನಿವಾಸಿನ್ಯಃ ಸ್ತ್ರಿಯಃ ಸರ್ವಗುಣಾನ್ವಿತಾಃ ।
ಯಾವತ್ಯೋ ಮಮ ಸರ್ವಾಸಾಮೈಶ್ವರ್ಯಂ ಕುರು ಜಾನಕಿ ॥ ೩೧

ಹಿರಣ್ಯಕಶಿಪು ತನ್ನ ಹೆಂಡತಿಯನ್ನು ಇಂದ್ರನಿಂದ ಹಿಂದಕ್ಕೆ ಪಡೆದದ್ದುಂಟು.* ಹಾಗೆ ರಾಮನು ಮಾತ್ರ ನಿನ್ನನ್ನು ಪಡೆಯಲಾರನು (೨೮). ಹೇ ವಿಲಾಸಿನಿ! ನಿನ್ನ ಮುಗುಳ್ನಗೆಯ ಸೊಗಸೆಷ್ಟು! ದಂತಪಂಕ್ತಿಯ ಚಂದವೇನು ! ಕಣ್ಣಿನ ಚೆಲುವೇನು ! ಗರುಡನು ಹಾವನ್ನೆಳೆಯುವಂತೆ ನನ್ನ ಮನಸ್ಸನ್ನು ಕಿತ್ತು ಎಳೆಯುತ್ತಿವೆ ! ನೀನು ಹೀಗೆ ಮಾಸಿದ ಸೀರೆಯನ್ನುಟ್ಟು ಸಿಂಗರಿಸಿಕೊಳ್ಳದೆ ಕೃಶಳಾಗಿರುವುದನ್ನು ಕಂಡು ನನಗೆ ಬಹಳ ವ್ಯಥೆಯಾಗಿದೆ. ಪತ್ನಿಯರಲ್ಲಿಯೂ ನನ್ನ ಮನಸ್ಸು ನಲಿಯುವುದಿಲ್ಲ (೨೯–೩೦). ಜಾನಕಿ, ನನ್ನ ಅಂತಃಪುರದ ಸ್ತ್ರೀಯರೆಲ್ಲರಿಗೂ ನೀನು ಪ್ರಭುವಾಗು, ಅಂತಃಪುರೇಶ್ವರಿಯಾಗು. ಅಪ್ಸರೆಯರು ಲಕ್ಷ್ಮೀದೇವಿಯನ್ನು ಸೇವಿಸುವಂತೆ,

---

* ಈ ಶ್ಲೋಕದಲ್ಲಿ ಕೀರ್ತಿ ಎಂದರೆ ಕೀರ್ತಿಯಂತಿರುವ ಹೆಂಡತಿಯೆಂದು ವ್ಯಾಖ್ಯಾನಕಾರರು ಹೇಳಿದ್ದಾರೆ. ಭಾಗವತದಲ್ಲಿ ಹಿರಣ್ಯಕಶಿಪುವಿನ ಪತ್ನಿಯನ್ನು ಇಂದ್ರನು ಅಪಹರಿಸಿದ್ದನೆಂದೂ, ನಾರದರ ಸಂಧಾನದಿಂದ ಅವಳು ಪುನಃ ಹಿರಣ್ಯಕಶಿಪುವಿಗೆ ಲಭಿಸಿದಳೆಂದೂ ಪ್ರಹ್ಲಾದನ ಮಾತಿನಿಂದ ಗೊತ್ತಾಗುತ್ತದೆ. ಇಂದ್ರನು ಹಿರಣ್ಯಕಶಿಪುವನ್ನು ಗೆದ್ದು ಅವನ ಕೀರ್ತಿಯನ್ನು ಅಪಹರಿಸಿದನು. ಅನಂತರ ಇನ್ನೊಂದು ಯುದ್ಧದಲ್ಲಿ ಇಂದ್ರನನ್ನು ಸೋಲಿಸಿ ಹಿರಣ್ಯಕಶಿಪು ತನ್ನ ಕೀರ್ತಿಯನ್ನು ಪುನಃ ಸಂಪಾದಿಸಿದನು. ಆದರಂತೆ ಶ್ರೀರಾಮನು ಮಾತ್ರ ನಿನ್ನನ್ನು ಹಿಂದಕ್ಕೆ ಪಡೆಯಲಾರನು ಎಂಬ ಅರ್ಥವೂ ಹೊಂದುತ್ತದೆ. ಹಿರಣ್ಯಕಶಿಪುವಿನ ಪತ್ನಿ ಕಯಾಧೂ.

ಮಮ ಹ್ಯಸಿತಕೇಶಾಂತೇ ತ್ರೈಲೋಕ್ಯಪ್ರವರಾಃ ಸ್ತ್ರಿಯಃ ।
ತಾಸ್ತ್ವಾಂ ಪರಿಚರಿಷ್ಯಂತಿ ಶ್ರಿಯಮಪ್ಸರಸೋ ಯಥಾ ॥ ೩೨

ಯಾನಿ ವೈಶ್ರವಣೇ ಸುಭ್ರೂ ರತ್ನಾನಿ ಚ ಧನಾನಿ ಚ ।
ತಾನಿ ಲೋಕಾಂಶ್ಚ ಸುಶ್ರೋಣಿ ಮಾಂ ಚ ಭುಂಕ್ಷ್ವ ಯಥಾಸುಖಮ್॥

ನ ರಾಮಸ್ತಪಸಾ ದೇವಿ ನ ಬಲೇನ ನ ವಿಕ್ರಮೈಃ ।
ನ ಧನೇನ ಮಯಾ ತುಲ್ಯಸ್ತೇಜಸಾ ಯಶಸಾಪಿ ವಾ ॥ ೩೪

ಪಿಬ ವಿಹರ ರಮಸ್ವ ಭುಂಕ್ಷ್ವ ಭೋಗಾನ್
ಧನನಿಚಯಂ ಪ್ರದಿಶಾಮಿ ಮೇದಿನೀಂ ಚ ।
ಮಯಿ ಲಲ ಲಲನೇ ಯಥಾಸುಖಂ ತ್ವಂ
ತ್ವಯಿ ಚ ಸಮೇತ್ಯ ಲಲಂತು ಬಾಂಧವಾಸ್ತೇ ॥ ೩೫

ಕುಸುಮಿತತರುಜಾಲಸಂತತಾನಿ
ಭ್ರಮರಯುತಾನಿ ಸಮುದ್ರತೀರಜಾನಿ ।

ಶ್ರೇಷ್ಠರಾದ ನನ್ನ ಪತ್ನಿಯರೆಲ್ಲರೂ ಸೇವೆ ಮಾಡುತ್ತ ನಿನ್ನ ಪರಿಚಾರಿಕೆಯರಾಗಲಿ (೩೧–೩೨). ಸುಶ್ರೋಣಿ, ಕುಬೇರನ ಐಶ್ವರ್ಯವೆಲ್ಲವೂ ನನ್ನ ಮನೆಯಲ್ಲಿ ಬಿದ್ದಿದೆ. ಅವೆಲ್ಲಕ್ಕೂ ನೀನೇ ಒಡತಿಯಾಗು! ನನ್ನ ರಾಜ್ಯಕ್ಕೂ ನನಗೂ ನೀನೇ ಒಡತಿಯಾಗು! ದೇವಿ, ತಪಸ್ಸಿನಲ್ಲಾಗಲಿ, ಬಲಪರಾಕ್ರಮಗಳಲ್ಲಾಗಲಿ, ಐಶ್ವರ್ಯ ತೇಜಸ್ಸು ಕೀರ್ತಿಗಳಲ್ಲಾಗಲಿ ರಾಮನು ಸ್ವಲ್ಪವೂ ನನಗೆ ಸಮನಲ್ಲ (೩೩–೩೪). ನನ್ನನ್ನು ವರಿಸಿ ಯಥೇಚ್ಛವಾಗಿ ಕುಡಿಯುತ್ತ ವಿಹರಿಸು ; ಆನಂದಿಸು. ಸಮಸ್ತ ಭೋಗಗಳನ್ನೂ ಅನುಭವಿಸು. ನನ್ನ ಐಶ್ವರ್ಯ, ರಾಜ್ಯಗಳನ್ನು ನಿನಗೆ ಒಪ್ಪಿಸಿ ಬಿಡುವೆನು. ನಿನ್ನ ತವರುಮನೆಯ ಬಂಧುಗಳೆಲ್ಲರೂ ಬಂದು ಆನಂದದಿಂದ ಹಿಗ್ಗುತ್ತಿರಲಿ. ಹೂಗಳಿಂದ ಬೀಗುತ್ತಿರುವ, ಮಧುಕರಗಳಿಂದ ರಮಣೀಯವಾದ

ಕನಕವಿಮಲಹಾರಭೂಷಿತಾಂಗೀ
ವಿಹರ ಮಯಾ ಸಹ ಭೀರು ಕಾನನಾನಿ ॥ ೩೬

ಇತಿ ಶ್ರೀಮದ್ರಾಮಾಯಣೇ ಸುಂದರಕಾಂಡೇ ವಿಂಶಃ ಸರ್ಗಃ

ಏಕವಿಂಶಃ ಸರ್ಗಃ

ರಾವಣತೃಣೀಕರಣಮ್

ತಸ್ಯ ತದ್ವಚನಂ ಶ್ರುತ್ವಾ ಸೀತಾ ರೌದ್ರಸ್ಯ ರಕ್ಷಸಃ ।
ಆರ್ತಾ ದೀನಸ್ವರಾ ದೀನಂ ಪ್ರತ್ಯುವಾಚ ಶನೈರ್ವಚಃ ॥ ೧

ದುಃಖಾರ್ತಾ ರುದತೀ ಸೀತಾ ವೇಪಮಾನಾ ತಪಸ್ವಿನೀ ।
ಚಿಂತಯಂತೀ ವರಾರೋಹಾ ಪತಿಮೇವ ಪತಿವ್ರತಾ ॥ ೨

ಕಡಲುತೀರದ ಈ ಉದ್ಯಾನವನಗಳಲ್ಲಿ ಸುವರ್ಣಹಾರಗಳಿಂದ ಭೂಷಿತಳಾಗಿ ನನ್ನೊಡನೆ ವಿಹರಿಸು'' ಎಂದನು (೩೫–೩೬).

ಇಲ್ಲಿಗೆ ಶ್ರೀಮದ್ರಾಮಾಯಣದ ಸುಂದರಕಾಂಡದಲ್ಲಿ ಇಪ್ಪತ್ತನೆಯ ಸರ್ಗ

ಸರ್ಗ ೨೧

ಸೀತೆಯು ನಡುವೆ ಒಂದು ಹುಲ್ಲುಕಡ್ಡಿಯನ್ನಿಟ್ಟು ಮಾತನಾಡುವ ನೆಪದಿಂದ ರಾವಣನಿಗೆ ಬುದ್ಧಿವಾದವನ್ನು ಹೇಳುವುದು.

ಆ ರಾಕ್ಷಸನ ಮಾತನ್ನು ಕೇಳಿ ಸೀತೆಯು ಬಹುದುಃಖಿತೆಯಾಗಿ ದೀನ ಸ್ವರದಿಂದ ಮೆಲ್ಲಗೆ ಉತ್ತರವನ್ನು ಹೇಳತೊಡಗಿದಳು. ಆ ಮಹಾಪತಿವ್ರತೆಯು ತನ್ನ ಪತಿಯನ್ನೇ ಧ್ಯಾನಿಸುತ್ತ ತಡೆಯಲಾಗದ ದುಃಖದಿಂದ ನಡುಗುತ್ತಿದ್ದಳು (೧–೨). ನಡುವೆ ಒಂದು ಹುಲ್ಲುಕಡ್ಡಿಯನ್ನಿಟ್ಟು* ಆದರೊಡನೆ ಮಾತನಾಡುತ್ತಿರುವಂತೆ

---

* ಪರಪುರುಷನೊಡನೆ ನೇರವಾಗಿ ಮಾತನಾಡುವುದು ಅನುಚಿತವೆಂದು ಮಧ್ಯದಲ್ಲಿ ಹುಲ್ಲುಕಡ್ಡಿಯನ್ನಿಟ್ಟಳು. 'ರಾವಣ, ನೀನು, ನಿನ್ನ ಐಶ್ವರ್ಯ—ಎಲ್ಲವೂ ನನ್ನ ದೃಷ್ಟಿಯಲ್ಲಿ ಒಂದು ತೃಣಕ್ಕೆ ಸಮಾನ !' ಎಂಬ ಭಾವವೂ ಸ್ವರಸವಾಗಿ ತೋರುತ್ತದೆ.

ತೃಣಮಂತರತಃ ಕೃತ್ವಾ ಪ್ರತ್ಯುವಾಚ ಶುಚಿಸ್ಮಿತಾ ।
ನಿವರ್ತಯ ಮನೋ ಮತ್ತಃ ಸ್ವಜನೇ ಕ್ರಿಯತಾಂ ಮನಃ ॥ ೩

ನ ಮಾಂ ಪ್ರಾರ್ಥಯಿತುಂ ಯುಕ್ತಂ ಸುಸಿದ್ಧಿಮಿವ ಪಾಪಕೃತ್ ।
ಅಕಾರ್ಯಂ ನ ಮಯಾ ಕಾರ್ಯಮೇಕಪತ್ನ್ಯಾ ವಿಗರ್ಹಿತಮ್ ॥ ೪

ಕುಲಂ ಸಂಪ್ರಾಪ್ತಯಾ ಪುಣ್ಯಂ ಕುಲೇ ಮಹತಿ ಜಾತಯಾ ।
ಏವಮುಕ್ತ್ವಾ ತು ವೈದೇಹೀ ರಾವಣಂ ತಂ ಯಶಸ್ವಿನೀ ॥ ೫

ರಾಕ್ಷಸಂ ಪೃಷ್ಠತಃ ಕೃತ್ವಾ ಭೂಯೋ ವಚನಮಬ್ರವೀತ್ ।
ನಾಹಮೌಪಯಿಕೀ ಭಾರ್ಯಾ ಪರಭಾರ್ಯಾ ಸತೀ ತವ ॥ ೬

ಸಾಧು ಧರ್ಮಮವೇಕ್ಷಸ್ವ ಸಾಧು ಸಾಧುವ್ರತಂ ಚರ ।
ಯಥಾ ತವ ತಥಾನ್ಯೇಷಾಂ ದಾರಾ ರಕ್ಷ್ಯಾ ನಿಶಾಚರ ॥ ೭

ಆತ್ಮಾನಮುಪಮಾಂ ಕೃತ್ವಾ ಸ್ವೇಷು ದಾರೇಷು ರಮ್ಯತಾಮ್ ।
ಅತುಷ್ಟಂ ಸ್ವೇಷು ದಾರೇಷು ಚಪಲಂ ಚಲಿತೇಂದ್ರಿಯಮ್ ॥ ೮

ರಾವಣನಿಗೆ ಉತ್ತರ ಕೊಟ್ಟಳು: ''ರಾವಣ, ಈ ದುರ್ಬುದ್ಧಿಯನ್ನು ಬಿಡು. ನಿನ್ನವರಲ್ಲಿ ಈ ಸ್ನೇಹವನ್ನು ತೋರಿಸು. ಪಾಪಿಯು ಮುಕ್ತಿಯನ್ನು ಬಯಸುವುದೂ ಒಂದೇ, ನೀನು ನನ್ನನ್ನು ಬಯಸುವುದೂ ಒಂದೇ. ಪತಿಯನ್ನೇ ನಂಬಿರುವ ನಾನು ಇಂತಹ ಹೀನಕೃತ್ಯಕ್ಕೆ ಎಂದಿಗೂ ಮನಸ್ಸು ಕೊಡಲಾರೆ (೩–೪). ಉತ್ತಮ ಕುಲದಲ್ಲಿ ಹುಟ್ಟಿ ಉತ್ತಮ ಕುಲವನ್ನು ಸೇರಿದವಳು ನಾನು'' ಎಂದು ಹೇಳಿ ಮತ್ತೆ ಕೆಲವು ಧಿಕ್ಕಾರದ ಮಾತುಗಳನ್ನಾಡಿದಳು: ''ನಾನು ಪರಸ್ತ್ರೀಯಾದ್ದರಿಂದ ನಿನಗೆ ಯೋಗ್ಯಳಲ್ಲ (೫–೬). ಧರ್ಮವನ್ನು ಪರಿಪಾಲಿಸು. ಒಳ್ಳೆಯ ದಾರಿಯಲ್ಲಿ ನಡೆ. ರಾಕ್ಷಸ! ನಿನ್ನ ಹೆಂಡತಿಯರ ಮರ್ಯಾದೆಯನ್ನು ನೀನು ಕಾಪಾಡುವಂತೆ, ಪರಸ್ತ್ರೀಯರ ಮರ್ಯಾದೆಯನ್ನೂ ನೀನು ಕಾಪಾಡಬೇಡವೆ? ನಿನ್ನಂತೆಯೇ ಇತರರೆಂದು ತಿಳಿದು ನಿನ್ನ ಪತ್ನಿಯರಲ್ಲಿ ನೀನು ಸ್ನೇಹದಿಂದಿರು. ಇಂದ್ರಿಯಚಾಪಲ್ಯದಿಂದ ಪರಸ್ತ್ರೀಯರನ್ನು ಕೆಣಕುವ ಬುದ್ಧಿಹೀನನಿಗೆ ಕೇಡು

ನಯಂತಿ ನಿಕೃತಿಪ್ರಜ್ಞಂ ಪರದಾರಾಃ ಪರಾಭವಮ್ ।
ಇಹ ಸಂತೋ ನ ವಾ ಸಂತಿ ಸತೋ ವಾ ನಾನುವರ್ತಸೇ ॥ ೯

ತಥಾ ಹಿ ವಿಪರೀತಾ ತೇ ಬುದ್ಧಿರಾಚಾರವರ್ಜಿತಾ ।
ವಚೋ ಮಿಥ್ಯಾಪ್ರಣೀತಾತ್ಮಾ ಪಥ್ಯಮುಕ್ತಂ ವಿಚಕ್ಷಣೈಃ ॥ ೧೦

ರಾಕ್ಷಸಾನಾಮಭಾವಾಯ ತ್ವಂ ವಾ ನ ಪ್ರತಿಪದ್ಯಸೇ ।
ಅಕೃತಾತ್ಮಾನಮಾಸಾದ್ಯ ರಾಜಾನಮನಯೇ ರತಮ್ ॥ ೧೧

ಸಮೃದ್ಧಾನಿ ವಿನಶ್ಯಂತಿ ರಾಷ್ಟ್ರಾಣಿ ನಗರಾಣಿ ಚ ।
ತಥೇಯಂ ತ್ವಾಂ ಸಮಾಸಾದ್ಯ ಲಂಕಾ ರತ್ನೌಘಸಂಕುಲಾ ॥ ೧೨

ಅಪರಾಧಾತ್ತ್ವೈಕಸ್ಯ ನ ಚಿರಾದ್ವಿನಶಿಷ್ಯತಿ ।
ಸ್ವಕೃತೈರ್ಹನ್ಯಮಾನಸ್ಯ ರಾವಣಾದೀರ್ಘದರ್ಶಿನಃ ॥ ೧೩

ಅಭಿನಂದಂತಿ ಭೂತಾನಿ ವಿನಾಶೇ ಪಾಪಕರ್ಮಣಃ ।
ಏವಂ ತ್ವಾಂ ಪಾಪಕರ್ಮಾಣಂ ವಕ್ಷ್ಯಂತಿ ನಿಕೃತಾ ಜನಾಃ ॥ ೧೪

ತಪ್ಪಿದ್ದಲ್ಲ. ಇಲ್ಲಿ ನಿನಗೆ ಬುದ್ಧಿವಾದವನ್ನು ಹೇಳತಕ್ಕ ಸಜ್ಜನರು ಯಾರೂ ಇಲ್ಲವೊ? ಇದ್ದರೂ ಅವರ ಮಾತನ್ನು ನೀನು ಕೇಳುವುದಿಲ್ಲವೊ? (೭–೯). ಸದಾಚಾರವನ್ನು ತೊರೆದು, ನಿನ್ನ ಬುದ್ಧಿಯು ದುರ್ಮಾರ್ಗದಲ್ಲಿ ಹೋಗುತ್ತಿದೆಯಲ್ಲ. ಸಜ್ಜನರು ಹೇಳುವ ಪಥ್ಯವಾದ ಮಾತನ್ನು ತಳ್ಳಿಹಾಕಿ, ಈ ರಾಕ್ಷಸರೆಲ್ಲರ ವಿನಾಶಕ್ಕೆ ಕಾರಣನಾಗುತ್ತಿರುವೆಯೋ ಹೇಗೆ? ರಾಜನು ದುರ್ಮಾರ್ಗದಲ್ಲಿ ನಿರತನಾದರೆ, ರಾಜ್ಯಗಳು ಎಷ್ಟು ಸಮೃದ್ಧವಾಗಿದ್ದರೂ ನಾಶಹೊಂದುತ್ತವೆ. ನಿನ್ನೊಬ್ಬನ ತಪ್ಪಿನಿಂದ ಈ ಲಂಕಾನಗರವೇ ನಾಶವಾದೀತು (೧೦–೧೨). ರಾವಣ, ತನ್ನ ತಪ್ಪಿನಿಂದಲೇ ಹಾಳಾಗುವವನನ್ನು ನೋಡಿ ಸಮಸ್ತರೂ ಸಂತೋಷಪಡುತ್ತಾರೆ. ಅಂತಹ ಪಾಪಿಗಾಗಿ ಯಾರೂ ಪಶ್ಚಾತ್ತಾಪಪಡುವುದಿಲ್ಲ. ನಿನ್ನಿಂದ ಪೀಡಿತರಾದ ಜನರು ನಿನಗೆ ಕಷ್ಟ ಬಂದಾಗ 'ಈ ಕ್ರೂರಿಗೆ ಸರಿಯಾದ ವಿಪತ್ತು ಬಂದಿದೆ. ಒಳ್ಳೆಯದೇ ಆಯಿತು!' ಎಂದುಕೊಳ್ಳುತ್ತಾರೆ. ನಿನ್ನ ಐಶ್ವರ್ಯಕ್ಕೆ ನಾನು

ದಿಷ್ಟ್ಯೈತದ್ವ್ಯಸನಂ ಪ್ರಾಪ್ತೋ ರೌದ್ರ ಇತ್ಯೇವ ಹರ್ಷಿತಾಃ ।
ಶಕ್ಯಾ ಲೋಭಯಿತುಂ ನಾಹಮೈಶ್ವರ್ಯೇಣ ಧನೇನ ವಾ ॥ ೧೪

ಅನನ್ಯಾ ರಾಘವೇಣಾಹಂ ಭಾಸ್ಕರೇಣ ಪ್ರಭಾ ಯಥಾ ।
ಉಪಧಾಯ ಭುಜಂ ತಸ್ಯ ಲೋಕನಾಥಸ್ಯ ಸತ್ಕೃತಮ್ ॥ ೧೬

ಕಥಂ ನಾಮೋಪಧಾಸ್ಯಾಮಿ ಭುಜಮನ್ಯಸ್ಯ ಕಸ್ಯಚಿತ್ ।
ಅಹಮೌಪಯಿಕೀ ಭಾರ್ಯಾ ತಸ್ಯೈವ ವಸುಧಾಪತೇಃ ॥ ೧೭

ವ್ರತಸ್ನಾತಸ್ಯ ವಿಪ್ರಸ್ಯ ವಿದ್ಯೇವ ವಿದಿತಾತ್ಮನಃ ।
ಸಾಧು ರಾವಣ ರಾಮೇಣ ಮಾಂ ಸಮಾನಯ ದುಃಖಿತಾಮ್॥ ೧೮

ವನೇ ವಾಸಿತಯಾ ಸಾರ್ಧಂ ಕರೇಣ್ವೇವ ಗಜಾಧಿಪಮ್ ।
ಮಿತ್ರಮೌಪಯಿಕಂ ಕರ್ತುಂ ರಾಮಃ ಸ್ಥಾನಂ ಪರೀಪ್ಸತಾ ॥ ೧೯

ವಧಂ ಚಾನಿಚ್ಛತಾ ಘೋರಂ ತ್ವಯಾಸೌ ಪುರುಷರ್ಷಭಃ ।
ವಿದಿತಃ ಸ ಹಿ ಧರ್ಮಜ್ಞಃ ಶರಣಾಗತವತ್ಸಲಃ ॥ ೨೦

ಮರುಳಾಗತಕ್ಕವಳಲ್ಲ (೧೩–೧೪). ಸೂರ್ಯನಿಂದ ಅವನ ಪ್ರಭೆಯನ್ನು ಬೇರ್ಪಡಿಸಲು ಶಕ್ಯವೆ? ಹಾಗೆ ರಾಘವನಿಂದ ನನ್ನನ್ನು ಬೇರ್ಪಡಿಸಲು ಶಕ್ಯವಿಲ್ಲ. ಲೋಕನಾಥನಾದ ಶ್ರೀರಾಮಚಂದ್ರನ ಭುಜದಮೇಲೆ ತಲೆಯಿಟ್ಟು ಮಲಗುತ್ತಿದ್ದ ನಾನು, ಕ್ಷುದ್ರನಾದ ಇನ್ನೊಬ್ಬನ ಭುಜವನ್ನು ಎಂದಿಗಾದರೂ ಆಶ್ರಯಿಸು ತ್ತೇನೆಯೇ? (೧೬–೧೭). ವಿದ್ಯಾಭ್ಯಾಸ ಮಾಡಿ ಸ್ನಾತಕನಾದ ವಿದ್ವಾಂಸನಿಗೆ ವಿದ್ಯೆ ಇರುವಂತೆ, ನಾನು ಶ್ರೀರಾಮನಿಗೆ ಧರ್ಮಪತ್ನಿಯಾಗಿದ್ದೇನೆ. ರಾವಣ, ನಾನು ಬಹಳ ದುಃಖಿತೆಯಾಗಿದ್ದೇನೆ. ಹೆಣ್ಣಾನೆಯನ್ನು ಗಂಡಾನೆಯ ಬಳಿಗೆ ಸೇರಿಸುವಂತೆ ನನ್ನನ್ನು ಶ್ರೀರಾಮನ ಸಂಗಡ ಸೇರಿಸಿಬಿಡು (೧೮). ಲಂಕೆಯನ್ನು ಪಾಲಿಸಬೇಕೆಂದೂ ಇನ್ನೂ ಕೆಲವು ಕಾಲ ಜೀವಿಸಿರಬೇಕೆಂದೂ ನಿನಗೆ ಇಚ್ಛೆ ಇದ್ದರೆ, ನೀನು ಶ್ರೀರಾಮನೊಡನೆ ಮೈತ್ರಿಯನ್ನು ಬೆಳೆಸು. ಅವನು ಧರ್ಮಜ್ಞ, ಶರಣಾಗತರನ್ನು

ತೇನ ಮೈತ್ರೀ ಭವತು ತೇ ಯದಿ ಜೀವಿತುಮಿಚ್ಛಸಿ ।
ಪ್ರಸಾದಯಸ್ವ ತ್ವಂ ಚೈನಂ ಶರಣಾಗತವತ್ಸಲಮ್ ॥ ೨೧

ಮಾಂ ಚಾಸ್ಮೈ ಪ್ರಯತೋ ಭೂತ್ವಾ ನಿರ್ಯಾತಯಿತುಮರ್ಹಸಿ ।
ಏವಂ ಹಿ ತೇ ಭವೇತ್ ಸ್ವಸ್ತಿ ಸಂಪ್ರದಾಯ ರಘೂತ್ತಮೇ ॥ ೨೨

ಅನ್ಯಥಾ ತ್ವಂ ಹಿ ಕುರ್ವಾಣೋ ವಧಂ ಪ್ರಾಪ್ಸ್ಯಸಿ ರಾವಣ ।
ವರ್ಜಯೇದ್ವಜ್ರಮುತ್ಸೃಷ್ಟಂ ವರ್ಜಯೇದಂತಕಶ್ಚಿರಮ್ ॥ ೨೩

ತ್ವದ್ವಿಧಂ ತು ನ ಸಂಕ್ರುದ್ಧೋ ಲೋಕನಾಥಃ ಸ ರಾಘವಃ ।
ರಾಮಸ್ಯ ಧನುಷಃ ಶಬ್ದಂ ಶ್ರೋಷ್ಯಸಿ ತ್ವಂ ಮಹಾಸ್ವನಮ್ ॥ ೨೪

ಶತಕ್ರತುವಿಸೃಷ್ಟಸ್ಯ ನಿರ್ಘೋಷಮಶನೇರಿವ ।
ಇಹಂ ಶೀಘ್ರಂ ಸುಪರ್ವಾಣೋ ಜ್ವಲಿತಾಸ್ಯಾ ಇವೋರಗಾಃ ॥ ೨೫

ಇಷವೋ ನಿಪತಿಷ್ಯಂತಿ ರಾಮಲಕ್ಷ್ಮಣಲಕ್ಷಣಾಃ ।
ರಕ್ಷಾಂಸಿ ಪರಿನಿಘ್ನಂತಃ ಪುರ್ಯಾಮಸ್ಯಾಂ ಸಮಂತತಃ ॥ ೨೬

ಅಸಂಪಾತಂ ಕರಿಷ್ಯಂತಿ ಪತಂತಃ ಕಂಕವಾಸಸಃ ।
ರಾಕ್ಷಸೇಂದ್ರ ಮಹಾಸರ್ಪಾನ್ ಸ ರಾಮಗರುಡೋ ಮಹಾನ್ ॥ ೨೭

ಕೈಬಿಡುವುದಿಲ್ಲ (೧೯–೨೦). ಬದುಕುವ ಬಯಕೆಯಿದ್ದರೆ, ರಾಘವನೊಡನೆ ಸ್ನೇಹವನ್ನು ಬೆಳೆಸು. ನನ್ನನ್ನು ಶ್ರೀರಾಮನಿಗೆ ಒಪ್ಪಿಸಿ ಅವನ ಕ್ಷಮೆಯನ್ನು ಕೇಳು. ಇದರಿಂದ ನಿನಗೆ ಶ್ರೇಯಸ್ಸು ಉಂಟು. ಇಲ್ಲದಿದ್ದರೆ ನಿನ್ನ ವಧೆಯಾಗುವುದು ನಿಶ್ಚಯ. ಒಂದು ವೇಳೆ ವಜ್ರಾಯುಧದಿಂದಲಾದರೂ ನೀನು ತಪ್ಪಿಸಿಕೊಳ್ಳಬಹುದು. ಯಮನಿಂದಲೂ ತಪ್ಪಿಸಿಕೊಳ್ಳಬಹುದು (೨೧–೨೩). ಶ್ರೀರಾಮನು ಕ್ರುದ್ಧನಾದರೆ ಮಾತ್ರ ನಿನ್ನನ್ನು ಎಂದಿಗೂ ಉಳಿಸುವುದಿಲ್ಲ. ದೇವೇಂದ್ರನ ವಜ್ರಾಯುಧದ ಘೋಷದಂತೆ ಕಠೋರವಾದ, ಶ್ರೀರಾಮನ ಧನುಷ್ಟಂಕಾರವನ್ನು ಸದ್ಯದಲ್ಲಿಯೇ ನೀನು ಕೇಳಬೇಕಾದೀತು. ರಾಮಲಕ್ಷ್ಮಣ ನಾಮಾಂಕಿತಗಳಾದ ಘೋರಬಾಣಗಳು ಸರ್ಪಗಳಂತೆ ಬೆಂಕಿಯನ್ನುಗುಳುತ್ತ ರಾಕ್ಷಸರನ್ನು ಧ್ವಂಸಮಾಡುತ್ತ ಈ ಪಟ್ಟಣದೊಳಗೆ ನುಗ್ಗಿಬರುತ್ತವೆ. ಶ್ರೀರಾಮನೆಂಬ ಗುರುತ್ಮಂತನು ರಾಕ್ಷಸರೆಂಬ

ಉದ್ಧರಿಷ್ಯತಿ ವೇಗೇನ ವೈನತೇಯ ಇವೋರಗಾನ್ ।
ಅಪನೇಷ್ಯತಿ ಮಾಂ ಭರ್ತಾ ತ್ವತ್ತಃ ಶೀಘ್ರಮರಿಂದಮಃ ॥ ೨೮

ಅಸುರೇಭ್ಯಃ ಶ್ರಿಯಂ ದೀಪ್ತಾಂ ವಿಷ್ಣುಸ್ತ್ರಿಭಿರಿವ ಕ್ರಮೈಃ ।
ಜನಸ್ಥಾನೇ ಹತಸ್ಥಾನೇ ನಿಹತೇ ರಕ್ಷಸಾಂ ಬಲೇ ॥ ೨೯

ಅಶಕ್ತೇನ ತ್ವಯಾ ರಕ್ಷಃ ಕೃತಮೇತದಸಾಧು ವೈ ।
ಆಶ್ರಮಂ ತು ತಯೋಃ ಶೂನ್ಯಂ ಪ್ರವಿಶ್ಯ ನರಸಿಂಹಯೋಃ ॥ ೩೦

ಗೋಚರಂ ಗತಯೋರ್ಭ್ರಾತ್ರೋರಪನೀತಾ ತ್ವಯಾಧಮ ।
ನ ಹಿ ಗಂಧಮುಪಾಘ್ರಾಯ ರಾಮಲಕ್ಷ್ಮಣಯೋಸ್ತ್ವಯಾ ॥ ೩೧

ಶಕ್ಯಂ ಸಂದರ್ಶನೇ ಸ್ಥಾತುಂ ಶುನಾ ಶಾರ್ದೂಲಯೋರಿವ ।
ತಸ್ಯ ತೇ ವಿಗ್ರಹೇ ತಾಭ್ಯಾಂ ಯುಗಗ್ರಹಣಮಸ್ಥಿರಮ್ ॥ ೩೨

ವೃತ್ರಸ್ಯೇವೇಂದ್ರಬಾಹುಭ್ಯಾಂ ಬಾಹೋರೇಕಸ್ಯ ನಿಗ್ರಹಃ ।
ಕ್ಷಿಪ್ರಂ ತವ ಸ ನಾಥೋ ಮೇ ರಾಮಃ ಸೌಮಿತ್ರಿಣಾ ಸಹ ॥ ೩೩

ತೋಯಮಲ್ಪಮಿವಾದಿತ್ಯಃ ಪ್ರಾಣಾನಾದಾಸ್ಯತೇ ಶರೈಃ ॥

ಸರ್ಪಗಳನ್ನು ಎಳೆದೆಳೆದು ಕೊಂದುಹಾಕುವನು. ಶತ್ರುಗಳನ್ನು ಧ್ವಂಸಮಾಡಿ ನನ್ನ ಗಂಡನು ನನ್ನನ್ನು ಬಿಡಿಸಿಕೊಂಡು ಹೋಗುತ್ತಾನೆ (೨೪–೨೮). ತ್ರಿವಿಕ್ರಮನು ಮೂರು ಹೆಜ್ಜೆಗಳಲ್ಲಿ ರಾಕ್ಷಸರ ವಶವಾಗಿದ್ದ ರಾಜ್ಯಲಕ್ಷ್ಮಿಯನ್ನು ಬಿಡಿಸಿದಂತೆ, ನನ್ನನ್ನು ಸುಲಭವಾಗಿ ಬಿಡಿಸಿಕೊಳ್ಳುತ್ತಾನೆ. ಜನಸ್ಥಾನದಲ್ಲಿ ರಾಕ್ಷಸರೆಲ್ಲರೂ ನಿರ್ನಾಮವಾಗಲು, ಕೈಲಾಗದ ನೀನು ಕಳ್ಳತನದಿಂದ ಈ ಅಕಾರ್ಯವನ್ನು ಮಾಡಿದ್ದೀಯೆ. ಅಧಮ! ಪುರುಷಸಿಂಹರಾದ ಆ ಇಬ್ಬರು ಅಣ್ಣತಮ್ಮಂದಿರೂ ವನಪ್ರದೇಶಕ್ಕೆ ಹೋಗಿರುವಾಗ ನನ್ನನ್ನು ಕದ್ದುತಂದೆಯಲ್ಲವೆ? (೨೯–೩೧). ಆಶ್ರಮದಲ್ಲಿ ರಾಮಲಕ್ಷ್ಮಣರ ಸುಳಿವು ಇದ್ದಿದ್ದರೆ ನೀನು ಬರುತ್ತಿದ್ದೆಯಾ? ಹುಲಿಗಳ ವಾಸನೆ ಇದ್ದಲ್ಲಿಗೆ ನಾಯಿ ಬಂದೀತೆ? ಅವರು ಕಂಡಿದ್ದರೆ ನಿನ್ನ ಎರಡು ಕೈಗಳು

ಗಿರಿಂ ಕುಬೇರಸ್ಯ ಗತೋಽಥವಾಲಯಂ
ಸಭಾಂ ಗತೋ ವಾ ವರುಣಸ್ಯ ರಾಜ್ಞಃ ।
ಅಸಂಶಯಂ ದಾಶರಥೇರ್ನ ಮೋಕ್ಷ್ಯಸೇ
ಮಹಾದ್ರುಮಃ ಕಾಲಹತೋಽಶನೇರಿವ ॥ ೩೪

ಇತಿ ಶ್ರೀಮದ್ರಾಮಾಯಣೇ ಸುಂದರಕಾಂಡೇ ಏಕವಿಂಶಃ ಸರ್ಗಃ

ಉಳಿಯುತ್ತಿದ್ದವೆ? ಇಂದ್ರನು ವೃತ್ರಾಸುರನ ಒಂದು ಕೈಯನ್ನು ಕತ್ತರಿಸಿದಂತೆ ನಿನ್ನ ಕೈಯನ್ನು ಕತ್ತರಿಸಿ ಹಾಕುತ್ತಿದ್ದರು. ಸ್ವಲ್ಪ ದಿನಗಳಲ್ಲಿಯೇ ನನ್ನ ಪತಿಯು ಲಕ್ಷ್ಮಣನೊಡನೆ ಬಂದು, ಸೂರ್ಯನು ತನ್ನ ಕಿರಣಗಳಿಂದ ನೀರನ್ನು ಹೀರುವಂತೆ, ತನ್ನ ಬಾಣಗಳಿಂದ ನಿನ್ನ ಪ್ರಾಣವನ್ನು ಹೀರಿಬಿಡುತ್ತಾನೆ (೩೨–೩೩). ನೀನು ಕುಬೇರನ ಕೈಲಾಸಕ್ಕೆ ಓಡಿಹೋದರೂ ವರುಣನ ಪಾತಾಳಲೋಕಕ್ಕೆ ಹೋದರೂ ರಾಮಬಾಣಗಳಿಂದ ತಪ್ಪಿಸಿಕೊಳ್ಳಲಾರೆ. ಆಯುಸ್ಸು ತೀರಿದ ಮರವು ಸಿಡಿಲಿನ ಹೊಡೆತಕ್ಕೆ ಸಿಕ್ಕಿದ ಮೇಲೆ ಉಳಿದೀತೆ?'' ಎಂದಳು (೩೪).

ಇಲ್ಲಿಗೆ ಶ್ರೀಮದ್ರಾಮಾಯಣದ ಸುಂದರಕಾಂಡದಲ್ಲಿ ಇಪ್ಪತ್ತೊಂದನೆಯ ಸರ್ಗ

ದ್ವಾವಿಂಶಃ ಸರ್ಗಃ

ಮಾಸದ್ವಯಾವಧಿಕರಣಮ್

ಸೀತಾಯಾ ವಚನಂ ಶ್ರುತ್ವಾ ಪರುಷಂ ರಾಕ್ಷಸಾಧಿಪಃ ।
ಪ್ರತ್ಯುವಾಚ ತತಃ ಸೀತಾಂ ವಿಪ್ರಿಯಂ ಪ್ರಿಯದರ್ಶನಾಮ್ ॥ ೧

ಯಥಾ ಯಥಾ ಸಾಂತ್ವಯಿತಾ ವಶ್ಯಃ ಸ್ತ್ರೀಣಾಂ ತಥಾ ತಥಾ ।
ಯಥಾ ಯಥಾ ಪ್ರಿಯಂ ವಕ್ತಾ ಪರಿಭೂತಸ್ತಥಾ ತಥಾ ॥ ೨

ಸಂನಿಯಚ್ಛತಿ ಮೇ ಕ್ರೋಧಂ ತ್ವಯಿ ಕಾಮಃ ಸಮುತ್ಥಿತಃ ।
ದ್ರವತೋಽಮಾರ್ಗಮಾಸಾದ್ಯ ಹಯಾನಿವ ಸುಸಾರಥಿಃ ॥ ೩

ವಾಮಃ ಕಾಮೋ ಮನುಷ್ಯಾಣಾಂ ಯಸ್ಮಿನ್ ಕಿಲ ನಿಬಧ್ಯತೇ ।
ಜನೇ ತಸ್ಮಿಂಸ್ತ್ವನುಕ್ರೋಶಃ ಸ್ನೇಹಶ್ಚ ಕಿಲ ಜಾಯತೇ ॥ ೪

ಸರ್ಗ ೨೨

ಸೀತೆಯ ಮಾತಿನಿಂದ ರಾವಣನು ಕ್ರುದ್ಧನಾಗಿ, ಅವಳಿಗೆ ಎರಡು ತಿಂಗಳ ಅವಧಿಯನ್ನು ಕೊಟ್ಟು ಎಚ್ಚರಿಕೆ ಹೇಳುವುದು. ಅವಳನ್ನು ಹಾದಿಗೆ ತರಬೇಕೆಂದು ರಾಕ್ಷಸಸ್ತ್ರೀಯರಿಗೆ ಆಜ್ಞಾಪಿಸಿ ಅಂತಃಪುರಕ್ಕೆ ಹಿಂದಿರುಗುವುದು.

ಸೀತೆಯು ಆಡಿದ ಈ ಕ್ರೂರವಾದ ಮಾತನ್ನು ಕೇಳಿ ರಾಕ್ಷಸೇಶ್ವರನು ಹೀಗೆಂದನು : ''ಸೀತೆ, ಲೋಕದಲ್ಲಿ ಪುರುಷನು ಸ್ತ್ರೀಯರಿಗೆ ಪ್ರಿಯವಾದ ಮಾತನ್ನು ಹೇಳಿದರೆ, ಅವರು ಪುರುಷನನ್ನು ಪ್ರೀತಿಸುತ್ತಾರೆ. ನೀನು ಮಾತ್ರ ಪ್ರಿಯವಾದ ಮಾತನ್ನು ನಾನು ಹೇಳಿದಷ್ಟೂ ನನ್ನನ್ನು ತಿರಸ್ಕರಿಸುತ್ತಿದ್ದೀಯೆ (೧–೨). ದಾರಿತಪ್ಪಿ ಹೋಗುವ ಕುದುರೆಗಳನ್ನು ಸಾರಥಿಯು ಬಿಗಿಹಿಡಿಯುವಂತೆ, ನನಗೆ ನಿನ್ನಲ್ಲಿರುವ ಕಾಮವು ಉಕ್ಕುತ್ತಿರುವ ನನ್ನ ಕೋಪವನ್ನು ತಡೆಯುತ್ತಿದೆ. ಜನರಿಗೆ ಕಾಮ ಎನ್ನುವುದು ವಿಚಿತ್ರವಾದ ವಕ್ರಸ್ವಭಾವ. ಯಾರ ವಿಷಯದಲ್ಲಿ ಕಾಮವಿರುತ್ತದೆಯೊ, ಅವರ ವಿಷಯದಲ್ಲಿ ದಯೆಯೂ

ಏತಸ್ಮಾತ್ ಕಾರಣಾನ್ನ ತ್ವಾಂ ಘಾತಯಾಮಿ ವರಾನನೇ ।
ವಧಾರ್ಹಾಮವಮಾನಾರ್ಹಾಂ ಮಿಥ್ಯಾಪ್ರವ್ರಜಿತೇ ರತಾಮ್ ॥ ೫

ಪರುಷಾಣೀಹ ವಾಕ್ಯಾನಿ ಯಾನಿ ಯಾನಿ ಬ್ರವೀಷಿ ಮಾಮ್ ।
ತೇಷು ತೇಷು ವಧೋ ಯುಕ್ತಸ್ತವ ಮೈಥಿಲಿ ದಾರುಣಃ ॥ ೬

ಏವಮುಕ್ತ್ವಾ ತು ವೈದೇಹೀಂ ರಾವಣೋ ರಾಕ್ಷಸಾಧಿಪಃ ।
ಕ್ರೋಧಸಂರಂಭಸಂಯುಕ್ತಃ ಸೀತಾಮುತ್ತರಮಬ್ರವೀತ್ ॥ ೭

ದ್ವೌ ಮಾಸೌ ರಕ್ಷಿತವ್ಯೌ ಮೇ ಯೋಽವಧಿಸ್ತೇ ಮಯಾ ಕೃತಃ ।
ತತಃ ಶಯನಮಾರೋಹ ಮಮ ತ್ವಂ ವರವರ್ಣಿನಿ ॥ ೮

ದ್ವಾಭ್ಯಾಮೂರ್ಧ್ವಂ ತು ಮಾಸಾಭ್ಯಾಂ ಭರ್ತಾರಂ ಮಾಮನಿಚ್ಛತೀಮ್
ಮಮ ತ್ವಾಂ ಪ್ರಾತರಾಶಾರ್ಥಮಾಲಭಂತೇ ಮಹಾನಸೇ ॥ ೯

ತಾಂ ತರ್ಜ್ಯಮಾನಾಂ ಸಂಪ್ರೇಕ್ಷ್ಯ ರಾಕ್ಷಸೇಂದ್ರೇಣ ಜಾನಕೀಮ್ ।
ದೇವಗಂಧರ್ವಕನ್ಯಾಸ್ತಾ ವಿಷೇದುರ್ವಿಪುಲೇಕ್ಷಣಾಃ ॥ ೧೦

ಸ್ನೇಹವೂ ಹುಟ್ಟಿಬಿಡುತ್ತವೆ (೩–೪). ಆದ್ದರಿಂದ, ಸುಂದರಿ, ನಿನ್ನನ್ನು ಈಗ ಕೊಲ್ಲದೆ ಬಿಟ್ಟಿದ್ದೇನೆ. ನೀನು ವಧಾರ್ಹಳು. ನಿನ್ನ ಮಾನಭಂಗ ಮಾಡಿದರೂ ತಪ್ಪಲ್ಲ. ಜನರನ್ನು ಮರಳುಮಾಡುವುದಕ್ಕಾಗಿ ಮುನಿವೇಷವನ್ನು ಧರಿಸಿದ ಕಪಟಿಯಲ್ಲಿ ಅನುರಕ್ತಳಾಗಿದ್ದೀಯೆ. ನೀನಾಡಿದ ಒಂದೊಂದು ಮಾತಿಗೂ ಚಿತ್ರಹಿಂಸೆ ಮಾಡಿ ನಿನ್ನನ್ನು ವಧಿಸಬೇಕಾಗಿತ್ತು" (೫–೬). ಹೀಗೆ ಹೇಳಿ ರಾವಣನು ಕ್ರೋಧದಿಂದ ಸೀತೆಯನ್ನು ದುರದುರನೆ ನೋಡುತ್ತ — "ನಾನು ಕೊಟ್ಟಿದ್ದ ಒಂದು ವರ್ಷದ ಅವಧಿಯಲ್ಲಿ ಇನ್ನು ಎರಡು ತಿಂಗಳು ಮಾತ್ರ ಉಳಿದಿವೆ. ಅಷ್ಟರಲ್ಲಿ ನೀನು ನನ್ನ ಹಾಸಿಗೆಯನ್ನು ಏರಲೇಬೇಕು. ಎರಡು ತಿಂಗಳ ಮೇಲೂ ನನ್ನನ್ನು ಗಂಡನೆಂದು ಒಪ್ಪದಿದ್ದರೆ, ಅಡಿಗೆ ಮನೆಯಲ್ಲಿ ಬೆಳಗಿನ ಊಟವನ್ನು ಸಿದ್ಧಪಡಿಸುವುದಕ್ಕಾಗಿ ನಿನ್ನನ್ನು ಕತ್ತರಿಸಿಹಾಕುತ್ತಾರೆ ಎಂದನು (೭–೯). ಹೀಗೆ ರಾವಣನು ಜಾನಕಿಯನ್ನು ಹೆದರಿಸುತ್ತಿರಲು, ಅವನೊಡನೆ ಬಂದಿದ್ದ ದೇವಗಂಧರ್ವ ಕನ್ನಿಕೆಯರಿಗೆ ಬಹಳ ವಿಷಾದವಾಯಿತು. ಅವರು ತುಟಿ, ಮುಖ, ಕಣ್ಣುಗಳಿಂದ ಸಂಜ್ಞೆಮಾಡಿ ಸೀತೆ

ಓಷ್ಠಪ್ರಕಾರೈರಪರಾ ವಕ್ತ್ರೈರ್ನೇತ್ರೈಸ್ತಥಾಪರಾಃ ।
ಸೀತಾಮಾಶ್ವಾಸಯಾಮಾಸುಸ್ತರ್ಜಿತಾಂ ತೇನ ರಕ್ಷಸಾ ॥ ೧೧

ತಾಭಿರಾಶ್ವಾಸಿತಾ ಸೀತಾ ರಾವಣಂ ರಾಕ್ಷಸಾಧಿಪಮ್ ।
ಉವಾಚಾತ್ಮಹಿತಂ ವಾಕ್ಯಂ ವೃತ್ತಶೌಂಡೀರ್ಯಗರ್ವಿತಮ್ ॥ ೧೨

ನೂನಂ ನ ತೇ ಜನಃ ಕಶ್ಚಿದಸ್ತಿ ನಿಃಶ್ರೇಯಸೇ ಸ್ಥಿತಃ ।
ನಿವಾರಯತಿ ಯೋ ನ ತ್ವಾಂ ಕರ್ಮಣೋಽಸ್ಮಾದ್ವಿಗರ್ಹಿತಾತ್ ॥ ೧೩

ಮಾಂ ಹಿ ಧರ್ಮಾತ್ಮನಃ ಪತ್ನೀಂ ಶಚೀಮಿವ ಶಚೀಪತೇಃ ।
ತ್ವದನ್ಯಸ್ತ್ರಿಷು ಲೋಕೇಷು ಪ್ರಾರ್ಥಯೇನ್ಮನಸಾಪಿ ಕಃ ॥ ೧೪

ರಾಕ್ಷಸಾಧಮ ರಾಮಸ್ಯ ಭಾರ್ಯಾಮಮಿತತೇಜಸಃ ।
ಉಕ್ತವಾನಸಿ ಯತ್ ಪಾಪಂ ಕ್ವ ಗತಸ್ತಸ್ಯ ಮೋಕ್ಷ್ಯಸೇ ॥ ೧೫

ಯಥಾ ದೃಪ್ತಶ್ಚ ಮಾತಂಗಃ ಶಶಶ್ಚ ಸಹಿತೋ ವನೇ ।
ತಥಾ ದ್ವಿರದವದ್ರಾಮಸ್ತ್ವಂ ನೀಚ ಶಶವತ್ ಸ್ಮೃತಃ ॥ ೧೬

ಯನ್ನು ಸಮಾಧಾನಪಡಿಸುತ್ತಿದ್ದರು (೧೦–೧೧). ಆಗ ಸೀತೆಯು ಧೈರ್ಯ ತಾಳಿ ಪಾತಿವ್ರತ್ಯದ ಬಲವಿದ್ದುದರಿಂದ ರಾವಣನಿಗೆ ದಿಟ್ಟತನದ ಉತ್ತರ ಕೊಟ್ಟಳು: ''ರಾವಣ, ನಿಜವಾಗಿಯೂ ಇಲ್ಲಿ ನಿನ್ನ ಶ್ರೇಯಸ್ಸನ್ನು ಬಯಸಿ ಹಿತೋಪದೇಶ ಮಾಡತಕ್ಕವರು ಇಲ್ಲವೆಂದೇ ತೋರುತ್ತಿದೆ. ಇಂತಹ ಹೀನ ಕೃತ್ಯಕ್ಕೆಳಸಿರುವ ನಿನ್ನನ್ನು ತಡೆಯತಕ್ಕವರೇ ಇಲ್ಲವೇ ? (೧೨–೧೩). ಇಂದ್ರನಿಗೆ ಶಚಿಯಂತೆ, ಧರ್ಮಾತ್ಮನಾದ ರಾಮನಿಗೆ ಪತ್ನಿಯಾದ ನನ್ನನ್ನು ಮನಸ್ಸಿನಲ್ಲಾದರೂ ಬಯಸುವವನು ಈ ಜಗತ್ತಿನಲ್ಲಿ ನಿನ್ನನ್ನು ಬಿಟ್ಟರೆ ಇನ್ನೊಬ್ಬನಿಲ್ಲ. ಅಧಮ! ಮಹಾತೇಜಸ್ವಿಯಾದ ಶ್ರೀರಾಮನ ಪತ್ನಿಗೆ ಇಂತಹ ತುಚ್ಛವಾದ ಮಾತನ್ನಾಡಿದೆಯಾ ? ಎಲ್ಲಿ ಹೋಗಿ ಅವನಿಂದ ತಪ್ಪಿಸಿಕೊಂಡಿಯೆ ? ಶ್ರೀರಾಮನೆಂದರೆ ಮದಿಸಿದ ಒಂದು ಮಹಾಗಜ. ಅವನೆದುರಿಗೆ ನೀನು ಒಂದು ಚಿಕ್ಕ ಮೊಲ! (೧೪–೧೬). ಇಂತಹ ನೀನು ಆ

ಸ ತ್ವಮಿಕ್ಷ್ವಾಕುನಾಥಂ ವೈ ಕ್ಷಿಪನ್ನಿಹ ನ ಲಜ್ಜಸೇ ।
ಚಕ್ಷುಷೋರ್ವಿಷಯಂ ತಸ್ಯ ನ ತಾವದುಪಗಚ್ಛಸಿ ॥ ೧೭

ಇಮೇ ತೇ ನಯನೇ ಕ್ರೂರೇ ವಿರೂಪೇ ಕೃಷ್ಣಪಿಂಗಲೇ ।
ಕ್ಷಿತೌ ನ ಪತಿತೇ ಕಸ್ಮಾನ್ಮಾಮನಾರ್ಯ ನಿರೀಕ್ಷತಃ ॥ ೧೮

ತಸ್ಯ ಧರ್ಮಾತ್ಮನಃ ಪತ್ನೀಂ ಸ್ನುಷಾಂ ದಶರಥಸ್ಯ ಚ ।
ಕಥಂ ವ್ಯಾಹರತೋ ಮಾಂ ತೇ ನ ಜಿಹ್ವಾ ವ್ಯವಶೀರ್ಯತೇ ॥ ೧೯

ಅಸಂದೇಶಾತ್ತು ರಾಮಸ್ಯ ತಪಸಶ್ಚಾನುಪಾಲನಾತ್ ।
ನ ತ್ವಾಂ ಕುರ್ಮಿ ದಶಗ್ರೀವ ಭಸ್ಮ ಭಸ್ಮಾರ್ಹತೇಜಸಾ ॥ ೨೦

ನಾಪಹರ್ತುಮಹಂ ಶಕ್ಯಾ ತಸ್ಯ ರಾಮಸ್ಯ ಧೀಮತಃ ।
ವಿಧಿಸ್ತವ ವಧಾರ್ಥಾಯ ವಿಹಿತೋ ನಾತ್ರ ಸಂಶಯಃ ॥ ೨೧

ಶೂರೇಣ ಧನದಭ್ರಾತ್ರಾ ಬಲೈಃ ಸಮುದಿತೇನ ಚ ।
ಅಪೋಹ್ಯ ರಾಮಂ ಕಸ್ಮಾದ್ಧಿ ದಾರಚೌರ್ಯಂ ತ್ವಯಾ ಕೃತಮ್ ॥ ೨೨

ಇಕ್ಷ್ವಾಕುನಾಥನನ್ನು ನಿಂದಿಸುವುದಕ್ಕೆ ನಾಚಿಕೆಯಾಗುವುದಿಲ್ಲವೆ? ನೀನು ಇನ್ನೂ ಅವನ ಕಣ್ಣಿಗೆ ಬಿದ್ದಿಲ್ಲ. ಅಯೋಗ್ಯ ! ನನ್ನನ್ನು ಹೀಗೆ ದಿಟ್ಟಿಸಿನೋಡುತ್ತಿರುವ ನಿನ್ನ ಈ ವಿಕಾರವಾದ ಕೆಂಗಣ್ಣುಗಳು ಸಿಡಿದುಬಿದ್ದು ಹೋಗಬಾರದೆ ? ಆ ಧರ್ಮಾತ್ಮನ ಪತ್ನಿಯಾಗಿ, ದಶರಥ ಮಹಾರಾಜನಿಗೆ ಸೊಸೆಯಾದ ನನಗೆ ಇಂತಹ ಮಾತನ್ನಾಡುವೆಯಾ? ನಿನ್ನ ನಾಲಿಗೆ ಸೀಳಿಹೋಗಬಾರದೆ ? (೧೭-೧೯). ನನ್ನ ತೇಜಸ್ಸಿನಿಂದಲೇ ನಿನ್ನನ್ನು ಸುಟ್ಟು ಬೂದಿ ಮಾಡಬಲ್ಲೆನು. ಆದರೆ ಶ್ರೀರಾಮನು ಅನುಮತಿ ಕೊಟ್ಟಿಲ್ಲವೆಂದೂ ತಪಃಶಕ್ತಿಯು ವ್ಯರ್ಥವಾಗುವುದೆಂದೂ ನಾನು ಸುಮ್ಮನಿದ್ದೇನೆ. ಧೀಮಂತನಾದ ರಾಮನನ್ನು ವಂಚಿಸಿ ನನ್ನನ್ನು ಅಪಹರಿಸಲು ನಿನಗೆ ಶಕ್ತಿ ಎಲ್ಲಿಂದ ಬಂದೀತು ? ನಿನ್ನ ವಧೆಗೋಸ್ಕರ ದೈವವೇ ಗೊತ್ತುಪಡಿಸಿದ ಒಂದು ಏರ್ಪಾಡು ಇದು. ನಾನು ಕುಬೇರನ ತಮ್ಮನೆಂದೂ ಮಹಾಶೂರನೆಂದೂ ಬೇಕಾದಷ್ಟು ಬಲ ಸಂಪತ್ತಿದೆಯೆಂದೂ ಹೇಳಿಕೊಂಡೆಯಲ್ಲ. ಹಾಗಾದರೆ, ಶ್ರೀರಾಮನನ್ನು

ಸೀತಾಯಾ ವಚನಂ ಶ್ರುತ್ವಾ ರಾವಣೋ ರಾಕ್ಷಸಾಧಿಪಃ ।
ವಿವೃತ್ಯ ನಯನೇ ಕ್ರೂರೇ ಜಾನಕೀಮನ್ವವೈಕ್ಷತ ॥ ೨೩

ನೀಲಜೀಮೂತಸಂಕಾಶೋ ಮಹಾಭುಜಶಿರೋಧರಃ ।
ಸಿಂಹಸತ್ತ್ವಗತಿಃ ಶ್ರೀಮಾನ್ ದೀಪ್ತಜಿಹ್ವಾಗ್ರಲೋಚನಃ ॥ ೨೪

ಚಲಾಗ್ರಮುಕುಟಪ್ರಾಂಶುಶ್ಚಿತ್ರಮಾಲ್ಯಾನುಲೇಪನಃ ।
ರಕ್ತಮಾಲ್ಯಾಂಬರಧರಸ್ತಪ್ತಾಂಗದವಿಭೂಷಣಃ ॥ ೨೫

ಶ್ರೋಣಿಸೂತ್ರೇಣ ಮಹತಾ ಮೇಚಕೇನ ಸುಸಂವೃತಃ ।
ಅಮೃತೋತ್ಪಾದನದ್ಧೇನ ಭುಜಗೇನೇವ ಮಂದರಃ ॥ ೨೬

ದ್ವಾಭ್ಯಾಂ ಸ ಪರಿಪೂರ್ಣಾಭ್ಯಾಂ ಭುಜಾಭ್ಯಾಂ ರಾಕ್ಷಸೇಶ್ವರಃ ।
ಶುಶುಭೇಽಚಲಸಂಕಾಶಃ ಶೃಂಗಾಭ್ಯಾಮಿವ ಮಂದರಃ ॥ ೨೭

ವಂಚಿಸಿ ನನ್ನನ್ನು ಕಳ್ಳತನದಿಂದ ತಂದದ್ದೇಕೆ?'' ಎಂದಳು (೨೦–೨೨). ಈ ಮಾತನ್ನು ಕೇಳಿ ರಾವಣನು ಕ್ರೂರವಾದ ಕಣ್ಣಾಲಿಗಳನ್ನು ತಿರುಗಿಸುತ್ತ ವೈದೇಹಿಯನ್ನು ದುರಗುಟ್ಟಿನೋಡತೊಡಗಿದನು. ಅವನಾದರೋ ಮೇಘದಂತೆ ಕಪ್ಪಾಗಿರುವನು ; ದೀರ್ಘವಾದ ಬಾಹುಗಳು ; ಉಬ್ಬಿದ ಕಂಠ ; ಸಿಂಹದಂತಹ ಪರಾಕ್ರಮ. ಕಣ್ಣು ನಾಲಗೆಗಳು ಉರಿಯುವ ಜ್ವಾಲೆಯಂತಿದ್ದವು. ಅವನ ಕೋಪಾವೇಶದಿಂದ ಕಿರೀಟವು ಚಲಿಸುತ್ತಿತ್ತು. ಚಿತ್ರವರ್ಣದ ಮಾಲೆಗಳನ್ನೂ ರಕ್ತವಸ್ತ್ರವನ್ನೂ ಅವನು ಧರಿಸಿದ್ದನು. ಭುಜಕೀರ್ತಿಗಳು ಹೊಳೆಯುತ್ತಿದ್ದವು (೨೩–೨೫). ಅಮೃತಮಂಥನಕಾಲದಲ್ಲಿ ಮಂದರಪರ್ವತಕ್ಕೆ ಸುತ್ತಿದ ವಾಸುಕಿಯಂತೆ ದೊಡ್ಡದಾದ ಕಪ್ಪನೆಯ ನಡುಪಟ್ಟಿ. ಅವನು ಪುಷ್ಟವಾದ ಎರಡು ಭುಜ*ಗಳನ್ನು ನೀಡಿ ನಿಂತಿರಲು, ಶಿಖರಗಳಿಂದೊಡಗೂಡಿದ ಮಂದರ

---

* ರಾವಣನು ಕಾಮರೂಪಿಯಾದ್ದರಿಂದ ಯುದ್ಧ ಮುಂತಾದ ಸಂಭ್ರಮ ಕಾಲದಲ್ಲಿ ೧೦ ತಲೆಗಳೂ ೨೦ ಭುಜಗಳೂ ಇರುತ್ತಿದ್ದವು. ಉಳಿದ ಕಾಲದಲ್ಲಿ ೧ ತಲೆ ಮತ್ತು ೨ ಭುಜಗಳು.

ತರುಣಾದಿತ್ಯವರ್ಣಾಭ್ಯಾಂ ಕುಂಡಲಾಭ್ಯಾಂ ವಿಭೂಷಿತಃ ।
ರಕ್ತಪಲ್ಲವಪುಷ್ಪಾಭ್ಯಾಮಶೋಕಾಭ್ಯಾಮಿವಾಚಲಃ ॥ ೨೮
ಸ ಕಲ್ಪವೃಕ್ಷಪ್ರತಿಮೋ ವಸಂತ ಇವ ಮೂರ್ತಿಮಾನ್ ।
ಶ್ಮಶಾನಚೈತ್ಯಪ್ರತಿಮೋ ಭೂಷಿತೋಽಪಿ ಭಯಂಕರಃ ॥ ೨೯
ಅವೇಕ್ಷಮಾಣೋ ವೈದೇಹೀಂ ಕೋಪಸಂರಕ್ತಲೋಚನಃ ।
ಉವಾಚ ರಾವಣಃ ಸೀತಾಂ ಭುಜಂಗ ಇವ ನಿಃಶ್ವಸನ್ ॥ ೩೦
ಅನಯೇನಾಭಿಸಂಪನ್ನಮರ್ಥಹೀನಮನುವ್ರತೇ ।
ನಾಶಯಾಮ್ಯಹಮದ್ಯ ತ್ವಾಂ ಸೂರ್ಯಃ ಸಂಧ್ಯಾಮಿವೌಜಸಾ ॥ ೩೧
ಇತ್ಯುಕ್ತ್ವಾ ಮೈಥಿಲೀಂ ರಾಜಾ ರಾವಣಃ ಶತ್ರುರಾವಣಃ ।
ಸಂದಿದೇಶ ತತಃ ಸರ್ವಾ ರಾಕ್ಷಸೀರ್ಘೋರದರ್ಶನಾಃ ॥ ೩೨
ಏಕಾಕ್ಷೀಮೇಕಕರ್ಣಾಂ ಚ ಕರ್ಣಪ್ರಾವರಣಾಂ ತಥಾ ।
ಗೋಕರ್ಣೀಂ ಹಸ್ತಿಕರ್ಣೀಂ ಚ ಲಂಬಕರ್ಣೀಮಕರ್ಣಿಕಾಮ್ ॥ ೩೩
ಹಸ್ತಿಪಾದ್ಯಶ್ವಪಾದ್ಯೌ ಚ ಗೋಪದೀಂ ಪಾದಚೂಲಿಕಾಮ್ ।
ಏಕಾಕ್ಷೀಮೇಕಪಾದೀಂ ಚ ಪೃಥುಪಾದೀಮಪಾದಿಕಾಮ್ ॥ ೩೪

ಪರ್ವತದಂತೆ ಶೋಭಿಸುತ್ತಿದ್ದನು (೨೬–೨೭). ಬಾಲಸೂರ್ಯನಂತೆ ಎಸೆಯುವ ಎರಡು ಕುಂಡಲಗಳನ್ನು ಧರಿಸಿದ್ದನು. ಕಲ್ಪವೃಕ್ಷದಂತೆಯೂ ಸಾಕ್ಷಾತ್ ವಸಂತನಂತೆಯೂ ಅಲಂಕಾರಭೂಷಿತನಾಗಿದ್ದರೂ ಅವನು ಶ್ಮಶಾನದಲ್ಲಿರುವ ಗುಡಿಯಂತೆ ಭಯಂಕರನಾಗಿ ಕಾಣುತ್ತಿದ್ದನು (೨೮–೨೯). ರಾವಣನು ಕೆಂಗಣ್ಣಿನಿಂದ ಸೀತೆಯನ್ನು ನೋಡುತ್ತ ಸರ್ಪದಂತೆ ಬುಸುಗುಟ್ಟುತ್ತ ''ಎಲೆ, ನೀತಿಭ್ರಷ್ಟನಾದ ಆ ದರಿದ್ರನನ್ನು ನಂಬಿರುವೆಯಾ? ಸೂರ್ಯನು ಸಂಧ್ಯಾಕಾಲದ ಕತ್ತಲೆಯನ್ನು ನಾಶಮಾಡುವಂತೆ ನಿನ್ನನ್ನು ಈಗಲೇ ಧ್ವಂಸ ಮಾಡಿಬಿಡುತ್ತೇನೆ'' ಎಂದು ನುಡಿದು ಸುತ್ತಲೂ ಇದ್ದ ಘೋರರಾಕ್ಷಸಿಯರನ್ನು ಕುರಿತು ''ಇತ್ತ ಬನ್ನಿರಿ !'' ಎಂದು ಆಜ್ಞಾಪಿಸಿದನು (೩೦–೩೨). ಅವರಿಗೆ ಒಂದು ಕಣ್ಣು ಒಂದು ಮೂಗು—ಹೀಗೆ ವಿಕಾರವಾದ ದೇಹವಿದ್ದಿತು. ಅವರನ್ನು ಉದ್ದೇಶಿಸಿ, ''ಎಲೈ ರಾಕ್ಷಸಿಯರೆ, ನೀವೆಲ್ಲರೂ ಸೇರಿ ಈ ಸೀತೆಯು ನನ್ನ ವಶಳಾಗುವಂತೆ ಪ್ರಯತ್ನ

ಅತಿಮಾತ್ರಶಿರೋಗ್ರೀವಾಮತಿಮಾತ್ರಕುಚೋದರೀಮ್ ।
ಅತಿಮಾತ್ರಾಸ್ಯನೇತ್ರಾಂ ಚ ದೀರ್ಘಜಿಹ್ವಾಮಜಿಹ್ವಿಕಾಮ್ ॥ ೩೫

ಅನಾಸಿಕಾಂ ಸಿಂಹಮುಖೀಂ ಗೋಮುಖೀಂ ಸೂಕರೀಮುಖೀಮ್ ।
ಯಥಾ ಮದ್ವಶಗಾ ಸೀತಾ ಕ್ಷಿಪ್ರಂ ಭವತಿ ಜಾನಕೀ ॥ ೩೬

ತಥಾ ಕುರುತ ರಾಕ್ಷಸ್ಯಃ ಸರ್ವಾಃ ಕ್ಷಿಪ್ರಂ ಸಮೇತ್ಯ ಚ ।
ಪ್ರತಿಲೋಮಾನುಲೋಮೈಶ್ಚ ಸಾಮದಾನಾದಿಭೇದನೈಃ ॥ ೩೭

ಆವರ್ಜಯತ ವೈದೇಹೀಂ ದಂಡಸ್ಯೋದ್ಯಮನೇನ ಚ ।
ಇತಿ ಪ್ರತಿಸಮಾದಿಶ್ಯ ರಾಕ್ಷಸೇಂದ್ರಃ ಪುನಃ ಪುನಃ ॥ ೩೮

ಕಾಮಮನ್ಯುಪರೀತಾತ್ಮಾ ಜಾನಕೀಂ ಪರ್ಯತರ್ಜಯತ್ ।
ಉಪಗಮ್ಯ ತತಃ ಕ್ಷಿಪ್ರಂ ರಾಕ್ಷಸೀ ಧಾನ್ಯಮಾಲಿನೀ ॥ ೩೯

ಪರಿಷ್ವಜ್ಯ ದಶಗ್ರೀವಮಿದಂ ವಚನಮಬ್ರವೀತ್ ।
ಮಯಾ ಕ್ರೀಡ ಮಹಾರಾಜ ಸೀತಯಾ ಕಿಂ ತವಾನಯಾ ॥ ೪೦

ವಿವರ್ಣಯಾ ಕೃಪಣಯಾ ಮಾನುಷ್ಯಾ ರಾಕ್ಷಸೇಶ್ವರ ।
ನೂನಮಸ್ಯಾ ಮಹಾರಾಜ ನ ದಿವ್ಯಾನ್ ಭೋಗಸತ್ತಮಾನ್ ॥ ೪೧

ವಿದಧಾತ್ಯಮರಶ್ರೇಷ್ಠಸ್ತವ ಬಾಹುಬಲಾರ್ಜಿತಾನ್ ।
ಅಕಾಮಾಂ ಕಾಮಯಾನಸ್ಯ ಶರೀರಮುಪತಪ್ಯತೇ ॥ ೪೨

ಮಾಡಿರಿ (೩೩–೩೬). ಸಾಮ ದಾನ ಭೇದೋಪಾಯಗಳನ್ನು ಉಪಯೋಗಿಸಿರಿ. ದಂಡೋಪಾಯವನ್ನೂ ನೀವು ಕೈಗೊಳ್ಳಬಹುದು'' ಎಂದು ಆಜ್ಞಾಪಿಸಿ, ಕಾಮಕ್ರೋಧಗಳಿಂದ ಆವಿಷ್ಟನಾಗಿ ಜಾನಕಿಯನ್ನು ಹೆದರಿಸುತ್ತಿದ್ದನು (೩೭–೩೮). ಅಷ್ಟರಲ್ಲಿ ಧಾನ್ಯಮಾಲಿನಿ ಎಂಬ ರಾವಣನ ಭಾರ್ಯೆಯೊಬ್ಬಳು ಮುಂದೆ ಬಂದು ರಾವಣನನ್ನು ಅಪ್ಪಿಕೊಂಡು ಹೀಗೆಂದಳು : ''ಮಹಾರಾಜ, ಈ ಸೀತೆಯಿಂದ ಆಗಬೇಕಾದ್ದೇನು ? ನನ್ನೊಡನೆ ಆನಂದದಿಂದಿರು. ಕಂದಿಹೋಗಿರುವ ಕ್ಷುದ್ರಳಾದ ಈ ಮನುಷ್ಯಸ್ತ್ರೀಯಳಲ್ಲಿ ಪ್ರೇಮವೇಕೆ ? ನೀನು ಬಾಹುಬಲದಿಂದ ಸಂಪಾದಿಸಿದ ದಿವ್ಯಭೋಗಗಳನ್ನು ಅನುಭವಿಸುವಂತೆ ಬ್ರಹ್ಮನು ಇವನ ಹಣೆಯಲ್ಲಿ ಬರೆದಿಲ್ಲ

ಇಚ್ಛಂತೀ ಕಾಮಯಾನಸ್ಯ ಪ್ರೀತಿರ್ಭವತಿ ಶೋಭನಾ ।
ಏವಮುಕ್ತಸ್ತು ರಾಕ್ಷಸ್ಯಾ ಸಮುತ್ಕ್ಷಿಪ್ತಸ್ತತೋ ಬಲೀ ॥ ೪೩
ಪ್ರಹಸನ್ ಮೇಘಸಂಕಾಶೋ ರಾಕ್ಷಸಃ ಸ ನ್ಯವರ್ತತ ।
ಪ್ರಸ್ಥಿತಃ ಸ ದಶಗ್ರೀವಃ ಕಂಪಯನ್ನಿವ ಮೇದಿನೀಮ್ ॥ ೪೪
ಜ್ವಲದ್ಭಾಸ್ಕರವರ್ಣಾಭಂ ಪ್ರವಿವೇಶ ನಿವೇಶನಮ್ ।
ದೇವಗಂಧರ್ವಕನ್ಯಾಶ್ಚ ನಾಗಕನ್ಯಾಶ್ಚ ಸರ್ವತಃ ॥ ೪೫
ಪರಿವಾರ್ಯ ದಶಗ್ರೀವಂ ವಿವಿಶುಸ್ತದ್ಗೃಹೋತ್ತಮಮ್ ॥

ಸ ಮೈಥಿಲೀಂ ಧರ್ಮಪರಾಮವಸ್ಥಿತಾಂ
ಪ್ರವೇಪಮಾನಾಂ ಪರಿಭರ್ತ್ಸ್ಯ ರಾವಣಃ ।
ವಿಹಾಯ ಸೀತಾಂ ಮದನೇನ ಮೋಹಿತಃ
ಸ್ವಮೇವ ವೇಶ್ಮ ಪ್ರವಿವೇಶ ಭಾಸ್ವರಮ್ ॥ ೪೬

ಇತಿ ಶ್ರೀಮದ್ರಾಮಾಯಣೇ ಸುಂದರಕಾಂಡೇ ದ್ವಾವಿಂಶಃ ಸರ್ಗಃ

(೩೯–೪೧). ಕಾಮವಿಲ್ಲದವಳನ್ನು ಕಾಮಿಸುವವನಿಗೆ ಶ್ರಮವೇ ಹೊರತು ಸುಖವಿಲ್ಲ. ಕಾಮಿಸಿ ಬಂದವಳನ್ನು ಪ್ರೀತಿಸುವವನಿಗೆ ಬಹಳ ಸುಖವುಂಟು.'' ಹೀಗೆ ನುಡಿದು ಆ ರಾಕ್ಷಸಿಯು ರಾವಣನನ್ನು ತಡೆದು ನಿಲ್ಲಿಸಿದಳು (೪೨–೪೩). ಆಗ ರಾವಣನು ಗಹಗಹಿಸಿ ನಗುತ್ತ, ಭೂಮಿಯು ನಡುಗುವಂತೆ ಹೆಜ್ಜೆಯನ್ನಿಡುತ್ತ ಅಲ್ಲಿಂದ ಹೊರಟು ಸೂರ್ಯಸಂಕಾಶವಾದ ತನ್ನ ಅರಮನೆಯನ್ನು ಪ್ರವೇಶಿಸಿದನು. ದೇವಗಂಧರ್ವಕನ್ಯೆಯರೂ ನಾಗಕನ್ಯೆಯರೂ ಅವನನ್ನು ಹಿಂಬಾಲಿಸಿ ಅರಮನೆಗೆ ಹೋದರು (೪೪–೪೫). ಹೀಗೆ ರಾವಣನು ಧರ್ಮಪರಾಯಣಳಾದ ಸೀತಾದೇವಿಯನ್ನು ಬೆದರಿಸಿ, ವೈಭವೋಪೇತವಾದ ತನ್ನ ಗೃಹಕ್ಕೆ ಕಾಮಮೋಹಿತನಾಗಿಯೇ ಹಿಂದಿರುಗಿ ಬಂದನು (೪೬).

ಇಲ್ಲಿಗೆ ಶ್ರೀಮದ್ರಾಮಾಯಣದ ಸುಂದರಕಾಂಡದಲ್ಲಿ ಇಪ್ಪತ್ತೆರಡನೆಯ ಸರ್ಗ

ತ್ರಯೋವಿಂಶಃ ಸರ್ಗಃ

ರಾಕ್ಷಸೀಪ್ರರೋಚನಮ್

ಇತ್ಯುಕ್ತ್ವಾ ಮೈಥಿಲೀಂ ರಾಜಾ ರಾವಣಃ ಶತ್ರುರಾವಣಃ ।
ಸಂದಿಶ್ಯ ಚ ತತಃ ಸರ್ವಾ ರಾಕ್ಷಸೀರ್ನಿರ್ಜಗಾಮ ಹ ॥ ೧

ನಿಷ್ಕ್ರಾಂತೇ ರಾಕ್ಷಸೇಂದ್ರೇ ತು ಪುನರಂತಃಪುರಂ ಗತೇ ।
ರಾಕ್ಷಸ್ಯೋ ಭೀಮರೂಪಾಸ್ತಾಃ ಸೀತಾಂ ಸಮಭಿದುದ್ರುವುಃ ॥ ೨

ತತಃ ಸೀತಾಮುಪಾಗಮ್ಯ ರಾಕ್ಷಸ್ಯಃ ಕ್ರೋಧಮೂರ್ಚ್ಛಿತಾಃ ।
ಪರಂ ಪರುಷಯಾ ವಾಚಾ ವೈದೇಹೀಮಿದಮಬ್ರುವನ್ ॥ ೩

ಪೌಲಸ್ತ್ಯಸ್ಯ ವರಿಷ್ಠಸ್ಯ ರಾವಣಸ್ಯ ಮಹಾತ್ಮನಃ ।
ದಶಗ್ರೀವಸ್ಯ ಭಾರ್ಯಾತ್ವಂ ಸೀತೇ ನ ಬಹು ಮನ್ಯಸೇ ॥ ೪

ತತಸ್ತ್ವೇಕಜಟಾ ನಾಮ ರಾಕ್ಷಸೀ ವಾಕ್ಯಮಬ್ರವೀತ್ ।
ಆಮಂತ್ರ್ಯ ಕ್ರೋಧತಾಮ್ರಾಕ್ಷೀ ಸೀತಾಂ ಕರತಲೋದರೀಮ್ ॥ ೫

ಸರ್ಗ ೨೩

ರಾವಣನನ್ನು ವರಿಸು ಎಂದು ರಾಕ್ಷಸಿಯರು ಸೀತೆಗೆ ಹೇಳುವುದು.

ರಾವಣನು ಸೀತೆಯನ್ನು ವಶಪಡಿಸಿಕೊಳ್ಳಬೇಕೆಂದು ರಾಕ್ಷಸಿಯರಿಗೆ ಆದೇಶಮಾಡಿ ಹೊರಟುಹೋದನು. ಅವನು ಅತ್ತ ಅಂತಃಪುರವನ್ನು ಪ್ರವೇಶಿಸಲು ಇತ್ತ ರಾಕ್ಷಸಿಯರು ಸೀತಾದೇವಿಯನ್ನು ಸುತ್ತುಗಟ್ಟಿದರು (೧–೨). ಅವರು ಕುಪಿತರಾಗಿ ವೈದೇಹಿಯನ್ನು ಕುರಿತು ''ಸೀತೆ, ಪುಲಸ್ತ್ಯವಂಶ ಶ್ರೇಷ್ಠನೂ ಮಹಾತ್ಮನೂ ಆದ ರಾವಣನಿಗೆ ಭಾರ್ಯೆಯಾಗಲು ನೀನು ಏಕೆ ಒಪ್ಪುವುದಿಲ್ಲ?'' ಎಂದರು (೩–೪). ಆಮೇಲೆ ಏಕಜಟೆ ಎಂಬ ರಾಕ್ಷಸಿಯು ಕೋಪದಿಂದ ಕಣ್ಣನ್ನು ಕೆಂಪಗೆ

ಪ್ರಜಾಪತೀನಾಂ ಷಣ್ಣಾಂ ತು ಚತುರ್ಥೋ ಯಃ ಪ್ರಜಾಪತಿಃ ।
ಮಾನಸೋ ಬ್ರಹ್ಮಣಃ ಪುತ್ರಃ ಪುಲಸ್ತ್ಯ ಇತಿ ವಿಶ್ರುತಃ ॥ ೬

ಪುಲಸ್ತ್ಯಸ್ಯ ತು ತೇಜಸ್ವೀ ಮಹರ್ಷಿರ್ಮಾನಸಃ ಸುತಃ ।
ನಾಮ್ನಾ ಸ ವಿಶ್ರವಾ ನಾಮ ಪ್ರಜಾಪತಿಸಮಪ್ರಭಃ ॥ ೭

ತಸ್ಯ ಪುತ್ರೋ ವಿಶಾಲಾಕ್ಷಿ ರಾವಣಃ ಶತ್ರುರಾವಣಃ ।
ತಸ್ಯ ತ್ವಂ ರಾಕ್ಷಸೇಂದ್ರಸ್ಯ ಭಾರ್ಯಾ ಭವಿತುಮರ್ಹಸಿ ॥ ೮

ಮಯೋಕ್ತಂ ಚಾರುಸರ್ವಾಂಗಿ ವಾಕ್ಯಂ ಕಿಂ ನಾನುಮನ್ಯಸೇ ।
ತತೋ ಹರಿಜಟಾ ನಾಮ ರಾಕ್ಷಸೀ ವಾಕ್ಯಮಬ್ರವೀತ್ ॥ ೯

ವಿವರ್ತ್ಯ ನಯನೇ ಕೋಪಾನ್ಮಾರ್ಜಾರಸದೃಶೇಕ್ಷಣಾ ।
ಯೇನ ದೇವಾಸ್ತ್ರಯಸ್ತ್ರಿಂಶದ್ದೇವರಾಜಶ್ಚ ನಿರ್ಜಿತಾಃ ॥ ೧೦

ತಸ್ಯ ತ್ವಂ ರಾಕ್ಷಸೇಂದ್ರಸ್ಯ ಭಾರ್ಯಾ ಭವಿತುಮರ್ಹಸಿ ।
ತತಸ್ತು ಪ್ರಘಸಾ ನಾಮ ರಾಕ್ಷಸೀ ಕ್ರೋಧಮೂರ್ಛಿತಾ ॥ ೧೧

ಮಾಡಿಕೊಂಡು "ಸೀತೆ, ಆರು ಮಂದಿ* ಪ್ರಜಾಪತಿಗಳಲ್ಲಿ ಪುಲಸ್ತ್ಯನೆಂಬವನು ನಾಲ್ಕನೆಯವನು. ಅವನು ಬ್ರಹ್ಮನ ಮಾನಸಪುತ್ರ. ಆತನಿಗೆ ವಿಶ್ರವಸ್ಸು ಎಂಬ ಹೆಸರಿನ ಮಾನಸಪುತ್ರನು ಹುಟ್ಟಿದನು. ಆತನು ಪ್ರಜಾಪತಿಗಳಿಗೆ ಸಮಾನವಾದ ತೇಜಸ್ಸುಳ್ಳವನು (೫–೭). ಆ ವಿಶ್ರವಸ್ಸಿನ ಮಗನೇ ಶತ್ರುಭಯಂಕರನಾದ ಈ ರಾವಣ. ಈ ರಾಕ್ಷಸೇಶ್ವರನಿಗೆ ನೀನು ಭಾರ್ಯೆಯಾಗುವುದು ಒಳ್ಳೆಯದು. ನನ್ನ ಮಾತನ್ನು ಏಕೆ ಒಪ್ಪಬಾರದು?" ಎಂದಳು (೮–೯). ಅನಂತರ ಬೆಕ್ಕಿನಂತಹ ಕಣ್ಣುಳ್ಳ ಹರಿಜಟೆ ಎಂಬ ರಾಕ್ಷಸಿಯು ಕಣ್ಣುಗಳನ್ನು ತಿರುಗಿಸುತ್ತ "ಸಕಲ ದೇವತೆಗಳನ್ನೂ**

---

* ಮರೀಚಿ, ಅತ್ರಿ, ಅಂಗಿರಸ್, ಪುಲಸ್ತ್ಯ ಪುಲಹ, ಕ್ರತು—ಇವರು ಆರು ಮಂದಿ ಪ್ರಜಾಪತಿಗಳು.

** ದೇವತೆಗಳು ಒಟ್ಟು ಮೂವತ್ತುಮೂರು ಎಂದೂ ಮೂವತ್ತುಮೂರು ಕೋಟಿ ಎಂದೂ ವರ್ಣನೆ ಇದೆ.

ಭರ್ತ್ಸಯಂತೀ ತದಾ ಘೋರಮಿದಂ ವಚನಮಬ್ರವೀತ್ ।
ವೀರ್ಯೋತ್ಸಿಕ್ತಸ್ಯ ಶೂರಸ್ಯ ಸಂಗ್ರಾಮೇಷ್ವನಿವರ್ತಿನಃ ॥ ೧೨

ಬಲಿನೋ ವೀರ್ಯಯುಕ್ತಸ್ಯ ಭಾರ್ಯಾತ್ವಂ ಕಿಂ ನ ಲಿಪ್ಸಸೇ ।
ಪ್ರಿಯಾಂ ಬಹುಮತಾಂ ಭಾರ್ಯಾಂ ತ್ಯಕ್ತ್ವಾ ರಾಜಾ ಮಹಾಬಲಃ ॥

ಸರ್ವಾಸಾಂ ಚ ಮಹಾಭಾಗಾಂ ತ್ವಾಮುಪೈಷ್ಯತಿ ರಾವಣಃ ।
ಸಮೃದ್ಧಂ ಸ್ತ್ರೀಸಹಸ್ರೇಣ ನಾನಾರತ್ನೋಪಶೋಭಿತಮ್ ॥ ೧೪

ಅಂತಃಪುರಂ ಸಮುತ್ಸೃಜ್ಯ ತ್ವಾಮುಪೈಷ್ಯತಿ ರಾವಣಃ ।
ಅನ್ಯಾ ತು ವಿಕಟಾ ನಾಮ ರಾಕ್ಷಸೀ ವಾಕ್ಯಮಬ್ರವೀತ್ ॥ ೧೫

ಅಸಕೃದ್ದೇವತಾ ಯುದ್ಧೇ ನಾಗಗಂಧರ್ವದಾನವಾಃ ।
ನಿರ್ಜಿತಾ ಸಮರೇ ಯೇನ ಸ ತೇ ಪಾರ್ಶ್ವಮುಪಾಗತಃ ॥ ೧೬

ತಸ್ಯ ಸರ್ವಸಮೃದ್ಧಸ್ಯ ರಾವಣಸ್ಯ ಮಹಾತ್ಮನಃ ।
ಕಿಮದ್ಯ ರಾಕ್ಷಸೇಂದ್ರಸ್ಯ ಭಾರ್ಯಾತ್ವಂ ನೇಚ್ಛಸೇಽಧಮೇ ॥ ೧೭

ತತಸ್ತು ದುರ್ಮುಖೀ ನಾಮ ರಾಕ್ಷಸೀ ವಾಕ್ಯಮಬ್ರವೀತ್ ।
ಯಸ್ಯ ಸೂರ್ಯೋ ನ ತಪತಿ ಭೀತೋ ಯಸ್ಯ ಚ ಮಾರುತಃ ॥ ೧೮

ದೇವರಾಜನನಾದ ಇಂದ್ರನನ್ನೂ ಸೋಲಿಸಿರುವ ನಮ್ಮ ರಾಕ್ಷಸೇಂದ್ರನಿಗೆ ಹೆಂಡತಿಯಾಗು'' ಎಂದು ಒರಲಿದಳು (೧೦–೧೧). ಪ್ರಘಸೆ ಎಂಬುವಳು ಕ್ರುದ್ಧಳಾಗಿ ಸೀತೆಯನ್ನು ಹೆದರಿಸುತ್ತ ''ಸಂಗ್ರಾಮ ಶೂರನೂ ಪರಾಕ್ರಮಿಯೂ ಆದ ರಾವಣನ ಭಾರ್ಯೆಯಾಗಲು ಏಕೆ ಇಷ್ಟವಿಲ್ಲ? ಅಂತಃಪುರದಲ್ಲಿ ಸಾವಿರಾರು ಸುಂದರಿಯರಿದ್ದರೂ ಅವರನ್ನು ಬಿಟ್ಟು ರಾವಣನು ನಿನ್ನನ್ನು ಕಾಮಿಸುತ್ತಿರುವನಲ್ಲ! ಇದು ನಿನ್ನ ಮಹಾಭಾಗ್ಯವಲ್ಲವೆ ?'' ಎಂದು ಕೇಳಿದಳು (೧೨–೧೫). ಆಮೇಲೆ ವಿಕಟೆ ಎಂಬ ರಾಕ್ಷಸಿಯು ''ಸಮರದಲ್ಲಿ ನಾಗಗಂಧರ್ವದಾನವರನ್ನು ಪರಾಜಯ ಗೊಳಿಸಿದ ವೈಭವಶಾಲಿಯಾದ ರಾವಣನು ನಿನ್ನ ಬಳಿಗೆ ಬಂದರೆ 'ಬೇಡ' ಎನ್ನುವೆಯಾ ? ಅಧಮೆ !'' ಎಂದು ಅಬ್ಬರಿಸಿದಳು (೧೬–೧೭). ತರುವಾಯ ದುರ್ಮುಖಿ ಎಂಬ ಹೆಸರಿನವಳು ''ಎಲೌ ಚೆಲುವೆ ! ರಾಜಾಧಿರಾಜನಾದ

ನ ವಾತಿ ಚಾಸಿತಾಪಾಂಗಿ ಕಿಂ ತ್ವಂ ತಸ್ಯ ನ ತಿಷ್ಠಸಿ ।
ಪುಷ್ಪವೃಷ್ಟಿಂ ಚ ತರವೋ ಮುಮುಚುರ್ಯಸ್ಯ ವೈ ಭಯಾತ್ ॥ ೧೯

ಶೈಲಾಶ್ಚ ಸುಭ್ರೂಃ ಪಾನೀಯಂ ಜಲದಾಶ್ಚ ಯದೇಚ್ಛತಿ ।
ತಸ್ಯ ನೈರ್ಋತರಾಜಸ್ಯ ರಾಜರಾಜಸ್ಯ ಭಾಮಿನಿ ॥ ೨೦

ಕಿಂ ತ್ವಂ ನ ಕುರುಷೇ ಬುದ್ಧಿಂ ಭಾರ್ಯಾರ್ಥೇ ರಾವಣಸ್ಯ ಹಿ ।
ಸಾಧು ತೇ ತತ್ತ್ವತೋ ದೇವಿ ಕಥಿತಂ ಸಾಧು ಭಾಮಿನಿ ॥ ೨೧

ಗೃಹಾಣ ಸುಸ್ಮಿತೇ ವಾಕ್ಯಮನ್ಯಥಾ ನ ಭವಿಷ್ಯಸಿ ॥

ಇತಿ ಶ್ರೀಮದ್ರಾಮಾಯಣೇ ಸುಂದರಕಾಂಡೇ ತ್ರಯೋವಿಂಶಃ ಸರ್ಗಃ

ರಾವಣನಿಗೆ ಹೆಂಡತಿಯಾಗು. ಅವನಿಗೆ ಭೀತಿಗೊಂಡು ಸೂರ್ಯನೂ ಕೂಡ ಉಗ್ರವಾಗಿ ಉರಿಯುವುದಿಲ್ಲ. ಗಾಳಿ ಕೂಡ ಬಿರುಸಾಗಿ ಬೀಸುವುದಿಲ್ಲ. ಅವನ ಭಯಕ್ಕಾಗಿ ವೃಕ್ಷಗಳೂ ಪುಷ್ಪವೃಷ್ಟಿಯನ್ನು ಸುರಿಸುತ್ತವೆ (೧೮–೧೯). ಅವನಿಗೆ ಇಷ್ಟಬಂದಾಗ ಬೆಟ್ಟಗಳಿಂದ ನದಿಗಳು ಹರಿಯುತ್ತವೆ; ಮೋಡದಿಂದ ಮಳೆ ಸುರಿಯುತ್ತದೆ. ನನ್ನ ಮಾತನ್ನು ಕೇಳು. ರಾಜಾಧಿರಾಜನಾದ ರಾಕ್ಷಸೇಂದ್ರನಿಗೆ ಭಾರ್ಯೆಯಾಗು. ಇಲ್ಲದಿದ್ದರೆ ನೀನು ಜೀವಸಹಿತ ಉಳಿಯುವುದಿಲ್ಲ'' ಎಂದು ಗದರಿದಳು (೨೦–೨೧).

ಇಲ್ಲಿಗೆ ಶ್ರೀಮದ್ರಾಮಾಯಣದ ಸುಂದರಕಾಂಡದಲ್ಲಿ ಇಪ್ಪತ್ತುಮೂರನೆಯ ಸರ್ಗ

ಚತುರ್ವಿಂಶಃ ಸರ್ಗಃ

ರಾಕ್ಷಸೀನಿರ್ಭರ್ತ್ಸನಮ್

ತತಃ ಸೀತಾಂ ಸಮಸ್ತಾಸ್ತಾ ರಾಕ್ಷಸ್ಯೋ ವಿಕೃತಾನನಾಃ ।
ಪರುಷಂ ಪರುಷಾ ನಾರ್ಯ ಊಚುಸ್ತಾಂ ವಾಕ್ಯಮಪ್ರಿಯಮ್ ॥ ೧

ಕಿಂ ತ್ವಮಂತಃಪುರೇ ಸೀತೇ ಸರ್ವಭೂತಮನೋಹರೇ ।
ಮಹಾರ್ಹಶಯನೋಪೇತೇ ನ ವಾಸಮನುಮನ್ಯಸೇ ॥ ೨

ಮಾನುಷೀ ಮಾನುಷಸ್ಯೈವ ಭಾರ್ಯಾತ್ವಂ ಬಹು ಮನ್ಯಸೇ ।
ಪ್ರತ್ಯಾಹರ ಮನೋ ರಾಮಾನ್ನ ತ್ವಂ ಜಾತು ಭವಿಷ್ಯಸಿ ॥ ೩

ತ್ರೈಲೋಕ್ಯವಸುಭೋಕ್ತಾರಂ ರಾವಣಂ ರಾಕ್ಷಸೇಶ್ವರಮ್ ।
ಭರ್ತಾರಮುಪಸಂಗಮ್ಯ ವಿಹರಸ್ವ ಯಥಾಸುಖಮ್ ॥ ೪

ಮಾನುಷೀ ಮಾನುಷಂ ತಂ ತು ರಾಮಮಿಚ್ಛಸಿ ಶೋಭನೇ ।
ರಾಜ್ಯಾದ್ಭ್ರಷ್ಟಮಸಿದ್ಧಾರ್ಥಂ ವಿಕ್ಲವಂ ತ್ವಮನಿಂದಿತೇ ॥ ೫

ಸರ್ಗ ೨೪

ರಾಕ್ಷಸಿಯರು ಪುನಃ ಸೀತೆಯನ್ನು ನಿರ್ಬಂಧಪಡಿಸುವುದು.

ಆ ರಾಕ್ಷಸಿಯರು ಒಟ್ಟುಗೂಡಿ ಪುನಃ ಹೀಗೆಂದರು: ''ಎಲೌ ಸೀತೆ, ಉತ್ತಮಶಯನಗಳಿಂದ ಸಜ್ಜುಗೊಳಿಸಿದ ಮನೋಹರವಾದ ಅಂತಃಪುರದಲ್ಲಿ ವಾಸಮಾಡಲು ನೀನು ಏಕೆ ಸಮ್ಮತಿಸುವುದಿಲ್ಲ? (೧–೨). ನೀನು ಮಾನುಷಿಯಾದ್ದರಿಂದ ಮನುಷ್ಯನ ಮಡದಿಯಾಗಿರಬೇಕೆಂದು ಅಪೇಕ್ಷಿಸುವೆಯಾ? ರಾಮನಲ್ಲಿ ಮನಸ್ಸನ್ನು ತ್ಯಜಿಸು. ಇಲ್ಲದಿದ್ದರೆ, ನೀನು ಎಂದಿಗೂ ಉಳಿಯುವುದಿಲ್ಲ. ಮೂರು ಲೋಕದ ಐಶ್ವರ್ಯವನ್ನು ಭೋಗಿಸತಕ್ಕವನು ನಮ್ಮ ರಾವಣೇಶ್ವರ. ಅವನನ್ನು ವರಿಸಿ ಆನಂದದಿಂದ ವಿಹರಿಸು (೩–೪). ಹೇ ಶೋಭನಾಂಗಿ! ನೀನು ಮನುಷ್ಯಳಾದ ಮಾತ್ರಕ್ಕೆ, ರಾಜ್ಯಭ್ರಷ್ಟನೂ ಕಾರ್ಯಸಿದ್ಧಿಯನ್ನು ಪಡೆಯದೆ ದೀನನೂ ಆಗಿರುವ ಒಬ್ಬ ಮನುಷ್ಯನನ್ನು ಇಚ್ಛಿಸುತ್ತೀಯಲ್ಲ!'' ಈ ಮಾತನ್ನು ಕೇಳಿ

ರಾಕ್ಷಸೀನಾಂ ವಚಃ ಶ್ರುತ್ವಾ ಸೀತಾ ಪದ್ಮನಿಭೇಕ್ಷಣಾ ।
ನೇತ್ರಾಭ್ಯಾಮಶ್ರುಪೂರ್ಣಾಭ್ಯಾಮಿದಂ ವಚನಮಬ್ರವೀತ್ ॥ ೬

ಯದಿದಂ ಲೋಕವಿದ್ವಿಷ್ಟಮುದಾಹರಥ ಸಂಗತಾಃ ।
ನೈತನ್ಮನಸಿ ವಾಕ್ಯಂ ಮೇ ಕಿಲ್ಬಿಷಂ ಪ್ರತಿಭಾತಿ ವಃ ॥ ೭

ನ ಮಾನುಷೀ ರಾಕ್ಷಸಸ್ಯ ಭಾರ್ಯಾ ಭವಿತುಮರ್ಹತಿ ।
ಕಾಮಂ ಖಾದತ ಮಾಂ ಸರ್ವಾ ನ ಕರಿಷ್ಯಾಮಿ ವೋ ವಚಃ ॥ ೮

ದೀನೋ ವಾ ರಾಜ್ಯಹೀನೋ ವಾ ಯೋ ಮೇ ಭರ್ತಾ ಸ ಮೇ ಗುರುಃ ।
ತಂ ನಿತ್ಯಮನುರಕ್ತಾಸ್ಮಿ ಯಥಾ ಸೂರ್ಯಂ ಸುವರ್ಚಲಾ ॥ ೯

ಯಥಾ ಶಚೀ ಮಹಾಭಾಗಾ ಶಕ್ರಂ ಸಮುಪತಿಷ್ಠತಿ ।
ಅರುಂಧತೀ ವಸಿಷ್ಠಂ ಚ ರೋಹಿಣೀ ಶಶಿನಂ ಯಥಾ ॥ ೧೦

ಲೋಪಾಮುದ್ರಾ ಯಥಾಗಸ್ತ್ಯಂ ಸುಕನ್ಯಾ ಚ್ಯವನಂ ಯಥಾ ।
ಸಾವಿತ್ರೀ ಸತ್ಯವಂತಂ ಚ ಕಪಿಲಂ ಶ್ರೀಮತೀ ಯಥಾ ॥ ೧೧

ಪದ್ಮನೇತ್ರೆಯಾದ ಜಾನಕಿಯು ಕಣ್ಣಲ್ಲಿ ನೀರುತುಂಬಿಕೊಂಡು "ನೀವೆಲ್ಲರೂ ಸೇರಿ ಲೋಕನಿಂದಿತವಾದ ಇಂತಹ ಮಾತನ್ನು ಹೇಳುವಿರಲ್ಲ; ನಿಮ್ಮ ಈ ಕೆಟ್ಟ ಮಾತು ನನಗೆ ಸ್ವಲ್ಪವೂ ಹಿಡಿಸುವುದಿಲ್ಲ (೫-೭). ಮನುಷ್ಯಳು ಎಂದಿಗೂ ರಾಕ್ಷಸನಿಗೆ ಭಾರ್ಯೆಯಾಗಲಾರಳು. ಬೇಕಾದರೆ ನನ್ನನ್ನು ತಿಂದುಬಿಡಿರಿ ; ಎಂದಿಗೂ ನಾನು ನಿಮ್ಮ ಮಾತನ್ನು ನಡೆಸುವವಳಲ್ಲ, ನನ್ನ ಪತಿಯು ದೀನನಾಗಿರಲಿ, ರಾಜ್ಯಹೀನನಾಗಿರಲಿ ಅವನೇ ನನಗೆ ಪೂಜ್ಯನು. ಸುವರ್ಚಲೆಯು ಸೂರ್ಯನನ್ನೇ ನಂಬಿರುವಂತೆ, ನಾನು ನನ್ನ ಪತಿಯನ್ನೇ ನಂಬಿ ಅನುರಕ್ತಳಾಗಿದ್ದೇನೆ (೮-೯). ಶಚೀದೇವಿಯು ದೇವೇಂದ್ರನನ್ನೂ ಅರುಂಧತಿಯು ವಸಿಷ್ಠನನ್ನೂ ರೋಹಿಣಿಯು ಚಂದ್ರನನ್ನೂ ಸುಕನ್ಯೆಯು ಚ್ಯವನನನ್ನೂ ಸಾವಿತ್ರಿಯು ಸತ್ಯವಂತನನ್ನೂ ಶ್ರೀಮತಿಯು ಕಪಿಲನನ್ನೂ ಮದಯಂತಿಯು ಸೌದಾಸನನ್ನೂ ಕೇಶಿನಿಯು ಸಗರನನ್ನೂ ಭೀಮಪುತ್ರಿಯಾದ ದಮಯಂತಿಯು ನಳನನ್ನೂ ಅನುವರ್ತಿಸಿದಂತೆ,

ಸೌದಾಸಂ ಮದಯಂತೀವ ಕೇಶಿನೀ ಸಗರಂ ಯಥಾ ।
ನೈಷಧಂ ದಮಯಂತೀವ ಭೈಮೀ ಪತಿಮನುವ್ರತಾ ॥ ೧೨

ತಥಾಹಮಿಕ್ಷ್ವಾಕುವರಂ ರಾಮಂ ಪತಿಮನುವ್ರತಾ ।
ಸೀತಾಯಾ ವಚನಂ ಶ್ರುತ್ವಾ ರಾಕ್ಷಸ್ಯಃ ಕ್ರೋಧಮೂರ್ಛಿತಾಃ ॥ ೧೩

ಭರ್ತ್ಸಯಂತಿ ಸ್ಮ ಪುರುಷೈರ್ವಾಕ್ಯೈ ರಾವಣಚೋದಿತಾಃ ।
ಅವಲೀನಃ ಸ ನಿರ್ವಾಕ್ಯೋ ಹನುಮಾನ್ ಶಿಂಶಪಾದ್ರುಮೇ ॥ ೧೪

ಸೀತಾಂ ಸಂತರ್ಜಯಂತೀಸ್ತಾ ರಾಕ್ಷಸೀರಶೃಣೋತ್ ಕಪಿಃ ।
ತಾಮಭಿಕ್ರಮ್ಯ ಸಂಕ್ರುದ್ಧಾ ವೇಪಮಾನಾಂ ಸಮಂತತಃ ॥ ೧೫

ಭೃಶಂ ಸಂಲಿಲಿಹುರ್ದೀಪ್ತಾನ್ ಪ್ರಲಂಬಾನ್ ದಶನಚ್ಛದಾನ್ ।
ಊಚುಶ್ಚ ಪರಮಕ್ರುದ್ಧಾಃ ಪ್ರಗೃಹ್ಯಾಶು ಪರಶ್ವಧಾನ್ ॥ ೧೬

ನೇಯಮರ್ಹತಿ ಭರ್ತಾರಂ ರಾವಣಂ ರಾಕ್ಷಸಾಧಿಪಮ್ ।
ಸಂಭರ್ತ್ಸ್ಯಮಾನಾ ಭೀಮಾಭೀ ರಾಕ್ಷಸೀಭಿರ್ವರಾನನಾ ॥ ೧೭

ಸಾ ಬಾಷ್ಪಮುಪಮಾರ್ಜಂತೀ ಶಿಂಶಪಾಂ ತಾಮುಪಾಗಮತ್ ।
ತತಸ್ತಾಂ ಶಿಂಶಪಾಂ ಸೀತಾ ರಾಕ್ಷಸೀಭಿಃ ಸಮಾವೃತಾ ॥ ೧೮

ನಾನು ಇಕ್ಷ್ವಾಕುನಾಥನಾದ ಶ್ರೀರಾಮನನ್ನೇ ಅನುವರ್ತಿಸಿ ನಡೆಯತಕ್ಕವಳು'' ಎಂದಳು (೧೦–೧೨). ಆಗ ರಾಕ್ಷಸಿಯರು ಕ್ರುದ್ಧರಾಗಿ ರಾವಣನ ಆಜ್ಞೆಯಂತೆ ಪರುಷವಾಕ್ಯಗಳಿಂದ ಸೀತೆಯನ್ನು ಗದರಿಸಲಾರಂಭಿಸಿದರು. ಇತ್ತ ಶಿಂಶಪಾವೃಕ್ಷದಲ್ಲಿ ಸದ್ದಿಲ್ಲದೆ ಕುಳಿತಿದ್ದ ಹನುಮಂತನು ಇದೆಲ್ಲವನ್ನೂ ಕೇಳುತ್ತಿದ್ದನು (೧೩–೧೫). ಆಗ ರಾಕ್ಷಸಿಯರು ಮಹಾಕ್ರೋಧದಿಂದ ತಮ್ಮ ಜೋಲುದುಟಿಗಳನ್ನು ನಾಲಗೆಯಿಂದ ಸವರುತ್ತ ಕೊಡಲಿಗಳನ್ನು ಎತ್ತಿ ಹಿಡಿದುಕೊಂಡು ''ಇವಳು ರಾಕ್ಷಸೇಶ್ವರನಾದ ರಾವಣನನ್ನು ಮದುವೆಯಾಗಲು ಅರ್ಹಳೇ ಅಲ್ಲ!'' ಎಂದು ಕೂಗಾಡಿದರು (೧೬–೧೭). ಆಗ ಸೀತೆಯು ಕಣ್ಣೀರನ್ನು ಒರೆಸಿಕೊಳ್ಳುತ್ತ ಹನುಮಂತನು ಕುಳಿತಿದ್ದ

ಅಭಿಗಮ್ಯ ವಿಶಾಲಾಕ್ಷೀ ತಸ್ಥೌ ಶೋಕಪರಿಪ್ಲುತಾ ।
ತಾಂ ಕೃಶಾಂ ದೀನವದನಾಂ ಮಲಿನಾಂಬರಧಾರಿಣೀಮ್ ॥ ೧೯

ಭರ್ತ್ಸಯಾಂಚಕ್ರಿರೇ ಸೀತಾಂ ರಾಕ್ಷಸ್ಯಸ್ತಾಂ ಸಮಂತತಃ ।
ತತಸ್ತಾಂ ವಿನತಾ ನಾಮ ರಾಕ್ಷಸೀ ಭೀಮದರ್ಶನಾ ॥ ೨೦

ಅಬ್ರವೀತ್ ಕುಪಿತಾಕಾರಾ ಕರಾಲಾ ನಿರ್ಣತೋದರೀ ।
ಸೀತೇ ಪರ್ಯಾಪ್ತಮೇತಾವದ್ಭರ್ತುಃ ಸ್ನೇಹೋ ನಿದರ್ಶಿತಃ ॥ ೨೧

ಸರ್ವತ್ರಾತಿಕೃತಂ ಭದ್ರೇ ವ್ಯಸನಾಯೋಪಕಲ್ಪತೇ ।
ಪರಿತುಷ್ಟಾಸ್ಮಿ ಭದ್ರಂ ತೇ ಮಾನುಷಸ್ತೇ ಕೃತೋ ವಿಧಿಃ ॥ ೨೨

ಮಮಾಪಿ ತು ವಚಃ ಪಥ್ಯಂ ಬ್ರುವಂತ್ಯಾಃ ಕುರು ಮೈಥಿಲಿ ।
ರಾವಣಂ ಭಜ ಭರ್ತಾರಂ ಭರ್ತಾರಂ ಸರ್ವರಕ್ಷಸಾಮ್ ॥ ೨೩

ವಿಕ್ರಾಂತಂ ರೂಪವಂತಂ ಚ ಸುರೇಶಮಿವ ವಾಸವಮ್ ।
ದಕ್ಷಿಣಂ ತ್ಯಾಗಶೀಲಂ ಚ ಸರ್ವಸ್ಯ ಪ್ರಿಯದರ್ಶನಮ್ ॥ ೨೪

ಮಾನುಷಂ ಕೃಪಣಂ ರಾಮಂ ತ್ಯಕ್ತ್ವಾ ರಾವಣಮಾಶ್ರಯ ।
ದಿವ್ಯಾಂಗರಾಗಾ ವೈದೇಹಿ ದಿವ್ಯಾಭರಣಭೂಷಿತಾ ॥ ೨೫

ಶಿಂಶಪಾವೃಕ್ಷದ ಬಳಿಗೆ ಬಂದು ಅಳುತ್ತ ನಿಂತಳು. ರಾಕ್ಷಸಿಯರೂ ಅವಳನ್ನು ಸುತ್ತುಗಟ್ಟಿ ಬಂದು ಗದರಿಸುತ್ತಲೇ ಇದ್ದರು (೧೮–೧೯). ಅನಂತರ ವಿನತೆ ಎಂಬ ಘೋರರೂಪಿಯಾದ ಜೋಲುಹೊಟ್ಟೆಯ ಕರಾಳ ರಾಕ್ಷಸಿಯು "ಸೀತೆ, ಇನ್ನು ಸಾಕು. ಗಂಡನ ಮೇಲಿರುವ ಪ್ರೇಮವನ್ನು ತೋರಿಸಿದ್ದಾಯಿತು. ಯಾವುದೂ ಅತಿಯಾದರೆ ದುಃಖಕ್ಕೆ ಕಾರಣ. ಮನುಷ್ಯಜಾತಿಗೆ ಸಹಜವಾದ ಧರ್ಮ ಶ್ರದ್ಧೆಯನ್ನು ತೋರಿಸಿದ್ದೀಯೆ. ಸಂತೋಷವಾಯಿತು (೨೦–೨೨). ಈಗ ನಿನಗೆ ಪಥ್ಯವಾದ ಮಾತನ್ನು ಹೇಳುತ್ತೇನೆ, ಕೇಳು : ರಾವಣನು ಸಮಸ್ತ ರಾಕ್ಷಸರಿಗೂ ಅಧಿಪತಿ ; ಪರಾಕ್ರಮಿ ; ದೇವೇಂದ್ರನಂತೆ ರೂಪಶಾಲಿ ; ದಾಕ್ಷಿಣ್ಯಸ್ವಭಾವದವನೂ ಉದಾರಿಯೂ ಆಗಿದ್ದಾನೆ. ದರಿದ್ರನೂ ಒಬ್ಬ ಮನುಷ್ಯಮಾತ್ರನೂ ಆದ ರಾಮನನ್ನು ಬಿಟ್ಟು ಇವನನ್ನು ಸೇವಿಸು (೨೩–೨೪). ದಿವ್ಯವಾದ ಅನುಲೇಪನವನ್ನೂ

ಅದ್ಯ ಪ್ರಭೃತಿ ಸರ್ವೇಷಾಂ ಲೋಕಾನಾಮೀಶ್ವರೀ ಭವ ।
ಅಗ್ನೇಃ ಸ್ವಾಹಾ ಯಥಾ ದೇವೀ ಶಚೀವೇಂದ್ರಸ್ಯ ಶೋಭನೇ ॥ ೨೬

ಕಿಂ ತೇ ರಾಮೇಣ ವೈದೇಹಿ ಕೃಪಣೇನ ಗತಾಯುಷಾ ।
ಏತದುಕ್ತಂ ಚ ಮೇ ವಾಕ್ಯಂ ಯದಿ ತ್ವಂ ನ ಕರಿಷ್ಯಸಿ ॥ ೨೭

ಅಸ್ಮಿನ್ ಮುಹೂರ್ತೇ ಸರ್ವಾಸ್ತ್ವಾಂ ಭಕ್ಷಯಿಷ್ಯಾಮಹೇ ವಯಮ್ ।
ಅನ್ಯಾ ತು ವಿಕಟಾ ನಾಮ ಲಂಬಮಾನಪಯೋಧರಾ ॥ ೨೮

ಅಬ್ರವೀತ್ ಕುಪಿತಾ ಸೀತಾಂ ಮುಷ್ಟಿಮುದ್ಯಮ್ಯ ಗರ್ಜತೀ ।
ಬಹೂನ್ಯಪ್ರಿಯರೂಪಾಣಿ ವಚನಾನಿ ಸುದುರ್ಮತೇ ॥ ೨೯

ಅನುಕ್ರೋಶಾನ್ಮೃದುತ್ವಾಚ್ಚ ಸೋಢಾನಿ ತವ ಮೈಥಿಲಿ ।
ನ ಚ ನಃ ಕುರುಷೇ ವಾಕ್ಯಂ ಹಿತಂ ಕಾಲಪುರಃಸರಮ್ ॥ ೩೦

ಆನೀತಾಸಿ ಸಮುದ್ರಸ್ಯ ಪಾರಮನ್ಯೈರ್ದುರಾಸದಮ್ ।
ರಾವಣಾಂತಃಪುರಂ ಘೋರಂ ಪ್ರವಿಷ್ಟಾ ಚಾಸಿ ಮೈಥಿಲಿ ॥ ೩೧

ಆಭರಣಗಳನ್ನೂ ಧರಿಸಿ ಈ ದಿನದಿಂದಲೇ ಸಮಸ್ತ ಲೋಕಕ್ಕೂ ಅಧೀಶ್ವರಿಯಾಗು. ಅಗ್ನಿಗೆ ಸ್ವಾಹಾದೇವಿಯಂತೆಯೂ ಇಂದ್ರನಿಗೆ ಶಚೀದೇವಿಯಂತೆಯೂ ರಾವಣನಿಗೆ ಹೆಂಡತಿಯಾಗಿ ವಿರಾಜಿಸು (೨೫–೨೬). ಸೀತೆ, ಕ್ಷುದ್ರನೂ ಅಲ್ಪಜೀವಿಯೂ ಆದ ರಾಮನಿಂದ ನಿನಗೇನಾಗಬೇಕಾಗಿದೆ? ನನ್ನ ಮಾತನ್ನು ನೀನು ಕೇಳದಿದ್ದರೆ ನಾವೆಲ್ಲರೂ ಸೇರಿ ಈ ಕ್ಷಣದಲ್ಲಿ ನಿನ್ನನ್ನು ಭಕ್ಷಿಸಿಬಿಡುತ್ತೇವೆ'' ಎಂದು ಹೇಳಿದಳು (೨೭–೨೮). ಆಮೇಲೆ ವಿಕಟೆ ಎಂಬ ಜೋಲುಮೊಲೆಯ ರಾಕ್ಷಸಿಯೊಬ್ಬಳು ಮುಷ್ಟಿಯನ್ನೆತ್ತಿ ಗರ್ಜಿಸುತ್ತ ನುಡಿದಳು: ''ಎಲೈ ದುರ್ಬುದ್ಧಿಯವಳೆ, ನಿನ್ನ ಮೇಲಿನ ಮರುಕದಿಂದಲೂ ನಾವು ಮೃದುಸ್ವಭಾವದವರಾದ್ದರಿಂದಲೂ ನೀನಾಡಿದ ಕೆಟ್ಟಮಾತುಗಳನ್ನು ಕೇಳಿ ಸಹಿಸಿಕೊಂಡಿದ್ದೇವೆ. ನೀನು ಮಾತ್ರ ಕಾಲೋಚಿತವಾದ ನಮ್ಮ ಹಿತೋಪದೇಶವನ್ನು ಕೇಳುತ್ತಿಲ್ಲ (೨೯–೩೦). ಇನ್ನೊಬ್ಬರಿಗೆ ಬರಲು ಅಸಾಧ್ಯವಾದ ಸಮುದ್ರದ ಈಚೆಯ ದಡಕ್ಕೆ ನಿನ್ನನ್ನು ತಂದಿದ್ದೇವೆ. ಈಗ ನೀನು ರಾವಣನ ಅಂತಃಪುರದಲ್ಲಿದ್ದೀಯೆ

ರಾವಣಸ್ಯ ಗೃಹೇ ರುದ್ಧಾಮಸ್ಮಾಭಿಸ್ತು ಸುರಕ್ಷಿತಾಮ್ ।
ನ ತ್ವಾಂ ಶಕ್ತಃ ಪರಿತ್ರಾತುಮಪಿ ಸಾಕ್ಷಾತ್ ಪುರಂದರಃ ॥ ೩೨
ಕುರುಷ್ವ ಹಿತವಾದಿನ್ಯಾ ವಚನಂ ಮಮ ಮೈಥಿಲಿ ।
ಅಲಮಶ್ರುಪ್ರಪಾತೇನ ತ್ಯಜ ಶೋಕಮನರ್ಥಕಮ್ ॥ ೩೩
ಭಜ ಪ್ರೀತಿಂ ಪ್ರಹರ್ಷಂ ಚ ತ್ಯಜೈತಾಂ ನಿತ್ಯದೈನ್ಯತಾಮ್ ।
ಸೀತೇ ರಾಕ್ಷಸರಾಜೇನ ಸಹ ಕ್ರೀಡ ಯಥಾಸುಖಮ್ ॥ ೩೪
ಜಾನಾಸಿ ಹಿ ಯಥಾ ಭೀರು ಸ್ತ್ರೀಣಾಂ ಯೌವನಮಧ್ರುವಮ್ ।
ಯಾವನ್ನ ತೇ ವ್ಯತಿಕ್ರಾಮೇತ್ತಾವತ್ ಸುಖಮವಾಪ್ನುಹಿ ॥ ೩೫
ಉದ್ಯಾನಾನಿ ಚ ರಮ್ಯಾಣಿ ಪರ್ವತೋಪವನಾನಿ ಚ ।
ಸಹ ರಾಕ್ಷಸರಾಜೇನ ಚರ ತ್ವಂ ಮದಿರೇಕ್ಷಣೇ ॥ ೩೬
ಸ್ತ್ರೀಸಹಸ್ರಾಣಿ ತೇ ಸಪ್ತ ವಶೇ ಸ್ಥಾಸ್ಯಂತಿ ಸುಂದರಿ ।
ರಾವಣಂ ಭಜ ಭರ್ತಾರಂ ಭರ್ತಾರಂ ಸರ್ವರಕ್ಷಸಾಮ್ ॥ ೩೭
ಉತ್ಪಾಟ್ಯ ವಾ ತೇ ಹೃದಯಂ ಭಕ್ಷಯಿಷ್ಯಾಮಿ ಮೈಥಿಲಿ ।
ಯದಿ ಮೇ ವ್ಯಾಹೃತಂ ವಾಕ್ಯಂ ನ ಯಥಾವತ್ ಕರಿಷ್ಯಸಿ ॥ ೩೮

ಎಂಬುದು ನೆನಪಿನಲ್ಲಿರಲಿ. ರಾವಣನ ಗೃಹದಲ್ಲಿ ಬಂಧಿತಳಾಗಿ, ನಾವು ಕಾವಲಿರುವಾಗ ಸಾಕ್ಷಾತ್ ದೇವೇಂದ್ರನಿಗೂ ನಿನ್ನನ್ನು ಬಿಡಿಸಲು ಶಕ್ಯವಿಲ್ಲ(೩೧–೩೨). ಸೀತೆ, ನಿನ್ನ ಹಿತಕ್ಕಾಗಿ ಈ ಮಾತನ್ನು ಹೇಳುತ್ತಿದ್ದೇನೆ. ಕಣ್ಣೀರು ಸುರಿಸಬೇಡ. ಈ ಶೋಕ ವ್ಯರ್ಥ ; ಬಿಟ್ಟುಬಿಡು. ಸದಾ ಕೊರಗುವುದರಿಂದ ಏನಾದೀತು? ರಾವಣನೊಡನೆ ಯಥೇಚ್ಛವಾಗಿ ಕ್ರೀಡಿಸು. ಆನಂದದಿಂದ ನಲಿಯುತ್ತಿರು (೩೩–೩೪). ಸ್ತ್ರೀಯರಿಗೆ ಯೌವನವು ಸದಾ ಇರುವುದಿಲ್ಲವೆಂದು ನಿನಗೆ ಗೊತ್ತಿದೆಯಲ್ಲವೆ ? ಈ ಯೌವನವು ಕಳೆದುಹೋಗುವ ವರೆಗಾದರೂ ಸುಖಪಡು. ಹೇ ಸುಂದರಿ ! ರಾಕ್ಷಸರಾಜನೊಡನೆ ವಿವಿಧ ಉದ್ಯಾನವನಗಳಲ್ಲಿ ಸಂಚರಿಸುತ್ತ ಆನಂದಿಸು (೩೫–೩೬). ಸಮಸ್ತ ರಾಕ್ಷಸರಿಗೂ ಅವನು ಅಧಿಪತಿ. ಅವನನ್ನು ಸೇವಿಸಿದರೆ ಅಂತಃಪುರದಲ್ಲಿರುವ ಏಳುಸಾವಿರ ಸ್ತ್ರೀಯರಿಗೆ ನೀನು ಅಧೀಶ್ವರಿಯಾಗುವೆ. ನನ್ನ ಮಾತನ್ನೇನಾದರೂ ನೀನು ನಡೆಸದಿದ್ದರೆ ನಿನ್ನ ಎದೆಯನ್ನು ಸೀಳಿ ತಿಂದುಬಿಡುತ್ತೇನೆ'' (೩೭–೩೮).

ತತಶ್ಚಂಡೋದರೀ ನಾಮ ರಾಕ್ಷಸೀ ಕ್ರೋಧಮೂರ್ಛಿತಾ ।
ಭ್ರಾಮಯಂತೀ ಮಹಚ್ಛೂಲಮಿದಂ ವಚನಮಬ್ರವೀತ್ ॥ ೩೯

ಇಮಾಂ ಹರಿಣಲೋಲಾಕ್ಷೀಂ ತ್ರಾಸೋತ್ಕಂಪಿಪಯೋಧರಾಮ್ ।
ರಾವಣೇನ ಹೃತಾಂ ದೃಷ್ಟ್ವಾ ದೌಹೃದೋ ಮೇ ಮಹಾನಭೂತ್॥೪೦

ಯಕೃತ್ಪ್ಲೀಹಮಥೋತ್ಪೀಡಂ ಹೃದಯಂ ಚ ಸಬಂಧನಮ್ ।
ಅಂತ್ರಾಣ್ಯಪಿ ತಥಾ ಶೀರ್ಷಂ ಖಾದೇಯಮಿತಿ ಮೇ ಮತಿಃ ॥ ೪೧

ತತಸ್ತು ಪ್ರಘಸಾ ನಾಮ ರಾಕ್ಷಸೀ ವಾಕ್ಯಮಬ್ರವೀತ್ ।
ಕಂಠಮಸ್ಯಾ ನೃಶಂಸಾಯಾಃ ಪೀಡಯಾಮ ಕಿಮಾಸ್ಯತೇ ॥ ೪೨

ನಿವೇದ್ಯತಾಂ ತತೋ ರಾಜ್ಞೇ ಮಾನುಷೀ ಸಾ ಮೃತೇತಿ ಹ ।
ನಾತ್ರ ಕಶ್ಚನ ಸಂದೇಹಃ ಖಾದತೇತಿ ಸ ವಕ್ಷ್ಯತಿ ॥ ೪೩

ತತಸ್ತ್ವಜಾಮುಖೀ ನಾಮ ರಾಕ್ಷಸೀ ವಾಕ್ಯಮಬ್ರವೀತ್ ।
ವಿಶಸ್ಯೇಮಾಂ ತತಃ ಸರ್ವಾಃ ಸಮಾನ್ ಕುರುತ ಪಿಂಡಕಾನ್ ॥ ೪೪

ಆಮೇಲೆ ಚಂಡೋದರಿ ಎಂಬ ರಾಕ್ಷಸಿಯು ಕೋಪದಿಂದ ಒಂದು ದೊಡ್ಡ ಶೂಲವನ್ನು ತಿರುಗಿಸುತ್ತ ''ರಾವಣನು ಈಕೆಯನ್ನು ತಂದಾಗ ಜಿಂಕೆಯ ಕಣ್ಣುಗಳಂತಿದ್ದ ಇವಳ ಕಣ್ಣುಗಳನ್ನೂ ಭಯದಿಂದ ನಡುಗುವ ಸ್ತನಗಳನ್ನೂ ಕಂಡಾಗಲೇ ಇವಳನ್ನು ತಿಂದುಬಿಡಬೇಕೆಂದು ನನಗೆ ಆಸೆಯಾಯಿತು! ಇವಳ ಯಕೃತ್ತು, ಪ್ಲೀಹ, ಎದೆಯ ಮಾಂಸ, ಕರುಳು ಮತ್ತು ತಲೆಯನ್ನು ಕಿತ್ತುಕಿತ್ತು ತಿನ್ನಬೇಕೆಂದು ನನ್ನ ಅಭಿಲಾಷೆ'' ಎಂದು ಆರ್ಭಟಿಸಿದಳು (೩೯–೪೧). ಅನಂತರ ಪ್ರಘಸೆ ಎಂಬ ರಾಕ್ಷಸಿಯು ''ಎಲೈ ರಾಕ್ಷಸಿಯರೆ, ಏಕೆ ಸುಮ್ಮನೆ ಇದ್ದೀರಿ? ಈ ಪಾಪಿಷ್ಠಳ ಕುತ್ತಿಗೆಯನ್ನು ಹಿಚಿಕಿಬಿಡೋಣ! ಆಮೇಲೆ ನಮ್ಮ ರಾಜನಿಗೆ 'ಆ ಮನುಷ್ಯಸ್ತ್ರೀಯು ಸತ್ತುಹೋದಳು' ಎಂದು ಹೇಳಿಬಿಡೋಣ. ಆಗ 'ಅವಳನ್ನು ಭಕ್ಷಿಸಿರಿ' ಎಂದು ಅವನು ಹೇಳಿಯೇ ಹೇಳುತ್ತಾನೆ. ಸಂದೇಹವೇನು ?'' ಎಂದಳು (೪೨–೪೩). ತರುವಾಯ ಅಜಾಮುಖಿ ಎಂಬುವಳು ''ಇವಳನ್ನು ಕೊಯ್ದು

ವಿಭಜಾಮ ತತಃ ಸರ್ವಾ ವಿವಾದೋ ಮೇ ನ ರೋಚತೇ ।
ಪೇಯಮಾನೀಯತಾಂ ಕ್ಷಿಪ್ರಂ ಲೇಹ್ಯಮುಚ್ಚಾವಚಂ ಬಹು ॥ ೪೫

ತತಃ ಶೂರ್ಪಣಖಾ ನಾಮ ರಾಕ್ಷಸೀ ವಾಕ್ಯಮಬ್ರವೀತ್ ।
ಅಜಾಮುಖ್ಯಾ ಯದುಕ್ತಂ ಹಿ ತದೇವ ಮಮ ರೋಚತೇ ॥ ೪೬

ಸುರಾ ಚಾನೀಯತಾಂ ಕ್ಷಿಪ್ರಂ ಸರ್ವಶೋಕವಿನಾಶಿನೀ ।
ಮಾನುಷಂ ಮಾಂಸಮಾಸ್ವಾದ್ಯ ನೃತ್ಯಾಮೋಽಥ ನಿಕುಂಭಿಲಾಮ್ ॥

ಏವಂ ಸಂಭರ್ತ್ಸ್ಯಮಾನಾ ಸಾ ಸೀತಾ ಸುರಸುತೋಪಮಾ ।
ರಾಕ್ಷಸೀಭಿಃ ಸುಘೋರಾಭಿರ್ಧೈರ್ಯಮುತ್ಸೃಜ್ಯ ರೋದಿತಿ ॥ ೪೮

ಇತಿ ಶ್ರೀಮದ್ರಾಮಾಯಣೇ ಸುಂದರಕಾಂಡೇ ಚತುರ್ವಿಂಶಃ ಸರ್ಗಃ

ಮುದ್ದೆಗಳನ್ನು ಮಾಡಿ ಹಂಚಿಕೊಂಡುಬಿಡೋಣ. ವಿವಾದ ನನಗೆ ಹಿಡಿಸದು. ಮದ್ಯವನ್ನೂ ವಿವಿಧವಾದ ಉಪ್ಪಿನಕಾಯಿ ಗೊಜ್ಜುಗಳನ್ನೂ ತನ್ನಿರಿ !'' ಎಂದು ಗಜರಿದಳು (೪೪–೪೫). ಆಮೇಲೆ ಶೂರ್ಪಣಖೆ ಎಂಬ ರಾಕ್ಷಸಿಯು "ಈ ಅಜಾಮುಖಿಯು ಹೇಳಿದ್ದೇ ಸರಿ. ಸಮಸ್ತ ಶೋಕವನ್ನೂ ಪರಿಹಾರ ಮಾಡತಕ್ಕ ಮದ್ಯವನ್ನು ತನ್ನಿರಿ. ಮನುಷ್ಯ ಮಾಂಸವನ್ನು ತಿಂದು, ನಿಕುಂಭಿಳೆಯ* ಸಮೀಪಕ್ಕೆ ಹೋಗಿ ನರ್ತಿಸೋಣ'' ಎಂದಳು. ಹೀಗೆ ಆ ಘೋರರಾಕ್ಷಸಿಯರು ಹೆದರಿಸಲಾಗಿ, ದೇವಕನ್ಯೆಯಂತಿದ್ದ ಸೀತೆಯು ಧೈರ್ಯಗೆಟ್ಟು ಅಳತೊಡಗಿದಳು (೪೬–೪೮).

ಇಲ್ಲಿಗೆ ಶ್ರೀಮದ್ರಾಮಾಯಣದ ಸುಂದರಕಾಂಡದಲ್ಲಿ ಇಪ್ಪತ್ತುನಾಲ್ಕನೆಯ ಸರ್ಗ

ಪಂಚವಿಂಶಃ ಸರ್ಗಃ

ಸೀತಾನಿರ್ವೇದಃ

ತಥಾ ತಾಸಾಂ ವದಂತೀನಾಂ ಪರುಷಂ ದಾರುಣಂ ಬಹು ।
ರಾಕ್ಷಸೀನಾಮಸೌಮ್ಯಾನಾಂ ರುರೋದ ಜನಕಾತ್ಮಜಾ ॥ ೧

ಏವಮುಕ್ತಾ ತು ವೈದೇಹೀ ರಾಕ್ಷಸೀಭಿರ್ಮನಸ್ವಿನೀ ।
ಉವಾಚ ಪರಮತ್ರಸ್ತಾ ಬಾಷ್ಪಗದ್ಗದಯಾ ಗಿರಾ ॥ ೨

ನ ಮಾನುಷೀ ರಾಕ್ಷಸಸ್ಯ ಭಾರ್ಯಾ ಭವಿತುಮರ್ಹತಿ ।
ಕಾಮಂ ಖಾದತ ಮಾಂ ಸರ್ವಾ ನ ಕರಿಷ್ಯಾಮಿ ವೋ ವಚಃ ॥ ೩

ಸಾ ರಾಕ್ಷಸೀಮಧ್ಯಗತಾ ಸೀತಾ ಸುರಸುತೋಪಮಾ ।
ನ ಶರ್ಮ ಲೇಭೇ ದುಃಖಾರ್ತಾ ರಾವಣೇನ ಚ ತರ್ಜಿತಾ ॥ ೪

ವೇಪತೇ ಸ್ಮಾಧಿಕಂ ಸೀತಾ ವಿಶಂತೀವಾಂಗಮಾತ್ಮನಃ ।
ವನೇ ಯೂಥಪರಿಭ್ರಷ್ಟಾ ಮೃಗೀ ಕೋಕೈರಿವಾರ್ದಿತಾ ॥ ೫

ಸರ್ಗ ೨೫

ಸೀತೆಯು ನಿರಾಸೆಯಿಂದ ರೋದಿಸುವುದು.

ಕ್ರೂರಸ್ವಭಾವದ ಆ ರಾಕ್ಷಸಿಯರು ಹೀಗೆ ಕಠೋರವಾದ ಮಾತುಗಳನ್ನಾಡುತ್ತಿರಲು, ಅವನ್ನು ಕೇಳಿ ಜಾನಕಿಯು ಅಳುತ್ತಿದ್ದಳು. ಕಣ್ಣೀರು ಸುರಿಸುತ್ತ ಗದ್ಗದಸ್ವರದಿಂದ ''ಮನುಷ್ಯಸ್ತ್ರೀಯು ಎಂದಿಗೂ ರಾಕ್ಷಸನಿಗೆ ಭಾರ್ಯೆಯಾಗಲಾರಳು. ಬೇಕಾದರೆ ನನ್ನನ್ನು ತಿಂದುಹಾಕಿರಿ. ನಿಮ್ಮ ಮಾತನ್ನು ನಾನು ನಡೆಸುವುದಿಲ್ಲ'' ಎಂದು ದೃಢಮನಸ್ಸಿನಿಂದ ಉತ್ತರಕೊಟ್ಟಳು (೧–೩). ರಾಕ್ಷಸಿಯರ ಮಧ್ಯದಲ್ಲಿ ಸಿಕ್ಕಿ ರಾವಣನಿಂದ ಹೆದರಿಸಲ್ಪಡುತ್ತಿದ್ದ ಆ ದೇವಿಯ ಮನಸ್ಸಿಗೆ ನೆಮ್ಮದಿಯೇ ಇರಲಿಲ್ಲ. ಕಾಡಿನಲ್ಲಿ ಹಿಂಡಿನಿಂದ ತಪ್ಪಿ ಬಂದು ತೋಳಗಳಿಗೆ ಸಿಕ್ಕಿಬಿದ್ದ ಹೆಣ್ಣುಜಿಂಕೆಯಂತೆ ಭಯದಿಂದ ನಡುಗುತ್ತ, ತನ್ನ ದೇಹದಲ್ಲಿಯೇ

ಸಾ ತ್ವಶೋಕಸ್ಯ ವಿಪುಲಾಂ ಶಾಕಾಮಾಲಂಬ್ಯ ಪುಷ್ಪಿತಾಮ್ ।
ಚಿಂತಯಾಮಾಸ ಶೋಕೇನ ಭರ್ತಾರಂ ಭಗ್ನಮಾನಸಾ ॥ ೬

ಸಾ ಸ್ನಾಪಯಂತೀ ವಿಪುಲೌ ಸ್ತನೌ ನೇತ್ರಜಲಸ್ರವೈಃ ।
ಚಿಂತಯಂತೀ ನ ಶೋಕಸ್ಯ ತದಾಂತಮಧಿಗಚ್ಛತಿ ॥ ೭

ಸಾ ವೇಪಮಾನಾ ಪತಿತಾ ಪ್ರವಾತೇ ಕದಲೀ ಯಥಾ ।
ರಾಕ್ಷಸೀನಾಂ ಭಯತ್ರಸ್ತಾ ವಿಷಣ್ಣವದನಾಽಭವತ್ ॥ ೮

ತಸ್ಯಾಃ ಸಾ ದೀರ್ಘವಿಪುಲಾ ವೇಪಂತ್ಯಾಃ ಸೀತಯಾ ತದಾ ।
ದದೃಶೇ ಕಂಪಿನೀ ವೇಣೀ ವ್ಯಾಲೀವ ಪರಿಸರ್ಪತೀ ॥ ೯

ಸಾ ನಿಃಶ್ವಸಂತೀ ದುಃಖಾರ್ತಾ ಶೋಕೋಪಹತಚೇತನಾ ।
ಆರ್ತಾ ವ್ಯಸೃಜದಶ್ರೂಣಿ ಮೈಥಿಲೀ ವಿಲಲಾಪ ಹ ॥ ೧೦

ಹಾ ರಾಮೇತಿ ಚ ದುಃಖಾರ್ತಾ ಹಾ ಪುನರ್ಲಕ್ಷ್ಮಣೇತಿ ಚ ।
ಹಾ ಶ್ವಶ್ರು ಮಮ ಕೌಸಲ್ಯೇ ಹಾ ಸುಮಿತ್ರೇತಿ ಭಾಮಿನೀ ॥ ೧೧

ಲೋಕಪ್ರವಾದಃ ಸತ್ಯೋಽಯಂ ಪಂಡಿತೈಃ ಸಮುದಾಹೃತಃ ।
ಅಕಾಲೇ ದುರ್ಲಭೋ ಮೃತ್ಯುಃ ಸ್ತ್ರಿಯಾ ವಾ ಪುರುಷಸ್ಯ ವಾ ॥ ೧೨

ಹುದುಗಿಕೊಳ್ಳುವಂತೆ ಇದ್ದಳು (೪–೫). ಅವಳು ಅಶೋಕವೃಕ್ಷದ ಒಂದು ಕೊಂಬೆಗೆ ಒರಗಿಕೊಂಡು ನಿರಾಸೆಯಿಂದ ಶೋಕಿಸುತ್ತ ಶ್ರೀರಾಮನನ್ನೇ ಧ್ಯಾನಿಸುತ್ತಿದ್ದಳು. ಕಣ್ಣೀರಿನಿಂದ ತನ್ನ ಸ್ತನಗಳನ್ನು ತೋಯಿಸುತ್ತ, ಎಷ್ಟೆಷ್ಟು ಚಿಂತಿಸಿದರೂ ದುಃಖವು ಬಗೆಹರಿಯುವ ರೀತಿಯನ್ನೇ ಕಾಣದಾದಳು (೬–೭). ಬಿರುಗಾಳಿಗೆ ಸಿಕ್ಕಿದ ಬಾಳೆಯ ಗಿಡದಂತೆ ರಾಕ್ಷಸಿಯರ ಭಯದಿಂದ ವಿಷಣ್ಣಳಾಗಿ ನಡುಗುತ್ತಿದ್ದಳು. ಆಗ ನೀಳವಾಗಿಯೂ ವಿಪುಲವಾಗಿಯೂ ಬೆಳೆದಿದ್ದ ಅವಳ ಕೇಶಪಾಶವು ಕಾಳಸರ್ಪದಂತೆ ಚಲಿಸುತ್ತಿದ್ದಿತು (೮–೯). ಅತ್ಯಂತ ಶೋಕದಿಂದ ನಿಟ್ಟುಸಿರು ಬಿಡುತ್ತ, ಕಣ್ಣೀರು ಸುರಿಸುತ್ತ ಹಲುಬತೊಡಗಿದಳು. ''ಹಾ ರಾಮ ! ಹಾ ಲಕ್ಷ್ಮಣ ! ಅಮ್ಮ-ಕೌಸಲ್ಯೇ ! ಹಾ ಸುಮಿತ್ರೇ ; (೧೦–೧೧). 'ಹೆಂಗಸಾಗಲಿ, ಗಂಡಸಾಗಲಿ ಕಾಲವು ಒದಗಿಬಂದ ಹೊರತು ಸಾಯುವುದಿಲ್ಲ' ಎಂಬ ಹಿರಿಯರ

ಯತ್ರಾಹಮೇವಂ ಕ್ರೂರಾಭೀ ರಾಕ್ಷಸೀಭಿರಿಹಾರ್ದಿತಾ ।
ಜೀವಾಮಿ ಹೀನಾ ರಾಮೇಣ ಮುಹೂರ್ತಮಪಿ ದುಃಖಿತಾ ॥ ೧೩

ಏಷಾಲ್ಪಪುಣ್ಯಾ ಕೃಪಣಾ ವಿನಶಿಷ್ಯಾಮ್ಯನಾಥವತ್ ।
ಸಮುದ್ರಮಧ್ಯೇ ನೌಃ ಪೂರ್ಣಾ ವಾಯುವೇಗೈರಿವಾಹತಾ ॥ ೧೪

ಭರ್ತಾರಂ ತಮಪಶ್ಯಂತೀ ರಾಕ್ಷಸೀವಶಮಾಗತಾ ।
ಸೀದಾಮಿ ಖಲು ಶೋಕೇನ ಕೂಲಂ ತೋಯಹತಂ ಯಥಾ ॥ ೧೫

ತಂ ಪದ್ಮದಲಪತ್ರಾಕ್ಷಂ ಸಿಂಹವಿಕ್ರಾಂತಗಾಮಿನಮ್ ।
ಧನ್ಯಾಃ ಪಶ್ಯಂತಿ ಮೇ ನಾಥಂ ಕೃತಜ್ಞಂ ಪ್ರಿಯವಾದಿನಮ್ ॥ ೧೬

ಸರ್ವಥಾ ತೇನ ಹೀನಾಯಾ ರಾಮೇಣ ವಿದಿತಾತ್ಮನಾ ।
ತೀಕ್ಷ್ಣಂ ವಿಷಮಿವಾಸ್ವಾದ್ಯ ದುರ್ಲಭಂ ಮಮ ಜೀವಿತಮ್ ॥ ೧೭

ಕೀದೃಶಂ ತು ಮಯಾ ಪಾಪಂ ಪುರಾ ಜನ್ಮಾಂತರೇ ಕೃತಮ್ ।
ಯೇನೇದಂ ಪ್ರಾಪ್ಯತೇ ದುಃಖಂ ಮಯಾ ಘೋರಂ ಸುದಾರುಣಮ್

ಹೇಳಿಕೆ ಸತ್ಯವಾದದ್ದು. ಏಕೆಂದರೆ, ಈ ಘೋರ ರಾಕ್ಷಸಿಯರು ಹಿಂಸೆಪಡಿಸುತ್ತಿದ್ದರೂ ಶ್ರೀರಾಮನನ್ನಗಲಿಯೂ ನಾನು ಇಷ್ಟುಕಾಲ ಬದುಕಿರುವೆನಲ್ಲ! (೧೨–೧೩). ಸಮುದ್ರ ಮಧ್ಯದಲ್ಲಿ ಬಿರುಗಾಳಿಗೆ ಸಿಕ್ಕಿದ ಹಡಗಿನಂತೆ, ಮಂದಭಾಗ್ಯಳಾದ ನಾನು ದೀನಳಾಗಿ ಅನಾಥಳಂತೆ ಸದ್ಯದಲ್ಲಿಯೇ ನಾಶವಾಗಿಹೋಗುವೆನು. ಈ ರಾಕ್ಷಸಿಯರ ಮಧ್ಯದಲ್ಲಿ ಸಿಕ್ಕಿಬಿದ್ದು, ನನ್ನ ಪತಿಯನ್ನು ಕಾಣದೆ, ಪ್ರವಾಹವೇಗಕ್ಕೆ ಸಿಕ್ಕಿದ ದಡದಂತೆ ಕುಸಿದುಹೋಗುತ್ತಿದ್ದೇನೆ (೧೪–೧೫). ಪದ್ಮದಳದಂತೆ ಕಣ್ಣುಗಳಿರುವ, ಸಿಂಹದಂತೆ ಧೀರವಾಗಿ ನಡೆಯುವ ನನ್ನ ಪ್ರಾಣನಾಥನನ್ನು ನೋಡತಕ್ಕವರೇ ಪುಣ್ಯಾತ್ಮರು. ಮಹಾತ್ಮನಾದ ಶ್ರೀರಾಮನನ್ನು ಅಗಲಿದಮೇಲೆ ಸರ್ವಥಾ ನಾನು ಜೀವಿಸಿರುವುದಿಲ್ಲ. ಘೋರ ವಿಷವನ್ನು ಕುಡಿದವರು ಜೀವಿಸುವುದುಂಟೆ ? (೧೬–೧೭). ಜನ್ಮಾಂತರದಲ್ಲಿ ನಾನು ಎಂತಹ ಪಾಪಕೃತ್ಯ ವನ್ನು ಮಾಡಿದೆನೊ ? ಈ ಜನ್ಮದಲ್ಲಿ ಇಂತಹ ದಾರುಣವಾದ ಯಾತನೆಯನ್ನು

ಜೀವಿತಂ ತ್ಯಕ್ತುಮಿಚ್ಛಾಮಿ ಶೋಕೇನ ಮಹತಾ ವೃತಾ ।
ರಾಕ್ಷಸೀಭಿಶ್ಚ ರಕ್ಷ್ಯಂತ್ಯಾ ರಾಮೋ ನಾಸಾದ್ಯತೇ ಮಯಾ ॥ ೧೯

ಧಿಗಸ್ತು ಖಲು ಮಾನುಷ್ಯಂ ಧಿಗಸ್ತು ಪರವಶ್ಯತಾಮ್ ।
ನ ಶಕ್ಯಂ ಯತ್ ಪರತ್ಯಕ್ತುಮಾತ್ಮಚ್ಛಂದೇನ ಜೀವಿತಮ್ ॥ ೨೦

ಇತಿ ಶ್ರೀಮದ್ರಾಮಾಯಣೇ ಸುಂದರಕಾಂಡೇ ಪಂಚವಿಂಶಃ ಸರ್ಗಃ

ಅನುಭವಿಸುತ್ತಿದ್ದೇನೆ. ರಾಕ್ಷಸಿಯರು ಈ ಪ್ರಕಾರದಲ್ಲಿ ಕಾವಲಿರುವಾಗ, ಶ್ರೀರಾಮನ ದರ್ಶನವು ನನಗೆ ಆಗುವುದಿಲ್ಲ. ಆದ್ದರಿಂದ ನಾನು ಪ್ರಾಣವನ್ನು ತ್ಯಜಿಸಿಬಿಡುತ್ತೇನೆ (೧೮–೧೯). ಆದರೆ ಇವರು ಕಣ್ಣಿಟ್ಟು ಕಾದಿರುವುದರಿಂದ ಇಷ್ಟಬಂದಂತೆ ಪ್ರಾಣವನ್ನು ಬಿಡಲೂ ಸಾಧ್ಯವಿಲ್ಲ. ಅಯ್ಯೋ, ಈ ಮನುಷ್ಯಜನ್ಮಕ್ಕೆ ಧಿಕ್ಕಾರ ! ಈ ಪರಾಧೀನತೆಗೆ ಧಿಕ್ಕಾರ !'' ಎಂದು ಗೋಳಾಡಿದಳು (೨೦).

ಇಲ್ಲಿಗೆ ಶ್ರೀಮದ್ರಾಮಾಯಣದ ಸುಂದರಕಾಂಡದಲ್ಲಿ ಇಪ್ಪತ್ತೈದನೆಯ ಸರ್ಗ

ಷಡ್ವಿಂಶಃ ಸರ್ಗಃ

ಪ್ರಾಣತ್ಯಾಗಸಂಪ್ರಧಾರಣಮ್

ಪ್ರಸಕ್ತಾಶ್ರುಮುಖೀ ತ್ವೇವಂ ಬ್ರುವಂತೀ ಜನಕಾತ್ಮಜಾ ।
ಅಧೋಮುಖಮುಖೀ ಬಾಲಾ ವಿಲಪ್ತುಮುಪಚಕ್ರಮೇ ॥ ೧

ಉನ್ಮತ್ತೇವ ಪ್ರಮತ್ತೇವ ಭ್ರಾಂತಚಿತ್ತೇವ ಶೋಚತೀ ।
ಉಪಾವೃತ್ತಾ ಕಿಶೋರೀವ ವಿವೇಷ್ಟಂತೀ ಮಹೀತಲೇ ॥ ೨

ರಾಘವಸ್ಯ ಪ್ರಮತ್ತಸ್ಯ ರಕ್ಷಸಾ ಕಾಮರೂಪಿಣಾ ।
ರಾವಣೇನ ಪ್ರಮಥ್ಯಾಹಮಾನೀತಾ ಕ್ರೋಶತೀ ಬಲಾತ್ ॥ ೩

ರಾಕ್ಷಸೀವಶಮಾಪನ್ನಾ ಭರ್ತ್ಸ್ಯಮಾನಾ ಸುದಾರುಣಮ್ ।
ಚಿಂತಯಂತೀ ಸುದುಃಖಾರ್ತಾ ನಾಹಂ ಜೀವಿತುಮುತ್ಸಹೇ ॥ ೪

ನ ಹಿ ಮೇ ಜೀವಿತೇನಾರ್ಥೋ ನೈವಾರ್ಥೈರ್ನ ಚ ಭೂಷಣೈಃ ।
ವಸಂತ್ಯಾ ರಾಕ್ಷಸೀಮಧ್ಯೇ ವಿನಾ ರಾಮಂ ಮಹಾರಥಮ್ ॥ ೫

ಸರ್ಗ ೨೬

ಸೀತೆಯು ದುಃಖಿಸುತ್ತ, ಶ್ರೀರಾಮನು ತನ್ನನ್ನು ಬಿಡಿಸಿಕೊಂಡು ಹೋಗದಿರಲು ಕಾರಣಗಳೇನಿರಬಹುದೆಂದು ಬಹುವಿಧವಾಗಿ ಚಿಂತಿಸುವುದು.

ಜಾನಕಿಯು ಕಣ್ಣೀರು ತುಂಬಿಕೊಂಡು ಹೀಗೆ ಹೇಳಿಕೊಳ್ಳುತ್ತ ಭೂತಾವಿಷ್ಟಳಂತೆಯೂ, ಬುದ್ಧಿಸ್ವಾಧೀನವಿಲ್ಲದವಳಂತೆಯೂ, ಹುಚ್ಚಳಂತೆಯೂ, ಆಯಾಸಗೊಂಡ ಹೆಣ್ಣುಗುದುರೆಯಂತೆಯೂ ನೆಲದಮೇಲೆ ಹೊರಳಾಡಿದಳು. ಈ ರೀತಿಯಲ್ಲಿ ವಿಲಪಿಸಿದಳು (೧–೨) : ''ಶ್ರೀರಾಮನು ಪ್ರಮಾದವಶದಿಂದ ಅಗಲಿದಾಗ, ಕಾಮರೂಪಿಯಾದ ರಾವಣನು ಬಲಾತ್ಕಾರದಿಂದ ನನ್ನನ್ನು ತಂದುಬಿಟ್ಟಿರುವನು. ರಾಕ್ಷಸಿಯರ ಮಧ್ಯದಲ್ಲಿ ಸಿಕ್ಕಿ ಈ ಪ್ರಕಾರ ಕ್ರೂರಹಿಂಸೆಗೆ ಒಳಗಾದಮೇಲೆ ಎಂದಿಗೂ ನಾನು ಬದುಕಿರಲು ಇಚ್ಛಿಸುವುದಿಲ್ಲ (೩–೪) . ಶ್ರೀರಾಮನನ್ನು ಅಗಲಿದಮೇಲೆ ಪ್ರಾಣದಿಂದ ನನಗೆ ಆಗಬೇಕಾದ್ದೇನು? ಧನ

ಅಶ್ಮಸಾರಮಿದಂ ನೂನಮಥವಾಪ್ಯಜರಾಮರಮ್ ।
ಹೃದಯಂ ಮಮ ಯೇನೇದಂ ನ ದುಃಖೇನಾವಶೀರ್ಯತೇ ॥ ೬

ದಿಙ್ಮಾಮನಾರ್ಯಾಮಸತೀಂ ಯಾಹಂ ತೇನ ವಿನಾಕೃತಾ ।
ಮುಹೂರ್ತಮಪಿ ರಕ್ಷಾಮಿ ಜೀವಿತಂ ಪಾಪಜೀವಿತಾ ॥ ೭

ಕಾ ಚ ಮೇ ಜೀವಿತೇ ಶ್ರದ್ಧಾ ಸುಖೇ ವಾ ತಂ ಪ್ರಿಯಂ ವಿನಾ ।
ಭರ್ತಾರಂ ಸಾಗರಾಂತಾಯ ವಸುಧಾಯಾಃ ಪ್ರಿಯಂವದಮ್ ॥ ೮

ಭಿದ್ಯತಾಂ ಭಕ್ಷ್ಯತಾಂ ವಾಪಿ ಶರೀರಂ ವಿಸೃಜಾಮ್ಯಹಮ್ ।
ನ ಚಾಪ್ಯಹಂ ಚಿರಂ ದುಃಖಂ ಸಹೇಯಂ ಪ್ರಿಯವರ್ಜಿತಾ ॥ ೯

ಚರಣೇನಾಪಿ ಸವ್ಯೇನ ನ ಸ್ಪೃಶೇಯಂ ನಿಶಾಚರಮ್ ।
ರಾವಣಂ ಕಿಂ ಪುನರಹಂ ಕಾಮಯೇಯಂ ವಿಗರ್ಹಿತಮ್ ॥ ೧೦

ಪ್ರತ್ಯಾಖ್ಯಾನಂ ನ ಜಾನಾತಿ ನಾತ್ಮಾನಂ ನಾತ್ಮನಃ ಕುಲಮ್ ।
ಯೋ ನೃಶಂಸಸ್ವಭಾವೇನ ಮಾಂ ಪ್ರಾರ್ಥಯಿತುಮಿಚ್ಛತಿ ॥ ೧೧

ಛಿನ್ನಾ ಭಿನ್ನಾ ಪ್ರಭಿನ್ನಾ ವಾ ದೀಪ್ತಾ ವಾಗ್ನೌ ಪ್ರದೀಪಿತಾ ।
ರಾವಣಂ ನೋಪತಿಷ್ಠೇಯಂ ಕಿಂ ಪ್ರಲಾಪೇನ ವಶ್ಚಿರಮ್ ॥ ೧೨

ದಿಂದೇನು? ಒಡವೆಗಳಿಂದೇನು? ಅಯ್ಯೋ, ನನ್ನ ಎದೆಯು ಕಲ್ಲಾಗಿರಬೇಕು. ಯಾವುದಕ್ಕೂ ಜಗ್ಗದೆ ಮರಣರಹಿತರಾಗಿರಬೇಕು. ಇಂತಹ ದುಃಖದಲ್ಲಿಯೂ ಇದು ಒಡೆದುಹೋಗುವುದಿಲ್ಲವಲ್ಲ (೫–೬). ಶ್ರೀರಾಮನನ್ನಗಲಿಯೂ ಬದುಕಿರುವ ನಾನು ಪಾಪಿಷ್ಠಳು ; ಅಯೋಗ್ಯಳು ; ಕೆಟ್ಟವಳು. ನನಗೆ ಧಿಕ್ಕಾರ ! ಲೋಕನಾಥನೂ ಪ್ರಿಯಂವದನೂ ಆದ ನನ್ನ ಪ್ರಿಯನಿಲ್ಲದ ಮೇಲೆ ಸುಖದಲ್ಲಿ ಆಸೆ ಏಕೆ ? ಪ್ರಾಣದಲ್ಲಿ ಆಸೆ ಏಕೆ ? (೭–೮). ನನ್ನನ್ನು ಕತ್ತರಿಸಿಹಾಕಲಿ, ತಿಂದುಹಾಕಲಿ ; ನನಗೆ ಈ ದೇಹವೇ ಬೇಡವಾಗಿದೆ. ಈ ದುಃಖವನ್ನು ಸಹಿಸಲಾರೆ. ಈ ರಾಕ್ಷಸ ರಾವಣನನ್ನು ಎಡಗಾಲಿನಿಂದಲೂ ನಾನು ಮುಟ್ಟಲಾರೆ. ಇನ್ನು ಆ ಪಾಪಿಯನ್ನು ಪ್ರೀತಿಸುವೆನೆ ? (೯–೧೦). ಆ ಕ್ರೂರನು ನನ್ನನ್ನು ಬಯಸುವನೇ ಹೊರತು ನನ್ನ ಧಿಕ್ಕಾರದ ಮಾತನ್ನು ಅರ್ಥಮಾಡಿಕೊಳ್ಳುವುದೇ ಇಲ್ಲ. ತನ್ನ ಯೋಗ್ಯತೆಯ

ಖ್ಯಾತಃ ಪ್ರಾಜ್ಞಃ ಕೃತಜ್ಞಶ್ಚ ಸಾನುಕ್ರೋಶಶ್ಚ ರಾಘವಃ ।
ಸದ್ವೃತ್ತೋ ನಿರನುಕ್ರೋಶಃ ಶಂಕೇ ಮದ್ಭಾಗ್ಯಸಂಕ್ಷಯಾತ್ ॥ ೧೩

ರಾಕ್ಷಸಾನಾಂ ಜನಸ್ಥಾನೇ ಸಹಸ್ರಾಣಿ ಚತುರ್ದಶ ।
ಯೇನೈಕೇನ ನಿರಸ್ತಾನಿ ಸ ಮಾಂ ಕಿಂ ನಾಭಿಪದ್ಯತೇ ॥ ೧೪

ನಿರುದ್ಧಾ ರಾವಣೇನಾಹಮಲ್ಪವೀರ್ಯೇಣ ರಕ್ಷಸಾ ।
ಸಮರ್ಥಃ ಖಲು ಮೇ ಭರ್ತಾ ರಾವಣಂ ಹಂತುಮಾಹವೇ ॥ ೧೫

ವಿರಾಧೋ ದಂಡಕಾರಣ್ಯೇ ಯೇನ ರಾಕ್ಷಸಪುಂಗವಃ ।
ರಣೇ ರಾಮೇಣ ನಿಹತಃ ಸ ಮಾಂ ಕಿಂ ನಾಭಿಪದ್ಯತೇ ॥ ೧೬

ಕಾಮಂ ಮಧ್ಯೇ ಸಮುದ್ರಸ್ಯ ಲಂಕೇಯಂ ದುಷ್ಪ್ರಧರ್ಷಣಾ ।
ನ ತು ರಾಘವಬಾಣಾನಾಂ ಗತಿರೋಧೀಹ ವಿದ್ಯತೇ ॥ ೧೭

ಕಿಂ ನು ತತ್ ಕಾರಣಂ ಯೇನ ರಾಮೋ ದೃಢಪರಾಕ್ರಮಃ ।
ರಕ್ಷಸಾಪಹೃತಾಂ ಭಾರ್ಯಾಮಿಷ್ಟಾಂ ನಾಭ್ಯವಪದ್ಯತೇ ॥ ೧೮

ಜ್ಞಾನವಿಲ್ಲ, ತನ್ನ ಕುಲದ ಜ್ಞಾನವಿಲ್ಲ. ಎಲೈ ರಾಕ್ಷಸಿಯರೇ, ನನ್ನನ್ನು ಕತ್ತರಿಸಿಹಾಕಿರಿ, ಸೀಳಿ ಹಾಕಿರಿ, ಕೊಚ್ಚಿ ಕೊಚ್ಚಿ ಚೂರು ಮಾಡಿರಿ. ಕೊನೆಗೆ ಬೆಂಕಿಯಲ್ಲಾದರೂ ಎಸೆಯಿರಿ, ನಾನು ರಾವಣನನ್ನು ಸೇರತಕ್ಕವಳಲ್ಲ. ನೀವು ಎಷ್ಟು ಹೊತ್ತು ಬೊಗಳಿದರೂ ಪ್ರಯೋಜನವಿಲ್ಲ(೧೧–೧೨). ರಾಘವನು ಪ್ರಖ್ಯಾತನಾದವನು, ಪ್ರಾಜ್ಞ, ಕೃತಜ್ಞ, ಕರುಣಾಮಯ, ಸತ್ಪುರುಷ. ನನ್ನ ದೌರ್ಭಾಗ್ಯದಿಂದ ಅವನೂ ನಿಷ್ಕರುಣನಾಗಿಬಿಟ್ಟನೆ? ಜನಸ್ಥಾನದಲ್ಲಿ ಹದಿನಾಲ್ಕು ಸಾವಿರ ರಾಕ್ಷಸರನ್ನೂ ಏಕಾಕಿಯಾಗಿ ಧ್ವಂಸಮಾಡಿದವನು ನನ್ನನ್ನು ಬಿಡಿಸಲು ಏಕೆ ಬರದೆ ಇರಬಹುದು? (೧೩–೧೪). ಈ ಅಲ್ಪಶಕ್ತಿಯ ರಾಕ್ಷಸನು ನನ್ನನ್ನು ಬಂಧಿಸಿದ್ದಾನೆ. ಇವನನ್ನು ಸಂಹಾರ ಮಾಡಲು ನನ್ನ ಗಂಡನು ನಿಶ್ಚಯವಾಗಿಯೂ ಸಮರ್ಥ. ದಂಡಕಾರಣ್ಯದಲ್ಲಿ ರಾಕ್ಷಸವೀರನಾದ ವಿರಾಧನನ್ನು ಸಂಹರಿಸಿದ ಶ್ರೀರಾಮನು ನನ್ನನ್ನು ಬಿಡಿಸಿಕೊಳ್ಳಲಾರನೆ? (೧೫–೧೬). ಲಂಕೆಯು ಸಮುದ್ರಮಧ್ಯದಲ್ಲಿರುವುದರಿಂದ ದುರ್ಗಮವಾಗಿದೆಯೆಂಬುದೇನೋ ನಿಜ. ಆದರೆ ಶ್ರೀರಾಮನ ಬಾಣಗಳನ್ನು ತಡೆಯತಕ್ಕದ್ದು ಯಾವುದೂ ಇಲ್ಲ. ತನ್ನ ಪ್ರಿಯಪತ್ನಿಯನ್ನು ರಾಕ್ಷಸನು

ಇಹಸ್ಥಾಂ ಮಾಂ ನ ಜಾನೀತೇ ಶಂಕೇ ಲಕ್ಷ್ಮಣಪೂರ್ವಜಃ ।
ಜಾನನ್ನಪಿ ಹಿ ತೇಜಸ್ವೀ ಧರ್ಷಣಂ ಮರ್ಷಯಿಷ್ಯತಿ ॥ ೧೯

ಹೃತೇತಿ ಯೋಽಧಿಗತ್ವಾ ಮಾಂ ರಾಘವಾಯ ನಿವೇದಯತ್ ।
ಗೃಧ್ರರಾಜೋಽಪಿ ಸ ರಣೇ ರಾವಣೇನ ನಿಪಾತಿತಃ ॥ ೨೦

ಕೃತಂ ಕರ್ಮ ಮಹತ್ತೇನ ಮಾಂ ತಥಾಭ್ಯವಪದ್ಯತಾ ।
ತಿಷ್ಠತಾ ರಾವಣದ್ವಂದ್ವೇ ವೃದ್ಧೇನಾಪಿ ಜಟಾಯುಷಾ ॥ ೨೧

ಯದಿ ಮಾಮಿಹ ಜಾನೀಯಾದ್ವರ್ತಮಾನಾಂ ಸ ರಾಘವಃ ।
ಅದ್ಯ ಬಾಣೈರಭಿಕ್ರುದ್ಧಃ ಕುರ್ಯಾಲ್ಲೋಕಮರಾಕ್ಷಸಮ್ ॥ ೨೨

ವಿಧಮೇಚ್ಚ ಪುರೀಂ ಲಂಕಾಂ ಶೋಷಯೇಚ್ಚ ಮಹೋದಧಿಮ್ ।
ರಾವಣಸ್ಯ ಚ ನೀಚಸ್ಯ ಕೀರ್ತಿಂ ನಾಮ ಚ ನಾಶಯೇತ್ ॥ ೨೩

ತತೋ ನಿಹತನಾಥಾನಾಂ ರಾಕ್ಷಸೀನಾಂ ಗೃಹೇ ಗೃಹೇ ।
ಯಥಾಹಮೇವಂ ರುದತೀ ತಥಾ ಭೂಯೋ ನ ಸಂಶಯಃ ॥ ೨೪

ಅಪಹರಿಸಿದ್ದರೂ ಬಿಡಿಸಿಕೊಳ್ಳುವುದಕ್ಕೆ ಯಾವ ಕಾರಣದಿಂದ ಬರದೆ ಇರಬಹುದು? (೧೭–೧೮). ನಾನು ಲಂಕೆಯಲ್ಲಿರುವುದು ಅವನಿಗೆ ತಿಳಿದೇ ಇಲ್ಲವೆಂದು ತೋರುತ್ತದೆ. ತಿಳಿದಿದ್ದರೆ ಆ ತೇಜಸ್ವಿಯು ರಾವಣನ ಪುಂಡಾಟವನ್ನು ಸಹಿಸಿಕೊಳ್ಳುತ್ತಿದ್ದನೆ? ರಾವಣನು ಅಪಹರಿಸಿದ್ದಾನೆಂದು ರಾಘವನಿಗೆ ಜಟಾಯು ಒಬ್ಬ ತಿಳಿಸಲು ಸಾಧ್ಯವಿತ್ತು. ಆ ಜಟಾಯುವನ್ನು ರಾವಣನು ಕೊಂದುಬಿಟ್ಟಿದ್ದಾನೆ (೧೯–೨೦). ಜಟಾಯು ವೃದ್ಧನಾಗಿದ್ದರೂ ನನ್ನನ್ನು ಉಳಿಸುವುದಕ್ಕಾಗಿ ರಾವಣ ನೊಡನೆ ದ್ವಂದ್ವಯುದ್ಧಕ್ಕೆ ನಿಂತು ಬಹುದೊಡ್ಡ ಕೆಲಸವನ್ನೇ ಮಾಡಿದನು. ನಾನು ಇಲ್ಲಿರುವುದು ಶ್ರೀರಾಮನಿಗೆ ಗೊತ್ತಾದರೆ, ಅವನು ಕ್ರುದ್ಧನಾಗಿ ಈ ಲೋಕದಲ್ಲಿಯೇ ರಾಕ್ಷಸರಿಲ್ಲದಂತೆ ಮಾಡಿಬಿಡುತ್ತಾನೆ (೨೧–೨೨). ಮಹಾಸಾಗರವನ್ನು ಒಣಗಿಸಿ ಲಂಕಾಪಟ್ಟಣವನ್ನು ಧೂಳೆಬ್ಬಿಸಿಬಿಡುವನು. ರಾವಣನ ಪ್ರಖ್ಯಾತಿಯನ್ನು ಅಳಿಸಿ ಹೆಸರಿಲ್ಲದಂತೆ ಮಾಡಿಬಿಡುವನು. ರಾಕ್ಷಸಿಯರು ಗಂಡಂದಿರನ್ನು ಕಳೆದುಕೊಂಡು ಮನೆಮನೆಯಲ್ಲಿಯೂ ನನ್ನ ಹಾಗೆಯೇ ಅಳಬೇಕಾಗುವುದು. ಇದರಲ್ಲಿ

ಅನ್ವಿಷ್ಯ ರಕ್ಷಸಾಂ ಲಂಕಾಂ ಕುರ್ಯಾದ್ರಾಮಃ ಸಲಕ್ಷ್ಮಣಃ ।
ನ ಹಿ ತಾಭ್ಯಾಂ ರಿಪುರ್ದೃಷ್ಟೋ ಮುಹೂರ್ತಮಪಿ ಜೀವತಿ ॥ ೨೫

ಚಿತಾಧೂಮಾಕುಲಪಥಾ ಗೃಧ್ರಮಂಡಲಸಂಕುಲಾ ।
ಅಚಿರೇಣ ತು ಲಂಕೇಯಂ ಶ್ಮಶಾನಸದೃಶೀ ಭವೇತ್ ॥ ೨೬

ಅಚಿರೇಣೈವ ಕಾಲೇನ ಪ್ರಾಪ್ಸ್ಯಾಮ್ಯೇವ ಮನೋರಥಮ್ ।
ದುಷ್ಪ್ರಸ್ಥಾನೋಽಯಮಾಭಾತಿ ಸರ್ವೇಷಾಂ ವೋ ವಿಪರ್ಯಯಃ ॥

ಯಾದೃಶಾನೀಹ ದೃಶ್ಯಂತೇ ಲಂಕಾಯಾಮಶುಭಾನಿ ವೈ ।
ಅಚಿರೇಣೈವ ಕಾಲೇನ ಭವಿಷ್ಯತಿ ಹತಪ್ರಭಾ ॥ ೨೮

ನೂನಂ ಲಂಕಾ ಹತೇ ಪಾಪೇ ರಾವಣೇ ರಾಕ್ಷಸಾಧಮೇ ।
ಶೋಷಂ ಯಾಸ್ಯತಿ ದುರ್ಧರ್ಷಾ ಪ್ರಮದಾ ವಿಧವಾ ಯಥಾ ॥ ೨೯

ಪುಣ್ಯೋತ್ಸವಸಮುತ್ಥಾ ಚ ನಷ್ಟಭರ್ತ್ರೀ ಸರಾಕ್ಷಸೀ ।
ಭವಿಷ್ಯತಿ ಪುರೀ ಲಂಕಾ ನಷ್ಟಭರ್ತ್ರೀ ಯಥಾಂಗನಾ ॥ ೩೦

ಸಂದೇಹವೇ ಇಲ್ಲ (೨೩–೨೪). ಶ್ರೀರಾಮನು ಲಕ್ಷ್ಮಣನೊಡನೆ ಈ ಲಂಕೆಯನ್ನು ಹುಡುಕದೆ ಬಿಡುವುದಿಲ್ಲ. ಅವರಿಬ್ಬರ ಕಣ್ಣಿಗೆ ಬಿದ್ದರೆ ಯಾವ ಶತ್ರುವೂ ಒಂದು ನಿಮಿಷವೂ ಬದುಕಲಾರನು. ಸದ್ಯದಲ್ಲಿಯೇ ಇಲ್ಲಿಯ ಬೀದಿಬೀದಿಗಳಲ್ಲಿ ಚಿತಾಧೂಮವು ತುಂಬಿಕೊಂಡು, ಹದ್ದುಗಳು ಗುಂಪುಕಟ್ಟಿ ಈ ಲಂಕೆಯು ಶ್ಮಶಾನವಾಗಿಬಿಡುತ್ತದೆ (೨೫–೨೬). ಈ ನನ್ನ ಕೋರಿಕೆ ಸ್ವಲ್ಪದಿನದಲ್ಲಿಯೇ ಕೈಗೂಡುತ್ತದೆ. ರಾಕ್ಷಸಿಯರೆ, ನಿಮ್ಮ ದುರಾಚಾರದಿಂದ ನಿಮಗೆ ಅನರ್ಥ ಸಂಭವಿಸುವುದು. ಇಲ್ಲಿ ತೋರುತ್ತಿರುವ ದುಶ್ಯಕುನಗಳನ್ನು ಗಮನಿಸಿದರೆ, ಶೀಘ್ರದಲ್ಲಿಯೇ ಲಂಕೆಯು ಕಾಂತಿಗುಂದಿ ನಾಶವಾಗುವುದೆಂದು ಹೇಳಬಹುದು (೨೭–೨೮). ಅಧಮನಾದ ಈ ಪಾಪಿ ರಾವಣನು ಸತ್ತುಹೋದರೆ, ಗಂಡ ಸತ್ತ ಹೆಂಗಸಿನಂತೆ ಈ ಲಂಕೆಯು ಕ್ಷೀಣವಾಗುವುದು. ಈಗ ಮಂಗಳೋತ್ಸವ ನಡೆಯುತ್ತಿದ್ದರೂ ರಾವಣನು ಸತ್ತಮೇಲೆ, ಕೇವಲ ರಾಕ್ಷಸ ಸ್ತ್ರೀಯರಿಂದ ತುಂಬಿರುವ ಲಂಕೆ, ಗಂಡನನ್ನು ಕಳೆದುಕೊಂಡ ಹೆಂಗಸಿನಂತೆ ಆಗುವುದು

ನೂನಂ ರಾಕ್ಷಸಕನ್ಯಾನಾಂ ರುದಂತೀನಾಂ ಗೃಹೇ ಗೃಹೇ ।
ಶ್ರೋಷ್ಯಾಮಿ ನಚಿರಾದೇವ ದುಃಖಾರ್ತಾನಾಮಿಹ ಧ್ವನಿಮ್ ॥ ೩೧

ಸಾಂಧಕಾರಾ ಹತದ್ಯೋತಾ ಹತರಾಕ್ಷಸಪುಂಗವಾ ।
ಭವಿಷ್ಯತಿ ಪುರೀ ಲಂಕಾ ನಿರ್ದಗ್ಧಾ ರಾಮಸಾಯಕೈಃ ॥ ೩೨

ಯದಿ ನಾಮ ಸ ಶೂರೋ ಮಾಂ ರಾಮೋ ರಕ್ತಾಂತಲೋಚನಃ ।
ಜಾನೀಯಾದ್ವರ್ತಮಾನಾಂ ಹಿ ರಾವಣಸ್ಯ ನಿವೇಶನೇ ॥ ೩೩

ಅನೇನ ತು ನೃಶಂಸೇನ ರಾವಣೇನಾಧಮೇನ ಮೇ ।
ಸಮಯೋ ಯಸ್ತು ನಿರ್ದಿಷ್ಟಸ್ತಸ್ಯ ಕಾಲೋಽಯಮಾಗತಃ ॥ ೩೪

ಸ ಚ ಮೇ ವಿಹಿತೋ ಮೃತ್ಯುರಸ್ಮಿನ್ ದುಷ್ಟೇ ನ ವರ್ತತೇ ।
ಅಕಾರ್ಯಂ ಯೇ ನ ಜಾನಂತಿ ನೈರ್ಋತಾಃ ಪಾಪಕಾರಿಣಃ ॥ ೩೫

ಅಧರ್ಮಾತ್ತು ಮಹೋತ್ಪಾತೋ ಭವಿಷ್ಯತಿ ಹಿ ಸಾಂಪ್ರತಮ್ ।
ನೈತೇ ಧರ್ಮಂ ವಿಜಾನಂತಿ ರಾಕ್ಷಸಾಃ ಪಿಶಿತಾಶನಾಃ ॥ ೩೬

ಧ್ರುವಂ ಮಾಂ ಪ್ರಾತರಾಶಾರ್ಥೇ ರಾಕ್ಷಸಃ ಕಲ್ಪಯಿಷ್ಯತಿ ।
ಸಾಹಂ ಕಥಂ ಚರಿಷ್ಯಾಮಿ ತಂ ವಿನಾ ಪ್ರಿಯದರ್ಶನಮ್ ॥ ೩೭

(೨೯–೩೦). ದುಃಖಾರ್ತರಾದ ರಾಕ್ಷಸ ಸ್ತ್ರೀಯರು ಮನೆಮನೆಯಲ್ಲಿಯೂ ಗೋಳಾಡುವುದನ್ನು ಸದ್ಯದಲ್ಲಿಯೇ ಕೇಳುತ್ತೇನೆ. ರಾವಣನ ಪಟ್ಟಣದಲ್ಲಿ ನಾನು ಇದ್ದೇನೆಂದು ರಾಮನಿಗೆ ಗೊತ್ತಾದರೆ ಸಾಕು, ಈ ಲಂಕೆಯು ರಾಮಾಸ್ತ್ರಗಳಿಂದ ಸುಟ್ಟುಹೋಗುವುದು. ಇಲ್ಲಿ ರಾಕ್ಷಸರೆಲ್ಲರೂ ಸತ್ತು, ಕಳೆಗುಂದಿ, ಕತ್ತಲೆಯು ತುಂಬಿಹೋಗುವುದು (೩೧–೩೩). ಕ್ರೂರನಾದ ರಾವಣನು ನನಗೆ ಗೊತ್ತುಮಾಡಿದ ಕಾಲಾವಧಿಯು ಮುಗಿಯುತ್ತ ಬಂದಿದೆ. ಆಮೇಲೆ ಈ ದುಷ್ಟನು ನನಗೆ ಮರಣವನ್ನು ವಿಧಿಸಿದ್ದಾನೆ. ಈ ರಾಕ್ಷಸರಾದರೋ ಯಾವುದನ್ನು ಮಾಡಬಾರದೆಂದು ತಿಳಿಯದ ಪಾಪಿಗಳು (೩೪–೩೫). ಇವರ ಅಧರ್ಮದಿಂದ ದೊಡ್ಡ ಅನರ್ಥವೇ ಸಂಭವಿಸುವುದು. ಇವರಿಗೆ ಧರ್ಮದ ಜ್ಞಾನವಿಲ್ಲ. ಈ ರಾವಣನು ಪ್ರಾತಃಕಾಲದಲ್ಲಿ ನನ್ನನ್ನು ಕತ್ತರಿಸಿ ಅಡಿಗೆ ಮಾಡಿಸುವನು.

ರಾಮಂ ರಕ್ತಾಂತನಯನಮಪಶ್ಯಂತೀ ಸುದುಃಖಿತಾ ।
ಯದಿ ಕಶ್ಚಿತ್ ಪ್ರದಾತಾ ಮೇ ವಿಷಸ್ಯಾದ್ಯ ಭವೇದಿಹ ॥ ೩೮
ಕ್ಷಿಪ್ರಂ ವೈವಸ್ವತಂ ದೇವಂ ಪಶ್ಯೇಯಂ ಪತಿನಾ ವಿನಾ ।
ನಾಜಾನಾಜ್ಜೀವತೀಂ ರಾಮಃ ಸ ಮಾಂ ಲಕ್ಷ್ಮಣಪೂರ್ವಜಃ ॥ ೩೯
ಜಾನಂತೌ ತೌ ನ ಕುರ್ಯಾತಾಂ ನೋರ್ವ್ಯಾಂಹಿ ಮಮ ಮಾರ್ಗಣಮ್ ।
ನೂನಂ ಮಮೈವ ಶೋಕೇನ ಸ ವೀರೋ ಲಕ್ಷ್ಮಣಾಗ್ರಜಃ ॥ ೪೦
ದೇವಲೋಕಮಿತೋ ಯಾತಸ್ತ್ಯಕ್ತ್ವಾ ದೇಹಂ ಮಹೀತಲೇ ।
ಧನ್ಯಾ ದೇವಾಃ ಸಗಂಧರ್ವಾಃ ಸಿದ್ಧಾಶ್ಚ ಪರಮರ್ಷಯಃ ॥ ೪೧
ಮಮ ಪಶ್ಯಂತಿ ಯೇ ನಾಥಂ ರಾಮಂ ರಾಜೀವಲೋಚನಮ್ ।
ಅಥವಾ ನ ಹಿ ತಸ್ಯಾರ್ಥೋ ಧರ್ಮಕಾಮಸ್ಯ ಧೀಮತಃ ॥ ೪೨
ಮಯಾ ರಾಮಸ್ಯ ರಾಜರ್ಷೇರ್ಭಾರ್ಯಯಾ ಪರಮಾತ್ಮನಃ ।
ದೃಶ್ಯಮಾನೇ ಭವೇತ್ ಪ್ರೀತಿಃ ಸೌಹೃದಂ ನಾಸ್ತ್ಯಪಶ್ಯತಃ ॥ ೪೩
ನಾಶಯಂತಿ ಕೃತಘ್ನಾಸ್ತು ನ ರಾಮೋ ನಾಶಯಿಷ್ಯತಿ ।
ಕಿಂ ನು ಮೇ ನ ಗುಣಾಃ ಕೇಚಿತ್ ಕಿಂ ವಾ ಭಾಗ್ಯಕ್ಷಯೋ ಮಮ ॥

ಸುಂದರಾಕಾರನಾದ ಶ್ರೀರಾಮನನ್ನು ಅಗಲಿ ದುಃಖಿತೆಯಾದ ನಾನು ಈಗ ಏನು ಮಾಡಲಿ? (೩೬–೩೭). ಯಾರಾದರೂ ವಿಷವನ್ನು ತಂದುಕೊಟ್ಟಿದ್ದರೆ, ಯಮ ಲೋಕವನ್ನು ಸೇರಿಕೊಳ್ಳುತ್ತಿದ್ದೆನು. ರಾಮಲಕ್ಷ್ಮಣರಿಗೆ ನಾನು ಇಲ್ಲಿ ಜೀವಿಸಿದ್ದೇ ನೆಂದು ತಿಳಿದಿರಲಿಕ್ಕಿಲ್ಲ. ತಿಳಿದಿದ್ದರೆ ನನ್ನನ್ನು ಹುಡುಕದೆ ಬಿಡುತ್ತಿರಲಿಲ್ಲ(೩೮–೪೦). ಒಂದುವೇಳೆ ಶ್ರೀರಾಮನು ನನ್ನ ವಿರಹ ದುಃಖದಿಂದಲೇ ದೇಹವನ್ನು ಬಿಟ್ಟು ಸ್ವರ್ಗ ವನ್ನು ಸೇರಿದ್ದರೂ ಇರಬಹುದು. ಪದ್ಮನೇತ್ರನಾದ ನನ್ನ ರಾಮನನ್ನು ಸ್ವರ್ಗದಲ್ಲಿ ನೋಡುತ್ತಿರುವ ದೇವತೆಗಳೂ ಗಂಧರ್ವರೂ ಸಿದ್ಧರೂ ಮಹರ್ಷಿಗಳೂ ಎಷ್ಟು ಪುಣ್ಯಾತ್ಮರು! ಅಥವಾ ರಾಮನು ಧರ್ಮಪರಾಯಣನೂ ತತ್ತ್ವಜ್ಞನೂ ಆದ ರಾಜರ್ಷಿಯಾಗಿರುವನು. ಅವನಿಗೆ ಪತ್ನಿಯಾದ ನನ್ನಿಂದ ಆಗಬೇಕಾದ್ದೇನು? (೪೧–೪೨). ಯಾವ ವಸ್ತುವನ್ನಾದರೂ ಕಣ್ಣಿಂದ ನೋಡುತ್ತಿದ್ದರೆ ಪ್ರೀತಿಯು ಇರುತ್ತದೆ. ವಸ್ತುವು ಕಣ್ಮರೆಯಾದಮೇಲೆ ಪ್ರೀತಿಯು ತಗ್ಗಿಹೋಗುತ್ತದೆ! ಆದರೆ

ಯಾಹಂ ಸೀದಾಮಿ ರಾಮೇಣ ಹೀನಾ ಮುಖ್ಯೇನ ಭಾಮಿನೀ ।
ಶ್ರೇಯೋ ಮೇ ಜೀವಿತಾನ್ಮರ್ತುಂ ವಿಹೀನಾಯಾ ಮಹಾತ್ಮನಃ ॥ ೪೫

ರಾಮಾದಕ್ಲಿಷ್ಟಚಾರಿತ್ರಾಚ್ಛೂರಾಚ್ಛತ್ರುನಿಬರ್ಹಣಾತ್ ।
ಅಥವಾ ನ್ಯಸ್ತಶಸ್ತ್ರೌ ತೌ ವನೇ ಮೂಲಫಲಾಶಿನೌ ॥ ೪೬

ಭ್ರಾತರೌ ಹಿ ನರಶ್ರೇಷ್ಠೌ ಸಂವೃತ್ತೌ ವನಗೋಚರೌ ।
ಅಥವಾ ರಾಕ್ಷಸೇಂದ್ರೇಣ ರಾವಣೇನ ದುರಾತ್ಮನಾ ॥ ೪೭

ಛದ್ಮನಾ ಸಾದಿತೌ ಶೂರೌ ಭ್ರಾತರೌ ರಾಮಲಕ್ಷ್ಮಣೌ ।
ಸಾಹಮೇವಂ ಗತೇ ಕಾಲೇ ಮರ್ತುಮಿಚ್ಛಾಮಿ ಸರ್ವಥಾ ॥ ೪೮

ನ ಚ ಮೇ ವಿಹಿತೋ ಮೃತ್ಯುರಸ್ಮಿನ್ ದುಃಖೇಽಪಿ ವರ್ತತಿ ।
ಧನ್ಯಾಃ ಖಲು ಮಹಾತ್ಮಾನೋ ಮುನಯಸ್ತ್ಯಕ್ತಕಿಲ್ಬಿಷಾಃ ॥ ೪೯

ಜಿತಾತ್ಮನೋ ಮಹಾಭಾಗಾ ಯೇಷಾಂ ನ ಸ್ತಃ ಪ್ರಿಯಾಪ್ರಿಯೇ ।
ಪ್ರಿಯಾನ್ನ ಸಂಭವೇದ್ದುಃಖಮಪ್ರಿಯಾನ್ನಾಧಿಕಂ ಭಯಮ್ ॥ ೫೦

ರಾಮನ ವಿಷಯದಲ್ಲಿ ಹೀಗೆ ಭಾವಿಸುವುದೂ ಸರಿಯಲ್ಲ. ಕೃತಘ್ನರು ಪ್ರೀತಿಯನ್ನು ಕಳೆದುಕೊಳ್ಳುತ್ತಾರೆ. ರಾಮನು ಮಾತ್ರ ಹಾಗೆ ಮಾಡುವವನಲ್ಲ. ನನ್ನಲ್ಲಿ ಯಾವುದಾದರೂ ತಪ್ಪುಗಳಿರಬಹುದೆ? ಅಥವಾ ನನ್ನ ಭಾಗ್ಯವೇ ಕ್ಷಯಿಸಿಹೋಯಿತೆ? (೪೩–೪೪). ಪರಿಶುದ್ಧವಾದ ನಡತೆಯುಳ್ಳವನೂ ಶೂರನೂ ಆದ ಶ್ರೀರಾಮನನ್ನು ಕಾಣದೆ ಬದುಕಿರುವುದಕ್ಕಿಂತ ಸಾಯುವುದೇ ಉತ್ತಮ. ಆ ಅಣ್ಣತಮ್ಮಂದಿರು ನನ್ನನ್ನು ಕಾಣದೆ ವಿರಕ್ತಿಯಿಂದ ಆಯುಧಗಳನ್ನು ಎಸೆದು ಫಲಮೂಲಗಳನ್ನು ತಿನ್ನುತ್ತ ಅರಣ್ಯವಾಸಿಗಳಾಗಿ ಉಳಿದುಬಿಟ್ಟರೊ? ಇಲ್ಲವೆ, ಈ ದುರಾತ್ಮನಾದ ರಾವಣನು ಮೋಸದಿಂದ ಅವರನ್ನು ಘಾತಿಸಿರಬಹುದೊ? ಸರ್ವಥಾ ನನಗೆ ಮರಣವೇ ಲೇಸು (೪೫–೪೮). ಇಂತಹ ಮಹಾದುಃಖ ಒದಗಿದರೂ ನನಗೆ ಇನ್ನೂ ಸಾವು ಸಂಭವಿಸಲಿಲ್ಲ. ಲೋಕದಲ್ಲಿ ಪ್ರೀತಿದ್ವೇಷಗಳೆರಡನ್ನೂ ತ್ಯಜಿಸಿ ಜಿತೇಂದ್ರಿಯರಾಗಿರುವ ಋಷಿಗಳೇ ಧನ್ಯರು. ಅವರಿಗೆ ಪ್ರಿಯವಸ್ತುವನ್ನಗಲಿದರೂ ದುಃಖವಿಲ್ಲ. ಅಪ್ರಿಯವಾದದ್ದು ಸಂಭವಿಸಿದರೂ ದುಃಖವಿಲ್ಲ. ಅವರಿಗೆ ಪ್ರಿಯ ಅಪ್ರಿಯಗಳೆಂಬ

ತಾಭ್ಯಾಂ ಹಿ ಯೇ ವಿಯುಜ್ಯಂತೇ ನಮಸ್ತೇಷಾಂ ಮಹಾತ್ಮನಾಮ್ ।
ಸಾಹಂ ತ್ಯಕ್ತಾ ಪ್ರಿಯಾರ್ಹೇಣ ರಾಮೇಣ ವಿದಿತಾತ್ಮನಾ ॥ ೫೧

ಪ್ರಾಣಾಂಸ್ತ್ಯಕ್ಷ್ಯಾಮಿ ಪಾಪಸ್ಯ ರಾವಣಸ್ಯ ಗತಾ ವಶಮ್ ॥

ಇತಿ ಶ್ರೀಮದ್ರಾಮಾಯಣೇ ಸುಂದರಕಾಂಡೇ ಷಡ್ವಿಂಶಃ ಸರ್ಗಃ

ಸಪ್ತವಿಂಶಃ ಸರ್ಗಃ

ತ್ರಿಜಟಾಸ್ವಪ್ನಃ

ಇತ್ಯುಕ್ತಾಃ ಸೀತಯಾ ಘೋರಾ ರಾಕ್ಷಸ್ಯಃ ಕ್ರೋಧಮೂರ್ಛಿತಾಃ ।
ಕಾಶ್ಚಿಜ್ಜಗ್ಮುಸ್ತದಾಖ್ಯಾತುಂ ರಾವಣಸ್ಯ ತರಸ್ವಿನಃ ॥ ೧
ತತಃ ಸೀತಾಮುಪಾಗಮ್ಯ ರಾಕ್ಷಸ್ಯೋ ಘೋರದರ್ಶನಾಃ ।
ಪುನಃ ಪರುಷಮೇಕಾರ್ಥಮನರ್ಥಾರ್ಥಮಥಾಬ್ರುವನ್ ॥ ೨

ವಸ್ತುಗಳೇ ಇಲ್ಲ. ಅಂತಹ ಮಹಾತ್ಮರಿಗೆ ನಮಸ್ಕಾರ! ಆದರೆ ನನಗಾದರೋ ರಾಮನು ಪರಮಪ್ರಿಯನು. ಅವನನ್ನು ಅಗಲಿ ಈ ದುರುಳನಾದ ರಾವಣನ ವಶದಲ್ಲಿ ಸಿಕ್ಕಿರುವೆನು. ನಾನು ನಿಶ್ಚಯವಾಗಿಯೂ ಪ್ರಾಣವನ್ನು ಬಿಡುವೆನು" ಎಂದು ರೋದಿಸಿದಳು (೪೯–೫೧).

ಇಲ್ಲಿಗೆ ಶ್ರೀಮದ್ರಾಮಾಯಣದ ಸುಂದರಕಾಂಡದಲ್ಲಿ ಇಪ್ಪತ್ತಾರನೆಯ ಸರ್ಗ

ಸರ್ಗ ೨೭

ತ್ರಿಜಟೆಯು ತನ್ನ ಸ್ವಪ್ನವೃತ್ತಾಂತವನ್ನು ರಾಕ್ಷಸಿಯರಿಗೆ ತಿಳಿಸಿ ಸೀತೆಗೆ ಶುಭವಾಗುತ್ತದೆಯೆಂದು ಹೇಳುವುದು.

ಸೀತಾದೇವಿಯ ಮಾತನ್ನು ಕೇಳಿ ರಾಕ್ಷಸಿಯರು ಕ್ರುದ್ಧರಾದರು. ಅವಳು ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆಂದು ಬಲಾಢ್ಯನಾದ ರಾವಣನಿಗೆ ತಿಳಿಸುವುದಕ್ಕೋಸ್ಕರ ಕೆಲವರು ಅಲ್ಲಿಂದ ಹೊರಟುಹೋದರು. ಉಳಿದ

ಅದ್ಯೇದಾನೀಂ ತವಾನಾರ್ಯೇ ಸೀತೇ ಪಾಪವಿನಿಶ್ಚಯೇ ।
ರಾಕ್ಷಸ್ಯೋ ಭಕ್ಷಯಿಷ್ಯಾಮೋ ಮಾಂಸಮೇತದ್ಯಥಾ ಸುಖಮ್ ॥ ೩

ಸೀತಾಂ ತಾಭಿರನಾರ್ಯಾಭಿರ್ದೃಷ್ಟ್ವಾ ಸಂತರ್ಜಿತಾಂ ತದಾ ।
ರಾಕ್ಷಸೀ ತ್ರಿಜಟಾ ವೃದ್ಧಾ ಪ್ರಬುದ್ಧಾ ವಾಕ್ಯಮಬ್ರವೀತ್ ॥ ೪

ಆತ್ಮಾನಂ ಖಾದತಾನಾರ್ಯಾ ನ ಸೀತಾಂ ಭಕ್ಷಯಿಷ್ಯಥ ।
ಜನಕಸ್ಯ ಸುತಾಮಿಷ್ಟಾಂ ಸ್ನುಷಾಂ ದಶರಥಸ್ಯ ಚ ॥ ೫

ಸ್ವಪ್ನೋ ಹ್ಯದ್ಯ ಮಯಾ ದೃಷ್ಟೋ ದಾರುಣೋ ರೋಮಹರ್ಷಣಃ ।
ರಾಕ್ಷಸಾನಾಮಭಾವಾಯ ಭರ್ತುರಸ್ಯಾ ಜಯಾಯ ಚ ॥ ೬

ಏವಮುಕ್ತಾಸ್ತ್ರಿಜಟಯಾ ರಾಕ್ಷಸ್ಯಃ ಕ್ರೋಧಮೂರ್ಛಿತಾಃ ।
ಸರ್ವಾ ಏವಾಬ್ರುವನ್ ಭೀತಾಸ್ತ್ರಿಜಟಾಂ ತಾಮಿದಂ ವಚಃ ॥ ೭

ಕಥಯಸ್ವ ತ್ವಯಾ ದೃಷ್ಟಃ ಸ್ವಪ್ನೋಽಯಂ ಕೀದೃಶೋ ನಿಶಿ ।
ತಾಸಾಂ ತು ವಚನಂ ಶ್ರುತ್ವಾ ರಾಕ್ಷಸೀನಾಂ ಮುಖಾಚ್ಚ್ಯುತಮ್ ॥ ೮

ಉವಾಚ ವಚನಂ ಕಾಲೇ ತ್ರಿಜಟಾ ಸ್ವಪ್ನಸಂಶ್ರಿತಮ್ ।
ಗಜದಂತಮಯೀಂ ದಿವ್ಯಾಂ ಶಿಬಿಕಾಮಂತರಿಕ್ಷಗಾಮ್ ॥ ೯

ಘೋರರಾಕ್ಷಸಿಯರು ಅವಳ ಹತ್ತಿರಕ್ಕೆ ಬಂದು ''ಅಯೋಗ್ಯೆ! ಸೀತೆ, ಈಗಲೇ ನಿನ್ನನ್ನು ಭಕ್ಷಿಸಿಬಿಡುತ್ತೇವೆ'' ಎಂದು ಹೆದರಿಸಿದರು (೧–೩). ಅಷ್ಟರಲ್ಲಿ ಅಲ್ಲಿ ನಿದ್ರಿಸುತ್ತಿದ್ದ ತ್ರಿಜಟೆ ಎಂಬ ವೃದ್ಧರಾಕ್ಷಸಿಗೆ ಎಚ್ಚರವಾಯಿತು. ಅವಳು ಸೀತೆಯನ್ನು ಹೆದರಿಸುತ್ತಿದ್ದ ರಾಕ್ಷಸಿಯರನ್ನು ನೋಡಿ ''ಎಲೈ ದುಷ್ಟಸ್ತ್ರೀಯರೆ, ನೀವೇ ಒಬ್ಬರನ್ನೊಬ್ಬರು ತಿಂದುಬಿಡಿರಿ ; ಜನಕಪುತ್ರಿಯೂ ದಶರಥನ ಸೊಸೆಯೂ ಆದ ಸೀತೆಯನ್ನು ನೀವು ತಿನ್ನಲಾರಿರಿ. ಭಯಂಕರವೂ ರೋಮಾಂಚಕಾರಿಯೂ ಆದ ಸ್ವಪ್ನವನ್ನು ನಾನು ಕಂಡೆನು. ಅದು ರಾಕ್ಷಸರ ನಾಶವನ್ನೂ ಈಕೆಯ ಗಂಡನಿಗೆ ವಿಜಯವನ್ನೂ ಸೂಚಿಸುತ್ತದೆ'' ಎಂದಳು (೪–೬). ಆದನ್ನು ಕೇಳಿ ರಾಕ್ಷಸಿಯರು ಹೆದರಿಹೋದರು. ಅವರು ತ್ರಿಜಟೆಯನ್ನು ಕುರಿತು ''ನೀನು ಕಂಡ ಸ್ವಪ್ನ ಎಂತಹುದು ? ಹೇಳು'' ಎಂದರು. ಆಗ ತ್ರಿಜಟೆಯು ಸ್ವಪ್ನ ವೃತ್ತಾಂತವನ್ನು ಹೇಳತೊಡಗಿದಳು : ''ರಾಕ್ಷಸಿಯರೆ, ಕೇಳಿರಿ : ಒಂದು ದಿವ್ಯವಾದ ಪಲ್ಲಕ್ಕಿಯು

ಯುಕ್ತಾಂ ಹಂಸಸಹಸ್ರೇಣ ಸ್ವಯಮಾಸ್ಥಾಯ ರಾಘವಃ ।
ಶುಕ್ಲಮಾಲ್ಯಾಂಬರಧರೋ ಲಕ್ಷ್ಮಣೇನ ಸಹಾಗತಃ ॥ ೧೦
ಸ್ವಪ್ನೇ ಚಾದ್ಯ ಮಯಾ ದೃಷ್ಟಾ ಸೀತಾ ಶುಕ್ಲಾಂಬರಾವೃತಾ ।
ಸಾಗರೇಣ ಪರಿಕ್ಷಿಪ್ತಂ ಶ್ವೇತಂ ಪರ್ವತಮಾಸ್ಥಿತಾ ॥ ೧೧
ರಾಮೇಣ ಸಂಗತಾ ಸೀತಾ ಭಾಸ್ಕರೇಣ ಪ್ರಭಾ ಯಥಾ ।
ರಾಘವಶ್ಚ ಮಯಾ ದೃಷ್ಟಶ್ಚತುರ್ದಂತಂ ಮಹಾಗಜಮ್ ॥ ೧೨
ಆರೂಢಃ ಶೈಲಸಂಕಾಶಂ ಚಕಾಸ ಸಹಲಕ್ಷ್ಮಣಃ ।
ತತಸ್ತೌ ನರಶಾರ್ದೂಲೌ ದೀಪ್ಯಮಾನೌ ಸ್ವತೇಜಸಾ ॥ ೧೩
ಶುಕ್ಲಮಾಲ್ಯಾಂಬರಧರೌ ಜಾನಕೀಂ ಪರ್ಯುಪಸ್ಥಿತೌ ।
ತತಸ್ತಸ್ಯ ನಗಸ್ಯಾಗ್ರೇ ಹ್ಯಾಕಾಶಸ್ಥಸ್ಯ ದಂತಿನಃ ॥ ೧೪
ಭರ್ತ್ರಾ ಪರಿಗೃಹೀತಸ್ಯ ಜಾನಕೀ ಸ್ಕಂಧಮಾಶ್ರಿತಾ ।
ಭರ್ತುರಂಕಾತ್ ಸಮುತ್ಪತ್ಯ ತತಃ ಕಮಲಲೋಚನಾ ॥ ೧೫
ಚಂದ್ರಸೂರ್ಯೌ ಮಯಾ ದೃಷ್ಟೌ ಪಾಣಿನಾ ಪರಿಮಾರ್ಜತೀ ।
ತತಸ್ತಾಭ್ಯಾಂ ಕುಮಾರಾಭ್ಯಾಮಾಸ್ಥಿತಃ ಸ ಗಜೋತ್ತಮಃ ॥ ೧೬

ಅಂತರಿಕ್ಷದಲ್ಲಿ ಬರುತ್ತಿತ್ತು. ಅದು ಆನೆಯ ದಂತದಿಂದ ರಚಿತವಾದದ್ದು. ಒಂದು ಸಾವಿರ ಹಂಸಗಳು ಅದನ್ನು ಎಳೆಯುತ್ತಿದ್ದವು. ಆ ಪಲ್ಲಕ್ಕಿಯಲ್ಲಿ ರಾಮನು ಶುಭ್ರವಾದ ಹೂಮಾಲೆಯನ್ನೂ ವಸ್ತ್ರವನ್ನೂ ಧರಿಸಿ ಲಕ್ಷ್ಮಣನೊಡನೆ ಬರುತ್ತಿದ್ದನು (೭–೧೦). ಆಗ ಸೀತೆಯು ಬಿಳಿಯ ದುಕೂಲವನ್ನು ಉಟ್ಟು ಕ್ಷೀರಸಮುದ್ರದಲ್ಲಿ ಶ್ವೇತ ಪರ್ವತವನ್ನೇರಿ ಕುಳಿತಿದ್ದಳು. ಆಮೇಲೆ ಸೂರ್ಯನೊಡನೆ ಸೇರಿದ ಪ್ರಭೆಯಂತೆ, ಸೀತೆಯು ರಾಮನೊಡನೆ ಸೇರಿಹೋದಳು. ಮತ್ತೆ ರಾಮನು ನಾಲ್ಕು ಹಲ್ಲುಗಳುಳ್ಳ, ಪರ್ವತಕಾರವಾದ ಒಂದು ಮಹಾಗಜವನ್ನೇರಿ ಕುಳಿತಂತೆ ಕಂಡೆನು (೧೧–೧೨). ರಾಮಲಕ್ಷ್ಮಣರಿಬ್ಬರೂ ತೇಜಸ್ಸಿನಿಂದ ಬೆಳಗುತ್ತ ಸೀತೆಯು ಕುಳಿತಿದ್ದ ಶ್ವೇತ ಪರ್ವತದ ಕಡೆಗೆ ಬಂದರು. ಆನೆಯ ಮೇಲೆ ರಾಮನು ಕುಳಿತಿರುವುದನ್ನು ಕಂಡು ಸೀತೆಯೂ ಆನೆಯನ್ನು ಹತ್ತಿ ಕುಳಿತಳು. ಅವಳು ತನ್ನ ಪತಿಯ ತೊಡೆಯಿಂದ ಮೇಲಕ್ಕೆದ್ದು ಕೈನೀಡಿ ಸೂರ್ಯಚಂದ್ರರನ್ನು ಸವರುತ್ತಿರುವಹಾಗೆ ಕಂಡೆನು

ಸೀತಯಾ ಚ ವಿಶಾಲಾಕ್ಷ್ಯಾ ಲಂಕಾಯಾ ಉಪರಿ ಸ್ಥಿತಃ ।
ಪಾಂಡರರ್ಷಭಯುಕ್ತೇನ ರಥೇನಾಷ್ಟಯುಜಾ ಸ್ವಯಮ್ ॥ ೧೭

ಇಹೋಪಯಾತಃ ಕಾಕುತ್ಸ್ಥಃ ಸೀತಯಾ ಸಹ ಭಾರ್ಯಯಾ ।
ಲಕ್ಷ್ಮಣೇನ ಸಹ ಭ್ರಾತ್ರಾ ವಿಮಾನೇ ಪುಷ್ಪಕೇ ಸ್ಥಿತಃ ॥ ೧೮

ಶುಕ್ಲಮಾಲ್ಯಾಂಬರಧರೋ ಲಕ್ಷ್ಮಣೇನ ಸಮಾಗತಃ ।
ಆರುಹ್ಯ ಪುಷ್ಪಕಂ ದಿವ್ಯಂ ವಿಮಾನಂ ಸೂರ್ಯಸಂನಿಭಮ್ ॥ ೧೯

ಉತ್ತರಾಂ ದಿಶಮಾಲೋಕ್ಯ ಜಗಾಮ ಪುರುಷೋತ್ತಮಃ ।
ಸಾಂಡಂ ತ್ರಿಭುವನಂ ಭೀಮಂ ಸರ್ವತಃ ಸಚರಾಚರಮ್ ॥ ೨೦

ಏವಂ ಸ್ವಪ್ನೇ ಮಯಾ ದೃಷ್ಟೋ ರಾಮೋ ವಿಷ್ಣುಪರಾಕ್ರಮಃ ।
ಲಕ್ಷ್ಮಣೇನ ಸಹ ಭ್ರಾತ್ರಾ ಸೀತಯಾ ಸಹ ರಾಘವಃ ॥ ೨೧

ನ ಹಿ ರಾಮೋ ಮಹಾತೇಜಾಃ ಶಕ್ಯೋ ಜೇತುಂ ಸುರಾಸುರೈಃ ।
ರಾಕ್ಷಸೈರ್ವಾಪಿ ಚಾನ್ಯೈರ್ವಾ ಸ್ವರ್ಗಃ ಪಾಪಜನೈರಿವ ॥ ೨೨

(೧೩–೧೫). ಆ ಮೂವರೂ ಕುಳಿತಿರುವಾಗ ಆನೆಯು ಆಕಾಶಮಾರ್ಗದಲ್ಲಿ ನಡೆಯುತ್ತ ಈ ಲಂಕೆಯ ಮೇಲೆ ಬಂದಿತು. ಮತ್ತೆ ರಾಮನು ಬಿಳಿಯ ಬಣ್ಣದ ಎಂಟು ವೃಷಭಗಳು ಎಳೆಯುತ್ತಿದ್ದ ಒಂದು ರಥವನ್ನೇರಿದಂತೆ ಕಂಡೆನು. ಅವನೊಡನೆ ಸೀತೆಯೂ ಲಕ್ಷ್ಮಣನೂ ಇದ್ದರು (೧೬–೧೭). ಆಮೇಲೆ ಶ್ರೀರಾಮನು ಸೀತಾಲಕ್ಷ್ಮಣರೊಡನೆ ಸೂರ್ಯನಂತೆ ಜ್ವಲಿಸುತ್ತಿದ್ದ ಪುಷ್ಪಕ ವಿಮಾನವನ್ನೇರಿದನು. ಅವನು ಉತ್ತರದಿಕ್ಕನ್ನು ನೋಡುತ್ತ ಅಯೋಧ್ಯೆಯ ಕಡೆಗೆ ಪ್ರಯಾಣಮಾಡಿದನು* (೧೮–೨೦). ಎಲೈ ರಾಕ್ಷಸಿಯರೆ, ವಿಷ್ಣುವಿನಂತೆ ಪರಾಕ್ರಮಶಾಲಿಯಾದ ರಾಘವನು ಸೀತಾಲಕ್ಷ್ಮಣರಿಂದ ಸಮೇತನಾಗಿರುವುದನ್ನು ನಾನು ಸ್ವಪ್ನದಲ್ಲಿ ಕಂಡೆನು. ಮಹಾತೇಜಸ್ವಿಯಾದ ರಾಮನನ್ನು ಜಯಿಸಲು

---

* ಸ್ವಪ್ನದಲ್ಲಿ ಎತ್ತು, ಆನೆ, ಉಪ್ಪರಿಗೆ, ಪರ್ವತಶಿಖರ, ವೃಕ್ಷಗಳನ್ನು ಏರುವುದೂ ಕೈಯಿಂದ ಸೂರ್ಯಚಂದ್ರರನ್ನು ಮುಟ್ಟುವುದೂ ಶುಭಕರವೆಂದು ಸ್ವಪ್ನಶಾಸ್ತ್ರವು ಹೇಳುತ್ತದೆ.

ರಾವಣಸ್ಯ ಮಯಾ ದೃಷ್ಟಃ ಕ್ಷಿತೌ ತೈಲಸಮುಕ್ಷಿತಃ ।
ರಕ್ತವಾಸಾಃ ಪಿಬನ್ ಮತ್ತಃ ಕರವೀರಕೃತಸ್ರಜಃ ॥ ೨೩

ವಿಮಾನಾತ್ ಪುಷ್ಪಕಾದದ್ಯ ರಾವಣಃ ಪತಿತೋ ಭುವಿ ।
ಕೃಷ್ಯಮಾಣಃ ಸ್ತ್ರಿಯಾ ದೃಷ್ಟೋ ಮುಂಡಃ ಕೃಷ್ಣಾಂಬರಃ ಪುನಃ ॥ ೨೪

ರಥೇನ ಖರಯುಕ್ತೇನ ರಕ್ತಮಾಲ್ಯಾನುಲೇಪನಃ ।
ಪಿಬಂಸ್ತೈಲಂ ಹಸನ್ನೃತ್ಯನ್ ಭ್ರಾಂತಚಿತ್ತಾಕುಲೇಂದ್ರಿಯಃ ॥ ೨೫

ಗರ್ದಭೇನ ಯಯೌ ಶೀಘ್ರಂ ದಕ್ಷಿಣಾಂ ದಿಶಮಾಸ್ಥಿತಃ ।
ಪುನರೇವ ಮಯಾ ದೃಷ್ಟೋ ರಾವಣೋ ರಾಕ್ಷಸೇಶ್ವರಃ ॥ ೨೬

ಪತಿತೋಽವಾಕ್ಶಿರಾ ಭೂಮೌ ಗರ್ದಭಾದ್ಭಯಮೋಹಿತಃ ।
ಸಹಸೋತ್ಥಾಯ ಸಂಭ್ರಾಂತೋ ಭಯಾರ್ತೋ ಮದವಿಹ್ವಲಃ ॥ ೨೭

ಉನ್ಮತ್ತ ಇವ ದಿಗ್ವಾಸಾ ದುರ್ವಾಕ್ಯಂ ಪ್ರಲಪನ್ ಮುಹುಃ ।
ದುರ್ಗಂಧಂ ದುಃಸಹಂ ಘೋರಂ ತಿಮಿರಂ ನರಕೋಪಮಮ್ ॥೨೮

ದೇವಾಸುರರಿಗಾಗಲಿ ಇತರರಿಗಾಗಲಿ ಸಾಧ್ಯವೇ ಇಲ್ಲ. ಸ್ವರ್ಗವನ್ನು ಜಯಿಸಲು ಪಾಪಿಗಳಿಗೆ ಸಾಧ್ಯವಾದೀತೆ ? (೨೧–೨೨). ಅಷ್ಟೇ ಅಲ್ಲ; ರಾವಣನು ಎಣ್ಣೆಯನ್ನು ಒತ್ತಿಕೊಂಡು, ಕೆಂಪು ಬಟ್ಟೆಯನ್ನುಟ್ಟು ಕರವೀರ ಪುಷ್ಪದ ಹಾರವನ್ನು ಕೊರಳಲ್ಲಿ ಧರಿಸಿ, ಎಣ್ಣೆಯನ್ನು ಕುಡಿಯುತ್ತ ನೆಲದ ಮೇಲೆ ಕುಳಿತಿರುವಂತೆ ಸ್ವಪ್ನದಲ್ಲಿ ಕಂಡೆನು. ಮತ್ತೆ ಅವನು ತಲೆಯನ್ನು ವಪನಮಾಡಿಕೊಂಡು ಕೆಂಪು ಬಟ್ಟೆಯನ್ನುಟ್ಟು ಪುಷ್ಪಕವಿಮಾನದಲ್ಲಿ ಕುಳಿತಿರುವಾಗ, ಒಬ್ಬ ಹೆಂಗಸು ಅವನನ್ನು ಎಳೆದು ನೆಲದಮೇಲೆ ಕೆಡವಿದಳು (೨೩–೨೪). ಅವನು ಕತ್ತೆಯನ್ನು ಕಟ್ಟಿದ್ದ ಒಂದು ರಥದ ಮೇಲೆ ಕುಳಿತು ರಕ್ತಮಾಲಿಕೆಯನ್ನೂ ರಕ್ತಚಂದನವನ್ನೂ ಧರಿಸಿ, ಎಣ್ಣೆಯನ್ನು ಕುಡಿಯುತ್ತ, ಹುಚ್ಚು ಹಿಡಿದವನಂತೆ ನಗುತ್ತ ಕುಣಿಯುತ್ತ ದಕ್ಷಿಣದಿಕ್ಕಿಗೆ ಶೀಘ್ರವಾಗಿ ಹೊರಟುಹೋದಂತೆ ಕಂಡೆನು (೨೫–೨೬). ರಾವಣನು ಕತ್ತೆಯಮೇಲೆ ಹೋಗುತ್ತಿರುವಾಗ ತಲೆಕೆಳಗಾಗಿ ಬಿದ್ದುಹೋದನು. ಕೂಡಲೇ ಭಯದಿಂದ ಮೇಲೆದ್ದು ದಿಗಂಬರನಾಗಿ ಹುಚ್ಚನಂತೆ ಏನೇನೋ ಹಲುಬುತ್ತಾ ಇದ್ದನು. ಅನಂತರ ದುರ್ಗಂಧಮಯವೂ ಘೋರವೂ ಅಂಧಕಾರಪೂರ್ಣವೂ ನರಕ

ಮಲಪಂಕಂ ಪ್ರವಿಶ್ಯಾಶು ಮಗ್ನಸ್ತತ್ರ ಸ ರಾವಣಃ ।
ಕಂಠೇ ಬದ್ಧ್ವಾ ದಶಗ್ರೀವಂ ಪ್ರಮದಾ ರಕ್ತವಾಸಿನೀ ॥ ೨೯
ಕಾಲೀ ಕರ್ದಮಲಿಪ್ತಾಂಗೀ ದಿಶಂ ಯಾಮ್ಯಾಂ ಪ್ರಕರ್ಷತಿ ।
ಏವಂ ತತ್ರ ಮಯಾ ದೃಷ್ಟಃ ಕುಂಭಕರ್ಣೋ ನಿಶಾಚರಃ ॥ ೩೦

ರಾವಣಸ್ಯ ಸುತಾಃ ಸರ್ವೇ ಮುಂಡಾಸ್ತೈಲಸಮುಕ್ಷಿತಾಃ ।
ವರಾಹೇಣ ದಶಗ್ರೀವಃ ಶಿಂಶುಮಾರೇಣ ಚೇಂದ್ರಜಿತ್ ॥ ೩೧

ಉಷ್ಟ್ರೇಣ ಕುಂಭಕರ್ಣಶ್ಚ ಪ್ರಯಾತೋ ದಕ್ಷಿಣಾಂ ದಿಶಮ್ ।
ಏಕಸ್ತತ್ರ ಮಯಾ ದೃಷ್ಟಃ ಶ್ವೇತಚ್ಛತ್ರೋ ವಿಭೀಷಣಃ ॥ ೩೨

ಶುಕ್ಲಮಾಲ್ಯಾಂಬರಧರಃ ಶುಕ್ಲಗಂಧಾನುಲೇಪನಃ ।
ಶಂಖದುಂದುಭಿನಿರ್ಘೋಷೈರ್ನೃತ್ತಗೀತೈರಲಂಕೃತಃ ॥ ೩೩

ಆರುಹ್ಯ ಶೈಲಸಂಕಾಶಂ ಮೇಘಸ್ತನಿತನಿಃಸ್ವನಮ್ ।
ಚತುರ್ದಂತಂ ಗಜಂ ದಿವ್ಯಮಾಸ್ತೇ ತತ್ರ ವಿಭೀಷಣಃ ॥ ೩೪

ಚತುರ್ಭಿಃ ಸಚಿವೈಃ ಸಾರ್ಧಂ ವೈಹಾಯಸಮುಪಸ್ಥಿತಃ ।
ಸಮಾಜಶ್ಚ ಮಯಾ ದೃಷ್ಟೋ ಗೀತವಾದಿತ್ರನಿಃಸ್ವನಃ ॥ ೩೫

ಸಮಾನವೂ ಆದ ಒಂದು ಅಮೇಧ್ಯದ ಗುಂಡಿಯಲ್ಲಿ ಬಿದ್ದು ಅವನು ಮುಳುಗಿ ಹೋದಂತೆ ಕಂಡೆನು (೨೭–೨೮). ಕೆಂಪುಸೀರೆಯನ್ನುಟ್ಟಿದ್ದ ಕೊಳಕುದೇಹದ ಒಬ್ಬ ಕರಿಯ ಹೆಂಗಸು ರಾವಣನ ಕೊರಳಿಗೆ ಹಗ್ಗವನ್ನು ಕಟ್ಟಿ ದಕ್ಷಿಣದಿಕ್ಕಿಗೆ ಎಳೆದು ಕೊಂಡುಹೋಗುತ್ತಿರುವಂತೆ ನನಗೆ ಸ್ವಪ್ನವಾಯಿತು! ಕುಂಭಕರ್ಣನಿಗೂ ಹೀಗೆಯೇ ಆದದ್ದನ್ನು ಕಂಡೆನು (೨೯–೩೦). ರಾವಣನ ಮಕ್ಕಳು ವಪನಮಾಡಿ ಕೊಂಡು ಮೈಗೆ ಎಣ್ಣೆಯನ್ನು ಬಳಿದುಕೊಂಡಿದ್ದರು. ಮತ್ತೆ ರಾವಣನು ಹಂದಿ ಯನ್ನೂ, ಇಂದ್ರಜಿತುವು ಮೊಸಳೆಯನ್ನೂ, ಕುಂಭಕರ್ಣನು ಒಂಟೆಯನ್ನೂ ಏರಿ ದಕ್ಷಿಣದಿಕ್ಕಿಗೆ ಹೋಗುತ್ತಿದ್ದರು (೩೧–೩೨). ಆದರೆ ವಿಭೀಷಣನೊಬ್ಬನು ಮಾತ್ರ ಶ್ವೇತಚ್ಛತ್ರವನ್ನು ಹಿಡಿದು ಬಿಳಿಯ ಹೂಮಾಲೆಯನ್ನೂ ವಸ್ತ್ರವನ್ನೂ ಧರಿಸಿ, ಶುಭ್ರ ವಾದ ಚಂದನವನ್ನು ಲೇಪಿಸಿಕೊಂಡು, ನಾಲ್ಕು ಹಲ್ಲುಗಳುಳ್ಳ ಒಂದು ಮಹಾಗಜ ವನ್ನು ಹತ್ತಿ ಕುಳಿತಿದ್ದನು. ಅವನು ತನ್ನ ನಾಲ್ಕೂ ಮಂದಿ ಸಚಿವರೊಡನೆ, ಗೀತವಾದ್ಯ

ಪಿಬತಾಂ ರಕ್ತಮಾಲ್ಯಾನಾಂ ರಕ್ಷಸಾಂ ರಕ್ತವಾಸಸಾಮ್ ।
ಲಂಕಾ ಚೇಯಂ ಪುರೀ ರಮ್ಯಾ ಸವಾಜಿರಥಕುಂಜರಾ ॥ ೩೬

ಸಾಗರೇ ಪತಿತಾ ದೃಷ್ಟಾ ಭಗ್ನಗೋಪುರತೋರಣಾ ।
ಲಂಕಾ ದೃಷ್ಟಾ ಮಯಾ ಸ್ವಪ್ನೇ ರಾವಣೇನಾಭಿರಕ್ಷಿತಾ ॥ ೩೭

ದಗ್ಧಾ ರಾಮಸ್ಯ ದೂತೇನ ವಾನರೇಣ ತರಸ್ವಿನಾ ।
ಪೀತ್ವಾ ತೈಲಂ ಪ್ರನೃತ್ತಾಶ್ಚ ಪ್ರಹಸಂತ್ಯೋ ಮಹಾಸ್ವನಾಃ ॥ ೩೮

ಲಂಕಾಯಾಂ ಭಸ್ಮರೂಕ್ಷಾಯಾಂ ಪ್ರವಿಷ್ಟಾ ರಾಕ್ಷಸಸ್ತ್ರಿಯಃ ।
ಕುಂಭಕರ್ಣಾದಯಶ್ಚೇಮೇ ಸರ್ವೇ ರಾಕ್ಷಸಪುಂಗವಾಃ ॥ ೩೯

ರಕ್ತಂ ನಿವಸನಂ ಗೃಹ್ಯ ಪ್ರವಿಷ್ಟಾ ಗೋಮಯಹ್ರದೇ ।
ಅಪಗಚ್ಛತ ನಶ್ಯಧ್ವಂ ಸೀತಾಮಾಪ ಸ ರಾಘವಃ ॥ ೪೦

ಘಾತಯೇತ್ ಪರಮಾಮರ್ಷೀ ಸರ್ವೈಃ ಸಾರ್ಧಂ ಹಿ ರಾಕ್ಷಸೈಃ ।
ಪ್ರಿಯಾಂ ಬಹುಮತಾಂ ಭಾರ್ಯಾಂ ವನವಾಸಮನುವ್ರತಾಮ್ ॥ ೪೧

ಗಳು ಧ್ವನಿಗೈಯುತ್ತಿರಲು, ಅಂತರಿಕ್ಷದಲ್ಲಿ ಕಂಗೊಳಿಸುತ್ತಿದ್ದನು (೩೩–೩೫). ಇತರ ಅನೇಕ ರಾಕ್ಷಸರು ಕೆಂಪಾದ ಮಾಲೆಗಳನ್ನೂ ವಸ್ತ್ರವನ್ನೂ ಧರಿಸಿ ಎಣ್ಣೆಯನ್ನು ಕುಡಿಯುತ್ತಾ ಬರುತ್ತಿರುವಾಗ, ಸುಂದರವಾದ ಈ ಲಂಕಾನಗರವು ಸಮುದ್ರದಲ್ಲಿ ಮುಳುಗಿಹೋದಂತೆ ಕಂಡೆನು (೩೬–೩೭). ಇಷ್ಟೇ ಅಲ್ಲ; ರಾಮನ ದೂತನಾದ ವಾನರನೊಬ್ಬನು ಬಂದು ಲಂಕಾನಗರವನ್ನು ಸುಟ್ಟುಹಾಕಿದಂತೆ ಸ್ವಪ್ನವಾಯಿತು. ಆಗ ರಾಕ್ಷಸಸ್ತ್ರೀಯರು ಎಣ್ಣೆಯನ್ನು ಕುಡಿಯುತ್ತ, ಕುಣಿಯುತ್ತ, ನಗುತ್ತ, ಬೂದಿಯಾದ ಲಂಕೆಯೊಳಗೆ ಬರುತ್ತಿರುವುದನ್ನು ಕಂಡೆನು. ಕುಂಭಕರ್ಣಾದಿ ರಾಕ್ಷಸರೆಲ್ಲರೂ ರಕ್ತವಸ್ತ್ರವನ್ನುಟ್ಟು ಸಗಣಿಯ ಗುಂಡಿಯೊಳಗೆ ಬಿದ್ದುಹೋದರು. ಎಲೈ ರಾಕ್ಷಸಿಯರೆ, ಇಲ್ಲಿಂದ ತೊಲಗಿರಿ; ಹಾಳಾಗಿ ಹೋಗಿರಿ! ರಾಮನು ಸೀತೆಯನ್ನು ಪಡೆದಂತೆಯೇ ಸರಿ (೩೮–೪೦). ಅವನು ಅತ್ಯಂತ ಕ್ರುದ್ಧನಾಗಿ ರಾಕ್ಷಸರೊಂದಿಗೆ ನಿಮ್ಮನ್ನೂ ಕೊಂದುಬಿಟ್ಟಾನು. ತನಗೆ ಪರಮ ಪ್ರಿಯಳೂ ತನ್ನನ್ನು ಹಿಂಬಾಲಿಸಿ ಅರಣ್ಯಕ್ಕೆ ಬಂದವಳೂ ಆದ ಪತ್ನಿಯನ್ನು, ನೀವು ಬೈದು ಹೆದರಿಸುವು ದನ್ನು ರಾಘವನು ಎಂದಿಗೂ ಕ್ಷಮಿಸಲಾರನು. ಸೀತೆಗೆ ಕೆಟ್ಟಮಾತುಗಳನ್ನಾಡುವುದು

ಭರ್ತ್ಸಿತಾಂ ತರ್ಜಿತಾಂ ವಾಪಿ ನಾನುಮಂಸ್ಯತಿ ರಾಘವಃ ।
ತದಲಂ ಕ್ರೂರವಾಕ್ಯೈರ್ವಃ ಸಾಂತ್ವಮೇವಾಭಿಧೀಯತಾಮ್ ॥ ೪೨
ಅಭಿಯಾಚಾಮ ವೈದೇಹೀಮೇತದ್ಧಿ ಮಮ ರೋಚತೇ ।
ಯಸ್ಯಾಮೇವಂವಿಧಃ ಸ್ವಪ್ನೋ ದುಃಖಿತಾಯಾಂ ಪ್ರದೃಶ್ಯತೇ ॥ ೪೩
ಸಾ ದುಃಖೈರ್ವಿವಿಧೈರ್ಮುಕ್ತಾ ಪ್ರಿಯಂ ಪ್ರಾಪ್ನೋತ್ಯನುತ್ತಮಮ್ ।
ಭರ್ತ್ಸಿತಾಮಪಿ ಯಾಚಧ್ವಂ ರಾಕ್ಷಸ್ಯಃ ಕಿಂ ವಿವಕ್ಷಯಾ ॥ ೪೪
ರಾಘವಾದ್ಧಿ ಭಯಂ ಘೋರಂ ರಾಕ್ಷಸಾನಾಮುಪಸ್ಥಿತಮ್ ।
ಪ್ರಣಿಪಾತಪ್ರಸನ್ನಾ ಹಿ ಮೈಥಿಲೀ ಜನಕಾತ್ಮಜಾ ॥ ೪೫
ಅಲಮೇಷಾ ಪರಿತ್ರಾತುಂ ರಾಕ್ಷಸೀರ್ಮಹತೋ ಭಯಾತ್ ।
ಅಪಿ ಚಾಸ್ಯಾ ವಿಶಾಲಾಕ್ಷ್ಯಾ ನ ಕಿಂಚಿದುಪಲಕ್ಷಯೇ ॥ ೪೬
ವಿರೂಪಮಪಿ ಚಾಂಗೇಷು ಸುಸೂಕ್ಷ್ಮಮಪಿ ಲಕ್ಷಣಮ್ ।
ಛಾಯಾವೈಗುಣ್ಯಮಾತ್ರಂ ತು ಶಂಕೇ ದುಃಖಮುಪಸ್ಥಿತಮ್ ॥ ೪೭
ಅದುಃಖಾರ್ಹಾಮಿಮಾಂ ದೇವೀಂ ವೈಹಾಯಸಮುಪಸ್ಥಿತಾಮ್ ।
ಅರ್ಥಸಿದ್ಧಿಂ ತು ವೈದೇಹ್ಯಾಃ ಪಶ್ಯಾಮ್ಯಹಮುಪಸ್ಥಿತಾಮ್ ॥ ೪೮

ಬೇಡ. ಒಳ್ಳೆಯ ಮಾತನ್ನಾಡಿರಿ ! (೪೧–೪೩). ಅವಳ ಕ್ಷಮೆಯನ್ನು ಬೇಡುವುದೇ ಯುಕ್ತವೆಂದು ನನಗೆ ತೋರುತ್ತದೆ. ಅವಳು ದುಃಖಿತಳಾಗಿರುವ ಸಮಯದಲ್ಲಿ ನನಗೆ ಇಂತಹ ಸ್ವಪ್ನವು ಕಂಡುಬಂದಿರುವುದರಿಂದ, ಅವಳಿಗೆ ದುಃಖವು ನೀಗಿ ಶುಭವಾಗುತ್ತದೆಯೆಂಬುದು ನಿಶ್ಚಯ. ಹೆಚ್ಚು ಹೇಳಿ ಫಲವೇನು? ಕ್ಷಮಿಸಬೇಕೆಂದು ಈಕೆಯನ್ನು ಕೇಳಿಕೊಳ್ಳಿರಿ ! (೪೪). ರಾಕ್ಷಸಿಯರನ್ನು ಕಾಪಾಡಲು ಈಕೆಗೆ ಶಕ್ತಿ ಯುಂಟು. ಇನ್ನೊಂದು ವಿಶೇಷವೇನೆಂದರೆ, ಈ ಸೀತೆಯ ದೇಹದಲ್ಲಿ ಅವಗುಣ ವನ್ನು ಸೂಚಿಸತಕ್ಕ ಯಾವ ಲಕ್ಷಣವೂ ಕಂಡುಬರುವುದಿಲ್ಲ. ಸ್ನಾನಾನುಲೇಪನ ಗಳಿಲ್ಲದೆ ದುಃಖಿಸುತ್ತಿರುವುದರಿಂದ ಮಾತ್ರ ದೇಹಕಾಂತಿಯು ಸ್ವಲ್ಪ ಕುಗ್ಗಿದೆ (೪೫–೪೭). ಈ ದೇವಿಯು ಆಕಾಶಮಾರ್ಗದಲ್ಲಿ ಸಂಚರಿಸಿದುದನ್ನು ನಾನು ಸ್ವಪ್ನದಲ್ಲಿ ಕಂಡಿದ್ದೇನೆ. ಇವಳ ಕಾರ್ಯಸಿದ್ಧಿಯು ಸಮೀಪಿಸಿತೆಂದೇ ತಿಳಿಯುತ್ತೇನೆ. ರಾಕ್ಷಸೇಂದ್ರನಾದ ರಾವಣನ ವಿನಾಶವಾಗುವುದು. ರಾಮನಿಗೆ ವಿಜಯವಾಗು ವುದು. ಈಕೆಯು ಒಳ್ಳೆಯ ಸುದ್ದಿಯನ್ನು ಶೀಘ್ರದಲ್ಲಿ ಕೇಳುವಳೆಂಬುದಕ್ಕೆ ಸಾಕ್ಷಿಯಾಗಿ

ರಾಕ್ಷಸೇಂದ್ರವಿನಾಶಂ ಚ ವಿಜಯಂ ರಾಘವಸ್ಯ ಚ ।
ನಿಮಿತ್ತಭೂತಮೇತತ್ತು ಶ್ರೋತುಮಸ್ಯಾ ಮಹತ್ ಪ್ರಿಯಮ್ ॥ ೪೯
ದೃಶ್ಯತೇ ಚ ಸ್ಫುರಚ್ಚಕ್ಷುಃ ಪದ್ಮಪತ್ರಮಿವಾಯತಮ್ ।
ಈಷಚ್ಚ ಹೃಷಿತೋ ವಾಸ್ಯಾ ದಕ್ಷಿಣಾಯಾ ಹ್ಯದಕ್ಷಿಣಃ ॥ ೫೦
ಅಕಸ್ಮಾದೇವ ವೈದೇಹ್ಯಾ ಬಾಹುರೇಕಃ ಪ್ರಕಂಪತೇ ।
ಕರೇಣುಹಸ್ತಪ್ರತಿಮಃ ಸವ್ಯಶ್ಚೋರುರನುತ್ತಮಃ ॥ ೫೧
ವೇಪಮಾನಃ ಸೂಚಯತಿ ರಾಘವಂ ಪುರತಃ ಸ್ಥಿತಮ್ ॥

ಪಕ್ಷೀ ಚ ಶಾಖಾನಿಲಯಃ ಪ್ರಹೃಷ್ಟಃ
ಪುನಃ ಪುನಶ್ಚೋತ್ತಮಸಾಂತ್ವವಾದೀ ।
ಸುಸ್ವಾಗತಾಂ ವಾಚಮುದೀರಯಾಣಃ
ಪುನಃ ಪುನಶ್ಚೋದಯತೀವ ಹೃಷ್ಟಃ ॥ ೫೨

ತತಃ ಸಾ ಹ್ರೀಮತೀ ಬಾಲಾ ಭರ್ತುರ್ವಿಜಯಹರ್ಷಿತಾ ।
ಅವೋಚದ್ಯದಿ ತತ್ತಥ್ಯಂ ಭವೇಯಂ ಶರಣಂ ಹಿ ವಃ ॥ ೫೩

ಇತಿ ಶ್ರೀಮದ್ರಾಮಾಯಣೇ ಸುಂದರಕಾಂಡೇ ಸಪ್ತವಿಂಶಃ ಸರ್ಗಃ

ಶುಭ ಶಕುನವಾಗುತ್ತಿದೆ (೪೮–೪೯). ತಾವರೆಯ ಎಸಳಿನಂತೆ ವಿಶಾಲವಾದ ಸೀತೆಯ ಎಡಗಣ್ಣು ಹಾರುತ್ತಿದೆ. ಇವಳ ಎಡತೋಳು ಆಗಾಗ ಪುಳಕಿತವಾಗುತ್ತಿದೆ. ಆನೆಯ ಸೊಂಡಿಲಿನಂತಿರುವ ಎಡದ ತೊಡೆ ಅದಿರುತ್ತಿದೆ. ರಘುನಾಥನೇ ಎದುರಿಗೆ ಬಂದು ನಿಂತಿರುವನೋ ಎಂಬ ಶುಭಸೂಚನೆ ಇದು (೫೦–೫೧). ಅಗೋ ! ಆ ಮರದ ಕೊಂಬೆಯಮೇಲೆ ಕುಳಿತಿರುವ ಹಕ್ಕಿಯು ಸೀತೆಗೆ ಶುಭವನ್ನು ಸ್ವಾಗತಿಸುತ್ತ ಆನಂದದಿಂದ 'ಪುನಃ-ಪುನಃ' ಎಂದು ಇಂಪಾಗಿ ಹಾಡುತ್ತಿದೆ !" ಎಂದಳು (೫೨). ಆಗ ಜಾನಕಿಯು ತನ್ನ ಪತಿಗೆ ವಿಜಯವಾಗುವುದೆಂಬ ಮಾತಿನಿಂದ ಹೃಷ್ಟಳಾಗಿ, 'ಈ ಮಾತು ದಿಟವಾದರೆ ನಿಮ್ಮನ್ನು ನಾನು ರಕ್ಷಿಸುತ್ತೇನೆ' ಎಂದು ಲಜ್ಜೆಯಿಂದ ನುಡಿದಳು (೫೩).

ಇಲ್ಲಿಗೆ ಶ್ರೀಮದ್ರಾಮಾಯಣದ ಸುಂದರಕಾಂಡದಲ್ಲಿ ಇಪ್ಪತ್ತೇಳನೆಯ ಸರ್ಗ

ಅಷ್ಟಾವಿಂಶಃ ಸರ್ಗಃ

ಉದ್ಬಂಧನವ್ಯವಸಾಯಃ

ಸಾ ರಾಕ್ಷಸೇಂದ್ರಸ್ಯ ವಚೋ ನಿಶಮ್ಯ
ತದ್ರಾವಣಸ್ಯಾಪ್ರಿಯಮಪ್ರಿಯಾರ್ತಾ ।
ಸೀತಾ ವಿತತ್ರಾಸ ಯಥಾ ವನಾಂತೇ
ಸಿಂಹಾಭಿಪನ್ನಾ ಗಜರಾಜಕನ್ಯಾ ॥ ೧

ಸಾ ರಾಕ್ಷಸೀಮಧ್ಯಗತಾ ಚ ಭೀರು-
ರ್ವಾಗ್ಭಿರ್ಭೃಶಂ ರಾವಣತರ್ಜಿತಾ ಚ ।
ಕಾಂತಾರಮಧ್ಯೇ ವಿಜನೇ ವಿಸೃಷ್ಟಾ
ಬಾಲೇವ ಕನ್ಯಾ ವಿಲಲಾಪ ಸೀತಾ ॥ ೨

ಸತ್ಯಂ ಬತೇದಂ ಪ್ರವದಂತಿ ಲೋಕೇ
ನಾಕಾಲಮೃತ್ಯುರ್ಭವತೀತಿ ಸಂತಃ ।
ಯತ್ರಾಹಮೇವಂ ಪರಿಭರ್ತ್ಸ್ಯಮಾನಾ
ಜೀವಾಮಿ ಕಿಂಚಿತ್ ಕ್ಷಣಮಪ್ಯಪುಣ್ಯಾ ॥ ೩

ಸುಖಾದ್ವಿಹೀನಂ ಬಹುದುಃಖಪೂರ್ಣ-
ಮಿದಂ ತು ನೂನಂ ಹೃದಯಂ ಸ್ಥಿರಂ ಮೇ ।

ಸರ್ಗ ೨೮

ಸೀತೆಯು ಬಹುವಿಧದಲ್ಲಿ ಶೋಕಿಸಿ ನೇಣುಹಾಕಿಕೊಳ್ಳುವುದಕ್ಕಾಗಿ ಯತ್ನಿಸುವುದು.

ರಾವಣನ ಕಠೋರ ಮಾತುಗಳನ್ನು ಕೇಳಿದಾಗಿನಿಂದ ಸೀತೆಯು, ಸಿಂಹಗಳ ಮಧ್ಯದಲ್ಲಿ ಸಿಕ್ಕಿಬಿದ್ದ ಹೆಣ್ಣಾನೆಯಂತೆ, ಭಯದಿಂದ ಕಂಗೆಟ್ಟುಹೋಗಿದ್ದಳು. ನಿರ್ಜನವಾದ ಅಡವಿಯಲ್ಲಿ ಉಳಿದುಹೋದ ಚಿಕ್ಕ ಹುಡುಗಿಯಂತೆ ಅಳುತ್ತ ಹಲುಬತೊಡಗಿದಳು (೧–೨): "ಅಯ್ಯೋ! ಈ ರಾಕ್ಷಸಿಯರು ಇಷ್ಟು ಗೋಳಾಡಿಸುತ್ತಿದ್ದರೂ ಪುಣ್ಯಹೀನೆಯಾದ ನನಗೆ ಮರಣವೇ ಸಂಭವಿಸುವುದಿಲ್ಲ. ಕಾಲ ಬರದೆ ಮರಣವಾಗುವುದಿಲ್ಲವೆಂದು ದೊಡ್ಡವರು ಹೇಳುವುದು ಸುಳ್ಳಲ್ಲ.

ವಿದೀರ್ಯತೇ ಯನ್ನ ಸಹಸ್ರಧಾದ್ಯ
ವಜ್ರಾಹತಂ ಶೃಂಗಮಿವಾಚಲಸ್ಯ ॥ ೪
ನೈವಾಸ್ತಿ ದೋಷೋ ಮಮ ನೂನಮತ್ರ
ವಧ್ಯಾಹಮಸ್ಯಾಪ್ರಿಯದರ್ಶನಸ್ಯ ।
ಭಾವಂ ನ ಚಾಸ್ಯಾಹಮನುಪ್ರದಾತು-
ಮಲಂ ದ್ವಿಜೋ ಮಂತ್ರಮಿವಾದ್ವಿಜಾಯ ॥ ೫
ನೂನಂ ಮಮಾಂಗಾನ್ಯಚಿರಾದನಾರ್ಯಃ
ಶಸ್ತ್ರೈಃ ಶಿತೈಶ್ಛೇತ್ಸ್ಯತಿ ರಾಕ್ಷಸೇಂದ್ರಃ ।
ತಸ್ಮಿನ್ನನಾಗಚ್ಛತಿ ಲೋಕನಾಥೇ
ಗರ್ಭಸ್ಥಜಂತೋರಿವ ಶಲ್ಯಕೃಂತಃ ॥ ೬
ದುಃಖಂ ಬತೇದಂ ಮಮ ದುಃಖಿತಾಯಾ
ಮಾಸೌ ಚಿರಾಯಾಧಿಗಮಿಷ್ಯತೋ ದ್ವೌ ।
ಬದ್ಧಸ್ಯ ವಧ್ಯಸ್ಯ ತಥಾ ನಿಶಾಂತೇ
ರಾಜೋಪರೋಧಾದಿವ ತಸ್ಕರಸ್ಯ ॥ ೭
ಹಾ ರಾಮ ಹಾ ಲಕ್ಷ್ಮಣ ಹಾ ಸುಮಿತ್ರೇ
ಹಾ ರಾಮಮಾತಃ ಸಹ ಮೇ ಜನನ್ಯಾ ।

ವಜ್ರದ ಹೊಡೆತಕ್ಕೆ ಸಿಕ್ಕಿದ ಪರ್ವತಶಿಖರದಂತೆ, ಈ ದುಃಖಗಳಿಂದ ನನ್ನ ಎದೆಯು ಸಾವಿರ ಚೂರುಗಳಾಗಿ ಸೀಳಿಹೋಗಬೇಡವೆ? ನನ್ನ ಎದೆ ಬಹಳ ಗಟ್ಟಿಯಾದದ್ದು (೩–೪). ನಾನು ಆತ್ಮಹತ್ಯೆ ಮಾಡಿಕೊಂಡರೂ ತಪ್ಪಲ್ಲ. ಹೇಗೂ ರಾವಣನ ಕೈಯಿಂದ ಸಾಯಬೇಕಾಗಿದೆ. ದ್ವಿಜನು ರಹಸ್ಯವಾದ ವೇದಮಂತ್ರವನ್ನು ಇತರರಿಗೆ ಹೇಗೆ ಒಪ್ಪಿಸಲಾರನೋ ಹಾಗೆ ನಾನು ನನ್ನ ಅಂತರಂಗವನ್ನು ರಾವಣನಿಗೆ ಒಪ್ಪಿಸಲಾರೆ. ಲೋಕನಾಥನಾದ ರಾಮನು ಇಲ್ಲಿಗೆ ಬಾರದಿದ್ದರೆ, ಗರ್ಭಸ್ಥ ಶಿಶುವನ್ನು ಶಸ್ತ್ರವೈದ್ಯನು ತುಂಡರಿಸುವಂತೆ, ಈ ದುಷ್ಟನು ನನ್ನನ್ನು ಕತ್ತರಿಸಿ ಹಾಕುವನು (೫–೬). ಎರಡು ತಿಂಗಳ ಅವಧಿಯೂ ಮುಗಿದು ಹೋಗುವುದು. ರಾಜದ್ರೋಹಿಯಾದ ಕಳ್ಳನನ್ನು ಸೆರೆಹಿಡಿದು ಬೆಳಗಾದರೆ ಶೂಲಕ್ಕೇರಿಸುವಂತೆ ನನ್ನ ಸ್ಥಿತಿ ಆಯಿತಲ್ಲ! ಹಾ

ಏಷಾ ವಿಪದ್ಯಾಮ್ಯಹಮಲ್ಪಭಾಗ್ಯಾ
ಮಹಾರ್ಣವೇ ನೌರಿವ ಮೂಢವಾತಾ ॥ ೮

ತರಸ್ವಿನೌ ಧಾರಯತಾ ಮೃಗಸ್ಯ
ಸತ್ತ್ವೇನ ರೂಪಂ ಮನುಜೇಂದ್ರಪುತ್ರೌ ।
ನೂನಂ ವಿಶಸ್ತೌ ಮಮ ಕಾರಣಾತ್ತೌ
ಸಿಂಹರ್ಷಭೌ ದ್ವಾವಿವ ವೈದ್ಯುತೇನ ॥ ೯

ನೂನಂ ಸ ಕಾಲೋ ಮೃಗರೂಪಧಾರೀ
ಮಾಮಲ್ಪಭಾಗ್ಯಾಂ ಲುಲುಭೇ ತದಾನೀಮ್ ।
ಯತ್ರಾರ್ಯಪುತ್ರಂ ವಿಸಸರ್ಜ ಮೂಢಾ
ರಾಮಾನುಜಂ ಲಕ್ಷ್ಮಣಪೂರ್ವಜಂ ಚ ॥ ೧೦

ಹಾ ರಾಮ ಸತ್ಯವ್ರತ ದೀರ್ಘಬಾಹೋ
ಹಾ ಪೂರ್ಣಚಂದ್ರಪ್ರತಿಮಾನವಕ್ತ್ರ ।
ಹಾ ಜೀವಲೋಕಸ್ಯ ಹಿತಃ ಪ್ರಿಯಶ್ಚ
ವಧ್ಯಾಂ ನ ಮಾಂ ವೇತ್ಸಿ ಹಿ ರಾಕ್ಷಸಾನಾಮ್ ॥ ೧೧

ಅನನ್ಯದೇವತ್ವಮಿಯಂ ಕ್ಷಮಾ ಚ
ಭೂಮೌ ಚ ಶಯ್ಯಾ ನಿಯಮಶ್ಚ ಧರ್ಮೇ ।

ರಾಮ, ಲಕ್ಷ್ಮಣ, ಹಾ ಸುಮಿತ್ರೆ, ಹಾ ಕೌಸಲ್ಯೇ, ಅಮ್ಮಾ! ಸಮುದ್ರದಲ್ಲಿ ಬಿರುಗಾಳಿಗೆ ಸಿಕ್ಕಿದ ಹಡಗಿನಂತೆ ನಾಶವಾಗಿ ಹೋಗುತ್ತಿದ್ದೇನೆ (೭–೮). ಮಾಯಾಮೃಗದ ವೇಷದಲ್ಲಿ ಬಂದ ರಾಕ್ಷಸನಿಂದ ನನ್ನ ನಿಮಿತ್ತವಾಗಿ ಆ ರಾಜಕುಮಾರರು ಸಿಡಿಲಿಗೆ ಸಿಕ್ಕಿದ ಸಿಂಹಗಳಂತೆ ಹತರಾಗಿರಬೇಕು. ಮೃತ್ಯುವೇ ಜಿಂಕೆಯ ರೂಪದಿಂದ ಬಂದು ಭಾಗ್ಯಹೀನಳಾದ ನನಗೆ ಆಸೆಯನ್ನು ಹುಟ್ಟಿಸಿರಬೇಕು. ಮೂಢೆಯಾದ ನಾನು ರಾಮನನ್ನು ಕಳಿಸಿದ್ದಲ್ಲದೆ, ಲಕ್ಷ್ಮಣನನ್ನೂ ಕಳಿಸಿಬಿಟ್ಟೆನು (೯–೧೦). ಹಾ ರಾಮ, ಸತ್ಯನಿಷ್ಠ ಆಜಾನುಬಾಹು, ಪೂರ್ಣಚಂದ್ರಾನನ, ಈ ರಾಕ್ಷಸರ ಕೈಯಿಂದ ಸಾಯುತ್ತಿದ್ದೇನೆಂದು ನಿನಗೆ ತಿಳಿಯದು. ಪತಿಯನ್ನೇ ದೇವರೆಂದು ನಂಬಿ ತಾಳ್ಮೆಯಿಂದ ನೆಲದಮೇಲೆ ಮಲಗುತ್ತ ಧರ್ಮದಲ್ಲಿ ಶ್ರದ್ಧೆಯನ್ನಿಟ್ಟು ಪಾತಿವ್ರತ್ಯವನ್ನು

ಪತಿವ್ರತಾತ್ವಂ ವಿಫಲಂ ಮಮೇದಂ
ಕೃತಂ ಕೃತಘ್ನೇಷ್ವಿವ ಮಾನುಷಾಣಾಮ್ ॥ ೧೨

ಮೋಘೋ ಹಿ ಧರ್ಮಶ್ಚರಿತೋ ಮಯಾಯಂ
ತಥೈಕಪತ್ನೀತ್ವಮಿದಂ ನಿರರ್ಥಮ್ ।
ಯಾ ತ್ವಾಂ ನ ಪಶ್ಯಾಮಿ ಕೃಶಾ ವಿವರ್ಣಾ
ಹೀನಾ ತ್ವಯಾ ಸಂಗಮನೇ ನಿರಾಶಾ ॥ ೧೩

ಪಿತುರ್ನಿದೇಶಂ ನಿಯಮೇನ ಕೃತ್ವಾ
ವನಾನ್ನಿವೃತ್ತಶ್ಚರಿತವ್ರತಶ್ಚ ।
ಸ್ತ್ರೀಭಿಸ್ತು ಮನ್ಯೇ ವಿಪುಲೇಕ್ಷಣಾಭಿ-
ಸ್ತ್ವಂ ರಂಸ್ಯಸೇ ವೀತಭಯಃ ಕೃತಾರ್ಥಃ ॥ ೧೪

ಅಹಂ ತು ರಾಮ ತ್ವಯಿ ಜಾತಕಾಮಾ
ಚಿರಂ ವಿನಾಶಾಯ ನಿಬದ್ಧಭಾವಾ ।
ಮೋಘಂ ಚರಿತ್ವಾಥ ತಪೋ ವ್ರತಂ ಚ
ತ್ಯಕ್ಷ್ಯಾಮಿ ಧಿಗ್ಜೀವಿತಮಲ್ಪಭಾಗ್ಯಾ ॥ ೧೫

ಸಾ ಜೀವಿತಂ ಕ್ಷಿಪ್ರಮಹಂ ತ್ಯಜೇಯಂ
ವಿಷೇಣ ಶಸ್ತ್ರೇಣ ಶಿತೇನ ವಾಪಿ ।

ಪಾಲಿಸಿಕೊಂಡು ಬಂದದ್ದು ವ್ಯರ್ಥವಾಗಿ ಹೋಯಿತೆ? ಕೃತಘ್ನರಿಗೆ ಉಪಕಾರ ಮಾಡಿದಂತೆ ನಿಷ್ಫಲವಾಯಿತೆ? (೧೧-೧೨). ನಾನು ಆಚರಿಸಿದ ಧರ್ಮವೂ ಪಾತಿವ್ರತ್ಯವೂ ಫಲವನ್ನು ಕೊಡಲಿಲ್ಲ. ಪುನಃ ರಾಮನೊಡನೆ ಸಮಾಗಮ ವಾಗುತ್ತದೆಯೆಂಬುದರಲ್ಲಿ ನಿರಾಶಳಾಗಿದ್ದೇನೆ. ಹಾ ರಾಮ, ನೀನು ಪಿತೃವಾಕ್ಯವನ್ನು ಪರಿಪಾಲಿಸಿ, ಅರಣ್ಯವಾಸದಿಂದ ಹಿಂದಿರುಗಿ, ಸುಂದರಿಯರಾದ ಸ್ತ್ರೀಯರೊಡನೆ ವಿಹರಿಸಬಹುದು (೧೩-೧೪). ನಾನಾದರೋ ನಿನ್ನಲ್ಲಿಯೇ ಅನುರಾಗವನ್ನಿಟ್ಟು ತಪೋನಿಯಮಗಳನ್ನಾಚರಿಸಿ, ಪ್ರಾಣವನ್ನು ಬಿಡುತ್ತಿದ್ದೇನೆ. ಎಲ್ಲವೂ ನಿಷ್ಫಲ ವಾಯಿತು. ಮಂದಭಾಗ್ಯಳಾದ ನನಗೆ ಧಿಕ್ಕಾರ! ನಾನು ಆತ್ಮಹತ್ಯೆ ಮಾಡಿಕೊಳ್ಳುವುದೇ ಲೇಸು. ಆದರೆ ಇಲ್ಲಿ ವಿಷವನ್ನಾಗಲಿ, ಶಸ್ತ್ರವನ್ನಾಗಲಿ ನನಗೆ

ವಿಷಸ್ಯ ದಾತಾ ನ ಹಿ ಮೇಽಸ್ತಿ ಕಶ್ಚಿ-
ಚ್ಛಸ್ತ್ರಸ್ಯ ವಾ ವೇಶ್ಮನಿ ರಾಕ್ಷಸಸ್ಯ ॥ ೧೬

ಇತೀವ ದೇವೀ ಬಹುಧಾ ವಿಲಪ್ಯ
ಸರ್ವಾತ್ಮನಾ ರಾಮಮನುಸ್ಮರಂತೀ ।
ಪ್ರವೇಪಮಾನಾ ಪರಿಶುಷ್ಕವಕ್ತ್ರಾ
ನಗೋತ್ತಮಂ ಪುಷ್ಪಿತಮಾಸಸಾದ ॥ ೧೭

ಶೋಕಾಭಿತಪ್ತಾ ಬಹುಧಾ ವಿಚಿಂತ್ಯ
ಸೀತಾಥ ವೇಣ್ಯುದ್ಗ್ರಥನಂ ಗೃಹೀತ್ವಾ ।
ಉದ್ಬಧ್ಯ ವೇಣ್ಯುದ್ಗ್ರಥನೇನ ಶೀಘ್ರ-
ಮಹಂ ಗಮಿಷ್ಯಾಮಿ ಯಮಸ್ಯ ಮೂಲಮ್ ॥ ೧೮

ಉಪಸ್ಥಿತಾ ಸಾ ಮೃದುಸರ್ವಗಾತ್ರೀ
ಶಾಖಾಂ ಗೃಹಿತ್ವಾಥ ನಗಸ್ಯ ತಸ್ಯ ।
ತಸ್ಯಾಸ್ತು ರಾಮಂ ಪ್ರವಿಚಿಂತಯಂತ್ಯಾ
ರಾಮಾನುಜಂ ಸ್ವಂ ಚ ಕುಲಂ ಶುಭಾಂಗ್ಯಾಃ ॥ ೧೯

ಶೋಕಾನಿಮಿತ್ತಾನಿ ತಥಾ ಬಹೂನಿ
ಧೈರ್ಯಾರ್ಜಿತಾನಿ ಪ್ರವರಾಣಿ ಲೋಕೇ ।

ಕೊಡುವವರು ಯಾರು?'' (೧೫–೧೬). ಹೀಗೆ ಮೈಥಿಲಿಯು ರಾಮನನ್ನೇ ನೆನೆದು ರೋದಿಸುತ್ತ ಬಾಯೊಣಗಿ, ಪುಷ್ಪಿತವಾದ ಆ ಶಿಂಶಪಾವೃಕ್ಷದ ಬಳಿಗೆ ಬಂದಳು. ಅವಳು ನಾನಾವಿಧದಲ್ಲಿ ಚಿಂತಿಸಿ ಕಡೆಗೆ ತನ್ನ ನೀಳವಾದ ವೇಣಿಯನ್ನು ಕೈಯಲ್ಲಿ ಹಿಡಿದು 'ಇದರಿಂದ ನೇಣುಹಾಕಿಕೊಂಡು ಶೀಘ್ರದಲ್ಲಿಯೇ ಯಮನ ಬಳಿಗೆ ಹೋಗುವೆನು' ಎಂದು ಆಲೋಚಿಸಿದಳು (೧೭–೧೮). ಆ ಕೋಮಲಾಂಗಿಯು ಶಿಂಶಪಾವೃಕ್ಷದ ಕೊಂಬೆಯೊಂದನ್ನು ಹಿಡಿದು, ರಾಮ ಲಕ್ಷ್ಮಣರನ್ನೂ ತನ್ನ ಪವಿತ್ರವಾದ ಕುಲವನ್ನೂ ನೆನೆದುಕೊಳ್ಳುತ್ತಿದ್ದಳು. ಅಷ್ಟರಲ್ಲಿ ಅವಳ ಸಮಸ್ತ

ಪ್ರಾದುರ್ನಿಮಿತ್ತಾನಿ ತದಾ ಬಭೂವುಃ
ಪುರಾಪಿ ಸಿದ್ಧಾನ್ಯುಪಲಕ್ಷಿತಾನಿ ॥ ೨೦

ಇತಿ ಶ್ರೀಮದ್ರಾಮಾಯಣೇ ಸುಂದರಕಾಂಡೇ ಅಷ್ಟಾವಿಂಶಃ ಸರ್ಗಃ

ಏಕೋನತ್ರಿಂಶಃ ಸರ್ಗಃ

ಶುಭನಿಮಿತ್ತಾನಿ

ತಥಾಗತಾಂ ತಾಂ ವ್ಯಥಿತಾಮನಿಂದಿತಾಂ
ವ್ಯಪೇತಹರ್ಷಾಂ ಪರಿದೀನಮಾನಸಾಂ ।
ಶುಭಾಂ ನಿಮಿತ್ತಾನಿ ಶುಭಾನಿ ಭೇಜಿರೇ
ನರಂ ಶ್ರಿಯಾ ಜುಷ್ಟಮಿವೋಪಜೀವಿನಃ ॥ ೧

ತಸ್ಯಾಃ ಶುಭಂ ವಾಮಮರಾಲಪಕ್ಷ್ಮ-
ರಾಜೀವೃತಂ ಕೃಷ್ಣವಿಶಾಲಶುಕ್ಲಮ್ ।
ಪ್ರಾಸ್ಪಂದತೈಕಂ ನಯನಂ ಸುಕೇಶ್ಯಾ
ಮೀನಾಹತಂ ಪದ್ಮಮಿವಾಭಿತಾಮ್ರಮ್ ॥ ೨

ಆಪತ್ತುಗಳೂ ಕಳೆದುಹೋಗುತ್ತವೆಯೆಂದು ಧೈರ್ಯವನ್ನು ಕೊಡತಕ್ಕ ಅನೇಕ ಶುಭನಿಮಿತ್ತಗಳುಂಟಾದವು (೧೯–೨೦).

ಇಲ್ಲಿಗೆ ಶ್ರೀಮದ್ರಾಮಾಯಣದ ಸುಂದರಕಾಂಡದಲ್ಲಿ ಇಪ್ಪತ್ತೆಂಟನೆಯ ಸರ್ಗ

ಸರ್ಗ ೨೯

ಸೀತಾದೇವಿಗೆ ಶುಭನಿಮಿತ್ತಗಳುಂಟಾದುದು

ಈ ಪ್ರಕಾರದಲ್ಲಿ ಹರ್ಷವಿಲ್ಲದೆ ಕುಂದಿ ಕೊರಗುತ್ತಿದ್ದ ಸೀತಾದೇವಿಗೆ, ಶ್ರೀಮಂತನ ಕಾರ್ಯಕ್ಕೆ ಸೇವಕರು ಬಂದು ಒದಗುವಂತೆ, ಅನೇಕ ಶುಭ ನಿಮಿತ್ತಗಳು ತಲೆದೋರಿದವು. ಶುಭಲಕ್ಷಣಯುತವಾಗಿ ಕಪ್ಪಾದ ಕಣ್ಣಾಲೆಯುಳ್ಳ

ಭುಜಶ್ಚ ಚಾರ್ವಂಚಿತಪೀನವೃತ್ತಃ
ಪರಾರ್ಧ್ಯಕಾಲಾಗರುಚಂದನಾರ್ಹಃ ।
ಅನುತ್ತಮೇನಾಧ್ಯುಷಿತಃ ಪ್ರಿಯೇಣ
ಚಿರೇಣ ವಾಮಃ ಸಮವೇಪತಾಶು ॥ ೩

ಗಜೇಂದ್ರಹಸ್ತಪ್ರತಿಮಶ್ಚ ಪೀನ-
ಸ್ತಯೋರ್ದ್ವಯೋಃ ಸಂಹತಯೋಃ ಸುಜಾತಃ ।
ಪ್ರಸ್ಪಂದಮಾನಃ ಪುನರೂರುರಸ್ಯಾ
ರಾಮಂ ಪುರಸ್ತಾತ್ ಸ್ಥಿತಮಾಚಚಕ್ಷೇ ॥ ೪

ಶುಭಂ ಪುನರ್ಹೇಮಸಮಾನವರ್ಣ-
ಮೀಷದ್ರಜೋಧ್ವಸ್ತಮಿವಾಮಲಾಕ್ಷ್ಯಾಃ ।
ವಾಸಃ ಸ್ಥಿತಾಯಾಃ ಶಿಖರಾಗ್ರದತ್ಯಾಃ
ಕಿಂಚಿತ್ ಪರಿಸ್ರಂಸತ ಚಾರುಗಾತ್ರ್ಯಾಃ ॥ ೫

ಏತೈರ್ನಿಮಿತ್ತೈರಪರೈಶ್ಚ ಸುಭ್ರೂಃ
ಸಂಬೋಧಿತಾ ಪ್ರಾಗಪಿ ಸಾಧುಸಿದ್ಧೈಃ ।
ವಾತಾತಪಕ್ಲಾಂತಮಿವ ಪ್ರನಷ್ಟಂ
ವರ್ಷೇಣ ಬೀಜಂ ಪ್ರದಿಸಂಜಹರ್ಷ ॥ ೬

ಆಕೆಯ ಎಡಗಣ್ಣು ಮೀನಿನಿಂದ ಅಲುಗಿಸಲ್ಪಟ್ಟ ಪದ್ಮದಂತೆ ಅದುರಿತು (೧–೨). ದುಂಡಗೆ ನುಣುಪಾಗಿ, ಚಂದನಲೇಪನಕ್ಕೆ ಯೋಗ್ಯವಾಗಿ, ಶ್ರೀರಾಮನ ಆಲಿಂಗನಸುಖವನ್ನು ಅನುಭವಿಸಿದ್ದ ಆಕೆಯ ಎಡದೋಳು ಹಾರತೊಡಗಿತು. ಆನೆಯ ಸೊಂಡಿಲಿನಂತೆ ಮನೋಹರವಾಗಿದ್ದ ವಾಮಭಾಗದ ತೊಡೆಯು ನಡುಗುತ್ತ ಶ್ರೀರಾಮನು ಪ್ರತ್ಯಕ್ಷವಾಗಿ ಬಂದು ನಿಂತಿದ್ದಾನೆಂದು ಸೂಚಿಸುವಂತೆ ಇತ್ತು (೩–೪). ದಾಡಿಮಬೀಜಗಳಂತೆ ಹಲ್ಲುಗಳುಳ್ಳ ಆ ಸುಂದರಿಯು ನಿಂತಿರುವಾಗ, ಸ್ವಲ್ಪ ಮಲಿನವಾದ ಆಕೆಯ ಹೊಂಬಣ್ಣದ ದುಕೂಲವು ಕೊಂಚ ಸಡಿಲಿತು. ಇವೇ ಮೊದಲಾದ ಇನ್ನೂ ಅನೇಕ ಶುಭ ಶಕುನಗಳುಂಟಾದವು. ಇವು ಹಿಂದೆ ಸೀತಾದೇವಿಗೆ ತಪ್ಪದೆ ಫಲಸಿದ್ಧಿಯನ್ನು ಸೂಚಿಸಿ ನಂಬಿಕೆಯನ್ನು

ತಸ್ಯಾಃ ಪುನರ್ಬಿಂಬಫಲಾಧರೋಷ್ಠಂ
ಸ್ವಕ್ಷಿಭ್ರು ಕೇಶಾಂತಮರಾಲಪಕ್ಷ್ಮ ।
ವಕ್ತ್ರಂ ಬಭಾಸೇ ಸ್ಮಿತಶುಕ್ಲದಂಷ್ಟ್ರಂ
ರಾಹೋರ್ಮುಖಾಚ್ಚಂದ್ರ ಇವ ಪ್ರಮುಕ್ತಃ ॥ ೭

ಸಾ ವೀತಶೋಕಾ ವ್ಯಪನೀತತಂದ್ರೀ
ಶಾಂತಜ್ವರಾ ಹರ್ಷವಿವೃದ್ಧಸತ್ತ್ವಾ ।
ಅಶೋಭತಾರ್ಯಾ ವದನೇನ ಶುಕ್ಲೇ
ಶೀತಾಂಶುನಾ ರಾತ್ರಿರಿವೋದಿತೇನ ॥ ೮

ಇತಿ ಶ್ರೀಮದ್ರಾಮಾಯಣೇ ಸುಂದರಕಾಂಡೇ ಏಕೋನತ್ರಿಂಶಃ ಸರ್ಗಃ

ಉಂಟುಮಾಡಿದ್ದವು. ಗಾಳಿ ಬಿಸಿಲುಗಳಿಂದ ಕಂಗೆಟ್ಟಿರುವ ಪೈರು ಮಳೆ ಬಿದ್ದೊಡನೆ ಚಿಗುರಿ ಉಲ್ಲಾಸ ಹೊಂದುವಂತೆ, ಈ ಶುಭನಿಮಿತ್ತಗಳಾಗಲು ಸೀತಾದೇವಿಯು ಉಲ್ಲಾಸಗೊಂಡಳು (೫–೬). ತೊಂಡೆಹಣ್ಣಿನಂತಿರುವ ತುಟಿಯಿಂದಲೂ, ಮನೋಹರವಾದ ಕಣ್ಣು ಹುಬ್ಬು ಮುಂಗುರುಳುಗಳಿಂದಲೂ, ಮಂದಹಾಸದಿಂದ ಶುಭ್ರವಾದ ಹಲ್ಲುಗಳಿಂದಲೂ ಕೂಡಿದ ಆಕೆಯ ಮುಖವು ರಾಹುವಿನಿಂದ ಬಿಡುಗಡೆಹೊಂದಿದ ಚಂದ್ರನಂತೆ ಕಳೆಯೇರಿತು (೭). ಆ ದೇವಿಯ ಶೋಕವು ತಗ್ಗಿತು. ಬೇಸರವು ಕಡಿಮೆಯಾಯಿತು. ಮನಸ್ಸಿನ ತಾಪವು ಇಳಿಯಿತು. ಹರ್ಷದಿಂದ ಚಿತ್ತವು ಉಲ್ಲಸಿತವಾಯಿತು. ಅವಳ ಮುಖವು ಸಂತೋಷದಿಂದ ಹಿಗ್ಗಿ, ಶುಕ್ಲಪಕ್ಷದ ರಾತ್ರಿಯಲ್ಲಿ ಉದಯಿಸಿದ ಚಂದ್ರನಂತೆ ಚಂದವಾಯಿತು (೮).

ಇಲ್ಲಿಗೆ ಶ್ರೀಮದ್ರಾಮಾಯಣದ ಸುಂದರಕಾಂಡದಲ್ಲಿ ಇಪ್ಪತ್ತೊಂಬತನೆಯ ಸರ್ಗ

ತ್ರಿಂಶಃ ಸರ್ಗಃ

ಹನೂಮತ್ಕೃತ್ಯಾಕೃತ್ಯ ವಿಚಿಂತನಮ್

ಹನುಮಾನಪಿ ವಿಶ್ರಾಂತಃ ಸರ್ವಂ ಶುಶ್ರಾವ ತತ್ತ್ವತಃ ।
ಸೀತಾಯಾಸ್ತ್ರಿಜಟಾಯಾಶ್ಚ ರಾಕ್ಷಸೀನಾಂ ಚ ತರ್ಜನಮ್ ॥ ೧

ಅವೇಕ್ಷಮಾಣಸ್ತಾಂ ದೇವೀಂ ದೇವತಾಮಿವ ನಂದನೇ ।
ತತೋ ಬಹುವಿಧಾಂ ಚಿಂತಾಂ ಚಿಂತಯಾಮಾಸ ವಾನರಃ ॥ ೨

ಯಾಂ ಕಪೀನಾಂ ಸಹಸ್ರಾಣಿ ಸುಬಹೂನ್ಯಯುತಾನಿ ಚ ।
ದಿಕ್ಷು ಸರ್ವಾಸು ಮಾರ್ಗಂತೇ ಸೇಯಮಾಸಾದಿತಾ ಮಯಾ ॥ ೩

ಚಾರೇಣ ತು ಸುಯುಕ್ತೇನ ಶತ್ರೋಃ ಶಕ್ತಿಮವೇಕ್ಷತಾ ।
ಗೂಢೇನ ಚರತಾ ತಾವದವೇಕ್ಷಿತಮಿದಂ ಮಯಾ ॥ ೪

ರಾಕ್ಷಸಾನಾಂ ವಿಶೇಷಶ್ಚ ಪುರೀ ಚೇಯಮವೇಕ್ಷಿತಾ ।
ರಾಕ್ಷಸಾಧಿಪತೇರಸ್ಯ ಪ್ರಭಾವೋ ರಾವಣಸ್ಯ ಚ ॥ ೫

ಸರ್ಗ ೩೦

ಹನುಮಂತನು ಸೀತಾದೇವಿಯನ್ನು ಸಮಾಧಾನಪಡಿಸಬೇಕೆಂದು ಆಲೋಚಿಸುವುದು.

ಹನುಮಂತನು ಮರದಮೇಲೆ ಕುಳಿತು ಸೀತೆಯ ವಿಲಾಪವನ್ನೂ ತ್ರಿಜಟೆಯ ಸ್ವಪ್ನವೃತ್ತಾಂತವನ್ನೂ ರಾಕ್ಷಸಿಯರ ಬೆದರಿಕೆಯ ಮಾತುಗಳನ್ನೂ ಕೇಳುತ್ತಿದ್ದನು. ನಂದನವನದಲ್ಲಿ ದೇವತಾಸ್ತ್ರೀಯಂತೆ ಅಶೋಕವನದಲ್ಲಿ ಶೋಭಿಸುತ್ತಿದ್ದ ಜಾನಕಿಯನ್ನು ನೋಡುತ್ತ, ಅವನು ಬಹುವಿಧವಾಗಿ ಚಿಂತಿಸಿದನು (೧–೨) : "ಲಕ್ಷೋಪಲಕ್ಷ ಕಪಿಗಳು ನಾನಾ ದಿಕ್ಕುಗಳಲ್ಲಿ ಯಾವಳನ್ನು ಹುಡುಕುತ್ತಿರುವರೋ, ಆಕೆಯು ನನಗೆ ಗೋಚರಿಸಿಬಿಟ್ಟಳು. ನಾನು ಇಲ್ಲಿ ಯಾರಿಗೂ ಗೊತ್ತಾಗದಂತೆ ಎಚ್ಚರಿಕೆಯಿಂದ ಸಂಚರಿಸುತ್ತ, ಅನೇಕ ವಿಷಯಗಳನ್ನು ತಿಳಿದುಕೊಂಡೆನು. ಈ ರಾಕ್ಷಸರಲ್ಲಿರುವ ವಿಶೇಷವನ್ನೂ ಲಂಕಾಪಟ್ಟಣದ

ಯುಕ್ತಂ ತಸ್ಯಾಪ್ರಮೇಯಸ್ಯ ಸರ್ವಸತ್ತ್ವದಯಾವತಃ ।
ಸಮಾಶ್ವಾಸಯಿತುಂ ಭಾರ್ಯಾಂ ಪತಿದರ್ಶನಕಾಂಕ್ಷಿಣೀಮ್ ॥ ೬

ಅಹಮಾಶ್ವಾಸಯಾಮ್ಯೇನಾಂ ಪೂರ್ಣಚಂದ್ರನಿಭಾನನಾಮ್ ।
ಅದೃಷ್ಟದುಃಖಾಂ ದುಃಖಾರ್ತಾಂ ದುಃಖಸ್ಯಾಂತಮಗಚ್ಛತೀಮ್ ॥ ೭

ಯದಿ ಹ್ಯಹಮಿಮಾಂ ದೇವೀಂ ಶೋಕೋಪಹತಚೇತನಾಮ್ ।
ಅನಾಶ್ವಾಸ್ಯ ಗಮಿಷ್ಯಾಮಿ ದೋಷವದ್ಗಮನಂ ಭವೇತ್ ॥ ೮

ಗತೇ ಹಿ ಮಯಿ ತತ್ರೇಯಂ ರಾಜಪುತ್ರೀ ಯಶಸ್ವಿನೀ ।
ಪರಿತ್ರಾಣಮವಿಂದಂತೀ ಜಾನಕೀ ಜೀವಿತಂ ತ್ಯಜೇತ್ ॥ ೯

ಮಯಾ ಚ ಸ ಮಹಾಬಾಹುಃ ಪೂರ್ಣಚಂದ್ರನಿಭಾನನಃ ।
ಸಮಾಶ್ವಾಸಯಿತುಂ ನ್ಯಾಯ್ಯಃ ಸೀತಾದರ್ಶನಲಾಲಸಃ ॥ ೧೦

ನಿಶಾಚರೀಣಾಂ ಪ್ರತ್ಯಕ್ಷಮನರ್ಹಂ ಚಾಪಿ ಭಾಷಣಮ್ ।
ಕಥಂ ನು ಖಲು ಕರ್ತವ್ಯಮಿದಂ ಕೃಚ್ಛ್ರಗತೋ ಹ್ಯಹಮ್ ॥ ೧೧

ಅನೇನ ರಾತ್ರಿಶೇಷೇಣ ಯದಿ ನಾಶ್ವಾಸ್ಯತೇ ಮಯಾ ।
ಸರ್ವಥಾ ನಾಸ್ತಿ ಸಂದೇಹಃ ಪರಿತ್ಯಕ್ಷ್ಯತಿ ಜೀವಿತಮ್ ॥ ೧೨

ಸ್ಥಿತಿಯನ್ನೂ ರಾವಣನ ಪ್ರಭಾವವನ್ನೂ ಕಂಡೆನು (೩–೫). ಈಗ ಅಪಾರ ಮಹಿಮನೂ ಸಮಸ್ತಭೂತಗಳಲ್ಲಿ ಕರುಣಾಶಾಲಿಯೂ ಆದ ಶ್ರೀರಾಮನ ಪತ್ನಿಯನ್ನು ಸಮಾಧಾನಪಡಿಸುವುದು ಉತ್ತಮ. ಈ ಪೂರ್ಣಚಂದ್ರಮುಖಿಯು ದುಃಖವನ್ನೇ ಕಂಡವಳಲ್ಲ. ಈಗ ದುಃಖಾರ್ತಳಾಗಿ ಅದರ ಕೊನೆಯನ್ನೇ ಕಾಣದಂತಾಗಿರುವಳು (೬–೭). ಶೋಕಾರ್ತಳಾದ ಈಕೆಯನ್ನು ಸಮಾಧಾನ ಪಡಿಸದೆ ನಾನು ಹೊರಟುಹೋದರೆ ದೊಡ್ಡ ತಪ್ಪಾಗುವುದು. ನಾನು ಸುಮ್ಮನೆ ಹೋಗಿಬಿಟ್ಟರೆ, ಈ ಜಾನಕಿಯು ಬೇರೆ ಗತಿಯನ್ನು ಕಾಣದೆ ಜೀವಿತವನ್ನೇ ತ್ಯಜಿಸ ಬಹುದು. ಅತ್ತ ರಾಮಚಂದ್ರನೂ ಸೀತೆಯನ್ನು ನೋಡಲು ಉತ್ಸುಕನಾಗಿರುವು ದರಿಂದ, ಈಕೆಯ ಸಂದೇಶವನ್ನೊಯ್ದು ಸಮಾಧಾನಪಡಿಸುವುದು ಯುಕ್ತವಾಗಿದೆ (೮–೧೦). ಈ ರಾಕ್ಷಸಿಯರ ಎದುರಿಗೆ ನಾನು ಸೀತೆಯೊಡನೆ ಸಂಭಾಷಣೆ

ರಾಮಶ್ಚ ಯದಿ ಪೃಚ್ಛೇನ್ಮಾಂ ಕಿಂ ಮಾಂ ಸೀತಾಬ್ರವೀದ್ವಚಃ ।
ಕಿಮಹಂ ತಂ ಪ್ರತಿಬ್ರೂಯಾಮಸಂಭಾಷ್ಯ ಸುಮಧ್ಯಮಾಮ್ ॥ ೧೩

ಸೀತಾಸಂದೇಶರಹಿತಂ ಮಾಮಿತಸ್ತ್ವರಯಾ ಗತಮ್ ।
ನಿರ್ದಹೇದಪಿ ಕಾಕುತ್ಸ್ಥಃ ಕ್ರುದ್ಧಸ್ತೀವ್ರೇಣ ಚಕ್ಷುಷಾ ॥ ೧೪

ಯದಿ ಚೋದ್ಯೋಜಯಿಷ್ಯಾಮಿ ಭರ್ತಾರಂ ರಾಮಕಾರಣಾತ್ ।
ವ್ಯರ್ಥಮಾಗಮನಂ ತಸ್ಯ ಸಸೈನ್ಯಸ್ಯ ಭವಿಷ್ಯತಿ ॥ ೧೫

ಅಂತರಂ ತ್ವಹಮಾಸಾದ್ಯ ರಾಕ್ಷಸೀನಾಮಿಹ ಸ್ಥಿತಃ ।
ಶನೈರಾಶ್ವಾಸಯಿಷ್ಯಾಮಿ ಸಂತಾಪಬಹುಲಾಮಿಮಾಮ್ ॥ ೧೬

ಅಹಂ ತ್ವತಿತನುಶ್ಚೈವ ವಾನರಶ್ಚ ವಿಶೇಷತಃ ।
ವಾಚಂ ಚೋದಾಹರಿಷ್ಯಾಮಿ ಮಾನುಷೀಮಿಹ ಸಂಸ್ಕೃತಾಮ್ ॥ ೧೭

ಮಾಡುವುದು ಯೋಗ್ಯವಲ್ಲ. ಈಗ ಏನು ಮಾಡಬೇಕು? ಪೇಚಿನಲ್ಲಿ ಸಿಕ್ಕಿಕೊಂಡೆನಲ್ಲ! ಈ ರಾತ್ರಿಯು ಕಳೆಯುವುದರೊಳಗೆ ಸಮಾಧಾನಪಡಿಸದಿದ್ದರೆ, ಇವಳು ಪ್ರಾಣವನ್ನು ಬಿಡುವುದರಲ್ಲಿ ಸಂದೇಹವಿಲ್ಲ (೧೧–೧೨). ಅಲ್ಲದೆ ಈಕೆಯೊಡನೆ ಮಾತನಾಡದೆಯೇ ನಾನು ಹಿಂತಿರುಗಿದಲ್ಲಿ 'ಸೀತೆಯು ನನಗೆ ಏನು ಹೇಳಿದ್ದಾಳೆ ?' ಎಂದು ಶ್ರೀರಾಮನು ಕೇಳಿದರೆ, ನಾನು ಏನೆಂದು ಉತ್ತರ ಹೇಳಬೇಕು ? ಸೀತೆಯ ಸಂದೇಶವನ್ನು ಕೇಳಿಕೊಳ್ಳದೆ ಅವಸರದಿಂದ ಹೊರಟು ಹೋದರೆ, ಶ್ರೀರಾಮನು ಕ್ರುದ್ಧನಾಗಿ ಕೆಂಗಣ್ಣಿನಿಂದ ನನ್ನನ್ನು ಸುಟ್ಟುಬಿಡಬಹುದು (೧೩–೧೪). ನಾನು ರಾಮನಿಗೋಸ್ಕರ ಸುಗ್ರೀವನೇ ಸೈನ್ಯಸಮೇತನಾಗಿ ಇಲ್ಲಿಗೆ ಬರುವಂತೆ ಮಾಡಬಹುದು. ಆದರೂ ಅಷ್ಟರಲ್ಲಿ ಈಕೆಯು ಪ್ರಾಣತ್ಯಾಗ ಮಾಡಿದರೆ, ಅವನು ಬಂದುದೂ ವ್ಯರ್ಥವಾಗುತ್ತದೆ. ಆದ್ದರಿಂದ ಈ ರಾಕ್ಷಸ ಸ್ತ್ರೀಯರಿಗೆ ಗೊತ್ತಾಗದಂತೆ ಸಮಯವನ್ನು ಕಾದು, ದುಃಖದಿಂದ ಕುದಿಯುತ್ತಿರುವ ಈಕೆಯನ್ನು ಮೆಲ್ಲಗೆ ಸಮಾಧಾನಪಡಿಸುವೆನು (೧೫–೧೬). ನಾನಾದರೋ ದೊಡ್ಡ ಶರೀರದವನು.* ಅದರಲ್ಲಿಯೂ ವಾನರನು. ಮೇಲಾಗಿ ಮನುಷ್ಯರಾಡುವ

---

*(ಈಗ) ಚಿಕ್ಕಶರೀರದವನಾಗಿದ್ದೇನೆ ಎಂದೂ ಅರ್ಥ ಮಾಡಬಹುದು. ತನು=ದೇಹ ; ಚಿಕ್ಕ, ಕೃಶ.

ಯದಿ ವಾಚಂ ಪ್ರದಾಸ್ಯಾಮಿ ದ್ವಿಜಾತಿರಿವ ಸಂಸ್ಕೃತಾಮ್ ।
ರಾವಣಂ ಮನ್ಯಮಾನಾ ಮಾಂ ಸೀತಾ ಭೀತಾ ಭವಿಷ್ಯತಿ ॥ ೧೮

ವಾನರಸ್ಯ ವಿಶೇಷೇಣ ಕಥಂ ಸ್ಯಾದಭಿಭಾಷಣಮ್ ।
ಅವಶ್ಯಮೇವ ವಕ್ತವ್ಯಂ ಮಾನುಷಂ ವಾಕ್ಯಮರ್ಥವತ್ ॥ ೧೯

ಮಯಾ ಸಾಂತ್ವಯಿತುಂ ಶಕ್ಯಾ ನಾನ್ಯಥೇಯಮನಿಂದಿತಾ ।
ಸೇಯಮಾಲೋಕ್ಯ ಮೇ ರೂಪಂ ಜಾನಕೀ ಭಾಷಿತಂ ತಥಾ ॥ ೨೦

ರಕ್ಷೋಭಿಸ್ತ್ರಾಸಿತಾ ಪೂರ್ವಂ ಭೂಯಸ್ತ್ರಾಸಂ ಗಮಿಷ್ಯತಿ ।
ತತೋ ಜಾತಪರಿತ್ರಾಸಾ ಶಬ್ದಂ ಕುರ್ಯಾನ್ಮನಸ್ವಿನೀ ॥ ೨೧

ಜಾನಾನಾ ಮಾಂ ವಿಶಾಲಾಕ್ಷೀ ರಾವಣಂ ಕಾಮರೂಪಿಣಮ್ ।
ಸೀತಯಾ ಚ ಕೃತೇ ಶಬ್ದೇ ಸಹಸಾ ರಾಕ್ಷಸೀಗಣಃ ॥ ೨೨

ನಾನಾಪ್ರಹರಣೋ ಘೋರಃ ಸಮೇಯಾದಂತಕೋಪಮಃ ।
ತತೋ ಮಾಂ ಸಂಪರಿಕ್ಷಿಪ್ಯ ಸರ್ವತೋ ವಿಕೃತಾನನಾಃ ॥ ೨೩

ಸಂಸ್ಕೃತಭಾಷೆಯಲ್ಲಿ ಮಾತನಾಡುತ್ತೇನೆ! ದ್ವಿಜನಂತೆ ನಾನು ಸಂಸ್ಕೃತದಲ್ಲಿ ಮಾತನಾಡಿದರೆ, ಸೀತೆಯು ನಾನು ರಾವಣನೆಂದೇ ತಿಳಿದು ಭಯಪಡುವಳು (೧೭–೧೮). ವಾನರನು ಮಾತನಾಡುವುದೆಂದರೇನು! ಆದರೂ ನಾನು ಮನುಷ್ಯಭಾಷೆಯಿಂದಲೇ ಮಾತನಾಡಿ ಸೀತಾದೇವಿಯನ್ನು ಸಂತೈಸಬೇಕಲ್ಲದೆ ಬೇರೆ ಉಪಾಯವಿಲ್ಲ. ರಾಕ್ಷಸಿಯರಿಂದ ಮೊದಲೇ ಇವಳು ಭಯಗೊಂಡಿದ್ದಾಳೆ. ನನ್ನ ಈ ರೂಪವನ್ನೂ ಭಾಷೆಯನ್ನೂ ಕಂಡು ಇನ್ನೂ ಗಾಬರಿಯಾಗಬಹುದು. ಭಯದಿಂದ ಕೂಗಿಕೊಂಡುಬಿಟ್ಟಾಳು (೧೯–೨೧). ಈ ವಿಶಾಲಾಕ್ಷಿಯು ನನ್ನನ್ನು ಕಾಮರೂಪಿಯಾದ ರಾವಣನೆಂದು ಭಾವಿಸಬಹುದು. ಇವಳು ಕೂಗಿಕೊಂಡರೆ ಮೃತ್ಯುವಿನಂತಿರುವ ಈ ಘೋರ ರಾಕ್ಷಸಿಯರು ವಿವಿಧಾಯುಧಗಳನ್ನು ಹಿಡಿದುಕೊಂಡು ಬಂದು ನನ್ನನ್ನು ಮುತ್ತಿಕೊಳ್ಳುವರು. ನನ್ನನ್ನು ಕೊಲ್ಲುವುದಕ್ಕೋ ಸೆರೆಹಿಡಿಯುವುದಕ್ಕೋ ಯಥಾಶಕ್ತಿ ಪ್ರಯತ್ನಿಸುವರು. ನಾನು ಮರದ ಕೊಂಬೆಗಳನ್ನೂ ದಿಮ್ಮಿಗಳನ್ನೂ ಹಿಡಿದು ಅವರಮೇಲೆ ತಿರುಗಿ ಬೀಳಬೇಕಾದೀತು

ವಧೇ ಚ ಗ್ರಹಣೇ ಚೈವ ಕುರ್ಯುರ್ಯತ್ನಂ ಯಥಾಬಲಮ್ ।
ಗೃಹ್ಯ ಶಾಖಾಃ ಪ್ರಶಾಖಾಶ್ಚ ಸ್ಕಂಧಾಂಶ್ಚೋತ್ತಮಶಾಖಿನಾಮ್ ॥ ೨೪
ದೃಷ್ಟ್ವಾ ವಿಪರಿಧಾವಂತಂ ಭವೇಯುರ್ಭಯಶಂಕಿತಾಃ ।
ಮಮ ರೂಪಂ ಚ ಸಂಪ್ರೇಕ್ಷ್ಯ ವನೇ ವಿಚರತೋ ಮಹತ್ ॥ ೨೫
ರಾಕ್ಷಸ್ಯೋ ಭಯವಿತ್ರಸ್ತಾ ಭವೇಯುರ್ವಿಕೃತಾನನಾಃ ।
ತತಃ ಕುರ್ಯುಃ ಸಮಾಹ್ವಾನಂ ರಾಕ್ಷಸ್ಯೋ ರಕ್ಷಸಾಮಪಿ ॥ ೨೬
ರಾಕ್ಷಸೇಂದ್ರನಿಯುಕ್ತಾನಾಂ ರಾಕ್ಷಸೇಂದ್ರನಿವೇಶನೇ ।
ತೇ ಶೂಲಶಕ್ತಿನಿಸ್ತ್ರಿಂಶವಿವಿಧಾಯುಧಪಾಣಯಃ ॥ ೨೭
ಆಪತೇಯುರ್ವಿಮರ್ದೇಽಸ್ಮಿನ್ ವೇಗೇನೋದ್ವೇಗಕಾರಣಾತ್ ।
ಸಂರುದ್ಧಸ್ತೈಸ್ತು ಪರಿತೋ ವಿಧಮನ್ ರಕ್ಷಸಾಂ ಬಲಮ್ ॥ ೨೮
ಶಕ್ನುಯಾಂ ನ ತು ಸಂಪ್ರಾಪ್ತುಂ ಪರಂ ಪಾರಂ ಮಹೋದಧೇಃ ।
ಮಾಂ ವಾ ಗೃಹ್ಣೀಯುರಾಪ್ಲುತ್ಯ ಬಹವಃ ಶೀಘ್ರಕಾರಿಣಃ ॥ ೨೯
ಸ್ಯಾದಿಯಂ ಚಾಗೃಹೀತಾರ್ಥಾ ಮಮ ಚ ಗ್ರಹಣಂ ಭವೇತ್ ।
ಹಿಂಸಾಭಿರುಚಯೋ ಹಿಂಸ್ಯುರಿಮಾಂ ವಾ ಜನಕಾತ್ಮಜಾಮ್ ॥ ೩೦

(೨೨–೨೪). ನನ್ನ ದೊಡ್ಡ ಆಕೃತಿಯನ್ನೂ ಸಂಚಾರವೇಗವನ್ನೂ ನೋಡಿ ಈ ಕೆಟ್ಟ ಮೋರೆಯ ರಾಕ್ಷಸಿಯರು ಭಯದಿಂದ ತಲ್ಲಣಿಸಿಹೋದಾರು! ಆಗ ರಾವಣನ ಅರಮನೆಯಲ್ಲಿ ಕಾವಲಿರುವ ರಾಕ್ಷಸರನ್ನು ಸಹಾಯಕ್ಕಾಗಿ ಇವರು ಕರೆತರಬಹುದು (೨೫–೨೬). ಅವರು ಶೂಲ, ಶಕ್ತಿ, ಖಡ್ಗ ಮುಂತಾದ ಆಯುಧಗಳನ್ನು ಧರಿಸಿ ಶೀಘ್ರದಲ್ಲಿ ನನ್ನೊಡನೆ ಯುದ್ಧಕ್ಕೆ ಬರಬಹುದು. ರಾಕ್ಷಸರು ಸುತ್ತಲೂ ಮುತ್ತಿಕೊಂಡಾಗ ಅವರೊಡನೆ ಹೋರಾಡುತ್ತಾ ಇದ್ದರೆ, ಸಮುದ್ರವನ್ನು ದಾಟಿ ಹಿಂತಿರುಗಲು ನನಗೆ ಸಾಧ್ಯವಾಗುವುದೋ ಇಲ್ಲವೋ? ಅವರು ಬಹುಮಂದಿ ಇರುವುದರಿಂದ ವೇಗದಿಂದ ನನ್ನನ್ನು ಅಡ್ಡಗಟ್ಟಿ ಹಿಡಿಯಬಹುದು (೨೭–೨೯). ಸೀತಾದೇವಿಯ ಕೆಲಸವೂ ಕೆಟ್ಟುಹೋಗುವುದು. ನಾನು ಸೆರೆಸಿಕ್ಕುವೆನು. ಹಿಂಸೆಯಲ್ಲಿಯೇ ಅಭಿರುಚಿಯುಳ್ಳ ಈ ರಾಕ್ಷಸರು ಜಾನಕಿಗೆ ಇನ್ನೂ ಹಿಂಸೆಯನ್ನು

ವಿಪನ್ನಂ ಸ್ಯಾತ್ತತಃ ಕಾರ್ಯಂ ರಾಮಸುಗ್ರೀವಯೋರಿದಮ್ ।
ಉದ್ದೇಶೇ ನಷ್ಟಮಾರ್ಗೇಽಸ್ಮಿನ್ ರಾಕ್ಷಸೈಃ ಪರಿವಾರಿತೇ ॥ ೩೧

ಸಾಗರೇಣ ಪರಿಕ್ಷಿಪ್ತೇ ಗುಪ್ತೇ ವಸತಿ ಜಾನಕೀ ।
ವಿಶಸ್ತೇ ವಾ ಗೃಹೀತೇ ವಾ ರಕ್ಷೋಭಿರ್ಮಯಿ ಸಂಯುಗೇ ॥ ೩೨

ನಾನ್ಯಂ ಪಶ್ಯಾಮಿ ರಾಮಸ್ಯ ಸಾಹಾಯ್ಯಂ ಕಾರ್ಯಸಾಧನೇ ।
ವಿಮೃಶಂಶ್ಚ ನ ಪಶ್ಯಾಮಿ ಯೋ ಹತೇ ಮಯಿ ವಾನರಃ ॥ ೩೩

ಶತಯೋಜನವಿಸ್ತೀರ್ಣಂ ಲಂಘಯೇತ ಮಹೋದಧಿಮ್ ।
ಕಾಮಂ ಹಂತುಂ ಸಮರ್ಥೋಽಸ್ಮಿ ಸಹಸ್ರಾಣ್ಯಪಿ ರಕ್ಷಸಾಮ್ ॥ ೩೪

ನ ತು ಶಕ್ಷ್ಯಾಮಿ ಸಂಪ್ರಾಪ್ತುಂ ಪರಂ ಪಾರಂ ಮಹೋದಧೇಃ ।
ಅಸತ್ಯಾನಿ ಚ ಯುದ್ಧಾನಿ ಸಂಶಯೋ ಮೇ ನ ರೋಚತೇ ॥ ೩೫

ಕಶ್ಚ ನಿಃಸಂಶಯಂ ಕಾರ್ಯಂ ಕುರ್ಯಾತ್ ಪ್ರಾಜ್ಞಃ ಸಸಂಶಯಮ್ ।
ಪ್ರಾಣತ್ಯಾಗಶ್ಚ ವೈದೇಹ್ಯಾ ಭವೇದನಭಿಭಾಷಣೇ ॥ ೩೬

ಕೊಡುವರು. ರಾಮಸುಗ್ರೀವರ ಕಾರ್ಯವೆಲ್ಲವೂ ಕೆಟ್ಟುಹೋದೀತು. ಈ ಜಾನಕಿಯು ಇರುವ ಸ್ಥಳವಾದರೋ ದುರ್ಗಮವೂ ರಾಕ್ಷಸರಿಂದ ಆವೃತವೂ ಆಗಿದೆ. ಸಮುದ್ರಮಧ್ಯದಲ್ಲಿ ಗುಪ್ತಪ್ರದೇಶವಾಗಿದೆ. ಒಂದುವೇಳೆ ಯುದ್ಧದಲ್ಲಿ ರಾಕ್ಷಸರು ನನ್ನನ್ನು ಕೊಂದರೆ ಅಥವಾ ಸೆರೆಹಿಡಿದರೆ, ಆ ಶ್ರೀರಾಮನ ಕಾರ್ಯವನ್ನು ಸಾಧಿಸತಕ್ಕ ಇನ್ನೊಬ್ಬನನ್ನು ಕಾಣೆನಲ್ಲ! (೩೦–೩೩). ನಾನು ಹತನಾದರೆ, ನೂರು ಯೋಜನ ವಿಸ್ತಾರವಾದ ಮಹಾಸಾಗರವನ್ನು ದಾಟಬಲ್ಲ ಇನ್ನೊಬ್ಬ ವಾನರನು ಯಾರು? ಎಷ್ಟು ಚಿಂತಿಸಿದರೂ ಏನೂ ಹೊಳೆಯುವುದಿಲ್ಲ. ಈ ರಾಕ್ಷಸರು ಸಾವಿರಗಟ್ಟಲೆ ಬಂದರೂ ಕೊಂದುಹಾಕುವ ಸಾಮರ್ಥ್ಯ ನನಗುಂಟು. ಆದರೆ ಆ ಸಂದರ್ಭದಲ್ಲಿ ಸಮುದ್ರವನ್ನು ದಾಟಿ ಹಿಂತಿರುಗಿಹೋಗಲು ಮಾತ್ರ ಸಾಧ್ಯವಾಗ ಲಾರದು. ಯುದ್ಧದಲ್ಲಿ ಜಯವಾಗುವುದೋ ಅಪಜಯವಾಗುವುದೋ ನಿಶ್ಚಯ ವಿರುವುದಿಲ್ಲ. ಸಂಶಯವು ನನಗೆ ಹಿಡಿಸದು (೩೪–೩೫). ಸಂಶಯಗ್ರಸ್ತವಾದ ಕಾರ್ಯವನ್ನು ಯಾವ ಬುದ್ಧಿವಂತನು ವಿಚಾರವಿಲ್ಲದೆ ಆರಂಭಿಸುವನು? ನಾನು ಮಾತನಾಡಿ ಸಂತೈಸದಿದ್ದರೆ ಸೀತೆಯು ಪ್ರಾಣವನ್ನು ಬಿಡುವಳು. ಮಾತನಾಡಿದರೆ ಈ

ಏಷ ದೋಷೋ ಮಹಾನ್ ಹಿ ಸ್ಯಾನ್ಮಮ ಸೀತಾಭಿಭಾಷಣೇ ।
ಭೂತಾಶ್ಚಾರ್ಥಾ ವಿನಶ್ಯಂತಿ ದೇಶಕಾಲವಿರೋಧಿತಾಃ ॥ ೩೭

ವಿಕ್ಲವಂ ದೂತಮಾಸಾದ್ಯ ತಮಃ ಸೂರ್ಯೋದಯೇ ಯಥಾ ।
ಅರ್ಥಾನರ್ಥಾಂತರೇ ಬುದ್ಧಿರ್ನಿಶ್ಚಿತಾಪಿ ನ ಶೋಭತೇ ॥ ೩೮

ಘಾತಯಂತಿ ಹಿ ಕಾರ್ಯಾಣಿ ದೂತಾಃ ಪಂಡಿತಮಾನಿನಃ ।
ನ ವಿನಶ್ಯೇತ್ ಕಥಂ ಕಾರ್ಯಂ ವೈಕ್ಲವ್ಯಂ ನ ಕಥಂ ಭವೇತ್ ॥ ೩೯

ಲಂಘನಂ ಚ ಸಮುದ್ರಸ್ಯ ಕಥಂ ನು ನ ವೃಥಾ ಭವೇತ್ ।
ಕಥಂ ನು ಖಲು ವಾಕ್ಯಂ ಮೇ ಶೃಣುಯಾನ್ನೋದ್ವಿಜೇತ ವಾ ॥ ೪೦

ಇತಿ ಸಂಚಿಂತ್ಯ ಹನುಮಾಂಶ್ಚಕಾರ ಮತಿಮಾನ್ ಮತಿಮ್ ।
ರಾಮಮಕ್ಲಿಷ್ಟಕರ್ಮಾಣಂ ಸ್ವಬಂಧುಮನುಕೀರ್ತಯನ್ ॥ ೪೧

ನೈನಾಮುದ್ವೇಜಯಿಷ್ಯಾಮಿ ತದ್ಬಂಧುಗತಮಾನಸಾಮ್ ।
ಇಕ್ಷ್ವಾಕೂಣಾಂ ವರಿಷ್ಠಸ್ಯ ರಾಮಸ್ಯ ವಿದಿತಾತ್ಮನಃ ॥ ೪೨

ರೀತಿಯ ಅನರ್ಥವೇ ಸಂಭವಿಸುವುದು. ದೇಶಕಾಲಗಳಿಗೆ ವಿರುದ್ಧವಾಗಿ ಮಾಡಿದರೆ ಕೈಗೆ ಬಂದ ಕೆಲಸವೂ ಕೆಟ್ಟುಹೋಗುವುದು (೩೬–೩೭). ಸೂರ್ಯೋದಯವಾದರೆ ಕತ್ತಲೆಯು ನಾಶವಾಗುವಂತೆ ದೂತನು ಅವಿವೇಕಿಯಾದರೆ ಕಾರ್ಯವು ಹಾಳಾಗುವುದು. ಇದು ಕರ್ತವ್ಯ, ಇದು ಅಕರ್ತವ್ಯ—ಎಂದು ಪರ್ಯಾಲೋಚಿಸಿ ಮಾಡಿದ ನಿಶ್ಚಯವೂ ಫಲಕಾರಿಯಾಗುವುದಿಲ್ಲ. ಏಕೆಂದರೆ, ತಾವು ಪಂಡಿತರೆಂಬ ಒಣಹೆಮ್ಮೆಯ ದೂತರು ಕೆಲಸವನ್ನು ಹಾಳು ಮಾಡಿಬಿಡುತ್ತಾರೆ. ಈಗ ಕಾರ್ಯವು ಕೆಡಬಾರದು; ಅವಿವೇಕವಾಗಬಾರದು; ನಾನು ಸಮುದ್ರಲಂಘನ ಮಾಡಿದುದು ವ್ಯರ್ಥವಾಗಬಾರದು ; ಸೀತಾದೇವಿಯು ನನ್ನ ಮಾತನ್ನು ಆಲಿಸಬೇಕು—ಆದರೆ ಭಯಪಡಬಾರದು ! ಇದು ಹೇಗೆ ?'' (೩೮–೪೦). ಹೀಗೆ ಮೇಧಾವಿಯಾದ ಆಂಜನೇಯನು ಚೆನ್ನಾಗಿ ಪರ್ಯಾಲೋಚಿಸಿ ಕಡೆಗೆ ಒಂದು ನಿರ್ಧಾರಕ್ಕೆ ಬಂದನು: ''ತನ್ನ ಪ್ರಿಯನಾದ ರಾಮನನ್ನೇ ಚಿಂತಿಸುತ್ತಿರುವ ಈಕೆಗೆ ನಾನು ಮಧ್ಯದಲ್ಲಿ ಉದ್ವೇಗವನ್ನುಂಟುಮಾಡಬಾರದು.

ಶುಭಾನಿ ಧರ್ಮಯುಕ್ತಾನಿ ವಚನಾನಿ ಸಮರ್ಪಯನ್ ।
ಶ್ರಾವಯಿಷ್ಯಾಮಿ ಸರ್ವಾಣಿ ಮಧುರಾಂ ಪ್ರಬ್ರುವನ್ ಗಿರಮ್ ॥ ೪೩

ಶ್ರದ್ಧಾಸ್ಯತಿ ಯಥಾ ಹೀಯಂ ತಥಾ ಸರ್ವಂ ಸಮಾದದೇ ॥

ಇತಿ ಸ ಬಹುವಿಧಂ ಮಹಾನುಭಾವೋ
ಜಗತಿಪತೇಃ ಪ್ರಮದಾಮವೇಕ್ಷಮಾಣಃ ।
ಮಧುರಮವಿತಥಂ ಜಗಾದ ವಾಕ್ಯಂ
ದ್ರುಮವಿಟಪಾಂತರಮಾಸ್ಥಿತೋ ಹನೂಮಾನ್ ॥ ೪೪

ಇತಿ ಶ್ರೀಮದ್ರಾಮಾಯಣೇ ಸುಂದರಕಾಂಡೇ ತ್ರಿಂಶಃ ಸರ್ಗಃ

ಮಧುರವಾದ ವಾಕ್ಯಗಳಿಂದ ಶ್ರೀರಾಮನ ವಿಷಯವನ್ನು ಹೇಳುವೆನು. ಇಕ್ಷ್ವಾಕುಕುಲಶ್ರೇಷ್ಠನಾದ ರಾಮನಿಗೆ ಸಂಬಂಧಿಸಿದ ಶುಭಕರವೂ ಧರ್ಮಯುಕ್ತವೂ ಆದ ಮಾತನ್ನು ಈಕೆಯು ಆಲಿಸುವಂತೆ ಮಾಡುವೆನು. ಇವಳಿಗೆ ನನ್ನ ನಂಬಿಕೆ ಹುಟ್ಟುವಂತೆ ಮಾಡುವೆನು'' (೪೧–೪೩) ಎಂದು ಆ ಮಹಾನುಭಾವನು ನಿರ್ಧರಿಸಿ ಜಗನ್ನಾಥನಾದ ಶ್ರೀರಾಮಚಂದ್ರನ ಪತ್ನಿಯನ್ನು ನೋಡುತ್ತ, ಮರದ ಮೇಲೆ ಮರೆಯಾಗಿ ಕುಳಿತು 'ರಾಮಚರಿತ್ರೆ'ಯನ್ನು ಇಂಪಾಗಿ, ಯಥಾವತ್ತಾಗಿ ಹೇಳತೊಡಗಿದನು (ಆಗ ಸೀತೆಯನ್ನು ಹೆದರಿಸುತ್ತಿದ್ದ ರಾಕ್ಷಸಿಯರೆಲ್ಲರಿಗೂ ಗಾಢವಾಗಿ ನಿದ್ರೆ ಬಂದಿತ್ತು.) (೪೪).

ಇಲ್ಲಿಗೆ ಶ್ರೀಮದ್ರಾಮಾಯಣದ ಸುಂದರಕಾಂಡದಲ್ಲಿ ಮೂವತ್ತನೆಯ ಸರ್ಗ

ಏಕತ್ರಿಂಶಃ ಸರ್ಗಃ

ರಾಮವೃತ್ತಸಂಶ್ರವಃ

ಏವಂ ಬಹುವಿಧಾಂ ಚಿಂತಾಂ ಚಿಂತಯಿತ್ವಾ ಮಹಾಕಪಿಃ ।
ಸಂಶ್ರವೇ ಮಧುರಂ ವಾಕ್ಯಂ ವೈದೇಹ್ಯಾ ವ್ಯಾಜಹಾರ ಹ ॥ ೧
ರಾಜಾ ದಶರಥೋ ನಾಮ ರಥಕುಂಜರವಾಜಿಮಾನ್ ।
ಪುಣ್ಯಶೀಲೋ ಮಹಾಕೀರ್ತಿರ್ಋಜುರಾಸೀನ್ಮಹಾಯಶಾಃ ॥ ೨
ರಾಜರ್ಷೀಣಾಂ ಗುಣಶ್ರೇಷ್ಠಸ್ತಪಸಾ ಚರ್ಷಿಭಿಃ ಸಮಃ ।
ಚಕ್ರವರ್ತಿಕುಲೇ ಜಾತಃ ಪುರಂದರಸಮೋ ಬಲೇ ॥ ೩
ಅಹಿಂಸಾರತಿರಕ್ಷುದ್ರೋ ಘೃಣೀ ಸತ್ಯಪರಾಕ್ರಮಃ ।
ಮುಖ್ಯಶ್ಚೇಕ್ಷ್ವಾಕುವಂಶಸ್ಯ ಲಕ್ಷ್ಮೀವಾನ್ ಲಕ್ಷ್ಮಿವರ್ಧನಃ ॥ ೪
ಪಾರ್ಥಿವವ್ಯಂಜನೈರ್ಯುಕ್ತಃ ಪೃಥುಶ್ರೀಃ ಪಾರ್ಥಿವರ್ಷಭಃ ।
ಪೃಥಿವ್ಯಾಂ ಚತುರಂತಾಯಾಂ ವಿಶ್ರುತಃ ಸುಖದಃ ಸುಖೀ ॥ ೫

ಸರ್ಗ ೩೧

ಹನುಮಂತನು ಶ್ರೀರಾಮನ ಜನನದಿಂದ ಆರಂಭಿಸಿ, ತಾನು ಸೀತೆಯನ್ನು ದರ್ಶನ ಮಾಡಿದ ಪರ್ಯಂತ ನಡೆದ ವೃತ್ತಾಂತವನ್ನು ಹೇಳುವುದು. ಸೀತೆಯು ಶಿಂಶಪಾವೃಕ್ಷದಲ್ಲಿ ಕುಳಿತಿದ್ದ ಹನುಮಂತನನ್ನು ಕಂಡುದು.

ಆ ವಾನರೋತ್ತಮನು ಹೀಗೆ ಚಿಂತಿಸಿ, ಸೀತೆಗೆ ಕೇಳುವಂತೆ ಇಂಪಾದ ಮಾತನ್ನಾಡಲಾರಂಭಿಸಿದನು : ''ಇಕ್ಷ್ವಾಕುವಂಶದಲ್ಲಿ ದಶರಥನೆಂಬ ಮಹಾರಾಜನಿದ್ದನು. ಅವನ ಬಳಿ ರಥ, ಆನೆ, ಕುದುರೆಗಳು ಯಥೇಷ್ಟವಾಗಿದ್ದವು. ಅವನು ಮಹಾಪುಣ್ಯಾತ್ಮ ; ಕೀರ್ತಿಶಾಲಿ (೧–೨). ರಾಜರ್ಷಿಗಳಲ್ಲಿ ಶ್ರೇಷ್ಠ ; ತಪಸ್ಸಿನಲ್ಲಿ ಋಷಿಗಳಿಗೆ ಸಮಾನ; ಆ ದಶರಥಮಹಾರಾಜನು ಚಕ್ರವರ್ತಿಗಳ ಕುಲದಲ್ಲಿ ಹುಟ್ಟಿದವನು; ದೇವೇಂದ್ರನಂತೆ ಪರಾಕ್ರಮಿ ; ಯಾರಿಗೂ ಹಿಂಸೆ ಮಾಡತಕ್ಕವನಲ್ಲ; ಉದಾರಶೀಲ ; ದಯಾವಂತ ; ಸತ್ಯನಿಷ್ಠ. ಅವನು ಇಕ್ಷ್ವಾಕುವಂಶದಲ್ಲಿ ಮುಖ್ಯನಾಗಿ ಸಮಸ್ತ ಸಂಪತ್ತುಗಳಿಂದ ವಿರಾಜಿಸುತ್ತಿದ್ದನು (೩–೪). ಆ ರಾಜೋತ್ತಮನು

ತಸ್ಯ ಪುತ್ರಃ ಪ್ರಿಯೋ ಜ್ಯೇಷ್ಠಸ್ತಾರಾಧಿಪನಿಭಾನನಃ ।
ರಾಮೋ ನಾಮ ವಿಶೇಷಜ್ಞಃ ಶ್ರೇಷ್ಠಃ ಸರ್ವಧನುಷ್ಮತಾಮ್ ॥ ೬
ರಕ್ಷಿತಾ ಸ್ವಸ್ಯ ವೃತ್ತಸ್ಯ ಸ್ವಜನಸ್ಯಾಪಿ ರಕ್ಷಿತಾ ।
ರಕ್ಷಿತಾ ಜೀವಲೋಕಸ್ಯ ಧರ್ಮಸ್ಯ ಚ ಪರಂತಪಃ ॥ ೭
ತಸ್ಯ ಸತ್ಯಾಭಿಸಂಧಸ್ಯ ವೃದ್ಧಸ್ಯ ವಚನಾತ್ ಪಿತುಃ ।
ಸಭಾರ್ಯಃ ಸಹ ಚ ಭ್ರಾತ್ರಾ ವೀರಃ ಪ್ರವ್ರಾಜಿತೋ ವನಮ್ ॥ ೮
ತೇನ ತತ್ರ ಮಹಾರಣ್ಯೇ ಮೃಗಯಾಂ ಪರಿಧಾವತಾ ।
ರಾಕ್ಷಸಾ ನಿಹತಾಃ ಶೂರಾ ಬಹವಃ ಕಾಮರೂಪಿಣಃ ॥ ೯
ಜನಸ್ಥಾನವಧಂ ಶ್ರುತ್ವಾ ಹತೌ ಚ ಖರದೂಷಣೌ ।
ತತಸ್ತ್ವಮರ್ಷಾಪಹೃತಾ ಜಾನಕೀ ರಾವಣೇನ ತು ॥ ೧೦
ವಂಚಯಿತ್ವಾ ವನೇ ರಾಮಂ ಮೃಗರೂಪೇಣ ಮಾಯಯಾ ।
ಸ ಮಾರ್ಗಮಾಣಸ್ತಾಂ ದೇವೀಂ ರಾಮಃ ಸೀತಾಮನಿಂದಿತಾಮ್ ॥ ೧೧

ರಾಜಲಕ್ಷಣಯುಕ್ತನೂ ಭಾಗ್ಯಶಾಲಿಯೂ ಚತುಃಸಮುದ್ರಪರ್ಯಂತವಾದ ಪೃಥ್ವಿಯಲ್ಲಿ ಪ್ರಖ್ಯಾತನೂ ಪ್ರಜೆಗಳಿಗೆ ಸೌಖ್ಯದಾಯಕನೂ ಆಗಿ ಸುಖದಿಂದಿದ್ದನು. ಅವನಿಗೆ ಶ್ರೀರಾಮನೆಂಬ ಜ್ಯೇಷ್ಠಕುಮಾರನಿದ್ದಾನೆ. ರಾಮನ ಮುಖವು ಚಂದ್ರಮಂಡಲದಂತೆ ಪ್ರಸನ್ನವಾದದ್ದು. ಅವನು ದೊಡ್ಡ ವಿದ್ಯಾವಂತ ; ಸಮಸ್ತ ಧನುರ್ಧಾರಿಗಳಲ್ಲಿಯೂ ಶ್ರೇಷ್ಠನೆನಿಸಿಕೊಂಡಿರುವನು (೫–೬). ತನ್ನ ಕ್ಷತ್ರಿಯಧರ್ಮವನ್ನೂ ಪ್ರಜೆಗಳ ವರ್ಣಾಶ್ರಮಧರ್ಮವನ್ನೂ ರಕ್ಷಿಸುತ್ತಿರುವನು; ಅವನು ಸಕಲ ಜೀವಲೋಕವನ್ನು ರಕ್ಷಿಸಬಲ್ಲ ವೀರ. ಆ ರಾಮನು ಸತ್ಯಸಂಧನೂ ವೃದ್ಧನೂ ಆದ ತಂದೆಯ ಆದೇಶವನ್ನು ಪಾಲಿಸುವುದಕ್ಕಾಗಿ, ತನ್ನ ಪತ್ನಿಯನ್ನೂ ತಮ್ಮನನ್ನೂ ಕರೆದುಕೊಂಡು ಅರಣ್ಯಕ್ಕೆ ಹೊರಟುಬಂದನು (೭–೮). ಮಹಾರಣ್ಯದಲ್ಲಿ ಬೇಟೆಯಾಡುತ್ತಿರುವಾಗ ರಾಮನು ಕಾಮರೂಪಿಗಳಾದ ಬಹುಮಂದಿ ರಾಕ್ಷಸರನ್ನು ಸಂಹಾರಮಾಡಿದನು. ರಾಮನು ಜನಸ್ಥಾನದಲ್ಲಿ ನಡೆಸಿದ ಖರ ದೂಷಣ ಮುಂತಾದ ರಾಕ್ಷಸರ ವಧೆಯನ್ನು ಕೇಳಿ, ರಾವಣನು ಕೋಪದಿಂದ ಮಾಯಾಮೃಗದ ಮೂಲಕ ರಾಮನನ್ನು ವಂಚಿಸಿ, ಅವನ ಪತ್ನಿಯಾದ ಜಾನಕಿಯನ್ನು ಅಪಹರಿಸಿಬಿಟ್ಟನು (೯–೧೦). ಆಗ ರಾಮನು ನಿರ್ದೋಷಳಾದ

ಆಸಸಾದ ವನೇ ಮಿತ್ರಂ ಸುಗ್ರೀವಂ ನಾಮ ವಾನರಮ್ ।
ತತಃ ಸ ವಾಲಿನಂ ಹತ್ವಾ ರಾಮಃ ಪುರಪುರಂಜಯಃ ॥ ೧೨

ಪ್ರಾಯಚ್ಛತ್ ಕಪಿರಾಜ್ಯಂ ತತ್ ಸುಗ್ರೀವಾಯ ಮಹಾಬಲಃ ।
ಸುಗ್ರೀವೇಣಾಪಿ ಸಂದಿಷ್ಟಾ ಹರಯಃ ಕಾಮರೂಪಿಣಃ ॥ ೧೩

ದಿಕ್ಷು ಸರ್ವಾಸು ತಾಂ ದೇವೀಂ ವಿಚಿನ್ವಂತಿ ಸಹಸ್ರಶಃ ।
ಅಹಂ ಸಂಪಾತಿವಚನಾಚ್ಛತಯೋಜನಮಾಯತಮ್ ॥ ೧೪

ಅಸ್ಯಾ ಹೇತೋರ್ವಿಶಾಲಾಕ್ಷ್ಯಾಃ ಸಾಗರಂ ವೇಗವಾನ್ ಪ್ಲುತಃ ।
ಯಥಾರೂಪಾಂ ಯಥಾವರ್ಣಾಂ ಯಥಾಲಕ್ಷ್ಮೀಂ ಚ ನಿಶ್ಚಿತಾಮ್ ॥

ಅಶ್ರೌಷಂ ರಾಘವಸ್ಯಾಹಂ ಸೇಯಮಾಸಾದಿತಾ ಮಯಾ ।
ವಿರರಾಮೈವಮುಕ್ತ್ವಾಸೌ ವಾಚಂ ವಾನರಪುಂಗವಃ ॥ ೧೬

ಜಾನಕೀ ಚಾಪಿ ತಚ್ಛ್ರುತ್ವಾ ವಿಸ್ಮಯಂ ಪರಮಂ ಗತಾ ।
ತತಃ ಸಾ ವಕ್ರಕೇಶಾಂತಾ ಸುಕೇಶೀ ಕೇಶಸಂವೃತಮ್ ॥ ೧೭

ಉನ್ನಮ್ಯ ವದನಂ ಭೀರುಃ ಶಿಂಶಪಾಮನ್ವವೈಕ್ಷತ ॥

ಸೀತಾದೇವಿಯನ್ನು ಅರಣ್ಯದಲ್ಲಿ ಹುಡುಕುತ್ತಿರುವಾಗ, ಸುಗ್ರೀವನೆಂಬ ಕಪೀಶ್ವರನೊಡನೆ ಸ್ನೇಹವು ಬೆಳೆಯಿತು. ಅನಂತರ ಮಹಾ ಬಲಾಢ್ಯನಾದ ರಾಮನು ವಾಲಿಯನ್ನು ಸಂಹಾರ ಮಾಡಿದನು (೧೧–೧೨). ವಾಲಿಯ ರಾಜ್ಯವನ್ನು ಸುಗ್ರೀವನಿಗೆ ಕೊಡಿಸಿದನು. ಸುಗ್ರೀವನ ಆಜ್ಞೆಯಿಂದ ಕಾಮರೂಪಿಗಳಾದ ಕಪಿಗಳು ಸಾವಿರಗಟ್ಟಲೆ ಹೋಗಿ ದಿಕ್ಕುದಿಕ್ಕುಗಳಲ್ಲಿಯೂ ಸೀತಾದೇವಿಯನ್ನು ಹುಡುಕುತ್ತಿರುವರು. ನಾನು ಸಂಪಾತಿಯ ಮಾತಿನಂತೆ ಈ ವಿಶಾಲಾಕ್ಷಿಗೋಸ್ಕರ ನೂರುಯೋಜನ ವಿಸ್ತಾರವಾದ ಸಮುದ್ರವನ್ನು ವೇಗದಿಂದ ಹಾರಿಬಂದೆನು. ರಾಘವನು ಯಾವ ರೂಪವನ್ನೂ ಯಾವ ಮೈಬಣ್ಣವನ್ನೂ ಯಾವ ದೇಹಕಾಂತಿಯನ್ನೂ ಸೀತೆಯ ಗುರುತಾಗಿ ಹೇಳಿದ್ದನೋ, ಅವೆಲ್ಲವೂ ಈಕೆಯಲ್ಲಿ ಕಂಡುಬರುತ್ತವೆ. ನಾನು ನಿಶ್ಚಯವಾಗಿಯೂ ಸೀತಾದೇವಿಯ ದರ್ಶನಮಾಡಿದೆನು!'' ಹೀಗೆ ಹೇಳಿ ಆಂಜನೇಯನು ಸುಮ್ಮನಾದನು (೧೩–೧೬). ಇದನ್ನು ಕೇಳಿ ಸೀತೆಗೆ

ನಿಶಮ್ಯ ಸೀತಾವಚನಂ ಕಪೇಶ್ಚ
ದಿಶಶ್ಚ ಸರ್ವಾಃ ಪ್ರದಿಶಶ್ಚ ವೀಕ್ಷ್ಯ ।
ಸ್ವಯಂ ಪ್ರಹರ್ಷಂ ಪರಮಂ ಜಗಾಮ
ಸರ್ವಾತ್ಮನಾ ರಾಮಮನುಸ್ಮರಂತೀ ॥ ೧೮

ಸಾ ತಿರ್ಯಗೂರ್ಧ್ವಂ ಚ ತಥಾಪ್ಯಧಸ್ತಾ-
ನ್ನಿರೀಕ್ಷಮಾಣಾ ತಮಚಿಂತ್ಯಬುದ್ಧಿಮ್ ।
ದದರ್ಶ ಪಿಂಗಾಧಿಪತೇರಮಾತ್ಯಂ
ವಾತಾತ್ಮಜಂ ಸೂರ್ಯಮಿವೋದಯಸ್ಥಮ್ ॥ ೧೯

ಇತಿ ಶ್ರೀಮದ್ರಾಮಾಯಣೇ ಸುಂದರಕಾಂಡೇ ಏಕತ್ರಿಂಶಃ ಸರ್ಗಃ

ಪರಮಾಶ್ಚರ್ಯವಾಯಿತು. ಆವಳು ಎಲ್ಲಾ ದಿಕ್ಕಿಗೂ ತಿರುಗಿ ನೋಡುತ್ತ ಕೇಶಸಂವೃತವಾದ ತನ್ನ ಮುಖವನ್ನು ಮೇಲೆತ್ತಿ ಶಿಂಶಪಾವೃಕ್ಷದ ಕಡೆಗೆ ದೃಷ್ಟಿಯನ್ನು ಹೊರಳಿಸಿದಳು. ಸದಾ ರಾಮಧ್ಯಾನವನ್ನು ಮಾಡುತ್ತಿದ್ದ ಆಕೆಗೆ ಶ್ರೀರಾಮವೃತ್ತಾಂತವನ್ನು ಕೇಳಿ ಬಹಳ ಹರ್ಷವಾಯಿತು. ಅವಳು ಒಮ್ಮೆ ಪಕ್ಕಕ್ಕೆ ತಿರುಗಿ ನೋಡುವಳು. ಒಮ್ಮೆ ಮೇಲೆ ನೋಡುವಳು. ಒಮ್ಮೆ ಕೆಳಗೆ ನೋಡುವಳು. ಹೀಗೆ ನೋಡುತ್ತ ನೋಡುತ್ತ ಕಡೆಗೆ ಮಹಾಬುದ್ಧಿಶಾಲಿಯೂ ಸುಗ್ರೀವನ ಮಂತ್ರಿಯೂ ವಾಯುಪುತ್ರನೂ ಆದ ಹನುಮಂತನು ಶಿಂಶಪಾವೃಕ್ಷದಲ್ಲಿ ಕುಳಿತಿರುವುದನ್ನು ಕಂಡಳು (೧೭–೧೯).

ಇಲ್ಲಿಗೆ ಶ್ರೀಮದ್ರಾಮಾಯಣದ ಸುಂದರಕಾಂಡದಲ್ಲಿ ಮೂವತ್ತೊಂದನೆಯ ಸರ್ಗ

ದ್ವಾತ್ರಿಂಶಃ ಸರ್ಗಃ

ಸೀತಾವಿತರ್ಕಃ

ತತಃ ಶಾಖಾಂತರೇ ಲೀನಂ ದೃಷ್ಟ್ವಾ ಚಲಿತಮಾನಸಾ ।
ವೇಷ್ಟಿತಾರ್ಜುನವಸ್ತ್ರಂ ತಂ ವಿದ್ಯುತ್ಸಂಘಾತಪಿಂಗಲಮ್ ॥ ೧

ಸಾ ದದರ್ಶ ಕಪಿಂ ತತ್ರ ಪ್ರಶ್ರಿತಂ ಪ್ರಿಯವಾದಿನಮ್ ।
ಫುಲ್ಲಾಶೋಕೋತ್ಕರಾಭಾಸಂ ತಪ್ತಚಾಮೀಕರೇಕ್ಷಣಮ್ ॥ ೨

ಮೈಥಿಲೀ ಚಿಂತಯಾಮಾಸ ವಿಸ್ಮಯಂ ಪರಮಂ ಗತಾ ।
ಅಹೋ ಭೀಮಮಿದಂ ರೂಪಂ ವಾನರಸ್ಯ ದುರಾಸದಮ್ ॥ ೩

ದುರ್ನಿರೀಕ್ಷ್ಯಮಿತಿ ಜ್ಞಾತ್ವಾ ಪುನರೇವ ಮುಮೋಹ ಸಾ ।
ವಿಲಲಾಪ ಭೃಶಂ ಸೀತಾ ಕರುಣಂ ಭಯಮೋಹಿತಾ ॥ ೪

ರಾಮ ರಾಮೇತಿ ದುಃಖಾರ್ತಾ ಲಕ್ಷ್ಮಣೇತಿ ಚ ಭಾಮಿನೀ ।
ರುರೋದ ಬಹುಧಾ ಸೀತಾ ಮಂದಂ ಮಂದಸ್ವರಾ ಸತೀ ॥ ೫

ಸರ್ಗ ೩೨

ಸೀತೆಯು ಹನುಮಂತನನ್ನು ಕಂಡು ಭಯದಿಂದ, ತನಗೆ ದುಃಸ್ವಪ್ನವಾಗುತ್ತಿದೆ ಯೆಂದು ಭ್ರಮಿಸುವುದು. ರಾಮವೃತ್ತಾಂತವೆಲ್ಲವೂ ಸತ್ಯವಾಗಲೆಂದು ಬ್ರಹ್ಮಾದಿದೇವತೆಗಳನ್ನು ಪ್ರಾರ್ಥಿಸುವುದು.

ಆ ಮರದಲ್ಲಿ ಮರೆಯಾಗಿ ಕುಳಿತಿದ್ದ ಕಪಿಯನ್ನು ಕಂಡೊಡನೆ ಸೀತೆಯ ಮನಸ್ಸು ನಡುಗಿಹೋಯಿತು. ಆ ಕಪಿಯು ಬಿಳಿಯ ವಸ್ತ್ರವನ್ನುಟ್ಟು ಮಿಂಚಿನಂತೆ ಪಿಂಗಳ ವರ್ಣವಾಗಿ ಹೊಳೆಯುತ್ತಿದೆ ! ವಿನಯದಿಂದ ನಮ್ರವಾಗಿ ಕುಳಿತು ಪ್ರಿಯ ವಾದ ಮಾತನ್ನಾಡುತ್ತಿದೆ ! ಅರಳಿದ ಅಶೋಕಪುಷ್ಪದಂತೆ ದೇಹಕಾಂತಿಯುಳ್ಳದ್ದಾಗಿ ಪುಟವಿಕ್ಕಿದ ಚಿನ್ನದಂತೆ ಅದರ ಕಣ್ಣು ಥಳಥಳಿಸುತ್ತಿದೆ ! (೧–೨). ''ಅಬ್ಬಾ ! ಈ ಕಪಿಯ ರೂಪ ಭಯಂಕರವಾಗಿದೆ. ನೋಡಲೂ ಸಾಧ್ಯವಿಲ್ಲ'' ಎಂದುಕೊಳ್ಳುತ್ತಾ ಮೈಥಿಲಿಯು ಎಚ್ಚರದಪ್ಪಿದಂತಾದಳು. ಭಯದಿಂದ ಕಂಗೆಟ್ಟು ಕರುಣಸ್ವರದಿಂದ 'ಹಾ ರಾಮ, ಹಾ ಲಕ್ಷ್ಮಣ' ಎನ್ನುತ್ತ ಮೆಲ್ಲನೆ ಅಳಲಾರಂಭಿಸಿದಳು (೩–೫).

ಸಾ ತಂ ದೃಷ್ಟ್ವಾ ಹರಿಶ್ರೇಷ್ಠಂ ವಿನೀತವದುಪಸ್ಥಿತಮ್ ।
ಮೈಥಿಲೀ ಚಿಂತಯಾಮಾಸ ಸ್ವಪ್ನೋಽಯಮಿತಿ ಭಾಮಿನೀ ॥ ೬

ಸಾ ವೀಕ್ಷಮಾಣಾ ಪೃಥುಭುಗ್ನವಕ್ತ್ರಂ
ಶಾಖಾಮೃಗೇಂದ್ರಸ್ಯ ಯಥೋಕ್ತಕಾರಮ್ ।
ದದರ್ಶ ಪಿಂಗಾಧಿಪತೇರಮಾತ್ಯಂ
ವಾತಾತ್ಮಜಂ ಬುದ್ಧಿಮತಾಂ ವರಿಷ್ಠಮ್ ॥ ೭

ಸಾ ತಂ ಸಮೀಕ್ಷ್ಯೈವ ಭೃಶಂ ವಿಸಂಜ್ಞಾ
ಗತಾಸುಕಲ್ಪೇವ ಬಭೂವ ಸೀತಾ ।
ಚಿರೇಣ ಸಂಜ್ಞಾಂ ಪ್ರತಿಲಭ್ಯ ಭೂಯೋ
ವಿಚಿಂತಯಾಮಾಸ ವಿಶಾಲನೇತ್ರಾ ॥ ೮

ಸ್ವಪ್ನೇ ಮಯಾಯಂ ವಿಕೃತೋಽದ್ಯ ದೃಷ್ಟಃ
ಶಾಖಾಮೃಗಃ ಶಾಸ್ತ್ರಗಣೈರ್ನಿಷಿದ್ಧಃ ।
ಸ್ವಸ್ತ್ಯಸ್ತು ರಾಮಾಯ ಸಲಕ್ಷ್ಮಣಾಯ
ತಥಾ ಪಿತುರ್ಮೇ ಜನಕಸ್ಯ ರಾಜ್ಞಃ ॥ ೯

ಸ್ವಪ್ನೋಽಪಿ ನಾಯಂ ನ ಹಿ ಮೇಽಸ್ತಿ ನಿದ್ರಾ
ಶೋಕೇನ ದುಃಖೇನ ಚ ಪೀಡಿತಾಯಾಃ ।
ಸುಖಂ ಹಿ ಮೇ ನಾಸ್ತಿ ಯತೋಽಸ್ಮಿ ಹೀನಾ
ತೇನೇಂದುಪೂರ್ಣಪ್ರತಿಮಾನನೇನ ॥ ೧೦

ಸಮೀಪದಲ್ಲಿ ವಿನೀತನಾಗಿ ಕುಳಿತಿದ್ದ ಆಂಜನೇಯನನ್ನು ಕಂಡು ತನಗೆ ಸ್ವಪ್ನವೇ ಆಗುತ್ತಿದೆಯೆಂದು ಅವಳಿಗೆ ಅನ್ನಿಸಿತು. ಅವಳು ವಕ್ರವಾದ ದೊಡ್ಡ ಮುಖವುಳ್ಳವನೂ ಸುಗ್ರೀವನ ಆಜ್ಞಾಧಾರಕನಾದ ಅಮಾತ್ಯನೂ ಬುದ್ಧಿವಂತರಲ್ಲಿ ಅಗ್ರೇಸರನೂ ಆದ ವಾಯುಪುತ್ರನನ್ನು ದಿಟ್ಟಿಸಿ ನೋಡಿದಳು. ಮತ್ತೆ ಸೀತೆಯು ಎಚ್ಚರದಪ್ಪಿ ಮೃತಪ್ರಾಯಳಂತಾಗಿ, ಬಹಳಹೊತ್ತಿನ ಮೇಲೆ ಚೇತರಿಸಿಕೊಂಡು ಚಿಂತಿಸತೊಡಗಿದಳು (೬–೮): ನಾನು ಸ್ವಪ್ನದಲ್ಲಿ ಈ ವಿಕಾರರೂಪದ ಕೋತಿಯನ್ನು ಕಂಡೆನು! ಇದು ದುಃಸ್ವಪ್ನವೆಂದು ಶಾಸ್ತ್ರದಲ್ಲಿ ನಿಷಿದ್ಧವಾಗಿದೆ. ರಾಮಲಕ್ಷ್ಮಣರಿಗೂ ನನ್ನ ತಂದೆ ಜನಕರಾಜನಿಗೂ ಮಂಗಳವಾಗಲಿ. ಅಥವಾ

ರಾಮೇತಿ ರಾಮೇತಿ ಸದೈವ ಬುದ್ಧ್ಯಾ
ವಿಚಿಂತ್ಯ ವಾಚಾ ಬ್ರುವತೀ ತಮೇವ ।
ತಸ್ಯಾನುರೂಪಾಂ ಚ ಕಥಾಂ ತಮರ್ಥ-
ಮೇವಂ ಪ್ರಪಶ್ಯಾಮಿ ತಥಾ ಶೃಣೋಮಿ ॥ ೧೧

ಅಹಂ ಹಿ ತಸ್ಯಾದ್ಯ ಮನೋಭವೇನ
ಸಂಪೀಡಿತಾ ತದ್ಗತಸರ್ವಭಾವಾ ।
ವಿಚಿಂತಯಂತೀ ಸತತಂ ತಮೇವ
ತಥೈವ ಪಶ್ಯಾಮಿ ಯಥಾ ಶೃಣೋಮಿ ॥ ೧೨

ಮನೋರಥಃ ಸ್ಯಾದಿತಿ ಚಿಂತಯಾಮಿ
ತಥಾಪಿ ಬುದ್ಧ್ಯಾ ಚ ವಿತರ್ಕಯಾಮಿ ।
ಕಿಂ ಕಾರಣಂ ತಸ್ಯ ಹಿ ನಾಸ್ತಿ ರೂಪಂ
ಸುವ್ಯಕ್ತರೂಪಶ್ಚ ವದತ್ಯಯಂ ಮಾಮ್ ॥ ೧೩

ನಮೋಽಸ್ತು ವಾಚಸ್ಪತಯೇ ಸವಜ್ರಿಣೇ
ಸ್ವಯಂಭುವೇ ಚೈವ ಹುತಾಶನಾಯ ಚ ।

ಇದು ಸ್ವಪ್ನವಾಗಿರಲಿಕ್ಕಿಲ್ಲ. ದುಃಖದಿಂದ ಕುದಿಯುತ್ತಿರುವ ನನಗೆ ನಿದ್ರೆಯೇ ಬರುವುದಿಲ್ಲ. ಪೂರ್ಣಚಂದ್ರನಂತೆ ಮುಖವುಳ್ಳ ನನ್ನ ಪ್ರಿಯನನ್ನು ಅಗಲಿದಮೇಲೆ ನನಗೆ ಸಂತೋಷವೆಲ್ಲಿದೆ ? (೯–೧೦). ಯಾವಾಗಲೂ 'ರಾಮ ರಾಮ' ಎಂದುಕೊಳ್ಳುತ್ತ ರಾಮನನ್ನೇ ಧ್ಯಾನಿಸುತ್ತಿರುವ ನನಗೆ, ಅದಕ್ಕೆ ಅನುಗುಣವಾಗಿ ರಾಮನ ಕಥೆಯೇ ಕಣ್ಣಿಗೆ ಕಟ್ಟಿದಂತಾಗುತ್ತದೆ ! ರಾಮನ ಕಥೆಯನ್ನೇ ಕೇಳಿದಂತಾಗುತ್ತದೆ ! ಮನ್ಮಥಪೀಡಿತಳಾದ ನನ್ನ ಮನಸ್ಸೆಲ್ಲವೂ ಅವನಲ್ಲಿಯೇ ನೆಟ್ಟುಹೋಗಿದೆ. ಅವನನ್ನೇ ಸದಾ ಚಿಂತಿಸುತ್ತಿರುವುದರಿಂದ ನನಗೆ ಹೀಗೆ ಕಾಣಿಸುತ್ತಿದೆ (೧೧–೧೨). ಇದೆಲ್ಲವೂ ಮನೋರಾಜ್ಯವೇ ಸರಿ. ವಿಚಾರ ಮಾಡಿದರೂ ಇದು ಭ್ರಾಂತಿಯೆಂದೇ ತೋರುತ್ತದೆ. ಒಂದುವೇಳೆ ಇದು ಮನೋರಾಜ್ಯವೇ ಆದರೆ, ಎದುರಿಗೆ ಕಪಿಯ ರೂಪ ಸರಿಯಾಗಿ ಕಾಣುತ್ತಿರಲು ಕಾರಣವೇನು ? ಇದು ಸ್ಪಷ್ಟವಾಗಿ ಮಾತನಾಡುತ್ತಿರುವುದಲ್ಲ! ಹೇ ಬೃಹಸ್ಪತಿ! ದೇವೇಂದ್ರ! ಬ್ರಹ್ಮದೇವ! ಅಗ್ನಿದೇವ!

ಅನೇನ ಚೋಕ್ತಂ ಯದಿದಂ ಮಮಾಗ್ರತೋ
ವನೌಕಸಾ ತಚ್ಚ ತಥಾಸ್ತು ನಾನ್ಯಥಾ ॥ ೧೪

ಇತಿ ಶ್ರೀಮದ್ರಾಮಾಯಣೇ ಸುಂದರಕಾಂಡೇ ದ್ವಾತ್ರಿಂಶಃ ಸರ್ಗಃ

ತ್ರಯಸ್ತ್ರಿಂಶಃ ಸರ್ಗಃ

ಹನೂಮಾಜ್ಜಾನಕೀಸಂವಾದೋಪಕ್ರಮಃ

ಸೋಽವತೀರ್ಯ ದ್ರುಮಾತ್ತಸ್ಮಾದ್ವಿದ್ರುಮಪ್ರತಿಮಾನನಃ ।
ವಿನೀತವೇಷಃ ಕೃಪಣಃ ಪ್ರಣಿಪತ್ಯೋಪಸೃತ್ಯ ಚ ॥ ೧
ತಾಮಬ್ರವೀನ್ಮಹಾತೇಜಾ ಹನೂಮಾನ್ ಮಾರುತಾತ್ಮಜಃ ।
ಶಿರಸ್ಯಂಜಲಿಮಾಧಾಯ ಸೀತಾಂ ಮಧುರಯಾ ಗಿರಾ ॥ ೨
ಕಾ ನು ಪದ್ಮಪಲಾಶಾಕ್ಷಿ ಕ್ಲಿಷ್ಟಕೌಶೇಯವಾಸಿನಿ ।
ದ್ರುಮಸ್ಯ ಶಾಖಾಮಾಲಂಬ್ಯ ತಿಷ್ಠಸಿ ತ್ವಮನಿಂದಿತೇ ॥ ೩

ನಿಮ್ಮೆಲ್ಲರಿಗೂ ಅಡ್ಡಬೀಳುತ್ತೇನೆ. ಈ ವಾನರನು ಹೇಳಿದುದೆಲ್ಲ ಸತ್ಯವಾಗಲಿ! ಎಂದಿಗೂ ಸುಳ್ಳಾಗದಿರಲಿ!'' ಎಂದು ಪ್ರಾರ್ಥಿಸುತ್ತಿದ್ದಳು (೧೩–೧೪).

ಇಲ್ಲಿಗೆ ಶ್ರೀಮದ್ರಾಮಾಯಣದ ಸುಂದರಕಾಂಡದಲ್ಲಿ ಮೂವತ್ತೆರಡನೆಯ ಸರ್ಗ

ಸರ್ಗ ೩೩

ಹನುಮಂತನು ಮರದಿಂದ ಸ್ವಲ್ಪ ಕೆಳಕ್ಕಿಳಿದು ಬಂದು ಸೀತಾವೃತ್ತಾಂತವನ್ನು ವಿಚಾರಿಸಲಾಗಿ, ಅವಳು ತನ್ನ ವೃತ್ತಾಂತವನ್ನು ಹೇಳುವುದು.

ಆಮೇಲೆ ಹನುಮಂತನು ದೇವಿಗೆ ನಮಸ್ಕರಿಸಿ ವಿನೀತನಾಗಿ ದೈನ್ಯಭಾವದಿಂದ ಅವಳಿಗೆ ಸಮೀಪದಲ್ಲಿದ್ದ ಕೊಂಬೆಗೆ ಇಳಿದುಬಂದನು. ಆ ಮಹಾ ತೇಜಸ್ವಿಯು ತಲೆಯಮೇಲೆ ಕೈಜೋಡಿಸಿಕೊಂಡು ಮಧುರವಚನದಿಂದ ಪ್ರಶ್ನೆಮಾಡಿದನು (೧–೨): ''ಎಲೌ ಪದ್ಮನೇತ್ರೆ, ನೀನು ಯಾರು?

ಕಿಮರ್ಥಂ ತವ ನೇತ್ರಾಭ್ಯಾಂ ವಾರಿ ಸ್ರವತಿ ಶೋಕಜಮ್ ।
ಪುಂಡರೀಕಪಲಾಶಾಭ್ಯಾಂ ವಿಪ್ರಕೀರ್ಣಮಿವೋದಕಮ್ ॥ ೪

ಸುರಾಣಾಮಸುರಾಣಾಂ ವಾ ನಾಗಗಂಧರ್ವರಕ್ಷಸಾಮ್ ।
ಯಕ್ಷಾಣಾಂ ಕಿಂನರಾಣಾಂ ವಾ ಕಾ ತ್ವಂ ಭವಸಿ ಶೋಭನೇ ॥ ೫

ಕಾ ತ್ವಂ ಭವಸಿ ರುದ್ರಾಣಾಂ ಮರುತಾಂ ವಾ ವರಾನನೇ ।
ವಸೂನಾಂ ವಾ ವರಾರೋಹೇ ದೇವತಾ ಪ್ರತಿಭಾಸಿ ಮೇ ॥ ೬

ಕಿಂ ನು ಚಂದ್ರಮಸಾ ಹೀನಾ ಪತಿತಾ ವಿಬುಧಾಲಯಾತ್ ।
ರೋಹಿಣೀ ಜ್ಯೋತಿಷಾಂ ಶ್ರೇಷ್ಠಾ ಶ್ರೇಷ್ಠಾ ಸರ್ವಗುಣಾನ್ವಿತಾ ॥ ೭

ಕಾ ತ್ವಂ ಭವಸಿ ಕಲ್ಯಾಣಿ ತ್ವಮನಿಂದಿತಲೋಚನೇ ।
ಕೋಪಾದ್ವಾ ಯದಿ ವಾ ಮೋಹದ್ಭರ್ತಾರಮಸಿತೇಕ್ಷಣೇ ॥ ೮

ವಸಿಷ್ಠಂ ಕೋಪಯಿತ್ವಾ ತ್ವಂ ನಾಸಿ ಕಲ್ಯಾಣ್ಯರುಂಧತೀ ।
ಕೋ ನು ಪುತ್ರಃ ಪಿತಾ ಭ್ರಾತಾ ಭರ್ತಾ ವಾ ತೇ ಸುಮಧ್ಯಮೇ ॥ ೯

ಮಾಸಿದ ಸೀರೆಯನ್ನುಟ್ಟು ಮರದ ಕೊಂಬೆಯನ್ನು ಹಿಡಿದು ಏಕೆ ನಿಂತಿರುವೆ? ತಾವರೆಯ ದಳಗಳಿಂದ ನೀರು ಸುರಿಯುವಂತೆ, ನಿನ್ನ ಕಣ್ಣುಗಳಿಂದ ಕಂಬನಿಯು ಸುರಿಯುತ್ತಿರುವುದೇಕೆ? ಶೋಭನಾಂಗಿ, ನೀನು ದೇವಕನ್ಯೆಯೊ? ದಾನವಕನ್ಯೆಯೊ? ಅಥವಾ ನಾಗ, ಗಂಧರ್ವ, ರಾಕ್ಷಸ, ಯಕ್ಷ, ಕಿನ್ನರರಲ್ಲಿ ಒಬ್ಬಳೊ? (೩–೫). ಅಥವಾ ರುದ್ರ, ಮರುತ್ತು, ವಸುಗಳಲ್ಲಿ ಸೇರಿದವಳೊ ? ಸಾಕ್ಷಾತ್ ದೇವತೆಯಂತೆ ಕಾಣಿಸುತ್ತಿದ್ದೀಯೆ. ಒಂದುವೇಳೆ ನೀನು ಚಂದ್ರನನ್ನಗಲಿ ಸ್ವರ್ಗದಿಂದ ಕೆಳಗೆ ಬಂದ ತಾರಾಮಣಿಯಾದ ರೋಹಿಣಿಯೊ? (೬–೭). ಹೇ ಕಲ್ಯಾಣಿ, ನೀನು ಯಾರು ? ಕೋಪದಿಂದಲೋ ಅಜ್ಞಾನದಿಂದಲೋ ವಸಿಷ್ಠ ಮುನಿಯನ್ನು ರೇಗಿಸಿ ಹೊರಟುಬಂದ ಅರುಂಧತಿಯಾಗಿರಬಹುದೆ ? ನಿನ್ನ ಮಗನಾಗಲಿ, ತಂದೆಯಾಗಲಿ, ಸೋದರನಾಗಲಿ, ಪತಿಯಾಗಲಿ ನಿನ್ನನ್ನಗಲಿ ಪರಲೋಕವನ್ನು ಸೇರಿದನೆಂದು ದುಃಖಿಸುತ್ತಿರುವೆಯಾ ? (೮–೯). ನೀನು

ಅಸ್ಮಾಲ್ಲೋಕಾದಮುಂ ಲೋಕಂ ಗತಂ ತ್ವಮನುಶೋಚಸಿ ।
ರೋದನಾದತಿನಿಃಶ್ವಾಸಾದ್ಭೂಮಿಸಂಸ್ಪರ್ಶನಾದಪಿ ॥ ೧೦

ನ ತ್ವಾಂ ದೇವೀಮಹಂ ಮನ್ಯೇ ರಾಜ್ಞಃ ಸಂಜ್ಞಾವಧಾರಣಾತ್ ।
ವ್ಯಂಜನಾನಿ ಚ ತೇ ಯಾನಿ ಲಕ್ಷಣಾನಿ ಚ ಲಕ್ಷಯೇ ॥ ೧೧

ಮಹಿಷೀ ಭೂಮಿಪಾಲಸ್ಯ ರಾಜಕನ್ಯಾಸಿ ಮೇ ಮತಾ ।
ರಾವಣೇನ ಜನಸ್ಥಾನಾದ್ಬಲಾದಪಹೃತಾ ಯದಿ ॥ ೧೨

ಸೀತಾ ತ್ವಮಸಿ ಭದ್ರಂ ತೇ ತನ್ಮಮಾಚಕ್ಷ್ವ ಪೃಚ್ಛತಃ ।
ಯಥಾ ಹಿ ತವ ವೈ ದೈನ್ಯಂ ರೂಪಂ ಚಾಪ್ಯತಿಮಾನುಷಮ್ ॥ ೧೩

ತಪಸಾ ಚಾನ್ವಿತೋ ವೇಷಸ್ತ್ವಂ ರಾಮಮಹಿಷೀ ಧ್ರುವಮ್ ।
ಸಾ ತಸ್ಯ ವಚನಂ ಶ್ರುತ್ವಾ ರಾಮಕೀರ್ತನಹರ್ಷಿತಾ ॥ ೧೪

ಉವಾಚ ವಾಕ್ಯಂ ವೈದೇಹೀ ಹನೂಮಂತಂ ದ್ರುಮಾಶ್ರಿತಮ್ ।
ಪೃಥಿವ್ಯಾಂ ರಾಜಸಿಂಹಾನಾಂ ಮುಖ್ಯಸ್ಯ ವಿದಿತಾತ್ಮನಃ ॥ ೧೫

ಸ್ನುಷಾ ದಶರಥಸ್ಯಾಹಂ ಶತ್ರುಸೈನ್ಯಪ್ರಮಾಥಿನಃ ।
ದುಹಿತಾ ಜನಕಸ್ಯಾಹಂ ವೈದೇಹಸ್ಯ ಮಹಾತ್ಮನಃ ॥ ೧೬

ಅಳುತ್ತಿರುವುದರಿಂದಲೂ ನಿಟ್ಟುಸಿರುಬಿಡುತ್ತಿರುವುದರಿಂದಲೂ ನೆಲದಮೇಲೆ ನಿಂತಿರುವುದರಿಂದಲೂ ಶ್ರೀರಾಮನ ಹೆಸರನ್ನು ಹೇಳುತ್ತಿರುವುದರಿಂದಲೂ ನೀನು ದೇವತೆಯಲ್ಲವೆಂದು ನನ್ನ ಭಾವನೆ. ನಿನ್ನ ದೇಹಲಕ್ಷಣಗಳನ್ನು ಗಮನಿಸಿದರೆ ನೀನು ರಾಜಪತ್ನಿಯೆಂದೂ ರಾಜಕುಮಾರಿಯೆಂದೂ ತೋರುತ್ತದೆ (೧೦–೧೧). ಒಂದು ವೇಳೆ ರಾವಣನು ಜನಸ್ಥಾನದಿಂದ ಅಪಹರಿಸಿ ತಂದ ಸೀತೆಯೇ ನೀನಾಗಿದ್ದ ಪಕ್ಷದಲ್ಲಿ—ದೇವಿ, ನಿನಗೆ ಮಂಗಳವಾಗಲಿ ! ಆ ವಿಷಯವನ್ನು ನನಗೆ ಹೇಳು. ನಿನ್ನ ದೀನಸ್ಥಿತಿಯನ್ನೂ ಮನುಷ್ಯರಿಗೆ ದುರ್ಲಭವಾದ ಈ ರೂಪವನ್ನೂ ತಾಪಸವೇಷವನ್ನೂ ನೋಡಿದರೆ, ನೀನು ಶ್ರೀರಾಮನ ಪತ್ನಿಯೆಂಬುದೇ ನಿಶ್ಚಯ'' ಎಂದನು (೧೨–೧೩). ಶ್ರೀರಾಮನ ಹೆಸರನ್ನು ಕೇಳಿದಕೂಡಲೆ ಸೀತೆಯು ಆನಂದಭರಿತಳಾಗಿ, ಮರದಮೇಲಿದ್ದ ಹನುಮಂತನನ್ನು ಕುರಿತು ಹೀಗೆಂದಳು :

ಸೀತಾ ಚ ನಾಮ ನಾಮ್ನಾಹಂ ಭಾರ್ಯಾ ರಾಮಸ್ಯ ಧೀಮತಃ ।
ಸಮಾ ದ್ವಾದಶ ತತ್ರಾಹಂ ರಾಘವಸ್ಯ ನಿವೇಶನೇ ॥ ೧೭

ಭುಂಜಾನಾ ಮಾನುಷಾನ್ ಭೋಗಾನ್ ಸರ್ವಕಾಮಸಮೃದ್ಧಿನೀ ।
ತತಸ್ತ್ರಯೋದಶೇ ವರ್ಷೇ ರಾಜ್ಯೇ ಚೇಕ್ಷ್ವಾಕುನಂದನಮ್ ॥ ೧೮

ಅಭಿಷೇಚಯಿತುಂ ರಾಜಾ ಸೋಪಾಧ್ಯಾಯಃ ಪ್ರಚಕ್ರಮೇ ।
ತಸ್ಮಿನ್ ಸಂಭ್ರಿಯಮಾಣೇ ತು ರಾಘವಸ್ಯಾಭಿಷೇಚನೇ ॥ ೧೯

ಕೈಕೇಯೀ ನಾಮ ಭರ್ತಾರಮಿದಂ ವಚನಮಬ್ರವೀತ್ ।
ನ ಪಿಬೇಯಂ ನ ಖಾದೇಯಂ ಪ್ರತ್ಯಹಂ ಮಮ ಭೋಜನಮ್ ॥

ಏಷ ಮೇ ಜೀವಿತಸ್ಯಾಂತೋ ರಾಮೋ ಯದ್ಯಭಿಷಿಚ್ಯತೇ ।
ಯತ್ತದುಕ್ತಂ ತ್ವಯಾ ವಾಕ್ಯಂ ಪ್ರೀತ್ಯಾ ನೃಪತಿಸತ್ತಮ ॥ ೨೧

ತಚ್ಚೇನ್ನ ವಿತಥಂ ಕಾರ್ಯಂ ವನಂ ಗಚ್ಛತು ರಾಘವಃ ।
ಸ ರಾಜಾ ಸತ್ಯವಾಗ್ದೇವ್ಯಾ ವರದಾನಮನುಸ್ಮರನ್ ॥ ೨೨

''ನಾನು ಶತ್ರುಸಂಹಾರಕನಾದ ದಶರಥಮಹಾರಾಜನ ಸೊಸೆ ; ಮಹಾತ್ಮನಾದ ಜನಕಮಹಾರಾಜನ ಮಗಳು (೧೪–೧೬). ನನ್ನ ಹೆಸರು ಸೀತೆ ; ನಾನು ಧೀಮಂತ ನಾದ ಶ್ರೀರಾಮನ ಪತ್ನಿ. ದಶರಥಮಹಾರಾಜನ ಅರಮನೆಯಲ್ಲಿ ಸಕಲ ಮಾನುಷಭೋಗಗಳನ್ನೂ ಅನುಭವಿಸುತ್ತ ಹನ್ನೆರಡು ವರ್ಷಗಳ ಕಾಲ ನಾನು ಸುಖವಾಗಿದ್ದೆನು. ಹದಿಮೂರನೆಯ ವರ್ಷದಲ್ಲಿ ದಶರಥಮಹಾರಾಜನು ನನ್ನ ಪತಿಯಾದ ಶ್ರೀರಾಮಚಂದ್ರನಿಗೆ ಪಟ್ಟಾಭಿಷೇಕ ಮಾಡಬೇಕೆಂದು ಪುರೋಹಿತ ರಾದ ವಸಿಷ್ಠರೊಡನೆ ಕಲೆತು ಪ್ರಯತ್ನಮಾಡಿದನು (೧೭–೧೯). ಪಟ್ಟಾಭಿಷೇಕಕ್ಕೆ ಸಿದ್ಧತೆಯನ್ನು ಮಾಡುತ್ತಿರುವಾಗ, ದಶರಥರಾಜನ ಪತ್ನಿಯರಲ್ಲೊಬ್ಬಳಾದ ಕೈಕೇಯಿಯು ತನ್ನ ಪತಿಯನ್ನು ಕಂಡು 'ಮಹಾರಾಜ, ರಾಮನಿಗೆ ಪಟ್ಟಾಭಿಷೇಕ ಮಾಡುವುದಾದರೆ ನಾನು ಅನ್ನಪಾನಗಳನ್ನೇ ಮುಟ್ಟುವುದಿಲ್ಲ. ಹೀಗೆಯೇ ನನ್ನ ಜೀವಿತವು ಕೊನೆಗೊಳ್ಳುವುದೆಂದು ತಿಳಿ. ಹಿಂದೆ ನೀನು ಕೊಟ್ಟ ಮಾತು ಸುಳ್ಳಾಗಬಾರದೆಂದಿದ್ದರೆ ರಾಮನು ಕಾಡಿಗೆ ಹೋಗಲಿ' ಎಂದಳು (೨೦–೨೧).

ಮುಮೋಹ ವಚನಂ ಶ್ರುತ್ವಾ ಕೈಕೇಯ್ಯಾಃ ಕ್ರೂರಮಪ್ರಿಯಮ್ ।
ತತಸ್ತು ಸ್ಥವಿರೋ ರಾಜಾ ಸತ್ಯೇ ಧರ್ಮೇ ವ್ಯವಸ್ಥಿತಃ ॥ ೨३

ಜ್ಯೇಷ್ಠಂ ಯಶಸ್ವಿನಂ ಪುತ್ರಂ ರುದನ್ ರಾಜ್ಯಮಯಾಚತ ।
ಸ ಪಿತುರ್ವಚನಂ ಶ್ರೀಮಾನಭಿಷೇಕಾತ್ ಪರಂ ಪ್ರಿಯಮ್ ॥ ೨೪

ಮನಸಾ ಪೂರ್ವಮಾಸಾದ್ಯ ವಾಚಾ ಪ್ರತಿಗೃಹೀತವಾನ್ ।
ದದ್ಯಾನ್ನ ಪ್ರತಿಗೃಹ್ಣೀಯಾನ್ನ ಬ್ರೂಯಾತ್ ಕಿಂಚಿದಪ್ರಿಯಮ್ ॥ ೨೫

ಅಪಿ ಜೀವಿತಹೇತೋರ್ವಾ ರಾಮಃ ಸತ್ಯಪರಾಕ್ರಮಃ ।
ಸ ವಿಹಾಯೋತ್ತರೀಯಾಣಿ ಮಹಾರ್ಹಾಣಿ ಮಹಾಯಶಾಃ ॥ ೨೬

ವಿಸೃಜ್ಯ ಮನಸಾ ರಾಜ್ಯಂ ಜನನ್ಯೈ ಮಾಂ ಸಮಾದಿಶತ್ ।
ಸಾಹಂ ತಸ್ಯಾಗ್ರತಸ್ತೂರ್ಣಂ ಪ್ರಸ್ಥಿತಾ ವನಚಾರಿಣೀ ॥ ೨೭

ನ ಹಿ ಮೇ ತೇನ ಹೀನಾಯಾ ವಾಸಃ ಸ್ವರ್ಗೇಽಪಿ ರೋಚತೇ ।
ಪ್ರಾಗೇವ ತು ಮಹಾಭಾಗಃ ಸೌಮಿತ್ರಿರ್ಮಿತ್ರನಂದನಃ ॥ ೨೮

ಸತ್ಯಸಂಧನಾದ ಮಹಾರಾಜನು ಕೈಕೇಯಿಗೆ ಕೊಟ್ಟಿದ್ದ ವರವನ್ನು ಜ್ಞಾಪಿಸಿಕೊಂಡು ಕ್ರೂರವಾದ ಅವಳ ಮಾತನ್ನು ಕೇಳುತ್ತಲೇ ಮೂರ್ಛೆಹೊಂದಿದನು. ವೃದ್ಧನಾದ ದಶರಥರಾಜನು ಸತ್ಯಧರ್ಮಗಳಿಂದ ಎಂದೂ ತಪ್ಪಿ ನಡೆದವನಲ್ಲ. ಅವನು ಜ್ಯೇಷ್ಠಪುತ್ರನಾದ ರಾಮನನ್ನು ಕರೆದು, ತಾನು ಕೊಡಬೇಕೆಂದಿದ್ದ ರಾಜ್ಯವನ್ನು ತನಗೇ ಕೊಡಬೇಕೆಂದು ಅಳುತ್ತ ಬೇಡಿಕೊಂಡನು. ಆಗ ಶ್ರೀರಾಮನು ಪಟ್ಟಾಭಿಷೇಕ ಕ್ಕಿಂತಲೂ ಪಿತೃವಾಕ್ಯಪಾಲನೆಯೇ ಪರಮಪ್ರಿಯವೆಂದು ತಿಳಿದು ಮನಃಪೂರ್ವಕ ವಾಗಿ ತಂದೆಯ ಮಾತನ್ನು ಒಪ್ಪಿಕೊಂಡನು (೨೨–೨೪). ಸತ್ಯಪರಾಕ್ರಮನಾದ ಶ್ರೀರಾಮನು ಬೇರೆಯವರಿಗೆ ಕೊಡುವವನೇ ಹೊರತು ತಾನು ಕೈನೀಡಿ ತೆಗೆದುಕೊಳ್ಳತಕ್ಕವನಲ್ಲ. ಎಂದಿಗೂ ಅಪ್ರಿಯವಾದ ಮಾತನ್ನು ಆಡತಕ್ಕವನಲ್ಲ; ಪ್ರಾಣಕ್ಕೆ ಅಪಾಯ ಒದಗಿದರೂ ತಪ್ಪಿ ನಡೆಯುವುದಿಲ್ಲ. ಈ ಕೀರ್ತಿವಂತನು ಕೂಡಲೇ ರಾಜಯೋಗ್ಯವಾದ ಉತ್ತಮ ವಸ್ತ್ರಗಳನ್ನು ತೆಗೆದುಹಾಕಿದನು (೨೫–೨೬). ಮನಸ್ಸಿನಲ್ಲಿಯೂ ರಾಜ್ಯವನ್ನು ಬಯಸದೆ, ನನ್ನನ್ನು ಕರೆದು ಕೌಸಲ್ಯೆಯ ಬಳಿ ಇರುವಂತೆ ಸೂಚಿಸಿದನು. ಆದರೆ ನಾನು ಅವನಿಗಿಂತ ಮುಂದೆ

ಪೂರ್ವಜಸ್ಯಾನುಯಾತ್ರಾರ್ಥೇ ದ್ರುಮಚೀರೈರಲಂಕೃತಃ ।
ತೇ ವಯಂ ಭರ್ತುರಾದೇಶಂ ಬಹುಮಾನ್ಯ ದೃಢವ್ರತಾಃ ॥ ೨೯

ಪ್ರವಿಷ್ಟಾಃ ಸ್ಮ ಪುರಾದೃಷ್ಟಂ ವನಂ ಗಂಭೀರದರ್ಶನಮ್ ।
ವಸತೋ ದಂಡಕಾರಣ್ಯೇ ತಸ್ಯಾಹಮಮಿತೌಜಸಃ ॥ ೩೦

ರಕ್ಷಸಾಪಹೃತಾ ಭಾರ್ಯಾ ರಾವಣೇನ ದುರಾತ್ಮನಾ ।
ದ್ವೌ ಮಾಸೌ ತೇನ ಮೇ ಕಾಲೋ ಜೀವಿತಾನುಗ್ರಹಃ ಕೃತಃ ॥ ೩೧

ಊರ್ಧ್ವಂ ದ್ವಾಭ್ಯಾಂ ತು ಮಾಸಾಭ್ಯಾಂ ತತಸ್ತ್ಯಕ್ಷ್ಯಾಮಿ ಜೀವಿತಮ್॥

ಇತಿ ಶ್ರೀಮದ್ರಾಮಾಯಣೇ ಸುಂದರಕಾಂಡೇ ತ್ರಯಸ್ತ್ರಿಂಶಃ ಸರ್ಗಃ

ವನವಾಸಕ್ಕೆ ಸಿದ್ಧಳಾಗಿ ಹೊರಟುಬಿಟ್ಟೆನು (೨೭). ರಾಮನನ್ನು ಬಿಟ್ಟು ಸ್ವರ್ಗದಲ್ಲಿ ಇರಬೇಕೆಂದರೂ ನನಗೆ ರುಚಿಸದು. ಮಹಾತ್ಮನಾದ ಲಕ್ಷ್ಮಣನೂ ಕೂಡ ಅಣ್ಣನಿಗಿಂತ ಮೊದಲೇ ಅರಣ್ಯಯಾತ್ರೆಗೆ ಸಿದ್ಧನಾಗಿ, ನಾರುಬಟ್ಟೆಯನ್ನುಟ್ಟು ಕೊಂಡಿದ್ದನು (೨೮–೨೯). ಹೀಗೆ ನಾವು ಮೂವರೂ ರಾಜಾಜ್ಞೆಯನ್ನು ಶಿರಸಾವಹಿಸಿ ದೃಢನಿಶ್ಚಯದಿಂದ ಹಿಂದೆ ಯಾವಾಗಲೂ ನೋಡದಿದ್ದ ಭಯಂಕರ ವಾದ ಅರಣ್ಯವನ್ನು ಪ್ರವೇಶಿಸಿದೆವು. ದಂಡಕಾರಣ್ಯದಲ್ಲಿರುವಾಗ ಶ್ರೀರಾಮನ ಪತ್ನಿಯಾದ ನನ್ನನ್ನು ದುರಾತ್ಮನಾದ ರಾವಣನು ಇಲ್ಲಿಗೆ ಕದ್ದು ತಂದಿದ್ದಾನೆ. ನನ್ನ ಪ್ರಾಣ ಉಳಿಯುವುದಕ್ಕೆ ಇನ್ನು ಎರಡು ತಿಂಗಳು ಅವಧಿಯನ್ನು ಕೊಟ್ಟಿದ್ದಾನೆ. ಎರಡು ತಿಂಗಳಾದಮೇಲೆ ನಾನು ಪ್ರಾಣವನ್ನು ಒಪ್ಪಿಸಬೇಕು'' ಎಂದಳು (೩೦–೩೧).

ಇಲ್ಲಿಗೆ ಶ್ರೀಮದ್ರಾಮಾಯಣದ ಸುಂದರಕಾಂಡದಲ್ಲಿ ಮೂವತ್ತುಮೂರನೆಯ ಸರ್ಗ

ಚತುಸ್ತ್ರಿಂಶಃ ಸರ್ಗಃ

ರಾವಣಶಂಕಾನಿವಾರಣಮ್

ತಸ್ಯಾಸ್ತದ್ವಚನಂ ಶ್ರುತ್ವಾ ಹನುಮಾನ್ ಹರಿಯೂಥಪಃ ।
ದುಃಖಾದ್ದುಃಖಾಭಿಭೂತಾಯಾಃ ಸಾಂತ್ವಮುತ್ತರಮಬ್ರವೀತ್ ॥ ೧

ಅಹಂ ರಾಮಸ್ಯ ಸಂದೇಶಾದ್ದೇವಿ ದೂತಸ್ತವಾಗತಃ ।
ವೈದೇಹಿ ಕುಶಲೀ ರಾಮಸ್ತ್ವಾಂ ಚ ಕೌಶಲಮಬ್ರವೀತ್ ॥ ೨

ಯೋ ಬ್ರಾಹ್ಮಮಸ್ತ್ರಂ ವೇದಾಂಶ್ಚ ವೇದ ವೇದವಿದಾಂ ವರಃ ।
ಸ ತ್ವಾಂ ದಾಶರಥೀ ರಾಮೋ ದೇವೀ ಕೌಶಲಮಬ್ರವೀತ್ ॥ ೩

ಲಕ್ಷ್ಮಣಶ್ಚ ಮಹಾತೇಜಾ ಭರ್ತುಸ್ತೇಽನುಚರಃ ಪ್ರಿಯಃ ।
ಕೃತವಾನ್ ಶೋಕಸಂತಪ್ತಃ ಶಿರಸಾ ತೇಽಭಿವಾದನಮ್ ॥ ೪

ಸರ್ಗ ೩೪

ಹನುಮಂತನು ರಾಮಲಕ್ಷ್ಮಣರ ಕುಶಲವನ್ನು ಹೇಳಿ ಸೀತೆಯ ಸಮೀಪಕ್ಕೆ ಹೋಗುವುದು. ಸೀತೆಯು ಅವನು ರಾವಣನೆಂದು ಭ್ರಮಿಸಿ ಗಾಬರಿಗೊಳ್ಳುವುದು. ಅವಳಿಗೆ ವಿಶ್ವಾಸವನ್ನು ಹುಟ್ಟಿಸುವುದಕ್ಕಾಗಿ ಹನುಮಂತನು ರಾಮನ ಗುಣಗಳನ್ನು ವರ್ಣಿಸುವುದು.

ಆಂಜನೇಯನು ದುಃಖದಿಂದ ಬೆಂದುಹೋಗಿರುವ ಸೀತೆಯ ಮಾತನ್ನು ಕೇಳಿ ಸಂತವಿಡುತ್ತ "ದೇವಿ, ನಾನು ರಾಮನ ಸಂದೇಶವನ್ನು ತಂದಿರುವ ದೂತನು. ಶ್ರೀರಾಮನು ಕುಶಲದಿಂದಿರುವನು. ನಿನ್ನ ಕುಶಲವನ್ನು ವಿಚಾರಿಸಬೇಕೆಂದು ಹೇಳಿದ್ದಾನೆ (೧–೨). ಬ್ರಹ್ಮಾಸ್ತ್ರವನ್ನೂ ಸಕಲ ವೇದಗಳನ್ನೂ ಬಲ್ಲವನಾಗಿ ವೇದವಿದರಲ್ಲಿ ಮೇಲೆನಿಸಿಕೊಂಡ ದಶರಥಪುತ್ರನಾದ ರಾಮನೇ ನಿನಗೆ ಕುಶಲವನ್ನು ಹೇಳಿಕಳಿಸಿರುತ್ತಾನೆ. ನಿನ್ನ ಪತಿಗೆ ಪ್ರಿಯನಾಗಿ ಸೇವೆಯನ್ನು ಸಲ್ಲಿಸುತ್ತಿರುವ ಮಹಾತೇಜಸ್ವಿಯಾದ ಲಕ್ಷ್ಮಣನೂ ಅತ್ಯಂತ ದುಃಖದಿಂದ ತಪಿಸುತ್ತ, ತಲೆಬಾಗಿ ನಿನಗೆ ನಮಸ್ಕರಿಸಿದ್ದೇನೆಂದು ಹೇಳಿ ಕಳಿಸಿದ್ದಾನೆ" ಎಂದನು (೩–೪). ಆ

ಸಾ ತಯೋಃ ಕುಶಲಂ ದೇವೀ ನಿಶಮ್ಯ ನರಸಿಂಹಯೋಃ ।
ಪ್ರೀತಿಸಂಹೃಷ್ಟಸರ್ವಾಂಗೀ ಹನೂಮಂತಮಥಾಬ್ರವೀತ್ ॥ ೫
ಕಲ್ಯಾಣೀ ಬತ ಗಾಥೇಯಂ ಲೌಕಿಕೀ ಪ್ರತಿಭಾತಿ ಮಾ ।
ಏತಿ ಜೀವಂತಮಾನಂದೋ ನರಂ ವರ್ಷಶತಾದಪಿ ॥ ೬
ತಯಾ ಸಮಾಗತೇ ತಸ್ಮಿನ್ ಪ್ರೀತಿರುತ್ಪಾದಿತಾದ್ಭುತಾ ।
ಪರಸ್ಪರೇಣ ಚಾಲಾಪಂ ವಿಶ್ವಸ್ತೌ ತೌ ಪ್ರಚಕ್ರತುಃ ॥ ೭
ತಸ್ಯಾಸ್ತದ್ವಚನಂ ಶ್ರುತ್ವಾ ಹನುಮಾನ್ ಹರಿಯೂಥಪಃ ।
ಸೀತಾಯಾಃ ಶೋಕದೀನಾಯಾಃ ಸಮೀಪಮುಪಚಕ್ರಮೇ ॥ ೮
ಯಥಾ ಯಥಾ ಸಮೀಪಂ ಸ ಹನುಮಾನುಪಸರ್ಪತಿ ।
ತಥಾ ತಥಾ ರಾವಣಂ ಸಾ ತಂ ಸೀತಾ ಪರಿಶಂಕತೇ ॥ ೯
ಅಹೋ ಧಿಗ್ದುಷ್ಕೃತಮಿದಂ ಕಥಿತಂ ಹಿ ಯದಸ್ಯ ಮೇ ।
ರೂಪಾಂತರಮುಪಾಗಮ್ಯ ಸ ಏವಾಯಂ ಹಿ ರಾವಣಃ ॥ ೧೦
ತಾಮಶೋಕಸ್ಯ ಶಾಖಾಂ ಸಾ ವಿಮುಕ್ತ್ವಾ ಶೋಕಕರ್ಶಿತಾ ।
ತಸ್ಯಾಮೇವಾನವದ್ಯಾಂಗೀ ಧರಣ್ಯಾಂ ಸಮುಪಾವಿಶತ್ ॥ ೧೧

ನರಶ್ರೇಷ್ಠರಿಬ್ಬರ ಕುಶಲವನ್ನು ಕೇಳಿದೊಡನೆ ಸೀತೆಯು ಸಂತೋಷದಿಂದ ಉಬ್ಬಿ ಹೋದಳು. ''ಆಹಾ! ಮನುಷ್ಯನು ಸಾಯದೆ ಬದುಕಿದ್ದರೆ, ನೂರು ವರ್ಷಗಳಿಗಾದರೂ ಒಮ್ಮೆ ಸುಖದ ದಿನವನ್ನು ಕಾಣುತ್ತಾನೆ—ಎಂಬ ಹೇಳಿಕೆ ಸತ್ಯವಾಗಿಯೇ ತೋರುತ್ತದೆ!'' ಎಂದಳು (೫–೬). ಅವಳಿಗೆ ಬಹಳ ಆನಂದವಾಯಿತು. ವೈದೇಹಿಗೂ ಹನುಮಂತನಿಗೂ ಪರಸ್ಪರವಾಗಿ ನಂಬಿಕೆಯು ಹುಟ್ಟಲು, ಅವರೀರ್ವರೂ ಮಾತನಾಡತೊಡಗಿದರು. ಸೀತೆಯ ಮಾತನ್ನು ಕೇಳುತ್ತ ಹನುಮಂತನು ಮೆಲ್ಲಮೆಲ್ಲನೆ ಅವಳ ಸಮೀಪಕ್ಕೆ ಬರತೊಡಗಿದನು (೭–೮). ಅವನು ಮುಂದೆ ಮುಂದೆ ಬಂದಹಾಗೆ, ಅವನು ರಾವಣನಾಗಿರಬಹುದೆಂದು ಸೀತೆಗೆ ಭಯವಾಯಿತು. ''ಅಯ್ಯೋ, ನನ್ನ ಪಾಪಕರ್ಮವೇ! ಇವನೊಡನೆ ಮಾತನಾಡಿದ್ದು ತಪ್ಪಾಯಿತು. ಅದೇ ರಾವಣನೇ ಈ ವೇಷದಿಂದ ಬಂದಿದ್ದಾನೆ!'' ಎಂದುಕೊಳ್ಳುತ್ತ ತಾನು ಹಿಡಿದುಕೊಂಡಿದ್ದ ಅಶೋಕವೃಕ್ಷದ ಕೊಂಬೆಯನ್ನು ಬಿಟ್ಟು ದುಃಖದಿಂದ

ಹನುಮಾನಪಿ ದುಃಖಾರ್ತಾಂ ತಾಂ ದೃಷ್ಟ್ವಾ ಭಯಮೋಹಿತಾಮ್ ।
ಅವಂದತ ಮಹಾಬಾಹುಸ್ತತಸ್ತಾಂ ಜನಕಾತ್ಮಜಾಮ್ ॥ ೧೨

ಸಾ ಚೈನಂ ಭಯವಿತ್ರಸ್ತಾ ಭೂಯೋ ನೈವಾಭ್ಯುದೈಕ್ಷತ ।
ತಂ ದೃಷ್ಟ್ವಾ ವಂದಮಾನಂ ತು ಸೀತಾ ಶಶಿನಿಭಾನನಾ ॥ ೧೩

ಅಬ್ರವೀದ್ದೀರ್ಘಮುಚ್ಛ್ವಸ್ಯ ವಾನರಂ ಮಧುರಸ್ವರಾ ।
ಮಾಯಾಂ ಪ್ರವಿಷ್ಟೋ ಮಾಯಾವೀ ಯದಿ ತ್ವಂ ರಾವಣಃ ಸ್ವಯಮ್

ಉತ್ಪಾದಯಸಿ ಮೇ ಭೂಯಃ ಸಂತಾಪಂ ತನ್ನ ಶೋಭನಮ್ ।
ಸ್ವಂ ಪರಿತ್ಯಜ್ಯ ರೂಪಂ ಯಃ ಪರಿವ್ರಾಜಕರೂಪಧೃತ್ ॥ ೧೪

ಜನಸ್ಥಾನೇ ಮಯಾ ದೃಷ್ಟಸ್ತ್ವಂ ಸ ಏವಾಸಿ ರಾವಣಃ ।
ಉಪವಾಸಕೃಶಾಂ ದೀನಾಂ ಕಾಮರೂಪ ನಿಶಾಚರ ॥ ೧೫

ಸಂತಾಪಯಸಿ ಮಾಂ ಭೂಯಃ ಸಂತಪ್ತಾಂ ತನ್ನ ಶೋಭನಮ್ ।
ಅಥವಾ ನೈತದೇವಂ ಹಿ ಯನ್ಮಯಾ ಪರಿಶಂಕಿತಮ್ ॥ ೧೬

ಮನಸೋ ಹಿ ಮಮ ಪ್ರೀತಿರುತ್ಪನ್ನಾ ತವ ದರ್ಶನಾತ್ ।
ಯದಿ ರಾಮಸ್ಯ ದೂತಸ್ತ್ವಮಾಗತೋ ಭದ್ರಮಸ್ತು ತೇ ॥ ೧೭

ನೆಲದಮೇಲೆ ಕುಸಿದುಹೋದಳು (೯–೧೧). ಭಯದಿಂದ ಕಂಗೆಟ್ಟ ಸೀತೆಯನ್ನು ಕಂಡು ಹನುಮಂತನು ಮತ್ತೆ ನಮಸ್ಕರಿಸಿದನು. ಸೀತೆಯಾದರೋ ಭಯದಿಂದ ಅವನನ್ನು ಕಣ್ಣೆತ್ತಿಯೂ ನೋಡಲಿಲ್ಲ. ಮತ್ತೆ ಮತ್ತೆ ಹನುಮಂತನು ನಮಸ್ಕರಿಸು ತ್ತಿರಲು, ಜಾನಕಿಯು ದೀರ್ಘವಾಗಿ ನಿಟ್ಟುಸಿರು ಬಿಟ್ಟು "ರಾವಣ ! ನೀನು ತಿರುಗಿ ಇನ್ನೊಂದು ಮಾಯೆಯನ್ನವಲಂಬಿಸಿ ನನ್ನನ್ನು ಪೀಡಿಸುವುದಕ್ಕೆ ಬಂದೆಯಾ ? ಇದು ನಿನಗೆ ತರವಲ್ಲ. ನಿನ್ನ ನಿಜರೂಪವನ್ನು ತ್ಯಜಿಸಿ ಕಪಟ ಸಂನ್ಯಾಸಿಯ ವೇಷದಿಂದ ಜನಸ್ಥಾನಕ್ಕೆ ಬಂದ ರಾವಣನೇ ನೀನು! (೧೨–೧೪). ರಾಕ್ಷಸ ! ಉಪವಾಸದಿಂದ ಕೃಶಳಾಗಿ ಕೊರಗುತ್ತಿರುವ ನನ್ನನ್ನು ಮೇಲೆ ಮೇಲೆ ಹೀಗೆ ಸಂಕಟಪಡಿಸುವುದು ನಿನಗೆ ತರವಲ್ಲ" ಎಂದಳು. ಆಮೇಲೆ "ನಾನು ಭಯಪಡು ವುದು ಸರಿಯಲ್ಲ. ನಿನ್ನ ದರ್ಶನದಿಂದ ನನಗೆ ಏನೋ ಒಂದು ಬಗೆಯ ಆಹ್ಲಾದವಾಗಿದೆ. ನೀನು

ಪೃಚ್ಛಾಮಿ ತ್ವಾಂ ಹರಿಶ್ರೇಷ್ಠ ಪ್ರಿಯಾ ರಾಮಕಥಾ ಹಿ ಮೇ ।
ಗುಣಾನ್ ರಾಮಸ್ಯ ಕಥಯ ಪ್ರಿಯಸ್ಯ ಮಮ ವಾನರ ॥ ೧೯

ಚಿತ್ತಂ ಹರಸಿ ಮೇ ಸೌಮ್ಯ ನದೀಕೂಲಂ ಯಥಾ ರಯಃ ।
ಅಹೋ ಸ್ವಪ್ನಸ್ಯ ಸುಖತಾ ಯಾಹಮೇವಂ ಚಿರಾಹೃತಾ ॥ ೨೦

ಪ್ರೇಷಿತಂ ನಾಮ ಪಶ್ಯಾಮಿ ರಾಘವೇಣ ವನೌಕಸಮ್ ।
ಸ್ವಪ್ನೇಽಪಿ ಯದ್ಯಹಂ ವೀರಂ ರಾಘವಂ ಸಹಲಕ್ಷ್ಮಣಮ್ ॥ ೨೧

ಪಶ್ಯೇಯಂ ನಾವಸೀದೇಯಂ ಸ್ವಪ್ನೋಽಪಿ ಮಮ ಮತ್ಸರೀ ।
ನಾಹಂ ಸ್ವಪ್ನಮಿಮಂ ಮನ್ಯೇ ಸ್ವಪ್ನೇ ದೃಷ್ಟ್ವಾ ಹಿ ವಾನರಮ್ ॥ ೨೨

ನ ಶಕ್ಯೋಽಭ್ಯುದಯಃ ಪ್ರಾಪ್ತುಂ ಪ್ರಾಪ್ತಶ್ಚಾಭ್ಯುದಯೋ ಮಮ ।
ಕಿಂ ನು ಸ್ಯಾಚ್ಚಿತ್ತಮೋಹೋಽಯಂ ಭವೇದ್ವಾತಗತಿಸ್ತ್ವಿಯಮ್ ॥ ೨೩

ಉನ್ಮಾದಜೋ ವಿಕಾರೋ ವಾ ಸ್ಯಾದಿಯಂ ಮೃಗತೃಷ್ಣಿಕಾ ।
ಅಥವಾ ನಾಯಮುನ್ಮಾದೋ ಮೋಹೋಽಪ್ಯುನ್ಮಾದಲಕ್ಷಣಃ ॥ ೨೪

ರಾಮದೂತನೇ ಆದರೆ, ನಿನಗೆ ಶುಭವಾಗಲಿ ! (೧೬–೧೮). ಎಲೈ ಕಪಿಶ್ರೇಷ್ಠನೆ, ರಾಮನ ಕಥೆಯನ್ನು ಇನ್ನೂ ಹೇಳು. ನನಗೆ ಅದು ಬಹುಪ್ರಿಯವಾದದ್ದು. ನನ್ನ ಪ್ರಿಯನ ಸದ್ಗುಣಗಳನ್ನು ವರ್ಣಿಸು. ಸೌಮ್ಯ, ಪ್ರವಾಹ ವೇಗವು ನದಿಯ ದಡವನ್ನು ಸೆಳೆದೊಯ್ಯುವಂತೆ ನನ್ನ ಮನಸ್ಸನ್ನು ಎಳೆಯುತ್ತಿದ್ದೀಯೆ. ಆಹಾ ! ಸ್ವಪ್ನದಲ್ಲಿ ಎಷ್ಟು ಸುಖ ! ರಾಮನು ಕಪಿಯನ್ನು ದೂತನನ್ನಾಗಿ ಕಳಿಸಿದ್ದಾನೆ! ಆ ದೂತನನ್ನು ನಾನು ನೋಡುತ್ತಿದ್ದೇನೆ ! (೧೯–೨೦). ಈ ಸ್ವಪ್ನದಲ್ಲಾದರೂ ನನಗೆ ರಾಮಲಕ್ಷ್ಮಣರು ಕಾಣಿಸಬಾರದೆ ! ಸ್ವಪ್ನಕ್ಕೂ ನನ್ನನ್ನು ಕಂಡರಾಗದು ! ಅಥವಾ ಇದು ಸ್ವಪ್ನವಲ್ಲ. ಸ್ವಪ್ನದಲ್ಲಿ ಕಪಿಯನ್ನು ಕಂಡರೆ ಒಳ್ಳೆಯದಾಗುವುದಿಲ್ಲ. ನನಗೆ ಒಳ್ಳೆಯದೇ ಆಗಿದೆ ! (—ರಾಮಕಥೆಯನ್ನು ಕೇಳಿ ಸಂತೋಷವಾಗಿದೆ.) ಇದೇನು ಚಿತ್ತಭ್ರಮೆಯೊ ? ಭೂತಬಾಧೆಯೊ ? (೨೧–೨೩). ಉನ್ಮಾದವೊ ? ಅಥವಾ ಬರಿಯ ಬಿಸಿಲ್ಗುದುರೆಯೊ ? ಇಲ್ಲ ಇಲ್ಲ. ಇದು ಚಿತ್ತಭ್ರಮೆಯಲ್ಲ. ಉನ್ಮಾದವೂ ಅಲ್ಲ (೨೪). ನಾನು ಬುದ್ಧಿಗೆಟ್ಟಿಲ್ಲವೆಂದು ಸರಿಯಾಗಿ ಗೊತ್ತಿದೆ. ಕಪಿಯನ್ನು ಕಣ್ಣಾರೆ

ಸಂಬುಧ್ಯೇ ಚಾಹಮಾತ್ಮಾನಮಿಮಂ ಚಾಪಿ ವನೌಕಸಮ್ ।
ಇತ್ಯೇವಂ ಬಹುಧಾ ಸೀತಾ ಸಂಪ್ರಧಾರ್ಯ ಬಲಾಬಲಮ್ ॥ ೨೫

ರಕ್ಷಸಾಂ ಕಾಮರೂಪತ್ವಾನ್ಮೇನೇ ತಂ ರಾಕ್ಷಸಾಧಿಪಮ್ ।
ಏತಾಂ ಬುದ್ಧಿಂ ತದಾ ಕೃತ್ವಾ ಸೀತಾ ಸಾ ತನುಮಧ್ಯಮಾ ॥ ೨೬

ನ ಪ್ರತಿವ್ಯಾಜಹಾರಾಥ ವಾನರಂ ಜನಕಾತ್ಮಜಾ ।
ಸೀತಾಯಾಶ್ಚಿಂತಿತಂ ಬುದ್ಧ್ವಾ ಹನುಮಾನ್ ಮಾರುತಾತ್ಮಜಃ ॥ ೨೭

ಶ್ರೋತ್ರಾನುಕೂಲೈರ್ವಚನೈಸ್ತದಾ ತಾಂ ಸಂಪ್ರಹರ್ಷಯತ್ ।
ಆದಿತ್ಯ ಇವ ತೇಜಸ್ವೀ ಲೋಕಕಾಂತಃ ಶಶೀ ಯಥಾ ॥ ೨೮

ರಾಜಾ ಸರ್ವಸ್ಯ ಲೋಕಸ್ಯ ದೇವೋ ವೈಶ್ರವಣೋ ಯಥಾ ।
ವಿಕ್ರಮೇಣೋಪಪನ್ನಶ್ಚ ಯಥಾ ವಿಷ್ಣುರ್ಮಹಾಯಶಾಃ ॥ ೨೯

ಸತ್ಯವಾದೀ ಮಧುರವಾಗ್ದೇವೋ ವಾಚಸ್ಪತಿರ್ಯಥಾ ।
ರೂಪವಾನ್ ಸುಭಗಃ ಶ್ರೀಮಾನ್ ಕಂದರ್ಪ ಇವ ಮೂರ್ತಿಮಾನ್ ೩೦

ಸ್ಥಾನಕ್ರೋಧಃ ಪ್ರಹರ್ತಾ ಚ ಶ್ರೇಷ್ಠೋ ಲೋಕೇ ಮಹಾರಥಃ ।
ಬಾಹುಚ್ಛಾಯಾಮವಷ್ಟಬ್ಧೋ ಯಸ್ಯ ಲೋಕೋ ಮಹಾತ್ಮನಃ ॥ ೩೧

ನೋಡುತ್ತಿದ್ದೇನೆ'' ಎಂಬುದಾಗಿ ಚಿಂತಿಸಿ ಬಹಳ ಹೊತ್ತು ಯಾವುದು ಸತ್ಯವೆಂದು ತೂಕ ಮಾಡುತ್ತಾ ಇದ್ದಳು. ರಾಕ್ಷಸರು ಕಾಮರೂಪಿಗಳಾದ್ದರಿಂದ ಆ ವಾನರನು ರಾವಣನೇ ಸರಿಯೆಂದು ಕೊನೆಗೆ ನಿಶ್ಚಯಿಸಿದಳು. ಅನಂತರ ಜಾನಕಿಯು ಹನುಮಂತನೊಡನೆ ಮಾತನಾಡದೆ ಮೌನವಾಗಿದ್ದುಬಿಟ್ಟಳು (೨೫–೨೬). ಆಗ ಆಂಜನೇಯನು ಸೀತೆಯ ಮನೋಗತವನ್ನು ತಿಳಿದು ಕಿವಿಗೆ ಇಂಪಾದ ಮಾತುಗಳಿಂದ ಅವಳಿಗೆ ಹರ್ಷವನ್ನುಂಟುಮಾಡಲು ಆರಂಭಿಸಿದನು : ''ಆಹಾ! ಶ್ರೀರಾಮನು ಸೂರ್ಯನಂತೆ ತೇಜಸ್ವಿ. ಚಂದ್ರನಂತೆ ಸಮಸ್ತರನ್ನೂ ಆಹ್ಲಾದಗೊಳಿಸುವನು (೨೭–೨೮). ಕುಬೇರನಂತೆ ರಾಜಾಧಿರಾಜ ನೆನಿಸಿಕೊಂಡಿದ್ದಾನೆ. ಮಹಾವಿಷ್ಣುವಿನಂತೆ ಪರಾಕ್ರಮಶಾಲಿ. ಬೃಹಸ್ಪತಿಯಂತೆ ಸತ್ಯಸಂಧನೂ ಮಧುರವಾಗಿ ಮಾತನಾಡತಕ್ಕವನೂ ಆಗಿದ್ದಾನೆ. ಸಾಕ್ಷಾತ್ ಮನ್ಮಥನಂತೆ ರೂಪವಂತ, ಸೌಭಾಗ್ಯಶಾಲಿ, ಕಾಂತಿಯುಕ್ತ (೨೯–೩೦).

ಅಪಕೃಷ್ಯಾಶ್ರಮಪದಾನ್ಮೃಗರೂಪೇಣ ರಾಘವಮ್ ।
ಶೂನ್ಯೇ ಯೇನಾಪನೀತಾಸಿ ತಸ್ಯ ದ್ರಕ್ಷ್ಯಸಿ ಯತ್ ಫಲಮ್ ॥ ೩೨
ನಚಿರಾದ್ರಾವಣಂ ಸಂಖ್ಯೇ ಯೋ ವಧಿಷ್ಯತಿ ವೀರ್ಯವಾನ್ ।
ರೋಷಪ್ರಯುಕ್ತೈರಿಷುಭಿರ್ಜ್ವಲದ್ಭಿರಿವ ಪಾವಕೈಃ ॥ ೩೩
ತೇನಾಹಂ ಪ್ರೇಷಿತೋ ದೂತಸ್ತ್ವತ್ಸಕಾಶಮಿಹಾಗತಃ ।
ತ್ವದ್ವಿಯೋಗೇನ ದುಃಖಾರ್ತಃ ಸ ತ್ವಾಂ ಕೌಶಲಮಬ್ರವೀತ್ ॥ ೩೪
ಲಕ್ಷ್ಮಣಶ್ಚ ಮಹಾತೇಜಾಃ ಸುಮಿತ್ರಾನಂದವರ್ಧನಃ ।
ಅಭಿವಾದ್ಯ ಮಹಾಬಾಹುಃ ಸ ತ್ವಾಂ ಕೌಶಲಮಬ್ರವೀತ್ ॥ ೩೫
ರಾಮಸ್ಯ ಚ ಸಖಾ ದೇವಿ ಸುಗ್ರೀವೋ ನಾಮ ವಾನರಃ ।
ರಾಜಾ ವಾನರಮುಖ್ಯಾನಾಂ ಸ ತ್ವಾಂ ಕೌಶಲಮಬ್ರವೀತ್ ॥ ೩೬
ನಿತ್ಯಂ ಸ್ಮರತಿ ತೇ ರಾಮಃ ಸಸುಗ್ರೀವಃ ಸಲಕ್ಷ್ಮಣಃ ।
ದಿಷ್ಟ್ಯಾ ಜೀವಸಿ ವೈದೇಹಿ ರಾಕ್ಷಸೀವಶಮಾಗತಾ ॥ ೩೭

ಶ್ರೀರಾಮನು ಕ್ರೋಧಯೋಗ್ಯವಾದ ಸಂದರ್ಭದಲ್ಲಿ ಮಾತ್ರ ಕ್ರುದ್ಧನಾಗಿ ಯುದ್ಧ ಮಾಡುವನು. ಈ ಲೋಕದಲ್ಲಿ ಸರ್ವೋತ್ತಮನಾದ ಮಹಾರಥನೆನಿಸಿಕೊಂಡಿದ್ದಾನೆ. ಆ ಮಹಾತ್ಮನು ತನ್ನ ಭುಜದ ನೆರಳಿನಲ್ಲಿ ಸಮಸ್ತಲೋಕಗಳನ್ನೂ ರಕ್ಷಿಸಬಲ್ಲನು. ಅಂತಹ ರಾಮನನ್ನು ಮಾಯಾಮೃಗದ ಮೂಲಕ ಆಶ್ರಮದಿಂದ ದೂರಕ್ಕೆ ಒಯ್ದು ಅವನಿಲ್ಲದ ವೇಳೆಯಲ್ಲಿ ನಿನ್ನನ್ನು ಕದ್ದುತಂದ ರಾವಣನಿಗೆ ತಕ್ಕ ಫಲವಾಗುವುದನ್ನು ಸದ್ಯದಲ್ಲಿ ನೋಡುತ್ತೀಯೆ (೩೧-೩೨). ಆ ವೀರನು ಶೀಘ್ರದಲ್ಲಿಯೇ ಕ್ರೋಧದಿಂದ ಯುದ್ಧರಂಗಕ್ಕಿಳಿದು, ಅಗ್ನಿಯಂತೆ ಜ್ವಲಿಸುವ ಅಸ್ತ್ರಗಳಿಂದ ರಾವಣನನ್ನು ವಧಿಸುವನು. ದೇವಿ, ನಾನು ರಾಮನಿಗೆ ದೂತನಾಗಿ ನಿನ್ನ ಬಳಿಗೆ ಬಂದಿದ್ದೇನೆ. ಅವನು ನಿನ್ನ ವಿರಹದಿಂದ ದುಃಖಿತನಾಗಿ ನಿನ್ನ ಯೋಗಕ್ಷೇಮವನ್ನು ವಿಚಾರಿಸುವಂತೆ ಹೇಳಿಕಳಿಸಿದ್ದಾನೆ (೩೩-೩೪). ಸುಮಿತ್ರಾತನಯನೂ ಶೂರಾಗ್ರಣಿಯೂ ಆದ ಲಕ್ಷ್ಮಣನು ನಿನಗೆ ಅಭಿವಂದಿಸಿ ಕುಶಲವನ್ನು ವಿಚಾರಿಸುವಂತೆ ಹೇಳಿದ್ದಾನೆ. ದೇವಿ, ಶ್ರೀರಾಮನಿಗೆ ಮಿತ್ರನಾದ ಸುಗ್ರೀವನೆಂಬ ವಾನರೇಂದ್ರನೂ ಕೂಡ ನಿನ್ನ ಕ್ಷೇಮವನ್ನು ವಿಚಾರಿಸಬೇಕೆಂದು

ನಚಿರಾದ್ದ್ರಕ್ಷ್ಯಸೇ ರಾಮಂ ಲಕ್ಷ್ಮಣಂ ಚ ಮಹಾಬಲಮ್ ।
ಮಧ್ಯೇ ವಾನರಕೋಟೀನಾಂ ಸುಗ್ರೀವಂ ಚಾಮಿತೌಜಸಮ್ ॥ ೩೮
ಅಹಂ ಸುಗ್ರೀವಸಚಿವೋ ಹನುಮಾನ್ನಾಮ ವಾನರಃ ।
ಪ್ರವಿಷ್ಟೋ ನಗರೀಂ ಲಂಕಾಂ ಲಂಘಯಿತ್ವಾ ಮಹೋದಧಿಮ್ ॥ ೩೯
ಕೃತ್ವಾ ಮೂರ್ಧ್ನಿ ಪದನ್ಯಾಸಂ ರಾವಣಸ್ಯ ದುರಾತ್ಮನಃ ।
ತ್ವಾಂ ದ್ರಷ್ಟುಮುಪಯಾತೋಽಹಂ ಸಮಾಶ್ರಿತ್ಯ ಪರಾಕ್ರಮಮ್ ॥ ೪೦
ನಾಹಮಸ್ಮಿ ತಥಾ ದೇವಿ ಯಥಾ ಮಾಮವಗಚ್ಛಸಿ ।
ವಿಶಂಕಾ ತ್ಯಜ್ಯತಾಮೇಷಾ ಶ್ರದ್ಧತ್ಸ್ವ ವದತೋ ಮಮ ॥ ೪೧

ಇತಿ ಶ್ರೀಮದ್ರಾಮಾಯಣೇ ಸುಂದರಕಾಂಡೇ ಚತುಸ್ತ್ರಿಂಶಃ ಸರ್ಗಃ

ಹೇಳಿದ್ದಾನೆ (೩೫–೩೬). ಶ್ರೀರಾಮ, ಲಕ್ಷ್ಮಣ, ಸುಗ್ರೀವ—ಈ ಮೂವರೂ ಸದಾ ನಿನ್ನ ವಿಷಯವನ್ನೇ ಚಿಂತಿಸುತ್ತಿರುವರು. ವೈದೇಹಿ, ಹೀಗೆ ರಾಕ್ಷಸಿಯರ ಕೈಗೆ ಸಿಕ್ಕಿದ್ದರೂ ನೀನು ಬದುಕಿರುವುದು ನಮ್ಮ ಭಾಗ್ಯ. ಸದ್ಯದಲ್ಲಿಯೇ ಮಹಾವೀರರಾದ ರಾಮಲಕ್ಷ್ಮಣರನ್ನೂ ಕೋಟಿಸಂಖ್ಯೆಯಲ್ಲಿ ವಾನರಸೈನ್ಯದೊಡನೆ ಬರುವ ಮಹಾತೇಜಸ್ವಿಯಾದ ಸುಗ್ರೀವನನ್ನೂ ನೀನು ನೋಡುವೆ (೩೭–೩೮). ನಾನು ಸುಗ್ರೀವನ ಮಂತ್ರಿ. ಹನುಮಂತನೆಂದು ನನ್ನ ಹೆಸರು. ಮಹಾಸಾಗರವನ್ನು ಹಾರಿ ಲಂಕಾನಗರಕ್ಕೆ ಬಂದಿದ್ದೇನೆ. ದುರಾತ್ಮನಾದ ರಾವಣನ ತಲೆಯನ್ನು ಕಾಲಿನಿಂದ ಮೆಟ್ಟಿ ನಿನ್ನನ್ನು ನೋಡಿಹೋಗಬೇಕೆಂದು ಸಾಹಸಮಾಡಿ ಬಂದಿದ್ದೇನೆ. ದೇವಿ, ನೀನು ಭ್ರಮಿಸಿದಂತೆ ನಾನು ರಾವಣನಲ್ಲ. ಸಂದೇಹವನ್ನು ಬಿಡು. ನನ್ನ ಮಾತನ್ನು ನಂಬು'' ಎಂದು ಹೇಳಿದನು (೩೯–೪೧).

ಇಲ್ಲಿಗೆ ಶ್ರೀಮದ್ರಾಮಾಯಣದ ಸುಂದರಕಾಂಡದಲ್ಲಿ ಮೂವತ್ತುನಾಲ್ಕನೆಯ ಸರ್ಗ

ಪಂಚತ್ರಿಂಶಃ ಸರ್ಗಃ

ವಿಶ್ವಾಸೋತ್ಪಾದನಮ್

ತಾಂ ತು ರಾಮಕಥಾಂ ಶ್ರುತ್ವಾ ವೈದೇಹೀ ವಾನರರ್ಷಭಾತ್ ।
ಉವಾಚ ವಚನಂ ಸೌಮ್ಯಮಿದಂ ಮಧುರಯಾ ಗಿರಾ ॥ ೧

ಕ್ವ ತೇ ರಾಮೇಣ ಸಂಸರ್ಗಃ ಕಥಂ ಜಾನಾಸಿ ಲಕ್ಷ್ಮಣಮ್ ।
ವಾನರಾಣಾಂ ನರಾಣಾಂ ಚ ಕಥಮಾಸೀತ್ ಸಮಾಗಮಃ ॥ ೨

ಯಾನಿ ರಾಮಸ್ಯ ಲಿಂಗಾನಿ ಲಕ್ಷ್ಮಣಸ್ಯ ಚ ವಾನರ ।
ತಾನಿ ಭೂಯಃ ಸಮಾಚಕ್ಷ್ವ ನ ಮಾಂ ಶೋಕಃ ಸಮಾವಿಶೇತ್ ॥ ೩

ಕೀದೃಶಂ ತಸ್ಯ ಸಂಸ್ಥಾನಂ ರೂಪಂ ರಾಮಸ್ಯ ಕೀದೃಶಮ್ ।
ಕಥಮೂರೂ ಕಥಂ ಬಾಹೂ ಲಕ್ಷ್ಮಣಸ್ಯ ಚ ಶಂಸ ಮೇ ॥ ೪

ಏವಮುಕ್ತಸ್ತು ವೈದೇಹ್ಯಾ ಹನುಮಾನ್ ಪವನಾತ್ಮಜಃ ।
ತತೋ ರಾಮಂ ಯಥಾತತ್ತ್ವಮಾಖ್ಯಾತುಮುಪಚಕ್ರಮೇ ॥ ೫

ಸರ್ಗ ೩೫

ಸೀತೆಯು ಹನುಮಂತನನ್ನು ಕುರಿತು ರಾಮಲಕ್ಷ್ಮಣರ ರೂಪಲಕ್ಷಣಗಳನ್ನೂ ಅವರಿಗೆ ಸುಗ್ರೀವನೊಡನೆ ಸ್ನೇಹವಾದ ಬಗೆಯನ್ನೂ ವಿಚಾರಿಸಲು ಹನುಮಂತನು ಅದೆಲ್ಲವನ್ನೂ ತಿಳಿಸಿ ಸಮಾಧಾನಪಡಿಸುವುದು.

ಹೀಗೆ ಹನುಮಂತನು ಹೇಳಿದ ರಾಮಕಥೆಯನ್ನು ಕೇಳಿ ಜಾನಕಿಯು ಸಾಂತ್ವಪೂರ್ವಕವಾಗಿ ''ಎಲೈ ವಾನರನೆ, ನೀನು ರಾಮನನ್ನು ಎಲ್ಲಿ ನೋಡಿದೆ? ಲಕ್ಷ್ಮಣನನ್ನು ಹೇಗೆ ಬಲ್ಲೆ? ಕಪಿಗಳಿಗೂ ಮನುಷ್ಯರಿಗೂ ಸ್ನೇಹವಾದದ್ದು ಹೇಗೆ? ರಾಮಲಕ್ಷ್ಮಣರ ದೇಹಲಕ್ಷಣಗಳನ್ನು ಹೇಳು. ಅದರಿಂದ ನನ್ನ ಸಂದೇಹವು ನೀಗಿ ದುಃಖವು ಶಾಂತವಾದೀತು. ರಾಮನ ಆಕಾರ ಹೇಗಿದೆ? ಅವನ ಮೈಬಣ್ಣ ಎಂತಹುದು? ಅವನ ತೊಡೆಗಳೂ ಬಾಹುಗಳೂ ಹೇಗಿವೆ? ಹಾಗೆಯೇ ಲಕ್ಷ್ಮಣನ ರೂಪಲಕ್ಷಣಗಳನ್ನು ವಿವರಿಸು'' ಎಂದಳು (೧–೪). ಆಗ ಹನುಮಂತನು

ಜಾನಕೀ ಬತ ದಿಷ್ಟ್ಯಾ ಮಾಂ ವೈದೇಹಿ ಪರಿಪೃಚ್ಛಸಿ ।
ಭರ್ತುಃ ಕಮಲಪತ್ರಾಕ್ಷಿ ಸಂಸ್ಥಾನಂ ಲಕ್ಷ್ಮಣಸ್ಯ ಚ ॥ ೬

ಯಾನಿ ರಾಮಸ್ಯ ಚಿಹ್ನಾನಿ ಲಕ್ಷ್ಮಣಸ್ಯ ಚ ಯಾನಿ ವೈ ।
ಲಕ್ಷಿತಾನಿ ವಿಶಾಲಾಕ್ಷಿ ವದತಃ ಶೃಣು ತಾನಿ ಮೇ ॥ ೭

ರಾಮಃ ಕಮಲಪತ್ರಾಕ್ಷಃ ಸರ್ವಸತ್ತ್ವಮನೋಹರಃ ।
ರೂಪದಾಕ್ಷಿಣ್ಯಸಂಪನ್ನಃ ಪ್ರಸೂತೋ ಜನಕಾತ್ಮಜೇ ॥ ೮

ತೇಜಸಾದಿತ್ಯಸಂಕಾಶಃ ಕ್ಷಮಯಾ ಪೃಥಿವೀಸಮಃ ।
ಬೃಹಸ್ಪತಿಸಮೋ ಬುದ್ಧ್ಯಾ ಯಶಸಾ ವಾಸವೋಪಮಃ ॥ ೯

ರಕ್ಷಿತಾ ಜೀವಲೋಕಸ್ಯ ಸ್ವಜನಸ್ಯ ಚ ರಕ್ಷಿತಾ ।
ರಕ್ಷಿತಾ ಸ್ವಸ್ಯ ವೃತ್ತಸ್ಯ ಧರ್ಮಸ್ಯ ಚ ಪರಂತಪಃ ॥ ೧೦

ರಾಮೋ ಭಾಮಿನಿ ಲೋಕೇಽಸ್ಮಿಂಶ್ಚಾತುರ್ವರ್ಣ್ಯಸ್ಯ ರಕ್ಷಿತಾ ।
ಮರ್ಯಾದಾನಾಂ ಚ ಲೋಕಸ್ಯ ಕರ್ತಾ ಕಾರಯಿತಾ ಚ ಸಃ ॥ ೧೧

ಹೇಳಲಾರಂಭಿಸಿದನು : "ವೈದೇಹಿ, ನಾನು ರಾಮದೂತನೆಂದು ಗೊತ್ತಾದರೂ ರಾಮಲಕ್ಷ್ಮಣರನ್ನು ವರ್ಣಿಸಿ ಹೇಳೆಂದು ಕೇಳುತ್ತಿರುವುದು ನನ್ನ ಭಾಗ್ಯದಿಂದಲೇ ಸರಿ. ನಾನು ಅವರಲ್ಲಿ ಕಂಡ ಲಕ್ಷಣಗಳನ್ನು ಹೇಳುತ್ತೇನೆ, ಕೇಳು (೫). ಶ್ರೀರಾಮನ ಕಣ್ಣುಗಳು ಕಮಲದಳದಂತೆ ಸುಂದರವಾಗಿವೆ. ಅವನನ್ನು ನೋಡಿದರೆ ಸಕಲ ಪ್ರಾಣಿಗಳಿಗೂ ಆನಂದವಾಗುತ್ತದೆ. ಸೌಂದರ್ಯ ದಾಕ್ಷಿಣ್ಯಗುಣಗಳು ಹುಟ್ಟುವಾಗಲೇ ಅವನಿಗೆ ಕೂಡಿಬಂದಿವೆ (೬–೮). ಅವನು ತೇಜಸ್ಸಿನಲ್ಲಿ ಸೂರ್ಯನಿಗೂ ತಾಳ್ಮೆಯಲ್ಲಿ ಭೂದೇವಿಗೂ ಸಮಾನನು. ಬುದ್ಧಿಯಲ್ಲಿ ಬೃಹಸ್ಪತಿಗೂ ಕೀರ್ತಿಯಲ್ಲಿ ದೇವೇಂದ್ರನಿಗೂ ಸಮಾನನು. ಸಮಸ್ತಪ್ರಾಣಿವರ್ಗವನ್ನೂ ರಕ್ಷಿಸಬಲ್ಲವನು. ಆಶ್ರಿತ ಜನರನ್ನು ಪಾಲಿಸತಕ್ಕವನು. ತನ್ನ ಕ್ಷತ್ರಿಯ ಧರ್ಮವನ್ನೂ ಲೋಕಧರ್ಮವನ್ನೂ ಪಾಲಿಸುತ್ತಿರುವವನು (೯–೧೦). ಚಾತುರ್ವರ್ಣ್ಯದ ಕರ್ತವ್ಯವನ್ನೂ ಲೋಕಮರ್ಯಾದೆಯನ್ನೂ ನಡೆಸುತ್ತ ಜನರೂ ಹಾಗೆಯೇ ನಡೆಸುವಂತೆ ನಿಯಮಿಸುತ್ತಿರುವನು. ಅವನು ತೇಜಸ್ವಿ ; ಪೂಜಾರ್ಹ, ಈಗ ಬ್ರಹ್ಮಚರ್ಯ

ಅರ್ಚಿಷ್ಮಾನರ್ಚಿತೋ ನಿತ್ಯಂ ಬ್ರಹ್ಮಚರ್ಯವ್ರತೇ ಸ್ಥಿತಃ ।
ಸಾಧೂನಾಮುಪಕಾರಜ್ಞಃ ಪ್ರಚಾರಜ್ಞಶ್ಚ ಕರ್ಮಣಾಮ್ ॥ ೧೨

ರಾಜವಿದ್ಯಾವಿನೀತಶ್ಚ ಬ್ರಾಹ್ಮಣಾನಾಮುಪಾಸಿತಾ ।
ಶ್ರುತವಾನ್ ಶೀಲಸಂಪನ್ನೋ ವಿನೀತಶ್ಚ ಪರಂತಪಃ ॥ ೧೩

ಯಜುರ್ವೇದವಿನೀತಶ್ಚ ವೇದವಿದ್ಭಿಃ ಸುಪೂಜಿತಃ ।
ಧನುರ್ವೇದೇ ಚ ವೇದೇಷು ವೇದಾಂಗೇಷು ಚ ನಿಷ್ಠಿತಃ ॥ ೧೪

ವಿಪುಲಾಂಸೋ ಮಹಾಬಾಹುಃ ಕಂಬುಗ್ರೀವಃ ಶುಭಾನನಃ ।
ಗೂಢಜತ್ರುಃ ಸುತಾಮ್ರಾಕ್ಷೋ ರಾಮೋ ದೇವಿ ಜನೈಃ ಶ್ರುತಃ ॥ ೧೫

ದುಂದುಭಿಸ್ವನನಿರ್ಘೋಷಃ ಸ್ನಿಗ್ಧವರ್ಣಂ ಪ್ರತಾಪವಾನ್ ।
ಸಮಃ ಸಮವಿಭಕ್ತಾಂಗೋ ವರ್ಣಂ ಶ್ಯಾಮಂ ಸಮಾಶ್ರಿತಃ ॥ ೧೬

ತ್ರಿಸ್ಥಿರಸ್ತ್ರಿಪ್ರಲಂಬಶ್ಚ ತ್ರಿಸಮಸ್ತ್ರಿಷು ಚೋನ್ನತಃ ।
ತ್ರಿತಾಮ್ರಸ್ತ್ರಿಷು ಚ ಸ್ನಿಗ್ಧೋ ಗಂಭೀರಸ್ತ್ರಿಷು ನಿತ್ಯಶಃ ॥ ೧೭

ವ್ರತದಲ್ಲಿದ್ದಾನೆ. ಸಜ್ಜನರಿಗೆ ಉಪಕಾರ ಮಾಡುತ್ತಾನೆ. ಕರ್ಮಗಳ ಅನುಷ್ಠಾನ ಕ್ರಮವನ್ನು ತಿಳಿದಿದ್ದಾನೆ. (೧೧–೧೨). ಶ್ರೀರಾಮನು ರಾಜನೀತಿಯಲ್ಲಿ ಪಳಗಿರುವನು. ಬ್ರಾಹ್ಮಣರ ಸೇವೆಯಲ್ಲಿ ನಿರತನು. ವಿದ್ಯಾವಂತ ; ಆಚಾರಸಂಪನ್ನ; ವಿನಯಶಾಲಿ. ಅವನು ಯಜುರ್ವೇದದಲ್ಲಿ ವಿಶಾರದ. ಶ್ರೋತ್ರಿಯರಿಂದ ಪೂಜಿತ. ವೇದ ವೇದಾಂಗಗಳಲ್ಲಿಯೂ ಧನುರ್ವೇದದಲ್ಲಿಯೂ ಪಂಡಿತ (೧೩–೧೪). ದೇವಿ, ಶ್ರೀರಾಮನಿಗೆ ವಿಶಾಲವಾದ ಹೆಗಲು ; ದೀರ್ಘವಾದ ಬಾಹು ; ಶಂಖದಂತಹ ಕುತ್ತಿಗೆ ; ಶುಭಲಕ್ಷಣಗಳಿರುವ ಮುಖ ; ಮಾಂಸಪುಷ್ಟವಾದ್ದರಿಂದ ಕಾಣಿಸದಿರುವ ಭುಜದ ಕೀಲು ; ಕೆಂಪಗಿರುವ ಕಡೆಗಣ್ಣು; ದುಂದುಭಿಯಂತೆ ಗಂಭೀರವಾದ ಧ್ವನಿ ; ಹೊಳಪಾದ ಬಣ್ಣ; ಬಲಿಷ್ಠವಾದ ಸಮಪ್ರಮಾಣದ ದೇಹ ; ಒಂದಕ್ಕೊಂದು ಅನುರೂಪವಾದ ಅವಯವ ; ಮೈಬಣ್ಣ ಶ್ಯಾಮಲ (೧೫–೧೬). ಶ್ರೀರಾಮನ ಎದೆ, ಮಣಿಕಟ್ಟು, ಮುಷ್ಟಿ ಇವು ಮೂರು ಗಟ್ಟಿಯಾಗಿವೆ. ಹುಬ್ಬು,

ತ್ರಿವಲೀಮಾಂಸ್ತ್ರ್ಯವನತಶ್ಚತುರ್ವ್ಯಂಗಸ್ತ್ರಿಶೀರ್ಷವಾನ್ ।
ಚತುಷ್ಕಲಶ್ಚತುರ್ಲೇಖಶ್ಚತುಷ್ಕಿಷ್ಕುಶ್ಚತುಃಸಮಃ ॥ ೧೮

ಚತುರ್ದಶಸಮದ್ವಂದ್ವಶ್ಚತುರ್ದಂಷ್ಟ್ರಶ್ಚತುರ್ಗತಿಃ ।
ಮಹೋಷ್ಠಹನುನಾಸಶ್ಚ ಪಂಚಸ್ನಿಗ್ಧೋಽಷ್ಟವಂಶವಾನ್ ॥ ೧೯

ತೋಳು, ವೃಷಣಗಳು ಉದ್ದವಾಗಿವೆ.* ತಲೆಗೂದಲಿನ ಅಗ್ರಭಾಗ, ಎರಡು ವೃಷಣಗಳು, ಮೊಳಕಾಲುಗಳು ಒಂದೇ ಅಳತೆಯಲ್ಲಿವೆ. ನಾಭಿಯ ಮಧ್ಯಭಾಗ, ಹೊಟ್ಟೆ, ಎದೆಗಳು ಉಬ್ಬಿರುತ್ತವೆ. ಕಡೆಗಣ್ಣು, ಉಗುರು, ಅಂಗೈ, ಅಂಗಾಲುಗಳು ಕೆಂಪಾಗಿವೆ. ಪಾದರೇಖೆ, ಕೇಶ, ಲಿಂಗಮಣಿಗಳು ನುಣುಪಾಗಿವೆ. ಕಂಠಧ್ವನಿ, ನಡಿಗೆ, ನಾಭಿಗಳು ಗಂಭೀರವಾಗಿವೆ (೧೭). ಉದರ ಕಂಠಪ್ರದೇಶಗಳಲ್ಲಿ ತ್ರಿವಳಿಯೆಂಬ ಮೂರು ಮೂರು ರೇಖೆಗಳಿವೆ. ಅಂಗಾಲಿನ ಮಧ್ಯಭಾಗ, ಪಾದರೇಖೆ, ಸ್ತನಾಗ್ರಗಳು ಹಳ್ಳವಾಗಿವೆ. ಕುತ್ತಿಗೆ, ಶಿಶ್ನ, ಪೃಷ್ಠ ಮೊಳಕಾಲು ಈ ನಾಲ್ಕೂ ಚಿಕ್ಕದಾಗಿವೆ. ತಲೆಯಲ್ಲಿ ಮೂರು ಸುಳಿಗಳಿವೆ. ಕೈಹೆಬ್ಬೆರಳಿನ ಕೆಳಗಡೆ ನಾಲ್ಕು ರೇಖೆಗಳಿವೆ.** ಶ್ರೀರಾಮನ ಹಣೆ, ಅಂಗೈ, ಅಂಗಾಲುಗಳಲ್ಲಿ ಆಯುಃ ಸೂಚಕಗಳಾದ ನಾಲ್ಕು ನಾಲ್ಕು ರೇಖೆಗಳುಂಟು. ಅವನ ದೇಹವು ನಾಲ್ಕು ಕಿಷ್ಕು ಗಳಷ್ಟು(ತೊಂಬತ್ತಾರು ಅಂಗುಲ) ಎತ್ತರವಾಗಿದೆ. ತೋಳು, ತೊಡೆ, ಮೊಳಕಾಲು, ಕೆನ್ನೆಗಳು ಸಮವಾಗಿವೆ (೧೮). ಅವನ ಹುಬ್ಬು, ಮೂಗಿನರಂಧ್ರ, ಕಣ್ಣು ಕಿವಿ, ತುಟಿ, ಸ್ತನಾಗ್ರ, ಮೊಳಕೈ, ಮಣಿಕಟ್ಟು ಮೊಳಕಾಲು, ವೃಷಣ, ತೊಡೆ, ಕೈ, ಕಾಲು ಪೃಷ್ಠ ಈ ಹದಿನಾಲ್ಕು ಜೊತೆಗಳೂ ಒಂದಕ್ಕೊಂದು ಅನುರೂಪವಾಗಿ ಸಮಪ್ರಮಾಣ

---

* ಹನುಮಂತನು ರಾಮನ ಅವಯವಗಳನ್ನೆಲ್ಲಾ ನೋಡಿದ್ದನೆಂದಾಗಲಿ. ಅವುಗಳನ್ನೆಲ್ಲಾ ಒಂದೊಂದಾಗಿ ವರ್ಣಿಸುತ್ತಾನೆ ಎಂದಾಗಲಿ ತಿಳಿಯಬಾರದು. ಸಾಮುದ್ರಿಕ ಶಾಸ್ತ್ರದಲ್ಲಿ ಹೇಳಿದ ಶುಭಲಕ್ಷಣಗಳು ರಾಮನಲ್ಲಿವೆಯೆಂದು ಅವನು ಹೇಳುತ್ತಿದ್ದಾನೆ. ಮೂಲದಲ್ಲಿ ಅವಯವಗಳ ವಿವರವಿಲ್ಲ. ಸೌಕರ್ಯಕ್ಕಾಗಿ ಕನ್ನಡದಲ್ಲಿ ಮಾತ್ರ ವಿವರಿಸಿ ಬರೆದಿದೆ.

** ಇವು ನಾಲ್ಕು ವೇದಗಳಲ್ಲಿಯೂ ಪಂಡಿತನೆಂದು ಸೂಚಿಸುತ್ತವೆ. ಮೂರಾಗಲಿ ಎರಡಾಗಲಿ, ಕಡೆಗೆ ಒಂದಾಗಲಿ ರೇಖೆಯು ದ್ವಿಜನಿಗೆ ಇರಬೇಕು.

ದಶಪದ್ಮೋ ದಶಬೃಹತ್ ತ್ರಿಭಿರ್ವ್ಯಾಪ್ತೋ ದ್ವಿಶುಕ್ಲವಾನ್ ।
ಷಡುನ್ನತೋ ನವತನುಸ್ತ್ರಿಭಿರ್ವ್ಯಾಪ್ನೋತಿ ರಾಘವಃ ॥ ೨೦

ಸತ್ಯಧರ್ಮಪರಃ ಶ್ರೀಮಾನ್ ಸಂಗ್ರಹಾನುಗ್ರಹೇ ರತಃ ।
ದೇಶಕಾಲವಿಭಾಗಜ್ಞಃ ಸರ್ವಲೋಕಪ್ರಿಯಂವದಃ ॥ ೨೧

ಭ್ರಾತಾ ಚ ತಸ್ಯ ದ್ವೈಮಾತ್ರಃ ಸೌಮಿತ್ರಿರಪರಾಜಿತಃ ।
ಅನುರಾಗೇಣ ರೂಪೇಣ ಗುಣೈಶ್ಚೈವ ತಥಾವಿಧಃ ॥ ೨೨

ದಲ್ಲಿರುತ್ತವೆ. ನಾಲ್ಕು ದವಡೆಯ ಹಲ್ಲುಗಳೂ ಹರಿತವಾಗಿಯೂ, ಗಟ್ಟಿಯಾಗಿಯೂ ಇವೆ. ಅವನ ನಡಿಗೆಯು ಸಿಂಹ, ಹುಲಿ, ಆನೆ, ವೃಷಭಗಳೆಂಬ ನಾಲ್ಕು ಪ್ರಾಣಿಗಳ ನಡಿಗೆಯಂತೆ ಗಂಭೀರವಾಗಿದೆ. ತುಟಿ, ಕೆನ್ನೆ, ಮೂಗು ಇವು ದೊಡ್ಡದಾಗಿ ಉಬ್ಬಿವೆ. ಮಾತು, ಮುಖ, ಉಗುರು, ಕೂದಲು, ಚರ್ಮ ಈ ಐದು ಮೃದುವಾಗಿವೆ. ಅವನ ಬೆನ್ನು ಮೂಳೆ, ದೇಹ, ಬೆರಳು, ಕೈ, ಮೂಗು, ಕಣ್ಣು ಕಿವಿ, ಶಿಶ್ನ ಈ ಎಂಟು ಆಯತವಾಗಿವೆ (೧೯). ಮುಖ, ನೇತ್ರ, ಬಾಯಿ, ನಾಲಗೆ, ತುಟಿ, ತಾಲು (ಬಾಯಿಯ ಮೇಲ್ಭಾಗ, ಅಂಗಳ : Palate), ಸ್ತನ, ಉಗುರು, ಹಸ್ತ, ಪಾದಗಳೆಂಬ ಹತ್ತು ಅವಯವಗಳೂ ಪದ್ಮದಂತೆ ಇವೆ. ಎದೆ, ತಲೆ, ಹಣೆ, ಕುತ್ತಿಗೆ, ತೋಳು, ಹೆಗಲು, ಹೊಕ್ಕುಳು, ಪಕ್ಕೆ, ಬೆನ್ನು, ಕಂಠಧ್ವನಿ ಈ ಹತ್ತು ದೊಡ್ಡದಾಗಿರುವುವು. ಶ್ರೀರಾಮನು ತೇಜಸ್ಸು, ಸಂಪತ್ತುಗಳಿಂದ ಸಮೇತನಾದವನು. ಅವನು ಮಾತೃವಂಶ, ಪಿತೃವಂಶಗಳೆರಡರಿಂದಲೂ ಪರಿಶುದ್ಧನು (ಅಥವಾ ದಂತಪಂಕ್ತಿ, ನೇತ್ರ ಇವೆರಡೂ ಶುಭ್ರವಾಗಿರುವುವು). ಅವನ ಕಂಕುಳು, ಉದರ, ಎದೆ, ಮೂಗು, ಹೆಗಲು, ಹಣೆ ಇವು ಆರೂ ಉನ್ನತವಾಗಿವೆ. ಬೆರಳಿನ ಗಿಣ್ಣು ತಲೆಗೂದಲು, ಮೀಸೆ, ಉಗುರು, ಚರ್ಮ, ಶಿಶ್ನ, ಮೈಗೂದಲು, ದೃಷ್ಟಿ ಬುದ್ಧಿ ಈ ಒಂಬತ್ತು ಸೂಕ್ಷ್ಮವಾಗಿವೆ. ಶ್ರೀರಾಮನು ಉಚಿತಕಾಲದಲ್ಲಿ ಧರ್ಮಾರ್ಥಕಾಮಗಳೆಂದು ತ್ರಿವರ್ಗವನ್ನು ಸೇವಿಸತಕ್ಕವನಾಗಿದ್ದಾನೆ (೨೦). ಅವನು ಸತ್ಯಧರ್ಮಗಳಲ್ಲಿ ನಿಷ್ಠೆಯಿಂದಿದ್ದು, ಧನಬಲಾದಿಗಳನ್ನು ಸಂಪಾದಿಸುತ್ತ ಸಜ್ಜನರನ್ನು ಪೋಷಿಸುವುದರಲ್ಲಿ ಆಸಕ್ತನಾಗಿದ್ದಾನೆ. ದೇಶಕಾಲಗಳನ್ನು ಬಲ್ಲವನಾಗಿದ್ದಾನೆ. ಸಮಸ್ತರೊಡನೆಯೂ ಪ್ರಿಯವಾದ ಮಾತನ್ನಾಡುತ್ತಾನೆ (೨೧).

ತಾವುಭೌ ನರಶಾರ್ದೂಲೌ ತ್ವದ್ದರ್ಶನಸಮುತ್ಸುಕೌ ।
ವಿಚಿನ್ವಂತೌ ಮಹೀಂ ಕೃತ್ಸ್ನಾಮಸ್ಮಾಭಿರಭಿಸಂಗತೌ ॥ ೨೩

ತ್ವಾಮೇವ ಮಾರ್ಗಮಾಣೌ ತೌ ವಿಚರಂತೌ ವಸುಂಧರಾಮ್ ।
ದದರ್ಶತುರ್ಮೃಗಪತಿಂ ಪೂರ್ವಜೇನಾವರೋಪಿತಮ್ ॥ ೨೪

ಋಷ್ಯಮೂಕಸ್ಯ ಪೃಷ್ಠೇ ತು ಬಹುಪಾದಪಸಂಕುಲೇ ।
ಭ್ರಾತುರ್ಭಯಾರ್ತಮಾಸೀನಂ ಸುಗ್ರೀವಂ ಪ್ರಿಯದರ್ಶನಮ್ ॥ ೨೫

ವಯಂ ತು ಹರಿರಾಜಂ ತಂ ಸುಗ್ರೀವಂ ಸತ್ಯಸಂಗರಮ್ ।
ಪರಿಚರ್ಯಾಸ್ಮಹೇ ರಾಜ್ಯಾತ್ ಪೂರ್ವಜೇನಾವರೋಪಿತಮ್ ॥ ೨೬

ತತಸ್ತೌ ಚೀರವಸನೌ ಧನುಃಪ್ರವರಪಾಣಿನೌ ।
ಋಷ್ಯಮೂಕಸ್ಯ ಶೈಲಸ್ಯ ರಮ್ಯಂ ದೇಶಮುಪಾಗತೌ ॥ ೨೭

ಸ ತೌ ದೃಷ್ಟ್ವಾ ನರವ್ಯಾಘ್ರೌ ಧನ್ವಿನೌ ವಾನರರ್ಷಭಃ ।
ಅವಪ್ಲುತೋ ಗಿರೇಸ್ತಸ್ಯ ಶಿಖರಂ ಭಯಮೋಹಿತಃ ॥ ೨೮

ಅವನ ತಮ್ಮ ಸೌಮಿತ್ರಿಯೂ ಸ್ನೇಹ, ರೂಪ, ದಾಕ್ಷಿಣ್ಯಾದಿಗುಣಗಳಲ್ಲಿ ರಾಮನಂತೆಯೇ ಇರುವನು. ಆ ಪುರುಷಸಿಂಹರಿಬ್ಬರೂ ನಿನ್ನನ್ನು ಕಾಣುವ ತವಕದಿಂದ ಎಲ್ಲಾ ಸ್ಥಳವನ್ನೂ ಹುಡುಕಿಕೊಂಡು ಬರುತ್ತಿರುವಾಗ ನಮ್ಮ ಪರಿಚಯವಾಯಿತು (೨೨–೨೩). ಅವರು ನಮ್ಮೊಡೆಯನಾದ ಸುಗ್ರೀವನನ್ನು ಕಂಡರು. ಸುಗ್ರೀವನು ಅಣ್ಣನಾದ ವಾಲಿಯಿಂದ ರಾಜ್ಯಭ್ರಷ್ಟನಾಗಿ, ಭಯದಿಂದ ಋಷ್ಯಮೂಕ ಪರ್ವತದ ಮೇಲೆ ವೃಕ್ಷನಿಬಿಡವಾದ ತಪ್ಪಲಿನಲ್ಲಿ ಇದ್ದನು. ರಾಜ್ಯಭ್ರಷ್ಟನಾದ ಆ ವಾನರೇಶ್ವರನು ಸತ್ಯಸಂಧನಾದ್ದರಿಂದ, ನಾವು ಅನೇಕ ವಾನರರು ಅವನಿಗೆ ಬೆಂಬಲವಾಗಿ ಸೇವೆಮಾಡಿಕೊಂಡಿದ್ದೆವು (೨೪–೨೬). ಹೀಗಿರಲು ನಾರುಬಟ್ಟೆಯನ್ನುಟ್ಟು ಧನುರ್ಧಾರಿಗಳಾದ ರಾಮಲಕ್ಷ್ಮಣರು, ಋಷ್ಯಮೂಕಪರ್ವತದಲ್ಲಿ ನಾವಿದ್ದ ರಮ್ಯಪ್ರದೇಶಕ್ಕೆ ಬಂದರು. ಸುಗ್ರೀವನು ಅವರನ್ನು ನೋಡಿ, ವಾಲಿಯು ಅವರನ್ನು ಕಳಿಸಿರಬಹುದೆಂಬ ಭೀತಿಯಿಂದ ಮೇಲಕ್ಕೆ ನೆಗೆದು ಪರ್ವತಶಿಖರಕ್ಕೆ ಹೋಗಿಬಿಟ್ಟನು. ಸುಗ್ರೀವನು ಆ ಶಿಖರದ ಮೇಲೆ ನನ್ನನ್ನು ಕರೆದು

ತತಃ ಸ ಶಿಖರೇ ತಸ್ಮಿನ್ ವಾನರೇಂದ್ರೋ ವ್ಯವಸ್ಥಿತಃ ।
ತಯೋಃ ಸಮೀಪಂ ಮಾಮೇವ ಪ್ರೇಷಯಾಮಾಸ ಸತ್ವರಮ್ ॥ ೨೯

ತಾವಹಂ ಪುರುಷವ್ಯಾಘ್ರೌ ಸುಗ್ರೀವವಚನಾತ್ ಪ್ರಭೂ ।
ರೂಪಲಕ್ಷಣಸಂಪನ್ನೌ ಕೃತಾಂಜಲಿರುಪಸ್ಥಿತಃ ॥ ೩೦

ತೌ ಪರಿಜ್ಞಾತತತ್ತ್ವಾರ್ಥೌ ಮಯಾ ಪ್ರೀತಿಸಮನ್ವಿತೌ ।
ಪೃಷ್ಠಮಾರೋಪ್ಯ ತಂ ದೇಶಂ ಪ್ರಾಪಿತೌ ಪುರುಷರ್ಷಭೌ ॥ ೩೧

ನಿವೇದಿತೌ ಚ ತತ್ತ್ವೇನ ಸುಗ್ರೀವಾಯ ಮಹಾತ್ಮನೇ ।
ತಯೋರನ್ಯೋನ್ಯಸಂಲಾಪಾದ್ಭೃಶಂ ಪ್ರೀತಿರಜಾಯತ ॥ ೩೨

ತತ್ರ ತೌ ಪ್ರೀತಿಸಂಪನ್ನೌ ಹರೀಶ್ವರನರೇಶ್ವರೌ ।
ಪರಸ್ಪರಕೃತಾಶ್ವಾಸೌ ಕಥಯಾ ಪೂರ್ವವೃತ್ತಯಾ ॥ ೩೩

ತಂ ತತಃ ಸಾಂತ್ವಯಾಮಾಸ ಸುಗ್ರೀವಂ ಲಕ್ಷ್ಮಣಾಗ್ರಜಃ ।
ಸ್ತ್ರೀಹೇತೋರ್ವಾಲಿನಾ ಭ್ರಾತ್ರಾ ನಿರಸ್ತಮುರುತೇಜಸಾ ॥ ೩೪

ರಾಮಲಕ್ಷ್ಮಣರ ನಿಜಸ್ಥಿತಿ ಏನೆಂದು ತಿಳಿದುಬರುವುದಕ್ಕಾಗಿ ಕೂಡಲೇ ಅವರ ಬಳಿಗೆ ಕಳುಹಿಸಿದನು. ಸುಗ್ರೀವನ ಮಾತಿನಂತೆ ನಾನು ರಾಮಲಕ್ಷ್ಮಣರ ಬಳಿಗೆ ಹೋಗಿ ಕೈಮುಗಿದು ನಿಂತುಕೊಂಡೆನು (೨೭–೩೦). ಅವರ ನಿಜಸ್ಥಿತಿಯನ್ನು ವಿಚಾರಿಸಿ ತಿಳಿದುಕೊಂಡೆನು. ನಮ್ಮ ವಿಷಯವೂ ಗೊತ್ತಾಗಲು ಅವರಿಗೆ ಸಂತೋಷ ವಾಯಿತು. ನಾನು ಅವರಿಬ್ಬರನ್ನೂ ಬೆನ್ನಮೇಲೆ ಕುಳ್ಳಿರಿಸಿಕೊಂಡು ಸುಗ್ರೀವನಿದ್ದ ಸ್ಥಳಕ್ಕೆ ಕರೆತಂದೆನು. ಸುಗ್ರೀವನಿಗೆ ಅವರ ಸಂಗತಿಯನ್ನು ತಿಳಿಸಲಾಗಿ ರಾಮ ಸುಗ್ರೀವರಿಬ್ಬರೂ ಸಂಭಾಷಣೆಯನ್ನು ನಡೆಸಿದರು. ಕಡೆಗೆ ಅವರೀರ್ವರಿಗೂ ಸ್ನೇಹವು ಬೆಳೆಯಿತು (೩೧–೩೨). ತಮ್ಮ ಪೂರ್ವವೃತ್ತಾಂತವನ್ನು ಹೇಳಿಕೊಂಡು ತಾವೇ ಅನ್ಯೋನ್ಯವಾಗಿ ಸಮಾಧಾನಪಡಿಸಿಕೊಂಡರು. ಪರಾಕ್ರಮಿಯಾದ ವಾಲಿಯಿಂದ ಸ್ತ್ರೀನಿಮಿತ್ತವಾಗಿ ಸುಗ್ರೀವನು ಅವಮಾನಿತನಾಗಿರುವುದನ್ನು ತಿಳಿದು, ರಾಮನು (ವಾಲಿಯನ್ನು ಕೊಲ್ಲುತ್ತೇನೆಂದು ಮಾತುಕೊಟ್ಟು) ಸುಗ್ರೀವನನ್ನು

ತತಸ್ತ್ವನ್ನಾಶಜಂ ಶೋಕಂ ರಾಮಸ್ಯಾಕ್ಲಿಷ್ಟಕರ್ಮಣಃ ।
ಲಕ್ಷ್ಮಣೋ ವಾನರೇಂದ್ರಾಯ ಸುಗ್ರೀವಾಯ ನ್ಯವೇದಯತ್ ॥ ೩೫

ಸ ಶ್ರುತ್ವಾ ವಾನರೇಂದ್ರಸ್ತು ಲಕ್ಷ್ಮಣೇನೇರಿತಂ ವಚಃ ।
ತದಾಸೀನ್ನಿಷ್ಪ್ರಭೋಽತ್ಯರ್ಥಂ ಗ್ರಹಗ್ರಸ್ತ ಇವಾಂಶುಮಾನ್ ॥ ೩೬

ತತಸ್ತ್ವದ್ಗಾತ್ರಶೋಭೀನಿ ರಕ್ಷಸಾ ಹ್ರಿಯಮಾಣಯಾ ।
ಯಾನ್ಯಾಭರಣಜಾಲಾನಿ ಪಾತಿತಾನಿ ಮಹೀತಲೇ ॥ ೩೭

ತಾನಿ ಸರ್ವಾಣಿ ರಾಮಾಯ ಆನೀಯ ಹರಿಯೂಥಪಾಃ ।
ಸಂಹೃಷ್ಟಾ ದರ್ಶಯಾಮಾಸುರ್ಗತಿಂ ತು ನ ವಿದುಸ್ತವ ॥ ೩೮

ತಾನಿ ರಾಮಾಯ ದತ್ತಾನಿ ಮಯೈವೋಪಹೃತಾನಿ ಚ ।
ಸ್ವನವಂತ್ಯವಕೀರ್ಣಾನಿ ತಸ್ಮಿನ್ ವಿಗತಚೇತಸಿ ॥ ೩೯

ತಾನ್ಯಂಕೇ ದರ್ಶನೀಯಾನಿ ಕೃತ್ವಾ ಬಹುವಿಧಂ ತವ ।
ತೇನ ದೇವಪ್ರಕಾಶೇನ ದೇವೇನ ಪರಿದೇವಿತಮ್ ॥ ೪೦

ಸಮಾಧಾನಪಡಿಸಿದನು (೩೩–೩೪). ಆಮೇಲೆ ಲಕ್ಷ್ಮಣನು, ನಿನ್ನನ್ನು ಅಗಲಿದುದರಿಂದ ಶ್ರೀರಾಮನಿಗೆ ಎಷ್ಟು ದುಃಖವಾಗಿದೆಯೆಂಬುದನ್ನು ಸುಗ್ರೀವನಿಗೆ ತಿಳಿಸಿದನು. ಅದನ್ನು ಕೇಳಿ ಸುಗ್ರೀವನಿಗೆ ಬಹಳ ದುಃಖವಾಯಿತು. ರಾಹುಗ್ರಸ್ತನಾದ ಸೂರ್ಯನಂತೆ ಅವನ ಮುಖವು ಕಂದಿಹೋಯಿತು (೩೫–೩೬). ರಾವಣನು ನಿನ್ನನ್ನು ಅಪಹರಿಸಿ ಒಯ್ಯುತ್ತಿರುವಾಗ ಮೈಮೇಲಿದ್ದ ಆಭರಣಗಳನ್ನು ನೀನು (ಋಷ್ಯಮೂಕದಮೇಲೆ) ಬಿಸುಟಿದ್ದೆ. ಅವುಗಳೆಲ್ಲವನ್ನೂ ವಾನರ ನಾಯಕರು ತಂದು ಸಂತೋಷದಿಂದ ಶ್ರೀರಾಮನಿಗೆ ತೋರಿಸಿದರು. ಆದರೆ ನೀನಿರುವ ಸ್ಥಳವು ಮಾತ್ರ ಯಾರಿಗೂ ತಿಳಿಯದು (೩೭–೩೮). ಆ ಒಡವೆಗಳು ಘಲ್ ಘಲ್ ಎನ್ನುತ್ತ ನೆಲದಮೇಲೆ ಬಿದ್ದಾಗ, ನಾನೇ ಅವುಗಳನ್ನು ಆರಿಸಿ ತಂದಿದ್ದೆನು. ಆಗ ರಾವಣನು ಒಡವೆಗಳು ಬಿದ್ದುದನ್ನು ಗಮನಿಸಲಿಲ್ಲ. ಶ್ರೀರಾಮನು ಆ ಒಡವೆಗಳನ್ನು ತೊಡೆಯಮೇಲಿಟ್ಟುಕೊಂಡು ರೋದಿಸತೊಡಗಿದನು (೩೯–೪೦).

ಪಶ್ಯತಸ್ತಾನಿ ರುದತಸ್ತಾನ್ಯುತಶ್ಚ ಪುನಃ ಪುನಃ ।
ಪ್ರಾದೀಪಯನ್ ದಾಶರಥೇಸ್ತಾನಿ ಶೋಕಹುತಾಶನಮ್ ॥ ೪೧
ಶಯಿತಂ ಚ ಚಿರಂ ತೇನ ದುಃಖಾರ್ತೇನ ಮಹಾತ್ಮನಾ ।
ಮಯಾಪಿ ವಿವಿಧೈರ್ವಾಕ್ಯೈಃ ಕೃಚ್ಛ್ರಾದುತ್ಥಾಪಿತಃ ಪುನಃ ॥ ೪೨
ತಾನಿ ದೃಷ್ಟ್ವಾ ಮಹಾರ್ಹಾಣಿ ದರ್ಶಯಿತ್ವಾ ಮುಹುರ್ಮುಹುಃ ।
ರಾಘವಃ ಸಹಸೌಮಿತ್ರಿಃ ಸುಗ್ರೀವೇ ಸಂನ್ಯವೇಶಯತ್ ॥ ೪೩
ಸ ತವಾದರ್ಶನಾದಾರ್ಯೇ ರಾಘವಃ ಪರಿತಪ್ಯತೇ ।
ಮಹತಾ ಜ್ವಲತಾ ನಿತ್ಯಮಗ್ನಿನೇವಾಗ್ನಿಪರ್ವತಃ ॥ ೪೪
ತ್ವತ್ಕೃತೇ ತಮನಿದ್ರಾ ಚ ಶೋಕಶ್ಚಿಂತಾ ಚ ರಾಘವಮ್ ।
ತಾಪಯಂತಿ ಮಹಾತ್ಮಾನಮಗ್ನ್ಯಗಾರಮಿವಾಗ್ನಯಃ ॥ ೪೫
ತವಾದರ್ಶನಶೋಕೇನ ರಾಘವಃ ಪರಿಚಾಲ್ಯತೇ ।
ಮಹತಾ ಭೂಮಿಕಂಪೇನ ಮಹಾನಿವ ಶಿಲೋಚ್ಚಯಃ ॥ ೪೬
ಕಾನನಾನಿ ಸುರಮ್ಯಾಣಿ ನದೀ ಪ್ರಸ್ರವಣಾನಿ ಚ ।
ಚರನ್ನ ರತಿಮಾಪ್ನೋತಿ ತ್ವಾಮಪಶ್ಯನ್ನೃಪಾತ್ಮಜೇ ॥ ೪೭

ಅವುಗಳನ್ನು ಮತ್ತೆ ಮತ್ತೆ ನೋಡಿದನು. ನೋಡಿ ನೋಡಿ ಅಳುವನು. ಒಡವೆಗಳಿಂದ ಅವನ ಶೋಕಾಗ್ನಿಯು ಹೆಚ್ಚಿಹೋಯಿತು. ಆ ಮಹಾತ್ಮನು ಅಳುತ್ತಲೇ ದುಃಖದಿಂದ ನೆಲದಮೇಲೆ ಕುಸಿದುಹೋದನು. ನಾವು ಸಮಾಧಾನ ಹೇಳಿ ಬಹುಕಷ್ಟದಿಂದ ಅವನು ಚೇತರಿಸಿಕೊಳ್ಳುವಂತೆ ಮಾಡಿದೆವು (೪೧–೪೨). ರಾಮನೂ ಲಕ್ಷ್ಮಣನೂ ಆಭರಣಗಳನ್ನು ಮತ್ತೆ ಮತ್ತೆ ನೋಡುತ್ತ ಸುಗ್ರೀವನಿಗೆ ತೋರಿಸುತ್ತ, ಕಡೆಗೆ ಸುಗ್ರೀವನ ವಶಕ್ಕೆ ಕೊಟ್ಟರು. ಆರ್ಯೆ, ರಾಮನು ನಿನ್ನನ್ನು ಕಾಣದೆ, ಬೆಂಕಿಯಿಂದ ಆವೃತವಾದ ಅಗ್ನಿಪರ್ವತದಂತೆ, ತಪಿಸುತ್ತಿರುವನು (೪೩–೪೪). ನಿನ್ನ ವಿರಹದಿಂದ ರಾಘವನಿಗೆ ನಿದ್ರೆ ಇಲ್ಲ. ಅಗ್ನಿಗೃಹದಲ್ಲಿ ತ್ರೇತಾಗ್ನಿಗಳು ಉರಿಯುವಂತೆ ಜಾಗರಣೆ, ಶೋಕ, ಚಿಂತೆಗಳು ಉರಿಯುತ್ತ ಅವನನ್ನು ಸುಡುತ್ತಿವೆ. ಭೂಕಂಪವಾದಾಗ ನಡುಗುವ ಬೆಟ್ಟದಂತೆ ಶೋಕದಿಂದ ನಡುಗುತ್ತಿರುವನು (೪೫–೪೬). ರಾಜಕುಮಾರಿ, ಮನೋಹರವಾದ

ಸ ತ್ವಾಂ ಮನುಜಶಾರ್ದೂಲಃ ಕ್ಷಿಪ್ರಂ ಪ್ರಾಪ್ಸ್ಯತಿ ರಾಘವಃ ।
ಸಮಿತ್ರಬಾಂಧವಂ ಹತ್ವಾ ರಾವಣಂ ಜನಕಾತ್ಮಜೇ ॥ ೪೮

ಸಹಿತೌ ರಾಮಸುಗ್ರೀವಾವುಭಾವಕುರುತಾಂ ತದಾ ।
ಸಮಯಂ ವಾಲಿನಂ ಹಂತುಂ ತವ ಚಾನ್ವೇಷಣಂ ಪ್ರತಿ ॥ ೪೯

ತತಸ್ತಾಭ್ಯಾಂ ಕುಮಾರಾಭ್ಯಾಂ ವೀರಾಭ್ಯಾಂ ಸ ಹರೀಶ್ವರಃ ।
ಕಿಷ್ಕಿಂಧಾಂ ಸಮುಪಾಗಮ್ಯ ವಾಲೀ ಯುಧಿ ನಿಪಾತಿತಃ ॥ ೫೦

ತತೋ ನಿಹತ್ಯ ತರಸಾ ರಾಮೋ ವಾಲಿನಮಾಹವೇ ।
ಸರ್ವರ್ಕ್ಷಹರಿಸಂಘಾನಾಂ ಸುಗ್ರೀವಮಕರೋತ್ ಪತಿಮ್ ॥ ೫೧

ರಾಮಸುಗ್ರೀವಯೋರೈಕ್ಯಂ ದೇವ್ಯೇವಂ ಸಮಜಾಯತ ।
ಹನೂಮಂತಂ ಚ ಮಾಂ ವಿದ್ಧಿ ತಯೋರ್ದೂತಮಿಹಾಗತಮ್ ॥ ೫೨

ಸ್ವರಾಜ್ಯಂ ಪ್ರಾಪ್ಯ ಸುಗ್ರೀವಃ ಸಮಾನೀಯ ಹರೀಶ್ವರಾನ್ ।
ತ್ವದರ್ಥಂ ಪ್ರೇಷಯಾಮಾಸ ದಿಶೋ ದಶ ಮಹಾಬಲಾನ್ ॥ ೫೩

ವನದಲ್ಲಾಗಲಿ, ನದಿಯಲ್ಲಾಗಲಿ ಝರಿಯಲ್ಲಾಗಲಿ—ಎಲ್ಲಿ ಸುತ್ತಿದರೂ ಅವನ ಮನಸ್ಸಿಗೆ ನೆಮ್ಮದಿ ಇಲ್ಲ(೪೭). ಜಾನಕಿ, ಶ್ರೀರಾಮನು ಕ್ಷಿಪ್ರದಲ್ಲಿಯೇ ಬಂದು ಈ ರಾವಣನನ್ನೂ ಇವನ ಬಂಧುಮಿತ್ರರನ್ನೂ ಕೊಂದು ನಿನ್ನನ್ನು ಪಡೆಯುವನು. ರಾಮಸುಗ್ರೀವರಿಬ್ಬರೂ ಸೇರಿದಾಗಲೇ ರಾಮನು ವಾಲಿಯನ್ನು ಕೊಲ್ಲುವುದಾಗಿಯೂ ಸುಗ್ರೀವನು ನಿನ್ನನ್ನು ಹುಡುಕಿಸುವುದಾಗಿಯೂ ಪರಸ್ಪರ ಪ್ರತಿಜ್ಞೆಯನ್ನು ಮಾಡಿಕೊಂಡಿದ್ದಾರೆ (೪೮–೪೯). ಅನಂತರ ಸುಗ್ರೀವನು ಆ ರಾಜಪುತ್ರರೊಡನೆ ಕಿಷ್ಕಿಂಧೆಗೆ ಬಂದು ವಾಲಿಯನ್ನು ಕೊಲ್ಲಿಸಿದನು. ರಾಮನು ವಾಲಿಯನ್ನು ಕೊಂದು ಸುಗ್ರೀವನನ್ನು ಸಮಸ್ತ ವಾನರ ಭಲ್ಲೂಕಗಳಿಗೂ ಅಧಿಪತಿಯನ್ನಾಗಿ ಮಾಡಿಬಿಟ್ಟನು. ದೇವಿ, ರಾಮಸುಗ್ರೀವರಿಗೆ ಈ ಪ್ರಕಾರ ಸ್ನೇಹವು ಬೆಳೆಯಿತು. ನಾನು ರಾಮ ಸುಗ್ರೀವರ ದೂತನಾಗಿ ಬಂದಿದ್ದೇನೆ. ನನ್ನ ಹೆಸರು ಹನುಮಂತ (೫೦–೫೨). ತನ್ನ ರಾಜ್ಯವು ಲಭಿಸಿದೊಡನೆ, ಸುಗ್ರೀವನು ಕಪಿವೀರರನ್ನೆಲ್ಲ ಕರೆಸಿ ನಿನ್ನನ್ನು ಹುಡುಕುವುದಕ್ಕಾಗಿ ಹತ್ತು ದಿಕ್ಕುಗಳಿಗೂ

ಆದಿಷ್ಟಾ ವಾನರೇಂದ್ರೇಣ ಸುಗ್ರೀವೇಣ ಮಹೌಜಸಾ ।
ಅದ್ರಿರಾಜಪ್ರತೀಕಾಶಾಃ ಸರ್ವತಃ ಪ್ರಸ್ಥಿತಾ ಮಹೀಮ್ ॥ ೫೪

ತತಸ್ತು ಮಾರ್ಗಮಾಣಾಸ್ತೇ ಸುಗ್ರೀವವಚನಾನುಗಾಃ ।
ಚರಂತಿ ವಸುಧಾಂ ಕೃತ್ಸ್ನಾಂ ವಯಮನ್ಯೇ ಚ ವಾನರಾಃ ॥ ೫೫

ಅಂಗದೋ ನಾಮ ಲಕ್ಷ್ಮೀವಾನ್ ವಾಲಿಸೂನುರ್ಮಹಾಬಲಃ ।
ಪ್ರಸ್ಥಿತಃ ಕಪಿಶಾರ್ದೂಲಸ್ತ್ರಿಭಾಗಬಲಸಂವೃತಃ ॥ ೫೬

ತೇಷಾಂ ನೋ ವಿಪ್ರನಷ್ಟಾನಾಂ ವಿಂಧ್ಯೇ ಪರ್ವತಸತ್ತಮೇ ।
ಭೃಶಂ ಶೋಕಪರೀತಾನಾಮಹೋರಾತ್ರಗಣಾ ಗತಾಃ । ೫೭

ತೇ ವಯಂ ಕಾರ್ಯನೈರಾಶ್ಯಾತ್ ಕಾಲಸ್ಯಾತಿಕ್ರಮೇಣ ಚ ।
ಭಯಾಚ್ಚ ಕಪಿರಾಜಸ್ಯ ಪ್ರಾಣಾಂಸ್ತ್ಯಕ್ತುಂ ವ್ಯವಸ್ಥಿತಾಃ ॥ ೫೮

ವಿಚಿತ್ಯ ವನದುರ್ಗಾಣಿ ಗಿರಿಪ್ರಸ್ರವಣಾನಿ ಚ ।
ಅನಾಸಾದ್ಯ ಪದಂ ದೇವ್ಯಾಃ ಪ್ರಾಣಾಸ್ತ್ಯಕ್ತುಂ ವ್ಯವಸ್ಥಿತಾಃ ॥ ೫೯

ಕಳುಹಿಸಿದನು. ಕಪೀಶ್ವರನಿಂದ ಆಜ್ಞೆಯಾದ ಕೂಡಲೆ ಪರ್ವತಾಕಾರದ ಕಪಿಗಳು ಎಲ್ಲಾ ಕಡೆಗೂ ಹೊರಟರು (೫೩–೫೪). ಅವನ ಆಜ್ಞೆಯಂತೆ ನಾವು ಬಹುಮಂದಿ ವಾನರರು ಈ ಭೂಮಿಯನ್ನೇ ಸುತ್ತುವುದಕ್ಕೆ ಹೊರಟೆವು. ಅಂಗದ ಎಂಬುವನು ವಾಲಿಯ ಮಗ; ಮಹಾಬಲಶಾಲಿ. ಅವನು ಕಪಿಸೈನ್ಯದಲ್ಲಿ ಮೂರನೇ ಒಂದುಪಾಲು ಸೈನ್ಯವನ್ನು ತೆಗೆದುಕೊಂಡು ಹೊರಟನು (೫೫–೫೬). ಅವರಲ್ಲಿ ನಾನೊಬ್ಬನು. ಹೀಗೆ ಬರುತ್ತಿರುವಾಗ ನಾವು ವಿಂಧ್ಯಪರ್ವತದಲ್ಲಿ ಒಂದು ಗುಹೆಯೊಳಗೆ ಸಿಕ್ಕಿಬಿದ್ದು ದುಃಖಾಕ್ರಾಂತರಾಗಿರಲು ಎಷ್ಟೋ ಹಗಲು ರಾತ್ರಿಗಳು ಕಳೆದುಹೋದವು. 'ಮುಂದಿನ ಕಾರ್ಯವು ಫಲಿಸುವುದೆಂಬ ಆಸೆ ಇಲ್ಲ; ಗೊತ್ತು ಮಾಡಿದ ಕಾಲವು ಕಳೆಯುತ್ತ ಬಂದಿತು. ಸುಗ್ರೀವನು ದಂಡಿಸುವನೆಂಬ ಭಯ. ಕಾಡು ಮೇಡುಗಳಲ್ಲಿ, ಗಿರಿನದಿಗಳಲ್ಲಿ ಎಷ್ಟು ಹುಡುಕಿದರೂ ಸೀತಾದೇವಿಯು ಸಿಗಲಿಲ್ಲ'. ಹೀಗಾಗಿ ನಾವು ಅಲ್ಲಿಯೇ ಪ್ರಾಣವನ್ನು ತ್ಯಜಿಸಬೇಕೆಂದು ನಿರ್ಧರಿಸಿ

ತತಸ್ತಸ್ಯ ಗಿರೇರ್ಮೂರ್ಧ್ನಿ ವಯಂ ಪ್ರಾಯಮುಪಾಸ್ಮಹೇ ।
ದೃಷ್ಟ್ವಾ ಪ್ರಾಯೋಪವಿಷ್ಟಾಂಶ್ಚ ಸರ್ವಾನ್ ವಾನರಪುಂಗವಾನ್ ॥ ೬೦
ಭೃಶಂ ಶೋಕಾರ್ಣವೇ ಮಗ್ನಃ ಪರ್ಯದೇವಯದಂಗದಃ ।
ತವ ನಾಶಂ ಚ ವೈದೇಹಿ ವಾಲಿನಶ್ಚ ತಥಾ ವಧಮ್ ॥ ೬೧
ಪ್ರಾಯೋಪವೇಶಮಸ್ಮಾಕಂ ಮರಣಂ ಚ ಜಟಾಯುಷಃ ।
ತೇಷಾಂ ನಃ ಸ್ವಾಮಿಸಂದೇಶಾನ್ನಿರಾಶಾನಾಂ ಮುಮೂರ್ಷತಾಮ್ ॥
ಕಾರ್ಯಹೇತೋರಿವಾಯಾತಃ ಶಕುನಿರ್ವೀರ್ಯವಾನ್ ಮಹಾನ್ ।
ಗೃಧ್ರರಾಜಸ್ಯ ಸೋದರ್ಯಃ ಸಂಪಾತಿರ್ನಾಮ ಗೃಧ್ರರಾಟ್ ॥ ೬೩
ಶ್ರುತ್ವಾ ಭ್ರಾತೃವಧಂ ಕೋಪಾದಿದಂ ವಚನಮಬ್ರವೀತ್ ।
ಯವೀಯಾನ್ ಕೇನ ಮೇ ಭ್ರಾತಾ ಹತಃ ಕ್ವ ಚ ನಿಪಾತಿತಃ ॥ ೬೪
ಏತದಾಖ್ಯಾತುಮಿಚ್ಛಾಮಿ ಭವದ್ಭಿರ್ವಾನರೋತ್ತಮಾಃ ।
ಅಂಗದೋಽಕಥಯತ್ತಸ್ಯ ಜನಸ್ಥಾನೇ ಮಹದ್ವಧಮ್ ॥ ೬೫
ರಕ್ಷಸಾ ಭೀಮರೂಪೇಣ ತ್ವಾಮುದ್ದಿಶ್ಯ ಯಥಾತಥಮ್ ।
ಜಟಾಯುಷೋ ವಧಂ ಶ್ರುತ್ವಾ ದುಃಖಿತಃ ಸೋಽರುಣಾತ್ಮಜಃ ॥ ೬೬

ಬಿಟ್ಟೆವು (೫೭–೫೯). ನಾವು ಗಿರಿಶಿಖರದ ಮೇಲೆ ಉಪವಾಸವನ್ನು ಆರಂಭಿಸಿದೆವು. ಆಗ ನಮ್ಮನ್ನು ನೋಡಿ ಅಂಗದನು ಬಹಳ ದುಃಖದಿಂದ ಗಟ್ಟಿಯಾಗಿ ಅಳತೊಡಗಿದನು. ವೈದೇಹಿ, ಅವನು ನಿನ್ನ ಅಪಹಾರ, ವಾಲಿಯ ವಧೆ, ನಮ್ಮ ಆಮರಣಾಂತವಾದ ಉಪವಾಸ, ಜಟಾಯುವಿನ ಮರಣ, ಇವೆಲ್ಲವನ್ನೂ ಬಾಯಲ್ಲಿ ಆಡುತ್ತ ವಿಲಾಪಿಸತೊಡಗಿದನು. ನಾವಂತೂ ಸುಗ್ರೀವನ ಆಜ್ಞೆಯನ್ನು ನೆರವೇರಿಸಲಾರದೆ ನಿರಾಶರಾಗಿ ಬದುಕುವ ಆಶೆಯನ್ನು ತೊರೆದಿದ್ದೆವು (೬೦–೬೨). ಅಷ್ಟರಲ್ಲಿ ನಮ್ಮ ಕಾರ್ಯಸಿದ್ಧಿಯಾಗಲೆಂದೋ ಏನೋ ಬೃಹದಾಕಾರದ ಒಬ್ಬ ಗೃಧ್ರರಾಜನು ಅಲ್ಲಿಗೆ ಬಂದನು. ಅವನು ಜಟಾಯುವಿನ ಅಣ್ಣ. ಸಂಪಾತಿ ಎಂದು ಹೆಸರು. ತನ್ನ ತಮ್ಮನು ಹತನಾದ ವಿಚಾರವನ್ನು ಕೇಳಿ ಕೋಪದಿಂದ ''ಎಲೈ ಕಪಿಗಳೆ, ಯಾವನು ನನ್ನ ತಮ್ಮನನ್ನು ಕೊಂದನು? ಎಲ್ಲಿ ಕೊಂದನು? ಹೇಳಿರಿ'' ಎಂದನು. ಆಗ ಜನಸ್ಥಾನದಲ್ಲಿ ಜಟಾಯುವನ್ನು ಭೀಮಾಕಾರದ ರಾಕ್ಷಸನೊಬ್ಬನು ಕೊಂದನೆಂದು ಅಂಗದನು ವಿವರಿಸಿ ಹೇಳಿದನು. ಸಂಪಾತಿಗೆ ಬಹಳ

ತ್ವಾಮಾಹ ಸ ವರಾರೋಹೇ ವಸಂತೀಂ ರಾವಣಾಲಯೇ ।
ತಸ್ಯ ತದ್ವಚನಂ ಶ್ರುತ್ವಾ ಸಂಪಾತೇಃ ಪ್ರೀತಿವರ್ಧನಮ್ ॥ ೭೭

ಅಂಗದಪ್ರಮುಖಾಃ ಸರ್ವೇ ತತಃ ಸಂಪ್ರಸ್ಥಿತಾ ವಯಮ್ ।
ವಿಂಧ್ಯಾದುತ್ಥಾಯ ಸಂಪ್ರಾಪ್ತಾಃ ಸಾಗರಸ್ಯಾಂತಮುತ್ತರಮ್ ॥ ೭೮

ತ್ವದ್ದರ್ಶನಕೃತೋತ್ಸಾಹಾ ಹೃಷ್ಟಾಸ್ತುಷ್ಟಾಃ ಪ್ಲವಂಗಮಾಃ ।
ಅಂಗದಪ್ರಮುಖಾಃ ಸರ್ವೇ ವೇಲೋಪಾಂತಮುಪಸ್ಥಿತಾಃ ॥ ೭೯

ಚಿಂತಾಂ ಜಗ್ಮುಃ ಪುನರ್ಭೀತಾಸ್ತ್ವದ್ದರ್ಶನಸಮುತ್ಸುಕಾಃ ।
ಅಥಾಹಂ ಹರಿಸೈನ್ಯಸ್ಯ ಸಾಗರಂ ಪ್ರೇಕ್ಷ್ಯ ಸೀದತಃ ॥ ೮೦

ವ್ಯವಧೂಯ ಭಯಂ ತೀವ್ರಂ ಯೋಜನಾನಾಂ ಶತಂ ಪ್ಲುತಃ ।
ಲಂಕಾ ಚಾಪಿ ಮಯಾ ರಾತ್ರೌ ಪ್ರವಿಷ್ಟಾ ರಾಕ್ಷಸಾಕುಲಾ ॥ ೮೧

ರಾವಣಶ್ಚ ಮಯಾ ದೃಷ್ಟಸ್ತ್ವಂ ಚ ಶೋಕಪರಿಪ್ಲುತಾ ।
ಏತತ್ತೇ ಸರ್ವಮಾಖ್ಯಾತಂ ಯಥಾವೃತ್ತಮನಿಂದಿತೇ ॥ ೮೨

ಸಂಕಟವಾಯಿತು (೭೩–೭೬). ತರುವಾಯ ಸಂಪಾತಿಯು ರಾವಣನ ವಾಸಸ್ಥಾನವಾದ ಲಂಕೆಯಲ್ಲಿ ನೀನು ಇರುವುದಾಗಿ ತಿಳಿಸಿದನು. ಈ ಸಂತೋಷದ ವಾರ್ತೆಯನ್ನು ಕೇಳಿ ಅಂಗದನೊಡನೆ ನಾವೆಲ್ಲರೂ ವಿಂಧ್ಯಪರ್ವತದಿಂದ ಹೊರಟು ಸಮುದ್ರದ ಉತ್ತರತೀರಕ್ಕೆ ಬಂದು ಸೇರಿದೆವು (೭೭–೭೮). ನಿನ್ನನ್ನು ನೋಡುವುದಕ್ಕೆ ಉತ್ಸುಕರಾಗಿ ಆನಂದದಿಂದ ನಮ್ಮ ಕಪಿಗಳೆಲ್ಲರೂ ಸಮುದ್ರದ ದಡಕ್ಕೆ ಬಂದರು. ಆದರೆ (ಸಮುದ್ರವನ್ನು ಕಂಡೊಡನೆ ನಿರಾಸೆಯಿಂದ) ಅವರಿಗೆ ದೊಡ್ಡಚಿಂತೆ ಹುಟ್ಟಿತು. ಅನಂತರ ನಾನು ತಲ್ಲಣಗೊಂಡಿದ್ದ ಕಪಿಸೈನ್ಯವನ್ನು ನೋಡಿ, ಅವರಿಗೆ ಹೆದರಬೇಡಿರೆಂದು ಸಮಾಧಾನಪಡಿಸಿ, ನೂರು ಯೋಜನದಗಲದ ಸಮುದ್ರವನ್ನು ಹಾರಿಬಂದೆನು. ರಾಕ್ಷಸರಿಂದ ತುಂಬಿದ್ದ ಈ ಲಂಕೆಯನ್ನು ರಾತ್ರಿಯಲ್ಲಿ ಪ್ರವೇಶ ಮಾಡಿದೆನು (೭೯–೮೧). ರಾವಣನನ್ನು ನೋಡಿದೆ. ದುಃಖಿತಳಾದ ನಿನ್ನನ್ನು ನೋಡಿದೆ. ದೇವಿ, ನಡೆದ ಸಂಗತಿಯನ್ನು ಯಥಾಸ್ಥಿತವಾಗಿ ತಿಳಿಸಿದ್ದೇನೆ. ನನ್ನೊಡನೆ ಮಾತನಾಡು. ನಾನು ಶ್ರೀರಾಮನ ದೂತ. ರಾಮನಿಗೋಸ್ಕರ ನಿನ್ನನ್ನು

ಅಭಿಭಾಷಸ್ವ ಮಾಂ ದೇವಿ ದೂತೋ ದಾಶರಥೇರಹಮ್ ।
ತಂ ಮಾಂ ರಾಮಕೃತೋದ್ಯೋಗಂ ತ್ವನ್ನಿಮಿತ್ತಮಿಹಾಗತಮ್ ॥ ೭೩

ಸುಗ್ರೀವಸಚಿವಂ ದೇವಿ ಬುಧ್ಯಸ್ವ ಪವನಾತ್ಮಜಮ್ ।
ಕುಶಲೀ ತವ ಕಾಕುತ್ಸ್ಥಃ ಸರ್ವಶಸ್ತ್ರಭೃತಾಂ ವರಃ ॥ ೭೪

ಗುರೋರಾರಾಧನೇ ಯುಕ್ತೋ ಲಕ್ಷ್ಮಣಶ್ಚ ಸುಲಕ್ಷಣಃ ।
ತಸ್ಯ ವೀರ್ಯವತೋ ದೇವಿ ಭರ್ತುಸ್ತವ ಹಿತೇ ರತಃ ॥ ೭೫

ಅಹಮೇಕಸ್ತು ಸಂಪ್ರಾಪ್ತಃ ಸುಗ್ರೀವವಚನಾದಿಹ ।
ಮಯೇಯಮಸಹಾಯೇನ ಚರತಾ ಕಾಮರೂಪಿಣಾ ॥ ೭೬

ದಕ್ಷಿಣಾ ದಿಗನುಕ್ರಾಂತಾ ತ್ವನ್ಮಾರ್ಗವಿಚಯೈಷಿಣಾ ।
ದಿಷ್ಟ್ಯಾಹಂ ಹರಿಸೈನ್ಯಾನಾಂ ತ್ವನ್ನಾಶಮನುಶೋಚತಾಮ್ ॥ ೭೭

ಅಪನೇಷ್ಯಾಮಿ ಸಂತಾಪಂ ತವಾಧಿಗಮಶಂಸನಾತ್ ।
ದಿಷ್ಟ್ಯಾ ಹಿ ಮಮ ನ ವ್ಯರ್ಥಂ ದೇವಿ ಸಾಗರಲಂಘನಮ್ ॥ ೭೮

ಪ್ರಾಪ್ಸ್ಯಾಮ್ಯಹಮಿದಂ ದಿಷ್ಟ್ಯಾ ತ್ವದ್ದರ್ಶನಕೃತಂ ಯಶಃ ।
ರಾಘವಶ್ಚ ಮಹಾವೀರ್ಯಃ ಕ್ಷಿಪ್ರಂ ತ್ವಾಮಭಿಪತ್ಸ್ಯತೇ ॥ ೭೯

ಹುಡುಕಿಕೊಂಡು ಇಲ್ಲಿಗೆ ಬಂದಿದ್ದೇನೆ (೭೨–೭೩). ನಾನು ಸುಗ್ರೀವನ ಮಂತ್ರಿ; ವಾಯುಪುತ್ರ. ಶಸ್ತ್ರಧಾರಿಗಳಲ್ಲಿ ಅಗ್ರಗಣ್ಯನಾದ ನಿನ್ನ ಪತಿಯು ಕುಶಲಿಯಾಗಿದ್ದಾನೆ. ಲಕ್ಷ್ಮಣನು ಅಣ್ಣನ ಸೇವೆಯಲ್ಲಿ ನಿರತನಾಗಿದ್ದಾನೆ. ನಿನ್ನ ಪತಿಯ ಹಿತವನ್ನೇ ಬಯಸುತ್ತಿದ್ದಾನೆ (೭೪–೭೫). ಸುಗ್ರೀವನ ಆಜ್ಞೆಯನ್ನು ಮನ್ನಿಸಿ ನಾನು ಒಬ್ಬನೇ ಇಲ್ಲಿಗೆ ಬಂದಿದ್ದೇನೆ. ಕಾಮರೂಪಿಯಾದ ನಾನು ನಿನ್ನನ್ನು ಅರಸುತ್ತ ಏಕಾಕಿಯಾಗಿ ಈ ದಕ್ಷಿಣದಿಕ್ಕಿಗೆ ಬಂದಿದ್ದೇನೆ. ನಿನ್ನನ್ನು ಕಾಣದೆ ಶೋಕಿಸುತ್ತಿರುವ ವಾನರಸೈನ್ಯಕ್ಕೆ ನಿನ್ನನ್ನು ಕಂಡ ವಾರ್ತೆಯನ್ನು ತಿಳಿಸಿ ಅವರ ಶೋಕವನ್ನು ಪರಿಹರಿಸುವೆನು. ಇದು ನನ್ನ ಭಾಗ್ಯ. ದೇವಿ, ನಾನು ಸಾಗರವನ್ನು ಲಂಘಿಸಿದ್ದು ವ್ಯರ್ಥವಾಗಲಿಲ್ಲ (೭೬–೭೮). ನನ್ನ ಭಾಗ್ಯದಿಂದಲೇ ನಿನ್ನ ದರ್ಶನಮಾಡಿದೆನೆಂಬ ಕೀರ್ತಿಗೆ ಭಾಗಿಯಾದೆ. ಮಹಾ ಬಲಾಢ್ಯನಾದ ರಾಮನು ರಾವಣನನ್ನು ಬಂಧುಮಿತ್ರರೊಡನೆ ಸಂಹರಿಸಿ,

ಸಮಿತ್ರಬಾಂಧವಂ ಹತ್ವಾ ರಾವಣಂ ರಾಕ್ಷಸಾಧಿಪಮ್ ।
ಮಾಲ್ಯವಾನ್ನಾಮ ವೈದೇಹಿ ಗಿರೀಣಾಮುತ್ತಮೋ ಗಿರಿಃ ॥ ೮೦

ತತೋ ಗಚ್ಛತಿ ಗೋಕರ್ಣಂ ಪರ್ವತಂ ಕೇಸರೀ ಹರಿಃ ।
ಸ ಚ ದೇವರ್ಷಿಭಿರ್ದಿಷ್ಟಃ ಪಿತಾ ಮಮ ಮಹಾಕಪಿಃ ॥ ೮೧

ತೀರ್ಥೇ ನದೀಪತೇಃ ಪುಣ್ಯೇ ಶಂಬಸಾದನಮುದ್ಧರತ್ ।
ತಸ್ಯಾಹಂ ಹರಿಣಃ ಕ್ಷೇತ್ರೇ ಜಾತೋ ವಾತೇನ ಮೈಥಿಲಿ ॥ ೮೨

ಹನುಮಾನಿತಿ ವಿಖ್ಯಾತೋ ಲೋಕೇ ಸ್ವೇನೈವ ಕರ್ಮಣಾ ।
ವಿಶ್ವಾಸಾರ್ಥಂ ತು ವೈದೇಹಿ ಭರ್ತುರುಕ್ತಾ ಮಯಾ ಗುಣಾಃ ॥ ೮೩

ಅಚಿರಾದ್ರಾಘವೋ ದೇವಿ ತ್ವಾಮಿತೋ ನಯಿತಾನಘೇ ।
ಏವಂ ವಿಶ್ವಾಸಿತಾ ಸೀತಾ ಹೇತುಭಿಃ ಶೋಕಕರ್ಶಿತಾ ॥ ೮೪

ಉಪಪನ್ನೈರಭಿಜ್ಞಾನೈರ್ದೂತಂ ತಮವಗಚ್ಛತಿ ।
ಅತುಲಂ ಚ ಗತಾ ಹರ್ಷಂ ಪ್ರಹರ್ಷೇಣ ಚ ಜಾನಕೀ ॥ ೮೫

ಶೀಘ್ರದಲ್ಲಿಯೇ ನಿನ್ನನ್ನು ಪಡೆಯುವನು. ದೇವಿ, ಮಾಲ್ಯವಂತ ಎಂಬ ಒಂದು ಪರ್ವತ ಉಂಟು (೭೯–೮೦). ಅಲ್ಲಿವಾಸವಾಗಿದ್ದ ಕೇಸರಿ ಎಂಬ ವಾನರನು ಒಮ್ಮೆ ಗೋಕರ್ಣ ಪರ್ವತಕ್ಕೆ ಹೋದನು. ಆ ವಾನರೋತ್ತಮನೇ ನನ್ನ ತಂದೆ. ಅವನು ಸಮುದ್ರತೀರದಲ್ಲಿದ್ದ ಆ ಪುಣ್ಯಕ್ಷೇತ್ರದಲ್ಲಿ ಶಂಬಸಾದನನೆಂಬ ರಾಕ್ಷಸನನ್ನು ದೇವರ್ಷಿಗಳ ಆದೇಶದಂತೆ ಸಂಹಾರ ಮಾಡಿದನು. ಆ ಕೇಸರಿಯ ಪತ್ನಿಯಲ್ಲಿ ವಾಯುದೇವನ ಅನುಗ್ರಹದಿಂದ ನಾನು ಜನಿಸಿದೆನು (೮೧–೮೨). ನಾನು ಮಾಡಿದ ಒಂದು ಕೆಲಸಕ್ಕೆ ಗುರುತಾಗಿ ನನಗೆ ಹನುಮಂತನೆಂದು ಹೆಸರಾಯಿತು. ನಿನಗೆ ನಂಬಿಕೆಯಾಗಲೆಂದು ನಿನ್ನ ಪತಿಯ ಗುಣಗಳನ್ನು ವರ್ಣಿಸಿದೆನು. ರಾಘವನು ಸದ್ಯದಲ್ಲಿಯೇ ನಿನ್ನನ್ನು ಇಲ್ಲಿಂದ ಬಿಡಿಸಿಕೊಂಡು ಹೋಗುವನು.'' ಹೀಗೆ ಸರಿಯಾದ ಕಾರಣಗಳನ್ನೂ ಗುರುತುಗಳನ್ನೂ ಹೇಳಲು, ಸೀತೆಗೆ ನಂಬಿಕೆಯಾಯಿತು (೮೩–೮೪). ಅವನು ರಾಮದೂತನೆಂದು ತಿಳಿದಮೇಲೆ ಅವಳ ಹರ್ಷಕ್ಕೆ ಪಾರವೇ ಇಲ್ಲವಾಯಿತು. ಕಣ್ಣುಗಳಿಂದ ಆನಂದಬಾಷ್ಪವು ತುಳುಕಿತು. ಆ ವಿಶಾಲಾಕ್ಷಿಯ

ನೇತ್ರಾಭ್ಯಾಂ ವಕ್ರಪಕ್ಷ್ಮಾಭ್ಯಾಂ ಮುಮೋಚಾನಂದಜಂ ಜಲಮ್ ।
ಚಾರು ತದ್ವದನಂ ತಸ್ಯಾಸ್ತಾಮ್ರಶುಕ್ಲಾಯತೇಕ್ಷಣಮ್ ॥ ೮೬
ಅಶೋಭತ ವಿಶಾಲಾಕ್ಷ್ಯಾ ರಾಹುಮುಕ್ತ ಇವೋಡುರಾಟ್ ।
ಹನುಮಂತಂ ಕಪಿಂ ವ್ಯಕ್ತಂ ಮನ್ಯತೇ ನಾನ್ಯಥೇತಿ ಸಾ ॥ ೮೭
ಅಥೋವಾಚ ಹನೂಮಾಂಸ್ತಾಮುತ್ತರಂ ಪ್ರಿಯದರ್ಶನಾಮ್ ।
ಏತತ್ತೇ ಸರ್ವಮಾಖ್ಯಾತಂ ಸಮಾಶ್ವಸಿಹಿ ಮೈಥಿಲಿ ॥ ೮೮
ಕಿಂ ಕರೋಮಿ ಕಥಂ ವಾ ತೇ ರೋಚತೇ ಪ್ರತಿಯಾಮ್ಯಹಮ್ ॥

ಹತೇಽಸುರೇ ಸಂಯತಿ ಶಂಬಸಾದನೇ
ಕಪಿಪ್ರವೀರೇಣ ಮಹರ್ಷಿಚೋದನಾತ್ ।
ತತೋಽಸ್ಮಿ ವಾಯುಪ್ರಭವೋ ಹಿ ಮೈಥಿಲಿ
ಪ್ರಭಾವತಸ್ತತ್ಪ್ರತಿಮಶ್ಚ ವಾನರಃ ॥ ೮೯

ಇತಿ ಶ್ರೀಮದ್ರಾಮಾಯಣೇ ಸುಂದರಕಾಂಡೇ ಪಂಚತ್ರಿಂಶಃ ಸರ್ಗಃ

ಸುಂದರ ವದನವು ರಾಹುಮುಕ್ತನಾದ ಚಂದ್ರಮನಂತೆ ಕಂಗೊಳಿಸಿತು. ಹನುಮಂತನು ಬೇರೆಯವನಲ್ಲವೆಂದು ನಿಶ್ಚಯಿಸಿದಳು (೮೫-೮೭). ಆಗ ಹನುಮಂತನು ''ದೇವಿ, ಇದ್ದ ಸಂಗತಿಯನ್ನು ತಿಳಿಸಿದ್ದೇನೆ. ಸಮಾಧಾನ ಹೊಂದು. ಇನ್ನು ಏನು ಮಾಡಲಿ? ನಿನ್ನ ಇಷ್ಟವೇನು? ನಾನು ಇನ್ನು ಹಿಂತಿರುಗಿ ಹೋಗ ಬೇಕಾಗಿದೆ. ಮೈಥಿಲಿ, ಮಹರ್ಷಿಗಳ ಪ್ರೇರಣೆಯಿಂದ ಕಪಿವೀರನಾದ ನನ್ನ ತಂದೆ ಶಂಬಸಾದನನೆಂಬ ಅಸುರನನ್ನು ಸಂಹಾರಮಾಡಲಾಗಿ, ಮಹರ್ಷಿಗಳ ಪ್ರಸಾದ ದಿಂದ ಕೇಸರಿಯ ಪತ್ನಿಯಲ್ಲಿ ನಾನು ವಾಯುದೇವನಿಂದ ಜನಿಸಿದೆನು. ವೇಗ ಪರಾಕ್ರಮಗಳಲ್ಲಿ ನಾನು ವಾಯುದೇವನಿಗೆ ಸಮಾನ'' ಎಂದನು (೮೮-೮೯).

ಇಲ್ಲಿಗೆ ಶ್ರೀಮದ್ರಾಮಾಯಣದ ಸುಂದರಕಾಂಡದಲ್ಲಿ ಮೂವತ್ತೈದನೆಯ ಸರ್ಗ

ಷಟ್‌ತ್ರಿಂಶಃ ಸರ್ಗಃ

ಅಂಗುಲೀಯಕಪ್ರದಾನಮ್

ಭೂಯ ಏವ ಮಹಾತೇಜಾ ಹನುಮಾನ್ ಮಾರುತಾತ್ಮಜಃ ।
ಅಬ್ರವೀತ್ ಪ್ರಶ್ರಿತಂ ವಾಕ್ಯಂ ಸೀತಾಪ್ರತ್ಯಯಕಾರಣಾತ್ ॥ ೧
ವಾನರೋಽಹಂ ಮಹಾಭಾಗೇ ದೂತೋ ರಾಮಸ್ಯ ಧೀಮತಃ ।
ರಾಮನಾಮಾಂಕಿತಂ ಚೇದಂ ಪಶ್ಯ ದೇವ್ಯಂಗುಲೀಯಕಮ್ ॥ ೨
ಪ್ರತ್ಯಯಾರ್ಥಂ ತವಾನೀತಂ ತೇನ ದತ್ತಂ ಮಹಾತ್ಮನಾ ।
ಸಮಾಶ್ವಸಿಹಿ ಭದ್ರಂ ತೇ ಕ್ಷೀಣದುಃಖಫಲಾ ಹ್ಯಸಿ ॥ ೩
ಗೃಹೀತ್ವಾ ಪ್ರೇಕ್ಷಮಾಣಾ ಸಾ ಭರ್ತುಃ ಕರವಿಭೂಷಣಮ್ ।
ಭರ್ತಾರಮಿವ ಸಂಪ್ರಾಪ್ತಂ ಜಾನಕೀ ಮುದಿತಾಭವತ್ ॥ ೪
ಚಾರು ತದ್ವದನಂ ತಸ್ಯಾಸ್ತಾಮ್ರಶುಕ್ಲಾಯತೇಕ್ಷಣಮ್ ।
ಬಭೂವ ಹರ್ಷೋದಗ್ರಂ ಚ ರಾಹುಮುಕ್ತ ಇವೋಡುರಾಟ್ ॥ ೫

ಸರ್ಗ ೩೬

ಹನುಮಂತನು ಶ್ರೀರಾಮನ ಅಂಗುಲೀಯಕವನ್ನು ಸೀತೆಗೆ ಕೊಡುವುದು. ಅವನು ಸೀತೆಯ ನಾನಾ ಪ್ರಶ್ನೆಗಳಿಗೆ ಉತ್ತರ ಹೇಳಿ, ಶ್ರೀರಾಮನ ಶೋಕಾವಸ್ಥೆಯನ್ನು ವರ್ಣಿಸುವುದು.

ವಾಯುಪುತ್ರನಾದ ಹನುಮಂತನು ಸೀತೆಗೆ ನಂಬಿಕೆಯಾಗಲೆಂದು ಪುನಃ ವಿನಯದಿಂದ ''ದೇವಿ, ನಾನು ಶ್ರೀರಾಮನ ದೂತ. ಇದೊ! ಶ್ರೀರಾಮನ ಹೆಸರನ್ನು ಕೆತ್ತಿದ ಅಂಗುಲೀಯಕವನ್ನು ನೋಡು! ಆ ಮಹಾತ್ಮನು ನಿನಗೆ ವಿಶ್ವಾಸ ಹುಟ್ಟಲೆಂದು ಇದನ್ನು ನನ್ನ ಕೈಗೆ ಕೊಟ್ಟು ಕಳುಹಿಸಿದ್ದಾನೆ. ದೇವಿ, ಸಮಾಧಾನ ಹೊಂದು. ನಿನಗೆ ಶುಭವಾಗುವುದು. ನಿನ್ನ ಕಷ್ಟವು ನೀಗಿತೆಂದೇ ತಿಳಿ'' ಎಂದನು (೧–೩). ಜಾನಕಿಯು ತನ್ನ ಗಂಡನ ಹಸ್ತಭೂಷಣವಾಗಿದ್ದ ಆ ಉಂಗುರವನ್ನು ಕೈಯಲ್ಲಿ ತೆಗೆದುಕೊಂಡು, ಅದನ್ನೇ ನೋಡುತ್ತ, ಶ್ರೀರಾಮನೇ ಅಲ್ಲಿಗೆ ಬಂದಷ್ಟು ಆನಂದವಾಗಿ ಉಬ್ಬಿಹೋದಳು. ಕೆಂಪು ಬಿಳುಪು ಮಿಶ್ರವಾದ ವಿಶಾಲನೇತ್ರಗಳುಳ್ಳ ಆಕೆಯ ಸುಂದರವದನವು ಹರ್ಷದಿಂದ ಹಿಗ್ಗಿ, ಗ್ರಹಣವು ಬಿಟ್ಟ ಪೂರ್ಣಚಂದ್ರ

ತತಃ ಸಾ ಹ್ರೀಮತೀ ಬಾಲಾ ಭರ್ತೃಸಂದೇಶಹರ್ಷಿತಾ ।
ಪರಿತುಷ್ಟಾ ಪ್ರಿಯಂ ಕೃತ್ವಾ ಪ್ರಶಶಂಸ ಮಹಾಕಪಿಮ್ ॥ ೬

ವಿಕ್ರಾಂತಸ್ತ್ವಂ ಸಮರ್ಥಸ್ತ್ವಂ ಪ್ರಾಜ್ಞಸ್ತ್ವಂ ವಾನರೋತ್ತಮ ।
ಯೇನೇದಂ ರಾಕ್ಷಸಪದಂ ತ್ವಯೈಕೇನ ಪ್ರಧರ್ಷಿತಮ್ ॥ ೭

ಶತಯೋಜನವಿಸ್ತೀರ್ಣಃ ಸಾಗರೋ ಮಕರಾಲಯಃ ।
ವಿಕ್ರಮಶ್ಲಾಘನೀಯೇನ ಕ್ರಮತಾ ಗೋಪದೀಕೃತಃ ॥ ೮

ನ ಹಿ ತ್ವಾಂ ಪ್ರಾಕೃತಂ ಮನ್ಯೇ ವಾನರಂ ವಾನರರ್ಷಭ ।
ಯಸ್ಯ ತೇ ನಾಸ್ತಿ ಸಂತ್ರಾಸೋ ರಾವಣಾನ್ನಾಪಿ ಸಂಭ್ರಮಃ ॥ ೯

ಅರ್ಹಸೇ ಚ ಕಪಿಶ್ರೇಷ್ಠ ಮಯಾ ಸಮಭಿಭಾಷಿತುಮ್ ।
ಯದ್ಯಸಿ ಪ್ರೇಷಿತಸ್ತೇನ ರಾಮೇಣ ವಿದಿತಾತ್ಮನಾ ॥ ೧೦

ಪ್ರೇಷಯಿಷ್ಯತಿ ದುರ್ಧರ್ಷೋ ರಾಮೋ ನ ಹ್ಯಪರೀಕ್ಷಿತಮ್ ।
ಪರಾಕ್ರಮಮವಿಜ್ಞಾಯ ಮತ್ಸಕಾಶಂ ವಿಶೇಷತಃ ॥ ೧೧

ನಂತೆ ಮಿನುಗಿತು. ಪತಿಯು ಹೇಳಿಕಳಿಸಿದ ಕುಶಲವಾರ್ತೆಯಿಂದ ಸಂತುಷ್ಟಳಾದ ಆ ಬಾಲೆಯು ಸ್ವಲ್ಪ ನಾಚಿಕೆಪಡುತ್ತ ಆಂಜನೇಯನನ್ನು ಪ್ರಶಂಸೆ ಮಾಡತೊಡಗಿದಳು (೪–೬) : "ವಾನರೋತ್ತಮ, ನೀನೇ ಪರಾಕ್ರಮಶಾಲಿ, ನೀನೇ ಸಮರ್ಥ, ಬುದ್ಧಿವಂತನೆಂದರೆ ನೀನೇ. ಈ ರಾಕ್ಷಸರ ಆವಾಸಸ್ಥಾನಕ್ಕೆ ಯಾರನ್ನೂ ಲಕ್ಷ್ಯಮಾಡದೆ ನೀನೊಬ್ಬನೇ ಬಂದಿದ್ದೀಯೆ. ಮೊಸಳೆ ಮುಂತಾದ ಕ್ರೂರಪ್ರಾಣಿಗಳಿರುವ ನೂರು ಯೋಜನದಗಲದ ಮಹಾಸಾಗರವನ್ನು ಗೋವಿನ ಹೆಜ್ಜೆಯ ಕುಳಿಯನ್ನು ದಾಟುವಂತೆ ದಾಟಿ ಬಂದಿದ್ದೀಯೆ (೭–೮). ಕಪಿಶ್ರೇಷ್ಠ, ನೀನು ಸಾಮಾನ್ಯ ಕಪಿಯಲ್ಲ. ನಿನಗೆ ರಾವಣನಿಂದ ಭಯವೂ ಆಗಲಿಲ್ಲ, ಗಾಬರಿಯೂ ಆಗಲಿಲ್ಲ. ಪ್ರಾಜ್ಞನಾದ ರಾಮನು ನಿನ್ನನ್ನು ಕಳಿಸಿದಮೇಲೆ, ನಿನ್ನೊಡನೆ ನಾನು ಧಾರಾಳವಾಗಿ ಮಾತನಾಡಬಹುದು (೯–೧೦). ಅಜೇಯನಾದ ರಾಮನು ದೂತನನ್ನು ಪರೀಕ್ಷೆಮಾಡದೆ, ಅವನ ಪರಾಕ್ರಮವನ್ನು ತಿಳಿದುಕೊಳ್ಳದೆ ಕಳಿಸಲಾರನು. ಅದರಲ್ಲಿಯೂ ಈಗ ನನ್ನ ಬಳಿಗೆ ಸಾಮಾನ್ಯರನ್ನು ಕಳಿಸುವುದಿಲ್ಲ.

ದಿಷ್ಟ್ಯಾ ಸ ಕುಶಲೀ ರಾಮೋ ಧರ್ಮಾತ್ಮಾ ಸತ್ಯಸಂಗರಃ ।
ಲಕ್ಷ್ಮಣಶ್ಚ ಮಹಾತೇಜಾಃ ಸುಮಿತ್ರಾನಂದವರ್ಧನಃ ॥ ೧೨

ಕುಶಲೀ ಯದಿ ಕಾಕುತ್ಸ್ಥಃ ಕಿಂ ನ ಸಾಗರಮೇಖಲಾಮ್ ।
ಮಹೀಂ ದಹತಿ ಕೋಪೇನ ಯುಗಾಂತಾಗ್ನಿರಿವೋತ್ಥಿತಃ ॥ ೧೩

ಅಥವಾ ಶಕ್ತಿಮಂತೌ ತೌ ಸುರಾಣಾಮಪಿ ನಿಗ್ರಹೇ ।
ಮಮೈವ ತು ನ ದುಃಖಾನಾಮಸ್ತಿ ಮನ್ಯೇ ವಿಪರ್ಯಯಃ ॥ ೧೪

ಕಚ್ಚಿನ್ನ ವ್ಯಥಿತೋ ರಾಮಃ ಕಚ್ಚಿನ್ನ ಪರಿತಪ್ಯತೇ ।
ಉತ್ತರಾಣಿ ಚ ಕಾರ್ಯಾಣಿ ಕುರುತೇ ಪುರುಷೋತ್ತಮಃ ॥ ೧೫

ಕಚ್ಚಿನ್ನ ದೀನಃ ಸಂಭ್ರಾಂತಃ ಕಾರ್ಯೇಷು ಚ ನ ಮುಹ್ಯತಿ ।
ಕಚ್ಚಿತ್ ಪುರುಷಕಾರ್ಯಾಣಿ ಕುರುತೇ ನೃಪತೇ ಸುತಃ ॥ ೧೬

ದ್ವಿವಿಧಂ ತ್ರಿವಿಧೋಪಾಯಮುಪಾಯಮಪಿ ಸೇವತೇ ।
ವಿಜಿಗೀಷುಃ ಸುಹೃತ್ ಕಚ್ಚಿನ್ಮಿತ್ರೇಷು ಚ ಪರಂತಪಃ ॥ ೧೭

ಧರ್ಮಾತ್ಮನಾದ ರಾಮನೂ ಸುಮಿತ್ರಾತನಯನಾದ ಲಕ್ಷ್ಮಣನೂ ಕ್ಷೇಮದಿಂದಿರುವುದು ನನ್ನ ಭಾಗ್ಯ (೧೧–೧೨). ಶ್ರೀರಾಮನು ಕ್ಷೇಮದಿಂದ ಇದ್ದಮೇಲೆ, ಅವನಿಗೆ ಕೋಪವೇಕೆ ಬರಲಿಲ್ಲ? ಪ್ರಳಯಕಾಲಾಗ್ನಿಯಂತೆ ಕ್ರುದ್ಧನಾಗಿ ಈ ಜಗತ್ತನ್ನು ಧ್ವಂಸ ಮಾಡದೆ ಬಿಟ್ಟಿರುವುದೇಕೆ? ಆ ವೀರರಿಬ್ಬರೂ ದೇವತೆಗಳನ್ನು ಕೂಡ ನಿಗ್ರಹಿಸ ಬಲ್ಲವರು. ಆದರೆ ನನ್ನ ದುಃಖಕ್ಕೆ ಇನ್ನೂ ಮುಗಿಯುವ ಕಾಲ ಬಂದಿಲ್ಲವೆಂದು ಎಣಿಸಬೇಕಾಗಿದೆ (೧೩–೧೪). ಅದು ಹಾಗಿರಲಿ. ರಾಮನು ನನಗೋಸ್ಕರ ವ್ಯಥೆಗೊಂಡು ಸದಾ ಸಂಕಟಪಡುತ್ತಿಲ್ಲವಷ್ಟೆ? ಮುಂದೆ ಮಾಡಬೇಕಾದ ಕಾರ್ಯಗಳನ್ನು ನಡೆಸುತ್ತಿರುವನಷ್ಟೆ? ಆ ರಾಜಪುತ್ರನು ದೈನ್ಯದಿಗ್ಭ್ರಮೆಗಳಿಂದ ಕರ್ತವ್ಯದಲ್ಲಿ ಪ್ರಮಾದ ಮಾಡುವುದಿಲ್ಲವಷ್ಟೆ? ಪುರುಷಪ್ರಯತ್ನಗಳನ್ನು ನಡೆಸುತ್ತಿರುವನಷ್ಟೆ? (೧೫–೧೬). ಧರ್ಮ, ಅರ್ಥ, ಕಾಮಗಳೆಂಬ ತ್ರಿವರ್ಗಗಳಿಗೆ ಸಾಧನವಾದ ಸಾಮ, ದಾನ, ಭೇದ, ದಂಡ ಎಂಬ ಉಪಾಯಗಳು ಎರಡು ವಿಧ. ಸಾಮದಾನಗಳು ಸೌಮ್ಯ. ಭೇದದಂಡಗಳು ಉಗ್ರ. ಶ್ರೀರಾಮನು ಇವುಗಳನ್ನು

ಕಚ್ಚಿನ್ಮಿತ್ರಾಣಿ ಲಭತೇ ಮಿತ್ರೈಶ್ಚಾಪ್ಯಭಿಗಮ್ಯತೇ ।
ಕಚ್ಚಿತ್ ಕಲ್ಯಾಣಮಿತ್ರಶ್ಚ ಮಿತ್ರೈಶ್ಚಾಪಿ ಪುರಸ್ಕೃತಃ ॥ ೧೮

ಕಚ್ಚಿದಾಶಾಸ್ತಿ ದೇವಾನಾಂ ಪ್ರಸಾದಂ ಪಾರ್ಥಿವಾತ್ಮಜಃ ।
ಕಚ್ಚಿತ್ ಪುರುಷಕಾರಂ ಚ ದೈವಂ ಚ ಪ್ರತಿಪದ್ಯತೇ ॥ ೧೯

ಕಚ್ಚಿನ್ನ ವಿಗತಸ್ನೇಹೋ ವಿವಾಸಾನ್ಮಯಿ ರಾಘವಃ ।
ಕಚ್ಚಿನ್ಮಾಂ ವ್ಯಸನಾದಸ್ಮಾನ್ಮೋಕ್ಷಯಿಷ್ಯತಿ ರಾಘವಃ ॥ ೨೦

ಸುಖಾನಾಮುಚಿತೋ ನಿತ್ಯಮಸುಖಾನಾಮನೂಚಿತಃ ।
ದುಃಖಮುತ್ತರಮಾಸಾದ್ಯ ಕಚ್ಚಿದ್ರಾಮೋ ನ ಸೀದತಿ ॥ ೨೧

ಕೌಸಲ್ಯಾಯಾಸ್ತಥಾ ಕಚ್ಚಿತ್ ಸುಮಿತ್ರಾಯಾಸ್ತಥೈವ ಚ ।
ಅಭೀಕ್ಷ್ಣಂ ಶ್ರೂಯತೇ ಕಚ್ಚಿತ್ ಕುಶಲಂ ಭರತಸ್ಯ ಚ ॥ ೨೨

ಮನ್ನಿಮಿತ್ತೇನ ಮಾನಾರ್ಹಃ ಕಚ್ಚಿಚ್ಛೋಕೇನ ರಾಘವಃ ।
ಕಚ್ಚಿನ್ನಾನ್ಯಮನಾ ರಾಮಃ ಕಚ್ಚಿನ್ಮಾಂ ತಾರಯಿಷ್ಯತಿ ॥ ೨೩

ಯಥೋಚಿತವಾಗಿ ಶತ್ರುಗಳಲ್ಲಿ ಉಪಯೋಗಿಸುತ್ತಿರುವನೆ ? ಆ ಪರಂತಪನು ಮಿತ್ರರ ವಿಷಯದಲ್ಲಿ ಸಂತೃಪ್ತನಾಗಿ ಉತ್ಸಾಹದಿಂದಿರುವನೆ ? (೧೭). ಮಿತ್ರರನ್ನು ಸಂಪಾದಿಸಿಕೊಳ್ಳುತ್ತಿದ್ದಾನೆಯೆ ? ಅವರು ಇವನ ಬಳಿಗೆ ಸಹಾಯಾಪೇಕ್ಷೆಯಿಂದ ಬರುತ್ತಿರುವರೆ ? ಅವರೆಲ್ಲರೂ ಒಳ್ಳೆಯವರಾಗಿದ್ದಾರೆಯೆ ? ಇವನನ್ನು ಗೌರವಿಸುತ್ತಾರೆಯೆ? (೧೮). ಶ್ರೀರಾಮನು ದೇವತಾನುಗ್ರಹವನ್ನು ಸಂಪಾದಿಸುವುದಕ್ಕಾಗಿ ಇಷ್ಟದೇವತೆಯನ್ನು ಪ್ರಾರ್ಥಿಸುತ್ತಾನಷ್ಟೆ? ದೈವ ಪೌರುಷಗಳೆರಡರಲ್ಲಿಯೂ ನಂಬಿಕೆ ಇಟ್ಟಿರುವನಷ್ಟೆ? ಬಹುದಿನಗಳಿಂದ ಅಗಲಿದರೂ ನನ್ನಲ್ಲಿ ಸ್ನೇಹವು ತಪ್ಪಿಲ್ಲವಷ್ಟೆ? ವಾನರೋತ್ತಮ, ನನ್ನನ್ನು ಈ ಕಷ್ಟದಿಂದ ಪಾರುಮಾಡಲು ಶ್ರೀರಾಮನು ಬರುವುದು ನಿಜವೆ ? (೧೯–೨೦). ಅವನು ಯಾವಾಗಲೂ ದುಃಖವನ್ನೇ ಕಾಣದೆ ಸುಖದಿಂದ ಇದ್ದವನು. ಈಗ ಈ ಮಹಾದುಃಖ ಬಂದೊದಗಿತು. ಇದರಿಂದ ದೇಹದಲ್ಲಿ ಕೃಶನಾಗಿಬಿಟ್ಟಿಲ್ಲವೆ ? ಕೌಸಲ್ಯಾದೇವಿ, ಸುಮಿತ್ರಾದೇವಿ, ಭರತ—ಇವರ ಯೋಗಕ್ಷೇಮವೇನಾದರೂ ಕೇಳಿ ಬರುತ್ತಿದೆಯೆ ? (೨೧–೨೨). ರಾಘವನು ನನಗೋಸ್ಕರ ಶೋಕಿಸುತ್ತಿರುವನೆ ?

ಕಚ್ಚಿದಕ್ಷೌಹಿಣೀಂ ಭೀಮಾಂ ಭರತೋ ಭ್ರಾತೃವತ್ಸಲಃ ।
ಧ್ವಜಿನೀಂ ಮಂತ್ರಿಭಿರ್ಗುಪ್ತಾಂ ಪ್ರೇಷಯಿಷ್ಯತಿ ಮತ್ಕೃತೇ ॥ ೨೪

ವಾನರಾಧಿಪತಿಃ ಶ್ರೀಮಾನ್ ಸುಗ್ರೀವಃ ಕಚ್ಚಿದೇಷ್ಯತಿ ।
ಮತ್ಕೃತೇ ಹರಿಭಿರ್ವೀರೈರ್ವೃತೋ ದಂತನಖಾಯುಧೈಃ ॥ ೨೫

ಕಚ್ಚಿಚ್ಚ ಲಕ್ಷ್ಮಣಃ ಶೂರಃ ಸುಮಿತ್ರಾನಂದವರ್ಧನಃ ।
ಅಸ್ತ್ರವಿಚ್ಛರಜಾಲೇನ ರಾಕ್ಷಸಾನ್ ವಿಧಮಿಷ್ಯತಿ ॥ ೨೬

ರೌದ್ರೇಣ ಕಚ್ಚಿದಸ್ತ್ರೇಣ ರಾಮೇಣ ನಿಹತಂ ರಣೇ ।
ದ್ರಕ್ಷ್ಯಾಮ್ಯಲ್ಪೇನ ಕಾಲೇನ ರಾವಣಂ ಸಸುಹೃಜ್ಜನಮ್ ॥ ೨೭

ಕಚ್ಚಿನ್ನ ತದ್ಧೇಮಸಮಾನವರ್ಣಂ
ತಸ್ಯಾನನಂ ಪದ್ಮಸಮಾನಗಂಧಿ ।
ಮಯಾ ವಿನಾ ಶುಷ್ಯತಿ ಶೋಕದೀನಂ
ಜಲಕ್ಷಯೇ ಪದ್ಮಮಿವಾತಪೇನ ॥ ೨೮

ಅವನ ಮನಸ್ಸು ಬೇರೆಯಾಗಿಲ್ಲವೆ ? ನನ್ನನ್ನು ಅವನು ಪಾರುಮಾಡಬಹುದೆ? ಭರತನು ಸೋದರವಾತ್ಸಲ್ಯವನ್ನಿಟ್ಟು ಮಂತ್ರಿಗಳಿಂದ ರಕ್ಷಿತವಾದ ಮಹಾಸೈನ್ಯವನ್ನು ನನಗೋಸ್ಕರ ಯುದ್ಧಮಾಡಲು ಕಳಿಸಿಕೊಡಬಹುದೆ ? (೨೩–೨೪). ವಾನರೇಶ್ವರನಾದ ಸುಗ್ರೀವನು ದಂತನಖಗಳಿಂದಲೇ ಹೋರಾಡುವ ಕಪಿವೀರರೊಡನೆ ಸೇರಿ ನನಗೋಸ್ಕರ ಬರಬಹುದೆ ? ಅಸ್ತ್ರ ವಿದ್ಯೆಯಲ್ಲಿ ನಿಪುಣನಾದ ವೀರಲಕ್ಷ್ಮಣನು ಶರಜಾಲಗಳಿಂದ ರಾಕ್ಷಸರನ್ನು ಧ್ವಂಸಮಾಡಬಹುದಲ್ಲವೆ ? ರಾಮನ ರೌದ್ರಾಸ್ತ್ರದಿಂದ ಯುದ್ಧರಂಗದಲ್ಲಿ ರಾವಣನು ಮಿತ್ರಸಮೇತನಾಗಿ ಸತ್ತುಬೀಳುವುದನ್ನು ಶೀಘ್ರದಲ್ಲಿ ನಾನು ನೋಡುವೆನೆ ? (೨೫–೨೭). ವಾನರೋತ್ತಮ, ಆ ರಾಮನ ಮುಖವು ಚಿನ್ನದಂತೆ ಮಿನುಗುವುದು, ಪದ್ಮದಂತೆ ಸುಗಂಧವನ್ನು ಬೀರುವುದು. ನೀರಿಲ್ಲದೆ ಬಿಸಿಲಿನಿಂದ ತಾವರೆಯ ಹೂವು ಬಾಡಿಹೋಗುವಂತೆ, ಅದು ನಾನಿಲ್ಲದೆ ಶೋಕದಿಂದ ಬಾಡಿಹೋಗದೆ ಇದ್ದೀತೆ ?

ಧರ್ಮಾಪದೇಶಾತ್ತ್ಯಜತಶ್ಚ ರಾಜ್ಯಂ
ಮಾಂ ಚಾಪ್ಯರಣ್ಯಂ ನಯತಃ ಪದಾತಿಮ್ ।
ನಾಸೀದ್ವ್ಯಥಾ ಯಸ್ಯ ನ ಭೀರ್ನ ಶೋಕಃ ।
ಕಚ್ಚಿತ್ ಸ ಧೈರ್ಯಂ ಹೃದಯೇ ಕರೋತಿ ॥ ೨೯

ನ ಚಾಸ್ಯ ಮಾತಾ ನ ಪಿತಾ ಚ ನಾನ್ಯಃ
ಸ್ನೇಹಾದ್ವಿಶಿಷ್ಟೋಽಸ್ತಿ ಮಯಾ ಸಮೋ ವಾ ।
ತಾವತ್ತ್ವಹಂ ದೂತ ಜಿಜೀವಿಷೇಯಂ
ಯಾವತ್ ಪ್ರವೃತ್ತಿಂ ಶೃಣುಯಾಂ ಪ್ರಿಯಸ್ಯ ॥ ೩೦

ಇತೀವ ದೇವೀ ವಚನಂ ಮಹಾರ್ಥಂ
ತಂ ವಾನರೇಂದ್ರಂ ಮಧುರಾರ್ಥಮುಕ್ತ್ವಾ ।
ಶ್ರೋತುಂ ಪುನಸ್ತಸ್ಯ ವಚೋಽಭಿರಾಮಂ
ರಾಮಾರ್ಥಯುಕ್ತಂ ವಿರರಾಮ ರಾಮಾ ॥ ೩೧

ಸೀತಾಯಾ ವಚನಂ ಶ್ರುತ್ವಾ ಮಾರುತಿರ್ಭೀಮವಿಕ್ರಮಃ ।
ಶಿರಸ್ಯಂಜಲಿಮಾಧಾಯ ವಾಕ್ಯಮುತ್ತರಮಬ್ರವೀತ್ ॥ ೩೨

---

(೨೮). ಧರ್ಮದ ಹೆಸರಿನಲ್ಲಿ ರಾಜ್ಯವನ್ನು ತೊರೆದಾಗಲೂ, ಕಾಲ್ನಡಿಗೆಯಲ್ಲಿ ನನ್ನನ್ನು ಅರಣ್ಯಕ್ಕೆ ಕರೆತಂದಾಗಲೂ ಅವನು ಚಿಂತೆ, ಭಯ, ಶೋಕಗಳೊಂದೂ ಇಲ್ಲದೆ ಧೀರನಾಗಿದ್ದನು. ಈಗ ನನ್ನನ್ನು ಅಗಲಿದಮಾತ್ರಕ್ಕೆ ಧೈರ್ಯವನ್ನು ಬಿಟ್ಟಿಲ್ಲವಷ್ಟೆ? (೨೯). ಅಪ್ಪಾ—ರಾಮದೂತ, ರಾಮನಿಗೆ ತಾಯಿಯಲ್ಲಾಗಲಿ, ತಂದೆಯಲ್ಲಾಗಲಿ ಬೇರೆ ಯಾವ ಬಂಧುವಿನಲ್ಲಿಯಾಗಲಿ ನನ್ನ ಮೇಲಿರುವಷ್ಟು ಪ್ರೀತಿ ಇರಲಾರದು! ನನ್ನ ಪ್ರಿಯನು ನನ್ನನ್ನು ಬಿಡಿಸಿಕೊಳ್ಳುವ ವಾರ್ತೆಯನ್ನು ಒಂದು ದಿನ ಕೇಳುತ್ತೇನೆಂಬ ಆಸೆಯಿಂದ ಇದುವರೆಗೂ ಜೀವಿಸಿದ್ದೇನೆ'' (೩೦). ಹೀಗೆ ಸೀತಾದೇವಿಯು ಅರ್ಥವತ್ತಾಗಿಯೂ ಮಧುರವಾಗಿಯೂ ಮಾತನಾಡಿ, ಹನುಮಂತನು ಹೇಳುವ ಆನಂದಕರವಾದ ರಾಮನ ವೃತ್ತಾಂತವನ್ನು ಕೇಳೋಣವೆಂದು ಸುಮ್ಮನಾದಳು (೩೧). ಆಗ ಹನುಮಂತನು ತಲೆಯಮೇಲೆ ಕೈಜೋಡಿಸಿಕೊಂಡು ''ವೈದೇಹಿ, ಶ್ರೀರಾಮನಿಗೆ ನೀನು ಇಲ್ಲಿರುವುದು

ನ ತ್ವಾಮಿಹಸ್ಥಾಂ ಜಾನೀತೇ ರಾಮಃ ಕಮಲಲೋಚನಃ ।
ತೇನ ತ್ವಾಂ ನಾನಯತ್ಯಾಶು ಶಚೀಮಿವ ಪುರಂದರಃ ॥ ೩೩

ಶ್ರುತ್ವೈವ ತು ವಚೋ ಮಹ್ಯಂ ಕ್ಷಿಪ್ರಮೇಷ್ಯತಿ ರಾಘವಃ ।
ಚಮೂಂ ಪ್ರಕರ್ಷನ್ ಮಹತೀಂ ಹರ್ಯೃಕ್ಷಗಣಸಂಕುಲಾಮ್ ॥ ೩೪

ವಿಷ್ಟಂಭಯಿತ್ವಾ ಬಾಣೌಘೈರಕ್ಷೋಭ್ಯಂ ವರುಣಾಲಯಮ್ ।
ಕರಿಷ್ಯತಿ ಪುರೀಂ ಲಂಕಾಂ ಕಾಕುತ್ಸ್ಥಃ ಶಾಂತರಾಕ್ಷಸಾಮ್ ॥ ೩೫

ತತ್ರ ಯದ್ಯಂತರಾ ಮೃತ್ಯುರ್ಯದಿ ದೇವಾ ಮಹಾಸುರಾಃ ।
ಸ್ಥಾಸ್ಯಂತಿ ಪಥಿ ರಾಮಸ್ಯ ಸ ತಾನಪಿ ವಧಿಷ್ಯತಿ ॥ ೩೬

ತವಾದರ್ಶನಜೇನಾರ್ಯೇ ಶೋಕೇನ ಸ ಪರಿಪ್ಲುತಃ ।
ನ ಶರ್ಮ ಲಭತೇ ರಾಮಃ ಸಿಂಹಾರ್ದಿತ ಇವ ದ್ವಿಪಃ ॥ ೩೭

ಮಲಯೇನ ಚ ವಿಂಧ್ಯೇನ ಮೇರುಣಾ ಮಂದರೇಣ ಚ ।
ದರ್ದುರೇಣ ಚ ತೇ ದೇವಿ ಶಪೇ ಮೂಲಫಲೇನ ಚ ॥ ೩೮

ಗೊತ್ತಿಲ್ಲವಾದ್ದರಿಂದ ನಿನ್ನನ್ನು ಕರೆದುಕೊಂಡು ಹೋಗಿಲ್ಲ. ಗೊತ್ತಿದ್ದರೆ, ದೇವೇಂದ್ರನು ಶಚೀದೇವಿಯನ್ನು ಕರೆದೊಯ್ಯುವಂತೆ ನಿನ್ನನ್ನು ಕರೆದೊಯ್ಯುತ್ತಿದ್ದನು (೩೨–೩೩). ಇಲ್ಲಿರುವ ಸುದ್ದಿಯನ್ನು ನನ್ನಿಂದ ಕೇಳುತ್ತಲೇ ರಾಘವನು ವಾನರಭಲ್ಲೂಕಗಳ ಮಹಾಸೈನ್ಯವನ್ನು ಕರೆತರುವನು. ಅಸ್ತ್ರ ಜಾಲಗಳಿಂದ ಸಮುದ್ರವನ್ನು ಸ್ತಬ್ಧಗೊಳಿಸಿ, ಲಂಕೆಯಲ್ಲಿ ರಾಕ್ಷಸರ ಸದ್ದಿಲ್ಲದಂತೆ ಅವರ ಹುಟ್ಟಡಗಿಸುವನು (೩೪–೩೫). ಒಂದು ವೇಳೆ ದೇವತೆಗಳಾಗಲೀ, ಅಸುರರಾಗಲಿ, ಮೃತ್ಯುದೇವತೆಯೇ ಆಗಲಿ ಅಡ್ಡಬಂದರೂ ರಾಮನು ಅವರನ್ನು ವಧಿಸದೆ ಬಿಡುವುದಿಲ್ಲ. ಆರ್ಯೆ, ಸಿಂಹದಿಂದ ಕಂಗೆಟ್ಟ ಗಜರಾಜನಂತೆ, ನಿನ್ನ ವಿಯೋಗದುಃಖದಿಂದ ರಾಮನು ಸಂತೋಷವನ್ನೇ ಕಾಣದೆ ಇದ್ದಾನೆ (೩೬–೩೭). ಈ ವಿಷಯದಲ್ಲಿ (ನಮ್ಮ ಕಪಿಗಳಿಗೆ ಆಶ್ರಯವಾದ) ಮಲಯಪರ್ವತದ ಆಣೆ ! ವಿಂಧ್ಯಪರ್ವತದ ಆಣೆ ! ಮೇರುಪರ್ವತದ ಆಣೆ ! ಮಂದರ ದರ್ದುರ ಪರ್ವತಗಳ ಆಣೆ ! ಕಂದಮೂಲಗಳ ಆಣೆ ! (೩೮). ದೇವಿ,

ಯಥಾ ಸುನಯನಂ ವಲ್ಗು ಬಿಂಬೋಷ್ಠಂ ಚಾರುಕುಂಡಲಮ್ ।
ಮುಖಂ ಪ್ರಕ್ಷ್ಯಸಿ ರಾಮಸ್ಯ ಪೂರ್ಣಚಂದ್ರಮಿವೋದಿತಮ್ ॥ ೩೯

ಕ್ಷಿಪ್ರಂ ದ್ರಕ್ಷ್ಯಸಿ ವೈದೇಹಿ ರಾಮಂ ಪ್ರಸ್ರವಣೇ ಗಿರೌ ।
ಶತಕ್ರತುಮಿವಾಸೀನಂ ನಾಕಪೃಷ್ಠಸ್ಯ ಮೂರ್ಧನಿ ॥ ೪೦

ನ ಮಾಂಸಂ ರಾಘವೋ ಭುಂಕ್ತೇ ನ ಚಾಪಿ ಮಧು ಸೇವತೇ ।
ವನ್ಯಂ ಸುವಿಹಿತಂ ನಿತ್ಯಂ ಭಕ್ತಮಶ್ನಾತಿ ಪಂಚಮಮ್ ॥ ೪೧

ನೈವ ದಂಶಾನ್ನ ಮಶಕಾನ್ನ ಕೀಟಾನ್ನ ಸರೀಸೃಪಾನ್ ।
ರಾಘವೋಽಪನಯೇದ್ಗಾತ್ರಾತ್ತ್ವದ್ಗತೇನಾಂತರಾತ್ಮನಾ ॥ ೪೨

ನಿತ್ಯಂ ಧ್ಯಾನಪರೋ ರಾಮೋ ನಿತ್ಯಂ ಶೋಕಪರಾಯಣಃ ।
ನಾನ್ಯಚ್ಚಿಂತಯತೇ ಕಿಂಚಿತ್ ಸ ತು ಕಾಮವಶಂ ಗತಃ ॥ ೪೩

ಅನಿದ್ರಃ ಸತತಂ ರಾಮಃ ಸುಪ್ತೋಽಪಿ ಚ ನರೋತ್ತಮಃ ।
ಸೀತೇತಿ ಮಧುರಾಂ ವಾಣೀಂ ವ್ಯಾಹರನ್ ಪ್ರತಿಬುದ್ಧ್ಯತೇ ॥ ೪೪

ಶೀಘ್ರದಲ್ಲಿಯೇ ನೀನು ಸುಂದರನೇತ್ರಗಳಿಂದೊಪ್ಪುವ, ತೊಂಡೆಯಹಣ್ಣಿನಂತಹ ತುಟಿಯುಳ್ಳ, ಮನೋಹರ ಕುಂಡಲಗಳಿಂದ ಶೋಭಿತವಾದ, ಪೂರ್ಣಚಂದ್ರನಿಗೆ ಎಣೆಯಾದ ಶ್ರೀರಾಮನ ರಮಣೀಯವಾದ ಮುಖವನ್ನು ನೋಡುತ್ತೀಯೆ. ದೇವಲೋಕದಲ್ಲಿರುವ ದೇವೇಂದ್ರನಂತೆ ಪ್ರಸ್ರವಣ ಗಿರಿಯಲ್ಲಿರುವ ರಾಮನನ್ನು ನೋಡುತ್ತೀಯೆ (೩೯–೪೦). ನಿನ್ನ ವಿರಹದುಃಖದಿಂದ ರಾಘವನು ಮಾಂಸವನ್ನೂ ಮಧುವನ್ನೂ ಸೇವಿಸುವುದೇ ಇಲ್ಲ. ನಿತ್ಯವೂ ಸಂಜೆ ಕಾಡಿನಲ್ಲಿ ದೊರೆಯುವ ಫಲಮೂಲಗಳನ್ನು ಮಾತ್ರ ಸ್ವಲ್ಪ ತಿನ್ನುತ್ತಿರುವನು. ಅವನ ಮನಸ್ಸು ನಿನ್ನಲ್ಲಿಯೇ ಲಯಿಸಿಹೋಗಿರುವುದರಿಂದ, ತನ್ನ ಮೈಮೇಲೆ ಕಾಡು ನೊಣವಾಗಲಿ ಸೊಳ್ಳೆಯಾಗಲಿ ಹುಳು ಹುಲ್ಲಿಗಳಾಗಲಿ ಎರಗಿದರೆ ಅವುಗಳನ್ನು ಓಡಿಸುವುದೇ ಇಲ್ಲ (೪೧–೪೨). ಕಾಮವಶನಾಗಿ ಸದಾ ನಿನ್ನನ್ನು ಚಿಂತಿಸುತ್ತ, ಸದಾ ಶೋಕಿಸುತ್ತ ಇರುವನು. ಬೇರೆ ಯಾವುದನ್ನೂ ಯೋಚಿಸುವುದೇ ಇಲ್ಲ. ಆತನಿಗೆ ನಿದ್ರೆಯೇ ಬರುತ್ತಿಲ್ಲ. ಆಕಸ್ಮಿಕವಾಗಿ ನಿದ್ರೆ ಬಂದರೂ 'ಹಾ ಸೀತೆ' ಎಂದು ಕನವರಿಸುತ್ತಲೇ

ದೃಷ್ಟ್ವಾ ಫಲಂ ವಾ ಪುಷ್ಪಂ ವಾ ಯದ್ವಾನ್ಯತ್ ಸುಮನೋಹರಮ್ ।
ಬಹುಶೋ ಹಾ ಪ್ರಿಯೇತ್ಯೇವಂ ಶ್ವಸಂಸ್ತ್ವಾಮಭಿಭಾಷತೇ ॥ ೪೫

ಸ ದೇವಿ ನಿತ್ಯಂ ಪರತಪ್ಯಮಾನ-
ಸ್ತ್ವಾಮೇವ ಸೀತೇತ್ಯಭಿಭಾಷಮಾಣಃ ।
ಧೃತವ್ರತೋ ರಾಜಸುತೋ ಮಹಾತ್ಮಾ
ತವೈವ ಲಾಭಾಯ ಕೃತಪ್ರಯತ್ನಃ ॥ ೪೬

ಸಾ ರಾಮಸಂಕೀರ್ತನವೀತಶೋಕಾ
ರಾಮಸ್ಯ ಶೋಕೇನ ಸಮಾನಶೋಕಾ ।
ಶರನ್ಮುಖೇ ಸಾಂಬುದಶೇಷಚಂದ್ರಾ
ನಿಶೇವ ವೈದೇಹಸುತಾ ಬಭೂವ ॥ ೪೭

ಇತಿ ಶ್ರೀಮದ್ರಾಮಾಯಣೇ ಸುಂದರಕಾಂಡೇ ಷಟ್‌ತ್ರಿಂಶಃ ಸರ್ಗಃ

ಎಚ್ಚರಗೊಳ್ಳುವನು (೪೩–೪೪). ಎಲ್ಲಿಯಾದರೂ ಹಣ್ಣನ್ನಾಗಲಿ ಸುಂದರವಾದ ಹೂವನ್ನಾಗಲಿ ನೋಡಿದರೆ, ನಿನ್ನನ್ನು ಸ್ಮರಿಸಿಕೊಂಡು 'ಹಾ ಸೀತೆ' ಎಂದು ಹಂಬಲಿಸುತ್ತ ನಿಟ್ಟುಸಿರುಬಿಡುವನು. ದೇವಿ, ದುಃಖಸಂತಪ್ತನಾದ ಆ ರಾಜಕುಮಾರನು ಯಾವಾಗಲೂ 'ಸೀತೆ' ಎಂದು ನಿನ್ನ ಹೆಸರನ್ನು ನುಡಿಯುತ್ತಿರುವನು. ನಿನ್ನನ್ನು ಹುಡುಕಲೇಬೇಕೆಂದು ದೃಢನಿಶ್ಚಯದಿಂದ ಪ್ರಯತ್ನ ಮಾಡಿದ್ದಾನೆ'' ಎಂದನು (೪೫–೪೬). ಶ್ರೀರಾಮನ ವೃತ್ತಾಂತವನ್ನು ಕೇಳಿ ಮನಸ್ಸಿಗೆ ನೆಮ್ಮದಿಯಾದರೂ, ಅವನು ತನಗಾಗಿ ಅನುಭವಿಸುತ್ತಿರುವ ಕಷ್ಟವನ್ನು ತಿಳಿದು ಜಾನಕಿಯು ರಾಮನಂತೆಯೇ ದುಃಖಿತಳಾದಳು. ಆಗ, ಶರತ್ಕಾಲಾರಂಭದಲ್ಲಿ ತೆಳುವಾದ ಮೋಡದಿಂದ ಮಾಸಿದ ಚಂದ್ರನಿರುವ ರಾತ್ರಿಯಂತೆ, ಆಕೆಯು ಕಾಣಿಸುತ್ತಿದ್ದಳು (೪೭).

ಇಲ್ಲಿಗೆ ಶ್ರೀಮದ್ರಾಮಾಯಣದ ಸುಂದರಕಾಂಡದಲ್ಲಿ ಮೂವತ್ತಾರನೆಯ ಸರ್ಗ

ಸಪ್ತತ್ರಿಂಶಃ ಸರ್ಗಃ

ಸೀತಾಪ್ರತ್ಯಾನಯನಾನೌಚಿತ್ಯಮ್

ಸೀತಾ ತದ್ವಚನಂ ಶ್ರುತ್ವಾ ಪೂರ್ಣಚಂದ್ರನಿಭಾನನಾ ।
ಹನುಮಂತಮುವಾಚೇದಂ ಧರ್ಮಾರ್ಥಸಹಿತಂ ವಚಃ ॥ ೧

ಅಮೃತಂ ವಿಷಸಂಸೃಷ್ಟಂ ತ್ವಯಾ ವಾನರ ಭಾಷಿತಮ್ ।
ಯಚ್ಚ ನಾನ್ಯಮನಾ ರಾಮೋ ಯಚ್ಚ ಶೋಕಪರಾಯಣಃ ॥ ೨

ಐಶ್ವರ್ಯೇ ವಾ ಸುವಿಸ್ತೀರ್ಣೇ ವ್ಯಸನೇ ವಾ ಸುದಾರುಣೇ ।
ರಜ್ಜ್ವೇವ ಪುರುಷಂ ಬದ್ಧ್ವಾ ಕೃತಾಂತಃ ಪರಿಕರ್ಷತಿ ॥ ೩

ವಿಧಿರ್ನೂನಮಸಂಹಾರ್ಯಃ ಪ್ರಾಣಿನಾಂ ಪ್ಲವಗೋತ್ತಮ ।
ಸೌಮಿತ್ರಿಂ ಮಾಂ ಚ ರಾಮಂ ಚ ವ್ಯಸನೈಃ ಪಶ್ಯ ಮೋಹಿತಾನ್ ॥ ೪

ಸರ್ಗ ೩೭

ಹನುಮಂತನು ಸೀತೆಯನ್ನು ತನ್ನ ಭುಜದ ಮೇಲೆ ಕುಳಿತು ರಾಮನ ಬಳಿಗೆ ಬರುವಂತೆ ಕೇಳುವುದು. ರಾಮನೇ ಇಲ್ಲಿಗೆ ಬಂದು ರಾವಣನನ್ನು ಸಂಹರಿಸಿ ತನ್ನನ್ನು ಕರೆದೊಯ್ಯುವುದು ಯುಕ್ತವೆಂದು ಸೀತೆಯು ಹೇಳುವುದು.

ಆಮೇಲೆ ಸೀತೆಯು ಸಾರವತ್ತಾಗಿಯೂ, ಧರ್ಮಯುಕ್ತವಾಗಿಯೂ ಇರುವ ಮಾತಿನಿಂದ ಹನುಮಂತನನ್ನು ಕುರಿತು ''ಎಲೈ ಕಪಿಶ್ರೇಷ್ಠನೆ, ಶ್ರೀರಾಮನು ಬೇರೆ ಏನನ್ನೂ ಚಿಂತಿಸದೆ ನನ್ನನ್ನೇ ಸ್ಮರಿಸಿಕೊಳ್ಳುತ್ತಿರುವನೆಂದೂ, ನನಗಾಗಿ ಶೋಕದಲ್ಲಿ ಮುಳುಗಿಹೋಗಿರುವನೆಂದೂ ಹೇಳಿದೆಯಲ್ಲ. ಇದು ವಿಷಮಿಶ್ರವಾದ ಅಮೃತ (೧–೨). ವಿಪುಲವಾದ ಐಶ್ವರ್ಯದಲ್ಲಾಗಲಿ, ಮಹಾದುಃಖದಲ್ಲಾಗಲಿ ವಿಧಾತನೇ ಮನುಷ್ಯನನ್ನು ಹಗ್ಗದಿಂದ ಬಿಗಿದು ಎಳೆದುಕೊಂಡು ಹೋಗುವನು. (ಸುಖ-ದುಃಖಗಳು ನಮ್ಮ ಅಧೀನವಲ್ಲ) ದೈವವನ್ನು ಮೀರಿ ನಡೆಯುವುದಕ್ಕೆ ಯಾರಿಗೂ ಸಾಧ್ಯವಿಲ್ಲ. ನಮ್ಮ ಅವಸ್ಥೆಯನ್ನು ನೋಡು. ಲಕ್ಷ್ಮಣ, ನಾನು, ರಾಮ—ಈ ಮೂವರೂ ವ್ಯಸನ ಪರಂಪರೆಯಲ್ಲಿ ಸಿಕ್ಕಿ ದಿಕ್ಕುಗಾಣದೆ ಇದ್ದೇವೆ (೩–೪).

ಶೋಕಸ್ಯಾಸ್ಯ ಕದಾ ಪಾರಂ ರಾಘವೋಽಧಿಗಮಿಷ್ಯತಿ ।
ಪ್ಲವಮಾನಃ ಪರಿಕ್ರಾಂತೋ ಹತನೌಃ ಸಾಗರೇ ಯಥಾ ॥ ೫

ರಾಕ್ಷಸಾನಾಂ ವಧಂ ಕೃತ್ವಾ ಸೂದಯಿತ್ವಾ ಚ ರಾವಣಮ್ ।
ಲಂಕಾಮುನ್ಮೂಲಿತಾಂ ಕೃತ್ವಾ ಕದಾ ದ್ರಕ್ಷ್ಯತಿ ಮಾಂ ಪತಿಃ ॥ ೬

ಸ ವಾಚ್ಯಃ ಸಂತ್ವರಸ್ವೇತಿ ಯಾವದೇವ ನ ಪೂರ್ಯತೇ ।
ಅಯಂ ಸಂವತ್ಸರಃ ಕಾಲಸ್ತಾವದ್ಧಿ ಮಮ ಜೀವಿತಮ್ ॥ ೭

ವರ್ತತೇ ದಶಮೋ ಮಾಸೋ ದ್ವೌ ತು ಶೇಷೌ ಪ್ಲವಂಗಮ ।
ರಾವಣೇನ ನೃಶಂಸೇನ ಸಮಯೋ ಯಃ ಕೃತೋ ಮಮ ॥ ೮

ವಿಭೀಷಣೇನ ಚ ಭ್ರಾತ್ರಾ ಮಮ ನಿರ್ಯಾತನಂ ಪ್ರತಿ ।
ಅನುನೀತಃ ಪ್ರಯತ್ನೇನ ನ ಚ ತತ್ ಕುರುತೇ ಮತಿಮ್ ॥ ೯

ಮಮ ಪ್ರತಿಪ್ರದಾನಂ ಹಿ ರಾವಣಸ್ಯ ನ ರೋಚತೇ ।
ರಾವಣಂ ಮಾರ್ಗತೇ ಸಂಖ್ಯೇ ಮೃತ್ಯುಃ ಕಾಲವಶಂ ಗತಮ್ ॥ ೧೦

ಸಮುದ್ರಮಧ್ಯದಲ್ಲಿ ದೋಣಿ ಮುಳುಗಿದವನು ಈಜುತ್ತ ಬಳಲಿ ಹೋಗುವಂತೆ ಶ್ರೀರಾಮನು ಶೋಕಸಮುದ್ರದಲ್ಲಿ ಸಿಕ್ಕಿರುತ್ತಾನೆ. ಯಾವಾಗ ಅದರ ಪಾರವನ್ನು ಕಾಣುವನೋ! ಅವನು ರಾಕ್ಷಸರನ್ನು ವಧಿಸಿ, ರಾವಣನನ್ನು ಸಂಹಾರ ಮಾಡಿ, ಲಂಕೆಯನ್ನು ನಿರ್ಮೂಲಗೊಳಿಸಿ ನನ್ನನ್ನು ಎಂದಿಗೆ ನೋಡುವನೋ! (೫–೬). ವಾನರೋತ್ತಮ, ನೀನು ಹೋಗಿ ನನ್ನ ಪ್ರಿಯನನ್ನು ತ್ವರೆಗೊಳಿಸಬೇಕು. ವರ್ಷ ಮುಗಿಯುವುದರೊಳಗೆ ಈ ಕೆಲಸವಾಗಬೇಕು. ಅಲ್ಲಿಯವರೆಗೆ ಮಾತ್ರ ನನ್ನ ಪ್ರಾಣ ಇರುತ್ತದೆ. ಇದು ಹತ್ತನೆಯ ತಿಂಗಳು. ಪಾಪಿ ರಾವಣನು ಗೊತ್ತುಮಾಡಿದ ಅವಧಿಗೆ ಇನ್ನು ಎರಡೇ ತಿಂಗಳು ಉಳಿದಿವೆ (೭–೮). ಅವನ ತಮ್ಮನಾದ ವಿಭೀಷಣನು ನನ್ನನ್ನು ರಾಮನಿಗೆ ಒಪ್ಪಿಸಿಬಿಡಬೇಕೆಂದು ಒತ್ತಾಯ ಮಾಡಿದನು. ಆದರೆ ರಾವಣನು ಒಪ್ಪಲಿಲ್ಲ. ನನ್ನನ್ನು ಹಿಂದಕ್ಕೆ ಒಪ್ಪಿಸುವುದು ರಾವಣನಿಗೆ ಹಿಡಿಸುವುದಿಲ್ಲ. ಮುಖ್ಯವಾಗಿ ಅವನು ಕಾಲವಶನಾಗಿದ್ದಾನೆ. ಯುದ್ಧದಲ್ಲಿ ಮೃತ್ಯುವು ಅವನಿಗಾಗಿ ಕಾದಿದೆ (೯–೧೦).

ಜ್ಯೇಷ್ಠಾ ಕನ್ಯಾಽನಲಾ ನಾಮ ವಿಭೀಷಣಸುತಾ ಕಪೇ ।
ತಯಾ ಮಮೇದಮಾಖ್ಯಾತಂ ಮಾತ್ರಾ ಪ್ರಹಿತಯಾ ಸ್ವಯಮ್ ೧೧

ಆಶಂಸೇಯಂ ಹರಿಶ್ರೇಷ್ಠ ಕ್ಷಿಪ್ರಂ ಮಾಂ ಪ್ರಾಪ್ಸ್ಯತೇ ಪತಿಃ ।
ಅಂತರಾತ್ಮಾ ಹಿ ಮೇ ಶುದ್ಧಸ್ತಸ್ಮಿಂಶ್ಚ ಬಹವೋ ಗುಣಾಃ ॥ ೧೨

ಉತ್ಸಾಹಃ ಪೌರುಷಂ ಸತ್ತ್ವಮಾನೃಶಂಸ್ಯಂ ಕೃತಜ್ಞತಾ ।
ವಿಕ್ರಮಶ್ಚ ಪ್ರಭಾವಶ್ಚ ಸಂತಿ ವಾನರ ರಾಘವೇ ॥ ೧೩

ಚತುರ್ದಶ ಸಹಸ್ರಾಣಿ ರಾಕ್ಷಸಾನಾಂ ಜಘಾನ ಯಃ ।
ಜನಸ್ಥಾನೇ ವಿನಾ ಭ್ರಾತ್ರಾ ಶತ್ರುಃ ಕಸ್ತಸ್ಯ ನೋದ್ವಿಜೇತ್ ॥ ೧೪

ನ ಸ ಶಕ್ಯಸ್ತುಲಯಿತುಂ ವ್ಯಸನೈಃ ಪುರುಷರ್ಷಭಃ ।
ಅಹಂ ತಸ್ಯ ಪ್ರಭಾವಜ್ಞಾ ಶಕ್ರಸ್ಯೇವ ಪುಲೋಮಜಾ ॥ ೧೫

ಶರಜಾಲಾಂಶುಮಾನ್ ಶೂರಃ ಕಪೇ ರಾಮದಿವಾಕರಃ ।
ಶತ್ರುರಕ್ಷೋಮಯಂ ತೋಯಮುಪಶೋಷಂ ನಯಿಷ್ಯತಿ ॥ ೧೬

ವಿಭೀಷಣನಿಗೆ ಅನಲೆ ಎಂಬ ಹಿರಿಯಮಗಳಿದ್ದಾಳೆ. ಅವಳು ತನ್ನ ತಾಯಿಯ ಮಾತಿನಮೇಲೆ ಇಲ್ಲಿಗೆ ಬಂದು ನನಗೆ ಈ ವಿಷಯವನ್ನು ಹೇಳಿದಳು. ಕಪಿಶ್ರೇಷ್ಠ, ಶೀಘ್ರದಲ್ಲಿಯೇ ನನ್ನ ಪತಿಯು ನನ್ನನ್ನು ಬಿಡಿಸಿಕೊಳ್ಳುತ್ತಾನೆಂದೇ ತೋರುತ್ತಿದೆ. ನನ್ನ ಅಂತರಾತ್ಮವು ಶುದ್ಧವಾಗಿದೆ. ಶ್ರೀರಾಮನು ಅತ್ಯಂತ ಗುಣಶಾಲಿ (೧೧–೧೨). ಉತ್ಸಾಹ, ಪೌರುಷ, ಬಲ, ಕರುಣೆ, ಕೃತಜ್ಞತೆ, ಪರಾಕ್ರಮ, ದಿವ್ಯಾಸ್ತ್ರದ ಮಹಿಮೆ—ಇವೆಲ್ಲವೂ ರಾಘವನಲ್ಲಿ ನೆಲೆಸಿವೆ. ಜನಸ್ಥಾನದಲ್ಲಿ ತಮ್ಮನ ಸಹಾಯವನ್ನೂ ಬಯಸದೆ ಏಕಾಕಿಯಾಗಿ ಹದಿನಾಲ್ಕುಸಾವಿರ ರಾಕ್ಷಸರನ್ನು ಧ್ವಂಸ ಮಾಡಿದ ಆ ಧೀರನಿಗೆ ಯಾವ ಶತ್ರುವು ತಾನೆ ಹೆದರಲಿಕ್ಕಿಲ್ಲ? (೧೩–೧೪). ಕಷ್ಟಗಳಿಗೆ ಅವನು ಜಗ್ಗತಕ್ಕವನಲ್ಲ. ಅವನ ಮಹಿಮೆ ಎಂತಹುದೆಂಬುದು ನನಗೆ ಗೊತ್ತು. ದೇವೇಂದ್ರನ ಮಹಿಮೆ ಶಚೀದೇವಿಗೇ ಗೊತ್ತು. ರಾಮನೆಂಬ ಭಾಸ್ಕರನು ಅಸ್ತ್ರಜಾಲಗಳೆಂಬ ಕಿರಣಗಳಿಂದ ಈ ರಾಕ್ಷಸರೆಂಬ ನೀರನ್ನು ಒಣಗಿಸಿಬಿಡುತ್ತಾನೆ''

ಇತಿಸಂಜಲ್ಪಮಾನಾಂ ತಾಂ ರಾಮಾರ್ಥೇ ಶೋಕಕರ್ಷಿತಾಮ್ ।
ಅಶ್ರುಸಂಪೂರ್ಣನಯನಾಮುವಾಚ ವಚನಂ ಕಪಿಃ ॥ ೧೭

ಶ್ರುತ್ವೈವ ತು ವಚೋ ಮಹ್ಯಂ ಕ್ಷಿಪ್ರಮೇಷ್ಯತಿ ರಾಘವಃ ।
ಚಮೂಂ ಪ್ರಕರ್ಷನ್ ಮಹತೀಂ ಹರ್ಯೃಕ್ಷಗಣಸಂಕುಲಾಮ್॥೧೮

ಅಥವಾ ಮೋಚಯಿಷ್ಯಾಮಿ ತ್ವಾಮದ್ಯೈವ ವರಾನನೇ ।
ಅಸ್ಮಾದ್ದುಃಖಾದುಪಾರೋಹ ಮಮ ಪೃಷ್ಠಮನಿಂದಿತೇ ॥ ೧೯

ತ್ವಾಂ ತು ಪೃಷ್ಠಗತಾಂ ಕೃತ್ವಾ ಸಂತರಿಷ್ಯಾಮಿ ಸಾಗರಮ್ ।
ಶಕ್ತಿರಸ್ತಿ ಹಿ ಮೇ ವೋಢುಂ ಲಂಕಾಮಪಿ ಸರಾವಣಾಮ್ ॥ ೨೦

ಅಹಂ ಪ್ರಸ್ರವಣಸ್ಥಾಯ ರಾಘವಾಯಾದ್ಯ ಮೈಥಿಲಿ ।
ಪ್ರಾಪಯಿಷ್ಯಾಮಿ ಶಕ್ರಾಯ ಹವ್ಯಂ ಹುತಮಿವಾನಲಃ ॥ ೨೧

ದ್ರಕ್ಷ್ಯಸ್ಯದ್ಯೈವ ವೈದೇಹಿ ರಾಘವಂ ಸಹಲಕ್ಷ್ಮಣಮ್ ।
ವ್ಯವಸಾಯಸಮಾಯುಕ್ತಂ ವಿಷ್ಣುಂ ದೈತ್ಯವಧೇ ಯಥಾ ॥ ೨೨

ತ್ವದ್ದರ್ಶನಕೃತೋತ್ಸಾಹಮಾಶ್ರಮಸ್ಥಂ ಮಹಾಬಲಮ್ ।
ಪುರಂದರಮಿವಾಸೀನಂ ನಗರಾಜಸ್ಯ ಮೂರ್ಧನಿ ॥ ೨೩

ಎಂದು ಹೇಳುತ್ತಿದ್ದಳು (೧೫-೧೬). ಅಷ್ಟರಲ್ಲಿ ಆಂಜನೇಯನು ದುಃಖದಿಂದ ಕಣ್ಣೀರು ತುಂಬಿಕೊಂಡಿದ್ದ ಸೀತೆಯನ್ನು ನೋಡಿ "ದೇವಿ, ನಾನು ಹೋಗಿ ಹೇಳುವುದೇ ತಡ, ಶ್ರೀರಾಮನು ವಾನರ ಭಲ್ಲೂಕಗಳ ಮಹಾಸೇನೆಯೊಡನೆ ಇಲ್ಲಿಗೆ ಬಂದೇಬಿಡುವನು (೧೭-೧೮). ಅಥವಾ ಅದೂ ಬೇಡ. ನಿನ್ನನ್ನು ಈಗಲೇ ಕಷ್ಟದಿಂದ ಪಾರುಮಾಡುತ್ತೇನೆ. ಇದೋ! ನನ್ನ ಬೆನ್ನನ್ನೇರಿ ಕುಳಿತುಕೊ. ನಿನ್ನನ್ನು ಬೆನ್ನಮೇಲಿರಿಸಿಕೊಂಡೇ ಈ ಮಹಾಸಾಗರವನ್ನು ದಾಟಿ ಹೋಗುವೆನು. ರಾವಣ ಸಹಿತವಾಗಿ ಈ ಲಂಕಾಪಟ್ಟಣವನ್ನೇ ಹೊತ್ತುಕೊಂಡು ಹೋಗುವಷ್ಟು ಶಕ್ತಿ ನನಗುಂಟು! (೧೯-೨೦). ಮೈಥಿಲಿ, ಅಗ್ನಿಯು ಹವಿಸ್ಸನ್ನು ಇಂದ್ರನಿಗೊಪ್ಪಿಸುವಂತೆ, ನಿನ್ನನ್ನು ಒಯ್ದು ಪ್ರಸ್ರವಣಪರ್ವತದಲ್ಲಿರುವ ಶ್ರೀರಾಮನಿಗೆ ಅರ್ಪಿಸುವೆನು. ದೈತ್ಯವಧೆಯಲ್ಲಿ ತೊಡಗಿದ ಮಹಾವಿಷ್ಣುವಿನಂತೆ ಇರುವ, ಲಕ್ಷ್ಮಣಸಮೇತನಾದ

ಪೃಷ್ಠಮಾರೋಹ ಮೇ ದೇವಿ ಮಾ ವಿಕಾಂಕ್ಷಸ್ವ ಶೋಭನೇ ।
ಯೋಗಮನ್ವಿಚ್ಛ ರಾಮೇಣ ಶಶಾಂಕೇನೇವ ರೋಹಿಣೀ ॥ ೨೪

ಕಥಯಂತೀವ ಚಂದ್ರೇಣ ಸಂಗಮಿಷ್ಯಸಿ ರೋಹಿಣೀ ।
ಮತ್ಪೃಷ್ಠಮಧಿರೋಹ ತ್ವಂ ತರಾಕಾಶೇ ಮಹಾರ್ಣವಮ್ ॥ ೨೫

ನ ಹಿ ಮೇ ಸಂಪ್ರಯಾತಸ್ಯ ತ್ವಾಮಿತೋ ನಯತೋಽಂಗನೇ ।
ಅನುಗಂತುಂ ಗತಿಂ ಶಕ್ತಾಃ ಸರ್ವೇ ಲಂಕಾನಿವಾಸಿನಃ ॥ ೨೬

ಯಥೈವಾಹಮಿಹ ಪ್ರಾಪ್ತಸ್ತಥೈವಾಹಮಸಂಶಯಮ್ ।
ಯಾಸ್ಯಾಮಿ ಪಶ್ಯ ವೈದೇಹಿ ತ್ವಾಮುದ್ಯಮ್ಯ ವಿಹಾಯಸಮ್ ॥ ೨೭

ಮೈಥಿಲೀ ತು ಹರಿಶ್ರೇಷ್ಠಾಚ್ಛ್ರುತ್ವಾ ವಚನಮದ್ಭುತಮ್ ।
ಹರ್ಷವಿಸ್ಮಿತಸರ್ವಾಂಗೀ ಹನುಮಂತಮಥಾಬ್ರವೀತ್ ॥ ೨೮

ಹನುಮನ್ ದೂರಮಧ್ವಾನಂ ಕಥಂ ಮಾಂ ವೋಢುಮಿಚ್ಛಸಿ ।
ತದೇವ ಖಲು ತೇ ಮನ್ಯೇ ಕಪಿತ್ವಂ ಹರಿಯೂಥಪ ॥ ೨೯

ಕಥಂ ವಾಲ್ಪಶರೀರಸ್ತ್ವಂ ಮಾಮಿತೋ ನೇತುಮಿಚ್ಛಸಿ ।
ಸಕಾಶಂ ಮಾನವೇಂದ್ರಸ್ಯ ಭರ್ತುರ್ಮೇ ಪ್ಲವಗರ್ಷಭ ॥ ೩೦

ರಾಮನನ್ನು ಈಗಲೇ ನೋಡಬಹುದು (೨೧–೨೨). ಬಲಾಢ್ಯನಾದ ರಾಘವನು ನಿನ್ನನ್ನು ನೋಡುವ ತವಕದಿಂದ ಪರ್ವತದಮೇಲೆ ದೇವೇಂದ್ರನಂತೆ ಕುಳಿತಿರುವನು. ಅಮ್ಮ, ನನ್ನ ಬೆನ್ನಮೇಲೇರು; ಭಯಪಡಬೇಡ. ರೋಹಿಣಿಯು ಚಂದ್ರನನ್ನು ಸೇರುವಂತೆ, ನೀನು ರಾಮಚಂದ್ರನನ್ನು ಸೇರಬಹುದು (೨೩–೨೪). ಮಾತನಾಡುತ್ತಿರುವಾಗಲೇ ಆಕಾಶಮಾರ್ಗದಲ್ಲಿ ಮಹಾಸಾಗರವನ್ನು ದಾಟಿ ಬಿಡುತ್ತೀಯೆ. ನನ್ನ ಬೆನ್ನಮೇಲೇರು. ನಾನು ವೇಗದಿಂದ ನಿನ್ನನ್ನು ಒಯ್ಯುತ್ತಿರುವಾಗ, ಲಂಕಾವಾಸಿಗಳಾದ ಯಾವ ರಾಕ್ಷಸರೂ ನನ್ನನ್ನು ಬೆನ್ನಟ್ಟಿಬರಲು ಸಾಧ್ಯವಿಲ್ಲ (೨೫–೨೬). ನಾನು ಯಾವ ರೀತಿಯಲ್ಲಿ ಸಮುದ್ರವನ್ನು ಹಾರಿ ಇಲ್ಲಿಗೆ ಬಂದೆನೋ, ಅದೇ ರೀತಿಯಲ್ಲಿ ನಿನ್ನನ್ನು ಹೊತ್ತುಕೊಂಡು ಆಕಾಶಮಾರ್ಗದಲ್ಲಿ ಹೋಗಬಲ್ಲೆನು, ಸಂದೇಹವಿಲ್ಲ'' ಎಂದನು (೨೭). ಈ ಅದ್ಭುತವಾದ ಮಾತನ್ನು ಕೇಳಿ ಸೀತೆಯು ಆನಂದ ವಿಸ್ಮಯಗಳಿಂದ ರೋಮಾಂಚಗೊಂಡಳು. ''ಹನುಮಂತ ಅಷ್ಟು

ಸೀತಾಯಾ ವಚನಂ ಶ್ರುತ್ವಾ ಹನುಮಾನ್ ಮಾರುತಾತ್ಮಜಃ ।
ಚಿಂತಯಾಮಾಸ ಲಕ್ಷ್ಮೀವಾನ್ನವಂ ಪರಿಭವಂ ಕೃತಮ್ ॥ ೩೧

ನ ಮೇ ಜಾನಾತಿ ಸತ್ತ್ವಂ ವಾ ಪ್ರಭಾವಂ ವಾಸಿತೇಕ್ಷಣಾ ।
ತಸ್ಮಾತ್ ಪಶ್ಯತು ವೈದೇಹೀ ಯದ್ರೂಪಂ ಮಮ ಕಾಮತಃ ॥ ೩೨

ಇತಿ ಸಂಚಿಂತ್ಯ ಹನುಮಾಂಸ್ತದಾ ಪ್ಲವಗಸತ್ತಮಃ ।
ದರ್ಶಯಾಮಾಸ ವೈದೇಹ್ಯಾಃ ಸ್ವಂ ರೂಪಮರಿಮರ್ದನಃ ॥ ೩೩

ಸ ತಸ್ಮಾತ್ ಪಾದಪಾದ್ಧೀಮಾನಾಪ್ಲುತ್ಯ ಪ್ಲವಗರ್ಷಭಃ ।
ತತೋ ವರ್ಧಿತುಮಾರೇಭೇ ಸೀತಾಪ್ರತ್ಯಯಕಾರಣಾತ್ ॥ ೩೪

ಮೇರುಮಂದರಸಂಕಾಶೋ ಬಭೌ ದೀಪ್ತಾನಲಪ್ರಭಃ ।
ಅಗ್ರತೋ ವ್ಯವತಸ್ಥೇ ಚ ಸೀತಾಯಾ ವಾನರೋತ್ತಮಃ ॥ ೩೫

ಹರಿಃ ಪರ್ವತಸಂಕಾಶಸ್ತಾಮ್ರವಕ್ತ್ರೋ ಮಹಾಬಲಃ ।
ವಜ್ರದಂಷ್ಟ್ರನಖೋ ಭೀಮೋ ವೈದೇಹೀಮಿದಮಬ್ರವೀತ್ ॥ ೩೬

ದೂರದವರೆಗೆ ನನ್ನನ್ನು ಹೇಗೆ ಹೊತ್ತುಕೊಂಡು ಹೋಗುತ್ತೀಯೆ? ಇದಕ್ಕೇ ನಿನ್ನನ್ನು ಕಪಿ ಎಂದು ಹೇಳುವುದು ! ಇಷ್ಟು ಚಿಕ್ಕಶರೀರ ನಿನ್ನದು. ನನ್ನನ್ನು ಹೊತ್ತುಕೊಂಡು ನನ್ನ ಗಂಡನ ಬಳಿಗೆ ಹೋಗಿ ಸೇರಿಸಬಲ್ಲೆಯಾ ?'' ಎಂದಳು (೨೮–೩೦). ಇದನ್ನು ಕೇಳಿ ಆ ವಾಯುಪುತ್ರನಿಗೆ ಎಂದೂ ಆಗದ ಅವಮಾನವಾದಂತಾಯಿತು. ''ಈಕೆಗೆ ನನ್ನ ಪರಾಕ್ರಮವಾಗಲಿ ಮಹಿಮೆಯಾಗಲಿ ಗೊತ್ತಿಲ್ಲ. ನನ್ನ ನಿಜರೂಪವನ್ನು ಒಮ್ಮೆ ನೋಡಲಿ'' ಎಂದುಕೊಂಡು ತನ್ನ ನಿಜಸ್ವರೂಪವನ್ನು ತೋರಿಸಿದನು (೩೧–೩೩). ಅವನು ಶಿಂಶಪಾ ವೃಕ್ಷದಿಂದ ಕೆಳಕ್ಕೆ ಧುಮುಕಿ ಸೀತೆಗೆ ನಂಬಿಕೆಯಾಗಲೆಂದು ತನ್ನ ದೇಹವನ್ನು ಬೆಳೆಯಿಸತೊಡಗಿದನು. ಆ ವಾನರೋತ್ತಮನು ಉರಿಯುವ ಅಗ್ನಿಯಂತೆ ಜ್ವಲಿಸುತ್ತ, ಇದೇನು ಮೇರುಪರ್ವತವೋ ಎಂಬಂತೆ ಸೀತೆಯ ಎದುರಿಗೆ ಬೆಳೆದು ನಿಂತನು (೩೪–೩೫). ಪರ್ವತಾಕಾರವಾದ ದೇಹ, ಕೆಂಪಾದ ಮೋರೆ ! ವಜ್ರಾಯುಧದಂತೆ ತೀಕ್ಷ್ಣವಾದ ಕೋರೆಯಹಲ್ಲುಗಳು, ಉಗುರುಗಳು ! ಹೀಗೆ ಭೀಕರಾಕಾರವನ್ನು ತಳೆದ ಬಲಾಢ್ಯನಾದ ಹನುಮಂತನು ಸೀತೆಯನ್ನು ಕುರಿತು ''ದೇವಿ, ಈ ಸಮಸ್ತ ಪರ್ವತಾರಣ್ಯಗಳು, ಉಪ್ಪರಿಗೆ, ಪ್ರಾಕಾರ ಪುರದ್ವಾರಗಳು, ಈ

ಸಪರ್ವತವನೋದ್ದೇಶಾಂ ಸಾಟ್ಟಪ್ರಾಕಾರತೋರಣಾಮ್ ।
ಲಂಕಾಮಿಮಾಂ ಸನಾಥಾಂ ವಾ ನಯಿತುಂ ಶಕ್ತಿರಸ್ತಿ ಮೇ ॥ ೩೭

ತದವಸ್ಥಾಪ್ಯತಾಂ ಬುದ್ಧಿರಲಂ ದೇವಿ ವಿಕಾಂಕ್ಷಯಾ ।
ವಿಶೋಕಂ ಕುರು ವೈದೇಹಿ ರಾಘವಂ ಸಹಲಕ್ಷ್ಮಣಮ್ ॥ ೩೮

ತಂ ದೃಷ್ಟ್ವಾಚಲಸಂಕಾಶಮುವಾಚ ಜನಕಾತ್ಮಜಾ ।
ಪದ್ಮಪತ್ರವಿಶಾಲಾಕ್ಷೀ ಮಾರುತಸ್ಯೌರಸಂ ಸುತಮ್ ॥ ೩೯

ತವ ಸತ್ತ್ವಂ ಬಲಂ ಚೈವ ವಿಜಾನಾಮಿ ಮಹಾಕಪೇ ।
ವಾಯೋರಿವ ಗತಿಂ ಚಾಪಿ ತೇಜಶ್ಚಾಗ್ನೇರಿವಾದ್ಭುತಮ್ ॥ ೪೦

ಪ್ರಾಕೃತೋಽನ್ಯಃ ಕಥಂ ಚೇಮಾಂ ಭೂಮಿಮಾಗಂತುಮರ್ಹತಿ ।
ಉದಧೇರಪ್ರಮೇಯಸ್ಯ ಪಾರಂ ವಾನರಪುಂಗವ ॥ ೪೧

ಜಾನಾಮಿ ಗಮನೇ ಶಕ್ತಿಂ ನಯನೇ ಚಾಪಿ ತೇ ಮಮ ।
ಅವಶ್ಯಂ ಸಂಪ್ರಧಾರ್ಯಾಶು ಕಾರ್ಯಸಿದ್ಧಿರ್ಮಹಾತ್ಮನಃ ॥ ೪೨

ರಾವಣ—ಇವರೆಲ್ಲರನ್ನೂ ಸೇರಿಸಿ ಇಡೀ ಲಂಕೆಯನ್ನೇ ಎತ್ತಿಕೊಂಡು ಹೋಗುವ ಶಕ್ತಿ ನನಗುಂಟು! (೩೬–೩೭). ಆದ್ದರಿಂದ ಧೈರ್ಯದಿಂದಿರು. ಸಂದೇಹಪಡಬೇಡ; ರಾಮಲಕ್ಷ್ಮಣರ ವ್ಯಸನವನ್ನು ಹೋಗಲಾಡಿಸು'' ಎಂದನು. ಆಗ ಜಾನಕಿಯು ಪರ್ವತಾಕಾರನಾದ ವಾಯುಪುತ್ರನನ್ನು ಪದ್ಮದಳದಂತೆ ಇದ್ದ ಕಣ್ಣುಗಳನ್ನರಳಿಸಿ ನೋಡುತ್ತ ''ಮಹಾಕಪಿಯೆ, ನಿನ್ನ ಧೈರ್ಯವೂ ಪರಾಕ್ರಮವೂ ನನಗೆ ಗೊತ್ತಾಯಿತು. ದಿಟವಾಗಿಯೂ ವೇಗದಲ್ಲಿ ನೀನು ವಾಯುವಿಗೆ ಸಮಾನ; ಅಗ್ನಿಯಂತೆ ಅದ್ಭುತನಾದ ತೇಜಸ್ವಿ! (೩೮–೪೦). ಸಾಮಾನ್ಯನಾದವನು ಊಹಾತೀತವಾದ ಸಮುದ್ರವನ್ನು ದಾಟಿ ಈ ಸ್ಥಳಕ್ಕೆ ಬಂದಾನೆ ? ನನ್ನನ್ನು ಬೆನ್ನಮೇಲೆ ಏರಿಸಿಕೊಂಡು ಹೋಗಬಲ್ಲ ಶಕ್ತಿ ನಿನಗೆ ಇದೆ. ಆದರೆ ಮಹಾತ್ಮನಾದ ರಾಮನ ಕಾರ್ಯಸಿದ್ಧಿಯು ಯಾವ ರೀತಿಯಲ್ಲಿ ಆಗಬೇಕೆಂಬುದನ್ನು ನಿಶ್ಚಯಿಸಬೇಕಾಗಿದೆ (೪೧–೪೨). ನಾನು ನಿನ್ನೊಡನೆ ಬರುವುದು ಯುಕ್ತವಲ್ಲ. ವಾಯುವೇಗದಿಂದ

ಅಯುಕ್ತಂ ತು ಕಪಿಶ್ರೇಷ್ಠ ಮಮ ಗಂತುಂ ತ್ವಯಾನಘ ।
ವಾಯುವೇಗಸವೇಗಸ್ಯ ವೇಗೋ ಮಾಂ ಮೋಹಯೇತ್ತವ ॥ ೪೩

ಅಹಮಾಕಾಶಮಾಪನ್ನಾ ಹ್ಯುಪರ್ಯುಪರಿ ಸಾಗರಮ್ ।
ಪ್ರಪತೇಯಂ ಹಿ ತೇ ಪೃಷ್ಠಾದ್ಭಯಾದ್ವೇಗೇನ ಗಚ್ಛತಃ ॥ ೪೪

ಪತಿತಾ ಸಾಗರೇ ಚಾಹಂ ತಿಮಿನಕ್ರಝಷಾಕುಲೇ ।
ಭವೇಯಮಾಶು ವಿವಶಾ ಯಾದಸಾಮನ್ನಮುತ್ತಮಮ್ ॥ ೪೫

ನ ಚ ಶಕ್ಷ್ಯೇ ತ್ವಯಾ ಸಾರ್ಧಂ ಗಂತುಂ ಶತ್ರುವಿನಾಶನ ।
ಕಲತ್ರವತಿ ಸಂದೇಹಸ್ತ್ವಯ್ಯಪಿ ಸ್ಯಾದಸಂಶಯಃ ॥ ೪೬

ಹ್ರಿಯಮಾಣಾಂ ತು ಮಾಂ ದೃಷ್ಟ್ವಾ ರಾಕ್ಷಸಾ ಭೀಮವಿಕ್ರಮಾಃ ।
ಅನುಗಚ್ಛೇಯುರಾದಿಷ್ಟಾ ರಾವಣೇನ ದುರಾತ್ಮನಾ ॥ ೪೭

ತೈಸ್ತ್ವಂ ಪರಿವೃತಃ ಶೂರೈಃ ಶೂಲಮುದ್ಗರಪಾಣಿಭಿಃ ।
ಭವೇಸ್ತ್ವಂ ಸಂಶಯಂ ಪ್ರಾಪ್ತೋ ಮಯಾ ವೀರ ಕಲತ್ರವಾನ್ ॥ ೪೮

ನೀನು ಹೋಗುವಾಗ, ನನಗೆ ಪ್ರಜ್ಞೆ ತಪ್ಪಬಹುದು. ಮಹಾಸಾಗರದಮೇಲೆ ಆಕಾಶದಲ್ಲಿ ಹೋಗುತ್ತಿರುವಾಗ, ಹೆದರಿಕೆಯಿಂದ ನಾನು ಕೆಳಗೆ ಬಿದ್ದುಬಿಡಬಹುದು (೪೩–೪೪). ಆಗ ತಿಮಿಂಗಲ ಮೊಸಳೆ ಮುಂತಾದ ಪ್ರಾಣಿಗಳಿಗೆ ನಾನು ಒಳ್ಳೆಯ ಆಹಾರವಾದೇನು. ಅಲ್ಲದೆ ಒಬ್ಬ ಹೆಂಗಸನ್ನು ಕರೆದುಕೊಂಡು ಹೋಗುತ್ತಿದ್ದರೆ ನಿನ್ನ ವಿಷಯದಲ್ಲಿಯೂ ಪ್ರೇಕ್ಷಕರಿಗೆ ಸಂದೇಹ ಹುಟ್ಟುತ್ತದೆ. ಆದ್ದರಿಂದ ನಿನ್ನೊಡನೆ ನಾನು ಬರಲಾರೆ (೪೫–೪೬). ನನ್ನನ್ನು ನೀನು ಒಯ್ಯುವುದನ್ನು ಕಂಡು ದುರಾತ್ಮನಾದ ರಾವಣನು ಕಳಿಸಿದ ಘೋರ ರಾಕ್ಷಸರು ಅಟ್ಟಿಸಿಕೊಂಡು ಬರಬಹುದು. ಶೂಲ ಮುದ್ಗರ ಮುಂತಾದ ಆಯುಧಗಳನ್ನು ಹಿಡಿದು ರಾಕ್ಷಸರು ಸುತ್ತಲೂ

---

* ಮೂಲದಲ್ಲಿ ಕಲತ್ರ ಎಂಬ ಶಬ್ದವಿದೆ. ಕಲತ್ರ=ಹೆಂಡತಿ, ರಕ್ಷಣೀಯ ವಸ್ತು. ಸ್ತ್ರೀಸಾಮಾನ್ಯ ಎಂಬ ಅರ್ಥವನ್ನು ಇಲ್ಲಿ ಗ್ರಹಿಸಿದೆ. ರಕ್ಷಣೀಯವಸ್ತು ಎಂಬ ಅರ್ಥವನ್ನೂ ಗ್ರಹಿಸಲು ಸಾಧ್ಯವಿದೆ.

ಸಾಯುಧಾ ಬಹವೋ ವ್ಯೋಮ್ನಿ ರಾಕ್ಷಸಾಸ್ತ್ವಂ ನಿರಾಯುಧಃ ।
ಕಥಂ ಶಕ್ಷ್ಯಸಿ ಸಂಯಾತುಂ ಮಾಂ ಚೈವ ಪರಿರಕ್ಷಿತುಮ್ ॥ ೪೯

ಯುಧ್ಯಮಾನಸ್ಯ ರಕ್ಷೋಭಿಸ್ತವ ತೈಃ ಕ್ರೂರಕರ್ಮಭಿಃ ।
ಪ್ರಪತೇಯಂ ಹಿ ತೇ ಪೃಷ್ಠಾದ್ಭಯಾರ್ತಾ ಕಪಿಸತ್ತಮ ॥ ೫೦

ಅಥ ರಕ್ಷಾಂಸಿ ಭೀಮಾನಿ ಮಹಾಂತಿ ಬಲವಂತಿ ಚ ।
ಕಥಂಚಿತ್ ಸಾಂಪರಾಯೇ ತ್ವಾಂ ಜಯೇಯುಃ ಕಪಿಸತ್ತಮ ॥ ೫೧

ಅಥವಾ ಯುಧ್ಯಮಾನಸ್ಯ ಪತೇಯಂ ವಿಮುಖಸ್ಯ ತೇ ।
ಪತಿತಾಂ ಚ ಗೃಹೀತ್ವಾ ಮಾಂ ನಯೇಯುಃ ಪಾಪರಾಕ್ಷಸಾಃ ॥ ೫೨

ಮಾಂ ವಾ ಹರೇಯುಸ್ತ್ವದ್ಧಸ್ತಾದ್ವಿಶಸೇಯುರಥಾಪಿ ವಾ ।
ಅವ್ಯವಸ್ಥೌ ಹಿ ದೃಶ್ಯೇತೇ ಯುದ್ಧೇ ಜಯಪರಾಜಯೌ ॥ ೫೩

ಅಹಂ ವಾಪಿ ವಿಪದ್ಯೇಯ ರಕ್ಷೋಭಿರಭಿತರ್ಜಿತಾ ।
ತ್ವತ್ಪ್ರಯತ್ನೋ ಹರಿಶ್ರೇಷ್ಠ ಭವೇನ್ನಿಷ್ಫಲ ಏವ ತು ॥ ೫೪

ಮುತ್ತಿಕೊಂಡಾಗ, ಜೊತೆಯಲ್ಲಿ ಹೆಂಗಸನ್ನು ರಕ್ಷಿಸಿಕೊಳ್ಳಬೇಕಾದ ನೀನು ವಿಪತ್ತಿನಲ್ಲಿ ಸಿಕ್ಕಿಕೊಳ್ಳುತ್ತೀಯೆ (೪೭–೪೮). ಅವರಾದರೋ ಆಯುಧಧಾರಿಗಳಾದ ಬಹು ಮಂದಿ ರಾಕ್ಷಸರು. ನೀನು ಆಕಾಶಮಧ್ಯದಲ್ಲಿ ನಿರಾಯುಧನಾಗಿ ಒಂಟಿಯಾಗಿರುತ್ತೀಯೆ. ಆಗ ನೀನು ಯುದ್ಧಮಾಡುವುದು ಹೇಗೆ? ನನ್ನನ್ನು ಉಳಿಸಿಕೊಳ್ಳುವುದು ಹೇಗೆ? (೪೯). ಕಪಿವೀರನೆ, ಆ ಕ್ರೂರಿಗಳೊಡನೆ ನೀನು ಹೋರಾಡುವಾಗ ನಾನು ಭಯದಿಂದ ಕೆಳಗೆ ಬಿದ್ದುಬಿಡಬಹುದು. ಆ ರಾಕ್ಷಸರು ಭಯಂಕರರೂ, ಬಲಶಾಲಿಗಳೂ ಆದ್ದರಿಂದ ಒಂದು ವೇಳೆ ಯುದ್ಧದಲ್ಲಿ ಗೆದ್ದುಬಿಟ್ಟಾರು. ನೀನು ಯುದ್ಧದಲ್ಲಿ ತಲ್ಲೀನನಾದಾಗ ನಾನು ಜಾರಿಬಿದ್ದರೆ, ಆ ಪಾಪಿಗಳು ನನ್ನನ್ನು ಎತ್ತಿಕೊಂಡು ಹೋಗಿಬಿಡಬಹುದು (೫೦–೫೨). ಯುದ್ಧದಲ್ಲಿ ಸೋಲಾಗಲಿ ಗೆಲುವಾಗಲಿ ನಿಶ್ಚಿತವಲ್ಲ. ನಿನ್ನ ಕೈಯಿಂದ ನನ್ನನ್ನು ಸೆಳೆದುಕೊಂಡು ಹೋದರೂ ಹೋಗಬಹುದು. ಕೊನೆಗೆ ನನ್ನನ್ನೇ ಕೊಲ್ಲಬಹುದು. ಇಲ್ಲವೇ, ಆ ರಾಕ್ಷಸರ ಗರ್ಜನೆಯನ್ನು ಕೇಳಿಯೇ ನನ್ನ

ಕಾಮಂ ತ್ವಮಸಿ ಪರ್ಯಾಪ್ತೋ ನಿಹಂತುಂ ಸರ್ವರಾಕ್ಷಸಾನ್ ।
ರಾಘವಸ್ಯ ಯಶೋ ಹೀಯೇತ್ತ್ವಯಾ ಶಸ್ತೈಸ್ತು ರಾಕ್ಷಸೈಃ ॥ ೫೫

ಅಥವಾದಾಯ ರಕ್ಷಾಂಸಿ ನ್ಯಸೇಯುಃ ಸಂವೃತೇ ಹಿ ಮಾಮ್ ।
ಯತ್ರ ತೇ ನಾಭಿಜಾನೀಯುರ್ಹರಯೋ ನಾಪಿ ರಾಘವೌ ॥ ೫೬

ಆರಂಭಸ್ತು ಮದರ್ಥೋಽಯಂ ತತಸ್ತವ ನಿರರ್ಥಕಃ ।
ತ್ವಯಾ ಹಿ ಸಹ ರಾಮಸ್ಯ ಮಹಾನಾಗಮನೇ ಗುಣಃ ॥ ೫೭

ಮಯಿ ಜೀವಿತಮಾಯತ್ತಂ ರಾಘವಸ್ಯ ಮಹಾತ್ಮನಃ ।
ಭ್ರಾತೄಣಾಂ ಚ ಮಹಾಬಾಹೋ ತವ ರಾಜಕುಲಸ್ಯ ಚ ॥ ೫೮

ತೌ ನಿರಾಶೌ ಮದರ್ಥಂ ತು ಶೋಕಸಂತಾಪಕರ್ಶಿತೌ ।
ಸಹ ಸರ್ವರ್ಕ್ಷಹರಿಭಿಸ್ತ್ಯಕ್ಷ್ಯತಃ ಪ್ರಾಣಸಂಗ್ರಹಮ್ ॥ ೫೯

ಭರ್ತೃಭಕ್ತಿಂ ಪುರಸ್ಕೃತ್ಯ ರಾಮಾದನ್ಯಸ್ಯ ವಾನರ ।
ನ ಸ್ಪೃಶಾಮಿ ಶರೀರಂ ತು ಪುಂಸೋ ವಾನರಪುಂಗವ ॥ ೬೦

ಪ್ರಾಣಹೋಗಬಹುದು. ಹೇಗಾದರೂ ನಿನಗೊದಗುವ ಸಾಹಸ ವ್ಯರ್ಥವೇ ಆಗುತ್ತದೆ (೫೩–೫೪). ಸಮಸ್ತ ರಾಕ್ಷಸರನ್ನೂ ಕೊಂದುಹಾಕಲು ನೀನು ಸಮರ್ಥನೇ ಹೌದು. ಆದರೂ ನೀನು ರಾಕ್ಷಸರನ್ನೆಲ್ಲಾ ಕೊಂದರೆ ಶ್ರೀರಾಮನ ಕೀರ್ತಿಗೆ ಕೊರತೆಯಾಗುತ್ತದೆಯಲ್ಲವೆ? ನಿನ್ನನ್ನು ವಂಚಿಸಿ ವಾನರರಿಗಾಗಲಿ ರಾಮಲಕ್ಷ್ಮಣರಿಗಾಗಲಿ ತಿಳಿಯದಂತೆ ಈ ರಾಕ್ಷಸರು ನನ್ನನ್ನು ಗೂಢವಾಗಿ ಅಡಗಿಸಿಟ್ಟರೆ, ಆಗಲೂ ನೀನು ಇದುವರೆಗೆ ಮಾಡಿದ ಪ್ರಯತ್ನವೆಲ್ಲವೂ ನಿಷ್ಫಲವಾಗುತ್ತದೆ. ಆದ್ದರಿಂದ ನಿನ್ನೊಡನೆ ರಾಮನೇ ಇಲ್ಲಿಗೆ ಬರುವುದರಲ್ಲಿ ಬಹಳ ಗುಣವಿದೆ (೫೫–೫೭). ಹೇ ವೀರಾಗ್ರಣಿ ! ಶ್ರೀರಾಮ, ಅವನ ತಮ್ಮಂದಿರು, ನಿನ್ನ ಪ್ರಭುವಾದ ಸುಗ್ರೀವನ ಪರಿವಾರ—ಇವರೆಲ್ಲರ ಪ್ರಾಣವೂ ಈಗ ನನ್ನ ಪ್ರಾಣದ ಮೇಲೆ ನಿಂತಿದೆ. ಶೋಕದಿಂದ ಕೃಶರಾದ ರಾಮಲಕ್ಷ್ಮಣರಿಗೆ ನನ್ನ ವಿಷಯದಲ್ಲಿ ನಿರಾಸೆಯಾದರೆ, ಅವರು ವಾನರಭಲ್ಲೂಕ

ಯದಹಂ ಗಾತ್ರಸಂಸ್ಪರ್ಶಂ ರಾವಣಸ್ಯ ಬಲಾದ್ಗತಾ ।
ಅನೀಶಾ ಕಿಂ ಕರಿಷ್ಯಾಮಿ ವಿನಾಥಾ ವಿವಶಾ ಸತೀ ॥ ೬೧

ಯದಿ ರಾಮೋ ದಶಗ್ರೀವಮಿಹ ಹತ್ವಾ ಸಬಾಂಧವಮ್ ।
ಮಾಮಿತೋ ಗೃಹ್ಯ ಗಚ್ಛೇತ ತತ್ತಸ್ಯ ಸದೃಶಂ ಭವೇತ್ ॥ ೬೨

ಶ್ರುತ್ವಾ ಹಿ ದೃಷ್ಟಾಶ್ಚ ಮಯಾ ಪರಾಕ್ರಮಾ
ಮಹಾತ್ಮನಸ್ತಸ್ಯ ರಣಾವಮರ್ದಿನಃ ।
ನ ದೇವಗಂಧರ್ವಭುಜಂಗರಾಕ್ಷಸಾ
ಭವಂತಿ ರಾಮೇಣ ಸಮಾ ಹಿ ಸಂಯುಗೇ ॥ ೬೩

ಸಮೀಕ್ಷ್ಯ ತಂ ಸಂಯತಿ ಚಿತ್ರಕಾರ್ಮುಕಂ
ಮಹಾಬಲಂ ವಾಸವತುಲ್ಯವಿಕ್ರಮಮ್ ॥
ಸಲಕ್ಷ್ಮಣಂ ಕೋ ವಿಷಹೇತ ರಾಘವಂ
ಹುತಾಶನಂ ದೀಪ್ತಮಿವಾನಿಲೇರಿತಮ್ ॥ ೬೪

ಗಳೊಡನೆ ಪ್ರಾಣವನ್ನು ಬಿಡುತ್ತಾರೆ. ಹನುಮಂತ, ಪತಿಭಕ್ತಿಯೊಂದನ್ನೇ ಗೌರವಿಸಿರುವ ನಾನು ರಾಮನ ಹೊರತು ಇನ್ನೊಬ್ಬನ ದೇಹವನ್ನು ಮುಟ್ಟುವುದಿಲ್ಲ (೫೮–೬೦). ರಾವಣನು ಬಲಾತ್ಕಾರವಾಗಿ ನನ್ನನ್ನು ಎತ್ತಿತಂದಾಗ ಅವನ ದೇಹಸ್ಪರ್ಶವಾಗಿದ್ದರೆ, ನಾನು ಏನು ಮಾಡಲಿ ? ಅನಾಥಳೂ ಕೈಲಾಗದವಳೂ ಪರಾಧೀನಳೂ ಆಗಿದ್ದೆ. ರಾಮನೇ ಬಂದು ದಶಕಂಠನನ್ನು ಬಂಧುಸಮೇತವಾಗಿ ವಧಿಸಿ ನನ್ನನ್ನು ಬಿಡಿಸಿಕೊಂಡು ಹೋದರೆ, ರಾಮನ ಯೋಗ್ಯತೆಗೆ ತಕ್ಕ ರೀತಿಯಾದೀತು (೬೧–೬೨). ರಣಧೀರನಾದ ಆ ಮಹಾತ್ಮನ ಪರಾಕ್ರಮ ಕಾರ್ಯಗಳನ್ನು ನಾನು ಕೇಳಿದ್ದೇನೆ ; ಕಣ್ಣಿಂದ ನೋಡಿಯೂ ಇದ್ದೇನೆ. ಯುದ್ಧದಲ್ಲಿ ದೇವ, ಗಂಧರ್ವ, ಭುಜಂಗ, ರಾಕ್ಷಸರು ಯಾರೂ ರಾಮನಿಗೆ ಸಮರಲ್ಲ (೬೩). ದೇವೇಂದ್ರನಂತೆ ಪರಾಕ್ರಮಶಾಲಿಯಾದ ರಾಮನು ಧನುಸ್ಸನ್ನು ಹಿಡಿದು, ವಾಯುವಿನ ಸಹಾಯದಿಂದ ಜ್ವಲಿಸುವ ಅಗ್ನಿಯಂತೆ, ಲಕ್ಷ್ಮಣಸಹಿತನಾಗಿ ಯುದ್ಧಕ್ಕೆ ನಿಂತರೆ ಅವನನ್ನು

ಸಲಕ್ಷ್ಮಣಂ ರಾಘವಮಾಜಿಮರ್ದನಂ
ದಿಶಾಗಜಂ ಮತ್ತಮಿವ ವ್ಯವಸ್ಥಿತಮ್ ।
ಸಹೇತ ಕೋ ವಾನರಮುಖ್ಯ ಸಂಯುಗೇ
ಯುಗಾಂತಸೂರ್ಯಪ್ರತಿಮಂ ಶರಾರ್ಚಿಷಮ್ ॥　　೬೫

ಸ ಮೇ ಹರಿಶ್ರೇಷ್ಠ ಸಲಕ್ಷ್ಮಣಂ ಪತಿಂ
ಸಯೂಥಪಂ ಕ್ಷಿಪ್ರಮಿಹೋಪಪಾದಯ ।
ಚಿರಾಯ ರಾಮಂ ಪ್ರತಿ ಶೋಕಕರ್ಶಿತಾಂ
ಕುರುಷ್ವ ಮಾಂ ವಾನರಮುಖ್ಯ ಹರ್ಷಿತಾಮ್ ॥　　೬೬

ಇತಿ ಶ್ರೀಮದ್ರಾಮಾಯಣೇ ಸುಂದರಕಾಂಡೇ ಸಪ್ತತ್ರಿಂಶಃ ಸರ್ಗಃ

ಎದುರಿಸುವವನಾರು ? (೬೪). ಶತ್ರುಮರ್ದನನಾದ ರಘುನಾಥನು ಲಕ್ಷ್ಮಣ ಸಮೇತನಾಗಿ, ಮದಿಸಿದ ದಿಗ್ಗಜದಂತೆ ನಿಂತು, ಪ್ರಳಯಕಾಲದ ಸೂರ್ಯನಂತೆ, ಕಿರಣಗಳಂತಿರುವ ಅಸ್ತ್ರಗಳನ್ನು ಚೆಲ್ಲುತ್ತಿದ್ದರೆ—ಯಾವನು ತಡೆದುಕೊಂಡಾನು ? (೬೫). ಕಪಿಶ್ರೇಷ್ಠ, ನನ್ನ ಪತಿಯು ಲಕ್ಷ್ಮಣಸುಗ್ರೀವ ಸಮೇತನಾಗಿ ಬೇಗನೆ ಇಲ್ಲಿಗೆ ಬರುವಂತೆ ಮಾಡು. ಹನುಮಂತ, ಬಹುದಿನಗಳಿಂದಲೂ ದುಃಖದಿಂದ ಕುಗ್ಗಿ ಹಂಬಲಿಸುತ್ತಿರುವ ನನಗೆ ಸಂತೋಷವನ್ನುಂಟುಮಾಡು'' ಎಂದು ಹೇಳಿದಳು (೬೬).

ಇಲ್ಲಿಗೆ ಶ್ರೀಮದ್ರಾಮಾಯಣದ ಸುಂದರಕಾಂಡದಲ್ಲಿ ಮೂವತ್ತೇಳನೆಯ ಸರ್ಗ

ಅಷ್ಟಾತ್ರಿಂಶಃ ಸರ್ಗಃ

ವಾಯಸವೃತ್ತಾಂತಕಥನಮ್

ತತಃ ಸ ಕಪಿಶಾರ್ದೂಲಸ್ತೇನ ವಾಕ್ಯೇನ ಹರ್ಷಿತಃ ।
ಸೀತಾಮುವಾಚ ತಚ್ಛ್ರುತ್ವಾ ವಾಕ್ಯಂ ವಾಕ್ಯವಿಶಾರದಃ ॥ ೧

ಯುಕ್ತರೂಪಂ ತ್ವಯಾ ದೇವಿ ಭಾಷಿತಂ ಶುಭದರ್ಶನೇ ।
ಸದೃಶಂ ಸ್ತ್ರೀಸ್ವಭಾವಸ್ಯ ಸಾಧ್ವೀನಾಂ ವಿನಯಸ್ಯ ಚ ॥ ೨

ಸ್ತ್ರೀತ್ವಾನ್ನ ತ್ವಂ ಸಮರ್ಥಾಸಿ ಸಾಗರಂ ವ್ಯತಿವರ್ತಿತುಮ್ ।
ಮಾಮಧಿಷ್ಠಾಯ ವಿಸ್ತೀರ್ಣಂ ಶತಯೋಜನಮಾಯತಮ್ ॥ ೩

ದ್ವಿತೀಯಂ ಕಾರಣಂ ಯಚ್ಚ ಬ್ರವೀಷಿ ವಿನಯಾನ್ವಿತೇ ।
ರಾಮಾದನ್ಯಸ್ಯ ನಾರ್ಹಾಮಿ ಸಂಸ್ಪರ್ಶಮಿತಿ ಜಾನಕಿ ॥ ೪

ಏತತ್ತೇ ದೇವಿ ಸದೃಶಂ ಪತ್ನ್ಯಾಸ್ತಸ್ಯ ಮಹಾತ್ಮನಃ ।
ಕಾ ಹ್ಯನ್ಯಾ ತ್ವಾಮೃತೇ ದೇವಿ ಬ್ರೂಯಾದ್ವಚನಮೀದೃಶಮ್ ॥ ೫

ಸರ್ಗ ೩೮

ರಾಮನಿಗೆ ನಂಬಿಕೆಯಾಗುವುದಕ್ಕಾಗಿ ಒಂದು ಗುರುತನ್ನು ಕೊಡಬೇಕೆಂದು
ಹನುಮಂತನು ಕೇಳಲು, ಸೀತೆಯು ಕಾಕಾಸುರವೃತ್ತಾಂತವನ್ನು ಹೇಳಿ
ಚೂಡಾಮಣಿಯನ್ನು ಕೊಡುವುದು.

ಆಂಜನೇಯನು ಸೀತೆಯ ಮಾತಿನಿಂದ ಸಂತುಷ್ಟನಾಗಿ, "ದೇವಿ, ನೀನು ಯೋಗ್ಯವಾದ ಮಾತನ್ನಾಡಿದೆ. ಇದು ಸ್ತ್ರೀಯರ ಸ್ವಭಾವಕ್ಕೂ ಪತಿವ್ರತೆಯರ ವಿನಯಗುಣಕ್ಕೂ ಒಪ್ಪತಕ್ಕ ಮಾತು (೧–೨). ನನ್ನ ಮೇಲೆ ಕುಳಿತು ಸಾವಿರ ಯೋಜನದಗಲದ ಸಮುದ್ರವನ್ನು ದಾಟುವುದು ಸ್ತ್ರೀಯಾದ ನಿನಗೆ ಸಾಧ್ಯವಲ್ಲ. ಶ್ರೀರಾಮನನ್ನು ಬಿಟ್ಟು ಇನ್ನೊಬ್ಬನನ್ನು ಸ್ಪರ್ಶ ಮಾಡುವುದಿಲ್ಲವೆಂದು ನೀನು ಹೇಳುವ ಎರಡನೆಯ ಕಾರಣವು ಕೂಡ ಆ ಮಹಾತ್ಮನ ಪತ್ನಿಯಾದ ನಿನಗೆ ಯೋಗ್ಯವಾದದ್ದೇ ಸರಿ. ಇಂತಹ ಮಾತನ್ನು ನೀನಲ್ಲದೆ ಇನ್ನು ಯಾವಳು ತಾನೇ ಹೇಳುತ್ತಾಳೆ ? (೩–೫).

ಶ್ರೋಷ್ಯತೇ ಚೈವ ಕಾಕುತ್ಸ್ಥಃ ಸರ್ವಂ ನಿರವಶೇಷತಃ ।
ಚೇಷ್ಟಿತಂ ಯತ್ತ್ವಯಾ ದೇವಿ ಭಾಷಿತಂ ಚ ಮಮಾಗ್ರತಃ ॥ ೬
ಕಾರಣೈರ್ಬಹುಭಿರ್ದೇವಿ ರಾಮಪ್ರಿಯಚಿಕೀರ್ಷಯಾ ।
ಸ್ನೇಹಪ್ರಸ್ಕನ್ನಮನಸಾ ಮಯ್ಯೈತತ್ ಸಮುದೀರಿತಮ್ ॥ ೭
ಲಂಕಾಯಾ ದುಷ್ಪ್ರವೇಶತ್ವಾದ್ದುಸ್ತರತ್ವಾನ್ಮಹೋದಧೇಃ ।
ಸಾಮರ್ಥ್ಯಾದಾತ್ಮನಶ್ಚೈವ ಮಯ್ಯೈತತ್ ಸಮುದೀರಿತಮ್ ॥ ೮
ಇಚ್ಛಾಮಿ ತ್ವಾಂ ಸಮಾನೇತುಮದ್ಯೈವ ರಘುಬಂಧುನಾ ।
ಗುರುಸ್ನೇಹೇನ ಭಕ್ತ್ಯಾ ಚ ನಾನ್ಯಥೈತದುದಾಹೃತಮ್ ॥ ೯
ಯದಿ ನೋತ್ಸಹಸೇ ಯಾತುಂ ಮಯಾ ಸಾರ್ಧಮನಿಂದಿತೇ ।
ಅಭಿಜ್ಞಾನಂ ಪ್ರಯಚ್ಛ ತ್ವಂ ಜಾನೀಯಾದ್ರಾಘವೋ ಹಿ ಯತ್ ॥ ೧೦
ಏವಮುಕ್ತಾ ಹನುಮತಾ ಸೀತಾ ಸುರಸುತೋಪಮಾ ।
ಉವಾಚ ವಚನಂ ಮಂದಂ ಬಾಷ್ಪಪ್ರಗ್ರಥಿತಾಕ್ಷರಮ್ ॥ ೧೧

ದೇವಿ, ನೀನು ಆತ್ಮಹತ್ಯೆಗೆ ಪ್ರಯತ್ನಿಸಿದ್ದು ಮೊದಲಾದ ಸಮಸ್ತಕೃತ್ಯಗಳನ್ನೂ ನೀನು ಆಡಿದ ಎಲ್ಲ ಮಾತುಗಳನ್ನೂ ಶ್ರೀರಾಮನಿಗೆ ತಿಳಿಸುತ್ತೇನೆ. (ನಿನ್ನನ್ನು ಬೆನ್ನಮೇಲೆ ಏರಿಸಿಕೊಂಡು ಹೋಗುತ್ತೇನೆಂದು) ನಾನು ಹೇಳಿದುದು ಕೆಲವು ಕಾರಣಗಳಿಂದ, ಶ್ರೀರಾಮನಿಗೆ ಸಂತೋಷವನ್ನುಂಟುಮಾಡಬೇಕೆಂಬ ಅಪೇಕ್ಷೆಯಿಂದಲೂ, ನಿನ್ನ ಕಷ್ಟವನ್ನು ನೋಡಿ ಮನಸ್ಸು ಕರಗಿಹೋದ್ದರಿಂದಲೂ ಹೀಗೆ ಹೇಳಿದೆನು (೬–೭). ಲಂಕೆಯನ್ನು ಪ್ರವೇಶಿಸುವುದೂ ಸಮುದ್ರವನ್ನು ದಾಟುವುದೂ ಇತರರಿಗೆ ಅಶಕ್ಯವಾದ್ದರಿಂದ ನನ್ನ ಸಾಮರ್ಥ್ಯವನ್ನು ತೋರಿಸುವುದಕ್ಕೋಸ್ಕರ ಹೀಗೆ ಹೇಳಿಬಿಟ್ಟೆನು. ರಾಘವನಲ್ಲಿ ನನಗೆ ಇರುವ ಅಪಾರವಾದ ಸ್ನೇಹ ಭಕ್ತಿಗಳಿಂದ ಈಗಲೇ ನಿನ್ನನ್ನು ಅವನ ಬಳಿಗೆ ಸೇರಿಸಬೇಕೆಂದು ಇಚ್ಛೆಯಾಯಿತು. ಆದ್ದರಿಂದ ಈ ಮಾತನ್ನು ಹೇಳಿದೆನೇ ಹೊರತು ಬೇರೆಯಲ್ಲ (೮–೯). ನನ್ನೊಡನೆ ಬರುವುದು ನಿನಗೆ ಸಮ್ಮತವಾಗದಿದ್ದರೆ ನಿನ್ನನ್ನು ನೋಡಿಬಂದ ವಿಷಯದಲ್ಲಿ ರಾಮನಿಗೆ ನಂಬಿಕೆಯಾಗುವಂತೆ ಏನಾದರೂ ಒಂದು ಗುರುತನ್ನು ಕೊಡು'' ಎಂದು ಹೇಳಿದನು (೧೦). ಆಗ ಸೀತಾದೇವಿಯು ಕಣ್ಣಲ್ಲಿ ನೀರು ತುಂಬಿಕೊಂಡು ಗದ್ಗದಸ್ವರದಿಂದ ಮೆಲ್ಲಗೆ ಹೇಳತೊಡಗಿದಳು––''ಹನುಮಂತ,

ಇದಂ ಶ್ರೇಷ್ಠಮಭಿಜ್ಞಾನಂ ಬ್ರೂಯಾಸ್ತ್ವಂ ತು ಮಮ ಪ್ರಿಯಮ್ ।
ಶೈಲಸ್ಯ ಚಿತ್ರಕೂಟಸ್ಯ ಪಾದೇ ಪೂರ್ವೋತ್ತರೇ ಪುರಾ ॥ ೧೨
ತಾಪಸಾಶ್ರಮವಾಸಿನ್ಯಾಃ ಪ್ರಾಜ್ಯಮೂಲಫಲೋದಕೇ ।
ತಸ್ಮಿನ್ ಸಿದ್ಧಾಶ್ರಿತೇ ದೇಶೇ ಮಂದಾಕಿನ್ಯಾ ಹ್ಯದೂರತಃ ॥ ೧೩
ತಸ್ಯೋಪವನಷಂಡೇಷು ನಾನಾಪುಷ್ಪಸುಗಂಧಿಷು ।
ವಿಹೃತ್ಯ ಸಲಿಲಕ್ಲಿನ್ನಾ ತವಾಂಕೇ ಸಮುಪಾವಿಶಮ್ ॥ ೧೪
ತತೋ ಮಾಂ ಸ ಸಮಾಯುಕ್ತೋ ವಾಯಸಃ ಪರ್ಯತುಂಡಯತ್ ।
ತಮಹಂ ಲೋಷ್ಟಮುದ್ಯಮ್ಯ ವಾರಯಾಮಿ ಸ್ಮ ವಾಯಸಮ್ ॥ ೧೫
ದಾರಯನ್ ಸ ಚ ಮಾಂ ಕಾಕಸ್ತತ್ರೈವ ಪರಿಲೀಯತೇ ।
ನ ಚಾಪ್ಯುಪಾರಮನ್ಮಾಂಸಾದ್ಭಕ್ಷಾರ್ಥೀ ಬಲಿಭೋಜನಃ ॥ ೧೬
ಉತ್ಕರ್ಷಂತ್ಯಾಂ ಚ ರಶನಾಂ ಕ್ರುದ್ಧಾಯಾಂ ಮಯಿ ಪಕ್ಷಿಣೇ ।
ಸ್ರಸ್ಯಮಾನೇ ಚ ವಸನೇ ತತೋ ದೃಷ್ಟಾ ತ್ವಯಾ ಹ್ಯಹಮ್ ॥ ೧೭
ತ್ವಯಾಪಹಸಿತಾ ಚಾಹಂ ಕ್ರುದ್ಧಾ ಸಂಲಜ್ಜಿತಾ ತಥಾ ।
ಭಕ್ಷಗೃಧ್ನೇನ ಕಾಕೇನ ದಾರಿತಾ ತ್ವಾಮುಪಾಗತಾ ॥ ೧೮

ಇದೇ ದೊಡ್ಡ ಗುರುತು. ಇದನ್ನು ನನ್ನ ಪ್ರಿಯನಿಗೆ ಹೇಳು: 'ಹಿಂದೊಮ್ಮೆ ಚಿತ್ರಕೂಟದ ಈಶಾನ್ಯದ ಕಡೆಗಿರುವ ಒಂದು ಉಪಪರ್ವತದಮೇಲೆ, ಮಂದಾಕಿನೀನದಿಯ ಸಮೀಪದಲ್ಲಿದ್ದ ಸಿದ್ಧಾಶ್ರಮದಲ್ಲಿ ವಾಸವಾಗಿದ್ದೆವು. ಹಣ್ಣು ಹಂಪಲುಗಳಿಂದ ಸಮೃದ್ಧವಾದ ಆ ಸ್ಥಳದಲ್ಲಿ ಇರುವಾಗ, ಒಂದು ದಿನ ನಾನು ನಾನಾವಿಧ ಪುಷ್ಪಗಳ ಗಂಧವನ್ನು ಬೀರುವ ಉಪವನಗಳಲ್ಲಿ ವಿಹರಿಸಿ ಬೆವತು, ನಿನ್ನ ತೊಡೆಯ ಮೇಲೆ ಕುಳಿತಿದ್ದೆನು (೧೧–೧೪). ಆಗ ಒಂದು ಕಾಗೆಯು ಬಂದು ನನ್ನನ್ನು ಕುಕ್ಕತೊಡಗಿತು. ನಾನು ಒಂದು ಮಣ್ಣು ಹೆಂಟೆಯನ್ನು ತೆಗೆದುಕೊಂಡು ಅದನ್ನು ಓಡಿಸುವುದಕ್ಕೆ ಯತ್ನಿಸಿದೆನು. ಅದು ಮತ್ತೆ ಮತ್ತೆ ಕುಕ್ಕುತ್ತ ಅಲ್ಲಿಯೇ ಅಡಗಿಕೊಳ್ಳುತ್ತಿತ್ತು. ಆ ಕಾಗೆಯು ಮಾಂಸಾಪೇಕ್ಷೆಯಿಂದ ನನ್ನನ್ನು ಬಿಟ್ಟು ತೊಲಗಲೇ ಇಲ್ಲ (೧೫–೧೬). ನಾನು ಆ ಪಕ್ಷಿಯಮೇಲೆ ಕೋಪಗೊಂಡು ಹೊಡೆಯುವುದಕ್ಕಾಗಿ ಕಾಂಚಿಯನ್ನು ಬಿಚ್ಚಿ ಕೈಗೆ ತೆಗೆದುಕೊಳ್ಳಲು, ನನ್ನ ಸೀರೆಯು

ಆಸೀನಸ್ಯ ಚ ತೇ ಶ್ರಾಂತಾ ಪುನರುತ್ಸಂಗಮಾವಿಶಮ್ ।
ಕ್ರುಧ್ಯಂತೀ ಚ ಪ್ರಹೃಷ್ಟೇನ ತ್ವಯಾಹಂ ಪರಿಸಾಂತ್ವಿತಾ ॥ ೧೯
ಬಾಷ್ಪಪೂರ್ಣಮುಖೀ ಮಂದಂ ಚಕ್ಷುಷೀ ಪರಿಮಾರ್ಜತೀ ।
ಲಕ್ಷಿತಾಹಂ ತ್ವಯಾ ನಾಥ ವಾಯಸೇನ ಪ್ರಕೋಪಿತಾ ॥ ೨೦
ಪರಿಶ್ರಮಾತ್ ಪ್ರಸುಪ್ತಾ ಚ ರಾಘವಾಂಕೇಽಪ್ಯಹಂ ಚಿರಮ್ ।
ಪರ್ಯಾಯೇಣ ಪ್ರಸುಪ್ತಶ್ಚ ಮಮಾಂಕೇ ಭರತಾಗ್ರಜಃ ॥ ೨೧
ಸ ತತ್ರ ಪುನರೇವಾಥ ವಾಯಸಃ ಸಮುಪಾಗಮತ್ ।
ತತಃ ಸುಪ್ತಪ್ರಬುದ್ಧಾಂ ಮಾಂ ರಾಘವಾಂಕಾತ್ ಸಮುತ್ಥಿತಾಮ್ ॥ ೨೨
ವಾಯಸಃ ಸಹಸಾಗಮ್ಯ ವಿರರಾದ ಸ್ತನಾಂತರೇ ।
ಪುನಃ ಪುನರಥೋತ್ಪತ್ಯ ವಿದದಾರ ಸ ಮಾಂ ಭೃಶಮ್ ॥ ೨೩
ತತಃ ಸಮುಕ್ಷಿತೋ ರಾಮೋ ಮುಕ್ತೈಃ ಶೋಣಿತಬಿಂದುಭಿಃ ।
ವಾಯಸೇನ ತತಸ್ತೇನ ಬಲವತ್ ಕ್ಲಿಶ್ಯಮಾನಯಾ ॥ ೨೪
ಸ ಮಯಾ ಬೋಧಿತಃ ಶ್ರೀಮಾನ್ ಸುಖಸುಪ್ತಃ ಪರಂತಪಃ ।
ಸ ಮಾಂ ದೃಷ್ಟ್ವಾ ಮಹಾಬಾಹುರ್ವಿತುನ್ನಾಂ ಸ್ತನಯೋಸ್ತದಾ ॥ ೨೫

ಸಡಿಲಿತು. ಆಗ ನನ್ನನ್ನು ನೋಡಿ ನೀನು ಹಾಸ್ಯಮಾಡಿದೆ. ನನಗೆ ಇತ್ತ ಕೋಪ, ಇತ್ತ ನಾಚಿಕೆ. ಕಡೆಗೂ ಕಾಗೆಯನ್ನು ಓಡಿಸಲಿಕ್ಕಾಗದೆ ಗಾಯಗೊಂಡು ಸಾಕುಸಾಕಾಗಿ, ಮತ್ತೆ ನಿನ್ನ ತೊಡೆಯ ಮೇಲೆ ಬಂದು ಕುಳಿತೆನು. ನಾನು ಕಣ್ಣೀರು ತುಂಬಿಕೊಂಡು ಕಣ್ಣನ್ನು ಒರೆಸಿಕೊಳ್ಳುತ್ತ ಕೋಪಗೊಂಡಿರಲು, ನೀನು ನಗುತ್ತಲೇ ನನ್ನನ್ನು ಸಮಾಧಾನಪಡಿಸಿದೆ' ಎಂದು ರಾಮನಿಗೆ ಹೇಳು (೧೭–೨೦). ವಾನರೋತ್ತಮ, ಅನಂತರ ನಾನು ಆಯಾಸಗೊಂಡು ರಾಘವನ ತೊಡೆಯಮೇಲೆ ಬಹಳ ಹೊತ್ತು ಮಲಗಿದ್ದೆನು. ನಾನು ಎದ್ದಮೇಲೆ ರಾಘವನು ನನ್ನ ತೊಡೆಯಮೇಲೆ ಮಲಗಿ ನಿದ್ರಿಸಿದನು. ಪುನಃ ಆ ಕಾಗೆಯು ಬಂದು ನನ್ನ ಎದೆಯನ್ನು ಕುಕ್ಕತೊಡಗಿತು (೨೧–೨೩). ರಕ್ತದ ಹನಿಗಳು ರಾಮನ ಮೇಲೆ ಸುರಿದವು. ಹೀಗೆ ಬಾಧೆಪಡುತ್ತಿದ್ದ ನಾನು ಬೇರೆ ಉಪಾಯ ಕಾಣದೆ ಸುಖನಿದ್ರೆಯಲ್ಲಿದ್ದ ನನ್ನ ಪ್ರಿಯನನ್ನು ಎಚ್ಚರಗೊಳಿಸಿದೆನು. ಆ ವೀರನು ಎದ್ದು ನನ್ನ ಎದೆಯ ಗಾಯವನ್ನು ನೋಡಿ

ಆಶೀವಿಷ ಇವ ಕ್ರುದ್ಧಃ ಶ್ವಸನ್ ವಾಕ್ಯಮಭಾಷತ ।
ಕೇನ ತೇ ನಾಗನಾಸೋರು ವಿಕ್ಷತಂ ವೈ ಸ್ತನಾಂತರಮ್ ॥ ೨೬

ಕಃ ಕ್ರೀಡತಿ ಸರೋಷೇಣ ಪಂಚವಕ್ತ್ರೇಣ ಭೋಗಿನಾ ।
ವೀಕ್ಷಮಾಣಸ್ತತಸ್ತಂ ವೈ ವಾಯಸಂ ಸಮುದೈಕ್ಷತ ॥ ೨೭

ನಖೈಃ ಸರುಧಿರೈಸ್ತೀಕ್ಷ್ಣೈರ್ಮಾಮೇವಾಭಿಮುಖಂ ಸ್ಥಿತಮ್ ।
ಪುತ್ರಃ ಕಿಲ ಸ ಶಕ್ರಸ್ಯ ವಾಯಸಃ ಪತತಾಂ ವರಃ ॥ ೨೮

ಧರಾಂತರಗತಃ ಶೀಘ್ರಂ ಪವನಸ್ಯ ಗತೌ ಸಮಃ ।
ತತಸ್ತಸ್ಮಿನ್ ಮಹಾಬಾಹುಃ ಕೋಪಸಂವರ್ತಿತೇಕ್ಷಣಃ ॥ ೨೯

ವಾಯಸೇ ಕೃತವಾನ್ ಕ್ರೂರಾಂ ಮತಿಂ ಮತಿಮತಾಂ ವರಃ ।
ಸ ದರ್ಭಂ ಸಂಸ್ತರಾದ್ಗೃಹ್ಯ ಬ್ರಾಹ್ಮೇಣಾಸ್ತ್ರೇಣ ಯೋಜಯತ್ ॥ ೩೦

ಸ ದೀಪ್ತ ಇವ ಕಾಲಾಗ್ನಿರ್ಜಜ್ವಾಲಾಭಿಮುಖೋ ದ್ವಿಜಮ್ ।
ಸ ತಂ ಪ್ರದೀಪ್ತಂ ಚಿಕ್ಷೇಪ ದರ್ಭಂ ತಂ ವಾಯಸಂ ಪ್ರತಿ ॥ ೩೧

ಸರ್ಪದಂತೆ ಕ್ರುದ್ಧನಾದನು. 'ಸುಂದರಿ, ಯಾವನು ನಿನ್ನ ಎದೆಯನ್ನು ಗಾಯಗೊಳಿಸಿದವನು ? ಐದು ಹೆಡೆಯ ಕ್ರುದ್ಧಸರ್ಪದೊಡನೆ ಸರಸವಾಡುವವನು ಯಾವನು ?' ಎಂದು ಹೇಳುತ್ತ ಸುತ್ತಲೂ ನೋಡಿ ಆ ಕಾಗೆಯನ್ನು ಕಂಡನು (೨೪-೨೭). ಅದು ನನಗೆ ಅಭಿಮುಖವಾಗಿ ಕುಳಿತಿದ್ದಿತು. ಅದರ ತೀಕ್ಷ್ಣವಾದ ಉಗುರುಗಳು ರಕ್ತದಿಂದ ತೊಯ್ದಿದ್ದವು. ದೇವೇಂದ್ರನ ಮಗನಾದ ಜಯಂತನೇ ವಾಯಸವೇಷದಿಂದ ಭೂಲೋಕಕ್ಕೆ ಬಂದಿದ್ದನಂತೆ. ವೇಗದಲ್ಲಿ ಆ ವಾಯಸವು ವಾಯುದೇವನಿಗೆ ಸಮಾನವಾಗಿತ್ತು. ರಾಘವನು ಕೋಪದಿಂದ ಕಣ್ಣನ್ನು ತಿರುಗಿಸುತ್ತ, ಆ ಕಾಗೆಯನ್ನು ಕೊಲ್ಲಬೇಕೆಂದು ಘೋರವಾದ ನಿಶ್ಚಯವನ್ನು ತಳೆದನು. ತಾನು ಕುಳಿತಿದ್ದ ಚಾಪೆಯಿಂದ ಒಂದು ದರ್ಭೆಯನ್ನು ಸೆಳೆದುಕೊಂಡು ಬ್ರಹ್ಮಾಸ್ತ್ರದ ಮಂತ್ರದಿಂದ ಅಭಿಮಂತ್ರಿಸಿದನು (೨೮-೩೦). ಆಗ ದರ್ಭೆಯು ಕಾಲಾಗ್ನಿಯಂತೆ ಜ್ವಲಿಸಲಾರಂಭಿಸಲು, ಅದನ್ನು ವಾಯಸದ ಮೇಲೆ ಪ್ರಯೋಗಿಸಿದನು. ವಾಯಸವು ದಿಕ್ಕುಗೆಟ್ಟು ಓಡಿತು. ದರ್ಭೆಯು ಆಕಾಶ

ತತಸ್ತಂ ವಾಯಸಂ ದರ್ಭಃ ಸೋಽಂಬರೇಽನುಜಗಾಮ ತಮ್ ।
ಅನುಸೃಪ್ತಸ್ತದಾ ಕಾಕೋ ಜಗಾಮ ವಿವಿಧಾಂ ಗತಿಮ್ ॥ ೩೨

ತ್ರಾಣಕಾಮ ಇಮಂ ಲೋಕಂ ಸರ್ವಂ ವೈ ವಿಚಚಾರ ಹ ।
ಸ ಪಿತ್ರಾ ಚ ಪರಿತ್ಯಕ್ತಃ ಸುರೈಃ ಸರ್ವೈರ್ಮಹರ್ಷಿಭಿಃ ॥ ೩೩

ತ್ರೀನ್ ಲೋಕಾನ್ ಸಂಪರಿಕ್ರಮ್ಯ ತಮೇವ ಶರಣಂ ಗತಃ ।
ಸ ತಂ ನಿಪತಿತಂ ಭೂಮೌ ಶರಣ್ಯಃ ಶರಣಾಗತಮ್ ॥ ೩೪

ವಧಾರ್ಹಮಪಿ ಕಾಕುತ್ಸ್ಥಃ ಕೃಪಯಾ ಪರ್ಯಪಾಲಯತ್ ।
ಪರಿದ್ಯೂನಂ ವಿಷಣ್ಣಂ ಚ ಸ ತಮಾಯಾಂತಮಬ್ರವೀತ್ ॥ ೩೫

ಮೋಘಂ ಕರ್ತುಂ ನ ಶಕ್ಯಂ ತು ಬ್ರಾಹ್ಮಮಸ್ತ್ರಂ ತದುಚ್ಯತಾಮ್ ।
ಹಿನಸ್ತು ದಕ್ಷಿಣಾಕ್ಷಿ ತ್ವಚ್ಛರ ಇತ್ಯಥ ಸೋಽಬ್ರವೀತ್ ॥ ೩೬

ತತಸ್ತಸ್ಯಾಕ್ಷಿ ಕಾಕಸ್ಯ ಹಿನಸ್ತಿ ಸ್ಮ ಸ ದಕ್ಷಿಣಮ್ ।
ದತ್ತ್ವಾ ಸ ದಕ್ಷಿಣಂ ನೇತ್ರಂ ಪ್ರಾಣೇಭ್ಯಃ ಪರಿರಕ್ಷಿತಃ ॥ ೩೭

ಸ ರಾಮಾಯ ನಮಸ್ಕೃತ್ವಾ ರಾಜ್ಞೇ ದಶರಥಾಯ ಚ ।
ವಿಸೃಷ್ಟಸ್ತೇನ ವೀರೇಣ ಪ್ರತಿಪೇದೇ ಸ್ವಮಾಲಯಮ್ ॥ ೩೮

ಮಾರ್ಗದಲ್ಲಿ ಅದನ್ನು ಬೆನ್ನಟ್ಟಿತು (೩೧–೩೨). ವಾಯಸವು ತನ್ನನ್ನು ಯಾರಾದರೂ ಉಳಿಸಿಯಾರೆಂದು ಪ್ರಪಂಚವನ್ನೆಲ್ಲಾ ಸುತ್ತಿತು. ಅದರ ತಂದೆಯಾದ ಇಂದ್ರನೂ, ದೇವತೆಗಳೂ, ಮಹರ್ಷಿಗಳೂ ಕೈಬಿಟ್ಟರು. ಕಾಗೆಯು ಮೂರು ಲೋಕಗಳನ್ನೂ ಸುತ್ತಿ ಕಡೆಗೆ ಶ್ರೀರಾಮನಿಗೇ ಶರಣುಬಂದು ನೆಲದಮೇಲೆ ಅಡ್ಡಬಿದ್ದಿತು. ಶರಣಾಗತವತ್ಸಲನಾದ ರಾಮನು ಕೃಪೆದೋರಿ ವಧಾರ್ಹವಾಗಿದ್ದರೂ ಆ ಕಾಗೆಯನ್ನು ಕಾಪಾಡಿದನು. ಬಳಲಿ ಬೆಂಡಾಗಿ ಬಂದ ಕಾಗೆಯನ್ನು ಕುರಿತು ಹೀಗೆ ಹೇಳಿದನು (೩೩–೩೫): 'ಎಲೈ, ಈ ಬ್ರಹ್ಮಾಸ್ತ್ರವು ಎಂದಿಗೂ ನಿರರ್ಥಕವಾಗಲಾರದು. ಇದು ಯಾವುದನ್ನು ನಾಶಮಾಡಲಿ ? ಹೇಳು.' ಆಗ ಕಾಗೆಯು 'ನಿನ್ನ ಅಸ್ತ್ರವು ನನ್ನ ಬಲಗಣ್ಣನ್ನು ನಾಶಮಾಡಲಿ' ಎನ್ನಲಾಗಿ ಅಸ್ತ್ರವು ಅದರ ಬಲಗಣ್ಣನ್ನು ನಾಶಪಡಿಸಿತು. ಹೀಗೆ ವಾಯಸವು ಬಲಗಣ್ಣನ್ನು ಬಲಿಯಾಗಿ ಕೊಟ್ಟು ಪ್ರಾಣಸಹಿತ ಉಳಿದುಕೊಂಡಿತು (೩೬–೩೭). ಆಮೇಲೆ ಆ ಜಯಂತನು

ಮತ್ಕೃತೇ ಕಾಕಮಾತ್ರೇ ತು ಬ್ರಹ್ಮಾಸ್ತ್ರಂ ಸಮುದೀರಿತಮ್ ।
ಕಸ್ಮಾದ್ಯೋ ಮಾಂ ಹರೇತ್ತ್ವತ್ತಃ ಕ್ಷಮಸೇ ತಂ ಮಹೀಪತೇ ॥ ೩೯

ಸ ಕುರುಷ್ವ ಮಹೋತ್ಸಾಹಂ ಕೃಪಾಂ ಮಯಿ ನರರ್ಷಭ ।
ತ್ವಯಾ ನಾಥವತೀ ನಾಥ ಹ್ಯನಾಥಾ ಇವ ದೃಶ್ಯತೇ ॥ ೪೦

ಆನೃಶಂಸ್ಯಂ ಪರೋ ಧರ್ಮಸ್ತ್ವತ್ತ ಏವ ಮಯಾ ಶ್ರುತಃ ।
ಜಾನಾಮಿ ತ್ವಾಂ ಮಹಾವೀರ್ಯಂ ಮಹೋತ್ಸಾಹಂ ಮಹಾಬಲಮ್ ॥

ಅಪಾರಪಾರಮಕ್ಷೋಭ್ಯಂ ಗಾಂಭೀರ್ಯಾತ್ಸಾಗರೋಪಮಮ್ ।
ಭರ್ತಾರಂ ಸಸಮುದ್ರಾಯ ಧರಣ್ಯಾ ವಾಸವೋಪಮಮ್ ॥ ೪೨

ಏವಮಸ್ತ್ರವಿದಾಂ ಶ್ರೇಷ್ಠಃ ಸತ್ಯವಾನ್ ಬಲವಾನಪಿ ।
ಕಿಮರ್ಥಮಸ್ತ್ರಂ ರಕ್ಷಸ್ಸು ನ ಯೋಜಯಸಿ ರಾಘವ ॥ ೪೩

ನ ನಾಗಾ ನಾಪಿ ಗಂಧರ್ವಾ ನಾಸುರಾ ನ ಮರುದ್ಗಣಾಃ ।
ರಾಮಸ್ಯ ಸಮರೇ ವೇಗಂ ಶಕ್ತಾಃ ಪ್ರತಿಸಮೀಹಿತುಮ್ ॥ ೪೪

ಶ್ರೀರಾಮನಿಗೂ ದಶರಥ ಮಹಾರಾಜನಿಗೂ ವಂದಿಸಿ ಅನುಜ್ಞೆಯನ್ನು ಪಡೆದು ತನ್ನ ಲೋಕಕ್ಕೆ ಹೊರಟುಹೋದನು. (ಹನುಮಂತ, ಈ ವೃತ್ತಾಂತವನ್ನು ರಾಮನಿಗೆ ತಿಳಿಸಿ ನಾನು ಹೇಳಿದೆನೆಂದು ಹೀಗೆ ಹೇಳು.) 'ನಾಥ ನನಗೋಸ್ಕರ ಒಂದು ಕಾಗೆಯ ಮೇಲೆ ಬ್ರಹ್ಮಾಸ್ತ್ರವನ್ನೇ ಪ್ರಯೋಗಿಸಿದೆ. ಈಗ ನಿನ್ನನ್ನು ವಂಚಿಸಿ ನನ್ನನ್ನು ಕದ್ದುತಂದವನನ್ನು ಕ್ಷಮಿಸುವುದಾದರೂ ಏಕೆ ? (೩೮–೩೯). ನನ್ನನ್ನು ಪಾರು ಮಾಡಲು ಉತ್ಸಾಹ ಗೊಂಡು, ನನ್ನ ಮೇಲೆ ದಯೆಯನ್ನು ತೋರಿಸು. ನೀನೇ ನನಗೆ ದಿಕ್ಕು. ಈಗ ದಿಕ್ಕಿಲ್ಲದವಳಂತೆ ಆಗಿದ್ದೇನೆ. ದಯೆಯೆಂಬುದು ಶ್ರೇಷ್ಠವಾದ ಧರ್ಮವೆಂದು ನಿನ್ನ ಬಾಯಿಂದಲೇ ಕೇಳಿದ್ದೇನೆ. ನಿನ್ನ ಪರಾಕ್ರಮವನ್ನೂ ಬಲೋತ್ಸಾಹಗಳನ್ನೂ ನಾನು ಬಲ್ಲೆನು (೪೦–೪೧). ನೀನು ಅಪಾರ ಮಹಿಮನೂ, ಅಜೇಯನೂ, ಸಮುದ್ರದಂತೆ ಗಂಭೀರಸ್ವಭಾವದವನೂ, ಪೃಥಿವೀಮಂಡಲವನ್ನೇ ಪೋಷಿಸಬಲ್ಲವನೂ, ದೇವೇಂದ್ರಸದೃಶನೂ ಎಂಬುದನ್ನು ಬಲ್ಲೆನು. ಶ್ರೀರಾಮ, ಹೀಗೆ ಅಸ್ತ್ರವಿದರಲ್ಲಿ ಅಗ್ರಗಣ್ಯನೂ, ಸತ್ಯವಂತನೂ, ಬಲಾಢ್ಯನೂ ಆಗಿದ್ದರೂ ಈ

ತಸ್ಯ ವೀರ್ಯವತಃ ಕಚ್ಚಿದ್ಯದ್ಯಸ್ತಿ ಮಯಿ ಸಂಭ್ರಮಃ ।
ಕಿಮರ್ಥಂ ನ ಶರೈಸ್ತೀಕ್ಷ್ಣೈಃ ಕ್ಷಯಂ ನಯತಿ ರಾಕ್ಷಸಾನ್ ॥ ೪೫
ಭ್ರಾತುರಾದೇಶಮಾದಾಯ ಲಕ್ಷ್ಮಣೋ ವಾ ಪರಂತಪಃ ।
ಕಸ್ಯ ಹೇತೋರ್ನ ಮಾಂ ವೀರಃ ಪರಿತ್ರಾತಿ ಮಹಾಬಲಃ ॥ ೪೬
ಯದಿ ತೌ ಪುರುಷವ್ಯಾಘ್ರೌ ವಾಯ್ವಗ್ನಿಸಮತೇಜಸೌ ।
ಸುರಾಣಾಮಪಿ ದುರ್ಧರ್ಷೌ ಕಿಮರ್ಥಂ ಮಾಮುಪೇಕ್ಷತಃ ॥ ೪೭
ಮಮೈವ ದುಷ್ಕೃತಂ ಕಿಂಚಿನ್ಮಹದಸ್ತಿ ನ ಸಂಶಯಃ ।
ಸಮರ್ಥಾಮಪಿ ತೌ ಯನ್ಮಾಂ ನಾವೇಕ್ಷೇತೇ ಪರಂತಪೌ ॥ ೪೮
ವೈದೇಹ್ಯಾ ವಚನಂ ಶ್ರುತ್ವಾ ಕರುಣಂ ಸಾಶ್ರು ಭಾಷಿತಮ್ ।
ಅಥಾಬ್ರವೀನ್ಮಹಾತೇಜಾ ಹನುಮಾನ್ ಮಾರುತಾತ್ಮಜಃ ॥ ೪೯
ತ್ವಚ್ಛೋಕವಿಮುಖೋ ರಾಮೋ ದೇವಿ ಸತ್ಯೇನ ಮೇ ಶಪೇ ।
ರಾಮೇ ದುಃಖಾಭಿಪನ್ನೇ ಚ ಲಕ್ಷ್ಮಣಃ ಪರಿತಪ್ಯತೇ ॥ ೫೦

ರಾಕ್ಷಸರ ಮೇಲೆ ನೀನು ಅಸ್ತ್ರವನ್ನೇಕೆ ಪ್ರಯೋಗಿಸುವುದಿಲ್ಲ?' ಎಂದು ರಘುನಾಥನಿಗೆ ತಿಳಿಸು (೪೨–೪೩). ಎಲೈ ಕಪಿವೀರನೆ, ನಾಗ, ಗಂಧರ್ವ, ಅಸುರ, ಮರುತ್ತುಗಳು ಯಾರೂ ಯುದ್ಧದಲ್ಲಿ ರಾಮನ ವೇಗವನ್ನು ತಡೆದುಕೊಳ್ಳಲಾರರು. ಆ ವೀರನಿಗೆ ನನ್ನ ವಿಷಯದಲ್ಲಿ ತವಕವಿದ್ದರೆ, ಈ ರಾಕ್ಷಸರನ್ನು ಉಗ್ರವಾದ ಬಾಣಗಳಿಂದ ಏಕೆ ನಾಶ ಮಾಡಬಾರದು ? (೪೪–೪೫). ಬಲಾಢ್ಯನಾದ ಲಕ್ಷ್ಮಣನಾದರೂ ಅಣ್ಣನ ಆಜ್ಞೆಯನ್ನು ಪಡೆದು ನನ್ನನ್ನು ಏಕೆ ಉಳಿಸಿಕೊಳ್ಳದೆ ಇರಬಹುದು ? ಅಗ್ನಿವಾಯುಗಳಂತೆ ಮಹಾತೇಜಸ್ವಿಗಳಾದ ಆ ಪುರುಷಶ್ರೇಷ್ಠರು ದೇವತೆಗಳಿಗೂ ಅಜೇಯರಾಗಿರುವಾಗ, ನನ್ನನ್ನು ಏಕೆ ಉಪೇಕ್ಷಿಸುತ್ತಾರೆ ? (೪೬–೪೭). ಮುಖ್ಯವಾಗಿ ನಾನು ಮಾಡಿರುವ ಪಾಪಕರ್ಮ ದೊಡ್ಡದು. ಅದು ಅವರನ್ನು ಉಪೇಕ್ಷಿಸುವಂತೆ ಮಾಡಿದೆ" ಎಂದಳು (೪೮). ಹೀಗೆ ಸೀತೆಯು ಕಣ್ಣೀರು ಸುರಿಸುತ್ತ ಆಡಿದ ಎದೆಕರಗುವ ಮಾತನ್ನು ಆಲಿಸಿ ಹನುಮಂತನು "ದೇವಿ, ಆಣೆ ಮಾಡಿ ಹೇಳುತ್ತೇನೆ. ಶ್ರೀರಾಮನಿಗೆ ನಿನ್ನ ವಿರಹ ದುಃಖದಿಂದಲೇ ಸಮಸ್ತ ಕಾರ್ಯಗಳೂ ಬೇಡವಾಗಿವೆ. ಅವನ ದುಃಖವನ್ನು ನೋಡಿ ಲಕ್ಷ್ಮಣನೂ ಸಂಕಟಪಡುತ್ತಿದ್ದಾನೆ (೪೯–೫೦).

ಕಥಂಚಿದ್ಭವತೀ ದೃಷ್ಟ್ವಾ ನ ಕಾಲಃ ಪರಿಶೋಚಿತುಮ್ ।
ಇಮಂ ಮುಹೂರ್ತಂ ದುಃಖಾನಾಂ ದ್ರಕ್ಷ್ಯಸ್ಯಂತಮನಿಂದಿತೇ ॥ ೫೧
ತಾವುಭೌ ಪುರುಷವ್ಯಾಘ್ರೌ ರಾಜಪುತ್ರೌ ಮಹಾಬಲೌ ।
ತ್ವದ್ದರ್ಶನಕೃತೋತ್ಸಾಹೌ ಲಂಕಾಂ ಭಸ್ಮೀಕರಿಷ್ಯತಃ ॥ ೫೨
ಹತ್ವಾ ಚ ಸಮರೇ ಕ್ರೂರಂ ರಾವಣಂ ಸಹಬಾಂಧವಮ್ ।
ರಾಘವಸ್ತ್ವಾಂ ವಿಶಾಲಾಕ್ಷಿ ನೇಷ್ಯತಿ ಸ್ವಾಂ ಪುರೀಂ ಪ್ರತಿ ॥ ೫೩
ಬ್ರೂಹಿ ಯದ್ರಾಘವೋ ವಾಚ್ಯೋ ಲಕ್ಷ್ಮಣಶ್ಚ ಮಹಾಬಲಃ ।
ಸುಗ್ರೀವೋ ವಾಪಿ ತೇಜಸ್ವೀ ಹರಯೋಽಪಿ ಸಮಾಗತಾಃ ॥ ೫೪
ಇತ್ಯುಕ್ತವತಿ ತಸ್ಮಿಂಶ್ಚ ಸೀತಾ ಸುರಸುತೋಪಮಾ ।
ಉವಾಚ ಶೋಕಸಂತಪ್ತಾ ಹನುಮಂತಂ ಪ್ಲವಂಗಮಮ್ ॥ ೫೫
ಕೌಸಲ್ಯಾ ಲೋಕಭರ್ತಾರಂ ಸುಷುವೇ ಯಂ ಮನಸ್ವಿನೀ ।
ತಂ ಮಮಾರ್ಥೇ ಸುಖಂ ಪೃಚ್ಛ ಶಿರಸಾ ಚಾಭಿವಾದಯ ॥ ೫೬
ಸ್ರಜಶ್ಚ ಸರ್ವರತ್ನಾನಿ ಪ್ರಿಯಾ ಯಾಶ್ಚ ವರಾಂಗನಾಃ ।
ಐಶ್ವರ್ಯಂ ಚ ವಿಶಾಲಾಯಾಂ ಪೃಥಿವ್ಯಾಮಪಿ ದುರ್ಲಭಮ್ ॥ ೫೭

ಅಂತೂ ನಿನ್ನನ್ನು ಕಂಡದ್ದಾಯಿತು. ಇದು ಶೋಕಿಸುವ ಕಾಲವಲ್ಲ. ಸ್ವಲ್ಪಕಾಲದಲ್ಲಿಯೇ ನಿನ್ನ ಶೋಕವು ಪರಿಹಾರಹೊಂದುವುದು. ಆ ಇಬ್ಬರು ರಾಜಪುತ್ರರೂ ನಿನ್ನನ್ನು ಕಾಣುವ ಉತ್ಸಾಹದಿಂದ ಲಂಕೆಯನ್ನು ಸುಟ್ಟು ಬೂದಿ ಮಾಡುವರು (೫೧–೫೨). ಹೇ ವಿಶಾಲಾಕ್ಷಿ, ರಾಘವನು ಕ್ರೂರಿಯಾದ ರಾವಣನನ್ನು ಬಂಧುಸಮೇತ ಸಂಹಾರಮಾಡಿ ನಿನ್ನನ್ನು ಅಯೋಧ್ಯಾನಗರಕ್ಕೆ ಕರೆದುಕೊಂಡು ಹೋಗುವನು. ಈಗ ರಾಮಲಕ್ಷ್ಮಣರಿಗೂ ಸುಗ್ರೀವ ವಾನರರಿಗೂ ಏನನ್ನಾದರೂ ಹೇಳಿಕಳಿಸಬೇಕಾಗಿದ್ದರೆ ಹೇಳು'' ಎಂದನು (೫೩–೫೪). ಆಗ ಸೀತಾದೇವಿಯು ದುಃಖಿಸುತ್ತ ಹನುಮಂತನಿಗೆ ''ಕೌಸಲ್ಯಾ ಮಾತೆಯು ಲೋಕಸಂರಕ್ಷಣಾರ್ಥವಾಗಿ ಯಾರನ್ನು ಹಡೆದಿರುವಳೋ ಆತನಿಗೆ ಕುಶಲವನ್ನು ವಿಚಾರಿಸಿದ್ದೇನೆಂದು ನನ್ನ ಪರವಾಗಿ ಹೇಳಿ ತಲೆಬಾಗಿ ನಮಸ್ಕರಿಸಿದ್ದೇನೆಂದು ತಿಳಿಸು (೫೫–೫೬). ಸುಮಿತ್ರಾದೇವಿಯ ಸುಕುಮಾರ ಲಕ್ಷ್ಮಣ. ಅವನು ಹೂಮಾಲೆಗಳು,

ಪಿತರಂ ಮಾತರಂ ಚೈವ ಸಂಮಾನ್ಯಾಭಿಪ್ರಸಾದ್ಯ ಚ ।
ಅನುಪ್ರವ್ರಾಜಿತೋ ರಾಮಂ ಸುಮಿತ್ರಾ ಯೇನ ಸುಪ್ರಜಾಃ ॥ ೫೮

ಆನುಕೂಲ್ಯೇನ ಧರ್ಮಾತ್ಮಾ ತ್ಯಕ್ತ್ವಾ ಸುಖಮನುತ್ತಮಮ್ ।
ಅನುಗಚ್ಛತಿ ಕಾಕುತ್ಸ್ಥಂ ಭ್ರಾತರಂ ಪಾಲಯನ್ ವನೇ ॥ ೫೯

ಸಿಂಹಸ್ಕಂಧೋ ಮಹಾಬಾಹುರ್ಮನಸ್ವೀ ಪ್ರಿಯದರ್ಶನಃ ।
ಪಿತೃವದ್ವರ್ತತೇ ರಾಮೇ ಮಾತೃವನ್ಮಾಂ ಸಮಾಚರನ್ ॥ ೬೦

ಹ್ರಿಯಮಾಣಾಂ ತದಾ ವೀರೋ ನ ತು ಮಾಂ ವೇದ ಲಕ್ಷ್ಮಣಃ ।
ವೃದ್ಧೋಪಸೇವೀ ಲಕ್ಷ್ಮೀವಾನ್ ಶಕ್ತೋ ನ ಬಹು ಭಾಷಿತಾ ॥ ೬೧

ರಾಜಪುತ್ರಃ ಪ್ರಿಯಃ ಶ್ರೇಷ್ಠಃ ಸದೃಶಃ ಶ್ವಶುರಸ್ಯ ಮೇ ।
ಮತ್ತಃ ಪ್ರಿಯತರೋ ನಿತ್ಯಂ ಭ್ರಾತಾ ರಾಮಸ್ಯ ಲಕ್ಷ್ಮಣಃ ॥ ೬೨

ನಿಯುಕ್ತೋ ಧುರಿ ಯಸ್ಯಾಂ ತು ತಾಮುದ್ವಹತಿ ವೀರ್ಯವಾನ್ ।
ಯಂ ದೃಷ್ಟ್ವಾ ರಾಘವೋ ನೈವ ವೃತ್ತಮಾರ್ಯಮನುಸ್ಮರೇತ್ ॥ ೬೩

ರತ್ನಗಳು, ಉತ್ತಮಸ್ತ್ರೀಯರು, ಇನ್ನೆಲ್ಲಿಯೂ ದೊರಕದಷ್ಟು ಐಶ್ವರ್ಯ— ಇವೆಲ್ಲವನ್ನೂ ತೊರೆದು ತಂದೆ ತಾಯಿಗಳನ್ನು ಒಪ್ಪಿಸಿ ಅಣ್ಣನ ಹಿಂದೆಯೇ ಬಂದುಬಿಟ್ಟನು (೫೭–೫೮). ಆ ಧರ್ಮಾತ್ಮನು ಉತ್ತಮವಾದ ಸುಖವನ್ನು ತ್ಯಜಿಸಿ ಕಾಡಿನಲ್ಲಿ ಅಣ್ಣನಿಗೆ ಬೆಂಬಲನಾಗಿ ಇದ್ದುಬಿಟ್ಟನು. ಅವನಿಗೆ ಸಿಂಹದಂತಹ ಹೆಗಲು; ಅಜಾನುಬಾಹು ; ಧೀರ ; ನೋಡಿದರೆ ಆನಂದವಾಗುವುದು. ರಾಮನನ್ನು ತಂದೆಯೆಂದೂ, ನನ್ನನ್ನು ತಾಯಿಯೆಂದೂ ತಿಳಿದುಕೊಂಡಿದ್ದಾನೆ (೫೯–೬೦). ರಾವಣನು ನನ್ನನ್ನು ಅಪಹರಿಸಿದ್ದು ಆ ವೀರನಿಗೆ ಗೊತ್ತಾಗದೆ ಹೋಯಿತು. ಲಕ್ಷ್ಮಣನು ಗುರುಹಿರಿಯರ ಸೇವಕ ; ಸಮರ್ಥ; ಹೆಚ್ಚು ಮಾತನಾಡತಕ್ಕವನಲ್ಲ. ನನ್ನ ಮಾವನಿಗೆ ಪ್ರಿಯನಾದ ರಾಜಪುತ್ರ. ಆತನಿಗೆ ತಕ್ಕ ಮಗ. ರಾಮನಿಗೆ ಲಕ್ಷ್ಮಣನೆಂದರೆ ನನ್ನಮೇಲೆ ಇರುವುದಕ್ಕಿಂತಲೂ ಅಧಿಕ ಪ್ರೀತಿ (೬೧–೬೨). ಯಾವ ಕಾರ್ಯವನ್ನು ವಹಿಸಿದರೂ ನಡೆಸಬಲ್ಲ ದಕ್ಷ. ರಾಮನು ಅವನನ್ನು ಕಂಡು, ಮೃತನಾದ ತಂದೆಯನ್ನೂ ಸ್ಮರಿಸಿಕೊಂಡು ದುಃಖಿಸದೆ ಇದ್ದನು. ಲಕ್ಷ್ಮಣನು ಮೃದುಸ್ವಭಾವದವನು;

ಸ ಮಮಾರ್ಥಾಯ ಕುಶಲಂ ವಕ್ತವ್ಯೋ ವಚನಾನ್ಮಮ ।
ಮೃದುರ್ನಿತ್ಯಂ ಶುಚಿರ್ದಕ್ಷಃ ಪ್ರಿಯೋ ರಾಮಸ್ಯ ಲಕ್ಷ್ಮಣಃ ॥ ೬೪
ಯಥಾ ಹಿ ವಾನರಶ್ರೇಷ್ಠ ದುಃಖಕ್ಷಯಕರೋ ಭವೇತ್ ।
ತ್ವಮಸ್ಮಿನ್ ಕಾರ್ಯನಿರ್ಯೋಗೇ ಪ್ರಮಾಣಂ ಹರಿಸತ್ತಮ ॥ ೬೫
ರಾಘವಸ್ತ್ವತ್ಸಮಾರಂಭಾನ್ಮಯಿ ಯತ್ನಪರೋ ಭವೇತ್ ।
ಇದಂ ಬ್ರೂಯಾಶ್ಚ ಮೇ ನಾಥಂ ಶೂರಂ ರಾಮಂ ಪುನಃ ಪುನಃ ೬೬
ಜೀವಿತಂ ಧಾರಯಿಷ್ಯಾಮಿ ಮಾಸಂ ದಶರಥಾತ್ಮಜ ।
ಊರ್ಧ್ವಂ ಮಾಸಾನ್ನ ಜೀವೇಯಂ ಸತ್ಯೇನಾಹಂ ಬ್ರವೀಮಿ ತೇ ॥ ೬೭
ರಾವಣೇನೋಪರುದ್ಧಾಂ ಮಾಂ ನಿಕೃತ್ಯಾ ಪಾಪಕರ್ಮಣಾ ।
ತ್ರಾತುಮರ್ಹಸಿ ವೀರ ತ್ವಂ ಪಾತಾಲಾದಿವ ಕೌಶಿಕೀಮ್ ॥ ೬೮
ತತೋ ವಸ್ತ್ರಗತಂ ಮುಕ್ತ್ವಾ ದಿವ್ಯಂ ಚೂಡಾಮಣಿಂ ಶುಭಮ್ ।
ಪ್ರದೇಯೋ ರಾಘವಾಯೇತಿ ಸೀತಾ ಹನುಮತೇ ದದೌ ॥ ೬೯

ಶುದ್ಧಾತ್ಮ; ಕಾರ್ಯದಕ್ಷ. ಆತನ ಕುಶಲವನ್ನು ನಾನು ವಿಚಾರಿಸಿದ್ದೇನೆಂದು ಹೇಳು (೬೩–೬೪). ವಾನರೋತ್ತಮ, ಮುಖ್ಯವಾಗಿ ನನ್ನ ಕಷ್ಟವು ಮುಗಿಯುವಂತೆ ಮಾಡುವ ಕಾರ್ಯಭಾರ ನಿನಗೆ ಸೇರಿದೆ. ನಿನ್ನ ಪ್ರಯತ್ನದಿಂದಲೇ ಶ್ರೀರಾಮನು ನನ್ನನ್ನು ಕರೆಯಿಸಿಕೊಳ್ಳಬೇಕಾಗಿದೆ. ನನ್ನ ಸ್ವಾಮಿಗೆ ಮತ್ತೆ ಮತ್ತೆ ಈ ಮಾತನ್ನು ಹೇಳು (೬೫–೬೬) : ''ರಾಮ, ಇನ್ನು ಒಂದು ತಿಂಗಳು ಮಾತ್ರ ನಾನು ಬದುಕಿರುತ್ತೇನೆ. ಒಂದು ತಿಂಗಳಾದಮೇಲೆ ಸತ್ಯದ ಆಣೆಯಾಗಿಯೂ ನಾನು ಬದುಕಿರುವುದಿಲ್ಲ. ಶ್ರೀಮನ್ನಾರಾಯಣನು ಇಂದ್ರನ ರಾಜ್ಯಲಕ್ಷ್ಮಿಯನ್ನು ಪಾತಾಳದಿಂದ ಉದ್ಧರಿಸಿ ತಂದಂತೆ,* ಪಾಪಿಯಾದ ರಾವಣನ ಸೆರೆಯಿಂದ ನನ್ನನ್ನು ಬಿಡಿಸಿ ನೀನೇ ರಕ್ಷಿಸಬೇಕು'' ಎಂದಳು (೬೭–೬೮). ಅನಂತರ ತನ್ನ ಸೆರಗಿನಲ್ಲಿ ಕಟ್ಟಿದ್ದ ದಿವ್ಯವಾದ ಚೂಡಾಮಣಿಯನ್ನು ತೆಗೆದು 'ಇದನ್ನು ಶ್ರೀರಾಮನಿಗೆ ಕೊಡು' ಎಂದು ಹೇಳಿ ಹನುಮಂತನ ಕೈಯಲ್ಲಿ ಇಟ್ಟಳು. ಆಂಜನೇಯನು ಸರ್ವೋತ್ತಮವಾದ ಆ

---

* ಅನುಬಂಧವನ್ನು ನೋಡಿ.

ಪ್ರತಿಗೃಹ್ಯ ತತೋ ವೀರೋ ಮಣಿರತ್ನಮನುತ್ತಮಮ್ ।
ಅಂಗುಲ್ಯಾ ಯೋಜಯಾಮಾಸ ನ ಹ್ಯಸ್ಯ ಪ್ರಾಭವದ್ಭುಜಃ ॥ ೭೦
ಮಣಿರತ್ನಂ ಕಪಿವರಃ ಪ್ರತಿಗೃಹ್ಯಾಭಿವಾದ್ಯ ಚ ।
ಸೀತಾಂ ಪ್ರದಕ್ಷಿಣಂ ಕೃತ್ವಾ ಪ್ರಣತಃ ಪಾರ್ಶ್ವತಃ ಸ್ಥಿತಃ ॥ ೭೧
ಹರ್ಷೇಣ ಮಹತಾ ಯುಕ್ತಃ ಸೀತಾದರ್ಶನಜೇನ ಸಃ ।
ಹೃದಯೇನ ಗತೋ ರಾಮಂ ಶರೀರೇಣ ತು ನಿಷ್ಠಿತಃ ॥ ೭೨
ಮಣಿವರಮುಪಗೃಹ್ಯ ತಂ ಮಹಾರ್ಹಂ
ಜನಕನೃಪಾತ್ಮಜಯಾ ಧೃತಂ ಪ್ರಭಾವಾತ್ ।
ಗಿರಿರಿವ ಪವನಾವಧೂತಮುಕ್ತಃ
ಸುಖಿತಮನಾಃ ಪ್ರತಿಸಂಕ್ರಮಂ ಪ್ರಪೇದೇ ॥ ೭೩

ಇತಿ ಶ್ರೀಮದ್ರಾಮಾಯಣೇ ಸುಂದರಕಾಂಡೇ ಅಷ್ಟಾತ್ರಿಂಶಃ ಸರ್ಗಃ

ಚೂಡಾಮಣಿಯನ್ನು ಸ್ವೀಕರಿಸಿ ತನ್ನ ಬೆರಳಿನಲ್ಲಿ ಹಾಕಿಕೊಂಡನು. (ಆಗ ಸೂಕ್ಷ್ಮರೂಪಿಯಾಗಿದ್ದರೂ) ಅವನ ಭುಜವು ರಂಧ್ರದಲ್ಲಿ ಹಿಡಿಸಲಿಲ್ಲ (೬೯–೭೦). ಅನಂತರ ಸೀತಾದೇವಿಗೆ ಪ್ರದಕ್ಷಿಣ ನಮಸ್ಕಾರವನ್ನು ಮಾಡಿ ನಮ್ರತೆಯಿಂದ ಬಳಿಯಲ್ಲಿ ನಿಂತುಕೊಂಡನು. ಸೀತಾದರ್ಶನದಿಂದ ಅವನಿಗಾದ ಹರ್ಷಕ್ಕೆ ಪಾರವೇ ಇರಲಿಲ್ಲ. ಆಗಲೇ ಮನಸ್ಸಿನಲ್ಲಿ ಶ್ರೀರಾಮನ ಬಳಿಗೆ ಹೋಗಿಬಿಟ್ಟಿದ್ದನು! ದೇಹದಿಂದ ಮಾತ್ರ ಅಲ್ಲಿ ನಿಂತಿದ್ದನು (೭೧–೭೨). ಹೀಗೆ ಆಂಜನೇಯನು ತನ್ನ ಒಂದು ಸಾಮರ್ಥ್ಯದಿಂದ, ಜಾನಕಿಯು ಧರಿಸಿದ್ದ ಅಮೂಲ್ಯವಾದ ಚೂಡಾಮಣಿಯನ್ನು ಪಡೆದನು. (ಸೀತೆಯು ಸಿಕ್ಕುವಳೋ ಇಲ್ಲವೋ ಎಂಬ ಕಳವಳವು ಮಾಯವಾಗಿ) ಮನಸ್ಸಿಗೆ ನೆಮ್ಮದಿಯಾಯಿತು. ಬಿರುಗಾಳಿಯ ಹೊಡೆತವು ನಿಂತಮೇಲೆ ಕಾಣುವ ಪರ್ವತದಂತೆ ಸ್ವಸ್ಥನಾಗಿ ಹಿಂದಿರುಗಿ ಪ್ರಯಾಣಮಾಡಲು ಸಿದ್ಧನಾದನು (೭೩).

ಇಲ್ಲಿಗೆ ಶ್ರೀಮದ್ರಾಮಾಯಣದ ಸುಂದರಕಾಂಡದಲ್ಲಿ ಮೂವತ್ತೆಂಟನೆಯ ಸರ್ಗ

ಏಕೋನಚತ್ವಾರಿಂಶಃ ಸರ್ಗಃ

ಹನೂಮತ್ಸಂದೇಶಃ

ಮಣಿಂ ದತ್ವಾ ತತಃ ಸೀತಾ ಹನುಮಂತಮಥಾಬ್ರವೀತ್ ।
ಅಭಿಜ್ಞಾನಮಭಿಜ್ಞಾತಮೇತದ್ರಾಮಸ್ಯ ತತ್ತ್ವತಃ ॥ ೧
ಮಣಿಂ ತು ದೃಷ್ಟ್ವಾ ರಾಮೋ ವೈ ತ್ರಯಾಣಾಂ ಸಂಸ್ಮರಿಷ್ಯತಿ ।
ವೀರೋ ಜನನ್ಯಾ ಮಮ ಚ ರಾಜ್ಞೋ ದಶರಥಸ್ಯ ಚ ॥ ೨
ಸ ಭೂಯಸ್ತ್ವಂ ಸಮುತ್ಸಾಹಚೋದಿತೋ ಹರಿಸತ್ತಮ ।
ಅಸ್ಮಿನ್ ಕಾರ್ಯಸಮಾರಂಭೇ ಪ್ರಚಿಂತಯ ಯದುತ್ತರಮ್ ॥ ೩
ತ್ವಮಸ್ಮಿನ್ ಕಾರ್ಯನಿರ್ಯೋಗೇ ಪ್ರಮಾಣಂ ಹರಿಸತ್ತಮ ।
ತಸ್ಯ ಚಿಂತಯ ಯೋ ಯತ್ನೋ ದುಃಖಕ್ಷಯಕರೋ ಭವೇತ್ ॥ ೪
ಹನುಮನ್ ಯತ್ನಮಾಸ್ಥಾಯ ದುಃಖಕ್ಷಯಕರೋ ಭವ ।
ಸ ತಥೇತಿ ಪ್ರತಿಜ್ಞಾಯ ಮಾರುತಿರ್ಭೀಮವಿಕ್ರಮಃ ॥ ೫

ಸರ್ಗ ೩೯

ಸೀತೆಯು ತನ್ನನ್ನು ಬಿಡಿಸಿಕೊಂಡು ಹೋಗುವಂತೆ ರಾಮನಿಗೆ ಸಂದೇಶವನ್ನು ಕಳುಹಿಸುವುದು. ರಾಮ ಮುಂತಾದವರು ಸಮುದ್ರವನ್ನು ದಾಟುವುದು ಹೇಗೆಂದು ಅವಳು ಸಂದೇಹವನ್ನು ವ್ಯಕ್ತಪಡಿಸಲು, ಹನುಮಂತನು ಸಮಾಧಾನ ಹೇಳುವುದು.

ಸೀತೆಯು ಹನುಮಂತನಿಗೆ ಚೂಡಾಮಣಿಯನ್ನು ಕೊಟ್ಟು "ವಾನರೋತ್ತಮ, ಈ ಅಭಿಜ್ಞಾನವನ್ನು ಶ್ರೀರಾಮನು ಚೆನ್ನಾಗಿ ಬಲ್ಲನು. ಈ ಮಣಿಯನ್ನು ನೋಡಿದೊಡನೆ ಅವನಿಗೆ ತನ್ನ ತಾಯಿ, ನಾನು, ದಶರಥ ಮಹಾರಾಜ, ಈ ಮೂವರ ನೆನಪಾಗುವುದು (೧–೨). ಅವನು (ಮುಂದಿನ ರಾಜ ಕಾರ್ಯಕ್ಕಾಗಿ) ಉತ್ಸಾಹದಿಂದ ನಿನ್ನನ್ನೇ ಪ್ರೇರಿಸಬಹುದು. ಅನಂತರ ಏನು ಮಾಡಬೇಕೆಂಬುದನ್ನು ಆಲೋಚಿಸು. ಒಟ್ಟಿನಲ್ಲಿ ಈ ಕಾರ್ಯವು ನಿನ್ನನ್ನೇ ಅವಲಂಬಿಸಿದೆ. ಹೇಗಾದರೂ ಪ್ರಯತ್ನಿಸಿ ನನ್ನ ದುಃಖವು ನೀಗುವಂತೆ ಮಾಡು" ಎಂದಳು (೩–೪). ಪರಾಕ್ರಮಿಯಾದ ವಾಯುಪುತ್ರನು ಹಾಗೆಯೇ ಆಗಲೆಂದು

ಶಿರಸಾ ವಂದ್ಯ ವೈದೇಹೀಂ ಗಮನಾಯೋಪಚಕ್ರಮೇ ।
ಜ್ಞಾತ್ವಾ ಸಂಪ್ರಸ್ಥಿತಂ ದೇವೀ ವಾನರಂ ಮಾರುತಾತ್ಮಜಮ್ ॥ ೬

ಬಾಷ್ಪಗದ್ಗದಯಾ ವಾಚಾ ಮೈಥಿಲೀ ವಾಕ್ಯಮಬ್ರವೀತ್ ।
ಕುಶಲಂ ಹನುಮನ್ ಬ್ರೂಯಾಃ ಸಹಿತೌ ರಾಮಲಕ್ಷ್ಮಣೌ ॥ ೭

ಸುಗ್ರೀವಂ ಚ ಸಹಾಮಾತ್ಯಂ ವೃದ್ಧಾನ್ ಸರ್ವಾಂಶ್ಚ ವಾನರಾನ್ ।
ಬ್ರೂಯಾಸ್ತ್ವಂ ವಾನರಶ್ರೇಷ್ಠ ಕುಶಲಂ ಧರ್ಮಸಂಹಿತಮ್ ॥ ೮

ಯಥಾ ಸ ಚ ಮಹಾಬಾಹುರ್ಮಾಂ ತಾರಯತಿ ರಾಘವಃ ।
ಅಸ್ಮಾದ್ದುಃಖಾಂಬುಸಂರೋಧಾತ್ತ್ವಂ ಸಮಾಧಾತುಮರ್ಹಸಿ ॥ ೯

ಜೀವಂತೀಂ ಮಾಂ ಯಥಾ ರಾಮಃ ಸಂಭಾವಯತಿ ಕೀರ್ತಿಮಾನ್ ।
ತತ್ತಥಾ ಹನುಮನ್ವಾಚ್ಯೋ ವಾಚಾ ಧರ್ಮಮವಾಪ್ನುಹಿ ॥ ೧೦

ನಿತ್ಯಮುತ್ಸಾಹಯುಕ್ತಾಶ್ಚ ವಾಚಃ ಶ್ರುತ್ವಾ ತ್ವಯೇರಿತಾಃ ।
ವರ್ಧಿಷ್ಯತೇ ದಾಶರಥೇಃ ಪೌರುಷಂ ಮದವಾಪ್ತಯೇ ॥ ೧೧

ಮಾತುಕೊಟ್ಟು ಜಾನಕಿಗೆ ನಮಸ್ಕಾರ ಮಾಡಿ, ಹೊರಡಲು ಉದ್ಯುಕ್ತನಾದನು. ಆಗ ಜಾನಕಿಯು ಮತ್ತೆ ಕಣ್ಣೀರು ಬಿಡುತ್ತ ಗದ್ಗದಸ್ವರದಿಂದ ''ಹನುಮಂತ, ರಾಮಲಕ್ಷ್ಮಣರ ಯೋಗಕ್ಷೇಮಗಳನ್ನು ಕೇಳಿದೆನೆಂದು ಹೇಳು (೫–೭). ಸುಗ್ರೀವನಿಗೂ ಅವನ ಮಂತ್ರಿಗಳಿಗೂ ಹಿರಿಯರಾದ ಎಲ್ಲಾ ವಾನರರಿಗೂ ನಾನು ಧರ್ಮಯುಕ್ತವಾಗಿ ಕ್ಷೇಮವನ್ನು ವಿಚಾರಿಸಿದೆನೆಂದು ಹೇಳು. ಈ ದುಃಖ ಸಮುದ್ರದಿಂದ ನನ್ನನ್ನು ಪಾರುಮಾಡಬೇಕೆಂದು ನೀನು ರಾಮನನ್ನು ಪ್ರೋತ್ಸಾಹಿಸಬೇಕು. ಅಪ್ಪಾ-ಹನುಮಂತ, ನಾನು ಪ್ರಾಣವನ್ನು ಬಿಡುವುದರೊಳಗೆ ರಾಮನು ನನ್ನನ್ನು ಉಳಿಸಿ ಮನ್ನಿಸುವ ಹಾಗೆ ಮಾಡು. ಹೀಗೆ ಹೇಳುವುದರಿಂದ ನಿನಗೆ ಎಷ್ಟೋ ಪುಣ್ಯಬರುತ್ತದೆ (೮–೧೦). ನೀನು ಪ್ರೋತ್ಸಾಹದ ಮಾತನ್ನಾಡಿದರೆ ನನ್ನನ್ನು ಬಿಡಿಸಿಕೊಳ್ಳಬೇಕೆಂದು ರಾಮನಿಗೆ ಉತ್ಸಾಹ ಹುಟ್ಟುತ್ತದೆ. ನನ್ನ ಸಂದೇಶವನ್ನು ನಿನ್ನ

ಮತ್ಸಂದೇಶಯುತಾ ವಾಚಸ್ತ್ವತ್ತಃ ಶ್ರುತ್ವೈವ ರಾಘವಃ ।
ಪರಾಕ್ರಮೇ ಮತಿಂ ವೀರೋ ವಿಧಿವತ್ಸಂವಿಧಾಸ್ಯತಿ ॥ ೧೨

ಸೀತಾಯಾ ವಚನಂ ಶ್ರುತ್ವಾ ಹನುಮಾನ್ ಮಾರುತಾತ್ಮಜಃ ।
ಶಿರಸ್ಯಂಜಲಿಮಾಧಾಯ ವಾಕ್ಯಮುತ್ತರಮಬ್ರವೀತ್ ॥ ೧೩

ಕ್ಷಿಪ್ರಮೇಷ್ಯತಿ ಕಾಕುತ್ಸ್ಥೋ ಹರ್ಯೃಕ್ಷಪ್ರವರೈರ್ವೃತಃ ।
ಯಸ್ತೇ ಯುಧಿ ವಿಜಿತ್ಯಾರೀನ್ ಶೋಕಂ ವ್ಯಪನಯಿಷ್ಯತಿ ॥ ೧೪

ನ ಹಿ ಪಶ್ಯಾಮಿ ಮರ್ತ್ಯೇಷು ನಾಮರೇಷ್ವಸುರೇಷು ವಾ ।
ಯಸ್ತಸ್ಯ ಕ್ಷಿಪತೋ ಬಾಣಾನ್ ಸ್ಥಾತುಮುತ್ಸಹತೇಽಗ್ರತಃ ॥ ೧೫

ಅಪ್ಯರ್ಕಮಪಿ ಪರ್ಜನ್ಯಮಪಿ ವೈವಸ್ವತಂ ಯಮಮ್ ।
ಸ ಹಿ ಸೋಢುಂ ರಣೇ ಶಕ್ತಸ್ತವ ಹೇತೋರ್ವಿಶೇಷತಃ ॥ ೧೬

ಸ ಹಿ ಸಾಗರಪರ್ಯಂತಾಂ ಮಹೀಂ ಶಾಸಿತುಮರ್ಹತಿ ।
ತ್ವನ್ನಿಮಿತ್ತೋ ಹಿ ರಾಮಸ್ಯ ಜಯೋ ಜನಕನಂದಿನಿ ॥ ೧೭

ಮುಖದಿಂದ ಕೇಳಿದೊಡನೆ, ಆ ವೀರನು ಪರಾಕ್ರಮವನ್ನು ಮೆರಸಲು ಮನಸ್ಸು ಮಾಡುತ್ತಾನೆ'' ಎಂದಳು (೧೧–೧೨). ಆಗ ಆಂಜನೇಯನು ತಲೆಯಮೇಲೆ ಕೈಜೋಡಿಸಿಕೊಂಡು ''ಅಮ್ಮಾ, ಶ್ರೀರಾಮನು ವಾನರ ಭಲ್ಲೂಕಗಳೊಡನೆ ಶೀಘ್ರದಲ್ಲಿಯೇ ಬಂದು ಶತ್ರುಗಳನ್ನು ಗೆದ್ದು ನಿನ್ನ ಶೋಕವನ್ನು ಪರಿಹರಿಸುವನು. ಅವನು ಅಸ್ತ್ರಗಳನ್ನು ಸೆಳೆದು ಬಿಡುತ್ತ ಯುದ್ಧಕ್ಕೆ ನಿಂತರೆ, ಮನುಷ್ಯರಲ್ಲಾಗಲಿ, ದೇವಾಸುರರಲ್ಲಾಗಲಿ ಎದುರಿಸಬಲ್ಲವನನ್ನು ನಾನು ಅರಿಯೆ (೧೩–೧೫). ಸೂರ್ಯನನ್ನಾಗಲಿ, ಇಂದ್ರನನ್ನಾಗಲಿ, ಕಡೆಗೆ ಯಮನನ್ನೇ ಆಗಲಿ—ಅವನು ಎದುರಿಸಿ ನಿಲ್ಲಬಲ್ಲನು. ಅದರಲ್ಲಿಯೂ ನಿನಗೋಸ್ಕರ ಯುದ್ಧ ಮಾಡುತ್ತಾನೆಂದರೆ ಹೇಳುವುದೇನು? ಜನಕಪುತ್ರಿ, ನಿನಗೋಸ್ಕರ ಜಯಾಪೇಕ್ಷೆಯಿಂದ ನಿಂತರೆ ಇಡೀ ಜಗತ್ತನ್ನೇ ವಶಪಡಿಸಿಕೊಳ್ಳಬಲ್ಲನು'' ಎಂದು ಹೇಳಿದನು (೧೬–೧೭).

ತಸ್ಯ ತದ್ವಚನಂ ಶ್ರುತ್ವಾ ಸಮ್ಯಕ್ಸತ್ಯಂ ಸುಭಾಷಿತಮ್ ।
ಜಾನಕೀ ಬಹು ಮೇನೇಽಥ ವಚನಂ ಚೇದಮಬ್ರವೀತ್ ॥ ೧೮

ತತಸ್ತಂ ಪ್ರಸ್ಥಿತಂ ಸೀತಾ ವೀಕ್ಷಮಾಣಾ ಪುನಃ ಪುನಃ ।
ಭರ್ತೃಸ್ನೇಹಾನ್ವಿತಂ ವಾಕ್ಯಂ ಸೌಹಾರ್ದಾದನುಮಾನಯತ್ ॥ ೧೯

ಯದಿ ವಾ ಮನ್ಯಸೇ ವೀರ ವಸೈಕಾಹಮರಿಂದಮ ।
ಕಸ್ಮಿಂಶ್ಚಿತ್ಸಂವೃತೇ ದೇಶೇ ವಿಶ್ರಾಂತಃ ಶ್ವೋ ಗಮಿಷ್ಯಸಿ ॥ ೨೦

ಮಮ ಚೈವಾಲ್ಪಭಾಗ್ಯಾಯಾಃ ಸಾಂನಿಧ್ಯಾತ್ತವ ವಾನರ ।
ಅಸ್ಯ ಶೋಕಸ್ಯ ಮಹತೋ ಮುಹೂರ್ತಂ ಮೋಕ್ಷಣಂ ಭವೇತ್ ॥ ೨೧

ಗತೇ ಹಿ ಹರಿಶಾರ್ದೂಲ ಪುನರಾಗಮನಾಯ ತು ।
ಪ್ರಾಣಾನಾಮಪಿ ಸಂದೇಹೋ ಮಮ ಸ್ಯಾನ್ನಾತ್ರ ಸಂಶಯಃ ॥ ೨೨

ತವಾದರ್ಶನಜಃ ಶೋಕೋ ಭೂಯೋ ಮಾಂ ಪರಿತಾಪಯೇತ್ ।
ದುಃಖಾದ್ದುಃಖಪರಾಮೃಷ್ಟಾಂ ದೀಪಯನ್ನಿವ ವಾನರ ॥ ೨೩

ಅಯಂ ಚ ವೀರ ಸಂದೇಹಸ್ತಿಷ್ಠತೀವ ಮಮಾಗ್ರತಃ ।
ಸುಮಹಾಂಸ್ತ್ವತ್ಸಹಾಯೇಷು ಹರ್ಯೃಕ್ಷೇಷು ಹರೀಶ್ವರ ॥ ೨೪

ಸತ್ಯವೂ ಮಧುರವೂ ಆದ ಹನುಮಂತನ ಮಾತನ್ನು ಆಲಿಸಿ, ಜಾನಕಿಯು ಅವನನ್ನು ಶ್ಲಾಘಿಸಿದಳು. ಅವನನ್ನೇ ಮತ್ತೆ ಮತ್ತೆ ನೋಡುತ್ತಿದ್ದಳು. ತನ್ನ ಗಂಡನ ಮೇಲಿದ್ದ ಪ್ರೇಮದಿಂದ ಹನುಮಂತನನ್ನು ಕುರಿತು "ಎಲೈ ವೀರನೆ, ನಿನಗೆ ಸಮ್ಮತವಾದರೆ ಒಂದು ದಿನ ಇಲ್ಲಿಯೇ ಉಳಿದುಕೊ. ಎಲ್ಲಿಯಾದರೂ ಅಡಗಿಕೊಂಡು ವಿಶ್ರಾಂತಿಯನ್ನು ಪಡೆದು ನಾಳೆ ಹೋಗಬಹುದು (೧೮–೨೦). ನೀನು ಇದ್ದರೆ ಮಂದಭಾಗ್ಯಳಾದ ನನ್ನ ದುಃಖವು ಸ್ವಲ್ಪ ಹೊತ್ತಾದರೂ ತಪ್ಪುವುದು. ವಾನರಶ್ರೇಷ್ಠ, ನೀನು ಹೊರಟುಹೋದರೆ ಪುನಃ ಬರುವವರೆಗೆ ನನ್ನ ಪ್ರಾಣವು ಉಳಿದಿರುತ್ತದೆಯೊ ಇಲ್ಲವೊ (೨೧–೨೨). ನೀನು ಹೋದಮೇಲೆ ನಿನ್ನನ್ನು ಕಾಣದಿರುವ ದುಃಖವು ನನ್ನ ಹಿಂದಿನ ದುಃಖವನ್ನು ಕೆರಳಿಸಿ ಎಬ್ಬಿಸುವುದು. ಅಲ್ಲದೆ ನಿನಗೆ ಸಹಾಯವಾಗಿ ಬರುವ ವಾನರ ಭಲ್ಲೂಕಗಳ ವಿಷಯದಲ್ಲಿ ನನಗೆ ಒಂದು ಸಂಶಯ ಇನ್ನೂ ಇದೆ (೨೩–೨೪). ದುಸ್ತರವಾದ ಮಹಾಸಾಗರವನ್ನು

ಕಥಂ ನು ಖಲು ದುಷ್ಪಾರಂ ತರಿಷ್ಯಂತಿ ಮಹೋದಧಿಮ್ ।
ತಾನಿ ಹರ್ಯೃಕ್ಷಸೈನ್ಯಾನಿ ತೌ ವಾ ನರವರಾತ್ಮಜೌ ॥ ೨೫
ತ್ರಯಾಣಾಮೇವ ಭೂತಾನಾಂ ಸಾಗರಸ್ಯಾಸ್ಯ ಲಂಘನೇ ।
ಶಕ್ತಿಃ ಸ್ಯಾದ್ವೈನತೇಯಸ್ಯ ತವ ವಾ ಮಾರುತಸ್ಯ ವಾ ॥ ೨೬
ತದಸ್ಮಿನ್ ಕಾರ್ಯನಿರ್ಯೋಗೇ ವೀರೈವಂ ದುರತಿಕ್ರಮೇ ।
ಕಿಂ ಪಶ್ಯಸಿ ಸಮಾಧಾನಂ ತ್ವಂ ಹಿ ಕಾರ್ಯವಿದಾಂ ವರಃ ॥ ೨೭
ಕಾಮಮಸ್ಯ ತ್ವಮೇವೈಕಃ ಕಾರ್ಯಸ್ಯ ಪರಿಸಾಧನೇ ।
ಪರ್ಯಾಪ್ತಃ ಪರವೀರಘ್ನ ಯಶಸ್ಯಸ್ತೇ ಬಲೋದಯಃ ॥ ೨೮
ಬಲೈಃ ಸಮಗ್ರೈರ್ಯದಿ ಮಾಂ ರಾವಣಂ ಜಿತ್ವ ಸಂಯುಗೇ ।
ವಿಜಯೀ ಸ್ವಪುರೀಂ ಯಾಯಾತ್ತತ್ತು ಮೇ ಸ್ಯಾದ್ಯಶಸ್ಕರಮ್ ॥ ೨೯
ಶರೈಸ್ತು ಸಂಕುಲಾಂ ಕೃತ್ವಾ ಲಂಕಾಂ ಪರಬಲಾರ್ದನಃ ।
ಮಾಂ ನಯೇದ್ಯದಿ ಕಾಕುತ್ಸ್ಥಸ್ತತ್ತಸ್ಯ ಸದೃಶಂ ಭವೇತ್ ॥ ೩೦
ತದ್ಯಥಾ ತಸ್ಯ ವಿಕ್ರಾಂತಮನುರೂಪಂ ಮಹಾತ್ಮನಃ ॥
ಭವೇದಾಹವಶೂರಸ್ಯ ತಥಾ ತ್ವಮುಪಪಾದಯ ॥ ೩೧

ಅವರಾಗಲಿ, ರಾಮಲಕ್ಷ್ಮಣರಾಗಲಿ ಹೇಗೆ ದಾಟುವರು? ಈ ಸಾಗರವನ್ನು ದಾಟಲು ಗರುಡ, ನೀನು, ವಾಯು—ಈ ಮೂವರಿಗೆ ಮಾತ್ರ ಶಕ್ತಿ ಇದೆ (೨೫–೨೬). ಇಂತಹ ಅಸಾಧ್ಯವಾದ ಕಾರ್ಯದಲ್ಲಿ ನಿನ್ನ ಸಮಾಧಾನವೇನು? ಕಾರ್ಯವನ್ನು ಸಾಧಿಸುವುದರಲ್ಲಿ ನೀನೇ ಅಗ್ರಗಣ್ಯ. ವೀರಾಗ್ರಣಿ, ನೀನೊಬ್ಬನೇ ಬೇಕಾದರೂ (ನನ್ನನ್ನು ಬಿಡಿಸಿ) ಕಾರ್ಯವನ್ನು ಸಾಧಿಸಬಲ್ಲೆ. ಬಲಿಶಾಲಿಯೆಂದು ನಿನಗೆ ಕೀರ್ತಿ ಬರುವುದು (೨೭–೨೮). ಆದರೆ ರಾಮನು ತನ್ನ ಸಮಗ್ರಬಲದಿಂದ ರಾವಣನನ್ನು ಗೆದ್ದು ವಿಜಯಶಾಲಿಯಾಗಿ ನನ್ನನ್ನು ತನ್ನ ಪಟ್ಟಣಕ್ಕೆ ಕರೆದುಕೊಂಡು ಹೋಗುವುದಾದರೆ, ನನಗೆ ಒಳ್ಳೆಯ ಹೆಸರು ಬರುತ್ತದೆ. ಆ ವೀರನು ತನ್ನ ಶರಗಳಿಂದ ಲಂಕೆಯನ್ನು ಮುಚ್ಚಿ ಶತ್ರುವನ್ನು ನಾಶಮಾಡಿ ನನ್ನನ್ನು ಕರೆದೊಯ್ದರೆ, ಆಗ ಅದು ರಾಮನ ಹೆಸರಿಗೆ ಯೋಗ್ಯವಾದ ಕೆಲಸವಾಗುವುದು (೨೯–೩೦). ರಣಧೀರನಾದ ಆ ಮಹಾತ್ಮನು ತನಗೆ ಅನುರೂಪವಾದ ಪರಾಕ್ರಮವನ್ನು

ತದರ್ಥೋಪಹಿತಂ ವಾಕ್ಯಂ ಸಹಿತಂ ಹೇತುಸಂಹಿತಮ್ ।
ನಿಶಮ್ಯ ಹನುಮಾನ್ ಶೇಷಂ ವಾಕ್ಯಮುತ್ತರಮಬ್ರವೀತ್ ॥ ೩೨
ದೇವಿ ಹರ್ಯೃಕ್ಷಸೈನ್ಯಾನಾಮೀಶ್ವರಃ ಪ್ಲವತಾಂ ವರಃ ।
ಸುಗ್ರೀವಃ ಸತ್ತ್ವಸಂಪನ್ನಸ್ತವಾರ್ಥೇ ಕೃತನಿಶ್ಚಯಃ ॥ ೩೩
ಸ ವಾನರಸಹಸ್ರಾಣಾಂ ಕೋಟೀಭಿರಭಿಸಂವೃತಃ ।
ಕ್ಷಿಪ್ರಮೇಷ್ಯತಿ ವೈದೇಹಿ ರಾಕ್ಷಸಾನಾಂ ನಿಬರ್ಹಣಃ ॥ ೩೪
ತಸ್ಯ ವಿಕ್ರಮಸಂಪನ್ನಾಃ ಸತ್ತ್ವವಂತೋ ಮಹಾಬಲಾಃ ।
ಮನಸ್ಸಂಕಲ್ಪಸಂಪಾತಾ ನಿದೇಶೇ ಹರಯಃ ಸ್ಥಿತಾಃ ॥ ೩೫
ಯೇಷಾಂ ನೋಪರಿ ನಾಧಸ್ತಾನ್ನ ತಿರ್ಯಕ್ಸಜ್ಜತೇ ಗತಿಃ ।
ನ ಚ ಕರ್ಮಸು ಸೀದಂತಿ ಮಹತ್ಸ್ವಮಿತತೇಜಸಃ ॥ ೩೬
ಅಸಕೃತ್ತೈರ್ಮಹೋತ್ಸಾಹೈಃ ಸಸಾಗರಧರಾಧರಾ ।
ಪ್ರದಕ್ಷಿಣೀಕೃತಾ ಭೂಮಿರ್ವಾಯುಮಾರ್ಗಾನುಸಾರಿಭಿಃ ॥ ೩೭
ಮದ್ವಿಶಿಷ್ಟಾಶ್ಚ ತುಲ್ಯಾಶ್ಚ ಸಂತಿ ತತ್ರ ವನೌಕಸಃ ।
ಮತ್ತಃ ಪ್ರತ್ಯವರಃ ಕಶ್ಚಿನ್ನಾಸ್ತಿ ಸುಗ್ರೀವಸಂನಿಧೌ ॥ ೩೮

ತೋರಿಸುವಂತೆ ನೀನು ಏರ್ಪಡಿಸಬೇಕು'' ಎಂದು ಹೇಳಿದಳು (೩೧). ಅರ್ಥಗರ್ಭಿತವೂ ಯುಕ್ತಿಯುಕ್ತವೂ ಆದ ಸೀತೆಯ ಮಾತನ್ನು ಕೇಳಿ ಹನುಮಂತನು ''ದೇವಿ, ನಮ್ಮ ವಾನರಭಲ್ಲೂಕಗಳಿಗೆ ಅಧಿಪತಿಯಾದ ಸುಗ್ರೀವನು ಮಹಾವೀರನು. ಈ ಕಾರ್ಯವನ್ನು ಸಾಧಿಸಬೇಕೆಂದು ದೃಢನಿಶ್ಚಯವನ್ನು ಮಾಡಿದ್ದಾನೆ. ರಾಕ್ಷಸರನ್ನು ಸಂಹರಿಸುವುದಕ್ಕಾಗಿ ಅವನು ಸಾವಿರಕೋಟಿ ವಾನರರೊಡನೆ ಕ್ಷಿಪ್ರದಲ್ಲಿಯೇ ಇಲ್ಲಿಗೆ ಬರುವನು (೩೨–೩೪). ಅವನ ಬಳಿಯಲ್ಲಿರುವ ಕಪಿಗಳು ಅಧಿಕ ಬಲಸಂಪನ್ನರು ; ಮನೋವೇಗದಿಂದ ಪ್ರಯಾಣ ಮಾಡಬಲ್ಲರು; ಮೇಲೆ ಕೆಳಗೆ, ಅಡ್ಡಲಾಗಿ ಸಂಚಾರಮಾಡಲು ಎಲ್ಲಿಯೂ ಅವರಿಗೆ ತಡೆಯೇ ಇಲ್ಲ. ಯಾವ ದೊಡ್ಡಕಾರ್ಯವನ್ನು ಸಾಧಿಸುವುದಕ್ಕೂ ಅವರು ಹಿಂಜರಿಯುವುದಿಲ್ಲ (೩೫–೩೬). ಈ ಜಗತ್ತಿನಲ್ಲಿರುವ ಸಕಲ ಸಮುದ್ರಪರ್ವತಗಳನ್ನೂ ಆಕಾಶ ಮಾರ್ಗದಲ್ಲಿ ಎಷ್ಟೋ ಸಲ ಸುತ್ತಿಬಂದಿದ್ದಾರೆ. ಆ ಕಪಿಗಳು ನನಗಿಂತ

ಅಹಂ ತಾವದಿಹ ಪ್ರಾಪ್ತಃ ಕಿಂ ಪುನಸ್ತೇ ಮಹಾಬಲಾಃ ।
ನ ಹಿ ಪ್ರಕೃಷ್ಟಾಃ ಪ್ರೇಷ್ಯಂತೇ ಪ್ರೇಷ್ಯಂತೇ ಹೀತರೇ ಜನಾಃ ॥ ೩೯

ತದಲಂ ಪರಿತಾಪೇನ ದೇವಿ ಶೋಕೋ ವ್ಯಪೈತು ತೇ ।
ಏಕೋತ್ಪಾತೇನ ತೇ ಲಂಕಾಮೇಷ್ಯಂತಿ ಹರಿಯೂಥಪಾಃ ॥ ೪೦

ಮಮ ಪೃಷ್ಠಗತೌ ತೌ ಚ ಚಂದ್ರಸೂರ್ಯಾವಿವೋದಿತೌ ।
ತ್ವತ್ಸಕಾಶಂ ಮಹಾಸತ್ತ್ವೌ ನೃಸಿಂಹಾವಾಗಮಿಷ್ಯತಃ ॥ ೪೧

ತೌ ಹಿ ವೀರೌ ನರವರೌ ಸಹಿತೌ ರಾಮಲಕ್ಷ್ಮಣೌ ।
ಆಗಮ್ಯ ನಗರೀಂ ಲಂಕಾಂ ಸಾಯಕೈರ್ವಿಧಮಿಷ್ಯತಃ ॥ ೪೨

ಸಗಣಂ ರಾವಣಂ ಹತ್ವಾ ರಾಘವೋ ರಘುನಂದನಃ ।
ತ್ವಾಮಾದಾಯ ವರಾರೋಹೇ ಸ್ವಪುರಂ ಪ್ರತಿಯಾಸ್ಯತಿ ॥ ೪೩

ತದಾಶ್ವಸಿಹಿ ಭದ್ರಂ ತೇ ಭವ ತ್ವಂ ಕಾಲಕಾಂಕ್ಷಿಣೀ ।
ನ ಚಿರಾದ್ದ್ರಕ್ಷ್ಯಸೇ ರಾಮಂ ಪ್ರಜ್ವಲಂತಮಿವಾನಲಮ್ ॥ ೪೪

ನಿಹತೇ ರಾಕ್ಷಸೇಂದ್ರೇಽಸ್ಮಿನ್ ಸಪುತ್ರಾಮಾತ್ಯಬಾಂಧವೇ ।
ತ್ವಂ ಸಮೇಷ್ಯಸಿ ರಾಮೇಣ ಶಶಾಂಕೇನೇವ ರೋಹಿಣೀ ॥ ೪೫

ಬಲಶಾಲಿಗಳು. ಕೆಲವರು ನನ್ನಷ್ಟು ಬಲಶಾಲಿಗಳು. ನನಗಿಂತ ಕಡಿಮೆಯಾದವನು ಸುಗ್ರೀವನ ಬಳಿ ಒಬ್ಬನೂ ಇಲ್ಲ!(೩೭–೩೮). ನಾನೇ ಸಮುದ್ರವನ್ನು ದಾಟಿಬಂದೆ. ಆ ವೀರರ ವಿಷಯದಲ್ಲಿ ಹೇಳುವುದೇನು ? ಸಾಮಾನ್ಯರಾದವರನ್ನು ಇಂತಹ ದೂತಕಾರ್ಯಕ್ಕೆ ಕಳುಹಿಸುತ್ತಾರೆಯೇ ಹೊರತು ಉತ್ತಮರನ್ನು ಕಳುಹಿಸುವುದಿಲ್ಲ. ಆದ್ದರಿಂದ, ದೇವಿ, ನೀನು ಚಿಂತಿಸಬೇಡ. ಕಪಿವೀರರು ಒಂದೇ ನೆಗೆತಕ್ಕೆ ಲಂಕೆಯನ್ನು ಸೇರಿಬಿಡುವರು (೩೯–೪೦). ರಾಮಲಕ್ಷ್ಮಣರು ಉದಿಸಿಬಂದ ಸೂರ್ಯಚಂದ್ರರಂತೆ, ನನ್ನ ಬೆನ್ನಿನ ಮೇಲೆ ಏರಿ ಇಲ್ಲಿಗೆ ಬರುವರು. ನರಶ್ರೇಷ್ಠರಾದ ಆ ವೀರರು ಶರಗಳಿಂದ ಈ ಲಂಕೆಯನ್ನು ಧ್ವಂಸಮಾಡುವರು. ಶ್ರೀರಾಮನು ರಾವಣನನ್ನು ಸಪರಿವಾರವಾಗಿ ವಧಿಸಿ ನಿನ್ನನ್ನು ಅಯೋಧ್ಯಾನಗರಕ್ಕೆ ಕರೆದೊಯ್ಯುವನು (೪೧–೪೩). ಸಮಾಧಾನ ಮಾಡಿಕೊಳ್ಳಮ್ಮ, ನಿನಗೆ ಮಂಗಳವಾಗುವುದು. ಸ್ವಲ್ಪ

ಕ್ಷಿಪ್ರಂ ತ್ವಂ ದೇವೀ ಶೋಕಸ್ಯ ಪಾರಂ ಯಾಸ್ಯಸಿ ಮೈಥಿಲಿ ।
ರಾವಣಂ ಚೈವ ರಾಮೇಣ ನಿಹತಂ ದ್ರಕ್ಷ್ಯಸೇಽಚಿರಾತ್ ॥ ೪೬

ಏವಮಾಶ್ವಾಸ್ಯ ವೈದೇಹೀಂ ಹನುಮಾನ್ ಮಾರುತಾತ್ಮಜಃ ।
ಗಮನಾಯ ಮತಿಂ ಕೃತ್ವಾ ವೈದೇಹೀಂ ಪುನರಬ್ರವೀತ್ ॥ ೪೭

ತಮರಿಘ್ನಂ ಕೃತಾತ್ಮಾನಂ ಕ್ಷಿಪ್ರಂ ದ್ರಕ್ಷ್ಯಸಿ ರಾಘವಮ್ ।
ಲಕ್ಷ್ಮಣಂ ಚ ಧನುಷ್ಪಾಣಿಂ ಲಂಕಾದ್ವಾರಮುಪಸ್ಥಿತಮ್ ॥ ೪೮

ನಖದಂಷ್ಟ್ರಾಯುಧಾನ್ ವೀರಾನ್ ಸಿಂಹಶಾರ್ದೂಲವಿಕ್ರಮಾನ್ ।
ವಾನರಾನ್ ವಾರಣೇಂದ್ರಾಭಾನ್ ಕ್ಷಿಪ್ರಂ ದ್ರಕ್ಷ್ಯಸಿ ಸಂಗತಾನ್ ॥ ೪೯

ಶೈಲಾಂಬುದನಿಕಾಶಾನಾಂ ಲಂಕಾಮಲಯಸಾನುಷು ।
ನರ್ದತಾಂ ಕಪಿಮುಖ್ಯಾನಾಮಚಿರಾಚ್ಛ್ರೋಷ್ಯಸಿ ಸ್ವನಮ್ ॥ ೫೦

ಸ ತು ಮರ್ಮಣಿ ಘೋರೇಣ ತಾಡಿತೋ ಮನ್ಮಥೇಷುಣಾ ।
ನ ಶರ್ಮ ಲಭತೇ ರಾಮಃ ಸಿಂಹಾರ್ದಿತ ಇವ ದ್ವಿಪಃ ॥ ೫೧

ಸಮಯವನ್ನು ಪ್ರತೀಕ್ಷಿಸುತ್ತಿರು. ಪ್ರಜ್ವಲಿಸುವ ಅಗ್ನಿಯಂತೆ ರಾಮನು ನಿನಗೆ ಗೋಚರಿಸುವನು. ರಾವಣನು ಸತ್ತಮೇಲೆ, ರೋಹಿಣಿಯು ಚಂದ್ರನೊಡನೆ ಕೂಡಿಕೊಳ್ಳುವಂತೆ, ನೀನು ರಾಮನೊಡನೆ ಸೇರುವೆ (೪೪–೪೫). ಸದ್ಯದಲ್ಲಿಯೇ ನಿನ್ನ ಶೋಕವು ಕೊನೆಗೊಳ್ಳುವುದು. ಶ್ರೀರಾಮನು ರಾವಣನನ್ನು ಕೊಲ್ಲುವುದನ್ನು ನೀನೇ ನೋಡುವೆ'' ಎಂದು ಹೇಳಿ ಪ್ರಯಾಣಸನ್ನದ್ಧನಾದನು. ಮತ್ತೆ ಸೀತೆಯ ಕಡೆ ತಿರುಗಿ ''ರಾಮಲಕ್ಷ್ಮಣರು ಧನುಷ್ಪಾಣಿಗಳಾಗಿ ಲಂಕೆಯ ಬಾಗಿಲಲ್ಲಿ ಬಂದು ನಿಲ್ಲುವುದನ್ನು ನೀನೇ ನೋಡುತ್ತೀಯೆ (೪೬–೪೭). ಸಿಂಹಶಾರ್ದೂಲಗಳಂತೆ ಪರಾಕ್ರಮಿಗಳೂ, ಸಲಗಗಳಂತೆ ಮಹಾ ಶರೀರಧಾರಿಗಳೂ, ನಖದಂಷ್ಟ್ರಗಳಿಂದಲೇ ಹೋರಾಡತಕ್ಕವರೂ ಆದ ಕಪಿವೀರರು ಬಂದು ಮುತ್ತುವುದನ್ನು ನೀನೇ ನೋಡುತ್ತೀಯೆ. ಲಂಕೆಯ ಸಮೀಪದಲ್ಲಿ ಮಲಯಪರ್ವತಗಳ ಮೇಲೆ ಬೆಟ್ಟಗಳಂತೆಯೂ ಮೇಘಗಳಂತೆಯೂ ನೆರೆದು ಗರ್ಜಿಸುವ ಕಪಿವೀರರ ಸಿಂಹನಾದವನ್ನು ನೀನೇ ಕೇಳುತ್ತೀಯೆ (೪೮–೫೦). ಮದನಬಾಣದಿಂದ ಪೀಡಿತನಾದ ರಘುನಾಥನು

ಮಾ ರುದೋ ದೇವಿ ಶೋಕೇನ ಮಾ ಭೂತ್ತೇ ಮನಸೋಽಪ್ರಿಯಮ್
ಶಚೀವ ಪತ್ಯಾ ಶಕ್ರೇಣ ಭರ್ತ್ರಾ ನಾಥವತೀ ಹ್ಯಸಿ ॥ ೩೨

ರಾಮಾದ್ವಿಶಿಷ್ಟಃ ಕೋಽನ್ಯೋಽಸ್ತಿ ಕಶ್ಚಿತ್ಸೌಮಿತ್ರಿಣಾ ಸಮಃ ।
ಅಗ್ನಿಮಾರುತಕಲ್ಪೌ ತೌ ಭ್ರಾತರೌ ತವ ಸಂಶ್ರಯೌ ॥ ೩೩

ನಾಸ್ಮಿಂಶ್ಚಿರಂ ವತ್ಸ್ಯಸಿ ದೇವಿ ದೇಶೇ
ರಕ್ಷೋಗಣೈರಧ್ಯುಷಿತೇಽತಿರೌದ್ರೇ ।
ನ ತೇ ಚಿರಾದಾಗಮನಂ ಪ್ರಿಯಸ್ಯ
ಕ್ಷಮಸ್ವ ಮತ್ಸಂಗಮಕಾಲಮಾತ್ರಮ್ ॥ ೩೪

ಇತಿ ಶ್ರೀಮದ್ರಾಮಾಯಣೇ ಸುಂದರಕಾಂಡೇ ಏಕೋನಚತ್ವಾರಿಂಶಃ ಸರ್ಗಃ

ನಿನ್ನನ್ನು ಅಗಲಿದಮೇಲೆ, ಸಿಂಹಪೀಡಿತನಾದ ಗಜರಾಜನಂತೆ ವ್ಯಥೆಪಡುತ್ತಿದ್ದಾನೆ. ಅಮ್ಮ, ಅಳಬೇಡ; ಕೆಡಕನ್ನು ಚಿಂತಿಸಬೇಡ. ನಿನಗೆ ದೇವೇಂದ್ರನಂತಹ ಪತಿ ಇದ್ದಾನೆ. ನೀನು ಅನಾಥಳಲ್ಲ (೩೧–೩೨). ರಾಮನಿಗಿಂತ ಮೇಲಾದವನು ಯಾರು ? ಲಕ್ಷ್ಮಣನಿಗೆ ಸಾಟಿ ಯಾರು? ಆ ಸಹೋದರರು ಅಗ್ನಿ ಮಾರುತಗಳಂತೆ ನಿನಗೆ ಬೆಂಬಲವಾಗಿದ್ದಾರೆ. ದೇವಿ, ರಾಕ್ಷಸರು ವಾಸವಾಗಿರುವ ಈ ಭಯಂಕರ ದೇಶದಲ್ಲಿ ನೀನು ಇನ್ನು ಹೆಚ್ಚು ಕಾಲ ಇರಬೇಕಾಗಿಲ್ಲ. ಸದ್ಯದಲ್ಲಿಯೇ ನಿನ್ನ ಪ್ರಿಯನ ಸಮಾಗಮವಾಗುವುದು. ನಾನು ರಾಮನ ಬಳಿಗೆ ಹೋಗಿ ಸೇರುವುದೊಂದೇ ತಡ. ಅಲ್ಲಿಯವರೆಗೆ ಸಹಿಸಿಕೊಂಡಿರು'' ಎಂದನು (೩೩–೩೪).

ಇಲ್ಲಿಗೆ ಶ್ರೀಮದ್ರಾಮಾಯಣದ ಸುಂದರಕಾಂಡದಲ್ಲಿ ಮೂವತ್ತೊಂಬತ್ತನೆಯ ಸರ್ಗ

ಚತ್ವಾರಿಂಶಃ ಸರ್ಗಃ

ಹನೂಮತ್ಪ್ರೇಷಣಮ್

ಶ್ರುತ್ವಾ ತು ವಚನಂ ತಸ್ಯ ವಾಯುಸೂನೋರ್ಮಹಾತ್ಮನಃ ।
ಉವಾಚಾತ್ಮಹಿತಂ ವಾಕ್ಯಂ ಸೀತಾ ಸುರಸುತೋಪಮಾ ॥ ೧
ತ್ವಾಂ ದೃಷ್ಟ್ವಾ ಪ್ರಿಯವಕ್ತಾರಂ ಸಂಪ್ರಹೃಷ್ಯಾಮಿ ವಾನರ ।
ಅರ್ಧಸಂಜಾತಸಸ್ಯೇವ ವೃಷ್ಟಿಂ ಪ್ರಾಪ್ಯ ವಸುಂಧರಾ ॥ ೨
ಯಥಾ ತಂ ಪುರುಷವ್ಯಾಘ್ರಂ ಗಾತ್ರೈಃ ಶೋಕಾಭಿಕರ್ಶಿತೈಃ ।
ಸಂಸ್ಪೃಶೇಯಂ ಸಕಾಮಾಹಂ ತಥಾ ಕುರು ದಯಾಂ ಮಯಿ ॥ ೩
ಅಭಿಜ್ಞಾನಂ ಚ ರಾಮಸ್ಯ ದದ್ಯಾ ಹರಿಗಣೋತ್ತಮ ।
ಕ್ಷಿಪ್ತಾಮಿಷೀಕಾಂ ಕಾಕಸ್ಯ ಕೋಪಾದೇಕಾಕ್ಷಿಶಾತನೀಮ್ ॥ ೪
ಮನಃಶಿಲಾಯಾಸ್ತಿಲಕೋ ಗಂಡಪಾರ್ಶ್ವೇ ನಿವೇಶಿತಃ ।
ತ್ವಯಾ ಪ್ರನಷ್ಟೇ ತಿಲಕೇ ತಂ ಕಿಲ ಸ್ಮರ್ತುಮರ್ಹಸಿ ॥ ೫

ಸರ್ಗ ೪೦

ರಾಮನು ಸೀತೆಯ ಹಣೆಯಮೇಲೆ ಮಣಿಶಿಲೆಯಿಂದ ತಿಲಕವನ್ನು ರಚಿಸಿದನೆಂಬ ಇನ್ನೊಂದು ಗುರುತನ್ನು ಹೇಳಿ, ಸೀತೆಯು ಹನುಮಂತನನ್ನು ಬೀಳ್ಕೊಡುವುದು.

ಆಗ ದೇವಕನ್ಯೆಯಂತಿರುವ ಸೀತಾದೇವಿಯು ತನಗೆ ಹಿತಕರವಾದ ಇನ್ನೊಂದು ಮಾತನ್ನು ಹೇಳಿದಳು: ''ಕಪಿಶ್ರೇಷ್ಠನೆ, ಸಸಿಗಳು ಅರ್ಧ ಬೆಳೆದು ನಿಂತಿರುವಾಗ ಒಣಗುತ್ತಿರುವ ಭೂಮಿಗೆ ಮಳೆಯು ಬಂದರೆ ಉಲ್ಲಾಸವಾಗುವಂತೆ, ನಿನ್ನ ಮಾತನ್ನು ಕೇಳಿ ನನಗೆ ಉಲ್ಲಾಸವಾಯಿತು (೧–೨). ವಿರಹಶೋಕದಿಂದ ಬಸವಳಿದ ಅಂಗಗಳಿಂದ ಶ್ರೀರಾಮನನ್ನು ಗಾಢವಾಗಿ ಸ್ಪರ್ಶ ಮಾಡಲು ಹಾತೊರೆಯುತ್ತಿದ್ದೇನೆ. ನನ್ನ ಆಸೆಯನ್ನು ದಯೆದೋರಿ ನೆರವೇರಿಸಿಕೊಡು. ನಾನು ಅಭಿಜ್ಞಾನವಾಗಿ ಕೊಟ್ಟಿರುವ ಚೂಡಾಮಣಿಯನ್ನು ರಾಮನಿಗೆ ಕೊಡು. ಅವನು ಕೋಪದಿಂದ ದರ್ಭೆಯನ್ನು ಪ್ರಯೋಗಿಸಿ ಕಾಗೆಯ ಕಣ್ಣನ್ನು ನಾಶಮಾಡಿದ ವೃತ್ತಾಂತವನ್ನು ಹೇಳು

ಸ ವೀರ್ಯವಾನ್ ಕಥಂ ಸೀತಾಂ ಹೃತಾಂ ಸಮನುಮನ್ಯಸೇ ।
ವಸಂತೀಂ ರಕ್ಷಸಾಂ ಮಧ್ಯೇ ಮಹೇಂದ್ರವರುಣೋಪಮಃ ॥ ೬
ಏಷ ಚೂಡಾಮಣಿರ್ದಿವ್ಯೋ ಮಯಾ ಸುಪರಿರಕ್ಷಿತಃ ।
ಏತಂ ದೃಷ್ಟ್ವಾ ಪ್ರಹೃಷ್ಯಾಮಿ ವ್ಯಸನೇ ತ್ವಾಮಿವಾನಘ ॥ ೭
ಏಷ ನಿರ್ಯಾತಿತಃ ಶ್ರೀಮಾನ್ ಮಯಾ ತೇ ವಾರಿಸಂಭವಃ ।
ಅತಃ ಪರಂ ನ ಶಕ್ಷ್ಯಾಮಿ ಜೀವಿತುಂ ಶೋಕಲಾಲಸಾ ॥ ೮
ಅಸಹ್ಯಾನಿ ಚ ದುಃಖಾನಿ ವಾಚಶ್ಚ ಹೃದಯಚ್ಛಿದಃ ।
ರಾಕ್ಷಸೀನಾಂ ಸುಘೋರಾಣಾಂ ತ್ವತ್ಕೃತೇ ಮರ್ಷಯಾಮ್ಯಹಮ್ ॥ ೯
ಧಾರಯಿಷ್ಯಾಮಿ ಮಾಸಂ ತು ಜೀವಿತಂ ಶತ್ರುಸೂದನ ।
ಮಾಸಾದೂರ್ಧ್ವಂ ನ ಜೀವಿಷ್ಯೇ ತ್ವಯಾ ಹೀನಾ ನೃಪಾತ್ಮಜ ॥ ೧೦
ಘೋರೋ ರಾಕ್ಷಸರಾಜೋಽಯಂ ದೃಷ್ಟಿಶ್ಚ ನ ಸುಖಾ ಮಯಿ ।
ತ್ವಾಂ ಚ ಶ್ರುತ್ವಾ ವಿಷಜ್ಜಂತಂ ನ ಜೀವೇಯಮಹಂ ಕ್ಷಣಮ್ ॥ ೧೧

(೩–४). ಇನ್ನೂ ಒಂದು ಗುರುತನ್ನು ನಾನು ಹೇಳಿದೆನೆಂದು ತಿಳಿಸು : 'ಹೇ ಪ್ರಿಯ, ಒಮ್ಮೆ ನನ್ನ ತಿಲಕವು ಅಳಿಸಿಹೋಗಿರಲು, ನೀನೇ ನನ್ನ ಕಪೋಲದಮೇಲೆ ಮಣಿಶಿಲೆಯಿಂದ ತಿಲಕವನ್ನಿಟ್ಟೆಯಲ್ಲವೆ ? ಜ್ಞಾಪಿಸಿಕೊಂಡು ನೋಡು. ಅಂತಹ ನೀನು ಮಹಾವೀರನಾಗಿದ್ದರೂ ಸೀತೆಯು ಅಪಹೃತಳಾಗಿ ರಾಕ್ಷಸರ ಮಧ್ಯದಲ್ಲಿರುವುದನ್ನು ಹೇಗೆ ಸಹಿಸಿಕೊಂಡಿರುವೆ ?' (೫–೬). ಈ ಚೂಡಾಮಣಿಯನ್ನು ಬಹು ಶ್ರಮದಿಂದ ಕಾಪಾಡಿಕೊಂಡಿದ್ದೆನು. ನನಗೆ ತಡೆಯಲಾರದಷ್ಟು ದುಃಖವಾದಾಗ ಇದನ್ನು ನೋಡಿ ನಿನ್ನನ್ನು ನೋಡಿದಂತೆ ಸಂತೋಷಪಡುತ್ತಿದ್ದೆನು ಈ ದಿವ್ಯಮಣಿಯನ್ನು ಈಗ ನಿನಗೆ ಕಳಿಸಿಬಿಟ್ಟೆನು. ಇನ್ನು ಈ ದುಃಖದಲ್ಲಿ ನಾನು ಬದುಕುವುದು ಕಷ್ಟ (೭–೮). ಈ ಘೋರರಾಕ್ಷಸಿಯರು ಕೊಡುವ ಅಸಹ್ಯವಾದ ಯಾತನೆಗಳನ್ನು, ಆಡುವ ಕರ್ಣಕಠೋರವಾದ ಮಾತುಗಳನ್ನು—ನಿನಗೋಸ್ಕರ ಸಹಿಸಿಕೊಂಡಿದ್ದೇನೆ. ಇನ್ನು ಒಂದು ತಿಂಗಳು ಹೇಗಾದರೂ ಜೀವಿಸಿರುವೆನು. ಅನಂತರ ನಿಶ್ಚಯವಾಗಿಯೂ ಪ್ರಾಣವನ್ನಿಟ್ಟುಕೊಳ್ಳುವುದಿಲ್ಲ (೯–೧೦). ಈ ರಾಕ್ಷಸರಾಜನು ಭಯಂಕರನು. ಅವನಿಗೆ ನನ್ನ ಮೇಲೆ ಸ್ವಲ್ಪವೂ ಸೌಮ್ಯದೃಷ್ಟಿ ಇಲ್ಲ.

ವೈದೇಹ್ಯಾ ವಚನಂ ಶ್ರುತ್ವಾ ಕರುಣಂ ಸಾಶ್ರುಭಾಷಿತಮ್ ।
ಅಥಾಬ್ರವೀನ್ಮಹಾತೇಜಾ ಹನುಮಾನ್ ಮಾರುತಾತ್ಮಜಃ ॥ ೧೨
ತ್ವಚ್ಛೋಕವಿಮುಖೋ ರಾಮೋ ದೇವಿ ಸತ್ಯೇನ ತೇ ಶಪೇ ।
ರಾಮೇ ದುಃಖಾಭಿಭೂತೇ ತು ಲಕ್ಷ್ಮಣಃ ಪರಿತಪ್ಯತೇ ॥ ೧೩
ಕಥಂಚಿದ್ಭವತೀ ದೃಷ್ಟ್ವಾ ನ ಕಾಲಃ ಪರಿಶೋಚಿತುಮ್ ।
ಇಮಂ ಮುಹೂರ್ತಂ ದುಃಖಾನಾಮಂತಂ ದ್ರಕ್ಷ್ಯಸಿ ಭಾಮಿನಿ ॥ ೧೪
ತಾವುಭೌ ಪುರುಷವ್ಯಾಘ್ರೌ ರಾಜಪುತ್ರಾವರಿಂದಮೌ ।
ತ್ವದ್ದರ್ಶನಕೃತೋತ್ಸಾಹೌ ಲಂಕಾಂ ಭಸ್ಮೀಕರಿಷ್ಯತಃ ॥ ೧೫
ಹತ್ವಾ ತು ಸಮರೇ ಕ್ರೂರಂ ರಾವಣಂ ಸಹಬಾಂಧವಮ್ ।
ರಾಘವೌ ತ್ವಾಂ ವಿಶಾಲಾಕ್ಷಿ ಸ್ವಾಂ ಪುರೀಂ ಪ್ರಾಪಯಿಷ್ಯತಃ ॥ ೧೬
ಯತ್ತು ರಾಮೋ ವಿಜಾನೀಯಾದಭಿಜ್ಞಾನಮನಿಂದಿತೇ ।
ಪ್ರೀತಿಸಂಜನನಂ ತಸ್ಯ ಭೂಯಸ್ತ್ವಂ ದಾತುಮರ್ಹಸಿ ॥ ೧೭
ಸಾಬ್ರವೀದ್ದತ್ತಮೇವೇತಿ ಮಯಾಭಿಜ್ಞಾನಮುತ್ತಮಮ್ ।
ಏತದೇವ ಹಿ ರಾಮಸ್ಯ ದೃಷ್ಟ್ವಾ ಮತ್ಕೇಶಭೂಷಣಮ್ ॥ ೧೮

ನೀನು ತಡಮಾಡುವುದಾದರೆ ಒಂದು ನಿಮಿಷವೂ ನಾನು ಬದುಕಿರಲಾರೆ'' (೧೧). ಸೀತೆಯು ಹೀಗೆ ಕಣ್ಣೀರು ಸುರಿಸುತ್ತ ಆಡಿದ ಮಾತನ್ನು ಕೇಳಿ ಹನುಮಂತನು ''ಅಮ್ಮಾ, ಸತ್ಯದ ಆಣೆಯಾಗಿಯೂ ರಾಮನು ನಿನ್ನ ವಿರಹದುಃಖದಿಂದ ಲೋಕ ವ್ಯಾಪಾರವನ್ನೇ ಮರೆತಂತಿರುವನು. ಅವನ ದುಃಖವನ್ನು ಕಂಡು ಲಕ್ಷ್ಮಣನೂ ಸಂಕಟಪಡುತ್ತಿದ್ದಾನೆ. ಅಂತೂ ನಿನ್ನನ್ನು ಕಂಡದ್ದಾಯಿತು. ಇದು ಶೋಕಿಸುವ ಕಾಲವಲ್ಲ. ಬೇಗನೆ ನಿನ್ನ ದುಃಖವು ಮುಗಿಯುವುದು (೧೨–೧೪). ಆ ರಾಜ ಪುತ್ರರು ನಿನ್ನನ್ನು ಕಾಣುವ ಉತ್ಸಾಹದಿಂದ ಲಂಕೆಯನ್ನು ಸುಟ್ಟು ಬೂದಿಮಾಡು ವರು. ಅವರು ರಾವಣನನ್ನು ಬಂಧುಸಮೇತವಾಗಿ ಕೊಂದು ನಿನ್ನನ್ನು ಅಯೋಧ್ಯೆಗೆ ಕರೆದೊಯ್ಯುವರು. ಶ್ರೀರಾಮನಿಗೆ ಆನಂದವನ್ನುಂಟುಮಾಡತಕ್ಕ ಇನ್ನೂ ಯಾವು ದಾದರೂ ಅಭಿಜ್ಞಾನವಿದ್ದರೆ ಅದನ್ನು ಕೊಡು'' ಎಂದನು (೧೫–೧೭). ಸೀತೆಯು ''ಶ್ರೇಷ್ಠವಾದ ಅಭಿಜ್ಞಾನವನ್ನೇ ಕೊಟ್ಟಿರುವೆನು. ನನ್ನ ಶಿರೋಭೂಷಣವಾದ ಈ

ಶ್ರದ್ಧೇಯಂ ಹನುಮನ್ ವಾಕ್ಯಂ ತವ ವೀರ ಭವಿಷ್ಯತಿ ।
ಸ ತಂ ಮಣಿವರಂ ಗೃಹ್ಯ ಶ್ರೀಮಾನ್ ಪ್ಲವಗಸತ್ತಮಃ ॥ ೧೯

ಪ್ರಣಮ್ಯ ಶಿರಸಾ ದೇವೀಂ ಗಮನಾಯೋಪಚಕ್ರಮೇ ।
ತಮುತ್ಪಾತಕೃತೋತ್ಸಾಹಮವೇಕ್ಷ್ಯ ಹರಿಪುಂಗವಮ್ ॥ ೨೦

ವರ್ಧಮಾನಂ ಮಹಾವೇಗಮುವಾಚ ಜನಕಾತ್ಮಜಾ ।
ಅಶ್ರುಪೂರ್ಣಮುಖೀ ದೀನಾ ಬಾಷ್ಪಗದ್ಗದಯಾ ಗಿರಾ ॥ ೨೧

ಹನುಮನ್ ಸಿಂಹಸಂಕಾಶೌ ಭ್ರಾತರೌ ರಾಮಲಕ್ಷ್ಮಣೌ ।
ಸುಗ್ರೀವಂ ಚ ಸಹಾಮಾತ್ಯಂ ಸರ್ವಾನ್ ಬ್ರೂಯಾ ಹ್ಯನಾಮಯಮ್

ಯಥಾ ಚ ಸ ಮಹಾಬಾಹುರ್ಮಾಂ ತಾರಯತಿ ರಾಘವಃ ।
ಅಸ್ಮಾದ್ದುಃಖಾಂಬುಸಂರೋಧಾತ್ತ್ವಂ ಸಮಾಧಾತುಮರ್ಹಸಿ ॥ ೨೩

ಇಮಂ ಚ ತೀವ್ರಂ ಮಮ ಶೋಕವೇಗಂ
ರಕ್ಷೋಭಿರೇಭಿಃ ಪರಿಭರ್ತ್ಸನಂ ಚ ।
ಬ್ರೂಯಾಸ್ತು ರಾಮಸ್ಯ ಗತಃ ಸಮೀಪಂ
ಶಿವಶ್ಚ ತೇಽಧ್ವಾಸ್ತು ಹರಿಪ್ರವೀರ ॥ ೨೪

ಚೂಡಾಮಣಿಯನ್ನು ನೋಡಿದಕೂಡಲೆ, ರಾಮನಿಗೆ ನಿನ್ನ ಮಾತಿನಲ್ಲಿ ನಂಬಿಕೆ ಹುಟ್ಟುವುದು'' ಎಂದಳು. ಆ ದಿವ್ಯಮಣಿಯನ್ನು ತೆಗೆದುಕೊಂಡು ಹನುಮಂತನು ಸೀತೆಗೆ ವಂದಿಸಿ ಹೊರಡಲನುವಾದನು (೧೮–೨೦). ಪ್ರಯಾಣಕ್ಕಾಗಿ ದೇಹವನ್ನು ಬೆಳೆಯಿಸಿಕೊಳ್ಳುತ್ತಿದ್ದ ಆ ವೇಗಶಾಲಿಯನ್ನು ಕಂಡು ಸೀತೆಗೆ ದುಃಖವು ಉಕ್ಕಿ ಬಂದಿತು. ಬಳಬಳನೆ ಕಣ್ಣೀರು ಸುರಿಸುತ್ತ ಗದ್ಗದಸ್ವರದಿಂದ ''ಅಪ್ಪಾ-ಹನುಮಂತ, ಸಿಂಹಪರಾಕ್ರಮಿಗಳಾದ ರಾಮಲಕ್ಷ್ಮಣರಿಗೂ, ಸುಗ್ರೀವನಿಗೂ, ಅವನ ಮಂತ್ರಿಗಳಿಗೂ, ಎಲ್ಲರಿಗೂ ಕುಶಲವನ್ನು ವಿಚಾರಿಸಿದೆನೆಂದು ಹೇಳು. ನನ್ನನ್ನು ಈ ದುಃಖಸಮುದ್ರದಿಂದ ಶ್ರೀರಾಮನು ಪಾರುಮಾಡುವಂತೆ ಏರ್ಪಡಿಸುವ ಭಾರ ನಿನಗೆ ಸೇರಿದ್ದು (೨೧–೨೩). ತಡೆಯಲಾಗದ ನನ್ನ ಕಷ್ಟವನ್ನೂ ಈ ರಾಕ್ಷಸರು ಹೆದರಿಸುವುದನ್ನೂ ರಾಮನ ಹತ್ತಿರ ಹೋಗಿ ಹೇಳು. ನಿನ್ನ ಪ್ರಯಾಣ ಸುಖವಾಗಿ

ಸ ರಾಜಪುತ್ರ್ಯಾ ಪ್ರತಿವೇದಿತಾರ್ಥಃ
ಕಪಿಃ ಕೃತಾರ್ಥಃ ಪರಿಹೃಷ್ಟಚೇತಾಃ ।
ಅಲ್ಪಾವಶೇಷಂ ಪ್ರಸಮೀಕ್ಷ್ಯ ಕಾರ್ಯಂ
ದಿಶಂ ಹ್ಯುದೀಚೀಂ ಮನಸಾ ಜಗಾಮ ॥ ೨೫

ಇತಿ ಶ್ರೀಮದ್ರಾಮಾಯಣೇ ಸುಂದರಕಾಂಡೇ ಚತ್ವಾರಿಂಶಃ ಸರ್ಗಃ

ನಡೆಯಲಿ'' ಎಂದಳು (೨೪). ಹೀಗೆ ಆಂಜನೇಯನು ಆ ರಾಜಪುತ್ರಿಯಿಂದ ವಿಷಯವೆಲ್ಲವನ್ನೂ ತಿಳಿದುಕೊಂಡು, ತಾನು ಬಂದುದು ಸಫಲವಾಯಿತೆಂದು ಆನಂದದಿಂದ ಹಿಗ್ಗಿಹೋದನು. ಇನ್ನು ಉಳಿದಿರುವ ಕೆಲಸ ಅತ್ಯಲ್ಪವೆಂದೆಣಿಸಿ, ಮನಸ್ಸಿನಲ್ಲಿಯೇ ಉತ್ತರ ದಿಕ್ಕಿನಲ್ಲಿ ರಾಮನಿದ್ದೆಡೆಯನ್ನು ಸೇರಿಬಿಟ್ಟನು (೨೫).

ಇಲ್ಲಿಗೆ ಶ್ರೀಮದ್ರಾಮಾಯಣದ ಸುಂದರಕಾಂಡದಲ್ಲಿ ನಲವತ್ತನೆಯ ಸರ್ಗ

ಏಕಚತ್ವಾರಿಂಶಃ ಸರ್ಗಃ

ಪ್ರಮದಾವನಭಂಜನಮ್

ಸ ಚ ವಾಗ್ಭಿಃ ಪ್ರಶಸ್ತಾಭಿರ್ಗಮಿಷ್ಯನ್ ಪೂಜಿತಸ್ತಯಾ ।
ತಸ್ಮಾದ್ದೇಶಾದಪಕ್ರಮ್ಯ ಚಿಂತಯಾಮಾಸ ವಾನರಃ ॥ ೧

ಅಲ್ಪಶೇಷಮಿದಂ ಕಾರ್ಯಂ ದೃಷ್ಟೇಯಮಸಿತೇಕ್ಷಣಾ ।
ತ್ರೀನುಪಾಯಾನತಿಕ್ರಮ್ಯ ಚತುರ್ಥ ಇಹ ದೃಶ್ಯತೇ ॥ ೨

ನ ಸಾಮ ರಕ್ಷಃಸು ಗುಣಾಯ ಕಲ್ಪತೇ ।
ನ ದಾನಮರ್ಥೋಪಚಿತೇಷು ಯುಜ್ಯತೇ ।
ನ ಭೇದಸಾಧ್ಯಾ ಬಲದರ್ಪಿತಾ ಜನಾಃ
ಪರಾಕ್ರಮಸ್ತ್ವೇವ ಮಮೇಹ ರೋಚತೇ ॥ ೩

ನ ಚಾಸ್ಯ ಕಾರ್ಯಸ್ಯ ಪರಾಕ್ರಮಾದೃತೇ
ವಿನಿಶ್ಚಯಃ ಕಶ್ಚಿದಿಹೋಪಪದ್ಯತೇ ।
ಹತಪ್ರವೀರಾಶ್ಚ ರಣೇ ಹಿ ರಾಕ್ಷಸಾಃ
ಕಥಂಚಿದೀಯುರ್ಯದಿಹಾದ್ಯ ಮಾರ್ದವಮ್ ॥ ೪

ಸರ್ಗ ೪೧

ಹನುಮಂತನು ಅಶೋಕವನ್ನು ನಾಶಗೊಳಿಸುವುದು.

ಈ ಪ್ರಕಾರ ಸೀತೆಯಿಂದ ಸಮ್ಮಾನಿತನಾದ ಹನುಮಂತನು ಅಲ್ಲಿಂದ ಹೊರಟು ಮತ್ತೊಂದು ಸ್ಥಳಕ್ಕೆ ಹೋಗಿ, ತನ್ನ ಮನಸ್ಸಿನಲ್ಲಿಯೇ ಆಲೋಚಿಸಿದನು : "ಸೀತೆಯನ್ನು ನೋಡಬೇಕೆಂಬ ದೊಡ್ಡ ಕಾರ್ಯವು ನೆರವೇರಿತು. ಇನ್ನು ಉಳಿದಿರುವ ಕೆಲಸ ಅತ್ಯಲ್ಪ. ಇದನ್ನು ಸಾಧಿಸಲು ಸಾಮ ದಾನ ಭೇದಗಳೆಂಬ ಮೂರು ಉಪಾಯಗಳೂ ಉಪಯುಕ್ತವಾಗಲಾರವು. ನಾಲ್ಕನೆಯ ದಂಡೋಪಾಯವೇ ಸರಿಯೆಂದು ತೋರುತ್ತದೆ (೧–೨). ಕ್ರೂರಿಗಳಾದ ರಾಕ್ಷಸರಲ್ಲಿ ಸಾಮೋಪಾಯದಿಂದ ಗುಣವಿಲ್ಲ. ಶ್ರೀಮಂತರಲ್ಲಿ ದಾನವೂ ಕೆಲಸಕ್ಕೆ ಬಾರದು. ಬಲದಿಂದ ಸೊಕ್ಕಿಹೋಗಿರುವವರಲ್ಲಿ ಭೇದವೂ ಫಲಿಸುವುದಿಲ್ಲ.

ಕಾರ್ಯೇ ಕರ್ಮಣಿ ನಿರ್ದಿಷ್ಟೇ ಯೋ ಬಹೂನ್ಯಪಿ ಸಾಧಯೇತ್ ।
ಪೂರ್ವಕಾರ್ಯಾವಿರೋಧೇನ ಸ ಕಾರ್ಯಂ ಕರ್ತುಮರ್ಹತಿ ॥ ५

ನ ಹ್ಯೇಕಃ ಸಾಧಕೋ ಹೇತುಃ ಸ್ವಲ್ಪಸ್ಯಾಪೀಹ ಕರ್ಮಣಃ ।
ಯೋ ಹ್ಯರ್ಥಂ ಬಹುಧಾ ವೇದ ಸ ಸಮರ್ಥೋಽರ್ಥಸಾಧನೇ ॥ ६

ಇಹೈವ ತಾವತ್ ಕೃತನಿಶ್ಚಯೋ ಹ್ಯಹಂ
ಯದಿ ವ್ರಜೇಯಂ ಪ್ಲವಗೇಶ್ವರಾಲಯಮ್ ।
ಪರಾತ್ಮಸಂಮರ್ದವಿಶೇಷತತ್ತ್ವವಿ-
ತ್ತತಃ ಕೃತಂ ಸ್ಯಾನ್ಮಮ ಭರ್ತೃಶಾಸನಮ್ ॥ ७

ಕಥಂ ನು ಖಲ್ವದ್ಯ ಭವೇತ್ ಸುಖಾಗತಂ
ಪ್ರಸಹ್ಯ ಯುದ್ಧಂ ಮಮ ರಾಕ್ಷಸೈಃ ಸಹ ।
ತಥೈವ ಖಲ್ವಾತ್ಮಬಲಂ ಚ ಸಾರವತ್
ಸಂಮಾನಯೇನ್ಮಾಂ ಚ ರಣೇ ದಶಾನನಃ ॥ ८

ಆದ್ದರಿಂದ ಇವರಲ್ಲಿ ಪರಾಕ್ರಮವನ್ನು ತೋರಿಸುವುದೇ ಸರಿಯೆಂದು ಅನ್ನಿಸುತ್ತದೆ. ಪರಾಕ್ರಮವನ್ನು ಬಿಟ್ಟರೆ ಇನ್ನು ಯಾವ ಉಪಾಯವೂ ಇಲ್ಲ. ಈಗ ನಾನೊಬ್ಬನೇ ರಾಕ್ಷಸರಲ್ಲಿ ಪ್ರಮುಖರಾದ ಕೆಲವರನ್ನು ಕೊಂದುಬಿಟ್ಟರೆ, ಉಳಿದವರು ಆಮೇಲೆ ತಗ್ಗಿ ನಡೆಯಬಹುದು (३–४). ಒಂದು ಕಾರ್ಯಕ್ಕೆ ನೇಮಿಸಿದಾಗ ಆ ಕಾರ್ಯಕ್ಕೆ ವಿರೋಧವಿಲ್ಲದಂತೆ ಅದರ ಜೊತೆಗೆ ಇತರ ಕಾರ್ಯಗಳನ್ನು ಸಾಧಿಸುವುದು ಯುಕ್ತ. ಹಾಗೆ ಸಾಧಿಸುವವನೇ ಕಾರ್ಯದಕ್ಷ. ಚಿಕ್ಕ ಕೆಲಸವನ್ನು ಮಹಾಪ್ರಯತ್ನದಿಂದ ಸಾಧಿಸುವವನು ಕಾರ್ಯಸಾಧಕನೆನಿಸಲಾರನು. ಕೆಲಸವನ್ನು ಬಹುಮುಖದಿಂದ ವಿಚಾರಮಾಡಿ ನಡೆಸತಕ್ಕವನು ಕಾರ್ಯಸಾಧಕನೆನಿಸಿಕೊಳ್ಳು ತ್ತಾನೆ (५–६). ಈಗ ಶತ್ರುಗಳ ಬಲವೆಷ್ಟು? ನಮ್ಮ ಬಲವೆಷ್ಟು?— ಎಂಬ ತಾರತಮ್ಯವನ್ನು ಇಲ್ಲಿಯೇ ನಾನು ನಿಶ್ಚಯಪಡಿಸಿಕೊಂಡು ಸುಗ್ರೀವನ ಬಳಿಗೆ ಹೋದರೆ ಸ್ವಾಮಿಯ ಆಜ್ಞೆಯನ್ನು ನೆರವೇರಿಸಿದಂತೆ ಆಗುವುದು (७). ಏನುಮಾಡಿದರೆ ಈಗ ರಾಕ್ಷಸರೊಡನೆ ಯುದ್ಧಮಾಡುವ ಪ್ರಸಂಗವು ನನಗೆ ಸುಲಭವಾಗಿ ದೊರಕೀತು? ರಾವಣನಿಗೆ ತನ್ನ ಸೈನ್ಯಕ್ಕೂ ನನಗೂ ಇರುವ

ತತಃ ಸಮಾಸಾದ್ಯ ರಣೇ ದಶಾನನಂ
ಸಮಂತ್ರಿವರ್ಗಂ ಸಬಲಪ್ರಯಾಯಿನಮ್ ।
ಹೃದಿ ಸ್ಥಿತಂ ತಸ್ಯ ಮತಂ ಬಲಂ ಚ ವೈ
ಸುಖೇನ ಮತ್ವಾಹಮಿತಃ ಪುನರ್ವ್ರಜೇ ॥ ೯

ಇದಮಸ್ಯ ನೃಶಂಸಸ್ಯ ನಂದನೋಪಮಮುತ್ತಮಮ್ ।
ವನಂ ನೇತ್ರಮನಃಕಾಂತಂ ನಾನಾದ್ರುಮಲತಾಯುತಮ್ ॥ ೧೦

ಇದಂ ವಿಧ್ವಂಸಯಿಷ್ಯಾಮಿ ಶುಷ್ಕಂ ವನಮಿವಾನಲಃ ।
ಅಸ್ಮಿನ್ ಭಗ್ನೇ ತತಃ ಕೋಪಂ ಕರಿಷ್ಯತಿ ದಶಾನನಃ ॥ ೧೧

ತತೋ ಮಹತ್ ಸಾಶ್ವಮಹಾರಥದ್ವಿಪಂ
ಬಲಂ ಸಮಾದೇಕ್ಷ್ಯತಿ ರಾಕ್ಷಸಾಧಿಪಃ ।
ತ್ರಿಶೂಲಕಾಲಾಯಸಪಟ್ಟಸಾಯುಧಂ
ತತೋ ಮಹದ್ಯುದ್ಧಮಿದಂ ಭವಿಷ್ಯತಿ ॥ ೧೨

ಅಹಂ ತು ತೈಃ ಸಂಯತಿ ಚಂಡವಿಕ್ರಮೈಃ
ಸಮೇತ್ಯ ರಕ್ಷೋಭಿರಸಹ್ಯವಿಕ್ರಮಃ ।

ಪರಾಕ್ರಮದ ವ್ಯತ್ಯಾಸವು ಮನವರಿಕೆಯಾದೀತು? (೮). ಯುದ್ಧದಲ್ಲಿ ರಾವಣನನ್ನೂ ಅವನ ಮಂತ್ರಿಗಳನ್ನೂ ಸೇನಾಪತಿಗಳನ್ನೂ ಸಂದರ್ಶಿಸಿ, ರಾವಣನ ಬಲವೆಷ್ಟು? ಅವನ ಮನಸ್ಸಿನಲ್ಲಿ ಇರುವುದಾದರೂ ಏನು?— ಎಂಬುದನ್ನು ತಿಳಿದುಕೊಂಡೇ ಇಲ್ಲಿಂದ ಹೋಗಬೇಕು (೯). ಇರಲಿ. ಆ ದುಷ್ಟನಿಗೆ ಸೇರಿದ ಈ ಅಶೋಕವನವು ನಂದನವನದಂತೆ ನೇತ್ರಾನಂದಕರವಾಗಿದೆ. ಮರಬಳ್ಳಿಗಳಿಂದ ಸುಂದರವಾಗಿದೆ. ಕಾಳ್ಗಿಚ್ಚು ಒಣಗಿದ ಕಾಡನ್ನು ಸುಡುವಂತೆ, ಇದನ್ನು ಧ್ವಂಸಮಾಡಿಬಿಡುತ್ತೇನೆ. ಆಗ ರಾವಣನಿಗೆ ಕೋಪ ಬರುತ್ತದೆ (೧೦–೧೧). ಅವನು ಆನೆ, ಕುದುರೆ, ರಥಗಳಿಂದ ಯುಕ್ತವಾದ ಸೇನೆಯನ್ನು ನನ್ನ ಮೇಲೆ ಕಳಿಸುವನು. ಸೈನಿಕರು ಶೂಲ, ಪಟ್ಟಸ ಮುಂತಾದ ಆಯುಧಗಳನ್ನು ಧರಿಸಿ ಬರಲಾಗಿ ದೊಡ್ಡ ಯುದ್ಧವೇ ಆರಂಭವಾಗುವುದು (೧೨). ನಾನು ಪ್ರಚಂಡರಾದ

ನಿಹತ್ಯ ತದ್ರಾವಣಚೋದಿತಂ ಬಲಂ
ಸುಖಂ ಗಮಿಷ್ಯಾಮಿ ಕಪೀಶ್ವರಾಲಯಮ್ ॥ ೧೩

ತತೋ ಮಾರುತವತ್ ಕ್ರುದ್ಧೋ ಮಾರುತಿರ್ಭೀಮವಿಕ್ರಮಃ ।
ಊರುವೇಗೇನ ಮಹತಾ ದ್ರುಮಾನ್ ಕ್ಷೇಪ್ತುಮಥಾರಭತ್ ॥ ೧೪

ತತಸ್ತು ಹನುಮಾನ್ ವೀರೋ ಬಭಂಜ ಪ್ರಮದಾವನಮ್ ।
ಮತ್ತದ್ವಿಜಸಮಾಘುಷ್ಟಂ ನಾನಾದ್ರುಮಲತಾಯುತಮ್ ॥ ೧೫

ತದ್ವನಂ ಮಥಿತೈರ್ವೃಕ್ಷೈರ್ಭಿನ್ನೈಶ್ಚ ಸಲಿಲಾಶಯೈಃ ।
ಚೂರ್ಣಿತೈಃ ಪರ್ವತಾಗ್ರೈಶ್ಚ ಬಭೂವಾಪ್ರಿಯದರ್ಶನಮ್ ॥ ೧೬

ನಾನಾಶಕುಂತವಿರುತೈಃ ಪ್ರಭಿನ್ನೈಃ ಸಲಿಲಾಶಯೈಃ ।
ತಾಮ್ರೈಃ ಕಿಸಲಯೈಃ ಕ್ಲಾಂತೈಃ ಕ್ಲಾಂತದ್ರುಮಲತಾಯುತಮ್ ॥ ೧೭

ನ ಬಭೌ ತದ್ವನಂ ತತ್ರ ದಾವಾನಲಹತಂ ಯಥಾ ।
ವ್ಯಾಕುಲಾವರಣಾ ರೇಜುರ್ವಿಹ್ವಲಾ ಇವ ತಾ ಲತಾಃ ॥ ೧೮

ರಾಕ್ಷಸರೊಡನೆ ಹೋರಾಡಿ ನನ್ನ ಪರಾಕ್ರಮವನ್ನು ಮೆರೆಯಿಸಿ, ಅವರೆಲ್ಲರನ್ನೂ ಸಂಹಾರಮಾಡುವೆನು. ಆಮೇಲೆ ಸುಗ್ರೀವನ ಬಳಿಗೆ ಸುಲಭವಾಗಿ ಹೋಗಿಬಿಡುವೆನು'' (೧೩). ಹೀಗೆಂದು ನಿಶ್ಚಯಿಸಿ ಆ ವಾಯುಪುತ್ರನು ಕ್ರುದ್ಧನಾಗಿ, ಬಿರುಗಾಳಿಯಂತೆ ತನ್ನ ತೊಡೆಯ ವೇಗದಿಂದಲೇ ಮರಗಳನ್ನು ಉರುಳಿಸಲಾರಂಭಿಸಿದನು. ಕೂಗುತ್ತಿರುವ ಮದಿಸಿದ ಪಕ್ಷಿಗಳಿಂದಲೂ ನಾನಾ ಬಗೆಯ ಗಿಡಬಳ್ಳಿಗಳಿಂದಲೂ ಸುಂದರವಾದ ಉದ್ಯಾನವನವನ್ನು ಹಾಳುಮಾಡಿದನು (೧೪-೧೫). ಆ ಉದ್ಯಾನವನವು ಭಿನ್ನಭಿನ್ನವಾದ ಗಿಡಮರಗಳಿಂದಲೂ, ಕಲಕಿಹೋದ ಜಲಾಶಯಗಳಿಂದಲೂ, ಪುಡಿಪುಡಿಯಾದ ಕ್ರೀಡಾಪರ್ವತಗಳಿಂದಲೂ, ಗಾಬರಿಗೊಂಡ ಪಕ್ಷಿಗಳ ಕೂಗಿನಿಂದಲೂ, ಒಡೆದುಹೋದ ಕೆರೆಗಳಿಂದಲೂ, ಕಾಂತಿಗುಂದಿದ ತಳಿರುಗಳಿಂದಲೂ ಬಾಡಿದ ಗಿಡಬಳ್ಳಿಗಳಿಂದಲೂ ಅಂದಗೆಟ್ಟುಹೋಯಿತು (೧೬-೧೭). ಅದು ದಾವಾಗ್ನಿಯಿಂದ ಸುಟ್ಟುಹೋದ ಕಾಡಿನಂತೆ ಕಾಂತಿಹೀನವಾಯಿತು. ಆಶ್ರಯವೃಕ್ಷಗಳು ಮುರಿದುಬಿದ್ದುದರಿಂದ ಬಳ್ಳಿಗಳು ಅನಾಥರಾದ ಹೆಂಗಸರಂತೆ ಕಾಣುತ್ತಿದ್ದವು. ಆ ಮಹಾವನದಲ್ಲಿದ್ದ ಲತಾಮಂಟಪಗಳೂ

ಲತಾಗೃಹೈಶ್ಚಿತ್ರಗೃಹೈಶ್ಚ ನಾಶಿತೈ-
ರ್ಮಹೋರಗೈರ್ವ್ಯಾಲಮೃಗೈಶ್ಚ ನಿರ್ಧುತೈಃ ।
ಶಿಲಾಗೃಹೈರುನ್ಮಥಿತೈಸ್ತಥಾ ಗೃಹೈಃ
ಪ್ರನಷ್ಟರೂಪಂ ತದಭೂನ್ಮಹದ್ವನಮ್ ॥ ೧೯

ಸಾ ವಿಹ್ವಲಾಶೋಕಲತಾಪ್ರತಾನಾ
ವನಸ್ಥಲೀ ಶೋಕಲತಾಪ್ರತಾನಾ ।
ಜಾತಾ ದಶಾಸ್ಯಪ್ರಮದಾವನಸ್ಯ
ಕಪೇರ್ಬಲಾದ್ಧಿ ಪ್ರಮದಾವನಸ್ಯ ॥ ೨೦

ಸ ತಸ್ಯ ಕೃತ್ವಾರ್ಥಪತೇರ್ಮಹಾಕಪಿ-
ರ್ಮಹದ್ವ್ಯಲೀಕಂ ಮನಸೋ ಮಹಾತ್ಮನಃ ।
ಯುಯುತ್ಸುರೇಕೋ ಬಹುಭಿರ್ಮಹಾಬಲೈಃ
ಶ್ರಿಯಾ ಜ್ವಲಂಸ್ತೋರಣಮಾಸ್ಥಿತಃ ಕಪಿಃ ॥ ೨೧

ಇತಿ ಶ್ರೀಮದ್ರಾಮಾಯಣೇ ಸುಂದರಕಾಂಡೇ ಏಕಚತ್ವಾರಿಂಶಃ ಸರ್ಗಃ

ಚಿತ್ರಶಾಲೆಗಳೂ ನಾಶವಾದವು. ದೊಡ್ಡದೊಡ್ಡ ಹಾವುಗಳೂ ಕಾಡುಮೃಗಗಳೂ ಓಡತೊಡಗಿದವು. ಕಲ್ಲಿನ ಮಂಟಪಗಳೂ ನಾನಾಬಗೆಯ ಮನೆಗಳೂ ನೆಲಸಮ ವಾದವು. ಅಶೋಕವನವು ಹಾಳುಬಿದ್ದುಹೋಯಿತು (೧೮-೧೯). ರಾವಣನ ಅಂತಃಪುರದಲ್ಲಿರುವ ಪ್ರಮದೆಯರಿಗೆ ವಿಹಾರಭೂಮಿಯಾಗಿದ್ದ ಉದ್ಯಾನವನ ದಲ್ಲಿ ಆ ಕಪಿಯ ಬಲದಿಂದ ಅಶೋಕಲತೆಗಳೆಲ್ಲಾ ಛಿನ್ನಭಿನ್ನವಾಗಿ ಶೋಕಲತೆಗಳು ತುಂಬಿಹೋದವು (೨೦). ಈ ರೀತಿಯಲ್ಲಿ ಹನುಮಂತನು ರಾವಣನ ಮನಸ್ಸಿಗೆ ಬಹಳ ನೋವಾಗುವ ಕೆಲಸವನ್ನು ಮಾಡಿ, ತಾನೊಬ್ಬನೇ ಬಲಾಢ್ಯರಾದ ರಾಕ್ಷಸರೊಡನೆ ಹೋರಾಡಬೇಕೆಂದು ನಿರ್ಧರಿಸಿದನು. ಉದ್ಯಾನವನದ ಹೊರ ಬಾಗಿಲಿಗೆ ಬಂದು ತೇಜಸ್ಸಿನಿಂದ ಜ್ವಲಿಸುತ್ತ ಕಾದುನಿಂತನು (೨೧).

ಇಲ್ಲಿಗೆ ಶ್ರೀಮದ್ರಾಮಾಯಣದ ಸುಂದರಕಾಂಡದಲ್ಲಿ ನಲವತ್ತೊಂದನೆಯ ಸರ್ಗ

ದ್ವಿಚತ್ವಾರಿಂಶಃ ಸರ್ಗಃ

ಕಿಂಕರನಿಷೂದನಮ್

ತತಃ ಪಕ್ಷಿನಿನಾದೇನ ವೃಕ್ಷಭಂಗಸ್ವನೇನ ಚ ।
ಬಭೂವುಸ್ತ್ರಾಸಸಂಭ್ರಾಂತಾಃ ಸರ್ವೇ ಲಂಕಾನಿವಾಸಿನಃ ॥ ೧
ವಿದ್ರುತಾಶ್ಚ ಭಯತ್ರಸ್ತಾ ವಿನೇದುರ್ಮೃಗಪಕ್ಷಿಣಃ ।
ರಕ್ಷಸಾಂ ಚ ನಿಮಿತ್ತಾನಿ ಕ್ರೂರಾಣಿ ಪ್ರತಿಪೇದಿರೇ ॥ ೨
ತತೋ ಗತಾಯಾಂ ನಿದ್ರಾಯಾಂ ರಾಕ್ಷಸ್ಯೋ ವಿಕೃತಾನನಾಃ ।
ತದ್ವನಂ ದದೃಶುರ್ಭಗ್ನಂ ತಂ ಚ ವೀರಂ ಮಹಾಕಪಿಮ್ ॥ ೩
ಸ ತಾ ದೃಷ್ಟ್ವಾ ಮಹಾಬಾಹುರ್ಮಹಾಸತ್ತ್ವೋ ಮಹಾಬಲಃ ।
ಚಕಾರ ಸುಮಹದ್ರೂಪಂ ರಾಕ್ಷಸೀನಾಂ ಭಯಾವಹಮ್ ॥ ೪
ತತಸ್ತಂ ಗಿರಿಸಂಕಾಶಮತಿಕಾಯಂ ಮಹಾಬಲಮ್ ।
ರಾಕ್ಷಸ್ಯೋ ವಾನರಂ ದೃಷ್ಟ್ವಾ ಪಪ್ರಚ್ಛುರ್ಜನಕಾತ್ಮಜಾಮ್ ॥ ೫

ಸರ್ಗ ೪೨

ರಾವಣನು ಅಶೋಕವನದ ಭಂಗವನ್ನು ಕೇಳಿ, ಹನುಮಂತನನ್ನು ನಿಗ್ರಹಿಸುವುದಕ್ಕಾಗಿ ಕಿಂಕರರೆಂಬ ರಾಕ್ಷಸರನ್ನು ಕಳುಹಿಸುವುದು. ಹನುಮಂತನು ಅವರನ್ನು ವಧಿಸಲು, ರಾವಣನು ಪ್ರಹಸ್ತನ ಮಗನನ್ನು ಕಳುಹಿಸುವುದು.

ಅಶೋಕವನದಲ್ಲಿ ಅಕಸ್ಮಾತ್ ಉಂಟಾದ ಪಕ್ಷಿಗಳ ಕೂಗಾಟವನ್ನೂ ಮರಗಳು ಮುರಿದುಬೀಳುವ ಶಬ್ದವನ್ನೂ ಕೇಳಿ ಲಂಕಾನಿವಾಸಿಗಳಿಗೆ ದಿಗ್ಭ್ರಮೆಯಾಯಿತು. ಮೃಗಪಕ್ಷಿಗಳು ಅರಚುತ್ತ ಪಲಾಯನಮಾಡಿದವು. ರಾಕ್ಷಸರಿಗೆ ಅನೇಕ ಕೆಟ್ಟ ಶಕುನಗಳಾದವು (೧–೨). ಇತ್ತ ವನದಲ್ಲಿ ಮಲಗಿದ್ದ ರಾಕ್ಷಸಿಯರು ನಿದ್ರೆಯಿಂದ ಎಚ್ಚೆತ್ತು, ಅಲ್ಲಿ ನಡೆದ ಹಾವಳಿಯನ್ನೂ ಆ ಮಹಾಕಪಿಯನ್ನೂ ಕಂಡರು. ಮಹಾವೀರನಾದ ಹನುಮಂತನೂ ಕೂಡ ರಾಕ್ಷಸಿಯರನ್ನು ಕಂಡು, ಅವರಿಗೆ ಹೆದರಿಕೆಯಾಗುವಂತೆ ಶರೀರವನ್ನು ದೊಡ್ಡದಾಗಿ ಬೆಳೆಯಿಸಿಕೊಂಡನು (೩–೪). ರಾಕ್ಷಸಿಯರು ಪರ್ವತಾಕಾರನಾದ ಆ ವಾನರನನ್ನು

ಕೋಽಯಂ ಕಸ್ಯ ಕುತೋ ವಾಯಂ ಕಿಂನಿಮಿತ್ತಮಿಹಾಗತಃ ।
ಕಥಂ ತ್ವಯಾ ಸಹಾನೇನ ಸಂವಾದಃ ಕೃತ ಇತ್ಯುತ ॥ ೬

ಆಚಕ್ಷ್ವ ನೋ ವಿಶಾಲಾಕ್ಷಿ ಮಾ ಭೂತ್ತೇ ಸುಭಗೇ ಭಯಮ್ ।
ಸಂವಾದಮಸಿತಾಪಾಂಗೇ ತ್ವಯಾ ಕಿಂ ಕೃತವಾನಯಮ್ ॥ ೭

ಅಥಾಬ್ರವೀತ್ತದಾ ಸಾಧ್ವೀ ಸೀತಾ ಸರ್ವಾಂಗಸುಂದರೀ ।
ರಕ್ಷಸಾಂ ಕಾಮರೂಪಾಣಾಂ ವಿಜ್ಞಾನೇ ಮಮ ಕಾ ಗತಿಃ ॥ ೮

ಯೂಯಮೇವಾಭಿಜಾನೀತ ಯೋಽಯಂ ಯದ್ವಾ ಕರಿಷ್ಯತಿ ।
ಅಹಿರೇವ ಹ್ಯಹೇಃ ಪಾದಾನ್ ವಿಜಾನಾತಿ ನ ಸಂಶಯಃ ॥ ೯

ಅಹಮಪ್ಯಸ್ಯ ಭೀತಾಸ್ಮಿ ನೈವ ಜಾನಾಮಿ ಕೋ ನ್ವಯಮ್ ।
ವೇದ್ಮಿ ರಾಕ್ಷಸಮೇವೈನಂ ಕಾಮರೂಪಿಣಮಾಗತಮ್ ॥ ೧೦

ವೈದೇಹ್ಯಾ ವಚನಂ ಶ್ರುತ್ವಾ ರಾಕ್ಷಸ್ಯೋ ವಿದ್ರುತಾ ದಿಶಃ ।
ಸ್ಥಿತಾಃ ಕಾಶ್ಚಿದ್ಗತಾಃ ಕಾಶ್ಚಿದ್ರಾವಣಾಯ ನಿವೇದಿತುಮ್ ॥ ೧೧

ಕಂಡು ಸೀತೆಯ ಬಳಿಗೆ ಬಂದು ''ಸೀತೆ, ಈ ಕಪಿಯು ಯಾರು? ಯಾರ ಕಡೆಯವನು ? ಎಲ್ಲಿಂದ ಬಂದಿದ್ದಾನೆ ? ಏಕೆ ಬಂದಿದ್ದಾನೆ ? ಇವನು ನಿನ್ನೊಡನೆ ಸಂಭಾಷಣೆಯನ್ನು ನಡೆಸಿದಂತೆ ಇತ್ತಲ್ಲ, ಅದೇನು ? ಹೆದರಬೇಡ, ಹೇಳು. ಅವನು ನಿನ್ನೊಡನೆ ಏನು ಹೇಳಿದನು ?'' ಎಂದು ಕೇಳಿದರು (೫–೭). ಆಗ ಸೀತೆಯು ''ಈ ರಾಕ್ಷಸನ ಸ್ವರೂಪ ನನಗೇನು ಗೊತ್ತು? ಇವನು ಯಾರು, ಏನು ಮಾಡುತ್ತಾನೆ-ಎಂಬುದನ್ನು ನೀವೇ ಬಲ್ಲಿರಿ. ಹಾವಿನ ಹೆಜ್ಜೆಯನ್ನು ಹಾವೇ ಬಲ್ಲದು! ಇವನನ್ನು ನೋಡಿ ನನಗೂ ಭಯವಾಗಿದೆ. ಇವನು ಯಾರೆಂಬುದು ನನಗೆ ತಿಳಿಯದು. ಯಾವನೋ ಕಾಮರೂಪಿಯಾದ ರಾಕ್ಷಸನಾಗಿರಬೇಕು'' ಎಂದಳು* (೮–೧೦). ಅದನ್ನು ಕೇಳಿದಕೂಡಲೇ ರಾಕ್ಷಸಿಯರು ಭಯದಿಂದ ದಿಕ್ಕುದಿಕ್ಕಿಗೆ ಓಡಿಹೋದರು. ಕೆಲವರು ಅಲ್ಲಿಯೇ ಅವಿತುಕೊಂಡರು. ಕೆಲವರು ಈ

---

*ಪ್ರಾಣಾಪಾಯಕಾಲದಲ್ಲಿ ಸುಳ್ಳುಹೇಳುವುದರಿಂದ ದೋಷವಿಲ್ಲವೆಂದು ಶಾಸ್ತ್ರ ವಚನವಿದೆ.

ರಾವಣಸ್ಯ ಸಮೀಪೇ ತು ರಾಕ್ಷಸ್ಯೋ ವಿಕೃತಾನನಾಃ ।
ವಿರೂಪಂ ವಾನರಂ ಭೀಮಮಾಖ್ಯಾತುಮುಪಚಕ್ರಮುಃ ॥ ೧೨

ಅಶೋಕವನಿಕಾಮಧ್ಯೇ ರಾಜನ್ ಭೀಮವಪುಃ ಕಪಿಃ ।
ಸೀತಯಾ ಕೃತಸಂವಾದಸ್ತಿಷ್ಠತ್ಯಮಿತವಿಕ್ರಮಃ ॥ ೧೩

ನ ಚ ತಂ ಜಾನಕೀ ಸೀತಾ ಹರಿಂ ಹರಿಣಲೋಚನಾ ।
ಅಸ್ಮಾಭಿರ್ಬಹುಧಾ ಪೃಷ್ಟಾ ನಿವೇದಯಿತುಮಿಚ್ಛತಿ ॥ ೧೪

ವಾಸವಸ್ಯ ಭವೇದ್ದೂತೋ ದೂತೋ ವೈಶ್ರವಣಸ್ಯ ವಾ ।
ಪ್ರೇಷಿತೋ ವಾಪಿ ರಾಮೇಣ ಸೀತಾನ್ವೇಷಣಕಾಂಕ್ಷಯಾ ॥ ೧೫

ತೇನ ತ್ವದ್ಭುತರೂಪೇಣ ಯತ್ತತ್ತವ ಮನೋಹರಮ್ ।
ನಾನಾಮೃಗಗಣಾಕೀರ್ಣಂ ಪ್ರಮೃಷ್ಟಂ ಪ್ರಮದಾವನಮ್ ॥ ೧೬

ನ ತತ್ರ ಕಶ್ಚಿದುದ್ದೇಶೋ ಯಸ್ತೇನ ನ ವಿನಾಶಿತಃ ।
ಯತ್ರ ಸಾ ಜಾನಕೀ ಸೀತಾ ಸ ತೇನ ನ ವಿನಾಶಿತಃ ॥ ೧೭

ಜಾನಕೀರಕ್ಷಣಾರ್ಥಂ ವಾ ಶ್ರಮಾದ್ವಾ ನೋಪಲಕ್ಷ್ಯತೇ ।
ಅಥವಾ ಕಃ ಶ್ರಮಸ್ತಸ್ಯ ಸೈವ ತೇನಾಭಿರಕ್ಷಿತಾ ॥ ೧೮

ಸಂಗತಿಯನ್ನು ರಾವಣನಿಗೆ ತಿಳಿಸಬೇಕೆಂದು ಅವನ ಸಮೀಪಕ್ಕೆ ಹೋಗಿ, ಆ ಕಪಿಯ ವಿಲಕ್ಷಣವೂ ಭಯಂಕರವೂ ಆದ ಸ್ವಭಾವವನ್ನು ಹೇಳತೊಡಗಿದರು (೧೧–೧೨): ''ಮಹಾರಾಜ, ಒಂದು ಭಯಂಕರವಾದ ಕಪಿಯು ಅಶೋಕವನಕ್ಕೆ ಬಂದಿದೆ. ಅದು ಸೀತೆಯೊಡನೆ ಏನೋ ಮಾತನಾಡಿತು. ಮಹಾಪರಾಕ್ರಮಶಾಲಿಯಾಗಿ ಕಾಣುತ್ತದೆ. ನಾವು ಸೀತೆಯೊಡನೆ ಆ ಕಪಿಯು ಯಾರೆಂದು ಎಷ್ಟು ಕೇಳಿದರೂ ಹೇಳದೆ ಹೋದಳು. ಆ ಕಪಿಯು ದೇವೇಂದ್ರನ ದೂತನೋ, ಕುಬೇರನ ದೂತನೋ— ಅಲ್ಲದಿದ್ದರೆ ಸೀತೆಯನ್ನು ಹುಡುಕಲು ಬಂದ ರಾಮದೂತನೋ ಆಗಿರಬೇಕು (೧೩–೧೫). ಅದ್ಭುತಾಕಾರದ ಆ ಕಪಿಯು ನಿನಗೆ ಪ್ರಿಯವಾಗಿದ್ದ ಅಶೋಕವನ ವನ್ನು ನಾಶಮಾಡಿಬಿಟ್ಟಿತು. ಅದು ನಾಶಮಾಡದಿರುವ ಒಂದು ಪ್ರದೇಶವೂ ಅಲ್ಲಿಲ್ಲ. ಆದರೆ ಸೀತೆ ಇರುವ ಪ್ರದೇಶವನ್ನು ಮಾತ್ರ ಹಾಗೆಯೇ ಬಿಟ್ಟಿದೆ (೧೬–೧೭).

ಚಾರುಪಲ್ಲವಪುಷ್ಪಾಢ್ಯಂ ಯಂ ಸೀತಾ ಸ್ವಯಮಾಸ್ಥಿತಾ ।
ಪ್ರವೃದ್ಧಃ ಶಿಂಶಪಾವೃಕ್ಷಃ ಸ ಚ ತೇನಾಭಿರಕ್ಷಿತಃ ॥ ೧೯

ತಸ್ಯೋಗ್ರರೂಪಸ್ಯೋಗ್ರಂ ತ್ವಂ ದಂಡಮಾಜ್ಞಾತುಮರ್ಹಸಿ ।
ಸೀತಾ ಸಂಭಾಷಿತಾ ಯೇನ ತದ್ವನಂ ಚ ವಿನಾಶಿತಮ್ ॥ ೨೦

ಮನಃಪರಿಗೃಹೀತಾಂ ತಾಂ ತವ ರಕ್ಷೋಗಣೇಶ್ವರ ।
ಕಃ ಸೀತಾಮಭಿಭಾಷೇತ ಯೋ ನ ಸ್ಯಾತ್ತ್ಯಕ್ತಜೀವಿತಃ ॥ ೨೧

ರಾಕ್ಷಸೀನಾಂ ವಚಃ ಶ್ರುತ್ವಾ ರಾವಣೋ ರಾಕ್ಷಸೇಶ್ವರಃ ।
ಹುತಾಗ್ನಿರಿವ ಜಜ್ವಾಲ ಕೋಪಸಂವರ್ತಿತೇಕ್ಷಣಃ ॥ ೨೨

ತಸ್ಯ ಕ್ರುದ್ಧಸ್ಯ ನೇತ್ರಾಭ್ಯಾಂ ಪ್ರಾಪತನ್ನಸ್ರಬಿಂದವಃ ।
ದೀಪ್ತಾಭ್ಯಾಮಿವ ದೀಪಾಭ್ಯಾಂ ಸಾರ್ಚಿಷಃ ಸ್ನೇಹಬಿಂದವಃ ॥ ೨೩

ಆತ್ಮನಃ ಸದೃಶಾನ್ ಶೂರಾನ್ ಕಿಂಕರಾನ್ನಾಮ ರಾಕ್ಷಸಾನ್ ।
ವ್ಯಾದಿದೇಶ ಮಹಾತೇಜಾ ನಿಗ್ರಹಾರ್ಥಂ ಹನೂಮತಃ ॥ ೨೪

ಅದೇನು ಸೀತೆಯನ್ನು ರಕ್ಷಿಸುವುದಕ್ಕಾಗಿಯೋ ಅಥವಾ ತನಗೆ ಬಹಳ ಆಯಾಸವಾದ್ದರಿಂದಲೋ ತಿಳಿಯದು. ಆ ಮಹಾಕಪಿಗೆ ಆಯಾಸವೆಂದರೇನು ? ಬೇಕೆಂದೇ ಅದು ಸೀತೆಯನ್ನು ರಕ್ಷಿಸುವುದಕ್ಕಾಗಿ ಹೀಗೆ ಮಾಡಿದೆ. ಚಿಗುರು, ಹೂಗಳಿಂದ ಮನೋಹರವಾದ ಶಿಂಶಪಾವೃಕ್ಷವನ್ನು ಮಾತ್ರ ಉಳಿಸಿದೆ. ಅದರ ಅಡಿಯಲ್ಲಿಯೇ ಸೀತೆಯು ಕುಳಿತಿರುವುದು (೧೮–೧೯). ಮಹಾಪ್ರಭು, ಆ ಕಪಿಯು ಸೀತೆಯೊಡನೆ ಮಾತನಾಡಿದ್ದಲ್ಲದೆ ಉದ್ಯಾನವನ್ನೂ ಹಾಳುಮಾಡಿಬಿಟ್ಟಿದೆ. ಅದನ್ನು ಉಗ್ರವಾಗಿ ದಂಡಿಸಬೇಕು. ನೀನು ಮನಸ್ಸಿನಲ್ಲಿ ಪರಿಗ್ರಹಿಸಿದ ಸೀತೆಯನ್ನು ಯಾವನು ತಾನೇ ಮಾತನಾಡಿಸಿಯಾನು ? ಅವನು ಬದುಕಬೇಕೆಂಬ ಆಸೆಯನ್ನು ತೊರೆದಿರಬೇಕು'' ಎಂದರು (೨೦–೨೧). ಅದನ್ನು ಕೇಳಿ ರಾವಣನು ಸಿಟ್ಟಿನಿಂದ ಸಿಡಿದೆದ್ದನು. ಅವನ ಕಣ್ಣುಗಳು ಗಿರಗಿರನೆ ತಿರುಗಿದವು. ಉರಿಯುವ ದೀಪಗಳಿಂದ ಜ್ವಾಲೆಯೊಡಗೂಡಿ ಉದುರುವ ತೈಲಬಿಂದುಗಳಂತೆ, ಕಣ್ಣುಗಳಿಂದ ಕಿಡಿಗಳು ಸಿಡಿದವು. ಕೂಡಲೇ ಕಿಂಕರರೆಂಬ ಶೂರರಾದ ರಾಕ್ಷಸರನ್ನು ಕರೆದು

ತೇಷಾಮಶೀತಿಸಾಹಸ್ರಂ ಕಿಂಕರಾಣಾಂ ತರಸ್ವಿನಾಮ್ ।
ನಿರ್ಯಯುರ್ಭವನಾತ್ತಸ್ಮಾತ್ ಕೂಟಮುದ್ಗರಪಾಣಯಃ ॥ ೨೫
ಮಹೋದರಾ ಮಹಾದಂಷ್ಟ್ರಾ ಘೋರರೂಪಾ ಮಹಾಬಲಾಃ ।
ಯುದ್ಧಾಭಿಮನಸಃ ಸರ್ವೇ ಹನುಮದ್ಗ್ರಹಣೋನ್ಮುಖಾಃ ॥ ೨೬
ತೇ ಕಪಿಂ ತಂ ಸಮಾಸಾದ್ಯ ತೋರಣಸ್ಥಮವಸ್ಥಿತಮ್ ।
ಅಭಿಪೇತುರ್ಮಹಾವೇಗಾಃ ಪತಂಗಾ ಇವ ಪಾವಕಮ್ ॥ ೨೭
ತೇ ಗದಾಭಿರ್ವಿಚಿತ್ರಾಭಿಃ ಪರಿಘೈಃ ಕಾಂಚನಾಂಗದೈಃ ।
ಆಜಘ್ನುರ್ವಾನರಶ್ರೇಷ್ಠಂ ಶರೈಶ್ಚಾದಿತ್ಯಸಂನಿಭೈಃ ॥ ೨೮
ಮುದ್ಗರೈಃ ಪಟ್ಟಸೈಃ ಶೂಲೈಃ ಪ್ರಾಸತೋಮರಶಕ್ತಿಭಿಃ ।
ಪರಿವಾರ್ಯ ಹನೂಮಂತಂ ಸಹಸಾ ತಸ್ಥುರಗ್ರತಃ ॥ ೨೯
ಹನುಮಾನಪಿ ತೇಜಸ್ವೀ ಶ್ರೀಮಾನ್ ಪರ್ವತಸಂನಿಭಃ ।
ಕ್ಷಿತಾವಾವಿಧ್ಯ ಲಾಂಗೂಲಂ ನನಾದ ಚ ಮಹಾಸ್ವನಮ್ ॥ ೩೦
ಸ ಭೂತ್ವಾ ಸುಮಹಾಕಾಯೋ ಹನುಮಾನ್ ಮಾರುತಾತ್ಮಜಃ ।
ಧೃಷ್ಟಮಾಸ್ಫೋಟಯಾಮಾಸ ಲಂಕಾಂ ಶಬ್ದೇನ ಪೂರಯನ್ ॥ ೩೧

ಹನುಮಂತನನ್ನು ನಿಗ್ರಹಿಸಬೇಕೆಂದು ಆಜ್ಞೆಮಾಡಿದನು (೨೨–೨೪). ಆಗ ವೀರರಾದ ಎಂಬತ್ತುಸಾವಿರ ಮಂದಿ ಕಿಂಕರರೆಂಬ ರಾಕ್ಷಸರು ಕೂಟ ಮುದ್ಗರ ಮುಂತಾದ ಆಯುಧಗಳನ್ನು ಹಿಡಿದು ಹೊರಟರು. ಅವರಲ್ಲಿ ಒಬ್ಬೊಬ್ಬರೂ ದೊಡ್ಡ ಹೊಟ್ಟೆಯವರು ! ದೊಡ್ಡ ಕೋರೆಯ ಹಲ್ಲುಳ್ಳವರು ! ಘೋರಾಕೃತಿಗಳು ! ಯುದ್ಧಮಾಡಿ ಹನುಮಂತನನ್ನು ಸೆರೆಹಿಡಿಯಬೇಕೆಂಬ ಉತ್ಸಾಹಶಾಲಿಗಳು (೨೫–೨೬). ಅವರೆಲ್ಲರೂ ಅಶೋಕವನದ ಮಹಾದ್ವಾರದ ಬಳಿಯಲ್ಲಿದ್ದ ಹನುಮಂತನ ಸಮೀಪಕ್ಕೆ ಬಂದು ಪತಂಗದ ಹುಳುಗಳು ಅಗ್ನಿಯನ್ನು ಮುತ್ತುವಂತೆ ಅವನನ್ನು ಮುತ್ತಿದರು. ಗದೆ, ಪರಿಘ, ಬಾಣ, ಮುದ್ಗರ, ಪಟ್ಟಸ ಮೊದಲಾದ ಆಯುಧಗಳನ್ನು ಹಿಡಿದು ಹನುಮಂತನ ಮೇಲೆ ಎರಗಿದರು (೨೭–೨೯). ಆಗ ಪರ್ವತಾಕಾರನಾದ ಆಂಜನೇಯನು ಬಾಲವನ್ನು ನೆಲಕ್ಕೆ ಅಪ್ಪಳಿಸಿ, ಗಟ್ಟಿಯಾಗಿ ಒಂದು ಸಲ ಗರ್ಜಿಸಿದನು. ಆ ಧ್ವನಿಯು ಲಂಕಾನಗರದಲ್ಲಿ ಮೊಳಗಿಹೋಯಿತು

ತಸ್ಯಾಸ್ಫೋಟಿತಶಬ್ದೇನ ಮಹತಾ ಚಾನುನಾದಿನಾ ।
ಪೇತುರ್ವಿಹಂಗಾ ಗಗನಾದುಚ್ಚೈಶ್ಚೇದಮಘೋಷಯತ್ ॥ ೩೨

ಜಯತ್ಯತಿಬಲೋ ರಾಮ ಲಕ್ಷ್ಮಣಶ್ಚ ಮಹಾಬಲಃ ।
ರಾಜಾ ಜಯತಿ ಸುಗ್ರೀವೋ ರಾಘವೇಣಾಭಿಪಾಲಿತಃ ॥ ೩೩

ದಾಸೋಽಹಂ ಕೋಸಲೇಂದ್ರಸ್ಯ ರಾಮಸ್ಯಾಕ್ಲಿಷ್ಟಕರ್ಮಣಃ ।
ಹನುಮಾನ್ ಶತ್ರುಸೈನ್ಯಾನಾಂ ನಿಹಂತಾ ಮಾರುತಾತ್ಮಜಃ ॥ ೩೪

ನ ರಾವಣಸಹಸ್ರಂ ಮೇ ಯುದ್ಧೇ ಪ್ರತಿಬಲಂ ಭವೇತ್ ।
ಶಿಲಾಭಿಸ್ತು ಪ್ರಹರತಃ ಪಾದಪೈಶ್ಚ ಸಹಸ್ರಶಃ ॥ ೩೫

ಅರ್ದಯಿತ್ವಾ ಪುರೀಂ ಲಂಕಾಮಭಿವಾದ್ಯ ಚ ಮೈಥಿಲೀಮ್ ।
ಸಮೃದ್ಧಾರ್ಥೋಽ ಗಮಿಷ್ಯಾಮಿ ಮಿಷತಾಂ ಸರ್ವರಕ್ಷಸಾಮ್ ॥ ೩೬

ತಸ್ಯ ಸಂನಾದಶಬ್ದೇನ ತೇಽಭವನ್ ಭಯಶಂಕಿತಾಃ ।
ದದೃಶುಶ್ಚ ಹನೂಮಂತಂ ಸಂಧ್ಯಾಮೇಘಮಿವೋನ್ನತಮ್ ॥ ೩೭

(೩೦–೩೧). ಅದರ ರಭಸಕ್ಕೆ ಆಕಾಶದಲ್ಲಿ ಹಾರಾಡುತ್ತಿದ್ದ ಹಕ್ಕಿಗಳು ಕೆಳಕ್ಕೆ ಉದುರಿಬಿದ್ದವು. ಆಂಜನೇಯನು ಗಟ್ಟಿಯಾಗಿ—''ಅತಿಬಲಾಢ್ಯನಾದ ರಾಮನಿಗೆ ಜಯವಾಗಲಿ ! ಲಕ್ಷ್ಮಣನಿಗೆ ಜಯವಾಗಲಿ ! ರಾಮನಿಂದ ರಕ್ಷಿತನಾದ ಸುಗ್ರೀವ ಮಹಾರಾಜನಿಗೆ ಜಯವಾಗಲಿ ! ನಾನು ಕೋಸಲೇಂದ್ರನಾದ ಶ್ರೀರಾಮನ ದಾಸ : ನನ್ನ ಹೆಸರು ಹನುಮಂತ ; ನಾನು ವಾಯುಪುತ್ರ ; ಶತ್ರುಸೈನ್ಯಗಳನ್ನು ಧ್ವಂಸಮಾಡ ತಕ್ಕವನು ! (೩೨–೩೪). ರಾವಣನಂತಹವರು ಸಾವಿರ ಜನರು ಬಂದರೂ ನನಗೆ ಎದುರಲ್ಲ. ಕಲ್ಲು, ಮರಗಳಿಂದಲೇ ಯುದ್ಧ ಮಾಡುವೆನು. ಈ ರಾಕ್ಷಸರೆಲ್ಲರೂ ಕಣ್ಣುಬಿಟ್ಟು ನೋಡುತ್ತಿರುವಾಗಲೇ ಲಂಕಾಪಟ್ಟಣವನ್ನು ನಾಶಮಾಡಿ, ಸೀತಾದೇವಿಗೆ ವಂದಿಸಿ, ಕೃತಕೃತ್ಯನಾಗಿ ಹೊರಟುಹೋಗುವೆನು !'' ಎಂದು ಘೋಷಿಸಿದನು (೩೫–೩೬). ಹನುಮಂತನ ಆರ್ಭಟವನ್ನು ಕೇಳಿ ರಾಕ್ಷಸರು ಭಯಗೊಂಡು ಸಂಧ್ಯಾಕಾಲದ ಮೇಘದಂತೆ ಉನ್ನತನಾದ ಅವನನ್ನು ನೋಡುತ್ತ ನಿಂತರು. ಅವರು

ಸ್ವಾಮಿಸಂದೇಶನಿಃಶಂಕಾಸ್ತತಸ್ತೇ ರಾಕ್ಷಸಾಃ ಕಪಿಮ್ ।
ಚಿತ್ರೈಃ ಪ್ರಹರಣೈರ್ಭೀಮೈರಭಿಪೇತುಃ ಸಹಸ್ರಶಃ ॥ ೩೮

ಸ ತೈಃ ಪರಿವೃತಃ ಶೂರೈಃ ಸರ್ವತಃ ಸ ಮಹಾಬಲಃ ।
ಆಸಸಾದಾಯಸಂ ಭೀಮಂ ಪರಿಘಂ ತೋರಣಾಶ್ರಿತಮ್ ॥ ೩೯

ಸ ತಂ ಪರಿಘಮಾದಾಯ ಜಘಾನ ಚ ನಿಶಾಚರಾನ್ ।
ಸ ಪನ್ನಗಮಿವಾದಾಯ ಸ್ಫುರಂತಂ ವಿನತಾಸುತಃ ॥ ೪೦

ವಿಚಚಾರಾಂಬರೇ ವೀರಃ ಪರಿಗೃಹ್ಯ ಚ ಮಾರುತಿಃ ।
ಸ ಹತ್ವಾ ರಾಕ್ಷಸಾನ್ ವೀರಾನ್ ಕಿಂಕರಾನ್ ಮಾರುತಾತ್ಮಜಃ ॥ ೪೧

ಯುದ್ಧಕಾಂಕ್ಷೀ ಪುನರ್ವೀರಸ್ತೋರಣಂ ಸಮುಪಾಶ್ರಿತಃ ।
ತತಸ್ತಸ್ಮಾದ್ಭಯಾನ್ಮುಕ್ತಾಃ ಕತಿಚಿತ್ತತ್ರ ರಾಕ್ಷಸಾಃ ॥ ೪೨
ನಿಹತಾನ್ ಕಿಂಕರಾನ್ ಸರ್ವಾನ್ ರಾವಣಾಯ ನ್ಯವೇದಯನ್ ॥

ಸ ರಾಕ್ಷಸಾನಾಂ ನಿಹತಂ ಮಹದ್ಬಲಂ
ನಿಶಮ್ಯ ರಾಜಾ ಪರಿವೃತ್ತಲೋಚನಃ ।

ರಾಜಾಜ್ಞೆಗೆ ಬದ್ಧರಾದ್ದರಿಂದ ವಿವಿಧಾಯುಧಗಳಿಂದ ಅವನ ಮೇಲೆ ಯುದ್ಧ ಮಾಡತೊಡಗಿದರು (೩೭–೩೮). ಶೂರರಾದ ರಾಕ್ಷಸರು ತನ್ನ ಸುತ್ತಲೂ ಮುತ್ತಿಕೊಂಡಿರುವುದನ್ನು ನೋಡಿ, ಹನುಮಂತನು ಮಹಾದ್ವಾರದ ಕದಕ್ಕೆ ಹಾಕಿದ್ದ ಕಬ್ಬಿಣದ ದೊಡ್ಡ ಲಾಳವಂಡಿಗೆ (ಅಗಳಿ) ಯನ್ನು ಕೈಗೆ ತೆಗೆದುಕೊಂಡು ರಾಕ್ಷಸರನ್ನು ಬಡಿಯಲಾರಂಭಿಸಿದನು. ಗರುಡನು ಕೃಷ್ಣಸರ್ಪವನ್ನು ಹಿಡಿದಿರುವಂತೆ, ಹನುಮಂತನು ಲಾಳವಂಡಿಗೆಯನ್ನು ಹಿಡಿದು ಆಕಾಶದಲ್ಲಿ ಚಿತ್ರಗತಿಯಿಂದ ಸುತ್ತುತ್ತ ರಾಕ್ಷಸರನ್ನು ಬಡಿದುಬಡಿದು ಸಂಹಾರಮಾಡಿದನು. ಕಿಂಕರರೆಲ್ಲರನ್ನೂ ಸಂಹರಿಸಿ ಮಹಾದ್ವಾರದ ಬಳಿಗೆ ಬಂದು ಪುನಃ ಯುದ್ಧವಾಗುತ್ತದೆಯೆಂಬ ನಿರೀಕ್ಷಣೆಯಿಂದ ಕಾದಿದ್ದನು (೩೯–೪೧). ಇತ್ತಲಾಗಿ ತಪ್ಪಿಸಿಕೊಂಡುಬಂದ ಕೆಲವು ರಾಕ್ಷಸರು ರಾವಣನ ಹತ್ತಿರಕ್ಕೆ ಹೋಗಿ ಕಿಂಕರರೆಲ್ಲರೂ ಸತ್ತುಹೋದ ವಿಷಯವನ್ನು ಅರಿಕೆ

ಸಮಾದಿದೇಶಾಪ್ರತಿಮಂ ಪರಾಕ್ರಮೇ
ಪ್ರಹಸ್ತಪುತ್ರಂ ಸಮರೇ ಸುದುರ್ಜಯಮ್ ॥ ೪೩

ಇತಿ ಶ್ರೀಮದ್ರಾಮಾಯಣೇ ಸುಂದರಕಾಂಡೇ ದ್ವಿಚತ್ವಾರಿಂಶಃ ಸರ್ಗಃ

ತ್ರಿಚತ್ವಾರಿಂಶಃ ಸರ್ಗಃ

ಚೈತ್ಯಪ್ರಾಸಾದದಾಹಃ

ತತಃ ಸ ಕಿಂಕರಾನ್ ಹತ್ವಾ ಹನುಮಾನ್ ಧ್ಯಾನಮಾಸ್ಥಿತಃ ।
ವನಂ ಭಗ್ನಂ ಮಯಾ ಚೈತ್ಯಪ್ರಾಸಾದೋ ನ ವಿನಾಶಿತಃ ॥ ೧
ತಸ್ಮಾತ್ ಪ್ರಾಸಾದಮಪ್ಯೇವಮಿಮಂ ವಿಧ್ವಂಸಯಾಮ್ಯಹಮ್ ।
ಇತಿ ಸಂಚಿಂತ್ಯ ಮನಸಾ ಹನುಮಾನ್ ದರ್ಶಯನ್ ಬಲಮ್ ॥ ೨
ಚೈತ್ಯಪ್ರಾಸಾದಮಾಪ್ಲುತ್ಯ ಮೇರುಶೃಂಗಮಿವೋನ್ನತಮ್ ।
ಆರುರೋಹ ಹರಿಶ್ರೇಷ್ಠೋ ಹನುಮಾನ್ ಮಾರುತಾತ್ಮಜಃ ॥ ೩

ಮಾಡಿದರು. ಆದನ್ನು ಕೇಳಿ ರಾವಣನು ಕೋಪದಿಂದ ಕಣ್ಣನ್ನು ತಿರುಗಿಸುತ್ತ ಮಹಾಶೂರನಾದ ಪ್ರಹಸ್ತನ ಮಗನನ್ನು ಕರೆದು, ಹನುಮಂತನನ್ನು ನಿಗ್ರಹಿಸಬೇಕೆಂದು ಆಜ್ಞಾಪಿಸಿ ಕಳುಹಿಸಿದನು (೪೨–೪೩).

ಇಲ್ಲಿಗೆ ಶ್ರೀಮದ್ರಾಮಾಯಣದ ಸುಂದರಕಾಂಡದಲ್ಲಿ ನಲವತ್ತೆರಡನೆಯ ಸರ್ಗ

ಸರ್ಗ ೪೩

ಹನುಮಂತನು ಚೈತ್ಯಪ್ರಾಸಾದವನ್ನೇರಿ ಕಾವಲುಗಾರರನ್ನು
ಸಂಹರಿಸಿ ಚೈತ್ಯವನ್ನು ನಾಶಪಡಿಸುವುದು.

ಆಂಜನೇಯನು ಕಿಂಕರರನ್ನು ಕೊಂದ ತರುವಾಯ ''ಈ ಅಶೋಕ ವನವನ್ನು ನಾಶಮಾಡಿಬಿಟ್ಟೆನು. ರಾಕ್ಷಸರ ಕುಲದೇವತಾಸ್ಥಾನವಾದ ಈ ಚೈತ್ಯವು ಮಾತ್ರ ಹಾಗೆಯೇ ಉಳಿದಿದೆ. ಇದನ್ನು ಉರುಳಿಸಿಬಿಡುತ್ತೇನೆ'' ಎಂದು ಚಿಂತಿಸಿ ಮೇರು ಶಿಖರದಂತೆ ಅತ್ಯುನ್ನತವಾದ ಆ ಚೈತ್ಯಪ್ರಾಸಾದದ ಮೇಲೆ ನೆಗೆದನು (೧–೩).

ಆರುಹ್ಯ ಗಿರಿಸಂಕಾಶಂ ಪ್ರಾಸಾದಂ ಹರಿಯೂಥಪಃ ।
ಬಭೌ ಸ ಸುಮಹಾತೇಜಾಃ ಪ್ರತಿಸೂರ್ಯ ಇವೋದಿತಃ ॥ ೪

ಸಂಪ್ರಧೃಷ್ಯ ಚ ದುರ್ಧರ್ಷಂ ಚೈತ್ಯಪ್ರಾಸಾದಮುತ್ತಮಮ್ ।
ಹನುಮಾನ್ ಪ್ರಜ್ವಲನ್ ಲಕ್ಷ್ಮ್ಯಾ ಪಾರಿಯಾತ್ರೋಪಮೋಽಭವತ್ ॥

ಸ ಭೂತ್ವಾ ಸುಮಹಾಕಾಯಃ ಪ್ರಭಾವಾನ್ಮಾರುತಾತ್ಮಜಃ ।
ಧೃಷ್ಟಮಾಸ್ಫೋಟಯಾಮಾಸ ಲಂಕಾಂ ಶಬ್ದೇನ ಪೂರಯನ್ ॥ ೬

ತಸ್ಯಾಸ್ಫೋಟಿತಶಬ್ದೇನ ಮಹತಾ ಶ್ರೋತ್ರಘಾತಿನಾ ।
ಪೇತುರ್ವಿಹಂಗಮಾಸ್ತತ್ರ ಚೈತ್ಯಪಾಲಾಶ್ಚ ಮೋಹಿತಾಃ ॥ ೭

ಅಸ್ತ್ರವಿಜ್ಜಯತಾಂ ರಾಮೋ ಲಕ್ಷ್ಮಣಶ್ಚ ಮಹಾಬಲಃ ।
ರಾಜಾ ಜಯತಿ ಸುಗ್ರೀವೋ ರಾಘವೇಣಾಭಿಪಾಲಿತಃ ॥ ೮

ದಾಸೋಽಹಂ ಕೋಸಲೇಂದ್ರಸ್ಯ ರಾಮಸ್ಯಾಕ್ಲಿಷ್ಟಕರ್ಮಣಃ ।
ಹನುಮಾನ್ ಶತ್ರುಸೈನ್ಯಾನಾಂ ನಿಹಂತಾ ಮಾರುತಾತ್ಮಜಃ ॥ ೯

ನ ರಾವಣಸಹಸ್ರಂ ಮೇ ಯುದ್ಧೇ ಪ್ರತಿಬಲಂ ಭವೇತ್ ।
ಶಿಲಾಭಿಸ್ತು ಪ್ರಹರತಃ ಪಾದಪೈಶ್ಚ ಸಹಸ್ರಶಃ ॥ ೧೦

ಮಹಾತೇಜಸ್ವಿಯಾದ ಆಂಜನೇಯನು ಅದನ್ನೇರಿ ಕುಳಿತಾಗ, ಬೇರೊಬ್ಬ ಸೂರ್ಯನೇ ಉದಯಿಸಿ ಬಂದಂತೆಯೂ ಉನ್ನತವಾದ ಪಾರಿಯಾತ್ರ ಪರ್ವತದಂತೆಯೂ ಕಂಗೊಳಿಸಿದನು (೪–೫). ತನ್ನ ಪ್ರಭಾವದಿಂದ ದೊಡ್ಡದೇಹವನ್ನು ತಾಳಿ ಆ ಕಟ್ಟಡವನ್ನು ಮುರಿದುಹಾಕಿದನು. ಆಸ್ಫೋಟನೆಯಿಂದಾದ ಮಹಾಶಬ್ದವು ಲಂಕೆಯಲ್ಲಿ ಮೊಳಗಿಹೋಯಿತು. ಕರ್ಣ ಕಠೋರವಾದ ಆ ಶಬ್ದವನ್ನು ಕೇಳಿ ಆಕಾಶದಿಂದ ಹಕ್ಕಿಗಳು ಉದುರಿಬಿದ್ದವು. ಕಾವಲುಗಾರರು ಎಚ್ಚರದಪ್ಪಿದರು (೬–೭). ಹನುಮಂತನು "ಅಸ್ತ್ರ ವಿಶಾರದನಾದ ರಾಮನಿಗೆ ಜಯವಾಗಲಿ! ಬಲಾಢ್ಯನಾದ ಲಕ್ಷ್ಮಣನಿಗೆ ಜಯವಾಗಲಿ! ಶ್ರೀರಾಮನಿಂದ ರಕ್ಷಿತನಾದ ಸುಗ್ರೀವ ಮಹಾರಾಜನಿಗೆ ಜಯವಾಗಲಿ! ನಾನು ಕೋಸಲೇಂದ್ರನಾದ ಶ್ರೀರಾಮನ ದಾಸ. ನನ್ನ ಹೆಸರು ಹನುಮಂತ. ನಾನು ವಾಯುಪುತ್ರ (೮–೯). ಶತ್ರು ಸೈನ್ಯಗಳನ್ನು

ಅರ್ದಯಿತ್ವಾ ಪುರೀಂ ಲಂಕಾಮಭಿವಾದ್ಯ ಚ ಮೈಥಿಲೀಮ್ ।
ಸಮೃದ್ಧಾರ್ಥೋ ಗಮಿಷ್ಯಾಮಿ ಮಿಷತಾಂ ಸರ್ವರಕ್ಷಸಾಮ್ ॥ ೧೧

ಏವಮುಕ್ತ್ವಾ ಮಹಾಬಾಹುಶ್ಚೈತ್ಯಸ್ಥೋ ಹರಿಯೂಥಪಃ ।
ನನಾದ ಭೀಮನಿರ್ಹ್ರಾದೋ ರಕ್ಷಸಾಂ ಜನಯನ್ ಭಯಮ್ ॥ ೧೨

ತೇನ ಶಬ್ದೇನ ಮಹತಾ ಚೈತ್ಯಪಾಲಾಃ ಶತಂ ಯಯುಃ ।
ಗೃಹೀತ್ವಾ ವಿವಿಧಾನಸ್ತ್ರಾನ್ ಪ್ರಾಸಾನ್ ಖಡ್ಗಾನ್ ಪರಶ್ವಧಾನ್ ॥ ೧೩

ವಿಸೃಜಂತೋ ಮಹಾಕಾಯಾ ಮಾರುತಿಂ ಪರ್ಯವಾರಯನ್ ।
ತೇ ಗದಾಭಿರ್ವಿಚಿತ್ರಾಭಿಃ ಪರಿಘೈಃ ಕಾಂಚನಾಂಗದೈಃ ॥ ೧೪

ಆಜಘ್ನುರ್ವಾನರಶ್ರೇಷ್ಠಂ ಬಾಣೈಶ್ಚಾದಿತ್ಯಸಂನಿಭೈಃ ।
ಆವರ್ತ ಇವ ಗಂಗಾಯಾಸ್ತೋಯಸ್ಯ ವಿಪುಲೋ ಮಹಾನ್ ॥ ೧೫

ಪರಿಕ್ಷಿಪ್ಯ ಹರಿಶ್ರೇಷ್ಠಂ ಸ ಬಭೌ ರಕ್ಷಸಾಂ ಗಣಃ ।
ತತೋ ವಾತಾತ್ಮಜಃ ಕ್ರುದ್ಧೋ ಭೀಮರೂಪಂ ಸಮಾಸ್ಥಿತಃ ॥ ೧೬

ಪ್ರಾಸಾದಸ್ಯ ಮಹಾಂತಸ್ಯ ಸ್ತಂಭಂ ಹೇಮಪರಿಷ್ಕೃತಮ್ ।
ಉತ್ಪಾಟಯಿತ್ವಾ ವೇಗೇನ ಹನುಮಾನ್ ಪವನಾತ್ಮಜಃ ॥ ೧೭

ಧ್ವಂಸಮಾಡತಕ್ಕವನು ! ಸಾವಿರಮಂದಿ ರಾವಣರು ಬಂದರೂ ಯುದ್ಧದಲ್ಲಿ ನನ್ನನ್ನು ಎದುರಿಸಲಾರರು. ಕಲ್ಲು ಮರಗಳಿಂದಲೇ ಹೊಡೆದಾಡಬಲ್ಲೆನು. ಈ ಲಂಕೆಯನ್ನು ಧ್ವಂಸಮಾಡಿ, ಸೀತಾದೇವಿಗೆ ಅಭಿವಂದಿಸಿ, ಕೃತಕೃತ್ಯನಾಗಿ ಈ ರಾಕ್ಷಸರ ಕಣ್ಣೆದುರಿಗೇ ಹಿಂತಿರುಗಿ ಹೋಗುವೆನು !'' ಎಂದು ಕೂಗಿ ಹೇಳಿ, ರಾಕ್ಷಸರಿಗೆ ಭಯವುಂಟಾಗುವಂತೆ ಭೀಕರ ಧ್ವನಿಯಿಂದ ಗರ್ಜಿಸಿದನು (೧೦–೧೨). ಅನಂತರ ಚೈತ್ಯದ ಕಾವಲುಗಾರರಾದ ನೂರಾರುಮಂದಿ ರಾಕ್ಷಸರು ಪ್ರಾಸ, ಖಡ್ಗ, ಗಂಡುಗೊಡಲಿ, ಬಾಣ ಮುಂತಾದ ವಿವಿಧಾಸ್ತ್ರಗಳನ್ನು ಧರಿಸಿ ಮಾರುತಿಯನ್ನು ಸುತ್ತುಗಟ್ಟಿ ಪ್ರಹರಿಸಿದರು (೧೩–೧೪). ಅವನನ್ನು ಸುತ್ತುಗಟ್ಟಿ ತಿರುಗುತ್ತಿದ್ದ ರಾಕ್ಷಸಸಮೂಹವು ಗಂಗಾನದಿಯ ದೊಡ್ಡ ಸುಳಿಯಂತೆ ಕಾಣುತ್ತಿದ್ದಿತು. ಆಗ ಕ್ರುದ್ಧನಾದ ಮಾರುತಿಯು ಭೀಮಾಕಾರನಾಗಿ ಚೈತ್ಯಪ್ರಾಸಾದದಲ್ಲಿದ್ದ ಸುವರ್ಣಮಯವಾದ ಕಂಭವನ್ನು ಕಿತ್ತು,

ತತಸ್ತಂ ಭ್ರಾಮಯಾಮಾಸ ಶತಧಾರಂ ಮಹಾಬಲಃ ।
ತತ್ರ ಚಾಗ್ನಿಃ ಸಮಭವತ್ ಪ್ರಾಸಾದಶ್ಚಾಪ್ಯದಹ್ಯತ ॥ ೧೮

ದಹ್ಯಮಾನಂ ತತೋ ದೃಷ್ಟ್ವಾ ಪ್ರಾಸಾದಂ ಹರಿಯೂಥಪಃ ।
ಸ ರಾಕ್ಷಸಶತಂ ಹತ್ವಾ ವಜ್ರೇಣೇಂದ್ರ ಇವಾಸುರಾನ್ ॥ ೧೯

ಅಂತರಿಕ್ಷೇ ಸ್ಥಿತಃ ಶ್ರೀಮಾನಿದಂ ವಚನಮಬ್ರವೀತ್ ।
ಮಾದೃಶಾನಾಂ ಸಹಸ್ರಾಣಿ ವಿಸೃಷ್ಟಾನಿ ಮಹಾತ್ಮನಾಮ್ ॥ ೨೦

ಬಲಿನಾಂ ವಾನರೇಂದ್ರಾಣಾಂ ಸುಗ್ರೀವವಶವರ್ತಿನಾಮ್ ।
ಅಟಂತಿ ವಸುಧಾಂ ಕೃತ್ಸ್ನಾಂ ವಯಮನ್ಯೇ ಚ ವಾನರಾಃ ॥ ೨೧

ದಶನಾಗಬಲಾಃ ಕೇಚಿತ್ ಕೇಚಿದ್ದಶಗುಣೋತ್ತರಾಃ ।
ಕೇಚಿನ್ನಾಗಸಹಸ್ರಸ್ಯ ಬಭೂವುಸ್ತುಲ್ಯವಿಕ್ರಮಾಃ ॥ ೨೨

ಸಂತಿ ಚೌಘಬಲಾಃ ಕೇಚಿತ್ ಕೇಚಿದ್ವಾಯುಬಲೋಪಮಾಃ ।
ಅಪ್ರಮೇಯಬಲಾಶ್ಚಾನ್ಯೇ ತತ್ರಾಸನ್ ಹರಿಯೂಥಪಾಃ ॥ ೨೩

ವಜ್ರಾಯುಧದಂತಿದ್ದ ಆದನ್ನು ಗಿರ್ರನೆ ತಿರುಗಿಸಿದನು. ತಿರುಗಿಸಿದ ವೇಗಕ್ಕೆ ಬೆಂಕಿಯು ಹುಟ್ಟಿ ಪ್ರಾಸಾದವು ಉರಿದುಹೋಯಿತು. ಇಂದ್ರನು ವಜ್ರಾಯುಧದಿಂದ ಅಸುರರನ್ನು ಕೊಲ್ಲುವಂತೆ, ಹನುಮಂತನು ಆ ಕಂಭದಿಂದಲೇ ರಾಕ್ಷಸರನ್ನೆಲ್ಲಾ ಕೊಂದುಬಿಟ್ಟನು (೧೫–೧೯). ಚೈತ್ಯವು ಸುಟ್ಟುಹೋಗಲಾಗಿ ಹನುಮಂತನು ಆಕಾಶ ಮಧ್ಯದಲ್ಲಿ ನಿಂತು ''ಎಲೈ ರಾಕ್ಷಸರೆ, ನನ್ನಂತಹ ಸಾವಿರಾರು ಮಂದಿ ವಾನರ ವೀರರನ್ನು ಸುಗ್ರೀವನು ಕಳಿಸಿದ್ದಾನೆ. ನಾವೆಲ್ಲರೂ ಸೀತಾನ್ವೇಷಣಕ್ಕಾಗಿ ಭೂಮಿಯನ್ನು ಸುತ್ತುತ್ತಿದ್ದೇವೆ. ನಮ್ಮಲ್ಲಿ ಕೆಲವರು ಹತ್ತು ಆನೆಗಳ ಬಲವುಳ್ಳವರೂ ಇದ್ದಾರೆ (೨೦–೨೨). ನಮ್ಮ ವಾನರವೀರರಲ್ಲಿ ನದೀಪ್ರವಾಹದಂತೆಯೂ ವಾಯುವಿನಂತೆಯೂ ಬಲಸಂಪನ್ನರಿದ್ದಾರೆ. ಕೆಲವರ ಬಲವನ್ನಂತೂ ಇಷ್ಟೇ ಎಂದು ಹೇಳುವುದಕ್ಕೇ ಶಕ್ಯವಿಲ್ಲ. ದಂತ ನಖಗಳೇ ನಮ್ಮ ಆಯುಧಗಳು. ಇಂತಹ ನೂರು, ಸಾವಿರ, ಲಕ್ಷ, ಕೋಟಿಗಟ್ಟಲೆ ವೀರರನ್ನು ಕರೆದುಕೊಂಡು ಸುಗ್ರೀವ ಮಹಾರಾಜನು

ಈದೃಗ್ವಿಧೈಸ್ತು ಹರಿಭಿರ್ವೃತೋ ದಂತನಖಾಯುಧೈಃ ।
ಶತೈಃ ಶತಸಹಸ್ರೈಶ್ಚ ಕೋಟೀಭಿರಯುತೈರಪಿ ॥ ೨೪

ಆಗಮಿಷ್ಯತಿ ಸುಗ್ರೀವಃ ಸರ್ವೇಷಾಂ ವೋ ನಿಷೂದನಃ ।
ನೇಯಮಸ್ತಿ ಪುರೀ ಲಂಕಾ ನ ಯೂಯಂ ನ ಚ ರಾವಣಃ ॥ ೨೫

ಯಸ್ಮಾದಿಕ್ಷ್ವಾಕುನಾಥೇನ ಬದ್ಧಂ ವೈರಂ ಮಹಾತ್ಮನಾ ॥

ಇತಿ ಶ್ರೀಮದ್ರಾಮಾಯಣೇ ಸುಂದರಕಾಂಡೇ ತ್ರಿಚತ್ವಾರಿಂಶಃ ಸರ್ಗಃ

ನಿಮ್ಮನ್ನು ಕೊಲ್ಲುವುದಕ್ಕಾಗಿ ಬರುತ್ತಾನೆ. ಇಕ್ಷ್ವಾಕುನಾಥನಾದ ಶ್ರೀರಾಮನೊಡನೆ ನೀವು ವೈರವನ್ನು ಬೆಳೆಯಿಸಿದ್ದೀರಿ. ಆದ್ದರಿಂದ ಇನ್ನು ಲಂಕಾಪುರಿಯೂ ಉಳಿಯುವುದಿಲ್ಲ, ನೀವೂ ಉಳಿಯುವುದಿಲ್ಲ, ರಾವಣನೂ ಉಳಿಯುವುದಿಲ್ಲ !'' ಎಂದು ಉದ್ಘೋಷಿಸಿದನು (೨೩–೨೫).

ಇಲ್ಲಿಗೆ ಶ್ರೀಮದ್ರಾಮಾಯಣದ ಸುಂದರಕಾಂಡದಲ್ಲಿ ನಲವತ್ತುಮೂರನೆಯ ಸರ್ಗ

ಚತುಶ್ಚತ್ವಾರಿಂಶಃ ಸರ್ಗಃ

ಜಂಬುಮಾಲಿವಧಃ

ಸಂದಿಷ್ಟೋ ರಾಕ್ಷಸೇಂದ್ರೇಣ ಪ್ರಹಸ್ತಸ್ಯ ಸುತೋ ಬಲೀ ।
ಜಂಬುಮಾಲೀ ಮಹಾದಂಷ್ಟ್ರೋ ನಿರ್ಜಗಾಮ ಧನುರ್ಧರಃ ॥ ೧

ರಕ್ತಮಾಲ್ಯಾಂಬರಧರಃ ಸ್ರಗ್ವೀ ರುಚಿರಕುಂಡಲಃ ।
ಮಹಾನ್ ವಿವೃತ್ತನಯನಶ್ಚಂಡಃ ಸಮರದುರ್ಜಯಃ ॥ ೨

ಧನುಃ ಶಕ್ರಧನುಃಪ್ರಖ್ಯಂ ಮಹದ್ರುಚಿರಸಾಯಕಮ್ ।
ವಿಸ್ಫಾರಯಾಣೋ ವೇಗೇನ ವಜ್ರಾಶನಿಸಮಸ್ವನಮ್ ॥ ೩

ತಸ್ಯ ವಿಸ್ಫಾರಘೋಷೇಣ ಧನುಷೋ ಮಹತಾ ದಿಶಃ ।
ಪ್ರದಿಶಶ್ಚ ನಭಶ್ಚೈವ ಸಹಸಾ ಸಮಪೂರ್ಯತ ॥ ೪

ರಥೇನ ಖರಯುಕ್ತೇನ ತಮಾಗತಮುದೀಕ್ಷ್ಯ ಸಃ ।
ಹನುಮಾನ್ ವೇಗಸಂಪನ್ನೋ ಜಹರ್ಷ ಚ ನನಾದ ಚ ॥ ೫

ಸರ್ಗ ೪೪

ಹನುಮಂತನು ಪ್ರಹಸ್ತಪುತ್ರನಾದ ಜಂಬುಮಾಲಿಯನ್ನು ಸಂಹರಿಸುವುದು.

ರಾಕ್ಷಸೇಶ್ವರನ ಆಜ್ಞೆಯನ್ನು ಪಡೆದು ಪ್ರಹಸ್ತಪುತ್ರನಾದ ಜಂಬುಮಾಲಿಯು ಧನುರ್ಧಾರಿಯಾಗಿ ಯುದ್ಧಕ್ಕೆ ಹೊರಟನು. ಅವನು ಕೆಂಪಾದ ವಸ್ತ್ರವನ್ನೂ ಹೂವಿನ ದಂಡೆಯನ್ನೂ ಧರಿಸಿ, ಕಿವಿಗಳಲ್ಲಿ ಕುಂಡಲಗಳನ್ನು ಹಾಕಿಕೊಂಡಿದ್ದನು. ಪ್ರಚಂಡನೂ ವೀರನೂ ಆದ ಜಂಬುಮಾಲಿಯು ಕೋಪದಿಂದ ಕಣ್ಣಾಲಿಗಳನ್ನು ತಿರುಗಿಸುತ್ತಿದ್ದನು. ಹರಿತವಾದ ಬಾಣಗಳನ್ನು ಹಿಡಿದು ಧನುಸ್ಸನ್ನು ಸಿಡಿಲಿನಂತೆ ಟಂಕಾರಮಾಡುತ್ತಿದ್ದನು (೧–೩). ಆ ಟಂಕಾರಧ್ವನಿಯಿಂದ ಸಮಸ್ತ ದಿಕ್ಕುಗಳೂ ಆಕಾಶವೂ ತುಂಬಿಹೋದವು. ಅವನು ಹೇಸರಗತ್ತೆಗಳನ್ನು ಹೂಡಿದ ರಥವನ್ನೇರಿ ಬರುವುದನ್ನು ಕಂಡು, ಹನುಮಂತನು ಸಂತೋಷದಿಂದ ಸಿಂಹನಾದ ಮಾಡಿದನು (೪–೫).

ತಂ ತೋರಣವಿಟಂಕಸ್ಥಂ ಹನುಮಂತಂ ಮಹಾಕಪಿಮ್ ।
ಜಂಬುಮಾಲೀ ಮಹಾಬಾಹುರ್ವಿವ್ಯಾಧ ನಿಶಿತೈಃ ಶರೈಃ ॥ ೬

ಅರ್ಧಚಂದ್ರೇಣ ವದನೇ ಶಿರಸ್ಯೇಕೇನ ಕರ್ಣಿನಾ ।
ಬಾಹ್ವೋರ್ವಿವ್ಯಾಧ ನಾರಾಚೈರ್ದಶಭಿಸ್ತಂ ಕಪೀಶ್ವರಮ್ ॥ ೭

ತಸ್ಯ ತಚ್ಛುಶುಭೇ ತಾಮ್ರಂ ಶರೇಣಾಭಿಹತಂ ಮುಖಮ್ ।
ಶರದೀವಾಂಬುಜಂ ಫುಲ್ಲಂ ವಿದ್ಧಂ ಭಾಸ್ಕರರಶ್ಮಿನಾ ॥ ೮

ತತ್ತಸ್ಯ ರಕ್ತಂ ರಕ್ತೇನ ರಂಜಿತಂ ಶುಶುಭೇ ಮುಖಮ್ ।
ಯಥಾಕಾಶೇ ಮಹಾಪದ್ಮಂ ಸಿಕ್ತಂ ಚಂದನದುಂದುಭಿಃ ॥ ೯

ಚುಕೋಪ ಬಾಣಾಭಿಹತೋ ರಾಕ್ಷಸಸ್ಯ ಮಹಾಕಪಿಃ ।
ತತಃ ಪಾರ್ಶ್ವೇಽತಿವಿಪುಲಾಂ ದದರ್ಶ ಮಹತೀಂ ಶಿಲಾಮ್ ॥ ೧೦

ತರಸಾ ತಾಂ ಸಮುತ್ಪಾಟ್ಯ ಚಿಕ್ಷೇಪ ಬಲವದ್ಬಲೀ ।
ತಾಂ ಶರೈರ್ದಶಭಿಃ ಕ್ರುದ್ಧಸ್ತಾಡಯಾಮಾಸ ರಾಕ್ಷಸಃ ॥ ೧೧

ವಿಪನ್ನಂ ಕರ್ಮ ತದ್ದೃಷ್ಟ್ವಾ ಹನುಮಾಂಶ್ಚಂಡವಿಕ್ರಮಃ ।
ಸಾಲಂ ವಿಪುಲಮುತ್ಪಾಟ್ಯ ಭ್ರಾಮಯಾಮಾಸ ವೀರ್ಯವಾನ್ ॥ ೧೨

ಜಂಬುಮಾಲಿಯು ಮಹಾದ್ವಾರದ ಅಡ್ಡತೊಲೆಯಮೇಲೆ ಕುಳಿತಿದ್ದ ಆ ಮಹಾಕಪಿಯನ್ನು ಕಂಡು ತೀಕ್ಷ್ಣ ಶರಗಳಿಂದ ಹೊಡೆಯಲಾರಂಭಿಸಿದನು. ಅರ್ಧಚಂದ್ರಾಕಾರದ ಶರದಿಂದ ಅವನ ಮುಖಕ್ಕೂ, ಅಂಕುಶಾಕಾರದ ಶರದಿಂದ ತಲೆಗೂ, ಹತ್ತು ಶರಗಳಿಂದ ತೋಳುಗಳಿಗೂ ಹೊಡೆದನು (೬–೭). ಆಗ ರಕ್ತಸುರಿದು ಕೆಂಪಾದ ಹನುಮಂತನ ಮುಖವು ಶರತ್ಕಾಲದಲ್ಲಿ ಸೂರ್ಯರಶ್ಮಿಯಿಂದ ಅರಳಿದ ಕೆಂದಾವರೆಯಂತೆ ಕಂಡಿತು. ಮೊದಲೇ ಕೆಂಪಗಿದ್ದ ಮುಖದ ಮೇಲೆ ರಕ್ತವು ಸುರಿಯಲು, ಅವನ ಮುಖವು ರಕ್ತಚಂದನವನ್ನು ಬಳಿದ ದೊಡ್ಡ ಕಮಲದಂತೆ ತೋರಿತು (೮–೯). ಅವನು ಕ್ರುದ್ಧನಾಗಿ ಪಕ್ಕದಲ್ಲಿದ್ದ ಒಂದು ದೊಡ್ಡ ಬಂಡೆಯನ್ನು ಕೈಗೆ ಎತ್ತಿಕೊಂಡು ಜಂಬುಮಾಲಿಯ ಮೇಲೆ ರಭಸದಿಂದ ಬೀಸಿದನು. ರಾಕ್ಷಸನು ಹತ್ತು ಬಾಣಗಳನ್ನು ಬಿಟ್ಟು ಆ ಬಂಡೆಯನ್ನು ಸೀಳಿದನು (೧೦–೧೧). ತನ್ನ ಪ್ರಯತ್ನವು ವ್ಯರ್ಥವಾದುದನ್ನು ಕಂಡು, ಹನುಮಂತನು ಒಂದು

ಭ್ರಾಮಯಂತಂ ಕಪಿಂ ದೃಷ್ಟ್ವಾ ಸಾಲವೃಕ್ಷಂ ಮಹಾಬಲಮ್ ।
ಚಿಕ್ಷೇಪ ಸುಬಹೂನ್ ಬಾಣಾನ್ ಜಂಬುಮಾಲೀ ಮಹಾಬಲಃ ॥ ೧೩

ಸಾಲಂ ಚತುರ್ಭಿಶ್ಛಿಚ್ಛೇದ ವಾನರಂ ಪಂಚಭಿರ್ಭುಜೇ ।
ಶಿರಸ್ಯೇಕೇನ ಬಾಣೇನ ದಶಭಿಸ್ತು ಸ್ತನಾಂತರೇ ॥ ೧೪

ಸ ಶರೈಃ ಪೂರಿತತನುಃ ಕ್ರೋಧೇನ ಮಹತಾ ವೃತಃ ।
ತಮೇವ ಪರಿಘಂ ಗೃಹ್ಯ ಭ್ರಾಮಯಾಮಾಸ ವೇಗತಃ ॥ ೧೫

ಅತಿವೇಗೋಽತಿವೇಗೇನ ಭ್ರಾಮಯಿತ್ವಾ ಬಲೋತ್ಕಟಃ ।
ಪರಿಘಂ ಪಾತಯಾಮಾಸ ಜಂಬುಮಾಲೇರ್ಮಹೋರಸಿ ॥ ೧೬

ತಸ್ಯ ಚೈವ ಶಿರೋ ನಾಸ್ತಿ ನ ಬಾಹೂ ನ ಚ ಜಾನುನೀ ।
ನ ಧನುರ್ನ ರಥೋ ನಾಶ್ವಾಸ್ತತ್ರಾದೃಶ್ಯಂತ ನೇಷವಃ ॥ ೧೭

ಸ ಹತಸ್ತರಸಾ ತೇನ ಜಂಬುಮಾಲೀ ಮಹಾಬಲಃ ।
ಪಪಾತ ನಿಹತೋ ಭೂಮೌ ಚೂರ್ಣಿತಾಂಗವಿಭೂಷಣಃ ॥ ೧೮

ಜಂಬುಮಾಲಿಂ ಚ ನಿಹತಂ ಕಿಂಕರಾಂಶ್ಚ ಮಹಾಬಲಾನ್ ।
ಚುಕ್ರೋಧ ರಾವಣಃ ಶ್ರುತ್ವಾ ಕೋಪಸಂರಕ್ತಲೋಚನಃ ॥ ೧೯

ದೊಡ್ಡ ಸಾಲವೃಕ್ಷವನ್ನು ಕಿತ್ತು ಬೀಸಿಹೊಡೆಯಲಾಗಿ, ಜಂಬುಮಾಲಿಯು ನಾಲ್ಕು ಬಾಣಗಳಿಂದ ಸಾಲವೃಕ್ಷವನ್ನು ಚೂರುಮಾಡಿದನು. ಮತ್ತೆ ಐದು ಬಾಣಗಳನ್ನು ಹನುಮಂತನ ಭುಜಗಳಿಗೂ ಒಂದನ್ನು ತಲೆಗೂ ಹತ್ತು ಬಾಣಗಳನ್ನು ಎದೆಗೂ ಹೊಡೆದನು (೧೨-೧೪). ಸುತ್ತಲೂ ಬಾಣಗಳು ಚುಚ್ಚಿಕೊಳ್ಳಲು, ಬಲಾಢ್ಯನಾದ ಆಂಜನೇಯನು ಮಹಾಕೋಪದಿಂದ ಹಿಂದೆ ಉಪಯೋಗಿಸಿದ್ದ ಬಾಗಿಲಿನ ಅಗುಳಿಯನ್ನೇ ತೆಗೆದುಕೊಂಡು ವೇಗದಿಂದ ತಿರುಗಿಸಿ, ಜಂಬುಮಾಲಿಯ ಎದೆಯಮೇಲೆ ಅಪ್ಪಳಿಸಿ ಹೊಡೆದನು (೧೫-೧೬). ಮರುಕ್ಷಣದಲ್ಲಿ ನೋಡಿದರೆ ಜಂಬುಮಾಲಿಯ ಶಿರಸ್ಸೂ ಇಲ್ಲ! ತೋಳುಗಳೂ ಇಲ್ಲ! ಮೊಳಕಾಲುಗಳೂ ಇಲ್ಲ! ಅವನ ಧನುಸ್ಸು, ರಥ, ಕುದುರೆ, ಬಾಣ ಯಾವುದೂ ಕಾಣಿಸಲಿಲ್ಲ! ಜಂಬುಮಾಲಿಯು ಸತ್ತು ಜಜ್ಜಿಹೋಗಿ ನೆಲದಮೇಲೆ ಬಿದ್ದಿದ್ದನು! (೧೭-೧೮).

ಸ ರೋಷಸಂವರ್ತಿತತಾಮ್ರಲೋಚನಃ
ಪ್ರಹಸ್ತಪುತ್ರೇ ನಿಹತೇ ಮಹಾಬಲೇ ।
ಅಮಾತ್ಯಪುತ್ರಾನತಿವೀರ್ಯವಿಕ್ರಮಾನ್
ಸಮಾದಿದೇಶಾಶು ನಿಶಾಚರೇಶ್ವರಃ ॥ ೨೦

ಇತಿ ಶ್ರೀಮದ್ರಾಮಾಯಣೇ ಸುಂದರಕಾಂಡೇ ಚತುಶ್ಚತ್ವಾರಿಂಶಃ ಸರ್ಗಃ

ಪಂಚಚತ್ವಾರಿಂಶಃ ಸರ್ಗಃ

ಅಮಾತ್ಯಪುತ್ರವಧಃ

ತತಸ್ತೇ ರಾಕ್ಷಸೇಂದ್ರೇಣ ಚೋದಿತಾ ಮಂತ್ರಿಣಾಂ ಸುತಾಃ ।
ನಿರ್ಯಯುರ್ಭವನಾತ್ತಸ್ಮಾತ್ ಸಪ್ತ ಸಪ್ತಾರ್ಚಿವರ್ಚಸಃ ॥ ೧
ಮಹಾಬಲಪರೀವಾರಾ ಧನುಷ್ಮಂತೋ ಮಹಾಬಲಾಃ ।
ಕೃತಾಸ್ತ್ರಾಸ್ತ್ರವಿದಾಂ ಶ್ರೇಷ್ಠಾಃ ಪರಸ್ಪರಜಯೈಷಿಣಃ ॥ ೨

ಕಿಂಕರರಂತೆ ಜಂಬುಮಾಲಿಯೂ ಹತನಾದುದನ್ನು ಕೇಳಿ ರಾವಣನಿಗೆ ಮಹಾಕೋಪ ಉಂಟಾಯಿತು. ಅವನು ಕಣ್ಣುಗಳನ್ನು ತಿರುಗಿಸುತ್ತ ವೀರರಾದ ಏಳುಮಂದಿ ಮಂತ್ರಿಕುಮಾರರನ್ನು ಕರೆದು ಹನುಮಂತನೊಡನೆ ಯುದ್ಧ ಮಾಡುವುದಕ್ಕಾಗಿ ಕಳಿಸಿದನು (೧೯–೨೦).

ಇಲ್ಲಿಗೆ ಶ್ರೀಮದ್ರಾಮಾಯಣದ ಸುಂದರಕಾಂಡದಲ್ಲಿ ನಲವತ್ತುನಾಲ್ಕನೆಯ ಸರ್ಗ

ಸರ್ಗ ೪೫

ಹನುಮಂತನು ಏಳುಮಂದಿ ಮಂತ್ರಿಕುಮಾರರನ್ನು ಸಂಹರಿಸುವುದು.

ರಾವಣನು ಕಳುಹಿಸಿದ ಏಳುಮಂದಿ ಮಂತ್ರಿಪುತ್ರರೂ ಅಗ್ನಿಯಂತೆ ತೇಜಸ್ವಿಗಳಾಗಿದ್ದರೂ. ಮಹಾಬಲಿಷ್ಠರೂ ಅಸ್ತ್ರವಿದ್ಯೆಯಲ್ಲಿ ನಿಪುಣರೂ ಧನುರ್ಧಾರಿಗಳೂ ಹನುಮಂತನನ್ನು ಜಯಿಸಲು ಉತ್ಸಾಹಶಾಲಿಗಳೂ

ಹೇಮಜಾಲಪರಿಕ್ಷಿಪ್ತೈರ್ಧ್ವಜವದ್ಭಿಃ ಪತಾಕಿಭಿಃ ।
ತೋಯದಸ್ವನನಿರ್ಘೋಷೈರ್ವಾಜಿಯುಕ್ತೈರ್ಮಹಾರಥೈಃ ॥ ೩

ತಪ್ತಕಾಂಚನಚಿತ್ರಾಣಿ ಚಾಪಾನ್ಯಮಿತವಿಕ್ರಮಾಃ ।
ವಿಸ್ಫಾರಯಂತಃ ಸಂಹೃಷ್ಟಾಸ್ತಟಿತ್ವಂತ ಇವಾಂಬುದಾಃ ॥ ೪

ಜನನ್ಯಸ್ತು ತತಸ್ತೇಷಾಂ ವಿದಿತ್ವಾ ಕಿಂಕರಾನ್ ಹತಾನ್ ।
ಬಭೂವುಃ ಶೋಕಸಂಭ್ರಾಂತಾಃ ಸಬಾಂಧವಸುಹೃಜ್ಜನಾಃ ॥ ೫

ತೇ ಪರಸ್ಪರಸಂಘರ್ಷಾತ್ತಪ್ತಕಾಂಚನಭೂಷಣಾಃ ।
ಅಭಿಪೇತುರ್ಹನೂಮಂತಂ ತೋರಣೇ ಸಮವಸ್ಥಿತಮ್ ॥ ೬

ಸೃಜಂತೋ ಬಾಣವೃಷ್ಟಿಂ ತೇ ರಥಗರ್ಜಿತನಿಃಸ್ವನಾಃ ।
ವೃಷ್ಟಿಮಂತ ಇವಾಂಭೋದಾ ವಿಚೇರುರ್ನೈರ್ಋತಾಂಬುದಾಃ ॥ ೭

ಅವಕೀರ್ಣಸ್ತತಸ್ತಾಭಿರ್ಹನುಮಾನ್ ಶರವೃಷ್ಟಿಭಿಃ ।
ಅಭವತ್ ಸಂವೃತಾಕಾರಃ ಶೈಲರಾಡಿವ ವೃಷ್ಟಿಭಿಃ ॥ ೮

ಆಗಿದ್ದರು (೧–೨). ಅವರು ಚಿನ್ನದ ತಗಡುಗಳಿಂದ ಭೂಷಿತವಾದ ಧ್ವಜ ಪತಾಕೆಗಳಿಂದ ವಿರಾಜಿಸುತ್ತಿರುವ, ಮೇಘದಂತೆ ಧ್ವನಿಗೈಯುವ, ಉತ್ತಮಾಶ್ವಗಳಿಂದ ಎಳೆಯಲ್ಪಡುವ ಮಹಾರಥಗಳನ್ನೇರಿ ಹೊರಟರು. ಸುವರ್ಣಾಲಂಕೃತವಾದ ಧನುಸ್ಸನ್ನು ಮಿಡಿಯುತ್ತಿರುವಾಗ ಆ ಮಂತ್ರಿಕುಮಾರರು ವಿದ್ಯುಲ್ಲತೆಗಳಿಂದ ಕೂಡಿದ ಮೇಘಗಳಂತೆ ಕಾಣುತ್ತಿದ್ದರು (೩–೪). ಅವರ ತಾಯಂದಿರೂ ಬಂಧುಬಳಗದವರೂ ವೀರರಾದ ಕಿಂಕರರು ಹತರಾದ ಸುದ್ದಿಯನ್ನು ಕೇಳಿ, ಇವರ ಗತಿಯೂ ಏನಾಗುವುದೋ ಎಂದು ಶೋಕಾರ್ತರಾದರು. ಆ ಕುಮಾರರು ನಾನು ಮುಂದೆ ತಾನು ಮುಂದೆ ಎಂದು ನುಗ್ಗುತ್ತ, ಮಹಾದ್ವಾರಗಳಲ್ಲಿ ಕಾದಿದ್ದ ಹನುಮಂತನ ಬಳಿಗೆ ಬಂದರು (೫–೬). ಅವರು ರಥಧ್ವನಿಗಳೆಂಬ ಗುಡುಗುಗಳೊಡನೆ, ಮೋಡಗಳು ಮಳೆಸುರಿಸುವಂತೆ ಹನುಮಂತನ ಮೇಲೆ ಶರಗಳನ್ನು ತೂರಿದರು. ಶರವೃಷ್ಟಿಗಳಿಂದ ಮುಚ್ಚಿಹೋದ ಹನುಮಂತನು,

ಸ ಶರಾನ್ ಮೋಘಯಾಮಾಸ ತೇಷಾಮಾಶುಚರಃ ಕಪಿಃ ।
ರಥವೇಗಂ ಚ ವೀರಾಣಾಂ ವಿಚರನ್ ವಿಮಲೇಽಂಬರೇ ॥ ೯

ಸ ತೈಃ ಕ್ರೀಡನ್ ಧನುಷ್ಮದ್ಭಿರ್ವ್ಯೋಮ್ನಿ ವೀರಃ ಪ್ರಕಾಶತೇ ।
ಧನುಷ್ಮದ್ಭಿರ್ಯಥಾ ಮೇಘೈರ್ಮಾರುತಃ ಪ್ರಭುರಂಬರೇ ॥ ೧೦

ಸ ಕೃತ್ವಾ ನಿನದಂ ಘೋರಂ ತ್ರಾಸಯಂಸ್ತಾಂ ಮಹಾಚಮೂಮ್ ।
ಚಕಾರ ಹನುಮಾನ್ ವೇಗಂ ತೇಷು ರಕ್ಷಃಸು ವೀರ್ಯವಾನ್ ॥ ೧೧

ತಲೇನಾಭ್ಯಹನತ್ ಕಾಂಶ್ಚಿತ್ ಪದ್ಭ್ಯಾಂ ಕಾಂಶ್ಚಿತ್ ಪರಂತಪಃ ।
ಮುಷ್ಟಿನಾಭ್ಯಹನತ್ ಕಾಂಶ್ಚಿನ್ನಖೈಃ ಕಾಂಶ್ಚಿದ್ವ್ಯದಾರಯತ್ ॥ ೧೨

ಪ್ರಮಮಾಥೋರಸಾ ಕಾಂಶ್ಚಿದೂರುಭ್ಯಾಮಪರಾನ್ ಕಪಿಃ ।
ಕೇಚಿತ್ತಸ್ಯ ನಿನಾದೇನ ತತ್ರೈವ ಪತಿತಾ ಭುವಿ ॥ ೧೩

ತತಸ್ತೇಷ್ವವಸನ್ನೇಷು ಭೂಮೌ ನಿಪತಿತೇಷು ಚ ।
ತತ್ಸೈನ್ಯಮಗಮತ್ ಸರ್ವಂ ದಿಶೋ ದಶ ಭಯಾರ್ದಿತಮ್ ॥ ೧೪

ವೃಷ್ಟಿಧಾರೆಗಳಿಂದ ಮುಚ್ಚಿದ ಪರ್ವತದಂತೆ ಕಂಗೊಳಿಸುತ್ತಿದ್ದನು (೭–೮). ಅವನು ಅತಿವೇಗದಿಂದ ಆಕಾಶದಲ್ಲಿ ಹಾರುತ್ತ, ರಾಕ್ಷಸರ ಶರಗಳನ್ನೂ ರಥವೇಗವನ್ನೂ ತಪ್ಪಿಸಿಕೊಳ್ಳುತ್ತಿದ್ದನು. ಮೇಘಗಳೊಡನೆ ಸಂಚರಿಸುವ ವಾಯುವಿನಂತೆ, ಆ ವೀರನು ರಾಕ್ಷಸರನ್ನೆದುರಿಸಿ ಲೀಲಾಜಾಲವಾಗಿ ಆಕಾಶದಲ್ಲಿ ಸುತ್ತಾಡುತ್ತಿದ್ದನು (೯–೧೦). ಅನಂತರ ಒಂದು ಸಲ ಗಟ್ಟಿಯಾಗಿ ಗರ್ಜಿಸಿ, ತನ್ನ ಶೌರ್ಯವನ್ನು ಮೆರೆಸಲಾರಂಭಿಸಿದನು. ಕೆಲವರನ್ನು ಕೈಯಿಂದ ಅಪ್ಪಳಿಸಿ ಹೊಡೆದು, ಕೆಲವರನ್ನು ಕಾಲಿನಿಂದ ತುಳಿದು, ಕೆಲವರನ್ನು ಮುಷ್ಟಿಯಿಂದ ಗುದ್ದಿ, ಕೆಲವರನ್ನು ಉಗುರಿನಿಂದ ಸೀಳಿ ಕೊಂದುಹಾಕಿದನು. ಕೆಲವರನ್ನು ಎದೆಯಿಂದ ನೂಕಿ, ಕೆಲವರನ್ನು ತೊಡೆಗಳಿಂದ ಹಿಚಿಕಿ ಕೊಂದೆಸೆದನು. ಕೆಲವರು ಅವನ ಗರ್ಜನೆಯನ್ನು ಕೇಳಿ ಎದೆಯೊಡೆದು ಸತ್ತುಬಿದ್ದರು (೧೧–೧೩). ಮಂತ್ರಿಕುಮಾರರೂ ಅನೇಕ ರಾಕ್ಷಸಯೋಧರೂ ಸತ್ತುಹೋಗಲು, ಉಳಿದ ಸೈನಿಕರು ಕಂಗೆಟ್ಟು ದಿಕ್ಕುದಿಕ್ಕಿಗೆ ಓಡಿಹೋದರು. ಆನೆಗಳು ವಿಕಾರವಾಗಿ ಕೂಗುತ್ತಿದ್ದವು. ಕುದುರೆಗಳು ನೆಲದ

ವಿನೇದುರ್ವಿಸ್ವರಂ ನಾಗಾ ನಿಪೇತುರ್ಭುವಿ ವಾಜಿನಃ ।
ಭಗ್ನನೀಡಧ್ವಜಚ್ಛತ್ರೈರ್ಭೂಶ್ಚ ಕೀರ್ಣಾಭವದ್ರಥೈಃ ॥ ೧೫

ಸ್ರವತಾ ರುಧಿರೇಣಾಥ ಸ್ರವಂತ್ಯೋ ದರ್ಶಿತಾಃ ಪಥಿ ।
ವಿವಿಧೈಶ್ಚ ಸ್ವರೈರ್ಲಂಕಾ ನನಾದ ವಿಕೃತಂ ತದಾ ॥ ೧೬

ಸ ತಾನ್ ಪ್ರವೃದ್ಧಾನ್ ವಿನಿಹತ್ಯ ರಾಕ್ಷಸಾನ್
ಮಹಾಬಲಶ್ಚಂಡಪರಾಕ್ರಮಃ ಕಪಿಃ ।
ಯುಯುತ್ಸುರನ್ಯೈಃ ಪುನರೇವ ರಾಕ್ಷಸೈ-
ಸ್ತದೇವ ವೀರೋಽಭಿಜಗಾಮ ತೋರಣಮ್ ॥ ೧೭

ಇತಿ ಶ್ರೀಮದ್ರಾಮಾಯಣೇ ಸುಂದರಕಾಂಡೇ ಪಂಚಚತ್ವಾರಿಂಶಃ ಸರ್ಗಃ

ಮೇಲೆ ಉರುಳಿದವು. ಛತ್ರ ಧ್ವಜಗಳೊಡನೆ ರಣಭೂಮಿಯಲ್ಲಿ ರಥಗಳು ಮುರಿದು ಬಿದ್ದು ಎಲ್ಲೆಲ್ಲಿಯೂ ತುಂಬಿದವು (೧೪–೧೫). ರಕ್ತದ ನದಿಗಳು ಹರಿದವು. ವಿಕಾರವಾದ ನಾನಾಬಗೆಯ ರೋದನಧ್ವನಿಗಳಿಂದ ಲಂಕೆಯು ಗೋಳಿಟ್ಟಿತು. ಚಂಡಪರಾಕ್ರಮನಾದ ಆಂಜನೇಯನು ಆ ರಾಕ್ಷಸರನ್ನು ಸಂಹರಿಸಿ, ಪುನಃ ಇತರ ರಾಕ್ಷಸರೊಡನೆ ಯುದ್ಧಮಾಡುವ ನಿರೀಕ್ಷಣೆಯಿಂದ ಮಹಾದ್ವಾರದ ಸಮೀಪಕ್ಕೆ ಬಂದು ನಿಂತನು (೧೬–೧೭).

ಇಲ್ಲಿಗೆ ಶ್ರೀಮದ್ರಾಮಾಯಣದ ಸುಂದರಕಾಂಡದಲ್ಲಿ ನಲವತ್ತೈದನೆಯ ಸರ್ಗ

ಷಟ್‌ಚತ್ವಾರಿಂಶಃ ಸರ್ಗಃ

ಸೇನಾಪತಿಪಂಚಕವಧಃ

ಹತಾನ್ ಮಂತ್ರಿಸುತಾನ್ ಬುದ್ಧ್ವಾ ವಾನರೇಣ ಮಹಾತ್ಮನಾ ।
ರಾವಣಃ ಸಂವೃತಾಕಾರಶ್ಚಕಾರ ಮತಿಮುತ್ತಮಾಮ್ ॥ ೧

ಸ ವಿರೂಪಾಕ್ಷಯೂಪಾಕ್ಷೌ ದುರ್ಧರಂ ಚೈವ ರಾಕ್ಷಸಮ್ ।
ಪ್ರಘಸಂ ಭಾಸಕರ್ಣಂ ಚ ಪಂಚ ಸೇನಾಗ್ರನಾಯಕಾನ್ ॥ ೨

ಸಂದಿದೇಶ ದಶಗ್ರೀವೋ ವೀರಾನ್ನಯವಿಶಾರದಾನ್ ।
ಹನುಮದ್ಗ್ರಹಣೇ ವ್ಯಗ್ರಾನ್ ವಾಯುವೇಗಸಮಾನ್ ಯುಧಿ ॥ ೩

ಯಾತ ಸೇನಾಗ್ರಗಾಃ ಸರ್ವೇ ಮಹಾಬಲಪರಿಗ್ರಹಾಃ ।
ಸವಾಜಿರಥಮಾತಂಗಾಃ ಸ ಕಪಿಃ ಶಾಸ್ಯತಾಮಿತಿ ॥ ೪

ಯತ್ತೈಶ್ಚ ಖಲು ಭಾವ್ಯಂ ಸ್ಯಾತ್ತಮಾಸಾದ್ಯ ವನಾಲಯಮ್ ।
ಕರ್ಮ ಚಾಪಿ ಸಮಾಧೇಯಂ ದೇಶಕಾಲಾವಿರೋಧಿತಮ್ ॥ ೫

ಸರ್ಗ ೪೬

ಹನುಮಂತನು ವಿರೂಪಾಕ್ಷನೇ ಮೊದಲಾದ ಐವರು ಸೇನಾಪತಿಗಳನ್ನು ಕೊಲ್ಲುವುದು.

ಹನುಮಂತನು ಮಂತ್ರಿಪುತ್ರರನ್ನೆಲ್ಲಾ ಸಂಹರಿಸಿದನೆಂಬ ವಾರ್ತೆಯನ್ನು ಕೇಳಿ ರಾವಣನಿಗೆ ಚಿಂತೆ ಹುಟ್ಟಿತು. ಆದರೂ ಅದನ್ನು ತೋರಿಸಿಕೊಳ್ಳದೆ ವಿರೂಪಾಕ್ಷ, ಯೂಪಾಕ್ಷ, ದುರ್ಧರ, ಪ್ರಘಸ ಮತ್ತು ಭಾಸಕರ್ಣ—ಎಂಬ ಐವರು ಸೇನಾಪತಿಗಳನ್ನು ಬರಮಾಡಿಕೊಂಡನು. ಅವರು ವೀರರೂ ನೀತಿವಿಶಾರದರೂ ವಾಯುವಿನಂತೆ ವೇಗಶಾಲಿಗಳೂ ಆಗಿದ್ದರು (೧–೩). ರಾವಣನು ಅವರನ್ನು ಕುರಿತು, ''ಎಲೈ ಸೇನಾಪತಿಗಳೆ, ನೀವೆಲ್ಲರೂ ರಥ ಗಜ ತುರಗಾದಿ ಸಾಧನಗಳೊಡನೆ ದೊಡ್ಡ ಸೇನೆಯನ್ನು ತೆಗೆದುಕೊಂಡು ಹೋಗಿ ಆ ಕಪಿಯನ್ನು ದಂಡಿಸಿರಿ. ನೀವು ಆ ಕಪಿಯ ಹತ್ತಿರ ದೇಶಕಾಲಗಳನ್ನರಿತು ಬಹಳ ಎಚ್ಚರಿಕೆಯಿಂದ ಯುದ್ಧಮಾಡಬೇಕು (೪–೫).

ನ ಹ್ಯಹಂ ತಂ ಕಪಿಂ ಮನ್ಯೇ ಕರ್ಮಣಾ ಪ್ರತಿತರ್ಕಯನ್ ।
ಸರ್ವಥಾ ತನ್ಮಹದ್ಭೂತಂ ಮಹಾಬಲಪರಿಗ್ರಹಮ್ ॥ ೬
ಭವೇದಿಂದ್ರೇಣ ವಾ ಸೃಷ್ಟಮಸ್ಮದರ್ಥಂ ತಪೋಬಲಾತ್ ।
ಸನಾಗಯಕ್ಷಗಂಧರ್ವಾ ದೇವಾಸುರಮಹರ್ಷಯಃ ॥ ೭
ಯುಷ್ಮಾಭಿಃ ಸಹಿತೈಃ ಸರ್ವೈರ್ಮಯಾ ಸಹ ವಿನಿರ್ಜಿತಾಃ ।
ತೈರವಶ್ಯಂ ವಿಧಾತವ್ಯಂ ವ್ಯಲೀಕಂ ಕಿಂಚಿದೇವ ನಃ ॥ ೮
ತದೇವ ನಾತ್ರ ಸಂದೇಹಃ ಪ್ರಸಹ್ಯ ಪರಿಗೃಹ್ಯತಾಮ್ ।
ನಾವಮಾನ್ಯಶ್ಚ ಯುಷ್ಮಾಭಿರ್ಹರಿಃ ಕ್ರೂರಪರಾಕ್ರಮಃ ॥ ೯
ದೃಷ್ಟಾ ಹಿ ಹರಯಃ ಪೂರ್ವಂ ಮಯಾ ವಿಪುಲವಿಕ್ರಮಾಃ ।
ವಾಲೀ ಚ ಸಹಸುಗ್ರೀವೋ ಜಾಂಬವಾಂಶ್ಚ ಮಹಾಬಲಃ ॥ ೧೦
ನೀಲಃ ಸೇನಾಪತಿಶ್ಚೈವ ಯೇ ಚಾನ್ಯೇ ದ್ವಿವಿದಾದಯಃ ।
ನೈವಂ ತೇಷಾಂ ಗತಿರ್ಭೀಮಾ ನ ತೇಜೋ ನ ಪರಾಕ್ರಮಃ ॥ ೧೧
ನ ಮತಿರ್ನ ಬಲೋತ್ಸಾಹೌ ನ ರೂಪಪರಿಕಲ್ಪನಮ್ ।
ಮಹತ್ಸತ್ತ್ವಮಿದಂ ಜ್ಞೇಯಂ ಕಪಿರೂಪಂ ವ್ಯವಸ್ಥಿತಮ್ ॥ ೧೨

ಆದರ ಕಾರ್ಯವನ್ನು ನೋಡಿದರೆ ಅದು ಕಪಿಯೇ ಅಲ್ಲವೆಂದು ತೋರುತ್ತದೆ. ಅದು ಬಲಶಾಲಿಯಾದ ಒಂದು ಮಹಾಭೂತವಾಗಿರಬೇಕು! ಇಂದ್ರನು ನಮ್ಮನ್ನು ನಿಗ್ರಹಿಸುವುದಕ್ಕಾಗಿ ತಪೋಬಲದಿಂದ ಈ ಭೂತವನ್ನು ಸೃಷ್ಟಿಸಿರಬಹುದು. ಹಿಂದೆ ನಾನು ನಿಮ್ಮೆಲ್ಲರೊಡನೆ ಹೋಗಿ ದೇವ, ಅಸುರ, ಮಹರ್ಷಿಗಳೇ ಮೊದಲಾದವರನ್ನು ಸೋಲಿಸಿದ್ದೇನೆ. ಅವರು ಈಗ ನಮಗೆ ಏನಾದರೂ ಕೇಡನ್ನು ಮಾಡಲು ಉದ್ದೇಶಿಸಿರಬೇಕು (೬–೮). ಆದರಲ್ಲಿ ಸಂದೇಹವೇ ಇಲ್ಲ. ಆದ್ದರಿಂದ ಅದನ್ನು ಬಲಾತ್ಕಾರವಾಗಿ ಸೆರೆಹಿಡಿಯಿರಿ. ಅದು ಕಪಿಯೆಂದು ಉಪೇಕ್ಷಿಸಬೇಡಿರಿ. ಕಪಿಗಳಲ್ಲಿಯೂ ಚಂಡಪರಾಕ್ರಮಿಗಳಿರುವುದನ್ನು ನಾನು ನೋಡಿದ್ದೇನೆ. ವಾಲಿ, ಸುಗ್ರೀವ, ಜಾಂಬವಂತ, ನೀಲ, ದ್ವಿವಿದ ಮೊದಲಾದವರು ವೀರರೆಂಬುದನ್ನು ಬಲ್ಲೆನು. ಅವರಿಗೆ ಹೀಗೆ ಭಯಂಕರವಾದ ವೇಗವೂ ತೇಜಃಪರಾಕ್ರಮಗಳೂ ಬುದ್ಧಿಶಕ್ತಿ ಬಲೋತ್ಸಾಹಗಳೂ ಇಷ್ಟಬಂದಂತೆ ರೂಪವನ್ನು ಪರಿವರ್ತಿಸುವ ಶಕ್ತಿಯೂ

ಪ್ರಯತ್ನಂ ಮಹದಾಸ್ಥಾಯ ಕ್ರಿಯತಾಮಸ್ಯ ನಿಗ್ರಹಃ ।
ಕಾಮಂ ಲೋಕಾಸ್ತ್ರಯಃ ಸೇಂದ್ರಾಃ ಸಸುರಾಸುರಮಾನವಾಃ ॥ ೧೩

ಭವತಾಮಗ್ರತಃ ಸ್ಥಾತುಂ ನ ಪರ್ಯಾಪ್ತಾ ರಣಾಜಿರೇ ।
ತಥಾಪಿ ತು ನಯಜ್ಞೇನ ಜಯಮಾಕಾಂಕ್ಷತಾ ರಣೇ ॥ ೧೪

ಆತ್ಮಾ ರಕ್ಷ್ಯಃ ಪ್ರಯತ್ನೇನ ಯುದ್ಧಸಿದ್ಧಿರ್ಹಿ ಚಂಚಲಾ ।
ತೇ ಸ್ವಾಮಿವಚನಂ ಸರ್ವೇ ಪ್ರತಿಗೃಹ್ಯ ಮಹೌಜಸಃ ॥ ೧೫

ಸಮುತ್ಪೇತುರ್ಮಹಾವೇಗಾ ಹುತಾಶಸಮತೇಜಸಃ ।
ರಥೈರ್ಮತ್ತೈಶ್ಚ ಮಾಂತಗೈರ್ವಾಜಿಭಿಶ್ಚ ಮಹಾಜವೈಃ ॥ ೧೬

ಶಸ್ತ್ರೈಶ್ಚ ವಿವಿಧೈಸ್ತೀಕ್ಷ್ಣೈಃ ಸರ್ವೈಶ್ಚೋಪಚಿತಾ ಬಲೈಃ ।
ತತಸ್ತಂ ದದೃಶುರ್ವೀರಾ ದೀಪ್ಯಮಾನಂ ಮಹಾಕಪಿಮ್ ॥ ೧೭

ರಶ್ಮಿಮಂತಮಿವೋದ್ಯಂತಂ ಸ್ವತೇಜೋರಶ್ಮಿಮಾಲಿನಮ್ ।
ತೋರಣಸ್ಥಂ ಮಹೋತ್ಸಾಹಂ ಮಹಾವೇಗಂ ಮಹಾಬಲಮ್ ॥ ೧೮

ಮಹಾಮತಿಂ ಮಹೋತ್ಸಾಹಂ ಮಹಾಕಾಯಂ ಮಹಾಭುಜಮ್ ।
ತಂ ಸಮೀಕ್ಷ್ಯೈವ ತೇ ಸರ್ವೇ ದಿಕ್ಷು ಸರ್ವಾಸ್ವವಸ್ಥಿತಾಃ ॥ ೧೯

ಇಲ್ಲ, ಇದು ಕಪಿಯ ವೇಷದಲ್ಲಿರುವ ಯಾವುದೋ ದೊಡ್ಡ ಭೂತವೇ ಸರಿ! (೯–೧೨). ಆದ್ದರಿಂದ ಮಹಾಪ್ರಯತ್ನದಿಂದಲೇ ಇದನ್ನು ನಿಗ್ರಹಿಸಬೇಕಾಗಿದೆ. ದೇವತೆಗಳೂ, ಅಸುರರೂ, ಮನುಷ್ಯರೂ, ಇಂದ್ರನೂ ಸೇರಿ ಮೂರು ಲೋಕಗಳೇ ಬಂದರೂ ನಿಮ್ಮೆದುರಿಗೆ ನಿಲ್ಲಲಾರರೆಂಬುದೇನೋ ನಿಜ. ಆದರೂ ಯುದ್ಧದಲ್ಲಿ ಜಯವನ್ನು ಬಯಸತಕ್ಕ ನೀತಿಜ್ಞನು ಮೊದಲು ತನ್ನನ್ನು ರಕ್ಷಿಸಿಕೊಳ್ಳಬೇಕು. ಯುದ್ಧದಲ್ಲಿ ಜಯವೆಂಬುದು ಯಾರಿಗೂ ಸ್ಥಿರವಲ್ಲ" ಎಂದು ಹೇಳಿದನು. (೧೩–೧೪). ಪ್ರಭುವಿನ ಆಜ್ಞೆಯಂತೆ ಆ ಸೇನಾಪತಿಗಳು ಅಗ್ನಿಯಂತೆ ಬೆಳಗುತ್ತ, ರಥ ಮುಂತಾದ ಸಾಧನಗಳಿಂದ ಸಜ್ಜಾದ ಸೇನೆಯೊಡನೆ ಹೋಗಿ ಹನುಮಂತನನ್ನು ಕಂಡರು (೧೫–೧೭). ಅವನು ಉದಯಿಸುತ್ತಿರುವ ಸೂರ್ಯನಂತೆ ಬೆಳಗುತ್ತ ಮಹಾದ್ವಾರದ ಮೇಲೆ ಉತ್ಸಾಹದಿಂದ ಕುಳಿತಿದ್ದನು. ವೇಗ, ಬಲ, ಬುದ್ಧಿ ಉತ್ಸಾಹಗಳಲ್ಲಿ ಮೇಲಾದವನು ; ಮಹಾಕಾಯ ; ಮಹಾಬಾಹು. ಅವನನ್ನು ನೋಡುತ್ತಲೇ

ತೈಸ್ತೈಃ ಪ್ರಹರಣೈರ್ಭೀಮೈರಭಿಪೇತುಸ್ತತಸ್ತತಃ ।
ತಸ್ಯ ಪಂಚಾಯಸಾಸ್ತೀಕ್ಷ್ಣಾಃ ಶಿತಾಃ ಪೀತಮುಖಾಃ ಶರಾಃ ॥ ೨೦
ಶಿರಸ್ಯುತ್ಪಲಪತ್ರಾಭಾ ದುರ್ಧರೇಣ ನಿಪಾತಿತಾಃ ।
ಸ ತೈಃ ಪಂಚಭಿರಾವಿದ್ಧಃ ಶರೈಃ ಶಿರಸಿ ವಾನರಃ ॥ ೨೧
ಉತ್ಪಪಾತ ನದನ್ ವ್ಯೋಮ್ನಿ ದಿಶೋ ದಶ ವಿನಾದಯನ್ ।
ತತಸ್ತು ದುರ್ಧರೋ ವೀರಃ ಸರಥಃ ಸಜ್ಯಕಾರ್ಮುಕಃ ॥ ೨೨
ಕಿರನ್ ಶರಶತೈಸ್ತೀಕ್ಷ್ಣೈರಭಿಪೇದೇ ಮಹಾಬಲಃ ।
ಸ ಕಪಿರ್ವಾರಯಾಮಾಸ ತಂ ವ್ಯೋಮ್ನಿ ಶರವರ್ಷಿಣಮ್ ॥ ೨೩
ವೃಷ್ಟಿಮಂತಂ ಪಯೋದಾಂತೇ ಪಯೋದಮಿವ ಮಾರುತಃ ।
ಅರ್ದ್ಯಮಾನಸ್ತತಸ್ತೇನ ದುರ್ಧರೇಣಾನಿಲಾತ್ಮಜಃ ॥ ೨೪
ಚಕಾರ ನಿನದಂ ಭೂಯೋ ವ್ಯವರ್ಧತ ಚ ವೇಗವಾನ್ ।
ಸ ದೂರಂ ಸಹಸೋತ್ಪತ್ಯ ದುರ್ಧರಸ್ಯ ರಥೇ ಹರಿಃ ॥ ೨೫
ನಿಪಪಾತ ಮಹಾವೇಗೋ ವಿದ್ಯುದ್ರಾಶಿರ್ಗಿರಾವಿವ ।
ತತಃ ಸ ಮಥಿತಾಷ್ಟಾಶ್ವಂ ರಥಂ ಭಗ್ನಾಕ್ಷಕೂಬರಮ್ ॥ ೨೬

ರಾಕ್ಷಸರು ಸುತ್ತಲೂ ಮುತ್ತಿಕೊಂಡರು (೧೮–೧೯). ಕ್ರೂರವಾದ ಆಯುಧಗಳೊಡನೆ ಮೇಲೆಬಿದ್ದರು. ದುರ್ಧರನು ಉಕ್ಕಿನಿಂದ ಮಾಡಿದ ತೀಕ್ಷ್ಣವಾದ ಐದು ಬಾಣಗಳನ್ನು ತೆಗೆದು, ನೈದಿಲೆಯ ದಳಗಳನ್ನು ಮುಡಿಸುವಂತೆ ಹನುಮಂತನ ತಲೆಗೆ ಗುರಿಯಿಟ್ಟು ಹೊಡೆದನು. ಆಗ ಹನುಮಂತನು ಹತ್ತು ದಿಕ್ಕುಗಳೂ ಮೊಳಗುವಂತೆ ಗರ್ಜಿಸುತ್ತ ಆಕಾಶಕ್ಕೆ ನೆಗೆದನು (೨೦–೨೨). ದುರ್ಧರನೂ ಮೇಲಕ್ಕೆ ಹಾರಿ ನೂರಾರು ಬಾಣಗಳನ್ನು ಪ್ರಯೋಗಿಸಿದನು. ಶರತ್ಕಾಲದಲ್ಲಿ ಮೋಡವು ಸುರಿಸುವ ಮಳೆಹನಿಗಳನ್ನು ಗಾಳಿಯು ಹಾರಿಸಿಬಿಡುವಂತೆ, ಹನುಮಂತನು ದುರ್ಧರನ ಬಾಣಗಳನ್ನು ತಳ್ಳಿ ಹಾರಿಸಿಬಿಡುತ್ತಿದ್ದನು. ಕಡೆಗೆ ದುರ್ಧರನ ಪೀಡೆಯು ಹೆಚ್ಚಾಗಲು ಆಂಜನೇಯನು ಒಂದು ಸಲ ಗರ್ಜಿಸಿ, ದೇಹವನ್ನು ಬೆಳೆಯಿಸಿಕೊಂಡು ಮೇಲಕ್ಕೆ ನೆಗೆದನು. ಅಲ್ಲಿಂದ ಥಟ್ಟನೆ ಬರಸಿಡಿಲಿನಂತೆ ದುರ್ಧರನ ರಥದಮೇಲೆ ಎರಗಿ ಅಪ್ಪಳಿಸಿದನು (೨೩–೨೫). ರಥವು

ವಿಹಾಯ ನ್ಯಪತದ್ಭೂಮೌ ದುರ್ಧರಸ್ತ್ಯಕ್ತಜೀವಿತಃ ।
ತಂ ವಿರೂಪಾಕ್ಷಯೂಪಾಕ್ಷೌ ದೃಷ್ಟ್ವಾ ನಿಪತಿತಂ ಭುವಿ ॥ ೨೭
ಸಂಜಾತರೋಷೌ ದುರ್ಧರ್ಷಾವುತ್ಪೇತತುರರಿಂದಮೌ ।
ಸ ತಾಭ್ಯಾಂ ಸಹಸೋತ್ಪತ್ಯ ವಿಷ್ಠಿತೋ ವಿಮಲೇಽಂಬರೇ ॥ ೨೮
ಮುದ್ಗರಾಭ್ಯಾಂ ಮಹಾಬಾಹುರ್ವಕ್ಷಸ್ಯಭಿಹತಃ ಕಪಿಃ ।
ತಯೋರ್ವೇಗವತೋರ್ವೇಗಂ ವಿನಿಹತ್ಯ ಮಹಾಬಲಃ ॥ ೨೯
ನಿಪಪಾತ ಪುನರ್ಭೂಮೌ ಸುಪರ್ಣಸಮವಿಕ್ರಮಃ ।
ಸ ಸಾಲವೃಕ್ಷಮಾಸಾದ್ಯ ತಮುತ್ಪಾಟ್ಯ ಚ ವಾನರಃ ॥ ೩೦
ತಾವುಭೌ ರಾಕ್ಷಸೌ ವೀರೌ ಜಘಾನ ಪವನಾತ್ಮಜಃ ।
ತತಸ್ತಾಂಸ್ತ್ರೀನ್ ಹತಾನ್ ಜ್ಞಾತ್ವಾ ವಾನರೇಣ ತರಸ್ವಿನಾ ॥ ೩೧
ಅಭಿಪೇದೇ ಮಹಾವೇಗಃ ಪ್ರಹಸ್ಯ ಪ್ರಘಸೋ ಹರಿಮ್ ।
ಭಾಸಕರ್ಣಶ್ಚ ಸಂಕ್ರುದ್ಧಃ ಶೂಲಮಾದಾಯ ವೀರ್ಯವಾನ್ ॥ ೩೨
ಏಕತಃ ಕಪಿಶಾರ್ದೂಲಂ ಯಶಸ್ವಿನಮವಸ್ಥಿತಮ್ ।
ಪಟ್ಟಸೇನ ಶಿತಾಗ್ರೇಣ ಪ್ರಘಸಃ ಪ್ರತ್ಯಬೋಧಯತ್ ॥ ೩೩
ಭಾಸಕರ್ಣಶ್ಚ ಶೂಲೇನ ರಾಕ್ಷಸಃ ಕಪಿಸತ್ತಮಮ್ ।
ಸ ತಾಭ್ಯಾಂ ವಿಕ್ಷತೈರ್ಗಾತ್ರೈರಸೃಗ್ದಿಗ್ಧತನೂರುಹಃ ॥ ೩೪

ಚೂರುಚೂರಾಯಿತು. ಎಂಟು ಕುದುರೆಗಳೂ ಸತ್ತವು. ದುರ್ಧರನು ಸತ್ತು ಧರೆಯಲ್ಲೊರಗಿದನು. ಅದನ್ನು ಕಂಡು ವಿರೂಪಾಕ್ಷ ಯೂಪಾಕ್ಷರು ರೋಷಾವಿಷ್ಟ ರಾಗಿ ಆಕಾಶಕ್ಕೆ ನೆಗೆದು ಹನುಂತನನ್ನು ಆಕ್ರಮಿಸಿದರು. (೨೬–೨೮). ಅವರು ಮುದ್ಗರಗಳಿಂದ ಎದೆಯಮೇಲೆ ಹೊಡೆಯಲು, ಹನುಮಂತನು ಗರುಡನಂತೆ ಸರ್‍ರನೆ ಭೂಮಿಗಿಳಿದು ಸಾಲವೃಕ್ಷವೊಂದನ್ನು ಕಿತ್ತುಕೊಂಡು ಆ ಇಬ್ಬರು ಸೇನಾಪತಿ ಗಳನ್ನೂ ಬಡಿದುಕೊಂದನು (೨೯–೩೦). ಆ ಮೂವರೂ ಹತರಾದ್ದನ್ನು ನೋಡಿ ಪ್ರಘಸನೂ ಶೂಲಧಾರಿಯಾದ ಭಾಸಕರ್ಣನೂ ನುಗ್ಗಿಬಂದರು. ಪ್ರಘಸನು ಪಟ್ಟಸ ದಿಂದಲೂ ಭಾಸಕರ್ಣನು ಶೂಲದಿಂದಲೂ ಹನುಮಂತನನ್ನು ತಿವಿಯತೊಡಗಿ ದರು. ಹನುಮಂತನ ಮೈಯೆಲ್ಲಾ ಗಾಯವಾಗಿ ರಕ್ತದಿಂದ ಒದ್ದೆಯಾಯಿತು (೩೧–೩೪).

ಅಭವದ್ವಾನರಃ ಕ್ರುದ್ಧೋ ಬಾಲಸೂರ್ಯಸಮಪ್ರಭಃ ।
ಸಮುತ್ಪಾಟ್ಯ ಗಿರೇಃ ಶೃಂಗಂ ಸಮೃಗವ್ಯಾಲಪಾದಪಮ್ ॥ ೩೫
ಜಘಾನ ಹನುಮಾನ್ ವೀರೋ ರಾಕ್ಷಸೌ ಕಪಿಕುಂಜರಃ ।
ತತಸ್ತೇಷ್ವವಸನ್ನೇಷು ಸೇನಾಪತಿಷು ಪಂಚಸು ॥ ೩೬
ಬಲಂ ತದವಶೇಷಂ ಚ ನಾಶಯಾಮಾಸ ವಾನರಃ ।
ಅಶ್ವೈರಶ್ವಾನ್ ಗಜೈರ್ನಾಗಾನ್ ಯೋಧೈರ್ಯೋಧಾನ್ ರಥೈ ರಥಾನ್ ॥ ೩೭
ಸ ಕಪಿರ್ನಾಶಯಾಮಾಸ ಸಹಸ್ರಾಕ್ಷ ಇವಾಸುರಾನ್ ।
ಹತೈರ್ನಾಗೈಸ್ತುರಂಗೈಶ್ಚ ಭಗ್ನಾಕ್ಷೈಶ್ಚ ಮಹಾರಥೈಃ ॥ ೩೮
ಹತೈಶ್ಚ ರಾಕ್ಷಸೈರ್ಭೂಮೀ ರುದ್ಧಮಾರ್ಗಾ ಸಮಂತತಃ ॥
ತತಃ ಕಪಿಸ್ತಾನ್ ಧ್ವಜಿನೀಪತೀನ್ ರಣೇ
ನಿಹತ್ಯ ವೀರಾನ್ ಸಬಲಾನ್ ಸವಾಹನಾನ್ ।
ತದೇವ ವೀರಃ ಪರಿಗೃಹ್ಯ ತೋರಣಂ
ಕೃತಕ್ಷಣಃ ಕಾಲ ಇವ ಪ್ರಜಾಕ್ಷಯೇ ॥ ೩೯

ಇತಿ ಶ್ರೀಮದ್ರಾಮಾಯಣೇ ಸುಂದರಕಾಂಡೇ ಷಟ್‌ಚತ್ವಾರಿಂಶಃ ಸರ್ಗಃ

ಅವನು ಕ್ರುದ್ಧನಾಗಿ ಮೃಗ, ಸರ್ಪ, ವೃಕ್ಷಗಳಿಂದ ತುಂಬಿದ್ದ ಒಂದು ಪರ್ವತ ಶಿಖರವನ್ನೇ ಕಿತ್ತು ತಂದು ಅವರಿಬ್ಬರನ್ನೂ ಕೊಂದುಹಾಕಿದನು. ಹೀಗೆ ಐವರು ಸೇನಾಪತಿಗಳೂ ಸಾಯಲಾಗಿ ಉಳಿದ ಸೈನ್ಯವನ್ನು ಕೊಲ್ಲುತ್ತ ಬಂದನು (೩೫–೩೬). ಇಂದ್ರನು ಅಸುರರನ್ನು ಸಂಹರಿಸುವಂತೆ, ಅವನು ಕುದುರೆಗಳಿಂದ ಕುದುರೆ ಗಳನ್ನೂ ಆನೆಗಳಿಂದ ಆನೆಗಳನ್ನೂ, ಸೈನಿಕರಿಂದ ಸೈನಿಕರನ್ನೂ, ರಥಗಳಿಂದ ರಥ ಗಳನ್ನೂ ಬೀಸಿ ಹೊಡೆದು ನಾಶಮಾಡಿದನು. ಆ ರಣಭೂಮಿಯು ಸತ್ತುಬಿದ್ದ ಆನೆ ಕುದುರೆ ರಾಕ್ಷಸರುಗಳಿಂದಲೂ ಮುರಿದುಬಿದ್ದ ರಥಗಳಿಂದಲೂ ಎಡೆಯಿಲ್ಲದಂತೆ ತುಂಬಿಹೋಯಿತು (೩೭–೩೮). ಹನುಮಂತನು ಆ ಸೇನಾನಾಯಕರನ್ನು ಸೈನ್ಯಸಮೇತ ಕೊಂದುಹಾಕಿ, ಪ್ರಳಯಕಾಲದಲ್ಲಿ ಪ್ರಾಣಿಗಳನ್ನು ಕೊಂದು ಹಬ್ಬವಾಡುವ ಯಮನಂತೆ ಮಹಾದ್ವಾರದ ಬಳಿಗೆ ಬಂದು ನಿಂತನು (೩೯).

ಇಲ್ಲಿಗೆ ಶ್ರೀಮದ್ರಾಮಾಯಣದ ಸುಂದರಕಾಂಡದಲ್ಲಿ ನಲವತ್ತಾರನೆಯ ಸರ್ಗ

ಸಪ್ತಚತ್ವಾರಿಂಶಃ ಸರ್ಗಃ

ಅಕ್ಷಕುಮಾರವಧಃ

ಸೇನಾಪತೀನ್ ಪಂಚ ಸ ತು ಪ್ರಮಾಪಿತಾನ್
  ಹನೂಮತಾ ಸಾನುಚರಾನ್ ಸವಾಹನಾನ್ ।
ನಿಶಮ್ಯ ರಾಜಾ ಸಮರೋದ್ಧತೋನ್ಮುಖಂ
  ಕುಮಾರಮಕ್ಷಂ ಪ್ರಸಮೈಕ್ಷತಾಗ್ರತಃ ॥ ೧

ಸ ತಸ್ಯ ದೃಷ್ಟ್ಯರ್ಪಣಸಂಪ್ರಚೋದಿತಃ
  ಪ್ರತಾಪವಾನ್ ಕಾಂಚನಚಿತ್ರಕಾರ್ಮುಕಃ ।
ಸಮುತ್ಪಪಾತಾಥ ಸದಸ್ಯುದೀರಿತೋ
  ದ್ವಿಜಾತಿಮುಖ್ಯೈರ್ಹವಿಷೇವ ಪಾವಕಃ ॥ ೨

ತತೋ ಮಹಾನ್ ಬಾಲದಿವಾಕರಪ್ರಭಂ
  ಪ್ರತಪ್ತಜಾಂಬೂನದಜಾಲಸಂತತಮ್ ।
ರಥಂ ಸಮಾಸ್ಥಾಯ ಯಯೌ ಸ ವೀರ್ಯವಾನ್
  ಮಹಾಹರಿಂ ತಂ ಪ್ರತಿ ನೈರ್ಋತರ್ಷಭಃ ॥ ೩

ಸರ್ಗ ೪೭

ಹನುಮಂತನು ಅಕ್ಷಕುಮಾರನನ್ನು ವಧಿಸುವುದು.

ಈ ಪ್ರಕಾರ ಐವರು ಸೇನಾಪತಿಗಳು ಸೈನ್ಯಸಮೇತರಾಗಿ ಹತರಾದ ಸುದ್ದಿ ರಾವಣನಿಗೆ ಮುಟ್ಟಿತು. ಅವನು ಎದುರಿಗೆ ಕುಳಿತಿದ್ದ ಯುದ್ಧವೀರನಾದ ಅಕ್ಷನೆಂಬ ತನ್ನ ಮಗನನ್ನು ದೃಷ್ಟಿಸಿ ನೋಡಿದನು. ಪ್ರತಾಪಿಯಾದ ಅಕ್ಷಕುಮಾರನು ತಂದೆಯ ಇಂಗಿತವನ್ನರಿತು ಉತ್ತೇಜನಗೊಂಡನು. ಕೂಡಲೇ ಅವನು ಹವಿಸ್ಸನ್ನು ಸ್ವೀಕರಿಸಿದ ಅಗ್ನಿಯಂತೆ, ಸುವರ್ಣ ಧನುಸ್ಸನ್ನು ಹಿಡಿದು ಧಿಗ್ಗನೆ ಎದ್ದುನಿಂತನು (೧–೨). ಆ ವೀರನು ಬಾಲಸೂರ್ಯನಂತೆ ಪ್ರಜ್ವಲಿಸುವ ಸುವರ್ಣಾಲಂಕೃತವಾದ ರಥವನ್ನೇರಿ

ತತಸ್ತಪಃಸಂಗ್ರಹಸಂಚಯಾರ್ಜಿತಂ
ಪ್ರತಪ್ತಜಾಂಬೂನದಜಾಲಶೋಭಿತಮ್ ।
ಪತಾಕಿನಂ ರತ್ನವಿಭೂಷಿತಧ್ವಜಂ
ಮನೋಜವಾಷ್ಟಾಶ್ವವರೈಃ ಸುಯೋಜಿತಮ್ ॥

ಸುರಾಸುರಾಧೃಷ್ಯಮಸಂಗಚಾರಿಣಂ
ರವಿಪ್ರಭಂ ವ್ಯೋಮಚರಂ ಸಮಾಹಿತಮ್ ।
ಸತೂಣಮಷ್ಟಾಸಿನಿಬದ್ಧಬಂಧುರಂ
ಯಥಾಕ್ರಮಾವೇಶಿತಶಕ್ತಿತೋಮರಮ್ ॥ ೫

ವಿರಾಜಮಾನಂ ಪ್ರತಿಪೂರ್ಣವಸ್ತುನಾ
ಸಹೇಮದಾಮ್ನಾ ಶಶಿಸೂರ್ಯವರ್ಚಸಾ ।
ದಿವಾಕರಾಭಂ ರಥಮಾಸ್ಥಿತಸ್ತತಃ
ಸ ನಿರ್ಜಗಾಮಾಮರತುಲ್ಯವಿಕ್ರಮಃ ॥ ೬

ಸ ಪೂರಯನ್ ಖಂ ಚ ಮಹೀಂ ಚ ಸಾಚಲಾಂ
ತುರಂಗಮಾತಂಗಮಹಾರಥಸ್ವನೈಃ ।
ಬಲೈಃ ಸಮೇತೈಃ ಸ ಹಿ ತೋರಣಸ್ಥಿತಂ
ಸಮರ್ಥಮಾಸೀನಮುಪಾಗಮತ್ ಕಪಿಮ್ ॥ ೭

ಹನುಮಂತನಿದ್ದ ಕಡೆಗೆ ಹೊರಟನು. ಆ ರಥವು ತಪಸ್ಸು ಮಾಡಿ ಸಂಪಾದಿಸಿದ್ದ ದಿವ್ಯರಥ. ಪತಾಕೆಗಳಿಂದಲೂ ರತ್ನಾಲಂಕೃತವಾದ ಧ್ವಜದಿಂದಲೂ ಶೋಭಿಸುತ್ತಿತ್ತು. ಮನೋವೇಗವುಳ್ಳ ಎಂಟು ಉತ್ತಮಾಶ್ವಗಳು ಅದನ್ನು ಎಳೆಯುತ್ತಿದ್ದವು (३–४). ಅದನ್ನು ದೇವಾಸುರರಿಗೂ ತಡೆಯಲು ಸಾಧ್ಯವಿರಲಿಲ್ಲ. ಸೂರ್ಯನಂತೆ ಹೊಳೆಯುತ್ತ ಆಕಾಶದಲ್ಲಿ ಸಂಚರಿಸಬಲ್ಲದು. ಆ ರಥವು ಬತ್ತಳಿಕೆಗಳಿಂದಲೂ, ಎಂಟು ದಿಕ್ಕುಗಳಲ್ಲಿ ತೂಗಾಡುತ್ತಿರುವ ಕತ್ತಿಗಳಿಂದಲೂ, ಶಕ್ತಿತೋಮರಗಳಿಂದಲೂ ಸಮೇತವಾಗಿತ್ತು. ಸಮಸ್ತ ಯುದ್ಧಪರಿಕರಗಳಿಂದಲೂ ಸಜ್ಜಾಗಿ, ಸೂರ್ಯಚಂದ್ರರ ರಶ್ಮಿಗಳಂತೆ ಬೆಳಗುವ ಕಡಿವಾಣಗಳಿಂದ ರಂಜಿತವಾದ ಆ ದಿವ್ಯರಥವನ್ನೇರಿ ಅಕ್ಷಕುಮಾರನು ಯುದ್ಧಕ್ಕೆಸಾಗಿದನು (೫–೬). ಅವನು ಕುದುರೆ, ಆನೆ ಮತ್ತು ರಥಗಳ

ಸ ತಂ ಸಮಾಸಾದ್ಯ ಹರಿಂ ಹರೀಕ್ಷಣೋ
ಯುಗಾಂತಕಾಲಾಗ್ನಿಮಿವ ಪ್ರಜಾಕ್ಷಯೇ ।
ಅವಸ್ಥಿತಂ ವಿಸ್ಮಿತಜಾತಸಂಭ್ರಮಃ
ಸಮೈಕ್ಷತಾಕ್ಷೋ ಬಹುಮಾನಚಕ್ಷುಷಾ ॥ ೮
ಸ ತಸ್ಯ ವೇಗಂ ಚ ಕಪೇರ್ಮಹಾತ್ಮನಃ
ಪರಾಕ್ರಮಂ ಚಾರಿಷು ರಾವಣಾತ್ಮಜಃ ।
ವಿಚಾರಯನ್ ಸ್ವಂ ಚ ಬಲಂ ಮಹಾಬಲೋ
ಯುಗಕ್ಷಯೇ ಸೂರ್ಯ ಇವಾಭಿವರ್ಧತೇ ॥ ೯
ಸ ಜಾತಮನ್ಯುಃ ಪ್ರಸಮೀಕ್ಷ್ಯ ವಿಕ್ರಮಂ
ಸ್ಥಿರಂ ಸ್ಥಿತಃ ಸಂಯತಿ ದುರ್ನಿವಾರಣಮ್ ।
ಸಮಾಹಿತಾತ್ಮಾ ಹನುಮಂತಮಾಹವೇ
ಪ್ರಚೋದಯಾಮಾಸ ಶರೈಸ್ತ್ರಿಭಿಃ ಶಿತೈಃ ॥ ೧೦
ತತಃ ಕಪಿಂ ತಂ ಪ್ರಸಮೀಕ್ಷ್ಯ ಗರ್ವಿತಂ
ಜಿತಶ್ರಮಂ ಶತ್ರುಪರಾಜಯೋರ್ಜಿತಮ್ ।
ಅವೈಕ್ಷತಾಕ್ಷಃ ಸಮುದೀರ್ಣಮಾನಸಃ
ಸ ಬಾಣಪಾಣಿಃ ಪ್ರಗೃಹೀತಕಾರ್ಮುಕಃ ॥ ೧೧

ಶಬ್ದದಿಂದ ಭೂಮ್ಯಾಕಾಶಗಳನ್ನು ತುಂಬುತ್ತ ಸೈನ್ಯಸಮೇತನಾಗಿ ಹನುಮಂತ ನಿದ್ದಲ್ಲಿಗೆ ಬಂದನು. ಅಲ್ಲಿ ಪ್ರಜಾಸಂಹಾರಮಾಡುವುದಕ್ಕಾಗಿ ಹೊರಟ ಪ್ರಳಯ ಕಾಲದ ಅಗ್ನಿಯಂತೆ ಪ್ರಕಾಶಿಸುತ್ತಿದ್ದ ಆಂಜನೇಯನನ್ನು ಕಂಡು ಬೆರಗಾಗಿ ಶೀವಿ ಯಿಂದ ನೋಡುತ್ತ ನಿಂತನು (೭–೮). ಆ ರಾವಣಕುಮಾರನು ಹನುಮಂತನ ವೇಗಪರಾಕ್ರಮಗಳನ್ನೂ ತನ್ನ ಬಲವನ್ನೂ ಹೋಲಿಸಿ ನೋಡಿ, ಯುಗಾಂತಕಾಲದ ಸೂರ್ಯನಂತೆ ತೇಜಸ್ಸನ್ನು ತನ್ನಲ್ಲಿ ಅಳವಡಿಸಿಕೊಂಡು ಉಬ್ಬಿದನು. ಅನಂತರ ಯುದ್ಧ ಮಾಡಲು ಸ್ಥೈರ್ಯದಿಂದ ನಿಂತು, ಹನುಮಂತನನ್ನು ರೇಗಿಸುವುದಕ್ಕಾಗಿ ತೀಕ್ಷ್ಣವಾದ ಮೂರು ಬಾಣಗಳನ್ನು ಪ್ರಯೋಗಿಸಿದನು (೯–೧೦). ಹನುಮಂತನು ಅದನ್ನು ಲೆಕ್ಕಿಸದೆ ಶತ್ರುವನ್ನು ಪರಾಜಯಗೊಳಿಸಬಲ್ಲೆನೆಂಬ ಹೆಮ್ಮೆಯಿಂದಲೇ ಕುಳಿತಿದ್ದನು. ಅಕ್ಷಕುಮಾರನು ಧನುರ್ಬಾಣಗಳನ್ನು ಹಿಡಿದುಕೊಂಡು ಚಕಿತನಾಗಿ

ಸ ಹೇಮನಿಷ್ಕಾಂಗದಚಾರುಕುಂಡಲಃ
ಸಮಾಸಸಾದಾಶುಪರಾಕ್ರಮಃ ಕಪಿಮ್ ।
ತಯೋರ್ಬಭೂವಾಪ್ರತಿಮಃ ಸಮಾಗಮಃ
ಸುರಾಸುರಾಣಾಮಪಿ ಸಂಭ್ರಮಪ್ರದಃ ॥ ೧೨
ರರಾಸ ಭೂಮಿರ್ನ ತತಾಪ ಭಾನುಮಾನ್
ವವೌ ನ ವಾಯುಃ ಪ್ರಚಚಾಲ ಚಾಚಲಃ ।
ಕಪೇಃ ಕುಮಾರಸ್ಯ ಚ ವೀಕ್ಷ್ಯ ಸಂಯುಗಂ
ನನಾದ ಚ ದ್ಯೌರುದಧಿಶ್ಚ ಚುಕ್ಷುಭೇ ॥ ೧೩
ತತಃ ಸ ವೀರಃ ಸುಮುಖಾನ್ ಪತತ್ರಿಣಃ
ಸುವರ್ಣಪುಂಖಾನ್ ಸವಿಷಾನಿವೋರಗಾನ್ ।
ಸಮಾಧಿಸಂಯೋಗವಿಮೋಕ್ಷತತ್ತ್ವವಿ-
ಚ್ಛರಾನಥ ತ್ರೀನ್ ಕಪಿಮೂರ್ಧ್ನ್ಯಪಾತಯತ್ ॥ ೧೪
ಸ ತೈಃ ಶರೈರ್ಮೂರ್ಧ್ನಿಸಮಂ ನಿಪಾತಿತೈಃ
ಕ್ಷರನ್ನಸೃಗ್ದಿಗ್ಧವಿವೃತ್ತಲೋಚನಃ ।
ನವೋದಿತಾದಿತ್ಯನಿಭಃ ಶರಾಂಶುಮಾನ್
ವ್ಯರೋಚತಾದಿತ್ಯ ಇವಾಂಶುಮಾಲಿಕಃ ॥ ೧೫

ಅವನನ್ನು ನೋಡುತ್ತಿದ್ದನು. ಅನಂತರ ಆ ಪರಾಕ್ರಮಿಯು ಹನುಮಂತನಮೇಲೆ ಭೀಕರ ಯುದ್ಧವನ್ನಾರಂಭಿಸಿದನು. ದೇವಾಸುರರಿಗೂ ಭಯವನ್ನುಂಟುಮಾಡುವ ಘೋರಯುದ್ಧವು ಅವರಿಬ್ಬರ ನಡುವೆ ಆರಂಭವಾಯಿತು (೧೧-೧೨). ಅವರ ಹೋರಾಟವನ್ನು ನೋಡಿ ಭೂಮಿಯು ಮೊರೆಯಿತು. ಸೂರ್ಯನು ಪ್ರಕಾಶಿಸಲೇ ಇಲ್ಲ. ಗಾಳಿಯು ಬೀಸಲಿಲ್ಲ. ಪರ್ವತವು ಅಲ್ಲಾಡಿತು. ಆಕಾಶವು ಮೊಳಗಿತು. ಸಮುದ್ರವು ಉಲ್ಲೋಲಕಲ್ಲೋಲವಾಯಿತು. ಅಸ್ತ್ರವಿದ್ಯಾವಿಶಾರದನಾದ ಅಕ್ಷಕುಮಾರನು ವಿಷಸರ್ಪಗಳಂತಿದ್ದ ಮೂರು ಬಾಣಗಳನ್ನು ಹನುಮಂತನ ತಲೆಗೆ ಗುರಿಯಿಟ್ಟು ಹೊಡೆದನು (೧೩-೧೪). ಅವು ತಲೆಯಲ್ಲಿ ನಾಟಿಕೊಳ್ಳಲು, ರಕ್ತವು ಸುರಿದು ಹನುಮಂತನ ಕಣ್ಣುಗಳು ತೊಳಲಿದವು. ಹನುಮಂತನು ಆಗಲೇ ಉದಯಿಸಿದ್ದ ಸೂರ್ಯನಂತೆಯೂ ದೇಹದಲ್ಲಿ ನೆಟ್ಟ ಬಾಣಗಳು ಸೂರ್ಯ

ತತಃ ಸ ಪಿಂಗಾಧಿಪಮಂತ್ರಿಸತ್ತಮಃ
ಸಮೀಕ್ಷ್ಯ ತಂ ರಾಜವರಾತ್ಮಜಂ ರಣೇ ।
ಉದಗ್ರಚಿತ್ರಾಯುಧಚಿತ್ರಕಾರ್ಮುಕಂ
ಜಹರ್ಷ ಚಾಪೂರ್ಯತ ಚಾಹವೋನ್ಮುಖಃ ॥ ೧೬
ಸ ಮಂದರಾಗ್ರಸ್ಥ ಇವಾಂಶುಮಾಲಿಕೋ
ವಿವೃದ್ಧಕೋಪೋ ಬಲವೀರ್ಯಸಂಯುತಃ ।
ಕುಮಾರಮಕ್ಷಂ ಸಬಲಂ ಸವಾಹನಂ
ದದಾಹ ನೇತ್ರಾಗ್ನಿಮರೀಚಿಭಿಸ್ತದಾ ॥ ೧೭
ತತಃ ಸ ಬಾಣಾಸನಚಿತ್ರಕಾರ್ಮುಕಃ
ಶರಪ್ರವರ್ಷೋ ಯುಧಿ ರಾಕ್ಷಸಾಂಬುದಃ ।
ಶರಾನ್ ಮುಮೋಚಾಶು ಹರೀಶ್ವರಾಚಲೇ
ಬಲಾಹಕೋ ವೃಷ್ಟಿಮಿವಾಚಲೋತ್ತಮೇ ॥ ೧೮
ತತಃ ಕಪಿಸ್ತಂ ರಣಚಂಡವಿಕ್ರಮಂ
ವಿವೃದ್ಧತೇಜೋಬಲವೀರ್ಯಸಂಚಯಮ್ ।
ಕುಮಾರಮಕ್ಷಂ ಪ್ರಸಮೀಕ್ಷ್ಯ ಸಂಯುಗೇ
ನನಾದ ಹರ್ಷಾದ್ಘನತುಲ್ಯನಿಃಸ್ವನಃ ॥ ೧೯

ಕಿರಣಗಳಂತೆಯೂ ಶೋಭಿಸಿದವು. ಮಹಾಧನುಸ್ಸನ್ನು ಹಿಡಿದು ರಾವಣನ ಮಗನೇ ಯುದ್ಧಕ್ಕೆ ಬಂದಿರುವುದನ್ನು ಕಂಡು ಹನುಮಂತನಿಗೆ ಹರ್ಷವಾಯಿತು. ತನ್ನ ದೇಹವನ್ನು ಇನ್ನೂ ಬೆಳೆಯಿಸಿದನು (೧೫–೧೬). ಅವನು ಮಂದರಪರ್ವತದ ಮೇಲಕ್ಕೆ ಬಂದಿರುವ ಮಧ್ಯಾಹ್ನದ ಸೂರ್ಯನಂತೆ ವಿಜೃಂಭಿಸುತ್ತ, ಅಕ್ಷನನ್ನೂ ಅವನ ಸೈನ್ಯವನ್ನೂ ವಾಹನಗಳನ್ನೂ ಸುಟ್ಟುಬಿಡುವಂತೆ ಕೆಂಗಣ್ಣಿನಿಂದ ನೋಡಿದನು. ಆಗ ಪರ್ವತದಮೇಲೆ ಮೇಘವು ಮಳೆಯನ್ನು ಸುರಿಸುವಂತೆ, ಅಕ್ಷನು ಹನುಮಂತನಮೇಲೆ ಬಾಣಗಳಿಂದ ಮಳೆಗರೆಯಲಾರಂಭಿಸಿದನು (೧೭–೧೮). ಹನುಮಂತನು ಮಹಾಶೂರನಾದ ಅಕ್ಷಕುಮಾರನನ್ನು ನೋಡುತ್ತ ಹರ್ಷದಿಂದ ಗುಡುಗಿನಂತೆ ಗರ್ಜಿಸಿದನು. ಅಕ್ಷನು ಶೌರ್ಯದಿಂದ ಗರ್ವಿತನಾಗಿ ರಕ್ತದಂತೆ ಕೆಂಪಡರಿದ ಕಣ್ಣುಗಳಿಂದ ನೋಡುತ್ತ ಹನುಮಂತನಮೇಲೆ ಹುಡುಗತನದಿಂದ

ಸ ಬಾಲಭಾವಾದ್ಯುಧಿ ವೀರ್ಯದರ್ಪಿತಃ
ಪ್ರವೃದ್ಧಮನ್ಯುಃ ಕ್ಷತಜೋಪಮೇಕ್ಷಣಃ ।
ಸಮಾಸಸಾದಾಪ್ರತಿಮಂ ಕಪಿಂ ರಣೇ
ಗಜೋ ಮಹಾಕೂಪಮಿವಾವೃತಂ ತೃಣೈಃ ॥ ೨೦
ಸ ತೇನ ಬಾಣೈಃ ಪ್ರಸಭಂ ನಿಪಾತಿತೈ-
ಶ್ಚಕಾರ ನಾದಂ ಘನನಾದನಿಃಸ್ವನಃ ।
ಸಮುತ್ಪಪಾತಾಶು ನಭಃ ಸ ಮಾರುತಿ-
ರ್ಭುಜೋರುವಿಕ್ಷೇಪಣಘೋರದರ್ಶನಃ ॥ ೨೧
ಸಮುತ್ಪತಂತಂ ಸಮಭಿದ್ರವದ್ಬಲೀ
ಸ ರಾಕ್ಷಸಾನಾಂ ಪ್ರವರಃ ಪ್ರತಾಪವಾನ್ ।
ರಥೀ ರಥಿಶ್ರೇಷ್ಠತಮಃ ಕಿರನ್ ಶರೈಃ
ಪಯೋಧರಃ ಶೈಲಮಿವಾಶ್ಮವೃಷ್ಟಿಭಿಃ ॥ ೨೨
ಸ ತಾನ್ ಶರಾಂಸ್ತಸ್ಯ ವಿಮೋಕ್ಷಯನ್ ಕಪಿ-
ಶ್ಚಚಾರ ವೀರಃ ಪಥಿ ವಾಯುಸೇವಿತೇ ।
ಶರಾಂತರೇ ಮಾರುತವದ್ವಿನಿಷ್ಪತನ್
ಮನೋಜವಃ ಸಂಯತಿ ಚಂಡವಿಕ್ರಮಃ ॥ ೨೩

ಏರಿಹೋದನು. ಹಾಗೆ ಹೋದುದು ಕಾಡಾನೆಯು ಹುಲ್ಲು ಮುಚ್ಚಿದ ದೊಡ್ಡ ಬಾವಿಯಮೇಲೆ ನುಗ್ಗಿದಂತಾಯಿತು (೧೯–೨೦). ಅವನು ಬಾಣಗಳನ್ನು ತೂರುತ್ತಿರಲು, ಮಾರುತಿಯು ಸಿಂಹನಾದಮಾಡಿ ತೋಳುಗಳನ್ನೂ ತೊಡೆಗಳನ್ನೂ ಭಯಂಕರವಾಗಿ ಬೀಸುತ್ತ ಆಕಾಶಕ್ಕೆ ನೆಗೆದುಬಿಟ್ಟನು. ಆಗ ಬಲಾಢ್ಯನಾದ ಅಕ್ಷಕುಮಾರನು ರಥಾರೂಢನಾಗಿಯೇ ಮೇಘವು ಬೆಟ್ಟದಮೇಲೆ ಆಲಿಯ ಕಲ್ಲುಗಳನ್ನು ಸುರಿಸುವಂತೆ, ಹನುಮಂತನಮೇಲೆ ಬಾಣಗಳನ್ನು ಸುರಿಸುತ್ತ ಬೆನ್ನಟ್ಟಿ ಹೋದನು (೨೧–೨೨). ಚಂಡವಿಕ್ರಮನಾದ ಆ ವಾನರಶ್ರೇಷ್ಠನು ಮನೋವೇಗದಿಂದ ಬಾಣಗಳ ಸಂದಿನಲ್ಲಿಯೇ ಗಾಳಿಯಂತೆ ತೂರಿ ತಪ್ಪಿಸಿಕೊಳ್ಳುತ್ತ ಆಕಾಶದಲ್ಲಿ ಸುತ್ತಲಾರಂಭಿಸಿದನು. ಅಕ್ಷನು ಧನುರ್ಧಾರಿಯಾಗಿ ಎಡೆಬಿಡದೆ ಉಗ್ರಶರಗಳನ್ನು ಪ್ರಯೋಗಿಸಿ ಆಕಾಶವನ್ನೇ ಮುಚ್ಚುತ್ತಿರುವುದನ್ನು ಕಂಡು, ಹನುಮಂತನು ಅವನ

ತಮಾತ್ತಬಾಣಾಸನಮಾಹವೋನ್ಮುಖಂ
ಖಮಾಸ್ತೃಣಂತಂ ವಿವಿಧೈಃ ಶರೋತ್ತಮೈಃ ।
ಅವೈಕ್ಷತಾಕ್ಷಂ ಬಹುಮಾನಚಕ್ಷುಷಾ
ಜಗಾಮ ಚಿಂತಾಂ ಚ ಸ ಮಾರುತಾತ್ಮಜಃ ॥ ೨೪

ತತಃ ಶರೈರ್ಭಿನ್ನಭುಜಾಂತರಃ ಕಪಿಃ
ಕುಮಾರವೀರ್ಯೇಣ ಮಹಾತ್ಮನಾ ನದನ್ ।
ಮಹಾಭುಜಃ ಕರ್ಮವಿಶೇಷತತ್ತ್ವವಿ-
ದ್ವಿಚಿಂತಯಾಮಾಸ ರಣೇ ಪ್ರರಾಕ್ರಮಮ್ ॥ ೨೫

ಅಬಾಲವದ್ಬಾಲದಿವಾಕರಪ್ರಭಃ
ಕರೋತ್ಯಯಂ ಕರ್ಮ ಮಹನ್ಮಹಾಬಲಃ ।
ನ ಚಾಸ್ಯ ಸರ್ವಾಹವಕರ್ಮಶೋಭಿನಃ
ಪ್ರಮಾಪಣೇ ಮೇ ಮತಿರತ್ರ ಜಾಯತೇ ॥ ೨೬

ಅಯಂ ಮಹಾತ್ಮಾ ಚ ಮಹಾಂಶ್ಚ ವೀರ್ಯತಃ
ಸಮಾಹಿತಶ್ಚಾತಿಸಹಶ್ಚ ಸಂಯುಗೇ ।
ಅಸಂಶಯಂ ಕರ್ಮಗುಣೋದಯಾದಯಂ
ಸನಾಗಯಕ್ಷೈರ್ಮುನಿಭಿಶ್ಚ ಪೂಜಿತಃ ॥ ೨೭

ಶೌರ್ಯವನ್ನು ಮೆಚ್ಚಿದನು. ಅವನನ್ನು ಸಂಹರಿಸುವ ಉಪಾಯವೇನೆಂದು ಚಿಂತೆಯೂ ಆಯಿತು (೨೩–೨೪). ಅಷ್ಟರಲ್ಲಿ ಅಕ್ಷಕುಮಾರನು ಬಾಣಗಳಿಂದ ಅವನ ಎದೆಯನ್ನು ಗಾಯಗೊಳಿಸಲು, ನೋವನ್ನು ತಡೆಯಲಾರದೆ ಹನುಮಂತನು ಕೂಗಿಕೊಂಡನು. ಆಮೇಲೆ ಯಾವುದು ಕರ್ತವ್ಯವೆಂಬುದನ್ನು ಚೆನ್ನಾಗಿ ಬಲ್ಲ ಆತನು ಮನಸ್ಸಿನಲ್ಲಿ ''ಈ ಹುಡುಗನು ಬಾಲಸೂರ್ಯನಂತೆ ಬೆಳಗುತ್ತಿರುವನು. ಆದರೆ ಮಹಾಬಲಶಾಲಿ, ದೊಡ್ಡವರು ಮಾಡುವ ಕೆಲಸವನ್ನು ಮಾಡುತ್ತಿರುವನು. ಸಮಸ್ತ ಯುದ್ಧತಂತ್ರಗಳೂ ಇವನಿಗೆ ಗೊತ್ತಿವೆ. ಇವನನ್ನು ಕೊಲ್ಲಲು ನನಗೆ ಮನಸ್ಸು ಬರುವುದಿಲ್ಲ (೨೫–೨೬). ಈ ಮಹಾತ್ಮನು ಮಹಾ ವೀರ. ಯುದ್ಧದಲ್ಲಿ ಬಹು ಎಚ್ಚರಿಕೆಯಿಂದ ಇರುವನು. ಶ್ರಮಸಹಿಷ್ಣು ಇವನ ರಣಕೌಶಲ್ಯವನ್ನು ಕಂಡು ನಾಗರೂ ಯಕ್ಷರೂ ಮುನಿಗಳೂ ಇವನನ್ನು ಗೌರವಿಸುವುದರಲ್ಲಿ

ಪರಾಕ್ರಮೋತ್ಸಾಹವಿವೃದ್ಧಮಾನಸಃ
ಸಮೀಕ್ಷತೇ ಮಾಂ ಪ್ರಮುಖಾಗತಃ ಸ್ಥಿತಃ ।
ಪರಾಕ್ರಮೋ ಹ್ಯಸ್ಯ ಮನಾಂಸಿ ಕಂಪಯೇತ್
ಸುರಾಸುರಾಣಾಮಪಿ ಶೀಘ್ರಗಾಮಿನಃ ॥ ೨೮

ನ ಖಲ್ವಯಂ ನಾಭಿಭವೇದುಪೇಕ್ಷಿತಃ
ಪರಾಕ್ರಮೋ ಹ್ಯಸ್ಯ ರಣೇ ವಿವರ್ಧತೇ ।
ಪ್ರಮಾಪಣಂ ತ್ವೇವ ಮಮಾಸ್ಯ ರೋಚತೇ
ನ ವರ್ಧಮಾನೋಽಗ್ನಿರುಪೇಕ್ಷಿತುಂ ಕ್ಷಮಃ ॥ ೨೯

ಇತಿ ಪ್ರವೇಗಂ ತು ಪರಸ್ಯ ತರ್ಕಯನ್
ಸ್ವಕರ್ಮಯೋಗಂ ಚ ವಿಧಾಯ ವೀರ್ಯವಾನ್ ।
ಚಕಾರ ವೇಗಂ ತು ಮಹಾಬಲಸ್ತದಾ
ಮತಿಂ ಚ ಚಕ್ರೇಽಸ್ಯ ವಧೇ ಮಹಾಕಪಿಃ ॥ ೩೦

ಸ ತಸ್ಯ ತಾನಷ್ಟ ಹಯಾನ್ ಮಹಾಜವಾನ್
ಸಮಾಹಿತಾನ್ ಭಾರಸಹಾನ್ ವಿವರ್ತನೇ ।
ಜಘಾನ ವೀರಃ ಪಥಿ ವಾಯುಸೇವಿತೇ
ತಲಪ್ರಹಾರೈಃ ಪವನಾತ್ಮಜಃ ಕಪಿಃ ॥ ೩೧

ಸಂದೇಹವಿಲ್ಲ. ಇವನು ವೀರ್ಯೋತ್ಸಾಹಗಳಿಂದ ತುಂಬಿದ್ದಾನೆ. ಎದುರಿಗೆ ನಿಂತು ಧೈರ್ಯದಿಂದ ನನ್ನನ್ನು ನೋಡುತ್ತಿದ್ದಾನೆ. ಇವನ ವೇಗಪರಾಕ್ರಮಗಳನ್ನು ಕಂಡು ದೇವಾಸುರರಿಗೂ ಹೃದಯವು ನಡುಗುವುದು (೨೭–೨೮). ನಾನು ಉಪೇಕ್ಷೆ ಮಾಡಿದರೆ ನನ್ನನ್ನು ಭಗ್ನಗೊಳಿಸದೇ ಬಿಡುವುದಿಲ್ಲ. ಕ್ಷಣಕ್ಷಣಕ್ಕೂ ಇವನ ಪರಾಕ್ರಮವು ಹೆಚ್ಚುತ್ತಿದೆ. ಆದ್ದರಿಂದ ಇವನನ್ನು ಕೊಂದುಬಿಡುವುದೇ ಸರಿ. ದೊಡ್ಡದಾಗುತ್ತಿರುವ ಕಿಚ್ಚನ್ನು ಉಪೇಕ್ಷಿಸುವುದು ಸರಿಯಲ್ಲ'' ಎಂದು ಆಲೋಚಿಸಿದನು (೨೯). ಹೀಗೆ ಹನುಮಂತನು ಶತ್ರುವಿನ ಬಲವನ್ನೂ ತನ್ನ ಕರ್ತವ್ಯವನ್ನೂ ವಿಮರ್ಶಿಸಿ ಕಡೆಯಲ್ಲಿ ಅಕ್ಷನನ್ನು ಸಂಹರಿಸಬೇಕೆಂದು ನಿರ್ಧರಿಸಿದನು. ಅನಂತರ ಆಕಾಶದಲ್ಲಿಯೇ ಅಕ್ಷನ ಎಂಟು ಉತ್ತಮಾಶ್ವಗಳನ್ನು

ತತಸ್ತಲೇನಾಭಿಹತೋ ಮಹಾರಥಃ
ಸ ತಸ್ಯ ಪಿಂಗಾಧಿಪಮಂತ್ರಿನಿರ್ಜಿತಃ ।
ಪ್ರಭಗ್ನನೀಡಃ ಪರಿಮುಕ್ತಕೂಬರಃ
ಪಪಾತ ಭೂಮೌ ಹತವಾಜಿರಂಬರಾತ್ ॥ ೩೨

ಸ ತಂ ಪರಿತ್ಯಜ್ಯ ಮಹಾರಥೋ ರಥಂ
ಸಕಾರ್ಮುಕಃ ಖಡ್ಗಧರಃ ಖಮುತ್ಪತನ್ ।
ತತೋಽಭಿಯೋಗಾದೃಷಿರುಗ್ರವೀರ್ಯವಾನ್
ವಿಹಾಯ ದೇಹಂ ಮರುತಾಮಿವಾಲಯಮ್ ॥ ೩೩

ತತಃ ಕಪಿಸ್ತಂ ವಿಚರಂತಮಂಬರೇ
ಪತತ್ತ್ರಿರಾಜಾನಿಲಸಿದ್ಧಸೇವಿತೇ ।
ಸಮೇತ್ಯ ತಂ ಮಾರುತತುಲ್ಯವಿಕ್ರಮಃ
ಕ್ರಮೇಣ ಜಗ್ರಾಹ ಸ ಪಾದಯೋರ್ದೃಢಮ್ ॥ ೩೪

ಸ ತಂ ಸಮಾವಿಧ್ಯ ಸಹಸ್ರಶಃ ಕಪಿ-
ರ್ಮಹೋರಗಂ ಗೃಹ್ಯ ಇವಾಂಡಜೇಶ್ವರಃ ।
ಮುಮೋಚ ವೇಗಾತ್ ಪಿತೃತುಲ್ಯವಿಕ್ರಮೋ
ಮಹೀತಲೇ ಸಂಯತಿ ವಾನರೋತ್ತಮಃ ॥ ೩೫

ಅಂಗೈಯಿಂದ ಅಪ್ಪಳಿಸಿ ಕೊಂದುಹಾಕಿದನು. ಆ ಹೊಡೆತವನ್ನು ತಡೆದು ಕೊಳ್ಳಲಾರದೆ ಅಕ್ಷನ ಮಹಾರಥವೂ, ಚಕ್ರಗಳೂ ಮೂಕಿಯೂ ಮುರಿದು ಪುಡಿಪುಡಿಯಾಗಿ ಬಿದ್ದವು (೩೦–೩೨). ಅಕ್ಷಕುಮಾರನು ರಥವನ್ನು ಬಿಟ್ಟು ಧುಮುಕಿ, ಧನುಸ್ಸನ್ನೂ ಖಡ್ಗವನ್ನೂ ಹಿಡಿದು, ಋಷಿಯು ತಪೋಮಹಿಮೆಯಿಂದ ದೇವಲೋಕವನ್ನು ಏರುವಂತೆ ಆಕಾಶವನ್ನಡರಿದನು. ಅವನು ಗರುಡ, ವಾಯು ಮತ್ತು ಸಿದ್ಧರು ಸಂಚರಿಸುವ ಆಕಾಶಮಾರ್ಗವನ್ನೇರಿ ಬರುವುದನ್ನು ಕಂಡು, ಹನುಮಂತನು ವಾಯುವೇಗದಿಂದ ಧಾವಿಸಿ, ಗರುಡನು ಮಹಾಸರ್ಪವನ್ನು ಹಿಡಿಯುವಂತೆ ಅಕ್ಷಕುಮಾರನ ಕಾಲುಗಳನ್ನು ಬಿಗಿಯಾಗಿ ಹಿಡಿದು, ಗಿರ್ರನೆ ತಿರುಗಿಸಿ ನೆಲದ ಮೇಲೆ ಬಡಿದನು (೩೩–೩೫).

ಸ ಭಗ್ನಬಾಹೂರುಕಟೀಶಿರೋಧರಃ
ಕ್ಷರನ್ನಸೃಙ್ನಿರ್ಮಥಿತಾಸ್ಥಿಲೋಚನಃ ।
ಪ್ರಭಿನ್ನಸಂಧಿಃ ಪ್ರವಿಕೀರ್ಣಬಂಧನೋ
ಹತಃ ಕ್ಷಿತೌ ವಾಯುಸುತೇನ ರಾಕ್ಷಸಃ ॥ ೩೬
ಮಹಾಕಪಿರ್ಭೂಮಿತಲೇ ನಿಪೀಡ್ಯ ತಂ
ಚಕಾರ ರಕ್ಷೋಧಿಪತೇರ್ಮಹದ್ಭಯಮ್ ।
ಮಹರ್ಷಿಭಿಶ್ಚಕ್ರಚರೈರ್ಮಹಾವ್ರತೈಃ
ಸಮೇತ್ಯ ಭೂತೈಶ್ಚ ಸಯಕ್ಷಪನ್ನಗೈಃ ॥ ೩೭
ಸುರೈಶ್ಚ ಸೇಂದ್ರೈರ್ಭೃಶಜಾತವಿಸ್ಮಯೈ-
ರ್ಹತೇ ಕುಮಾರೇ ಸ ಕಪಿರ್ನಿರೀಕ್ಷಿತಃ ।
ನಿಹತ್ಯ ತಂ ವಜ್ರಿಸುತೋಪಮಂ ರಣೇ
ಕುಮಾರಮಕ್ಷಂ ಕ್ಷತಜೋಪಮೇಕ್ಷಣಮ್ ॥ ೩೮
ತದೇವ ವೀರೋಽಭಿಜಗಾಮ ತೋರಣಂ
ಕೃತಕ್ಷಣಃ ಕಾಲ ಇವ ಪ್ರಜಾಕ್ಷಯೇ ॥

ಇತಿ ಶ್ರೀಮದ್ರಾಮಾಯಣೇ ಸುಂದರಕಾಂಡೇ ಸಪ್ತಚತ್ವಾರಿಂಶಃ ಸರ್ಗಃ

ಆಗ ಅಕ್ಷಕುಮಾರನ ತೋಳು, ತೊಡೆ, ಸೊಂಟ, ಕಂಠಗಳೆಲ್ಲವೂ ಮುರಿದುಹೋದವು. ಸರ್ವಾಂಗವೂ ರಕ್ತಮಯವಾಯಿತು. ಮೂಳೆಗಳೂ ಪುಡಿಯಾದವು. ಕಣ್ಣುಗಳು ಕಳಚಿಬಿದ್ದವು. ಸಂದುಗಳು ಸಡಲಿದವು. ತೊಟ್ಟಿದ್ದ ಕವಚವು ಸಿಡಿಯಿತು. ಈ ಪ್ರಕಾರ ಆ ರಾಕ್ಷಸನು ಸತ್ತುಹೋದನು (೩೬). ಹೀಗೆ ಹನುಮಂತನು ಅವನನ್ನು ನೆಲದಮೇಲೆ ಬಡಿದು ಕೊಂದು ರಾವಣನಿಗೂ ಭಯವನ್ನುಂಟುಮಾಡಿದನು. ಆಗ ನಕ್ಷತ್ರಪಥದಲ್ಲಿ ಸಂಚರಿಸುವ ಮಹರ್ಷಿಗಳೂ ಭೂತಗಳೂ ಯಕ್ಷರೂ ಪನ್ನಗರೂ ಇಂದ್ರಾದಿದೇವತೆಗಳೂ ಆಶ್ಚರ್ಯದಿಂದ ಆಂಜನೇಯನನ್ನು ನೋಡುತ್ತ ನಿಂತರು. ಆಂಜನೇಯನು ದೇವೇಂದ್ರನ ಮಗನಾದ ಜಯಂತನಂತಿದ್ದ ಅಕ್ಷಕುಮಾರನನ್ನು ಸಂಹರಿಸಿ, ಪ್ರಳಯಕಾಲದಲ್ಲಿ ಹಬ್ಬವಾಡುವ ಯಮನಂತೆ ಪುನಃ ಮಹಾದ್ವಾರದ ಸಮೀಪಕ್ಕೆ ಹೋಗಿ ನಿಂತನು (೩೭–೩೮).

ಇಲ್ಲಿಗೆ ಶ್ರೀಮದ್ರಾಮಾಯಣದ ಸುಂದರಕಾಂಡದಲ್ಲಿ ನಲವತ್ತೇಳನೆಯ ಸರ್ಗ

ಅಷ್ಟಚತ್ವಾರಿಂಶಃ ಸರ್ಗಃ

ಇಂದ್ರಜಿದಭಿಯೋಗಃ

ತತಸ್ತು ರಕ್ಷೋಽಧಿಪತಿರ್ಮಹಾತ್ಮಾ
ಹನೂಮತಾಕ್ಷೇ ನಿಹತೇ ಕುಮಾರೇ ।
ಮನಃ ಸಮಾಧಾಯ ತದೇಂದ್ರಕಲ್ಪಂ
ಸಮಾದಿದೇಶೇಂದ್ರಜಿತಂ ಸ ರೋಷಾತ್ ॥ ೧
ತ್ವಮಸ್ತ್ರವಿಚ್ಛಸ್ತ್ರವಿದಾಂ ವರಿಷ್ಠಃ
ಸುರಾಸುರಾಣಾಮಪಿ ಶೋಕದಾತಾ ।
ಸುರೇಷು ಸೇಂದ್ರೇಷು ಚ ದೃಷ್ಟಕರ್ಮಾ
ಪಿತಾಮಹಾರಾಧನಸಂಚಿತಾಸ್ತ್ರಃ ॥ ೨
ತವಾಸ್ತ್ರಬಲಮಾಸಾದ್ಯ ನಾಸುರಾ ನ ಮರುದ್ಗಣಾಃ ।
ನ ಶೇಕುಃ ಸಮರೇ ಸ್ಥಾತುಂ ಸುರೇಶ್ವರಸಮಾಶ್ರಿತಾಃ ॥ ೩
ನ ಕಶ್ಚಿತ್ ತ್ರಿಷು ಲೋಕೇಷು ಸಂಯುಗೇ ನ ಗತಶ್ರಮಃ ।
ಭುಜವೀರ್ಯಾಭಿಗುಪ್ತಶ್ಚ ತಪಸಾ ಚಾಭಿರಕ್ಷಿತಃ । ೪
ದೇಶಕಾಲವಿಭಾಗಜ್ಞಸ್ತ್ವಮೇವ ಮತಿಸತ್ತಮಃ ॥

ಸರ್ಗ ೪೮

ಇಂದ್ರಜಿತ್ತು ಹನುಮಂತನನ್ನು ಬ್ರಹ್ಮಾಸ್ತ್ರದಿಂದ ಬಂಧಿಸಿ
ರಾವಣನ ಬಳಿಗೆ ತರುವುದು.

ಅನಂತರ ರಾಕ್ಷಸೇಶ್ವರನು ತನ್ನ ಮಗನಾದ ಅಕ್ಷಕುಮಾರನು ಹತನಾದ ನೆಂಬುದನ್ನು ಕೇಳಿ (ದುಃಖಿತನಾದರೂ) ತಾನೇ ಸಮಾಧಾನಪಡಿಸಿಕೊಂಡು, ಇಂದ್ರಜಿತ್ತನ್ನು ಕುರಿತು ''ವತ್ಸ ನೀನು ಅಸ್ತ್ರವಿದ್ಯೆಯಲ್ಲಿ ಗಟ್ಟಿಗ. ದೇವಾಸುರರನ್ನು ಗೆದ್ದು ಪರಾಕ್ರಮವನ್ನು ಮೆರೆಯಿಸಿದ್ದೀಯೆ. ಬ್ರಹ್ಮನನ್ನು ತಪಸ್ಸಿನಿಂದ ಮೆಚ್ಚಿಸಿ ಬ್ರಹ್ಮಾಸ್ತ್ರವನ್ನು ಸಂಪಾದಿಸಿದ್ದೀಯೆ (೧-೨). ನಿನ್ನ ಅಸ್ತ್ರಬಲಕ್ಕೆ ಅಸುರರಾಗಲಿ, ಇಂದ್ರಸಮೇತರಾಗಿ ಬಂದ ದೇವತೆಗಳಾಗಲಿ ಎದುರು ನಿಲ್ಲಲಾರದೆ ಹೋಗಿದ್ದಾರೆ. ಮೂರುಲೋಕಗಳಲ್ಲಿ ಯಾವನೂ ನಿನ್ನೊಡನೆ ಯುದ್ಧಮಾಡಿ ಆಯಾಸಗೊಂಡು

ನ ತೇಽಸ್ತ್ಯಶಕ್ಯಂ ಸಮರೇಷು ಕರ್ಮಣಾ
ನ ತೇಽಸ್ತ್ಯಕಾರ್ಯಂ ಮತಿಪೂರ್ವಮಂತ್ರಣೇ ।
ನ ಸೋಽಸ್ತಿ ಕಶ್ಚಿತ್ ತ್ರಿಷು ಸಂಗ್ರಹೇಷು ವೈ
ನ ವೇದ ಯಸ್ತೇಽಸ್ತ್ರಬಲಂ ಬಲಂ ಚ ತೇ ॥ ೫

ಮಮಾನುರೂಪಂ ತಪಸೋ ಬಲಂ ಚ ತೇ
ಪರಾಕ್ರಮಶ್ಚಾಸ್ತ್ರಬಲಂ ಚ ಸಂಯುಗೇ ।
ನ ತ್ವಾಂ ಸಮಾಸಾದ್ಯ ರಣಾವಮರ್ದೇ
ಮನಃ ಶ್ರಮಂ ಗಚ್ಛತಿ ನಿಶ್ಚಿತಾರ್ಥಮ್ ॥ ೬

ನಿಹತಾಃ ಕಿಂಕರಾಃ ಸರ್ವೇ ಜಂಬುಮಾಲೀ ಚ ರಾಕ್ಷಸಃ ।
ಅಮಾತ್ಯಪುತ್ರಾ ವೀರಾಶ್ಚ ಪಂಚ ಸೇನಾಗ್ರಯಾಯಿನಃ ॥ ೭

ಬಲಾನಿ ಸುಸಮೃದ್ಧಾನಿ ಸಾಶ್ವನಾಗರಥಾನಿ ಚ ।
ಸಹೋದರಸ್ತೇ ದಯಿತಃ ಕುಮಾರೋಽಕ್ಷಶ್ಚ ಸೂದಿತಃ ॥ ೮

ನ ಹಿ ತೇಷ್ವೇವ ಮೇ ಸಾರೋ ಯಸ್ತ್ವಯ್ಯರಿನಿಷೂದನ ॥

ಸೋತುಹೋಗದೆ ಇಲ್ಲ. ಭುಜಬಲವೂ ತಪೋಬಲವೂ ನಿನ್ನನ್ನು ರಕ್ಷಿಸುತ್ತಿವೆ. ನೀನು ಬುದ್ಧಿಶಾಲಿ. ದೇಶಕಾಲಗಳ ವಿಭಾಗವನ್ನು ಬಲ್ಲವನು (೩–೪). ಯುದ್ಧದಲ್ಲಿ ನಿನಗೆ ಅಸಾಧ್ಯವಾದುದಿಲ್ಲ. ನಿನ್ನ ಮಂತ್ರಾಲೋಚನೆಗೆ ನಿಲುಕದ ವಿಷಯವಿಲ್ಲ. ಮೂರು ಲೋಕಗಳಲ್ಲಿಯೂ ನಿನ್ನ ಅಸ್ತ್ರಬಲ ತಪೋಬಲಗಳ ಮಹತ್ತ್ವವನ್ನು ತಿಳಿಯದೇ ಇರತಕ್ಕವನು ಇಲ್ಲ. ತಪೋಬಲದಲ್ಲಾಗಲಿ, ಅಸ್ತ್ರವಿದ್ಯೆಯಲ್ಲಾಗಲಿ, ಪರಾಕ್ರಮದಲ್ಲಾಗಲಿ ನೀನು ನನಗೆ ಸಮಾನನಾಗಿದ್ದೀಯೆ. ಎಂತಹ ಯುದ್ಧಪ್ರಸಂಗದಲ್ಲಿಯೂ ನೀನು ಸಹಾಯಕನಾಗಿರುವುದರಿಂದ ನನಗೆ ಜಯವೆಂಬುದು ನಿಶ್ಚಯ. ಆದ್ದರಿಂದ ನನ್ನ ಮನಸ್ಸಿಗೆ ಆಯಾಸವೇ ಆಗುವುದಿಲ್ಲ (೫–೬). ಇದುವರೆಗೆ ಆ ಕಪಿಯಿಂದ ಕಿಂಕರರೂ, ಜಂಬುಮಾಲಿಯೂ, ಏಳು ಮಂದಿ ಅಮಾತ್ಯಪುತ್ರರೂ, ಐವರೂ ಸೇನಾಪತಿಗಳೂ ಹತರಾದರು. ಅಶ್ವಗಜರಥಗಳಿಂದ ಸಹಿತವಾದ ಮಹಾಸೈನ್ಯವು ನಾಶವಾಯಿತು. ನಿನ್ನ ಪ್ರಿಯಸಹೋದರನಾದ ಅಕ್ಷನೂ ಹತನಾದನು. ಹೇ ಶತ್ರುಸೂದನ, ಪರಾಕ್ರಮದ ವಿಷಯದಲ್ಲಿ ನನಗೆ ನಿನ್ನಲ್ಲಿರುವಷ್ಟು ಅವರಲ್ಲಿ ನಂಬಿಕೆ

ಇದಂ ಹಿ ದೃಷ್ಟ್ವಾ ಮತಿಮನ್ ಮಹದ್ಬಲಂ
ಕಪೇಃ ಪ್ರಭಾವಂ ಚ ಪರಾಕ್ರಮಂ ಚ ।
ತ್ವಮಾತ್ಮನಶ್ಚಾಪಿ ಸಮೀಕ್ಷ್ಯ ಸಾರಂ
ಕುರುಷ್ವ ವೇಗಂ ಸ್ವಬಲಾನುರೂಪಮ್ ॥ ೯
ಬಲಾವಮರ್ದಸ್ತ್ವಯಿ ಸಂನಿಕೃಷ್ಟೇ
ಯಥಾ ಗತೇ ಶಾಮ್ಯತಿ ಶಾಂತಶತ್ರೌ ।
ತಥಾ ಸಮೀಕ್ಷ್ಯಾತ್ಮಬಲಂ ಪರಂ ಚ
ಸಮಾರಭಸ್ವಾಸ್ತ್ರವಿದಾಂ ವರಿಷ್ಠ ॥ ೧೦
ನ ವೀರ ಸೇನಾ ಗಣಶೋ ಚ್ಯವಂತಿ
ನ ವಜ್ರಮಾದಾಯ ವಿಶಾಲಸಾರಮ್ ।
ನ ಮಾರುತಸ್ಯಾಸ್ಯ ಗತಿಪ್ರಮಾಣಂ
ನ ಚಾಗ್ನಿಕಲ್ಪಃ ಕರಣೇನ ಹಂತುಮ್ ॥ ೧೧
ತಮೇವಮರ್ಥಂ ಪ್ರಸಮೀಕ್ಷ್ಯ ಸಮ್ಯಕ್
ಸ್ವಕರ್ಮಸಾಮ್ಯಾದ್ಧಿ ಸಮಾಹಿತಾತ್ಮಾ ।
ಸ್ಮರಂಶ್ಚ ದಿವ್ಯಂ ಧನುಷೋಽಸ್ತ್ರವೀರ್ಯಂ
ವ್ರಜಾಕ್ಷತಂ ಕರ್ಮ ಸಮಾರಭಸ್ವ ॥ ೧೨

ಇರಲಿಲ್ಲ (೭–೮). ಇಷ್ಟು ಅನರ್ಥಗಳನ್ನು ತಂದೊಡ್ಡಿದ ಆ ಕಪಿಯ ದೇಹಬಲವನ್ನೂ ಪ್ರಭಾವ ಪರಾಕ್ರಮಗಳನ್ನೂ ವಿಮರ್ಶೆಮಾಡಿ, ನಿನ್ನ ಸಾಮರ್ಥ್ಯಕ್ಕೆ ತಕ್ಕ ಕಾರ್ಯವನ್ನು ಮಾಡು. ಶತ್ರುಸೂದನನಾದ ನೀನು ನಮ್ಮ ಸೈನ್ಯವು ನಾಶವಾಗದಂತೆ ನೋಡಿಕೊಳ್ಳುತ್ತ, ಶತ್ರುವನ್ನು ಅಡಗಿಸುವುದಕ್ಕೆ ಪ್ರಯತ್ನಮಾಡು (೯–೧೦). ಎಲೈ ವೀರನೆ, ಆ ಕಪಿಯನ್ನು ನಮ್ಮ ಸೇನೆಗಳು ಜಯಿಸಲಾರವು.* ಅವು ಗುಂಪುಗುಂಪಾಗಿ ಸೋತು ಓಡಿಹೋಗುತ್ತವೆ. ಅತಿ ತೀಕ್ಷ್ಣವಾದ ವಜ್ರಾಯುಧವು ಕೂಡ ಏನೂ ಮಾಡಲಾರದು. ಈ ಕಪಿಯ ವೇಗವು ವಾಯುವಿಗೂ ಇಲ್ಲ. ಅಗ್ನಿ ಸಮಾನನಾದ ಈತನನ್ನು ಆಯುಧಗಳಿಂದ ಕೊಲ್ಲಲೂ ಶಕ್ಯವಿಲ್ಲ (೧೧). ಈ

* ಅನುಬಂಧವನ್ನು ನೋಡಿ.

ನ ಖಲ್ವಿಯಂ ಮತಿಃ ಶ್ರೇಷ್ಠಾ ಯತ್ತ್ವಾಂ ಸಂಪ್ರೇಷಯಾಮ್ಯಹಮ್ ।
ಇಯಂ ಚ ರಾಜಧರ್ಮಾಣಾಂ ಕ್ಷತ್ರಸ್ಯ ಚ ಮತಿರ್ಮತಾ ॥ ೧೩

ನಾನಾಶಸ್ತ್ರೈಶ್ಚ ಸಂಗ್ರಾಮೇ ವೈಶಾರದ್ಯಮರಿಂದಮ ।
ಅವಶ್ಯಮೇವ ಬೋದ್ಧವ್ಯಂ ಕಾಮ್ಯಶ್ಚ ವಿಜಯೋ ರಣೇ ॥ ೧೪

ತತಃ ಪಿತುಸ್ತದ್ವಚನಂ ನಿಶಮ್ಯ
ಪ್ರದಕ್ಷಿಣಂ ದಕ್ಷಸುತಪ್ರಭಾವಃ ।
ಚಕಾರ ಭರ್ತಾರಮಹೀನಸತ್ತ್ವೋ
ರಣಾಯ ವೀರಃ ಪ್ರತಿಪನ್ನಬುದ್ಧಿಃ ॥ ೧೫

ತತಸ್ತೈಃ ಸ್ವಗಣೈರಿಷ್ಟೈರಿಂದ್ರಜಿತ್ ಪ್ರತಿಪೂಜಿತಃ ।
ಯುದ್ಧೋದ್ಧತಃ ಕೃತೋತ್ಸಾಹಃ ಸಂಗ್ರಾಮಂ ಪ್ರತ್ಯಪದ್ಯತ ॥ ೧೬

ಶ್ರೀಮಾನ್ ಪದ್ಮಪಲಾಶಾಕ್ಷೋ ರಾಕ್ಷಸಾಧಿಪತೇಃ ಸುತಃ ।
ನಿರ್ಜಗಾಮ ಮಹಾತೇಜಾಃ ಸಮುದ್ರ ಇವ ಪರ್ವಸು ॥ ೧೭

ವಿಷಯವನ್ನು ನೀನು ಚೆನ್ನಾಗಿ ವಿಚಾರಮಾಡಿ ಕಾರ್ಯಸಿದ್ಧಿಯಾಗುವುದಕ್ಕೆ ತಕ್ಕ ಮುನ್ನೆಚ್ಚರಿಕೆಯನ್ನು ವಹಿಸು. ಧನುಸ್ಸಿಗೆ ಹೂಡುವ ದಿವ್ಯಮಂತ್ರಾಸ್ತ್ರದ ಬಲವನ್ನು ಸ್ಮರಣೆಯಲ್ಲಿಟ್ಟುಕೊಂಡಿರು. ನಮ್ಮ ಕಾರ್ಯವು ಕೆಡದಂತೆ ಉದ್ಯೋಗಮಾಡು (೧೨). ವತ್ಸ ಇಂತಹ ವಿಪತ್ಕಾರಿಯಾದ ಯುದ್ಧಕ್ಕೆ ನಿನ್ನನ್ನು ಕಳುಹಿಸುವುದು ಯುಕ್ತವಲ್ಲ. ಆದರೆ ರಾಜನೀತಿಯನ್ನೂ* ಕ್ಷತ್ರಿಯ ಧರ್ಮವನ್ನೂ ವಿಚಾರಿಸಿದಾಗ ಇದು ಸರಿಯೆಂದೇ ತೋರುವುದು (೧೩). ಸಂಗ್ರಾಮದಲ್ಲಿ ನಾನಾಬಗೆಯ ಶಸ್ತ್ರಾಸ್ತ್ರಗಳಿಂದ ಹೋರಾಡುವ ಕೌಶಲವನ್ನು ಅವಶ್ಯವಾಗಿ ಪಡೆಯಬೇಕು. ವಿಜಯವೇ ನಮ್ಮ ಧ್ಯೇಯವಾಗಿರಬೇಕು'' ಎಂದು ಹೇಳಿದನು (೧೪). ಆಗ ದೇವತೆಗಳಿಂದ ಪ್ರಭಾವಶಾಲಿಯಾದ ಮೇಘನಾದನು (ಇಂದ್ರಜಿತ್) ಯುದ್ಧಮಾಡಲು ನಿಶ್ಚಯಿಸಿ ತಂದೆಗೆ ಪ್ರದಕ್ಷಿಣಪೂರ್ವಕ ನಮಸ್ಕಾರ ಮಾಡಿದನು. ಇಷ್ಟಮಿತ್ರರು

---

*ರಾಜನು ಮೊದಲು ತಾನೇ ಯುದ್ಧಕ್ಕೆ ಹೋಗದೆ ಸಹಾಯಕರನ್ನು ಕಳುಹಿಸಬೇಕೆಂಬುದು ರಾಜನೀತಿ. ಕ್ಷತ್ರಿಯ ಧರ್ಮದ ವಿಷಯ ಮುಂದಿನ ಶ್ಲೋಕದಲ್ಲಿ ಬಂದಿದೆ.

ಸ ಪಕ್ಷಿರಾಜಾನಿಲತುಲ್ಯವೇಗೈ-
ರ್ವ್ಯಾಲೈಶ್ಚತುರ್ಭಿಃ ಸಿತತೀಕ್ಷ್ಣದಂಷ್ಟ್ರೈಃ ।
ರಥಂ ಸಮಾಯುಕ್ತಮಸಂಗವೇಗಂ
ಸಮಾರುರೋಹೇಂದ್ರಜಿದಿಂದ್ರಕಲ್ಪಃ ॥ ೧೮
ಸ ರಥೀ ಧನ್ವಿನಾಂ ಶ್ರೇಷ್ಠಃ ಶಸ್ತ್ರಜ್ಞೋಽಸ್ತ್ರವಿದಾಂ ವರಃ ।
ರಥೇನಾಭಿಯಯೌ ಕ್ಷಿಪ್ರಂ ಹನೂಮಾನ್ ಯತ್ರ ಸೋಽಭವತ್ ॥
ಸ ತಸ್ಯ ರಥನಿರ್ಘೋಷಂ ಜ್ಯಾಸ್ವನಂ ಕಾರ್ಮುಕಸ್ಯ ಚ ।
ನಿಶಮ್ಯ ಹರಿವೀರೋಽಸೌ ಸಂಪ್ರಹೃಷ್ಟತರೋಽಭವತ್ ॥ ೨೦
ಸುಮಹಚ್ಚಾಪಮಾದಾಯ ಶಿತಶಲ್ಯಾಂಶ್ಚ ಸಾಯಕಾನ್ ।
ಹನುಮಂತಮಭಿಪ್ರೇತ್ಯ ಜಗಾಮ ರಣಪಂಡಿತಃ ॥ ೨೧
ತಸ್ಮಿಂಸ್ತತಃ ಸಂಯತಿ ಜಾತಹರ್ಷೇ
ರಣಾಯ ನಿರ್ಗಚ್ಛತಿ ಬಾಣಪಾಣೌ ।
ದಿಶಶ್ಚ ಸರ್ವಾಃ ಕಲುಷಾ ಬಭೂವು-
ರ್ಮೃಗಾಶ್ಚ ರೌದ್ರಾ ಬಹುಧಾ ವಿನೇದುಃ ॥ ೨೨
ಸಮಾಗತಾಸ್ತತ್ರ ತು ನಾಗಯಕ್ಷಾ
ಮಹರ್ಷಯಶ್ಚಕ್ರಚರಾಶ್ಚ ಸಿದ್ಧಾಃ ।

ಹೊಗಳುತ್ತಿರಲು ಮಹೋತ್ಸಾಹದಿಂದ ಯುದ್ಧಕ್ಕೆ ಹೊರಟನು (೧೫–೧೬). ತಾವರೆಯ ದಳಗಳಂತೆ ನೇತ್ರಗಳುಳ್ಳ ರಾವಣಕುಮಾರನು ಪರ್ವಕಾಲದ ಸಮುದ್ರದಂತೆ ಉತ್ಸಾಹದಿಂದ ಉಕ್ಕುತ್ತ ಯುದ್ಧಾಭಿಮುಖನಾದನು. ಅಸ್ತ್ರವಿದ್ಯಾವಿಶಾರದನಾದ ಆತನು ಗರುಡ ವಾಯುಗಳಂತೆ ಅತಿಶಯ ವೇಗಶಾಲಿಗಳಾದ ಬಿಳಿಯ ಕೋರೆದಾಡೆಗಳಿಂದ ಕೂಡಿದ ನಾಲ್ಕು ಸಿಂಹಗಳನ್ನು ಕಟ್ಟಿದ್ದ ಮಹಾರಥವನ್ನೇರಿ ಹನುಮಂತನಿದ್ದಲ್ಲಿಗೆ ಹೊರಟನು (೧೭–೧೯). ಇತ್ತ ಹನುಮಂತನು ಮೇಘನಾದನ ರಥಘೋಷವನ್ನೂ ಧನುಸ್ಸಿನ ಟಂಕಾರವನ್ನೂ ಕೇಳಿ ಯುದ್ಧ ಒದಗಿತೆಂದು ಸಂತೋಷದಿಂದ ಹಿಗ್ಗುತ್ತಿದ್ದನು. ರಣಪಂಡಿತನಾದ ಇಂದ್ರಜಿತ್ತು ಮಹಾಧನುಸ್ಸನ್ನೂ ಹರಿತವಾದ ಅಸ್ತ್ರಗಳನ್ನೂ ಹಿಡಿದು ಹನುಮಂತನಿಗೆ ಎದುರಾಗಿ ಬರುತ್ತಿದ್ದನು (೨೦–೨೧). ಆಗ ದಿಕ್ಕುಗಳೆಲ್ಲವೂ ಮಲಿನವಾದವು. ಕ್ರೂರ

ನಭಃ ಸಮಾವೃತ್ಯ ಚ ಪಕ್ಷಿಸಂಘಾಃ
ವಿನೇದುರುಚ್ಚೈಃ ಪರಮಪ್ರಹೃಷ್ಟಾಃ ॥ ೨೩

ಆಯಾಂತಂ ಸರಥಂ ದೃಷ್ಟ್ವಾ ತೂರ್ಣಮಿಂದ್ರಜಿತಂ ಕಪಿಃ ।
ವಿನನಾದ ಮಹಾನಾದಂ ವ್ಯವರ್ಧತ ಚ ವೇಗವಾನ್ ॥ ೨೪

ಇಂದ್ರಜಿತ್ತು ರಥಂ ದಿವ್ಯಮಾಸ್ಥಿತಶ್ಚಿತ್ರಕಾರ್ಮುಕಃ ।
ಧನುರ್ವಿಸ್ಫಾರಯಾಮಾಸ ತಟಿದೂರ್ಜಿತನಿಃಸ್ವನಮ್ ॥ ೨೫

ತತಃ ಸಮೇತಾವತಿತೀಕ್ಷ್ಣವೇಗೌ
ಮಹಾಬಲೌ ತೌ ರಣನಿರ್ವಿಶಂಕೌ ।
ಕಪಿಶ್ಚ ರಕ್ಷೋಽಧಿಪತೇಶ್ಚ ಪುತ್ರಃ
ಸುರಾಸುರೇಂದ್ರಾವಿವ ಬದ್ಧವೈರೌ ॥ ೨೬

ಸ ತಸ್ಯ ವೀರಸ್ಯ ಮಹಾರಥಸ್ಯ
ಧನುಷ್ಮತಃ ಸಂಯತಿ ಸಂಮತಸ್ಯ ।
ಶರಪ್ರವೇಗಂ ವ್ಯಹನತ್ ಪ್ರವೃದ್ಧ-
ಶ್ಚಚಾರ ಮಾರ್ಗೇ ಪಿತುರಪ್ರಮೇಯಃ ॥ ೨೭

ತತಃ ಶರಾನಾಯತತೀಕ್ಷ್ಣಶಲ್ಯಾನ್
ಸುಪತ್ರಿಣಃ ಕಾಂಚನಚಿತ್ರಪುಂಖಾನ್ ।

ಮೃಗಗಳು ಅರಚಿಕೊಂಡವು. ನಾಗರೂ ಯಕ್ಷರೂ, ಮಹರ್ಷಿಗಳೂ ಸಿದ್ಧರೂ ಗುಂಪುಗುಂಪಾಗಿ ಬಂದು ನೆರೆದರು. ಪಕ್ಷಿಗಳು ಆಕಾಶದಲ್ಲಿ ಆನಂದದಿಂದ ಕೂಗುತ್ತಿದ್ದವು (೨೨–೨೩). ಹನುಮಂತನು ಯುದ್ಧಕ್ಕಾಗಿ ಇಂದ್ರಜಿತ್ತು ಬರುತ್ತಿರುವುದನ್ನು ಕಂಡು ಗಟ್ಟಿಯಾಗಿ ಗರ್ಜಿಸಿ ದೇಹವನ್ನು ಬೆಳೆಯಿಸಿಕೊಂಡನು. ಇಂದ್ರಜಿತ್ತು ಸಿಡಿಲು ಹೊಡೆದಂತೆ ಧನುಸ್ಸನ್ನು ಮಿಡಿಯುತ್ತ ಬಂದನು (೨೪–೨೫). ಆನಂತರ ಅತ್ಯಂತ ಬಲಿಷ್ಠರೂ ವೇಗಶಾಲಿಗಳೂ ಆದ ಅವರಿಬ್ಬರೂ ದೇವೇಂದ್ರ ದಾನವೇಂದ್ರರಂತೆ ಸಂಗ್ರಾಮವನ್ನಾರಂಭಿಸಿದರು. ಹನುಮಂತನು ಆಕಾಶದಲ್ಲಿ ಚಿತ್ರಗತಿಯಿಂದ ಸಂಚರಿಸುತ್ತ ಮಹಾವೀರನಾದ ಇಂದ್ರಜಿತ್ತಿನ ಶರವೇಗವನ್ನು ತಪ್ಪಿಸಿಕೊಳ್ಳುತ್ತಿದ್ದನು (೨೬-೨೭). ಇಂದ್ರಜಿತ್ತು ಕೂರಲಗುಗಳಿಂದಲೂ,

ಮುಮೋಚ ವೀರಃ ಪರವೀರಹಂತಾ
ಸುಸಂನತಾನ್ ವಜ್ರನಿಪಾತವೇಗಾನ್ ॥ ೨೮

ಸ ತಸ್ಯ ತು ಸ್ಯಂದನನಿಃಸ್ವನಂ ಚ
ಮೃದಂಗಭೇರೀಪಟಹಸ್ವನಂ ಚ ।
ವಿಕೃಷ್ಯಮಾಣಸ್ಯ ಚ ಕಾರ್ಮುಕಸ್ಯ
ನಿಶಮ್ಯ ಘೋಷಂ ಪುನರುತ್ಪಪಾತ ॥ ೨೯

ಶರಾಣಾಮಂತರೇಷ್ವಾಶು ವ್ಯವರ್ತತ ಮಹಾಕಪಿಃ ।
ಹರಿಸ್ತಸ್ಯಾಭಿಲಕ್ಷ್ಯಸ್ಯ ಮೋಹಯನ್ ಲಕ್ಷ್ಯಸಂಗ್ರಹಮ್ ॥ ೩೦
ಶರಾಣಾಮಗ್ರತಸ್ತಸ್ಯ ಪುನಃ ಸಮಭಿವರ್ತತ ।
ಪ್ರಸಾರ್ಯ ಹಸ್ತೌ ಹನುಮಾನುತ್ಪಪಾತಾನಿಲಾತ್ಮಜಃ ॥ ೩೧
ತಾವುಭೌ ವೇಗಸಂಪನ್ನೌ ರಣಕರ್ಮವಿಶಾರದೌ ।
ಸರ್ವಭೂತಮನೋಗ್ರಾಹಿ ಚಕ್ರತುರ್ಯುದ್ಧಮುತ್ತಮಮ್ ॥ ೩೨

ಹನೂಮತೋ ವೇದ ನ ರಾಕ್ಷಸೋಽಂತರಮ್
ನ ಮಾರುತಿಸ್ತಸ್ಯ ಮಹಾತ್ಮನೋಽಂತರಮ್ ।
ಪರಸ್ಪರಂ ನಿರ್ವಿಷಹೌ ಬಭೂವತುಃ
ಸಮೇತ್ಯ ತೌ ದೇವಸಮಾನವಿಕ್ರಮೌ ॥ ೩೩

ಗರಿಗಳಿಂದಲೂ, ಸುವರ್ಣಾಲಂಕಾರಗಳಿಂದಲೂ ಯುಕ್ತವಾಗಿ ವಜ್ರಾಯುಧದಂತೆ ತೀಕ್ಷ್ಣವಾಗಿದ್ದ ಬಾಣಗಳನ್ನು ಪ್ರಯೋಗಿಸುತ್ತಿದ್ದನು. ಹನುಮಂತನು ಅವನ ರಥಘೋಷ, ಮೃದಂಗಾದಿ ವಾದ್ಯಧ್ವನಿ, ಧನುಷ್ಟಂಕಾರಗಳನ್ನು ಕೇಳುತ್ತ ತಿರುಗಿ ಆಕಾಶಕ್ಕೆ ನೆಗೆದನು (೨೮–೨೯). ಇಂದ್ರಜಿತ್ತು ಗುರಿ ಇಟ್ಟು ಹೊಡೆಯುತ್ತಿದ್ದರೂ, ಹನುಮಂತನು ಬಾಣಗಳ ಮಧ್ಯದಲ್ಲಿ ತೂರಿ ಹಾರುತ್ತ ಗುರಿಯು ತಪ್ಪಿಹೋಗುವಂತೆ ಮಾಡುತ್ತಿದ್ದನು. ಕೆಲವು ಬಾಣಗಳಿಗೆ ಎದುರಾಗಿ ನಿಂತು, ಅವು ತನ್ನ ಬಳಿಗೆ ಬರುವಷ್ಟರಲ್ಲಿ ಕೈಬೀಸಿ ಹಾರಿಬಿಡುತ್ತಿದ್ದನು (೩೦–೩೧). ಹೀಗೆ ಯುದ್ಧವಿಶಾರದರಾದ ಕಪಿರಾಕ್ಷಸರಿಬ್ಬರೂ ಸಮಸ್ತರಿಗೂ ಆಶ್ಚರ್ಯವಾಗುವಂತೆ ಯುದ್ಧಮಾಡುತ್ತಿದ್ದರು. ಅವರಿಬ್ಬರೂ ಮಹಾವೇಗಶಾಲಿಗಳು. ಇಂದ್ರಜಿತ್ತಿಗೆ

ತತಸ್ತು ಲಕ್ಷ್ಯೇ ಸ ವಿಹನ್ಯಮಾನೇ
ಶರೇಷ್ವಮೋಘೇಷು ಚ ಸಂಪತತ್ಸು ।
ಜಗಾಮ ಚಿಂತಾಂ ಮಹತೀಂ ಮಹಾತ್ಮಾ
ಸಮಾಧಿಸಂಯೋಗಸಮಾಹಿತಾತ್ಮಾ ॥ ೩೪

ತತೋ ಮತಿಂ ರಾಕ್ಷಸರಾಜಸೂನು-
ಶ್ಚಕಾರ ತಸ್ಮಿನ್ ಹರಿವೀರಮುಖ್ಯೇ ।
ಅವಧ್ಯತಾಂ ತಸ್ಯ ಕಪೇಃ ಸಮೀಕ್ಷ್ಯ
ಕಥಂ ನಿಗಚ್ಛೇದಿತಿ ನಿಗ್ರಹಾರ್ಥಮ್ ॥ ೩೫

ತತಃ ಪೈತಾಮಹಂ ವೀರಃ ಸೋಽಸ್ತ್ರಮಸ್ತ್ರವಿದಾಂ ವರಃ ।
ಸಂದಧೇ ಸುಮಹಾತೇಜಾಸ್ತಂ ಹರಿಪ್ರವರಂ ಪ್ರತಿ ॥ ೩೬

ಅವಧ್ಯೋಽಯಮಿತಿ ಜ್ಞಾತ್ವಾ ತಮಸ್ತ್ರೇಣಾಸ್ತ್ರತತ್ತ್ವವಿತ್ ।
ನಿಜಗ್ರಾಹ ಮಹಾಬಾಹುರ್ಮಾರುತಾತ್ಮಜಮಿಂದ್ರಜಿತ್ ॥ ೩೭

ತೇನ ಬದ್ಧಸ್ತತೋಽಸ್ತ್ರೇಣ ರಾಕ್ಷಸೇನ ಸ ವಾನರಃ ।
ಅಭವನ್ನಿರ್ವಿಚೇಷ್ಟಶ್ಚ ಪಪಾತ ಚ ಮಹೀತಲೇ ॥ ೩೮

ಹನುಮಂತನನ್ನು ನಿಗ್ರಹಿಸಲು ಅವಕಾಶವೇ ಸಿಗಲಿಲ್ಲ. ಹನುಮಂತನಿಗೂ ಇಂದ್ರಜಿತ್ತನ್ನು ನಿಗ್ರಹಿಸಲು ಅವಕಾಶ ದೊರೆಯಲಿಲ್ಲ (೩೨–೩೩). ಆಗ ಇಂದ್ರಜಿತ್ತಿಗೆ ತಾನು ಏಕಾಗ್ರಚಿತ್ತನಾಗಿ ಅಮೋಘವಾದ ಅಸ್ತ್ರಗಳನ್ನು ಪ್ರಯೋಗಿಸುತ್ತಿದ್ದರೂ ಗುರಿತಪ್ಪಿ ಹೋಗುವುದನ್ನು ಕಂಡು ಬಹಳ ಚಿಂತೆಯುಂಟಾಯಿತು: "ಈ ಮಹಾಕಪಿಯನ್ನು ಕೊಲ್ಲುವುದಕ್ಕೆ ಶಕ್ಯವಿಲ್ಲ. ಇವನನ್ನು ಹೇಗಾದರೂ ಸೆರೆ ಹಿಡಿಯಬೇಕು" ಎಂದು ವಿಚಾರಮಾಡಿದನು (೩೪–೩೫). ಕೊನೆಗೆ ಅಸ್ತ್ರವಿದ್ಯಾ ವಿಶಾರದನಾದ ಆ ವೀರನು ಹನುಮಂತನಮೇಲೆ ಬ್ರಹ್ಮಾಸ್ತ್ರವನ್ನು ಪ್ರಯೋಗಿಸಬೇಕೆಂದು ನಿರ್ಧರಿಸಿ, ಅದನ್ನು ಧನುಸ್ಸಿನಲ್ಲಿ ಹೂಡಿದನು. ಬೇರೆ ಅಸ್ತ್ರಗಳಿಗೆ ಇವನು ಜಗ್ಗುವವನಲ್ಲವೆಂದು ನಿಶ್ಚಯಿಸಿ ಇಂದ್ರಜಿತ್ತು ಬ್ರಹ್ಮಾಸ್ತ್ರವನ್ನು ಪ್ರಯೋಗಿಸಿ ವಾಯುಪುತ್ರನನ್ನು ಬಂಧಿಸಿದನು (೩೬–೩೭). ಹನುಮಂತನು ಆ ಬ್ರಹ್ಮಾಸ್ತ್ರಕ್ಕೆ ಕಟ್ಟುಬಿದ್ದು ನಿಶ್ಚೇಷ್ಟನಾಗಿ ನೆಲದಮೇಲೆ ಬಿದ್ದನು. ಆಗ ಅಸ್ತ್ರವು ಬ್ರಹ್ಮದೇವತಾಕವಾದ

ತತೋಽಥ ಬುದ್ಧ್ವಾ ಸ ತದಸ್ತ್ರಬಂಧಂ
ಪ್ರಭೋಃ ಪ್ರಭಾವಾದ್ವಿಗತಾತ್ಮವೇಗಃ ।
ಪಿತಾಮಹಾನುಗ್ರಹಮಾತ್ಮನಶ್ಚ
ವಿಚಿಂತಯಾಮಾಸ ಹರಿಪ್ರವೀರಃ ॥ ೩೯

ತತಃ ಸ್ವಾಯಂಭುವೈರ್ಮಂತ್ರೈರ್ಬ್ರಹ್ಮಾಸ್ತ್ರಮಭಿಮಂತ್ರಿತಮ್ ।
ಹನೂಮಾಂಶ್ಚಿಂತಯಾಮಾಸ ವರದಾನಂ ಪಿತಾಮಹಾತ್ ॥ ೪೦

ನ ಮೇಽಸ್ಯ ಬಂಧಸ್ಯ ಚ ಶಕ್ತಿರಸ್ತಿ
ವಿಮೋಕ್ಷಣೇ ಲೋಕಗುರೋಃ ಪ್ರಭಾವಾತ್ ।
ಇತ್ಯೇವ ಮತ್ವಾ ವಿಹಿತೋಽಸ್ತ್ರಬಂಧೋ
ಮಯಾತ್ಮಯೋನೇರನುವರ್ತಿತವ್ಯಃ ॥ ೪೧

ಸ ವೀರ್ಯಮಸ್ತ್ರಸ್ಯ ಕಪಿರ್ವಿಚಾರ್ಯ
ಪಿತಾಮಹಾನುಗ್ರಹಮಾತ್ಮನಶ್ಚ ।
ವಿಮೋಕ್ಷಶಕ್ತಿಂ ಪರಿಚಿಂತಯಿತ್ವಾ
ಪಿತಾಮಹಾಜ್ಞಾಮನುವರ್ತತೇ ಸ್ಮ ॥ ೪೨

ಅಸ್ತ್ರೇಣಾಪಿ ಹಿ ಬದ್ಧಸ್ಯ ಭಯಂ ಮಮ ನ ಜಾಯತೇ ।
ಪಿತಾಮಹಮಹೇಂದ್ರಾಭ್ಯಾಂ ರಕ್ಷಿತಸ್ಯಾನಿಲೇನ ಚ ॥ ೪೩

ಮಂತ್ರಗಳಿಂದ ಮಂತ್ರಿಸಲ್ಪಟ್ಟಿದೆಯೆಂದೂ ಬ್ರಹ್ಮದೇವನ ಮಹಿಮೆಯಿಂದ ಬ್ರಹ್ಮಾಸ್ತ್ರದಲ್ಲಿ ತಾನು ಕಟ್ಟುಬಿದ್ದಿರುವೆನೆಂದೂ ಅವನು ತಿಳಿದುಕೊಂಡನು. ಬ್ರಹ್ಮನು ತನಗೆ ಅನುಗ್ರಹಿಸಿದ ವರವೂ ಸ್ಮರಣೆಗೆ ಬಂದಿತು (೩೮–೪೦). "ಬ್ರಹ್ಮಾಸ್ತ್ರದ ಬಂಧನದಿಂದ ತಾನು ತಪ್ಪಿಸಿಕೊಳ್ಳಲಾರೆನೆಂದು ಭಾವಿಸಿ, ಇಂದ್ರಜಿತ್ತು ಈ ಅಸ್ತ್ರವನ್ನು ಪ್ರಯೋಗಿಸಿದ್ದಾನೆ. ಲೋಕಗುರುವಾದ ಬ್ರಹ್ಮನ ಆಜ್ಞೆಯನ್ನು ಅನುಸರಿಸಿ ನಡೆಯುವುದು ಯೋಗ್ಯವಾದದ್ದು (೪೧). ಬ್ರಹ್ಮದೇವನೂ, ದೇವೇಂದ್ರನೂ, ವಾಯುದೇವನೂ ನನಗೆ ವರವನ್ನು ಅನುಗ್ರಹಿಸಿ ರಕ್ಷಿಸುತ್ತಿರುವುದರಿಂದ ನಾನು ಈ ಅಸ್ತ್ರಕ್ಕೆ ಕಟ್ಟುಬಿದ್ದರೂ ನನಗೆ ಭಯವಿಲ್ಲ. ಈ ರಾಕ್ಷಸರು ನನ್ನನ್ನು ಹಿಡಿದುಕೊಂಡು ಹೋದರೂ ದೊಡ್ಡ ಪ್ರಯೋಜನವೇ ಇದೆ. ರಾಕ್ಷಸರಾಜನಾದ ರಾವಣನೊಡನೆ

ಗ್ರಹಣೇ ವಾಪಿ ರಕ್ಷೋಭಿರ್ಮಹಾನ್ ಮೇ ಗುಣದರ್ಶನಃ ।
ರಾಕ್ಷಸೇಂದ್ರೇಣ ಸಂವಾದಸ್ತಸ್ಮಾದ್ಗೃಹ್ಣಂತು ಮಾಂ ಪರೇ ॥ ೪೪

ಸ ನಿಶ್ಚಿತಾರ್ಥಃ ಪರವೀರಹಂತಾ
ಸಮೀಕ್ಷ್ಯಕಾರೀ ವಿನಿವೃತ್ತಚೇಷ್ಟಃ ।
ಪರೈಃ ಪ್ರಸಹ್ಯಾಭಿಗತೈರ್ನಿಗೃಹ್ಯ
ನನಾದ ತೈಸ್ತೈಃ ಪರಿಭರ್ತ್ಸ್ಯಮಾನಃ ॥ ೪೫

ತತಸ್ತಂ ರಾಕ್ಷಸಾ ದೃಷ್ಟ್ವಾ ನಿರ್ವಿಚೇಷ್ಟಮರಿಂದಮಮ್ ।
ಬಬಂಧುಃ ಶಣವಲ್ಕೈಶ್ಚ ದ್ರುಮಚೀರೈಶ್ಚ ಸಂಹತೈಃ ॥ ೪೬

ಸ ರೋಚಯಾಮಾಸ ಪರೈಶ್ಚ ಬಂಧನಂ
ಪ್ರಸಹ್ಯ ವೀರೈರಭಿನಿಗ್ರಹಂ ಚ ।
ಕೌತೂಹಲಾನ್ಮಾಂ ಯದಿ ರಾಕ್ಷಸೇಂದ್ರೋ
ದ್ರಷ್ಟುಂ ವ್ಯವಸ್ಯೇದಿತಿ ನಿಶ್ಚಿತಾರ್ಥಃ ॥ ೪೭

ಸ ಬದ್ಧಸ್ತೇನ ವಲ್ಕೇನ ವಿಮುಕ್ತೋಽಸ್ತ್ರೇಣ ವೀರ್ಯವಾನ್ ।
ಅಸ್ತ್ರಬಂಧಃ ಸ ಚಾನ್ಯಂ ಹಿ ನ ಬಂಧಮನುವರ್ತತೇ ॥ ೪೮

ನಾನು ಸಂಭಾಷಣೆಯನ್ನು ನಡೆಸಬಹುದು. ಆದ್ದರಿಂದ ನನ್ನನ್ನು ಬಂಧಿಸಿ ಒಯ್ಯಲಿ'' ಎಂದು ಹನುಮಂತನು ನಿಶ್ಚಯಿಸಿಕೊಂಡನು (೪೨–೪೪). ಶತ್ರುವಿಧ್ವಂಸಕನಾದ ಹನುಮಂತನು ಯಾವಾಗಲೂ ವಿಮರ್ಶಿಸಿ ಕೆಲಸಮಾಡತಕ್ಕವನು. ಅವನು ಹೀಗೆ ನಿಶ್ಚಯಿಸಿ ಕೈಕಾಲುಗಳನ್ನು ಅಲ್ಲಾಡಿಸದೆ ನಿಶ್ಚೇಷ್ಟನಾಗಿದ್ದನು. ಆಗ ರಾಕ್ಷಸರು ಅವನನ್ನು ಮೂದಲಿಸುತ್ತ ಸೆಣಬು ಮತ್ತು ಇತರ ನಾರುಗಳಿಂದ ಬಿಗಿದು ಕಟ್ಟಿದರು. ಹನುಮಂತನು (ತನಗೆ ಪೀಡೆಯಾದಂತೆ ನಟಿಸುತ್ತ) ಕೂಗಿಕೊಳ್ಳುತ್ತಿದ್ದನು (೪೫–೪೬). ಈ ನೆವದಲ್ಲಿ ರಾವಣನು ತನ್ನನ್ನು ನೋಡಬಹುದೆಂದು ಭಾವಿಸಿ, ಶತ್ರುಗಳು ಕಟ್ಟಿದರೂ ಮೂದಲಿಸಿದರೂ ಹನುಮಂತನು ಅದಕ್ಕೆ ಸಮ್ಮತಿಸಿ ಸುಮ್ಮನಿದ್ದನು. ಅವರು ನಾರಿನಿಂದ ಹನುಮಂತನನ್ನು ಬಿಗಿದೊಡನೆ ಬ್ರಹ್ಮಾಸ್ತ್ರದ ಕಟ್ಟು ಸಡಿಲಿಹೋಯಿತು. ಏಕೆಂದರೆ, ಬ್ರಹ್ಮಾಸ್ತ್ರವು ಬೇರೆ ವಿಧವಾದ ಕಟ್ಟನ್ನು

ಅಥೇಂದ್ರಜಿತ್ತು ದ್ರುಮಚೀರಬದ್ಧಂ
ವಿಚಾರ್ಯ ವೀರಃ ಕಪಿಸತ್ತಮಂ ತಮ್ ।
ವಿಮುಕ್ತಮಸ್ತ್ರೇಣ ಜಗಾಮ ಚಿಂತಾಂ
ನಾನ್ಯೇನ ಬದ್ಧೋ ಹ್ಯನುವರ್ತತೇಽಸ್ತ್ರಮ್ ॥ ೪೯

ಅಹೋ ಮಹತ್ ಕರ್ಮ ಕೃತಂ ನಿರರ್ಥಕಂ
ನ ರಾಕ್ಷಸೈರ್ಮಂತ್ರಗತಿರ್ವಿಮೃಷ್ಟಾ ।
ಪುನಶ್ಚ ನಾಸ್ತ್ರೇ ವಿಹತೇಽಸ್ತ್ರಮನ್ಯತ್
ಪ್ರವರ್ತತೇ ಸಂಶಯಿತಾಃ ಸ್ಮ ಸರ್ವೇ ॥ ೫೦

ಅಸ್ತ್ರೇಣ ಹನುಮಾನ್ ಮುಕ್ತೋ ನಾತ್ಮಾನಮವಬುಧ್ಯತ ।
ಕೃಷ್ಯಮಾಣಸ್ತು ರಕ್ಷೋಭಿಸ್ತೈಶ್ಚ ಬಂಧೈರ್ನಿಪೀಡಿತಃ ॥ ೫೧

ಹನ್ಯಮಾನಸ್ತತಃ ಕ್ರೂರೈ ರಾಕ್ಷಸೈಃ ಕಾಷ್ಠಮುಷ್ಟಿಭಿಃ ।
ಸಮೀಪಂ ರಾಕ್ಷಸೇಂದ್ರಸ್ಯ ಪ್ರಾಕೃಷ್ಯತ ಸ ವಾನರಃ ॥ ೫೨

ಅಥೇಂದ್ರಜಿತ್ತಂ ಪ್ರಸಮೀಕ್ಷ್ಯ ಮುಕ್ತ-
ಮಸ್ತ್ರೇಣ ಬದ್ಧಂ ದ್ರುಮಚೀರಸೂತ್ರೈಃ ।

ಎಂದಿಗೂ ಸಹಿಸದು (೪೭–೪೮). ರಾಕ್ಷಸರು ಹೀಗೆ ನಾರಿನಿಂದ ಕಟ್ಟಿದ್ದನ್ನು ತಿಳಿದೊಡನೆ ಇಂದ್ರಜಿತ್ತು "ಅಯ್ಯೋ, ಬ್ರಹ್ಮಾಸ್ತ್ರವು ಸಡಿಲಿಹೋಯಿತು. ಇವನು ಹಗ್ಗದಿಂದ ಬಿಗಿಯಲ್ಪಟ್ಟಮೇಲೆ ಬ್ರಹ್ಮಾಸ್ತ್ರಕ್ಕೆ ಮಣಿಯುವುದಿಲ್ಲ. ನನ್ನ ದೊಡ್ಡ ಪ್ರಯತ್ನವೂ ವ್ಯರ್ಥವಾಯಿತು. ಮಂತ್ರಪದ್ಧತಿಯನ್ನು ರಾಕ್ಷಸರು ತಿಳಿದುಕೊಳ್ಳದೇ ಹೋದರು. ಬ್ರಹ್ಮಾಸ್ತ್ರವು ವಿಫಲವಾದಮೇಲೆ ಇನ್ನು ಯಾವ ಅಸ್ತ್ರವೂ ಕೆಲಸ ಮಾಡುವುದಿಲ್ಲ. ಈಗ ನಾವೆಲ್ಲರೂ ಘೋರವಿಪತ್ತಿನಲ್ಲಿ ಸಿಕ್ಕಿಬಿದ್ದೆವು" ಎಂದು ಚಿಂತಾಕ್ರಾಂತನಾದನು (೪೯–೫೦). ಆದರೆ ತಾನು ಬ್ರಹ್ಮಾಸ್ತ್ರದಿಂದ ಬಿಡುಗಡೆ ಹೊಂದಿದೆನೆಂಬುದನ್ನು ಹನುಮಂತನು ತೋರಿಸಿಕೊಳ್ಳಲಿಲ್ಲ. ಕ್ರೂರಿಗಳಾದ ರಾಕ್ಷಸರು ಹಗ್ಗಗಳಿಂದ ಬಿಗಿದು ದೊಣ್ಣೆಗಳಿಂದಲೂ ಮುಷ್ಟಿಗಳಿಂದಲೂ ಅವನನ್ನು ಹೊಡೆಯುತ್ತ ರಾವಣನ ಸಮೀಪಕ್ಕೆ ಎಳೆದುಕೊಂಡು ಹೋದರು (೫೧–೫೨). ಅವನು ಬ್ರಹ್ಮಾಸ್ತ್ರದಿಂದ ವಿಮುಕ್ತನಾಗಿ ಹಗ್ಗಗಳಿಂದ ಮಾತ್ರ ಬಿಗಿಯಲ್ಪಟ್ಟಿರುವ

ವ್ಯದರ್ಶಯತ್ತತ್ರ ಮಹಾಬಲಂ ತಂ
ಹರಿಪ್ರವೀರಂ ಸಗಣಾಯ ರಾಜ್ಞೇ ॥ ೫೩

ತಂ ಮತ್ತಮಿವ ಮಾತಂಗಂ ಬದ್ಧಂ ಕಪಿವರೋತ್ತಮಮ್ ।
ರಾಕ್ಷಸಾ ರಾಕ್ಷಸೇಂದ್ರಾಯ ರಾವಣಾಯ ನ್ಯವೇದಯನ್ ॥ ೫೪

ಕೋಽಯಂ ಕಸ್ಯ ಕುತೋ ವಾತ್ರ ಕಿಂ ಕಾರ್ಯಂ ಕೋ ವ್ಯಪಾಶ್ರಯಃ ।
ಇತಿ ರಾಕ್ಷಸವೀರಾಣಾಂ ತತ್ರ ಸಂಜಜ್ಞಿರೇ ಕಥಾಃ ॥ ೫೫

ಹನ್ಯತಾಂ ದಹ್ಯತಾಂ ವಾಪಿ ಭಕ್ಷ್ಯತಾಮಿತಿ ಚಾಪರೇ ।
ರಾಕ್ಷಸಾಸ್ತತ್ರ ಸಂಕ್ರುದ್ಧಾಃ ಪರಸ್ಪರಮಥಾಬ್ರುವನ್ ॥ ೫೬

ಅತೀತ್ಯ ಮಾರ್ಗಂ ಸಹಸಾ ಮಹಾತ್ಮಾ
ಸ ತತ್ರ ರಕ್ಷೋಽಧಿಪಪಾದಮೂಲೇ ।
ದದರ್ಶ ರಾಜ್ಞಃ ಪರಿಚಾರವೃದ್ಧಾನ್
ಗೃಹಂ ಮಹಾರತ್ನವಿಭೂಷಿತಂ ಚ ॥ ೫೭

ಸ ದದರ್ಶ ಮಹಾತೇಜಾ ರಾವಣಃ ಕಪಿಸತ್ತಮಮ್ ।
ರಕ್ಷೋಭಿರ್ವಿಕೃತಾಕಾರೈಃ ಕೃಷ್ಯಮಾಣಮಿತಸ್ತತಃ ॥ ೫೮

ನೆಂದು ಅರಿತಿದ್ದ ಇಂದ್ರಜಿತ್ತು ಹನುಮಂತನನ್ನು ಪರಿವಾರಸಮೇತನಾಗಿ ಸಭೆಯಲ್ಲಿ ಕುಳಿತಿದ್ದ ರಾವಣನಿಗೆ ತೋರಿಸಿದನು. ಇತರ ರಾಕ್ಷಸರೂ ಕೂಡ ಸೆರೆಹಿಡಿದ ಮದ್ದಾನೆಯಂತಿದ್ದ ವಾನರಶ್ರೇಷ್ಠನನ್ನು ರಾವಣನಿಗೆ ತೋರಿಸುತ್ತಿದ್ದರು (೫೩–೫೪). ಸಭೆಯಲ್ಲಿ ನೆರೆದಿದ್ದ ರಾಕ್ಷಸರು "ಯಾರಿವನು ? ಯಾರ ಮಗ ? ಎಲ್ಲಿಂದ ಬಂದಿದ್ದಾನೆ ? ಇಲ್ಲಿ ಏನು ಕೆಲಸ ? ಇವನ ಆಶ್ರಯದಾತನು ಯಾರು ?" ಎಂದು ತಮ್ಮತಮ್ಮಲ್ಲಿ ಮಾತಾಡಿಕೊಳ್ಳುತ್ತಿದ್ದರು. ಕೆಲವರು ಕ್ರುದ್ಧರಾಗಿ "ಈ ಕಪಿಯನ್ನು ಕೊಂದುಬಿಡಬೇಕು ಸುಟ್ಟುಬಿಡಬೇಕು, ತಿಂದುಬಿಡಬೇಕು" ಎಂದು ಹೇಳುತ್ತಿದ್ದರು (೫೫–೫೬). ಇಷ್ಟರಲ್ಲಿ ಆಂಜನೇಯನು ಮುಂದೆ ಬಂದು ರಾವಣನ ಪಾದದ ಬಳಿ ಕುಳಿತಿದ್ದ ಮಂತ್ರಿವೃದ್ಧರನ್ನೂ ಶ್ರೇಷ್ಠ ರತ್ನಗಳಿಂದ ಭೂಷಿತವಾದ ಅರಮನೆಯನ್ನೂ ನೋಡಿದನು. ವಿಕಾರಿಗಳಾದ ರಾಕ್ಷಸರು ಎಳೆದು ತರುತ್ತಿದ್ದ ವಾರನಶ್ರೇಷ್ಠನನ್ನು ರಾವಣನು ಕಂಡನು. ಈ ವಾನರಶ್ರೇಷ್ಠನೂ ತೇಜೋಬಲಗಳಿಂದ ಯುಕ್ತನಾಗಿ

ರಾಕ್ಷಸಾಧಿಪತಿಂ ಚಾಪಿ ದದರ್ಶ ಕಪಿಸತ್ತಮಃ ।
ತೇಜೋಬಲಸಮಾಯುಕ್ತಂ ತಪಂತಮಿವ ಭಾಸ್ಕರಮ್ ॥ ೫೯

ಸ ರೋಷಸಂವರ್ತಿತತಾಮ್ರದೃಷ್ಟಿ-
ರ್ದಶಾನನಸ್ತಂ ಕಪಿಮನ್ವವೇಕ್ಷ್ಯ ।
ಅಥೋಪವಿಷ್ಟಾನ್ ಕುಲಶೀಲವೃದ್ಧಾನ್
ಸಮಾದಿಶತ್ತಂ ಪ್ರತಿ ಮಂತ್ರಿಮುಖ್ಯಾನ್ ॥ ೬೦

ಯಥಾಕ್ರಮಂ ತೈಃ ಸ ಕಪಿರ್ವಿಪೃಷ್ಟಃ
ಕಾರ್ಯಾರ್ಥಮರ್ಥಸ್ಯ ಚ ಮೂಲಮಾದೌ ।
ನಿವೇದಯಾಮಾಸ ಹರೀಶ್ವರಸ್ಯ
ದೂತಃ ಸಕಾಶಾದಹಮಾಗತೋಽಸ್ಮಿ ॥ ೬೧

ಇತಿ ಶ್ರೀಮದ್ರಾಮಾಯಣೇ ಸುಂದರಕಾಂಡೇ ಅಷ್ಟಚತ್ವಾರಿಂಶಃ ಸರ್ಗಃ

ಸೂರ್ಯನಂತೆ ಬೆಳಗುತ್ತಿದ್ದ ರಾಕ್ಷಸೇಶ್ವರನನ್ನು ಕಂಡನು (೫೭–೫೯). ಆಗ ರಾವಣನು ಹನುಮಂತನನ್ನು ದೃಷ್ಟಿಸಿ ನೋಡಿ ಕೋಪದಿಂದ ಕೆಂಪಡರಿದ ಕಣ್ಣುಗಳನ್ನು ತಿರುಗಿಸುತ್ತ, ಅವನ ಸಂಗತಿಯನ್ನು ವಿಚಾರಿಸಬೇಕೆಂದು ಕುಲಶೀಲ ವೃದ್ಧರಾದ ಮಂತ್ರಿಗಳಿಗೆ ಆಜ್ಞಾಪಿಸಿದನು. ಅವರು ಹನುಮಂತನನ್ನು ಕುರಿತು ''ನೀನು ಬಂದ ಕೆಲಸವೇನು ? ಯಾರು ನಿನ್ನನ್ನು ಕಳುಹಿಸಿದರು ?'' ಎಂದು ಪ್ರಶ್ನೆ ಮಾಡಿದರು. ''ನಾನು ದೂತನಾಗಿ ಬಂದಿದ್ದೇನೆ. ಕಪೀಶ್ವರನಾದ ಸುಗ್ರೀವನು ನನ್ನನ್ನು ಕಳುಹಿಸಿದ್ದಾನೆ '' ಎಂದು ಹನುಮಂತನು ತಿಳಿಸಿದನು (೬೦–೬೧).

ಇಲ್ಲಿಗೆ ಶ್ರೀಮದ್ರಾಮಯಣದ ಸುಂದರಕಾಂಡದಲ್ಲಿ ನಲವತ್ತೆಂಟನೆಯ ಸರ್ಗ

ಏಕೋನಪಂಚಾಶಃ ಸರ್ಗಃ

ರಾವಣಪ್ರಭಾವದರ್ಶನಮ್

ತತಃ ಸ ಕರ್ಮಣಾ ತಸ್ಯ ವಿಸ್ಮಿತೋ ಭೀಮವಿಕ್ರಮಃ ।
ಹನುಮಾನ್ ರೋಷತಾಮ್ರಾಕ್ಷೋ ರಕ್ಷೋಽಧಿಪಮವೈಕ್ಷತ ॥ ೧

ಭ್ರಾಜಮಾನಂ ಮಹಾರ್ಹೇಣ ಕಾಂಚನೇನ ವಿರಾಜತಾ ।
ಮುಕ್ತಾಜಾಲವೃತೇನಾಥ ಮಕುಟೇನ ಮಹಾದ್ಯುತಿಮ್ ॥ ೨

ವಜ್ರಸಂಯೋಗಸಂಯುಕ್ತೈರ್ಮಹಾರ್ಹಮಣಿವಿಗ್ರಹೈಃ ।
ಹೈಮೈರಾಭರಣೈಶ್ಚಿತ್ರೈರ್ಮನಸೇವ ಪ್ರಕಲ್ಪಿತೈಃ ॥ ೩

ಮಹಾರ್ಹಕ್ಷೌಮಸಂವೀತಂ ರಕ್ತಚಂದನರೂಷಿತಮ್ ।
ಸ್ವನುಲಿಪ್ತಂ ವಿಚಿತ್ರಾಭಿರ್ವಿವಿಧಾಭಿಶ್ಚ ಭಕ್ತಿಭಿಃ ॥ ೪

ವಿವೃತೈರ್ದರ್ಶನೀಯೈಶ್ಚ ರಕ್ತಾಕ್ಷೈರ್ಭೀಮದರ್ಶನೈಃ ।
ದೀಪ್ತತೀಕ್ಷ್ಣಮಹಾದಂಷ್ಟ್ರೈಃ ಪ್ರಲಂಬದಶನಚ್ಛದೈಃ ॥ ೫

ಸರ್ಗ ೪೯

ಹನುಮಂತನು ರಾವಣನ ವೈಭವವನ್ನು ಕಂಡು ಆಶ್ಚರ್ಯಪಡುವುದು.

ಪರಾಕ್ರಮಿಯಾದ ಆಂಜನೇಯನು ತನ್ನನ್ನು ಸೆರೆಹಿಡಿಸಿದ್ದರಿಂದ ವಿಸ್ಮಿತನಾಗಿ ಕಣ್ಣನ್ನು ಕೆಂಪಗೆಮಾಡಿಕೊಂಡು ರಾವಣನನ್ನು ನೋಡುತ್ತ ನಿಂತನು. ರಾವಣನಾದರೋ ಮುತ್ತಿನ ಕುಚ್ಚುಗಳಿಂದ ಅಲಂಕೃತವಾದ ಸುವರ್ಣಮಯ ಕಿರೀಟವನ್ನು ಧರಿಸಿದ್ದನು (೧–೨). ವಜ್ರ ಮುಂತಾದ ಮಹಾಮಣಿಗಳಿಂದ ಖಚಿತವಾಗಿಯೂ ಮನಸ್ಸಿನಿಂದಲೇ ನಿರ್ಮಿತವಾಗಿವೆಯೋ ಎಂಬಷ್ಟು ಸುಂದರವಾಗಿಯೂ ಚಿತ್ರವಿಚಿತ್ರವಾಗಿಯೂ ಇದ್ದ ಸುವರ್ಣಾಭರಣಗಳನ್ನು ಹಾಕಿಕೊಂಡಿದ್ದನು. ಉತ್ತಮವಾದ ರೇಷ್ಮೆಯ ದುಕೂಲವನ್ನುಟ್ಟು ಮೈಗೆ ರಕ್ತಚಂದನವನ್ನೂ ಕಸ್ತೂರಿ ಮುಂತಾದ ಲೇಪನಗಳನ್ನೂ ಪೂಸಿಕೊಂಡಿದ್ದನು (೩–೪). ಮಹಾತೇಜಸ್ವಿಯಾದ ರಾವಣನಿಗೆ ಅಂದವಾದ ಹತ್ತು ತಲೆಗಳಿದ್ದವು.

ಶಿರೋಭಿರ್ದಶಭಿರ್ವೀರಂ ಭ್ರಾಜಮಾನಂ ಮಹೌಜಸಮ್ ।
ನಾನಾವ್ಯಾಲಸಮಾಕೀರ್ಣೈಃ ಶಿಖರೈರಿವ ಮಂದರಮ್ ॥ ೬

ನೀಲಾಂಜನಚಯಪ್ರಖ್ಯಂ ಹಾರೇಣೋರಸಿ ರಾಜತಾ ।
ಪೂರ್ಣಚಂದ್ರಾಭವಕ್ತ್ರೇಣ ಸಬಲಾಕಮಿವಾಂಬುದಮ್ ॥ ೭

ಬಾಹುಭಿರ್ಬದ್ಧಕೇಯೂರೈಶ್ಚಂದನೋತ್ತಮರೂಷಿತೈಃ ।
ಭ್ರಾಜಮಾನಾಂಗದೈಃ ಪೀನೈಃ ಪಂಚಶೀರ್ಷೈರಿವೋರಗೈಃ ॥ ೮

ಮಹತಿ ಸ್ಫಾಟಿಕೇ ಚಿತ್ರೇ ರತ್ನಸಂಯೋಗಸಂಸ್ಕೃತೇ ।
ಉತ್ತಮಾಸ್ತರಣಾಸ್ತೀರ್ಣೇ ಸೂಪವಿಷ್ಟಂ ವರಾಸನೇ ॥ ೯

ಅಲಂಕೃತಾಭಿರತ್ಯರ್ಥಂ ಪ್ರಮಾದಾಭಿಃ ಸಮಂತತಃ ।
ವಾಲವ್ಯಜನಹಸ್ತಾಭಿರಾರಾತ್ ಸಮುಪಸೇವಿತಮ್ ॥ ೧೦

ದುರ್ಧರೇಣ ಪ್ರಹಸ್ತೇನ ಮಹಾಪಾರ್ಶ್ವೇನ ರಕ್ಷಸಾ ।
ಮಂತ್ರಿಭಿರ್ಮಂತ್ರತತ್ತ್ವಜ್ಞೈರ್ನಿಕುಂಭೇನ ಚ ಮಂತ್ರಿಣಾ ॥ ೧೧

ಕೆಂಪಾದ ಕಣ್ಣುಗಳು. ತೀಕ್ಷ್ಣವಾದ ದೊಡ್ಡ ದೊಡ್ಡ ಹಲ್ಲುಗಳು. ಜೋಲುವ ಭಾರಿ ತುಟಿಗಳು. ರಾವಣನು ಮಂದರಪರ್ವತದಂತೆಯೂ ಅವನ ತಲೆಗಳು ನಾನಾ ದುಷ್ಟಮೃಗಗಳಿಂದ ಕೂಡಿದ ಪರ್ವತ ಶಿಖರಗಳಂತೆಯೂ ಕಾಣಿಸುತ್ತಿದ್ದವು (೫–೬). ಕಪ್ಪು ಕಾಡಿಗೆಯ ರಾಶಿಯಂತಿದ್ದ ರಾವಣನು ಪೂರ್ಣಚಂದ್ರನಂತಹ ಮಧ್ಯಮಣಿಯಿಂದ ಯುಕ್ತವಾದ ಮುತ್ತಿನ ಹಾರವನ್ನು ಧರಿಸಿದ್ದನು. ಆದ್ದರಿಂದ ಅವನು ಕೊಕ್ಕರೆಗಳ ಸಾಲಿನಿಂದ ರಂಜಿಸುವ ಮೇಘದಂತೆ ಕಾಣುತ್ತಿದ್ದನು. ಶ್ರೀಗಂಧದಿಂದ ಲಿಪ್ತವಾಗಿ ಭುಜಕೀರ್ತಿಗಳಿಂದ ಭೂಷಿತವಾದ ಅವನ ಇಪ್ಪತ್ತು ಬಾಹುಗಳು ಐದುಹೆಡೆಯ ಸರ್ಪಗಳಂತೆ ವಿರಾಜಿಸುತ್ತಿದ್ದವು (೭–೮). ರಾವಣನು ಸ್ಫಟಿಕಮಯವಾಗಿಯೂ ನಾನಾ ಚಿತ್ರಗಳಿಂದಲೂ ರತ್ನಗಳಿಂದಲೂ ಭೂಷಿತವಾಗಿಯೂ ಉತ್ತಮವಾದ ರತ್ನಗಂಬಳಿಯನ್ನು ಹಾಸಿಯೂ ಇದ್ದ ಸಿಂಹಾಸನದ ಮೇಲೆ ಮಂಡಿಸಿದ್ದನು. ಸುತ್ತಲೂ ಅಲಂಕೃತೆಯರಾದ ಸುಂದರ ಸ್ತ್ರೀಯರು ಚಾಮರವನ್ನು ಹಿಡಿದು ಬೀಸುತ್ತಿದ್ದರು (೯–೧೦). ಮಂತ್ರಾಲೋಚನೆಯಲ್ಲಿ

ಉಪೋಪವಿಷ್ಟಂ ರಕ್ಷೋಭಿಶ್ಚತುರ್ಭಿರ್ಬಲದರ್ಪಿತೈಃ ।
ಕೃತ್ಸ್ನಂ ಪರಿವೃತಂ ಲೋಕಂ ಚತುರ್ಭಿರಿವ ಸಾಗರೈಃ ॥ ೧೨

ಮಂತ್ರಿಭಿರ್ಮಂತ್ರತತ್ತ್ವಜ್ಞೈರನ್ಯೈಶ್ಚ ಶುಭಬುದ್ಧಿಭಿಃ ।
ಅನ್ವಾಸ್ಯಮಾನಂ ಸಚಿವೈಃ ಸುರೈರಿವ ಸುರೇಶ್ವರಮ್ ॥ ೧೩

ಅಪಶ್ಯದ್ರಾಕ್ಷಸಪತಿಂ ಹನುಮಾನತಿತೇಜಸಮ್ ।
ವಿಷ್ಠಿತಂ ಮೇರುಶಿಖರೇ ಸತೋಯಮಿವ ತೋಯದಮ್ ॥ ೧೪

ಸ ತೈಃ ಸಂಪೀಡ್ಯಮಾನೋಽಪಿ ರಕ್ಷೋಭಿರ್ಭೀಮವಿಕ್ರಮೈಃ ।
ವಿಸ್ಮಯಂ ಪರಮಂ ಗತ್ವಾ ರಕ್ಷೋಽಧಿಪಮವೈಕ್ಷತ ॥ ೧೫

ಭ್ರಾಜಮಾನಂ ತತೋ ದೃಷ್ಟ್ವಾ ಹನುಮಾನ್ ರಾಕ್ಷಸೇಶ್ವರಮ್ ।
ಮನಸಾ ಚಿಂತಯಾಮಾಸ ತೇಜಸಾ ತಸ್ಯ ಮೋಹಿತಃ ॥ ೧೬

ಅಹೋ ರೂಪಮಹೋ ಧೈರ್ಯಮಹೋ ಸತ್ತ್ವಮಹೋ ದ್ಯುತಿಃ ।
ಅಹೋ ರಾಕ್ಷಸರಾಜಸ್ಯ ಸರ್ವಲಕ್ಷಣಯುಕ್ತತಾ ॥ ೧೭

ನಿಪುಣರೂ ಬಲಾಢ್ಯರೂ ಆದ ದುರ್ಧರ, ಪ್ರಹಸ್ತ, ಮಹಾಪಾರ್ಶ್ವ, ನಿಕುಂಭ ಎಂಬ ನಾಲ್ವರು ಮಂತ್ರಿಗಳು ಸುತ್ತಲೂ ಕುಳಿತಿದ್ದರು. ಅವರು ನಾಲ್ಕು ಸಮುದ್ರಗಳಂತೆಯೂ ಮಧ್ಯದಲ್ಲಿದ್ದ ರಾವಣನು ಅವುಗಳಿಂದ ರಕ್ಷಿತವಾದ ಭೂಮಂಡಲದಂತೆಯೂ ತೋರುತ್ತಿದ್ದನು (೧೧–೧೨). ರಾಜನೀತಿಯನ್ನು ಬಲ್ಲ ಚಾಣಾಕ್ಷರಾದ ಇನ್ನೂ ಅನೇಕ ಸಚಿವರಿಂದ ಸೇವಿತನಾಗಿ, ದೇವತೆಗಳೊಡನಿರುವ ದೇವೇಂದ್ರನಂತೆ ಅವನು ಶೋಭಿಸುತ್ತಿದ್ದನು. ಆ ರಾವಣನು ಮೇರು ಪರ್ವತದ ಮೇಲೆ ಕುಳಿತ ಕಾಲಮೇಘದಂತೆ ಸಿಂಹಾಸನದಲ್ಲಿ ಕುಳಿತಿರುವುದನ್ನು ಹನುಮಂತನು ನೋಡಿದನು (೧೩–೧೪). ರಾಕ್ಷಸರು ಸುತ್ತಲೂ ತನ್ನನ್ನು ಪೀಡಿಸುತ್ತಿದ್ದರೂ ಹನುಮಂತನು ಆಶ್ಚರ್ಯದಿಂದ ರಾಕ್ಷಸೇಶ್ವರನನ್ನೇ ಗಮನಿಸಿ ನೋಡುತ್ತ ನಿಂತನು. ಅವನ ಅದ್ಭುತವಾದ ತೇಜಸ್ಸಿಗೆ ಮಾರುಹೋಗಿ, ಹನುಮಂತನು ''ಅಬ್ಬಾ! ಈತನ ರೂಪವೇನು! ಧೈರ್ಯವೇನು! ತೇಜಸ್ಸೇನು! ಅಬ್ಬಾ! ಈ ರಾಕ್ಷಸೇಶ್ವರನು ಸಮಸ್ತ ರಾಜಲಕ್ಷಣಗಳಿಂದಲೂ ಕೂಡಿದ್ದಾನೆ (೧೫–೧೭).

ಯದ್ಯಧರ್ಮೋ ನ ಬಲವಾನ್ ಸ್ಯಾದಯಂ ರಾಕ್ಷಸೇಶ್ವರಃ ।
ಸ್ಯಾದಯಂ ಸುರಲೋಕಸ್ಯ ಸಶಕ್ರಸ್ಯಾಪಿ ರಕ್ಷಿತಾ ॥ ೧೮

ಅಸ್ಯ ಕ್ರೂರೈರ್ನೃಶಂಸೈಶ್ಚ ಕರ್ಮಭಿರ್ಲೋಕಕುತ್ಸಿತೈಃ ।
ತೇನ ಬಿಭ್ಯತಿ ಖಲ್ವಸ್ಮಾಲ್ಲೋಕಾಃ ಸಾಮರದಾನವಾಃ ॥ ೧೯

ಅಯಂ ಹ್ಯುತ್ಸಹತೇ ಕ್ರುದ್ಧಃ ಕರ್ತುಮೇಕಾರ್ಣವಂ ಜಗತ್ ।
ಇತಿ ಚಿಂತಾಂ ಬಹುವಿಧಾಮಕರೋನ್ಮತಿಮಾನ್ ಕಪಿಃ ॥ ೨೦

ದೃಷ್ಟ್ವಾ ರಾಕ್ಷಸರಾಜಸ್ಯ ಪ್ರಭಾವಮಮಿತೌಜಸಃ ॥

ಇತಿ ಶ್ರೀಮದ್ರಾಮಾಯಣೇ ಸುಂದರಕಾಂಡೇ ಏಕೋನಪಂಚಾಶಃ ಸರ್ಗಃ

ಇವನಲ್ಲಿ ಬಲವಾದ ಅಧರ್ಮ ಒಂದು ಇಲ್ಲದಿದ್ದ ಪಕ್ಷದಲ್ಲಿ ಇವನು ರಾಕ್ಷಸರಿಗೆ ಮಾತ್ರವಲ್ಲ, ದೇವತೆಗಳಿಗೂ ದೇವೇಂದ್ರನಿಗೂ ಅಧಿಪತಿಯಾಗಬಲ್ಲನು. ಈತನು ಲೋಕನಿಂದಿತವಾದ ಕ್ರೂರಕಾರ್ಯಗಳನ್ನು ನಿರ್ದಯವಾಗಿ ನಡೆಸುತ್ತಿರುವುದರಿಂದ, ದೇವದಾನವಾದಿ ಸಮಸ್ತ ಜನರೂ ಭೀತಿಗೊಂಡಿದ್ದಾರೆ. ಈತನು ಕ್ರುದ್ಧನಾದರೆ ಜಗತ್ತನ್ನೇ ಸಮುದ್ರದಲ್ಲಿ ಮುಳುಗಿಸಬಲ್ಲನು'' ಎಂಬುದಾಗಿ ರಾವಣನ ಪ್ರಭಾವವನ್ನು ಕಂಡು ಮನಸ್ಸಿನಲ್ಲಿ ನಾನಾವಿಧವಾಗಿ ಎಣಿಸುತ್ತಿದ್ದನು (೧೮–೨೦).

ಇಲ್ಲಿಗೆ ಶ್ರೀಮದ್ರಾಮಾಯಣದ ಸುಂದರಕಾಂಡದಲ್ಲಿ ನಲವತ್ತೊಂಬತ್ತನೆಯ ಸರ್ಗ

ಪಂಚಾಶಃ ಸರ್ಗಃ

ಪ್ರಹಸ್ತಪ್ರಶ್ನಃ

ತಮುದ್ವೀಕ್ಷ್ಯ ಮಹಾಬಾಹುಃ ಪಿಂಗಾಕ್ಷಂ ಪುರತಃ ಸ್ಥಿತಮ್ ।
ರೋಷೇಣ ಮಹತಾವಿಷ್ಟೋ ರಾವಣೋ ಲೋಕರಾವಣಃ ॥ ೧

ಶಂಕಾಹತಾತ್ಮಾ ದಧ್ಯೌ ಸ ಕಪೀಂದ್ರಂ ತೇಜಸಾವೃತಮ್ ।
ಕಿಮೇಷ ಭಗವಾನ್ನಂದೀ ಭವೇತ್ ಸಾಕ್ಷಾದಿಹಾಗತಃ ॥ ೨

ಯೇನ ಶಪ್ತೋಽಸ್ಮಿ ಕೈಲಾಸೇ ಮಯಾ ಸಂಚಾಲಿತೇ ಪುರಾ ।
ಸೋಽಯಂ ವಾನರಮೂರ್ತಿಃ ಸ್ಯಾತ್ ಕಿಂಸ್ವಿದ್ಬಾಣೋಽಪಿ ವಾಸುರಃ ॥

ಸ ರಾಜಾ ರೋಷತಾಮ್ರಾಕ್ಷಃ ಪ್ರಹಸ್ತಂ ಮಂತ್ರಿಸತ್ತಮಮ್ ।
ಕಾಲಯುಕ್ತಮುವಾಚೇದಂ ವಚೋ ವಿಪುಲಮರ್ಥವತ್ ॥ ೪

ಸರ್ಗ ೫೦

ಪ್ರಹಸ್ತನ ಪ್ರಶ್ನೆಗಳಿಗೆ ಹನುಮಂತನು ಉತ್ತರ ಹೇಳುವುದು.

ಸಮಸ್ತ ಲೋಕವನ್ನೂ ಗೋಳಾಡಿಸುತ್ತಿದ್ದ ರಾವಣನು ತನ್ನೆದುರಿಗೆ ಬಂದು ನಿಂತ ಹನುಮಂತನನ್ನು ನೋಡಿದೊಡನೆ ಕೋಪಾವಿಷ್ಟನಾದನು. ಅವನ ತೇಜಸ್ಸನ್ನು ನೋಡಿ ರಾವಣನಿಗೆ ಮನಸ್ಸಿನಲ್ಲಿ "ಹಿಂದೆ ಕೈಲಾಸದಲ್ಲಿ ನನಗೆ ಶಾಪವನ್ನು ಕೊಟ್ಟಿದ್ದ ಭಗವಾನ್ ನಂದಿಕೇಶ್ವರನೇ ಇವನಾಗಿರಬಹುದೆ ? ಅಥವಾ ಬಾಣಾಸುರನು ಈ ವಾನರಾಕೃತಿಯಿಂದ ಬಂದಿರಬಹುದೆ ?" ಎಂದು ಶಂಕೆಯುಂಟಾಯಿತು* (೧–೩). ಅವನು ಮುಖ್ಯಮಂತ್ರಿಯಾದ ಪ್ರಹಸ್ತನನ್ನು ಕಾಲೋಚಿತವೂ ಅರ್ಥಗರ್ಭಿತವೂ ಆದ ಮಾತಿನಿಂದ "ಪ್ರಹಸ್ತ, ಈ ದುರಾತ್ಮನು ಯಾರೆಂದು ಕೇಳು. ಇವನು ಎಲ್ಲಿಂದ ಬಂದಿದ್ದಾನೆ ? ಅಶೋಕ ವನವನ್ನು ನಾಶ

---

* ರಾವಣನು ಕೈಲಾಸದಲ್ಲಿ ನಂದೀಕೇಶ್ವರನನ್ನು ನೋಡಿ ಕಪಿಯ ಮುಖದವನೆಂದು ಹಾಸ್ಯಮಾಡಿದ್ದನು. ಆಗ ನಂದಿಯು ' ನಿನಗೆ ಕಪಿಯ ಮುಖದವರಿಂದಲೇ ನಾಶ ಒದಗಲಿ ' ಎಂದು ರಾವಣನನ್ನು ಶಪಿಸಿದ್ದನು. ಬಾಣಾಸುರನು ಶಿವಭಕ್ತನಾದ್ದರಿಂದ ನಂದಿಯು ಅವನನ್ನು ಕಳಿಸಿರಬಹುದೆಂದು ರಾವಣನಿಗೆ ಸಂದೇಹವಾಯಿತು.

ದುರಾತ್ಮಾ ಪೃಚ್ಛ್ಯತಾಮೇಷ ಕುತಃ ಕಿಂ ವಾಸ್ಯ ಕಾರಣಮ್ ।
ವನಭಂಗೇ ಚ ಕೋಽಸ್ಯಾರ್ಥೋ ರಾಕ್ಷಸೀನಾಂ ಚ ತರ್ಜನೇ ॥ ೫

ಮತ್ಪುರೀಮಪ್ರಧೃಷ್ಯಾಂ ವಾ ಗಮನೇ ಕಿಂ ಪ್ರಯೋಜನಮ್ ।
ಆಯೋಧನೇ ವಾ ಕಿಂ ಕಾರ್ಯಂ ಪೃಚ್ಛ್ಯತಾಮೇಷ ದುರ್ಮತಿಃ ॥ ೬

ರಾವಣಸ್ಯ ವಚಃ ಶ್ರುತ್ವಾ ಪ್ರಹಸ್ತೋ ವಾಕ್ಯಮಬ್ರವೀತ್ ।
ಸಮಾಶ್ವಸಿಹಿ ಭದ್ರಂ ತೇ ನ ಭೀಃ ಕಾರ್ಯಾ ತ್ವಯಾ ಕಪೇ ॥ ೭

ಯದಿ ತಾವತ್ತ್ವಮಿಂದ್ರೇಣ ಪ್ರೇಷಿತೋ ರಾವಣಾಲಯಮ್ ।
ತತ್ತ್ವಮಾಖ್ಯಾಹಿ ಮಾ ಭೂತ್ತೇ ಭಯಂ ವಾನರ ಮೋಕ್ಷ್ಯಸೇ ॥ ೮

ಯದಿ ವೈಶ್ರವಣಸ್ಯ ತ್ವಂ ಯಮಸ್ಯ ವರುಣಸ್ಯ ವಾ ।
ಚಾರರೂಪಮಿದಂ ಕೃತ್ವಾ ಪ್ರವಿಷ್ಟೋ ನಃ ಪುರೀಮಿಮಾಮ್ ॥ ೯

ವಿಷ್ಣುನಾ ಪ್ರೇಷಿತೋ ವಾಪಿ ದೂತೋ ವಿಜಯಕಾಂಕ್ಷಿಣಾ ।
ನ ಹಿ ತೇ ವಾನರಂ ತೇಜೋ ರೂಪಮಾತ್ರಂ ತು ವಾನರಮ್ ॥ ೧೦

ತತ್ತ್ವತಃ ಕಥಯಸ್ವಾದ್ಯ ತತೋ ವಾನರ ಮೋಕ್ಷ್ಯಸೇ ।
ಅನೃತಂ ವದತಶ್ಚಾಪಿ ದುರ್ಲಭಂ ತವ ಜೀವಿತಮ್ ॥ ೧೧

ಮಾಡುವುದಕ್ಕೂ ರಾಕ್ಷಸಿಯರನ್ನು ಹೆದರಿಸುವುದಕ್ಕೂ ಕಾರಣವೇನು? ನನ್ನ ನಗರಕ್ಕೆ ಏಕೆ ಬಂದಿದ್ದಾನೆ? ನಮ್ಮೊಡನೆ ಯುದ್ಧ ಮಾಡಿದ್ದೇಕೆ?—ಎಂದು ಈ ದುಷ್ಟನನ್ನು ವಿಚಾರಿಸು'' ಎಂದನು (೪–೬). ಆಗ ಪ್ರಹಸ್ತನು ''ಎಲೈ ಕಪಿಯೇ, ಸಮಾಧಾನದಿಂದಿರು, ಒಳ್ಳೆಯದಾಗುವುದು. ಅಂಜಬೇಡ! ಇಂದ್ರನೇನಾದರೂ ನಿನ್ನನ್ನು ಇಲ್ಲಿಗೆ ಕಳಿಸಿದ್ದಾನೆಯೆ? ಸತ್ಯವನ್ನು ಹೇಳು; ಹೆದರಬೇಡ. ನಿನ್ನನ್ನು ಬಿಟ್ಟುಬಿಡುತ್ತೇವೆ (೭–೮). ಕುಬೇರನಿಗಾಗಲಿ, ಯಮನಿಗಾಗಲಿ, ವರುಣನಿಗಾಗಲಿ ಕಿಂಕರನಾಗಿ ನಮ್ಮ ನಗರಕ್ಕೆ ಬಂದಿರುವೆಯಾ? ಅಥವಾ ನಮ್ಮನ್ನು ಜಯಿಸುವುದಕ್ಕಾಗಿ ವಿಷ್ಣುವೇನಾದರೂ ಕಳಿಸಿದ್ದಾನೊ? ರೂಪದಲ್ಲಿ ಮಾತ್ರ ನೀನು ವಾನರನಾಗಿದ್ದರೂ ನಿನ್ನ ತೇಜಸ್ಸು ಯಾವ ವಾನರನಿಗೂ ಇಲ್ಲ (೯–೧೦). ಎಲೈ ಕಪಿಯೆ, ನೀನು ಸತ್ಯವನ್ನು ಹೇಳಿದರೆ ನಿನ್ನನ್ನು ಬಿಟ್ಟುಬಿಡುತ್ತೇವೆ. ಸುಳ್ಳು ಹೇಳಿದರೆ

ಅಥವಾ ಯನ್ನಿಮಿತ್ತಂ ತೇ ಪ್ರವೇಶೋ ರಾವಣಾಲಯೇ ।
ಏವಮುಕ್ತೋ ಹರಿವರಸ್ತದಾ ರಕ್ಷೋಗಣೇಶ್ವರಮ್ ॥ ೧೨

ಅಬ್ರವೀನ್ನಾಸ್ಮಿ ಶಕ್ರಸ್ಯ ಯಮಸ್ಯ ವರುಣಸ್ಯ ವಾ ।
ಧನದೇನ ನ ಮೇ ಸಖ್ಯಂ ವಿಷ್ಣುನಾ ನಾಸ್ಮಿ ಚೋದಿತಃ ॥ ೧೩

ಜಾತಿರೇವ ಮಮ ತ್ವೇಷಾ ವಾನರೋಽಹಮಿಹಾಗತಃ ।
ದರ್ಶನೇ ರಾಕ್ಷಸೇಂದ್ರಸ್ಯ ದುರ್ಲಭೇ ತದಿದಂ ಮಯಾ ॥ ೧೪

ವನಂ ರಾಕ್ಷಸರಾಜಸ್ಯ ದರ್ಶನಾರ್ಥೇ ವಿನಾಶಿತಮ್ ।
ತತಸ್ತೇ ರಾಕ್ಷಸಾಃ ಪ್ರಾಪ್ತಾ ಬಲಿನೋ ಯುದ್ಧಕಾಂಕ್ಷಿಣಃ ॥ ೧೫

ರಕ್ಷಣಾರ್ಥಂ ತು ದೇಹಸ್ಯ ಪ್ರತಿಯುದ್ಧಾ ಮಯಾ ರಣೇ ।
ಅಸ್ತ್ರಪಾಶೈರ್ನ ಶಕ್ಯೋಽಹಂ ಬದ್ಧುಂ ದೇವಾಸುರೈರಪಿ ॥ ೧೬

ಪಿತಾಮಹಾದೇವ ವರೋ ಮಮಾಪ್ಯೇಷೋಽಭ್ಯುಪಾಗತಃ ।
ರಾಜಾನಂ ದ್ರಷ್ಟುಕಾಮೇನ ಮಯಾಸ್ತ್ರಮನುವರ್ತಿತಮ್ ॥ ೧೭

ಮಾತ್ರ ನಿನ್ನ ಪ್ರಾಣ ಉಳಿಯುವುದಿಲ್ಲ. ಅಥವಾ (ನೀನು ಯಾರ ಕಿಂಕರನೂ ಅಲ್ಲದಿದ್ದರೆ) ರಾವಣೇಶ್ವರನ ಪಟ್ಟಣಕ್ಕೆ ನೀನು ಏಕೆ ಬಂದೆ ?'' ಎಂದು ಕೇಳಿದನು. ಆಗ ಹನುಮಂತನು (ಪ್ರಹಸ್ತನನ್ನು ಲಕ್ಷಿಸದೆ) ರಾವಣನ ಕಡೆಗೆ ತಿರುಗಿ ''ನಾನು ಇಂದ್ರನಿಗಾಗಲಿ, ಯಮನಿಗಾಗಲಿ, ವರುಣನಿಗಾಗಲಿ ಕಿಂಕರನಲ್ಲ. ಕುಬೇರ ನೊಡನೆಯೂ ನನಗೆ ಸ್ನೇಹವಿಲ್ಲ. ವಿಷ್ಣುವೂ ನನ್ನನ್ನು ಕಳಿಸಿಲ್ಲ(೧೧-೧೩). ನಾನು ವಾನರಜಾತಿಯವನೇ ಹೌದು. ರಾಕ್ಷಸರಾಜನಾದ ನಿನ್ನ ದರ್ಶನವು ದುರ್ಲಭವೆಂದು ತಿಳಿದು, ಈ ನೆವದಿಂದಲಾದರೂ ನಿನ್ನ ದರ್ಶನವಾದೀತೆಂದು ಅಶೋಕವನವನ್ನು ನಾಶ ಮಾಡಿದೆನು. ಆಗ ಬಲಶಾಲಿಗಳಾದ ರಾಕ್ಷಸರು ನನ್ನ ಮೇಲೆ ಯುದ್ಧಕ್ಕೆ ಬಂದರು (೧೪-೧೫). ಆತ್ಮರಕ್ಷಣೆಗಾಗಿ ನಾನು ಯುದ್ಧಮಾಡಬೇಕಾಯಿತು. ಯಾವ ಅಸ್ತ್ರಗಳಿಂದಲೂ ಪಾಶಗಳಿಂದಲೂ ನನ್ನನ್ನು ಕಟ್ಟುವುದಕ್ಕೆ ದೇವಾಸುರರಿಗೂ ಶಕ್ಯವಿಲ್ಲ. ನಾನು ಬ್ರಹ್ಮದೇವನಿಂದ ಈ ವರವನ್ನು ಪಡೆದಿದ್ದೇನೆ. ರಾಕ್ಷಸರಾಜನಾದ ನಿನ್ನನ್ನು ನೋಡುವ ಅಪೇಕ್ಷೆಯಿಂದ ಬ್ರಹ್ಮಾಸ್ತ್ರಕ್ಕೆ

ವಿಮುಕ್ತೋ ಹ್ಯಹಮಸ್ತ್ರೇಣ ರಾಕ್ಷಸೈಸ್ತ್ವಭಿಪೀಡಿತಃ ।
ಕೇನಚೀದ್ರಾಜಕಾರ್ಯೇಣ ಸಂಪ್ರಾಪ್ತೋಽಸ್ಮಿ ತವಾಂತಿಕಮ್ ॥ ೧೮

ದೂತೋಽಹಮಿತಿ ವಿಜ್ಞೇಯೋ ರಾಘವಸ್ಯಾಮಿತೌಜಸಃ ।
ಶ್ರೂಯತಾಂ ಚಾಪಿ ವಚನಂ ಮಮ ಪಥ್ಯಮಿದಂ ಪ್ರಭೋ ॥ ೧೯

ಇತಿ ಶ್ರೀಮದ್ರಾಮಾಯಣೇ ಸುಂದರಕಾಂಡೇ ಪಂಚಾಶಃ ಸರ್ಗಃ

ಮಣಿದು ಬದ್ಧನಾಗಿದ್ದೇನೆ (೧೬–೧೭). ರಾಕ್ಷಸರು ಹಗ್ಗಗಳಿಂದ ನನ್ನನ್ನು ಕಟ್ಟಿದಾಗಲೇ ಬ್ರಹ್ಮಾಸ್ತ್ರವು ಬಿಟ್ಟುಹೋಯಿತು. ಒಂದಾನೊಂದು ರಾಜಕಾರ್ಯಕ್ಕಾಗಿ ನಿನ್ನ ಬಳಿಗೆ ಬಂದಿದ್ದೇನೆ. ನಾನು ಮಹಾತೇಜಸ್ವಿಯಾದ ಶ್ರೀರಾಮನ ದೂತನೆಂದು ತಿಳಿ. ರಾಜ, ನಿನಗೆ ಪಥ್ಯವಾದ ಕೆಲವು ಮಾತುಗಳನ್ನು ಹೇಳುವೆನು, ಕೇಳು'' ಎಂದನು (೧೮–೧೯).

ಇಲ್ಲಿಗೆ ಶ್ರೀಮದ್ರಾಮಯಣದ ಸುಂದರಕಾಂಡದಲ್ಲಿ ಐವತ್ತನೆಯ ಸರ್ಗ

ಏಕಪಂಚಾಶಃ ಸರ್ಗಃ

ಹನೂಮದುಪದೇಶಃ

ತಂ ಸಮೀಕ್ಷ್ಯ ಮಹಾಸತ್ತ್ವಂ ಸತ್ತ್ವವಾನ್ ಹರಿಸತ್ತಮಃ ।
ವಾಕ್ಯಮರ್ಥವದವ್ಯಗ್ರಸ್ತಮುವಾಚ ದಶಾನನಮ್ ॥ ೧

ಅಹಂ ಸುಗ್ರೀವಸಂದೇಶಾದಿಹ ಪ್ರಾಪ್ತಸ್ತವಾಲಯಮ್ ।
ರಾಕ್ಷಸೇಂದ್ರ ಹರೀಶಸ್ತ್ವಾಂ ಭ್ರಾತಾ ಕುಶಲಮಬ್ರವೀತ್ ॥ ೨

ಭ್ರಾತುಃ ಶೃಣು ಸಮಾದೇಶಂ ಸುಗ್ರೀವಸ್ಯ ಮಹಾತ್ಮನಃ ।
ಧರ್ಮಾರ್ಥೋಪಹಿತಂ ವಾಕ್ಯಮಿಹ ಚಾಮುತ್ರ ಚ ಕ್ಷಮಮ್ ॥ ೩

ರಾಜಾ ದಶರಥೋ ನಾಮ ರಥಕುಂಜರವಾಜಿಮಾನ್ ।
ಪಿತೇವ ಬಂಧುಲೋಕಸ್ಯ ಸುರೇಶ್ವರಸಮದ್ಯುತಿಃ ॥ ೪

ಜ್ಯೇಷ್ಠಸ್ತಸ್ಯ ಮಹಾಬಾಹುಃ ಪುತ್ರಃ ಪ್ರಿಯಕರಃ ಪ್ರಭುಃ ।
ಪಿತುರ್ನಿದೇಶಾನ್ನಿಷ್ಕ್ರಾಂತಃ ಪ್ರವಿಷ್ಟೋ ದಂಡಕಾವನಮ್ ॥ ೫

ಸರ್ಗ ೫೧

ಶ್ರೀರಾಮನ ವನವಾಸವೇ ಮೊದಲಾಗಿ ತಾನು ಸೀತಾದರ್ಶನ ಮಾಡಿದ
ವೃತ್ತಾಂತವನ್ನು ಹೇಳಿ, ಸೀತೆಯನ್ನು ರಾಮನಿಗೆ ಒಪ್ಪಿಸಬೇಕೆಂದು
ಹನುಮಂತನು ರಾವಣನಿಗೆ ಉಪದೇಶಿಸುವುದು.

ಧೀರನಾದ ಆಂಜನೇಯನು ರಾವಣನನ್ನು ದಿಟ್ಟಿಸಿ ನೋಡಿ, ಎಚ್ಚರಿಕೆಯಿಂದ ಅರ್ಥವತ್ತಾದ ಮಾತನ್ನು ಹೇಳಲಾರಂಭಿಸಿದನು : —''ಎಲೈ ರಾಕ್ಷಸೇಶ್ವರ, ನಾನು ಸುಗ್ರೀವನ ಸಂದೇಶವನ್ನು ನಿನಗೆ ಮುಟ್ಟಿಸಲು ಬಂದಿದ್ದೇನೆ. ಆ ಕಪೀಶ್ವರನು ನಿನ್ನ ಕ್ಷೇಮವನ್ನು ವಿಚಾರಿಸಿದ್ದಾನೆ (೧–೨). ನಿನಗೆ ಸೋದರನಂತೆ ಹಿತವನ್ನು ಕೋರುವ ಸುಗ್ರೀವನು ಇಹಪರಗಳೆರಡಕ್ಕೂ ಶ್ರೇಯಸ್ಕರವಾಗಿ ಧರ್ಮಾರ್ಥಯುಕ್ತವಾದ ಮಾತನ್ನು ಹೇಳಿಕಳಿಸಿದ್ದಾನೆ : ರಥಗಜಾಶ್ವಗಳ ಸಮೃದ್ಧಿಯುಳ್ಳ ದಶರಥನೆಂಬ ಮಹಾರಾಜನಿದ್ದನು. ಅವನು ಪ್ರಜೆಗಳಿಗೆ ತಂದೆಯಂತಿದ್ದನು. ದೇವೇಂದ್ರನಂತೆ ತೇಜಸ್ವಿ (೩–೪). ಆತನಿಗೆ ಮಹಾಭುಜನೂ ಸಮರ್ಥನೂ ಆದ ರಾಮನೆಂಬ

ಲಕ್ಷ್ಮಣೇನ ಸಹ ಭ್ರಾತ್ರಾ ಸೀತಯಾ ಚಾಪಿ ಭಾರ್ಯಯಾ ।
ರಾಮೋ ನಾಮ ಮಹಾತೇಜಾ ಧರ್ಮ್ಯಂ ಪಂಥಾನಮಾಶ್ರಿತಃ ॥ ೬

ತಸ್ಯ ಭಾರ್ಯಾ ವನೇ ನಷ್ಟಾ ಸೀತಾ ಪತಿಮನುವ್ರತಾ ।
ವೈದೇಹಸ್ಯ ಸುತಾ ರಾಜ್ಞೋ ಜನಕಸ್ಯ ಮಹಾತ್ಮನಃ ॥ ೭

ಸ ಮಾರ್ಗಮಾಣಸ್ತಾಂ ದೇವೀಂ ರಾಜಪುತ್ರಃ ಸಹಾನುಜಃ ।
ಋಶ್ಯಮೂಕಮನುಪ್ರಾಪ್ತಃ ಸುಗ್ರೀವೇಣ ಸಮಾಗತಃ ॥ ೮

ತಸ್ಯ ತೇನ ಪ್ರತಿಜ್ಞಾತಂ ಸೀತಾಯಾಃ ಪರಿಮಾರ್ಗಣಮ್ ।
ಸುಗ್ರೀವಸ್ಯಾಪಿ ರಾಮೇಣ ಹರಿರಾಜ್ಯಂ ನಿವೇದಿತಮ್ ॥ ೯

ತತಸ್ತೇನ ಮೃಧೇ ಹತ್ವಾ ರಾಜಪುತ್ರೇಣ ವಾಲಿನಮ್ ।
ಸುಗ್ರೀವಃ ಸ್ಥಾಪಿತೋ ರಾಜ್ಯೇ ಹರ್ಯೃಕ್ಷಾಣಾಂ ಗಣೇಶ್ವರಃ ॥ ೧೦

ತ್ವಯಾ ವಿಜ್ಞಾತಪೂರ್ವಶ್ಚ ವಾಲೀ ವಾನರಪುಂಗವಃ ।
ರಾಮೇಣ ನಿಹತಃ ಸಂಖ್ಯೇ ಶರೇಣೈಕೇನ ವಾನರಃ ॥ ೧೧

ಹಿರಿಯಮಗನಿದ್ದಾನೆ. ಅವನು ತಂದೆಯ ಆಜ್ಞೆಯನ್ನು ಮನ್ನಿಸಿ ದಂಡಕಾವನಕ್ಕೆ ಬಂದನು. ಅವನೊಡನೆ ಪತ್ನಿಯಾದ ಸೀತೆಯೂ ತಮ್ಮನಾದ ಲಕ್ಷ್ಮಣನೂ ಬಂದರು. ರಾಮನೆಂದರೆ ಕೇವಲ ಧರ್ಮಮಾರ್ಗದಲ್ಲಿ ನಡೆಯತಕ್ಕವನು (೫–೬). ಅವನ ಪತ್ನಿಯಾದ ಸೀತೆಯು ವಿದೇಹರಾಜನಾದ ಜನಕನ ಮಗಳು. ಮಹಾಪತಿವ್ರತೆ. ಅವಳು ಅರಣ್ಯದಲ್ಲಿ ಕಳೆದುಹೋದಳು. ರಾಮನು ಸೀತೆಯನ್ನು ಹುಡುಕುತ್ತ ಋಶ್ಯಮೂಕಪರ್ವತಕ್ಕೆ ಬಂದು ಸುಗ್ರೀವನೊಡನೆ ಸೇರಿದನು (೭–೮). ಸುಗ್ರೀವನು ಸೀತೆಯನ್ನು ಹುಡುಕಿಸುವುದಾಗಿ ರಾಮನಿಗೆ ಮಾತು ಕೊಟ್ಟನು. ರಾಮನು ಕಪಿರಾಜ್ಯಕ್ಕೆ ಒಡೆಯನನ್ನಾಗಿ ಮಾಡುತ್ತೇನೆಂದು ಸುಗ್ರೀವನಿಗೆ ಮಾತುಕೊಟ್ಟನು. ಅನಂತರ ರಾಮನು ಯುದ್ಧದಲ್ಲಿ ವಾಲಿಯನ್ನು ಕೊಂದು ಸುಗ್ರೀವನನ್ನು ವಾನರಭಲ್ಲೂಕಗಳಿಗೆ ಅಧಿಪತಿಯನ್ನಾಗಿ ಮಾಡಿದನು (೯–೧೦). ರಾವಣ, ವಾಲಿಯು ಎಂತಹ ಪರಾಕ್ರಮಿಯೆಂಬುದು ನಿನಗೆ ಗೊತ್ತಿದೆ! ಅಂತಹ ವಾಲಿಯನ್ನು ರಾಮನು ಒಂದೇ ಬಾಣದಿಂದ ಸಂಹರಿಸಿದ್ದಾನೆ. ಆಮೇಲೆ

ಸ ಸೀತಾಮಾರ್ಗಣೇ ವ್ಯಗ್ರಃ ಸುಗ್ರೀವಃ ಸತ್ಯಸಂಗರಃ ।
ಹರೀನ್ ಸಂಪ್ರೇಷಯಾಮಾಸ ದಿಶಃ ಸರ್ವಾ ಹರೀಶ್ವರಃ ॥ ೧೨
ತಾಂ ಹರೀಣಾಂ ಸಹಸ್ರಾಣಿ ಶತಾನಿ ನಿಯುತಾನಿ ಚ ।
ದಿಕ್ಷು ಸರ್ವಾಸು ಮಾರ್ಗಂತೇ ಹ್ಯಧಶ್ಚೋಪರಿ ಚಾಂಬರೇ ॥ ೧೩
ವೈನತೇಯಸಮಾಃ ಕೇಚಿತ್ ಕೇಚಿತ್ತತ್ರಾನಿಲೋಪಮಾಃ ।
ಅಸಂಗಗತಯಃ ಶೀಘ್ರಾ ಹರಿವೀರಾ ಮಹಾಬಲಾಃ ॥ ೧೪
ಅಹಂ ತು ಹನುಮಾನ್ನಾಮ ಮಾರುತಸ್ಯೌರಸಃ ಸುತಃ ।
ಸೀತಾಯಾಸ್ತು ಕೃತೇ ತೂರ್ಣಂ ಶತಯೋಜನಮಾಯತಮ್ ॥ ೧೫
ಸಮುದ್ರಂ ಲಂಘಯಿತ್ವೈವ ತಾಂ ದಿದೃಕ್ಷುರಿಹಾಗತಃ ।
ಭ್ರಮತಾ ಚ ಮಯಾ ದೃಷ್ಟಾ ಗೃಹೇ ತೇ ಜನಕಾತ್ಮಜಾ ॥ ೧೬
ತದ್ಭವಾನ್ ದೃಷ್ಟಧರ್ಮಾರ್ಥಸ್ತಪಃಕೃತಪರಿಗ್ರಹಃ ।
ಪರದಾರಾನ್ ಮಹಾಪ್ರಾಜ್ಞ ನೋಪರೋದ್ಧುಂ ತ್ವಮರ್ಹಸಿ ॥ ೧೭

ಸತ್ಯಸಂಧನಾದ ಸುಗ್ರೀವನು ಸೀತಾನ್ವೇಷಣಕ್ಕಾಗಿ ಎಲ್ಲಾ ಕಪಿಗಳನ್ನೂ ನಾನಾ ದಿಕ್ಕುಗಳಿಗೆ ಕಳುಹಿಸಿದನು (೧೧–೧೨). ಕೋಟಿಗಟ್ಟಲೆ ಕಪಿಗಳು ಸಮಸ್ತ ದಿಕ್ಕುಗಳಿಗೂ ಹೋಗಿ ಭೂಮ್ಯಾಕಾಶಗಳಲ್ಲಿ ಸೀತೆಯನ್ನು ಹುಡುಕುತ್ತಿದ್ದಾರೆ. ಅವರಲ್ಲಿ ಕೆಲವು ಕಪಿವೀರರು ಗರುಡನಂತೆಯೂ, ವಾಯುವಿನಂತೆಯೂ ಅಂತರಿಕ್ಷದಲ್ಲಿ ತಡೆಯಿಲ್ಲದೆ ಸಂಚರಿಸಬಲ್ಲರು (೧೩–೧೪). ನಾನು ವಾಯುದೇವನ ಔರಸಪುತ್ರ. ಹನುಮಂತನೆಂದು ನನ್ನ ಹೆಸರು. ನಾನು ಸೀತೆಯನ್ನು ನೋಡುವುದಕ್ಕಾಗಿ ನೂರು ಯೋಜನ ವಿಸ್ತಾರವಾದ ಸಮುದ್ರವನ್ನು ಲಂಘಿಸಿ ಇಲ್ಲಿಗೆ ಬಂದಿದ್ದೇನೆ. ಇಲ್ಲಿ ಹುಡುಕುತ್ತಿರುವಾಗ ನಿನ್ನ ಗೃಹದಲ್ಲಿ* ಜನಕಪುತ್ರಿಯನ್ನು ಕಂಡೆನು (೧೫–೧೬). ಎಲೈ ಮಹಾಪ್ರಾಜ್ಞನೆ, ನೀನು ಧರ್ಮಾರ್ಥಗಳ ಸ್ವರೂಪವನ್ನು ಬಲ್ಲವನು. ಮಹಾತಪಸ್ಸನ್ನು ನಡೆಸಿದವನು. ನೀನು ಪರಸ್ತ್ರೀಯರನ್ನು ತಂದು ಸೆರೆಯಿಡುವುದು ಯುಕ್ತವಲ್ಲ. ನಿನ್ನಂತಹ ಬುದ್ಧಿಶಾಲಿಗಳು ಧರ್ಮವಿರುದ್ಧವೂ ವಿಪತ್ಕಾರಿಯೂ

---

* ಸೀತೆ ಇದ್ದ ಸ್ಥಳ—ರಾವಣನ ಗೃಹ, ಅಂತಃಪುರ—ಎಂದು ಅಲ್ಲಲ್ಲಿ ಹೇಳಿದೆ. ಅದಕ್ಕೆ—ರಾವಣನಿಗೆ ಸೇರಿದ ಪ್ರದೇಶ—ನಗರ, ಅಂತಃಪುರಕ್ಕೆ ಸಂಬಂಧಿಸಿದ ಉದ್ಯಾನ ಎಂದು ತಾತ್ಪರ್ಯ.

ನ ಹಿ ಧರ್ಮವಿರುದ್ಧೇಷು ಬಹ್ವಪಾಯೇಷು ಕರ್ಮಸು ।
ಮೂಲಘಾತಿಷು ಸಜ್ಜಂತೇ ಬುದ್ಧಿಮಂತೋ ಭವದ್ವಿಧಾಃ ॥ ೧೮

ಕಶ್ಚ ಲಕ್ಷ್ಮಣಮುಕ್ತಾನಾಂ ರಾಮಕೋಪಾನುವರ್ತಿನಾಮ್ ।
ಶರಾಣಾಮಗ್ರತಃ ಸ್ಥಾತುಂ ಶಕ್ತೋ ದೇವಾಸುರೇಷ್ವಪಿ ॥ ೧೯

ನ ಚಾಪಿ ತ್ರಿಷು ಲೋಕೇಷು ರಾಜನ್ ವಿದ್ಯೇತ ಕಶ್ಚನ ।
ರಾಘವಸ್ಯ ವ್ಯಲೀಕಂ ಯಃ ಕೃತ್ವಾ ಸುಖಮವಾಪ್ನುಯಾತ್ ॥ ೨೦

ತತ್ ತ್ರಿಕಾಲಹಿತಂ ವಾಕ್ಯಂ ಧರ್ಮ್ಯಮರ್ಥಾನುಬಂಧಿ ಚ ।
ಮನ್ಯಸ್ವ ನರದೇವಾಯ ಜಾನಕೀ ಪ್ರತಿದೀಯತಾಮ್ ॥ ೨೧

ದೃಷ್ಟಾ ಹೀಯಂ ಮಯಾ ದೇವೀ ಲಬ್ಧಂ ಯದಿಹ ದುರ್ಲಭಮ್ ।
ಉತ್ತರಂ ಕರ್ಮ ಯಚ್ಛೇಷಂ ನಿಮಿತ್ತಂ ತತ್ರ ರಾಘವಃ ॥ ೨೨

ಲಕ್ಷಿತೇಯಂ ಮಯಾ ಸೀತಾ ತಥಾ ಶೋಕಪರಾಯಣಾ ।
ಗೃಹ್ಯ ಯಾಂ ನಾಭಿಜಾನಾಸಿ ಪಂಚಾಸ್ಯಾಮಿವ ಪನ್ನಗೀಮ್ ॥ ೨೩

ಸಮೂಲವಾಗಿ ಆತ್ಮವಿನಾಶಕಾರಿಯೂ ಆದ ಕಾರ್ಯಗಳಲ್ಲಿ ತೊಡಗುವುದಿಲ್ಲ (೧೭–೧೮). ರಾಮನ ಕ್ರೋಧಕ್ಕೆ ಅನುಗುಣವಾಗಿ ಲಕ್ಷ್ಮಣನು ಬಾಣಗಳನ್ನು ಬಿಡುವುದಕ್ಕೆ ಆರಂಭಿಸಿದರೆ, ಅವುಗಳನ್ನು ಎದುರಿಸತಕ್ಕವನು ದೇವಾಸುರರಲ್ಲಿ ಯಾವನಿದ್ದಾನೆ? ರಾಮನಿಗೆ ಅಪ್ರಿಯವಾದ್ದನ್ನು ಮಾಡಿದಮೇಲೆ ಸುಖವಾಗಿ ಇರಬಲ್ಲವನು ಮೂರುಲೋಕಗಳಲ್ಲಿ ಒಬ್ಬನೂ ಇಲ್ಲ (೧೯–೨೦). ಆದ್ದರಿಂದ ಈ ಮಾತು ಕಾಲತ್ರಯದಲ್ಲಿಯೂ ನಿನಗೆ ಹಿತಕಾರಿ. ಧರ್ಮಕ್ಕೆ ಅನುಗುಣವಾದದ್ದು. ಒಳ್ಳೆಯ ಪ್ರಯೋಜನವನ್ನು ಕೊಡತಕ್ಕದ್ದು. ನನ್ನ ಮಾತನ್ನು ಮನ್ನಿಸಿ ಶ್ರೀರಾಮನಿಗೆ ಜಾನಕಿಯನ್ನು ಒಪ್ಪಿಸಿಬಿಡು. ನಾನು ಸೀತಾದೇವಿಯನ್ನು ನೋಡಿಬಿಟ್ಟಿದ್ದೇನೆ. ಇಲ್ಲಿ ದುರ್ಲಭವಾದ ಸೀತಾದರ್ಶನವು ಆಗಿಹೋಯಿತು. ಇನ್ನು ಮುಂದಿನ ಕೆಲಸವನ್ನು ಶ್ರೀರಾಮನು ನೋಡಿಕೊಳ್ಳುವನು (೨೧–೨೨). ಸೀತೆಯು ಶೋಕದಿಂದ ಕೊರಗುತ್ತಿರುವುದನ್ನು ಕಂಡಿದ್ದೇನೆ. ಆ ದೇವಿಯು ಐದು ಹೆಡೆಯ ಸರ್ಪಿಣಿ ಎಂಬುದು ನಿನಗೆ ಗೊತ್ತಿಲ್ಲ! ಘೋರವಿಷಮಿಶ್ರವಾದ ಅನ್ನದಂತೆ, ಈಕೆಯನ್ನು

ನೇಯಂ ಜರಯಿತುಂ ಶಕ್ಯಾ ಸಾಸುರೈರಮರೈರಪಿ ।
ವಿಷಸಂಸೃಷ್ಟಮತ್ಯರ್ಥಂ ಭುಕ್ತಮನ್ನಮಿವೌಜಸಾ ॥ ೨೪

ತಪಃಸಂತಾಪಲಬ್ಧಸ್ತೇ ಯೋಽಯಂ ಧರ್ಮಪರಿಗ್ರಹಃ ।
ನ ಸ ನಾಶಯಿತುಂ ನ್ಯಾಯ್ಯ ಆತ್ಮಪ್ರಾಣಪರಿಗ್ರಹಃ ॥ ೨೫

ಅವಧ್ಯತಾಂ ತಪೋಭಿರ್ಯಾಂ ಭವಾನ್ ಸಮನುಪಶ್ಯತಿ ।
ಆತ್ಮನಃ ಸಾಸುರೈರ್ದೇವೈರ್ಹೇತುಸ್ತತ್ರಾಪ್ಯಯಂ ಮಹಾನ್ ॥ ೨೬

ಸುಗ್ರೀವೋ ನ ಹಿ ದೇವೋಽಯಂ ನಾಸುರೋ ನ ಚ ರಾಕ್ಷಸಃ ।
ಮಾನುಷೋ ರಾಘವೋ ರಾಜನ್ ಸುಗ್ರೀವಶ್ಚ ಹರೀಶ್ವರಃ ॥ ೨೭

ತಸ್ಮಾತ್ ಪ್ರಾಣಪರಿತ್ರಾಣಂ ಕಥಂ ರಾಜನ್ ಕರಿಷ್ಯಸಿ ।
ನ ತು ಧರ್ಮೋಪಸಂಹಾರಮಧರ್ಮಫಲಸಂಹಿತಮ್ ॥ ೨೮

ತದೇವ ಫಲಮನ್ವೇತಿ ಧರ್ಮಶ್ಚಾಧರ್ಮನಾಶನಃ ।
ಪ್ರಾಪ್ತಂ ಧರ್ಮಫಲಂ ತಾವದ್ಭವತಾ ನಾತ್ರ ಸಂಶಯಃ ॥ ೨೯

ದಕ್ಕಿಸಿಕೊಳ್ಳಲು ದೇವಾಸುರರಿಗೂ ಸಾಧ್ಯವಿಲ್ಲ (೨೩–೨೪). ರಾವಣ, ನೀನು ಕಷ್ಟಪಟ್ಟು ತಪಸ್ಸನ್ನು ಮಾಡಿ ಧರ್ಮವನ್ನೂ ದೀರ್ಘಾಯುಸ್ಸನ್ನೂ ಸಂಪಾದಿಸಿಕೊಂಡು ಬಂದಿದ್ದೀಯೆ. ಈಗ ಪ್ರಬಲವಾದ ಅಧರ್ಮದಿಂದ ಅದನ್ನೆಲ್ಲಾ ಹಾಳುಮಾಡಿಕೊಳ್ಳುವುದು ನ್ಯಾಯವಲ್ಲ. ತಪೋಬಲದಿಂದ ನೀನು ದೇವಾಸುರರಿಗೆ ಅವಧ್ಯನೆಂದು ಭಾವಿಸಿಕೊಂಡಿದ್ದೀಯೆ. ಆದರೆ ನಿನ್ನ ವಧೆಗೆ ಈಗ ಒಂದು ದೊಡ್ಡ ಕಾರಣವು ಏರ್ಪಟ್ಟಿದೆ. (೨೫–೨೬). ಸುಗ್ರೀವನು ದೇವಾಸುರರಾಕ್ಷಸರಲ್ಲಿ ಒಬ್ಬನೂ ಅಲ್ಲ. ಅವನು ಒಬ್ಬ ಶ್ರೇಷ್ಠನಾದ ವಾನರ. ಶ್ರೀರಾಮನು ಮನುಷ್ಯ. ಆದ್ದರಿಂದ, ರಾಕ್ಷಸೇಶ್ವರ, ನೀನು ಪ್ರಾಣವನ್ನು ಹೇಗೆ ಉಳಿಸಿಕೊಳ್ಳುತ್ತೀಯೆ? ಧರ್ಮದ ಫಲದಲ್ಲಿ ಅಧರ್ಮದ ಫಲವು ಅಡಗಿಹೋಗುವುದಿಲ್ಲ. ಅಧರ್ಮದ ಫಲವನ್ನು ಪ್ರತ್ಯೇಕವಾಗಿ ಅನುಭವಿಸಬೇಕಾಗುತ್ತದೆ. ಧರ್ಮವು ಅಧರ್ಮದ ಫಲವನ್ನೂ ನಾಶಗೊಳಿಸುವುದಿಲ್ಲ. ಇದುವರೆಗೆ ನೀನು ಧರ್ಮದ ಫಲವನ್ನು

ಫಲಮಸ್ಯಾಪ್ಯಧರ್ಮಸ್ಯ ಕ್ಷಿಪ್ರಮೇವ ಪ್ರಪತ್ಸ್ಯಸೇ ।
ಜನಸ್ಥಾನವಧಂ ಬುದ್ಧ್ವಾ ಬುದ್ಧ್ವಾ ವಾಲಿವಧಂ ತಥಾ ॥ ೩೦

ರಾಮಸುಗ್ರೀವಸಖ್ಯಂ ಚ ಬುದ್ಧ್ಯಸ್ವ ಹಿತಮಾತ್ಮನಃ ।
ಕಾಮಂ ಖಲ್ವಹಮಪ್ಯೇಕಃ ಸವಾಜಿರಥಕುಂಜರಾಮ್ ॥ ೩೧

ಲಂಕಾಂ ನಾಶಯಿತುಂ ಶಕ್ತಸ್ತಸ್ಯೈಷ ತು ನ ನಿಶ್ಚಯಃ ।
ರಾಮೇಣ ಹಿ ಪ್ರತಿಜ್ಞಾತಂ ಹರ್ಯೃಕ್ಷಗಣಸಂನಿಧೌ ॥ ೩೨

ಉತ್ಸಾದನಮಮಿತ್ರಾಣಾಂ ಸೀತಾ ಯೈಸ್ತು ಪ್ರಧರ್ಷಿತಾ ।
ಅಪಕುರ್ವನ್ ಹಿ ರಾಮಸ್ಯ ಸಾಕ್ಷಾದಪಿ ಪುರಂದರಃ ॥ ೩೩

ನ ಸುಖಂ ಪ್ರಾಪ್ನುಯಾದನ್ಯಃ ಕಿಂ ಪುನಸ್ತ್ವದ್ವಿಧೋ ಜನಃ ।
ಯಾಂ ಸೀತೇತ್ಯಭಿಜಾನಾಸಿ ಯೇಯಂ ತಿಷ್ಠತಿ ತೇ ವಶೇ ॥ ೩೪

ಕಾಲರಾತ್ರೀತಿ ತಾಂ ವಿದ್ಧಿ ಸರ್ವಲಂಕಾವಿನಾಶಿನೀಮ್ ।
ತದಲಂ ಕಾಲಪಾಶೇನ ಸೀತಾವಿಗ್ರಹರೂಪಿಣಾ ॥ ೩೫

ಅನುಭವಿಸಿದ್ದೀಯೆ. ಇದರಲ್ಲಿ ಸಂದೇಹವಿಲ್ಲ (೨೭–೨೯). ಇನ್ನುಮೇಲೆ, ನೀನು ಮಾಡಿರುವ ಅಧರ್ಮಕ್ಕೆ ತಕ್ಕ ಫಲವನ್ನು ಶೀಘ್ರವಾಗಿ ಅನುಭವಿಸುತ್ತೀಯೆ. ಜನಸ್ಥಾನದಲ್ಲಿ ನಡೆದ ರಾಕ್ಷಸರ ವಧೆಯ ಬಗೆಯನ್ನೂ ವಾಲಿಯ ವಧೆಯಾದ ರೀತಿಯನ್ನೂ ಈಗ ರಾಮಸುಗ್ರೀವರಿಗೆ ಆಗಿರುವ ಸ್ನೇಹಾತಿಶಯವನ್ನೂ ಪರ್ಯಾಲೋಚಿಸಿ, ನಿನಗೆ ಯಾವುದು ಹಿತಕಾರಿಯೆಂದು ನಿಶ್ಚಯಿಸು. ಈಗ ನಾನೊಬ್ಬನೇ ಲಂಕಾನಗರವನ್ನು ಧ್ವಂಸ ಮಾಡಬಲ್ಲೆನು (೩೦–೩೧). ಆದರೆ ಇದು ರಾಮನಿಗೆ ಸಮ್ಮತವಲ್ಲ. ಸೀತಾದೇವಿಯನ್ನು ಗೋಳಾಡಿಸಿದ ಶತ್ರುಗಳೆಲ್ಲರನ್ನೂ ತಾನೇ ಕೊಂದುಹಾಕುತ್ತೇನೆಂದು ರಾಮನು ವಾನರ ಭಲ್ಲೂಕಸೇನೆಯೆದುರಿಗೆ ಪ್ರತಿಜ್ಞೆಮಾಡಿದ್ದಾನೆ. ಶ್ರೀರಾಮನಿಗೆ ಅಪಕಾರ ಮಾಡಿದವನು ಸಾಕ್ಷಾತ್ ದೇವೇಂದ್ರ ನಾದರೂ ಸೌಖ್ಯದಿಂದ ಇರಲಾರನು (೩೨–೩೩). ಇನ್ನು ನಿನ್ನಂತಹವನ ವಿಷಯ ವನ್ನು ಹೇಳಬೇಕೆ ? ಯಾರನ್ನು ನೀನು ಸೀತೆಯೆಂದೂ ನಿನ್ನ ಕೈಗೆ ಸಿಕ್ಕಿರುವಳೆಂದೂ ಭಾವಿಸಿದ್ದೀಯೋ, ಅವಳು ಲಂಕೆಯನ್ನು ವಿಧ್ವಂಸಮಾಡತಕ್ಕ ಕಾಳರಾತ್ರಿ ಎಂದು ತಿಳಿ, ರಾವಣ, ಸೀತಾರೂಪದಲ್ಲಿರುವ ಈ ಯಮಪಾಶವನ್ನು ಕೊರಳಿಗೆ

ಸ್ವಯಂ ಸ್ಕಂಧಾವಸಕ್ತೇನ ಕ್ಷಮಮಾತ್ಮನಿ ಚಿಂತ್ಯತಾಮ್ ।
ಸೀತಾಯಾಸ್ತೇಜಸಾ ದಗ್ಧಾಂ ರಾಮಕೋಪಪ್ರಪೀಡಿತಾಮ್ ॥ ೩೬

ದಹ್ಯಮಾನಾಮಿಮಾಂ ಪಶ್ಯ ಪುರೀಂ ಸಾಟ್ಟಪ್ರತೋಲಿಕಾಮ್ ।
ಸ್ವಾನಿ ಮಿತ್ರಾಣಿ ಮಂತ್ರೀಂಶ್ಚ ಜ್ಞಾತೀನ್ಭ್ರಾತೄನ್ಸುತಾನ್ ಹಿತಾನ್ ॥ ೩೭

ಭೋಗಾನ್ ದಾರಾಂಶ್ಚ ಲಂಕಾಂ ಚ ಮಾ ವಿನಾಶಮುಪಾನಯ ।
ಸತ್ಯಂ ರಾಕ್ಷಸರಾಜೇಂದ್ರ ಶೃಣುಷ್ವ ವಚನಂ ಮಮ ॥ ೩೮

ರಾಮದಾಸಸ್ಯ ದೂತಸ್ಯ ವಾನರಸ್ಯ ವಿಶೇಷತಃ ।
ಸರ್ವಾನ್ ಲೋಕಾನ್ ಸುಸಂಹೃತ್ಯ ಸಭೂತಾನ್ ಸಚರಾಚರಾನ್ ॥

ಪುನರೇವ ತಥಾ ಸ್ರಷ್ಟುಂ ಶಕ್ತೋ ರಾಮೋ ಮಹಾಯಶಾಃ ।
ದೇವಾಸುರನರೇಂದ್ರೇಷು ಯಕ್ಷರಕ್ಷೋಗಣೇಷು ಚ ॥ ೪೦

ವಿದ್ಯಾಧರೇಷು ಸರ್ವೇಷು ಗಂಧರ್ವೇಷೂರಗೇಷು ಚ ।
ಸಿದ್ಧೇಷು ಕಿಂನರೇಂದ್ರೇಷು ಪತತ್ರಿಷು ಚ ಸರ್ವತಃ ॥ ೪೧

ಸುತ್ತಿಕೊಳ್ಳಬೇಡ (೩೪–೩೫). ನಿನಗೆ ಹಿತವಾದದ್ದು ಯಾವುದೆಂದು ಚಿಂತಿಸು. ಸೀತೆಯ ತೇಜಸ್ಸಿನಿಂದ ಈ ಪಟ್ಟಣವು ಈಗಲೇ ಅರ್ಧ ಸುಟ್ಟುಹೋಗಿದೆ. ಇನ್ನು ರಾಮನ ಕೋಪವೂ ಸೇರಿದರೆ ಉಪ್ಪರಿಗೆ, ರಥಬೀದಿಗಳೊಡನೆ ಉರಿದು ಹೋದೀತು ! ನಿನ್ನ ಮಿತ್ರರು, ಮಂತ್ರಿಗಳು, ಬಂಧುಗಳು, ತಮ್ಮಂದಿರು, ಮಕ್ಕಳು, ನಿನ್ನ ಹೆಂಡತಿಯರು, ಭೋಗಭಾಗ್ಯಗಳು, ಈ ಲಂಕಾನಗರ—ಇವೆಲ್ಲವೂ ನಾಶ ವಾಗುವಂತೆ ಮಾಡಬೇಡ. ರಾಕ್ಷಸೇಶ್ವರ, ಸತ್ಯವಾಗಿಯೂ ನಾನು ಹೇಳುವುದನ್ನು ಕೇಳು (೩೬–೩೮). ನಾನು ರಾಮದಾಸ, ದೂತ ಮತ್ತು ವಾನರಜಾತಿಯವನು. ಶ್ರೀರಾಮನು ಪಂಚಮಹಾಭೂತಗಳೊಡನೆ ಚರಾಚರಾತ್ಮಕವಾದ ನಿಖಿಲ ವಿಶ್ವವನ್ನೇ ನಾಶಮಾಡಿ, ಮತ್ತೆ ಮೊದಲಿನಂತೆ ಸೃಷ್ಟಿಮಾಡಬಲ್ಲನು. ದೇವಾಸುರ ಮಾನವರಲ್ಲಿ, ಯಕ್ಷ ರಾಕ್ಷಸರಲ್ಲಿ, ವಿದ್ಯಾಧರ ಗಂಧರ್ವ ಸರ್ಪಗಳಲ್ಲಿ, ಸಿದ್ಧ ಕಿನ್ನರ ರಲ್ಲಿ, ಪಕ್ಷಿಗಳಲ್ಲಿ—ಅಷ್ಟೇಕೆ ? ಸಮಸ್ತ ಪ್ರಾಣಿಗಳಲ್ಲಿಯೂ ಸರ್ವದಾ ಸರ್ವಕಾಲ ದಲ್ಲಿ ರಾಮನನ್ನು ಎದುರಿಸಿ ಯುದ್ಧಮಾಡತಕ್ಕವನು ಒಬ್ಬನೂ ಇಲ್ಲ. ಅವನು

ಸರ್ವಭೂತೇಷು ಸರ್ವತ್ರ ಸರ್ವಕಾಲೇಷು ನಾಸ್ತಿ ಸಃ ।
ಯೋ ರಾಮಂ ಪ್ರತಿಯುಧ್ಯೇತ ವಿಷ್ಣುತುಲ್ಯಪರಾಕ್ರಮಮ್ ॥ ೪೨

ಸರ್ವಲೋಕೇಶ್ವರಸ್ಯೈವಂ ಕೃತ್ವಾ ವಿಪ್ರಿಯಮೀದೃಶಮ್ ।
ರಾಮಸ್ಯ ರಾಜಸಿಂಹಸ್ಯ ದುರ್ಲಭಂ ತವ ಜೀವಿತಮ್ ॥ ೪೩

ದೇವಾಶ್ಚ ದೈತ್ಯಾಶ್ಚ ನಿಶಾಚರೇಂದ್ರ
ಗಂಧರ್ವವಿದ್ಯಾಧರನಾಗಯಕ್ಷಾಃ ।
ರಾಮಸ್ಯ ಲೋಕತ್ರಯನಾಯಕಸ್ಯ
ಸ್ಥಾತುಂ ನ ಶಕ್ತಾಃ ಸಮರೇಷು ಸರ್ವೇ ॥ ೪೪

ಬ್ರಹ್ಮಾ ಸ್ವಯಂಭೂಶ್ಚತುರಾನನೋ ವಾ
ರುದ್ರಸ್ತ್ರಿನೇತ್ರಸ್ತ್ರಿಪುರಾಂತಕೋ ವಾ ।
ಇಂದ್ರೋ ಮಹೇಂದ್ರಃ ಸುರನಾಯಕೋ ವಾ
ತ್ರಾತುಂ ನ ಶಕ್ತಾ ಯುಧಿ ರಾಮವಧ್ಯಮ್ ॥ ೪೫

ಸ ಸೌಷ್ಠವೋಪೇತಮದೀನವಾದಿನಃ
ಕಪೇರ್ನಿಶಮ್ಯಾಪ್ರತಿಮೋಽಪ್ರಿಯಂ ವಚಃ ।

ಪರಾಕ್ರಮದಲ್ಲಿ ಮಹಾವಿಷ್ಣುವಿಗೆ ಸಮಾನ (೩೯–೪೨). ರಾವಣ, ಸರ್ವ ಲೋಕೇಶ್ವರನೂ ರಾಜಸಿಂಹನೂ ಆದ ಶ್ರೀರಾಮನಿಗೆ ಅಪರಾಧ ಮಾಡಿದಮೇಲೆ, ನೀನು ಬದುಕಿರುವುದು ಅಸಾಧ್ಯ. ದೇವದಾನವಾದಿ ಸಮಸ್ತ ಪ್ರಾಣಿಗಳೂ ತ್ರಿಲೋಕಾಧಿಪತಿಯಾದ ರಾಮನನ್ನು ಯುದ್ಧದಲ್ಲಿ ಎದುರಿಸಲು ಅಸಮರ್ಥರು (೪೩–೪೪). ರಾಮನು ಯಾರನ್ನಾದರೂ ಕೊಲ್ಲಬೇಕೆಂದು ನಿಶ್ಚಯಿಸಿದರೆ, ಅವ ನನ್ನು ಉಳಿಸಿಕೊಳ್ಳಲು ಅನಾದಿಯೂ ನಾಲ್ಕು ಮುಖಗಳನ್ನು ಧರಿಸಿದವನೂ ಆದ ಬ್ರಹ್ಮನಿಗಾಗಲಿ, ತ್ರಿಣೇತ್ರನೂ ತ್ರಿಪುರ ಧ್ವಂಸಿಯೂ ಆದ ಈಶ್ವರನಿಗಾಗಲಿ, ಮಹತ್ತರ ವಾದ ಐಶ್ವರ್ಯವನ್ನು ಪಡೆದು ದೇವೇಶ್ವರನೆನಿಸಿದ ಇಂದ್ರನಿಗಾಗಲಿ ಶಕ್ಯವಿಲ್ಲ'' ಎಂದು ಹೇಳಿದನು (೪೫). ಹೀಗೆ ಹನುಮಂತನು ಧೀರವಾಣಿಯಿಂದ ಹಿತೋಪ ದೇಶವನ್ನು ಮಾಡಿದನು. ರಾವಣನು ತನಗೆ ಅಪ್ರಿಯವಾದ ಆ ಮಾತನ್ನು ಕೇಳಿ

ದಶಾನನಃ ಕೋಪವಿವೃತ್ತಲೋಚನಃ
ಸಮಾದಿಶತ್ತಸ್ಯ ವಧಂ ಮಹಾಕಪೇಃ ॥ ೪೬

ಇತಿ ಶ್ರೀಮದ್ರಾಮಾಯಣೇ ಸುಂದರಕಾಂಡೇ ಏಕಪಂಚಾಶಃ ಸರ್ಗಃ

ದ್ವಿಪಂಚಾಶಃ ಸರ್ಗಃ

ಧೂತವಧನಿವಾರಣಮ್

ತಸ್ಯ ತದ್ವಚನಂ ಶ್ರುತ್ವಾ ವಾನರಸ್ಯ ಮಹಾತ್ಮನಃ ।
ಆಜ್ಞಾಪಯತ್ತಸ್ಯ ವಧಂ ರಾವಣಃ ಕ್ರೋಧಮೂರ್ಛಿತಃ ॥ ೧

ವಧೇ ತಸ್ಯ ಸಮಾಜ್ಞಪ್ತೇ ರಾವಣೇನ ದುರಾತ್ಮನಾ ।
ನಿವೇದಿತವತೋ ದೌತ್ಯಂ ನಾನುಮೇನೇ ವಿಭೀಷಣಃ ॥ ೨

ತಂ ರಕ್ಷೋಽಧಿಪತಿಂ ಕ್ರುದ್ಧಂ ತಚ್ಚ ಕಾರ್ಯಮುಪಸ್ಥಿತಮ್ ।
ವಿದಿತ್ವಾ ಚಿಂತಯಾಮಾಸ ಕಾರ್ಯಂ ಕಾರ್ಯವಿಧೌ ಸ್ಥಿತಃ ॥ ೩

ಕೋಪದಿಂದ ಕಣ್ಣುಗಳನ್ನು ತಿರುಗಿಸುತ್ತ, ಹನುಮಂತನನ್ನು ವಧಿಸಬೇಕೆಂದು ಆಜ್ಞಾಪಿಸಿದನು (೪೬).

ಇಲ್ಲಿಗೆ ಶ್ರೀಮದ್ರಾಮಾಯಣದ ಸುಂದರಕಾಂಡದಲ್ಲಿ ಐವತ್ತೊಂದನೆಯ ಸರ್ಗ

ಸರ್ಗ ೫೨

ದೂತನಾಗಿ ಬಂದ ಹನುಮಂತನನ್ನು ವಧಿಸುವುದು ರಾಜಧರ್ಮಕ್ಕೆ ವಿರುದ್ಧವೆಂದು ವಿಭೀಷಣನು ರಾವಣನಿಗೆ ನೀತಿಯನ್ನು ಬೋಧಿಸುವುದು.

ಮಹಾತ್ಮನಾದ ಹನುಮಂತನು ಹೇಳಿದ ಮಾತನ್ನು ಕೇಳಿ ರಾವಣನು ಕ್ರುದ್ಧನಾಗಿ, ಅವನನ್ನು ಕೊಲ್ಲಬೇಕೆಂದು ರಾಕ್ಷಸರಿಗೆ ಆಜ್ಞೆಮಾಡಿದನು. ದೂತನಾಗಿ ಬಂದಿದ್ದೇನೆಂದು ತಿಳಿಸಿದ ಹನುಮಂತನನ್ನು ಕೊಲ್ಲುವುದು ವಿಭೀಷಣನಿಗೆ ಸಮ್ಮತವಾಗಲಿಲ್ಲ (೧–೨). ಕಾರ್ಯಾಕಾರ್ಯಗಳನ್ನು ಬಲ್ಲ ಆ ವಿಭೀಷಣನು

ನಿಶ್ಚಿತಾರ್ಥಸ್ತತಃ ಸಾಮ್ನಾ ಪೂಜ್ಯಂ ಶತ್ರುಜಿದಗ್ರಜಮ್ ।
ಉವಾಚ ಹಿತಮತ್ಯರ್ಥಂ ವಾಕ್ಯಂ ವಾಕ್ಯವಿಶಾರದಃ ॥ ೪

ಕ್ಷಮಸ್ವ ರೋಷಂ ತ್ಯಜ ರಾಕ್ಷಸೇಂದ್ರ
ಪ್ರಸೀದ ಮದ್ವಾಕ್ಯಮಿದಂ ಶೃಣುಷ್ವ ।
ವಧಂ ನ ಕುರ್ವಂತಿ ಪರಾವರಜ್ಞಾ
ದೂತಸ್ಯ ಸಂತೋ ವಸುಧಾಧಿಪೇಂದ್ರಾಃ ॥ ೫

ರಾಜಧರ್ಮವಿರುದ್ಧಂ ಚ ಲೋಕವೃತ್ತೇಶ್ಚ ಗರ್ಹಿತಮ್ ।
ತವ ಚಾಸದೃಶಂ ವೀರ ಕಪೇರಸ್ಯ ಪ್ರಮಾಪಣಮ್ ॥ ೬

ಧರ್ಮಜ್ಞಶ್ಚ ಕೃತಜ್ಞಶ್ಚ ರಾಜಧರ್ಮವಿಶಾರದಃ ।
ಪರಾವರಜ್ಞೋ ಭೂತಾನಾಂ ತ್ವಮೇವ ಪರಮಾರ್ಥವಿತ್ ॥ ೭

ಗೃಹ್ಯಂತೇ ಯದಿ ರೋಷೇಣ ತ್ವಾದೃಶೋಽಪಿ ವಿಪಶ್ಚಿತಃ ।
ತತಃ ಶಾಸ್ತ್ರವಿಪಶ್ಚಿತ್ತ್ವಂ ಶ್ರಮ ಏವ ಹಿ ಕೇವಲಮ್ ॥ ೮

ರಾವಣನಿಗೆ ಕೋಪಬಂದಿದೆಯೆಂದೂ ಆದ್ದರಿಂದ ದೂತವಧೆಗೆ ಅಪ್ಪಣೆ ಮಾಡಿದ್ದಾನೆಂದೂ ತಿಳಿದು ಮುಂದೇನು ಮಾಡಬೇಕೆಂದು ಆಲೋಚಿಸಿದನು. ತಾನೇ ಒಂದು ನಿಶ್ಚಯಕ್ಕೆ ಬಂದು, ಅಣ್ಣನಾದ ರಾವಣನನ್ನು ಕುರಿತು ಗೌರವಪೂರ್ವಕವಾಗಿ ಸಾಂತ್ವವಚನಗಳಿಂದ ಹೇಳತೊಡಗಿದನು (೩–೪) : ''ಮಹಾರಾಜ, ನನ್ನನ್ನು ಕ್ಷಮಿಸಬೇಕು. ಕೋಪ ಮಾಡಿಕೊಳ್ಳಬಾರದು. ಪ್ರಸನ್ನನಾಗಿ ನನ್ನ ಮಾತನ್ನು ಲಾಲಿಸಬೇಕು. ವಿವೇಕಿಗಳೂ ಸಜ್ಜನರೂ ಆದ ಭೂಪತಿಗಳು ದೂತನಾಗಿ ಬಂದವನನ್ನು ವಧಿಸುವುದಿಲ್ಲ. ಈ ಕಪಿಯನ್ನು ಕೊಲ್ಲಿಸುವುದು ರಾಜಧರ್ಮಕ್ಕೆ ವಿರುದ್ಧವಾದದ್ದು; ಲೋಕನಿಂದಿತ. ನಿನ್ನಂತಹ ವೀರನಿಗೆ ಯೋಗ್ಯವೂ ಅಲ್ಲ (೫–೬). ನೀನು ಧರ್ಮಜ್ಞನೂ ರಾಜನೀತಿ ವಿಶಾರದನೂ ಆಗಿದ್ದೀಯೆ. ಸಮಸ್ತ ಪ್ರಾಣಿವರ್ಗದಲ್ಲಿ ನೀನೇ ವಿವೇಕಿಯೂ ಪರಮಾರ್ಥವನ್ನು ಬಲ್ಲವನೂ ಆಗಿರುವೆ. ನಿನ್ನಂತಹ ವಿದ್ವಾಂಸರೇ ಕೋಪಕ್ಕೆ ವಶರಾಗುವುದಾದರೆ, ಶಾಸ್ತ್ರದಲ್ಲಿ ಪಾಂಡಿತ್ಯವನ್ನು ಗಳಿಸುವುದು ವೃಥಾ ಶ್ರಮವೆಂದು ಹೇಳಬೇಕಾಗುತ್ತದೆ

ತಸ್ಮಾತ್ ಪ್ರಸೀದ ಶತ್ರುಘ್ನ ರಾಕ್ಷಸೇಂದ್ರ ದುರಾಸದ ।
ಯುಕ್ತಾಯುಕ್ತಂ ವಿನಿಶ್ಚಿತ್ಯ ದೂತೇ ದಂಡೋ ವಿಧೀಯತಾಮ್ ॥ ೯
ವಿಭೀಷಣವಚಃ ಶ್ರುತ್ವಾ ರಾವಣೋ ರಾಕ್ಷಸೇಶ್ವರಃ ।
ರೋಷೇಣ ಮಹತಾವಿಷ್ಟೋ ವಾಕ್ಯಮುತ್ತರಮಬ್ರವೀತ್ ॥ ೧೦
ನ ಪಾಪಾನಾಂ ವಧೇ ಪಾಪಂ ವಿದ್ಯತೇ ಶತ್ರುಸೂದನ ।
ತಸ್ಮಾದೇನಂ ವಧಿಷ್ಯಾಮಿ ವಾನರಂ ಪಾಪಕಾರಿಣಮ್ ॥ ೧೧

ಅಧರ್ಮಮೂಲಂ ಬಹುರೋಷಯುಕ್ತ-
ಮನಾರ್ಯಜುಷ್ಟಂ ವಚನಂ ನಿಶಮ್ಯ ।
ಉವಾಚ ವಾಕ್ಯಂ ಪರಮಾರ್ಥತತ್ತ್ವಂ
ವಿಭೀಷಣೋ ಬುದ್ಧಿಮತಾಂ ವರಿಷ್ಠಃ ॥ ೧೨

ಪ್ರಸೀದ ಲಂಕೇಶ್ವರ ರಾಕ್ಷಸೇಂದ್ರ
ಧರ್ಮಾರ್ಥಯುಕ್ತಂ ವಚನಂ ಶೃಣುಷ್ವ ।
ದೂತಾನವಧ್ಯಾನ್ ಸಮಯೇಷು ರಾಜನ್
ಸರ್ವೇಷು ಸರ್ವತ್ರ ವದಂತಿ ಸಂತಃ ॥ ೧೩

ಅಸಂಶಯಂ ಶತ್ರುರಯಂ ಪ್ರವೃದ್ಧಃ
ಕೃತಂ ಹ್ಯನೇನಾಪ್ರಿಯಮಪ್ರಮೇಯಮ್ ।

(೭–೮). ಹೇ ರಾಕ್ಷಸೇಶ್ವರ-ಶತ್ರುಸಂಹಾರಕ, ಆದ್ದರಿಂದ ಯುಕ್ತಾಯುಕ್ತಗಳನ್ನು ವಿಚಾರಿಸಿ ಈ ದೂತನಿಗೆ ದಂಡನೆಯನ್ನು ವಿಧಿಸು'' ಎಂದನು (೯). ರಾವಣನಿಗೆ ಕೋಪವು ಇಳಿಯಲಿಲ್ಲ, ಅವನು ಕೋಪದಿಂದ ''ವಿಭೀಷಣ, ಪಾಪಿಗಳನ್ನು ಕೊಂದರೆ ಪಾಪವಿಲ್ಲ, ಆದ್ದರಿಂದ ಪಾಪಿಯಾದ ಈ ಕಪಿಯನ್ನು ಕೊಲ್ಲಿಸುತ್ತೇನೆ'' ಎಂದನು (೧೦–೧೧). ಸಿಟ್ಟಿನಿಂದ ಹೇಳಿದ ಈ ಅಧರ್ಮದ ಮಾತನ್ನು ಕೇಳಿ ಬುದ್ಧಿಶಾಲಿಯಾದ ವಿಭೀಷಣನು ''ಲಂಕೇಶ್ವರ, ಪ್ರಸನ್ನನಾಗು. ಧರ್ಮಾರ್ಥಸಹಿತ ವಾದ ನನ್ನ ಮಾತನ್ನು ಕೇಳು. ದೂತರನ್ನು ಯಾವ ಸಮಯದಲ್ಲಾಗಲಿ ಎಲ್ಲಿಯೂ ಕೊಲ್ಲಬಾರದೆಂದು ಹಿರಿಯರು ಹೇಳುತ್ತಾರೆ (೧೨–೧೩). ಈತನು ಮಹಾಶತ್ರುವೆಂಬುದೇನೋ ನಿಜ. ನಮಗೆ ಅಪರಿಮಿತವಾದ ಕೆಡುಕನ್ನು

ನ ದೂತವಧ್ಯಾಂ ಪ್ರವದಂತಿ ಸಂತೋ
ದೂತಸ್ಯ ದೃಷ್ಟಾ ಬಹವೋ ಹಿ ದಂಡಾಃ ॥ ೧೪

ವೈರೂಪ್ಯಮಂಗೇಷು ಕಶಾಭಿಘಾತೋ
ಮೌಂಡ್ಯಂ ತಥಾ ಲಕ್ಷಣಸಂನಿಪಾತಃ ।
ಏತಾನ್ ಹಿ ದೂತೇ ಪ್ರವದಂತಿ ದಂಡಾನ್
ವಧಸ್ತು ದೂತಸ್ಯ ನ ನಃ ಶ್ರುತೋಽಪಿ ॥ ೧೫

ಕಥಂ ಚ ಧರ್ಮಾರ್ಥವಿನೀತಬುದ್ಧಿಃ
ಪರಾವರಪ್ರತ್ಯಯನಿಶ್ಚಿತಾರ್ಥಃ ।
ಭವದ್ವಿಧಃ ಕೋಪವಶೇ ಹಿ ತಿಷ್ಠೇತ್
ಕೋಪಂ ನಿಯಚ್ಛಂತಿ ಹಿ ಸತ್ತ್ವವಂತಃ ॥ ೧೬

ನ ಧರ್ಮವಾದೇ ನ ಚ ಲೋಕವೃತ್ತೇ
ನ ಶಾಸ್ತ್ರಬುದ್ಧಿಗ್ರಹಣೇಷು ಚಾಪಿ ।
ವಿದ್ಯೇತ ಕಶ್ಚಿತ್ತವ ವೀರ ತುಲ್ಯ-
ಸ್ತ್ವಂ ಹ್ಯುತ್ತಮಃ ಸರ್ವಸುರಾಸುರಾಣಾಮ್ ॥ ೧೭

ಮಾಡಿದ್ದಾನೆ. ಆದರೂ ದೂತನನ್ನು ಕೊಲ್ಲಬಾರದೆಂದು ದೊಡ್ಡವರು ಹೇಳಿದ್ದಾರೆ. ದೂತರನ್ನು ದಂಡಿಸುವುದಕ್ಕೆ ಬೇರೆ ಎಷ್ಟೋ ವಿಧಾನಗಳುಂಟು. ಅವಯವಗಳನ್ನು ಕತ್ತರಿಸಿ ವಿರೂಪಗೊಳಿಸುವುದು, ಚಾಟಿಯಿಂದ ಹೊಡೆಸುವುದು, ತಲೆಯನ್ನು ಬೋಳಿಸುವುದು ಮತ್ತು ಬರೆ ಹಾಕಿಸುವುದು—ಇವೆಲ್ಲ ದೂತರಿಗೆ ವಿಧಿಸ ಬಹುದಾದ ಶಿಕ್ಷೆಗಳು. ದೂತರ ವಧೆಮಾಡಿಸುವುದನ್ನು ನಾನು ಕೇಳಿಲ್ಲ (೧೪–೧೫). ಧರ್ಮಾರ್ಥಗಳಲ್ಲಿ ಪಳಗಿ ಅತ್ಯಂತ ವಿವೇಕಶಾಲಿಯಾದ ನಿನ್ನಂತಹವನು ಹೀಗೆ ಕೋಪಾಧೀನನಾಗಬಹುದೆ? ಧೀರರು ಕೋಪವನ್ನು ತಡೆದುಕೊಳ್ಳಬೇಕು. ಎಲೈ ವೀರನೆ, ಧರ್ಮಶಾಸ್ತ್ರದಲ್ಲಾಗಲಿ ಲೋಕವ್ಯವಹಾರ ದಲ್ಲಾಗಲಿ ಶಾಸ್ತ್ರಾರ್ಥವನ್ನು ನಿರ್ಣಯಿಸುವುದರಲ್ಲಾಗಲಿ ನಿನಗೆ ಸಮಾನರು ಯಾರೂ ಇಲ್ಲ. ಸಮಸ್ತ ದೇವಾಸುರರಲ್ಲಿಯೂ ನೀನು ಶ್ರೇಷ್ಠ (೧೬–೧೭).

ಶೂರೇಣ ವೀರೇಣ ನಿಶಾಚರೇಂದ್ರ
ಸುರಾಸುರಾಣಾಮಪಿ ದುರ್ಜಯೇನ ।
ತ್ವಯಾ ಪ್ರಗಲ್ಭಾಃ ಸುರದೈತ್ಯಸಂಘಾ
ಜಿತಾಶ್ಚ ಯುದ್ಧೇಷ್ವಸಕೃನ್ನರೇಂದ್ರಾಃ ॥ ೧೮

ಇತ್ಥಂ ವಿಧಸ್ಯಾಮರದೈತ್ಯಶತ್ರೋಃ
ಶೂರಸ್ಯ ವೀರಸ್ಯ ತವಾಜಿತಸ್ಯ ।
ಕುರ್ವಂತಿ ಮೂಢಾ ಮನಸೋ ವ್ಯಲೀಕಂ
ಪ್ರಾಣೈರ್ವಿಯುಕ್ತಾ ನ ತು ಯೇ ಪುರಾ ತೇ ॥* ೧೯

ನ ಚಾಪ್ಯಸ್ಯ ಕಪೇರ್ಘಾತೇ ಕಂಚಿತ್ ಪಶ್ಯಾಮ್ಯಹಂ ಗುಣಮ್ ।
ತೇಷ್ವಯಂ ಪಾತ್ಯತಾಂ ದಂಡೋ ಯೈರಯಂ ಪ್ರೇಷಿತಃ ಕಪಿಃ ॥ ೨೦

ಸಾಧುರ್ವಾ ಯದಿ ವಾಸಾಧುಃ ಪರೈರೇಷ ಸಮರ್ಪಿತಃ ।
ಬ್ರುವನ್ ಪರಾರ್ಥಂ ಪರವಾನ್ನ ದೂತೋ ವಧಮರ್ಹತಿ ॥ ೨೧

ಅಪಿ ಚಾಸ್ಮಿನ್ ಹತೇ ರಾಜನ್ನಾನ್ಯಂ ಪಶ್ಯಾಮಿ ಖೇಚರಮ್ ।
ಇಹ ಯಃ ಪುನರಾಗಚ್ಛೇತ್ ಪರಂ ಪಾರಂ ಮಹೋದಧೇಃ ॥ ೨೨

ಯುದ್ಧದಲ್ಲಿ ದೇವಾಸುರರನ್ನೂ ಮನುಷ್ಯರಾಜರನ್ನೂ ನೀನು ಎಷ್ಟೋಸಲ ಜಯಿಸಿದ್ದೀಯೆ. ಅಜೇಯನೂ ವೀರಾಧಿವೀರನೂ ಆದ ನಿನ್ನ ಮನಸ್ಸಿಗೆ ಅಪ್ರಿಯವಾದದ್ದನ್ನು ಕೆಲವುವೇಳೆ ಮೂಢರು ಮಾಡುತ್ತಾರೆ. ಅವರೆಲ್ಲರನ್ನೂ ನೀನೇ ಹಿಂದೆ ಪ್ರಾಣಸಹಿತ ಉಳಿಸಿದವನು (೧೮–೧೯). ಮತ್ತು ಈ ಕಪಿಯನ್ನು ಕೊಂದರೆ ಪ್ರಯೋಜನವೂ ಇಲ್ಲ. ಇವನನ್ನು ಕಳಿಸಿದ ಶತ್ರುಗಳನ್ನು ದಂಡಿಸು. ಈತನು ಒಳ್ಳೆಯವನಾಗಲಿ ಕೆಟ್ಟವನಾಗಲಿ, ಬೇರೆಯವರ ಮಾತಿನಂತೆ ಇಲ್ಲಿಗೆ ಬಂದು ಹೇಳಿಕಳಿಸಿದ ಮಾತನ್ನು ಹೇಳಿದ್ದಾನೆ. ಈತನು ಸ್ವತಂತ್ರನಲ್ಲ. ಆದ್ದರಿಂದ ಈ ದೂತನನ್ನು ವಧಿಸುವುದು ಸರಿಯಲ್ಲ (೨೦–೨೧). ಅಲ್ಲದೆ ಇವನನ್ನು ಕೊಂದರೆ

---

* ೧೮-೧೯ನೆಯ ಶ್ಲೋಕಗಳು ಪ್ರಕ್ಷಿಪ್ತವೆಂದು ಕತಕವ್ಯಾಖ್ಯಾನದಲ್ಲಿ ಹೇಳಿದೆ.

ತಸ್ಮಾನ್ನಾಸ್ಯ ವಧೇ ಯತ್ನಃ ಕಾರ್ಯಃ ಪರಪುರಂಜಯ ।
ಭವಾನ್ ಸೇಂದ್ರೇಷು ದೇವೇಷು ಯತ್ನಮಾಸ್ಥಾತುಮರ್ಹತಿ ॥ ೨೩

ಅಸ್ಮಿನ್ ವಿನಷ್ಟೇ ನ ಹಿ ದೂತಮನ್ಯಂ
ಪಶ್ಯಾಮಿ ಯಸ್ತೌ ನರರಾಜಪುತ್ರೌ ।
ಯುದ್ಧಾಯ ಯುದ್ಧಪ್ರಿಯ ದುರ್ವಿನೀತಾ-
ವುದ್ಯೋಜಯೇದ್ದೀರ್ಘಪಥಾವರುದ್ಧೌ ॥ ೨೪

ಪರಾಕ್ರಮೋತ್ಸಾಹಮನಸ್ವಿನಾಂ ಚ
ಸುರಾಸುರಾಣಾಮಪಿ ದುರ್ಜಯೇನ ।
ತ್ವಯಾ ಮನೋನಂದನ ನೈರ್ಋತಾನಾಂ
ಯುದ್ಧಾಯತಿರ್ನಾಶಯಿತುಂ ನ ಯುಕ್ತಾ ॥ ೨೫

ಹಿತಾಶ್ಚ ಶೂರಾಶ್ಚ ಸಮಾಹಿತಾಶ್ಚ
ಕುಲೇಷು ಜಾತಾಶ್ಚ ಮಹಾಗುಣೇಷು ।
ಮನಸ್ವಿನಃ ಶಸ್ತ್ರಭೃತಾಂ ವರಿಷ್ಠಾಃ
ಕೋಟ್ಯಗ್ರತಸ್ತೇ ಸುಭೃತಾಶ್ಚ ಯೋಧಾಃ ॥ ೨೬

ಸಮುದ್ರವನ್ನು ದಾಟಿ ಬರಬಲ್ಲ ಇನ್ನೊಬ್ಬ ಆಕಾಶಗಾಮಿಯನ್ನು ನಾನು ಕಾಣೆ.* ಆದ್ದರಿಂದ ಈ ಕಪಿಯನ್ನು ಕೊಲ್ಲಿಸಬೇಡ (ಇವನನ್ನು ಎತ್ತಿಗಟ್ಟಿರುವ) ಇಂದ್ರಾದಿ ದೇವತೆಗಳನ್ನು ದಂಡಿಸುವ ಯತ್ನಮಾಡು (೨೨–೨೩). ಈ ಕಪಿಯು ಹತನಾದರೆ ಉದ್ಧತರಾದ ರಾಮಲಕ್ಷ್ಮಣರನ್ನು ಇಲ್ಲಿಗೆ ಯಾರು ಕರೆದುಕೊಂಡು ಬರುತ್ತಾರೆ ? ಯುದ್ಧಪ್ರಿಯನಾದ ನಿನಗೆ ಯುದ್ಧಕ್ಕೆ ಅವಕಾಶವೇ ದೊರೆಯುವುದಿಲ್ಲ. ಅಜೇಯನಾದ ನೀನು ರಾಕ್ಷಸರ ಮನಸ್ಸಿಗೆ ಉಲ್ಲಾಸವನ್ನುಂಟುಮಾಡುತ್ತಿದ್ದೀಯೆ. ಉತ್ಸಾಹ ಪರಾಕ್ರಮಗಳಿಂದ ಉಬ್ಬುತ್ತಿರುವ ರಾಕ್ಷಸರಿಗೆ ಯುದ್ಧ ಮಾಡುವ ಸದವಕಾಶವನ್ನು ತಪ್ಪಿಸುವುದು ಸರಿಯಲ್ಲ (೨೪–೨೫). ನಿನ್ನ ವಶದಲ್ಲಿ ಹಿತಕಾರಿಗಳೂ ಶೂರರೂ ಉತ್ತಮ ವಂಶದಲ್ಲಿ ಜನಿಸಿದವರೂ ಧೀರರೂ ಆದ ಕೋಟಿಗಟ್ಟಲೆ

---

* ಆಗ ರಾಮಸುಗ್ರೀವಾದಿ ಶತ್ರುಗಳು ಲಂಕೆಗೆ ಬರುವುದಿಲ್ಲವಾದ್ದರಿಂದ ಅವರನ್ನು ದಂಡಿಸುವುದಕ್ಕೆ ಅವಕಾಶ ಇಲ್ಲದೆ ಹೋಗುತ್ತದೆ ಎಂದು ತಾತ್ಪರ್ಯ.

ತದೇಕದೇಶೇನ ಬಲಸ್ಯ ತಾವತ್
　ಕೇಚಿತ್ತವಾದೇಶಕೃತೋಽಭಿಯಾಂತು ।
ತೌ ರಾಜಪುತ್ರೌ ವಿನಿಗೃಹ್ಯ ಮೂಢೌ
　ಪರೇಷು ತೇ ಭಾವಯಿತುಂ ಪ್ರಭಾವಮ್ ॥ ೨೭

ನಿಶಾಚರಾಣಾಮಧಿಪೋಽನುಜಸ್ಯ
　ವಿಭೀಷಣಸ್ಯೋತ್ತಮವಾಕ್ಯಮಿಷ್ಟಮ್ ।
ಜಗ್ರಾಹ ಬುದ್ಧ್ಯಾ ಸುರಲೋಕಶತ್ರು-
　ರ್ಮಹಾಬಲೋ ರಾಕ್ಷಸರಾಜಮುಖ್ಯಃ ॥ ೨೮

ಕ್ರೋಧಂ ಚ ಜಾತಂ ಹೃದಯೇ ನಿರುಧ್ಯ
　ವಿಭೀಷಣೋಕ್ತಂ ವಚನಂ ಸುಪೂಜ್ಯ ।
ಉವಾಚ ರಕ್ಷೋಽಧಿಪತಿರ್ಮಹಾತ್ಮಾ
　ವಿಭೀಷಣಂ ಶಸ್ತ್ರಭೃತಾಂ ವರಿಷ್ಠಮ್ ॥ ೨೯

ಇತಿ ಶ್ರೀಮದ್ರಾಮಾಯಣೇ ಸುಂದರಕಾಂಡೇ ದ್ವಿಪಂಚಾಶಃ ಸರ್ಗಃ

ಯೋಧರಿದ್ದಾರೆ. ಅವರಲ್ಲಿ ಕೆಲವು ಯೋಧರು ನಿನ್ನ ಆಜ್ಞೆಯನ್ನು ಪಡೆದು ಹೋಗಿ ಮೂಢರಾದ ರಾಮಲಕ್ಷ್ಮಣರನ್ನು ನಿಗ್ರಹಿಸಲಿ. ನಿನ್ನ ಪ್ರಭಾವವೆಷ್ಟೆಂಬುದನ್ನು ತೋರಿಸಿ ಬರಲಿ" ಎಂದು ಹೇಳಿದನು (೨೬–೨೭). ಆಗ ರಾಕ್ಷಸೇಶ್ವರನಾದ ರಾವಣನು ತನ್ನ ತಮ್ಮನಾದ ವಿಭೀಷಣನು ಮನಸ್ಸಿಗೆ ನಾಟುವಂತೆ ಹೇಳಿದ ಮಾತನ್ನು ಪರ್ಯಾಲೋಚಿಸಿ, ಕೊನೆಗೆ ಅವನ ಮಾತನ್ನೇ ಅಂಗೀಕರಿಸಿದನು (೨೮). ಅವನು ವಿಭೀಷಣನ ಹೇಳಿಕೆಯನ್ನು ಗೌರವಿಸಿ ತನ್ನ ಕೋಪವನ್ನು ಒತ್ತಿಹಿಡಿದು, ತಿರುಗಿ ವಿಭೀಷಣನೊಡನೆ ಮಾತನಾಡಿದನು (೨೯).

ಇಲ್ಲಿಗೆ ಶ್ರೀಮದ್ರಾಮಾಯಣದ ಸುಂದರಕಾಂಡದಲ್ಲಿ ಐವತ್ತೆರಡನೆಯ ಸರ್ಗ

ತ್ರಿಪಂಚಾಶಃ ಸರ್ಗಃ

ಪಾವಕಶೈತ್ಯಮ್

ತಸ್ಯ ತದ್ವಚನಂ ಶ್ರುತ್ವಾ ದಶಗ್ರೀವೋ ಮಹಾತ್ಮನಃ ।
ದೇಶಕಾಲಹಿತಂ ವಾಕ್ಯಂ ಭ್ರಾತುರುತ್ತರಮಬ್ರವೀತ್ ॥ ೧

ಸಮ್ಯಗುಕ್ತಂ ಹಿ ಭವತಾ ದೂತವಧ್ಯಾ ವಿಗರ್ಹಿತಾ ।
ಅವಶ್ಯಂ ತು ವಧಾದನ್ಯಃ ಕ್ರಿಯತಾಮಸ್ಯ ನಿಗ್ರಹಃ ॥ ೨

ಕಪೀನಾಂ ಕಿಲ ಲಾಂಗೂಲಮಿಷ್ಟಂ ಭವತಿ ಭೂಷಣಮ್ ।
ತದಸ್ಯ ದೀಪ್ಯತಾಂ ಶೀಘ್ರಂ ತೇನ ದಗ್ಧೇನ ಗಚ್ಛತು ॥ ೩

ತತಃ ಪಶ್ಯಂತ್ವಿಮಂ ದೀನಮಂಗವೈರೂಪ್ಯಕರ್ಶಿತಮ್ ।
ಸಮಿತ್ರಜ್ಞಾತಯಃ ಸರ್ವೇ ಬಾಂಧವಾಃ ಸಸುಹೃಜ್ಜನಾಃ ॥ ೪

ಆಜ್ಞಾಪಯದ್ರಾಕ್ಷಸೇಂದ್ರಃ ಪುರಂ ಸರ್ವಂ ಸಚತ್ವರಮ್ ।
ಲಾಂಗೂಲೇನ ಪ್ರದೀಪ್ತೇನ ರಕ್ಷೋಭಿಃ ಪರಿಣೀಯತಾಮ್ ॥ ೫

ಸರ್ಗ ೫೩

ರಾವಣನ ಆಜ್ಞೆಯಿಂದ ರಾಕ್ಷಸರು ಹನುಮಂತನ ಬಾಲಕ್ಕೆ ಬೆಂಕಿಯನ್ನು ಹತ್ತಿಸುವುದು. ಇದನ್ನು ತಿಳಿದು ಸೀತೆಯು ಅಗ್ನಿದೇವನನ್ನು ಪ್ರಾರ್ಥಿಸಲು, ಅಗ್ನಿಯು ಹನುಮಂತನ ಬಾಲವನ್ನು ಸುಡದೆ ಶೀತಲನಾಗಿರುವುದು.

ರಾವಣನು ತಮ್ಮನಾಡಿದ ದೇಶಕಾಲೋಚಿತವಾದ ಮಾತನ್ನು ಕೇಳಿ "ವಿಭೀಷಣ, ದೂತವಧೆಯು ನಿಂದ್ಯವಾದದ್ದೆಂದು ನೀನು ಹೇಳಿದ್ದು ಯುಕ್ತವೇ ಸರಿ. ಈತನಿಗೆ ವಧೆಯನ್ನು ಬಿಟ್ಟು ಬೇರೆಯ ಶಿಕ್ಷೆಯನ್ನು ವಿಧಿಸಬೇಕು (೧–೨). ಕಪಿಗಳು ತಮ್ಮ ಬಾಲವನ್ನೇ ಭೂಷಣವೆಂದು ತಿಳಿದು ಬಹಳ ಪ್ರೀತಿಸುತ್ತವೆ. ಆದ್ದರಿಂದ ಇವನ ಬಾಲಕ್ಕೆ ಬೆಂಕಿಯನ್ನು ಹತ್ತಿಸಿ ಸುಟ್ಟುಬಿಡೋಣ. ಬಾಲವನ್ನು ಸುಡಿಸಿಕೊಂಡು ಹೋಗಲಿ. ಅಂಗಹೀನನಾಗಿ ದೈನ್ಯದಿಂದ ಹೋಗಿ ನಿಂತ ಈ ಕಪಿಯನ್ನು ಬಂಧುಮಿತ್ರರೆಲ್ಲರೂ ನೋಡಲಿ!" ಎಂದನು (೩–೪). ಅನಂತರ ರಾಕ್ಷಸರನ್ನು ಕುರಿತು "ಎಲೈ ಸೇವಕರೆ, ಈತನ ಬಾಲಕ್ಕೆ ಬೆಂಕಿಯನ್ನು ಹತ್ತಿಸಿ ಬೀದಿ

ತಸ್ಯ ತದ್ವಚನಂ ಶ್ರುತ್ವಾ ರಾಕ್ಷಸಾಃ ಕೋಪಕರ್ಕಶಾಃ ।
ವೇಷ್ಟಯಂತಿ ಸ್ಮ ಲಾಂಗೂಲಂ ಜೀರ್ಣೈಃ ಕಾರ್ಪಾಸಕೈಃ ಪಟೈಃ ॥ ೬

ಸಂವೇಷ್ಟ್ಯಮಾನೇ ಲಾಂಗೂಲೇ ವ್ಯವರ್ಧತ ಮಹಾಕಪಿಃ ।
ಶುಷ್ಕಮಿಂಧನಮಾಸಾದ್ಯ ವನೇಷ್ವಿವ ಹುತಾಶನಃ ॥ ೭

ತೈಲೇನ ಪರಿಷಿಚ್ಯಾಥ ತೇಽಗ್ನಿಂ ತತ್ರಾವಪಾತಯನ್ ।
ಲಾಂಗೂಲೇನ ಪ್ರದೀಪ್ತೇನ ರಾಕ್ಷಸಾಂಸ್ತಾನಪಾತಯತ್ ॥ ೮

ಸ ತು ರೋಷಪರೀತಾತ್ಮಾ ಬಾಲಸೂರ್ಯಸಮಾನನಃ ।
ಲಾಂಗೂಲಂ ಸಂಪ್ರದೀಪ್ತಂ ತದ್ದೃಷ್ಟ್ವಾ ತಸ್ಯ ಹನೂಮತಃ ॥ ೯

ಸಹಸ್ತ್ರೀಬಾಲವೃದ್ಧಾಶ್ಚ ಜಗ್ಮುಃ ಪ್ರೀತಾ ನಿಶಾಚರಾಃ ।
ಸ ಭೂಯಃ ಸಂಗತೈಃ ಕ್ರೂರೈಃ ರಾಕ್ಷಸೈರ್ಹರಿಸತ್ತಮಃ ॥ ೧೦

ನಿಬದ್ಧಃ ಕೃತವಾನ್ ವೀರಸ್ತತ್ಕಾಲಸದೃಶೀಂ ಮತಿಮ್ ।
ಕಾಮಂ ಖಲು ನ ಮೇ ಶಕ್ತಾ ನಿಬದ್ಧಸ್ಯಾಪಿ ರಾಕ್ಷಸಾಃ ॥ ೧೧

ಬೀದಿಗಳಲ್ಲಿಯೂ ಚೌಕಗಳಲ್ಲಿಯೂ ಮೆರವಣಿಗೆ ಮಾಡಿಸಿರಿ'' ಎಂದು ಆಜ್ಞಾಪಿಸಿದನು. ಆಗ ರಾಕ್ಷಸರು ಹನುಮಂತನ ಬಾಲಕ್ಕೆ ಹರಕು ಬಟ್ಟೆಗಳನ್ನು ತಂದು ಸುತ್ತಲಾರಂಭಿಸಿದರು (೫–೬). ಕಾಡಿನ ಒಣ ಸೌದೆಗಳಿಗೆ ತಗುಲಿದ ಬೆಂಕಿಯಂತೆ, ಹನುಮಂತನು ಕ್ಷಣಮಾತ್ರದಲ್ಲಿ ಉಬ್ಬಿ ಬೆಳೆಯುತ್ತಿದ್ದನು. ಬಟ್ಟೆಯನ್ನು ಸುತ್ತಿದ್ದ ಹನುಮಂತನ ಬಾಲಕ್ಕೆ ರಾಕ್ಷಸರು ಎಣ್ಣೆಯನ್ನು ಸುರಿದು ಬೆಂಕಿಯನ್ನು ಹತ್ತಿಸಿದರು. ಆಗ ಹನುಮಂತನು ರೋಷದಿಂದ ಬಾಲಸೂರ್ಯನಂತೆ ಮುಖವನ್ನು ಕೆಂಪಗೆ ಮಾಡಿಕೊಂಡು ಬಾಲವನ್ನು ಗಿರ್ರನೆ ತಿರುಗಿಸಿ ಸುತ್ತಲೂ ಇದ್ದ ರಾಕ್ಷಸರನ್ನು ಉರುಳಿಸಿದನು (೭–೮). ಮೆರವಣಿಗೆಯ ಸುದ್ದಿಯನ್ನು ಕೇಳಿ ಹೆಂಗಸರು, ಮಕ್ಕಳು, ಮುದುಕರು ಮೊದಲಾಗಿ ಲಂಕಾನಿವಾಸಿಗಳು ಸಂತೋಷದಿಂದ ಬಂದು ಸೇರಿದರು. ಆ ಕ್ರೂರ ರಾಕ್ಷಸರು ಮತ್ತೆ ಹನುಮಂತನನ್ನು ಬಲವಾಗಿ ಕಟ್ಟಿ ಬಿಗಿದರು. ಆಗ ಕಪಿವೀರನು ತನ್ನ ಮನಸ್ಸಿನಲ್ಲಿ ''ನನ್ನನ್ನು ಕಟ್ಟಿಹಾಕಿದ್ದರೂ ಈ ರಾಕ್ಷಸರು ನನಗೆ

ಛಿತ್ತ್ವಾ ಪಾಶಾನ್ ಸಮುತ್ಪತ್ಯ ಹನ್ಯಾಮಹಮಿಮಾನ್ ಪುನಃ ।
ಯದಿ ಭರ್ತೃಹಿತಾರ್ಥಾಯ ಚರಂತಂ ಭರ್ತೃಶಾಸನಾತ್ ॥ ೧೨

ಬಧ್ನಂತ್ಯೇತೇ ದುರಾತ್ಮಾನೋ ನ ತು ಮೇ ನಿಷ್ಕೃತಿಃ ಕೃತಾ ।
ಸರ್ವೇಷಾಮೇವ ಪರ್ಯಾಪ್ತೋ ರಾಕ್ಷಸಾನಾಮಹಂ ಯುಧಿ ॥ ೧೩

ರಾಮಸ್ಯ ಕಿಂ ತು ಪ್ರೀತ್ಯರ್ಥಂ ವಿಷಹಿಷ್ಯೇಽಹಮೀದೃಶಮ್ ।
ಲಂಕಾ ಚಾರಯಿತವ್ಯಾ ವೈ ಪುನರೇವ ಭಯೇದಿತಿ ॥ ೧೪

ರಾತ್ರೌ ನ ಹಿ ಸುದೃಷ್ಟಾ ಮೇ ದುರ್ಗಕರ್ಮವಿಧಾನತಃ ।
ಅವಶ್ಯಮೇವ ದ್ರಷ್ಟವ್ಯಾ ಮಯಾ ಲಂಕಾ ನಿಶಾಕ್ಷಯೇ ॥ ೧೫

ಕಾಮಂ ಬಂಧೈಶ್ಚ ಮೇ ಭೂಯಃ ಪುಚ್ಛಸ್ಯೋದ್ದೀಪನೇನ ಚ ।
ಪೀಡಾಂ ಕುರ್ವಂತು ರಕ್ಷಾಂಸಿ ನ ಮೇಽಸ್ತಿ ಮನಸಃ ಶ್ರಮಃ ॥ ೧೬

ತತಸ್ತೇ ಸಂವೃತಾಕಾರಂ ಸತ್ತ್ವವಂತಂ ಮಹಾಕಪಿಮ್ ।
ಪರಿಗೃಹ್ಯ ಯಯುರ್ಹೃಷ್ಟಾ ರಾಕ್ಷಸಾಃ ಕಪಿಕುಂಜರಮ್ ॥ ೧೭

ಎಣಿಸಿಯಲ್ಲ (೯–೧೧). ಹಗ್ಗಗಳನ್ನು ಹರಿದುಹಾಕಿ ಮೇಲೆ ನೆಗೆದು ಇವರನ್ನೆಲ್ಲಾ ಕೊಂದುಹಾಕಬಲ್ಲೆನು. ಸ್ವಾಮಿಕಾರ್ಯಕ್ಕಾಗಿ ಬಂದಿರುವ ನನ್ನನ್ನು ಈ ದುರಾತ್ಮರು ತಮ್ಮ ಒಡೆಯನ ಅಪ್ಪಣೆಯಂತೆ ಕಟ್ಟಿದರೆ ಕಟ್ಟಲಿ. ಇಷ್ಟರಿಂದ ನನಗೆ ತಕ್ಕ ಪ್ರತೀಕಾರವನ್ನು ಮಾಡಿದಂತಾಗಲಿಲ್ಲ. ಇದರಿಂದ ಏನಾದೀತು ? ಈ ಸಮಸ್ತ ರಾಕ್ಷಸರನ್ನೂ ಎದುರಿಸಿ ಯುದ್ಧಮಾಡುವುದಕ್ಕೆ ನಾನೊಬ್ಬನೇ ಸಾಕು (೧೨–೧೩). ಆದರೆ ರಾಮನೇ (ರಾಕ್ಷಸರನ್ನು ಸಂಹರಿಸಿ) ತೃಪ್ತಿಪಡಲೆಂದು ಈ ಅವಮಾನವನ್ನು ಸಹಿಸಿಕೊಳ್ಳುತ್ತೇನೆ. ಅಲ್ಲದೆ ನಾನು ಲಂಕೆಯನ್ನೂ ಸುತ್ತಿದಂತಾಗುತ್ತದೆ. ನಿನ್ನೆ ರಾತ್ರಿಯಾದ್ದರಿಂದ ದುರ್ಗದ ರಕ್ಷಣಾವ್ಯವಸ್ಥೆಯನ್ನು ಸರಿಯಾಗಿ ನೋಡುವುದಕ್ಕಾಗಲಿಲ್ಲ. ಹಗಲುಹೊತ್ತಿನಲ್ಲಿ ಲಂಕೆಯನ್ನು ಚೆನ್ನಾಗಿ ನೋಡಲೇಬೇಕು. (೧೪–೧೫). ಇವರು ಹಗ್ಗಗಳಿಂದ ಬಿಗಿದುಕಟ್ಟಿಯಾದರೂ ಬಾಲಕ್ಕೆ ಬೆಂಕಿಯನ್ನು ಇಟ್ಟಾದರೂ ನನ್ನನ್ನು ಪೀಡಿಸಲಿ. ಅದರಿಂದ ನನ್ನ ಮನಸ್ಸಿಗೆ ಆಯಾಸವೇನೂ ಇಲ್ಲ'' ಎಂದು ನಿಶ್ಚಯಿಸಿ ಸುಮ್ಮನಿದ್ದನು (೧೬). ಅನಂತರ ರಾಕ್ಷಸರು ಇಂಗಿತವನ್ನು ಮರೆಮಾಚಿಕೊಂಡಿದ್ದ

ಶಂಖಭೇರೀನಿನಾದೈಶ್ಚ ಘೋಷಯಂತಃ ಸ್ವಕರ್ಮಭಿಃ ।
ರಾಕ್ಷಸಾಃ ಕ್ರೂರಕರ್ಮಾಣಶ್ಚಾರಯಂತಿ ಸ್ಮ ತಾಂ ಪುರೀಮ್ ॥ ೧೮

ಅನ್ವೀಯಮಾನೋ ರಕ್ಷೋಭಿರ್ಯಯೌ ಸುಖಮರಿಂದಮಃ ।
ಹನೂಮಾಂಶ್ಚಾರಯಾಮಾಸ ರಾಕ್ಷಸಾನಾಂ ಮಹಾಪುರೀಮ್ ॥ ೧೯

ಅಥಾಪಶ್ಯದ್ವಿಮಾನಾನಿ ವಿಚಿತ್ರಾಣಿ ಮಹಾಕಪಿಃ ।
ಸಂವೃತಾನ್ ಭೂಮಿಭಾಗಾಂಶ್ಚ ಸುವಿಭಕ್ತಾಂಶ್ಚ ಚತ್ವರಾನ್ ॥ ೨೦

ವೀಥೀಶ್ಚ ಗೃಹಸಂಬಾಧಾಃ ಕಪಿಃ ಶೃಂಗಾಟಕಾನಿ ಚ ।
ತಥಾ ರಥ್ಯೋಪರಥ್ಯಾಶ್ಚ ತಥೈವ ಚ ಗೃಹಾಂತರಾನ್ ॥ ೨೧

ಗೃಹಾಂಶ್ಚ ಮೇಘಸಂಕಾಶಾನ್ ದದರ್ಶ ಪವನಾತ್ಮಜಃ ।
ಚತ್ವರೇಷು ಚತುಷ್ಕೇಷು ರಾಜಮಾರ್ಗೇ ತಥೈವ ಚ ॥ ೨೨

ಘೋಷಯಂತಿ ಕಪಿಂ ಸರ್ವೇ ಚಾರ ಇತ್ಯೇವ ರಾಕ್ಷಸಾಃ ।
ಸ್ತ್ರೀಬಾಲವೃದ್ಧಾ ನಿರ್ಜಗ್ಮುಸ್ತತ್ರ ತತ್ರ ಕುತೂಹಲಾತ್ ॥ ೨೩

ತಂ ಪ್ರದೀಪಿತಲಾಂಗೂಲಂ ಹನುಮಂತಂ ದಿದೃಕ್ಷವಃ ।
ದೀಪ್ಯಮಾನೇ ತತಸ್ತಸ್ಯ ಲಾಂಗೂಲಾಗ್ರೇ ಹನೂಮತಃ ॥ ೨೪

ಆ ಮಹಾಕಪಿಯನ್ನು ಹಿಡಿದುಕೊಂಡು ಆನಂದದಿಂದ ಶಂಖಗಳನ್ನು ಊದುತ್ತ, ಭೇರಿಗಳನ್ನು ಬಾರಿಸುತ್ತ, ತಮ್ಮ ಪರಾಕ್ರಮವನ್ನು ಹೊಗಳಿಕೊಳ್ಳುತ್ತ ಪಟ್ಟಣದಲ್ಲಿ ಎಳೆದುಕೊಂಡು ಹೋದರು (೧೭–೧೮). ರಾಕ್ಷಸರು ಹೀಗೆ ಹಿಂಬಾಲಿಸಿ ಬರುತ್ತಿರಲು ಹನುಮಂತನು ಅನಾಯಾಸವಾಗಿ ಪಟ್ಟಣದಲ್ಲಿ ಸುತ್ತಾಡಿದನು. ಅವನು ಲಂಕೆಯಲ್ಲಿದ್ದ ವಿಚಿತ್ರ ವಿಮಾನಗಳು, ರಹಸ್ಯ ಪ್ರದೇಶಗಳು, ಅಂಗಳಗಳು, ರಾಜಬೀದಿಗಳು, ಮನೆಗಳ ಸಾಲುಗಳು, ಚೌಕಗಳು, ಗಲ್ಲಿಗಳು, ಎರಡು ಮನೆಗಳಿಗೂ ಮಧ್ಯದಲ್ಲಿರುವ ನಿವೇಶನಗಳು, ಉನ್ನತವಾದ ಸೌಧಗಳು— ಮೊದಲಾದವುಗಳನ್ನು ಗಮನಿಸಿ ನೋಡುತ್ತ ಬಂದನು (೧೯–೨೨). ರಾಕ್ಷಸರು ಅಂಗಳ, ಚೌಕಗಳಲ್ಲಿ ಹನುಮಂತನನ್ನು ತೋರಿಸುತ್ತ 'ಇಗೋ! ಇವನೇ ಗೂಢಚಾರ!' ಎಂದು ಸಾರುತ್ತಿದ್ದರು. ಬೆಂಕಿಹತ್ತಿದ ಬಾಲದೊಡನೆ ಮೆರವಣಿಗೆ ಯಲ್ಲಿ ಬರುತ್ತಿದ್ದ ಹನುಮಂತನನ್ನು ನೋಡುವ ಕುತೂಹಲದಿಂದ ಹೆಂಗಸರು,

ರಾಕ್ಷಸ್ಯಸ್ತಾ ವಿರೂಪಾಕ್ಷಃ ಶಂಸುರ್ದೇವ್ಯಾಸ್ತದಪ್ರಿಯಮ್ ।
ಯಸ್ತ್ವಯಾ ಕೃತಸಂವಾದಃ ಸೀತೇ ತಾಮ್ರಮುಖಃ ಕಪಿಃ ॥ ೨೫

ಲಾಂಗೂಲೇನ ಪ್ರದೀಪ್ತೇನ ಸ ಏಷ ಪರಿಣೀಯತೇ ।
ಶ್ರುತ್ವಾ ತದ್ವಚನಂ ಕ್ರೂರಮಾತ್ಮಾಪಹರಣೋಪಮಮ್ ॥ ೨೬

ವೈದೇಹೀ ಶೋಕಸಂತಪ್ತಾ ಹುತಾಶನಮುಪಾಗಮತ್ ।
ಮಂಗಲಾಭಿಮುಖೀ ತಸ್ಯ ಸಾ ತದಾಸೀನ್ಮಹಾಕಪೇಃ ॥ ೨೭

ಉಪತಸ್ಥೇ ವಿಶಾಲಾಕ್ಷೀ ಪ್ರಯತಾ ಹವ್ಯವಾಹನಮ್ ।
ಯದ್ಯಸ್ತಿ ಪತಿಶುಶ್ರೂಷಾ ಯದ್ಯಸ್ತಿ ಚರಿತಂ ತಪಃ ॥ ೨೮

ಯದಿ ವಾಸ್ತ್ಯೇಕಪತ್ನೀತ್ವಂ ಶೀತೋ ಭವ ಹನೂಮತಃ ।
ಯದಿ ಕಶ್ಚಿದನುಕ್ರೋಶಸ್ತಸ್ಯ ಮಯ್ಯಸ್ತಿ ಧೀಮತಃ ॥ ೨೯

ಯದಿ ವಾ ಭಾಗ್ಯಶೇಷೋ ಮೇ ಶೀತೋ ಭವ ಹನೂಮತಃ ।
ಯದಿ ಮಾಂ ವೃತ್ತಸಂಪನ್ನಾಂ ತತ್ಸಮಾಗಮಲಾಲಸಾಮ್ ॥ ೩೦

ಮಕ್ಕಳು, ಮುದುಕರು ಬಂದು ನೆರೆಯುತ್ತಿದ್ದರು (೨೩–೨೪). ಹೀಗೆ ಹನುಮಂತನ ಬಾಲವು ಉರಿಯುತ್ತಿರಲಾಗಿ ವಿಕಾರವಾದ ಕಣ್ಣಿನ ಕೆಲವು ರಾಕ್ಷಸಿಯರು ಸೀತೆಯ ಬಳಿಗೆ ಬಂದು ''ಎಲೆ ಸೀತೆ ! ಒಂದು ಕೆಂಪುಮೂತಿಯ ಕೋತಿಯು ಬಂದು ನಿನ್ನ ಹತ್ತಿರ ಮಾತನಾಡಿತಲ್ಲ, ಅದರ ಬಾಲಕ್ಕೆ ಬೆಂಕಿಯನ್ನು ಹತ್ತಿಸಿ ಮೆರವಣಿಗೆ ಮಾಡುತ್ತಿದ್ದಾರೆ !'' ಎಂದು ಹೇಳಿದರು (೨೫–೨೬). ಕರ್ಣಕಠೋರವಾದ ಆ ಮಾತನ್ನು ಕೇಳಿ ಸೀತಾದೇವಿಗೆ ತನ್ನನ್ನು ರಾವಣನು ಅಪಹರಿಸಿದಾಗ ಆದಷ್ಟು ದುಃಖವಾಯಿತು. ಅವಳು ಹನುಮಂತನಿಗೆ ಮಂಗಳವಾಗಲೆಂದು ಪರಿಶುದ್ಧ ಮನಸ್ಸಿನಿಂದ ಯಜ್ಞಪುರುಷನನ್ನು ಕುರಿತು ''ಹೇ ಅಗ್ನಿದೇವ, ನಾನು ಪತಿಸೇವೆಯನ್ನು ಮಾಡಿದವಳಾಗಿದ್ದರೆ, ತಪಸ್ಸನ್ನು ಆಚರಿಸಿದ್ದರೆ, ನನ್ನಲ್ಲಿ ಪಾತಿವ್ರತ್ಯ ವಿರುವುದಾದರೆ—ನೀನು ಹನುಮಂತನ ವಿಷಯದಲ್ಲಿ ಶೀತಲನಾಗು (೨೭–೨೮). ಶ್ರೀರಾಮನಿಗೆ ನನ್ನಲ್ಲಿ ಕರುಣೆ ಇದ್ದರೆ, ನನ್ನ ಭಾಗ್ಯವು ಇನ್ನೂ ಸ್ವಲ್ಪ ಉಳಿದಿದ್ದರೆ ಹನುಮಂತನ ವಿಷಯದಲ್ಲಿ ಶೀತಲನಾಗಬೇಕು. ನನ್ನ ನಡತೆಯು ಪರಿಶುದ್ಧವಾಗಿದೆಯೆಂದೂ ನಾನು ಶ್ರೀರಾಮನ ದರ್ಶನಕ್ಕಾಗಿ ಹಾತೊರೆಯು

ಸ ವಿಜಾನಾತಿ ಧರ್ಮಾತ್ಮಾ ಶೀತೋ ಭವ ಹನೂಮತಃ ।
ಯದಿ ಮಾಂ ತಾರಯೇದಾರ್ಯಃ ಸುಗ್ರೀವಃ ಸತ್ಯಸಂಗರಃ ॥ ೩೧

ಅಸ್ಮಾದ್ದುಃಖಾಂಬುಸಂರೋಧಾಚ್ಛೀತೋ ಭವ ಹನೂಮತಃ ।
ತತಸ್ತೀಕ್ಷ್ಣಾರ್ಚಿರವ್ಯಗ್ರಃ ಪ್ರದಕ್ಷಿಣಶಿಖೋಽನಲಃ ॥ ೩೨

ಜಜ್ವಾಲ ಮೃಗಶಾವಾಕ್ಷ್ಯಾಃ ಶಂಸನ್ನಿವ ಶಿವಂ ಕಪೇಃ ।
ಹನುಮಜ್ಜನಕಶ್ಚಾಪಿ ಪುಚ್ಛಾನಲಯುತೋಽನಿಲಃ ॥ ೩೩

ವವೌ ಸ್ವಾಸ್ಥ್ಯಕರೋ ದೇವ್ಯಾಃ ಪ್ರಾಲೇಯಾನಿಲಶೀತಲಃ ।
ದಹ್ಯಮಾನೇ ಚ ಲಾಂಗೂಲೇ ಚಿಂತಯಾಮಾಸ ವಾನರಃ ॥ ೩೪

ಪ್ರದೀಪ್ತೋಽಗ್ನಿರಯಂ ಕಸ್ಮಾನ್ನ ಮಾಂ ದಹತಿ ಸರ್ವತಃ ।
ದೃಶ್ಯತೇ ಚ ಮಹಾಜ್ವಾಲೋ ನ ಕರೋತಿ ಚ ಮೇ ರುಜಮ್ ॥ ೩೫

ಶಿಶಿರಸ್ಯೇವ ಸಂಪಾತೋ ಲಾಂಗೂಲಾಗ್ರೇ ಪ್ರತಿಷ್ಠಿತಃ ।
ಅಥವಾ ತದಿದಂ ವ್ಯಕ್ತಂ ಯದ್ದೃಷ್ಟಂ ಪ್ಲವತಾ ಮಯಾ ॥ ೩೬

ತ್ತಿರುವೆನೆಂದೂ ಧರ್ಮಾತ್ಮನಾದ ರಾಮನು ತಿಳಿದುಕೊಂಡಿರುವುದೇ ಆದರೆ, ಹನುಮಂತನ ವಿಷಯದಲ್ಲಿ ಶೀತಲನಾಗು (೨೯–೩೦). ಸತ್ಯಸಂಧನಾದ ಸುಗ್ರೀವನು ಈ ದುಃಖಸಮುದ್ರದಿಂದ ನನ್ನನ್ನು ದಾಟಿಸುವುದು ಸತ್ಯವಾಗಿದ್ದರೆ, ನೀನು ಹನುಮಂತನ ವಿಷಯದಲ್ಲಿ ಶೀತಲನಾಗು'' ಎಂದು ಪ್ರಾರ್ಥಿಸಿದಳು (೩೧). ಅಷ್ಟರಲ್ಲಿ (ಆಂಜನೇಯನ ಬಾಲಕ್ಕೆ ಹಚ್ಚಿಸಿದ) ಅಗ್ನಿಯು ದೇವಿಗೆ ಶುಭವನ್ನು ಸೂಚಿಸುವಂತೆ ಪ್ರದಕ್ಷಿಣಾಕಾರವಾಗಿ ಜ್ವಲಿಸುತ್ತಿರಲು, ಆಂಜನೇಯನ ಜನಕನಾದ ವಾಯುದೇವನು ಹಿಮಮಾರುತದಷ್ಟು ಶೀತಲವಾಗಿ ಬೀಸಲಾರಂಭಿಸಿದನು (೩೨–೩೩). ಆಗ ಹನುಮಂತನು ''ಅಗ್ನಿಯು ಇಷ್ಟು ಜ್ವಲಿಸುತ್ತಿದ್ದರೂ ನನ್ನನ್ನು ಸುಡುವುದೇ ಇಲ್ಲವೇಕೆ ? ಮಹಾಜ್ವಾಲೆ ಕಾಣಿಸುತ್ತಿದ್ದರೂ ನನಗೆ ಯಾತನೆಯೇ ಆಗುವುದಿಲ್ಲ ! (೩೪–೩೫). ಬಾಲದಮೇಲೆ ಮಂಜುಗಡ್ಡೆಯನ್ನಿಟ್ಟಂತೆ ಆಗಿದೆ ! ಸಮುದ್ರವನ್ನು ದಾಟಿಬರುವಾಗ ಪರ್ವತವೇ ಸಮುದ್ರದಿಂದ ಮೇಲಕ್ಕೆ ಬಂದ

ರಾಮಪ್ರಭಾವಾದಾಶ್ಚರ್ಯಂ ಪರ್ವತಃ ಸರಿತಾಂ ಪತೌ ।
ಯದಿ ತಾವತ್ ಸಮುದ್ರಸ್ಯ ಮೈನಾಕಸ್ಯ ಚ ಧೀಮತಃ ॥ ೩೭

ರಾಮಾರ್ಥಂ ಸಂಭ್ರಮಸ್ತಾದೃಕ್ಕಿಮಗ್ನಿರ್ನ ಕರಿಷ್ಯತಿ ।
ಸೀತಾಯಾಶ್ಚಾನೃಶಂಸ್ಯೇನ ತೇಜಸಾ ರಾಘವಸ್ಯ ಚ ॥ ೩೮

ಪಿತುಶ್ಚ ಮಮ ಸಖ್ಯೇನ ನ ಮಾಂ ದಹತಿ ಪಾವಕಃ ।
ಭೂಯಃ ಸ ಚಿಂತಯಾಮಾಸ ಮುಹೂರ್ತಂ ಕಪಿಕುಂಜರಃ ॥ ೩೯

ಉತ್ಪಪಾತಾಥ ವೇಗೇನ ನನಾದ ಚ ಮಹಾಕಪಿಃ ।
ಪುರದ್ವಾರಂ ತತಃ ಶ್ರೀಮಾನ್ ಶೈಲಶೃಂಗಮಿವೋನ್ನತಮ್ ॥ ೪೦

ವಿಭಕ್ತರಕ್ಷಃಸಂಬಾಧಮಾಸಸಾದಾನಿಲಾತ್ಮಜಃ ।
ಸ ಭೂತ್ವಾ ಶೈಲಸಂಕಾಶಃ ಕ್ಷಣೇನ ಪುನರಾತ್ಮವಾನ್ ॥ ೪೧

ಹ್ರಸ್ವತಾಂ ಪರಮಾಂ ಪ್ರಾಪ್ತೋ ಬಂಧನಾನ್ಯವಶಾತಯತ್ ।
ವಿಮುಕ್ತಶ್ಚಾಭವಚ್ಛ್ರೀಮಾನ್ ಪುನಃ ಪರ್ವತಸಂನಿಭಃ ॥ ೪೨

ಆಶ್ಚರ್ಯವನ್ನು ನೋಡಿದೆನು. ಅದು ಶ್ರೀರಾಮನ ಪ್ರಭಾವವೇ ಸರಿ. ಶ್ರೀರಾಮನ ಕಾರ್ಯಕ್ಕಾಗಿ ಸಮುದ್ರ ಮೈನಾಕಗಳೇ ಅಷ್ಟು ಸಂಭ್ರಮವನ್ನು ತೋರಿಸುತ್ತಿರುವಾಗ ಅಗ್ನಿಯೂ ಏಕೆ ತಣ್ಣಗಾಗಬಾರದು ! ಹೌದು, ಸೀತಾದೇವಿಗೆ ನನ್ನ ಮೇಲಿರುವ ವಾತ್ಸಲ್ಯ, ಶ್ರೀರಾಮನ ಮಹಿಮೆ, ನನ್ನ ತಂದೆಯಲ್ಲಿ ಅಗ್ನಿಗೆ ಇರುವ ಸ್ನೇಹ—ಈ ಮೂರು ಕಾರಣಗಳಿಂದ ಅಗ್ನಿಯು ನನ್ನನ್ನು ಸುಡುತ್ತಿಲ್ಲ'' ಎಂದು ಆಲೋಚಿಸಿ ಮುಂದೆ ಏನು ಮಾಡಬೇಕೆಂದು ನಿರ್ಧರಿಸಿಕೊಂಡನು (೩೬–೩೯). ಕೂಡಲೇ ಆ ವಾನರ ಶ್ರೇಷ್ಠನು ಛಂಗನೆ ಮೇಲಕ್ಕೆ ಹಾರಿ ಸಿಂಹನಾದಮಾಡಿದನು. ಅಲ್ಲಿಂದ ರಾಕ್ಷಸರ ಸಂಚಾರವಿಲ್ಲದ ನಗರ ದ್ವಾರದಮೇಲೆ ಬಂದಿಳಿದನು. ಪರ್ವತಾಕಾರ ವಾಗಿದ್ದ ತನ್ನ ದೇಹವನ್ನು ಬಹಳ ಸಣ್ಣದಾಗಿ ಮಾಡಿಕೊಳ್ಳಲು, ಅವನನ್ನು ಕಟ್ಟಿದ್ದ ಹಗ್ಗದ ಕಟ್ಟುಗಳೆಲ್ಲವೂ ಸಡಿಲಿಬಿದ್ದವು (೪೦–೪೧). ಅನಂತರ ತನ್ನ ದೇಹವನ್ನು ಪುನಃ ಪರ್ವತಾಕಾರವಾಗಿ ಬೆಳೆಯಿಸಿಕೊಂಡು ಸುತ್ತಲೂ ದೃಷ್ಟಿಸಿ

ವೀಕ್ಷಮಾಣಶ್ಚ ದದೃಶೇ ಪರಿಘಂ ತೋರಣಾಶ್ರಿತಮ್ ।
ಸ ತಂ ಗೃಹ್ಯ ಮಹಾಬಾಹುಃ ಕಾಲಾಯಸಪರಿಷ್ಕೃತಮ್ ॥ ೪೩

ರಕ್ಷಿಣಸ್ತಾನ್ ಪುನಃ ಸರ್ವಾನ್ ಸೂದಯಾಮಾಸ ಮಾರುತಿಃ ॥

ಸ ತಾನ್ನಿಹತ್ವಾ ರಣಚಂಡವಿಕ್ರಮಃ
ಸಮೀಕ್ಷಮಾಣಃ ಪುನರೇವ ಲಂಕಾಮ್ ।
ಪ್ರದೀಪ್ತಲಾಂಗೂಲಕೃತಾರ್ಚಿಮಾಲೀ
ಪ್ರಕಾಶತಾದಿತ್ಯ ಇವಾರ್ಚಿಮಾಲೀ ॥ ೪೪

ಇತಿ ಶ್ರೀಮದ್ರಾಮಾಯಣೇ ಸುಂದರಕಾಂಡೇ ತ್ರಿಪಂಚಾಶಃ ಸರ್ಗಃ

ನೋಡುತ್ತಿರುವಾಗ, ಮಹಾದ್ವಾರಕ್ಕೆ ಹಾಕಿದ್ದ ಕಬ್ಬಿಣದ ದೊಡ್ಡ ಅಗುಳಿಯು ಕಾಣಿಸಿತು. ಮಾರುತಿಯು ಅದನ್ನು ಕೈಗೆತ್ತಿಕೊಂಡು ಕಾವಲಿದ್ದ ಸಮಸ್ತರಾಕ್ಷಸರನ್ನೂ ಬಡಿದು ಕೊಂದನು (೪೨–೪೩). ಯುದ್ಧದಲ್ಲಿ ಚಂಡವಿಕ್ರಮನಾದ ಮಾರುತಾತ್ಮಜನು ಮತ್ತೆ ಲಂಕಾನಗರದ ಕಡೆಗೆ ನೋಡುತ್ತ, ಬಾಲದಲ್ಲಿ ಅಗ್ನಿಯು ಧಗಧಗನೆ ಪ್ರಜ್ವಲಿಸುತ್ತಿರಲು, ಸಹಸ್ರಕಿರಣಗಳಿಂದ ಪರಿವೃತನಾದ ಸೂರ್ಯನಂತೆ ಒಪ್ಪುತ್ತಿದ್ದನು (೪೪).

ಇಲ್ಲಿಗೆ ಶ್ರೀಮದ್ರಾಮಾಯಣದ ಸುಂದರಕಾಂಡದಲ್ಲಿ ಐವತ್ತುಮೂರನೆಯ ಸರ್ಗ

ಚತುಷ್ಪಂಚಾಶಃ ಸರ್ಗಃ

ಲಂಕಾದಾಹಃ

ವೀಕ್ಷಮಾಣಸ್ತತೋ ಲಂಕಾಂ ಕಪಿಃ ಕೃತಮನೋರಥಃ ।
ವರ್ಧಮಾನಸಮುತ್ಸಾಹಃ ಕಾರ್ಯಶೇಷಮಚಿಂತಯತ್ ॥ ೧

ಕಿಂ ನು ಖಲ್ವವಶಿಷ್ಟಂ ಮೇ ಕರ್ತವ್ಯಮಿಹ ಸಾಂಪ್ರತಮ್ ।
ಯದೇಷಾಂ ರಕ್ಷಸಾಂ ಭೂಯಃ ಸಂತಾಪಜನನಂ ಭವೇತ್ ॥ ೨

ವನಂ ತಾವತ್ ಪ್ರಮಥಿತಂ ಪ್ರಕೃಷ್ಟಾ ರಾಕ್ಷಸಾ ಹತಾಃ ।
ಬಲೈಕದೇಶಃ ಕ್ಷಪಿತಃ ಶೇಷಂ ದುರ್ಗವಿನಾಶನಮ್ ॥ ೩

ದುರ್ಗೇ ವಿನಾಶಿತೇ ಕರ್ಮ ಭವೇತ್ ಸುಖಪರಿಶ್ರಮಮ್ ।
ಅಲ್ಪಯತ್ನೇನ ಕಾರ್ಯೇಽಸ್ಮಿನ್ ಮಮ ಸ್ಯಾತ್ ಸಫಲಃ ಶ್ರಮಃ ॥ ೪

ಯೋ ಹ್ಯಯಂ ಮಮ ಲಾಂಗೂಲೇ ದೀಪ್ಯತೇ ಹವ್ಯವಾಹನಃ ।
ಅಸ್ಯ ಸಂತರ್ಪಣಂ ನ್ಯಾಯ್ಯಂ ಕರ್ತುಮೇಭಿರ್ಗೃಹೋತ್ತಮೈಃ ॥ ೫

ಸರ್ಗ ೫೪

ಹನುಮಂತನು ಲಂಕೆಯಲ್ಲಿ ವಿಭೀಷಣನ ಮನೆಯೊಂದನ್ನು ಬಿಟ್ಟು
ಉಳಿದ ರಾಕ್ಷಸರ ಮನೆಗಳನ್ನು ಸುಡುವುದು.

ಹೀಗೆ ಹನುಮಂತನು ತನ್ನ ಇಷ್ಟಾರ್ಥವನ್ನು ನೆರವೇರಿಸಿಕೊಂಡು ಉತ್ಸಾಹದಿಂದ ಉಬ್ಬಿ ಲಂಕೆಯನ್ನು ನೋಡುತ್ತ ಮುಂದೆ ನಡೆಸಬೇಕಾದ ಕಾರ್ಯವೇನೆಂದು ಆಲೋಚಿಸಿದನು : ''ಈಗ ನಾನು ಇಲ್ಲಿ ಮಾಡಬೇಕಾಗಿರುವ ಕಾರ್ಯವೇನು ? ಈ ರಾಕ್ಷಸರನ್ನು ಇನ್ನೂ ಗೋಳಾಡಿಸುವುದು ಹೇಗೆ ? (೧–೨). ಅಶೋಕವನವನ್ನು ಧ್ವಂಸಮಾಡಿದ್ದಾಯಿತು. ಪ್ರಬಲರಾದ ರಾಕ್ಷಸರನ್ನು ಸಂಹರಿಸಿದ್ದಾಯಿತು. ಸೇನೆಯ ಒಂದು ಭಾಗ ನಾಶವಾಯಿತು. ಈ ದುರ್ಗವನ್ನು ನಾಶಮಾಡಬೇಕಾದದ್ದು ಉಳಿದಿದೆ. ಇದನ್ನು ನಾಶಮಾಡಿಬಿಟ್ಟರೆ ನನ್ನ ಪರಿಶ್ರಮವು ಸಫಲವಾಗುವುದು. ಆದಕ್ಕಾಗಿ ನಾನು ಮಾಡಬೇಕಾದ ಪ್ರಯತ್ನವೂ ಸ್ವಲ್ಪವೇ (೩–೪). ನನ್ನ ಬಾಲದಲ್ಲಿ ಉರಿಯುತ್ತಿರುವ ಯಜ್ಞಪುರುಷನಿಗೆ ಈ ಮಹಾಭವನ

ತತಃ ಪ್ರದೀಪ್ತಲಾಂಗೂಲಃ ಸವಿದ್ಯುದಿವ ತೋಯದಃ ।
ಭವನಾಗ್ರೇಷು ಲಂಕಾಯಾ ವಿಚಚಾರ ಮಹಾಕಪಿಃ ॥ ೬

ಗೃಹಾದ್ಗೃಹಂ ರಾಕ್ಷಸಾನಾಮುದ್ಯಾನಾನಿ ಚ ವಾನರಃ ।
ವೀಕ್ಷಮಾಣೋ ಹ್ಯಸಂತ್ರಸ್ತಃ ಪ್ರಾಸಾದಾಂಶ್ಚ ಚಚಾರ ಸಃ ॥ ೭

ಅವಪ್ಲುತ್ಯ ಮಹಾವೇಗಃ ಪ್ರಹಸ್ತಸ್ಯ ನಿವೇಶನಮ್ ।
ಅಗ್ನಿಂ ತತ್ರ ಸ ನಿಕ್ಷಿಪ್ಯ ಶ್ವಸನೇನ ಸಮೋ ಬಲೀ ॥ ೮

ತತೋಽನ್ಯತ್ಪುಪ್ಲುವೇ ವೇಶ್ಮ ಮಹಾಪಾರ್ಶ್ವಸ್ಯ ವೀರ್ಯವಾನ್ ।
ಮುಮೋಚ ಹನುಮಾನಗ್ನಿಂ ಕಾಲಾನಲಶಿಖೋಪಮಮ್ ॥ ೯

ವಜ್ರದಂಷ್ಟ್ರಸ್ಯ ಚ ತಥಾ ಪುಪ್ಲುವೇ ಸ ಮಹಾಕಪಿಃ ।
ಶುಕಸ್ಯ ಚ ಮಹಾತೇಜಾಃ ಸಾರಣಸ್ಯ ಚ ಧೀಮತಃ ॥ ೧೦

ತಥಾ ಚೇಂದ್ರಜಿತೋ ವೇಶ್ಮ ದದಾಹ ಹರಿಯೂಥಪಃ ।
ಜಂಬುಮಾಲೇಃ ಸುಮಾಲೇಶ್ಚ ದದಾಹ ಭವನಂ ತತಃ ॥ ೧೧

ರಶ್ಮಿಕೇತೋಶ್ಚ ಭವನಂ ಸೂರ್ಯಶತ್ರೋಸ್ತಥೈವ ಚ ।
ಹ್ರಸ್ವಕರ್ಣಸ್ಯ ದಂಷ್ಟ್ರಸ್ಯ ರೋಮಶಸ್ಯ ಚ ರಕ್ಷಸಃ ॥ ೧೨

ಗಳನ್ನು ಆಹುತಿಯಾಗಿ ಅರ್ಪಿಸಿ ಸಂತರ್ಪಣೆ ಮಾಡಿಸುವುದೇ ಯುಕ್ತ!'' ಹೀಗೆ ಆಲೋಚಿಸಿ ಆ ಮಹಾಕಪಿಯು ಉರಿಯುತ್ತಿರುವ ಬಾಲದೊಂದಿಗೆ, ಮಿಂಚಿನಿಂದ ಕೂಡಿದ ಮೇಘದಂತೆ ಲಂಕಾನಗರದ ಭವನಗಳಮೇಲೆ ಹಾರಿಬಿಟ್ಟನು (೫–೬). ಅವನು ಸ್ವಲ್ಪವೂ ಭಯವಿಲ್ಲದೆ ಮನೆಯಿಂದ ಮನೆಗೆ ನೆಗೆಯುತ್ತ ಹೂದೋಟಗಳನ್ನೂ ಸೌಧಗಳನ್ನೂ ನೋಡುತ್ತ ಸಂಚರಿಸತೊಡಗಿದನು. ಆ ಬಲಾಢ್ಯನು ವಾಯುವೇಗದಿಂದ ಪ್ರಹಸ್ತನ ಮನೆಗೆ ಹಾರಿ ಅದಕ್ಕೆ ಬೆಂಕಿ ಹತ್ತಿಸಿದನು (೭–೮). ಆಮೇಲೆ ಮಹಾಪಾರ್ಶ್ವನ ಭವನಕ್ಕೆ ಕಾಲಾಗ್ನಿಜ್ವಾಲೆಯಂತಿದ್ದ ಬೆಂಕಿಯನ್ನು ತೋರಿಸಿದನು. ಆ ಮಹಾಕಪಿಯು ಅಲ್ಲಿಂದ ವಜ್ರದಂಷ್ಟ್ರ, ಶುಕ, ಸಾರಣ, ಇಂದ್ರಜಿತ್ತು , ಜಂಬುಮಾಲಿ, ಸುಮಾಲಿ, ರಶ್ಮಿಕೇತು, ಸೂರ್ಯಶತ್ರು, ಹ್ರಸ್ವಕರ್ಣ, ದಂಷ್ಟ್ರ, ರೋಮಶರೆಂಬ ರಾಕ್ಷಸರ ಗೃಹಗಳನ್ನು ಸುಡುತ್ತಬಂದನು (೯–೧೨).

ಯುದ್ಧೋನ್ಮತ್ತಸ್ಯ ಮತ್ತಸ್ಯ ಧ್ವಜಗ್ರೀವಸ್ಯ ರಕ್ಷಸಃ ।
ವಿದ್ಯುಜ್ಜಿಹ್ವಸ್ಯ ಘೋರಸ್ಯ ತಥಾ ಹಸ್ತಿಮುಖಸ್ಯ ಚ ॥ ೧೩

ಕರಾಲಸ್ಯ ವಿಶಾಲಸ್ಯ ಶೋಣಿತಾಕ್ಷಸ್ಯ ಚೈವ ಹಿ ।
ಕುಂಭಕರ್ಣಸ್ಯ ಭವನಂ ಮಕರಾಕ್ಷಸ್ಯ ಚೈವ ಹಿ ॥ ೧೪

ಯಜ್ಞಶತ್ರೋಶ್ಚ ಭವನಂ ಬ್ರಹ್ಮಶತ್ರೋಸ್ತಥೈವ ಚ ।
ನರಾಂತಕಸ್ಯ ಕುಂಭಸ್ಯ ನಿಕುಂಭಸ್ಯ ದುರಾತ್ಮನಃ ॥ ೧೫

ವರ್ಜಯಿತ್ವಾ ಮಹಾತೇಜಾ ವಿಭೀಷಣಗೃಹಂ ಪ್ರತಿ ।
ಕ್ರಮಮಾಣಃ ಕ್ರಮೇಣೈವ ದದಾಹ ಹರಿಪುಂಗವಃ ॥ ೧೬

ತೇಷು ತೇಷು ಮಹಾರ್ಹೇಷು ಭವನೇಷು ಮಹಾಯಶಾಃ ।
ಗೃಹೇಷ್ವೃದ್ಧಿಮತಾಮೃದ್ಧಿಂ ದದಾಹ ಸ ಮಹಾಕಪಿಃ ॥ ೧೭

ಸರ್ವೇಷಾಂ ಸಮತಿಕ್ರಮ್ಯ ರಾಕ್ಷಸೇಂದ್ರಸ್ಯ ವೀರ್ಯವಾನ್ ।
ಆಸಸಾದಾಥ ಲಕ್ಷ್ಮೀವಾನ್ ರಾವಣಸ್ಯ ನಿವೇಶನಮ್ ॥ ೧೮

ತತಸ್ತಸ್ಮಿನ್ ಗೃಹೇ ಮುಖ್ಯೇ ನಾನಾರತ್ನವಿಭೂಷಿತೇ ।
ಮೇರುಮಂದರಸಂಕಾಶೇ ಸರ್ವಮಂಗಲಶೋಭಿತೇ ॥ ೧೯

ಅಲ್ಲಿಂದ ಯುದ್ಧೋನ್ಮತ್ತ, ಮತ್ತ, ಧ್ವಜಗ್ರೀವ, ವಿದುಜ್ಜಿಹ್ವ, ಘೋರ, ಹಸ್ತಿಮುಖ, ಕರಾಲ, ವಿಶಾಲ, ಶೋಣಿತಾಕ್ಷ, ಕುಂಭಕರ್ಣ, ಮಕರಾಕ್ಷರೆಂಬ ರಾಕ್ಷಸರ ಭವನಗಳಿಗೆ ಬೆಂಕಿಯಿಟ್ಟನು (೧೩–೧೪). ಅನಂತರ ಯಜ್ಞಶತ್ರು, ಬ್ರಹ್ಮಶತ್ರು, ನರಾಂತಕ, ಕುಂಭರ ಗೃಹಗಳಿಗೆ ಬೆಂಕಿಯನ್ನು ಹತ್ತಿಸಿ ದುರಾತ್ಮನಾದ ನಿಕುಂಭನ ಗೃಹವನ್ನು ಸುಟ್ಟನು. ಹೀಗೆ ಹನುಮಂತನು ಲಂಕೆಯಲ್ಲಿ ವಿಭೀಷಣನ ಮನೆಯೊಂದನ್ನು ಬಿಟ್ಟು ಉಳಿದವರ ಮನೆಗಳನ್ನೆಲ್ಲಾ ಕ್ರಮವಾಗಿ ಸುಡುತ್ತ ಬಂದನು (೧೫–೧೬). ಆ ಮಹಾಕಪಿಯು ಧನಿಕರ ದೊಡ್ಡ ಭವನಗಳಿಗೆ ಬೆಂಕಿಯಿಟ್ಟು ಮನೆಗಳಲ್ಲಿದ್ದ ವೈಭವದ ಸಾಮಗ್ರಿಗಳನ್ನೆಲ್ಲಾ ಸುಟ್ಟು ಬೂದಿ ಮಾಡಿದನು. ಅನಂತರ ರಾವಣನ ಅರಮನೆಯ ಕಡೆಗೆ ತೆರಳಿದನು (೧೭–೧೮). ಅಲ್ಲಿ ನಾನಾ ರತ್ನಗಳಿಂದ ಭೂಷಿತವಾಗಿಯೂ ಮೇರು ಮಂದರ ಪರ್ವತಗಳಂತೆ ಉನ್ನತವಾಗಿಯೂ ಸಮಸ್ತ

ಪ್ರದೀಪ್ತಮಗ್ನಿಮುತ್ಸೃಜ್ಯ ಲಾಂಗೂಲಾಗ್ರೇ ಪ್ರತಿಷ್ಠಿತಮ್ ।
ನನಾದ ಹನುಮಾನ್ ವೀರೋ ಯುಗಾಂತೇ ಜಲದೋ ಯಥಾ ॥ ೨೦

ಶ್ವಸನೇನ ಚ ಸಂಯೋಗಾದತಿವೇಗೋ ಮಹಾಬಲಃ ।
ಕಾಲಾಗ್ನಿರಿವ ಸಂದೀಪ್ತಃ ಪ್ರಾವರ್ಧತ ಹುತಾಶನಃ ॥ ೨೧

ಪ್ರವೃದ್ಧಮಗ್ನಿಂ ಪವನಸ್ತೇಷು ವೇಶ್ಮಸ್ವಚಾರಯತ್ ।
ಅಭೂಚ್ಛ್ವಸನಸಂಯೋಗಾದತಿವೇಗೋ ಹುತಾಶನಃ ॥ ೨೨

ತಾನಿ ಕಾಂಚನಜಾಲಾನಿ ಮುಕ್ತಾಮಣಿಮಯಾನಿ ಚ ।
ಭವನಾನಿ ವ್ಯಶೀರ್ಯಂತ ರತ್ನವಂತಿ ಮಹಾಂತಿ ಚ ॥ ೨೩

ತಾನಿ ಭಗ್ನವಿಮಾನಾನಿ ನಿಪೇತುರ್ಧರಣೀತಲೇ ।
ಭವನಾನೀವ ಸಿದ್ಧಾನಾಮಂಬರಾತ್ ಪುಣ್ಯಸಂಕ್ಷಯೇ ॥ ೨೪

ಸಂಜಜ್ಞೇ ತುಮುಲಃ ಶಬ್ದೋ ರಾಕ್ಷಸಾನಾಂ ಪ್ರಧಾವತಾಮ್ ।
ಸ್ವಗೃಹಸ್ಯ ಪರಿತ್ರಾಣೇ ಭಗ್ನೋತ್ಸಾಹೋರ್ಜಿತಶ್ರಿಯಾಮ್ ॥ ೨೫

ನೂನಮೇಷೋಽಗ್ನಿರಾಯಾತಃ ಕಪಿರೂಪೇಣ ಹಾ ಇತಿ ।
ಕ್ರಂದಂತ್ಯಃ ಸಹಸಾ ಪೇತುಃ ಸ್ತನಂಧಯಧರಾಃ ಸ್ತ್ರಿಯಃ ॥ ೨೬

ಮಂಗಳದ್ರವ್ಯಗಳಿಂದ ಒಪ್ಪುತ್ತಲೂ ಇದ್ದ ಅರಮನೆಗೆ ಬಾಲದಲ್ಲಿ ಉರಿಯುತ್ತಿದ್ದ ಅಗ್ನಿಯನ್ನು ಹತ್ತಿಸಿ, ಪ್ರಳಯಕಾಲದ ಮೇಘದಂತೆ ಗರ್ಜಿಸಿದನು (೧೯–೨೦). ಗಾಳಿಯು ಚೆನ್ನಾಗಿ ಬೀಸತೊಡಗಿದ್ದರಿಂದ ಬೆಂಕಿಯು ಬಹು ಬೇಗನೆ ಕಾಲಾಗ್ನಿಯಂತೆ ಉರಿಯಲಾರಂಭಿಸಿತು. ಗಾಳಿಯು ಅರಮನೆಯ ನಾನಾ ಭಾಗಗಳಿಗೆ ಬೆಂಕಿಯನ್ನು ಹಬ್ಬಿಸಿತು. ಗಾಳಿಯಿಂದ ಬೆಂಕಿಯ ವೇಗ ಹೆಚ್ಚಿತು (೨೧–೨೨). ಚಿನ್ನ, ಮುತ್ತು, ರತ್ನಗಳಿಂದ ಶೋಭಿಸುತ್ತಿದ್ದ ವಿಶಾಲ ಭವನಗಳು ಗೋಪುರ ಸಹಿತವಾಗಿ ಸುಟ್ಟು ನೆಲದ ಮೇಲೆ ಉರುಳುತ್ತಿರಲು, ಪುಣ್ಯವು ತೀರಿದಮೇಲೆ ಆಕಾಶದಿಂದ ಸಿದ್ಧಪುರುಷರ ಭವನಗಳು ಬೀಳುತ್ತಿವೆಯೋ ಎಂಬಂತೆ ಕಾಣಿಸುತ್ತಿತ್ತು (೨೩–೨೪). ತಮ್ಮ ಮನೆಗಳನ್ನು ಉಳಿಸಿಕೊಳ್ಳಲಾರದೆ ನಿರಾಶೆಯಿಂದ ರಾಕ್ಷಸರು ಇಲ್ಲಿಂದಲ್ಲಿಗೆ ಓಡುತ್ತಾ ಕಿರಿಚಿಕೊಳ್ಳುತ್ತಿದ್ದರು. ಕೆಲವು ರಾಕ್ಷಸಸ್ತ್ರೀಯರು ತಮ್ಮ ಮಕ್ಕಳನ್ನೆತ್ತಿಕೊಂಡು "ಅಯ್ಯೋ! ಅಗ್ನಿಯೇ ಕಪಿಯ

ಕಾಶ್ಚಿದಗ್ನಿಪರೀತಾಂಗ್ಯೋ ಹರ್ಮ್ಯೇಭ್ಯೋ ಮುಕ್ತಮೂರ್ಧಜಾಃ ।
ಪತಂತ್ಯೋ ರೇಜಿರೇಽಭ್ರೇಭ್ಯಃ ಸೌದಾಮಿನ್ಯ ಇವಾಂಬರಾತ್ ॥ ೨೭

ವಜ್ರವಿದ್ರುಮವೈದೂರ್ಯಮುಕ್ತಾರಜತಸಂಹಿತಾನ್ ।
ವಿಚಿತ್ರಾನ್ ಭವನಾದ್ಧೂತಾನ್ ಸ್ಯಂದಮಾನಾನ್ ದದರ್ಶ ಸಃ ॥ ೨೮

ನಾಗ್ನಿಸ್ತೃಪ್ಯತಿ ಕಾಷ್ಠಾನಾಂ ತೃಣಾನಾಂ ಚ ಯಥಾ ತಥಾ ।
ಹನೂಮಾನ್ ರಾಕ್ಷಸೇಂದ್ರಾಣಾಂ ವಧೇ ಕಿಂಚಿನ್ನ ತೃಪ್ಯತಿ ॥ ೨೯

ನಾಗ್ನೇರ್ನಾಪಿ ವಿಶಸ್ತಾನಾಂ ರಾಕ್ಷಸಾನಾಂ ವಸುಂಧರಾ ।
ನ ಹನೂಮದ್ವಿಶಸ್ತಾನಾಂ ರಾಕ್ಷಸಾನಾಂ ವಸುಂಧರಾ ॥ ೩೦

ಕ್ವಚಿತ್ ಕಿಂಶುಕಸಂಕಾಶಾಃ ಕ್ವಚಿಚ್ಛಾಲ್ಮಲಿಸಂನಿಭಾಃ ।
ಕ್ವಚಿತ್ ಕುಂಕುಮಸಂಕಾಶಾಃ ಶಿಖಾ ವಹ್ನೇಶ್ಚಕಾಶಿರೇ ॥ ೩೧

ವೇಷದಿಂದ ಬಂದುಬಿಟ್ಟಿದೆ!'' ಎಂದು ಕೂಗಿಕೊಳ್ಳುತ್ತಿರುವಾಗಲೇ ಬೆಂಕಿಯಲ್ಲಿ ಬಿದ್ದುಹೋದರು (೨೫–೨೬). ಮೈಗೆಲ್ಲಾ ಬೆಂಕಿಹತ್ತಿ ತಲೆಕೂದಲು ಕೆದರಿ ಹೋಗಿದ್ದ ಕೆಲವು ರಾಕ್ಷಸಿಯರು, ಮೇಘಮಂಡಲದಿಂದ ಸಿಡಿಯುವ ಮಿಂಚುಗಳಂತೆ ಉಪ್ಪರಿಗೆಗಳಿಂದ ಉರುಳಿಬೀಳುತ್ತಿದ್ದರು. ವಜ್ರ, ಹವಳ, ವೈಢೂರ್ಯ, ಮುತ್ತು, ಬೆಳ್ಳಿ ಮುಂತಾದವುಗಳು ನಾನಾಲೋಹಗಳೊಂದಿಗೆ ಕರಗಿ ನೀರಾಗಿ ಮನೆಗಳಿಂದ ಹರಿದುಹೋಗುತ್ತಿರುವುದು ಹನುಮಂತನಿಗೆ ಕಾಣಿಸಿತು (೨೭–೨೮). ಕಟ್ಟಿಗೆ ಮತ್ತು ಹುಲ್ಲುಗಳನ್ನು ಎಷ್ಟು ಸುಟ್ಟರೂ ಅಗ್ನಿಗೆ ತೃಪ್ತಿ ಇಲ್ಲ. ಹಾಗೆ ರಾಕ್ಷಸರನ್ನು ಎಷ್ಟು ಕೊಂದರೂ ಹನುಮಂತನಿಗೆ ತೃಪ್ತಿ ಇಲ್ಲ! ಎಷ್ಟು ಬೆಂಕಿ ಹಚ್ಚಿದರೂ ತೃಪ್ತಿ ಇಲ್ಲ! ಹಾಗೆಯೇ ಅಗ್ನಿಯಾಗಲಿ ಹನುಮಂತನಾಗಲಿ ಎಷ್ಟು ಮಂದಿ ರಾಕ್ಷಸರನ್ನು ಕೊಂದರೂ ಭೂದೇವಿಗೆ ತೃಪ್ತಿ ಇಲ್ಲ!* (೨೯–೩೦). ಅಗ್ನಿಜ್ವಾಲೆಗಳು ಕೆಲವು ಕಡೆ ಅರಳಿದ ಮುತ್ತುಗದ ಮರಗಳಂತೆಯೂ, ಕೆಲವು ಕಡೆ

---

* ಲಂಕಾಭೂಮಿಯು ರಾಕ್ಷಸರ ಹೆಣಗಳಿಂದ ತುಂಬಿಹೋಯಿತು ಎಂದು ಅಭಿಪ್ರಾಯ.

ಹನೂಮತಾ ವೇಗವತಾ ವಾನರೇಣ ಮಹಾತ್ಮನಾ ।
ಲಂಕಾಪುರಂ ಪ್ರದಗ್ಧಂ ತದ್ರುದ್ರೇಣ ತ್ರಿಪುರಂ ಯಥಾ ॥ ೩೨
ತತಸ್ತು ಲಂಕಾಪುರಪರ್ವತಾಗ್ರೇ
ಸಮುತ್ಥಿತೋ ಭೀಮಪರಾಕ್ರಮೋಽಗ್ನಿಃ ।
ಪ್ರಸಾರ್ಯ ಚೂಡಾವಲಯಂ ಪ್ರದೀಪ್ತೋ
ಹನೂಮತಾ ವೇಗವತಾ ವಿಸೃಷ್ಟಃ ॥ ೩೩
ಯುಗಾಂತಕಾಲಾನಲತುಲ್ಯವೇಗಃ
ಸಮಾರುತೋಽಗ್ನಿರ್ವವೃಧೇ ದಿವಿಸ್ಪೃಕ್ ।
ವಿಧೂಮರಶ್ಮಿರ್ಭವನೇಷು ಸಕ್ತೋ
ರಕ್ಷಃಶರೀರಾಜ್ಯಸಮರ್ಪಿತಾರ್ಚಿಃ ॥ ೩೪
ಆದಿತ್ಯಕೋಟೀಸದೃಶಃ ಸುತೇಜಾ
ಲಂಕಾಂ ಸಮಸ್ತಾಂ ಪರಿವಾರ್ಯ ತಿಷ್ಠನ್ ।
ಶಬ್ದೈರನೇಕೈರಶನಿಪ್ರರೂಢೈ-
ರ್ಭಿಂದನ್ನಿವಾಂಡಂ ಪ್ರಬಭೌ ಮಹಾಗ್ನಿಃ ॥ ೩೫

ಅರಳಿದ ಬೂರುಗದ ಮರಗಳಂತೆಯೂ, ಕೆಲವು ಕಡೆ ಕುಂಕುಮದ ರಾಶಿಯಂತೆಯೂ ತೋರುತ್ತಿದ್ದವು. ಹೀಗೆ, ಪರಮೇಶ್ವರನು ತ್ರಿಪುರವನ್ನು ದಹಿಸಿದಂತೆ, ಮಹಾತ್ಮನಾದ ಹನುಮಂತನು, ಲಂಕಾಪುರವನ್ನು ಸುಟ್ಟುಹಾಕಿದನು (೩೧–೩೨). ಹನುಮಂತನು ವೇಗದಿಂದ ಹತ್ತಿಸಿದ ಅಗ್ನಿಯು ಜ್ವಾಲೆಗಳನ್ನು ಹರಡುತ್ತ ಲಂಕೆಗೆ ಆಧಾರವಾಗಿದ್ದ ತ್ರಿಕೂಟಪರ್ವತದ ಶಿಖರವನ್ನು ಆಕ್ರಮಿಸಿ ಉರಿಯಲಾರಂಭಿಸಿತು. ವಾಯುವಿನ ಸಹಾಯದಿಂದ ಪ್ರಳಯಕಾಲದ ಅಗ್ನಿಯಂತೆ ಆಕಾಶದವರೆಗೂ ವ್ಯಾಪಿಸಿ ಹೊಗೆಯಿಲ್ಲದೆ ಉರಿಯನ್ನು ಚಲ್ಲುತ್ತಿತ್ತು. ಅಗ್ನಿಗೆ ರಾಕ್ಷಸರ ಶರೀರಗಳೇ ತುಪ್ಪದ ಆಹುತಿಯಾಯಿತು (೩೩–೩೪). ಕೋಟಿ ಸೂರ್ಯರು ಉದಯಿಸಿದರೋ ಎಂಬಂತೆ ಬೆಳಕನ್ನು ಕಾರುತ್ತ, ಸಿಡಿಲಿನಂತಹ ಚಟಚಟಾತ್ಕಾರ ಶಬ್ದಗಳಿಂದ ಬ್ರಹ್ಮಾಂಡವನ್ನು ಭೇದಿಸುತ್ತ, ಸಮಸ್ತ ಲಂಕೆಯನ್ನೇ ವ್ಯಾಪಿಸಿ ಅಗ್ನಿಯು ಪ್ರಜ್ವಲಿಸಿತು. ಕ್ರೂರವಾದ ಪ್ರಭೆಯನ್ನು ಸೂಸುತ್ತಿದ್ದ ಅಗ್ನಿಯು ಕೆಲವೆಡೆಯಲ್ಲಿ ಮುತ್ತುಗದ ಹೂವಿನಂತಹ ಜ್ವಾಲೆಯನ್ನು ಪ್ರಸರಿಸಿತು. ಕೆಲವೆಡೆಯಲ್ಲಿ ಬೆಂಕಿಯಡಗಿದಮೇಲೆ,

ತತ್ರಾಂಬರಾದಗ್ನಿರತಿಪ್ರವೃದ್ಧೋ
ರೂಕ್ಷಪ್ರಭಃ ಕಿಂಶುಕಪುಷ್ಪಚೂಡಃ ।
ನಿರ್ವಾಣಧೂಮಾಕುಲರಾಜಯಶ್ಚ
ನೀಲೋತ್ಪಲಾಭಾಃ ಪ್ರಚಕಾಶಿರೇಽಭ್ರಾಃ ॥ ೩೬

ವಜ್ರೀ ಮಹೇಂದ್ರಸ್ತ್ರಿದಶೇಶ್ವರೋ ವಾ
ಸಾಕ್ಷಾದ್ಯಮೋ ವಾ ವರುಣೋಽನಿಲೋ ವಾ ।
ರುದ್ರೋಽಗ್ನಿರರ್ಕೋ ಧನದಶ್ಚ ಸೋಮೋ
ನ ವಾನರೋಽಯಂ ಸ್ವಯಮೇವ ಕಾಲಃ ॥ ೩೭

ಕಿಂ ಬ್ರಹ್ಮಣಃ ಸರ್ವಪಿತಾಮಹಸ್ಯ
ಸರ್ವಸ್ಯ ಧಾತುಶ್ಚತುರಾನನಸ್ಯ ।
ಇಹಾಗತೋ ವಾನರರೂಪಧಾರೀ
ರಕ್ಷೋಪಸಂಹಾರಕರಃ ಪ್ರಕೋಪಃ ॥ ೩೮

ಕಿಂ ವೈಷ್ಣವಂ ವಾ ಕಪಿರೂಪಮೇತ್ಯ
ರಕ್ಷೋವಿನಾಶಾಯ ಪರಂ ಸುತೇಜಃ ।
ಅನಂತಮವ್ಯಕ್ತಮಚಿಂತ್ಯಮೇಕಂ
ಸ್ವಮಾಯಯಾ ಸಾಂಪ್ರತಮಾಗತಂ ವಾ ॥ ೩೯

ಕನ್ನೈದಿಲೆಯ ಹೂಗಳಂತೆ ಕಪ್ಪಾಗಿದ್ದ ಹೊಗೆಯ ರಾಶಿಗಳು ಮೇಘಖಂಡಗಳಂತೆ ಪ್ರಕಾಶಿಸುತ್ತಿದ್ದವು (೩೫–೩೬). ''ಅಬ್ಬಾ ! ಈ ಕಪಿಯು ಯಾರಾಗಿರಬಹುದು ? ವಜ್ರಧಾರಿಯಾದ ದೇವೇಂದ್ರನೊ ! ಸಾಕ್ಷಾತ್ ಯಮನೊ ! ವರುಣನೊ ! ವಾಯುವೋ ! ರುದ್ರನೊ ! ಅಗ್ನಿಯೊ ! ಅಥವಾ ಸೂರ್ಯ, ಕುಬೇರ, ಚಂದ್ರರಲ್ಲಿ ಒಬ್ಬನೊ ! ಇವನು ಕಪಿಯಲ್ಲ, ಕಾಲಪುರುಷನೇ ಇವನು. ಅಥವಾ ರಾಕ್ಷಸರನ್ನೆಲ್ಲಾ ಸಂಹಾರ ಮಾಡಬೇಕೆಂದು ಸಂಕಲ್ಪಿಸಿದ ಚತುರ್ಮುಖ ಬ್ರಹ್ಮನ ಕೋಪವೇ ಕಪಿಯ ರೂಪದಿಂದ ಬಂದಿರಬಹುದೆ ? (೩೭–೩೮). ಇಲ್ಲದಿದ್ದರೆ ಅನಂತವೂ ಅವ್ಯಕ್ತವೂ ಅಚಿಂತ್ಯವೂ ಅದ್ವಿತೀಯವೂ ಆದ ಮಹಾವಿಷ್ಣುವಿನ ತೇಜಸ್ಸು ರಾಕ್ಷಸರನ್ನು ಕೊಲ್ಲುವುದಕ್ಕಾಗಿ ತನ್ನ ಮಹಾಶಕ್ತಿಯಿಂದ ಕಪಿರೂಪವನ್ನು ಧರಿಸಿ ಬಂದಿರ

ಇತ್ಯೇವಮೂಚುರ್ಬಹವೋ ವಿಶಿಷ್ಟಾ
ರಕ್ಷೋಗಣಾಸ್ತತ್ರ ಸಮೇತ್ಯ ಸರ್ವೇ ।
ಸಪ್ರಾಣಿಸಂಘಾಂ ಸಗ್ರಹಾಂ ಸವೃಕ್ಷಾಂ
ದಗ್ಧಾಂ ಪುರೀಂ ತಾಂ ಸಹಸಾ ಸಮೀಕ್ಷ್ಯ ॥ ೪೦
ತತಸ್ತು ಲಂಕಾ ಸಹಸಾ ಪ್ರದಗ್ಧಾ
ಸರಾಕ್ಷಸಾ ಸಾಶ್ವರಥಾ ಸನಾಗಾ ।
ಸಪಕ್ಷಿಸಂಘಾ ಸಮೃಗಾ ಸವೃಕ್ಷಾ
ರುರೋದ ದೀನಾ ತುಮುಲಂ ಸಶಬ್ದಮ್ ॥ ೪೧
ಹಾ ತಾತ ಹಾ ಪುತ್ರಕ ಕಾಂತ ಮಿತ್ರ
ಹಾ ಜೀವಿತಂ ಭೋಗಯುತಂ ಸಪುಣ್ಯಮ್ ।
ರಕ್ಷೋಭಿರೇವಂ ಬಹುಧಾ ಬ್ರುವದ್ಭಿಃ
ಶಬ್ದಃ ಕೃತೋ ಘೋರತರಃ ಸುಭೀಮಃ ॥ ೪೨
ಹುತಾಶನಜ್ವಾಲಸಮಾವೃತಾ ಸಾ
ಹತಪ್ರವೀರಾ ಪರಿವೃತ್ತಯೋಧಾ ।
ಹನೂಮತಃ ಕ್ರೋಧಬಲಾಭಿಭೂತಾ
ಬಭೂವ ಶಾಪೋಪಹತೇವ ಲಂಕಾ ॥ ೪೩

ಬಹುದೆ ?'' ಎಂಬುದಾಗಿ ಸಮಸ್ತ ಲಂಕಾಪುರಿಯೂ ಸುಟ್ಟುಹೋಗುತ್ತಿರುವುದನ್ನು ಕಂಡು ಪ್ರಮುಖರಾದ ರಾಕ್ಷಸರು ಮಾತನಾಡಿಕೊಳ್ಳುತ್ತಿದ್ದರು (೩೯–೪೦). ನಗರದಲ್ಲಿದ್ದ ರಾಕ್ಷಸರೂ ಅಶ್ವರಥಗಳೂ ಆನೆಗಳೂ ಮೃಗಪಕ್ಷಿಗಳೂ ವೃಕ್ಷಗಳೂ ದಹಿಸಿ ಹೋಗುತ್ತಿರಲು, ಎಲ್ಲೆಲ್ಲಿಯೂ ರೋದನ ಧ್ವನಿಯಿಂದ ಲಂಕೆಯು ತುಂಬಿ ಹೋಯಿತು. ''ಅಯ್ಯೋ ! ಅಪ್ಪಾ ! ಅಯ್ಯೊ ಮಗನೆ ! ಹಾ ಪ್ರಾಣಕಾಂತ ! ಹಾ ಮಿತ್ರ ! ಅಯ್ಯೊ ನಮ್ಮ ಜೀವನವೆ ! ನಮ್ಮ ಭಾಗ್ಯವೆ ! ನಮ್ಮ ಪುಣ್ಯವೆ !'' ಮುಂತಾದ ರಾಕ್ಷಸರ ಆಕ್ರಂದನಧ್ವನಿಗಳು ಭಯಂಕರವಾಗಿ ತುಂಬಿಹೋದವು. (೪೧–೪೨). ಹನುಮಂತನ ಕೋಪಕ್ಕೆ ತುತ್ತಾಗಿ ಅಗ್ನಿಜ್ವಾಲೆಗಳಿಂದ ವ್ಯಾಪ್ತವಾದ ಲಂಕೆಯಲ್ಲಿ ರಾಕ್ಷಸವೀರರನೇಕರು ಸತ್ತುಹೋದರು. ಸೈನಿಕರು ದಿಗ್ಭ್ರಾಂತರಾದರು. ಯಾವುದೋ ಶಾಪಕ್ಕೆ ಈಡಾಗಿ ಹಾಳಾಗಿಹೋಯಿತೋ ಎಂಬಂತೆ ಲಂಕೆಯು

ಸಂ ಸಂಭ್ರಮತ್ರಸ್ತವಿಷಣ್ಣರಾಕ್ಷಸಾಂ
ಸಮುಜ್ಜ್ವಲಜ್ಜ್ವಲಹುತಾಶನಾಂಕಿತಾಮ್ ।
ದದರ್ಶ ಲಂಕಾಂ ಹನುಮಾನ್ ಮಹಾಮನಾಃ
ಸ್ವಯಂಭುಕೋಪೋಪಹತಾಮಿವಾವನಿಮ್ ॥ ೪೪

ಭಂಕ್ತ್ವಾ ವನಂ ಪಾದಪರತ್ನಸಂಕುಲಂ
ಹತ್ವಾ ತು ರಕ್ಷಾಂಸಿ ಮಹಾಂತಿ ಸಂಯುಗೇ ।
ದಗ್ಧ್ವಾ ಪುರೀಂ ತಾಂ ಗೃಹರತ್ನಮಾಲಿನೀಂ
ತಸ್ಥೌ ಹನೂಮಾನ್ ಪವನಾತ್ಮಜಃ ಕಪಿಃ ॥ ೪೫

ತ್ರಿಕೂಟಶೃಂಗಾಗ್ರತಲೇ ವಿಚಿತ್ರೇ
ಪ್ರತಿಷ್ಠಿತೋ ವಾನರರಾಜಸಿಂಹಃ ।
ಪ್ರದೀಪ್ತಲಾಂಗೂಲಕೃತಾರ್ಚಿಮಾಲೀ
ವ್ಯರಾಜತಾದಿತ್ಯ ಇವಾಂಶುಮಾಲೀ ॥ ೪೬

ಸ ರಾಕ್ಷಸಾಂಸ್ತಾನ್ ಸುಬಹೂಂಶ್ಚ ಹತ್ವಾ
ವನಂ ಚ ಭಂಕ್ತ್ವಾ ಬಹುಪಾದಪಂ ತತ್ ।
ವಿಸೃಜ್ಯ ರಕ್ಷೋಭವನೇಷು ಚಾಗ್ನಿಂ
ಜಗಾಮ ರಾಮಂ ಮನಸಾ ಮಹಾತ್ಮಾ ॥ ೪೭

ಕಾಣಿಸುತ್ತಿದ್ದಿತು. ಎಲ್ಲೆಲ್ಲಿಯೂ ಭಯದಿಂದ ಕಂಗೆಟ್ಟ ರಾಕ್ಷಸರು ದುಃಖಿಸುತ್ತಿದ್ದರು. ಅಗ್ನಿಜ್ವಾಲೆಯು ಆವರಿಸಿತ್ತು. ಪ್ರಳಯಕಾಲದಲ್ಲಿ ಪರಮೇಶ್ವರನ ಕೋಪಕ್ಕೆ ಈಡಾದ ಜಗತ್ತಿನಂತಿದ್ದ ಲಂಕೆಯನ್ನು ಹನುಮಂತನು ನೋಡುತ್ತಿದ್ದನು (೪೩–೪೪). ಹೀಗೆ ಹನುಮಂತನು ವೃಕ್ಷಗಳಿಂದ ತುಂಬಿದ್ದ ಅಶೋಕವನವನ್ನು ಹಾಳುಮಾಡಿ, ಯುದ್ಧದಲ್ಲಿ ರಾಕ್ಷಸವೀರರನ್ನು ಸಂಹರಿಸಿ, ಉತ್ತಮ ಭವನಗಳಿಂದ ಶೋಭಿಸುತ್ತಿದ್ದ ಲಂಕಾಪಟ್ಟಣವನ್ನು ಸುಟ್ಟುಹಾಕಿದನು. ಅನಂತರ ಆ ಕಪಿರಾಜಸಿಂಹನು ತ್ರಿಕೂಟಪರ್ವತದ ಶಿಖರವನ್ನೇರಿ ಕುಳಿತುಕೊಂಡನು. ಆಗ ಬಾಲದಲ್ಲಿ ಇನ್ನೂ ಬೆಂಕಿಯು ಉರಿಯುತ್ತಿರಲು, ಅವನು ಕಿರಣಮಾಲಿಯಾದ ಸೂರ್ಯನಂತೆ

ತತಸ್ತು ತಂ ವಾನರವೀರಮುಖ್ಯಂ
ಮಹಾಬಲಂ ಮಾರುತತುಲ್ಯವೇಗಮ್
ಮಹಾಮತಿಂ ವಾಯುಸುತಂ ವರಿಷ್ಠಂ
ಪ್ರತುಷ್ಟುವುರ್ದೇವಗಣಾಶ್ಚ ಸರ್ವೇ ॥ ೪೮

ಭಂಕ್ತ್ವಾ ವನಂ ಮಹಾತೇಜಾ ಹತ್ವಾ ರಕ್ಷಾಂಸಿ ಸಂಯುಗೇ ।
ದಗ್ಧ್ವಾ ಲಂಕಾಪುರೀಂ ರಮ್ಯಾಂ ರರಾಜ ಸ ಮಹಾಕಪಿಃ ॥ ೪೯

ತತ್ರ ದೇವಾಃ ಸಗಂಧರ್ವಾಃ ಸಿದ್ಧಾಶ್ಚ ಪರಮರ್ಷಯಃ ।
ದೃಷ್ಟ್ವಾ ಲಂಕಾಂ ಪ್ರದಗ್ಧಾಂ ತಾಂ ವಿಸ್ಮಯಂ ಪರಮಂ ಗತಾಃ ॥ ೫೦

ತಂ ದೃಷ್ಟ್ವಾ ವಾನರಶ್ರೇಷ್ಠಂ ಹನುಮಂತಂ ಮಹಾಕಪಿಮ್ ।
ಕಾಲಾಗ್ನಿರಿತಿ ಸಂಚಿಂತ್ಯ ಸರ್ವಭೂತಾನಿ ತತ್ರಸುಃ ॥ ೫೧

ದೇವಾಶ್ಚ ಸರ್ವೇ ಮುನಿಪುಂಗವಾಶ್ಚ
ಗಂಧರ್ವವಿದ್ಯಾಧರಕಿಂನರಾಶ್ಚ ।

ಶೋಭಿಸುತ್ತಿದ್ದನು (೪೫–೪೬). ಈ ಪ್ರಕಾರದಲ್ಲಿ ಅಶೋಕವನವನ್ನು ನಾಶಮಾಡಿ, ಬಹುಮಂದಿ ರಾಕ್ಷಸರನ್ನು ಕೊಂದು, ಅವರ ಮನೆಗಳಿಗೆ ಬೆಂಕಿಯನ್ನು ಹತ್ತಿಸಿದಮೇಲೆ ಅವನಿಗೆ ಶ್ರೀರಾಮನ ಸ್ಮರಣೆಯುಂಟಾಯಿತು. ಆಗ ನಿಖಿಲದೇವತೆಗಳೂ ಹನುಮಂತನನ್ನು ವಾನರವೀರರಲ್ಲಿ ಶ್ರೇಷ್ಠನೆಂದೂ ಮಹಾಬಲಿಷ್ಠನೆಂದೂ ವಾಯುವಿನಂತೆ ವೇಗಶಾಲಿಯೆಂದೂ ಬುದ್ಧಿಶಾಲಿಯೆಂದೂ ನಾನಾವಿಧವಾಗಿ ಹೊಗಳುತ್ತಿದ್ದರು (೪೭–೪೮). ಹೀಗೆ ಆ ಮಹಾಕಪಿಯು ಅಶೋಕವನವನ್ನು ಮುರಿದು, ರಾಕ್ಷಸರನ್ನು ವಧಿಸಿ, ಲಂಕೆಯನ್ನು ದಹಿಸಿ ತಾನೇ ತಾನಾಗಿ ಮೆರೆದನು. ಲಂಕೆಯು ಭಸ್ಮವಾದುದನ್ನು ಕಂಡು ದೇವಗಂಧರ್ವಸಿದ್ಧರಿಗೂ ಮಹರ್ಷಿಗಳಿಗೂ ಪರಮಾಶ್ಚರ್ಯವಾಯಿತು (೪೯–೫೦). ವಾನರೋತ್ತಮನಾದ ಹನುಮಂತನನ್ನು ಕಾಲಾಗ್ನಿಯೆಂದು ಭಾವಿಸಿ,

ಭೂತಾನಿ ಸರ್ವಾಣಿ ಮಹಾಂತಿ ತತ್ರ
ಜಗ್ಮುಃ ಪರಾಂ ಪ್ರೀತಿಮತುಲ್ಯರೂಪಾಮ್ ॥ ೫೨

ಇತಿ ಶ್ರೀಮದ್ರಾಮಾಯಣೇ ಸುಂದರಕಾಂಡೇ ಚತುಷ್ಪಂಚಾಶಃ ಸರ್ಗಃ

ಪಂಚಪಂಚಾಶಃ ಸರ್ಗಃ

ಹನೂಮದ್ವಿಭ್ರಮಃ

ಲಂಕಾಂ ಸಮಸ್ತಾಂ ಸಂದೀಪ್ಯ ಲಾಂಗೂಲಾಗ್ನಿಂ ಮಹಾಬಲಃ ।
ನಿರ್ವಾಪಯಾಮಾಸ ತದಾ ಸಮುದ್ರೇ ಹರಿಸತ್ತಮಃ ॥ ೧

ಸಂದೀಪ್ಯಮಾನಾಂ ವಿಧ್ವಸ್ತಾಂ ತ್ರಸ್ತರಕ್ಷೋಗಣಾಂ ಪುರೀಮ್ ।
ಅವೇಕ್ಷ್ಯ ಹನುಮಾನ್ ಲಂಕಾಂ ಚಿಂತಯಾಮಾಸ ವಾನರಃ ॥ ೨

ಸಮಸ್ತ ಪ್ರಾಣಿಗಳೂ ಭಯದಿಂದ ನಡುಗುತ್ತಿದ್ದವು. ಮುನಿಗಳೂ ದೇವಗಂಧರ್ವಾದಿಗಳೂ ಆನಂದ ತುಂದಿಲರಾದರು (೫೧–೫೨).

ಇಲ್ಲಿಗೆ ಶ್ರೀಮದ್ರಾಮಾಯಣದ ಸುಂದರಕಾಂಡದಲ್ಲಿ ಐವತ್ತುನಾಲ್ಕನೆಯ ಸರ್ಗ

ಸರ್ಗ ೫೫

ಲಂಕೆಯನ್ನು ಸುಡುವಾಗ ಸೀತೆ ಏನಾದಳೋ ಎಂದು ಹನುಮಂತನು ಭೀತನಾಗುವುದು. ಆಮೇಲೆ ಚಾರಣರ ವಾಕ್ಯದಿಂದ ಸೀತೆಯ ಕುಶಲವನ್ನು ತಿಳಿದು ಪ್ರಯಾಣಸನ್ನದ್ಧನಾಗುವುದು.

ಆಂಜನೇಯನು ಲಂಕೆಯ ಸಮಸ್ತ ಭಾಗಗಳಿಗೂ ಬೆಂಕಿಯಿಟ್ಟಮೇಲೆ, ಬಾಲವನ್ನು ಸಮುದ್ರದಲ್ಲಿ ಅದ್ದಿ ಅದರ ಬೆಂಕಿಯನ್ನು ಆರಿಸಿದನು. ಅವನು ಹಾಗೆಯೇ ನಿಂತು ಲಂಕೆಯು ಉರಿದುಹೋಗುವುದನ್ನೂ ರಾಕ್ಷಸರು ಭೀತರಾಗಿ ಓಡುವುದನ್ನೂ ನೋಡುತ್ತಿರುವಾಗ ಒಂದು ಚಿಂತೆ ಹುಟ್ಟಿತು (೧–೨).

ತಸ್ಯಾಭೂತ್ ಸುಮಹಾಂಸ್ತ್ರಾಸಃ ಕುತ್ಸಾ ಚಾತ್ಮನ್ಯಜಾಯತ ।
ಲಂಕಾಂ ಪ್ರದಹತಾ ಕರ್ಮ ಕಿಂಸ್ವಿತ್ ಕೃತಮಿದಂ ಮಯಾ ॥ ೩

ಧನ್ಯಾಸ್ತೇ ಪುರುಷಶ್ರೇಷ್ಠಾ ಯೇ ಬುದ್ಧ್ಯಾ ಕೋಪಮುತ್ಥಿತಮ್ ।
ನಿರುಂಧಂತಿ ಮಹಾತ್ಮಾನೋ ದೀಪ್ತಮಗ್ನಿಮಿವಾಂಭಸಾ ॥ ೪

ಕ್ರುದ್ಧಃ ಪಾಪಂ ನ ಕುರ್ಯಾತ್ ಕಃ ಕ್ರುದ್ಧೋ ಹನ್ಯಾದ್ಗುರೂನಪಿ ।
ಕ್ರುದ್ಧಃ ಪರುಷಯಾ ವಾಚಾ ನರಃ ಸಾಧೂನಧಿಕ್ಷಿಪೇತ್ ॥ ೫

ವಾಚ್ಯಾವಾಚ್ಯಂ ಪ್ರಕುಪಿತೋ ನ ವಿಜಾನಾತಿ ಕರ್ಹಿಚಿತ್ ।
ನಾಕಾರ್ಯಮಸ್ತಿ ಕ್ರುದ್ಧಸ್ಯ ನಾವಾಚ್ಯಂ ವಿದ್ಯತೇ ಕ್ವಚಿತ್ ॥ ೬

ಯಃ ಸಮುತ್ಪತಿತಂ ಕ್ರೋಧಂ ಕ್ಷಮಯೈವ ನಿರಸ್ಯತಿ ।
ಯಥೋರಗಸ್ತ್ವಚಂ ಜೀರ್ಣಾಂ ಸ ವೈ ಪುರುಷ ಉಚ್ಯತೇ ॥ ೭

ಧಿಗಸ್ತು ಮಾಂ ಸುದುರ್ಬುದ್ಧಿಂ ನಿರ್ಲಜ್ಜಂ ಪಾಪಕೃತ್ತಮಮ್ ।
ಅಚಿಂತಯಿತ್ವಾ ತಾಂ ಸೀತಾಮಗ್ನಿದಂ ಸ್ವಾಮಿಘಾತಕಮ್ ॥ ೮

ಮನಸ್ಸಿನಲ್ಲಿ ಕಳವಳವಾಯಿತು. ತನ್ನನ್ನೇ ನಿಂದಿಸಿಕೊಂಡನು. ''ಅಯ್ಯೋ! ಲಂಕೆಯನ್ನು ಸುಡಬೇಕೆಂದು ಹೊರಟು ಏನು ಮಾಡಿಬಿಟ್ಟೆ! ನೀರನ್ನು ಎರಚಿ ಬೆಂಕಿಯನ್ನು ಆರಿಸುವಂತೆ, ಕೋಪವನ್ನು ವಿಚಾರಶಕ್ತಿಯಿಂದ ಅದುಮಿಹಿಡಿಯ ಬೇಕು. ಹಾಗೆ ಮಾಡತಕ್ಕವರೇ ಶ್ರೇಷ್ಠರು. ಅವರೇ ಧನ್ಯರು (೩–೪). ಕೋಪಬಂದಾಗ ಪಾಪಕೃತ್ಯವನ್ನು ಮಾಡದವನು ಯಾರು? ಕೋಪಬಂದವನು ಹಿರಿಯರನ್ನೂ ಕೊಲ್ಲುತ್ತಾನೆ. ಸಜ್ಜನರನ್ನೂ ಕೆಟ್ಟಮಾತುಗಳಿಂದ ಬಯ್ಯುತ್ತಾನೆ. ಕೋಪಬಂದವನಿಗೆ, ಇದನ್ನು ಹೇಳಬೇಕು ಇದನ್ನು ಹೇಳಬಾರದು—ಎಂಬ ಅರಿವೇ ಇರುವುದಿಲ್ಲ. ಅವನು ಮಾಡದಿರುವ ಕೆಲಸವಿಲ್ಲ, ಆಡದಿರುವ ಮಾತಿಲ್ಲ (೫–೬). ಸರ್ಪವು ಜೀರ್ಣವಾದ ಪೊರೆಯನ್ನು ಬಿಸುಡುವಂತೆ, ಯಾವನು ತಾಳ್ಮೆಯಿಂದ ಕೋಪವನ್ನು ಅಡಗಿಸಿಕೊಳ್ಳುವನೋ ಅವನೇ ಮನುಷ್ಯ. ಲಂಕೆಯಲ್ಲಿ ಸೀತೆ ಇರುವುದನ್ನೇ ಯೋಚಿಸದೆ ಬೆಂಕಿಯನ್ನು ಹತ್ತಿಸಿಬಿಟ್ಟೆನಲ್ಲ! ನಾನು ಸ್ವಾಮಿ ದ್ರೋಹಿ; ದುಷ್ಟ; ನಾಚಿಕೆಗೆಟ್ಟವನು; ಪಾಪಿಷ್ಠ. ಅಯ್ಯೋ! ನನಗೆ ಧಿಕ್ಕಾರ!

ಯದಿ ದಗ್ಧಾ ತ್ವಿಯಂ ಲಂಕಾ ನೂನಮಾರ್ಯಾಪಿ ಜಾನಕೀ ।
ದಗ್ಧಾ ತೇನ ಮಯಾ ಭರ್ತುರ್ಹತಂ ಕಾರ್ಯಮಜಾನತಾ ॥ ೯

ಯದರ್ಥಮಯಮಾರಂಭಸ್ತತ್ಕಾರ್ಯಮವಸಾದಿತಮ್ ।
ಮಯಾ ಹಿ ದಹತಾ ಲಂಕಾಂ ನ ಸೀತಾ ಪರಿರಕ್ಷಿತಾ ॥ ೧೦

ಈಷತ್ಕಾರ್ಯಮಿದಂ ಕಾರ್ಯಂ ಕೃತಮಾಸೀನ್ನ ಸಂಶಯಃ ।
ತಸ್ಯ ಕ್ರೋಧಾಭಿಭೂತೇನ ಮಯಾ ಮೂಲಕ್ಷಯಃ ಕೃತಃ ॥ ೧೧

ವಿನಷ್ಟಾ ಜಾನಕೀ ನೂನಂ ನ ಹ್ಯದಗ್ಧಃ ಪ್ರದೃಶ್ಯತೇ ।
ಲಂಕಾಯಾಂ ಕಶ್ಚಿದುದ್ದೇಶಃ ಸರ್ವಾ ಭಸ್ಮೀಕೃತಾ ಪುರೀ ॥ ೧೨

ಯದಿ ತದ್ವಿಹತಂ ಕಾರ್ಯಂ ಮಮ ಪ್ರಜ್ಞಾವಿಪರ್ಯಯಾತ್ ।
ಇಹೈವ ಪ್ರಾಣಸಂನ್ಯಾಸೋ ಮಮಾಪಿ ಹ್ಯದ್ಯ ರೋಚತೇ ॥ ೧೩

ಕಿಮಗ್ನೌ ನಿಪತಾಮ್ಯದ್ಯ ಆಹೋಸ್ವಿದ್ವಡವಾಮುಖೇ ।
ಶರೀರಮಾಹೋ ಸತ್ತ್ವಾನಾಂ ದದ್ಮಿ ಸಾಗರವಾಸಿನಾಮ್ ॥ ೧೪

(೭-೮). ಲಂಕಾನಗರವೇ ಸುಟ್ಟುಹೋದಮೇಲೆ ಪೂಜ್ಯಳಾದ ಜಾನಕಿಯು ಉಳಿದಿರುತ್ತಾಳೆಯೆ ? ಅವಿವೇಕದಿಂದ ನಾನು ಸ್ವಾಮಿಕಾರ್ಯವನ್ನು ಹಾಳುಮಾಡಿದೆನು. ಯಾವ ಸೀತಾರಕ್ಷಣೆಗಾಗಿ ನಾನು ಪ್ರಯತ್ನಮಾಡಿದೆನೋ ಆ ಕೆಲಸವನ್ನೇ ಕೆಡಿಸಿದೆನು. ಲಂಕೆಯನ್ನು ಸುಡುವಾಗ ಸೀತೆಯನ್ನು ರಕ್ಷಿಸದೆ ಮರೆತೆನು (೯-೧೦). ನನ್ನ ಕರ್ತವ್ಯವನ್ನು ಸುಲಭವಾಗಿಯೇ ಮಾಡಿ ಸಾಧಿಸಿದ್ದೇನೆ, ಸಂದೇಹವಿಲ್ಲ. ಆದರೆ ಕೋಪದಿಂದ ಮುಂದುಗಾಣದೆ ಮುಖ್ಯವಾದ ಕಾರ್ಯವನ್ನು ಕೆಡಿಸಿ ಬುಡವನ್ನೇ ಕಡಿದುಬಿಟ್ಟೆನಲ್ಲ. ನಿಶ್ಚಯವಾಗಿಯೂ ಜಾನಕಿಯು ಬದುಕಿರಲಾರಳು. ಸುಟ್ಟು ಬೂದಿಯಾಗದ ಜಾಗವೇ ಲಂಕೆಯಲ್ಲಿ ಉಳಿದಿಲ್ಲ(೧೧-೧೨). ಬಂದ ಕೆಲಸಕ್ಕೆ ನನ್ನ ಅವಿವೇಕದಿಂದ ಹಾನಿಯಾಗಿದ್ದೇ ನಿಜವಾದರೆ, ಇಲ್ಲಿಯೇ ನಾನು ಪ್ರಾಣವನ್ನು ಬಿಡುವುದೊಳ್ಳೆಯದು. ಈಗ ಬೆಂಕಿಯಲ್ಲಿ ಬೀಳಲೆ ? ಬಡಬಾಗ್ನಿಯ ಬಾಯನ್ನು ಹೊಗಲೆ ? ಅಥವಾ ಸಮುದ್ರದಲ್ಲಿರುವ ಜಲಜಂತುಗಳಿಗೆ ನನ್ನ ದೇಹವನ್ನು ಒಪ್ಪಿಸಿಬಿಡಲೆ ? (೧೩-೧೪). ಹೀಗೆ ಕಾರ್ಯವನ್ನೆಲ್ಲಾ ಕೆಡಿಸಿಬಿಟ್ಟು ಈ

ಕಥಂ ಹಿ ಜೀವತಾ ಶಕ್ಯೋ ಮಯಾ ದ್ರಷ್ಟುಂ ಹರೀಶ್ವರಃ ।
ತೌ ವಾ ಪುರುಷಶಾರ್ದೂಲೌ ಕಾರ್ಯಸರ್ವಸ್ವಘಾತಿನಾ ॥ ೧೫

ಮಯಾ ಖಲು ತದೇವೇದಂ ರೋಷದೋಷಾತ್ ಪ್ರದರ್ಶಿತಮ್ ।
ಪ್ರಥಿತಂ ತ್ರಿಷು ಲೋಕೇಷು ಕಪಿತ್ವಮನವಸ್ಥಿತಮ್ ॥ ೧೬

ಧಿಗಸ್ತು ರಾಜಸಂ ಭಾವಮನೀಶಮನವಸ್ಥಿತಮ್ ।
ಈಶ್ವರೇಣಾಪಿ ಯದ್ರಾಗಾನ್ಮಯಾ ಸೀತಾ ನ ರಕ್ಷಿತಾ ॥ ೧೭

ವಿನಷ್ಟಾಯಾಂ ತು ಸೀತಾಯಾಂ ತಾವುಭೌ ವಿನಶಿಷ್ಯತಃ ।
ತಯೋರ್ವಿನಾಶೇ ಸುಗ್ರೀವಃ ಸಬಂಧುರ್ವಿನಶಿಷ್ಯತಿ ॥ ೧೮

ಏತದೇವ ವಚಃ ಶ್ರುತ್ವಾ ಭರತೋ ಭ್ರಾತೃವತ್ಸಲಃ ।
ಧರ್ಮಾತ್ಮಾ ಸಹಶತ್ರುಘ್ನಃ ಕಥಂ ಶಕ್ಷ್ಯತಿ ಜೀವಿತುಮ್ ॥ ೧೯

ಇಕ್ಷ್ವಾಕುವಂಶೇ ಧರ್ಮಿಷ್ಠೇ ಗತೇ ನಾಶಮಸಂಶಯಮ್ ।
ಭವಿಷ್ಯಂತಿ ಪ್ರಜಾಃ ಸರ್ವಾಃ ಶೋಕಸಂತಾಪಪೀಡಿತಾಃ ॥ ೨೦

ಪ್ರಾಣವನ್ನುಳಿಸಿಕೊಂಡು ಸುಗ್ರೀವನನ್ನು ನೋಡುವುದಾದರೂ ಹೇಗೆ? ರಾಮ ಲಕ್ಷ್ಮಣರನ್ನು ನೋಡುವುದಾದರೂ ಹೇಗೆ? ಚಪಲಸ್ವಭಾವದ ಮಂಗತನವೆಂದ ರೇನೆಂಬುದನ್ನು ಮೂರು ಲೋಕಕ್ಕೂ ಗೊತ್ತಾಗುವಂತೆ ಕೋಪವಶನಾಗಿ ತೋರಿಸಿಬಿಟ್ಟೆನು! (೧೫–೧೬). ಹಿಡಿತವಿಲ್ಲದೆ ಸ್ವೇಚ್ಛೆಯಾಗಿ ಕೆಲಸಮಾಡುವ ಈ ರಜೋಗುಣಕ್ಕೆ ಧಿಕ್ಕಾರ! ನಾನು ಸೀತೆಯನ್ನು ರಕ್ಷಿಸಿಕೊಳ್ಳಲು ಸಮರ್ಥನಾಗಿದ್ದೆನು. ಆದರೂ ಕೋಪದಿಂದ ಮುಂದುಗಾಣದೆ ರಕ್ಷಿಸಿಕೊಳ್ಳದೆ ಹೋದೆನು. ಸೀತೆಯು ಮೃತಳಾದಮೇಲೆ ರಾಮಲಕ್ಷ್ಮಣರಿಬ್ಬರೂ ಪ್ರಾಣವನ್ನು ಬಿಡುವರು. ಆಗ ಸುಗ್ರೀವನೂ ಬಂಧುಸಮೇತನಾಗಿ ಪ್ರಾಣವನ್ನು ಬಿಡುವನು (೧೭–೧೮). ಇದನ್ನು ಕೇಳಿದಮೇಲೆ ಭ್ರಾತೃವತ್ಸಲನೂ ಧರ್ಮಾತ್ಮನೂ ಆದ ಭರತನೂ ಶತ್ರುಘ್ನನೂ ಪ್ರಾಣಸಹಿತರಾಗಿ ಉಳಿಯಬಲ್ಲರೆ? ಧರ್ಮಮಾರ್ಗದಲ್ಲಿ ನಡೆಯುವ ಇಕ್ಷ್ವಾಕು ವಂಶವೇ ನಿರ್ನಾಮವಾದಮೇಲೆ ಸಕಲ ಪ್ರಜೆಗಳೂ ದುಃಖದಿಂದ ನರಳಬೇಕಾಗು ತ್ತದೆ ಎಂಬುದು ನಿಶ್ಚಯ (೧೯–೨೦). ನಾನು ಎಂತಹ ಭಾಗ್ಯಹೀನ! ರೋಷವೆಂಬ

ತದಹಂ ಭಾಗ್ಯರಹಿತೋ ಲುಪ್ತಧರ್ಮಾರ್ಥಸಂಗ್ರಹಃ ।
ರೋಷದೋಷಪರೀತಾತ್ಮಾ ವ್ಯಕ್ತಂ ಲೋಕವಿನಾಶನಃ ॥ ೨೧

ಇತಿ ಚಿಂತಯತಸ್ತಸ್ಯ ನಿಮಿತ್ತಾನ್ಯುಪಪೇದಿರೇ ।
ಪೂರ್ವಮಪ್ಯುಪಲಬ್ಧಾನಿ ಸಾಕ್ಷಾತ್ ಪುನರಚಿಂತಯತ್ ॥ ೨೨

ಅಥವಾ ಚಾರುಸರ್ವಾಂಗೀ ರಕ್ಷಿತಾ ಸ್ವೇನ ತೇಜಸಾ ।
ನ ನಶಿಷ್ಯತಿ ಕಲ್ಯಾಣೀ ನಾಗ್ನಿರಗ್ನೌ ಪ್ರವರ್ತತೇ ॥ ೨೩

ನ ಹಿ ಧರ್ಮಾತ್ಮನಸ್ತಸ್ಯ ಭಾರ್ಯಾಮಮಿತತೇಜಸಃ ।
ಸ್ವಚಾರಿತ್ರಾಭಿಗುಪ್ತಾಂ ತಾಂ ಸ್ಪ್ರಷ್ಟುಮರ್ಹತಿ ಪಾವಕಃ ॥ ೨೪

ನೂನಂ ರಾಮಪ್ರಭಾವೇಣ ವೈದೇಹ್ಯಾಃ ಸುಕೃತೇನ ಚ ।
ಯಸ್ಮಾಂ ದಹನಕರ್ಮಾಯಂ ನಾದಹದ್ಧವ್ಯವಾಹನಃ ॥ ೨೫

ತ್ರಯಾಣಾಂ ಭರತಾದೀನಾಂ ಭ್ರಾತೄಣಾಂ ದೇವತಾ ಚ ಯಾ ।
ರಾಮಸ್ಯ ಚ ಮನಃಕಾಂತಾ ಸಾ ಕಥಂ ವಿನಶಿಷ್ಯತಿ ॥ ೨೬

ದೋಷಕ್ಕೆ ಒಳಗಾಗಿ ಧರ್ಮಾರ್ಥಗಳನ್ನು ಕೆಡಿಸಿಕೊಂಡು ಲೋಕಕ್ಕೆ ಕಂಟಕನಾಗಿ ಬಿಟ್ಟೆನು.'' ಹೀಗೆ ಹನುಮಂತನು ಚಿಂತಿಸುತ್ತಿರುವಾಗ, ಹಿಂದೆ ತನಗೆ ಸಂಭವಿಸಿದ್ದ ಶುಭಶಕುನಗಳು ಮತ್ತೆ ತೋರಿಬಂದವು (೨೧–೨೨). ಆದ್ದರಿಂದ ತಿರುಗಿ ತನ್ನಲ್ಲಿಯೇ ''ಆ ಸುಂದರಾಂಗಿಯನ್ನು ಪಾತಿವ್ರತ್ಯದ ಮಹಿಮೆಯೇ ಕಾಪಾಡಿರಬಹುದು. ಮಂಗಳಸ್ವರೂಪಿಣಿಯಾದ ಅವಳು ಬೆಂಕಿಯಿಂದ ಸಾಯಲಾರಳು. ಬೆಂಕಿಯು ಬೆಂಕಿಯನ್ನೆಂದಾದರೂ ಸುಡಬಲ್ಲುದೆ? ಅವಳು ಧರ್ಮಾತ್ಮನೂ ಮಹಾತೇಜಸ್ವಿಯೂ ಆದ ಶ್ರೀರಾಮನ ಪತ್ನಿ. ಪರಿಶುದ್ಧವಾದ ನಡೆತೆಯೇ ಅವಳಿಗೆ ಬೆಂಗಾವಲಾಗಿದೆ. ಅಂತಹವಳನ್ನು ಅಗ್ನಿಯು ಮುಟ್ಟಲಾರನು (೨೩–೨೪). (ಸೇವಕನಾದ) ನನ್ನನ್ನೇ ಅಗ್ನಿಯು ಸುಡಲಿಲ್ಲ. ಇದಕ್ಕೆ ರಾಮನ ಪ್ರಭಾವವೂ ಸೀತೆಯ ಪರಿಶುದ್ಧವಾದ ನಡತೆಯೂ ಕಾರಣವಲ್ಲದೆ ಬೇರೆ ಇಲ್ಲ. ಭರತ ಲಕ್ಷ್ಮಣ ಶತ್ರುಘ್ನರಿಗೆ ದೇವತೆಯೆನಿಸಿಕೊಂಡು, ಶ್ರೀರಾಮನಿಗೆ ಮನೋವಲ್ಲಭೆಯಾದ ಸೀತಾದೇವಿಯು ನಾಶವಾಗುತ್ತಾಳೆ ಎಂದರೇನು? (೨೫–೨೬). ಅಗ್ನಿಗೆ

ಯದ್ವಾ ದಹನಕರ್ಮಾಯಂ ಸರ್ವತ್ರ ಪ್ರಭುರವ್ಯಯಃ ।
ನ ಮೇ ದಹತಿ ಲಾಂಗೂಲಂ ಕಥಮಾರ್ಯಾಂ ಪ್ರಧಕ್ಷ್ಯತಿ ॥ ೨೭

ಪುನಶ್ಚಾಚಿಂತಯತ್ತತ್ರ ಹನುಮಾನ್ ವಿಸ್ಮಿತಸ್ತದಾ ।
ಹಿರಣ್ಯನಾಭಸ್ಯ ಗಿರೇರ್ಜಲಮಧ್ಯೇ ಪ್ರದರ್ಶನಮ್ ॥ ೨೮

ತಪಸಾ ಸತ್ಯವಾಕ್ಯೇನ ಅನನ್ಯತ್ವಾಚ್ಚ ಭರ್ತರಿ ।
ಅಪಿ ಸಾ ನಿರ್ದಹೇದಗ್ನಿಂ ನ ತಾಮಗ್ನಿಃ ಪ್ರಧಕ್ಷ್ಯತಿ ॥ ೨೯

ಸ ತಥಾ ಚಿಂತಯಂಸ್ತತ್ರ ದೇವ್ಯಾ ಧರ್ಮಪರಿಗ್ರಹಮ್ ।
ಶುಶ್ರಾವ ಹನುಮಾನ್ ವಾಕ್ಯಂ ಚಾರಣಾನಾಂ ಮಹಾತ್ಮನಾಮ್ ॥ ೩೦

ಅಹೋ ಖಲು ಕೃತಂ ಕರ್ಮ ದುಷ್ಕರಂ ಹಿ ಹನೂಮತಾ ।
ಅಗ್ನಿಂ ವಿಸೃಜತಾಭೀಕ್ಷ್ಣಂ ಭೀಮಂ ರಾಕ್ಷಸಸದ್ಮನಿ ॥ ೩೧

ಪ್ರಪಲಾಯಿತರಕ್ಷಃಸ್ತ್ರೀಬಾಲವೃದ್ಧಸಮಾಕುಲಾ ।
ಜನಕೋಲಾಹಲಾಧ್ಮಾತಾ ಕ್ರಂದಂತೀವಾದ್ರಿಕಂದರೇ ॥ ೩೨

ಸುಡುವುದೇ ಸ್ವಭಾವ. ಅವನಿಗೆ ತಡೆ ಎಂಬುದೇ ಇಲ್ಲ. ಅಂಥ ಅಗ್ನಿಯು ನನ್ನ ಬಾಲವನ್ನೇ ಸುಡದಿರುವಾಗ ಆ ದೇವಿಯನ್ನು ಎಂದಿಗಾದರೂ ಸುಡುವನೆ ?'' ಎಂದು ಆಲೋಚಿಸುತ್ತಿರುವಾಗ, ಸಮುದ್ರಮಧ್ಯದಲ್ಲಿ ಮೈನಾಕಪರ್ವತವು ಎದ್ದುಬಂದು ಕಾಣಿಸಿಕೊಂಡುದು ನೆನಪಾಗಿ ವಿಸ್ಮಿತನಾದನು (೨೭-೨೮). ಅವನು ತನ್ನ ಮನಸ್ಸಿನಲ್ಲಿ ''ಸೀತಾದೇವಿಯು ತನ್ನ ತಪಃಪ್ರಭಾವ, ಸತ್ಯದ ಬಲ, ಪಾತಿವ್ರತ್ಯದ ತೇಜಸ್ಸುಗಳಿಂದ ಅಗ್ನಿಯನ್ನೇ ಸುಟ್ಟುಬಿಟ್ಟಾಳು ! ಅಗ್ನಿಯು ಅವಳನ್ನು ಸುಡಲಾರದು'' ಎಂದು ನಿರ್ಧರಿಸಿ, ಸೀತೆಯ ಧರ್ಮನಿಷ್ಠೆಯನ್ನು ಸ್ಮರಿಸಿಕೊಳ್ಳುತ್ತಿರುವಾಗ ಮಹಾತ್ಮರಾದ ಚಾರಣರು ಹೇಳಿಕೊಳ್ಳುತ್ತಿದ್ದ ಕೆಲವು ಮಾತುಗಳು ಅವನಿಗೆ ಕೇಳಿಸಿದುವು (೨೯-೩೦) : ''ಆಹಾ ! ಏನು ಆಶ್ಚರ್ಯ ! ಹನುಮಂತನು ಎಷ್ಟು ಅಸಾಧ್ಯವಾದ ಕಾರ್ಯವನ್ನು ಮಾಡಿಬಿಟ್ಟನು ! ರಾಕ್ಷಸರ ಮನೆಮನೆಗೂ ಘೋರವಾದ ಬೆಂಕಿಯನ್ನು ಹತ್ತಿಸಿಬಿಟ್ಟನು. ಹೆಂಗಸರು, ಮಕ್ಕಳು, ಮುದುಕರು ಮೊದಲಾಗಿ ರಾಕ್ಷಸರೆಲ್ಲರೂ ಭಯದಿಂದ ಓಡುತ್ತಿದ್ದಾರೆ. ಪರ್ವತದ ಗುಹೆಗಳಲ್ಲಿ ಇವರ

ದಗ್ಧೇಯಂ ನಗರೀ ಸರ್ವಾ ಸಾಟ್ಟಪ್ರಾಕಾರತೋರಣಾ ।
ಜಾನಕೀ ನ ಚ ದಗ್ಧೇತಿ ವಿಸ್ಮಯೋಽದ್ಭುತ ಏವ ನಃ ॥ ೩೩

ಇತಿ ಶುಶ್ರಾವ ಹನುಮಾನ್ ವಾಚಂ ತಾಮಮೃತೋಪಮಾಮ್ ।
ಬಭೂವ ಚಾಸ್ಯ ಮನಸೋ ಹರ್ಷಸ್ತತ್ಕಾಲಸಂಭವಃ ॥ ೩೪

ಸ ನಿಮಿತ್ತೈಶ್ಚ ದೃಷ್ಟಾರ್ಥೈಃ ಕಾರಣೈಶ್ಚ ಮಹಾಗುಣೈಃ ।
ಋಷಿವಾಕ್ಯೈಶ್ಚ ಹನುಮಾನಭವತ್ ಪ್ರೀತಮಾನಸಃ ॥ ೩೫

ತತಃ ಕಪಿಃ ಪ್ರಾಪ್ತಮನೋರಥಾರ್ಥ-
ಸ್ತಾಮಕ್ಷತಾಂ ರಾಜಸುತಾಂ ವಿದಿತ್ವಾ ।
ಪ್ರತ್ಯಕ್ಷತಸ್ತಾಂ ಪುನರೇವ ದೃಷ್ಟ್ವಾ
ಪ್ರತಿಪ್ರಯಾಣಾಯ ಮತಿಂ ಚಕಾರ ॥ ೩೬

ಇತಿ ಶ್ರೀಮದ್ರಾಮಾಯಣೇ ಸುಂದರಕಾಂಡೇ ಪಂಚಪಂಚಾಶಃ ಸರ್ಗಃ

ಕೋಲಾಹಲವು ಪ್ರತಿಧ್ವನಿಸಿ ಲಂಕಾನಗರಿಯೇ ಅಳುತ್ತಿರುವಂತೆ ಭಾಸವಾಗುತ್ತದೆ (೩೧–೩೨). ಮಹಡಿ, ಪ್ರಾಕಾರ, ಮಹಾದ್ವಾರಗಳ ಸಹಿತ ಇಡೀ ಲಂಕೆಯೇ ಸುಟ್ಟು ಬೂದಿಯಾಯಿತು. ಆದರೆ ಜಾನಕಿಯು ಮಾತ್ರ ಯಾವ ಅಪಾಯವೂ ಆಗದೆ ಉಳಿದುಕೊಂಡಳು. ಇದು ಅದ್ಭುತವೇ ಸರಿ'' ಎಂದು ಅವರು ಮಾತನಾಡುತ್ತಿದ್ದರು. ಅಮೃತದಂತಿದ್ದ ಆ ಮಾತನ್ನು ಕೇಳಿ ಹನುಮಂತನಿಗೆ ಪರಮಾನಂದವಾಯಿತು (೩೩–೩೪). ಹಿಂದೆ ಫಲಸಿದ್ಧಿಯನ್ನು ಕೊಟ್ಟಿದ್ದ ಶುಭಶಕುನಗಳು ಪುನಃ ತೋರಿದ್ದರಿಂದಲೂ (ರಾಮನ ತೇಜಸ್ಸು, ಸೀತೆಯ ಚಾರಿತ್ರ್ಯ ಮುಂತಾದ) ಮಹಾಗುಣಗಳಿಂದಲೂ ಚಾರಣರ ಮಾತುಗಳಿಂದಲೂ ಹನುಮಂತನಿಗೆ ಹರ್ಷವಾಯಿತು. ತಾನು ಉದ್ದೇಶಿಸಿ ಬಂದ ಕಾರ್ಯವು ಸಫಲವಾಯಿತೆಂದೂ ರಾಜಕುಮಾರಿಯಾದ ಸೀತೆಯು ಕ್ಷೇಮದಿಂದಿರುವಳೆಂದೂ ತಿಳಿದುಕೊಂಡನು. ತಾನು ಪ್ರತ್ಯಕ್ಷವಾಗಿ ಸೀತೆಯನ್ನು ನೋಡಿ, ಅನಂತರ ಹಿಂದಿರುಗಿ ಪ್ರಯಾಣಮಾಡಬೇಕೆಂದು ಆತನು ನಿರ್ಧರಿಸಿದನು (೩೫–೩೬).

ಇಲ್ಲಿಗೆ ಶ್ರೀಮದ್ರಾಮಾಯಣದ ಸುಂದರಕಾಂಡದಲ್ಲಿ ಐವತ್ತೈದನೆಯ ಸರ್ಗ

ಷಟ್‌ಪಂಚಾಶಃ ಸರ್ಗಃ

ಪ್ರತಿಪ್ರಯಾಣೋತ್ಪತನಮ್

ತತಸ್ತಾಂ ಶಿಂಶಪಾಮೂಲೇ ಜಾನಕೀಂ ಪರ್ಯವಸ್ಥಿತಾಮ್ ।
ಅಭಿವಾದ್ಯಾಬ್ರವೀದ್ದಿಷ್ಟ್ಯಾ ಪಶ್ಯಾಮಿ ತ್ವಾಮಿಹಾಕ್ಷತಾಮ್ ॥ ೧

ತತಸ್ತಂ ಪ್ರಸ್ಥಿತಂ ಸೀತಾ ವೀಕ್ಷಮಾಣಾ ಪುನಃ ಪುನಃ ।
ಭರ್ತೃಸ್ನೇಹಾನ್ವಿತಂ ವಾಕ್ಯಂ ಹನೂಮಂತಮಭಾಷತ ॥ ೨

ಕಾಮಮಸ್ಯ ತ್ವಮೇವೈಕಃ ಕಾರ್ಯಸ್ಯ ಪರಿಸಾಧನೇ ।
ಪರ್ಯಾಪ್ತಃ ಪರವೀರಘ್ನ ಯಶಸ್ಯಸ್ತೇ ಬಲೋದಯಃ ॥ ೩

ಶರೈಃ ಸುಸಂಕುಲಾಂ ಕೃತ್ವಾ ಲಂಕಾಂ ಪರಬಲಾರ್ದನಃ ।
ಮಾಂ ನಯೇದ್ಯದಿ ಕಾಕುತ್ಸ್ಥಸ್ತತ್ತಸ್ಯ ಸದೃಶಂ ಭವೇತ್ ॥ ೪

ಸರ್ಗ ೫೬

ಹನುಮಂತನು ಸೀತೆಯನ್ನು ಕಂಡು ಸಮಾಧಾನಪಡಿಸುವುದು. ಆಮೇಲೆ ಸಮುದ್ರವನ್ನು ಲಂಘಿಸುವುದಕ್ಕಾಗಿ ಅರಿಷ್ಟಪರ್ವತವನ್ನೇರಿ ಆಕಾಶಕ್ಕೆ ನೆಗೆಯುವುದು.

ಅನಂತರ ಆಂಜನೇಯನು ಶಿಂಶಪಾವೃಕ್ಷದ ಕೆಳಗೆ ಕುಳಿತಿದ್ದ ಸೀತಾದೇವಿಯ ಸಮೀಪಕ್ಕೆ ಬಂದು ನಮಸ್ಕಾರಮಾಡಿ ''ದೇವಿ, ಇಲ್ಲಿ ಯಾವ ಅಪಾಯಕ್ಕೂ ಸಿಕ್ಕದಿರುವ ನಿನ್ನನ್ನು ಮತ್ತೆ ನೋಡುತ್ತಿದ್ದೇನೆ. ಇದು ನನ್ನ ಭಾಗ್ಯ !'' ಎಂದನು. ಸೀತೆಯು ಪ್ರಯಾಣಕ್ಕೋಸ್ಕರ ಸಿದ್ಧನಾಗಿ ನಿಂತಿದ್ದ ಅವನನ್ನು ಮತ್ತೆ ಮತ್ತೆ ನೋಡುತ್ತ, ತನಗೆ ಪತಿಯಲ್ಲಿರುವ ಪ್ರೇಮವನ್ನು ಸೂಚಿಸುವ ಮಾತಿನಿಂದ ಹೀಗೆಂದಳು (೧–೨): ''ವೀರಾಗ್ರಣಿ, ನೀನೊಬ್ಬನೇ ನನ್ನನ್ನು ಸೆರೆಯಿಂದ ಬಿಡಿಸಿ ಕಾರ್ಯವನ್ನು ಸಾಧಿಸಲು ಸಮರ್ಥನಾಗಿದ್ದೀಯೆ. ಬಲಶಾಲಿಯೆಂದು ನಿನಗೆ ಕೀರ್ತಿ ಬರುವುದು. ಆದರೆ ಶ್ರೀರಾಮನು ತನ್ನ ಶರಗಳಿಂದ ಲಂಕೆಯನ್ನು ಮುಚ್ಚಿ ಶತ್ರುಗಳನ್ನು ಸಂಹರಿಸಿ ನನ್ನನ್ನು ಕರೆದೊಯ್ದರೆ, ಆಗ ಅದು ಅವನ ಹೆಸರಿಗೆ ಯೋಗ್ಯವಾದ ಕೆಲಸವಾಗುತ್ತದೆ (೩–೪). ರಣಧೀರನಾದ ಆ ಮಹಾತ್ಮನು ತನಗೆ

ತದ್ಯಥಾ ತಸ್ಯ ವಿಕ್ರಾಂತಮನುರೂಪಂ ಮಹಾತ್ಮನಃ ।
ಭವೇದಾಹವಶೂರಸ್ಯ ತಥಾ ತ್ವಮುಪಪಾದಯ ॥ ೫

ತದರ್ಥೋಪಹಿತಂ ವಾಕ್ಯಂ ಪ್ರಶ್ರಿತಂ ಹೇತುಸಂಹಿತಮ್ ।
ನಿಶಮ್ಯ ಹನುಮಾಂಸ್ತಸ್ಯ ವಾಕ್ಯಮುತ್ತರಮಬ್ರವೀತ್ ॥ ೬

ಕ್ಷಿಪ್ರಮೇಷ್ಯತಿ ಕಾಕುತ್ಸ್ಥೋ ಹರ್ಯೃಕ್ಷಪ್ರವರೈರ್ವೃತಃ ।
ಯಸ್ತೇ ಯುಧಿ ವಿಜಿತ್ಯಾರೀನ್ ಶೋಕಂ ವ್ಯಪನಯಿಷ್ಯತಿ ॥ ೭

ಏವಮಾಶ್ವಾಸ್ಯ ವೈದೇಹೀಂ ಹನುಮಾನ್ ಮಾರುತಾತ್ಮಜಃ ।
ಗಮನಾಯ ಮತಿಂ ಕೃತ್ವಾ ವೈದೇಹೀಮಭ್ಯವಾದಯತ್ ॥ ೮

ತತಃ ಸ ಕಪಿಶಾರ್ದೂಲಃ ಸ್ವಾಮಿಸಂದರ್ಶನೋತ್ಸುಕಃ ।
ಆರುರೋಹ ಗಿರಿಶ್ರೇಷ್ಠಮರಿಷ್ಟಮರಿಮರ್ದನಃ ॥ ೯

ತುಂಗಪದ್ಮಕಜುಷ್ಟಾಭಿರ್ನೀಲಾಭಿರ್ವನರಾಜಿಭಿಃ ।
ಸೋತ್ತರೀಯಮಿವಾಂಭೋದೈಃ ಶೃಂಗಾಂತರವಿಲಂಬಿಭಿಃ ॥ ೧೦

ಬೋಧ್ಯಮಾನಮಿವ ಪ್ರೀತ್ಯಾ ದಿವಾಕರಕರೈಃ ಶುಭೈಃ ।
ಉನ್ಮಿಷಂತಮಿವೋದ್ಧೂತೈರ್ಲೋಚನೈರಿವ ಧಾತುಭಿಃ ॥ ೧೧

ಅನುರೂಪವಾದ ಪರಾಕ್ರಮವನ್ನು ತೋರಿಸುವಂತೆ ಏರ್ಪಡಿಸಬೇಕು'' ಎಂದಳು (೫). ಅರ್ಥಗರ್ಭಿತವೂ ಯುಕ್ತಿಯುಕ್ತವೂ ಆದ ಸೀತೆಯ ಮಾತನ್ನು ಕೇಳಿ ಹನುಮಂತನು ''ಅಮ್ಮಾ, ಶ್ರೀರಾಮನು ವಾನರ ಭಲ್ಲೂಕ ಸೇನೆಯೊಡನೆ ಶೀಘ್ರದಲ್ಲಿಯೇ ಬಂದು ಶತ್ರುಗಳನ್ನು ಜಯಿಸಿ, ನಿನ್ನ ಕಷ್ಟವನ್ನು ಪರಿಹರಿಸುತ್ತಾನೆ'' ಎಂದು ಹೇಳಿ ವೈದೇಹಿಯನ್ನು ಸಮಾಧಾನಪಡಿಸಿ ಸಾಷ್ಟಾಂಗ ನಮಸ್ಕಾರಮಾಡಿದನು (೬–೮). ಅನಂತರ ಆ ವಾನರಶ್ರೇಷ್ಠನು ತನ್ನ ಸ್ವಾಮಿಯನ್ನು ನೋಡುವ ಉತ್ಸಾಹದಿಂದ ಕೂಡಲೇ ಹೊರಟು ಅರಿಷ್ಟವೆಂಬ ಪರ್ವತವನ್ನು ಹತ್ತಿದನು. ಆ ಪರ್ವತವು ಉನ್ನತವಾದ ಭೂರ್ಜವೃಕ್ಷಗಳಿರುವ ಅರಣ್ಯಗಳಿಂದ ಪರಿಧಾನವನ್ನು (ಪಂಚೆಯನ್ನು) ಉಟ್ಟಂತೆಯೂ ಶಿಖರಗಳಲ್ಲಿ ತೂಗಾಡುವ ಮೋಡಗಳಿಂದ ಉತ್ತರೀಯವನ್ನು ಹೊದ್ದಿರುವಂತೆಯೂ ತೋರುವುದು (೯–೧೦). ಸೂರ್ಯನು ತನ್ನ

ತೋಯೌಘನಿಃಸ್ವನೈರ್ಮಂದ್ರೈಃ ಪ್ರಾಧೀತಮಿವ ಸರ್ವತಃ ।
ಪ್ರಗೀತಮಿವ ವಿಸ್ಪಷ್ಟೈರ್ನಾನಾಪ್ರಸ್ರವಣಸ್ವನೈಃ ॥ ೧೨

ದೇವದಾರುಭಿರತ್ಯುಚ್ಚೈರೂರ್ಧ್ವಬಾಹುಮಿವ ಸ್ಥಿತಮ್ ।
ಪ್ರಪಾತಜಲನಿರ್ಘೋಷೈಃ ಪ್ರಾಕ್ರುಷ್ಟಮಿವ ಸರ್ವತಃ ॥ ೧೩

ವೇಪಮಾನಮಿವ ಶ್ಯಾಮೈಃ ಕಂಪಮಾನೈಃ ಶರದ್ವನೈಃ ।
ವೇಣುಭಿರ್ಮಾರುತೋದ್ಧೂತೈಃ ಕೂಜಂತಮಿವ ಕೀಚಕೈಃ ॥ ೧೪

ನಿಃಶ್ವಸಂತಮಿವಾಮರ್ಷಾದ್ಘೋರೈರಾಶೀವಿಷೋತ್ತಮೈಃ ।
ನೀಹಾರಕೃತಗಂಭೀರೈರ್ಧ್ಯಾಯಂತಮಿವ ಗಹ್ವರೈಃ ॥ ೧೫

ಮೇಘಪಾದನಿಭೈಃ ಪಾದೈಃ ಪ್ರಕ್ರಾಂತಮಿವ ಸರ್ವತಃ ।
ಜೃಂಭಮಾಣಮಿವಾಕಾಶೇ ಶಿಖರೈರಭ್ರಶಾಲಿಭಿಃ ॥ ೧೬

ಕಿರಣಗಳೆಂಬ ಕೈಗಳಿಂದ ಪ್ರೀತಿಪೂರ್ವಕವಾಗಿ ಪರ್ವತವನ್ನು ಎಚ್ಚರಿಸುವಂತೆಯೂ ಪರ್ವತವು ಮಣಿಶಿಲೆ ಮುಂತಾದ ಧಾತುಗಳಿಂದ ಕಣ್ಣು ತೆರೆಯುವಂತೆಯೂ ತೋರುವುದು ! ಆ ಪರ್ವತವು ಗಿರಿನದಿಗಳ ಗಂಭೀರ ನಿನಾದದಿಂದ ವೇದವನ್ನು ಅಧ್ಯಯನಮಾಡುತ್ತಿರುವಂತೆ ಗೋಚರಿಸುವುದು ! ಸಣ್ಣ ಚಿಲುಮೆಗಳ ಮಂಜುಲ ಧ್ವನಿಯಿಂದ ಸಂಗೀತವನ್ನು ಹಾಡುತ್ತಿರುವಂತೆ ಕಾಣುವುದು (೧೧-೧೨). ಎತ್ತರವಾಗಿ ಬೆಳೆದ ದೇವದಾರು ಮರಗಳಿಂದ ಕೈಗಳನ್ನು ಮೇಲೆತ್ತಿ ನಿಂತಂತೆ ಭಾಸವಾಗುವುದು. ಜಲಪಾತಗಳ ಮೊರೆತದಿಂದ ಕೂಗಿಕೊಳ್ಳುತ್ತಿರುವಂತೆ ಕಾಣಿಸುವುದು. ಅಲ್ಲಾಡುತ್ತಿರುವ ಶರತ್ಕಾಲದ ವನಗಳಿಂದ ನಡುಗುವಂತೆಯೂ ಗಾಳಿಯಿಂದ ಕಿರ್ರೆನ್ನುವ ಬಿದಿರುಗಳಿಂದ ಸಿಳ್ಳೆಯನ್ನೂದುವಂತೆಯೂ ಇರುವುದು (೧೩-೧೪). ಘೋರವಾದ ವಿಷಸರ್ಪಗಳಿಂದ ಬುಸುಗುಟ್ಟುವಂತೆಯೂ ಮಂಜಿನಿಂದ ಮುಚ್ಚಿದ ನಿಶ್ಶಬ್ದವಾದ ಗುಹೆಗಳಿಂದ ಧ್ಯಾನಮಾಡುವಂತೆಯೂ ತೋರುವುದು ! ಮೇಘಕ್ಕೆ ತಾಕುವ ಸುತ್ತಲಿನ ಕಿರುಬೆಟ್ಟಗಳಿಂದ ನಡೆದುಹೋಗುವಂತೆಯೂ ಮೇಘವನ್ನು ದಾಟಿಹೋದ ಶೃಂಗಗಳಿಂದ ಮೈಮುರಿಯುವಂತೆಯೂ*

---

* ಮೈಮುರಿಯುವಾಗ ಶರೀರದ ಮೇಲ್ಭಾಗವು ಪಾರ್ಶ್ವಕ್ಕೆ ವಾಲುತ್ತದೆ. ಚಲಿಸುವ ಮೋಡವು ಮೈಮುರಿಯುವ ಪರ್ವತದ ಮೇಲ್ಭಾಗದಂತೆ ಇದ್ದಿತು.

ಕೂಟೈಶ್ಚ ಬಹುಧಾಕೀರ್ಣೈಃ ಶೋಭಿತಂ ಬಹುಕಂದರೈಃ ।
ಸಾಲತಾಲಾಶ್ವಕರ್ಣೈಶ್ಚ ವಂಶೈಶ್ಚ ಬಹುಭಿರ್ವೃತಮ್ ॥ ೧೭

ಲತಾವಿತಾನೈರ್ವಿತತೈಃ ಪುಷ್ಪವದ್ಭಿರಲಂಕೃತಮ್ ।
ನಾನಾಮೃಗಗಣಾಕೀರ್ಣಂ ಧಾತುನಿಷ್ಯಂದಭೂಷಿತಮ್ ॥ ೧೮

ಬಹುಪ್ರಸ್ರವಣೋಪೇತಂ ಶಿಲಾಸಂಚಯಸಂಕಟಮ್ ।
ಮಹರ್ಷಿಯಕ್ಷಗಂಧರ್ವಕಿಂನರೋರಗಸೇವಿತಮ್ ॥ ೧೯

ಲತಾಪಾದಪಸಂಬಾಧಂ ಸಿಂಹಾಧ್ಯುಷಿತಕಂದರಮ್ ।
ವ್ಯಾಘ್ರಸಂಘಸಮಾಕೀರ್ಣಂ ಸ್ವಾದುಮೂಲಫಲೋದಕಮ್ ॥ ೨೦

ತಮಾರುರೋಹ ಹನುಮಾನ್ ಪರ್ವತಂ ಪ್ಲವಗೋತ್ತಮಃ ।
ರಾಮದರ್ಶನಶೀಘ್ರೇಣ ಪ್ರಹರ್ಷೇಣಾಭಿಚೋದಿತಃ ॥ ೨೧

ತೇನ ಪಾದತಲಾಕ್ರಾಂತಾ ರಮ್ಯೇಷು ಗಿರಿಸಾನುಷು ।
ಸಘೋಷಾಃ ಸಮಶೀರ್ಯಂತ ಶಿಲಾಶ್ಚೂರ್ಣೀಕೃತಾಸ್ತತಃ ॥ ೨೨

ಕಾಣುವುದು (೧೫–೧೬). ಅಲ್ಲಿ ಗುಹೆಗಳಿಂದ ತುಂಬಿದ ಅನೇಕ ಶಿಖರಗಳಿದ್ದವು. ಸಾಲ, ತಾಳೆ, ಅಶ್ವಕರ್ಣ, ಬಿದಿರು ಮುಂತಾದುವುಗಳಿಂದ ಆ ಪರ್ವತವು ಶೋಭಿಸುತ್ತಿತ್ತು. ಹೂಗಳು ಅರಳಿರುವ ಲತಾಸಮೂಹಗಳೂ ನಾನಾ ಮೃಗಗಳೂ ಧಾತುಗಳೂ ಅದಕ್ಕೆ ಭೂಷಣವಾಗಿದ್ದವು (೧೭–೧೮). ಅಲ್ಲಿ ಅಸಂಖ್ಯಾತವಾಗಿ ನಿರ್ಝರಗಳು ಹರಿಯುತ್ತಿದ್ದವು. ದೊಡ್ಡ ದೊಡ್ಡ ಬಂಡೆಗಳು ಹೇರಳವಾಗಿದ್ದವು. ಮಹರ್ಷಿಗಳು, ಯಕ್ಷರು, ಗಂಧರ್ವರು, ಕಿಂನರರು ಮತ್ತು ಉರಗರು ಅಲ್ಲಲ್ಲಿ ನೆರೆದಿದ್ದರು. ಆ ಪರ್ವತವು ಮರಬಳ್ಳಿಗಳಿಂದ ತುಂಬಿ ಸಿಂಹಗಳಿರುವ ಗುಹೆಗಳಿಂದ ವ್ಯಾಪ್ತವಾಗಿತ್ತು. ಹುಲಿಗಳು ಸಂಚರಿಸುತ್ತಿದ್ದವು. ಅಲ್ಲಿ ರುಚಿಕರವಾದ ಗೆಡ್ಡೆ, ಹಣ್ಣು ನೀರು ಯಥೇಷ್ಟವಾಗಿತ್ತು (೧೯–೨೦). ಆ ರೀತಿಯಲ್ಲಿದ್ದ ಅರಿಷ್ಟಪರ್ವತವನ್ನು ಹನುಮಂತನು ರಾಮನನ್ನು ನೋಡಬೇಕೆಂಬ ಲವಲವಿಕೆಯಿಂದ ಬೇಗಬೇಗನೆ ಹತ್ತಿದನು. ಅವನು ಮೇಲಕ್ಕೆ ಹತ್ತುವಾಗ ಕಾಲುತುಳಿತಕ್ಕೆ ಸಿಕ್ಕಿದ ಬಂಡೆಗಳು ಪುಡಿಪುಡಿಯಾಗಿ ಶಬ್ದಮಾಡುತ್ತ ಉರುಳಿಬೀಳುತ್ತಿದ್ದವು (೨೧–೨೨).

ಸ ತಮಾರುಹ್ಯ ಶೈಲೇಂದ್ರಂ ವ್ಯವರ್ಧತ ಮಹಾಕಪಿಃ ।
ದಕ್ಷಿಣಾದುತ್ತರಂ ಪಾರಂ ಪ್ರಾರ್ಥಯನ್ ಲವಣಾಂಭಸಃ ॥ ೨೩

ಅಧಿರುಹ್ಯ ತತೋ ವೀರಃ ಪರ್ವತಂ ಪವನಾತ್ಮಜಃ ।
ದದರ್ಶ ಸಾಗರಂ ಭೀಮಂ ಮೀನೋರಗನಿಷೇವಿತಮ್ ॥ ೨೪

ಸ ಮಾರುತ ಇವಾಕಾಶಂ ಮಾರುತಸ್ಯಾತ್ಮಸಂಭವಃ ।
ಪ್ರಪೇದೇ ಹರಿಶಾರ್ದೂಲೋ ದಕ್ಷಿಣಾದುತ್ತರಾಂ ದಿಶಮ್ ॥ ೨೫

ಸ ತದಾ ಪೀಡಿತಸ್ತೇನ ಕಪಿನಾ ಪರ್ವತೋತ್ತಮಃ ।
ರರಾಸ ಸಹ ತೈರ್ಭೂತೈಃ ಪ್ರವಿಶನ್ ವಸುಧಾತಲಮ್ ॥ ೨೬

ಕಂಪಮಾನೈಶ್ಚ ಶಿಖರೈಃ ಪತದ್ಭಿರಪಿ ಚ ದ್ರುಮೈಃ ।
ತಸ್ಯೋರುವೇಗೋನ್ಮಥಿತಾಃ ಪಾದಪಾಃ ಪುಷ್ಪಶಾಲಿನಃ ॥ ೨೭

ನಿಪೇತುರ್ಭೂತಲೇ ರುಗ್ಣಾಃ ಶಕ್ರಾಯುಧಹತಾ ಇವ ।
ಕಂದರೋದರಸಂಸ್ಥಾನಾಂ ಪೀಡಿತಾನಾಂ ಮಹೌಜಸಾಮ್ ॥ ೨೮

ಸಿಂಹಾನಾಂ ನಿನದೋ ಭೀಮೋ ನಭೋ ಭಿಂದನ್ ಹಿ ಶುಶ್ರುವೇ ।
ಸ್ರಸ್ತವ್ಯಾವಿದ್ಧವಸನಾ ವ್ಯಾಕುಲೀಕೃತಭೂಷಣಾಃ ॥ ೨೯

ಆ ಮಹಾಕಪಿಯು ಪರ್ವತವನ್ನು ಹತ್ತಿ ಸಮುದ್ರದ ಉತ್ತರತೀರಕ್ಕೆ ಹೋಗುವುದಕ್ಕಾಗಿ ದೇಹವನ್ನು ಬೆಳೆಸಿಕೊಂಡನು. ಮತ್ಸ್ಯಗಳಿಂದಲೂ ಸರ್ಪಗಳಿಂದಲೂ ತುಂಬಿ ಭಯಂಕರವಾಗಿದ್ದ ಮಹಾಸಾಗರವನ್ನು ಒಮ್ಮೆ ನೋಡಿದನು (೨೩–೨೪). ಆ ಕಪಿಶಾರ್ದೂಲನು ತಂದೆಯಾದ ವಾಯುವಿನಂತೆ ಒಡನೆಯೇ ಆಕಾಶಕ್ಕೆ ನೆಗೆದು, ಮನಸ್ಸಿನಲ್ಲಿ ಉತ್ತರತೀರಕ್ಕೆ ಹೋಗಿ ಸೇರಿದೆನೆಂದು ಭಾವಿಸಿದನು. ಅವನು ನೆಗೆಯುವಾಗ ಪರ್ವತವನ್ನು ಮೆಟ್ಟದ ರಭಸಕ್ಕೆ ಅಲ್ಲಿದ್ದ ಸಮಸ್ತ ಪ್ರಾಣಿಗಳೂ ಕಿರಿಚಿಕೊಂಡವು. ಅರಿಷ್ಟಪರ್ವತವು ನೆಲದಲ್ಲಿ ಕುಸಿದುಹೋಗ ತೊಡಗಿತು (೨೫–೨೬). ಶಿಖರಗಳು ಅಲ್ಲಾಡಿದವು. ಮರಗಳು ಉರುಳಿಬಿದ್ದವು. ಹನುಮಂತನ ತೊಡೆಯ ವೇಗಕ್ಕೆ ಸಿಲುಕಿದ ಪುಷ್ಪಿತ ವೃಕ್ಷಗಳು, ಸಿಡಿಲಿನ ಬಡಿತಕ್ಕೆ ಸಿಕ್ಕಿದಂತೆ ನೆಲದಲ್ಲಿ ಉರುಳಿದವು. ಗುಹೆಗಳಲ್ಲಿ ಸಿಕ್ಕಿಕೊಂಡ ಉಗ್ರಪರಾಕ್ರಮವುಳ್ಳ ಸಿಂಹಗಳು ಆಕಾಶವು ಬಿರಿಯುವಂತೆ ಗರ್ಜಿಸಿದವು. ಬೆಟ್ಟದಲ್ಲಿ ವಿಹರಿಸುತ್ತಿದ್ದ

ವಿದ್ಯಾಧರ್ಯಃ ಸಮುತ್ಪೇತುಃ ಸಹಸಾ ಧರಣೀಧರಾತ್ ।
ಅತಿಪ್ರಮಾಣಾ ಬಲಿನೋ ದೀಪ್ತಜಿಹ್ವಾ ಮಹಾವಿಷಾಃ ॥ ೩೦
ನಿಪೀಡಿತಶಿರೋಗ್ರೀವಾ ವ್ಯವೇಷ್ಟಂತ ಮಹಾಹಯಃ ।
ಕಿಂನರೋರಗಗಂಧರ್ವಯಕ್ಷವಿದ್ಯಾಧರಾಸ್ತದಾ ॥ ೩೧

ಪೀಡಿತಂ ತಂ ನಗವರಂ ತ್ಯಕ್ತ್ವಾ ಗಗನಮಾಸ್ಥಿತಾಃ ।
ಸ ಚ ಭೂಮಿಧರಃ ಶ್ರೀಮಾನ್ ಬಲಿನಾ ತೇನ ಪೀಡಿತಃ ॥ ೩೨

ಸವೃಕ್ಷಶಿಖರೋದಗ್ರಃ ಪ್ರವಿವೇಶ ರಸಾತಲಮ್ ।
ದಶಯೋಜನವಿಸ್ತಾರಸ್ತ್ರಿಂಶದ್ಯೋಜನಮುಚ್ಛ್ರಿತಃ ॥ ೨೩

ಧರಣ್ಯಾಂ ಸಮತಾಂ ಯಾತಃ ಸ ಬಭೂವ ಧರಾಧರಃ ।
ಸ ಲಿಲಂಘಯಿಷುರ್ಭೀಮಂ ಸಲೀಲಂ ಲವಣಾರ್ಣವಮ್ ॥ ೩೪
ಕಲ್ಲೋಲಾಸ್ಫಾಲವೇಲಾಂತಮುತ್ಪಪಾತ ನಭೋ ಹರಿಃ ॥

ಇತಿ ಶ್ರೀಮದ್ರಾಮಾಯಣೇ ಸುಂದರಕಾಂಡೇ ಷಟ್‌ಪಂಚಾಶಃ ಸರ್ಗಃ

ವಿದ್ಯಾಧರಿಯರು ಬೆದರಲು, ಅವರ ಉಟ್ಟ ಉಡಿಗೆ ತೊಟ್ಟ ಒಡವೆಗಳು ಸಡಿಲಿಹೋದವು (೨೭–೨೯). ಅವರು ಥಟ್ಟನೆ ಆಕಾಶಕ್ಕೆ ಹಾರಿದರು. ಭಾರಿದೇಹದ ವಿಷಸರ್ಪಗಳು ತಲೆಗೆ ಪೆಟ್ಟು ತಾಕಿದುದರಿಂದ ನಾಲಿಗೆಯನ್ನು ಚಾಚಿ ಹೊರಳಾಡತೊಡಗಿದವು. ಅಲ್ಲಿದ್ದ ಕಿಂನರ, ಗಂಧರ್ವ ಮುಂತಾದವರು ಪರ್ವತವನ್ನು ಬಿಟ್ಟು ಆಕಾಶವನ್ನಡರಿದರು. ಬಲಾಢ್ಯನಾದ ಹನುಮಂತನು ಒತ್ತಿದ ಪಾದವೇಗಕ್ಕೆ ಆ ಪರ್ವತವು ಸಮಸ್ತ ವೃಕ್ಷಶಿಖರಗಳೊಡನೆ ಭೂಮಿಯಲ್ಲಿ ಇಳಿದುಹೋಯಿತು! ಹತ್ತು ಯೋಜನದಷ್ಟು ವಿಸ್ತಾರವಾಗಿಯೂ ಮೂವತ್ತು ಯೋಜನದಷ್ಟು ಎತ್ತರವಾಗಿಯೂ ಇದ್ದ ಆ ಮಹಾಪರ್ವತವು ನೆಲಸಮವಾಯಿತು! (೩೦–೩೩). ಅಲೆಗಳು ಉಕ್ಕಿಬಂದು ತೀರವನ್ನು ಅಪ್ಪಳಿಸುತ್ತಿರಲು, ಭಯಂಕರವಾಗಿದ್ದ ಮಹಾಸಾಗರವನ್ನು ಲೀಲಾಜಾಲವಾಗಿ ದಾಟಬಲ್ಲೆನೆಂದೆಣಿಸಿ, ಆಂಜನೇಯನು ಗಗನತಲಕ್ಕೆ ನೆಗೆದುಬಿಟ್ಟನು (೩೪).

ಇಲ್ಲಿಗೆ ಶ್ರೀಮದ್ರಾಮಾಯಣದ ಸುಂದರಕಾಂಡದಲ್ಲಿ ಐವತ್ತಾರನೆಯ ಸರ್ಗ

ಸಪ್ತಪಂಚಾಶಃ ಸರ್ಗಃ

ಹನೂಮತ್ಪ್ರತ್ಯಾಗಮನಮ್

ಸಚಂದ್ರಕುಮುದಂ ರಮ್ಯಂ ಸಾರ್ಕಕಾರಂಡವಂ ಶುಭಮ್ ।
ತಿಷ್ಯಶ್ರವಣಕಾದಂಬಮಭ್ರಶೈವಾಲಶಾದ್ವಲಮ್ ॥ ೧

ಪುನರ್ವಸುಮಹಾಮೀನಂ ಲೋಹಿತಾಂಗಮಹಾಗ್ರಹಮ್ ।
ಐರಾವತಮಹಾದ್ವೀಪಂ ಸ್ವಾತೀಹಂಸವಿಲೋಲಿತಮ್ ॥ ೨

ವಾತಸಂಘಾತಜಾಲೋರ್ಮಿ ಚಂದ್ರಾಂಶುಶಿಶಿರಾಂಬುಮತ್ ।
ಭುಜಂಗಯಕ್ಷಗಂಧರ್ವ ಪ್ರಬುದ್ಧಕಮಲೋತ್ಪಲಮ್ ॥ ೩

ಹನುಮಾನ್ ಮಾರುತಿಗತಿರ್ಮಹಾನೌರಿವ ಸಾಗರಮ್ ।
ಅಪಾರಮಪರಿಶ್ರಾಂತಃ ಪುಪ್ಲುವೇ ಗಗನಾರ್ಣವಮ್ ॥ ೪

ಸರ್ಗ ೫೭

ಹನುಮಂತನು ಸಮುದ್ರವನ್ನು ದಾಟಿ ಉತ್ತರತೀರಕ್ಕೆ ಬಂದು ಜಾಂಬವಂತ ಮೊದಲಾದವರೊಡನೆ ಸೇರಿಕೊಳ್ಳುವುದು.

ಹನುಮಂತನು ದಾಟಿಬರುತ್ತಿದ್ದ ಗಗನವೇ ಒಂದು ಮಹಾಸಮುದ್ರವಾಗಿತ್ತು. ಆದರಲ್ಲಿ ಚಂದ್ರನೇ ಬಿಳಿಯ ನೈದಿಲೆಹೂವು. ಸೂರ್ಯನು ಕಾರಂಡವಪಕ್ಷಿ (ನೀರುಕೋಳಿ). ಪುಷ್ಯ ಶ್ರವಣ ನಕ್ಷತ್ರಗಳು ರಾಜಹಂಸಗಳು. ಮೋಡವು ಪಾಚಿ ಮತ್ತು ತೀರದಲ್ಲಿರುವ ಹುಲ್ಲುಗಾವಲು. ಪುನರ್ವಸು ನಕ್ಷತ್ರವು ದೊಡ್ಡ ಮೀನು, ಅಂಗಾರಕ ಗ್ರಹವು ದೊಡ್ಡ ಮೊಸಳೆ. ಐರಾವತವು ಒಂದು ದ್ವೀಪ. ಸ್ವಾತಿ ನಕ್ಷತ್ರವು ಹಂಸ (೧–೨). ಬಿರುಗಾಳಿಯೇ ತರಂಗ, ಚಂದ್ರ ಕಿರಣಗಳೇ ನೀರು, ನಾಗಯಕ್ಷಗಂಧರ್ವರೇ ಅರಳಿದ ತಾವರೆ ನೈದಿಲೆ ಹೂಗಳು. ಸಮುದ್ರದಲ್ಲಿ ದೊಡ್ಡ ಹಡಗೊಂದು ಸಾಗುವಂತೆ, ಆಂಜನೇಯನು ಅಪಾರವಾದ ಆಕಾಶವೆಂಬ ಸಮುದ್ರದಲ್ಲಿ ವಾಯುವೇಗದಿಂದ ಅನಾಯಾಸವಾಗಿ ಹಾರಿಹೋಗುತ್ತಿದ್ದನು (೩–೪).

ಗ್ರಸಮಾನ ಇವಾಕಾಶಂ ತಾರಾಧಿಪಮಿವೋಲ್ಲಿಖನ್ ।
ಹರನ್ನಿವ ಸನಕ್ಷತ್ರಂ ಗಗನಂ ಸಾರ್ಕಮಂಡಲಮ್ ॥ ೫

ಮಾರುತಸ್ಯಾತ್ಮಜಃ ಶ್ರೀಮಾನ್ ಕಪಿರ್ವ್ಯೋಮಚರೋ ಮಹಾನ್ ।
ಹನುಮಾನ್ ಮೇಘಜಾಲಾನಿ ವಿಕರ್ಷನ್ನಿವ ಗಚ್ಛತಿ ॥ ೬

ಪಾಂಡುರಾರುಣವರ್ಣಾನಿ ನೀಲಮಾಂಜಿಷ್ಠಕಾನಿ ಚ ।
ಹರಿತಾರುಣವರ್ಣಾನಿ ಮಹಾಭ್ರಾಣಿ ಚಕಾಶಿರೇ ॥ ೭

ಪ್ರವಿಶನ್ನಭ್ರಜಾಲಾನಿ ನಿಷ್ಕ್ರಾಮಂಶ್ಚ ಪುನಃ ಪುನಃ ।
ಪ್ರಚ್ಛನ್ನಶ್ಚ ಪ್ರಕಾಶಶ್ಚ ಚಂದ್ರಮಾ ಇವ ಲಕ್ಷ್ಯತೇ ॥ ೮

ವಿವಿಧಾಭ್ರಘನಾಪನ್ನಗೋಚರೋ ಧವಲಾಂಬರಃ ।
ದೃಶ್ಯಾದೃಶ್ಯತನುರ್ವೀರಸ್ತದಾ ಚಂದ್ರಾಯತೇಽಂಬರೇ ॥ ೯

ತಾರ್ಕ್ಷ್ಯಾಯಮಾಣೋ ಗಗನೇ ಬಭಾಸೇ ವಾಯುನಂದನಃ ।
ದಾರಯನ್ ಮೇಘವೃಂದಾನಿ ನಿಷ್ಪತಂಶ್ಚ ಪುನಃ ಪುನಃ ॥ ೧೦

ನದನ್ನಾದೇನ ಮಹತಾ ಮೇಘಸ್ವನಮಹಾಸ್ವನಃ ।
ಪ್ರವರಾನ್ ರಾಕ್ಷಸಾನ್ ಹತ್ವಾ ನಾಮ ವಿಶ್ರಾವ್ಯ ಚಾತ್ಮನಃ ॥ ೧೧

ಆ ವಾಯುಪುತ್ರನು ಆಕಾಶವನ್ನೇ ನುಂಗಿಬಿಡುವನೊ ಚಂದ್ರನನ್ನು ಪರಚಿ ಬಿಡುವನೊ ನಕ್ಷತ್ರಮಂಡಲ ಸೂರ್ಯಮಂಡಲ ಸಹಿತವಾಗಿ ಗಗನವನ್ನು ಕಿತ್ತುಕೊಂಡು ಹೋಗುವನೊ ಮೋಡಗಳನ್ನು ಸೆಳೆದೊಯ್ಯುವನೊ ಎಂಬಂತೆ ಆಕಾಶದಲ್ಲಿ ಸಾಗುತ್ತಿದ್ದನು (೫-೬). ಆಗ ಮೇಘಪಂಕ್ತಿಗಳು ಬಿಳುಪಾಗಿ ಕೆಂಪಾಗಿ ಕಪ್ಪಾಗಿ ಹೊಂಬಣ್ಣವಾಗಿ ಹಸುರಾಗಿ ನಸುಗೆಂಪಾಗಿ ಚೆಲುವಾದವು. ಹನುಮಂತನು ಚಂದ್ರನಂತೆ ಮೋಡಗಳಲ್ಲಿ ಆಗಾಗ ಮರೆಯಾಗುತ್ತ ಮತ್ತೆ ಕಾಣಿಸಿಕೊಳ್ಳುತ್ತ ಇದ್ದನು (೭-೮). ಬಿಳಿಯ ಬಟ್ಟೆಯನ್ನುಟ್ಟಿದ್ದ ಆ ವೀರನು ನಾನಾಬಗೆಯ ಮೋಡಗಳ ಮಧ್ಯದಲ್ಲಿ ನುಗ್ಗುತ್ತ ಹೊರಡುತ್ತ, ಮೋಡಗಳಲ್ಲಿ ಮರೆಯಾಗಿ ಮತ್ತೆ ಕಾಣಿಸಿಕೊಳ್ಳುವ ಚಂದ್ರನಂತೆ ಶೋಭಿಸುತ್ತಿದ್ದನು. ಅವನು ಆಕಾಶದಲ್ಲಿ ಮೇಘಪಂಕ್ತಿಗಳನ್ನು ಭೇದಿಸಿಕೊಂಡು ಹೊರಗೆ ಬರುತ್ತಿರಲು ಗರುಡನಂತೆ ಕಾಣುತ್ತಿದ್ದನು (೯-೧೦). ಆ

ಆಕುಲಾಂ ನಗರೀಂ ಕೃತ್ವಾ ವ್ಯಥಯಿತ್ವಾ ಚ ರಾವಣಮ್ ।
ಅರ್ದಯಿತ್ವಾ ಬಲಂ ಘೋರಂ ವೈದೇಹೀಮಭಿವಾದ್ಯ ಚ ॥ ೧೨

ಆಜಗಾಮ ಮಹಾತೇಜಾಃ ಪುನರ್ಮಧ್ಯೇನ ಸಾಗರಮ್ ।
ಪರ್ವತೇಂದ್ರಂ ಸುನಾಭಂ ಚ ಸಮುಪಸ್ಪೃಶ್ಯ ವೀರ್ಯವಾನ್ ॥ ೧೩

ಜ್ಯಾಮುಕ್ತ ಇವ ನಾರಾಚೋ ಮಹಾವೇಗೋಽಭ್ಯುಪಾಗತಃ ।
ಸ ಕಿಂಚಿದನುಸಂಪ್ರಾಪ್ತಃ ಸಮಾಲೋಕ್ಯ ಮಹಾಗಿರಿಮ್ ॥ ೧೪

ಮಹೇಂದ್ರಂ ಮೇಘಸಂಕಾಶಂ ನನಾದ ಹರಿಪುಂಗವಃ ।
ಸ ಪೂರಯಾಮಾಸ ಕಪಿರ್ದಿಶೋ ದಶ ಸಮಂತತಃ ॥ ೧೫

ನದನ್ನಾದೇನ ಮಹತಾ ಮೇಘಸ್ವನಮಹಾಸ್ವನಃ ।
ಸ ತಂ ದೇಶಮನುಪ್ರಾಪ್ತಃ ಸುಹೃದ್ದರ್ಶನಲಾಲಸಃ ॥ ೧೬

ನನಾದ ಹರಿಶಾರ್ದೂಲೋ ಲಾಂಗೂಲಂ ಚಾಪ್ಯಕಂಪಯತ್ ।
ತಸ್ಯ ನಾನದ್ಯಮಾನಸ್ಯ ಸುಪರ್ಣಾಚರಿತೇ ಪಥಿ ॥ ೧೭

ಫಲತೀವಾಸ್ಯ ಘೋಷೇಣ ಗಗನಂ ಸಾರ್ಕಮಂಡಲಮ್ ।
ಯೇ ತು ತತ್ರೋತ್ತರೇ ತೀರೇ ಸಮುದ್ರಸ್ಯ ಮಹಾಬಲಾಃ ॥ ೧೮

ಮಹಾತೇಜಸ್ವಿಯು ಲಂಕೆಯಲ್ಲಿ ಅನೇಕ ರಾಕ್ಷಸವೀರರನ್ನು ಸಂಹರಿಸಿ, ತನ್ನ ಹೆಸರನ್ನು ಪ್ರಖ್ಯಾತಿಗೊಳಿಸಿ, ಲಂಕಾಪಟ್ಟಣವನ್ನು ಕಂಗೆಡಿಸಿ, ರಾವಣನನ್ನು ವ್ಯಥೆಪಡಿಸಿ, ಅವನ ಘೋರಸೈನ್ಯವನ್ನು ಧ್ವಂಸಪಡಿಸಿ, ಸೀತೆಗೆ ನಮಸ್ಕರಿಸಿ, ದಾರಿಯಲ್ಲಿ ಮೈನಾಕ ಪರ್ವತವನ್ನು ಮೈದಡವಿ ಸಂತೈಸಿ, ಮೇಘದಂತೆ ಗರ್ಜಿಸುತ್ತ ಹಾರಿಬಂದನು (೧೧–೧೩). ಅವನು ಹೆದೆಯಿಂದ ಹೊರಟ ಬಾಣದಂತೆ ಮಹಾವೇಗದಿಂದ ಬರುತ್ತ, ಮುಂದೆ ಮೇಘದಂತೆ ಕಾಣುತ್ತಿದ್ದ ಮಹೇಂದ್ರಪರ್ವತವನ್ನು ಕಂಡು ಹತ್ತು ದಿಕ್ಕುಗಳೂ ಮೊಳಗುವಂತೆ ಹರ್ಷದಿಂದ ಸಿಂಹನಾದ ಮಾಡಿದನು (೧೪–೧೫). ಆ ಕಪಿಶಾರ್ದೂಲನು ತನ್ನ ಗೆಳೆಯರನ್ನು ಕಾಣಬೇಕೆಂಬ ಲಾಲಸೆಯಿಂದ ಬಾಲವನ್ನಲ್ಲಾಡಿಸುತ್ತ ಗರ್ಜನೆಮಾಡುತ್ತಲೇ ಆಕಾಶಮಾರ್ಗದಲ್ಲಿ ಬರುತ್ತಿದ್ದನು. ಅವನ ಗರ್ಜನೆಗೆ ಸೂರ್ಯಮಂಡಲ ಸಹಿತವಾಗಿ ಗಗನವೇ ಬಿರಿದುಹೋಗುವಂತೆ ಕಾಣುತ್ತಿದ್ದಿತು (೧೬–೧೮). ಇತ್ತ ಸಮುದ್ರದ ಉತ್ತರತೀರದಲ್ಲಿ ಅಂಗದಾದಿ

ಪೂರ್ವಂ ಸಂವಿಷ್ಠಿತಾಃ ಶೂರಾ ವಾಯುಪುತ್ರದಿದೃಕ್ಷವಃ ।
ಮಹತೋ ವಾಯುನುನ್ನಸ್ಯ ತೋಯದಸ್ಯೇವ ಗರ್ಜಿತಮ್ ॥ ೧೯

ಶುಶ್ರುವುಸ್ತೇ ತದಾ ಘೋಷಮೂರುವೇಗಂ ಹನೂಮತಃ ।
ತೇ ದೀನವದನಾಃ ಸರ್ವೇ ಶುಶ್ರುವುಃ ಕಾನನೌಕಸಃ ॥ ೨೦

ವಾನರೇಂದ್ರಸ್ಯ ನಿರ್ಘೋಷಂ ಪರ್ಜನ್ಯನಿನದೋಪಮಮ್ ।
ನಿಶಮ್ಯ ನದತೋ ನಾದಂ ವಾನರಾಸ್ತೇ ಸಮಂತತಃ ॥ ೨೧

ಬಭೂವುರುತ್ಸುಕಾಃ ಸರ್ವೇ ಸುಹೃದ್ದರ್ಶನಕಾಂಕ್ಷಿಣಃ ।
ಜಾಂಬವಾಂಸ್ತು ಹರಿಶ್ರೇಷ್ಠಃ ಪ್ರೀತಿಸಂಹೃಷ್ಟಮಾನಸಃ ॥ ೨೨

ಉಪಾಮಂತ್ರ್ಯ ಹರೀನ್ ಸರ್ವಾನಿದಂ ವಚನಮಬ್ರವೀತ್ ।
ಸರ್ವಥಾ ಕೃತಕಾರ್ಯೋಽಸೌ ಹನೂಮಾನ್ನಾತ್ರ ಸಂಶಯಃ ॥ ೨೩

ನ ಹ್ಯಸ್ಯಾಕೃತಕಾರ್ಯಸ್ಯ ನಾದ ಏವಂವಿಧೋ ಭವೇತ್ ।
ತಸ್ಯ ಬಾಹೂರುವೇಗಂ ಚ ನಿನಾದಂ ಚ ಮಹಾತ್ಮನಃ ॥ ೨೪

ನಿಶಮ್ಯ ಹರಯೋ ಹೃಷ್ಟಾಃ ಸಮುತ್ಪೇತುಸ್ತತಸ್ತತಃ ।
ತೇ ನಗಾಗ್ರಾನ್ನಗಾಗ್ರಾಣಿ ಶಿಖರಾಚ್ಛಿಖರಾಣಿ ಚ ॥ ೨೫

ವಾನರರು ಹನುಮಂತನಿಗೋಸ್ಕರ ಕಾಯುತ್ತ ದೀನವದನರಾಗಿ ಕುಳಿತಿದ್ದರು. ಅವರಿಗೆ ದೂರದಲ್ಲಿ ಗುಡುಗಿನಂತೆ ಹನುಮಂತನ ಗರ್ಜನೆಯೂ ಅವನ ತೊಡೆಗಳ ವೇಗದಿಂದ ಹುಟ್ಟುತ್ತಿದ್ದ ಭೋರೆಂಬ ಶಬ್ದವೂ ಕೇಳಿಸಿದವು (೧೯–೨೦). ತಮ್ಮ ಗೆಳೆಯನನ್ನು ನೋಡಬೇಕೆಂದು ಕಾದಿದ್ದ ಆ ಕಪಿಗಳೆಲ್ಲರೂ ಹನುಮಂತನ ಗರ್ಜನೆಯನ್ನು ಕೇಳಿ ಉತ್ಸಾಹಗೊಂಡರು. ಆಗ ಅವರಲ್ಲಿ ಪ್ರಮುಖನಾದ ಜಾಂಬವಂತನು ಸಂತೋಷದಿಂದ ಹಿಗ್ಗುತ್ತ ಕಪಿಗಳನ್ನು ಕುರಿತು ''ಎಲೈ ಕಪಿವೀರರೇ, ಕಾರ್ಯವನ್ನು ಸಾಧಿಸಿಕೊಂಡು ಹನುಮಂತನೇ ಬರುತ್ತಿದ್ದಾನೆ. ಸಂದೇಹವೇ ಇಲ್ಲ (೨೧–೨೩). ಕಾರ್ಯವು ಕೈಗೂಡದಿದ್ದ ಪಕ್ಷದಲ್ಲಿ ಅವನು ಈ ರೀತಿಯಾಗಿ ಗರ್ಜಿಸುತ್ತಿರಲಿಲ್ಲ'' ಎಂದು ಹೇಳಿದನು. ಅವರು ಹನುಮಂತನ ತೋಳು ತೊಡೆಗಳ ವೇಗದ ಶಬ್ದವನ್ನೂ ಅವನ ಗರ್ಜನೆಯನ್ನೂ ಕೇಳಿ ಆನಂದದಿಂದ

ಪ್ರಹೃಷ್ಟಾಃ ಸಮಪದ್ಯಂತ ಹನೂಮಂತಂ ದಿದೃಕ್ಷವಃ ।
ತೇ ಪ್ರೀತಾಃ ಪಾದಪಾಗ್ರೇಷು ಗೃಹ್ಯ ಶಾಖಾಃ ಸುಪುಷ್ಪಿತಾಃ ॥ ೨೬
ವಾಸಾಂಸೀವ ಪ್ರಶಾಖಾಶ್ಚ ಸಮಾವಿಧ್ಯಂತ ವಾನರಾಃ ।
ಗಿರಿಗಹ್ವರಸಂಲೀನೋ ಯಥಾ ಗರ್ಜತಿ ಮಾರುತಃ ॥ ೨೭
ಏವಂ ಜಗರ್ಜ ಬಲವಾನ್ ಹನೂಮಾನ್ ಮಾರುತಾತ್ಮಜಃ ।
ತಮಭ್ರಘನಸಂಕಾಶಮಾಪತಂತಂ ಮಹಾಕಪಿಮ್ ॥ ೨೮
ದೃಷ್ಟ್ವಾ ತೇ ವಾನರಾಃ ಸರ್ವೇ ತಸ್ಥುಃ ಪ್ರಾಂಜಲಯಸ್ತದಾ ।
ತತಸ್ತು ವೇಗವಾಂಸ್ತಸ್ಯ ಗಿರೇರ್ಗಿರಿನಿಭಃ ಕಪಿಃ ॥ ೨೯
ನಿಪಪಾತ ಮಹೇಂದ್ರಸ್ಯ ಶಿಖರೇ ಪಾದಪಾಕುಲೇ ।
ಹರ್ಷೇಣಾಪೂರ್ಯಮಾಣೋಽಸೌ ರಮ್ಯೇ ಪರ್ವತನಿರ್ಝರೇ ॥ ೩೦
ಛಿನ್ನಪಕ್ಷ ಇವಾಕಾಶಾತ್ ಪಪಾತ ಧರಣೀಧರಃ ।
ತತಸ್ತೇ ಪ್ರೀತಮನಸಃ ಸರ್ವೇ ವಾನರಪುಂಗವಾಃ ॥ ೩೧
ಹನೂಮಂತಂ ಮಹಾತ್ಮಾನಂ ಪರಿವಾರ್ಯೋಪತಸ್ಥಿರೇ ।
ಪರಿವಾರ್ಯ ಚ ತೇ ಸರ್ವೇ ಪರಾಂ ಪ್ರೀತಿಮುಪಾಗತಾಃ ॥ ೩೨

ಕುಣಿದಾಡತೊಡಗಿದರು !(೨೪–೨೫). ಮರದಿಂದ ಮರಕ್ಕೂ ಬೆಟ್ಟದ ಶಿಖರದಿಂದ ಶಿಖರಕ್ಕೂ ನೆಗೆಯುತ್ತ ಹನುಮಂತನನ್ನು ನೋಡುವುದಕ್ಕಾಗಿ ನೆರೆದರು ! ಆ ವಾನರರು ಮರಗಳ ತುದಿಯನ್ನೇರಿ ನಿಂತು ಹನುಮಂತನನ್ನು ಸ್ವಾಗತಿಸುವುದಕ್ಕಾಗಿ, ಬಾವುಟಗಳನ್ನು ಬೀಸುವಂತೆ ಹೂವಿನ ಕೊಂಬೆಗಳನ್ನು ಕೈಯಲ್ಲಿ ಹಿಡಿದು ಅಲ್ಲಾಡಿಸತೊಡಗಿದರು ! (೨೬–೨೭). ಪರ್ವತದ ಗುಹೆಯಲ್ಲಿ ನುಗ್ಗಿ ಬಿರುಗಾಳಿಯು ಶಬ್ದಮಾಡುವಂತೆ, ಆಂಜನೇಯನು ಗರ್ಜಿಸುತ್ತ ಬರುತ್ತಿದ್ದನು. ಆಕಾಶದಲ್ಲಿ ಮೇಘವು ಬರುವಂತೆ ಹಾರಿಬರುತ್ತಿದ್ದ ಆ ಮಹಾಕಪಿಯನ್ನು ಕಂಡು ಕಪಿಗಳೆಲ್ಲರೂ ಕೈಮುಗಿದುಕೊಂಡು ನಿಂತುಬಿಟ್ಟರು. ಅಷ್ಟರಲ್ಲಿ ವೇಗದಿಂದ ಬರುತ್ತಿದ್ದ ಆಂಜನೇಯನು ಸಂತೋಷದಿಂದ ಹಿಗ್ಗುತ್ತ ಮಹೇಂದ್ರಪರ್ವತದ ಶಿಖರದಮೇಲೆ, ರೆಕ್ಕೆಕತ್ತರಿಸಿದ ಇನ್ನೊಂದು ಪರ್ವತದಂತೆ ಆಕಾಶದಿಂದ ಧುಮುಕಿದನು (೨೮–೩೧). ಆಗ ಕಪಿವೀರರೆಲ್ಲರೂ ಬಂದು ಅವನ

ಪ್ರಹೃಷ್ಟವದನಾಃ ಸರ್ವೇ ತಮರೋಗಮುಪಾಗತಮ್ ।
ಉಪಾಯನಾನಿ ಚಾದಾಯ ಮೂಲಾನಿ ಚ ಫಲಾನಿ ಚ ॥ ೩೩

ಪ್ರತ್ಯರ್ಚಯನ್ ಹರಿಶ್ರೇಷ್ಠಂ ಹರಯೋ ಮಾರುತಾತ್ಮಜಮ್ ।
ಹನೂಮಾಂಸ್ತು ಗುರೂನ್ ವೃದ್ಧಾನ್ ಜಾಂಬವತ್ಪ್ರಮುಖಾಂಸ್ತದಾ ॥ ೩೪

ಕುಮಾರಮಂಗದಂ ಚೈವ ಸೋಽವಂದತ ಮಹಾಕಪಿಃ ।
ಸ ತಾಭ್ಯಾಂ ಪೂಜಿತಃ ಪೂಜ್ಯಃ ಕಪಿಭಿಶ್ಚ ಪ್ರಸಾದಿತಃ ॥ ೩೫

ದೃಷ್ಟಾ ಸೀತೇತಿ ವಿಕ್ರಾಂತಃ ಸಂಕ್ಷೇಪೇಣ ನ್ಯವೇದಯತ್ ।
ನಿಷಸಾದ ಚ ಹಸ್ತೇನ ಗೃಹೀತ್ವಾ ವಾಲಿನಃ ಸುತಮ್ ॥ ೩೬

ರಮಣೀಯೇ ವನೋದ್ದೇಶೇ ಮಹೇಂದ್ರಸ್ಯ ಗಿರೇಸ್ತದಾ ।
ಹನುಮಾನಬ್ರವೀದ್ಧೃಷ್ಟಸ್ತದಾ ತಾನ್ ವಾನರರ್ಷಭಾನ್ ॥ ೩೭

ಅಶೋಕವನಿಕಾಸಂಸ್ಥಾ ದೃಷ್ಟಾ ಸಾ ಜನಕಾತ್ಮಜಾ ।
ರಕ್ಷ್ಯಮಾಣಾ ಸುಘೋರಾಭಿಃ ರಾಕ್ಷಸೀಭಿರನಿಂದಿತಾ ॥ ೩೮

ಸುತ್ತಲೂ ಮುತ್ತಿಕೊಂಡರು. ಅವರ ಹರ್ಷಕ್ಕೆ ಪಾರವೇ ಇರಲಿಲ್ಲ. ಕ್ಷೇಮದಿಂದ ಹಿಂದಿರುಗಿಬಂದ ವಾಯುಪುತ್ರನಿಗೆ ಅವರು ಸಂತೋಷದಿಂದ ಗೆಡ್ಡೆಗೆಣಸು, ಹಣ್ಣು ಮುಂತಾದ ಕಾಣಿಕೆಗಳನ್ನು ತಂದುಕೊಟ್ಟರು (೩೨–೩೩). ಹನುಮಂತನು ಜಾಂಬವಂತನೇ ಮೊದಲಾದ ಗುರುಹಿರಿಯರಿಗೂ ಯುವರಾಜನಾದ ಅಂಗದನಿಗೂ ನಮಸ್ಕಾರ ಮಾಡಿದನು. ಆಗ ಅಂಗದ ಜಾಂಬವಂತರೂ ಇತರ ಕಪಿಗಳೂ ಗೌರವಾರ್ಹನಾದ ಹನುಮಂತನನ್ನು ಆದರಿಸಿ ಸತ್ಕರಿಸಿದರು. ಅವನು ''ನೋಡಿದೆನು ಸೀತಾದೇವಿಯನ್ನು'' ಎಂದು ಸಂಕ್ಷೇಪವಾಗಿ ತಿಳಿಸಿ, ಅಂಗದನ ಕೈಯನ್ನು ಹಿಡಿದುಕೊಂಡು ಆ ಶೈಲದ ಒಂದು ರಮಣೀಯ ಪ್ರದೇಶಕ್ಕೆ ಬಂದು ಕುಳಿತನು (೩೪–೩೬). ಆಮೇಲೆ ಕಪಿವೀರರನ್ನೆಲ್ಲಾ ನೋಡುತ್ತ 'ಮಿತ್ರರೆ, ಅಶೋಕವನದಲ್ಲಿ ಜಾನಕಿಯನ್ನು ನೋಡಿ ಬಂದೆನು. ಘೋರ ರಾಕ್ಷಸಿಯರು ಆಕೆಯನ್ನು ಕಾಯುತ್ತಿದ್ದಾರೆ. ಅವಳು ಒಂಟಿ ಜಡೆಯನ್ನು ಧರಿಸಿ ದೀನಳಾಗಿ ಶ್ರೀರಾಮನ ದರ್ಶನಕ್ಕಾಗಿ ಹಾತೊರೆಯುತ್ತಿದ್ದಾಳೆ. ಉಪವಾಸದಿಂದ ಕೃಶಳಾಗಿ

ಏಕವೇಣೀಧರಾ ದೀನಾ ರಾಮದರ್ಶನಲಾಲಸಾ ।
ಉಪವಾಸಪರಿಶ್ರಾಂತಾ ಜಟಿಲಾ ಮಲಿನಾ ಕೃಶಾ ॥ ೩೯

ತತೋ ದೃಷ್ಟೇತಿ ವಚನಂ ಮಹಾರ್ಥಮಮೃತೋಪಮಮ್ ।
ನಿಶಮ್ಯ ಮಾರುತೇಃ ಸರ್ವೇ ಮುದಿತಾ ವಾನರಾಭವನ್ ॥ ೪೦

ಕ್ಷ್ವೇಲಂತ್ಯನ್ಯೇ ನದಂತ್ಯನ್ಯೇ ಗರ್ಜಂತ್ಯನ್ಯೇ ಮಹಾಬಲಾಃ ।
ಚಕ್ರುಃ ಕಿಲಿಕಿಲಾಮನ್ಯೇ ಪ್ರತಿಗರ್ಜಂತಿ ಚಾಪರೇ ॥ ೪೧

ಕೇಚಿದುಚ್ಛ್ರಿತಲಾಂಗೂಲಾಃ ಪ್ರಹೃಷ್ಟಾಃ ಕಪಿಕುಂಜರಾಃ ।
ಅಂಚಿತಾಯತದೀರ್ಘಾಣಿ ಲಾಂಗೂಲಾನಿ ಪ್ರವಿವ್ಯಧುಃ ॥ ೪೨

ಅಪರೇ ಚ ಹನೂಮಂತಂ ವಾನರಾ ವಾರಣೋಪಮಮ್ ।
ಆಪ್ಲುತ್ಯ ಗಿರಿಶೃಂಗೇಭ್ಯಃ ಸಂಸ್ಪೃಶಂತಿ ಸ್ಮ ಹರ್ಷಿತಾಃ ॥ ೪೩

ಉಕ್ತವಾಕ್ಯಂ ಹನೂಮಂತಮಂಗದಸ್ತಮಥಾಬ್ರವೀತ್ ।
ಸರ್ವೇಷಾಂ ಹರಿವೀರಾಣಾಂ ಮಧ್ಯೇ ವಾಚಮನುತ್ತಮಾಮ್ ॥ ೪೪

ಸತ್ತ್ವೇ ವೀರ್ಯೇ ನ ತೇ ಕಶ್ಚಿತ್ ಸಮೋ ವಾನರ ವಿದ್ಯತೇ ।
ಯದವಪ್ಲುತ್ಯ ವಿಸ್ತೀರ್ಣಂ ಸಾಗರಂ ಪುನರಾಗತಃ ॥ ೪೫

ಕುಂದಿಹೋಗಿರುವಳು' ಎಂದನು (೩೭–೩೯). ''ನೋಡಿಬಂದೆನು'' ಎಂಬ ಮಾತು ಕಪಿಗಳಿಗೆ ಅಮೃತದಂತಾಯಿತು. ಅವರು ಆನಂದದಿಂದ ಉಬ್ಬಿಹೋದರು. ಕೆಲವರು ಕುಪ್ಪಳಿಸಿದರು. ಕೆಲವರು ಕೀಯೆಂದು ಕೂಗಿದರು. ಕೆಲವರು ಸಿಂಹನಾದ ಮಾಡಿದರು. ಕೆಲವರು ಕಿಲಕಿಲ ಎಂದು ವಟಗುಟ್ಟಿದರು. ಕೆಲವರು ಗರ್ಜನೆಗೆ ಪ್ರತಿಗರ್ಜನೆ ಮಾಡಿದರು (೪೦–೪೧). ಕೆಲವು ಕಪಿವೀರರು ತಮ್ಮ ಉದ್ದನೆಯ ದಪ್ಪವಾದ ಬಾಲಗಳನ್ನು ನಿಮಿರಿಸಿ ನೆಲದಮೇಲೆ ಬಡಿಯುತ್ತಿದ್ದರು. ಇನ್ನು ಕೆಲವರು ಹಾರಿಬಂದು ಮದ್ದಾನೆಯಂತಿದ್ದ ಹನುಮಂತನನ್ನು ಅಪ್ಪಿಕೊಂಡು ಮೈಯನ್ನು ಸಂವರಿಸುತ್ತಿದ್ದರು! (೪೨–೪೩). ಅನಂತರ ಅಂಗದನು ಹನುಮಂತನನ್ನು ಕುರಿತು ''ಹೇ ವಾನರೋತ್ತಮ, ಸತ್ತ್ವಪರಾಕ್ರಮಗಳಲ್ಲಿ ನಿನಗೆ ಸಮಾನರಾದವರು ಇನ್ನೊಬ್ಬರಿಲ್ಲ. ಇಷ್ಟು ವಿಸ್ತಾರವಾದ ಸಮುದ್ರವನ್ನು ದಾಟಿಹೋಗಿ ಹಿಂತಿರುಗಿ ಬಂದಿದ್ದೀಯೆ. ನಮ್ಮೆಲ್ಲರ ಪ್ರಾಣವನ್ನು ಉಳಿಸಿದೆ. ನಿನ್ನ

ಜೀವಿತಸ್ಯ ಪ್ರದಾತಾ ನಸ್ತ್ವಮೇಕೋ ವಾನರೋತ್ತಮಃ ।
ತ್ವತ್ಪ್ರಸಾದಾತ್ ಸಮೇಷ್ಯಾಮಃ ಸಿದ್ಧಾರ್ಥಾ ರಾಘವೇಣ ತು ॥ ೪೬
ಅಹೋ ಸ್ವಾಮಿನಿ ತೇ ಭಕ್ತಿರಹೋ ವೀರ್ಯಮಹೋ ಧೃತಿಃ ।
ದಿಷ್ಟ್ಯಾ ದೃಷ್ಟಾ ತ್ವಯಾ ದೇವೀ ರಾಮಪತ್ನೀ ಯಶಸ್ವಿನೀ ॥ ೪೭
ದಿಷ್ಟ್ಯಾ ತ್ಯಕ್ಷ್ಯತಿ ಕಾಕುತ್ಸ್ಥಃ ಶೋಕಂ ಸೀತಾವಿಯೋಗಜಮ್ ।
ತತೋಽಂಗದಂ ಹನೂಮಂತಂ ಜಾಂಬವಂತಂ ಚ ವಾನರಾಃ ॥ ೪೮
ಪರಿವಾರ್ಯ ಪ್ರಮುದಿತಾ ಭೇಜಿರೇ ವಿಪುಲಾಃ ಶಿಲಾಃ ।
ಶ್ರೋತುಕಾಮಾಃ ಸಮುದ್ರಸ್ಯ ಲಂಘನಂ ವಾನರೋತ್ತಮಾಃ ॥ ೪೯
ದರ್ಶನಂ ಚಾಪಿ ಲಂಕಾಯಾಃ ಸೀತಾಯಾ ರಾವಣಸ್ಯ ಚ ।
ತಸ್ಥುಃ ಪ್ರಾಂಜಲಯಃ ಸರ್ವೇ ಹನುಮದ್ವದನೋನ್ಮುಖಾಃ ॥ ೫೦
ತಸ್ಥೌ ತತ್ರಾಂಗದಃ ಶ್ರೀಮಾನ್ ವಾನರೈರ್ಬಹುಭಿರ್ವೃತಃ ।
ಉಪಾಸ್ಯಮಾನೋ ವಿಬುಧೈರ್ದಿವಿ ದೇವಪತಿರ್ಯಥಾ ॥ ೫೧

ಅನುಗ್ರಹದಿಂದಲೇ ನಾವು ಕಾರ್ಯವನ್ನು ಸಾಧಿಸಿದಂತಾಯಿತು. ಈಗ ನಾವು ರಾಮನ ಹತ್ತಿರ ಹೋಗುವಂತಾದುದು ನಿನ್ನಿಂದಲೇ (೪೪–೪೬). ಅಬ್ಬಾ! ನಿನ್ನ ಸ್ವಾಮಿಭಕ್ತಿ ಎಷ್ಟು! ವೀರ್ಯವೆಷ್ಟು! ಧೈರ್ಯವೆಷ್ಟು! ಯಶಸ್ವಿನಿಯಾದ ಶ್ರೀರಾಮನ ಪತ್ನಿಯನ್ನು ನಮ್ಮ ಭಾಗ್ಯದಿಂದ ನೀನು ನೋಡಿಬಂದೆ. ಇನ್ನು ಶ್ರೀರಾಮನಿಗೆ ಸೀತಾವಿರಹದುಃಖವು ಕಳೆದುಹೋಗುವುದು'' ಎಂದನು (೪೭–೪೮). ಅನಂತರ ಕಪಿಗಳೆಲ್ಲರೂ ಹನುಮಂತ ಅಂಗದ ಜಾಂಬವಂತರನ್ನು ನಡುವೆ ಬಿಟ್ಟುಕೊಂಡು, ಸುತ್ತಲೂ ಹರಡಿದ್ದ ವಿಶಾಲವಾದ ಬಂಡೆಗಳಮೇಲೆ ಕುಳಿತರು. ಹನುಮಂತನು ಸಮುದ್ರವನ್ನು ದಾಟಿ ಲಂಕಾನಗರವನ್ನೂ ಸೀತೆಯನ್ನೂ ರಾವಣನನ್ನೂ ನೋಡಿಬಂದ ಕ್ರಮಗಳನ್ನು ವಿಸ್ತಾರವಾಗಿ ಕೇಳಬೇಕೆಂಬ ಕುತೂಹಲದಿಂದ, ಅವರೆಲ್ಲರೂ ಕೈಕಟ್ಟಿಕೊಂಡು ಹನುಮಂತನ ಮುಖವನ್ನೇ ನೋಡುತ್ತಿದ್ದರು (೪೯–೫೦). ಅಲ್ಲಿ ಶ್ರೀಮಂತನಾದ ಅಂಗದಕುಮಾರನು ದೇವತೆಗಳಿಂದ ಪರಿವೃತನಾದ ದೇವೇಂದ್ರನಂತೆ, ವಾನರರಿಂದ ಪರಿವೃತನಾಗಿ ಕುಳಿತಿದ್ದನು. ಹೀಗೆ ಕೀರ್ತಿಯನ್ನು ಗಳಿಸಿದ ಹನುಮಂತನೂ ತೋಳುಗಳಲ್ಲಿ ಭುಜಕೀರ್ತಿಯನ್ನು

ಹನೂಮತಾ ಕೀರ್ತಿಮತಾ ಯಶಸ್ವಿನಾ
ತಥಾಂಗದೇನಾಂಗದಬದ್ಧಬಾಹುನಾ ।
ಮುದಾ ತದಾಧ್ಯಾಸಿತಮುನ್ನತಂ ಮಹ-
ನ್ಮಹೀಧರಾಗ್ರಂ ಜ್ವಲಿತಂ ಶ್ರಿಯಾಭವತ್ ॥ ೫೨

ಇತಿ ಶ್ರೀಮದ್ರಾಮಾಯಣೇ ಸುಂದರಕಾಂಡೇ ಸಪ್ತಪಂಚಾಶಃ ಸರ್ಗಃ

ಅಷ್ಟಪಂಚಾಶಃ ಸರ್ಗಃ

ಹನೂಮದ್ವೃತ್ತಾನುಕಥನಮ್

ತತಸ್ತಸ್ಯ ಗಿರೇಃ ಶೃಂಗೇ ಮಹೇಂದ್ರಸ್ಯ ಮಹಾಬಲಾಃ ।
ಹನುಮತ್ಪ್ರಮುಖಾಃ ಪ್ರೀತಿಂ ಹರಯೋ ಜಗ್ಮುರುತ್ತಮಾಮ್ ॥ ೧

ತಂ ತತಃ ಪ್ರೀತಿಸಂಹೃಷ್ಟಃ ಪ್ರೀತಿಮಂತಂ ಮಹಾಕಪಿಮ್ ।
ಜಾಂಬವಾನ್ ಕಾರ್ಯವೃತ್ತಾಂತಮಪೃಚ್ಛದನಿಲಾತ್ಮಜಮ್ ॥ ೨

ಧರಿಸಿದ್ದ ಅಂಗದಕುಮಾರನೂ ಸಂತೋಷದಿಂದ ಕುಳಿತಿರಲು, ಉನ್ನತವಾಗಿದ್ದ ಆ ಮಹೇಂದ್ರಪರ್ವತಕ್ಕೆ ಒಂದು ರಮಣೀಯವಾದ ಶೋಭೆಯುಂಟಾಯಿತು (೫೧–೫೨).

ಇಲ್ಲಿಗೆ ಶ್ರೀಮದ್ರಾಮಾಯಣದ ಸುಂದರಕಾಂಡದಲ್ಲಿ ಐವತ್ತೇಳನೆಯ ಸರ್ಗ

ಸರ್ಗ ೫೮

ಹನುಮಂತನು ಲಂಕೆಗೆ ಹೋಗಿಬಂದ ವೃತ್ತಾಂತವನ್ನು ವಾನರರಿಗೆ ಹೇಳುವುದು.

ಹೀಗೆ ಮಹೇಂದ್ರಪರ್ವತದ ಶಿಖರದಲ್ಲಿ ಹನುಮಂತನೇ ಮೊದಲಾದ ಕಪಿವೀರರು ಸಂತೋಷದಿಂದ ಕುಳಿತಿದ್ದರು. ಆಗ ಜಾಂಬವಂತನು ಹನುಮಂತನನ್ನು ಕುರಿತು "ವತ್ಸ–ಆಂಜನೇಯ, ನೀನು ಸೀತಾದೇವಿಯನ್ನು ಹೇಗೆ

ಕಥಂ ದೃಷ್ಟಾ ತ್ವಯಾ ದೇವೀ ಕಥಂ ವಾ ತತ್ರ ವರ್ತತೇ ।
ತಸ್ಯಾಂ ವಾ ಸ ಕಥಂ ವೃತ್ತಃ ಕ್ರೂರಕರ್ಮಾ ದಶಾನನಃ ॥ ೩

ತತ್ತ್ವತಃ ಸರ್ವಮೇತನ್ನ ಪ್ರಬ್ರೂಹಿ ತ್ವಂ ಮಹಾಕಪೇ ।
ಸಂಮಾರ್ಗಿತಾ ಕಥಂ ದೇವೀ ಕಿಂ ಚ ಸಾ ಪ್ರತ್ಯಭಾಷತ ॥ ೪

ಶ್ರುತಾರ್ಥಾಶ್ಚಿಂತಯಿಷ್ಯಾಮೋ ಭೂಯಃ ಕಾರ್ಯವಿನಿಶ್ಚಯಮ್ ।
ಯಶ್ಚಾರ್ಥಸ್ತತ್ರ ವಕ್ತವ್ಯೋ ಗತೈರಸ್ಮಾಭಿರಾತ್ಮವಾನ್ ॥ ೫

ರಕ್ಷಿತವ್ಯಂ ಚ ಯತ್ತತ್ರ ತದ್ಭವಾನ್ ವ್ಯಾಕರೋತು ನಃ ।
ಸ ನಿಯುಕ್ತಸ್ತತಸ್ತೇನ ಸಂಪ್ರಹೃಷ್ಟತನೂರುಹಃ ॥ ೬

ಪ್ರಣಮ್ಯ ಶಿರಸಾ ದೇವ್ಯೈ ಸೀತಾಯೈ ಪ್ರತ್ಯಭಾಷತ ।
ಪ್ರತ್ಯಕ್ಷಮೇವ ಭವತಾಂ ಮಹೇಂದ್ರಾಗ್ರಾತ್ ಖಮಾಪ್ಲುತಃ ॥ ೭

ಉದಧೇರ್ದಕ್ಷಿಣಂ ಪಾರಂ ಕಾಂಕ್ಷಮಾಣಃ ಸಮಾಹಿತಃ ।
ಗಚ್ಛತಶ್ಚ ಹಿ ಮೇ ಘೋರಂ ವಿಘ್ನರೂಪಮಿವಾಭವತ್ ॥ ೮

ನೋಡಿದೆ ? ಅವಳು ಯಾವ ಸ್ಥಿತಿಯಲ್ಲಿ ಇದ್ದಾಳೆ? ಕ್ರೂರನಾದ ರಾವಣನು ಅವಳ ವಿಷಯದಲ್ಲಿ ಹೇಗೆ ನಡೆದುಕೊಳ್ಳುತ್ತಿದ್ದಾನೆ ? (೧–೩) ಇದೆಲ್ಲವನ್ನೂ ವಿವರವಾಗಿ ತಿಳಿಸು. ಆ ದೇವಿಯನ್ನು ನೀನು ಹುಡುಕಿದ ಬಗೆ ಹೇಗೆ ? ಅವಳು ನಿನಗೆ ಏನು ಹೇಳಿದಳು ? ಇವೆಲ್ಲವನ್ನೂ ತಿಳಿದುಕೊಂಡು ಮುಂದೇನು ಮಾಡಬೇಕೆಂದು ಆಲೋಚಿಸೋಣ. ನಾವು ರಾಮನ ಹತ್ತಿರ 'ಏನನ್ನು ಹೇಳಬೇಕು—ಏನನ್ನು ಹೇಳಬಾರದು' ಎಂಬುದನ್ನು ನಮಗೆ ನೀನು ತಿಳಿಸಬೇಕು. ಈ ವಿಚಾರದಲ್ಲಿ ನೀನು ಬುದ್ಧಿಶಾಲಿ'' ಎಂದನು (೪–೬). ಆಗ ಆಂಜನೇಯನಿಗೆ (ಸೀತೆಯ ಸ್ಮರಣೆಯಾಗಿ) ರೋಮಾಂಚವಾಯಿತು. ಅವನು ಸೀತಾದೇವಿಗೆ ತಲೆಬಾಗಿ ವಂದಿಸಿ ಹೇಳ ತೊಡಗಿದನು : ''ಗೆಳೆಯರೆ, ನಾನು ಈ ಬೆಟ್ಟದಿಂದ ಸಮುದ್ರವನ್ನು ಲಂಘಿಸುವುದ ಕ್ಕಾಗಿ ಆಕಾಶಕ್ಕೆ ಹಾರಿದುದನ್ನು ನೀವು ನೋಡಿದಿರಿ. ಮುಂದೆ ಹೋಗುತ್ತಿರುವಾಗ ಘೋರವಾದ ವಿಘ್ನ ಒಂದು ಸಂಭವಿಸಿದಂತೆ ಕಂಡುಬಂದಿತು (೭–೮).

ಕಾಂಚನಂ ಶಿಖರಂ ದಿವ್ಯಂ ಪಶ್ಯಾಮಿ ಸುಮನೋಹರಮ್ ।
ಸ್ಥಿತಂ ಪಂಥಾನಮಾವೃತ್ಯ ಮೇನೇ ವಿಘ್ನಂ ಚ ತಂ ನಗಮ್ ॥ ೯
ಉಪಸಂಗಮ್ಯ ತಂ ದಿವ್ಯಂ ಕಾಂಚನಂ ನಗಸತ್ತಮಮ್ ।
ಕೃತಾ ಮೇ ಮನಸಾ ಬುದ್ಧಿರ್ಭೇತ್ತವ್ಯೋಽಯಂ ಮಯೇತಿ ಚ ॥ ೧೦
ಪ್ರಹತಂ ಚ ಮಯಾ ತಸ್ಯ ಲಾಂಗೂಲೇನ ಮಹಾಗಿರೇಃ ।
ಶಿಖರಂ ಸೂರ್ಯಸಂಕಾಶಂ ವ್ಯಶೀರ್ಯತ ಸಹಸ್ರಧಾ ॥ ೧೧
ವ್ಯವಸಾಯಂ ಚ ತಂ ಬುದ್ಧ್ವಾ ಸ ಹೋವಾಚ ಮಹಾಗಿರಿಃ ।
ಪುತ್ರೇತಿ ಮಧುರಾಂ ವಾಣೀಂ ಮನಃ ಪ್ರಹ್ಲಾದಯನ್ನಿವ ॥ ೧೨
ಪಿತೃವ್ಯಂ ಚಾಪಿ ಮಾಂ ವಿದ್ಧಿ ಸಖಾಯಂ ಮಾತರಿಶ್ವನಃ ।
ಮೈನಾಕಮಿತಿ ವಿಖ್ಯಾತಂ ನಿವಸಂತಂ ಮಹೋದಧೌ ॥ ೧೩
ಪಕ್ಷವಂತಃ ಪುರಾ ಪುತ್ರ ಬಭೂವುಃ ಪರ್ವತೋತ್ತಮಾಃ ।
ಛಂದತಃ ಪೃಥಿವೀಂ ಚೇರುರ್ಬಾಧಮಾನಾಃ ಸಮಂತತಃ ॥ ೧೪
ಶ್ರುತ್ವಾ ನಗಾನಾಂ ಚರಿತಂ ಮಹೇಂದ್ರಃ ಪಾಕಶಾಸನಃ ।
ಚಿಚ್ಛೇದ ಭಗವಾನ್ ಪಕ್ಷಾನ್ ವಜ್ರೇಣೈಷಾಂ ಸಹಸ್ರಶಃ ॥ ೧೫

ದಾರಿಗೆ ಅಡ್ಡಲಾಗಿ ಒಂದು ಸುವರ್ಣಮಯವಾದ ಪರ್ವತಶಿಖರವು ಕಾಣಿಸಿತು. ಆ ಪರ್ವತವು ನನಗೆ ಅಡ್ಡಿಯಾಯಿತೆಂದು ಭಾವಿಸಿ, ಅದನ್ನು ಒಡೆದುಹಾಕಬೇಕೆಂದು ಮನಸ್ಸಿನಲ್ಲಿ ಗುಣಿಸಿದೆನು. ಕೂಡಲೇ ಬಾಲದಿಂದ ಅದನ್ನು ಅಪ್ಪಳಿಸಿ ಹೊಡೆದೆನು. ಅದರ ಶಿಖರವು ಸಾವಿರ ಚೂರಾಗಿ ಉರುಳಿಬಿತ್ತು (೯–೧೧). ಅಷ್ಟರಲ್ಲಿ ಆ ಪರ್ವತರಾಜನು ನನ್ನ ಉದ್ದೇಶವನ್ನು ಅರಿತು ಮನಸ್ಸಿಗೆ ಆಹ್ಲಾದಕರವಾದ ರೀತಿಯಲ್ಲಿ "ವತ್ಸ! ನಾನು ನಿನಗೆ ಚಿಕ್ಕಪ್ಪನೆಂದು* ತಿಳಿ. ನಿನ್ನ ತಂದೆಯಾದ ವಾಯುದೇವನ ಸ್ನೇಹಿತ ನಾನು. ನನ್ನ ಹೆಸರು ಮೈನಾಕ. ಈ ಸಮುದ್ರದಲ್ಲಿ ವಾಸವಾಗಿದ್ದೇನೆ (೧೨–೧೩). ಮಗು! ಹಿಂದೆ ಪರ್ವತಗಳಿಗೆ ರೆಕ್ಕೆಗಳಿದ್ದವು. ಅವು ಸ್ವೇಚ್ಛೆಯಿಂದ ಹಾರಾಡುತ್ತ ಪ್ರಾಣಿಗಳಿಗೆ ಹಿಂಸೆಯನ್ನು ಕೊಡುತ್ತಿದ್ದವು. ಪರ್ವತಗಳ ಚೇಷ್ಟೆಯನ್ನು ಕೇಳಿ ದೇವೇಂದ್ರನು ವಜ್ರಾಯುಧದಿಂದ ಅವುಗಳ ರೆಕ್ಕೆಗಳನ್ನು ಕತ್ತರಿಸುತ್ತ ಬಂದನು (೧೪–೧೫).

---

* ಚಿಕ್ಕಪ್ಪನಂತೆ ವಾತ್ಸಲ್ಯವನ್ನಿಟ್ಟವನು.

ಅಹಂ ತು ಮೋಕ್ಷಿತಸ್ತಸ್ಮಾತ್ತವ ಪಿತ್ರಾ ಮಹಾತ್ಮನಾ ।
ಮಾರುತೇನ ತದಾ ವತ್ಸ ಪ್ರಕ್ಷಿಪ್ತೋಽಸ್ಮಿ ಮಹಾರ್ಣವೇ ॥ ೧೬

ರಾಮಸ್ಯ ಚ ಮಯಾ ಸಾಹ್ಯೇ ವರ್ತಿತವ್ಯಮರಿಂದಮ ।
ರಾಮೋ ಧರ್ಮಭೃತಾಂ ಶ್ರೇಷ್ಠೋ ಮಹೇಂದ್ರಸಮವಿಕ್ರಮಃ ॥ ೧೭

ಏತಚ್ಛ್ರುತ್ವಾ ವಚಸ್ತಸ್ಯ ಮೈನಾಕಸ್ಯ ಮಹಾತ್ಮನಃ ।
ಕಾರ್ಯಮಾವೇದ್ಯ ತು ಗಿರೇರುದ್ಯತಂ ಚ ಮನೋ ಮಮ ॥ ೧೮

ತೇನ ಚಾಹಮನುಜ್ಞಾತೋ ಮೈನಾಕೇನ ಮಹಾತ್ಮನಾ ।
ಸ ಚಾಪ್ಯಂತರ್ಹಿತಃ ಶೈಲೋ ಮಾನುಷೇಣ ವಪುಷ್ಮತಾ ॥ ೧೯

ಶರೀರೇಣ ಮಹಾಶೈಲಃ ಶೈಲೇನ ಚ ಮಹೋದಧೌ ।
ಉತ್ತಮಂ ಜವಮಾಸ್ಥಾಯ ಶೇಷಂ ಪಂಥಾನಮಾಸ್ಥಿತಃ ॥ ೨೦

ತತೋಽಹಂ ಸುಚಿರಂ ಕಾಲಂ ವೇಗೇನಾಭ್ಯಗಮಂ ಪಥಿ ।
ತತಃ ಪಶ್ಯಾಮ್ಯಹಂ ದೇವೀಂ ಸುರಸಾಂ ನಾಗಮಾತರಮ್ ॥ ೨೧

ಆಗ ಮಹಾತ್ಮನಾದ ನಿನ್ನ ತಂದೆಯು ನನ್ನನ್ನು ಈ ಸಮುದ್ರಕ್ಕೆ ತಂದುಹಾಕಿ ಕಾಪಾಡಿದನು. ಎಲೈ ವೀರನೆ, ಶ್ರೀರಾಮನಿಗೆ ಸಹಾಯಮಾಡಬೇಕಾದದ್ದು ನನ್ನ ಕರ್ತವ್ಯ. ಅವನು ಮಹಾಧರ್ಮಿಷ್ಠ ದೇವೇಂದ್ರನಂತೆ ಪರಾಕ್ರಮಿ'' ಎಂದು ಹೇಳಿದನು (೧೬–೧೭). ನಾನು ಆ ಮಹಾತ್ಮನ ಮಾತನ್ನು ಕೇಳಿದಮೇಲೆ ಅವನಿಗೆ ನನ್ನ ಕಾರ್ಯಗೌರವವನ್ನೂ ಮನಸ್ಸಿನ ಉದ್ವೇಗವನ್ನೂ ತಿಳಿಸಿದೆನು. (ಅಲ್ಲಿ ವಿಶ್ರಮಿಸದೆ) ಮುಂದೆ ಹೋಗುತ್ತೇನೆಂದು ಮೈನಾಕನನ್ನು ಒಪ್ಪಿಸಿದೆನು. ಮನುಷ್ಯ ಶರೀರವನ್ನು ಧರಿಸಿ ಮಾತಾಡುತ್ತಿದ್ದ ಮೈನಾಕನು ಅಂತರ್ಧಾನಹೊಂದಿದನು. ಪರ್ವತವು ಸಮುದ್ರದಲ್ಲಿ ಮುಳುಗಿತು. ನಾನು ಇನ್ನೂ ಅತಿಶಯವೇಗದಿಂದ ಮುಂದಿನ ದಾರಿಯನ್ನು ಹಿಡಿದೆನು (೧೮–೨೦). ಅನಂತರ ಬಹಳಹೊತ್ತು ಪ್ರಯಾಣಮಾಡಿದಮೇಲೆ ನೋಡುತ್ತೇನೆ—ಸಮುದ್ರಮಧ್ಯದಲ್ಲಿ ನಾಗಮಾತೆಯಾದ ಸುರಸಾದೇವಿಯು ನಿಂತುಬಿಟ್ಟಿದ್ದಾಳೆ ! ಅವಳು ''ಎಲೈ ವಾನರ, ನೀನು ನನಗೆ ಆಹಾರವೆಂದು ದೇವತೆಗಳು ಹೇಳಿದ್ದಾರೆ. ಬಹುದಿನಗಳಮೇಲೆ ನನಗೆ

ಸಮುದ್ರಮಧ್ಯೇ ಸಾ ದೇವೀ ವಚನಂ ಮಾಮಭಾಷತ ।
ಮಮ ಭಕ್ಷಃ ಪ್ರದಿಷ್ಟಸ್ತ್ವಮಮರೈರ್ಹರಿಸತ್ತಮ ॥ ೨೨
ಅತಸ್ತ್ವಾಂ ಭಕ್ಷಯಿಷ್ಯಾಮಿ ವಿಹಿತಸ್ತ್ವಂ ಚಿರಸ್ಯ ಮೇ ।
ಏವಮುಕ್ತಃ ಸುರಸಯಾ ಪ್ರಾಂಜಲಿಃ ಪ್ರಣತಃ ಸ್ಥಿತಃ ॥ ೨೩
ವಿವರ್ಣವದನೋ ಭೂತ್ವಾ ವಾಕ್ಯಂ ಚೇದಮುದೀರಯನ್ ।
ರಾಮೋ ದಾಶರಥಿಃ ಶ್ರೀಮಾನ್ ಪ್ರವಿಷ್ಟೋ ದಂಡಕಾವನಮ್ ॥ ೨೪
ಲಕ್ಷ್ಮಣೇನ ಸಹ ಭ್ರಾತ್ರಾ ಸೀತಯಾ ಚ ಪರಂತಪಃ ।
ತಸ್ಯ ಸೀತಾ ಹೃತಾ ಭಾರ್ಯಾ ರಾವಣೇನ ದುರಾತ್ಮನಾ ॥ ೨೫
ತಸ್ಯಾಃ ಸಕಾಶಂ ದೂತೋಽಹಂ ಗಮಿಷ್ಯೇ ರಾಮಶಾಸನಾತ್ ।
ಕರ್ತುಮರ್ಹಸಿ ರಾಮಸ್ಯ ಸಾಹಾಯ್ಯಂ ವಿಷಯೇ ಸತೀ ॥ ೨೬
ಅಥವಾ ಮೈಥಿಲೀಂ ದೃಷ್ಟ್ವಾ ರಾಮಂ ಚಾಕ್ಲಿಷ್ಟಕಾರಿಣಮ್ ।
ಆಗಮಿಷ್ಯಾಮಿ ತೇ ವಕ್ತ್ರಂ ಸತ್ಯಂ ಪ್ರತಿಶೃಣೋಮಿ ತೇ ॥ ೨೭
ಏವಮುಕ್ತಾ ಮಯಾ ಸಾ ತು ಸುರಸಾ ಕಾಮರೂಪಿಣೀ ।
ಅಬ್ರವೀನ್ನಾತಿವರ್ತೇತ ಕಶ್ಚಿದೇಷ ವರೋ ಮಮ ॥ ೨೮

ಸಿಕ್ಕಿದ್ದೀಯೆ. ನಿನ್ನನ್ನು ಭಕ್ಷಿಸಿಬಿಡುತ್ತೇನೆ'' ಎಂದಳು (೨೧–೨೨). ಆಗ ನಾನು ಕೈಮುಗಿದುಕೊಂಡು ದೈನ್ಯಭಾವದಿಂದ ''ದೇವಿ, ದಶರಥನ ಮಗನಾದ ಶ್ರೀರಾಮನು ಸೀತಾ ಲಕ್ಷ್ಮಣರೊಡನೆ ದಂಡಕಾರಣ್ಯಕ್ಕೆ ಬಂದನು. ದುರಾತ್ಮನಾದ ರಾವಣನು ಸೀತಾದೇವಿಯನ್ನು ಅಪಹರಿಸಿಬಿಟ್ಟನು (೨೩–೨೫). ನಾನು ರಾಮನ ಆಜ್ಞೆಯಂತೆ ದೂತನಾಗಿ ಅವಳ ಬಳಿಗೆ ಹೋಗುತ್ತಿದ್ದೇನೆ. ನೀನು ರಾಮರಾಜ್ಯದಲ್ಲಿ ಪ್ರಜೆಯಾಗಿರುವುದರಿಂದ ಅವನ ಕಾರ್ಯಕ್ಕೆ ಸಹಾಯಮಾಡಬೇಕು. ಅಥವಾ ಮೈಥಿಲಿಯನ್ನು ಕಂಡಮೇಲೆ ಪುನಃ ರಾಮನನ್ನು ನೋಡಿ ನಾನೇ ಬಂದು ನಿನ್ನ ಬಾಯಿಗೆ ಸಿಗುತ್ತೇನೆ. ಆಣೆಯಿಟ್ಟು ಹೇಳುತ್ತೇನೆ. ಈ ಮಾತು ಸತ್ಯ'' ಎಂದೆನು (೨೬–೨೭). ಆಗ ಕಾಮರೂಪಿಣಿಯಾದ ಸುರಸೆಯು ''ನನ್ನ ಕೈಗೆ ಸಿಕ್ಕಿದಮೇಲೆ ಯಾರೂ ತಪ್ಪಿಸಿಕೊಂಡು ಹೋಗಕೂಡದು. ಇದು ನನಗೆ ಒಂದು ವರ'' ಎಂದಳು. ನಾನು ದೇಹವನ್ನು ಹತ್ತು ಯೋಜನ ವಿಸ್ತಾರವಾಗಿ ಬೆಳೆಯಿಸಿಕೊಂಡು ಕ್ಷಣಕ್ಷಣಕ್ಕೂ

ಏವಮುಕ್ತಃ ಸುರಸಯಾ ದಶಯೋಜನಮಾಯತಃ ।
ತತೋಽರ್ಧಗುಣವಿಸ್ತಾರೋ ಬಭೂವಾಹಂ ಕ್ಷಣೇನ ತು ॥ ೨೯

ಮತ್ಪ್ರಮಾಣಾಧಿಕಂ ಚೈವ ವ್ಯಾದಿತಂ ತು ಮುಖಂ ತಯಾ ।
ತದ್ದೃಷ್ಟ್ವಾ ವ್ಯಾದಿತಂ ಚಾಸ್ಯಂ ಹ್ರಸ್ವಂ ಹ್ಯಕರವಂ ವಪುಃ ॥ ೩೦

ತಸ್ಮಿನ್ ಮುಹೂರ್ತೇ ಚ ಪುನರ್ಬಭೂವಾಂಗುಷ್ಠಮಾತ್ರಕಃ ।
ಅಭಿಪತ್ಯಾಶು ತದ್ವಕ್ತ್ರಂ ನಿರ್ಗತೋಽಹಂ ತತಃ ಕ್ಷಣಾತ್ ॥ ೩೧

ಅಬ್ರವೀತ್ ಸುರಸಾದೇವೀ ಸ್ವೇನ ರೂಪೇಣ ಮಾಂ ಪುನಃ ।
ಅರ್ಥಸಿದ್ಧ್ಯೈ ಹರಿಶ್ರೇಷ್ಠ ಗಚ್ಛ ಸೌಮ್ಯ ಯಥಾಸುಖಮ್ ॥ ೩೨

ಸಮಾನಯ ಚ ವೈದೇಹೀಂ ರಾಘವೇಣ ಮಹಾತ್ಮನಾ ।
ಸುಖೀ ಭವ ಮಹಾಬಾಹೋ ಪ್ರೀತಾಸ್ಮಿ ತವ ವಾನರ ॥ ೩೩

ತತೋಽಹಂ ಸಾಧು ಸಾಧ್ವೀತಿ ಸರ್ವಭೂತೈಃ ಪ್ರಶಂಸಿತಃ ।
ತತೋಽಂತರಿಕ್ಷಂ ವಿಪುಲಂ ಪ್ಲುತೋಽಹಂ ಗರುಡೋ ಯಥಾ ॥ ೩೪

ಇನ್ನೂ ದೊಡ್ಡದಾಗಿ ಬೆಳೆಯಿಸುತ್ತ ಹೋದೆನು (೨೮–೨೯). ಸುರಸೆಯು ನನಗಿಂತಲೂ ದೊಡ್ಡದಾಗಿ ಬಾಯನ್ನು ಕಿರಿಯುತ್ತಿದ್ದಳು. ನಾನು ಒಂದು ಕ್ಷಣದಲ್ಲಿ ದೇಹವನ್ನು ಹೆಬ್ಬೆರಳಿನಷ್ಟು ಚಿಕ್ಕದಾಗಿ ಮಾಡಿ ಅವಳ ಬಾಯೊಳಗೆ ನುಗ್ಗಿ ಥಟ್ಟನೆ ಈಚೆಗೆ ಬಂದುಬಿಟ್ಟೆನು (೩೦–೩೧). ಆಗ ಸುರಸಾದೇವಿಯು ತನ್ನ ನಿಜರೂಪ ವನ್ನು ಧರಿಸಿ ನಿಂತು, "ಹೇ ವಾನರೋತ್ತಮ! ನಿನ್ನ ಕಾರ್ಯವು ಸಿದ್ಧಿಸಲಿ. ಸುಖವಾಗಿ ಪ್ರಯಾಣಮಾಡು, ವೈದೇಹಿಯನ್ನು ಕರೆತಂದು ಶ್ರೀರಾಮನೊಡನೆ ಸೇರಿಕೊಳ್ಳುವಂತೆ ಮಾಡು. ವೀರಾಗ್ರಣಿ, ನಿನಗೆ ಸುಖವಾಗಲಿ. ನಾನು ಮೆಚ್ಚಿದೆನು" ಎಂದಳು (೩೨–೩೩). ಅದನ್ನು ನೋಡುತ್ತಿದ್ದ ಸಮಸ್ತ ದೇವತೆಗಳೂ 'ಭಲೆ! ಭಲೆ!' ಎಂದು ನನ್ನನ್ನು ಕೊಂಡಾಡಿದರು. ನಾನು ಗರುಡನಂತೆ, ವಿಶಾಲವಾದ ಆಕಾಶದಲ್ಲಿ ಮುಂದಕ್ಕೆ ಹಾರಿಹೋದೆನು. ಸ್ವಲ್ಪಹೊತ್ತಿನಲ್ಲಿ ಯಾರೋ ನನ್ನ ನೆರಳನ್ನು ಜಗ್ಗಿ ಹಿಡಿದಂತಾಯಿತು. ನೋಡಿದರೆ ಯಾರೂ ಕಾಣಿಸಲಿಲ್ಲ. ನನ್ನ ವೇಗಕ್ಕೆ

ಛಾಯಾ ಮೇ ನಿಗೃಹೀತಾ ಚ ನ ಚ ಪಶ್ಯಾಮಿ ಕಿಂಚನ ।
ಸೋಽಹಂ ವಿಗತವೇಗಸ್ತು ದಿಶೋ ದಶ ವಿಲೋಕಯನ್ ॥ ೩೫

ನ ಕಿಂಚಿತ್ತತ್ರ ಪಶ್ಯಾಮಿ ಯೇನ ಮೇಽಪಹೃತಾ ಗತಿಃ ।
ತತೋ ಮೇ ಬುದ್ಧಿರುತ್ಪನ್ನಾ ಕಿಂ ನಾಮ ಗಮನೇ ಮಮ ॥ ೩೬

ಈದೃಶೋ ವಿಘ್ನ ಉತ್ಪನ್ನೋ ರೂಪಂ ಯತ್ರ ನ ದೃಶ್ಯತೇ ।
ಅಧೋಭಾಗೇನ ಮೇ ದೃಷ್ಟಿಃ ಶೋಚತಾ ಪಾತಿತಾ ಮಯಾ ॥ ೩೭

ತತೋಽದ್ರಾಕ್ಷಮಹಂ ಭೀಮಾಂ ರಾಕ್ಷಸೀಂ ಸಲಿಲೇಶಯಾಮ್ ।
ಪ್ರಹಸ್ಯ ಚ ಮಹಾನಾದಮುಕ್ತೋಽಹಂ ಭೀಮಯಾ ತಯಾ ॥ ೩೮

ಅವಸ್ಥಿತಮಸಂಭ್ರಾಂತಮಿದಂ ವಾಕ್ಯಮಶೋಭನಮ್ ।
ಕ್ವಾಸಿ ಗಂತಾ ಮಹಾಕಾಯ ಕ್ಷುಧಿತಾಯಾ ಮಮೇಪ್ಸಿತಃ ॥ ೩೯

ಭಕ್ಷಃ ಪ್ರೀಣಯ ಮೇ ದೇಹಂ ಚಿರಮಾಹಾರವರ್ಜಿತಮ್ ।
ಬಾಢಮಿತ್ಯೇವ ತಾಂ ವಾಣೀಂ ಪ್ರತ್ಯಗೃಹ್ಣಾಮಹಂ ತತಃ ॥ ೪೦

ಅಡ್ಡಿಯಾಯಿತು. ಹತ್ತು ದಿಕ್ಕುಗಳಲ್ಲಿಯೂ ಕಣ್ಣಟ್ಟು ನೋಡಿದೆನು (೩೪–೩೫). ನನ್ನ ಪ್ರಯಾಣವನ್ನು ತಡೆದು ನಿಲ್ಲಿಸಿದ ವಸ್ತು ಯಾವುದೆಂದು ಗೋಚರಿಸಲೇ ಇಲ್ಲ. 'ಎಲಾ ! ಆಕಾಶದಲ್ಲಿ ನನಗೆ ಯಾರು ವಿಘ್ನವನ್ನು ಮಾಡುತ್ತಿರಬಹುದು ? ಯಾವ ರೂಪವೂ ಕಾಣಿಸುವುದಿಲ್ಲ' ಎಂದು ಚಿಂತಿಸುತ್ತ ಕೆಳಗೆ ಸಮುದ್ರವನ್ನು ಗಮನಿಸಿ ನೋಡಿದೆನು (೩೬–೩೭). ಆಗ ಸಮುದ್ರದಮೇಲೆ ಒಬ್ಬ ಘೋರರಾಕ್ಷಸಿಯು ಮಲಗಿಕೊಂಡಿದ್ದಳು. ಅವಳು ನನ್ನನ್ನು ನೋಡಿ ಗಟ್ಟಿಯಾಗಿ ನಕ್ಕಳು. ನಾನು ಸ್ವಲ್ಪವೂ ಭಯಪಡದೆ ಹಾಗೆಯೇ ನಿಂತುಕೊಂಡೆನು. ಅವಳು ಕೆಟ್ಟ ಧ್ವನಿಯಲ್ಲಿ ''ಎಲೈ ಭಾರಿ ಶರೀರದವನೆ ! ಎಲ್ಲಿಗೆ ಹೋಗುತ್ತೀಯೆ ? ನನಗೆ ಹಸಿವಾಗಿದೆ. ಒಳ್ಳೆಯ ಭಕ್ಷ್ಯವಾಗಿ ನೀನು ಸಿಕ್ಕಿದೆ. ನನ್ನ ದೇಹಕ್ಕೆ ಆಹಾರವಿಲ್ಲದೆ ಬಹಳ ದಿನವಾಯಿತು. ಇದಕ್ಕೆ ತೃಪ್ತಿಯನ್ನುಂಟುಮಾಡು'' ಎಂದು ಕಿರಿಚಿದಳು. ನಾನು ''ಒಳ್ಳೆಯದು; ಹಾಗೆಯೇ ಆಗಲಿ'' ಎಂದು ಒಪ್ಪಿಕೊಂಡೆನು (೩೮–೪೦).

ಆಸ್ಯಪ್ರಮಾಣಾದಧಿಕಂ ತಸ್ಯಾಃ ಕಾಯಮಪೂರಯಮ್ ।
ತಸ್ಯಾಶ್ಚಾಸ್ಯಂ ಮಹದ್ಭೀಮಂ ವರ್ಧತೇ ಮಮ ಭಕ್ಷಣೇ ॥ ೪೧

ನ ಚ ಮಾಂ ಸಾ ತು ಬುಬುಧೇ ಮಮ ವಾ ನಿಕೃತಂ ಕೃತಮ್ ।
ತತೋಽಹಂ ವಿಪುಲಂ ರೂಪಂ ಸಂಕ್ಷಿಪ್ಯ ನಿಮಿಷಾಂತರಾತ್ ॥ ೪೨

ತಸ್ಯಾ ಹೃದಯಮಾದಾಯ ಪ್ರಪತಾಮಿ ನಭಃಸ್ಥಲಮ್ ।
ಸಾ ವಿಸೃಷ್ಟಭುಜಾ ಭೀಮಾ ಪಪಾತ ಲವಣಾಂಭಸಿ ॥ ೪೩

ಮಯಾ ಪರ್ವತಸಂಕಾಶಾ ನಿಕೃತ್ತಹೃದಯಾ ಸತೀ ।
ಶೃಣೋಮಿ ಖಗತಾನಾಂ ಚ ಸಿದ್ಧಾನಾಂ ಚಾರಣೈಃ ಸಹ ॥ ೪೪

ರಾಕ್ಷಸೀ ಸಿಂಹಿಕಾ ಭೀಮಾ ಕ್ಷಿಪ್ರಂ ಹನುಮತಾ ಹತಾ ।
ತಾಂ ಹತ್ವಾ ಪುನರೇವಾಹಂ ಕೃತ್ಯಮಾತ್ಯಯಿಕಂ ಸ್ಮರನ್ ॥ ೪೫

ಗತ್ವಾ ಚಾಹಂ ಮಹಾಧ್ವಾನಂ ಪಶ್ಯಾಮಿ ನಗಮಂಡಿತಮ್ ।
ದಕ್ಷಿಣಂ ತೀರಮುದಧೇರ್ಲಂಕಾ ಯತ್ರ ಚ ಸಾ ಪುರೀ ॥ ೪೬

ಕೂಡಲೇ ಅವಳ ಬಾಯಿಗಿಂತ ದೊಡ್ಡದಾಗಿ ನನ್ನ ದೇಹವನ್ನು ಬೆಳೆಯಿಸಿದೆನು. ಅವಳೂ ನನ್ನನ್ನು ನುಂಗಬೇಕೆಂದು ಇನ್ನೂ ದೊಡ್ಡದಾಗಿ ಬಾಯನ್ನು ಹಿಗ್ಗಿಸಿದಳು. ಅವಳಿಗೆ ನನ್ನ ಸಾಮರ್ಥ್ಯವಾಗಲಿ ನಾನು ಉದ್ದೇಶಿಸಿದ ಉಪಾಯವಾಗಲಿ ತಿಳಿಯಲಿಲ್ಲ. ಒಂದು ನಿಮಿಷದಲ್ಲಿ ನನ್ನ ದೊಡ್ಡ ದೇಹವನ್ನು ಚಿಕ್ಕದಾಗಿ ಮಾಡಿಕೊಂಡು ಬಾಯೊಳಗೆ ನುಗ್ಗಿ ಅವಳ ಎದೆಯನ್ನು ಸೀಳಿ ಆಕಾಶಕ್ಕೆ ನೆಗೆದುಬಿಟ್ಟೆನು. ಆ ಪರ್ವತಾಕಾರದ ರಾಕ್ಷಸಿಯು ಕೈ ಚಾಚಿಕೊಂಡು ಸಮುದ್ರದಲ್ಲಿ ದೊಪ್ಪನೆ ಬಿದ್ದುಹೋದಳು (೪೧–೪೩). ಗಗನದಲ್ಲಿ ಸಂಚರಿಸುತ್ತಿದ್ದ ಸಿದ್ಧ ಚಾರಣರು "ಘೋರ ರಾಕ್ಷಸಿಯಾದ ಸಿಂಹಿಕೆಯನ್ನು ಹನುಮಂತನು ಕೊಂದು ಬಿಟ್ಟನು" ಎಂದು ಹೇಳಿಕೊಳ್ಳುತ್ತಿದ್ದ ಮಾತು ನನಗೆ ಕೇಳಿಸಿತು. ಹೀಗೆ ಸಿಂಹಿಕೆಯನ್ನು ಕೊಂದುಹಾಕಿ, ಕಾಲವಿಳಂಬವಾಯಿತೆಂದು ಬಗೆಯುತ್ತ ಬಹುದೂರದವರೆಗೆ ಹಾರಿಹೋದೆನು (೪೪–೪೫). ಮುಂದೆ ಪರ್ವತನಿಬಿಡವಾದ ಸಮುದ್ರದ ದಕ್ಷಿಣತೀರವು ಗೋಚರಿಸಿತು. ಅಲ್ಲಿಯೇ ಲಂಕಾಪಟ್ಟಣವಿದೆ. ನಾನು ಸೂರ್ಯನು

ಅಸ್ತಂ ದಿನಕರೇ ಯಾತೇ ರಕ್ಷಸಾಂ ನಿಲಯಂ ಪುರಮ್ ।
ಪ್ರವಿಷ್ಟೋಽಹಮವಿಜ್ಞಾತೋ ರಕ್ಷೋಭಿರ್ಭೀಮವಿಕ್ರಮೈಃ ॥ ೪೭
ತತ್ರ ಪ್ರವಿಶತಶ್ಚಾಪಿ ಕಲ್ಪಾಂತಘನಸಂನಿಭಾ ।
ಅಟ್ಟಹಾಸಂ ವಿಮುಂಚಂತೀಂ ನಾರೀ ಕಾಪ್ಯುತ್ಥಿತಾ ಪುರಃ ॥ ೪೮
ಜಿಘಾಂಸಂತೀಂ ತತಸ್ತಾಂ ತು ಜ್ವಲದಗ್ನಿಶಿರೋರುಹಾಮ್ ।
ಸವ್ಯಮುಷ್ಟಿಪ್ರಹಾರೇಣ ಪರಾಜಿತ್ಯ ಸುಭೈರವಾಮ್ ॥ ೪೯
ಪ್ರದೋಷಕಾಲೇ ಪ್ರವಿಶಂ ಭೀತಯಾಹಂ ತಯೋದಿತಃ ।
ಅಹಂ ಲಂಕಾಪುರೀ ವೀರ ನಿರ್ಜಿತಾ ವಿಕ್ರಮೇಣ ತೇ ॥ ೫೦
ಯಸ್ಮಾತ್ತಸ್ಮಾದ್ವಿಜೇತಾಸಿ ಸರ್ವರಕ್ಷಾಂಸ್ಯಶೇಷತಃ ।
ತತ್ರಾಹಂ ಸರ್ವರಾತ್ರಂ ತು ವಿಚಿನ್ವನ್ ಜನಕಾತ್ಮಜಾಮ್ ॥ ೫೧
ರಾವಣಾಂತಃಪುರಗತೋ ನ ಚಾಪಶ್ಯಂ ಸುಮಧ್ಯಮಾಮ್ ।
ತತಃ ಸೀತಾಮಪಶ್ಯಂಸ್ತು ರಾವಣಸ್ಯ ನಿವೇಶನೇ ॥ ೫೨
ಶೋಕಸಾಗರಮಾಸಾದ್ಯ ನ ಪಾರಮುಪಲಕ್ಷಯೇ ।
ಶೋಚತಾ ಚ ಮಯಾ ದೃಷ್ಟಂ ಪ್ರಾಕಾರೇಣ ಸಮಾವೃತಮ್ ॥ ೫೩

ಮುಳುಗಿದ ಮೇಲೆ ರಾಕ್ಷಸರಿಗೆ ಕಾಣಿಸಿಕೊಳ್ಳದಂತೆ ಲಂಕಾನಗರವನ್ನು ಪ್ರವೇಶಿಸಿದೆನು (೪೬–೪೭). ಪ್ರವೇಶಮಾಡುತ್ತಿರುವಾಗ ಒಬ್ಬ ಹೆಂಗಸು ಪ್ರಳಯಕಾಲದ ಮೇಘದಂತೆ ಗರ್ಜಿಸುತ್ತ ಅಟ್ಟಹಾಸಮಾಡುತ್ತ ಎದುರಿಗೆ ಬಂದು ನಿಂತುಬಿಟ್ಟಳು! ಅವಳು ನನ್ನನ್ನು ಕೊಲ್ಲಬೇಕೆಂದಿದ್ದಳು. ಅವಳ ತಲೆಗೂದಲು ಬೆಂಕಿಯ ಜ್ವಾಲೆಯಂತಿತ್ತು. ನಾನು ಎಡಗೈಯಿಂದ ಆ ಭೈರವಿಯನ್ನು ಗುದ್ದಿದೆನು (೪೮–೪೯). ಆಕೆಯು ಹಿಂಜರಿದು ಹೆದರಿ "ಎಲೈ ವೀರನೆ, ನಾನು ಲಂಕಾಧಿದೇವತೆ. ನಿನ್ನ ಪರಾಕ್ರಮಕ್ಕೆ ನಾನು ಸೋತೆನು. ಆದ್ದರಿಂದ ನೀನು ಸಮಸ್ತ ರಾಕ್ಷಸರನ್ನೂ ಜಯಿಸುತ್ತೀಯೆ" ಎಂದು ಹೇಳಿದಳು. ಅನಂತರ ಇಡೀ ರಾತ್ರಿಯೆಲ್ಲ ಸೀತೆಯನ್ನು ಹುಡುಕುತ್ತ ಅವಳನ್ನು ಕಾಣದೆ ರಾವಣನ ಅಂತಃಪುರಕ್ಕೆ ಹೋದೆನು. ಅಲ್ಲಿ ಸೀತೆಯನ್ನು ಕಾಣಲಿಲ್ಲ. ಅವನ ಮನೆಯಲ್ಲಿ ಎಲ್ಲಿ ಹುಡುಕಿದರೂ ಸೀತೆಯು ಗೋಚರಿಸಲಿಲ್ಲ (೫೦–೫೨). ಶೋಕಸಮುದ್ರದಿಂದ ಪಾರಾಗುವ ದಾರಿಯೇ

ಕಾಂಚನೇನ ವಿಕೃಷ್ಟೇನ ಗೃಹೋಪವನಮುತ್ತಮಮ್ ।
ಸಪ್ರಾಕಾರಮವಪ್ಲುತ್ಯ ಪಶ್ಯಾಮಿ ಬಹುಪಾದಪಮ್ ॥ ೫೪

ಅಶೋಕವನಿಕಾಮಧ್ಯೇ ಶಿಂಶಪಾಪಾದಪೋ ಮಹಾನ್ ।
ತಮಾರುಹ್ಯ ಚ ಪಶ್ಯಾಮಿ ಕಾಂಚನಂ ಕದಲೀವನಮ್ ॥ ೫೫

ಅದೂರೇ ಶಿಂಶಪಾವೃಕ್ಷಾತ್ ಪಶ್ಯಾಮಿ ವರವರ್ಣಿನೀಮ್ ।
ಶ್ಯಾಮಾಂ ಕಮಲಪತ್ರಾಕ್ಷೀಮುಪವಾಸಕೃಶಾನನಮ್ ॥ ೫೬

ತದೇಕವಾಸಃಸಂವೀತಾಂ ರಜೋಧ್ವಸ್ತಶಿರೋರುಹಾಮ್ ।
ಶೋಕಸಂತಾಪದೀನಾಂಗೀಂ ಸೀತಾಂ ಭರ್ತೃಹಿತೇ ಸ್ಥಿತಾಮ್ ॥ ೫೭

ರಾಕ್ಷಸೀಭಿರ್ವಿರೂಪಾಭಿಃ ಕ್ರೂರಾಭಿರಭಿಸಂವೃತಾಮ್ ।
ಮಾಂಸಶೋಣಿತಭಕ್ಷಾಭಿರ್ವ್ಯಾಘ್ರೀಭಿರ್ಹರಿಣೀಮಿವ ॥ ೫೮

ನನಗೆ ತೋರಲಿಲ್ಲ. ಮುಂದೇನೆಂದು ಚಿಂತಿಸುತ್ತಿರುವಾಗ ವಿಶಾಲವಾದ ಸುವರ್ಣಪ್ರಾಕಾರದಿಂದ ಪರಿವೇಷ್ಟಿತವಾದ ರಾವಣನ ಉದ್ಯಾನವನವು ನನಗೆ ಕಂಡಿತು. ನಾನು ಆ ಪ್ರಾಕಾರದಮೇಲೆ ಧುಮುಕಿ, ವೃಕ್ಷಪಂಕ್ತಿಗಳಿಂದ ಶೋಭಿಸುತ್ತಿದ್ದ ಉದ್ಯಾನವನದಲ್ಲಿ ಹುಡುಕಲಾರಂಭಿಸಿದೆನು (೫೩–೫೪). ಅದೇ ಅಶೋಕವನ. ಅದರ ನಡುವೆ ಇದ್ದ ಒಂದು ದೊಡ್ಡ ಶಿಂಶಪಾವೃಕ್ಷವನ್ನೇರಿ ನೋಡುತ್ತಿರುವಾಗ, ಸುವರ್ಣಮಯವಾದ ಒಂದು ಬಾಳೆಯತೋಟವು ನನಗೆ ಕಾಣಿಸಿತು. ಅಷ್ಟರಲ್ಲಿ ನಾನು ಕುಳಿತಿದ್ದ ಶಿಂಶಪಾವೃಕ್ಷಕ್ಕೆ ಸ್ವಲ್ಪದೂರದಲ್ಲಿ ಗೌರವರ್ಣದ ಒಬ್ಬ ಯುವತಿಯನ್ನು ಕಂಡೆನು. ಅವಳೇ ಸೀತಾದೇವಿ. ಅವಳ ಕಣ್ಣುಗಳು ತಾವರೆಯ ದಳದಂತೆ ಇದ್ದವು. ಉಪವಾಸದಿಂದ ಅವಳ ಮುಖವು ಬಾಡಿಹೋಗಿತ್ತು (೫೫–೫೬). ಸೀರೆಯೊಂದನ್ನೇ ಸುತ್ತಿಕೊಂಡಿದ್ದಳು. ತಲೆಗೂದಲು ಮಲಿನವಾಗಿತ್ತು. ದುಃಖದಿಂದ ಕೊರಗುತ್ತ, ತನ್ನ ಪತಿಯ ಹಿತವನ್ನೇ ಚಿಂತಿಸುತ್ತಿದ್ದಳು. ಸುತ್ತಲೂ ವಿಕಾರಿಗಳಾದ ಘೋರರಾಕ್ಷಸಿಯರು ಇದ್ದರು. ಅವರೆಲ್ಲರೂ ಮಾಂಸಾಹಾರಿಗಳು. ಹುಲಿಗಳು ಹೆಣ್ಣು ಜಿಂಕೆಯನ್ನು ಸುತ್ತುವರಿಯುವಂತೆ ಅವರು ಸೀತಾದೇವಿಯನ್ನು ಮುತ್ತಿಕೊಂಡು ಹೆದರಿಸುತ್ತಿದ್ದರು (೫೭–೫೮).

ಸಾ ಮಯಾ ರಾಕ್ಷಸೀಮಧ್ಯೇ ತರ್ಜ್ಯಮಾನಾ ಮುಹುರ್ಮುಹುಃ ।
ಏಕವೇಣೀಧರಾ ದೀನಾ ಭರ್ತೃಚಿಂತಾಪರಾಯಣಾ ॥ ೫೯

ಭೂಮಿಶಯ್ಯಾ ವಿವರ್ಣಾಂಗೀ ಪದ್ಮಿನೀವ ಹಿಮಾಗಮೇ ।
ರಾವಣಾದ್ವಿನಿವೃತ್ತಾರ್ಥಾ ಮರ್ತವ್ಯಕೃತನಿಶ್ಚಯಾ ॥ ೬೦

ಕಥಂಚಿನ್ಮೃಗಶಾವಾಕ್ಷೀ ತೂರ್ಣಮಾಸಾದಿತಾ ಮಯಾ ।
ತಾಂ ದೃಷ್ಟ್ವಾ ತಾದೃಶೀಂ ನಾರೀಂ ರಾಮಪತ್ನೀಂ ಯಶಸ್ವಿನೀಮ್ ॥ ೬೧

ತತ್ರೈವ ಶಿಂಶಪಾವೃಕ್ಷೇ ಪಶ್ಯನ್ನಹಮವಸ್ಥಿತಃ ।
ತತೋ ಹಲಹಲಾಶಬ್ದಂ ಕಾಂಚೀನೂಪುರಮಿಶ್ರಿತಮ್ ॥ ೬೨

ಶೃಣೋಮ್ಯಧಿಕಗಂಭೀರಂ ರಾವಣಸ್ಯ ನಿವೇಶನೇ ।
ತತೋಽಹಂ ಪರಮೋದ್ವಿಗ್ನಃ ಸ್ವರೂಪಂ ಪ್ರತಿಸಂಹರನ್ ॥ ೬೩

ಅಹಂ ತು ಶಿಂಶಪಾವೃಕ್ಷೇ ಪಕ್ಷೀವ ಗಹನೇ ಸ್ಥಿತಃ ।
ತತೋ ರಾವಣದಾರಾಶ್ಚ ರಾವಣಶ್ಚ ಮಹಾಬಲಃ ॥ ೬೪

ಸೀತೆಯಾದರೋ ಒಂಟಿ ಜಡೆಯನ್ನು ಧರಿಸಿ ದೈನ್ಯದಿಂದ ಗಂಡನನ್ನೇ ಧ್ಯಾನಿಸುತ್ತ ಇರುವಳು. ನೆಲದಮೇಲೆ ಮಲಗುತ್ತ, ಮೈಬಣ್ಣಗೆಟ್ಟು, ಚಳಿಗಾಲದ ತಾವರೆಯ ಬಳ್ಳಿಯಂತಾಗಿರುವಳು. ರಾವಣನ ದೆಸೆಯಿಂದ ಜೀವಿತದಲ್ಲಿ ನಿರಾಶಳಾಗಿ ಸಾಯಬೇಕೆಂದು ನಿಶ್ಚಯಿಸಿಬಿಟ್ಟಿದ್ದಳು (೫೯–೬೦). ಅಷ್ಟರಲ್ಲಿ ಹೇಗೋ ದೈವವಶದಿಂದ ನಾನು ಆ ಹರಿಣನೇತ್ರೆಯನ್ನು ಕಂಡೆನು. ಹಾಗಿದ್ದ ಆ ತರುಣಿಯು ಶ್ರೀರಾಮನ ಪತ್ನಿಯೆಂದು ನಿಶ್ಚಯಿಸಿ, ಶಿಂಶಪಾವೃಕ್ಷದಲ್ಲಿಯೇ ನೋಡುತ್ತ ಕುಳಿತೆನು. ಆಗ ರಾವಣನ ಅರಮನೆಯ ಕಡೆಯಿಂದ ಡಾಬು, ಕಾಲಂದಿಗೆಗಳ ಶಬ್ದದೊಡನೆ ಗಂಭೀರವಾದ ಕಲಕಲ ಧ್ವನಿಯು ಕೇಳಿಸಿತು (೬೧–೬೨). ನಾನು ಗಾಬರಿಯಿಂದ ರೂಪವನ್ನು ಮರೆಯಿಸಿಕೊಂಡು ಶಿಂಶಪಾವೃಕ್ಷದ ದಟ್ಟವಾದ ಎಲೆಗಳ ಸಂದಿನಲ್ಲಿ ಹಕ್ಕಿಯಂತೆ ಕುಳಿತುಕೊಂಡೆನು. ಆಗ ಸೀತಾದೇವಿ ಇದ್ದಲ್ಲಿಗೆ ಬಹಳ ಬಲಶಾಲಿಯಾದ ರಾವಣನೂ ಅವನ ಹೆಂಡತಿಯರೂ ಬಂದರು (೬೩–೬೪).

ತಂ ದೇಶಂ ಸಮನುಪ್ರಾಪ್ತಾ ಯತ್ರ ಸೀತಾಭವತ್ ಸ್ಥಿತಾ ।
ತದ್ದೃಷ್ಟ್ವಾಥ ವರಾರೋಹಾ ಸೀತಾ ರಕ್ಷೋಗಣೇಶ್ವರಮ್ ॥ ೬೫
ಸಂಕುಚ್ಯೋರೂ ಸ್ತನೌ ಪೀನೌ ಬಾಹುಭ್ಯಾಂ ಪರಿರಭ್ಯ ಚ ।
ವಿತ್ರಸ್ತಾಂ ಪರಮೋದ್ವಿಗ್ನಾಂ ವೀಕ್ಷಮಾಣಾಂ ತತಸ್ತತಃ ॥ ೬೬
ತ್ರಾಣಂ ಕಿಂಚಿದಪಶ್ಯಂತೀಂ ವೇಪಮಾನಾಂ ತಪಸ್ವಿನೀಮ್ ।
ತಾಮುವಾಚ ದಶಗ್ರೀವಃ ಸೀತಾಂ ಪರಮದುಃಖಿತಾಮ್ ॥ ೬೭
ಅವಾಕ್ಶಿರಾಃ ಪ್ರಪತಿತೋ ಬಹು ಮನ್ಯಸ್ವ ಭಾಮಿನಿ ।
ಯದಿ ಚೇತ್ತ್ವಂ ತು ದರ್ಪಾನ್ಮಾಂ ನಾಭಿನಂದಸಿ ಗರ್ವಿತೇ ॥ ೬೮
ದ್ವೌ ಮಾಸಾವಂತರಂ ಸೀತೇ ಪಾಸ್ಯಾಮಿ ರುಧಿರಂ ತವ ।
ಏತಚ್ಛ್ರುತ್ವಾ ವಚಸ್ತಸ್ಯ ರಾವಣಸ್ಯ ದುರಾತ್ಮನಃ ॥ ೬೯
ಉವಾಚ ಪರಮಕ್ರುದ್ಧಾ ಸೀತಾ ವಚನಮುತ್ತಮಮ್ ।
ರಾಕ್ಷಸಾಧಮ ರಾಮಸ್ಯ ಭಾರ್ಯಾಮಮಿತತೇಜಸಃ ॥ ೭೦
ಇಕ್ಷ್ವಾಕುಕುಲನಾಥಸ್ಯ ಸ್ನುಷಾಂ ದಶರಥಸ್ಯ ಚ ।
ಅವಾಚ್ಯಂ ವದತೋ ಜಿಹ್ವಾ ಕಥಂ ನ ಪತಿತಾ ತವ ॥ ೭೧

ರಾವಣನು ಬರುತ್ತಿರುವುದನ್ನು ಕಂಡು ಸೀತೆಯು ತೊಡೆಗಳನ್ನು ಮಡಿಸಿ ತೋಳುಗಳಿಂದ ಎದೆಯನ್ನು ಮುಚ್ಚಿಕೊಂಡು ಕುಳಿತಳು. ಅವಳು ಹೆದರಿ ಗಾಬರಿಯಿಂದ ಅತ್ತಿತ್ತ ನೋಡುತ್ತ, ಯಾವ ರಕ್ಷಣೆಯನ್ನೂ ಕಾಣದೆ ನಡುಗಲಾರಂಭಿಸಿದಳು (೬೫–೬೬). ಅನಾಥೆಯೂ ಪರಮ ದುಃಖಿತೆಯೂ ಆದ ಸೀತೆಯನ್ನು ಉದ್ದೇಶಿಸಿ ರಾವಣನು ಹೀಗೆಂದನು : ''ಹೇ ಕೋಪನೆ, ನಿನಗೆ ತಲೆಬಾಗಿ ನಮಸ್ಕರಿಸುತ್ತೇನೆ. ನನ್ನ ಮಾತನ್ನು ನಡೆಸಿ ಮನ್ನಿಸು. ನೀನು ಗರ್ವದಿಂದ ನನ್ನನ್ನು ಮೆಚ್ಚದೆ ಇದ್ದರೆ, ಇನ್ನು ಎರಡು ತಿಂಗಳು ಅವಕಾಶವನ್ನು ಕೊಡುತ್ತೇನೆ. ಆಮೇಲೆ, ಎಲೆ ಸೀತೆ, ನಿನ್ನ ರಕ್ತವನ್ನು ಕುಡಿದುಬಿಡುತ್ತೇನೆ'' (೬೭–೬೯). ಆ ದುರಾತ್ಮನ ಮಾತನ್ನು ಕೇಳಿ ಸೀತೆಯು ಅತ್ಯಂತ ಕ್ರುದ್ಧಳಾದಳು. ''ಎಲಾ ಅಧಮ, ಮಹಾತೇಜಸ್ವಿಯಾದ ಶ್ರೀರಾಮನ ಪತ್ನಿಗೆ, ಇಕ್ಷ್ವಾಕುಕುಲನಾಥನಾದ ದಶರಥಮಹಾರಾಜನ ಸೊಸೆಗೆ ಅವಾಚ್ಯವಾದ ಮಾತನ್ನಾಡುವೆಯಾ? ನಿನ್ನ ನಾಲಿಗೆ ಕಳಚಿಬಿದ್ದು

ಕಿಂಸ್ವಿದ್ವೀರ್ಯಂ ತವಾನಾರ್ಯ ಯೋ ಮಾಂ ಭರ್ತುರಸಂನಿಧೌ ।
ಅಪಹೃತ್ಯಾಗತಃ ಪಾಪ ತೇನಾದೃಷ್ಟೋ ಮಹಾತ್ಮನಾ ॥ ೭೨

ನ ತ್ವಂ ರಾಮಸ್ಯ ಸದೃಶೋ ದಾಸ್ಯೇऽಪ್ಯಸ್ಯ ನ ಯುಜ್ಯಸೇ ।
ಅಜೇಯಃ ಸತ್ಯವಾದೀ ಚ ರಣಶ್ಲಾಘೀ ಚ ರಾಘವಃ ॥ ೭೩

ಜಾನಕ್ಯಾ ಪರುಷಂ ವಾಕ್ಯಮೇವಮುಕ್ತೋ ದಶಾನನಃ ।
ಜಜ್ವಾಲ ಸಹಸಾ ಕೋಪಾಚ್ಚಿತಾಸ್ಥ ಇವ ಪಾವಕಃ ॥ ೭೪

ವಿವೃತ್ಯ ನಯನೇ ಕ್ರೂರೇ ಮುಷ್ಟಿಮುದ್ಯಮ್ಯ ದಕ್ಷಿಣಮ್ ।
ಮೈಥಿಲೀಂ ಹಂತುಮಾರಬ್ಧಃ ಸ್ತ್ರೀಭಿರ್ಹಾಹಾಕೃತಂ ತದಾ ॥ ೭೫

ಸ್ತ್ರೀಣಾಂ ಮಧ್ಯಾತ್ ಸಮುತ್ಪತ್ಯ ತಸ್ಯ ಭಾರ್ಯಾ ದುರಾತ್ಮನಃ ।
ವರಾ ಮಂದೋದರೀ ನಾಮ ತಯಾ ಸ ಪ್ರತಿಷೇಧಿತಃ ॥ ೭೬

ಹೋಗಬಾರದೆ? (೭೦–೭೧). ಅನಾರ್ಯ-ಪಾಪಿ, ನನ್ನ ಗಂಡನು ಇಲ್ಲದ ಸಮಯದಲ್ಲಿ ಅವನಿಗೆ ಕಾಣಿಸಿಕೊಳ್ಳದಂತೆ ನನ್ನನ್ನು ಅಪಹರಿಸಿ ತಂದ ನಿನ್ನ ಪರಾಕ್ರಮ ಎಷ್ಟರದು ? ನೀನು ರಾಮನಿಗೆ ಸಾಟಿಯಾಗುವುದಿರಲಿ, ಅವನ ದಾಸನಾಗುವುದಕ್ಕೆ ಕೂಡ ಯೋಗ್ಯನಲ್ಲ! ಅಜೇಯನೂ ಸತ್ಯಸಂಧನೂ ರಣ ಧೀರನೂ ಆದವನು ಶ್ರೀರಾಮ'' ಎಂದು ಹೇಳಿದಳು (೭೨–೭೩). ಜಾನಕಿಯ ಈ ಕಠೋರವಾದ ನುಡಿಯನ್ನು ಕೇಳಿ ರಾವಣನು ಕೋಪದಿಂದ ಚಿತಾಗ್ನಿಯಂತೆ ಉರಿದೆದ್ದನು. ಅವನು ಕಣ್ಣುಗಳನ್ನು ತಿರುಗಿಸುತ್ತ ಬಲಗೈ ಮುಷ್ಟಿಯನ್ನೆತ್ತಿ, ಸೀತೆಯನ್ನು ಕೊಲ್ಲಬೇಕೆಂದು ನುಗ್ಗಿದನು. ಹೆಂಗಸರು ಹಾಹಾಕಾರ ಮಾಡಿದರು. ಥಟ್ಟನೆ ಆ ಹೆಂಗಸರ ಮಧ್ಯದಿಂದ ಮಂಡೋದರಿ* ಎಂಬ ರಾವಣನ ಹೆಂಡತಿಯು ಓಡಿಬಂದು ರಾವಣನನ್ನು ತಡೆದಳು (೭೪–೭೬).

---

* ಹಿಂದೆ ಇಪ್ಪತ್ತೆರಡನೆಯ ಸರ್ಗದಲ್ಲಿ ಧಾನ್ಯಮಾಲಿನಿಯು ತಡೆದುದಾಗಿ ಹೇಳಿದೆ. ಈಗ ಮಂಡೋದರಿಯು ತಡೆದುದಾಗಿ ಹೇಳಿದೆ. ಆದ್ದರಿಂದ ಇಬ್ಬರೂ ಬಂದು ತಡೆದರೆಂದು ತಿಳಿಯಬೇಕು. ಅಥವಾ ಮಂಡೋದರಿಗೆ ಧಾನ್ಯಮಾಲಿನಿ ಎಂದು ಇನ್ನೊಂದು ಹೆಸರು ಇದ್ದಿರಬಹುದು. ಹೆಸರು ತಿಳಿಯದೆ ಹನುಮಂತನು ತಪ್ಪಾಗಿ ಹೇಳಿದ್ದರೂ ಇರಬಹುದು.

ಉಕ್ತ್ವಾ ಮಧುರಾಂ ವಾಣೀಂ ತಯಾ ಸ ಮದನಾರ್ದಿತಃ ।
ಸೀತಯಾ ತವ ಕಿಂ ಕಾರ್ಯಂ ಮಹೇಂದ್ರಸಮವಿಕ್ರಮ ॥ ೭೭
ದೇವಗಂಧರ್ವಕನ್ಯಾಭಿರ್ಯಕ್ಷಕನ್ಯಾಭಿರೇವ ಚ ।
ಸಾರ್ಧಂ ಪ್ರಭೋ ರಮಸ್ವೇಹ ಸೀತಯಾ ಕಿಂ ಕರಿಷ್ಯಸಿ ॥ ೭೮
ತತಸ್ತಾಭಿಃ ಸಮೇತಾಭಿರ್ನಾರೀಭಿಃ ಸ ಮಹಾಬಲಃ ।
ಪ್ರಸಾದ್ಯ ಸಹಸಾ ನೀತೋ ಭವನಂ ಸ್ವಂ ನಿಶಾಚರಃ ॥ ೭೯
ಯಾತೇ ತಸ್ಮಿನ್ ದಶಗ್ರೀವೇ ರಾಕ್ಷಸ್ಯೋ ವಿಕೃತಾನನಾಃ ।
ಸೀತಾಂ ನಿರ್ಭರ್ತ್ಸಯಾಮಾಸುರ್ವಾಕ್ಯೈಃ ಕ್ರೂರೈಃ ಸುದಾರುಣೈಃ ॥ ೮೦
ತೃಣವದ್ಭಾಷಿತಂ ತಾಸಾಂ ಗಣಯಾಮಾಸ ಜಾನಕೀ ।
ತರ್ಜಿತಂ ಚ ತದಾ ತಾಸಾಂ ಸೀತಾಂ ಪ್ರಾಪ್ಯ ನಿರರ್ಥಕಮ್ ॥ ೮೧
ವೃಥಾ ಗರ್ಜಿತನಿಶ್ಚೇಷ್ಟಾ ರಾಕ್ಷಸ್ಯಃ ಪಿಶಿತಾಶನಾಃ ।
ರಾವಣಾಯ ಶಶಂಸುಸ್ತಾಃ ಸೀತಾವ್ಯವಸಿತಂ ಮಹತ್ ॥ ೮೨
ತತಸ್ತಾಃ ಸಹಿತಾಃ ಸರ್ವಾ ವಿಹತಾಶಾ ನಿರುದ್ಯಮಾಃ ।
ಪರಿಕ್ಷಿಪ್ಯ ಸಮಂತಾತ್ತಾಂ ನಿದ್ರಾವಶಮುಪಾಗತಾಃ ॥ ೮೩

ಅವಳು ಕಾಮಪೀಡಿತನಾಗಿದ್ದ ರಾವಣನನ್ನು ಕುರಿತು ಮೃದುವಾದ ಮಾತಿನಿಂದ "ನೀನು ದೇವೇಂದ್ರನಂತಹ ಪರಾಕ್ರಮಿ. ಸೀತೆಯಿಂದ ಆಗಬೇಕಾದ್ದೇನು ? ದೇವ ಗಂಧರ್ವಕನ್ಯೆಯರೂ ಯಕ್ಷಕನ್ಯೆಯರೂ ನಿನಗೆ ಇದ್ದಾರೆ. ಮಹಾರಾಜ, ಅವರೊಡನೆ ವಿಹರಿಸು. ಸೀತೆ ಇಲ್ಲದಿದ್ದರೆ ನಿನಗೇನು ?" ಎಂದು ಹೇಳಿದಳು (೭೭–೭೮). ಅನಂತರ ಆ ಹೆಂಗಸರೆಲ್ಲರೂ ಸೇರಿ ಅವನನ್ನು ಅರಮನೆಗೆ ಕರೆದುಕೊಂಡು ಹೋದರು. ರಾವಣನು ಹೊರಟುಹೋದಮೇಲೆ ಅಲ್ಲಿದ್ದ ಕೆಟ್ಟ ಮೋರೆಯ ರಾಕ್ಷಸಿಯರು ಭೀಕರವಚನಗಳಿಂದ ಸೀತೆಯನ್ನು ಬೆದರಿಸತೊಡಗಿದರು. ಜಾನಕಿಯು ಮಾತ್ರ ಅವರ ಮಾತನ್ನು ಹುಲ್ಲಿನಂತೆ ಕಡೆಗಣಿಸಿದಳು. ರಾಕ್ಷಸಿಯರ ಬೆದರಿಕೆಯೆಲ್ಲವೂ ನಿಷ್ಫಲವಾಯಿತು (೭೯–೮೧). ತಮ್ಮ ಆರ್ಭಟಗಳೆಲ್ಲಾ ನಿಷ್ಫಲವಾದಮೇಲೆ, ಮಾಂಸಭಕ್ಷಕರಾದ ಆ ರಾಕ್ಷಸಿಯರು ಸೀತೆಯ ದೃಢನಿಶ್ಚಯವನ್ನು ರಾವಣನಿಗೆ ಹೋಗಿ ತಿಳಿಸಿದರು. ರಾಕ್ಷಸಿಯರಿಗೆ ಮುಂದೇನು ಮಾಡಬೇಕೆಂದು ತೋರಲಿಲ್ಲ. ಅವರು ಮಲಗಿ ನಿದ್ರಿಸಿಬಿಟ್ಟರು (೮೨–೮೩).

ತಾಸು ಚೈವ ಪ್ರಸುಪ್ತಾಸು ಸೀತಾ ಭರ್ತೃಹಿತೇ ರತಾ ।
ವಿಲಪ್ಯ ಕರುಣಂ ದೀನಾ ಪ್ರಶುಶೋಚ ಸುದುಃಖಿತಾ ॥ ೮೪

ತಾಸಾಂ ಮಧ್ಯಾತ್ ಸಮುತ್ಥಾಯ ತ್ರಿಜಟಾ ವಾಕ್ಯಮಬ್ರವೀತ್ ।
ಆತ್ಮಾನಂ ಖಾದತ ಕ್ಷಿಪ್ರಂ ನ ಸೀತಾ ವಿನಶಿಷ್ಯತಿ ॥ ೮೫

ಜನಕಸ್ಯಾತ್ಮಜಾ ಸಾಧ್ವೀ ಸ್ನುಷಾ ದಶರಥಸ್ಯ ಚ ।
ಸ್ವಪ್ನೋ ಹ್ಯದ್ಯ ಮಯಾ ದೃಷ್ಟೋ ದಾರುಣೋ ರೋಮಹರ್ಷಣಃ ॥ ೮೬

ರಕ್ಷಸಾಂ ಚ ವಿನಾಶಾಯ ಭರ್ತುರಸ್ಯಾ ಜಯಾಯ ಚ ।
ಅಲಮಸ್ಮಾನ್ ಪರಿತ್ರಾತುಂ ರಾಘವಾದ್ರಾಕ್ಷಸೀಗಣಮ್ ॥ ೮೭

ಅಭಿಯಾಚಾಮ ವೈದೇಹೀಮೇತದ್ಧಿ ಮಮ ರೋಚತೇ ।
ಯಸ್ಯಾ ಹ್ಯೇವಂವಿಧಃ ಸ್ವಪ್ನೋ ದುಃಖಿತಾಯಾಃ ಪ್ರದೃಶ್ಯತೇ ॥ ೮೮

ಸಾ ದುಃಖೈರ್ವಿವಿಧೈರ್ಮುಕ್ತಾ ಸುಸಮಾಪ್ನೋತ್ಯನುತ್ತಮಮ್ ।
ಪ್ರಣಿಪಾತಪ್ರಸನ್ನಾ ಹಿ ಮೈಥಿಲೀ ಜನಕಾತ್ಮಜಾ ॥ ೮೯

ಸೀತೆಯು ತನ್ನ ದುಃಖವನ್ನು ತೋಡಿಕೊಳ್ಳುತ್ತ ಅಳುತ್ತಿದ್ದಳು. ಆಗ ತ್ರಿಜಟೆ ಎಂಬವಳು ಎಚ್ಚತ್ತು ರಾಕ್ಷಸಿಯರನ್ನು ಕುರಿತು "ಎಲೈ ಕೆಟ್ಟ ಹೆಂಗಸರೆ! ನೀವು ನಿಮ್ಮನ್ನೇ ಸದ್ಯದಲ್ಲಿ ತಿನ್ನಬೇಕಾಗುತ್ತದೆ! ಸೀತೆಯು ಎಂದಿಗೂ ಸಾಯುವುದಿಲ್ಲ (೮೪–೮೫). ಇವಳು ಜನಕರಾಜನ ಪುತ್ರಿ. ದಶರಥ ಮಹಾರಾಜನ ಸೊಸೆ. ಮಹಾಪತಿವ್ರತೆ. ನಾನು ಒಂದು ಭಯಂಕರವಾದ ಮೈನವಿರೇಳಿಸುವ ಕನಸನ್ನು ಕಂಡೆ. ಅದು ರಾಕ್ಷಸರಿಗೆ ಸರ್ವನಾಶವನ್ನೂ ಇವಳ ಗಂಡನಿಗೆ ವಿಜಯವನ್ನೂ ಸೂಚಿಸುತ್ತಿದೆ. ಮುಂದೆ ರಾಮನಿಂದಾಗುವ ವಿಪತ್ತಿನಿಂದ ಪಾರಾಗಬೇಕಾದರೆ ನಮಗೆ ಇವಳೇ ಗತಿ (೮೬–೮೭). ಈ ಸೀತೆಯನ್ನು ಮರೆಹೊಕ್ಕು ಬೇಡಿಕೊಳ್ಳುವುದೇ ಸರಿ ಎಂದು ನನಗೆ ತೋರುತ್ತದೆ. ಈಕೆಯು ಕಷ್ಟದಲ್ಲಿದ್ದಾಗ ನನಗೆ ಇಂತಹ ದುಃಸ್ವಪ್ನವಾದ್ದರಿಂದ, ಈಕೆಯು ಎಲ್ಲಾ ಕಷ್ಟಗಳಿಂದಲೂ ಬಿಡುಗಡೆಹೊಂದಿ ಸುಖವನ್ನು ಪಡೆಯುವಳು. ನಾವು ಶರಣಾದರೆ ಜಾನಕಿಯು ಪ್ರಸನ್ನಳಾಗುತ್ತಾಳೆ" ಎಂದಳು (೮೮–೮೯).

ತತಃ ಸಾ ಹ್ರೀಮತೀ ಬಾಲಾ ಭರ್ತುರ್ವಿಜಯಹರ್ಷಿತಾ ।
ಅವೋಚದ್ಯದಿ ತತ್ತಥ್ಯಂ ಭವೇಯಂ ಶರಣಂ ಹಿ ವಃ ॥ ೯೦

ತಾಂ ಚಾಹಂ ತಾದೃಶೀಂ ದೃಷ್ಟ್ವಾ ಸೀತಾಯಾ ದಾರುಣಾಂ ದಶಾಮ್ ।
ಚಿಂತಯಾಮಾಸ ವಿಕ್ರಾಂತೋ ನ ಚ ಮೇ ನಿರ್ವೃತಂ ಮನಃ ॥ ೯೧

ಸಂಭಾಷಣಾರ್ಥಂ ಚ ಮಯಾ ಜಾನಕ್ಯಾಶ್ಚಿಂತಿತೋ ವಿಧಿಃ ।
ಇಕ್ಷ್ವಾಕೂಣಾಂ ಹಿ ವಂಶಸ್ತು ತತೋ ಮಮ ಪುರಸ್ಕೃತಃ ॥ ೯೨

ಶ್ರುತ್ವಾ ತು ಗದಿತಾಂ ವಾಚಂ ರಾಜರ್ಷಿಗಣಪೂಜಿತಾಮ್ ।
ಪ್ರತ್ಯಭಾಷತ ಮಾಂ ದೇವೀ ಬಾಷ್ಪೈಃ ಪಿಹಿತಲೋಚನಾ ॥ ೯೩

ಕಸ್ತ್ವಂ ಕೇನ ಕಥಂ ಚೇಹ ಪ್ರಾಪ್ತೋ ವಾನರಪುಂಗವ ।
ಕಾ ಚ ರಾಮೇಣ ತೇ ಪ್ರೀತಿಸ್ತನ್ಮೇ ಶಂಸಿತುಮರ್ಹಸಿ ॥ ೯೪

ತಸ್ಯಾಸ್ತದ್ವಚನಂ ಶ್ರುತ್ವಾ ಹ್ಯಹಮಪ್ಯಬ್ರವಂ ವಚಃ ।
ದೇವಿ ರಾಮಸ್ಯ ಭರ್ತುಸ್ತೇ ಸಹಾಯೋ ಭೀಮವಿಕ್ರಮಃ ॥ ೯೫

ತನ್ನ ಪತಿಗೆ ವಿಜಯವಾಗುವುದೆಂಬ ಮಾತನ್ನು ಕೇಳಿ ಸೀತೆಗೆ ಆನಂದವಾಯಿತು. ಆ ಬಾಲೆಯು ನಾಚುತ್ತ "ತ್ರಿಜಟೆಯ ಮಾತು ಸತ್ಯವಾದರೆ ನಿಮ್ಮನ್ನು ರಕ್ಷಿಸುವೆನು" ಎಂದಳು. ಸೀತೆಯ ಕಷ್ಟವನ್ನು ನೋಡುತ್ತಲಿದ್ದ ನನ್ನ ಮನಸ್ಸಿಗೆ ನೆಮ್ಮದಿಯೇ ಇರಲಿಲ್ಲ (೯೦–೯೧). ಅವಳೊಡನೆ ಹೇಗೆ ಮಾತನ್ನಾರಂಭಿಸಬೇಕೆಂದು ಆಲೋಚಿಸುತ್ತಿದ್ದೆನು. (ರಾಕ್ಷಸಿಯರು ಮತ್ತೆ ನಿದ್ರಿಸಿಬಿಟ್ಟರು). ಆಗ ನಾನು ಇಕ್ಷ್ವಾಕುವಂಶವನ್ನು ಮುಂದಿಟ್ಟು ರಾಮನನ್ನು ಹೊಗಳಲಾರಂಭಿಸಿದೆನು. ರಾಜರ್ಷಿಗಳೆಲ್ಲರಿಗೂ ಸಮ್ಮತವಾದ ಮಾತನ್ನೇ ನಾನು ಆಡಿದೆ. ಅದನ್ನು ಕೇಳಿ ದೇವಿಯು ಕಣ್ಣೀರು ತುಂಬಿಕೊಂಡು ನನ್ನ ಕಡೆಗೆ ನೋಡುತ್ತ ಹೀಗೆಂದಳು (೯೨–೯೩): "ಹೇ ವಾನರೋತ್ತಮ, ನೀನು ಯಾರು ? ಇಲ್ಲಿಗೇಕೆ ಬಂದೆ ? ರಾಮನಲ್ಲಿ ನಿನಗೆ ಇಷ್ಟೊಂದು ಪ್ರೀತಿಯಿರಲು ಕಾರಣವೇನು ? ತಿಳಿಸು" (೯೪). ಆಗ ನಾನು ಹೀಗೆ ಹೇಳಿದೆ : "ದೇವಿ, ನಿನ್ನ ಪತಿಯಾದ ಶ್ರೀರಾಮನಿಗೆ ಸುಗ್ರೀವನೆಂಬ ವಾನರೇಂದ್ರನು ಮಿತ್ರನಾಗಿದ್ದಾನೆ. ಸುಗ್ರೀವನು ಮಹಾ ಪರಾಕ್ರಮಿ.

ಸುಗ್ರೀವೋ ನಾಮ ವಿಕ್ರಾಂತೋ ವಾನರೇಂದ್ರೋ ಮಹಾಬಲಃ ।
ತಸ್ಯ ಮಾಂ ವಿದ್ಧಿ ಭೃತ್ಯಂ ತ್ವಂ ಹನುಮಂತಮಿಹಾಗತಮ್ ॥ ೯೬

ಭರ್ತ್ರಾಹಂ ಪ್ರೇಷಿತಸ್ತುಭ್ಯಂ ರಾಮೇಣಾಕ್ಲಿಷ್ಟಕರ್ಮಣಾ ।
ಇದಂ ಚ ಪುರುಷವ್ಯಾಘ್ರಃ ಶ್ರೀಮಾನ್ ದಾಶರಥಿಃ ಸ್ವಯಮ್ ॥ ೯೭

ಅಂಗುಲೀಯಮಭಿಜ್ಞಾನಮದಾತ್ತುಭ್ಯಂ ಯಶಸ್ವಿನಿ ।
ತದಿಚ್ಛಾಮಿ ತ್ವಯಾಜ್ಞಪ್ತಂ ದೇವಿ ಕಿಂ ಕರವಾಣ್ಯಹಮ್ ॥ ೯೮

ರಾಮಲಕ್ಷ್ಮಣಯೋಃ ಪಾರ್ಶ್ವಂ ನಯಾಮಿ ತ್ವಾಂ ಕಿಮುತ್ತರಮ್ ।
ಏತಚ್ಛ್ರುತ್ವಾ ವಿದಿತ್ವಾ ಚ ಸೀತಾ ಜನಕನಂದಿನೀ ॥ ೯೯

ಆಹ ರಾವಣಮುತ್ಸಾದ್ಯ ರಾಘವೋ ಮಾಂ ನಯತ್ವಿತಿ ।
ಪ್ರಣಮ್ಯ ಶಿರಸಾ ದೇವೀಮಹಮಾರ್ಯಾಮನಿಂದಿತಾಮ್ ॥ ೧೦೦

ರಾಘವಸ್ಯ ಮನೋಹ್ಲಾದಮಭಿಜ್ಞಾನಮಯಾಚಿಷಮ್ ।
ಅಥ ಮಾಮಬ್ರವೀತ್ ಸೀತಾ ಗೃಹ್ಯತಾಮಯಮುತ್ತಮಃ ॥ ೧೦೧

ಮಣಿರ್ಯೇನ ಮಹಾಬಾಹೂ ರಾಮಸ್ತ್ವಾಂ ಬಹು ಮನ್ಯತೇ ।
ಇತ್ಯುಕ್ತ್ವಾ ತು ವರಾರೋಹಾ ಮಣಿಪ್ರವರಮದ್ಭುತಮ್ ॥ ೧೦೨

ನಾನು ಆತನ ಭೃತ್ಯ. ನನ್ನ ಹೆಸರು ಹನುಮಂತ (೯೫–೯೬). ನಿನ್ನ ಪತಿಯಾದ ರಾಮನು ನನ್ನನ್ನು ಇಲ್ಲಿಗೆ ಕಳಿಸಿದ್ದಾನೆ. ದಶರಥ ಪುತ್ರನಾದ ಆ ವೀರನು ಗುರುತಿಗಾಗಿ, ತಾನೇ ಈ ಉಂಗುರವನ್ನು ಕೊಟ್ಟು ಕಳಿಸಿದ್ದಾನೆ. ದೇವಿ, ನಾನು ಮಾಡಬೇಕಾದ ಕೆಲಸವೇನು ? ಆಜ್ಞಾಪಿಸು. ರಾಮಲಕ್ಷ್ಮಣರಿದ್ದಲ್ಲಿಗೆ ನಿನ್ನನ್ನು ಕರೆದುಕೊಂಡು ಹೋಗಲೆ ?'' ಎಂದೆನು (೯೭–೯೯). ಆಗ ಜಾನಕಿಯು ''ಶ್ರೀರಾಮನೇ ಬಂದು ರಾವಣನನ್ನು ಸಂಹರಿಸಿ ನನ್ನನ್ನು ಕರೆದುಕೊಂಡುಹೋಗಲಿ'' ಎಂದುಬಿಟ್ಟಳು ! ನಾನು ಆ ಪೂಜ್ಯಳಿಗೆ ನಮಸ್ಕಾರಮಾಡಿ ''ದೇವಿ, ಹಾಗಾದರೆ ಶ್ರೀರಾಮನ ಮನಸ್ಸಿಗೆ ಹರ್ಷವನ್ನು ಕೊಡತಕ್ಕ ಯಾವುದಾದರೂ ಗುರುತೊಂದನ್ನು ಕೊಡು'' ಎಂದು ಕೇಳಿಕೊಂಡೆನು (೧೦೦–೧೦೧). ಆಗ ಸೀತಾದೇವಿಯು ''ಈ

ಪ್ರಾಯಚ್ಛತ್ ಪರಮೋದ್ವಿಗ್ನಾ ವಾಚಾ ಮಾಂ ಸಂದಿದೇಶ ಹ ।
ತತಸ್ತಸ್ಯೈ ಪ್ರಣಮ್ಯಾಹಂ ರಾಜಪುತ್ರ್ಯೈ ಸಮಾಹಿತಃ ॥ ೧೦೩

ಪ್ರದಕ್ಷಿಣಂ ಪರಿಕ್ರಾಮನ್ನಿಹಾಭ್ಯುದ್ಗತಮಾನಸಃ ।
ಉಕ್ತೋಽಹಂ ಪುನರೇವೇದಂ ನಿಶ್ಚಿತ್ಯ ಮನಸಾ ತಯಾ ॥ ೧೦೪

ಹನುಮನ್ ಮಮ ವೃತ್ತಾಂತಂ ವಕ್ತುಮರ್ಹಸಿ ರಾಘವೇ ।
ಯಥಾ ಶ್ರುತ್ವೈವ ನ ಚಿರಾತ್ತಾವುಭೌ ರಾಮಲಕ್ಷ್ಮಣೌ ॥ ೧೦೫

ಸುಗ್ರೀವಸಹಿತೌ ವೀರಾವುಪೇಯಾತಾಂ ತಥಾ ಕುರು ।
ಯದ್ಯನ್ಯಥಾ ಭವೇದೇತದ್ದ್ವೌ ಮಾಸೌ ಜೀವಿತಂ ಮಮ ॥ ೧೦೬

ನ ಮಾಂ ದ್ರಕ್ಷ್ಯತಿ ಕಾಕುತ್ಸ್ಥೋ ಮ್ರಿಯೇ ಸಾಹಮನಾಥವತ್ ।
ತಚ್ಛ್ರುತ್ವಾ ಕರುಣಂ ವಾಕ್ಯಂ ಕ್ರೋಧೋ ಮಾಮಭ್ಯವರ್ತತ ॥ ೧೦೭

ಉತ್ತರಂ ಚ ಮಯಾ ದೃಷ್ಟಂ ಕಾರ್ಯಶೇಷಮನಂತರಮ್ ।
ತತೋಽವರ್ಧತ ಮೇ ಕಾಯಸ್ತದಾ ಪರ್ವತಸಂನಿಭಃ ॥ ೧೦೮

ಚೂಡಾಮಣಿಯನ್ನು ಶ್ರೀರಾಮನಿಗೆ ಕೊಡು. ಆ ಮಹಾಬಾಹುವು ನಿನ್ನನ್ನು ಗೌರವಿಸುವನು'' ಎಂದು ಹೇಳಿ ತನ್ನ ಚೂಡಾರತ್ನವನ್ನು ನನಗೆ ಕೊಟ್ಟಳು. ಆದೊಂದು ಅದ್ಭುತವಾದ ರತ್ನ. ಅಲ್ಲದೆ ರಾಮನಿಗೆ ತಿಳಿಸಬೇಕೆಂದು ದುಃಖದಿಂದ ಉಮ್ಮಳಿಸುತ್ತ ಕೆಲವು ಮಾತುಗಳನ್ನು ಹೇಳಿಕಳಿಸಿದ್ದಾಳೆ. ಆಮೇಲೆ ನಾನು ರಾಜಪುತ್ರಿಗೆ ಪ್ರದಕ್ಷಿಣ ನಮಸ್ಕಾರಮಾಡಿ, ಹೊರಡಲು ಸಿದ್ಧನಾದೆನು. ಸೀತೆಯು ಮತ್ತೆ ಏನನ್ನೋ ನಿಶ್ಚಯಿಸಿ ಹೀಗೆಂದಳು (೧೦೨–೧೦೪). ''ಹನುಮಂತ, ನನ್ನ ವೃತ್ತಾಂತವನ್ನು ಶ್ರೀರಾಮನಿಗೆ ತಿಳಿಸು. ಇದನ್ನು ಕೇಳಿದ ಕೂಡಲೇ ರಾಮಲಕ್ಷ್ಮಣರಿಬ್ಬರೂ ಸುಗ್ರೀವನೊಡನೆ ಇಲ್ಲಿಗೆ ಬರುವಹಾಗೆ ಮಾಡು. ಇಲ್ಲದಿದ್ದರೆ ಇನ್ನು ಎರಡೇ ತಿಂಗಳು ನಾನು ಬದುಕಿರುವುದು. ಆಮೇಲೆ ಶ್ರೀರಾಮನು ನನ್ನನ್ನು ನೋಡಲಾರ. ದಿಕ್ಕಿಲ್ಲದವಳಂತೆ ಸತ್ತುಹೋಗುತ್ತೇನೆ'' ಎಂದಳು. ಕರುಳನ್ನೇ ಕೊರೆಯುವ ಆ ಮಾತನ್ನು ಕೇಳಿ ನನಗೆ (ರಾವಣನಮೇಲೆ) ರೋಷ ಉಕ್ಕಿಬಂದಿತು (೧೦೫–೧೦೭). ಅನಂತರ ನಾನು ಮಾಡಬೇಕಾದದ್ದು ಇನ್ನೇನೆಂದು ಆಲೋಚಿಸಿದೆನು. ನನ್ನ ದೇಹವು ಪರ್ವತಾಕಾರವಾಗಿ ಬೆಳೆದು ನಿಂತಿತು.

ಯುದ್ಧಕಾಂಕ್ಷೀ ವನಂ ತಚ್ಚ ವಿನಾಶಯಿತುಮಾರಭೇ ।
ತದ್ಭಗ್ನಂ ವನಷಂಡಂ ತು ಭ್ರಾಂತತ್ರಸ್ತಮೃಗದ್ವಿಜಮ್ ॥ ೧೦೯

ಪ್ರತಿಬುದ್ಧಾ ನಿರೀಕ್ಷಂತೇ ರಾಕ್ಷಸ್ಯೋ ವಿಕೃತಾನನಾಃ ।
ಮಾಂ ಚ ದೃಷ್ಟ್ವಾ ವನೇ ತಸ್ಮಿನ್ ಸಮಾಗಮ್ಯ ತತಸ್ತತಃ ॥ ೧೧೦

ತಾಃ ಸಮಭ್ಯಾಗತಾಃ ಕ್ಷಿಪ್ರಂ ರಾವಣಾಯಾಚಚಕ್ಷಿರೇ ।
ರಾಜನ್ ವನಮಿದಂ ದುರ್ಗಂ ತವ ಭಗ್ನಂ ದುರಾತ್ಮನಾ ॥ ೧೧೧

ವಾನರೇಣ ಹ್ಯವಿಜ್ಞಾಯ ತವ ವೀರ್ಯಂ ಮಹಾಬಲ ।
ದುರ್ಬುದ್ಧೇಸ್ತಸ್ಯ ರಾಜೇಂದ್ರ ತವ ವಿಪ್ರಿಯಕಾರಿಣಃ ॥ ೧೧೨

ವಧಮಾಜ್ಞಾಪಯ ಕ್ಷಿಪ್ರಂ ಯಥಾಸೌ ವಿಲಯಂ ವ್ರಜೇತ್ ।
ತಚ್ಛ್ರುತ್ವಾ ರಾಕ್ಷಸೇಂದ್ರೇಣ ವಿಸೃಷ್ಟಾ ಭೃಶದುರ್ಜಯಾಃ ॥ ೧೧೩

ರಾಕ್ಷಸಾಃ ಕಿಂಕರಾ ನಾಮ ರಾವಣಸ್ಯ ಮನೋಽನುಗಾಃ ।
ತೇಷಾಮಶೀತಿಸಾಹಸ್ರಂ ಶೂಲಮುದ್ಗರಪಾಣಿನಾಮ್ ॥ ೧೧೪

ಮಯಾ ತಸ್ಮಿನ್ ವನೋದ್ದೇಶೇ ಪರಿಘೇಣ ನಿಷೂದಿತಮ್ ।
ತೇಷಾಂ ತು ಹತಶೇಷಾ ಯೇ ತೇ ಗತ್ವಾ ಲಘುವಿಕ್ರಮಾಃ ॥ ೧೧೫

ರಾಕ್ಷಸರೊಡನೆ ಯುದ್ಧಮಾಡಬೇಕೆಂದು ಇಚ್ಛೆಯಾಯಿತು. ಕೂಡಲೇ ಅಶೋಕವನವನ್ನು ಧ್ವಂಸಮಾಡಲಾರಂಭಿಸಿದೆನು. ಅಲ್ಲಿದ್ದ ಮೃಗಪಕ್ಷಿಗಳು ಓಡಿಹೋದವು (೧೦೮–೧೦೯). ಆಗ ಕೆಟ್ಟಮೋರೆಯ ಆ ರಾಕ್ಷಸಿಯರಿಗೆ ಎಚ್ಚರವಾಗಲು, ಅವರು ಅತ್ತಿತ್ತ ಓಡುತ್ತಿರುವಾಗ ನನ್ನನ್ನು ಕಂಡರು. ಅವರು ರಾವಣನ ಹತ್ತಿರಕ್ಕೆ ಓಡಿಹೋಗಿ "ಮಹಾರಾಜ, ಯಾವುದೋ ಒಂದು ಕೆಟ್ಟ ಕಪಿಯು ಬಂದು ಅಶೋಕವನವನ್ನು ನಾಶಮಾಡಿಬಿಟ್ಟಿದೆ. ಅದಕ್ಕೆ ನಿನ್ನ ಪರಾಕ್ರಮ ಗೊತ್ತಿಲ್ಲ! ಆ ದುರ್ಬುದ್ಧಿಯ ಕೋಡಗವನ್ನು ವಧಿಸಬೇಕೆಂದು ಆಜ್ಞಾಪಿಸು. ಅದು ಹಾಳಾಗಿಹೋಗಲಿ" ಎಂದು ಹೇಳಿರಬೇಕು ! (೧೧೦–೧೧೩). ಆಗ ರಾವಣನು ಶೂರರಾದ ಕಿಂಕರರೆಂಬ ರಾಕ್ಷಸರನ್ನು ನನ್ನ ಮೇಲೆ ಯುದ್ಧಕ್ಕೆ ಕಳುಹಿಸಿದನು. ಅವರು ಎಂಭತ್ತು ಸಾವಿರ ಜನರಿದ್ದರು. ಶೂಲ ಮುದ್ಗರ—ಮುಂತಾದ ಆಯುಧಗಳನ್ನು ಹಿಡಿದು ಬಂದಿದ್ದರು. ನಾನು ಅಶೋಕವನದ ಮಹಾದ್ವಾರದ ಅಗುಳಿಯನ್ನು

ನಿಹತಂ ಚ ಮಹತ್ ಸೈನ್ಯಂ ರಾವಣಾಯಾಚಚಕ್ಷಿರೇ ।
ತತೋ ಮೇ ಬುದ್ಧಿರುತ್ಪನ್ನಾ ಚೈತ್ರ್ಯಪ್ರಾಸಾದಮಾಕ್ರಮಮ್ ॥ ೧೧೬
ತತ್ರಸ್ಥಾನ್ ರಾಕ್ಷಸಾನ್ ಹತ್ವಾ ಶತಂ ಸ್ತಂಭೇನ ವೈ ಪುನಃ ।
ಲಲಾಮಭೂತೋ ಲಂಕಾಯಾಃ ಸ ಚ ವಿಧ್ವಂಸಿತೋ ಮಯಾ ॥ ೧೧೭
ತತಃ ಪ್ರಹಸ್ತಸ್ಯ ಸುತಂ ಜಂಬುಮಾಲಿನಮಾದಿಶತ್ ।
ರಾಕ್ಷಸೈರ್ಬಹುಭಿಃ ಸಾರ್ಧಂ ಘೋರರೂಪೈರ್ಭಯಾನಕೈಃ ॥ ೧೧೮
ತಮಹಂ ಬಲಸಂಪನ್ನಂ ರಾಕ್ಷಸಂ ರಣಕೋವಿದಮ್ ।
ಪರಿಘೇಣಾತಿಘೋರೇಣ ಸೂದಯಾಮಿ ಸಹಾನುಗಮ್ ॥ ೧೧೯
ತಚ್ಛ್ರುತ್ವಾ ರಾಕ್ಷಸೇಂದ್ರಸ್ತು ಮಂತ್ರಿಪುತ್ರಾನ್ ಮಹಾಬಲಾನ್ ।
ಪದಾತಿಬಲಸಂಪನ್ನಾನ್ ಪ್ರೇಷಯಾಮಾಸ ರಾವಣಃ ॥ ೧೨೦
ಪರಿಘೇಣೈವ ತಾನ್ ಸರ್ವಾನ್ನಯಾಮಿ ಯಮಸಾದನಮ್-
ಮಂತ್ರಿಪುತ್ರಾನ್ ಹತಾನ್ ಶ್ರುತ್ವಾ ಸಮರೇ ಲಘುವಿಕ್ರಮಾನ್॥ ೧೨೧

ಕಿತ್ತುಕೊಂಡು ಅವರನ್ನು ಬಡಿದು ಕೊಂದೆನು. ಸತ್ತುಳಿದ ಕೆಲವು ರಾಕ್ಷಸರು ರಾವಣನ ಬಳಿಗೆ ಓಡಿಹೋದರು (೧೧೪–೧೧೫). ದೊಡ್ಡ ಸೇನೆಯನ್ನೇ ನಾನು ಕೊಂದೆನೆಂದು ಅವನಿಗೆ ತಿಳಿಸಿದರು. ಅಷ್ಟರಲ್ಲಿ ನನಗೆ ಇನ್ನೊಂದು ಆಲೋಚನೆಯು ಬಂದು, ಚೈತ್ಯಪ್ರಾಸಾದವೆಂಬ ದೊಡ್ಡ ಗೋಪುರದಮೇಲೆ ಹಾರಿದೆನು. ಅದರ ಒಂದು ಕಂಭವನ್ನು ಕಿತ್ತುಕೊಂಡು ಅಲ್ಲಿದ್ದ ನೂರು ಮಂದಿ ಕಾವಲುಗಾರರನ್ನು ಕೊಂದುಹಾಕಿದೆನು. ಲಂಕಾನಗರಕ್ಕೆ ಅಲಂಕಾರಪ್ರಾಯವಾದ ಆ ಮಂದಿರವನ್ನು ಮುರಿದುಹಾಕಿದೆನು (೧೧೬–೧೧೭). ಪ್ರಹಸ್ತ ಎಂಬವನು ರಾವಣನ ಮಂತ್ರಿ. ಅವನ ಮಗ ಜಂಬುಮಾಲಿ. ಅವನು ಬಲಾಢ್ಯನೂ ಯುದ್ಧ ಕೋವಿದನೂ ಆದ ರಾಕ್ಷಸ. ಆಮೇಲೆ ಅವನು ಬಹುಮಂದಿ ಘೋರರಾಕ್ಷಸ ರೊಡನೆ ಯುದ್ಧಕ್ಕೆ ಬಂದನು. ನಾನು ಅದೇ ಅಗುಳಿಯಿಂದ ಅವನನ್ನೂ ಅವನ ಸೈನ್ಯ ವನ್ನೂ ಧ್ವಂಸಮಾಡಿದೆನು (೧೧೮–೧೧೯). ಅದನ್ನು ಕೇಳಿ ರಾವಣನು ಬಲಶಾಲಿ ಗಳಾದ ಏಳು ಮಂದಿ ಮಂತ್ರಿಪುತ್ರರನ್ನು ಕಾಲಾಳುಗಳೊಂದಿಗೆ ಕಳುಹಿಸಿದನು. ಅವರೆಲರನೂ ಅದೇ ಪರಿಘದಿಂದ ಹೊಡೆದು ಯಮಲೋಕಕೆ ಕಳುಹಿಸಿ

ಪಂಚ ಸೇನಾಗ್ರಗಾನ್ ಶೂರಾನ್ ಪ್ರೇಷಯಾಮಾಸ ರಾವಣಃ ।
ತಾನಹಂ ಸಹಸೈನ್ಯಾನ್ ವೈ ಸರ್ವಾನೇವಾಭ್ಯಸೂದಯಮ್ ॥ ೧೨೨
ತತಃ [illegible]ತಗ್ರೀವಃ ಪುತ್ರಮಕ್ಷಂ ಮಹಾಬಲಮ್ ।
ಬಹುಭೀ ರಾಕ್ಷಸೈಃ ಸಾರ್ಧಂ ಪ್ರೇಷಯಾಮಾಸ ರಾವಣಃ ॥ ೧೨೩
ತಂ ತು ಮಂದೋದರೀಪುತ್ರಂ ಕುಮಾರಂ ರಣಪಂಡಿತಮ್ ।
ಸಹಸಾ ಖಂ ಸಮುತ್ಕ್ರಾಂತಂ ಪಾದಯೋಶ್ಚ ಗೃಹೀತವಾನ್ ॥ ೧೨೪
ತಮಾಸೀನಂ ಶತಗುಣಂ ಭ್ರಾಮಯಿತ್ವಾ ವ್ಯಪೇಷಯಮ್ ।
ತಮಕ್ಷಮಾಗತಂ ಭಗ್ನಂ ನಿಶಮ್ಯ ಸ ದಶಾನನಃ ॥ ೧೨೫
ತತ ಇಂದ್ರಜಿತಂ ನಾಮ ದ್ವಿತೀಯಂ ರಾವಣಃ ಸುತಮ್ ।
ವ್ಯಾದಿದೇಶ ಸುಸಂಕ್ರುದ್ಧೋ ಬಲಿನಂ ಯುದ್ಧದುರ್ಮದಮ್ ॥ ೧೨೬
ತಚ್ಚಾಪ್ಯಹಂ ಬಲಂ ಸರ್ವಂ ತಂ ಚ ರಾಕ್ಷಸಪುಂಗವಮ್ ।
ನಷ್ಟೌಜಸಂ ರಣೇ ಕೃತ್ವಾ ಪರಂ ಹರ್ಷಮುಪಾಗಮಮ್ ॥ ೧೨೭
ಮಹತಾ ಹಿ ಮಹಾಬಾಹುಃ ಪ್ರತ್ಯಯೇನ ಮಹಾಬಲಃ ।
ಪ್ರೇಷಿತೋ ರಾವಣೇನೈವ ಸಹ ವೀರೈರ್ಮದೋತ್ಕಟೈಃ ॥ ೧೨೮

ಕೊಟ್ಟೆನು. ಅದನ್ನು ಕೇಳಿದಮೇಲೆ ರಾವಣನು ಐವರು ಸೇನಾಪತಿಗಳನ್ನು ಯುದ್ಧಕ್ಕೆ ಕಳುಹಿಸಿದನು. ನಾನು ಅವರೆಲ್ಲರನ್ನೂ ಸೈನ್ಯಸಮೇತವಾಗಿ ನಾಶಮಾಡಿದೆನು (೧೨೦–೧೨೨). ಅನಂತರ ರಾವಣನು ತನ್ನ ಮಗನಾದ ಅಕ್ಷಕುಮಾರನನ್ನೇ ಅನೇಕ ರಾಕ್ಷಸಭಟರೊಡನೆ ಕಳುಹಿಸಿಬಿಟ್ಟನು. ಅಕ್ಷಕುಮಾರನು ಮಂಡೋದರಿಯ ಮಗ. ರಣಪಂಡಿತ. ಅವನು ಆಕಾಶಕ್ಕೆ ನೆಗೆಯುತ್ತಿರುವಾಗ, ಥಟ್ಟನೆ ಅವನ ಕಾಲುಗಳೆರಡನ್ನು ಹಿಡಿದು ಗಿರ್ರನೆ ನೂರಾರುಸಲ ತಿರುಗಿಸಿ ಅಪ್ಪಳಿಸಿ ಕೊಂದುಬಿಟ್ಟೆನು. ಅಕ್ಷಕುಮಾರನು ಸತ್ತ ಸುದ್ದಿ ರಾವಣನಿಗೆ ಮುಟ್ಟಿತು (೧೨೩–೧೨೫). ಅವನು ಅತ್ಯಂತ ಕ್ರುದ್ಧನಾಗಿ ಇಂದ್ರಜಿತ್ ಎಂಬ ಇನ್ನೊಬ್ಬ ಮಗನನ್ನು ನನ್ನ ಮೇಲೆ ಕಳುಹಿಸಿದನು. ಅವನು ಮಹಾಶೂರ. ಯುದ್ಧವೆಂದರೆ ಅವನಿಗೆ ಮದವೇರುತ್ತದೆ. ನಾನು ಅವನ ಸೈನ್ಯವನ್ನೆಲ್ಲಾ ಕಂಗೆಡಿಸಿ, ಅವನ ಪರಾಕ್ರಮವನ್ನು ಅಡಗಿಸಿ ಹರ್ಷದಿಂದ ಉಬ್ಬಿದೆನು (೧೨೬–೧೨೭). ಆದರೆ ಇಂದ್ರಜಿತು ರಣಮಲ್ಲ. ಅವನು

ಸೋಽವಿಷಹ್ಯಂ ಹಿ ಮಾಂ ಬುದ್ಧ್ವಾ ಸ್ವಸೈನ್ಯಂ ಚಾವಮರ್ದಿತಮ್ ।
ಬ್ರಾಹ್ಮೇಣಾಸ್ತ್ರೇಣ ಸ ತು ಮಾಂ ಪ್ರಾಬಧ್ನಾಚ್ಚಾತಿವೇಗಿತಃ ॥ ೧೨೯
ರಜ್ಜುಭಿಶ್ಚಾಭಿಬಧ್ನಂತಿ ತತೋ ಮಾಂ ತತ್ರ ರಾಕ್ಷಸಾಃ ।
ರಾವಣಸ್ಯ ಸಮೀಪಂ ಚ ಗೃಹೀತ್ವಾ ಮಾಮುಪಾನಯನ್ ॥ ೧೩೦
ದೃಷ್ಟ್ವಾ ಸಂಭಾಷಿತಶ್ಚಾಹಂ ರಾವಣೇನ ದುರಾತ್ಮನಾ ।
ಪೃಷ್ಟಶ್ಚ ಲಂಕಾಗಮನಂ ರಾಕ್ಷಸಾನಾಂ ಚ ತಂ ವಧಮ್ ॥ ೧೩೧
ತತ್ಸರ್ವಂ ಚ ಮಯಾ ತತ್ರ ಸೀತಾರ್ಥಮಿತಿ ಜಲ್ಪಿತಮ್ ।
ತಸ್ಯಾಸ್ತು ದರ್ಶನಾಕಾಂಕ್ಷೀ ಪ್ರಾಪ್ತಸ್ತ್ವದ್ಭವನಂ ವಿಭೋ ॥ ೧೩೨
ಮಾರುತಸ್ಯೌರಸಃ ಪುತ್ರೋ ವಾನರೋ ಹನುಮಾನಹಮ್ ।
ರಾಮದೂತಂ ಚ ಮಾಂ ವಿದ್ಧಿ ಸುಗ್ರೀವಸಚಿವಂ ಕಪಿಮ್ ॥ ೧೩೩
ಸೋಽಹಂ ದೂತ್ಯೇನ ರಾಮಸ್ಯ ತ್ವತ್ಸಕಾಶಮಿಹಾಗತಃ ।
ಸುಗ್ರೀವಶ್ಚ ಮಹಾತೇಜಾಃ ಸ ತ್ವಾಂ ಕುಶಲಮಬ್ರವೀತ್ ॥ ೧೩೪

ನನ್ನನ್ನು ಗೆಲ್ಲುತ್ತಾನೆಂಬ ದೃಢವಿಶ್ವಾಸದಿಂದ ರಾವಣನು ಅವನನ್ನು ಮಹಾಪರಾಕ್ರಮಿಗಳಾದ ರಾಕ್ಷಸರೊಡನೆ ಕಳುಹಿಸಿದ್ದನು. ಇಂದ್ರಜಿತ್ತಿಗೆ ನಾನು ಅಜೇಯನೆಂಬುದು ಗೊತ್ತಾಯಿತು. ತನ್ನ ಸೈನ್ಯವೂ ಕಂಗೆಟ್ಟುಹೋಗಿತ್ತು. ಅದನ್ನರಿತು ಆತನು ಮಹಾವೇಗದಿಂದ ಬ್ರಹ್ಮಾಸ್ತ್ರವನ್ನು ಪ್ರಯೋಗಿಸಿ ನನ್ನನ್ನು ಬಂಧಿಸಿದನು (೧೨೮–೧೨೯). ಆಮೇಲೆ ರಾಕ್ಷಸರು ಹಗ್ಗಗಳಿಂದ ನನ್ನನ್ನು ಕಟ್ಟಿ ರಾವಣನ ಬಳಿಗೆ ಕರೆದೊಯ್ದರು. ದುರಾತ್ಮನಾದ ರಾವಣನು ನನ್ನನ್ನು ನೋಡಿ ಮಾತನಾಡಿದನು. ಲಂಕಾನಗರಕ್ಕೆ ಬಂದುದಕ್ಕೂ ರಾಕ್ಷಸರನ್ನು ವಧಿಸಿದುದಕ್ಕೂ ಕಾರಣವೇನೆಂದು ವಿಚಾರಿಸಿದನು (೧೩೦–೧೩೧). ಅದೆಲ್ಲವನ್ನೂ ಸೀತಾದೇವಿಗೋಸ್ಕರ ಮಾಡಿದೆನೆಂದು ನಾನು ಸ್ಪಷ್ಟವಾಗಿ ತಿಳಿಸಿದೆನು. "ಎಲೈ ರಾಜನೆ, ಸೀತಾದೇವಿಯನ್ನು ನೋಡುವುದಕ್ಕಾಗಿಯೇ ನಾನು ನಿನ್ನ ಮನೆಗೆ ಬಂದೆನು. ನಾನು ವಾಯುದೇವನ ಔರಸಪುತ್ರ. ವಾನರಜಾತಿಗೆ ಸೇರಿದವನು. ನನ್ನ ಹೆಸರು ಹನುಮಂತ. ಶ್ರೀರಾಮನಿಗೆ ದೂತನಾಗಿ ಬಂದಿದ್ದೇನೆ. ಸುಗ್ರೀವನ ಮಂತ್ರಿ ನಾನು (೧೩೨–೧೩೩). ರಾಮನ ದೂತಕಾರ್ಯಕ್ಕಾಗಿ ನಿನ್ನ ಬಳಿಗೆ ಬಂದಿದ್ದೇನೆ. ಮಹಾತೇಜಸ್ವಿಯಾದ ಸುಗ್ರೀವ

ಧರ್ಮಾರ್ಥಕಾಮಸಹಿತಂ ಹಿತಂ ಪಥ್ಯಮುವಾಚ ಚ ।
ವಸತೋ ಋಷ್ಯಮೂಕೇ ಮೇ ಪರ್ವತೇ ವಿಪುಲದ್ರುಮೇ ॥ ೧೩೫

ರಾಘವೋ ರಣವಿಕ್ರಾಂತೋ ಮಿತ್ರತ್ವಂ ಸಮುಪಾಗತಃ ।
ತೇನ ಮೇ ಕಥಿತಂ ರಾಜ್ಞಾ ಭಾರ್ಯಾ ಮೇ ರಕ್ಷಸಾ ಹೃತಾ ॥ ೧೩೬

ತತ್ರ ಸಾಹಾಯ್ಯಮಸ್ಮಾಕಂ ಕಾರ್ಯಂ ಸರ್ವಾತ್ಮನಾ ತ್ವಯಾ ।
ಮಯಾ ಚ ಕಥಿತಂ ತಸ್ಮೈ ವಾಲಿನಶ್ಚ ವಧಂ ಪ್ರತಿ ॥ ೧೩೭

ತತ್ರ ಸಾಹಾಯ್ಯಹೇತೋರ್ಮೇ ಸಮಯಂ ಕರ್ತುಮರ್ಹಸಿ ।
ವಾಲಿನಾ ಹೃತರಾಜ್ಯೇನ ಸುಗ್ರೀವೇಣ ಸಹ ಪ್ರಭುಃ ॥ ೧೩೮

ಚಕ್ರೇಽಗ್ನಿಸಾಕ್ಷಿಕಂ ಸಖ್ಯಂ ರಾಘವಃ ಸಹಲಕ್ಷ್ಮಣಃ ।
ತೇನ ವಾಲಿನಮುತ್ಪಾಟ್ಯ ಶರೇಣೈಕೇನ ಸಂಯುಗೇ ॥ ೧೩೯

ವಾನರಾಣಾಂ ಮಹಾರಾಜಃ ಕೃತಃ ಸ ಪ್ಲವತಾಂ ಪ್ರಭುಃ ।
ತಸ್ಯ ಸಾಹಾಯ್ಯಮಸ್ಮಾಭಿಃ ಕಾರ್ಯಂ ಸರ್ವಾತ್ಮನಾ ತ್ವಿಹ ॥ ೧೪೦

ಮಹಾರಾಜನು ನಿನ್ನ ಯೋಗಕ್ಷೇಮವನ್ನು ವಿಚಾರಿಸಿದ್ದಾನೆ. ಅವನು ಧರ್ಮಾರ್ಥಕಾಮಸಹಿತವಾದ ಕೆಲವು ಹಿತವಚನಗಳನ್ನು ನಿನಗೆ ಹೇಳಿಕಳುಹಿಸಿದ್ದಾನೆ (೧೩೪–೧೩೫). ಏನೆಂದರೆ, "ರಾವಣ, ನಾನು ಋಷ್ಯಮೂಕಪರ್ವತದಲ್ಲಿರುವಾಗ ರಣಧೀರನಾದ ಶ್ರೀರಾಮನ ಸ್ನೇಹವಾಯಿತು. ಅವನು ತನ್ನ ಪತ್ನಿಯನ್ನು ರಾಕ್ಷಸನೊಬ್ಬನು ಅಪಹರಿಸಿದ್ದಾನೆಂದೂ ಅವಳನ್ನು ಹುಡುಕುವುದಕ್ಕೆ ಎಲ್ಲಾ ವಿಧದಲ್ಲಿಯೂ ಸಹಾಯಮಾಡಬೇಕೆಂದೂ ನನ್ನನ್ನು ಕೇಳಿಕೊಂಡನು. ನಾನು ವಾಲಿಯನ್ನು ಮೊದಲು ಸಂಹರಿಸಬೇಕೆಂದೂ ಆ ವಿಷಯದಲ್ಲಿ ಶಪಥಮಾಡಿಕೊಟ್ಟರೆ ನಿನಗೆ ಸಹಾಯಮಾಡುತ್ತೇನೆಂದೂ ರಾಮನಿಗೆ ಹೇಳಿದೆನು (೧೩೬–೧೩೮). ಆಗ ರಾಮನು ಲಕ್ಷ್ಮಣಸಮೇತನಾಗಿ ನನ್ನೊಡನೆ ಅಗ್ನಿಸಾಕ್ಷಿಕವಾಗಿ ಸ್ನೇಹವನ್ನು ಬೆಳೆಯಿಸಿ, ಒಂದೇ ಬಾಣದಿಂದ ವಾಲಿಯನ್ನು ಸಂಹಾರಮಾಡಿದ್ದಾನೆ. ಆಮೇಲೆ ನನ್ನನ್ನು ಕಪಿರಾಜ್ಯಕ್ಕೆ ಅಧೀಶ್ವರನನ್ನಾಗಿ ಮಾಡಿದ್ದಾನೆ. ಈಗ ನಾವು ಸಕಲ ವಿಧದಿಂದಲೂ ರಾಮನಿಗೆ ಸಹಾಯ ಮಾಡಬೇಕಾಗಿದೆ (೧೩೯–೧೪೦).

ತೇನ ಪ್ರಸ್ಥಾಪಿತಸ್ತುಭ್ಯಂ ಸಮೀಪಮಿಹ ಧರ್ಮತಃ ।
ಕ್ಷಿಪ್ರಮಾನೀಯತಾಂ ಸೀತಾ ದೀಯತಾಂ ರಾಘವಾಯ ಚ ॥ ೧೪೧
ಯಾವನ್ನ ಹರಯೋ ವೀರಾ ವಿಧಮಂತಿ ಬಲಂ ತವ ।
ವಾನರಾಣಾಂ ಪ್ರಭಾವೋ ಹಿ ನ ಕೇನ ವಿದಿತಃ ಪುರಾ ॥ ೧೪೨
ದೇವತಾನಾಂ ಸಕಾಶಂ ಚ ಯೇ ಗಚ್ಛಂತಿ ನಿಮಂತ್ರಿತಾಃ ।
ಇತಿ ವಾನರರಾಜಸ್ತ್ವಾಮಾಹೇತ್ಯಭಿಹಿತೋ ಮಯಾ ॥ ೧೪೩
ಮಾಮೈಕ್ಷತ ತತಃ ಕ್ರುದ್ಧಶ್ಚಕ್ಷುಷಾ ಪ್ರದಹನ್ನಿವ ।
ತೇನ ವಧ್ಯೋಽಹಮಾಜ್ಞಪ್ತೋ ರಕ್ಷಸಾ ರೌದ್ರಕರ್ಮಣಾ ॥ ೧೪೪
ಮತ್ಪ್ರಭಾವಮವಿಜ್ಞಾಯ ರಾವಣೇನ ದುರಾತ್ಮನಾ ।
ತತೋ ವಿಭೀಷಣೋ ನಾಮ ತಸ್ಯ ಭ್ರಾತಾ ಮಹಾಮತಿಃ ॥ ೧೪೫
ತೇನ ರಾಕ್ಷಸರಾಜೋಽಸೌ ಯಾಚಿತೋ ಮಮ ಕಾರಣಾತ್ ।
ನೈವಂ ರಾಕ್ಷಸಶಾರ್ದೂಲ ತ್ಯಜ್ಯತಾಮೇಷ ನಿಶ್ಚಯಃ ॥ ೧೪೬

ಆದ್ದರಿಂದ ಈ ಹನುಮಂತನನ್ನು ನಿನ್ನ ಸಮೀಪಕ್ಕೆ ಕಳುಹಿಸಿದ್ದೇವೆ. ನೀನು ಧರ್ಮ ಮರ್ಯಾದೆಯನ್ನು ಪಾಲಿಸಿ, ಒಡನೆಯೇ ಸೀತೆಯನ್ನು ರಾಘವನಿಗೆ ತಂದು ಒಪ್ಪಿಸಿಬಿಡು. ಇಲ್ಲದಿದ್ದರೆ ಕಪಿವೀರರು ನಿನ್ನ ಸೇನೆಯನ್ನು ಧ್ವಂಸಮಾಡುವರು. ಇವರ ಸಾಮರ್ಥ್ಯವು ಯಾರಿಗೆ ತಾನೇ ತಿಳಿದಿಲ್ಲ? (೧೪೧–೧೪೨). ಈ ಕಪಿವೀರರು ದೇವತೆಗಳ ಪ್ರಾರ್ಥನೆಯಂತೆ ಅವರಿಗೂ ಕೂಡ ಯುದ್ಧದಲ್ಲಿ ಸಹಾಯಮಾಡುತ್ತಿದ್ದಾರೆ.'' ಈ ರೀತಿಯಲ್ಲಿ ಸುಗ್ರೀವ ರಾಜನು ಹೇಳಿಕಳುಹಿಸಿದ್ದಾನೆಂದು ಹೇಳಿದೆನು. ಅದನ್ನು ಕೇಳಿ ರಾವಣನು ರೋಷದಿಂದ ಸುಟ್ಟುಬಿಡುವ ಹಾಗೆ ದುರದುರನೆ ನೋಡುತ್ತ, ನನ್ನನ್ನು ಕೊಂದುಬಿಡುವಂತೆ ದೂತರಿಗೆ ಆಜ್ಞಾಪಿಸಿದನು (೧೪೩–೧೪೪). ಆ ದುರಾತ್ಮನಿಗೆ ನನ್ನ ಸಾಮರ್ಥ್ಯವು ತಿಳಿಯದೆ ಹೋಯಿತು. ಆತನಿಗೆ ವಿಭೀಷಣನೆಂಬ ಬುದ್ಧಿಶಾಲಿಯಾದ ತಮ್ಮ ಇದ್ದಾನೆ. ಅವನು ರಾಕ್ಷಸರಾಜನನ್ನು ಕುರಿತು ನನಗೋಸ್ಕರ ಬಹುಪರಿಯಲ್ಲಿ ಬೇಡಿಕೊಂಡನು. ''ಮಹಾರಾಜ, ಹೀಗೆ ಮಾಡಬಾರದು. ಈ ನಿರ್ಧಾರವನ್ನು ತ್ಯಜಿಸಿಬಿಡು (೧೪೫–೧೪೬).

ರಾಜಶಾಸ್ತ್ರವ್ಯಪೇತೋ ಹಿ ಮಾರ್ಗಃ ಸಂಸೇವ್ಯತೇ ತ್ವಯಾ ।
ದೂತವಧ್ಯಾ ನ ದೃಷ್ಟಾ ಹಿ ರಾಜಶಾಸ್ತ್ರೇಷು ರಾಕ್ಷಸ ॥ ೧೪೭

ದೂತೇನ ವೇದಿತವ್ಯಂ ಚ ಯಥಾರ್ಥಂ ಹಿತವಾದಿನಾ ।
ಸುಮಹತ್ಯಪರಾಧೇಽಪಿ ದೂತಸ್ಯಾತುಲವಿಕ್ರಮ ॥ ೧೪೮

ವಿರೂಪಕರಣಂ ದೃಷ್ಟಂ ನ ವಧೋಽಸ್ತೀಹ ಶಾಸ್ತ್ರತಃ ।
ವಿಭೀಷಣೇನೈವಮುಕ್ತೋ ರಾವಣಃ ಸಂದಿದೇಶ ತಾನ್ ॥ ೧೪೯

ರಾಕ್ಷಸಾನೇತದೇವಾಸ್ಯ ಲಾಂಗೂಲಂ ದಹ್ಯತಾಮಿತಿ ।
ತತಸ್ತಸ್ಯ ವಚಃ ಶ್ರುತ್ವಾ ಮಮ ಪುಚ್ಛಂ ಸಮಂತತಃ ॥ ೧೫೦

ವೇಷ್ಟಿತಂ ಶಣವಲ್ಕೈಶ್ಚ ಜೀರ್ಣೈಃ ಕಾರ್ಪಾಸಜೈಃ ಪಟೈಃ ।
ರಾಕ್ಷಸಾಃ ಸಿದ್ಧಸಂನಾಹಾಸ್ತತಸ್ತೇ ಚಂಡವಿಕ್ರಮಾಃ ॥ ೧೫೧

ತದಾದಹಂತ ಮೇ ಪುಚ್ಛಂ ನಿಘ್ನಂತಃ ಕಾಷ್ಠಮುಷ್ಟಿಭಿಃ ।
ಬದ್ಧಸ್ಯ ಬಹುಭಿಃ ಪಾಶೈರ್ಯಂತ್ರಿತಸ್ಯ ಚ ರಾಕ್ಷಸೈಃ ॥ ೧೫೨

ನ ಮೇ ಪೀಡಾ ಭವೇತ್ ಕಾಚಿದ್ದಿದೃಕ್ಷೋರ್ನಗರೀಂ ದಿವಾ ।
ತತಸ್ತೇ ರಾಕ್ಷಸಾಃ ಶೂರಾ ಬದ್ಧಂ ಮಾಮಗ್ನಿಸಂವೃತಮ್ ॥ ೧೫೩

ನೀನು ಹೋಗುತ್ತಿರುವುದು ರಾಜನೀತಿಗೆ ವಿರುದ್ಧವಾದ ದಾರಿ. ರಾಜನೀತಿ ಶಾಸ್ತ್ರದಲ್ಲಿ ದೂತವಧೆಯನ್ನು ಎಲ್ಲಿಯೂ ಹೇಳಿಲ್ಲ. ದೂತನಾದವನು ಹಿತವನ್ನು ಹೇಳುವುದಕ್ಕಾಗಿ ಇದ್ದ ಸಂಗತಿಯನ್ನು ಇದ್ದಂತೆ ಹೇಳುವುದು ಕರ್ತವ್ಯ. ದೂತನು ಎಂತಹ ಅಪರಾಧಮಾಡಿದರೂ ಅಂಗವೈಕಲ್ಯವನ್ನು ಮಾಡಬಹುದೇ ಹೊರತು ದೂತವಧೆಮಾಡಲು ಶಾಸ್ತ್ರಸಮ್ಮತಿ ಇಲ್ಲ'' ಎಂದು ರಾವಣನಿಗೆ ಹೇಳಿದನು (೧೪೭–೧೪೯). ಆಗ ರಾವಣನು ''ಈತನ ಬಾ[illegible]'' ಎಂದು ರಾಕ್ಷಸರಿಗೆ ಆಜ್ಞೆಮಾಡಿದನು. ಅದನ್ನು ಕೇಳಿ [illegible] ನನ್ನನ್ನು ಸುತ್ತುಗಟ್ಟಿ ನನ್ನ ಬಾಲಕ್ಕೆ ಸೆಣಬನ್ನೂ ಹರಕು ಬಟ್ಟೆಗಳನ್ನೂ ಸುತ್ತಿ ಸಜ್ಜುಪಡಿಸಿದರು (೧೫೦–೧೫೧). ನನ್ನನ್ನು ದೊಣ್ಣೆಗಳಿಂದಲೂ ಮುಷ್ಟಿಗಳಿಂದಲೂ ಹೊಡೆಯುತ್ತ ಬಾಲಕ್ಕೆ ಬೆಂಕಿಯನ್ನು ಹತ್ತಿಸಿದರು. ಆಗ ರಾಕ್ಷಸರು ನನ್ನನ್ನು ಹಗ್ಗಗಳಿಂದ ಹೆಡಮುರಿಗೆ ಕಟ್ಟಿ

ಅಘೋಷಯನ್ ರಾಜಮಾರ್ಗೇ ನಗರದ್ವಾರಮಾಗತಾಃ ।
ತತೋಽಹಂ ಸುಮಹದ್ರೂಪಂ ಸಂಕ್ಷಿಪ್ಯ ಪುನರಾತ್ಮನಃ ॥ ೧೫೪

ವಿಮೋಚಯಿತ್ವಾ ತಂ ಬಂಧಂ ಪ್ರಕೃತಿಸ್ಥಃ ಸ್ಥಿತಃ ಪುನಃ ।
ಆಯಸಂ ಪರಿಘಂ ಗೃಹ್ಯ ತಾನಿ ರಕ್ಷಾಂಸ್ಯಸೂದಯಮ್ ॥ ೧೫೫

ತತಸ್ತನ್ನಗರದ್ವಾರಂ ವೇಗೇನಾಪ್ಲುತವಾನಹಮ್ ।
ಪುಚ್ಛೇನ ಚ ಪ್ರದೀಪ್ತೇನ ತಾಂ ಪುರೀಂ ಸಾಟ್ಟಗೋಪುರಾಮ್ ॥ ೧೫೬

ದಹಾಮ್ಯಹಮಸಂಭ್ರಾಂತೋ ಯುಗಾಂತಾಗ್ನಿರಿವ ಪ್ರಜಾಃ ।
ವಿನಷ್ಟಾ ಜಾನಕೀ ವ್ಯಕ್ತಂ ನ ಹ್ಯದಗ್ಧಃ ಪ್ರದೃಶ್ಯತೇ ॥ ೧೫೭

ಲಂಕಾಯಾಂ ಕಶ್ಚಿದುದ್ದೇಶಃ ಸರ್ವಾ ಭಸ್ಮೀಕೃತಾ ಪುರೀ ।
ದಹತಾ ಚ ಮಯಾ ಲಂಕಾಂ ದಗ್ಧಾ ಸೀತಾ ನ ಸಂಶಯಃ ॥ ೧೫೮

ಸುತ್ತುವರಿದು ಹಿಡಿದುಕೊಂಡಿದ್ದರು. ನನಗೆ ಹಗಲುಹೊತ್ತು ಲಂಕೆಯನ್ನು ಸರಿಯಾಗಿ ನೋಡಬೇಕೆಂಬ ಆಸೆ ಇದ್ದುದರಿಂದ ನಾನು ಸುಮ್ಮನಿದ್ದೆನು. ಬೆಂಕಿಯಿಂದ ನನಗೆ ಯಾವ ಬಾಧೆಯೂ ಆಗಲಿಲ್ಲ (೧೫೨–೧೫೩). ಆ ರಾಕ್ಷಸರು ನನ್ನನ್ನು ಹೀಗೆ ಕಟ್ಟಿ ಬಾಲಕ್ಕೆ ಬೆಂಕಿಯನ್ನಿಟ್ಟು ರಾಜಮಾರ್ಗದಲ್ಲಿ ಸಾರುತ್ತ ನಗರದ ಮಹಾದ್ವಾರದ ಬಳಿಗೆ ಕರೆತಂದರು. ಅಲ್ಲಿ ನಾನು ನನ್ನ ದೊಡ್ಡ ಶರೀರವನ್ನು ಚಿಕ್ಕದಾಗಿ ಮಾಡಿ ಕಟ್ಟುಗಳನ್ನೆಲ್ಲಾ ಸಡಿಲಿಸಿ ಕಳಚಿಹಾಕಿ, ಮತ್ತೆ ಮೊದಲಿನಂತೆ ನಿಜಶರೀರವನ್ನು ತಾಳಿದೆನು. ಬಾಗಿಲಿಗೆ ಹಾಕಿದ್ದ ಕಬ್ಬಿಣದ ಪರಿಘವನ್ನು ತೆಗೆದುಕೊಂಡು ಆ ರಾಕ್ಷಸರನ್ನು ಸದೆಬಡಿದೆನು (೧೫೪–೧೫೫). ಅಲ್ಲಿಂದ ನಗರದ ಮಹಾದ್ವಾರದ ಮೇಲೆ ಹಾರಿದೆನು. ಅನಂತರ ಉರಿಯುತ್ತಿದ್ದ ನನ್ನ ಬಾಲದಿಂದ ಉಪ್ಪರಿಗೆ ಗೋಪುರಗಳ ಸಹಿತವಾಗಿ ಲಂಕಾಪಟ್ಟಣವನ್ನೇ ದಹಿಸಿಬಿಟ್ಟೆನು. ನನಗೆ ಸ್ವಲ್ಪವೂ ಭಯವಾಗಲಿಲ್ಲ. ಪ್ರಳಯಾಗ್ನಿಯು ಜನರನ್ನು ದಹಿಸಿದಂತೆ ಆಗಿಹೋಯಿತು. (ಕಡೆಯಲ್ಲಿ ನನಗೊಂದು ಚಿಂತೆ ಹುಟ್ಟಿತು). ''ಈ ನಗರದಲ್ಲಿ ಸುಟ್ಟುಹೋಗದ ಸ್ಥಳವೇ ಉಳಿಯಲಿಲ್ಲ. ಜಾನಕಿಯೂ ಸುಟ್ಟು ನಾಶವಾಗಿರಬೇಕು (೧೫೬–೧೫೭). ಲಂಕಾನಗರವೆಲ್ಲಾ ಸುಟ್ಟು ಬೂದಿಯಾಯಿತು. ಲಂಕೆಯನ್ನು

ರಾಮಸ್ಯ ಹಿ ಮಹತ್ ಕಾರ್ಯಂ ಮಯೇದಂ ವಿತಥೀಕೃತಮ್ ।
ಇತಿ ಶೋಕಸಮಾವಿಷ್ಟಶ್ಚಿಂತಾಮಹಮುಪಾಗತಃ ॥ ೧೫೯

ಅಥಾಹಂ ವಾಚಮಶ್ರೌಷಂ ಚಾರಣಾನಾಂ ಶುಭಾಕ್ಷರಾಮ್ ।
ಜಾನಕೀ ನ ಚ ದಗ್ಧೇತಿ ವಿಸ್ಮಯೋದಂತಭಾಷಿಣಾಮ್ ॥ ೧೬೦

ತತೋ ಮೇ ಬುದ್ಧಿರುತ್ಪನ್ನಾ ಶ್ರುತ್ವಾ ತಾಮದ್ಭುತಾಂ ಗಿರಮ್ ।
ಅದಗ್ಧಾ ಜಾನಕೀತ್ಯೇವ ನಿಮಿತ್ತೈಶ್ಚೋಪಲಕ್ಷಿತಾ ॥ ೧೬೧

ದೀಪ್ಯಮಾನೇ ತು ಲಾಂಗೂಲೇ ನ ಮಾಂ ದಹತಿ ಪಾವಕಃ ।
ಹೃದಯಂ ಚ ಪ್ರಹೃಷ್ಟಂ ಮೇ ವಾತಾಃ ಸುರಭಿಗಂಧಿನಃ ॥ ೧೬೨

ತೈರ್ನಿಮಿತ್ತೈಶ್ಚ ದೃಷ್ಟಾರ್ಥೈಃ ಕಾರಣೈಶ್ಚ ಮಹಾಗುಣೈಃ ।
ಋಷಿವಾಕ್ಯೈಶ್ಚ ಸಿದ್ಧಾರ್ಥೈರಭವಂ ಹೃಷ್ಟಮಾನಸಃ ॥ ೧೬೩

ಪುನರ್ದೃಷ್ಟ್ವಾ ಚ ವೈದೇಹೀಂ ವಿಸೃಷ್ಟಶ್ಚ ತಯಾ ಪುನಃ ।
ತತಃ ಪರ್ವತಮಾಸಾದ್ಯ ತತ್ರಾರಿಷ್ಟಮಹಂ ಪುನಃ ॥ ೧೬೪

ಸುಡುವ ಸಂಭ್ರಮದಲ್ಲಿ ಸೀತೆಗೂ ಅಪಾಯವನ್ನು ತಂದುಬಿಟ್ಟೆ. ಸಂದೇಹವೇ ಇಲ್ಲ. ಶ್ರೀರಾಮನ ಕಾರ್ಯವನ್ನು ಕೆಡಿಸಿದೆ'' ಎಂದು ಅಗಾಧವಾದ ಶೋಕದಲ್ಲಿ ಮುಳುಗಿ ದಿಕ್ಕುತೋರದಂತಾದೆನು (೧೫೮–೧೫೯). ಅಷ್ಟರಲ್ಲಿ ಆಶ್ಚರ್ಯದಿಂದ ಲಂಕಾದಹನದ ಸುದ್ದಿಯನ್ನು ಮಾತನಾಡಿಕೊಳ್ಳುತ್ತಿದ್ದ ಚಾರಣರು ''ಸೀತೆಯು ದಗ್ಧಳಾಗಲಿಲ್ಲ'' ಎಂದು ಹೇಳಿದ ಮಾತು ನನ್ನ ಕಿವಿಗೆ ಬಿದ್ದಿತು. ವಿಸ್ಮಯಕರವಾದ ಆ ಮಾತನ್ನು ಕೇಳಿ ಸೀತೆಯು ದಗ್ಧಳಾಗಿಲ್ಲವೆಂದು ನಿಶ್ಚಯಿಸಿದೆನು. ಅದಕ್ಕೆ ಅನುಗುಣವಾಗಿ ನನಗೆ ಕೆಲವು ಶುಭಶಕುನಗಳೂ ಆದವು (೧೬೦–೧೬೧). ಬಾಲದಲ್ಲಿ ಅಗ್ನಿಯು ಜ್ವಲಿಸುವಾಗಲೂ ಉರಿಯು ನನಗೆ ತಗುಲಿರಲಿಲ್ಲ. ಮನಸ್ಸಿಗೆ ಉಲ್ಲಾಸವಾಯಿತು. ಸುಗಂಧಿಯಾದ ವಾಯುವು ಬೀಸತೊಡಗಿತು. ಹಿಂದೆ ಫಲವನ್ನು ತಪ್ಪದೆ ಸೂಚಿಸಿದ್ದ ಶುಭಶಕುನಗಳಿಂದಲೂ, ರಾಮನ ತೇಜಸ್ಸು—ಸೀತೆಯ ಚಾರಿತ್ರ ಮುಂತಾದ ಮಹಾಗುಣಗಳಿಂದೂ, ಚಾರಣರು ಆಡುವ ಸತ್ಯವಾಕ್ಯಗಳಿಂದಲೂ ಮನಸ್ಸಿಗೆ ಹರ್ಷವಾಯಿತು. (೧೬೨–೧೬೩). ಆದರೂ

ಪ್ರತಿಪ್ಲವನಮಾರೇಭೇ ಯುಷ್ಮದ್ದರ್ಶನಕಾಂಕ್ಷಯಾ ।
ತತಃ ಪವನಚಂದ್ರಾರ್ಕಸಿದ್ಧಗಂಧರ್ವಸೇವಿತಮ್ ॥ ೧೬೫

ಪಂಥಾನಮಹಮಾಕ್ರಮ್ಯ ಭವತೋ ದೃಷ್ಟವಾನಿಹ ।
ರಾಘವಸ್ಯ ಪ್ರಭಾವೇಣ ಭವತಾಂ ಚೈವ ತೇಜಸಾ ॥ ೧೬೬

ಸುಗ್ರೀವಸ್ಯ ಚ ಕಾರ್ಯಾರ್ಥಂ ಮಯಾ ಸರ್ವಮನುಷ್ಠಿತಮ್ ।
ಏತತ್ ಸರ್ವಂ ಮಯಾ ತತ್ರ ಯಥಾವದುಪಪಾದಿತಮ್ ॥ ೧೬೭

ಅತ್ರ ಯನ್ನ ಕೃತಂ ಶೇಷಂ ತತ್ ಸರ್ವಂ ಕ್ರಿಯತಾಮಿತಿ ॥

ಇತಿ ಶ್ರೀಮದ್ರಾಮಾಯಣೇ ಸುಂದರಕಾಂಡೇ ಅಷ್ಟಪಂಚಾಶಃ ಸರ್ಗಃ

ನಾನು ಮತ್ತೆ ಹೋಗಿ ವೈದೇಹಿಯನ್ನು ಕಂಡೆನು. ಹಿಂದಿರುಗಿ ಪ್ರಯಾಣಮಾಡಲು ಅವಳಿಂದ ಅನುಜ್ಞೆಯನ್ನು ಪಡೆದು ಅರಿಷ್ಟ ಪರ್ವತವನ್ನು ಹತ್ತಿದೆನು. ಅಲ್ಲಿಂದ, ಗೆಳೆಯರೆ, ನಿಮ್ಮನ್ನು ನೋಡುವ ಅಭಿಲಾಷೆಯಿಂದ ಇತ್ತಕಡೆ ಪ್ರಯಾಣ ವನ್ನಾರಂಭಿಸಿದೆನು. ವಾಯು, ಚಂದ್ರ, ಸೂರ್ಯ, ಸಿದ್ಧ, ಗಂಧರ್ವರು ಸಂಚರಿಸತಕ್ಕ ಗಗನಮಾರ್ಗದಲ್ಲಿ ಹಾರಿಬಂದು ನಿಮ್ಮನ್ನು ಕಂಡೆನು (೧೬೪-೧೬೫). ಇಷ್ಟು ಕಾರ್ಯವನ್ನು ನಾನು ಮಾಡಿರುವುದು ಶ್ರೀರಾಮನ ಪ್ರಭಾವದಿಂದ ; ನಿಮ್ಮೆಲ್ಲರ ಮತ್ತು ಸುಗ್ರೀವನ ತೇಜಸ್ಸಿನ ಬಲದಿಂದ. ಸಮಸ್ತ ಸಂಗತಿಯನ್ನೂ ನಿಮಗೆ ಯಥಾವತ್ತಾಗಿ ತಿಳಿಸಿದ್ದೇನೆ. ಇನ್ನು ಮುಂದಿನ ಕೆಲಸವನ್ನು ನೋಡಿಕೊಳ್ಳಿರಿ'' ಎಂದು ಹೇಳಿದನು (೧೬೬-೧೬೭).

ಇಲ್ಲಿಗೆ ಶ್ರೀಮದ್ರಾಮಾಯಣದ ಸುಂದರಕಾಂಡದಲ್ಲಿ ಐವತ್ತೆಂಟನೆಯ ಸರ್ಗ

ಏಕೋನಷಷ್ಟಿತಮಃ ಸರ್ಗಃ

ಅನಂತರಕಾರ್ಯಪ್ರರೋಚನಮ್

ಏತದಾಖ್ಯಾಯ ತತ್ ಸರ್ವಂ ಹನುಮಾನ್ ಮಾರುತಾತ್ಮಜಃ ।
ಭೂಯಃ ಸಮುಪಚಕ್ರಾಮ ವಚನಂ ವಕ್ತುಮುತ್ತರಮ್ ॥ ೧

ಸಫಲೋ ರಾಘವೋದ್ಯೋಗಃ ಸುಗ್ರೀವಸ್ಯ ಚ ಸಂಭ್ರಮಃ ।
ಶೀಲಮಾಸಾದ್ಯ ಸೀತಾಯಾ ಮಮ ಚ ಪ್ರವಣಂ ಮನಃ ॥ ೨

ತಪಸಾ ಧಾರಯೇಲ್ಲೋಕಾನ್ ಕ್ರುದ್ಧೋ ವಾ ನಿರ್ದಹೇದಪಿ ।
ಸರ್ವಥಾತಿಪ್ರವೃದ್ಧೋಽಸೌ ರಾವಣೋ ರಾಕ್ಷಸಾಧಿಪಃ ॥ ೩

ತಸ್ಯ ತಾಂ ಸ್ಪೃಶತೋ ಗಾತ್ರಂ ತಪಸಾ ನ ವಿನಾಶಿತಮ್ ।
ನ ತದಗ್ನಿಶಿಖಾ ಕುರ್ಯಾತ್ ಸಂಸ್ಪೃಷ್ಟಾ ಪಾಣಿನಾ ಸತೀ ॥ ೪

ಸರ್ಗ ೫೯

ರಾವಣನನ್ನು ಕೊಂದು ನಾವೇ ಸೀತೆಯನ್ನು ಸೆರೆಯಿಂದ ಬಿಡಿಸಬೇಕೆಂಬ ಅಭಿಪ್ರಾಯದಿಂದ ಹನುಮಂತನು ತನ್ನ ಸಾಮರ್ಥ್ಯವನ್ನು ಹೇಳಿಕೊಂಡು, ಜಾಂಬವಂತ ಮೊದಲಾದವರನ್ನು ಹೊಗಳುವುದು.

ಹೀಗೆ ಆಂಜನೇಯನು ಸೀತೆಯನ್ನು ನೋಡಿಬಂದ ವೃತ್ತಾಂತವೆಲ್ಲವನ್ನೂ ಹೇಳಿ ಮುಂದಿನ ವಿಷಯವನ್ನು ಹೇಳಲಾರಂಭಿಸಿದನು: ಮಿತ್ರರೆ, ನಾನು ಸೀತಾದೇವಿಯ ಸಚ್ಚಾರಿತ್ರವನ್ನು ಕಂಡಮೇಲೆ, ಶ್ರೀರಾಮನು ಅವಳಿಗಾಗಿ ಮಾಡುತ್ತಿರುವ ಪ್ರಯತ್ನವೂ ಸುಗ್ರೀವನ ಉತ್ಸಾಹವೂ ಯೋಗ್ಯವೇ ಸರಿ ಎಂದು ನನಗೆ ದೃಢವಾಯಿತು. ನನ್ನ ಮನಸ್ಸು ಭಕ್ತಿಯಿಂದ ಒಲಿಯಿತು (೧–೨). ರಾಕ್ಷಸೇಶ್ವರನಾದ ರಾವಣನು ಸಾಮಾನ್ಯನಲ್ಲ. ಅವನು ತನ್ನ ತಪೋಬಲದಿಂದ ಮೂರು ಲೋಕಗಳನ್ನು ರಕ್ಷಿಸಬಲ್ಲನು. ಕ್ರುದ್ಧನಾದರೆ ಮೂರು ಲೋಕಗಳನ್ನೂ ದಹಿಸಬಲ್ಲನು. ಎಲ್ಲಾ ವಿಧದಲ್ಲಿಯೂ ಅವನು ಬಲಶಾಲಿ. ಆತನು ಸೀತಾದೇವಿಯನ್ನು ಮುಟ್ಟಿದರೂ ತನ್ನ ತಪೋಬಲದಿಂದಲೇ ನಾಶವಾಗದೆ ಉಳಿದಿದ್ದಾನೆ. ಜನಕಪುತ್ರಿಯು ಕ್ರುದ್ಧಳಾದರೆ ಏನು ಮಾಡಬಲ್ಲಳೆಂಬುದು

ಜನಕಸ್ಯಾತ್ಮಜಾ ಕುರ್ಯಾದ್ಯತ್ ಕ್ರೋಧಕಲುಷೀಕೃತಾ ।
ಜಾಂಬವತ್ಪ್ರಮುಖಾನ್ ಸರ್ವಾನನುಜ್ಞಾಪ್ಯ ಮಹಾಹರೀನ್ ॥ ೫

ಅಸ್ಮಿನ್ನೇವಂಗತೇ ಕಾರ್ಯೇ ಭವತಾಂ ಚ ನಿವೇದಿತೇ ।
ನ್ಯಾಯ್ಯಂ ಸ್ಮ ಸಹ ವೈದೇಹ್ಯಾ ದ್ರಷ್ಟುಂ ತೌ ಪಾರ್ಥಿವಾತ್ಮಜೌ ॥ ೬

ಅಹಮೇಕೋಽಪಿ ಪರ್ಯಾಪ್ತಃ ಸರಾಕ್ಷಸಗಣಾಂ ಪುರೀಮ್ ।
ತಾಂ ಲಂಕಾಂ ತರಸಾ ಹಂತುಂ ರಾವಣಂ ಚ ಮಹಾಬಲಮ್ ॥ ೭

ಕಿಂ ಪುನಃ ಸಹಿತೋ ವೀರೈರ್ಬಲವದ್ಭಿಃ ಕೃತಾತ್ಮಭಿಃ ।
ಕೃತಾಸ್ತ್ರೈಃ ಪ್ಲವಗೈಃ ಶೂರೈರ್ಭವದ್ಭಿರ್ವಿಜಯೈಷಿಭಿಃ ॥ ೮

ಅಹಂ ತು ರಾವಣಂ ಯುದ್ಧೇ ಸಸೈನ್ಯಂ ಸಪುರಃಸರಮ್ ।
ಸಹಪುತ್ರಂ ವಧಿಷ್ಯಾಮಿ ಸಹೋದರಯುತಂ ಯುಧಿ ॥ ೯

ಬ್ರಾಹ್ಮಮೈಂದ್ರಂ ಚ ರೌದ್ರಂ ಚ ವಾಯವ್ಯಂ ವಾರುಣಂ ತಥಾ ।
ಯದಿ ಶಕ್ರಜಿತೋಽಸ್ತ್ರಾಣಿ ದುರ್ನಿರೀಕ್ಷ್ಯಾಣಿ ಸಂಯುಗೇ ॥ ೧೦

ಗೊತ್ತಿದೆಯೆ? ಕೈಯಿಂದ ಮುಟ್ಟಿದರೆ ಅಗ್ನಿಜ್ವಾಲೆಯೂ ಅಂತಹ ಕೆಲಸವನ್ನು ಮಾಡಲಾರದು (೩–೫). ಪರಿಸ್ಥಿತಿಯು ಹೀಗಿದೆ ಎಂಬುದನ್ನು ನಿಮಗೆ ತಿಳಿಸಿದ್ದೇನೆ. ಜಾಂಬವಂತನೇ ಮೊದಲಾದ ಕಪಿನಾಯಕರೆಲ್ಲರೂ ಒಪ್ಪುವುದಾದರೆ, ನಾವು ಸೀತಾದೇವಿಯನ್ನು ಬಿಡಿಸಿ ಅವಳನ್ನು ಕರೆದುಕೊಂಡೇ ರಾಮಲಕ್ಷ್ಮಣರ ಬಳಿಗೆ ಹೋಗುವುದು ಸರಿಯೆಂದು ನನಗೆ ತೋರುತ್ತದೆ. ಈಗ ನಾನೊಬ್ಬನೇ ಬೇಕಾದರೂ ಲಂಕೆಗೆ ನುಗ್ಗಿ ರಾಕ್ಷಸರನ್ನು ನಾಶಮಾಡಿ ರಾವಣನನ್ನು ಸಂಹರಿಸಬಲ್ಲೆನು (೬–೭). ಹೀಗಿರುವಾಗ ವೀರರೂ ಧೀರರೂ ಶಸ್ತ್ರಾಸ್ತ್ರಸಂಪನ್ನರೂ ಜಯಾಕಾಂಕ್ಷಿಗಳೂ ಆದ ನಿಮ್ಮಂಥ ಕಪಿನಾಯಕರು ಸಹಾಯಕರಾದರೆ ಹೇಳಬೇಕಾದ್ದೇನು? ನಾನು ಯುದ್ಧದಲ್ಲಿ ರಾವಣ, ಅವನ ಸೈನ್ಯ, ಮಕ್ಕಳು, ಸಹೋದರರು—ಇವರೆಲ್ಲರನ್ನೂ ಕೊಂದುಹಾಕುವೆನು (೮–೯). ಇಂದ್ರಜಿತ್ತೇ ಯುದ್ಧಕ್ಕೆ ಬಂದು ಘೋರವಾದ ಬ್ರಹ್ಮ, ಐಂದ್ರ, ರೌದ್ರ, ವಾಯವ್ಯ ವಾರುಣ ಮುಂತಾದ ಅಸ್ತ್ರಗಳನ್ನೇ

ತಾನ್ಯಹಂ ವಿಧಮಿಷ್ಯಾಮಿ ನಿಹನಿಷ್ಯಾಮಿ ರಾಕ್ಷಸಾನ್ ।
ಭವತಾಮಭ್ಯನುಜ್ಞಾತೋ ವಿಕ್ರಮೋ ಮೇ ರುಣದ್ಧಿ ತಮ್ ॥ ೧೧

ಮಯಾತುಲಾ ವಿಸೃಷ್ಟಾ ಹಿ ಶೈಲವೃಷ್ಟಿರ್ನಿರಂತರಾ ।
ದೇವಾನಪಿ ರಣೇ ಹನ್ಯಾತ್ ಕಿಂ ಪುನಸ್ತಾನ್ನಿಶಾಚರಾನ್ ॥ ೧೨

ಸಾಗರೋಽಪ್ಯತಿಯಾದ್ವೇಲಾಂ ಮಂದರಃ ಪ್ರಚಲೇದಪಿ ।
ನ ಜಾಂಬವಂತಂ ಸಮರೇ ಕಂಪಯೇದರಿವಾಹಿನೀ ॥ ೧೩

ಸರ್ವರಾಕ್ಷಸಸಂಘಾನಾಂ ರಾಕ್ಷಸಾ ಯೇ ಚ ಪೂರ್ವಕಾಃ ।
ಅಲಮೇಕೋ ವಿನಾಶಾಯ ವೀರೋ ವಾಲಿಸುತಃ ಕಪಿಃ ॥ ೧೪

ಪನಸಸ್ಯೋರುವೇಗೇನ ನೀಲಸ್ಯ ಚ ಮಹಾತ್ಮನಃ ।
ಮಂದರೋಽಪಿ ವಿಶೀರ್ಯೇತ ಕಿಂ ಪುನರ್ಯುಧಿ ರಾಕ್ಷಸಾಃ ॥ ೧೫

ಸದೇವಾಸುರಯಕ್ಷೇಷು ಗಂಧರ್ವೋರಗಪಕ್ಷಿಷು ।
ಮೈಂದಸ್ಯ ಪ್ರತಿಯೋದ್ಧಾರಂ ಶಂಸತ ದ್ವಿವಿದಸ್ಯ ವಾ ॥ ೧೬

ಪ್ರಯೋಗಿಸಲಿ, ಅವೆಲ್ಲವನ್ನೂ ಧ್ವಂಸ ಮಾಡಿಬಿಡುತ್ತೇನೆ. ರಾಕ್ಷಸರನ್ನು ವಧಿಸುತ್ತೇನೆ. ನೀವು ಅನುಮತಿಯನ್ನಿತ್ತರೆ ನನ್ನ ಪರಾಕ್ರಮವು ರಾವಣನನ್ನು ಅಡ್ಡಗಟ್ಟುವುದು (೧೦–೧೧). ನಾನು ಪರ್ವತಗಳನ್ನು ಎತ್ತಿ ಬೀಸಲಾರಂಭಿಸಿದರೆ, ಈ ರಾಕ್ಷಸರ ಮಾತಿರಲಿ—ದೇವತೆಗಳೂ ಉಳಿಯುವುದಿಲ್ಲ. ಈ ಜಾಂಬವಂತ ನೇನು ಸಾಮಾನ್ಯನೆ ? ಸಮುದ್ರವಾದರೂ ಎಲ್ಲೆಯನ್ನು ಮೀರಿ ಉಕ್ಕಬಹುದು, ಮಂದರಪರ್ವತವಾದರೂ ಅಲ್ಲಾಡಬಹುದು, ಈ ಜಾಂಬವಂತನು ಮಾತ್ರ ಜಗ್ಗುವುದಿಲ್ಲ. ಇವನನ್ನು ಶತ್ರುಸೇನೆಯು ಅಲ್ಲಾಡಿಸಲಾರದು ! (೧೨–೧೩). ವೀರನಾದ ಈ ವಾಲಿಪುತ್ರನು ಸಮಸ್ತ ರಾಕ್ಷಸರನ್ನೂ ಅವರ ಪೂರ್ವಜರನ್ನೂ ಸಹ ನಾಶಮಾಡಲು ಶಕ್ತನಾಗಿದ್ದಾನೆ. ಈ ಪನಸನ—ಈ ನೀಲನ ತೊಡೆಯ ವೇಗಕ್ಕೆ ಮಂದರಪರ್ವತವೂ ಸೀಳಿಹೋದೀತು. ದೇವ ಅಸುರ ಯಕ್ಷರಲ್ಲಾಗಲಿ ಗಂಧರ್ವ ಸರ್ಪ ಪಕ್ಷಿಜಾತಿಗಳಲ್ಲಾಗಲಿ—ಮೈಂದದ್ವಿವಿದರೊಡನೆ ಹೋರಾಡಬಲ್ಲವರು ಯಾರಿದ್ದಾರೆ ? ಹೇಳಿರಿ (೧೪–೧೬).

ಅಶ್ವಿಪುತ್ರೌ ಮಹಾಭಾಗಾವೇತೌ ಪ್ಲವಗಸತ್ತಮೌ ।
ಏತಯೋಃ ಪ್ರತಿಯೋದ್ಧಾರಂ ನ ಪಶ್ಯಾಮಿ ರಣಾಜಿರೇ ॥ ೧೭

ಪಿತಾಮಹವರೋತ್ಸೇಕಾತ್ ಪರಮಂ ದರ್ಪಮಾಸ್ಥಿತೌ ।
ಅಮೃತಪ್ರಾಶಿನಾವೇತೌ ಸರ್ವಪಾನರಸತ್ತಮೌ ॥ ೧೮

ಅಶ್ವಿನೋರ್ಮಾನನಾರ್ಥಂ ಹಿ ಸರ್ವಲೋಕಪಿತಾಮಹಃ ।
ಸರ್ವಾವಧ್ಯತ್ವಮತುಲಮನಯೋರ್ದತ್ತವಾನ್ ಪುರಾ ॥ ೧೯

ವರೋತ್ಸೇಕೇನ ಮತ್ತೌ ಚ ಪ್ರಮಥ್ಯ ಮಹತೀಂ ಚಮೂಮ್ ।
ಸುರಾಣಾಮಮೃತಂ ವೀರೌ ಪೀತವಂತೌ ಪ್ಲವಂಗಮೌ ॥ ೨೦

ಏತಾವೇವ ಹಿ ಸಂಕ್ರುದ್ಧೌ ಸವಾಜಿರಥಕುಂಜರಾಮ್ ।
ಲಂಕಾಂ ನಾಶಯಿತುಂ ಶಕ್ತೌ ಸರ್ವೇ ತಿಷ್ಠಂತು ವಾನರಾಃ ॥ ೨೧

ಮಯ್ಯೈವ ನಿಹತಾ ಲಂಕಾ ದಗ್ಧಾ ಭಸ್ಮೀಕೃತಾ ಪುನಃ ।
ರಾಜಮಾರ್ಗೇಷು ಸರ್ವತ್ರ ನಾಮ ವಿಶ್ರಾವಿತಂ ಮಯಾ ॥ ೨೨

ಜಯತ್ಯತಿಬಲೋ ರಾಮೋ ಲಕ್ಷ್ಮಣಶ್ಚ ಮಹಾಬಲಃ ।
ರಾಜಾ ಜಯತಿ ಸುಗ್ರೀವೋ ರಾಘವೇಣಾಭಿಪಾಲಿತಃ ॥ ೨೩

ಈ ಮೈಂದದ್ವಿವಿದರು ಅಶ್ವಿನೀದೇವತೆಗಳ ಮಕ್ಕಳು. ವಾನರಶ್ರೇಷ್ಠರು. ರಣಾಂಗಣದಲ್ಲಿ ಇವರಿಗೆ ಎದುರಾಗತಕ್ಕವನೊಬ್ಬನನ್ನೂ ನಾನು ಕಾಣೆ. ಇವರು ಬ್ರಹ್ಮದೇವನ ವರಬಲದಿಂದ ಮಹಾದರ್ಪಶಾಲಿಗಳಾಗಿದ್ದಾರೆ. ಅಮೃತವನ್ನು ಕುಡಿದುಬಂದಿರತಕ್ಕ ವಾನರೋತ್ತಮರು (೧೭–೧೮). ಅಶ್ವಿನೀದೇವತೆಗಳನ್ನು ಸಂತೋಷಪಡಿಸುವುದಕ್ಕಾಗಿ ಬ್ರಹ್ಮದೇವನು ಇವರಿಗೆ ಯಾರಿಂದಲೂ ಮರಣ ವಾಗದಿರಲಿ ಎಂದು ವರವನ್ನು ಅನುಗ್ರಹಿಸಿದ್ದಾನೆ. ಆ ವರಬಲದಿಂದ ಇವರು ದೇವತೆಗಳನ್ನು ಜಯಿಸಿ ಅಮೃತವನ್ನು ಕುಡಿದು ಬಂದಿದ್ದಾರೆ. ಉಳಿದ ವಾನರರೆಲ್ಲ ಹಾಗಿರಲಿ ! ಇವರಿಬ್ಬರೇ ಕ್ರುದ್ಧರಾದರೆ ಸಮಸ್ತ ಲಂಕೆಯನ್ನೂ ನಾಶಮಾಡಬಲ್ಲರು (೧೯–೨೧). ನಾನೇ ಲಂಕೆಯನ್ನು ಸುಟ್ಟು ಬೂದಿಮಾಡಿ ಹೆಚ್ಚುಕಡಿಮೆ ನಾಶಮಾಡಿ ಬಿಟ್ಟಿದ್ದೇನೆ. ರಾಜಬೀದಿಗಳಲ್ಲಿ ಹೆಸರನ್ನು ಘೋಷಿಸಿಬಂದಿದ್ದೇನೆ. ''ಮಹಾಬಲಶಾಲಿ ಗಳಾದ ರಾಮಲಕ್ಷ್ಮಣರಿಗೆ ಜಯವಾಗಲಿ ! ಶ್ರೀರಾಮನ ರಕ್ಷಣೆಯಲ್ಲಿರುವ ಸುಗ್ರೀವ

ಅಹಂ ಕೋಸಲರಾಜಸ್ಯ ದಾಸಃ ಪವನಸಂಭವಃ ।
ಹನುಮಾನಿತಿ ಸರ್ವತ್ರ ನಾಮ ವಿಶ್ರಾವಿತಂ ಮಯಾ ॥ ೨೪

ಅಶೋಕವನಿಕಾಮಧ್ಯೇ ರಾವಣಸ್ಯ ದುರಾತ್ಮನಃ ।
ಅಧಸ್ತಾಚ್ಛಿಂಶಪಾವೃಕ್ಷೇ ಸಾಧ್ವೀ ಕರುಣಮಾಸ್ಥಿತಾ ॥ ೨೫

ರಾಕ್ಷಸೀಭಿಃ ಪರಿವೃತಾ ಶೋಕಸಂತಾಪಕರ್ಶಿತಾ ।
ಮೇಘಲೇಖಾಪರಿವೃತಾ ಚಂದ್ರಲೇಖೇವ ನಿಷ್ಪ್ರಭಾ ॥ ೨೬

ಅಚಿಂತಯಂತೀ ವೈದೇಹೀ ರಾವಣಂ ಬಲದರ್ಪಿತಮ್ ।
ಪತಿವ್ರತಾ ಚ ಸುಶ್ರೋಣೀ ಅವಷ್ಟಬ್ಧಾ ಚ ಜಾನಕೀ ॥ ೨೭

ಅನುರಕ್ತಾ ಹಿ ವೈದೇಹೀ ರಾಮಂ ಸರ್ವಾತ್ಮನಾ ಶುಭಾ ।
ಅನನ್ಯಚಿತ್ತಾ ರಾಮೇ ಚ ಪೌಲೋಮೀವ ಪುರಂದರೇ ॥ ೨೮

ತದೇಕವಾಸಃಸಂವೀತಾ ರಜೋಧ್ವಸ್ತಾ ತಥೈವ ಚ ।
ಶೋಕಸಂತಾಪದೀನಾಂಗೀ ಸೀತಾ ಭರ್ತೃಹಿತೇ ರತಾ ॥ ೨೯

ಮಹಾರಾಜನಿಗೆ ಜಯವಾಗಲಿ! ನಾನು ಕೋಸಲಾಧಿಪತಿಯಾದ ರಾಘವನ ದೂತ. ವಾಯುದೇವನ ಪುತ್ರ. ಹನುಮಂತನೆಂದು ನನ್ನ ಹೆಸರು!'' ಎಂಬುದಾಗಿ ಬೀದಿಬೀದಿಗಳಲ್ಲಿಯೂ ಘೋಷಣೆ ಮಾಡಿದ್ದೇನೆ (೨೨–೨೪). ದುರಾತ್ಮನಾದ ರಾವಣನ ಅಶೋಕವನದಲ್ಲಿ ಶಿಂಶಪಾವೃಕ್ಷದ ಕೆಳಗೆ ಆ ಸಾಧ್ವಿಯು ದೈನ್ಯದಿಂದ ಕುಳಿತಿದ್ದಾಳೆ. ರಾಕ್ಷಸಿಯರಿಂದ ಸುತ್ತುವರಿಯಲ್ಪಟ್ಟು ಶೋಕಸಂತಪ್ತಳಾದ ಆಕೆಯನ್ನು ನೋಡಿದರೆ, ಮೋಡ ಮುಚ್ಚಿದ ಚಂದ್ರಕಲೆಯಂತೆ ಕಾಂತಿಹೀನಳಾಗಿ ಕಾಣುತ್ತಾಳೆ (೨೫–೨೬). ಪತಿವ್ರತೆಯಾದ ಜಾನಕಿಯು ಸೆರೆಯಲ್ಲಿದ್ದರೂ ಬಲದರ್ಪಿತನಾದ ರಾವಣನನ್ನು ಲೆಕ್ಕಿಸದೆ ಇದ್ದಾಳೆ. ಅವಳದು ಪರಿಶುದ್ಧವಾದ ನಡತೆ. ಶ್ರೀರಾಮನಲ್ಲಿ ದೃಢವಾದ ಪ್ರೇಮವನ್ನಿಟ್ಟು ಶಚೀದೇವಿಯು ದೇವೇಂದ್ರನನ್ನೇ ಧ್ಯಾನಿಸುವಂತೆ ಶ್ರೀರಾಮನನ್ನೇ ಚಿಂತಿಸುತ್ತಿದ್ದಾಳೆ (೨೭–೨೮). ಸೀರೆಯೊಂದನ್ನು ಸುತ್ತಿಕೊಂಡು ಮಲಿನಶರೀರಳಾಗಿ ಶೋಕಿಸುತ್ತ ತನ್ನ ಪತಿಯ ಹಿತವನ್ನೇ ಚಿಂತಿಸುತ್ತಿದ್ದಾಳೆ.

ಸಾ ಮಯಾ ರಾಕ್ಷಸೀಮಧ್ಯೇ ತರ್ಜ್ಯಮಾನಾ ಮುಹುರ್ಮುಹುಃ ।
ರಾಕ್ಷಸೀಭಿರ್ವಿರೂಪಾಭಿರ್ದೃಷ್ಟಾ ಹಿ ಪ್ರಮದಾವನೇ ॥ ೩೦

ಏಕವೇಣೀಧರಾ ದೀನಾ ಭರ್ತೃಚಿಂತಾಪರಾಯಣಾ ।
ಅಧಃಶಯ್ಯಾ ವಿವರ್ಣಾಂಗೀ ಪದ್ಮಿನೀವ ಹಿಮಾಗಮೇ ॥ ೩೧

ರಾವಣಾದ್ವಿನಿವೃತ್ತಾರ್ಥಾ ಮರ್ತವ್ಯಕೃತನಿಶ್ಚಯಾ ।
ಕಥಂಚಿನ್ಮೃಗಶಾವಾಕ್ಷೀ ವಿಶ್ವಾಸಮುಪಪಾದಿತಾ ॥ ೩೨

ತತಃ ಸಂಭಾಷಿತಾ ಚೈವ ಸರ್ವಮರ್ಥಂ ಚ ದರ್ಶಿತಾ ।
ರಾಮಸುಗ್ರೀವಸಖ್ಯಂ ಚ ಶ್ರುತ್ವಾ ಪ್ರೀತಿಮುಪಾಗತಾ ॥ ೩೩

ನಿಯತಃ ಸಮುದಾಚಾರೋ ಭಕ್ತಿರ್ಭರ್ತರಿ ಚೋತ್ತಮಾ ।
ಯನ್ನ ಹಂತಿ ದಶಗ್ರೀವಂ ಸ ಮಹಾತ್ಮಾ ದಶಾನನಃ ॥ ೩೪

ನಿಮಿತ್ತಮಾತ್ರಂ ರಾಮಸ್ತು ವಧೇ ತಸ್ಯ ಭವಿಷ್ಯತಿ ।
ಸಾ ಪ್ರಕೃತ್ಯೈವ ತನ್ವಂಗೀ ತದ್ವಿಯೋಗಾಚ್ಚ ಕರ್ಶಿತಾ ॥ ೩೫

ವಿಕಾರರೂಪಿನ ರಾಕ್ಷಸಿಯರು ಹೆಜ್ಜೆಹೆಜ್ಜೆಗೂ ಅವಳನ್ನು ಹೆದರಿಸುವುದನ್ನು ನಾನು ಅಶೋಕವನದಲ್ಲಿ ಕಂಡಿದ್ದೇನೆ (೨೮–೩೦). ಸೀತೆಯು ಒಂಟಿ ಜಡೆಯನ್ನು ಧರಿಸಿ ದೀನಳಾಗಿ ಗಂಡನನ್ನೇ ಚಿಂತಿಸುತ್ತ, ನೆಲದಮೇಲೆ ಮಲಗುತ್ತ, ಬಣ್ಣಗುಂದಿ, ಚಳಿಗಾಲದ ತಾವರೆಯ ಬಳ್ಳಿಯಂತೆ ಆಗಿದ್ದಾಳೆ. ರಾವಣನ ದೆಸೆಯಿಂದ ಜೀವಿತದಲ್ಲಿ ನಿರಾಶಳಾಗಿ ಆತ್ಮಹತ್ಯೆಯನ್ನು ಮಾಡಿಕೊಳ್ಳಬೇಕೆಂದು ನಿಶ್ಚಯಿಸಿಬಿಟ್ಟಿದ್ದಳು. ನಾನು ಬಹು ಕಷ್ಟದಿಂದ ಸಮಾಧಾನ ಹೇಳಿದೆ (೩೧–೩೨). ನಿಖಿಲ ವೃತ್ತಾಂತಗಳನ್ನೂ ತಿಳಿಸಿ ರಾಮಸುಗ್ರೀವರಿಬ್ಬರಿಗೂ ಸ್ನೇಹವಾದ ವಿಷಯವನ್ನು ಹೇಳಿದಮೇಲೆ ಸಂತೋಷಪಟ್ಟಳು. ಸೀತಾದೇವಿಯ ಕಟ್ಟುನಿಟ್ಟಾದ ಸದಾಚಾರ, ಪತಿಯಲ್ಲಿ ದೃಢವಾದ ಭಕ್ತಿ—ಇವೆರಡೇ ರಾವಣನನ್ನು ಕೊಲ್ಲುವುದಕ್ಕೆ ಸಾಕು. ಇದುವರೆಗೆ ಅವನು ಸಾಯದೆ ಉಳಿದಿರುವುದರಿಂದ ರಾವಣನು ಮಹಾನುಭಾವನೆಂದೇ ಹೇಳಬೇಕು! ಆದರೆ, ಮಿತ್ರರೆ! (ಸೀತಾದೇವಿಯ ಸದ್ಗುಣಗಳೇ ರಾವಣನನ್ನು ಕೊಲ್ಲುತ್ತವೆ). ಅವನ ವಧೆಗೆ ಶ್ರೀರಾಮನು ನಿಮಿತ್ತಮಾತ್ರ. ದೇವಿಯು ಸಹಜವಾಗಿಯೇ ಕೃಶಾಂಗಿ.

ಪ್ರತಿಪತ್ಪಾಠಶೀಲಸ್ಯ ವಿದ್ಯೇವ ತನುತಾಂ ಗತಾ ।
ಏವಮಾಸ್ತೇ ಮಹಾಭಾಗಾ ಸೀತಾ ಶೋಕಪರಾಯಣಾ ॥ ೩೬
ಯದತ್ರ ಪ್ರತಿಕರ್ತವ್ಯಂ ತತ್ ಸರ್ವಮುಪಪಾದ್ಯತಾಮ್ ॥

ಇತಿ ಶ್ರೀಮದ್ರಾಮಾಯಣೇ ಸುಂದರಕಾಂಡೇ ಏಕೋನಷಷ್ಟಿತಮಃ ಸರ್ಗಃ

ಷಷ್ಟಿತಮಃ ಸರ್ಗಃ

ಅಂಗದಜಾಂಬವತ್ಸಂವಾದಃ

ತಸ್ಯ ತದ್ವಚನಂ ಶ್ರುತ್ವಾ ವಾಲಿಸೂನುರಭಾಷತ ।
ಅಯುಕ್ತಂ ತು ವಿನಾ ದೇವೀಂ ದೃಷ್ಟವದ್ಭಿಶ್ಚ ವಾನರಾಃ ॥ ೧
ಸಮೀಪಂ ಗಂತುಮಸ್ಮಾಭೀ ರಾಘವಸ್ಯ ಮಹಾತ್ಮನಃ ।
ದೃಷ್ಟ್ವಾ ದೇವೀ ನ ಚಾನೀತಾ ಇತಿ ತತ್ರ ನಿವೇದನಮ್ ॥ ೨

ಈಗ ಪತಿವಿಯೋಗದಿಂದ ಇನ್ನೂ ಕೃಶಳಾಗಿಬಿಟ್ಟಿದ್ದಾಳೆ (೩೩–೩೫). ಪಾಡ್ಯಗಳಲ್ಲಿ ಅಧ್ಯಯನ ಮಾಡತಕ್ಕವನ ವಿದ್ಯೆಯಂತೆ ದಿನೇ ದಿನೇ ಕೃಶಳಾಗುತ್ತಿದ್ದಾಳೆ. ಎಲೈ ಮಿತ್ರರೆ, ಮಹಾತ್ಮಳಾದ ಸೀತಾದೇವಿಯು ಹೀಗೆ ದುಃಖದಲ್ಲಿ ಮುಳುಗಿಹೋಗಿದ್ದಾಳೆ. ಇದಕ್ಕೆ ನಾವು ಏನು ಮಾಡಬೇಕೆಂಬುದನ್ನು ಆಲೋಚಿಸಿರಿ'' ಎಂದನು (೩೬).

ಇಲ್ಲಿಗೆ ಶ್ರೀಮದ್ರಾಮಾಯಣದ ಸುಂದರಕಾಂಡದಲ್ಲಿ ಐವತ್ತೊಂಬತ್ತನೆಯ ಸರ್ಗ

ಸರ್ಗ ೬೦

ನಾವೇ ರಾಕ್ಷಸರನ್ನು ಗೆದ್ದು ಸೀತೆಯನ್ನು ರಾಮನ ಬಳಿಗೆ ಕರೆದುಕೊಂಡು ಹೋಗೋಣವೆಂದು ಅಂಗದನು ಹೇಳಲು, ಅದು ಸರಿಯಲ್ಲವೆಂದು ಜಾಂಬವಂತನು ತಿಳಿಸುವುದು.

ಹನುಮಂತನ ಮಾತನ್ನು ಕೇಳಿ ಅಂಗದನು ''ಎಲೈ ವಾನರರೆ, ನಾವು ದೇವಿಯನ್ನು ದರ್ಶನಮಾಡಿದಮೇಲೆ, ಅವಳನ್ನು ಬಿಟ್ಟು ಶ್ರೀರಾಮನ ಸಮೀಪಕ್ಕೆ

ಅಯುಕ್ತಮಿವ ಪಶ್ಯಾಮಿ ಭವದ್ಭಿಃ ಖ್ಯಾತವಿಕ್ರಮೈಃ ।
ನ ಹಿ ನಃ ಪ್ಲವನೇ ಕಶ್ಚಿನ್ನಾಪಿ ಕಶ್ಚಿತ್ ಪರಾಕ್ರಮೇ ॥ ೩

ತುಲ್ಯಃ ಸಾಮರದೈತ್ಯೇಷು ಲೋಕೇಷು ಹರಿಸತ್ತಮಾಃ ।
ತೇಷ್ವೇವಂ ಹತವೀರೇಷು ರಾಕ್ಷಸೇಷು ಹನೂಮತಾ ॥ ೪

ಕಿಮನ್ಯದತ್ರ ಕರ್ತವ್ಯಂ ಗೃಹಿತ್ವಾ ಯಾಮ ಜಾನಕೀಮ್ ।
ರಾಮಲಕ್ಷ್ಮಣಯೋರ್ಮಧ್ಯೇ ನ್ಯಸ್ಯಾಮ ಜನಕಾತ್ಮಜಾಮ್ ॥ ೫

ಕಿಂ ವ್ಯಲೀಕೈಸ್ತು ತಾನ್ ಸರ್ವಾನ್ ವಾನರಾನ್ ವಾನರರ್ಷಭಾನ್ ।
ವಯಮೇವ ಹಿ ಗತ್ವಾ ತಾನ್ ಹತ್ವಾ ರಾಕ್ಷಸಪುಂಗವಾನ್ ॥ ೬

ರಾಘವಂ ದ್ರಷ್ಟುಮರ್ಹಾಮಃ ಸುಗ್ರೀವಂ ಸಹಲಕ್ಷ್ಮಣಮ್ ।
ತಮೇವಂ ಕೃತಸಂಕಲ್ಪಂ ಜಾಂಬವಾನ್ ಹರಿಸತ್ತಮಃ ॥ ೭

ಉವಾಚ ಪರಮಪ್ರೀತೋ ವಾಕ್ಯಮರ್ಥವದರ್ಥವಿತ್ ।
ನೈಷಾ ಬುದ್ಧಿರ್ಮಹಾಬುದ್ಧೇ ಯದ್ಬ್ರವೀಷಿ ಮಹಾಕಪೇ ॥ ೮

ಹೋಗುವುದು ಯುಕ್ತವಲ್ಲ. ಅಲ್ಲಿಗೆ ಹೋಗಿ 'ದೇವಿಯನ್ನು ನೋಡಿದೆವು. ಆದರೆ ಕರೆತರಲಿಲ್ಲ' ಎಂದು ಹೇಳಕೊಳ್ಳುವುದು ನಮ್ಮಂತಹ ಪರಾಕ್ರಮಿಗಳಿಗೆ ಅಷ್ಟು ಚೆನ್ನಾಗಿರುವುದಿಲ್ಲ (೧–೨). ಹಾರುವುದರಲ್ಲಾಗಲಿ, ಪರಾಕ್ರಮದಲ್ಲಾಗಲಿ ನಮಗೆ ಸಮಾನನಾದವನು ದೇವದಾನವಾದಿಗಳಲ್ಲಿ ಒಬ್ಬನೂ ಇಲ್ಲ. ಹನುಮಂತನೇ ಬಹುಮಂದಿ ರಾಕ್ಷಸವೀರರನ್ನು ಕೊಂದುಬಿಟ್ಟಿರುವನು. ಇನ್ನು ನಾವು ಮಾಡಬೇಕಾದ್ದಾದರೂ ಏನಿದೆ ? ಜಾನಕಿಯನ್ನು ಕರೆದುಕೊಂಡು ಹೋಗಿಬಿಡೋಣ ! ರಾಮಲಕ್ಷ್ಮಣರ ಬಳಿಗೆ ಅವಳನ್ನು ಸೇರಿಸಿಬಿಡೋಣ (೩–೫). ಕಿಷ್ಕಿಂಧೆಯಲ್ಲಿರುವ ಸಮಸ್ತ ಕಪಿವೀರರಿಗೂ ಕಷ್ಟವನ್ನು ಕೊಡುವುದೇಕೆ ? ನಾವೇ ಹೋಗಿ ರಾಕ್ಷಸರನ್ನು ಸಂಹರಿಸಿ ರಾಮಲಕ್ಷ್ಮಣಸುಗ್ರೀವರನ್ನು ನೋಡುವುದು ಯುಕ್ತ'' ಎಂದನು. ಅಂಗದನ ಉದ್ದೇಶವನ್ನು ಗ್ರಹಿಸಿ ಜಾಂಬವಂತನಿಗೆ ಸಂತೋಷವಾಯಿತು. ಆದರೆ ವಿವೇಕಿಯಾದ ಜಾಂಬವಂತನು ಕಾರ್ಯಾಕಾರ್ಯವನ್ನು ವಿವೇಚಿಸಿ ಅಂಗದನನ್ನು ಕುರಿತು ''ಕಪಿಶ್ರೇಷ್ಠ ನಿನ್ನ ಅಭಿಪ್ರಾಯವು ಸರಿಯಲ್ಲ (೬–೮).

ವಿಚೇತುಂ ವಯಮಾಜ್ಞಪ್ತಾ ದಕ್ಷಿಣಾಂ ದಿಶಮುತ್ತಮಾಮ್ ।
ನಾನೇತುಂ ಕಪಿರಾಜೇನ ನೈವ ರಾಮೇಣ ಧೀಮತಾ ॥ ೯

ಕಥಂಚಿನ್ನಿರ್ಜಿತಾಂ ಸೀತಾಮಸ್ಮಾಭಿರ್ನಾಭಿರೋಚಯೇತ್ ।
ರಾಘವೋ ನೃಪಶಾರ್ದೂಲಃ ಕುಲಂ ವ್ಯಪದಿಶನ್ ಸ್ವಕಮ್ ॥ ೧೦

ಪ್ರತಿಜ್ಞಾಯ ಸ್ವಯಂ ರಾಜಾ ಸೀತಾವಿಜಯಮಗ್ರತಃ ।
ಸರ್ವೇಷಾಂ ಕಪಿಮುಖ್ಯಾನಾಂ ಕಥಂ ಮಿಥ್ಯಾ ಕರಿಷ್ಯತಿ ॥ ೧೧

ವಿಫಲಂ ಕರ್ಮ ಚ ಕೃತಂ ಭವೇತ್ತುಷ್ಟಿರ್ನ ತಸ್ಯ ಚ ।
ವೃಥಾ ಚ ದರ್ಶಿತಂ ವೀರ್ಯಂ ಭವೇದ್ವಾನರಪುಂಗವಾಃ ॥ ೧೨

ತಸ್ಮಾದ್ಗಚ್ಛಾಮ ವೈ ಸರ್ವೇ ಯತ್ರ ರಾಮಃ ಸಲಕ್ಷ್ಮಣಃ ।
ಸುಗ್ರೀವಶ್ಚ ಮಹಾತೇಜಾಃ ಕಾರ್ಯಸ್ಯಾಸ್ಯ ನಿವೇದನೇ ॥ ೧೩

ನ ತಾವದೇಷಾ ಮತಿರಕ್ಷಮಾ ನೋ
ಯಥಾ ಭವಾನ್ ಪಶ್ಯತಿ ರಾಜಪುತ್ರ ।

ದಕ್ಷಿಣ ದಿಕ್ಕಿನಲ್ಲಿ ಸೀತೆಯನ್ನು ಹುಡುಕಬೇಕೆಂದು ಮಾತ್ರ ನಮಗೆ ಆಜ್ಞೆಯಾಗಿದೆ. ಸುಗ್ರೀವನಾಗಲಿ—ಶ್ರೀರಾಮನಾಗಲಿ ಸೀತೆಯನ್ನು ಕರೆತರಬೇಕೆಂದು ನಮಗೆ ಆಜ್ಞೆ ಮಾಡಿಲ್ಲ. ಒಂದು ವೇಳೆ ನಾವು ಗೆದ್ದು ಸೀತೆಯನ್ನು ಕರೆತಂದರೂ, ರಘುನಾಥನ ಮನಸ್ಸಿಗೆ ರುಚಿಸದೇಹೋಗಬಹುದು. ಆ ಪುರುಷಸಿಂಹನು ತನ್ನ ಕುಲದ ಔನ್ನತ್ಯವನ್ನು ಅಭಿಮಾನದಿಂದ ಹೇಳಿಕೊಳ್ಳುತ್ತಾನೆ (೯–೧೦). ನಿಖಿಲ ಕಪಿನಾಯಕರ ಎದುರಿನಲ್ಲಿ ಸೀತೆಯನ್ನು ವಿಜಯಶಾಲಿಯಾಗಿ ಕರೆತರುತ್ತೇನೆಂದು ರಾಮನು* ಪ್ರತಿಜ್ಞೆಮಾಡಿದ್ದಾನೆ. ಈಗ ಅದನ್ನು ಸುಳ್ಳುಮಾಡುವುದಾದರೂ ಹೇಗೆ ? ನಾವು ಮಾಡಿದ ಕೆಲಸವೆಲ್ಲವೂ ನಿಷ್ಫಲವಾದೀತು. ರಾಮನಿಗೆ ಸಂತೋಷವೂ ಆಗದೆ ಹೋದೀತು. ನಾವು ವ್ಯರ್ಥವಾಗಿ ಪರಾಕ್ರಮವನ್ನು ಪ್ರದರ್ಶನಮಾಡಿದಂತಾಗುವುದು (೧೧–೧೨). ಈಗ ನಾವು ರಾಮಲಕ್ಷ್ಮಣ

---

* 'ಪ್ರತಿಜ್ಞಾಯ ಸ್ವಯಂ ರಾಜಾ' ಎಂದು ಮೂಲ. ಇಲ್ಲಿ ರಾಜನೆಂದರೆ ಸುಗ್ರೀವನೆಂದೂ ಅರ್ಥಮಾಡಬಹುದು.

ಯಥಾ ತು ರಾಮಸ್ಯ ಮತಿರ್ನಿವಿಷ್ಟಾ
ತಥಾ ಭವಾನ್ ಪಶ್ಯತು ಕಾರ್ಯಸಿದ್ಧಿಮ್ ॥ ೧೪

ಇತಿ ಶ್ರೀಮದ್ರಾಮಾಯಣೇ ಸುಂದರಕಾಂಡೇ ಷಷ್ಟಿತಮಃ ಸರ್ಗಃ

ಏಕಷಷ್ಟಿತಮಃ ಸರ್ಗಃ

ಮಧುವನಪ್ರವೇಶಃ

ತತೋ ಜಾಂಬವತೋ ವಾಕ್ಯಮಗೃಹ್ಣಂತ ವನೌಕಸಃ ।
ಅಂಗದಪ್ರಮುಖಾ ವೀರಾ ಹನೂಮಾಂಶ್ಚ ಮಹಾಕಪಿಃ ॥ ೧
ಪ್ರೀತಿಮಂತಸ್ತತಃ ಸರ್ವೇ ವಾಯುಪುತ್ರಪುರಃಸರಾ ।
ಮಹೇಂದ್ರಾಗ್ರಂ ಪರಿತ್ಯಜ್ಯ ಪುಪ್ಲುವುಃ ಪ್ರವಗರ್ಷಭಾಃ ॥ ೨
ಮೇರುಮಂದಾರಸಂಕಾಶಾ ಮತ್ತಾ ಇವ ಮಹಾಗಜಾಃ ।
ಛಾದಯಂತ ಇವಾಕಾಶಂ ಮಹಾಕಾಯಾ ಮಹಾಬಲಾಃ ॥ ೩

ಸುಗ್ರೀವರು ಇರತಕ್ಕ ಸ್ಥಳಕ್ಕೆ ಹೋಗಿ ಸೀತಾವೃತ್ತಾಂತವನ್ನು ತಿಳಿಸೋಣ. ಯುವರಾಜ, ನಿನ್ನ ವಿಚಾರ ಸರಣಿಯು ಯೋಗ್ಯವೇನೋ ಹೌದು. ಆದರೆ ನಾವು ರಾಮನ ಅಭಿಪ್ರಾಯವನ್ನನುಸರಿಸಿ ಕಾರ್ಯವನ್ನು ಸಾಧಿಸಬೇಕಾಗಿದೆ. ಆಲೋಚಿಸಿ ನೋಡು'' ಎಂದು ಹೇಳಿದನು (೧೩–೧೪).

ಇಲ್ಲಿಗೆ ಶ್ರೀಮದ್ರಾಮಾಯಣದ ಸುಂದರಕಾಂಡದಲ್ಲಿ ಅರುವತ್ತನೆಯ ಸರ್ಗ

ಸರ್ಗ ೬೧

ಹನುಮಂತ ಮೊದಲಾದವರೆಲ್ಲರು ಕಿಷ್ಕಿಂಧೆಗೆ ಹೊರಟು, ದಾರಿಯಲ್ಲಿ ಮಧುವನವನ್ನು ಪ್ರವೇಶಿಸುವುದು. ಕಾವಲುಗಾರನಾದ ದಧಿಮುಖನ ಆಕ್ಷೇಪ.

ಜಾಂಬವಂತನ ಮಾತನ್ನು ಅಂಗದನೇ ಮೊದಲಾದ ಕಪಿವೀರರೂ ಹನುಮಂತನೂ ಒಪ್ಪಿದರು. ಅವರೆಲ್ಲರೂ ಆನಂದದಿಂದ ಹನುಮಂತನನ್ನು ಮುಂದೆ ಇಟ್ಟುಕೊಂಡು ಮಹೇಂದ್ರಪರ್ವತದಿಂದ ಆಕಾಶಕ್ಕೆ ನೆಗೆದರು (೧–೨). ಪರ್ವತಗಳಂತೆಯೂ ಮದ್ದಾನೆಗಳಂತೆಯೂ ಇದ್ದ ಬಲಾಢ್ಯರಾದ ಕಪಿಗಳು

ಸಭಾಜ್ಯಮಾನಂ ಭೂತೈಸ್ತಮಾತ್ಮವಂತಂ ಮಹಾಬಲಮ್ ।
ಹನುಮಂತಂ ಮಹಾವೇಗಂ ವಹಂತ ಇವ ದೃಷ್ಟಿಭಿಃ ॥ ೪

ರಾಘವೇ ಚಾರ್ಥನಿರ್ವೃತ್ತಿಂ ಕರ್ತುಂ ಚ ಪರಮಂ ಯಶಃ ।
ಸಮಾಧಾಯ ಸಮೃದ್ಧಾರ್ಥಾಃ ಕರ್ಮಸಿದ್ಧಿಭಿರುನ್ನತಾಃ ॥ ೫

ಪ್ರಿಯಾಖ್ಯಾನೋನ್ಮುಖಾಃ ಸರ್ವೇ ಸರ್ವೇ ಯುದ್ಧಾಭಿನಂದಿನಃ ।
ಸರ್ವೇ ರಾಮಪ್ರತೀಕಾರೇ ನಿಶ್ಚಿತಾರ್ಥಾ ಮನಸ್ವಿನಃ ॥ ೬

ಪ್ಲವಮಾನಾಃ ಖಮುತ್ಪತ್ಯ ತತಸ್ತೇ ಕಾನನೌಕಸಃ ।
ನಂದನೋಪಮಮಾಸೇದುರ್ವನಂ ದ್ರುಮಲತಾಯುತಮ್ ॥ ೭

ಯತ್ತನ್ಮಧುವನಂ ನಾಮ ಸುಗ್ರೀವಸ್ಯಾಭಿರಕ್ಷಿತಮ್ ।
ಅಧೃಷ್ಯಂ ಸರ್ವಭೂತಾನಾಂ ಸರ್ವಭೂತಮನೋಹರಮ್ ॥ ೮

ಯದ್ರಕ್ಷತಿ ಮಹಾವೀರ್ಯಃ ಸದಾ ದಧಿಮುಖಃ ಕಪಿಃ ।
ಮಾತುಲಃ ಕಪಿಮುಖ್ಯಸ್ಯ ಸುಗ್ರೀವಸ್ಯ ಮಹಾತ್ಮನಃ ॥ ೯

ಆಕಾಶವನ್ನೇ ಮುಚ್ಚಿಬಿಡುವಂತೆ ಕಾಣುತ್ತಿದ್ದರು. ಸಿದ್ಧ ಗಂಧರ್ವಾದಿಗಳು ಹನುಮಂತನನ್ನು ಬಹುಮಾನದಿಂದ ನೋಡುತ್ತಿದ್ದರು. ಕಪಿಗಳೆಲ್ಲರಿಗೂ ಹನುಮಂತನ ಮೇಲೆ ದೃಷ್ಟಿ. ಅವರು ದೃಷ್ಟಿಗಳಿಂದಲೇ ಅವನನ್ನು ಎತ್ತಿ ತರುವಂತೆ ಕಾಣುತ್ತಿತ್ತು (೩–೪). ಅವರೆಲ್ಲರಿಗೂ ಶ್ರೀರಾಮನ ಕಾರ್ಯವು ಸಿದ್ಧಿಸಿಹೋದಂತೆ ನಿಶ್ಚಯ. ಎಲ್ಲರಿಗೂ ಕೀರ್ತಿ ಲಭಿಸಿತೆಂದು ವಿಶ್ವಾಸ. ತಾವು ಸಾಧಿಸಿದ ಕಾರ್ಯಕ್ಕಾಗಿ ಹೆಮ್ಮೆ. ಸೀತೆಯು ಸಿಕ್ಕಿದಳೆಂಬ ಸಂತೋಷದ ಸುದ್ದಿಯನ್ನು ಹೇಳಲು ಉತ್ಸಾಹ. ಯುದ್ಧ ಮಾಡಲು ಒಬ್ಬೊಬ್ಬರಿಗೂ ಕುತೂಹಲ. ರಾಮನು ರಾವಣನಿಗೆ ತಕ್ಕ ಪ್ರತೀಕಾರವನ್ನು ಮಾಡಿಯೇ ತೀರುತ್ತಾನೆಂದು ಪ್ರತಿಯೊಬ್ಬರೂ ನಿಶ್ಚಯಿಸಿ ಬಿಟ್ಟಿದ್ದರು (೫–೬). ಆ ವಾನರರು ಆಕಾಶದಲ್ಲಿ ಹಾರಿಬರುತ್ತಿರುವಾಗ, ನಂದನವನದಂತಿರುವ ಒಂದು ತೋಟವು ಕಾಣಿಸಿತು. ಅದು ಸುಗ್ರೀವನಿಗೆ ಸೇರಿದ ಮನೋಹರವಾದ ಮಧುವನ. ಯಾವ ಪ್ರಾಣಿಯೂ ಅದರ ಒಳಕ್ಕೆ ಹೋಗದಂತೆ ಬಲವಾದ ಕಾವಲಿತ್ತು. ಸುಗ್ರೀವನ ಸೋದರಮಾವನಾದ ದಧಿಮುಖನೆಂಬ ಕಪಿವೀರನೊಬ್ಬನು ಅದನ್ನು ರಕ್ಷಿಸುತ್ತಿದ್ದನು (೭–೯). ಸುಗ್ರೀವನಿಗೆ

ತೇ ತದ್ವನಮುಪಾಗಮ್ಯ ಬಭೂವುಃ ಪರಮೋತ್ಕಟಾಃ ।
ವಾನರಾ ವಾನರೇಂದ್ರಸ್ಯ ಮನಃಕಾಂತತಮಂ ಮಹತ್ ॥ ೧೦

ತತಸ್ತೇ ವಾನರಾ ಹೃಷ್ಟಾ ದೃಷ್ಟ್ವಾ ಮಧುವನಂ ಮಹತ್ ।
ಕುಮಾರಮಭ್ಯಯಾಚಂತ ಮಧೂನಿ ಮಧುಪಿಂಗಲಾಃ ॥ ೧೧

ತತಃ ಕುಮಾರಸ್ತಾನ್ ವೃದ್ಧಾನ್ ಜಾಂಬವತ್ಪ್ರಮುಖಾನ್ ಕಪೀನ್ ।
ಅನುಮಾನ್ಯ ದದೌ ತೇಷಾಂ ನಿಸರ್ಗಂ ಮಧುಭಕ್ಷಣೇ ॥ ೧೨

ತತಶ್ಚಾನುಮತಾಃ ಸರ್ವೇ ಸಂಪ್ರಹೃಷ್ಟಾ ವನೌಕಸಃ ।
ಮುದಿತಾಃ ಪ್ರೇರಿತಾಶ್ಚಾಪಿ ಪ್ರನೃತ್ಯಂತೋಽಭವಂಸ್ತತಃ ॥ ೧೩

ಗಾಯಂತಿ ಕೇಚಿತ್ ಪ್ರಣಮಂತಿ ಕೇಚಿ-
ನ್ನೃತ್ಯಂತಿ ಕೇಚಿತ್ ಪ್ರಹಸಂತಿ ಕೇಚಿತ್ ।
ಪತಂತಿ ಕೇಚಿದ್ವಿಚರಂತಿ ಕೇಚಿತ್
ಪ್ಲವಂತಿ ಕೇಚಿತ್ ಪ್ರಲಪಂತಿ ಕೇಚಿತ್ ॥ ೧೪

ಪರಸ್ಪರಂ ಕೇಚಿದುಪಾಶ್ರಯಂತೇ
ಪರಸ್ಪರಂ ಕೇಚಿದುಪಾಕ್ರಮಂತೇ ।

ಬಹು ಪ್ರಿಯವಾಗಿದ್ದ ಆ ಮಧುವನವನ್ನು ಕಂಡೊಡನೆ ಕಪಿಗಳಿಗೆ ಅಲ್ಲಿ ಜೇನನ್ನು ಕುಡಿಯಬೇಕೆಂದು ಆಸೆಯಾಯಿತು. ಮಧುಪಾನಕ್ಕೆ ಅವಕಾಶ ಕೊಡಬೇಕೆಂದು ಅಂಗದನನ್ನು ಪ್ರಾರ್ಥಿಸಿದರು (೧೦–೧೧). ಅಂಗದಕುಮಾರನು ಜಾಂಬವಂತನೇ ಮೊದಲಾದ ಹಿರಿಯರ ಸಮ್ಮತಿಯನ್ನು ಪಡೆದು, ಕಪಿಗಳಿಗೆ ಮಧುಪಾನಮಾಡಲು ಅನುಮತಿ ಕೊಟ್ಟನು. ಕಪಿಗಳು ಆನಂದದಿಂದ ಉಬ್ಬಿದರು. ಹರ್ಷೋನ್ಮತ್ತರಾಗಿ ಕುಣಿದಾಡಿದರು (೧೨–೧೩). (ಮಧುವನಕ್ಕೆ ದಾಳಿಯಿಟ್ಟು ಜೇನನ್ನು ಕುಡಿದು ಮದವೇರಿದರು) ಆ ಕಪಿಗಳಲ್ಲಿ ಕೆಲವರು ಹಾಡುವರು. ಕೆಲವರು ನಮಸ್ಕಾರ ಮಾಡುವರು. ಕೆಲವರು ಕುಣಿಯುವರು. ಕೆಲವರು ಗಟ್ಟಿಯಾಗಿ ನಗುವರು. ಕೆಲವರು ಧುಮುಕುವರು. ಕೆಲವರು ಓಡುವರು. ಕೆಲವರು ಕುಪ್ಪಳಿಸುವರು. ಕೆಲವರು ಏನನ್ನೋ ಹಲುಬುವರು (೧೪). ಒಬ್ಬರನ್ನೊಬ್ಬರು ಅಪ್ಪಿಕೊಳ್ಳುವರು. ತಳ್ಳುವರು.

ಪರಸ್ಪರಂ ಕೇಚಿದುಪಬ್ರುವಂತೇ
ಪರಸ್ಪರಂ ಕೇಚಿದುಪಾರಮಂತೇ ॥ ೧೫

ದ್ರುಮಾದ್ದ್ರುಮಂ ಕೇಚಿದಭಿದ್ರವಂತಿ
ಕ್ಷಿತೌ ನಗಾಗ್ರಾನ್ನಿಪತಂತಿ ಕೇಚಿತ್ ।
ಮಹೀತಲಾತ್ ಕೇಚಿದುದೀರ್ಣವೇಗಾ
ಮಹಾದ್ರುಮಾಗ್ರಾಣ್ಯಭಿಸಂಪತಂತಿ ॥ ೧೬

ಗಾಯಂತಮನ್ಯಃ ಪ್ರಹಸನ್ನುಪೈತಿ
ಹಸಂತಮನ್ಯಃ ಪ್ರರುದನ್ನುಪೈತಿ ।
ರುದಂತಮನ್ಯಃ ಪ್ರಣದನ್ನುಪೈತಿ
ನದಂತಮನ್ಯಃ ಪ್ರಣದನ್ನುಪೈತಿ ॥ ೧೭

ಸಮಾಕುಲಂ ತತ್ ಕಪಿಸೈನ್ಯಮಾಸೀ-
ನ್ಮಧುಪ್ರಪಾನೋತ್ಕಟಸತ್ತ್ವಚೇಷ್ಟಮ್ ।
ನ ಚಾತ್ರ ಕಶ್ಚಿನ್ನ ಬಭೂವ ಮತ್ತೋ
ನ ಚಾತ್ರ ಕಶ್ಚಿನ್ನ ಬಭೂವ ತೃಪ್ತಃ ॥ ೧೮

ತತೋ ವನಂ ತೈಃ ಪರಿಭಕ್ಷ್ಯಮಾಣಂ
ದ್ರುಮಾಂಶ್ಚ ವಿಧ್ವಂಸಿತಪತ್ರಪುಷ್ಪಾನ್ ।

ಜಗಳವಾಡುವರು. ಆಟವಾಡುವರು. ಕೆಲವರು ಮರದಿಂದ ಮರಕ್ಕೆ ಜಿಗಿಯುತ್ತಿದ್ದರು. ಕೆಲವರು ಮರದಿಂದ ನೆಲಕ್ಕೆ ಹಾರಿಬೀಳುತ್ತಿದ್ದರು. ಕೆಲವರು ನೆಲದಿಂದ ಮರದ ತುದಿಗೆ ಛಟ್ಟನೆ ನೆಗೆಯುತ್ತಿದ್ದರು (೧೫-೧೬). ಒಬ್ಬ ಕಪಿಯು ಹಾಡುವಾಗ ಇನ್ನೊಬ್ಬನು ನಗುತ್ತ ಬಂದು ಮೇಲೆ ಬೀಳುವನು! ಒಬ್ಬನು ನಗುತ್ತಿದ್ದರೆ ಇನ್ನೊಬ್ಬನು ಅಳುತ್ತ ಎದುರಿಗೆ ಬಂದು ನಿಲ್ಲುವನು! ಇನ್ನೊಬ್ಬನು ಅಳುತ್ತಿದ್ದರೆ ಮತ್ತೊಬ್ಬನು ಕೇಕೆ ಹಾಕುತ್ತ ಬಂದು ನಿಲ್ಲುವನು! ಮತ್ತೊಬ್ಬನು ಕೇಕೆ ಹಾಕುತ್ತಿದ್ದರೆ ಮಗದೊಬ್ಬನು ಬಂದು ಅವನನ್ನು ತಳ್ಳುವನು (೧೭). ಹೀಗೆ ಕಪಿಗಳು ಯಥೇಚ್ಛವಾಗಿ ಜೇನನ್ನು ಕುಡಿದು ಮದಿಸಿ ನಾನಾ ಚೇಷ್ಟೆಯನ್ನು ಮಾಡುತ್ತಿದ್ದರು. ಆ

ಸಮೀಕ್ಷ್ಯ ಕೋಪಾದ್ದಧಿವಕ್ತ್ರನಾಮಾ
ನಿವಾರಯಾಮಾಸ ಕಪಿಃ ಕಪೀಂಸ್ತಾನ್ ॥ ೧೯

ಸ ತೈಃ ಪ್ರವೃದ್ಧೈಃ ಪರಿಭರ್ತ್ಸ್ಯಮಾನೋ
ವನಸ್ಯ ಗೋಪ್ತಾ ಹರಿವೀರವೃದ್ಧಃ ।
ಚಕಾರ ಭೂಯೋ ಮತಿಮುಗ್ರತೇಜಾ
ವನಸ್ಯ ರಕ್ಷಾಂ ಪ್ರತಿ ವಾನರೇಭ್ಯಃ ॥ ೨೦

ಉವಾಚ ಕಾಂಶ್ಚಿತ್ ಪರುಷಾಣಿ ಧೃಷ್ಟ-
ಮಸಕ್ತಮನ್ಯಾಂಶ್ಚ ತಲೈರ್ಜಘಾನ ।
ಸಮೇತ್ಯ ಕೈಶ್ಚಿತ್ ಕಲಹಂ ಚಕಾರ
ತಥೈವ ಸಾಮ್ನೋಪಜಗಾಮ ಕಾಂಶ್ಚಿತ್ ॥ ೨೧

ಸ ತೈರ್ಮದಾತ್ ಸಂಪರಿವಾರ್ಯ ವಾಕ್ಯೈ-
ರ್ಬಲಾಚ್ಚ ತೇನ ಪ್ರತಿವಾರ್ಯಮಾಣೈಃ ।
ಪ್ರಧರ್ಷಿತಸ್ತ್ಯಕ್ತಭಯೈಃ ಸಮೇತ್ಯ
ಪ್ರಕೃಷ್ಯತೇ ಚಾಪ್ಯನವೇಕ್ಷ್ಯ ದೋಷಮ್ ॥ ೨೨

ಕಪಿಗಳಲ್ಲಿ ಮದವೇರದವನೇ ಇರಲಿಲ್ಲ. ಕುಡಿದು ತೃಪ್ತನಾಗದವನೂ ಇರಲಿಲ್ಲ. ಕಪಿಗಳು ಮಧುವನದಲ್ಲಿದ್ದ ಫಲಮೂಲಗಳನ್ನು ತಿಂದು, ವೃಕ್ಷಗಳನ್ನೂ ಪತ್ರಪುಷ್ಪಗಳನ್ನೂ ಹಾಳುಮಾಡುತ್ತಿರುವಾಗ ದಧಿಮುಖನೆಂಬ ವಾನರನು ಕೋಪದಿಂದ ಬಂದು ಅವರನ್ನು ತಡೆದನು (೧೮–೧೯). ಆದರೆ ಕೊಬ್ಬಿಹೋಗಿದ್ದ ಆ ಕಪಿಗಳು ವನರಕ್ಷಕನಾದ ದಧಿಮುಖನ ಮಾತನ್ನು ಲಕ್ಷಿಸದೆ ಅವನನ್ನೇ ಗದರಿಸ ತೊಡಗಿದರು. ಮಹಾತೇಜಸ್ವಿಯಾದ ದಧಿಮುಖನು ಹೇಗಾದರೂ ಇವರ ಹಾವಳಿಯನ್ನು ತಡೆದು ಮಧುವನವನ್ನು ರಕ್ಷಿಸಬೇಕೆಂದು ನಿರ್ಧರಿಸಿದನು. ಕೆಲವರನ್ನು ಕಠೋರ ವಾಕ್ಯಗಳಿಂದ ಹೆದರಿಸಿದನು. ಕೆಲವರನ್ನು ಕೈಯಿಂದ ಹೊಡೆದನು. ಕೆಲವರೊಡನೆ ಜಗಳವಾಡಿದನು. ಕೆಲವರಿಗೆ ಒಳ್ಳೆಯ ಮಾತಿನಿಂದ ಬುದ್ಧಿ ಹೇಳಿದನು (೨೦–೨೧). ದಧಿಮುಖನು ಎಷ್ಟು ತಡೆದರೂ ಕೇಳದೆ, ಆ ವಾನರರು ನಿರ್ಭಯವಾಗಿ ಚೇಷ್ಟೆಮಾಡುತ್ತ ತಮ್ಮ ತಪ್ಪನ್ನು ತಿಳಿದುಕೊಳ್ಳದೆ,

ನಖೈಸ್ತುದಂತೋ ದಶನೈರ್ದಶಂತ-
ಸ್ತಲೈಶ್ಚ ಪಾದೈಶ್ಚ ಸಮಾಪಯಂತಃ ।
ಮದಾತ್ ಕಪಿಂ ತಂ ಕಪಯಃ ಸಮಗ್ರಾ
ಮಹಾವನಂ ನಿರ್ವಿಷಯಂ ಚ ಚಕ್ರುಃ ॥ ೨೩

ಇತಿ ಶ್ರೀಮದ್ರಾಮಾಯಣೇ ಸುಂದರಕಾಂಡೇ ಏಕಷಷ್ಟಿತಮಃ ಸರ್ಗಃ

ದ್ವಿಷಷ್ಟಿತಮಃ ಸರ್ಗಃ

ದಧಿಮುಖಖಿಲೀಕಾರಃ

ತಾನುವಾಚ ಹರಿಶ್ರೇಷ್ಠೋ ಹನುಮಾನ್ ವಾನರರ್ಷಭಃ ।
ಅವ್ಯಗ್ರಮನಸೋ ಯೂಯಂ ಮಧು ಸೇವತ ವಾನರಾಃ ॥ ೧
ಅಹಮಾವಾರಯಿಷ್ಯಾಮಿ ಯುಷ್ಮಾಕಂ ಪರಿಪಂಥಿನಃ ।
ಶ್ರುತ್ವಾ ಹನುಮತೋ ವಾಕ್ಯಂ ಹರೀಣಾಂ ಪ್ರವರೋಽಂಗದಃ ॥ ೨

ಒಟ್ಟಾಗಿ ಸೇರಿ ಅವನನ್ನೇ ಎಳೆದಾಡತೊಡಗಿದರು. ಮದವೇರಿದ ಆ ಕಪಿಗಳು ದಧಿಮುಖನನ್ನು ಪರಚಿ, ಕಚ್ಚಿ, ಕೈಯಿಂದ ಹೊಡೆದು, ಕಾಲಿನಿಂದ ಒದೆದು, ಮಧುವನವನ್ನು ಬರಿದುಮಾಡಿಬಿಟ್ಟರು (೨೨–೨೩).

ಇಲ್ಲಿಗೆ ಶ್ರೀಮದ್ರಾಮಾಯಣದ ಸುಂದರಕಾಂಡದಲ್ಲಿ ಅರುವತ್ತೊಂದನೆಯ ಸರ್ಗ

ಸರ್ಗ ೬೨

ಹಿಂದಿನ ಸರ್ಗದ ವಿಷಯವನ್ನು ವಿಸ್ತಾರವಾಗಿ ವರ್ಣಿಸುವುದು. ದಧಿಮುಖನೂ ಇತರ ವನರಕ್ಷಕರೂ ಕಪಿಗಳಿಂದ ಪರಾಜಿತರಾಗಿ ಸುಗ್ರೀವನ ಬಳಿಗೆ ದೂರು ಹೇಳುವುದಕ್ಕಾಗಿ ಹೋಗುವುದು.

ಹನುಮಂತನು ತನ್ನ ಕಡೆಯ ಕಪಿಗಳನ್ನು ಕುರಿತು ''ವಾನರರೆ, ನೀವು ನಿಶ್ಚಿಂತರಾಗಿ ಮಧುವನ್ನು ಕುಡಿಯಿರಿ. ನಿಮಗೆ ಅಡ್ಡಿ ಮಾಡತಕ್ಕವರನ್ನು ನಾನು

ಪ್ರತ್ಯುವಾಚ ಪ್ರಸನ್ನಾತ್ಮಾ ಪಿಬಂತು ಹರಯೋ ಮಧು ।
ಅವಶ್ಯಂ ಕೃತಕಾರ್ಯಸ್ಯ ವಾಕ್ಯಂ ಹನುಮತೋ ಮಯಾ ॥ ೩
ಅಕಾರ್ಯಮಪಿ ಕರ್ತವ್ಯಂ ಕಿಮಂಗ ಪುನರೀದೃಶಮ್ ।
ಅಂಗದಸ್ಯ ಮುಖಾಚ್ಛ್ರುತ್ವಾ ವಚನಂ ವಾನರರ್ಷಭಾಃ ॥ ೪
ಸಾಧು ಸಾಧ್ವಿತಿ ಸಂಹೃಷ್ಟಾ ವಾನರಾಃ ಪ್ರತ್ಯಪೂಜಯನ್ ।
ಪೂಜಯಿತ್ವಾಂಗದಂ ಸರ್ವೇ ವಾನರಾ ವಾನರರ್ಷಭಮ್ ॥ ೫
ಜಗ್ಮುರ್ಮಧುವನಂ ಯತ್ರ ನದೀವೇಗಾ ಇವ ದ್ರುತಮ್ ।
ತೇ ಪ್ರವಿಷ್ಟಾ ಮಧುವನಂ ಪಾಲಾನಾಕ್ರಮ್ಯ ವೀರ್ಯತಃ ॥ ೬
ಅತಿಸರ್ಗಾಚ್ಚ ಪಟವೋ ದೃಷ್ಟ್ವಾ ಶ್ರುತ್ವಾ ಚ ಮೈಥಿಲೀಮ್ ।
ಪಪುಃ ಸರ್ವೇ ಮಧು ತದಾ ರಸವತ್ಫಲಮಾದದುಃ ॥ ೭
ಉತ್ಪತ್ಯ ಚ ತತಃ ಸರ್ವೇ ವನಪಾಲಾನ್ ಸಮಾಗತಾನ್ ।
ತಾಡಯಂತಿ ಸ್ಮ ಶತಶಃ ಸಕ್ತಾನ್ ಮಧುವನೇ ತದಾ ॥ ೮
ಮಧೂನಿ ದ್ರೋಣಮಾತ್ರಾಣಿ ಬಾಹುಭಿಃ ಪರಿಗೃಹ್ಯ ತೇ ।
ಪಿಬಂತಿ ಸಹಿತಾಃ ಸರ್ವೇ ನಿಘ್ನಂತಿ ಸ್ಮ ತಥಾಪರೇ ॥ ೯

ನೋಡಿಕೊಳ್ಳುತ್ತೇನೆ'' ಎಂದನು. ಆ ಮಾತನ್ನು ಕೇಳಿ ಅಂಗದನು ''ಅವಶ್ಯವಾಗಿ ಕಪಿಗಳು ಮಧುವನ್ನು ಕುಡಿಯಲಿ. ನಮ್ಮ ಕಾರ್ಯವನ್ನು ಸಾಧಿಸಿದವನೇ ಹನುಮಂತನು (೧–೩). ಅವನು ಒಂದು ಅಕಾರ್ಯವನ್ನು ಮಾಡಬೇಕೆಂದರೂ ನಾವು ಮಾಡಬೇಕು. ಹೀಗಿರುವಾಗ ಮಧುಪಾನದ ವಿಷಯದಲ್ಲಿ ಹೇಳಬೇಕಾದ್ದೇನು?'' ಎಂದನು. ಅಂಗದನ ಮುಖದಿಂದ ಈ ಮಾತು ಬಂದಕೂಡಲೇ ಕಪಿಗಳೆಲ್ಲರೂ 'ಭಲೆ ! ಭಲೆ !' ಎಂದು ಕೂಗುತ್ತ, ಅಂಗದನನ್ನು ಅಭಿನಂದಿಸಿದರು. (೪–೫). ಕೂಡಲೇ ನದಿಪ್ರವಾಹದಂತೆ ರಭಸದಿಂದ ಮಧುವನಕ್ಕೆ ನುಗ್ಗಿದರು. ಅವರಿಗೆ ಸೀತಾವೃತ್ತಾಂತವನ್ನು ತಿಳಿದುಬಂದೆವೆಂಬ ಜಂಬದೊಡನೆ ಮಧುವನ್ನು ಕುಡಿಯಲು ಅಂಗದನ ಅನುಮತಿಯೂ ಸಿಕ್ಕಿತು. ಅವರು ತೋಟದ ಕಾವಲುಗಾರರನ್ನು ಹೊಡೆದೋಡಿಸಿ ಹಣ್ಣುಗಳನ್ನು ಯಥೇಚ್ಛವಾಗಿ ತಿಂದು ಜೇನನ್ನು ಕುಡಿದರು (೬–೮). ದೊಡ್ಡ ದೊಡ್ಡ ಜೇನಿನ ಗೂಡುಗಳನ್ನು ಕಿತ್ತು ಜೇನನ್ನು ಬಾಯಿಗೆ

ಕೇಚಿತ್ ಪೀತ್ವಾಪವಿಧ್ಯಂತಿ ಮಧೂನಿ ಮಧುಪಿಂಗಲಾಃ ।
ಮಧೂಚ್ಛಿಷ್ಟೇನ ಕೇಚಿಚ್ಚ ಜಘ್ನುರನ್ಯೋನ್ಯಮುತ್ಕಟಾಃ ॥ ೧೦

ಅಪರೇ ವೃಕ್ಷಮೂಲೇ ತು ಶಾಖಾಂ ಗೃಹ್ಯ ವ್ಯವಸ್ಥಿತಾಃ ।
ಅತ್ಯರ್ಥಂ ಚ ಮದಗ್ಲಾನಾಃ ಪರ್ಣಾನ್ಯಾಸ್ತೀರ್ಯ ಶೇರತೇ ॥ ೧೧

ಉನ್ಮತ್ತಭೂತಾಃ ಪ್ಲವಗಾ ಮಧುಮತ್ತಾಶ್ಚ ಹೃಷ್ಟವತ್ ।
ಕ್ಷಿಪಂತಿ ಚ ತದಾನ್ಯೋನ್ಯಂ ಸ್ಖಲಂತಿ ಚ ತಥಾಪರೇ ॥ ೧೨

ಕೇಚಿತ್ ಕ್ಷ್ವೇಲಾಂ ಪ್ರಕುರ್ವಂತಿ ಕೇಚಿತ್ ಕೂಜಂತಿ ಹೃಷ್ಟವತ್ ।
ಹರಯೋ ಮಧುನಾ ಮತ್ತಾಃ ಕೇಚಿತ್ ಸುಪ್ತಾ ಮಹೀತಲೇ ॥ ೧೩

ಕೃತ್ವಾ ಕಿಂಚಿದ್ಧಸಂತ್ಯನ್ಯೇ ಕೇಚಿತ್ ಕುರ್ವಂತಿ ಚೇತರತ್ ।
ಕೃತ್ವಾ ಕಿಂಚಿದ್ವದಂತ್ಯನ್ಯೇ ಕೇಚಿದ್ಬುಧ್ಯಂತಿ ಚೇತರತ್ ॥ ೧೪

ಯೇಽಪ್ಯತ್ರ ಮಧುಪಾಲಾಃ ಸ್ಯುಃ ಪ್ರೇಷ್ಯಾ ದಧಿಮುಖಸ್ಯ ತು ।
ತೇಽಪಿ ತೈರ್ವಾನರೈರ್ಭೀಮೈಃ ಪ್ರತಿಷಿದ್ಧಾ ದಿಶೋ ಗತಾಃ ॥ ೧೫

ಹಿಂಡಿಕೊಂಡು ಗೂಡುಗಳನ್ನು ಎಸೆದರು. ಕೆಲವರು ಬೇಕಾದಷ್ಟು ಕುಡಿದು ಉಳಿದ ಜೇನನ್ನು ಚೆಲ್ಲಿದರು. ಕೆಲವರು ಜೇನಿನ ತಟ್ಟುಗಳಿಂದ ಹೊಡೆದಾಡಿದರು. ಮಧುಪಾನದಿಂದ ಮದವೇರಿ ಕೆಲವು ಕಪಿಗಳು ಮರದ ಕೊಂಬೆಗಳನ್ನು ಹಿಡಿದು ನಿಂತರು. ಕೆಲವರು ಎಲೆಗಳನ್ನು ಹಾಸಿ ಮಲಗಿಬಿಟ್ಟರು! (೯–೧೧). ಕೆಲವರು ಕುಡಿದು ಹುಚ್ಚರಂತಾಗಿ ಒಬ್ಬರನ್ನೊಬ್ಬರು ತಳ್ಳುತ್ತ ಎಡವುತ್ತ ಇದ್ದರು. ಕೆಲವರು ಸಿಂಹನಾದ ಮಾಡುವರು. ಕೆಲವರು ಕಿಲಕಿಲ ಶಬ್ದಮಾಡುವರು. ಕೆಲವರು ನೆಲದಮೇಲೆಯೇ ಮಲಗಿಬಿಡುವರು (೧೨–೧೩). ಏನಾದರೂ ಚೇಷ್ಟೆಮಾಡಿ ನಗತಕ್ಕವರು ಕೆಲವರು ! ಅಳತಕ್ಕವರು ಕೆಲವರು ! ಒಂದನ್ನು ಮಾಡಿ ಇನ್ನೊಂದನ್ನು ಹೇಳತಕ್ಕವರು ಕೆಲವರು. ಏನನ್ನೋ ಹೇಳಿದರೆ ಇನ್ನೇನನ್ನೋ ತಿಳಿದುಕೊಳ್ಳತಕ್ಕವರು ಕೆಲವರು ! ದಧಿಮುಖನ ಪರಿಚಾರಕರು ತಮಗೆ ಅಡ್ಡಿಮಾಡಿದರೆ ಈ ಭಯಂಕರ ಕಪಿಗಳು ಅವರನ್ನು ಹೊಡೆದೋಡಿಸುತ್ತಿದ್ದರು (೧೪–೧೫).

ಜಾನುಭಿಸ್ತು ಪ್ರಕೃಷ್ಟಾಶ್ಚ ದೇವಮಾರ್ಗಂ ಚ ದರ್ಶಿತಾಃ ।
ಅಬ್ರುವನ್ ಪರಮೋದ್ವಿಗ್ನಾ ಗತ್ವಾ ದಧಿಮುಖಂ ವಚಃ ॥ ೧೬

ಹನೂಮತಾ ದತ್ತವರೈರ್ಹತಂ ಮಧುವನಂ ಬಲಾತ್ ।
ವಯಂ ಚ ಜಾನುಭಿಃ ಕೃಷ್ಟಾ ದೇವಮಾರ್ಗಂ ಚ ದರ್ಶಿತಾಃ ॥ ೧೭

ತತೋ ದಧಿಮುಖಃ ಕ್ರುದ್ಧೋ ವನಪಸ್ತತ್ರ ವಾನರಃ ।
ಹತಂ ಮಧುವನಂ ಶ್ರುತ್ವಾ ಸಾಂತ್ವಯಾಮಾಸ ತಾನ್ ಹರೀನ್ ॥ ೧೮
ಇಹಾಗಚ್ಛತ ಗಚ್ಛಾಮೋ ವಾನರಾನ್ ಬಲದರ್ಪಿತಾನ್ ।
ಬಲೇನ ವಾರಯಿಷ್ಯಾಮೋ ಮಧು ಭಕ್ಷಯತೋ ವಯಮ್ ॥ ೧೯

ಶ್ರುತ್ವಾ ದಧಿಮುಖಸ್ಯೇದಂ ವಚನಂ ವಾನರರ್ಷಭಾಃ ।
ಪುನರ್ವೀರಾ ಮಧುವನಂ ತೇನೈವ ಸಹಿತಾ ಯಯುಃ ॥ ೨೦

ಮಧ್ಯೇ ಚೈಷಾಂ ದಧಿಮುಖಃ ಪ್ರಗೃಹ್ಯ ತರಸಾ ತರುಮ್ ।
ಸಮಭ್ಯಧಾವದ್ವೇಗೇನ ತೇ ಚ ಸರ್ವೇ ಪ್ಲವಂಗಮಾಃ ॥ ೨೧

ಕೆಲವರು ವನಪಾಲಕರನ್ನು ಮೊಳಕಾಲುಗಳಲ್ಲಿ ಹಿಡಿದೆಳೆದು ಬೀಳಿಸಿ, ಅವರಿಗೆ ತಮ್ಮ ಅಪಾನದ್ವಾರಗಳನ್ನು ತೋರಿಸಿ ಹಂಗಿಸಿದರು. ಆಗ ವನಪಾಲಕರು ದುಃಖಿತರಾಗಿ ದಧಿಮುಖನ ಹತ್ತಿರ ''ಸ್ವಾಮಿ, ಹನುಮಂತನ ಸಹಾಯಬಲದಿಂದ ಆ ಕಪಿಗಳು ನಮ್ಮ ಮಧುವನವನ್ನು ನಾಶಮಾಡಿಬಿಟ್ಟರು. ನಾವು ತಡೆಯುವುದಕ್ಕೆ ಹೋದರೆ, ನಮ್ಮ ಮೊಣಕಾಲುಗಳನ್ನು ಹಿಡಿದೆಳೆದು ತಮ್ಮ ಅಪಾನದ್ವಾರಗಳನ್ನು ತೋರಿಸಿ ಹಂಗಿಸುತ್ತಾರೆ'' ಎಂದು ದೂರು ಹೇಳಿದರು (೧೬–೧೭). ಆಗ ದಧಿ ಮುಖನಿಗೆ ಬಹಳ ಕೋಪ ಉಂಟಾಯಿತು. ಅವನು ವನಪಾಲಕರಾದ ಆ ಕಪಿಗಳನ್ನು ಸಮಾಧಾನಪಡಿಸಿ ನನ್ನೊಡನೆ ಬನ್ನಿರಿ. ಹೋಗೋಣ. ಮಧುವನ್ನು ಕುಡಿಯುತ್ತಿರುವ ಆ ಸೊಕ್ಕಿದ ಕಪಿಗಳನ್ನು ಬಲಾತ್ಕಾರದಿಂದ ತಡೆಯೋಣ'' ಎಂದನು (೧೮–೧೯). ದಧಿಮುಖನ ಮಾತನ್ನು ಕೇಳಿ ಆ ವೀರರೆಲ್ಲರೂ ಒಟ್ಟುಗೂಡಿ ಮತ್ತೆ ಮಧುವನಕ್ಕೆ ಬಂದರು. ದಧಿಮುಖನು ಮರವೊಂದನ್ನು ಕಿತ್ತು ಹಿಡಿದುಕೊಂಡನು. ಉಳಿದ ಕಪಿಗಳು ಬಂಡೆ, ಮರ, ಬೆಟ್ಟಗಳನ್ನು ಕಿತ್ತು

ತೇ ಶಿಲಾಃ ಪಾದಪಾಂಶ್ಚಾಪಿ ಪರ್ವತಾಂಶ್ಚಾಪಿ ವಾನರಾಃ ।
ಗೃಹೀತ್ವಾಭ್ಯಗಮನ್ ಕ್ರುದ್ಧಾ ಯತ್ರ ತೇ ಕಪಿಕುಂಜರಾಃ ॥ ೨೨

ತೇ ಸ್ವಾಮಿವಚನಂ ವೀರಾ ಹೃದಯೇಷ್ವವಸಜ್ಯ ತತ್ ।
ತ್ವರಯಾ ಹ್ಯಭ್ಯಧಾವಂತ ಸಾಲತಾಲಶಿಲಾಯುಧಾಃ ॥ ೨೩

ವೃಕ್ಷಸ್ಥಾಂಶ್ಚ ತಲಾಸ್ಥಾಂಶ್ಚ ವಾನರಾನ್ ಬಲದರ್ಪಿತಾನ್ ।
ಅಭ್ಯಕ್ರಾಮಂಸ್ತತೋ ವೀರಾಃ ಪಾಲಾಸ್ತತ್ರ ಸಹಸ್ರಶಃ ॥ ೨೪

ಅಥ ದೃಷ್ಟ್ವಾ ದಧಿಮುಖಂ ಕ್ರುದ್ಧಂ ವಾನರಪುಂಗವಾಃ ।
ಅಭ್ಯಧಾವಂತ ವೇಗೇನ ಹನುಮತ್ಪ್ರಮುಖಾಸ್ತದಾ ॥ ೨೫

ತಂ ಸವೃಕ್ಷಂ ಮಹಾಬಾಹುಮಾಪತಂತಂ ಮಹಾಬಲಮ್ ।
ಆರ್ಯಕಂ ಪ್ರಾಹರತ್ತತ್ರ ಬಾಹುಭ್ಯಾಂ ಕುಪಿತೋಽಂಗದಃ ॥ ೨೬

ಮದಾಂಧಶ್ಚ ನ ವೇದೈನಮಾರ್ಯಕೋಽಯಂ ಮಮೇತಿ ಸಃ ।
ಅಥೈನಂ ನಿಷ್ಪಿಪೇಷಾಶು ವೇಗವದ್ವಸುಧಾತಲೇ ॥ ೨೭

ಹಿಡಿದುಕೊಂಡರು. ಎಲ್ಲರೂ ಸೇರಿ ಮಧುವನವನ್ನು ನಾಶಮಾಡುತ್ತಿದ್ದ ಕಪಿಗಳನ್ನು ಅಟ್ಟಿಸಿಕೊಂಡು ಬಂದರು (೨೦–೨೨). ವನಪಾಲಕರು ತಮ್ಮ ಒಡೆಯನ ಆಜ್ಞೆಯಂತೆ ಸಾಲವೃಕ್ಷ ಮೊದಲಾದವುಗಳನ್ನು ಹಿಡಿದು, ಮರದಮೇಲೆಯೂ ನೆಲದಮೇಲೆಯೂ ನಿಂತು ಹಾವಳಿ ಮಾಡುತ್ತಿದ್ದ ಕಪಿಗಳನ್ನು ಹೊಡೆಯ ಲಾರಂಭಿಸಿದರು. ದಧಿಮುಖನೇ ಕೋಪದಿಂದ ನುಗ್ಗಿಬರುತ್ತಿರುವುದನ್ನು ಕಂಡು ಹನುಮಂತನೇ ಮೊದಲಾದ ಕಪಿನಾಯಕರು ಅಲ್ಲಿಗೆ ಓಡಿಬಂದರು (೨೩–೨೫). ಆಗ ವೃಕ್ಷವನ್ನು ಎತ್ತಿ ಹಿಡಿದು ನುಗ್ಗಿ ಬರುತ್ತಿದ್ದ ಬಲಾಢ್ಯನಾದ ದಧಿಮುಖನನ್ನು ಕಂಡು ಕುಪಿತನಾದ ಅಂಗದನು ತನ್ನ ಕೈಗಳಿಂದಲೇ ಅವನನ್ನು ಅಪ್ಪಳಿಸಿ ಹೊಡೆದನು. ಅಂಗದನು ಮಧುಪಾನದಿಂದ ಮದವೇರಿದ್ದನು. ದಧಿಮುಖನು (ಸುಗ್ರೀವನಿಗೆ ಸೋದರಮಾವನಾದ್ದರಿಂದ) ತನಗೆ ಪೂಜ್ಯನೆಂಬುದನ್ನು ಅಂಗದನು ಗಮನಿಸಲಿಲ್ಲ. ಅವನು ದಧಿಮುಖನನ್ನು ಎತ್ತಿ ನೆಲದಮೇಲೆ ಬಲವಾಗಿ ಕುಕ್ಕಿಬಿಟ್ಟನು (೨೬–೨೭).

ಸ ಭಗ್ನಬಾಹೂರುಭುಜೋ ವಿಹ್ವಲಃ ಶೋಣಿತೋಕ್ಷಿತಃ ।
ಮುಮೋಹ ಸಹಸಾ ವೀರೋ ಮುಹೂರ್ತಂ ಕಪಿಕುಂಜರಃ ॥ ೨೮

ಸ ಸಮಾಶ್ವಸ್ಯ ಸಹಸಾ ಸಂಕ್ರುದ್ಧೋ ರಾಜಮಾತುಲಃ ।
ವಾನರಾನ್ ವಾರಯಾಮಾಸ ದಂಡೇನ ಮಧುಮೋಹಿತಾನ್ ॥ ೨೯

ಸ ಕಥಂಚಿದ್ವಿಮುಕ್ತಸ್ತೈರ್ವಾನರೈರ್ವಾನರರ್ಷಭಃ ।
ಉವಾಚೈಕಾಂತಮಾಶ್ರಿತ್ಯ ಭೃತ್ಯಾನ್ ಸ್ವಾನ್ ಸಮುಪಾಗತಾನ್ ॥ ೩೦

ಏತೇ ತಿಷ್ಠಂತು ಗಚ್ಛಾಮೋ ಭರ್ತಾ ನೋ ಯತ್ರ ವಾನರಃ ।
ಸುಗ್ರೀವೋ ವಿಪುಲಗ್ರೀವಃ ಸಹ ರಾಮೇಣ ತಿಷ್ಠತಿ ॥ ೩೧

ಸರ್ವಂ ಚೈವಾಂಗದೇ ದೋಷಂ ಶ್ರಾವಯಿಷ್ಯಾಮಿ ಪಾರ್ಥಿವೇ ।
ಅಮರ್ಷೀ ವಚನಂ ಶ್ರುತ್ವಾ ಘಾತಯಿಷ್ಯತಿ ವಾನರಾನ್ ॥ ೩೨

ಇಷ್ಟಂ ಮಧುವನಂ ಹ್ಯೇತತ್ ಸುಗ್ರೀವಸ್ಯ ಮಹಾತ್ಮನಃ ।
ಪಿತೃಪೈತಾಮಹಂ ದಿವ್ಯಂ ದೇವೈರಪಿ ದುರಾಸದಮ್ ॥ ೩೩

ಸ ವಾನರಾನಿಮಾನ್ ಸರ್ವಾನ್ ಮಧುಲುಬ್ಧಾನ್ ಗತಾಯುಷಃ ।
ಘಾತಯಿಷ್ಯತಿ ದಂಡೇನ ಸುಗ್ರೀವಃ ಸಸುಹೃಜ್ಜನಾನ್ ॥ ೩೪

ದಧಿಮುಖನ ತೋಳು, ತೊಡೆ, ಹೆಗಲುಗಳು ಗಾಯಗೊಂಡು ಮೈಯೆಲ್ಲಾ ರಕ್ತಮಯವಾಯಿತು. ಸ್ವಲ್ಪಹೊತ್ತು ಅವನಿಗೆ ಎಚ್ಚರ ತಪ್ಪಿತು. ಆಮೇಲೆ ಚೇತರಿಸಿಕೊಂಡೆದ್ದು ಕ್ರುದ್ಧನಾದನು. ಅವನು ದೊಣ್ಣೆಯನ್ನು ಹಿಡಿದುಕೊಂಡು ಮಧುಮತ್ತರಾದ ಕಪಿಗಳನ್ನು ಅಡ್ಡಗಟ್ಟಿದನು (೨೮–೨೯). ಆದರೆ ಅಂಗದಾದಿ ಕಪಿನಾಯಕರ ಎದುರಿಗೆ ನಿಲ್ಲಲಾರದೆ ಹೇಗೋ ತಪ್ಪಿಸಿಕೊಂಡು ಹೋದನು. ಏಕಾಂತದಲ್ಲಿ ತನ್ನ ಸೇವಕರನ್ನು ಕರೆದು "ಈ ಕಪಿಗಳು ಹೀಗೇ ಇರಲಿ; ಈಗ ಸುಗ್ರೀವನು ಶ್ರೀರಾಮನೊಡನೆ ಇರತಕ್ಕ ಸ್ಥಳಕ್ಕೆ ಹೋಗೋಣ. ಇದೆಲ್ಲಾ ಅಂಗದನ ತಪ್ಪು ಎಂದು ಮಹಾರಾಜನಿಗೆ ತಿಳಿಸುತ್ತೇನೆ. ಸುಗ್ರೀವನಿಗೆ ಕೋಪ ಬಂದು ಈ ಕಪಿಗಳನ್ನೆಲ್ಲಾ ಕೊಲ್ಲಿಸಿಬಿಡುತ್ತಾನೆ (೩೦–೩೨). ಈ ಮಧುವನವೆಂದರೆ ಮಹಾತ್ಮನಾದ ಸುಗ್ರೀವನಿಗೆ ಬಹಳ ಪ್ರೀತಿ. ವಂಶಪರಂಪರೆಯಿಂದ ಈ ತೋಟ ಅವನಿಗೆ ಸೇರಿದೆ. ದಿವ್ಯವಾದ ಈ ವನಕ್ಕೆ ದೇವತೆಗಳಿಗೂ ಪ್ರವೇಶಿಸುವುದು ಸಾಧ್ಯವಿಲ್ಲ.

ವಧ್ಯಾ ಹ್ಯೇತೇ ದುರಾತ್ಮಾನೋ ನೃಪಾಜ್ಞಾಪರಿಭಾವಿನಃ ।
ಅಮರ್ಷಪ್ರಭವೋ ರೋಷಃ ಸಫಲೋ ನೋ ಭವಿಷ್ಯತಿ ॥ ೩೫

ಏವಮುಕ್ತ್ವಾ ದಧಿಮುಖೋ ವನಪಾಲಾನ್ ಮಹಾಬಲಃ ।
ಜಗಾಮ ಸಹಸೋತ್ಪತ್ಯ ವನಪಾಲೈಃ ಸಮನ್ವಿತಃ ॥ ೩೬

ನಿಮೇಷಾಂತರಮಾತ್ರೇಣ ಸ ಹಿ ಪ್ರಾಪ್ತೋ ವನಾಲಯಃ ।
ಸಹಸ್ರಾಂಶುಸುತೋ ಧೀಮಾನ್ ಸುಗ್ರೀವೋ ಯತ್ರ ವಾನರಃ ॥ ೩೭

ರಾಮಂ ಚ ಲಕ್ಷ್ಮಣಂ ಚೈವ ದೃಷ್ಟ್ವಾ ಸುಗ್ರೀವಮೇವ ಚ ।
ಸಮಪ್ರತಿಷ್ಠಾಂ ಜಗತೀಮಾಕಾಶಾನ್ನಿಪಪಾತ ಹ ॥ ೩೮

ಸಂನಿಪತ್ಯ ಮಹಾವೀರ್ಯಃ ಸರ್ವೈಸ್ತೈಃ ಪರಿವಾರಿತಃ ।
ಹರಿರ್ದಧಿಮುಖಃ ಪಾಲೈಃ ಪಾಲಾನಾಂ ಪರಮೇಶ್ವರಃ ॥ ೩೯

ಸ ದೀನವದನೋ ಭೂತ್ವಾ ಕೃತ್ವಾ ಶಿರಸಿ ಚಾಂಜಲಿಮ್ ।
ಸುಗ್ರೀವಸ್ಯ ಶುಭೌ ಮೂರ್ಧ್ನಾ ಚರಣೌ ಪ್ರತ್ಯಪೀಡಯತ್ ॥ ೪೦

ಇತಿ ಶ್ರೀಮದ್ರಾಮಾಯಣೇ ಸುಂದರಕಾಂಡೇ ದ್ವಿಷಷ್ಟಿತಮಃ ಸರ್ಗಃ

ಜೇನಿನ ಆಸೆಗೆ ನುಗ್ಗಿಬಂದಿರುವ ಈ ಕಪಿಗಳಿಗೆಲ್ಲಾ ಆಯುಸ್ಸು ತೀರಿತೆಂದೇ ಭಾವಿಸಬೇಕು. ಇವರೆಲ್ಲರಿಗೂ ಸುಗ್ರೀವನು ಮರಣದಂಡನೆಯನ್ನು ವಿಧಿಸುವನು (೩೩–೩೪). ರಾಜಾಜ್ಞೆಯನ್ನು ಧಿಕ್ಕರಿಸುವ ಈ ದುರಾತ್ಮರಿಗೆ ವಧೆಯೇ ಸರಿಯಾದ ಶಿಕ್ಷೆ. ಆಗಲೇ ನಮಗೆ ಇವರ ಮೇಲಿನ ಸೇಡು ಸಫಲವಾಗುವುದು'' ಎಂದನು. ದಧಿಮುಖನು ಹೀಗೆ ಹೇಳಿ ಆ ವನಪಾಲಕರನ್ನು ಜೊತೆಯಲ್ಲಿ ಕರೆದುಕೊಂಡು ಒಂದು ನಿಮಿಷಮಾತ್ರದಲ್ಲಿ ಸೂರ್ಯಪುತ್ರನಾದ ಸುಗ್ರೀವನಿರುವ ಸ್ಥಳಕ್ಕೆ ಹಾರಿ ಹೊರಟು ಹೋದನು (೩೫–೩೭). ಅಲ್ಲಿ ಶ್ರೀರಾಮ, ಲಕ್ಷ್ಮಣ, ಸುಗ್ರೀವರು ಒಂದೆಡೆಯಲ್ಲಿರುವುದನ್ನು ಕಂಡು ಆಕಾಶ ಮಾರ್ಗವಾಗಿ ಸಮಭೂಮಿಯಲ್ಲಿಳಿದನು. ಮಹಾವೀರನಾಗಿದ್ದ ದಧಿಮುಖನು ವನಪಾಲಕರಿಗೆಲ್ಲಾ ಪ್ರಭುವಾಗಿದ್ದನು. ಅವನು ತನ್ನ ಭೃತ್ಯರೊಡನೆ ತಲೆಯಮೇಲೆ ಕೈ ಜೋಡಿಸಿಕೊಂಡು ದೈನ್ಯಭಾವದಿಂದ ಮುಂದೆ ಬಂದು ಸುಗ್ರೀವನ ಪಾದಗಳನ್ನು ಮುಟ್ಟಿ ನಮಸ್ಕರಿಸಿದನು (೩೮–೪೦).

ಇಲ್ಲಿಗೆ ಶ್ರೀಮದ್ರಾಮಾಯಣದ ಸುಂದರಕಾಂಡದಲ್ಲಿ ಅರುವತ್ತೆರಡನೆಯ ಸರ್ಗ

ತ್ರಿಷಷ್ಠಿತಮಃ ಸರ್ಗಃ

ಸುಗ್ರೀವಹರ್ಷಃ

ತತೋ ಮೂರ್ಧ್ನಾ ನಿಪತಿತಂ ವಾನರಂ ವಾನರರ್ಷಭಃ ।
ದೃಷ್ಟ್ವೈವೋದ್ವಿಗ್ನಹೃದಯೋ ವಾಕ್ಯಮೇತದುವಾಚ ಹ ॥ ೧

ಉತ್ತಿಷ್ಠೋತ್ತಿಷ್ಠ ಕಸ್ಮಾತ್ತ್ವಂ ಪಾದಯೋಃ ಪತಿತೋ ಮಮ ।
ಅಭಯಂ ತೇ ಭಯಂ ವೀರ ಸರ್ವಮೇವಾಭಿಧೀಯತಾಮ್ ॥ ೨

ಸ ತು ವಿಶ್ವಾಸಿತಸ್ತೇನ ಸುಗ್ರೀವೇಣ ಮಹಾತ್ಮನಾ ।
ಉತ್ಥಾಯ ಸುಮಹಾಪ್ರಾಜ್ಞೋ ವಾಕ್ಯಂ ದಧಿಮುಖೋಽಬ್ರವೀತ್ ॥ ೩

ನೈವರ್ಕ್ಷರಜಸಾ ರಾಜನ್ನ ತ್ವಯಾ ನಾಪಿ ವಾಲಿನಾ ।
ವನಂ ನಿಸೃಷ್ಟಪೂರ್ವಂ ಹಿ ಭಕ್ಷಿತಂ ತಚ್ಚ ವಾನರೈಃ ॥ ೪

ಏಭಿಃ ಪ್ರಧರ್ಷಿತಾಶ್ಚೈವ ವಾನರಾ ವನರಕ್ಷಿಭಿಃ ।
ಮಧೂನ್ಯಚಿಂತಯಿತ್ವೇಮಾನ್ ಭಕ್ಷಯಂತಿ ಪಿಬಂತಿ ಚ ॥ ೫

ಸರ್ಗ ೬೩

ದಧಿಮುಖನು ಸುಗ್ರೀವನಿಗೆ ಮಧುವನದ ಭಂಗವನ್ನು ತಿಳಿಸುವುದು. ಅಂಗದಾದಿ ವಾನರರು ಸೀತಾದರ್ಶನಮಾಡಿ ಬಂದಿದ್ದಾರೆಂದು ಊಹಿಸಿ, ಸುಗ್ರೀವನು ಅವರೆಲ್ಲರನ್ನೂ ಬೇಗನೆ ಕಳುಹಿಸುವಂತೆ ದಧಿಮುಖನಿಗೆ ಹೇಳುವುದು.

ಹೀಗೆ ತಲೆಬಾಗಿ ಪಾದಕ್ಕೆ ಬಿದ್ದ ದಧಿಮುಖನನ್ನು ನೋಡಿ ಸುಗ್ರೀವನಿಗೆ ಕಳವಳ ವಾಯಿತು. ''ಹೇ ವೀರಾಗ್ರಣಿ, ಏಳು ಏಳು-ನನ್ನ ಕಾಲಿಗೆ ಬೀಳುವುದೇಕೆ ? ಹೆದರ ಬೇಡ. ಎಲ್ಲಾ ಸಂಗತಿಯನ್ನೂ ತಿಳಿಸು'' ಎಂದನು(೧–೨). ಆದರಿಂದ ಕೊಂಚ ಸಮಾಧಾನಗೊಂಡ ದಧಿಮುಖನು ಎದ್ದುನಿಂತು ''ಮಹಾರಾಜ, ನಿನ್ನ ತಂದೆ ಯಾದ ಋಕ್ಷರಜಸ್ಸಾಗಲಿ ನೀನಾಗಲಿ ವಾಲಿಯಾಗಲಿ ಮಧುವನದಲ್ಲಿ ಯಥೇಚ್ಛ ವಾಗಿ ವಿಹರಿಸಬಹುದೆಂದು ಯಾರಿಗೂ ಅನುಜ್ಞೆಯನ್ನು ಕೊಟ್ಟಿರಲಿಲ್ಲ. ಅಂತಹ ತೋಟಗಳನ್ನು ಈಗ ಕಪಿಗಳು ತಿಂದು ತೇಗಿಬಿಟ್ಟರು. (೩–೪). ನಮ್ಮ ಕಾವಲು ಗಾರರು ಎಷ್ಟು ತಡೆದರೂ ತಲೆಗೆ ಹಚ್ಚಿಕೊಳ್ಳದೆ, ಹಣ್ಣುಗಳನ್ನು ತಿಂದು ಮಧುವನ್ನು

ಶಿಷ್ಟಮತ್ರಾಪವಿಧ್ಯಂತಿ ಭಕ್ಷಯಂತಿ ತಥಾಪರೇ ।
ನಿವಾರ್ಯಮಾಣಾಸ್ತೇ ಸರ್ವೇ ಭ್ರುಕುಟಿಂ ದರ್ಶಯಂತಿ ಹಿ ॥ ೬
ಇಮೇ ಹಿ ಸಂರಬ್ಧತರಾಸ್ತಥಾ ತೈಃ ಸಂಪ್ರಧರ್ಷಿತಾಃ ।
ವಾರಯಂತೋ ವನಾತ್ತಸ್ಮಾತ್ ಕ್ರುದ್ಧೈರ್ವಾನರಪುಂಗವೈಃ ॥ ೭
ತತಸ್ತೈರ್ಬಹುಭಿರ್ವೀರೈರ್ವಾನರೈರ್ವಾನರರ್ಷಭ ।
ಸಂರಕ್ತನಯನೈಃ ಕ್ರೋಧಾದ್ಧರಯಃ ಪ್ರವಿಚಾಲಿತಾಃ ॥ ೮
ಪಾಣಿಭಿರ್ನಿಹತಾಃ ಕೇಚಿತ್ ಕೇಚಿಜ್ಜಾನುಭಿರಾಹತಾಃ ।
ಪ್ರಕೃಷ್ಟಾಶ್ಚ ಯಥಾಕಾಮಂ ದೇವಮಾರ್ಗಂ ಚ ದರ್ಶಿತಾಃ ॥ ೯
ಏವಮೇತೇ ಹತಾಃ ಶೂರಾಸ್ತ್ವಯಿ ತಿಷ್ಠತಿ ಭರ್ತರಿ ।
ಕೃತ್ಸ್ನಂ ಮಧುವನಂ ಚೈವ ಪ್ರಕಾಮಂ ತೈಃ ಪ್ರಭಕ್ಷ್ಯತೇ ॥ ೧೦
ಏವಂ ವಿಜ್ಞಾಪ್ಯಮಾನಂ ತು ಸುಗ್ರೀವಂ ವಾನರರ್ಷಭಮ್ ।
ಅಪೃಚ್ಛತ್ತಂ ಮಹಾಪ್ರಾಜ್ಞೋ ಲಕ್ಷ್ಮಣಃ ಪರವೀರಹಾ ॥ ೧೧
ಕಿಮಯಂ ವಾನರೋ ರಾಜನ್ ವನಪಃ ಪ್ರತ್ಯುಪಸ್ಥಿತಃ ।
ಕಂ ಚಾರ್ಥಮಭಿನಿರ್ದಿಶ್ಯ ದುಃಖಿತೋ ವಾಕ್ಯಮಬ್ರವೀತ್ ॥ ೧೨

ಕುಡಿಯುತ್ತಲೇ ಇದ್ದಾರೆ. ಕೆಲವನ್ನು ಚೆಲ್ಲುತ್ತಾರೆ. ಕೆಲವನ್ನು ತಿನ್ನುತ್ತಾರೆ. ನಾವು ಅಡ್ಡಿಪಡಿಸಿದರೆ ಹುಬ್ಬುಗಳನ್ನು ಕುಣಿಸುತ್ತಾರೆ! (೫-೬). ಈ ವನ ರಕ್ಷಕರು ಕೋಪಗೊಂಡು ಅವರಮೇಲೆ ಕೈಮಾಡಿದರು. ಆಗ ಅವರೆಲ್ಲರೂ ಸೇರಿ ಇವರನ್ನೇ ಹೊಡೆದರು. ಅವರು ಬಹುಮಂದಿ ಇದ್ದಾರೆ. ಕಣ್ಣನ್ನು ಕೆಂಪುಮಾಡಿಕೊಂಡು ಕಾವಲುಗಾರರನ್ನೇ ಓಡಿಸಿಬಿಟ್ಟರು. ನಮ್ಮನ್ನು ಕೈಗಳಿಂದ ಗುದ್ದಿದರು. ಮಂಡಿಗಳಿಂದ ತಿವಿದರು. ಸಿಕ್ಕಿದಹಾಗೆ ಎಳೆದಾಡಿ ಗುದದ್ವಾರವನ್ನು ತೋರಿಸಿ ಹಂಗಿಸಿದರು (೭-೯). ಪ್ರಭುವಾದ ನೀನಿರುವಾಗ ನಮ್ಮವರನ್ನು ಈ ರೀತಿಯಲ್ಲಿ ಹೊಡೆದುಬಿಟ್ಟರಲ್ಲ! ಮಧುವನವನ್ನೆಲ್ಲಾ ಯಥೇಷ್ಟವಾಗಿ ತಿಂದು ತೇಗುತ್ತಿರುವರಲ್ಲ!'' ಎಂದು ವಿಜ್ಞಾಪಿಸುತ್ತಿದ್ದನು. ಅಷ್ಟರಲ್ಲಿ ಮಹಾಪ್ರಾಜ್ಞನಾದ ಲಕ್ಷ್ಮಣನು ಸುಗ್ರೀವನನ್ನುದ್ದೇಶಿಸಿ ''ವಾನರೇಶ್ವರ, ಈ ವನಪಾಲಕನು ಏಕೆ ಬಂದಿದ್ದಾನೆ? ದುಃಖದಿಂದ ಇವನು ಅರಿಕೆಮಾಡಿಕೊಳ್ಳುತ್ತಿರುವುದೇನು?'' ಎಂದು ಕೇಳಿದನು (೧೦-೧೨).

ಏವಮುಕ್ತಸ್ತು ಸುಗ್ರೀವೋ ಲಕ್ಷ್ಮಣೇನ ಮಹಾತ್ಮನಾ ।
ಲಕ್ಷ್ಮಣಂ ಪ್ರತ್ಯುವಾಚೇದಂ ವಾಕ್ಯಂ ವಾಕ್ಯವಿಶಾರದಃ ॥ ೧೩

ಆರ್ಯ ಲಕ್ಷ್ಮಣ ಸಂಪ್ರಾಹ ವೀರೋ ದಧಿಮುಖಃ ಕಪಿಃ ।
ಅಂಗದಪ್ರಮುಖೈರ್ವೀರೈರ್ಭಕ್ಷಿತಂ ಮಧು ವಾನರೈಃ ॥ ೧೪

ವಿಚಿತ್ಯ ದಕ್ಷಿಣಾಮಾಶಾಮಾಗತೈರ್ಹರಿಪುಂಗವೈಃ ।
ನೈಷಾಮಕೃತಕೃತ್ಯಾನಾಮೀದೃಶಃ ಸ್ಯಾದುಪಕ್ರಮಃ ॥ ೧೫

ಆಗತೈಶ್ಚ ಪ್ರಮಥಿತಂ ಯಥಾ ಮಧುವನಂ ಹಿ ತೈಃ ।
ಧರ್ಷಿತಂ ಚ ವನಂ ಕೃತ್ಸ್ನಮುಪಯುಕ್ತಂ ಚ ವಾನರೈಃ ॥ ೧೬

ವನಂ ಯದಭಿಪನ್ನಂ ತೈಃ ಸಾಧಿತಂ ಕರ್ಮ ವಾನರೈಃ ।
ದೃಷ್ಟಾ ದೇವೀ ನ ಸಂದೇಹೋ ನ ಚಾನ್ಯೇನ ಹನೂಮತಾ ॥ ೧೭

ನ ಹ್ಯನ್ಯಃ ಸಾಧನೇ ಹೇತುಃ ಕರ್ಮಣೋಽಸ್ಯ ಹನೂಮತಃ ।
ಕಾರ್ಯಸಿದ್ಧಿರ್ಮತಿಶ್ಚೈವ ತಸ್ಮಿನ್ ವಾನರಪುಂಗವೇ ॥ ೧೮

ಆಗ ಸುಗ್ರೀವನು "ಆರ್ಯ–ಲಕ್ಷ್ಮಣ, ಅಂಗದ ಮೊದಲಾದ ಕಪಿವೀರರು ನಮ್ಮ ಮಧುವನಕ್ಕೆ ನುಗ್ಗಿ ಸ್ವೇಚ್ಛೆಯಾಗಿ ಮಧುವನ್ನು ಕುಡಿಯುತ್ತಿದ್ದಾರೆಂದು ಈ ದಧಿಮುಖನು ಹೇಳುತ್ತಿದ್ದಾನೆ. ಅವರು ದಕ್ಷಿಣದಿಕ್ಕಿನಲ್ಲಿ ಸೀತಾದೇವಿಯನ್ನು ಹುಡುಕಿ ಬಂದಿದ್ದಾರೆ. ಉದ್ದೇಶಿಸಿದ ಕಾರ್ಯವನ್ನು ಅವರು ಸಾಧಿಸಿಕೊಂಡು ಬಂದಿರಬೇಕು. ಇಲ್ಲದಿದ್ದರೆ ಇಂತಹ ಕೆಲಸವನ್ನು ಎಂದಿಗೂ ಮಾಡುತ್ತಿರಲಿಲ್ಲ (೧೩–೧೫) ಅವರು ಬರುತ್ತಿರುವಾಗಲೇ ಮಧುವನವನ್ನು ಅಪ್ಪಣೆ ಇಲ್ಲದೆ ಪ್ರವೇಶಿಸಿ ಅದನ್ನು ಯಥೇಚ್ಛವಾಗಿ ಬಳಸಿಕೊಂಡಿದ್ದಾರೆ. ಮಧುವನಕ್ಕೆ ಕಪಿಗಳು ನುಗ್ಗಿದರೆಂದರೆ, ಅವರು ಕಾರ್ಯವನ್ನು ಸಾಧಿಸಿಕೊಂಡು ಬಂದಿದ್ದಾರೆಂದು ಅರ್ಥ ! ದೇವಿಯನ್ನು ನೋಡಿ ಬಂದಿದ್ದಾರೆ. ಸಂದೇಹವೇ ಇಲ್ಲ. ಅದರಲ್ಲಿಯೂ ಹನುಮಂತನೇ ನೋಡಿರಬೇಕು (೧೬–೧೭). ಈ ಕಾರ್ಯವನ್ನು ಸಾಧಿಸುವುದಕ್ಕೆ ಹನುಮಂತನನ್ನು ಬಿಟ್ಟರೆ ಇನ್ನೊಬ್ಬನು ಇಲ್ಲ. ಕಾರ್ಯವನ್ನು ಸಾಧಿಸುವ ಸಾಮರ್ಥ್ಯ, ಬುದ್ಧಿ ಪ್ರಯತ್ನ ಪರಾಕ್ರಮ, ವಿದ್ಯೆ—ಇವುಗಳೆಲ್ಲವೂ ಆ ವಾನರಶ್ರೇಷ್ಠನಲ್ಲಿ

ವ್ಯವಸಾಯಶ್ಚ ವೀರ್ಯಂ ಚ ಶ್ರುತಂ ಚಾಪಿ ಪ್ರತಿಷ್ಠಿತಮ್ ।
ಜಾಂಬವಾನ್ ಯತ್ರ ನೇತಾ ಸ್ಯಾದಂಗದಶ್ಚ ಮಹಾಬಲಃ ॥ ೧೯

ಹನೂಮಾಂಶ್ಚಾಪ್ಯಧಿಷ್ಠಾತಾ ನ ತಸ್ಯ ಗತಿರನ್ಯಥಾ ।
ಅಂಗದಪ್ರಮುಖೈರ್ವೀರೈರ್ಹತಂ ಮಧುವನಂ ಕಿಲ ॥ ೨೦

ವಾರಯಂತಶ್ಚ ಸಹಿತಾಸ್ತಥಾ ಜಾನುಭಿರಾಹತಾಃ ।
ಏತದರ್ಥಮಯಂ ಪ್ರಾಪ್ತೋ ವಕ್ತುಂ ಮಧುರವಾಗಿಹ ॥ ೨೧

ನಾಮ್ನಾ ದಧಿಮುಖೋ ನಾಮ ಹರಿಃ ಪ್ರಖ್ಯಾತವಿಕ್ರಮಃ ।
ದೃಷ್ಟಾ ಸೀತಾ ಮಹಾಬಾಹೋ ಸೌಮಿತ್ರೇ ಪಶ್ಯ ತತ್ತ್ವತಃ ॥ ೨೨

ಅಭಿಗಮ್ಯ ತಥಾ ಸರ್ವೇ ಪಿಬಂತಿ ಮಧು ವಾನರಾಃ ।
ನ ಚಾಪ್ಯದೃಷ್ಟ್ವಾ ವೈದೇಹೀಂ ವಿಶ್ರುತಾ ಪುರುಷರ್ಷಭ ॥ ೨೩

ವನಂ ದತ್ತವರಂ ದಿವ್ಯಂ ಧರ್ಷಯೇಯುರ್ವನೌಕಸಃ ।
ತತಃ ಪ್ರಹೃಷ್ಟೋ ಧರ್ಮಾತ್ಮಾ ಲಕ್ಷ್ಮಣಃ ಸಹರಾಘವಃ ॥ ೨೪

ನೆಲಸಿವೆ. ಜಾಂಬವಂತ, ಅಂಗದ, ಹನುಮಂತ—ಈ ಮೂವರೂ ಸೇರಿದಲ್ಲಿ ಕಾರ್ಯವು ಫಲಿಸಿಯೇ ತೀರುತ್ತದೆ. ವಿಫಲವೆಂಬ ಮಾತೇ ಇಲ್ಲ. ಅಂಗದ ಮೊದಲಾದ ವೀರರು ಮಧುವನವನ್ನು ಹಾಳುಮಾಡಿಬಿಟ್ಟರಂತೆ (೧೮–೨೦). ಈ ವನಪಾಲಕರು ಹೋಗಿ ತಡೆದರೆ, ಇವರನ್ನು ಮಂಡಿಯಿಂದ ತಿವಿದುಬಿಟ್ಟರಂತೆ. ಇದಕ್ಕೋಸ್ಕರ ಈತನು ಬಂದಿದ್ದಾನೆ. ಇವನ ಹೆಸರು ದಧಿಮುಖ. ಸೌಮ್ಯವಾಗಿ ಮಾತನಾಡತಕ್ಕವನು. ಆದರೆ ಮಹಾ ಪರಾಕ್ರಮಿ. ಲಕ್ಷ್ಮಣ, ನಿಜವಾಗಿಯೂ ವಾನರರು ಸೀತಾದೇವಿಯನ್ನು ಕಂಡುಬಂದಿದ್ದಾರೆ! (೨೧–೨೨). ಆದ್ದರಿಂದಲೇ ಮಧುವನಕ್ಕೆ ಹೋಗಿ ಮಧುವನ್ನು ಕುಡಿಯುತ್ತಿದ್ದಾರೆ. ಪ್ರಖ್ಯಾತರಾದ ಆ ಕಪಿವೀರರು ವೈದೇಹಿಯನ್ನು ಕಾಣದೆ ಬಂದಿದ್ದರೆ, ಅಲ್ಲಿಗೆ ಎಂದಿಗೂ ನುಗ್ಗುತ್ತಿರಲಿಲ್ಲ. ಮಧುವನವೆಂದರೆ ದೇವತೆಗಳು ನಮಗೆ ವರವಾಗಿ ಕೊಟ್ಟಿರುವ "ದಿವ್ಯವಾದ ತೋಟ" ಎಂದು ಹೇಳಿದನು (೨೩–೨೪).

ಶ್ರುತ್ವಾ ಕರ್ಣಸುಖಾಂ ವಾಣೀಂ ಸುಗ್ರೀವವದನಾಚ್ಚ್ಯುತಾಮ್ ।
ಪ್ರಾಹೃಷ್ಯತ ಭೃಶಂ ರಾಮೋ ಲಕ್ಷ್ಮಣಶ್ಚ ಮಹಾಬಲಃ ॥ ೨೫

ಶ್ರುತ್ವಾ ದಧಿಮುಖಸ್ಯೇದಂ ಸುಗ್ರೀವಸ್ತು ಪ್ರಹೃಷ್ಯ ಚ ।
ವನಪಾಲಂ ಪುನರ್ವಾಕ್ಯಂ ಸುಗ್ರೀವಃ ಪ್ರತ್ಯಭಾಷತ ॥ ೨೬

ಪ್ರೀತೋಽಸ್ಮಿ ಸೋಽಹಂ ಯದ್ಭುಕ್ತಂ ವನಂ ತೈಃ ಕೃತಕರ್ಮಭಿಃ ।
ಮರ್ಷಿತಂ ಮರ್ಷಣೀಯಂ ಚ ಚೇಷ್ಟಿತಂ ಕೃತಕರ್ಮಣಾಮ್ ॥ ೨೭

ಇಚ್ಛಾಮಿ ಶೀಘ್ರಂ ಹನುಮತ್ಪ್ರಧಾನಾನ್
ಶಾಖಾಮೃಗಾಂಸ್ತಾನ್ ಮೃಗರಾಜದರ್ಪಾನ್ ।
ದ್ರಷ್ಟುಂ ಕೃತಾರ್ಥಾನ್ ಸಹ ರಾಘವಾಭ್ಯಾಂ
ಶ್ರೋತುಂ ಚ ಸೀತಾಧಿಗಮೇ ಪ್ರಯತ್ನಮ್ ॥ ೨೮

ಪ್ರೀತಿಸ್ಫೀತಾಕ್ಷೌ ಸಂಪ್ರಹೃಷ್ಟೌ ಕುಮಾರೌ
ದೃಷ್ಟ್ವಾ ಸಿದ್ಧಾರ್ಥೌ ವಾನರಾಣಾಂ ಚ ರಾಜಾ ।

ಸುಗ್ರೀವನ ಬಾಯಿಂದ ಹೊರಟ ಕರ್ಣಾಮೃತಪ್ರಾಯವಾದ ಮಾತನ್ನು ಕೇಳಿ ರಾಮಲಕ್ಷ್ಮಣರಿಗೆ ಪರಮಾನಂದವಾಯಿತು. ದಧಿಮುಖನು ವಾನರರ ತುಂಟತನವನ್ನು ಹೇಳಿದರೆ, ಸುಗ್ರೀವನಿಗೆ ಸಂತೋಷವೇ ಆಯಿತು. ಅವನು ದಧಿಮುಖನಿಗೆ ''ಕಾರ್ಯವನ್ನು ಸಾಧಿಸಿಕೊಂಡು ಬಂದಿರುವ ಆ ವಾನರರು ಅಲ್ಲಿ ಮಧುಪಾನ ಮಾಡಿದುದರಿಂದ ನನಗೆ ಸಂತೋಷವೇ ಸರಿ. ಅವರ ಚೇಷ್ಟೆಯನ್ನು ನಾನು ಕ್ಷಮಿಸಿದ್ದೇನೆ. ಅದು ಕ್ಷಮಿಸಬೇಕಾದದ್ದೇ (೨೫–೨೭). ಕೃತಕೃತ್ಯರಾಗಿ ಬಂದಿರುವ ಸಿಂಹಪರಾಕ್ರಮಿಗಳಾದ ಕಪಿಶ್ರೇಷ್ಠರನ್ನೂ ಹನುಮಂತನನ್ನೂ ನಾನೂ ಶ್ರೀರಾಮಲಕ್ಷ್ಮಣರೂ ಕೂಡಲೇ ನೋಡಬೇಕಾಗಿದೆ. ಸೀತಾದೇವಿಯನ್ನು ಹುಡುಕಲು ಅವರು ಮಾಡಿದ ಪ್ರಯತ್ನವನ್ನು ಕೇಳಬೇಕಾಗಿದೆ'' (ಅವರನ್ನು ಬೇಗನೆ ಕಳುಹಿಸು) ಎಂದು ಹೇಳಿದನು (೨೮). ತಮ್ಮ ಕಾರ್ಯವು ಸಿದ್ಧಿಸಿತೆಂದು ಆನಂದದಿಂದ ರಾಮಲಕ್ಷ್ಮಣರ ನೇತ್ರಗಳು ಅರಳಿದವು. ಮೈಯಲ್ಲಿ ರೋಮಾಂಚವಾಯಿತು. ವಾನರೇಂದ್ರನೂ ಅವರನ್ನು ನೋಡುತ್ತ

ಅಂಗೈಃ ಸಂಹೃಷ್ಟೈಃ ಕರ್ಮಸಿದ್ಧಿಂ ವಿದಿತ್ವಾ
ಬಾಹ್ವೋರಾಸನ್ನಾಂ ಸೋಽತಿಮಾತ್ರಂ ನನಂದ ॥ ೨೮

ಇತಿ ಶ್ರೀಮದ್ರಾಮಾಯಣೇ ಸುಂದರಕಾಂಡೇ ತ್ರಿಷಷ್ಟಿತಮಃ ಸರ್ಗಃ

ಚತುಃಷಷ್ಟಿತಮಃ ಸರ್ಗಃ

ಹನೂಮದಾದ್ಯಾಗಮನಮ್

ಸುಗ್ರೀವೇಣೈವಮುಕ್ತಸ್ತು ಹೃಷ್ಟೋ ದಧಿಮುಖಃ ಕಪಿಃ ।
ರಾಘವಂ ಲಕ್ಷ್ಮಣಂ ಚೈವ ಸುಗ್ರೀವಂ ಚಾಭ್ಯವಾದಯತ್ ॥ ೧

ಸ ಪ್ರಣಮ್ಯ ಚ ಸುಗ್ರೀವಂ ರಾಘವೌ ಚ ಮಹಾಬಲೌ ।
ವಾನರೈಃ ಸಹಿತಃ ಶೂರೈರ್ದಿವಮೇವೋತ್ಪಪಾತ ಹ ॥ ೨

ಸ ಯಥೈವಾಗತಃ ಪೂರ್ವಂ ತಥೈವ ತ್ವರಿತಂ ಗತಃ ।
ನಿಪತ್ಯ ಗಗನಾದ್ಭೂಮೌ ತದ್ವನಂ ಪ್ರವಿವೇಶ ಹ ॥ ೩

ಪುಳುಕಿತಗಾತ್ರನಾಗಿ, ಕಾರ್ಯವು ಕೈಗೂಡಿತೆಂದು ಹರ್ಷದಿಂದ ಹಿಗ್ಗಿದನು (೨೮).

ಇಲ್ಲಿಗೆ ಶ್ರೀಮದ್ರಾಮಾಯಣದ ಸುಂದರಕಾಂಡದಲ್ಲಿ ಅರುವತ್ತುಮೂರನೆಯ ಸರ್ಗ

ಸರ್ಗ ೬೪

ದಧಿಮುಖನು ಮಧುವನಕ್ಕೆ ಹೋಗಿ ಸುಗ್ರೀವನ ಆಜ್ಞೆಯನ್ನು ಅಂಗದನಿಗೆ ಹೇಳುವುದು. ಅಂಗದನು ವಾನರರೊಡನೆ ಸುಗ್ರೀವನ ಬಳಿಗೆ ಬರುವುದು.

ಸುಗ್ರೀವನ ಮಾತಿನಿಂದ ದಧಿಮುಖನ ಕೋಪವು ಶಾಂತವಾಯಿತು. ಅವನು ಹರ್ಷದಿಂದ ರಾಮಲಕ್ಷ್ಮಣಸುಗ್ರೀವರಿಗೆ ವಂದಿಸಿ ವನಪಾಲಕರೊಡನೆ ಅಂತರಿಕ್ಷಕ್ಕೆ ಹಾರಿದನು. ವೇಗದಿಂದ ಹಿಂತಿರುಗಿ ಬಂದು ಮಧುವನವನ್ನು ಪ್ರವೇಶಿಸಿದನು (೧–೩). ಅಷ್ಟರಲ್ಲಿ ಕಪಿನಾಯಕರಿಗೆ ಮಧುಪಾನದ ಮದವು ಇಳಿದಿತ್ತು. ಅವರು

ಸ ಪ್ರವಿಷ್ಟೋ ಮಧುವನಂ ದದರ್ಶ ಹರಿಯೂಥಪಾನ್ ।
ವಿಮದಾನುತ್ಥಿತಾನ್ ಸರ್ವಾನ್ ಮೇಹಮಾನಾನ್ ಮಧೂದಕಮ್ ॥ ೪

ಸ ತಾನುಪಾಗಮದ್ವೀರೋ ಬದ್ಧ್ವಾ ಕರಪುಟಾಂಜಲಿಮ್ ।
ಉವಾಚ ವಚನಂ ಶ್ಲಕ್ಷ್ಣಮಿದಂ ಹೃಷ್ಟವದಂಗದಮ್ ॥ ೫

ಸೌಮ್ಯ ರೋಷೋ ನ ಕರ್ತವ್ಯೋ ಯದೇಭಿರಭಿವಾರಿತಃ ।
ಅಜ್ಞಾನಾದ್ರಕ್ಷಿಭಿಃ ಕ್ರೋಧಾದ್ಭವಂತಃ ಪ್ರತಿಷೇಧಿತಾಃ ॥ ೬

ಯುವರಾಜಸ್ತ್ವಮೀಶಶ್ಚ ವನಸ್ಯಾಸ್ಯ ಮಹಾಬಲ ।
ಮೌರ್ಖ್ಯಾತ್ ಪೂರ್ವಂ ಕೃತೋ ದೋಷ-
ಸ್ತಂ ಭವಾನ್ ಕ್ಷಂತುಮರ್ಹತಿ ॥ ೭

ಯಥೈವ ಹಿ ಪಿತಾ ತೇಽಭೂತ್ ಪೂರ್ವಂ ಹರಿಗಣೇಶ್ವರಃ ।
ತಥಾ ತ್ವಮಪಿ ಸುಗ್ರೀವೋ ನಾನ್ಯಸ್ತು ಹರಿಸತ್ತಮ ॥ ೮

ಆಖ್ಯಾತಂ ಹಿ ಮಯಾ ಗತ್ವಾ ಪಿತೃವ್ಯಸ್ಯ ತವಾನಘ ।
ಇಹೋಪಯಾನಂ ಸರ್ವೇಷಾಮೇತೇಷಾಂ ವನಚಾರಿಣಾಮ್ ॥ ೯

ಸ ತ್ವದಾಗಮನಂ ಶ್ರುತ್ವಾ ಸಹೈಭಿರ್ಹರಿಯೂಥಪೈಃ ।
ಪ್ರಹೃಷ್ಟೋ ನ ತು ರುಷ್ಟೋಽಸೌ ವನಂ ಶ್ರುತ್ವಾ ಪ್ರಧರ್ಷಿತಮ್ ॥ ೧೦

ಮೂತ್ರವನ್ನು ಬಿಡುತ್ತಿದ್ದರು. ದಧಿಮುಖನು ಅಂಗದನ ಬಳಿಗೆ ಹೋಗಿ ಕೈಮುಗಿದುಕೊಂಡು ಮೃದುನುಡಿಗಳಿಂದ "ಸೌಮ್ಯ! ಕಾವಲುಗಾರರು ತಿಳುವಳಿಕೆಯಿಲ್ಲದೆ ಸಿಟ್ಟಿನಿಂದ ನಿಮ್ಮನ್ನು ತಡೆದುಬಿಟ್ಟರು. ಇದಕ್ಕಾಗಿ ಕೋಪಿಸಿಕೊಳ್ಳಬಾರದು (೫–೬). ನೀನು ಯುವರಾಜ. ಈ ವನಕ್ಕೆ ಒಡೆಯ. ಅಜ್ಞಾನದಿಂದ ಆದ ತಪ್ಪನ್ನು ಕ್ಷಮಿಸಬೇಕು. ವಾನರೋತ್ತಮ, ಹಿಂದೆ ನಿನ್ನ ತಂದೆಯು ಕಪಿಗಳಿಗೆ ಅಧಿಪತಿಯಾಗಿದ್ದಂತೆ ಈಗ ಸುಗ್ರೀವನೂ ನೀನೂ ಆಗಿದ್ದೀರಿ (೭–೮). ನಾನು ಹೋಗಿ ಚಿಕ್ಕಪ್ಪನಿಗೆ ನೀವೆಲ್ಲರೂ ಇಲ್ಲಿಗೆ ಬಂದಿರುವ ಸಂಗತಿಯನ್ನು ತಿಳಿಸಿದೆನು. ನೀವು ಮಧುವನವನ್ನು ಆಕ್ರಮಿಸಿ ನುಗ್ಗಿದ ಸುದ್ದಿಯನ್ನು ಕೇಳಿ ಸುಗ್ರೀವನು ಸಂತೋಷಪಟ್ಟನೇ ಹೊರತು ಕೋಪಗೊಳ್ಳಲಿಲ್ಲ (೯–೧೦).

ಪ್ರಹೃಷ್ಟೋ ಮಾಂ ಪಿತೃವ್ಯಸ್ತೇ ಸುಗ್ರೀವೋ ವಾನರೇಶ್ವರಃ ।
ಶೀಘ್ರಂ ಪ್ರೇಷಯ ಸರ್ವಾಂಸ್ತಾನಿತಿ ಹೋವಾಚ ಪಾರ್ಥಿವಃ ॥ ೧೧

ಶ್ರುತ್ವಾ ದಧಿಮುಖಸ್ಯೈತದ್ವಚನಂ ಶ್ಲಕ್ಷ್ಣಮಂಗದಃ ।
ಅಬ್ರವೀತ್ತಾನ್ ಹರಿಶ್ರೇಷ್ಠೋ ವಾಕ್ಯಂ ವಾಕ್ಯವಿಶಾರದಃ ॥ ೧೨

ಶಂಕೇ ಶ್ರುತೋಽಯಂ ವೃತ್ತಾಂತೋ ರಾಮೇಣ ಹರಿಯೂಥಪಾಃ ।
ತತ್ ಕ್ಷಮಂ ನೇಹ ನಃ ಸ್ಥಾತುಂ ಕೃತೇ ಕಾರ್ಯೇ ಪರಂತಪಾಃ ॥ ೧೩

ಪೀತ್ವಾ ಮಧು ಯಥಾಕಾಮಂ ವಿಶ್ರಾಂತಾ ವನಚಾರಿಣಃ ।
ಕಿಂ ಶೇಷಂ ಗಮನಂ ತತ್ರ ಸುಗ್ರೀವೋ ಯತ್ರ ಮೇ ಗುರುಃ ॥ ೧೪

ಸರ್ವೇ ಯಥಾ ಮಾಂ ವಕ್ಷ್ಯಂತಿ ಸಮೇತ್ಯ ಹರಿಯೂಥಪಾಃ ।
ತಥಾಸ್ಮಿ ಕರ್ತಾ ಕರ್ತವ್ಯೇ ಭವದ್ಭಿಃ ಪರವಾನಹಮ್ ॥ ೧೫

ನಾಜ್ಞಾಪಯಿತುಮೀಶೋಽಹಂ ಯುವರಾಜೋಽಸ್ಮಿ ಯದ್ಯಪಿ ।
ಅಯುಕ್ತಂ ಕೃತಕರ್ಮಾಣೋ ಯೂಯಂ ಧರ್ಷಯಿತುಂ ಮಯಾ ॥ ೧೬

ಬ್ರುವತಶ್ಚಾಂಗದಸ್ಯೈವಂ ಶ್ರುತ್ವಾ ವಚನಮವ್ಯಯಮ್ ।
ಪ್ರಹೃಷ್ಟಮನಸೋ ವಾಕ್ಯಮಿದಮೂಚುರ್ವನೌಕಸಃ ॥ ೧೭

ನಿನ್ನ ಚಿಕ್ಕಪ್ಪನಾದ ಸುಗ್ರೀವ ಮಹಾರಾಜನು ಹರ್ಷದಿಂದ ನಿಮ್ಮೆಲ್ಲರನ್ನೂ ಬೇಗನೆ ಅಲ್ಲಿಗೆ ಕಳಿಸುವಂತೆ ನನಗೆ ಹೇಳಿದ್ದಾನೆ'' ಎಂದನು. ಇದನ್ನು ಕೇಳಿ ಅಂಗದನು ಅಲ್ಲಿದ್ದ ವಾನರರನ್ನು ಕುರಿತು ''ಎಲೈ ಕಪಿವೀರರೆ, ನಾವು ಇಲ್ಲಿಗೆ ಬಂದಿರುವ ವೃತ್ತಾಂತವು ಶ್ರೀರಾಮನ ಕಿವಿಗೆ ಮುಟ್ಟಿದಂತಿದೆ. ಕೆಲಸವಾದಮೇಲೆ ನಾವು ಇಲ್ಲಿರುವುದು ಸರಿಯಲ್ಲ (೧೧–೧೩). ನೀವೆಲ್ಲರೂ ಸ್ವೇಚ್ಛೆಯಾಗಿ ಮಧುವನ್ನು ಕುಡಿದು ವಿಶ್ರಮಿಸಿದ್ದೀರಿ. ಇನ್ನು ನಮಗೆ ಕೆಲಸವೇನು ? ಪ್ರಭುವಾದ ಸುಗ್ರೀವನ ಬಳಿಗೆ ಹೋಗುವುದೊಂದೇ ಉಳಿದಿದೆ. ನೀವೆಲ್ಲರೂ ಹೇಳಿದಂತೆ ನಾನು ಮಾಡತಕ್ಕವನು. ನಾನು ನಿಮಗೆ ಅಧೀನ. ಯುವರಾಜನಾಗಿದ್ದರೂ ನಾನು ನಿಮಗೆ ಆಜ್ಞೆ ಮಾಡಲಾರೆ. ಕಾರ್ಯಸಾಧನೆಯನ್ನು ಮಾಡಿಕೊಂಡು ಬಂದಿದ್ದೀರಿ. ನಿಮ್ಮನ್ನು ನಾನು ಬಲಾತ್ಕರಿಸಬಾರದು'' ಎಂದನು (೧೪–೧೬). ಅಂಗದನ

ಏವಂ ವಕ್ಷ್ಯತಿ ಕೋ ರಾಜನ್ ಪ್ರಭುಃ ಸನ್ ವಾನರರ್ಷಭಃ ।
ಐಶ್ವರ್ಯಮದಮತ್ತೋ ಹಿ ಸರ್ವೋಽಹಮಿತಿ ಮನ್ಯತೇ ॥ ೧೮
ತವ ಚೇದಂ ಸುಸದೃಶಂ ವಾಕ್ಯಂ ನಾನ್ಯಸ್ಯ ಕಸ್ಯಚಿತ್ ।
ಸಂನತಿರ್ಹಿ ತವಾಖ್ಯಾತಿ ಭವಿಷ್ಯಚ್ಛುಭಯೋಗ್ಯತಾಮ್ ॥ ೧೯
ಸರ್ವೇ ವಯಮಪಿ ಪ್ರಾಪ್ತಾಸ್ತತ್ರ ಗಂತುಂ ಕೃತಕ್ಷಣಾಃ ।
ಸ ಯತ್ರ ಹರಿವೀರಾಣಾಂ ಸುಗ್ರೀವಃ ಪತಿರವ್ಯಯಃ ॥ ೨೦
ತ್ವಯಾ ಹ್ಯನುಕ್ತೈರ್ಹರಿಭಿರ್ನೈವ ಶಕ್ಯಂ ಪದಾತ್ ಪದಮ್ ।
ಕ್ವಚಿದ್ಗಂತುಂ ಹರಿಶ್ರೇಷ್ಠ ಬ್ರೂಮಃ ಸತ್ಯಮಿದಂ ತು ತೇ ॥ ೨೧
ಏವಂ ತು ವದತಾಂ ತೇಷಾಮಂಗದಃ ಪ್ರತ್ಯಭಾಷತ ।
ಬಾಢಂ ಗಚ್ಛಾಮ ಇತ್ಯುಕ್ತ್ವಾ ಉತ್ಪಪಾತ ಮಹೀತಲಾತ್ ॥ ೨೨
ಉತ್ಪತಂತಮನೂತ್ಪೇತುಃ ಸರ್ವೇ ತೇ ಹರಿಯೂಥಪಾಃ ।
ಕೃತ್ವಾಕಾಶಂ ನಿರಾಕಾಶಂ ಯಂತ್ರೋತ್ಕ್ಷಿಪ್ತಾ ಇವಾಚಲಾಃ ॥ ೨೩
ತೇಽಂಬರಂ ಸಹಸೋತ್ಪತ್ಯ ವೇಗವಂತಃ ಪ್ಲವಂಗಮಾಃ ।
ವಿನದಂತೋ ಮಹಾನಾದಂ ಘನಾ ವಾತೇರಿತಾ ಯಥಾ ॥ ೨೪

ನುಡಿಯನ್ನು ಕೇಳಿ ವಾನರ ನಾಯಕರಿಗೆ ಹರ್ಷವಾಯಿತು. ಅವರು "ಯುವರಾಜ, ಯಾವ ಪ್ರಭುವು ಹೀಗೆ ಹೇಳುತ್ತಾನೆ? ಅಧಿಕಾರದ ಮದದಿಂದ ಮೈಮರೆತು ಪ್ರತಿಯೊಬ್ಬನೂ ನಾನೇ ಹೆಚ್ಚು ಎಂದು ಅಹಂಕಾರಪಡುತ್ತಾನೆ (೧೭–೧೮). ಇಂತಹ ವಿನಯಪೂರ್ಣವಾದ ವಚನವು ನಿನಗೆ ಒಪ್ಪುತ್ತದೆ. ಈ ವಿನಯವೇ ನಿನಗೆ ಮುಂದೆ ಬರುವ ಶ್ರೇಯಸ್ಸನ್ನು ಸೂಚಿಸುತ್ತದೆ. ನಾವೆಲ್ಲರೂ ಪ್ರಭುವಾದ ಸುಗ್ರೀವನಿರುವಲ್ಲಿಗೆ ಹೋಗಲು ಸಿದ್ಧರಾಗಿದ್ದೇವೆ (೧೯–೨೦). ನಿನ್ನ ಅಪ್ಪಣೆಯಿಲ್ಲದೆ ಒಂದು ಹೆಜ್ಜೆ ಆಚೆ ಹೋಗಲೂ ನಮ್ಮಿಂದ ಸಾಧ್ಯವಿಲ್ಲ. ಇದು ಸತ್ಯವಾದ ಮಾತು" ಎಂದು ನುಡಿದರು. ಅವರು ಹಾಗೆ ಹೇಳುತ್ತಿರುವಾಗಲೇ ಅಂಗದನು 'ಸರಿ, ಹಾಗಾದರೆ ಹೊರಡೋಣ' ಎಂದು ನುಡಿದು ನೆಲದಿಂದ ಹಾರಿದನು (೨೧–೨೨). ಕೂಡಲೇ ಅವನ ಹಿಂದೆ ಕಪಿಗಳೆಲ್ಲರೂ ಯಂತ್ರದಿಂದ ಹಾರಿಸಿದ ಬೆಟ್ಟಗಳಂತೆ, ಥಂಗನೆ ಆಕಾಶಕ್ಕೆ ನೆಗೆದು ಬಿರುಗಾಳಿಯು ತಳ್ಳಿಕೊಂಡು ಹೋಗುವ ಮಹಾಮೇಘಗಳಂತೆ ಅಬ್ಬರಿಸುತ್ತ ಸಾಗಿದರು (೨೩–೨೪).

ಅಂಗದೇ ಹ್ಯನನುಪ್ರಾಪ್ತೇ ಸುಗ್ರೀವೋ ವಾನರಾಧಿಪಃ ।
ಉವಾಚ ಶೋಕೋಪಹತಂ ರಾಮಂ ಕಮಲಲೋಚನಮ್ ॥ ೨೫

ಸಮಾಶ್ವಸಿಹಿ ಭದ್ರಂ ತೇ ದೃಷ್ಟಾ ದೇವೀ ನ ಸಂಶಯಃ ।
ನಾಗಂತುಮಿಹ ಶಕ್ಯಂ ತೈರತೀತೇ ಸಮಯೇ ಹಿ ನಃ ॥ ೨೬

ನ ಮತ್ಸಕಾಶಮಾಗಚ್ಛೇತ್ ಕೃತ್ಯೇ ಹಿ ವಿನಿಪಾತಿತೇ ।
ಯುವರಾಜೋ ಮಹಾಬಾಹುಃ ಪ್ಲವತಾಂ ಪ್ರವರೋಽಂಗದಃ ॥ ೨೭

ಯದ್ಯಪ್ಯಕೃತಕೃತ್ಯಾನಾಮೀದೃಶಃ ಸ್ಯಾದುಪಕ್ರಮಃ ।
ಭವೇತ್ ಸ ದೀನವದನೋ ಭ್ರಾಂತವಿಪ್ಲುತಮಾನಸಃ ॥ ೨೮

ಪಿತೃಪೈತಾಮಹಂ ಚೈತತ್ ಪೂರ್ವಕೈರಭಿರಕ್ಷಿತಮ್ ।
ನ ಮೇ ಮಧುವನಂ ಹನ್ಯಾದಹೃಷ್ಟಃ ಪ್ಲವಗೇಶ್ವರಃ ॥ ೨೯

ಇತ್ತಲಾಗಿ ಅಂಗದನು ಬಂದಿಳಿಯುವುದಕ್ಕೆ ಮೊದಲು ಸುಗ್ರೀವನು ವಿರಹದುಃಖಿತನಾದ ಶ್ರೀರಾಮನನ್ನು ಕುರಿತು "ರಾಮ, ಇನ್ನು ಸಮಾಧಾನದಿಂದಿರು. ನಿನಗೆ ಮಂಗಳವಾಗಲಿ. ವಾನರರು ದೇವಿಯನ್ನು ಸಂದರ್ಶಿಸಿದ್ದಾರೆ. ಇದು ನಿಶ್ಚಯ. ಇಲ್ಲದಿದ್ದರೆ ಈ ವಾನರರು ನಾವು ಗೊತ್ತು ಮಾಡಿದ ಸಮಯವನ್ನು ಮೀರಿ ಎಂದಿಗೂ ಬರುತ್ತಿರಲಿಲ್ಲ (೨೫-೨೬). ಅದರಲ್ಲಿಯೂ ಯುವರಾಜನಾದ ಅಂಗದನು, ತಾನು ಹೋದ ಕೆಲಸವು ನೆರವೇರದ ಪಕ್ಷದಲ್ಲಿ ನನ್ನ ಬಳಿಗೆ ಬರುತ್ತಲೇ ಇರಲಿಲ್ಲ. ಒಂದುವೇಳೆ ಕಪಿಗಳು ಕಾರ್ಯವನ್ನು ಸಾಧಿಸದೆ ಮಧುವನದಲ್ಲಿ ಹಾವಳಿಯನ್ನು ನಡೆಸಿದ್ದರೆ, ಅಂಗದನ ಮುಖವು ಬಾಡಿ ಏನೂ ತೋರದೆ ದಿಗ್ಭ್ರಾಂತನಾಗಿಬಿಡುತ್ತಿದ್ದನು (೨೭-೨೮). ನಮ್ಮ ತಂದೆ ತಾತಂದಿರ ಕಾಲದಿಂದ ಮಧುವನವು ನಮಗೆ ಸೇರಿದೆ. ಹಿರಿಯರು ಕಷ್ಟಪಟ್ಟು ಅದನ್ನು ರಕ್ಷಿಸಿಕೊಂಡು ಬಂದಿದ್ದಾರೆ. ಯುವರಾಜನು ಆನಂದಪರವಶನಾಗದೆ ಇದ್ದರೆ ಮಧುವನವನ್ನು ಹಾಳುಮಾಡುತ್ತಿರಲಿಲ್ಲ. ರಾಮ, ನಿನ್ನನ್ನು ಪಡೆದ ಕೌಸಲ್ಯಾದೇವಿಯು ಧನ್ಯಳು. ಸಮಾಧಾನಮಾಡಿಕೊ. ಸೀತಾದೇವಿಯನ್ನು ನೋಡಿ ಬಂದುದರಲ್ಲಿ ಸಂದೇಹವೇ ಇಲ್ಲ. ನೋಡಿದವನು ಹನುಮಂತನಲ್ಲದೆ ಇನ್ನೊಬ್ಬ

ಕೌಸಲ್ಯಾ ಸುಪ್ರಜಾ ರಾಮ ಸಮಾಶ್ವಸಿಹಿ ಸುವ್ರತ ।
ದೃಷ್ಟಾ ದೇವೀ ನ ಸಂದೇಹೋ ನ ಚಾನ್ಯೇನ ಹನೂಮತಾ ॥ ೩೦

ನ ಹ್ಯನ್ಯಃ ಕರ್ಮಣೋ ಹೇತುಃ ಸಾಧನೇಽಸ್ಯ ಹನೂಮತಃ ।
ಹನೂಮತಿ ಹಿ ಸಿದ್ಧಿಶ್ಚ ಮತಿಶ್ಚ ಮತಿಸತ್ತಮ ॥ ೩೧

ವ್ಯವಸಾಯಶ್ಚ ವೀರ್ಯಂ ಚ ಸೂರ್ಯೇ ತೇಜ ಇವ ಧ್ರುವಮ್ ।
ಜಾಂಬವಾನ್ಯತ್ರ ನೇತಾ ಸ್ಯಾದಂಗದಶ್ಚ ಬಲೇಶ್ವರಃ ॥ ೩೨

ಹನೂಮಾಂಶ್ಚಾಪ್ಯಧಿಷ್ಠಾತಾ ನ ತಸ್ಯ ಗತಿರನ್ಯಥಾ ।
ಮಾ ಭೂಶ್ಚಿಂತಾಸಮಾಯುಕ್ತಃ ಸಂಪ್ರತ್ಯಮಿತವಿಕ್ರಮಃ ॥ ೩೩

ತತಃ ಕಿಲಕಿಲಾಶಬ್ದಂ ಶುಶ್ರಾವಾಸನ್ನಮಂಬರೇ ।
ಹನುಮತ್ಕರ್ಮದೃಪ್ತಾನಾಂ ನರ್ದತಾಂ ಕಾನನೌಕಸಾಮ್ ॥ ೩೪

ಕಿಷ್ಕಿಂಧಾಮುಪಯಾತಾನಾಂ ಸಿದ್ಧಿಂ ಕಥಯತಾಮಿವ ।
ತತಃ ಶ್ರುತ್ವಾ ನಿನಾದಂ ತಂ ಕಪೀನಾಂ ಕಪಿಸತ್ತಮಃ ॥ ೩೫

ನಲ್ಲ! (೨೯–೩೦). ಹನುಮಂತನಲ್ಲದೆ ಇನ್ನೊಬ್ಬನು ಈ ಕಾರ್ಯವನ್ನು ಸಾಧಿಸಲಾರನು. ಸೂರ್ಯನಲ್ಲಿ ತೇಜಸ್ಸು ನೆಲಸಿರುವಂತೆ, ಹನುಮಂತನಲ್ಲಿ ಕಾರ್ಯಸಿದ್ಧಿ, ಬುದ್ಧಿ, ಉದ್ಯೋಗ, ಪರಾಕ್ರಮಗಳು ಸದಾ ನೆಲಸಿರುತ್ತವೆ. ಅಂಗದನು ಅಧಿಪತಿಯಾಗಿ, ಜಾಂಬವಂತನು ಮಾರ್ಗದರ್ಶಿಯಾಗಿ, ಹನುಮಂತನು ಕಾರ್ಯಸಾಧಕನಾಗಿ ನಿಂತಿರುವಾಗ, ಆ ಕಾರ್ಯವು ಸಿದ್ಧಿಸದೆ ಎಂದಿಗೂ ಇರಲಾರದು. ಹೇ ವೀರಾಗ್ರಣಿ, ಚಿಂತಿಸಬೇಡ'' ಎಂದು ನುಡಿದನು (೩೧–೩೩). ಅಷ್ಟರಲ್ಲಿ ಕಪಿಗಳ ಕಿಲಕಿಲ ಧ್ವನಿಯು ಆಕಾಶದಲ್ಲಿ ಕೇಳಿಬಂದಿತು. ಹನುಮಂತನ ಕಾರ್ಯಸಾಧನೆಯಿಂದ ಹೆಮ್ಮೆಗೊಂಡ ವಾನರಸೈನ್ಯವು ಕಿಷ್ಕಿಂಧೆಯ ಕಡೆಗೆ ಧಾವಿಸಿ ಬರುತ್ತಿದ್ದಿತು. ಕಾರ್ಯಸಿದ್ಧಿಯಾಯಿತೆಂದು ದೂರದಿಂದಲೇ ಕೂಗಿ ಹೇಳುವಂತೆ ವಾನರರು ಗರ್ಜಿಸುತ್ತಿದ್ದರು. ಆ ಗದ್ದಲವನ್ನು ಕೇಳಿ ಸುಗ್ರೀವನು ಹರ್ಷದಿಂದ ತನ್ನ ಬಾಲವನ್ನು ಉದ್ದಕ್ಕೆ ಬೀಸಿ ಅಲ್ಲಾಡಿಸತೊಡಗಿದನು ! (೩೪–೩೫).

ಆಯತಾಂಚಿತಲಾಂಗೂಲಃ ಸೋಽಭವದ್ಧೃಷ್ಟಮಾನಸಃ ।
ಆಜಗ್ಮುಸ್ತೇಽಪಿ ಹರಯೋ ರಾಮದರ್ಶನಕಾಂಕ್ಷಿಣಃ ॥ ೩೬
ಅಂಗದಂ ಪುರತಃ ಕೃತ್ವಾ ಹನೂಮಂತಂ ಚ ವಾನರಮ್ ।
ತೇಽಂಗದಪ್ರಮುಖಾ ವೀರಾಃ ಪ್ರಹೃಷ್ಟಾಶ್ಚ ಮುದಾನ್ವಿತಾಃ ॥ ೩೭
ನಿಪೇತುರ್ಹರಿರಾಜಸ್ಯ ಸಮೀಪೇ ರಾಘವಸ್ಯ ಚ ।
ಹನುಮಾಂಶ್ಚ ಮಹಾಬಾಹುಃ ಪ್ರಣಮ್ಯ ಶಿರಸಾ ತತಃ ॥ ೩೮
ನಿಯತಾಮಕ್ಷತಾಂ ದೇವೀಂ ರಾಘವಾಯ ನ್ಯವೇದಯತ್ ।
ನಿಶ್ಚಿತಾರ್ಥಸ್ತತಸ್ತಸ್ಮಿನ್ ಸುಗ್ರೀವಃ ಪವನಾತ್ಮಜೇ ॥ ೩೯
ಲಕ್ಷ್ಮಣಃ ಪ್ರೀತಿಮಾನ್ ಪ್ರೀತಂ ಬಹುಮಾನಾದವೈಕ್ಷತ ।
ಪ್ರೀತ್ಯಾ ಚ ರಮಮಾಣೋಽಥ ರಾಘವಃ ಪರವೀರಹಾ ॥ ೪೦
ಬಹುಮಾನೇನ ಮಹತಾ ಹನುಮಂತಮವೈಕ್ಷತ ॥

ಇತಿ ಶ್ರೀಮದ್ರಾಮಾಯಣೇ ಸುಂದರಕಾಂಡೇ ಚತುಃಷಷ್ಟಿತಮಃ ಸರ್ಗಃ

ಕಪಿಗಳು ಶ್ರೀರಾಮನನ್ನು ನೋಡುವುದಕ್ಕಾಗಿ ಆನಂದದಿಂದ ಹಿಗ್ಗುತ್ತ ಬರುತ್ತಿದ್ದರು. ಅವರ ಮುಂದುಗಡೆ ಅಂಗದನೂ ಆಂಜನೇಯನೂ ಬರುತ್ತಿದ್ದರು (೩೬–೩೭). ಅವರೆಲ್ಲರೂ ಶ್ರೀರಾಮಸುಗ್ರೀವರ ಸಮೀಪದಲ್ಲಿ ನೆಲದಮೇಲೆ ಇಳಿದರು. ಹನುಮಂತನು ಶ್ರೀರಾಮನಿಗೆ ತಲೆಬಾಗಿ ''ದೇವಿಯು ನಿಯಮ ಶೀಲೆಯಾಗಿ ಕುಶಲದಿಂದ ಇದ್ದಾಳೆ'' ಎಂದು ನಿವೇದಿಸಿದನು. ಹನುಮಂತನೇ ಈ ಕಾರ್ಯವನ್ನು ಸಾಧಿಸಿದ್ದಾನೆಂದು ಸುಗ್ರೀವನಿಗೆ ನಿಶ್ಚಯವಾಯಿತು. ಲಕ್ಷ್ಮಣನು ಸಂಪ್ರೀತನಾಗಿ ಆದರದಿಂದ ಹನುಮಂತನನ್ನೇ ನೋಡುತ್ತ ನಿಂತನು. ಶ್ರೀರಾಮಚಂದ್ರನು ಸಂತುಷ್ಟನಾಗಿ ಗೌರವಬುದ್ಧಿಯಿಂದ ಹನುಮಂತನನ್ನು ನೋಡಿದನು (೩೮–೪೦).

ಇಲ್ಲಿಗೆ ಶ್ರೀಮದ್ರಾಮಾಯಣದ ಸುಂದರಕಾಂಡದಲ್ಲಿ ಅರುವತ್ತುನಾಲ್ಕನೆಯ ಸರ್ಗ

ಪಂಚಷಷ್ಟಿತಮಃ ಸರ್ಗಃ

ಚೂಡಾಮಣಿಪ್ರದಾನಮ್

ತತಃ ಪ್ರಸ್ರವಣಂ ಶೈಲಂ ತೇ ಗತ್ವಾ ಚಿತ್ರಾಕಾನನಮ್ ।
ಪ್ರಣಮ್ಯ ಶಿರಸಾ ರಾಮಂ ಲಕ್ಷ್ಮಣಂ ಚ ಮಹಾಬಲಮ್ ॥ ೧
ಯುವರಾಜಂ ಪುರಸ್ಕೃತ್ಯ ಸುಗ್ರೀವಮಭಿವಾದ್ಯ ಚ ।
ಪ್ರವೃತ್ತಿಮಥ ಸೀತಾಯಾಃ ಪ್ರವಕ್ತುಮುಪಚಕ್ರಮುಃ ॥ ೨
ರಾವಣಾಂತಃಪುರೇ ರೋಧಂ ರಾಕ್ಷಸೀಭಿಶ್ಚ ತರ್ಜನಮ್ ।
ರಾಮೇ ಸಮನುರಾಗಂ ಚ ಯಶ್ಚಾಯಂ ಸಮಯಃ ಕೃತಃ ॥ ೩
ಏತದಾಖ್ಯಾಂತಿ ತೇ ಸರ್ವೇ ಹರಯೋ ರಾಮಸಂನಿಧೌ ।
ವೈದೇಹೀಮಕ್ಷತಾಂ ಶ್ರುತ್ವಾ ರಾಮಸ್ತೂತ್ತರಮಬ್ರವೀತ್ ॥ ೪
ಕ್ವ ಸೀತಾ ವರ್ತತೇ ದೇವೀ ಕಥಂ ಚ ಮಯಿ ವರ್ತತೇ ।
ಏತನ್ಮೇ ಸರ್ವಮಾಖ್ಯಾತ ವೈದೇಹೀಂ ಪ್ರತಿ ವಾನರಾಃ ॥ ೫

ಸರ್ಗ ೬೫

ಹನುಮಂತನು ಶ್ರೀರಾಮನಿಗೆ ಸೀತಾವೃತ್ತಾಂತವನ್ನೂ, ಸೀತೆಯ ಸಂದೇಶವನ್ನೂ ತಿಳಿಸಿ, ಚೂಡಾಮಣಿಯನ್ನು ಅರ್ಪಿಸುವುದು.

ಹೀಗೆ ಆ ವಾನರರು ಅಂಗದನನ್ನು ಮುಂದಿಟ್ಟುಕೊಂಡು ವಿಚಿತ್ರ ವನಗಳಿಂದ ತುಂಬಿದ ಪ್ರಸ್ರವಣಪರ್ವತಕ್ಕೆ ಬಂದು, ರಾಮಲಕ್ಷ್ಮಣಸುಗ್ರೀವರಿಗೆ ಅಭಿವಂದಿಸಿ ಸೀತಾವೃತ್ತಾಂತವನ್ನು ಹೇಳಲುಪಕ್ರಮಿಸಿದರು (೧–೨). ಅವರೆಲ್ಲರೂ 'ಸೀತಾ ದೇವಿಯು ರಾವಣನ ಅಂತಃಪುರದಲ್ಲಿ ಬಂದಿಯಾಗಿದ್ದಾಳೆ. ರಾಕ್ಷಸಿಯರು ಆಕೆ ಯನ್ನು ಹೆದರಿಸುತ್ತಿದ್ದಾರೆ. ಸೀತೆಯು ರಾಮನಲ್ಲಿಯೇ ಅನುರಾಗವನ್ನು ಇಟ್ಟಿದ್ದಾಳೆ. ರಾವಣನು ಆಕೆಗೆ ಇನ್ನು ಎರಡು ತಿಂಗಳು ಮಾತ್ರ ಅವಧಿಯನ್ನು ಕೊಟ್ಟಿದ್ದಾನೆ' ಎಂಬ ವಿಷಯವನ್ನು ತಿಳಿಸಿದರು (೩). ಶ್ರೀರಾಮನು ಮುಖ್ಯವಾಗಿ ಸೀತೆಯು ಯಾವ ಅಪಾಯವೂ ಇಲ್ಲದೆ ಜೀವಿಸಿದ್ದಾಳೆಂಬುದನ್ನರಿತು "ಎಲೈ ವಾನರರೆ, ಸೀತಾದೇವಿಯು ಎಲ್ಲಿದ್ದಾಳೆ? ನನ್ನ ವಿಷಯದಲ್ಲಿ ಅವಳ ಮನಸ್ಸು ಹೇಗಿದೆ ? ಸೀತೆಯ ವೃತ್ತಾಂತವೆಲ್ಲವನ್ನೂ ವಿಶದವಾಗಿ ತಿಳಿಸಿರಿ" ಎಂದು ಕೇಳಿದನು (೪–೫).

ರಾಮಸ್ಯ ಗದಿತಂ ಶ್ರುತ್ವಾ ಹರಯೋ ರಾಮಸಂನಿಧೌ ।
ಚೋದಯಂತಿ ಹನೂಮಂತಂ ಸೀತಾವೃತ್ತಾಂತಕೋವಿದಮ್ ॥ ೬

ಶ್ರುತ್ವಾ ತೇ ವಚನಂ ತೇಷಾಂ ಹನುಮಾನ್ ಮಾರುತಾತ್ಮಜಃ ।
ಪ್ರಣಮ್ಯ ಶಿರಸಾ ದೇವ್ಯೈ ಸೀತಾಯೈ ತಾಂ ದಿಶಂ ಪ್ರತಿ ॥ ೭

ಉವಾಚ ವಾಕ್ಯಂ ವಾಕ್ಯಜ್ಞಃ ಸೀತಾಯಾ ದರ್ಶನಂ ಯಥಾ ।
ಸಮುದ್ರಂ ಲಂಘಯಿತ್ವಾಹಂ ಶತಯೋಜನಮಾಯತಮ್ ॥ ೮

ಅಗಚ್ಛಂ ಜಾನಕೀಂ ಸೀತಾಂ ಮಾರ್ಗಮಾಣೋ ದಿದೃಕ್ಷಯಾ ।
ತತ್ರ ಲಂಕೇತಿ ನಗರೀ ರಾವಣಸ್ಯ ದುರಾತ್ಮನಃ ॥ ೯

ದಕ್ಷಿಣಸ್ಯ ಸಮುದ್ರಸ್ಯ ತೀರೇ ವಸತಿ ದಕ್ಷಿಣೇ ।
ತತ್ರ ಸೀತಾ ಮಯಾ ದೃಷ್ಟಾ ರಾವಣಾಂತಃಪುರೇ ಸತೀ ॥ ೧೦

ಸಂನ್ಯಸ್ಯ ತ್ವಯಿ ಜೀವಂತೀ ರಾಮಾ ರಾಮ ಮನೋರಥಮ್ ।
ದೃಷ್ಟ್ವಾ ಮೇ ರಾಕ್ಷಸೀಮಧ್ಯೇ ತರ್ಜ್ಯಮಾನಾ ಮುಹುರ್ಮುಹುಃ ॥ ೧೧

ಆಗ ವಾನರರು ಸೀತಾವೃತ್ತಾಂತವನ್ನು ಚೆನ್ನಾಗಿ ಬಲ್ಲ ಹನುಮಂತನನ್ನು ನೋಡಿ ''ಹನುಮಂತ, ಶ್ರೀರಾಮನಿಗೆ ಎಲ್ಲವನ್ನೂ ತಿಳಿಸು'' ಎಂದರು. ಅನಂತರ ಆಂಜನೇಯನು ಸೀತೆಯಿದ್ದ ದಿಕ್ಕಿಗೆ ತಿರುಗಿ ಅವಳಿಗೆ ತಲೆಬಾಗಿ ವಂದಿಸಿ, ಸೀತೆಯನ್ನು ಕಂಡುಬಂದ ಸಂಗತಿಯನ್ನು ಹೇಳಲಾರಂಭಿಸಿದನು. ಆಂಜನೇಯನು ಮಾತನಾಡುವ ಕಲೆಯಲ್ಲಿ ಪ್ರವೀಣ (೬–೭). ''ದೇವ, ನಾನು ಸೀತಾದೇವಿಯನ್ನು ಹುಡುಕುವುದಕ್ಕಾಗಿ ನೂರು ಯೋಜನ ವಿಸ್ತಾರವಾದ ಸಮುದ್ರವನ್ನು ದಾಟಿಹೋದೆನು. ಅಲ್ಲಿ ಲಂಕೆ ಎಂಬ ಹೆಸರಿನ ಒಂದು ನಗರವಿದೆ. ಅದು ದುರಾತ್ಮನಾದ ರಾವಣನ ರಾಜಧಾನಿ. ಅದು ದಕ್ಷಿಣ ಸಮುದ್ರದ ಆಚೆಯ ದಡದಲ್ಲಿದೆ. ರಾವಣನ ಆ ನಗರದಲ್ಲಿ ನಾನು ಸಾಧ್ವಿಯಾದ ಸೀತಾದೇವಿಯನ್ನು ಕಂಡೆನು (೮–೧೦). ಶ್ರೀರಾಮ, ಅವಳು ಮುಂದಿನ ಆಸೆಯನ್ನೆಲ್ಲಾ ನಿನಗೊಪ್ಪಿಸಿ ನಿನ್ನನ್ನೇ ನಂಬಿ ಜೀವವನ್ನು ಹಿಡಿದುಕೊಂಡಿರುವಳು. ರಾಕ್ಷಸಿಯರು ಅವಳನ್ನು ಸುತ್ತುಗಟ್ಟಿ ಪದೇ ಪದೇ ಹೆದರಿಸುವುದನ್ನು ನಾನು ನೋಡಿದೆ. ವಿಕಾರರೂಪಿನ ರಾಕ್ಷಸಿಯರು

ರಾಕ್ಷಸೀಭಿರ್ವಿರೂಪಾಭೀ ರಕ್ಷಿತಾ ಪ್ರಮದಾವನೇ ।
ದುಃಖಮಾಪದ್ಯತೇ ದೇವೀ ತವಾದುಃಖೋಚಿತಾ ಸತೀ ॥ ೧೨

ರಾವಣಾಂತಃಪುರೇ ರುದ್ಧಾ ರಾಕ್ಷಸೀಭಿಃ ಸುರಕ್ಷಿತಾ ।
ಏಕವೇಣೀಧರಾ ದೀನಾ ತ್ವಯಿ ಚಿಂತಾಪರಾಯಣಾ ॥ ೧೩

ಅಧಃಶಯ್ಯಾ ವಿವರ್ಣಾಂಗೀ ಪದ್ಮಿನೀವ ಹಿಮಾಗಮೇ ।
ರಾವಣಾದ್ವಿನಿವೃತ್ತಾರ್ಥಾ ಮರ್ತವ್ಯಕೃತನಿಶ್ಚಯಾ ॥ ೧೪

ದೇವೀ ಕಥಂಚಿತ್ ಕಾಕುತ್ಸ್ಥ ತ್ವನ್ಮನಾ ಮಾರ್ಗಿತಾ ಮಯಾ ।
ಇಕ್ಷ್ವಾಕುವಂಶವಿಖ್ಯಾತಿಂ ಶನೈಃ ಕೀರ್ತಯತಾನಘ ॥ ೧೫

ಸಾ ಮಯಾ ನರಶಾರ್ದೂಲ ವಿಶ್ವಾಸಮುಪಪಾದಿತಾ ।
ತತಃ ಸಂಭಾಷಿತಾ ದೇವೀ ಸರ್ವಮರ್ಥಂ ಚ ದರ್ಶಿತಾ ॥ ೧೬

ರಾಮಸುಗ್ರೀವಸಖ್ಯಂ ಚ ಶ್ರುತ್ವಾ ಪ್ರೀತಿಮುಪಾಗತಾ ।
ನಿಯತಃ ಸಮುದಾಚಾರೋ ಭಕ್ತಿಶ್ಚಾಸ್ಯಾಸ್ತಥಾ ತ್ವಯಿ ॥ ೧೭

ಉದ್ಯಾನವನದಲ್ಲಿ ಅವಳನ್ನು ಕಾಯುತ್ತಿದ್ದಾರೆ. ಸೀತಾದೇವಿಯು ಅತ್ಯಂತ ದುಃಖದಲ್ಲಿದ್ದಾಳೆ. ಆ ಸಾಧ್ವಿಗೆ ಅಂತಹ ಕಷ್ಟ ಬರಬಾರದು (೧೧–೧೨). ರಾವಣನ ನಗರದಲ್ಲಿ ಸೆರೆಯಾಗಿಬಿಟ್ಟಿದ್ದಾಳೆ. ರಾಕ್ಷಸಿಯರು ಬಹು ಎಚ್ಚರಿಕೆಯಿಂದ ಕಾಯುತ್ತಿದ್ದಾರೆ. ದೇವಿಯು ಒಂಟಿ ಜಡೆಯನ್ನು ಬಿಟ್ಟು ದೈನ್ಯದಿಂದ ನಿನ್ನನ್ನೇ ಧ್ಯಾನಿಸುತ್ತಿದ್ದಾಳೆ. ನೆಲದಮೇಲೆ ಮಲಗುತ್ತಾಳೆ. ಕಂದಿ ಹೋಗಿದ್ದಾಳೆ. ಚಳಿಗಾಲದ ತಾವರೆಯ ಬಳ್ಳಿಯಂತೆ ಆಗಿಬಿಟ್ಟಿದ್ದಾಳೆ. ರಾವಣನಿಂದ ಉಳಿಗಾಲವಿಲ್ಲವೆಂದು ಭಾವಿಸಿ, ತಾನು ಆತ್ಮಹತ್ಯೆ ಮಾಡಿಕೊಳ್ಳಬೇಕೆಂದು ನಿರ್ಧರಿಸಿಕೊಂಡಿದ್ದಾಳೆ (೧೩–೧೪). ಶ್ರೀರಾಮ, ನಿನ್ನನ್ನೇ ಧ್ಯಾನಿಸುತ್ತಿರುವ ದೇವಿಯನ್ನು ನಾನು ಹೇಗೋ ಪ್ರಯತ್ನಪಟ್ಟು ಹುಡುಕಿದೆನು. ನಾನು ಮೊದಲು ನಿನ್ನ ಇಕ್ಷ್ವಾಕುವಂಶದ ಖ್ಯಾತಿಯನ್ನು ಹೊಗಳುತ್ತ, ಅವಳಿಗೆ ನನ್ನಲ್ಲಿ ನಂಬಿಕೆಯುಂಟಾಗುವಂತೆ ಮಾಡಿಕೊಂಡೆನು. ಅನಂತರ ಅವಳೊಡನೆ ಸಂಭಾಷಣೆಯನ್ನಾರಂಭಿಸಿ ಸಮಸ್ತ ವಿಷಯವನ್ನೂ ತಿಳಿಸಿದೆನು (೧೫–೧೬). ನಿನಗೂ ಸುಗ್ರೀವನಿಗೂ ಸ್ನೇಹವಾಗಿದೆ

ಏವಂ ಮಯಾ ಮಹಾಭಾಗಾ ದೃಷ್ಟ್ವಾ ಜನಕನಂದಿನೀ ।
ಉಗ್ರೇಣ ತಪಸಾ ಯುಕ್ತಾ ತ್ವದ್ಭಕ್ತ್ಯಾ ಪುರುಷರ್ಷಭ ॥ ೧೮

ಅಭಿಜ್ಞಾನಂ ಚ ಮೇ ದತ್ತಂ ಯಥಾವೃತ್ತಂ ತವಾಂತಿಕೇ ।
ಚಿತ್ರಕೂಟೇ ಮಹಾಪ್ರಾಜ್ಞ ವಾಯಸಂ ಪ್ರತಿ ರಾಘವ ॥ ೧೯

ವಿಜ್ಞಾಪ್ಯಶ್ಚ ನರವ್ಯಾಘ್ರೋ ರಾಮೋ ವಾಯುಸುತ ತ್ವಯಾ ।
ಅಖಿಲೇನೇಹ ಯದ್ದೃಷ್ಟಮಿತಿ ಮಾಮಾಹ ಜಾನಕೀ ॥ ೨೦

ಅಯಂ ಚಾಸ್ಮೈ ಪ್ರದಾತವ್ಯೋ ಯತ್ನಾತ್ ಸುಪರಿರಕ್ಷಿತಃ ।
ಬ್ರುವತಾ ವಚನಾನ್ಯೇವಂ ಸುಗ್ರೀವಸ್ಯೋಪಶೃಣ್ವತಃ ॥ ೨೧

ಏಷ ಚೂಡಾಮಣಿಃ ಶ್ರೀಮಾನ್ ಮಯಾ ಸುಪರಿರಕ್ಷಿತಃ ।
ಮನಃಶಿಲಾಯಾಸ್ತಿಲಕೋ ಗಂಡಪಾರ್ಶ್ವೇ ನಿವೇಶಿತಃ ॥ ೨೨

ಎಂಬುದನ್ನು ಕೇಳಿ, ಬಹಳ ಸಂತೋಷಪಟ್ಟಳು. ಸೀತಾದೇವಿಯು ಪರಿಶುದ್ಧವಾದ ನಡತೆಯನ್ನು ಕಟ್ಟುನಿಟ್ಟಾಗಿ ಪಾಲಿಸಿಕೊಂಡಿದ್ದಾಳೆ. ನಿನ್ನಲ್ಲಿ ದೃಢವಾದ ಭಕ್ತಿಯನ್ನು ಇಟ್ಟಿದ್ದಾಳೆ. ಹೇ ಪುರುಷೋತ್ತಮ, ಈ ರೀತಿಯಲ್ಲಿ ನಾನು ಮಹಾತ್ಮಳಾದ ಜಾನಕಿಯನ್ನು ನೋಡಿದೆನು. ಆವಳು ಪಾತಿವ್ರತ್ಯವೆಂಬ ಉಗ್ರವಾದ ತಪಸ್ಸನ್ನಾಚರಿಸುತ್ತ ನಿನ್ನಲ್ಲಿ ಭಕ್ತಿಯಿಂದ ಇರುವಳು (೧೭–೧೮). ಚಿತ್ರಕೂಟದಲ್ಲಿದ್ದಾಗ ನಡೆದ ವಾಯಸವೃತ್ತಾಂತವೊಂದನ್ನು ನಿನಗೆ ಗುರುತಿಗಾಗಿ ನನ್ನೊಡನೆ ಹೇಳಿದಳು. ಸೀತಾದೇವಿಯು 'ವಾಯುಪುತ್ರ, ನೀನು ಇಲ್ಲಿ ಕಣ್ಣಾರೆ ನೋಡಿದ ಎಲ್ಲಾ ಸಂಗತಿಯನ್ನೂ ಶ್ರೀರಾಮನಿಗೆ ತಿಳಿಸು (೧೯–೨೦). ಸುಗ್ರೀವನು ಸಮೀಪದಲ್ಲಿ ಕೇಳುತ್ತಿರುವಾಗಲೇ ಇದೆಲ್ಲವನ್ನೂ ತಿಳಿಸಿ, ನಾನು ರಕ್ಷಿಸಿಕೊಂಡು ಬಂದಿರುವ ಈ ವಸ್ತುವನ್ನು ಶ್ರೀರಾಮನಿಗೆ ಕೊಡು' ಎಂದು ಹೇಳಿದಳು. ಅನಂತರ 'ಶ್ರೀರಾಮನಿಗೆ ಇದನ್ನು ಕೊಡುವಾಗ ನಾನು ಹೀಗೆ ನುಡಿದೆನೆಂದು ಹೇಳು : ಇದು ಬಹುಪ್ರಯಾಸದಿಂದ ನಾನು ಕಾಪಾಡಿಕೊಂಡು ಬಂದಿರುವ ಚೂಡಾಮಣಿ. ಒಂದುಸಲ ನನ್ನ ತಿಲಕವು ಅಳಿಸಿಹೋಗಿರಲು ನೀನು ಮಣಿಶಿಲೆಯಿಂದ ನನ್ನ ಕಪೋಲದ ಮೇಲೆ ಒಂದು ಬೊಟ್ಟನ್ನು ಇಟ್ಟೆ. ಅದನ್ನು ನೆನಪುಮಾಡಿಕೊ

ತ್ವಯಾ ಪ್ರನಷ್ಟೇ ತಿಲಕೇ ತಂ ಕಿಲ ಸ್ಮರ್ತುಮರ್ಹಸಿ ।
ಏಷ ನಿರ್ಯಾತಿತಃ ಶ್ರೀಮಾನ್ ಮಯಾ ತೇ ವಾರಿಸಂಭವಃ ॥ ೨೩

ಏತಂ ದೃಷ್ಟ್ವಾ ಪ್ರಮೋದಿಷ್ಯೇ ವ್ಯಸನೇ ತ್ವಾಮಿವಾನಘ ।
ಜೀವಿತಂ ಧಾರಯಿಷ್ಯಾಮಿ ಮಾಸಂ ದಶರಥಾತ್ಮಜ ॥ ೨೪

ಊರ್ಧ್ವಂ ಮಾಸಾನ್ನ ಜೀವೇಯಂ ರಕ್ಷಸಾಂ ವಶಮಾಗತಾ ।
ಇತಿ ಮಾಮಬ್ರವೀತ್ ಸೀತಾ ಕೃಶಾಂಗೀ ವರವರ್ಣಿನೀ ॥ ೨೫

ರಾವಣಾಂತಃಪುರೇ ರುದ್ಧಾ ಮೃಗೀವೋತ್ಫುಲ್ಲಲೋಚನಾ ।
ಏತದೇವ ಮಯಾಖ್ಯಾತಂ ಸರ್ವಂ ರಾಘವ ಯದ್ಯಥಾ ॥ ೨೬

ಸರ್ವಥಾ ಸಾಗರಜಲೇ ಸಂತಾರಃ ಪ್ರವಿಧೀಯತಾಮ್ ।

ತೌ ಜಾತಾಶ್ವಾಸೌ ರಾಜಪುತ್ರೌ ವಿದಿತ್ವಾ
ತಚ್ಚಾಭಿಜ್ಞಾನಂ ರಾಘವಾಯ ಪ್ರದಾಯ ॥

(೨೧–೨೨). ನಾನು ರಕ್ಷಿಸಿಕೊಂಡು ಬಂದಿದ್ದ ಈ ದಿವ್ಯ ಚೂಡಾಮಣಿಯನ್ನು ಈಗ ಕಳುಹಿಸಿಬಿಟ್ಟಿದ್ದೇನೆ. ಶೋಕವು ಉಕ್ಕಿಬಂದಾಗ ಈ ಚೂಡಾಮಣಿಯನ್ನು ನೋಡಿದರೆ ನಿನ್ನನ್ನೇ ನೋಡಿದಂತೆ ಮನಸ್ಸಿಗೆ ಹರ್ಷವಾಗುತ್ತಿತ್ತು. ದಶರಥಪುತ್ರ, ಇನ್ನು ಒಂದು ತಿಂಗಳು ಹೇಗಾದರೂ ಪ್ರಾಣವನ್ನು ಹಿಡಿದುಕೊಳ್ಳುವೆನು. ತಿಂಗಳು ಕಳೆದಮೇಲೆ ಸರ್ವಥಾ ನಾನು ಬದುಕುವುದಿಲ್ಲ. ರಾಕ್ಷಸರ ಕೈಗೆ ಸಿಕ್ಕಿಹೋಗಿದ್ದೇನೆ' ಎಂದು ವಿಜ್ಞಾಪಿಸಬೇಕೆಂದು ನುಡಿದಳು (೨೩–೨೫). ರಘುನಾಥ, ರಾವಣಾಂತಃಪುರದಲ್ಲಿ ದೇವಿಯು ಸೆರೆಯಾಗಿ ಕೃಶಳಾಗಿಬಿಟ್ಟಿದ್ದಾಳೆ. ಹೆಣ್ಣುಜಿಂಕೆಯಂತೆ ಕಣ್ಣನ್ನು ಅರಳಿಸಿಕೊಂಡು ಈ ಮಾತನ್ನು ನನಗೆ ಹೇಳಿದಳು. ಅವಳು ಹೇಳಿದ ಮಾತನ್ನೇ ನಾನು ನಿನಗೆ ತಿಳಿಸಿದ್ದೇನೆ. ಈಗ ಸಮುದ್ರವನ್ನು ದಾಟಲು ತಕ್ಕ ಪ್ರಯತ್ನವನ್ನು ಮಾಡಬೇಕು'' ಎಂದನು (೨೬). ಹೀಗೆ ವಾಯುಪುತ್ರನಾದ ಆಂಜನೇಯನು ರಾಮಲಕ್ಷ್ಮಣರಿಗೆ ಸೀತಾವೃತ್ತಾಂತವನ್ನು ಹೇಳಿ ಧೈರ್ಯವನ್ನುಂಟುಮಾಡಿದನು.

ದೇವ್ಯಾ ಚಾಖ್ಯಾತಂ ಸರ್ವಮೇವಾನುಪೂರ್ವ್ಯಾ-
ದ್ವಾಚಾ ಸಂಪೂರ್ಣಂ ವಾಯುಪುತ್ರಃ ಶಶಂಸ ॥ ೨೭

ಇತಿ ಶ್ರೀಮದ್ರಾಮಾಯಣೇ ಸುಂದರಕಾಂಡೇ ಪಂಚಷಷ್ಟಿತಮಃ ಸರ್ಗಃ

—೦—

ಷಟ್ಷಷ್ಟಿತಮಃ ಸರ್ಗಃ

ಸೀತಾಭಾಷಿತಪ್ರಶ್ನಃ

ಏವಮುಕ್ತೋ ಹನುಮತಾ ರಾಮೋ ದಶರಥಾತ್ಮಜಃ ।
ತಂ ಮಣಿಂ ಹೃದಯೇ ಕೃತ್ವಾ ಪ್ರರುರೋದ ಸಲಕ್ಷ್ಮಣಃ ॥ ೧
ತಂ ತು ದೃಷ್ಟ್ವಾ ಮಣಿಶ್ರೇಷ್ಠಂ ರಾಘವಃ ಶೋಕಕರ್ಶಿತಃ ।
ನೇತ್ರಾಭ್ಯಾಮಶ್ರುಪೂರ್ಣಾಭ್ಯಾಂ ಸುಗ್ರೀವಮಿದಮಬ್ರವೀತ್ ॥ ೨
ಯಥೈವ ಧೇನುಃ ಸ್ರವತಿ ಸ್ನೇಹಾದ್ವತ್ಸಸ್ಯ ವತ್ಸಲಾ ।
ತಥಾ ಮಮಾಪಿ ಹೃದಯಂ ಮಣಿರತ್ನಸ್ಯ ದರ್ಶನಾತ್ ॥ ೩

ಸೀತಾದೇವಿಯು ಹೇಳಿಕಳಿಸಿದ ಸಂದೇಶವೆಲ್ಲವನ್ನೂ ಯಥಾವತ್ತಾಗಿ ತಿಳಿಸಿ, ಶ್ರೀರಾಮನಿಗೆ ಚೂಡಾಮಣಿಯನ್ನು ಅರ್ಪಿಸಿದನು (೨೭).

ಇಲ್ಲಿಗೆ ಶ್ರೀಮದ್ರಾಮಾಯಣದ ಸುಂದರಕಾಂಡದಲ್ಲಿ ಅರುವತ್ತೈದನೆಯ ಸರ್ಗ

ಸರ್ಗ ೬೬

ಶ್ರೀರಾಮನು ಚೂಡಾಮಣಿಯನ್ನು ನೋಡಿ ದುಃಖಿಸುತ್ತ, ಸೀತಾಸಂದೇಶವನ್ನು ಇನ್ನೂ ಹೇಳುವಂತೆ ಹನುಮಂತನನ್ನು ಕೇಳುವುದು.

ಶ್ರೀರಾಮನು ಆ ಚೂಡಾಮಣಿಯನ್ನು ಎದೆಗೆ ಒತ್ತಿಕೊಂಡು ಗಳಗಳನೆ ಅತ್ತುಬಿಟ್ಟನು. ಲಕ್ಷ್ಮಣನೂ ಅಳತೊಡಗಿದನು. ಶ್ರೀರಾಮನು ಕಣ್ಣೀರು ತುಂಬಿಕೊಂಡು ಚೂಡಾಮಣಿಯನ್ನು ನೋಡುತ್ತ ಸುಗ್ರೀವನನ್ನು ಕುರಿತು ''ಮಿತ್ರ-ಸುಗ್ರೀವ, ಹಸು ತನ್ನ ಕರುವನ್ನು ಕಂಡಾಗ, ಪ್ರೀತಿಯಿಂದ ಕೆಚ್ಚಲು ಸ್ರವಿಸುವಂತೆ, ಈ ಮಣಿರತ್ನವನ್ನು ಕಂಡು ನನ್ನ ಹೃದಯವು ಕರಗಿಹೋಗುತ್ತಿದೆ (೧–೩).

ಮಣಿರತ್ನಮಿದಂ ದತ್ತಂ ವೈದೇಹ್ಯಾಃ ಶ್ವಶುರೇಣ ಮೇ ।
ವಧೂಕಾಲೇ ಯಥಾಬದ್ಧಮಧಿಕಂ ಮೂರ್ಧ್ನಿ ಶೋಭತೇ ॥ ೪

ಅಯಂ ಹಿ ಜಲಸಂಭೂತೋ ಮಣಿಃ ಸಜ್ಜನಪೂಜಿತಃ ।
ಯಜ್ಞೇ ಪರಮತುಷ್ಟೇನ ದತ್ತಃ ಶಕ್ರೇಣ ಧೀಮತಾ ॥ ೫

ಇಮಂ ದೃಷ್ಟ್ವಾ ಮಣಿಶ್ರೇಷ್ಠಂ ಯಥಾ ತಾತಸ್ಯ ದರ್ಶನಮ್ ।
ಅದ್ಯಾಸ್ಮ್ಯವಗತಃ ಸೌಮ್ಯ ವೈದೇಹಸ್ಯ ತಥಾ ವಿಭೋಃ ॥ ೬

ಅಯಂ ಹಿ ಶೋಭತೇ ತಸ್ಯಾಃ ಪ್ರಿಯಾಯಾ ಮೂರ್ಧ್ನಿ ಮೇ ಮಣಿಃ ।
ಅದ್ಯಾಸ್ಯ ದರ್ಶನೇನಾಹಂ ಪ್ರಾಪ್ತಾಂ ತಾಮಿವ ಚಿಂತಯೇ ॥ ೭

ಕಿಮಾಹ ಸೀತಾ ವೈದೇಹೀ ಬ್ರೂಹಿ ಸೌಮ್ಯ ಪುನಃ ಪುನಃ ।
ಪಿಪಾಸುಮಿವ ತೋಯೇನ ಸಿಂಚಂತೀ ವಾಕ್ಯವಾರಿಣಾ ॥ ೮

ಇತಸ್ತು ಕಿಂ ದುಃಖತರಂ ಯದಿಮಂ ವಾರಿಸಂಭವಮ್ ।
ಮಣಿಂ ಪಶ್ಯಾಮಿ ಸೌಮಿತ್ರೇ ವೈದೇಹೀಮಾಗತಂ ವಿನಾ ॥ ೯

ನನ್ನ ಮಾವನು ಈ ರತ್ನವನ್ನು ಸೀತೆಗೆ ಮದುವೆಯ ಕಾಲದಲ್ಲಿ ಕೊಟ್ಟಿದ್ದನು. ಅವಳು ಮದುವಣಗಿತ್ತಿಯಾಗಿದ್ದಾಗ ಇದು ಅವಳ ತಲೆಯಲ್ಲಿ ಬಹಳ ಚೆನ್ನಾಗಿ ಒಪ್ಪುತ್ತಿತ್ತು. ಇದು ಸಮುದ್ರದಲ್ಲಿ ಹುಟ್ಟಿದ ಅಪೂರ್ವರತ್ನ. ಬಲ್ಲವರು ಇದನ್ನು ಬಹಳ ಗೌರವದಿಂದ ಕಾಣುತ್ತ ಬಂದಿದ್ದಾರೆ. ಜನಕ ಮಹಾರಾಜನು ಒಂದು ಯಜ್ಞವನ್ನು ನಡೆಸಿದಾಗ ದೇವೇಂದ್ರನು ಸಂತುಷ್ಟನಾಗಿ ಇದನ್ನು ಆತನಿಗೆ ಕೊಟ್ಟನು (೪–೫). ಸೌಮ್ಯ, ಈ ಚೂಡಾಮಣಿಯನ್ನು ನೋಡಿದರೆ ನನ್ನ ತಂದೆಯೂ ಜನಕಮಹಾರಾಜನೂ ಕಣ್ಣಿಗೆ ಕಟ್ಟಿದಂತಾಗುವರು. ಈ ರತ್ನವು ನನ್ನ ಪ್ರಿಯಳ ತಲೆಗೆ ಬಹಳ ಚೆನ್ನಾಗಿ ಒಪ್ಪುತ್ತದೆ. ಈಗ ನನ್ನ ಪ್ರಿಯಳೇ ಎದುರಿಗೆ ಬಂದು ನಿಂತಂತೆ ತೋರುತ್ತದೆ'' ಎಂದು ಹೇಳಿದನು (೬–೭). ಪುನಃ ಹನುಮಂತನಕಡೆಗೆ ತಿರುಗಿ ''ಸೌಮ್ಯ—ಹನುಮಂತ, ಸೀತೆ ಏನೇನು ಹೇಳಿದಳು ? ಮತ್ತೆ ಮತ್ತೆ ಹೇಳು. ಅವಳ ಸಂದೇಶವು ನನಗೆ, ಬಾಯಾರಿದವನಿಗೆ ನೀರು ಕೊಟ್ಟಂತೆ ಆಗುವುದು. ಅವಳು ನನಗೇನು ಹೇಳಿಕಳುಹಿಸಿದ್ದಾಳೆ ? ಲಕ್ಷ್ಮಣ, ಇದಕ್ಕಿಂತಲೂ ದುಃಖ ಇನ್ನಾವುದು ? ಚೂಡಾಮಣಿಯು ಮಾತ್ರ ಕಾಣುತ್ತಿದೆ. ಸೀತೆ ಇಲ್ಲ (೮–೯).

ಚಿರಂ ಜೀವತಿ ವೈದೇಹೀ ಯದಿ ಮಾಸಂ ಧರಿಷ್ಯತಿ ।
ನ ಜೀವೇಯಂ ಕ್ಷಣಮಪಿ ವಿನಾ ತಾಮಸಿತೇಕ್ಷಣಾಮ್ ॥ ೧೦

ನಯ ಮಾಮಪಿ ತಂ ದೇಶಂ ಯತ್ರ ದೃಷ್ಟಾ ಮಮ ಪ್ರಿಯಾ ।
ನ ತಿಷ್ಠೇಯಂ ಕ್ಷಣಮಪಿ ಪ್ರವೃತ್ತಿಮುಪಲಭ್ಯ ಚ ॥ ೧೧

ಕಥಂ ಸಾ ಮಮ ಸುಶ್ರೋಣೀ ಭೀರುಭೀರುಃ ಸತೀ ಸದಾ ।
ಭಯಾವಹಾನಾಂ ಘೋರಾಣಾಂ ಮಧ್ಯೇ ತಿಷ್ಠತಿ ರಕ್ಷಸಾಮ್ ॥ ೧೨

ಶಾರದಸ್ತಿಮಿರೋನ್ಮುಕ್ತೋ ನೂನಂ ಚಂದ್ರ ಇವಾಂಬುದೈಃ ।
ಆವೃತಂ ವದನಂ ತಸ್ಯಾ ನ ವಿರಾಜತಿ ರಾಕ್ಷಸೈಃ ॥ ೧೩

ಕಿಮಾಹ ಸೀತಾ ಹನುಮಂಸ್ತತ್ತ್ವತಃ ಕಥಯಾದ್ಯ ಮೇ ।
ಏತೇನ ಖಲು ಜೀವಿಷ್ಯೇ ಭೇಷಜೇನಾತುರೋ ಯಥಾ ॥ ೧೪

ಇನ್ನು ಒಂದು ತಿಂಗಳು ಸೀತೆಯು ಬದುಕುವುದಾದರೆ, ಚಿರಂಜೀವಿನಿಯೇ ಸರಿ. ನಾನು ಮಾತ್ರ ಆ ನೀಲನೇತ್ರೆಯನ್ನು ಬಿಟ್ಟು ಇನ್ನು ಒಂದು ಕ್ಷಣವೂ ಬದುಕಲಾರೆ. ಹನುಮಂತ, ನನ್ನ ಪ್ರಿಯಳಿರುವ ಸ್ಥಳಕ್ಕೆ ನನ್ನನ್ನು ಕರೆದುಕೊಂಡು ಹೋಗು. ಅವಳ ಸುದ್ದಿ ಗೊತ್ತಾದಮೇಲೆ ಇನ್ನು ಒಂದು ನಿಮಿಷವೂ ಇಲ್ಲಿರಲಾರೆನು (೧೦–೧೧). ಆ ನನ್ನ ಕಾಂತೆ–ಆ ಸಾಧ್ವಿ, ಘೋರರಾಕ್ಷಸರ ನಡುವೆ ಹೆದರುತ್ತ ಹೆದರುತ್ತ ಹೇಗೆ ಇದ್ದಿರಬಹುದು? ರಾಕ್ಷಸರ ಮಧ್ಯದಲ್ಲಿ ಅವಳ ಮುದ್ದುಮುಖವು ಎಂದಿಗೂ ಶೋಭಿಸಲಾರದು. ಶರತ್ಕಾಲದ ರಾತ್ರಿಯಲ್ಲಿ ಬೆಳಗುವ ಚಂದ್ರನಿಗೆ ಮೋಡ ಮುಸುಕಿದಂತೆ, ಅವಳ ಮುಖವು ನಿಶ್ಚಯವಾಗಿಯೂ ಮಾಸಿ ಹೋಗಿರಬೇಕು (೧೨–೧೩). ಹನುಮಂತ, ನನ್ನ ಸೀತೆ ಏನೇನು ಹೇಳಿದ್ದಾಳೆ—ಎಲ್ಲವನ್ನೂ ಹೇಳಿಬಿಡು. ಔಷಧದಿಂದ ರೋಗಿಯು ಉಳಿದುಕೊಳ್ಳುವಂತೆ, ಅವಳ ಮಾತಿನಿಂದಲೇ ನಾನು ಜೀವವನ್ನು ಹಿಡಿದುಕೊಳ್ಳುವೆನು. ಅಪ್ಪಾ–ಹನುಮಂತ, ಮಧುರಸ್ವಭಾವದ ನನ್ನ ಪ್ರಿಯಳು ಮಧುರವಾಗಿ ಮಾತನಾಡತಕ್ಕವಳು. ಅವಳು

ಮಧುರಾ ಮಧುರಾಲಾಪಾ ಕಿಮಾಹ ಮಮ ಭಾಮಿನೀ ।
ಮದ್ವಿಹೀನಾ ವರಾರೋಹಾ ಹನುಮನ್ ಕಥಯಸ್ವ ಮೇ ॥ ೧೫

ಇತಿ ಶ್ರೀಮದ್ರಾಮಾಯಣೇ ಸುಂದರಕಾಂಡೇ ಷಟ್‌ಷಷ್ಟಿತಮಃ ಸರ್ಗಃ

———O———

ಸಪ್ತಷಷ್ಟಿತಮಃ ಸರ್ಗಃ

ಸೀತಾಭಾಷಿತಾನುವಚನಮ್

ಏವಮುಕ್ತಸ್ತು ಹನುಮಾನ್ ರಾಘವೇಣ ಮಹಾತ್ಮನಾ ।
ಸೀತಾಯಾ ಭಾಷಿತಂ ಸರ್ವಂ ನ್ಯವೇದಯತ ರಾಘವೇ ॥ ೧
ಇದಮುಕ್ತವತೀ ದೇವೀ ಜಾನಕೀ ಪುರುಷರ್ಷಭ ।
ಪೂರ್ವವೃತ್ತಮಭಿಜ್ಞಾನಂ ಚಿತ್ರಕೂಟೇ ಯಥಾತಥಮ್ ॥ ೨
ಸುಖಸುಪ್ತಾ ತ್ವಯಾ ಸಾರ್ಧಂ ಜಾನಕೀ ಪೂರ್ವಮುತ್ಥಿತಾ ।
ವಾಯಸಃ ಸಹಸೋತ್ಪತ್ಯ ವಿದದಾರ ಸ್ತನಾಂತರೇ ॥ ೩

ಏನು ಹೇಳಿದಳು? ನನ್ನನ್ನು ಆಗಲಿರುವ ಆ ಸುಂದರಿ ಏನು ಹೇಳಿದಳು? ನನಗೆ ಹೇಳು'' ಎಂದು ನುಡಿದನು (೧೪–೧೫)

ಇಲ್ಲಿಗೆ ಶ್ರೀಮದ್ರಾಮಾಯಣದ ಸುಂದರಕಾಂಡದಲ್ಲಿ ಅರುವತ್ತಾರನೆಯ ಸರ್ಗ

———O———

ಸರ್ಗ ೬೭

ಹನುಮಂತನು ರಾಮನಿಗೆ ಸೀತಾಸಂದೇಶವನ್ನು ವಿಸ್ತಾರವಾಗಿ ಹೇಳುವುದು.

ಆಗ ಹನುಮಂತನು ಸೀತಾದೇವಿಯಾಡಿದ ಮಾತುಗಳೆಲ್ಲವನ್ನೂ ವಿಸ್ತಾರವಾಗಿ ನಿವೇದಿಸಲಾರಂಭಿಸಿದನು; ಹೇ ಪುರುಷೋತ್ತಮ, ಜಾನಕೀ ದೇವಿಯು ಚಿತ್ರಕೂಟದಲ್ಲಿ ನಡೆದ ವೃತ್ತಾಂತವನ್ನು ಗುರುತಿಗಾಗಿ ಹೇಳಿದಳು (೧–೨). ಅಲ್ಲಿ ಜಾನಕಿಯು ಒಂದು ದಿನ ನಿನ್ನೊಡನೆ ಮಲಗಿ ಸುಖವಾಗಿ ನಿದ್ರಿಸುತ್ತಿರಲು ಅವಳಿಗೆ ಮೊದಲು ಎಚ್ಚರವಾಯಿತಂತೆ. ಆಗ ಒಂದು ಕಾಗೆಯು

ಪರ್ಯಾಯೇಣ ಚ ಸುಪ್ತಸ್ತ್ವಂ ದೇವ್ಯಂಕೇ ಭರತಾಗ್ರಜ ।
ಪುನಶ್ಚ ಕಿಲ ಪಕ್ಷೀ ಸ ದೇವ್ಯಾ ಜನಯತಿ ವ್ಯಥಾಮ್ ॥ ೪

ಪುನಃ ಪುನರುಪಾಗಮ್ಯ ವಿರರಾದ ಭೃಶಂ ಕಿಲ ।
ತತಸ್ತ್ವಂ ಬೋಧಿತಸ್ತಸ್ಯಾಃ ಶೋಣಿತೇನ ಸಮುಕ್ಷಿತಃ ॥ ೫

ವಾಯಸೇನ ಚ ತೇನೈವಂ ಸತತಂ ಬಾಧ್ಯಮಾನಯಾ ।
ಬೋಧಿತಃ ಕಿಲ ದೇವ್ಯಾ ತ್ವಂ ಸುಖಸುಪ್ತಃ ಪರಂತಪ ॥ ೬

ತಾಂ ತು ದೃಷ್ಟ್ವಾ ಮಹಾಬಾಹೋ ದಾರಿತಾಂ ಚ ಸ್ತನಾಂತರೇ ।
ಆಶೀವಿಷ ಇವ ಕ್ರುದ್ಧೋ ನಿಃಶ್ವಸನ್ನಭ್ಯಭಾಷಥಾಃ ॥ ೭

ನಖಾಗ್ರೈಃ ಕೇನ ತೇ ಭೀರು ದಾರಿತಂ ತು ಸ್ತನಾಂತರಮ್ ।
ಕಃ ಕ್ರೀಡತಿ ಸರೋಷೇಣ ಪಂಚವಕ್ತ್ರೇಣ ಭೋಗಿನಾ ॥ ೮

ನಿರೀಕ್ಷಮಾಣಃ ಸಹಸಾ ವಾಯಸಂ ಸಮವೈಕ್ಷಥಾಃ ।
ನಖೈಃ ಸರುಧಿರೈಸ್ತೀಕ್ಷ್ಣೈಸ್ತಾಮೇವಾಭಿಮುಖಂ ಸ್ಥಿತಮ್ ॥ ೯

ತಟ್ಟನೆ ಹಾರಿಬಂದು ಅವಳ ಎದೆಯನ್ನು ಕುಕ್ಕಿತು. ಆ ಸಮಯದಲ್ಲಿ ನೀನು ದೇವಿಯ ತೊಡೆಯಮೇಲೆ ತಲೆ ಇಟ್ಟು ನಿದ್ರೆಮಾಡುತ್ತಿದ್ದೆ. ಕಾಗೆಯು ಪುನಃ ಪುನಃ ಹಾರಿಬಂದು ದೇವಿಗೆ ತೊಂದರೆಯನ್ನು ಕೊಡುತ್ತಲೇ ಇತ್ತು (೩–೪). ಅವಳ ಎದೆಯನ್ನು ಕುಕ್ಕುತ್ತಲೇ ಇದ್ದಿತಂತೆ. ಆಗ ರಕ್ತವು ಮೈಮೇಲೆ ಸುರಿಯಲು ನಿನಗೆ ಎಚ್ಚರವಾಯಿತು. ಕಾಗೆಯ ಹಿಂಸೆಯನ್ನು ತಡೆಯಲಾರದೆ ಸೀತಾದೇವಿಯು ಸುಖವಾಗಿ ನಿದ್ರಿಸುತ್ತಿದ್ದ ನಿನ್ನನ್ನು ಎಚ್ಚರಗೊಳಿಸಿದಳಂತೆ. (೫–೬). ನೀನು ಎದ್ದು ಆಕೆಯ ಮೈಮೇಲೆ ಆದ ಗಾಯವನ್ನು ಕಂಡು ಕ್ರೋಧದಿಂದ ಸರ್ಪದಂತೆ ನಿಟ್ಟುಸಿರುಬಿಡುತ್ತಾ ದೇವಿಯನ್ನು ಕುರಿತು "ಭೀರು, ನಿನ್ನ ಎದೆಯನ್ನು ಉಗುರುಗಳಿಂದ ಗೀರಿ ಹೀಗೆ ಗಾಯಗೊಳಿಸಿದವನಾರು? ಕ್ರುದ್ಧನಾದ ಐದು ಹೆಡೆಯ ಮಹಾಸರ್ಪದೊಡನೆ ಆಟವಾಡುತ್ತಿರುವವನಾರು?" ಎಂದು ಕೇಳುತ್ತ ಸುತ್ತಲೂ ನೋಡಲಾಗಿ ಆ ವಾಯಸವು ನಿನಗೆ ಕಾಣಿಸಿತು. ಅದರ ಹರಿತವಾದ ಉಗುರುಗಳು ರಕ್ತದಿಂದ ಒದ್ದೆಯಾಗಿದ್ದವು. ಅದು ದೇವಿಯನ್ನು ನೋಡುತ್ತ ಎದುರಿಗೆ ಕುಳಿತಿತ್ತು (೭–೯).

ಸುತಃ ಕಿಲ ಸ ಶಕ್ರಸ್ಯ ವಾಯಸಃ ಪತತಾಂ ವರಃ ।
ಧರಾಂತರಚರಃ ಶೀಘ್ರಂ ಪವನಸ್ಯ ಗತೌ ಸಮಃ ॥ ೧೦

ತತಸ್ತಸ್ಮಿನ್ ಮಹಾಬಾಹೋ ಕೋಪಸಂವರ್ತಿತೇಕ್ಷಣಃ ।
ವಾಯಸೇ ತ್ವಂ ಕೃಥಾಃ ಕ್ರೂರಾಂ ಮತಿಂ ಮತಿಮತಾಂ ವರ ॥ ೧೧

ಸ ದರ್ಭಂ ಸಂಸ್ತರಾದ್ಗೃಹ್ಯ ಬ್ರಹ್ಮಾಸ್ತ್ರೇಣ ಹ್ಯಯೋಜಯಃ ।
ಸ ದೀಪ್ತ ಇವ ಕಾಲಾಗ್ನಿರ್ಜಜ್ವಾಲಾಭಿಮುಖಃ ಖಗಮ್ ॥ ೧೨

ಕ್ಷಿಪ್ತವಾಂಸ್ತ್ವಂ ಪ್ರದೀಪ್ತಂ ಹಿ ದರ್ಭಂ ತಂ ವಾಯಸಂ ಪ್ರತಿ ।
ತತಸ್ತು ವಾಯಸಂ ದೀಪ್ತಃ ಸ ದರ್ಭೋಽನುಜಗಾಮ ಹ ॥ ೧೩

ಸ ಪಿತ್ರಾ ಚ ಪರಿತ್ಯಕ್ತಃ ಸುರೈಶ್ಚ ಸಮಹರ್ಷಿಭಿಃ ।
ತ್ರೀನ್ ಲೋಕಾನ್ ಸಂಪರಿಕ್ರಮ್ಯ ತ್ರಾತಾರಂ ನಾಧಿಗಚ್ಛತಿ ॥ ೧೪

ಪುನರೇವಾಗತಸ್ತ್ರಸ್ತಸ್ತ್ವತ್ಸಕಾಶಮರಿಂದಮ ।
ಸ ತಂ ನಿಪತಿತಂ ಭೂಮೌ ಶರಣ್ಯಃ ಶರಣಾಗತಮ್ ॥ ೧೫

ಇಂದ್ರನ ಮಗನು ಆ ವಾಯಸದ ವೇಷದಲ್ಲಿ ಬಂದಿದ್ದನಂತೆ. ಅದು ವೇಗದಲ್ಲಿ ವಾಯುವಿಗೆ ಸಮಾನವಾಗಿದ್ದು ತಿರುಗಾಡುತ್ತ ಭೂಲೋಕಕ್ಕೆ ಬಂದಿತ್ತು. ವೀರಾಗ್ರಣಿ, ನೀನು ಕೋಪದಿಂದ ಕಣ್ಣನ್ನು ತಿರುಗಿಸುತ್ತ ಮನಸ್ಸನ್ನು ಕ್ರೂರವಾಗಿ ಮಾಡಿಕೊಂಡೆ (೧೦–೧೧). ಕೂಡಲೇ ಚಾಪೆಯಿಂದ ಒಂದು ದರ್ಭೆಯನ್ನು ಕಿತ್ತು ಅದನ್ನು ಬ್ರಹ್ಮಾಸ್ತ್ರದ ಮಂತ್ರದಿಂದ ಅಭಿಮಂತ್ರಿಸಿದೆ. ಅದು ಕಾಗೆಯ ಎದುರಿಗೆ ಕಾಲಾಗ್ನಿಯಂತೆ ಜ್ವಲಿಸಲಾರಂಭಿಸಿತು. ನೀನು ಆ ದರ್ಭೆಯನ್ನು ಕಾಗೆಯಮೇಲೆ ಪ್ರಯೋಗಿಸಿದೆ. ಅದು ಕಾಗೆಯನ್ನು ಬೆನ್ನಟ್ಟಿತು (೧೨–೧೩). ಶರಣಾರ್ಥಿಯಾದ ಆ ವಾಯಸವನ್ನು ರಕ್ಷಿಸಲಾರದೆ ತಂದೆಯಾದ ಇಂದ್ರನೂ ದೇವತೆಗಳೂ ಕೈಬಿಟ್ಟರು. ಮೂರು ಲೋಕಗಳನ್ನು ಸುತ್ತಿದರೂ ವಾಯಸವನ್ನು ರಕ್ಷಿಸತಕ್ಕವರೊಬ್ಬರೂ ಸಿಗದೆಹೋದರು. ಕಂಗಾಲಾಗಿದ್ದ ವಾಯಸವು ಕಡೆಗೆ ನಿನಗೆ ಶರಣುಬಂದು ನೆಲದಮೇಲೆ ಅಡ್ಡಬಿದ್ದಿತು (೧೪–೧೫).

ವಧಾರ್ಹಮಪಿ ಕಾಕುತ್ಸ್ಥ ಕೃಪಯಾ ಪರ್ಯಪಾಲಯಃ ।
ಮೋಘಮಸ್ತ್ರಂ ನ ಶಕ್ಯಂ ತು ಕರ್ತುಮಿತ್ಯೇವ ರಾಘವ ॥ ೧೬

ಭವಾಂಸ್ತಸ್ಯಾಕ್ಷಿ ಕಾಕಸ್ಯ ಹಿನಸ್ತಿ ಸ್ಮ ಸ ದಕ್ಷಿಣಮ್ ।
ರಾಮ ತ್ವಾಂ ಸ ನಮಸ್ಕೃತ್ಯ ರಾಜ್ಞೇ ದಶರಥಾಯ ಚ ॥ ೧೭
ವಿಸೃಷ್ಟಸ್ತು ತದಾ ಕಾಕಃ ಪ್ರತಿಪೇದೇ ಸ್ವಮಾಲಯಮ್ ।
ಏವಮಸ್ತ್ರವಿದಾಂ ಶ್ರೇಷ್ಠಃ ಸತ್ತ್ವವಾನ್ ಶೀಲವಾನಪಿ ॥ ೧೮
ಕಿಮರ್ಥಮಸ್ತ್ರಂ ರಕ್ಷಃಸು ನ ಯೋಜಯತಿ ರಾಘವಃ ।
ನ ನಾಗಾ ನಾಪಿ ಗಂಧರ್ವಾ ನಾಸುರಾ ನ ಮರುದ್ಗಣಾಃ ॥ ೧೯

ನ ಚ ಸರ್ವೇ ರಣೇ ಶಕ್ತಾ ರಾಮಂ ಪ್ರತಿ ಸಮಾಸಿತುಮ್ ।
ತಸ್ಯ ವೀರ್ಯವತಃ ಕಶ್ಚಿದ್ಯದ್ಯಸ್ತಿ ಮಯಿ ಸಂಭ್ರಮಃ ॥ ೨೦

ಕ್ಷಿಪ್ರಂ ಸುನಿಶಿತೈರ್ಬಾಣೈರ್ಹನ್ಯತಾಂ ಯುಧಿ ರಾವಣಃ ।
ಭ್ರಾತುರಾದೇಶಮಾಜ್ಞಾಯ ಲಕ್ಷ್ಮಣೋ ವಾ ಪರಂತಪಃ ॥ ೨೧

ರಘುನಾಥ, ಶರಣಾಗತರಕ್ಷಕನಾದ ನೀನು ಆ ಕಾಗೆಯನ್ನು ವಧಾರ್ಹವಾಗಿದ್ದರೂ ಕೃಪೆಯಿಂದ ಕಾಪಾಡಿದೆ. ಆದರೆ ಬ್ರಹ್ಮಾಸ್ತ್ರವು ವ್ಯರ್ಥವಾಗಲು ಸಾಧ್ಯವಿಲ್ಲವೆಂದು ನೀನು ಕಾಗೆಯ ಬಲಗಣ್ಣನ್ನು ಊನಗೊಳಿಸಿದೆಯಂತೆ. ಶ್ರೀರಾಮ, ಅನಂತರ ಕಾಗೆಯು ನಿನಗೂ ದಶರಥಮಹಾರಾಜನಿಗೂ ವಂದನೆಗಳನ್ನರ್ಪಿಸಿ ತನ್ನ ನಿವಾಸಕ್ಕೆ ಹೊರಟುಹೋಯಿತಂತೆ (೧೬–೧೭). ದೇವಿಯು ಈ ವೃತ್ತಾಂತವನ್ನು ಹೇಳಿ ಹೀಗೆ ನುಡಿದಳು : 'ರಾಘವನು ಈ ರೀತಿಯಲ್ಲಿ ಅಸ್ತ್ರವಿದ್ಯಾವಿಶಾರದನೂ ಪರಾಕ್ರಮಿಯೂ ಶೀಲವಂತನೂ ಆಗಿದ್ದರೂ ಈಗ ರಾಕ್ಷಸರಮೇಲೆ ಅಸ್ತ್ರವನ್ನು ಏಕೆ ಪ್ರಯೋಗಿಸುವುದಿಲ್ಲ? ಶ್ರೀರಾಮನನ್ನು ಯುದ್ಧದಲ್ಲಿ ಎದುರಿಸಲು ನಾಗ, ಗಂಧರ್ವ, ಅಸುರ, ಮರುತ್ತುಗಳಲ್ಲಿ ಯಾರಿಗೂ ಶಕ್ಯವಿಲ್ಲ (೧೮–೧೯). ಆ ವೀರನಿಗೆ ನನ್ನ ವಿಷಯದಲ್ಲಿ ಏನಾದರೂ ಮರುಕವಿದ್ದರೆ, ತನ್ನ ತೀಕ್ಷ್ಣಾಸ್ತ್ರಗಳಿಂದ ಕೂಡಲೇ ರಾವಣನನ್ನು ಕೊಲ್ಲಲಿ! ವೀರನಾದ ಲಕ್ಷ್ಮಣನಾದರೂ ಅಣ್ಣನ ಅಪ್ಪಣೆಯನ್ನು ಪಡೆದು ಈ ಕಾರ್ಯವನ್ನು ಮಾಡಲಿ ! (೨೦–೨೧).

ಸ ಕಿಮರ್ಥಂ ನರವರೋ ನ ಮಾಂ ರಕ್ಷತಿ ರಾಘವಃ ।
ಶಕ್ತೌ ತೌ ಪುರುಷವ್ಯಾಘ್ರೌ ವಾಯ್ವಗ್ನಿಸಮತೇಜಸೌ ॥ ೨೨

ಸುರಾಣಾಮಪಿ ದುರ್ಧರ್ಷೌ ಕಿಮರ್ಥಂ ಮಾಮುಪೇಕ್ಷತಃ ।
ಮಮೈವ ದುಷ್ಕೃತಂ ಕಿಂಚಿನ್ಮಹದಸ್ತಿ ನ ಸಂಶಯಃ ॥ ೨೩

ಸಮರ್ಥಾವಪಿ ತೌ ಯನ್ಮಾಂ ನಾವೇಕ್ಷೇತೇ ಪರಂತಪೌ ।
ವೈದೇಹ್ಯಾ ವಚನಂ ಶ್ರುತ್ವಾ ಕರುಣಂ ಸಾಶ್ರು ಭಾಷಿತಮ್ ॥ ೨೪

ಪುನರಪ್ಯಹಮಾರ್ಯಾಂ ತಾಮಿದಂ ವಚನಮಬ್ರವಮ್ ।
ತ್ವಚ್ಛೋಕವಿಮುಖೋ ರಾಮೋ ದೇವಿ ಸತ್ಯೇನ ತೇ ಶಪೇ ॥ ೨೫

ರಾಮೇ ದುಃಖಾಭಿಭೂತೇ ತು ಲಕ್ಷ್ಮಣಃ ಪರಿತಪ್ಯತೇ ।
ಕಥಂಚಿದ್ಭವತೀ ದೃಷ್ಟಾ ನ ಕಾಲಃ ಪರಿಶೋಚಿತುಮ್ ॥ ೨೬

ಇಮಂ ಮುಹೂರ್ತಂ ದುಃಖಾನಾಮಂತಂ ದ್ರಕ್ಷ್ಯಸಿ ಭಾಮಿನಿ ।
ತಾವುಭೌ ನರಶಾರ್ದೂಲೌ ರಾಜಪುತ್ರಾವನಿಂದಿತೌ ॥ ೨೭

ಪುರುಷಶ್ರೇಷ್ಠನಾದ ರಾಘವನು ನನ್ನನ್ನು ರಕ್ಷಿಸದೆ ಏಕೆ ಬಿಟ್ಟಿದ್ದಾನೆ? ಆ ಪುರುಷಸಿಂಹರಿಬ್ಬರೂ ಅಗ್ನಿವಾಯುಗಳು ಸೇರಿದಂತೆ ಮಹಾತೇಜಸ್ವಿಗಳಾಗಿದ್ದಾರೆ. ಮಹಾವೀರರು. ದೇವತೆಗಳೂ ಅವರನ್ನು ಎದುರಿಸಲು ಸಾಧ್ಯವಿಲ್ಲ. ಹೀಗಿದ್ದರೂ ನನ್ನನ್ನೇಕೆ ಉಪೇಕ್ಷಿಸಿದ್ದಾರೆ? ನಾನೇ ಯಾವುದೋ ದೊಡ್ಡ ಪಾಪವನ್ನು ಮಾಡಿದ್ದೇನೆ. ಸಂದೇಹವಿಲ್ಲ(೨೨–೨೩). ಆದ್ದರಿಂದಲೇ ಅವರೀರ್ವರೂ ಸಮರ್ಥರಾಗಿದ್ದರೂ ನನ್ನನ್ನು ಉಪೇಕ್ಷೆಮಾಡಿದ್ದಾರೆ!' ಹೀಗೆ ದೇವಿಯು ಕಣ್ಣೀರು ಸುರಿಸುತ್ತಾ ದೈನ್ಯದಿಂದ ಮಾತನಾಡುವುದನ್ನು ಕೇಳಿ ನಾನು ಹೇಳಿದೆನು: 'ಅಮ್ಮಾ, ಶ್ರೀರಾಮನು ನಿನ್ನ ವಿರಹಶೋಕದಿಂದ ಏನೂ ತೋರದವನಾಗಿದ್ದಾನೆ. ಸತ್ಯದ ಆಣೆಯಾಗಿ ಈ ಮಾತನ್ನು ಹೇಳುತ್ತಿದ್ದೇನೆ (೨೪–೨೫). ಶ್ರೀರಾಮನು ದುಃಖಿತನಾಗಿರಲು ಲಕ್ಷ್ಮಣನೂ ಅವನನ್ನು ನೋಡಿ ದುಃಖಿಸುವನು. ಹೇಗಾದರೂ ನಿನ್ನನ್ನು ನೋಡಿದ್ದಾಯಿತು. ಇದು ಶೋಕಿಸುವ ಕಾಲವಲ್ಲ. ಸ್ವಲ್ಪಕಾಲದಲ್ಲಿಯೇ ನಿನ್ನ ದುಃಖವು ಕೊನೆಗೊಳ್ಳುವುದು. ಆ ರಾಜಕುಮಾರರಿಬ್ಬರೂ ಪುರುಷಶ್ರೇಷ್ಠರು (೨೬–೨೭).

ತ್ವದ್ದರ್ಶನಕೃತೋತ್ಸಾಹೌ ಲಂಕಾಂ ಭಸ್ಮೀಕರಿಷ್ಯತಃ ।
ಹತ್ವಾ ಚ ಸಮರೇ ರೌದ್ರಂ ರಾವಣಂ ಸಹಬಾಂಧವಮ್ ॥ ೨೮
ರಾಘವಸ್ತ್ವಾಂ ವರಾರೋಹೇ ಸ್ವಾಂ ಪುರೀಂ ನಯಿತಾ ಧ್ರುವಮ್ ।
ಯತ್ತು ರಾಮೋ ವಿಜಾನಿಯಾದಭಿಜ್ಞಾನಮನಿಂದಿತೇ ॥ ೨೯
ಪ್ರೀತಿಸಂಜನನಂ ತಸ್ಯ ಪ್ರದಾತುಂ ತ್ವಮಿಹಾರ್ಹಸಿ ।
ಸಾಭಿವೀಕ್ಷ್ಯ ದಿಶಃ ಸರ್ವಾ ವೇಣ್ಯುದ್ಗ್ರಥನಮುತ್ತಮಮ್ ॥ ೩೦
ಮುಕ್ತ್ವಾ ವಸ್ತ್ರಾದ್ದದೌ ಮಹ್ಯಂ ಮಣಿಮೇತಂ ಮಹಾಬಲ ।
ಪ್ರತಿಗೃಹ್ಯ ಮಣಿಂ ದಿವ್ಯಂ ತವ ಹೇತೋ ರಘೂದ್ವಹ ॥ ೩೧
ಶಿರಸಾ ತಾಂ ಪ್ರಣಮ್ಯಾರ್ಯಾಮಹಮಾಗಮನೇ ತ್ವರೇ ।
ಗಮನೇ ಚ ಕೃತೋತ್ಸಾಹಮವೇಕ್ಷ್ಯ ವರವರ್ಣಿನೀ ॥ ೩೨
ವಿವರ್ಧಮಾನಂ ಚ ಹಿ ಮಾಮುವಾಚ ಜನಕಾತ್ಮಜಾ ।
ಅಶ್ರುಪೂರ್ಣಮುಖೀ ದೀನಾ ಬಾಷ್ಪಸಂದಿಗ್ಧಭಾಷಿಣೀ ॥ ೩೩
ಮಮೋತ್ಪತನಸಂಭ್ರಾಂತಾ ಶೋಕವೇಗಸಮಾಹತಾ ।
ಹನುಮನ್ ಸಿಂಹಸಂಕಾಶೌ ತಾವುಭೌ ರಾಮಲಕ್ಷ್ಮಣೌ ॥ ೩೪

ಅವರು ನಿನ್ನನ್ನು ಕಾಣುವ ಉತ್ಸಾಹದಲ್ಲಿದ್ದಾರೆ. ಈ ಲಂಕೆಯನ್ನು ಬೂದಿಮಾಡಿಬಿಡುತ್ತಾರೆ. ರಾಘವನು ಯುದ್ಧದಲ್ಲಿ ರಾವಣನನ್ನು ಬಂಧು ಸಮೇತವಾಗಿ ಸಂಹರಿಸಿ, ನಿನ್ನನ್ನು ಅಯೋಧ್ಯಾನಗರಕ್ಕೆ ಕರೆದೊಯ್ಯುವನು. ಇದು ನಿಶ್ಚಯ. ದೇವಿ, ಶ್ರೀರಾಮನಿಗೆ ಸಂತೋಷವನ್ನುಂಟುಮಾಡುವ ಒಂದು ಅಭಿಜ್ಞಾನವನ್ನು ಕೊಡು' ಎಂದು ಹೇಳಿದೆನು (೨೮–೨೯). ರಘುನಾಥ, ಆಗ ದೇವಿಯು ಸುತ್ತಲೂ ತಿರುಗಿನೋಡಿ ತನ್ನ ಸೆರಗಿನಲ್ಲಿ ಕಟ್ಟಿದ್ದ ಈ ಚೂಡಾಮಣಿಯನ್ನು ಬಿಚ್ಚಿ ನನಗೆ ಕೊಟ್ಟಳು. ನಾನು ನಿನಗೋಸ್ಕರ ಈ ದಿವ್ಯರತ್ನವನ್ನು ತೆಗೆದುಕೊಂಡೆನು (೩೦–೩೧). ಅನಂತರ ನಾನು ಸೀತಾದೇವಿಗೆ ತಲೆಬಾಗಿ ವಂದಿಸಿ ಹಿಂದಿರುಗಿಬರಲು ಸಿದ್ಧನಾಗಿ, ದೇಹವನ್ನು ಬೆಳೆಯಿಸಿಕೊಳ್ಳ ತೊಡಗಿದೆನು. ನಾನು ಹೊರಟುಬಿಡುವೆನೆಂಬ ವ್ಯಥೆಯಿಂದ ದುಃಖದ ವೇಗವನ್ನು ತಡೆದುಕೊಳ್ಳಲಾರದೆ, ಜನಕಪುತ್ರಿಗೆ ಕಣ್ಣೀರು ಉಕ್ಕಿಹರಿಯಿತು. ಆಕೆಯು ದೀನವದನೆಯಾಗಿ ತೊದಲುತ್ತ ''ಹನುಮಂತ, ಪುರುಷಸಿಂಹರಾದ

ಸುಗ್ರೀವಂ ಚ ಸಹಾಮಾತ್ಯಂ ಸರ್ವಾನ್ ಬ್ರೂಯಾ ಹ್ಯನಾಮಯಮ್
ಮಾಮುವಾಚ ತತಃ ಸೀತಾ ಸಭಾಗ್ಯೋಽಸಿ ಮಹಾಕಪೇ ॥ ೩೫

ಯದ್ದ್ರಕ್ಷ್ಯಸಿ ಮಹಾಬಾಹುಂ ರಾಮಂ ಕಮಲಲೋಚನಮ್ ।
ಲಕ್ಷ್ಮಣಂ ಚ ಮಹಾಬಾಹುಂ ದೇವರಂ ಮೇ ಯಶಸ್ವಿನಮ್ ॥ ೩೬

ಸೀತಯಾಪ್ಯೇವಮುಕ್ತೋಽಹಮಬ್ರವಂ ಮೈಥಿಲೀಂ ತಥಾ ।
ಪೃಷ್ಠಮಾರೋಹ ಮೇ ದೇವಿ ಕ್ಷಿಪ್ರಂ ಜನಕನಂದಿನಿ ॥ ೩೭

ಯಾವತ್ತೇ ದರ್ಶಯಾಮ್ಯದ್ಯ ಸಸುಗ್ರೀವಂ ಸಲಕ್ಷ್ಮಣಮ್ ।
ರಾಘವಂ ಚ ಮಹಾಭಾಗೇ ಭರ್ತಾರಮಸಿತೇಕ್ಷಣೇ ॥ ೩೮

ಸಾಬ್ರವೀನ್ಮಾಂ ತತೋ ದೇವೀ ನೈಷ ಧರ್ಮೋ ಮಹಾಕಪೇ ।
ಯತ್ತೇ ಪೃಷ್ಠಂ ಸಿಷೇವೇಽಹಂ ಸ್ವವಶಾ ಹರಿಪುಂಗವ ॥ ೩೯

ಪುರಾ ಚ ಯದಹಂ ವೀರ ಸ್ಪೃಷ್ಟಾ ಗಾತ್ರೇಷು ರಕ್ಷಸಾ ।
ತತ್ರಾಹಂ ಕಿ ಕರಿಷ್ಯಾಮಿ ಕಾಲೇನೋಪನಿಪೀಡಿತಾ ॥ ೪೦

ರಾಮಲಕ್ಷ್ಮಣರಿಗೆ ನಾನು ಕುಶಲವನ್ನು ವಿಚಾರಿಸಿದ್ದೇನೆಂದು ಹೇಳು (೩೨–೩೪). ಸುಗ್ರೀವನಿಗೂ ಅವನ ಮಂತ್ರಿಗಳಿಗೂ ಎಲ್ಲಾ ವಾನರರಿಗೂ ನಾನು ಕುಶಲವನ್ನು ವಿಚಾರಿಸಿದ್ದೇನೆಂದು ಹೇಳು'' ಎಂದು ನುಡಿದಳು. ಮತ್ತೆ ನನ್ನನ್ನು ಕುರಿತು ''ವಾನರೋತ್ತಮ, ಆಜಾನುಬಾಹುವೂ ಕಮಲನೇತ್ರನೂ ಆದ ಶ್ರೀರಾಮಚಂದ್ರನನ್ನು ಕಣ್ಣಾರೆ ನೋಡತಕ್ಕ ನೀನೇ ಭಾಗ್ಯಶಾಲಿ. ನನ್ನ ಮೈದುನನೂ ಕೀರ್ತಿಶಾಲಿಯೂ ಮಹಾಬಾಹುವೂ ಆದ ಲಕ್ಷ್ಮಣನನ್ನು ಕಣ್ಣಾರೆ ನೋಡತಕ್ಕ ನೀನೇ ಭಾಗ್ಯಶಾಲಿ'' ಎಂದಳು (೩೫–೩೬). ಆಗ ನಾನು ''ದೇವಿ-ಮಿಥಿಲರಾಜತನಯೆ, ನನ್ನ ಬೆನ್ನಿನಮೇಲೆ ಹತ್ತಿ ಕುಳಿತುಕೊ. ನಿನ್ನನ್ನು ಈಗಲೇ ಕರೆದೊಯ್ದು ಸುಗ್ರೀವ ಲಕ್ಷ್ಮಣ ಸಮೇತನಾದ ಶ್ರೀರಾಮನ ದರ್ಶನವನ್ನು ಮಾಡಿಸಿಬಿಡುತ್ತೇನೆ!'' ಎಂದೆನು (೩೭–೩೮). ಆಗ ದೇವಿಯು ''ವಾನರೋತ್ತಮ, ಇದು ಧರ್ಮವಲ್ಲ. ನಾನಾಗಿ ನಿನ್ನ ಬೆನ್ನನ್ನು ಮುಟ್ಟುವುದು ಸರಿಯಲ್ಲ. ಹಿಂದೆ ರಾಕ್ಷಸನು ನನ್ನನ್ನು ಕದ್ದು ತರುವಾಗ ಬಲಾತ್ಕಾರದಿಂದ ನನ್ನನ್ನು ಮುಟ್ಟಿದ್ದರೆ ನಾನೇನು ಮಾಡಲಿ? ಕಾಲಗತಿಯಿಂದ ನನಗೆ ಹಾಗಾಯಿತು (೩೯–೪೦).

ಗಚ್ಛ ತ್ವಂ ಕಪಿಶಾರ್ದೂಲ ಯತ್ರ ತೌ ನೃಪತೇಃ ಸುತೌ ।
ಇತ್ಯೇವಂ ಸಾ ಸಮಾಭಾಷ್ಯ ಭೂಯಃ ಸಂದೇಷ್ಟುಮಾಸ್ಥಿತಾ ॥ ೪೧

ಯಥಾ ಚ ಸ ಮಹಾಬಾಹುರ್ಮಾಂ ತಾರಯತಿ ರಾಘವಃ ।
ಅಸ್ಮಾದ್ದುಃಖಾಂಬುಸಂರೋಧಾತ್ತ್ವಂ ಸಮಾಧಾತುಮರ್ಹಸಿ ॥ ೪೨

ಇಮಂ ಚ ತೀವ್ರಂ ಮಮ ಶೋಕವೇಗಂ
ರಕ್ಷೋಭಿರೇಭಿಃ ಪರಿಭರ್ತ್ಸನಂ ಚ ।
ಬ್ರೂಯಾಸ್ತು ರಾಮಸ್ಯ ಗತಃ ಸಮೀಪಂ
ಶಿವಶ್ಚ ತೇಽಧ್ವಾಸ್ತು ಹರಿಪ್ರವೀರ ॥ ೪೩

ಏತತ್ತವಾರ್ಯಾ ನೃಪರಾಜಸಿಂಹ
ಸೀತಾ ವಚಃ ಪ್ರಾಹ ವಿಷಾದಪೂರ್ವಮ್ ।
ಏತಚ್ಚ ಬುದ್ಧ್ವಾ ಗದಿತಂ ಮಯಾ ತ್ವಂ
ಶ್ರದ್ಧತ್ಸ್ವ ಸೀತಾಂ ಕುಶಲಾಂ ಸಮಗ್ರಾಮ್ ॥ ೪೪

ಇತಿ ಶ್ರೀಮದ್ರಾಮಾಯಣೇ ಸುಂದರಕಾಂಡೇ ಸಪ್ತಷಷ್ಟಿತಮಃ ಸರ್ಗಃ

———O———

ಆ ರಾಜಪುತ್ರರಿರುವ ಸ್ಥಳಕ್ಕೆ ನೀನು ಹೋಗು'' ಎಂದಳು. ಪುನಃ ''ಶ್ರೀರಾಮನು ಈ ದುಃಖಸಮುದ್ರದಿಂದ ನನ್ನನ್ನು ಪಾರುಮಾಡುವಂತೆ ನೀನು ಪ್ರಯತ್ನಿಸಬೇಕು. ಶ್ರೀರಾಮನ ಬಳಿಗೆ ಹೋಗಿ ನನಗೆ ಎಂತಹ ಅಪಾರವಾದ ಕಷ್ಟ ಒದಗಿದೆ ಎಂಬುದನ್ನೂ ರಾಕ್ಷಸರು ಹೇಗೆ ನನ್ನನ್ನು ಹೆದರಿಸುತ್ತಿದ್ದಾರೆ ಎಂಬುದನ್ನೂ ತಿಳಿಸು. ವಾನರೋತ್ತಮ, ನಿನಗೆ ಸುಖಪ್ರಯಾಣವಾಗಲಿ'' ಎಂದು ಹೇಳಿದಳು (೪೧–೪೩). ಶ್ರೀರಾಮ, ಸೀತಾದೇವಿಯು ಶೋಕಿಸುತ್ತ ಈ ರೀತಿಯಾಗಿ ನಿನಗೆ ಹೇಳಿಕಳುಹಿಸಿದ್ದಾಳೆ. ನನ್ನ ಮಾತನ್ನು ನಂಬು. ದೇವಿಯು ಕುಶಲದಿಂದ ಇದ್ದಾಳೆ'' ಎಂದು ನುಡಿದನು (೪೪).

ಇಲ್ಲಿಗೆ ಶ್ರೀಮದ್ರಾಮಾಯಣದ ಸುಂದರಕಾಂಡದಲ್ಲಿ ಅರುವತ್ತೇಳನೆಯ ಸರ್ಗ

ಅಷ್ಟಷಷ್ಟಿತಮಃ ಸರ್ಗಃ

ಹನೂಮತ್ಸಮಾಶ್ವಾಸವಚನಾನುವಾದಃ

ಅಥಾಹಮುತ್ತರಂ ದೇವ್ಯಾ ಪುನರುಕ್ತಃ ಸಸಂಭ್ರಮಃ ।
ತವ ಸ್ನೇಹಾನ್ನರವ್ಯಾಘ್ರ ಸೌಹಾರ್ದಾದನುಮಾನ್ಯ ವೈ ॥ ೧

ಏವಂ ಬಹುವಿಧಂ ವಾಚ್ಯೋ ರಾಮೋ ದಾಶರಥಿಸ್ತ್ವಯಾ ।
ಯಥಾ ಮಾಮಾಪ್ನುಯಾಚ್ಛೀಘ್ರಂ ಹತ್ವಾ ರಾವಣಮಾಹವೇ ॥ ೨

ಯದಿ ವಾ ಮನ್ಯಸೇ ವೀರ ವಸೈಕಾಹಮರಿಂದಮ ।
ಕಸ್ಮಿಂಶ್ಚಿತ್ ಸಂವೃತೇ ದೇಶೇ ವಿಶ್ರಾಂತಃ ಶ್ವೋ ಗಮಿಷ್ಯಸಿ ॥ ೩

ಮಮ ಚಾಪ್ಯಲ್ಪಭಾಗ್ಯಾಯಾಃ ಸಾಂನಿಧ್ಯಾತ್ತವ ವಾನರ ।
ಅಸ್ಯ ಶೋಕವಿಪಾಕಸ್ಯ ಮುಹೂರ್ತಂ ಸ್ಯಾದ್ವಿಮೋಕ್ಷಣಮ್ ॥ ೪

ಗತೇ ಹಿ ತ್ವಯಿ ವಿಕ್ರಾಂತೇ ಪುನರಾಗಮನಾಯ ವೈ ।
ಪ್ರಾಣಾನಾಮಪಿ ಸಂದೇಹೋ ಮಮ ಸ್ಯಾನ್ನಾತ್ರ ಸಂಶಯಃ ॥ ೫

ಸರ್ಗ ೬೮

ತಾನು ಸೀತಾದೇವಿಗೆ ಹೇಳಿದ ಇನ್ನೂ ಕೆಲವು ಸಮಾಧಾನಗಳನ್ನು ಹನುಮಂತನು ಶ್ರೀರಾಮನಿಗೆ ತಿಳಿಸುವುದು.

ಹನುಮಂತನು ಶ್ರೀರಾಮನನ್ನುದ್ದೇಶಿಸಿ ''ಅನಂತರ ನಾನು ಹೊರಡಲು ಸಿದ್ಧನಾಗಿರುವುದನ್ನು ಕಂಡು ಸೀತಾದೇವಿಯು ಪ್ರೀತಿವಿಶ್ವಾಸಗಳಿಂದ ಪುನಃ ಹೀಗೆಂದಳು : ''ಹನುಮಂತ, ನಿನಗೆ ಸಮ್ಮತವಾದರೆ ಒಂದು ದಿನದಮಟ್ಟಿಗೆ ಎಲ್ಲಾದರೂ ರಹಸ್ಯವಾದ ಸ್ಥಳದಲ್ಲಿ ವಿಶ್ರಮಿಸಿಕೊಂಡಿರು. ನಾಳೆ ನೀನು ಹೋಗಬಹುದು (೧–೩). ನೀನು ಸಮೀಪದಲ್ಲಿದ್ದರೆ ಮಂದಭಾಗ್ಯಳಾದ ನನಗೆ ಸ್ವಲ್ಪ ಕಾಲವಾದರೂ ಶೋಕವು ಕುಗ್ಗಿ ಮನಸ್ಸಿಗೆ ಸಮಾಧಾನವಾಗುತ್ತದೆ. ನೀನು ಹೊರಟುಹೋದಮೇಲೆ, ಪುನಃ ನೀನು ಬರತಕ್ಕವನಾದರೂ ಅಲ್ಲಿಯವರೆಗೆ ನಾನು ಬದುಕಿರುತ್ತೇನೋ ಇಲ್ಲವೋ ! (೪–೫).

ತವಾದರ್ಶನಜಃ ಶೋಕೋ ಭೂಯೋ ಮಾಂ ಪರಿತಾಪಯೇತ್ ।
ದುಃಖಾದ್ದುಃಖಪರಾಭೂತಾಂ ದುರ್ಗತಾಂ ದುಃಖಭಾಗಿನೀಮ್ ॥ ೬
ಅಯಂ ಚ ವೀರ ಸಂದೇಹಸ್ತಿಷ್ಠತೀವ ಮಮಾಗ್ರತಃ ।
ಸುಮಹಾಂಸ್ತ್ವತ್ಸಹಾಯೇಷು ಹರ್ಯೃಕ್ಷೇಷು ಹರೀಶ್ವರ ॥ ೭
ಕಥಂ ನು ಖಲು ದುಷ್ಪಾರಂ ತರಿಷ್ಯಂತಿ ಮಹೋದಧಿಮ್ ।
ತಾನಿ ಹರ್ಯೃಕ್ಷಸೈನ್ಯಾನಿ ತೌ ವಾ ನರವರಾತ್ಮಜೌ ॥ ೮
ತ್ರಯಾಣಾಮೇವ ಭೂತಾನಾಂ ಸಾಗರಸ್ಯಾಸ್ಯ ಲಂಘನೇ ।
ಶಕ್ತಿಃ ಸ್ಯಾದ್ವೈನತೇಯಸ್ಯ ವಾಯೋರ್ವಾ ತವ ವಾನಘ ॥ ೯
ತದಸ್ಮಿನ್ ಕಾರ್ಯನಿರ್ಯೋಗೇ ವೀರೈವಂ ದುರತಿಕ್ರಮೇ ।
ಕಿಂ ಪಶ್ಯಸಿ ಸಮಾಧಾನಂ ತ್ವಂ ಹಿ ಕಾರ್ಯವಿದಾಂ ವರಃ ॥ ೧೦
ಕಾಮಮಸ್ಯ ತ್ವಮೇವೈಕಃ ಕಾರ್ಯಸ್ಯ ಪರಿಸಾಧನೇ ।
ಪರ್ಯಾಪ್ತಃ ಪರವೀರಘ್ನ ಯಶಸ್ಯಸ್ತೇ ಬಲೋದಯಃ ॥ ೧೧
ಬಲೈಃ ಸಮಗ್ರೈರ್ಯದಿ ಮಾಂ ಹತ್ವಾ ರಾವಣಮಾಹವೇ ।
ವಿಜಯೀಂ ಸ್ವಾಂ ಪುರೀಂ ರಾಮೋ ನಯೇತ್ತತ್ ಸ್ಯಾದ್ಯಶಸ್ಕರಮ್ ॥ ೧೨

ಕಷ್ಟದಿಂದ ಕಷ್ಟಕ್ಕೆ ಸಿಕ್ಕಿಹೋಗಿರುವ ದುರ್ಭಾಗ್ಯಳು ನಾನು. ನೀನು ಕಾಣಿಸದೆ ಹೋದರೆ ದುಃಖದಿಂದ ನನ್ನ ಸಂಕಟವು ಹೆಚ್ಚುತ್ತದೆ. ವಾನರೋತ್ತಮ, ನಿನಗೆ ಸಹಾಯಕರಾದ ವಾನರಭಲ್ಲೂಕಗಳ ವಿಷಯದಲ್ಲಿ ನನಗೆ ಒಂದು ದೊಡ್ಡ ಸಂದೇಹ ಇದ್ದೇ ಇದೆ (೬–೭). ಅವರು ಈ ಅಪಾರವಾದ ಮಹಾಸಾಗರವನ್ನು ಹೇಗೆ ದಾಟಿಬರುತ್ತಾರೆ ? ರಾಮಲಕ್ಷ್ಮಣರೂ ದಾಟುವುದು ಹೇಗೆ ? ಮಹಾಸಾಗರವನ್ನು ಲಂಘಿಸಲು ಮೂವರಿಗೆ ಮಾತ್ರ ಸಾಧ್ಯ—ಒಬ್ಬ ಗರುಡ. ಒಬ್ಬ ವಾಯುದೇವ, ಇನ್ನೊಬ್ಬ ನೀನು (೮–೯). ಪರಿಸ್ಥಿತಿಯು ಇಷ್ಟು ಕಠಿಣವಾಗಿರುವಾಗ ನಿನ್ನ ಸಮಾಧಾನವೇನು ? ಕಾರ್ಯಸಾಧನೆಯನ್ನು ನೀನೇ ಬಲ್ಲೆ. ಹೇ ವೀರಾಗ್ರಣಿ, ನನ್ನನ್ನು ಬಿಡಿಸಿಕೊಂಡುಹೋಗುವ ಕೆಲಸವನ್ನು ನೀನೊಬ್ಬನೇ ನಿರ್ವಹಿಸಬಲ್ಲೆ ಯೆಂಬುದೇನೋ ಹೌದು. ನಿನ್ನ ಸಾಮರ್ಥ್ಯವು ಯಶಸ್ವಿಯಾಗಿ ಫಲಿಸಬಲ್ಲುದು (೧೦–೧೧). ಆದರೆ ಶ್ರೀರಾಮನು ತನ್ನ ಬಲವನ್ನೆಲ್ಲಾ ವಿನಿಯೋಗಿಸಿ ಯುದ್ಧದಲ್ಲಿ

ಯಥಾಹಂ ತಸ್ಯ ವೀರಸ್ಯ ವನಾದುಪಧಿನಾ ಹೃತಾ ।
ರಕ್ಷಸಾ ತದ್ಭಯಾದೇವ ತಥಾ ನಾರ್ಹತಿ ರಾಘವಃ ॥ ೧೩
ಬಲೈಸ್ತು ಸಂಕುಲಾಂ ಕೃತ್ವಾ ಲಂಕಾಂ ಪರಬಲಾರ್ದನಃ ।
ಮಾಂ ನಯೇದ್ಯದಿ ಕಾಕುತ್ಸ್ಥಸ್ತತ್ತಸ್ಯ ಸದೃಶಂ ಭವೇತ್ ॥ ೧೪
ತದ್ಯಥಾ ತಸ್ಯ ವಿಕ್ರಾಂತಮನುರೂಪಂ ಮಹಾತ್ಮನಃ ।
ಭವತ್ಯಾಹವಶೂರಸ್ಯ ತಥಾ ತ್ವಮುಪಪಾದಯ ॥ ೧೫
ತದರ್ಥೋಪಹಿತಂ ವಾಕ್ಯಂ ಪ್ರಶ್ರಿತಂ ಹೇತುಸಂಹಿತಮ್ ।
ನಿಶಮ್ಯಾಹಂ ತತಃ ಶೇಷಂ ವಾಕ್ಯಮುತ್ತರಮಬ್ರವಮ್ ॥ ೧೬
ದೇವಿ ಹರ್ಯೃಕ್ಷಸೈನ್ಯಾನಾಮೀಶ್ವರಃ ಪ್ಲವತಾಂ ವರಃ ।
ಸುಗ್ರೀವಃ ಸತ್ತ್ವಸಂಪನ್ನಸ್ತವಾರ್ಥೇ ಕೃತನಿಶ್ಚಯಃ ॥ ೧೭
ತಸ್ಯ ವಿಕ್ರಮಸಂಪನ್ನಾಃ ಸತ್ತ್ವವಂತೋ ಮಹಾಬಲಾಃ ।
ಮನಃಸಂಕಲ್ಪಸಂಪಾತಾ ನಿದೇಶೇ ಹರಯಃ ಸ್ಥಿತಾಃ ॥ ೧೮

ರಾವಣನನ್ನು ಸಂಹಾರಮಾಡಿ ವಿಜಯಿಯಾಗಿ, ನನ್ನನ್ನು ಅಯೋಧ್ಯೆಗೆ ಕರೆದುಕೊಂಡುಹೋದರೆ ಅವನಿಗೆ ಕೀರ್ತಿ ಲಭಿಸುತ್ತದೆ. ಆ ವೀರನಿಗೆ ಭಯಪಟ್ಟು ಅವನಿಗೆ ತಿಳಿಯದಂತೆ ಈ ರಾಕ್ಷಸನು ಮೋಸದಿಂದ ನನ್ನನ್ನು ಅಪಹರಿಸಿ ತಂದಿದ್ದಾನೆ. ಹಾಗೆಯೇ ರಾಘವನೂ ರಾವಣನಿಗೆ ತಿಳಿಯದಂತೆ ನನ್ನನ್ನು ಬಿಡಿಸಿಕೊಂಡು ಹೋಗುವುದು ಸರಿಯಲ್ಲ (೧೨–೧೩). ಶತ್ರುಧ್ವಂಸಕನಾದ ಶ್ರೀರಾಮನು ಸೈನ್ಯಸಮೇತನಾಗಿ ಬಂದು ಲಂಕಾಪಟ್ಟಣದ ಮೇಲೆ ಧಾಳಿಯಿಟ್ಟು ನನ್ನನ್ನು ಬಿಡಿಸಿಕೊಂಡು ಹೋಗುವುದು ಅವನ ಕೀರ್ತಿಗೆ ಯೋಗ್ಯವಾದ ಕೃತ್ಯ. ರಣಧೀರನಾದ ಆ ಮಹಾತ್ಮನು ತನಗೆ ಅನುರೂಪವಾದ ಪರಾಕ್ರಮವನ್ನು ತೋರಿಸಲು ಅನುಕೂಲವಾಗುವಂತೆ ನೀನು ಏರ್ಪಡಿಸು'' (೧೪–೧೫). ಹೀಗೆ ಸೀತಾ ದೇವಿಯು ಸ್ನೇಹದಿಂದ ಅರ್ಥಗರ್ಭಿತವಾಗಿಯೂ ಯುಕ್ತಿಯುಕ್ತವಾಗಿಯೂ ಮಾತನಾಡಿದಳು. ಆಗ ನಾನು ''ದೇವಿ, ವಾನರ ಭಲ್ಲೂಕಗಳಿಗೆ ಅಧಿಪತಿಯಾದ ವೀರಸುಗ್ರೀವನು ನಿನಗೋಸ್ಕರ ದೃಢನಿಶ್ಚಯವನ್ನು ಮಾಡಿದ್ದಾನೆ. ಆತನ ವಶದಲ್ಲಿ ಮನೋವೇಗದಿಂದ ಸಂಚರಿಸಬಲ್ಲ ಮಹಾಪರಾಕ್ರಮಿಗಳಾದ ವಾನರರಿದ್ದಾರೆ (೧೬–೧೮).

ಯೇಷಾಂ ನೋಪರಿ ನಾಧಸ್ತಾನ್ನ ತಿರ್ಯಕ್ ಸಜ್ಜತೇ ಗತಿಃ ।
ನ ಚ ಕರ್ಮಸು ಸೀದಂತಿ ಮಹತ್ಯಮಿತತೇಜಸಃ ॥ ೧೯

ಅಸಕೃತ್ತೈರ್ಮಹಾಭಾಗೈರ್ವಾನರೈರ್ಬಲದರ್ಪಿತೈಃ ।
ಪ್ರದಕ್ಷಿಣೀಕೃತಾ ಭೂಮಿರ್ವಾಯುಮಾರ್ಗಾನುಸಾರಿಭಿಃ ॥ ೨೦

ಮದ್ವಿಶಿಷ್ಟಾಶ್ಚ ತುಲ್ಯಾಶ್ಚ ಸಂತಿ ತತ್ರ ವನೌಕಸಃ ।
ಮತ್ತಃ ಪ್ರತ್ಯವರಃ ಕಶ್ಚಿನ್ನಾಸ್ತಿ ಸುಗ್ರೀವಸಂನಿಧೌ ॥ ೨೧

ಅಹಂ ತಾವದಿಹ ಪ್ರಾಪ್ತಃ ಕಿಂ ಪುನಸ್ತೇ ಮಹಾಬಲಾಃ ।
ನ ಹಿ ಪ್ರಕೃಷ್ಟಾಃ ಪ್ರೇಷ್ಯಂತೇ ಪ್ರೇಷ್ಯಂತೇ ಹೀತರೇ ಜನಾಃ ॥ ೨೨

ತದಲಂ ಪರಿತಾಪೇನ ದೇವಿ ಮನ್ಯುರ್ವ್ಯಪೈತು ತೇ ।
ಏಕೋತ್ಪಾತೇನ ತೇ ಲಂಕಾಮೇಷ್ಯಂತಿ ಹರಿಯೂಥಪಾಃ ॥ ೨೩

ಮಮ ಪೃಷ್ಠಗತೌ ತೌ ಚ ಚಂದ್ರಸೂರ್ಯಾವಿವೋದಿತೌ ।
ತ್ವತ್ಸಕಾಶಂ ಮಹಾಭಾಗೇ ನೃಸಿಂಹಾವಾಗಮಿಷ್ಯತಃ ॥ ೨೪

ಅವರು ಮೇಲೆ ಕೆಳಗೆ ಅಡ್ಡಲಾಗಿ ಎಲ್ಲೆಲ್ಲಿಯೂ ನಿರಾತಂಕವಾಗಿ ಸಂಚರಿಸಬಲ್ಲರು. ಅವರು ಮಹಾತೇಜಸ್ವಿಗಳು. ಎಂತಹ ದೊಡ್ಡ ಕೆಲಸವನ್ನು ಸಾಧಿಸುವುದಕ್ಕೂ ಹಿಂಜರಿಯತಕ್ಕವರಲ್ಲ. ಬಲದಿಂದ ಕೊಬ್ಬಿರುವ ಆ ವಾನರರು ಆಕಾಶಮಾರ್ಗದಲ್ಲಿ ಈ ಪ್ರಪಂಚವನ್ನು ಎಷ್ಟೋಸಲ ಸುತ್ತಿ ಬಿಟ್ಟಿದ್ದಾರೆ (೧೯–೨೦). ಅವರು ನನಗಿಂತಲೂ ಬಲಶಾಲಿಗಳು. ಕೆಲವರು ನನಗೆ ಸಮಾನರು. ನನಗಿಂತ ಕಡಿಮೆಯಾದವನೊಬ್ಬನೂ ಸುಗ್ರೀವನ ಹತ್ತಿರವೇ ಇಲ್ಲ! ನಾನೇ ಸಮುದ್ರವನ್ನು ದಾಟಿ ಇಲ್ಲಿಗೆ ಬಂದಿದ್ದೇನೆ. ಇನ್ನು ಆ ಮಹಾಬಲಾಢ್ಯರ ವಿಷಯದಲ್ಲಿ ಹೇಳುವುದೇನು ? ಸಾಮಾನ್ಯರನ್ನು ಇಂತಹ ದೂತಕಾರ್ಯಕ್ಕೆ ಕಳುಹಿಸುತ್ತಾರೆಯೇ ಹೊರತು ಶ್ರೇಷ್ಠರಾದ ವೀರರನ್ನು ಕಳಿಸುವುದಿಲ್ಲ (೨೧–೨೨). ಆದ್ದರಿಂದ ದೇವಿ, ದುಃಖಿಸಬೇಡ ; ವ್ಯಥೆಪಡಬೇಡ. ಕಪಿವೀರರು ಒಂದೇ ನೆಗೆತಕ್ಕೆ ಲಂಕೆಗೆ ಬಂದು ಸೇರುವರು. ಪುರುಷಸಿಂಹರಾದ ರಾಮಲಕ್ಷ್ಮಣರು ನನ್ನ ಹೆಗಲನ್ನೇರಿ ಉದಯಿಸಿದ ಸೂರ್ಯಚಂದ್ರರಂತೆ ಬೆಳಗುತ್ತ ನಿನ್ನ ಸಮೀಪಕ್ಕೆ ಬಂದು ಸೇರುವರು (೨೩–೨೪).

ಅರಿಘ್ನಂ ಸಿಂಹಸಂಕಾಶಂ ಕ್ಷಿಪ್ರಂ ದ್ರಕ್ಷ್ಯಸಿ ರಾಘವಮ್ ।
ಲಕ್ಷ್ಮಣಂ ಚ ಧನುಷ್ಪಾಣಿಂ ಲಂಕಾದ್ವಾರಮುಪಸ್ಥಿತಮ್ ॥ ೨೫

ನಖದಂಷ್ಟ್ರಾಯುಧಾನ್ ವೀರಾನ್ ಸಿಂಹಶಾರ್ದೂಲವಿಕ್ರಮಾನ್ ।
ವಾನರಾನ್ ವಾರಣೇಂದ್ರಾಭಾನ್ ಕ್ಷಿಪ್ರಂ ದ್ರಕ್ಷ್ಯಸಿ ಸಂಗತಾನ್ ॥ ೨೬

ಶೈಲಾಂಬುದನಿಕಾಶಾನಾಂ ಲಂಕಾಮಲಯಸಾನುಷು ।
ನರ್ದತಾಂ ಕಪಿಮುಖ್ಯಾನಾಮಚಿರಾಚ್ಛ್ರೋಷ್ಯಸಿ ಸ್ವನಮ್ ॥ ೨೭

ನಿವೃತ್ತವನವಾಸಂ ಚ ತ್ವಯಾ ಸಾರ್ಧಮರಿಂದಮಮ್ ।
ಅಭಿಷಿಕ್ತಮಯೋಧ್ಯಾಯಾಂ ಕ್ಷಿಪ್ರಂ ದ್ರಕ್ಷ್ಯತಿ ರಾಘವಮ್ ॥ ೨೮

ತತೋ ಮಯಾ ವಾಗ್ಭಿರದೀನಭಾಷಿಣಾ
ಶಿವಾಭಿರಿಷ್ಟಾಭಿರಭಿಪ್ರಸಾದಿತಾ ।

ಶತ್ರುಗಳನ್ನು ಸಂಹರಿಸುತ್ತ ಸಿಂಹದಂತೆ ಬರುತ್ತಿರುವ ಶ್ರೀರಾಮನನ್ನು ಸದ್ಯದಲ್ಲಿಯೇ ನೋಡುತ್ತೀಯೆ. ಧನುರ್ಧಾರಿಯಾಗಿ ಲಂಕೆಯ ಹೆಬ್ಬಾಗಿಲಿನಲ್ಲಿ ಬಂದು ನಿಂತ ವೀರಲಕ್ಷ್ಮಣನನ್ನು ನೋಡುತ್ತೀಯೆ. ಸಿಂಹಶಾರ್ದೂಲಗಳಂತೆ ಉಗುರುಗಳಿಂದಲೂ ಕೋರೆಹಲ್ಲುಗಳಿಂದಲೂ ಹೋರಾಡುವ ವಾನರವೀರರು ಮತ್ತಮಾತಂಗಗಳಂತೆ ನುಗ್ಗಿಬರುವುದನ್ನು ಶೀಘ್ರದಲ್ಲಿಯೇ ನೋಡುತ್ತೀಯೆ (೨೫–೨೬). ಈ ಲಂಕೆಯ ಸುತ್ತಲಿರುವ ಪರ್ವತಪ್ರದೇಶಗಳಲ್ಲಿ ಬೆಟ್ಟಗಳ ಹಾಗೆ ಮೇಘಗಳ ಹಾಗೆ ಕಂಗೊಳಿಸುತ್ತ ಕಪಿನಾಯಕರು ಗರ್ಜಿಸುವುದನ್ನು ಸ್ವಲ್ಪಕಾಲದಲ್ಲಿಯೇ ಕೇಳುತ್ತೀಯೆ. ರಘುನಾಥನು ಶತ್ರುವನ್ನು ಸಂಹಾರಮಾಡಿ, ಅರಣ್ಯವಾಸವನ್ನು ಮುಗಿಸಿ, ನಿನ್ನನ್ನು ಕರೆದುಕೊಂಡು ಅಯೋಧ್ಯೆಗೆ ಹೋಗಿ ಪಟ್ಟಾಭಿಷಿಕ್ತನಾಗುವುದನ್ನು ಶೀಘ್ರದಲ್ಲಿಯೇ ನೀನು ನೋಡುತ್ತೀಯೆ'' ಎಂದು ಹೇಳಿದೆನು (೨೭–೨೮). ಶ್ರೀರಾಮ, ಜಾನಕೀದೇವಿಯು ನಿನ್ನ ವಿಯೋಗ ದುಃಖದಿಂದ ನರಳುತ್ತಿದ್ದಳು. ಈ ರೀತಿಯಲ್ಲಿ ನಾನು ಉತ್ಸಾಹದಾಯಕವಾದ

ಜಗಾಮ ಶಾಂತಿಂ ಮಮ ಮೈಥಿಲಾತ್ಮಜಾ
ತವಾಪಿ ಶೋಕೇನ ತದಾಭಿಪೀಡಿತಾ ॥ ೨೯

ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕಿಯೇ ಆದಿಕಾವ್ಯೇ ಚತುರ್ವಿಂಶತಿ ಸಹಸ್ರಿಕಾಯಾಂ ಸಂಹಿತಾಯಾಂ ಸುಂದರಕಾಂಡೇ ಅಷ್ಟಷಷ್ಟಿತಮಃ ಸರ್ಗಃ

ಶ್ರೀಮದ್ವಾಲ್ಮೀಕಿರಾಮಾಯಣೇ ಸುಂದರಕಾಂಡಃ

ಸಂಪೂರ್ಣಃ

———O———

ವೀರವಾಣಿಯಿಂದ ಸಮಾಧಾನವನ್ನು ಹೇಳಿದೆನು. ಆಗ ದೇವಿಯ ಮನಸ್ಸಿಗೆ ಶಾಂತಿಯು ಲಭಿಸಿತು'' ಎಂದನು (೨೯).

ಇಲ್ಲಿಗೆ ಶ್ರೀಮದ್ರಾಮಾಯಣದ ಸುಂದರಕಾಂಡದಲ್ಲಿ ಅರುವತ್ತೆಂಟನೆಯ ಸರ್ಗ

ಸುಂದರಕಾಂಡವು ಸಂಪೂರ್ಣವಾಯಿತು.

ಯುದ್ಧಕಾಂಡೇ ಪ್ರಥಮಃ ಶ್ಲೋಕಃ

ಶ್ರುತ್ವಾ ಹನುಮತೋ ವಾಕ್ಯಂ ಯಥಾವದಭಿಭಾಷಿತಮ್ ।
ರಾಮಃ ಪ್ರೀತಿಸಮಾಯುಕ್ತೋ ವಾಕ್ಯಮುತ್ತರಮಬ್ರವೀತ್ ॥

★ ★ ★

ಚಂದ್ರಬಿಂಬಸಮಾಕಾರಂ ವಾಂಛಿತಾರ್ಥಪ್ರದಾಯಕಮ್ ।
ಹನೂಮತ್ಸೇವಿತಂ ಧ್ಯಾಯೇತ್ ಸೌಂದರೇ ಕಾಂಡ ಉತ್ತಮೇ ॥

ಅನುಬಂಧ

೧

ತ್ರಾತುಮರ್ಹಸಿ ವೀರ ತ್ವಂ ಪಾತಾಲಾದಿವ ಕೌಶಿಕೀಮ್ —ಪುಟ ೩೦೦

ಕೌಶಿಕನೆಂದರೆ ಇಂದ್ರ. ಅವನ ರಾಜ್ಯಲಕ್ಷ್ಮಿ ಕೌಶಿಕೀ. ಬ್ರಹ್ಮಪುರಾಣದಲ್ಲಿ ಈ ಕಥೆ ಇದೆ; ವೃತ್ರನನ್ನು ವಧಿಸಿದ್ದರಿಂದ ಇಂದ್ರನು ಶ್ರೀರಹಿತನಾದನು. ಅವನ ರಾಜ್ಯಲಕ್ಷ್ಮಿಯು ಇಂದ್ರನನ್ನು ತ್ಯಜಿಸಿ ಗವಾಕ್ಷತೀರ್ಥದಲ್ಲಿ ನೆಲೆಸಿದಳು. ಅವಳನ್ನು ಕರೆತರಲು ಮಹಾವಿಷ್ಣುವೂ ದೇವತೆಗಳೂ ಅಲ್ಲಿಗೆ ಹೋದರು. ಆಗ ಲಕ್ಷ್ಮಿಯು ಪಾತಾಳವನ್ನು ಸೇರಿದಳು. ಅಲ್ಲಿಗೆ ಹೋಗಲು ದೇವತೆಗಳಿಗೆ ಸಾಧ್ಯವಾಗಲಿಲ್ಲ. ಸರ್ವಲಕ್ಷಣಸಂಪನ್ನನಾದ ಪುರುಷೋತ್ತಮನು ಮಾತ್ರ ಪಾತಾಳಕ್ಕೆ ಹೋಗಿ ಇಂದ್ರನ ಲಕ್ಷ್ಮಿಯನ್ನು ಕರೆತರಲು ಸಾಧ್ಯವೆಂದು ಅಶರೀರವಾಣಿ ನುಡಿಯಿತು. ಆಗ ದೇವತೆಗಳ ಪ್ರಾರ್ಥನೆಯಂತೆ ಮಹಾವಿಷ್ಣುವು ಪಾತಾಳಕ್ಕೆ ಹೋಗಿ ಲಕ್ಷ್ಮಿಯನ್ನು ತಂದು ಇಂದ್ರನಿಗೆ ಒಪ್ಪಿಸಿದನು.

ಕೌಶಿಕಿಯೆಂದರೆ ಭೂದೇವಿಯೆಂದು ತಿಲಕವ್ಯಾಖ್ಯಾನದಲ್ಲಿ ಬರೆದಿದೆ. ವರಾಹಾವತಾರದಲ್ಲಿ ಮಹಾವಿಷ್ಣುವು ಭೂಮಿಯನ್ನು ಪಾತಾಳದಿಂದ ತಂದ ಕಥೆಯನ್ನು ಸ್ಮರಿಸಿಕೊಳ್ಳಬಹುದು.

ಉತಥ್ಯನ ಭಾರ್ಯೆಯಾದ ಭದ್ರೆಯೆಂಬವಳನ್ನು ವರುಣನು ಪಾತಾಳಕ್ಕೆ ಅಪಹರಿಸಿಕೊಂಡು ಹೋದನೆಂದೂ ಆಗ ಉತಥ್ಯನು ಸಮುದ್ರವನ್ನು ಕುಡಿದು ಶೋಷಿಸಿ ಭದ್ರೆಯನ್ನು ಪಡೆದನೆಂದೂ ಮಹಾಭಾರತದ ಅನುಶಾಸನಪರ್ವದಲ್ಲಿ ಒಂದು ಕಥೆ ಇದೆ. ಭದ್ರೆಯೇ ಕೌಶಿಕಿಯೆಂದು ಕೆಲವರು ಹೇಳುತ್ತಾರೆ.

೨

ನ ವೀರ ಸೇನಾ ಗಣಶೋ ಚ್ಯವಂತಿ —ಪುಟ ೩೫೮

ಕೆಲವು ಪಾಠಗಳಲ್ಲಿ ಈ ಶ್ಲೋಕವು ಕಂಡುಬರುವುದಿಲ್ಲ. ಒಗಟಿನಂತೆ ಕ್ಲಿಷ್ಟವೂ ಅರ್ಥಪುಷ್ಟಿಯಿಲ್ಲದೆಯೂ ಇರುವ ಈ ಶ್ಲೋಕವು ಪ್ರಕ್ಷಿಪ್ತವಿರಬಹುದು. ಈ ಶ್ಲೋಕದ ಅರ್ಥವನ್ನು ಎರಡು ಬಗೆಯಲ್ಲಿ ವ್ಯಾಖ್ಯಾನಕಾರರು ಹೇಳಿದ್ದಾರೆ. ಸೌಕರ್ಯಕ್ಕಾಗಿ ಪ್ರತಿಪದಾರ್ಥವನ್ನು ಇಲ್ಲಿ ಬರೆಯಲಾಗಿದೆ :

೧. ವೀರ=ವೀರನಾದ ಮೇಘನಾದನೆ, ಗಣಶೋಚ=ರಾಕ್ಷಸಗಣಗಳನ್ನೇ ನಾಶಮಾಡಬಲ್ಲ ಹನುಮಂತನು ಇರುವಾಗ, ಸೇನಾಃ=ರಾಕ್ಷಸಸೇನೆಗಳು, ನ ಅವಂತಿ=ನಮ್ಮನ್ನು ರಕ್ಷಿಸಲಾರವು. ಅಲಸಾರಂ=ಜೀರ್ಣವಾದ ಸಾರವುಳ್ಳ, ವಜ್ರಂ= ವಜ್ರಾಯುಧವನ್ನು, ಆದಾಯ=ತೆಗೆದುಕೊಂಡು, ನ ವಿಶ=ಅವನ ಬಳಿಗೆ ಹೋಗ ಬೇಡ. ಅಸ್ಯ=ಈ ಹನುಮಂತನ, ಗತಿಪ್ರಮಾಣಂ=ಗತಿವೇಗದ ಪ್ರಮಾಣವು, ಮಾರುತಸ್ಯ ನ=ವಾಯುವಿಗೂ ಇಲ್ಲ. ಅಗ್ನಿಕಲ್ಪಃ=ಅಗ್ನಿಸದೃಶನಾದ ಆತನು, ಕರಣೇನ=ಯಾವ ಸಾಧನದಿಂದಲೂ, ಹಂತುಂ=ಕೊಲ್ಲಲು, ನ=ಶಕ್ಯನಲ್ಲ.

೨. ವೀರ=ವೀರನಾದ ಮೇಘನಾದನೆ, ಸೇನಾಃ ನ=ಸೇನೆಗಳು ಹನುಮಂತನನ್ನು ಗೆಲ್ಲಲಾರವು. ಏಕೆಂದರೆ, ಗಣಶಃ=ಗುಂಪುಗುಂಪಾಗಿ, ಚ್ಯವಂತಿ= ಚದರಿಹೋಗುತ್ತವೆ. ವಿಶಾಲಸಾರಮ್=ತೀಕ್ಷ್ಣವಾದ ಸಾರವುಳ್ಳ, ವಜ್ರಂ= ವಜ್ರಾಯುಧವನ್ನು ಆದಾಯ=ತೆಗೆದುಕೊಂಡು ಹೋದರೂ, ನ=ಗೆಲ್ಲಲು ಸಾಧ್ಯವಿಲ್ಲ. ಮಾರುತಸ್ಯ ಅಸ್ಯ=ವಾಯುಪುತ್ರನಾದ ಈತನ, ಗತಿ ಪ್ರಮಾಣಂ=ಗತಿವೇಗದ ಪರಿಚ್ಛೇದವು, ನ=ಇಲ್ಲ. ಅಗ್ನಿಕಲ್ಪಃ=ಅಗ್ನಿಸದೃಶನಾದ ಆತನು, ಕರಣೇನ=ಯಾವ ಸಾಧನದಿಂದಲೂ, ಹಂತುಂ=ಕೊಲ್ಲಲು, ನ=ಶಕ್ಯನಲ್ಲ.

ನಮ್ಮ ಅನುವಾದವು ಎರಡನೆಯ ವ್ಯಾಖ್ಯಾನವನ್ನನುಸರಿಸಿದೆ. ಆದರೆ ಮಾರುತಶಬ್ದಕ್ಕೆ ಒಂದನೆಯ ವ್ಯಾಖ್ಯಾನದಲ್ಲಿ ಹೇಳಿದಂತೆ ವಾಯುವೆಂಬ ಅರ್ಥವನ್ನಿಟ್ಟುಕೊಳ್ಳಲಾಗಿದೆ. 'ಗಣಶೋ ಚ್ಯವಂತಿ' ಎಂಬಲ್ಲಿ ಸಂಧಿ ಆರ್ಷ.



ಶ್ರೀರಾಮ ಮಂದಿರಂ ಟ್ರಸ್ಟ್ (ರಿ)
ಶ್ರೀ ನರಸಿಂಹರಾಜ ಕಾಲೋನಿ, ಬೆಂಗಳೂರು-560 019
ದೂರವಾಣಿ : 080 26622231

2015005240
₹ 240/-